ಆದಿಕವಿ ಶ್ರೀವಾಲ್ಮೀಕಿಮಹಾಮುನಿವಿರಚಿತ

ರಾಮಾಯಣ

ಅರಣ್ಯಕಾಂಡ

ಕನ್ನಡ ಅನುವಾದ ಸಹಿತ

ಜಟಿಲಂ ಚೀರವಸನಂ ದಂಡಕಾರಣ್ಯವಾಸಿನಮ್ । ಮುನಿವೇಷಧರಂ ಧ್ಯಾಯೇದಾರಣ್ಯೇ ಕಾಂಡ ಉತ್ತಮೇ ॥

ವಾಲ್ಮೀಕಿರಾಮಾಯಣ

ಅರಣ್ಯಕಾಂಡ

ಕನ್ನಡ ಅನುವಾದಸಹಿತ

ಸಮಗ್ರ ವಾಲ್ಮೀಕಿರಾಮಾಯಣ ಕನ್ನಡ ಅನುವಾದ ಯೋಜನೆ

ಅನುಗ್ರಹ

ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀಮದುತ್ತರಾದಿಮಠ

ಸಂಪಾದಕರು

ಡಾ. ವಿದ್ವಾನ್ ಸತ್ಯಧ್ಯಾನಾಚಾರ್ಯ ಕಟ್ಟಿ

ಅಧ್ಯಕ್ಷರು, ದ್ವೈತವೇದಾಂತ ಪ್ರತಿಷ್ಠಾನ

ಅನುವಾದಕರು

ಪಂ. ರಾಮವಿಠ್ಠಲಾಚಾರ್ಯರು

This Volume is published with the grant from Govt. of Karnataka

ಪ್ರಕಾಶಕರು

ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

ಬೆಂಗಳೂರು-560 004.

Vālmiki Rāmāyaṇa - Araṇyakāṇḍa

Published by	Dvaita Vedanta Studies & Research Foundation No.11, Uttaradi Matha Compound, Basavanagudi, Bengaluru-560 004. Phone : **080 - 7968 9974** email : dvfbangalore@gmail.com

Edition	Year	Copies	Total
First	2023	1,000	1,000

No. of Pages : xx + 568

©	Publisher
Price.	**Rs. 2000/- (set of 10 books)**
Cover Design by	K M Sheshagiri

Copies can be had from

Dvaita Vedanta Studies and Research Foundation

No.11, Uttaradi Matha Compound,
Basavanagudi, Bengaluru-560 004.
Phone : 080-79689974

★ ಸಮಗ್ರ ವಾಲ್ಮೀಕಿರಾಮಾಯಣ ★

ಕನ್ನಡ ಅನುವಾದ ಯೋಜನೆಯ ಕಾರ್ಯಕಾರಿ ಸಮಿತಿ

ಅಧ್ಯಕ್ಷರು	ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಸದಸ್ಯರು	ಡಾ. ಕಾಂತೇಶಾಚಾರ್ಯ ಕದರಮಂಡಲಗಿ
	ಡಾ. ಎ.ಬಿ.ಶ್ಯಾಮಾಚಾರ್ಯ
	ಡಾ. ಎಸ್.ಆರ್.ಪಾಂಡುರಂಗಿ

Typeset and Printed at : **VAGARTHA**
Hanumantha Nagar Bangalore 19. Ph.22427677

॥ ಶ್ರೀಃ ॥

॥ ಶ್ರೀಮೂಲರಾಮದಿಗ್ವಿಜಯರಾಮವೇದವ್ಯಾಸಾಃ ವಿಜಯಂತೇ ॥



ಯದನುಗ್ರಹತಃ ಸರ್ವದಿಗ್ಜಯೋ ಭವತೀಪ್ಸಿತಃ ।
ನಮಾಮ್ಯಹಂ ದಿಗ್ವಿಜಯರಾಮಂ ಪೂರ್ಣಧಿಯಾऽರ್ಚಿತಮ್ ॥

ವಂದೇ ಮಂದೇತರಾನಂದಂ ದಶಸ್ಯಂದನನಂದನಮ್ ।
ಶುಭಲೀಲಜಗನ್ಮೂಲರಾಮಂ ಪೂರ್ಣಧಿಯಾऽರ್ಚಿತಮ್ ॥

॥ ಶ್ರೀದಿಗ್ವಿಜಯರಾಮೋ ವಿಜಯತೇ ॥
॥ ಶ್ರೀಭಾರತೀರಮಣಾಯ ನಮಃ ॥
॥ ಸಮಸ್ತಗುರುಭ್ಯೋ ನಮಃ ॥

ಮುನ್ನುಡಿ

'ಶ್ರೀರಾಮ' ಎಲ್ಲರ ಬದುಕಿಗೆ 'ಅಯನ.' ಆಧಾರ, ಸರ್ವಾಧಾರ. ಅದಕ್ಕೇ ಇದು ರಾಮಾಯಣ. ತಂದೆ ದಶರಥನಿಗೆ, ತಾಯಿ ಕೌಸಲ್ಯಗೆ, ಋಷಿ ವಿಶ್ವಾಮಿತ್ರರಿಗೆ, ಜನಸ್ಥಾನದ ಮುನಿಗಳಿಗೆ, ಶಪಿತ ಅಹಿಲ್ಯೆಗೆ, ಪರಶುರಾಮನಲ್ಲಿಯ ಅತುಲನ ನಾಶಕ್ಕೆ, ಜನಕಮಹಾರಾಜನ ಮಗಳು ಸೀತೆಗೆ, ಪ್ರೀತಿಯ ಭಕ್ತ ಹನುಮಂತನಿಗೆ ರಾಮನೇ ಅಯನ.

ಕಾಡಿನಲ್ಲಿಯ ಜಯಂತ, ಶಬರಿ, ಶರಭಂಗ, ವಿರಾಧ, ಕಬಂಧ, ವಾಲಿ, ಸುಗ್ರೀವ, ವಿಭೀಷಣರ ಉದ್ಧಾರಕ್ಕೆ ರಾಮನೇ ಅಯನ. ಇದು ರಾಮಾಯಣ. ಶ್ರೀರಾಮನ ಚರಿತ್ರೆ. ರಾಮನನ್ನು ರಾಮನೇ ಬಲ್ಲ. ಅದಕ್ಕೇ ಹಯಗ್ರೀವದೇವ ನೂರು ಕೋಟಿ ಶ್ಲೋಕದ ಮೂಲರಾಮಾಯಣ ಬರೆದ. ಅದರ ಸಂಕ್ಷೇಪ ಈ ವಾಲ್ಮೀಕಿಯ ರಾಮಾಯಣ. ತ್ರೇತಾಯುಗದ ಇತಿಹಾಸ. ಮಹಾಭಾರತ ದ್ವಾಪರದ ಇತಿಹಾಸ. ಇವೆರಡು ಭಾರತದ ಕಣ್ಣುಗಳು. ವೇದಗಳ ಸಾರ. ಸಂಸ್ಕೃತಿಯ ಮೂಲಾಧಾರ. ಮನುಕುಲದ ಭಾಷ್ಯ. ತತ್ತ್ವಜ್ಞಾನದ ಆಕರ. ಹರಿಯ ಮಹಿಮೆ. ಸಂಸಾರ ದಾಟಲು ಹರಿಗೋಲು. ''**ರಾಮೋ ವಿಗ್ರಹವಾನ್ ಧರ್ಮಃ**'' 'ರಾಮ' ಧರ್ಮದ ಮೂರ್ತಿ. ಅವನ ಅರಿವು ಧರ್ಮದ ಜ್ಞಾನ. ಆದರ್ಶದ ತಿಳಿವು. ಬದುಕನ್ನು ಅಂದಗೊಳಿಸುವುದು. ಬುದ್ಧಿ ಶುದ್ಧವಾಗುವುದು. ಜೀವನ ಮಂಗಲವಾಗುವುದು.

ವಾಲ್ಮೀಕಿಯ ರಾಮಾಯಣ ಆದಿಕಾವ್ಯ. ಅಪಾರ ರಾಮಾಯಣಸಾಹಿತ್ಯಕ್ಕೆ ಆದಿಬೀಜ. ಸಂಪೂರ್ಣ ವಿಷ್ಣುಸಹಸ್ರನಾಮಕ್ಕೆ ಸಮಾನವಾದದ್ದು ಒಂದು ರಾಮಶಬ್ದ. ''ರಾಮಾಯಣ'' ಅನಂತವೇದ ಪಠಿಸಿದ ಫಲ ನೀಡುವ ಮಹಾಕೃತಿ. ರಾಮಾಯಣ ತಿಳಿಯದವ ಭಾರತೀಯನೇ ಅಲ್ಲ. ಇದು ಸರ್ವರಿಂದ ಸದಾ ಶ್ರವಣೀಯ.

ವಾಲ್ಮೀಕಿರಾಮಾಯಣ ಇದು ಭಕ್ತಿಕಾವ್ಯ. ಭಕ್ತಿಗಾಗಿ, ಭಕ್ತಿಯಿಂದ ಬರೆದದ್ದು. ರಾಮನ ಪ್ರಾಪ್ತಿ ಭಕ್ತಿಯಿಂದಲೇ ಸಾಧ್ಯ. ಭಕ್ತಿ ಇಲ್ಲದೇ ರಾಮನ ಪ್ರಾಪ್ತಿ ಇಲ್ಲ. 'ಭಕ್ತಿ' ಬದುಕಿನ ಮುಖ್ಯಸಾಧನ. ಜ್ಞಾನ ಹಾಗೂ ಪ್ರೀತಿಯ ನೆಲೆಯೇ ಭಕ್ತಿ.

''ಜ್ಞಾನಪೂರ್ವಃ ಪರಃ ಸ್ನೇಹಃ ಭಕ್ತಿಃ'' ''ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ । ಸ್ನೇಹಃ ಭಕ್ತಿರಿತಿ ಪ್ರೋಕ್ತಃ'' ಶ್ರೀರಾಮನ ಮಹಿಮಾಜ್ಞಾನ, ಅವನಲ್ಲಿ ಅಪಾರ ಸ್ನೇಹವೇ ಭಕ್ತಿ. ಇದು ವಾಲ್ಮೀಕಿಯ ಧ್ಯೇಯ. ಅದಕ್ಕೆ ರಾಮಾಯಣ ನಿರ್ಮಾಣ. ರಾಮಕಥೆಯ ನಿರ್ಣಯ.

ಗಾಯತ್ರೀವ್ಯಾಖ್ಯಾನ ವಾಲ್ಮೀಕಿರಾಮಾಯಣ

ಓಂಕಾರದ ವ್ಯಾಖ್ಯಾನವೇ ಗಾಯತ್ರಿಯು. ಮೂರುಪಾದ, ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿ. ಇದು ವೇದಸಾರ. ಗಾಯತ್ರಿಯ ಮೂರು ಪಾದಗಳ ವ್ಯಾಖ್ಯಾನವೇ ಸಾರಭೂತ ಪುರುಷಸೂಕ್ತ. ಪುರುಷಸೂಕ್ತದ ವ್ಯಾಖ್ಯಾನವೇ ಸಂಪೂರ್ಣ ವೇದಗಳು. ಗಾಯತ್ರಿಯ ಸ್ವರೂಪವೇ ಸಮಗ್ರ ವಾಲ್ಮೀಕಿ ರಾಮಾಯಣ.

''ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮಿತಿ ಸ್ಮೃತಮ್''

ವಾಲ್ಮೀಕಿ ರಾಮಾಯಣದ ಪ್ರಾರಂಭ ''ತ'' ಅಕ್ಷರದಿಂದ ಆಗುವುದು. ಅದು ಗಾಯತ್ರಿಯ ಮೊದಲ ಅಕ್ಷರ. ರಾಮಾಯಣದ ಮೊದಲ ಶ್ಲೋಕ **''ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।''** (ವಾ.ರಾ. ೧-೧-೧) 'ತ' ದಿಂದ ಆರಂಭ. ಇದು ಗಾಯತ್ರೀಮಂತ್ರದ ಮೊದಲ ವರ್ಣದ ಪ್ರತಿನಿಧಿ. ಗಾಯತ್ರಿಯಲ್ಲಿ ಇಪ್ಪತ್ನಾಲ್ಕು ವರ್ಣ. ರಾಮಾಯಣದ ಒಂದೊಂದು ಸಾವಿರ ಶ್ಲೋಕ ಒಂದೊಂದು ಗಾಯತ್ರೀ ಅಕ್ಷರದ ಪ್ರತಿನಿಧಿ. ಇಪ್ಪತ್ನಾಲ್ಕು ಸಾವಿರ ಶ್ಲೋಕ ೨೪ ಅಕ್ಷರಗಳ ಪ್ರತಿನಿಧಿ. ಗಾಯತ್ರಿಯ ಆರಂಭ 'ತ'ದಿಂದ, ಗಾಯತ್ರಿಯ ಸಮಾಪ್ತಿ 'ತ್'ದಿಂದ. ರಾಮಾಯಣದ ಕೊನೆಯ ಶ್ಲೋಕ

''ತತಃ ಸಮಾಗತಾನ್ ಸರ್ವಾನ್ ಸ್ಥಾಪ್ಯ ಲೋಕಗುರುರ್ದಿವಿ ।
ಹೃಷ್ಟೈಃ ಪ್ರಮುದಿತೈರ್ದೇವೈರ್ಜಗಾಮ ತ್ರಿದಿವಂ ಮಹತ್ ॥

–ವಾ.ರಾ.ಉತ್ತರ ೧೧೦-೨೮

ವಾಲ್ಮೀಕಿ ರಾಮಾಯಣದ ಕೊನೆಯ ಶ್ಲೋಕದ ಕೊನೆಯ ಅಕ್ಷರ ''ತ್''.

ರಾಮಾಯಣದ ಮೊದಲ ಅಕ್ಷರ, ಗಾಯತ್ರಿಯ ಮೊದಲ ಅಕ್ಷರ 'ತ'

ರಾಮಾಯಣ ಹಾಗೂ ಗಾಯತ್ರಿಯ ಕೊನೆಯ ಅಕ್ಷರ ''ತ್''. ಎರಡೂ .... (ತತ್) ೨೪ ಸಾವಿರ ಶ್ಲೋಕದ ಸಮಗ್ರಸಾರ, ಪ್ರತಿನಿಧಿಯೇ ''ತತ್''.

ಸಂಪೂರ್ಣ ರಾಮಾಯಣವೇ **'ತತ್'** ಗಾಯತ್ರಿಯ ವ್ಯಾಖ್ಯಾನರೂಪವಾಗಿದೆ. ಗಾಯತ್ರಿಯ ಇಪ್ಪತ್ನಾಲ್ಕು ಅಕ್ಷರಗಳ ವ್ಯಾಖ್ಯಾನವೇ ವಾಲ್ಮೀಕಿ ರಾಮಾಯಣದ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಗಾಯತ್ರಿಯ ಒಂದೊಂದು ಅಕ್ಷರವನ್ನು ರಾಮಾಯಣದ ಒಂದೊಂದು ಸಾವಿರ ಶ್ಲೋಕಗಳು ವ್ಯಾಖ್ಯಾನಿಸುವವು.

''ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ'' ಇತಿಹಾಸ-ಪುರಾಣಗಳು ಐದನೇ ವೇದ. **'ರಾಮಾಯಣ'** ಇದು ಇತಿಹಾಸ. ಇದು ಪಂಚಮವೇದ.

ಇತಿಹಾಸ, ಪುರಾಣಗಳು ವೇದದ ವಿಶಾಲ ವ್ಯಾಖ್ಯಾನ. ವೇದದ ವಿಸ್ತೃತ ರೂಪ. **''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್''** ವೇದದ ಅರ್ಥವಿಸ್ತಾರಕ್ಕಾಗಿ, ವ್ಯಾಖ್ಯಾನರೂಪವಾಗಿ, ದೃಷ್ಟಾಂತಸಹಿತವಾದುದೇ ರಾಮಾಯಣವೆಂಬ ಇತಿಹಾಸ.

''ರಾಮಾಯಣಂ ಮಹಾಕಾವ್ಯಂ ಸರ್ವವೇದೇಷು ಸಮ್ಮತಮ್ ।
ಸರ್ವಪಾಪಪ್ರಶಮನಂ ದುಷ್ಟಗ್ರಹನಿವಾರಣಮ್ ॥''

-ವಾ.ರಾ.ಮಾಹಾತ್ಮ್ಯ ೧-೧೯

ಸಮಗ್ರವೇದಸಮ್ಮತವಾದದ್ದು ಈ ರಾಮಾಯಣ ಮಹಾಕಾವ್ಯ. ರಾಮಾಯಣದ ರೂಪದಲ್ಲಿ ವೇದಾರ್ಥಗಳ ಸಂಯೋಜನೆ. ಅಂತೆಯೇ ರಾಮಾಯಣ ಎಲ್ಲ ಪಾಪಪರಿಹಾರಕ. ದುಷ್ಟಗ್ರಹಬಾಧೆನಿವಾರಕ.

ರಾಮಾಯಣ ಸ್ವರೂಪ

ವಾಲ್ಮೀಕಿರಾಮಾಯಣದಲ್ಲಿ ಏಳು ಕಾಂಡಗಳು. ಐದು ನೂರಕ್ಕೂ ಹೆಚ್ಚು ಸರ್ಗಗಳು. ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಇಲ್ಲಿ ಯಾವ ಕಾಂಡವೂ ಪ್ರಕ್ಷಿಪ್ತವಲ್ಲ. ಆಮೇಲೆ ರಚಿಸಿದ್ದೂ ಅಲ್ಲ.

''ಚತುರ್ವಿಂಶತಿ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥

-ವಾ.ರಾ.ಬಾಲ. ೪-೨

ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು, ಏಳು ಕಾಂಡಗಳು, ಐದು ನೂರಕ್ಕೂ ಹೆಚ್ಚು ಸರ್ಗಗಳು. ಇದು ರಾಮಾಯಣದ ಸ್ವರೂಪ.

ರಾಮಾಯಣದ ಏಳು ಕಾಂಡಗಳು ಆಧ್ಯಾತ್ಮಿಕ ಸಾಧಕನು ಏರುವ ಏಳು ಮೆಟ್ಟಿಲುಗಳು. ಸಾಧನದ ಸೋಪಾನಗಳು. ಸಾಧಿಸಬೇಕಾದ ಗುಣಗಳು. ಇವು ವೇದದ ಏಳು ಸಂದೇಶಗಳು. ಕಾಂಡದ ಬೀಜವೇ ಏಳು ಸಂಖ್ಯಾಕವಾಗಿದೆ. ಕಾಂಡದ ಹೆಸರುಗಳೂ ಏಳು. ಸಂದೇಶ–ಆದೇಶಗಳನ್ನು ಸುಲಭವಾಗಿ, ಸರಳವಾಗಿ ಬಿಂಬಿಸುವವು.

ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಯೋಜನೆಯ ಹಿನ್ನಲೆ

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅನೇಕ ದಶಕಗಳಿಂದ ಪ್ರಾಚೀನ–ಅಪ್ರಕಟಿತ ಗ್ರಂಥಗಳ ಪ್ರಕಾಶನಕಾರ್ಯದಲ್ಲಿ ಪರಿಪೂರ್ಣವಾಗಿ ತೊಡಗಿದ್ದು, ಈಗಾಗಲೇ ಸಂಸ್ಕೃತ–ಕನ್ನಡ–ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟಿತವಾಗಿವೆ. ಪ್ರಕೃತ ಧರ್ಮಪ್ರಚಾರಕಾರ್ಯದ ಪ್ರಧಾನ ಅಂಗವಾಗಿ ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ೧೦ ಸಂಪುಟಗಳಲ್ಲಿ ಪೂರ್ಣ ರಾಮಾಣಯದ ಕನ್ನಡ ಅನುವಾದಗಳು ಹೊರಬರುತ್ತಿವೆ.

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಳ್ಳಲು ಇದು ಹಿನ್ನಲೆಯಾಗಿದೆ. ಪರಮಪೂಜ್ಯರಾದ, **ಶ್ರೀಮದುತ್ತರಾದಿಮಠಾಧೀಶರಾದ ಶ್ರೀ೧೦೦೮ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ ಪೀಠಾರೋಹಣ ರಜತಮಹೋತ್ಸವ-ದಲ್ಲಿ ನಾವಿದ್ದೇವೆ.** ಬೆಂಗಳೂರಿನ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ-ಮಂಡಲಿಯ ವತಿಯಿಂದ ಪ್ರತಿವರ್ಷ ನಡೆಸುವ ರಾಮಾಯಣ ವಿಶೇಷ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀಪಾದಂಗಳವರು ೨೫ ವರ್ಷಗಳಿಂದ ಸತತವಾಗಿ ರಾಮಾಯಣಪ್ರವಚನ ನಡೆಸಿಕೊಡುತ್ತಿದ್ದಾರೆ. ಈ ಬಾರಿ ನಡೆಯುತ್ತಿರುವುದು ಶ್ರೀಪಾದಂಗಳವರ ೨೫ನೇ ವರ್ಷದ ರಾಮಾಯಣ ಪ್ರವಚನ. ಮತ್ತು ಶ್ರೀಪಾದಂಗಳವರಿಗೆ ೫೦ ವಸಂತಗಳು ತುಂಬಿದ ಹಿನ್ನಲೆಯಲ್ಲಿ ಸುವರ್ಣ-ಮಹೋತ್ಸವದ ಸಂಭ್ರಮ. ಹೀಗಾಗಿ ಶ್ರೀಪಾದಂಗಳವರ ೫೦ ವಸಂತಗಳ ಸುವರ್ಣಮಹೋತ್ಸವ, ೨೫ನೇ ವರ್ಷದ ರಾಮಾಯಣ ಪ್ರವಚನ ಮತ್ತು ಶ್ರೀಪಾದಂಗಳವರ ೨೫ನೇ ವರ್ಷದ ಪೀಠಾರೋಹಣ ಮಹೋತ್ಸವಗಳ ಸವಿನೆನಪಿಗಾಗಿ ದ್ವೈತವೇದಾಂತ ಅಧ್ಯಯನ ಸಂಶೋಧನಪ್ರತಿಷ್ಠಾನವು ಸಮಗ್ರ

ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಂಡು, ಅದರ ಸಂಪೂರ್ಣ ೧೦ ಸಂಪುಟಗಳನ್ನು ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಮೂಲಕ ಲೋಕಾರ್ಪಣೆ ಮಾಡಿ, ಶ್ರೀರಾಮಚಂದ್ರನಲ್ಲಿ ಸಮರ್ಪಣೆ ಮಾಡುತ್ತಿದೆ.

ಈ ಅನುವಾದಕಾರ್ಯದಲ್ಲಿ ಅನೇಕ ವಿದ್ವಾಂಸರು ಸಂಪೂರ್ಣವಾಗಿ ಸಹಕರಿಸಿ, ತಮ್ಮ ಸುಂದರ ಬರವಣಿಗೆಯಲ್ಲಿ ಕನ್ನಡ ಅನುವಾದ ಮಾಡಿಕೊಟ್ಟಿದ್ದಾರೆ.

೧) ಬಾಲಕಾಂಡ - ಪಂ. ಹಯವದನ ಪುರಾಣಿಕರು

೨) ಅಯೋಧ್ಯಾಕಾಂಡ ಭಾಗ-೧ ಪಂ. ಹಯವದನ ಪುರಾಣಿಕರು

೩) ಅಯೋಧ್ಯಾಕಾಂಡ ಭಾಗ-೨ - ಪಂ. ಹಯವದನ ಪುರಾಣಿಕರು

೪) ಅರಣ್ಯಕಾಂಡ - ಪಂ. ರಾಮವಿಠ್ಠಲಾಚಾರ್ಯ

೫) ಕಿಷ್ಕಿಂಧಾಕಾಂಡ - ಪಂ. ನಾಗರಹಳ್ಳಿ ಶ್ರೀನಿವಾಸಾಚಾರ್ಯ

೬) ಸುಂದರಕಾಂಡ - ಪಂ. ಕೃಷ್ಣಾಚಾರ್ಯ ಬಿದರಹಳ್ಳಿ

೭) ಯುದ್ಧಕಾಂಡ ಭಾಗ-೧ ಪಂ. ಕಾಂತೇಶಾಚಾರ್ಯ ಕದರಮಂಡಲಗಿ

೮) ಯುದ್ಧಕಾಂಡ ಭಾಗ-೨ ಪಂ. ವೇಂಕಟಗಿರೀಶಾಚಾರ್ಯ ಎ. ಎಸ್.

೯) ಉತ್ತರಕಾಂಡ ಭಾಗ-೧ ಪಂ. ವಾದಿರಾಜಾಚಾರ್ಯ ಕರಣಮ್

೧೦) ಉತ್ತರಕಾಂಡ ಭಾಗ-೨ ಪಂ. ಕಮಲಾಪುರ ಗುರುರಾಜಾಚಾರ್ಯ

ಸದಾ ಪಾಠ-ಪ್ರವಚನ-ಸಂಶೋಧನಗಳಲ್ಲಿಯೇ ತಲ್ಲೀನರಾಗಿ, ಬಿಡುವಿಲ್ಲದ ಸಮಯದಲ್ಲಿಯೂ ತಮ್ಮ ಅಮೂಲ್ಯವಾದ ಸಮಯವನ್ನು ನಮಗಾಗಿ ಕೊಟ್ಟು, ವ್ಯಾಖ್ಯಾನಗಳ ವಿಶೇಷ ವಿಚಾರಗಳನ್ನು ಸೇರಿಸಿಕೊಂಡು ಸುಂದರವಾದ ಕನ್ನಡ ಅನಾವಾದ ಮಾಡಿಕೊಟ್ಟಿರುವ ಈ ಎಲ್ಲ ವಿದ್ವಾಂಸರಿಗೆ ಕೃತಜ್ಞತಾಪೂರ್ವಕವಾದ ನಮಸ್ಕಾರಗಳು.

ಅರಣ್ಯಕಾಂಡ

ರಾಮಾಯಣದಲ್ಲಿ ಮೂರನೇ ಕಾಂಡ ಅದು ಅರಣ್ಯಕಾಂಡ. ಸಂಯಮಿತ ಜೀವನವೇ ಅರಣ್ಯ. ಮನಸ್ಸಿನ ಶುದ್ಧಿಗಾಗಿ ಏಕಾಂತವಾಸ. ಮನಃಸ್ತಾಪ, ರಾಜ್ಯಲೋಭ, ಸಂಘರ್ಷ ತಪ್ಪಿಸಲು ಶ್ರೀರಾಮನೇ ಕಾಡು ಸೇರಿದ. ಸಾಧನಕ್ಕಾಗಿ **''ವನಂ ಗತೋ ಯದ್ಧರಿಮಾಶ್ರಯೇತ''** ವನ ಸೇರಿ ಹರಿಯ ಉಪಾಸನೆ ಮಾಡಿರಿ.

ಈ ಕಾಂಡದಲ್ಲಿ ಎಲ್ಲರೂ ಆರು ವೈರಿಗಳನ್ನು ಗೆದ್ದರು. ''ತ್ಯಾಗ, ತಾಳ್ಮೆ,

ತಪಸ್ಸುಗಳನ್ನಾಚರಿಸಿದರು. ಎಲ್ಲರದೂ ಹದಿನಾಲ್ಕು ವರ್ಷದ ಸಂಯಮದ ಅರಣ್ಯವಾಸ. ಬ್ರಹ್ಮಚರ್ಯದ ಜೀವನ. ಶ್ರೀರಾಮ ಸೀತೆಯರು, ಲಕ್ಷ್ಮಣ ಊರ್ಮಿಳೆಯರು, ಭರತ ಮಾಂಡವಿಯರು ಎಲ್ಲರೂ ತ್ಯಾಗದ ಜೀವನ. ಅಯೋಧ್ಯೆ ಬಿಟ್ಟು ನಂದಿಗ್ರಾಮದಲ್ಲಿ ಹುಲ್ಲು ಗುಡಿಸಲಿನಲ್ಲಿ ಭರತನ ವಾಸ, ಜಟಾಧಾರಿ, ಗಡ್ಡೆಗೆಣಸಿನ ಆಹಾರ. ಶ್ರೀರಾಮ, ಲಕ್ಷ್ಮಣ, ಸೀತೆಯಂತ ನಾರು ಮಡಿ, ''ಚಿರಾಜಿನ ಜಟಾಧಾರಿ''ಯಾಗಿ ಋಷಿತುಲ್ಯ ಜೀವನ. ಕಂದಮೂಲ, ಗಡ್ಡೆಗೆಣಸು, ಹಣ್ಣು ಹಂಪಲುಗಳ ಆಹಾರ. ಹುಲ್ಲುಹಾಸಿಗೆ, ಕಾಡಿನಲ್ಲಿ ವಾಸ, ವನವಾಸ ಒಬ್ಬರಿಗಲ್ಲ. ಎಲ್ಲ ನಾಲ್ಕೂ ಜನರೂ ವನವಾಸ ಮಾಡಿದರು. ಸಂಯಮದಿಂದ ಶಕ್ತಿ ಸಂಚಯನ ಮಾಡಿಕೊಂಡರು. ಅಣ್ಣತಮ್ಮಂದಿರಲ್ಲಿ ಪರಸ್ಪರ ಪ್ರೀತಿ, ನಿರ್ಲೋಭ, ತ್ಯಾಗಗಳು ಅರಣ್ಯಕಾಂಡದ ಸಂದೇಶಗಳು.

ಯಾರಲ್ಲಿಯೂ ಸ್ವಾರ್ಥವಿಲ್ಲ, ಸಂಘರ್ಷವಿಲ್ಲ. ಪ್ರೀತಿ, ನೀತಿ, ಸಂಯಮಗಳೇ ಜೀವನ.

''**ಶೂರಾಸ್ತ ಏವೇಹ ಮನಸ್ಥರಾಗಂ ದೇಹೇಂದ್ರಿಯಾಂಬೋಧಿಂ ಇಮಂ ತರಂತಿ**'' ಅವರೇ ನಿಜವಾದ ಶೂರರು. ವೀರರು, ಯಾರು ಈ ಶರೀರದಲ್ಲಿ ಹುಟ್ಟುವ ಮನಸ್ಸಿನ ವಿವಿಧ ಆಸೆಯ, ಆಕಾಂಕ್ಷೆಯ ತರಂಗಗಳನ್ನು, ಮನಸ್ಸಿನ ವಿಕಾರ, ವಾಸನೆಗಳನ್ನು, ತೂರಿ ಬರುವ ತೆರೆಗಳನ್ನು ದಾಡಿದರೆ, ಅದೇ ಪರಾಕ್ರಮ. ಸಂಯಮವೇ ದಾಟುವ ಹರಿಗೋಲು. ವಿಕಾರ ಗೆದ್ದ ಕಾಂಡ 'ಅರಣ್ಯಕಾಂಡ.''

ಆಸೆಗಳು ಪೂರೈಸಿದಷ್ಟೂ ಬೆಳೆಯುವವು. ಸಂಯಮದಿಂದ ತಡೆದರೆ ನಿಲ್ಲುವವು. ಸೋಲುವವು, ನಿಃಸ್ವಾರ್ಥ, ನಿರ್ಲೋಭಿತಾ, ಸ್ನೇಹ, ಪ್ರೀತಿ, ವೈರಾಗ್ಯ, ಸಂತೃಪ್ತಿಗಳೇ ಶಾಂತಿ ಸಮಾಧಾನದ ಸೂತ್ರಗಳು. ಅರಮನೆಗಿಂತ ಅರಣ್ಯವೇ ಸಾಧನಕ್ಕೆ ಶುದ್ಧ ಸ್ಥಳ. ಭಕ್ತಿಗೆ ಏಕಾಂತ ಬೇಕು. ಭಜನೆಗೆ ಲೋಕಾಂತ. ಧ್ಯಾನಕ್ಕೆ ಏಕಾಂತ. ಆಹಾರ, ವಿಹಾರ, ವೇಷ, ಭೂಷ, ಎಲ್ಲವೂ ಸಾತ್ತ್ವಿಕ. ಸರಳ, ಶುದ್ಧ, ಆಡಂಬರ, ಆಢ್ಯತೆ ಇಲ್ಲದ ಸಾದಾ ಜೀವನ. ಸದಾಚಾರದ ಬದುಕು. ಜನನಿಬಿಡತೆಯಿಂದ ದೂರದ, ತ್ಯಾಗದ ಜೀವನ. ದೇಹದ ಆರೋಗ್ಯಕ್ಕೆ ಹಣ್ಣು ಹಂಪಲು. ಮನಸ್ಸಿನ ಆರೋಗ್ಯಕ್ಕಾಗಿ ಅರಣ್ಯವಾಸ. ಏಕಾಂತವಾಸ, ಕೌಟುಂಬಿಕ ಸಂಘರ್ಷದಿಂದ ದೂರ ಉಳಿಯುವ ಉಪಾಯ. 'ಲೋಭ, ಸ್ವಾರ್ಥಗಳಿಂದ ವಾತಾವರಣ ಕಲುಷಿತವಾದಾಗ ತಾನೇ ಬೇರೆ ಕಡೆಗೆ ಏಕಾಂತವಾಸ ಮಾಡಬೇಕು. ಅದಕ್ಕೇ ತೀರ್ಥ, ಕ್ಷೇತ್ರ, ಆಶ್ರಮಗಳ ನಿರ್ಮಾಣ.

ಸ್ವಾರ್ಥಿಗಳು, ಲೋಭಿಗಳ ಜೊತೆ ಮಾತು ಬೆಳೆಸುವುದೂ ಬೇಡ. ಅದಕ್ಕೆ ಶ್ರೀರಾಮ ಸಂಸಾರ, ಕುಟುಂಬವನ್ನು, ರಾಜ್ಯಸಿಂಹಾಸನವನ್ನು ಮನಸ್ಸಿನಿಂದ ತೆಗೆದು ಹಾಕಿದ. ವಿರಕ್ತ ಋಷಿ ಮುನಿಗಳ ಒಡನಾಟ ಬಯಸಿದ. ಶಬರಿ, ಶರಭಂಗ, ಅಗಸ್ತ್ಯ, ಭರದ್ವಾಜ, ಗೌತಮರ ಆಶ್ರಮ ಸಂಚರಿಸಿದ. ಸತ್ಸಂಗವೇ ಸಂಘರ್ಷ ತಪ್ಪಿಸುವ ಉಪಾಯ. ದೇವರಿಗಾಗಿ ಸರ್ವಸ್ವ ತ್ಯಾಗ ಮಾಡಿದ ಋಷಿಮುನಿಗಳ ಮುಂದೆ ತಂದೆಯ ಮಾತಿಗಾಗಿ, ತಾಯಿಯ ಕೋರಿಕೆಗಾಗಿ ರಾಜ್ಯತ್ಯಾಗ ಅದೇನು ಮಹಾ ಎಂದ ಶ್ರೀರಾಮ. ಅರಣ್ಯವಾಸವೆಂದರೆ ಸಜ್ಜನರ, ಸಾಧು ಸಂಗಮ. ಇದು ಅರಣ್ಯಕಾಂಡದ ಸಂದೇಶ. ರಾಮನ ಹಾಗೂ ಭರತರ ತ್ಯಾಗದ ಪರಾಕಾಷ್ಠೆಯೇ ಅರಣ್ಯಕಾಂಡ.

ಅರಣ್ಯಕಾಂಡದ ಕನ್ನಡ ಅನುವಾದಕರು

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಕೈಗೆತ್ತಿಕೊಂಡ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದದ ಬೃಹತ್ಕಾರ್ಯದಲ್ಲಿ ಮೂರನೇ ಕಾಂಡವಾದ ಅರಣ್ಯಕಾಂಡವನ್ನು ಪೂರ್ಣವಾಗಿ ಕನ್ನಡದಲ್ಲಿ ಅನುವಾದಿಸಿ ಕೊಟ್ಟವರು **ಪಂ. ರಾಮವಿಠ್ಠಲಾಚಾರ್ಯರು.**

ಇವರು ಶ್ರೀಪೂರ್ಣಪ್ರಜ್ಞವಿದ್ಯಾಪೀಠದಲ್ಲಿ ಉನ್ನತಗ್ರಂಥಗಳವರೆಗೆ ಅಧ್ಯಯನ ಮಾಡಿ, ಶ್ರೀಪೇಜಾವರಮಠಾಧೀಶರಾದ ಪರಮಪೂಜ್ಯರಾದ ಶ್ರೀವಿಶ್ವೇಶ-ತೀರ್ಥರಲ್ಲಿ ಸುಧ್ಯಾಧ್ಯಯನ ಮಾಡಿ, ೧೯೮೧ ರಲ್ಲಿ ಸುಧಾಮಂಗಳ ನೆರವೇರಿಸಿ ಹೊರಬಂದವರು.

ಇವರಲ್ಲಿ ಉತ್ತಮ ಅಧ್ಯಾಪನಶಕ್ತಿಯನ್ನು ಕಂಡ ಪೇಜಾವರಶ್ರೀಪಾದರು ಸುಧಾಮಂಗಳದ ನಂತರ ಇವರನ್ನು ಪೂರ್ಣಪ್ರಜ್ಞವಿದ್ಯಾಪೀಠದ ಅಧ್ಯಾಪಕರಾಗಿ ಸ್ವೀಕರಿಸಿದರು. ಎಲ್ಲ ವಿದ್ಯಾರ್ಥಿಗಳಿಗೆ ನೆಚ್ಚಿನ ಅಧ್ಯಾಪಕರಾಗಿ ಅಂದಿನಿಂದ ಸೇವೆ ಆರಂಭಿಸಿದ ಇವರು ೨೦೧೮ ರವರೆಗೂ ನ್ಯಾಯಶಾಸ್ತ್ರ ಸಹಪ್ರಾಧ್ಯಾಪಕರಾಗಿ ವಿಶೇಷಸೇವೆ ಸಲ್ಲಿಸಿದರು.

ಮಧ್ಯದಲ್ಲಿ ೧೯೮೬-೧೯೮೭ ಈ ಎರಡುವರ್ಷ ಅಖಿಲಭಾರತಮಾಧ್ವ-ಮಹಾಮಂಡಲದಿಂದ ನಡೆಸುವ ಪ್ರಚಾರಪ್ರವಾಸ ಕಾರ್ಯಕ್ಕಾಗಿ ಹೊರ ಊರಿಗೆ ಹೋಗಿದ್ದು ಬಿಟ್ಟರೆ, ಅಖಂಡವಾಗಿ ವಿದ್ಯಾಪೀಠದಲ್ಲಿ ಪಾಠಪ್ರವಚನಗಳಲ್ಲಿಯೇ ತಮ್ಮ ಜೀವನದ ಸಾರ್ಥಕತೆಯನ್ನು ಕಂಡವರು.

ದ್ವೈತವೇದಾಂತ, ನ್ಯಾಯಶಾಸ್ತ್ರ ಹಾಗೂ ವ್ಯಾಕರಣಶಾಸ್ತ್ರಗಳಲ್ಲಿ ವಿದ್ವತ್ ಪರೀಕ್ಷೆ ಮುಗಿಸಿ ಲೌಕಿಕವಿದ್ಯಾಭ್ಯಾಸದಲ್ಲಿಯೂ ಮುಂದುವರೆದರು.

''**ಮಾಧ್ವಸಮಾಚಾರ**'' ಪತ್ರಿಕೆಗೆ ಆರೇಳುವರ್ಷಗಳವರೆಗೆ ಪ್ರಧಾನಸಂಪಾದಕ-ರಾಗಿ ಕಾರ್ಯನಿರ್ವಹಿಸಿದ್ದಾರೆ.

ಇವರು ಉತ್ತಮ ಲೇಖಕರೂ ಹೌದು. ಇವರ ಅನೇಕ ಕೃತಿಗಳು ಅಖಿಲ-ಭಾರತಮಾಧ್ವಮಹಾಮಂಡಲದಿಂದ ಪ್ರಕಾಶಿತವಾಗಿದ್ದರೆ, ಇನ್ನೂ ಅನೇಕ ಕೃತಿಗಳನ್ನು ತಮ್ಮ ವೈಯಕ್ತಿಕಸಂಸ್ಥೆಯಾದ ''ಅಕ್ಷರಹಾರಪ್ರಕಾಶನ''ದಿಂದ ಪ್ರಕಾಶಿಸಿದ್ದಾರೆ. ಇವರ ಭಾಗವತಭಾವಪುಷ್ಪ, ಮಧ್ವನಾಮ, ಕೇಶವನಾಮ, ದೀರ್ಘಾಯುಷ್ಯದ ರಹಸ್ಯ, ಆದಿತ್ಯಪುರಾಣಾಂತರ್ಗತ ವೇಂಕಟೇಶಮಾಹಾತ್ಮ್ಯ, ದಾನದ ವಿಧಿವಿಧಾನಗಳು ಮುಂತಾದ ಕೃತಿಗಳು ಜನಪ್ರಿಯವಾಗಿವೆ.

''ತತ್ವವಾದ'' ಮಾಸಪತ್ರಿಕೆಯಲ್ಲಿ ನಿಯತಲೇಖಕರಾಗಿರುವ ಇವರು ಅನೇಕಾನೇಕ ಶಾಸ್ತ್ರೀಯ-ಅತ್ಯುಪಯುಕ್ತ ವಿಚಾರಗಳನ್ನು ತಮ್ಮ ಸುಂದರ ಬರವಣಿಗೆಯಲ್ಲಿ ಜಿಜ್ಞಾಸುಗಳಿಗೆ ಉಣಬಡಿಸುತ್ತಾರೆ.

ಇವರು ವಾಲ್ಮೀಕಿ ರಾಮಾಯಣದ ಅರಣ್ಯಕಾಂಡದ ಸಂಪೂರ್ಣ ಕನ್ನಡ ಅನುವಾದ ಮಾಡಿಕೊಟ್ಟು, ನಮ್ಮ ಸಂಸ್ಥೆಯ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಬೃಹತ್ಕಾರ್ಯಕ್ಕೆ ವಿಶೇಷ ಸಹಕಾರ ನೀಡಿದ್ದಾರೆ. ಅವರಿಗೆ ಜನ್ಮಜನ್ಮಾಂತರದಲ್ಲಿಯೂ ಶ್ರೀಮದಾಚಾರ್ಯರ ಶಾಸ್ತ್ರದ ಅಧ್ಯಯನ-ಅಧ್ಯಾಪನ-ಲೇಖನಾದಿಗಳನ್ನು ಮಾಡುವ ಸೌಭಾಗ್ಯವನ್ನು ಭಗವಂತ ಕೊಡಲಿ ಎಂದು ಹಾರೈಸುತ್ತ, **ಪಂ. ರಾಮವಿಠ್ಠಲಾಚಾರ್ಯ**ರಿಗೆ ಈ ಸಂದರ್ಭದಲ್ಲಿ ವಿಶೇಷ ಕೃತಜ್ಞತೆಗಳನ್ನು, ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಕೃತಜ್ಞತೆಗಳು

◆ ಯಾವುದೇ ಒಂದು ಕಾರ್ಯ ಯಶಸ್ವಿಯಾಗಿ ಪೂರ್ಣಗೊಳ್ಳಬೇಕಾದರೆ, ಗುರುಗಳ ಆಶೀರ್ವಾದ ಮುಖ್ಯ ಕಾರಣ. ಇಂದು ನಮ್ಮ ಸಮಗ್ರ ರಾಮಾಯಣ ಕನ್ನಡ ಅನುವಾದ ಯೋಜನೆ ಯಶಸ್ವಿಯಾಗಿ ಪೂರ್ಣಗೊಳ್ಳಲು ಪರಮಪೂಜ್ಯ-ರಾದ, **ಶ್ರೀಮದುತ್ತರಾದಿಮಠಾಧೀಶರಾದ, ಶ್ರೀ ೧೦೦೮ ಶ್ರೀಸತ್ಯಾತ್ಮತೀರ್ಥ-**

ಶ್ರೀಪಾದಂಗಳವರು ನಮ್ಮ ಮೇಲೆ ಮಾಡಿದ ಪರಮಾನುಗ್ರಹವೇ ಪ್ರಮುಖ ಕಾರಣ. ನಮ್ಮ ಯೋಜನೆಯ ವಿವರವನ್ನು ತಿಳಿಸಿ ಶ್ರೀಪಾದಂಗಳವರಲ್ಲಿ ಪ್ರಾರ್ಥಿಸಿಕೊಂಡಾಗ, ಶ್ರೀಗಳವರು ಶ್ರೀಮೂಲರಾಮನಲ್ಲಿ ವಿಶೇಷವಾಗಿ ಪ್ರಾರ್ಥಿಸಿ, ಅನುಗ್ರಹಪೂರ್ವಕವಾಗಿ ಮಂತ್ರಾಕ್ಷತೆ ಇತ್ತು ಹರಸಿದರು. ಜೊತೆಗೆ ತಮ್ಮ ಅಮೂಲ್ಯವಾದ ಅನುಗ್ರಹಸಂದೇಶವನ್ನೂ ಕಳಿಸಿ ಪರಮಾನುಗ್ರಹ ಮಾಡಿದ್ದಾರೆ. ಅಂತಹ ಗುರುಗಳಿಗೆ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಗಳು.

♦ ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅಧ್ಯಯನ-ಸಂಶೋಧನಗಳಿಗೆ ಅತ್ಯುಪಯುಕ್ತವಾದ ನೂರಾರು ಅಪೂರ್ವ ಗ್ರಂಥಗಳನ್ನು ಪ್ರಕಾಶನ ಮಾಡಿ ವಿದ್ವಾಂಸರ, ಸಂಶೋಧಕರ, ವಿದ್ಯಾರ್ಥಿಗಳ, ಜಿಜ್ಞಾಸುಗಳ ಮೆಚ್ಚುಗೆಗೆ ಪಾತ್ರವಾಗಿರುವ ಉತ್ತಮಸಂಸ್ಥೆಯಾಗಿದೆ. ಸಂಸ್ಥೆಯು ಈ ಮಟ್ಟಕ್ಕೆ ಬೆಳೆಯುವುದಕ್ಕೆ ಮುಖ್ಯಕಾರಣ **ಪ್ರೊ. ಕೆ. ಟಿ. ಪಾಂಡುರಂಗಿ** ಅವರು. ಸಂಸ್ಥೆಯನ್ನು ಕಟ್ಟಿ, ಅದರ ಸರ್ವಾಂಗೀಣ ಅಭಿವೃದ್ಧಿಗೆ ಬಹಳ ಪರಿಶ್ರಮವಹಿಸಿ, ಬೆಳೆಸಿ, ಇಂದು ಉನ್ನತಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಿ ಪ್ರಕಾಶನ ಮಾಡಬೇಕೆಂದು ಅವರು ಇಚ್ಛೆಪಟ್ಟಿದ್ದರು. ಅವರ ಇಚ್ಛೆಗೆ ತಕ್ಕಂತೆ ಇಂದು ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಅನುವಾದ ಸಿದ್ಧವಾಗಿ ಪ್ರಕಾಶನವಾಗುತ್ತಿದೆ. ಆದರೆ ದೈವಸಂಕಲ್ಪ. ಇಂದು ಆ ಕಾರ್ಯವನ್ನು ನೋಡಿ ಸಂತೋಷಪಡಲು ಅವರು ನಮ್ಮೊಂದಿಗೆ ಇಲ್ಲ. ಆದರೂ ಅವರ ಸಂಕಲ್ಪ ಇಂದು ನೆರವೇರಿದೆ ಎಂಬ ಸಂತೃಪ್ತಿ ನಮಗುಂಟಾಗಿದೆ. ಅಂತಹ ಸಂಸ್ಥೆಯ ರೂವಾರಿಗಳು, ನಮ್ಮೆಲ್ಲರಿಗೆ ಮಾರ್ಗದರ್ಶಕರೂ ಆಗಿದ್ದ **ಪ್ರೊ. ಕೆ. ಟಿ. ಪಾಂಡುರಂಗಿ** ಅವರಿಗೆ ನನ್ನ ವಿಶೇಷ ನಮಸ್ಕಾರಗಳು.

♦ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ **ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನದ** ಎಲ್ಲ ವಿದ್ವಾಂಸರು, ಪದಾಧಿಕಾರಿಗಳು, ಸದಸ್ಯರು ವಿಶೇಷವಾಗಿ ಸಹಕರಿಸಿದ್ದಾರೆ.

♦ ಶೋಧಕೇಂದ್ರದ ಸಂಶೋಧಕರಾದ **ಡಾ. ಕಾಂತೇಶಾಚಾರ್ಯ ಕದರಮಂಡಲಗಿ** ಅವರು ಹಾಗೂ ಸಂಶೋಧನಪ್ರತಿಷ್ಠಾನದ ಕಾರ್ಯದರ್ಶಿಗಳಾದ **ಡಾ.ಎ.ಬಿ. ಶಾಮಾಚಾರ್** ಮತ್ತು ಖಜಾಂಚಿಗಳಾದ **ಡಾ. ಎಸ್. ಆರ್. ಪಾಂಡುರಂಗಿ** ಅವರು ನಮ್ಮ ಈ ಸಮಗ್ರ ರಾಮಾಯಣ ಕನ್ನಡ ಅನುವಾದ

ಪ್ರಕಾಶನಕಾರ್ಯಕ್ಕೆ ವಿಶೇಷವಾಗಿ ಸಹಕಾರ ನೀಡಿ, ಯಶಸ್ವಿಗೊಳಿಸಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

♦ ಗ್ರಂಥ ಅಂದವಾಗಿ ಹೊರಬರಲು ಅಂದವಾದ ಅಕ್ಷರಜೋಡಣೆ ಹಾಗೂ ಸುಂದರವಾದ ಮುದ್ರಣವೂ ಕಾರಣ. ಶ್ರೀಯುತ ಫಣಿ ಅವರು ಬಹಳ ಪರಿಶ್ರಮಪೂರ್ವಕವಾಗಿ ಅಂದವಾಗಿ ಅಕ್ಷರಜೋಡಣೆ ಮಾಡಿಕೊಟ್ಟಿದ್ದಾರೆ. ಮತ್ತು ವಾಗರ್ಥ ಮುದ್ರಣಾಲಯ ಅವರು ರಾಮಾಯಣದ ಈ ಅನುವಾದ ಕೃತಿಯನ್ನು ಸುಂದರವಾಗಿ ಮುದ್ರಿಸಿ, ಓದುಗರ ಕೈ ಸೇರಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು,
ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ

♦ ♦ ♦

ವಿಷಯಾನುಕ್ರಮಣಿಕಾ

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
1.	ದಂಡಕಾರಣ್ಯದಲ್ಲಿರುವ ಮುನಿಗಳ ಆಶ್ರಮವರ್ಣನೆ, ರಾಮನ ಆಶ್ರಮ ಪ್ರವೇಶ, ಮುನಿಗಳಿಂದ ರಾಮನಲ್ಲಿ ರಾಕ್ಷಸರಿಂದ ರಕ್ಷಣೆಯ ಕೋರಿಕೆ.	1
2.	ಋಷಿಗಳ ಆತಿಥ್ಯ ಸ್ವೀಕರಿಸಿ ಮುಂದೆ ಪಯಣಿಸಿದಾಗ ವಿರಾಧನ ದರ್ಶನ. ಅವನಿಂದ ಸೀತಾಪಹಾರ, ಶೋಕಿಸುವ ರಾಮನಿಗೆ ಲಕ್ಷ್ಮಣನಿಂದ ಸಾಂತ್ವನ.	8
3.	ರಾಮಬಾಣಹತನಾದ ವಿರಾಧನಿಂದ ಸೀತೆಯನ್ನು ಬಿಟ್ಟು ರಾಮಲಕ್ಷ್ಮಣರನ್ನು ಹೆಗಲೇರಿಸಿಕೊಂಡು ಪಲಾಯನ.	13
4.	ಸೀತೆಯ ಆರ್ತನಾದ ಕೇಳಿ ರಾಮ-ಲಕ್ಷ್ಮಣರಿಂದ ವಿರಾಧನ ಎರಡು ತೋಳುಗಳ ಛೇದನ. ಅವನು ಶಸ್ತ್ರದಿಂದ ಅವಧ್ಯನೆಂದರಿತು ಹಳ್ಳ ತೋಡಿ ಅದರಲ್ಲಿ ಹಾಕುವ ನಿರ್ಧಾರ. ಶ್ರೀರಾಮನ ಸ್ಪರ್ಶದ ಮಹಿಮೆಯಿಂದ ವಿರಾಧನಿಗೆ ಪೂರ್ವಜನ್ಮದ ಸ್ಮರಣೆ. ರಾಮಲಕ್ಷ್ಮಣರಿಗೆ ಶರಭಂಗ ಮುನಿಯ ಆಶ್ರಮಕ್ಕೆ ಹೋಗುವಂತೆ ಪ್ರಚೋದನೆ. ವಿರಾಧನ ದೇಹವನ್ನು ಹಳ್ಳದಲ್ಲಿ ಹಾಕುವುದು.	18
5.	ಶರಭಂಗರ ಆಶ್ರಮಕ್ಕೆ ಹೋದ ರಾಮನಿಂದ ಇಂದ್ರನ ದರ್ಶನ. ರಾಮ ಕಾಣುತ್ತಲೆ ಇಂದ್ರನ ಸ್ವರ್ಗಗಮನ. ಶರಭಂಗರಿಂದ ರಾಮನಿಗೆ ಇಂದ್ರಾಗಮನ ಕಾರಣದ ನಿವೇದನೆ. ರಾಮನ ಸಮ್ಮುಖದಲ್ಲಿ ಶರಭಂಗರಿಂದ ಅಗ್ನಿಪ್ರವೇಶ.	27
6.	ಶರಭಂಗರ ಆಶ್ರಮದಲ್ಲಿ ಋಷಿಗಳಿಂದ, ತಮ್ಮನ್ನು ಕಾಡುವ ರಾಕ್ಷಸರ ವಧ ಮಾಡುವಂತೆ ಬಿನ್ನಹ. ಅವರಿಗೆ ಅಭಯಪ್ರದಾನ ಮಾಡಿ ರಾಮನಿಂದ ಸುತೀಕ್ಷ್ಣರ ಆಶ್ರಮಪ್ರವೇಶ.	36
7.	ಶ್ರೀರಾಮನಿಂದ ಸುತೀಕ್ಷ್ಣಮುನಿಗಳಿಗೆ ನಮಿಸಿ ತಮಗೊಂದು ವಾಸಸ್ಥಳವನ್ನು ತಿಳಿಸುವಂತೆ ಪ್ರಾರ್ಥನೆ. ಇಲ್ಲಿ ಮೃಗಗಳ ಭಯವಿದೆ. ಬೇರೆಡೆ ನೆಲೆಸಿರೆಂದು ಸುತೀಕ್ಷ್ಣರಿಂದ ಸಲಹೆ.	43
8.	ಮರುದಿನ ಬೆಳಿಗ್ಗೆ ಸುತೀಕ್ಷ್ಣರನ್ನು ಕೇಳಿ ದಂಡಕಾರಣ್ಯದ ಕಡೆಗೆ ರಾಮನಿಂದ ಪಯಣ.	48

9. ಆಯುಧವನ್ನು ಹಿಡಿದ ರಾಮನಿಗೆ ಸೀತೆಯಿಂದ ಆಯುಧವಿಸರ್ಜನೆ ಮಾಡುವಂತೆ ಕೋರಿಕೆ. 52

10. ಋಷಿಗಳ ಮುಂದೆ ರಾಕ್ಷಸವಧದ ಪ್ರತಿಜ್ಞೆ ಮಾಡಿರುವುದರಿಂದ ಅದಕ್ಕಾಗಿ ಆಯುಧಧಾರಣೆಯೆಂದು ರಾಮನಿಂದ ಸಮರ್ಥನೆ. 59

11. ರಾಮನಿಂದ ದಂಡಕಾರಣ್ಯದಲ್ಲಿನ ಐದು ಅಗಸ್ತ್ಯಗಳ ಸರೋವರದೆಡೆಗೆ ಪ್ರಯಾಣ. ಮಾಂಡಕರ್ಣಿ ಋಷಿಗಳ ಕಥೆ. ರಾಮಲಕ್ಷ್ಮಣರು ಅಲ್ಲಲ್ಲಿ ನೆಲೆಸುತ್ತ ಹತ್ತುವರ್ಷಗಳನ್ನು ಕಳೆದರು. ಮತ್ತೆ ಸುತೀಕ್ಷ್ಣರ ಆಶ್ರಮಕ್ಕೆ ಆಗಮನ. ಅವರಲ್ಲಿ ವಿಚಾರಿಸಿ ಅಗಸ್ತ್ಯಾಶ್ರಮದೆಡೆಗೆ ರಾಮ ಲಕ್ಷ್ಮಣರ ಪಯಣ. ದಾರಿಯಲ್ಲಿ ಅಗಸ್ತ್ಯರ ತಮ್ಮನ ಆಶ್ರಮಕ್ಕೆ ಭೇಟಿ. ರಾಮನಿಂದ ಸೀತೆಗೆ ಅಗಸ್ತ್ಯರ ವಾತಾಪಿ-ಇಲ್ವಲರ ಸಂಹಾರದ ಚರಿತೆಯ ಬಣ್ಣನೆ. ಬಳಿಕ ಅಗಸ್ತ್ಯಾಶ್ರಮ ಪ್ರವೇಶ.

ರಾಮನಿಂದ ಲಕ್ಷ್ಮಣನಿಗೆ ಅಗಸ್ತ್ಯರು ವಿಂಧ್ಯಪರ್ವತವನ್ನು ಮಣಿಸಿದ ಚರಿತ್ರೆಯ ಕಥನ. 65

12. ರಾಮಸೀತಾಲಕ್ಷ್ಮಣರಿಂದ ಅಗಸ್ತ್ಯಾಶ್ರಮ ಪ್ರವೇಶ. ಅಗಸ್ತ್ಯರಿಂದ ಆತಿಥ್ಯ-ದೊಂದಿಗೆ ವೈಷ್ಣವ ಧನುಸ್ ಮುಂತಾದವುಗಳ ಪ್ರದಾನ. ''ಹಿಂದೆ ಮರುಭೂಮಿಯಾಗಿದ್ದ ಈ ದಂಡಕಾರಣ್ಯವನ್ನು ನಾನು ನನ್ನ ತಪಃ-ಪ್ರಭಾವದಿಂದ ಸುಭಿಕ್ಷವನ್ನಾಗಿಸಿದ್ದೇನೆ. ಇಲ್ಲೀಗ ಬಹಳ ಋಷಿಗಳು ನೆಲೆಸಿದ್ದರು. ಅವರನ್ನು ಬಾಧಿಸುತ್ತಿರುವ ರಕ್ಕಸರನ್ನು ನೀನು ಕೊಲ್ಲ-ಬೇಕೆಂದು ಅಗಸ್ತ್ಯರಿಂದ ಪ್ರಾರ್ಥನೆ. 84

13. ಅಗಸ್ತ್ಯರಿಂದ ಸೀತಾಪ್ರಶಂಸೆ. ರಾಮನಿಗೆ ಪಂಚವಟಿಯಲ್ಲಿ ವಾಸಿಸುವಂತೆ ಸಲಹೆ. ಅಗಸ್ತ್ಯರ ಅನುಮತಿ ಪಡೆದು ಪಂಚವಟಿಯೆಡೆಗೆ ಪಯಣ. 91

14. ದಾರಿಮಧ್ಯದಲ್ಲಿ ರಾಮನಿಂದ ಜಟಾಯು ಭೇಟಿ. ಜಟಾಯುವಿನಿಂದ ಪ್ರಜಾಪತಿಯಿಂದ ಉಗಮಗೊಂಡ ತನ್ನ ವಂಶದ ನಿರೂಪಣೆ, ಪಂಚವಟೀಗಮನ. 98

15. ರಾಮ ತೋರಿದ ತಾಣದಲ್ಲಿ ಲಕ್ಷ್ಮಣನಿಂದ ಪರ್ಣಶಾಲೆಯ ನಿರ್ಮಾಣ. 106

16. ಹೇಮಂತಋತು ವರ್ಣನೆ. ಲಕ್ಷ್ಮಣನಿಂದ ಕೈಕೇಯಿಯ ನಿಂದನೆ, ಭರತನ ಪ್ರಶಂಸೆ ಪ್ರಾತರಾಹ್ನಿಕ. 113

17. ರಾಮನ ಬಳಿಗೆ ಶೂರ್ಪಣಖೆಯ ಆಗಮನ, ನನ್ನ ಪತಿಯಾಗು ಎಂದು ಶೂರ್ಪಣಖೆಯ ಪ್ರಾರ್ಥನೆ. 122

18. ಶ್ರೀರಾಮನಿಂದ ಉಪಹಾಸಪೂರ್ವಕವಾಗಿ ಶೂರ್ಪಣಖೆಗೆ ಸಮೀಪ-ನಾದ ಲಕ್ಷ್ಮಣನನ್ನು ವರಿಸುವಂತೆ ಪ್ರಚೋದನೆ, ಲಕ್ಷ್ಮಣನಿಂದ ಅವಳ ಕಿವಿಮೂಗುಗಳ ಛೇದನ, ಶೂರ್ಪಣಖೆಯ ಖರಸಮಾಪಗಮನ. 129

19. ಶೂರ್ಪಣಖೆಯಿಂದ ಖರನಿಗೆ ರಾಮನಿಂದಾದ ತನ್ನ ವಿರೂಪದ ನಿವೇದನೆ. ಖರನಿಂದ ರಾಮಸಂಹಾರಕ್ಕಾಗಿ ಹದಿನಾಲ್ಕು ರಾಕ್ಷಸರ ಪ್ರೇಷಣ. 135

20. ರಾಮನಿಂದ ತನ್ನನ್ನು ಕೊಲ್ಲಲು ಬಂದ ರಕ್ಕಸರ ಸಂಹಾರ. 141

21. ಮತ್ತೆ ಶೂರ್ಪಣಖೆಯಿಂದ ಖರನ ಬಳಿ ರಾಮನಿಂದ ಅವನು ಕಳುಹಿಸಿದ ರಕ್ಕಸ ಸಂಹಾರದ ನಿವೇದನೆ. 147

22. ದೂಷಣ ಹಾಗೂ ಹದಿನಾಲ್ಕು ಸಾವಿರ ರಾಕ್ಷಸರೊಂದಿಗೆ ಯುದ್ಧ ಮಾಡಲು ಖರನ ಆಗಮನ. 152

23. ಯುದ್ಧಕ್ಕೆ ಹೊರಡುವಾಗ ಖರನಿಗೆ ದುರ್ನಿಮಿತ್ತಗಳ ಸೂಚನೆ. 158

24. ಯುದ್ಧಕ್ಕೆ ಬಂದ ಖರನನ್ನು ಕಂಡು ಸೀತೆಯೊಂದಿಗೆ ಗುಹೆಯಲ್ಲಿರಲು ಲಕ್ಷ್ಮಣನಿಗೆ ರಾಮನಿಂದ ಸಲಹೆ. ರಾಮ-ಖರರ ಯುದ್ಧವನ್ನು ಕಾಣಲು ಆಗಸದಲ್ಲಿ ದೇವತೆಗಳ ಆಗಮನ. 166

25. ಖರನ ಸೈನ್ಯದೊಂದಿಗೆ ರಾಮನ ಯುದ್ಧದ ವರ್ಣನೆ. 174

26. ಶ್ರೀರಾಮನಿಂದ ದೂಷಣನ ಸೇನಾಪತಿಗಳ ಸಂಹಾರ. 183

27. ರಾಮನಿಂದ ತ್ರಿಶಿರಸಿನ ವಧೆ. 191

28. ಖರನಿಂದ ರಾಮನ ಬಿಲ್ಲಿನ ಛೇದನ, ರಾಮನಿಂದ ಮತ್ತೊಂದು ಬಿಲ್ಲಿನಿಂದ ಖರನ ರಥಧ್ವಂಸ. 196

29. ರಾಮ-ಖರರ ವೀರವಾದಗಳು, ಖರ ಎಸೆದ ಗದೆಯ ನಾಶ -ಶ್ರೀರಾಮನಿಂದ. 203

30. ಖರನಿಂದ ರಾಮನ ಮೇಲೆ ಮರದ ಎಸೆತ. ಶ್ರೀರಾಮನಿಂದ ಬಾಣ-ಗಳಿಂದ ಖರನ ಸಂಹಾರ. 209

31. ಯುದ್ಧದಲ್ಲಿ ಅಳಿದುಳಿದ ಅಕಂಪನನಿಂದ ಲಂಕೆಗೆ ಹೋಗಿ ರಾವಣನಿಗೆ ರಾಮನಿಂದ ಖರಾದಿಗಳ ಸಂಹಾರದ ಸುದ್ದಿ ನಿರೂಪಣೆ. ರಾಮನ ಮಹಿಮೆಯನ್ನು ವರ್ಣಿಸಿ, ಅವನು ಸರ್ವರಿಂದ ಅವಧ್ಯ. ಅವನ ನೆಚ್ಚಿನ

ಮಡದಿಯ ಅಪಹಾರದಿಂದ ಅವನನ್ನು ಮಾನಸಿಕವಾಗಿ ದುರ್ಬಲಗೊಳಿಸಿ ಕೊಲ್ಲುವಂತೆ ಅಕಂಪನನ ಸಲಹೆ, ಅದನ್ನು ಕೇಳಿದ ರಾವಣನಿಂದ ಸೀತಾಪಹಾರದ ವಿಷಯದಲ್ಲಿ ಮಾರೀಚನ ಸಹಾಯದ ಯಾಚನೆ. ರಾಮನ ಪ್ರಭಾವವನ್ನು ತಿಳಿಸಿ ಅವನನ್ನು ಕೊಲ್ಲಲಾಗದೆಂದು ತಿಳಿಸಿ ಮಾರೀಚನಿಂದ ರಾವಣನಿಗೆ ಲಂಕೆಗೆ ಹೋಗುವಂತೆ ಸಲಹೆ. 218

32. ಶೂರ್ಪಣಖೆಯಿಂದ ಲಂಕೆಗೆ ಹೋಗಿ ರಾವಣನಿಗೆ ಖರಾದಿಗಳ ಸಂಹಾರದ ಕಥನ. 229

33. ಶೂರ್ಪಣಖೆಯಿಂದ ರಾವಣನ ನಿಂದನೆ. 234

34. 'ಸುಂದರಿ ಸೀತೆಯನ್ನು ನಿನಗಾಗಿ ಅಪಹರಿಸಲು ಹೋದ ನನ್ನನ್ನು ರಾಮನ ತಮ್ಮ ವಿರೂಪಗೊಳಿಸಿದ. ನೀನೆ ಸೀತೆಯನ್ನು ಅಪಹರಿಸು' –ಎಂದು ಶೂರ್ಪಣಖೆಯ ಸಲಹೆ. 240

35. ರಾವಣನಿಂದ ಮತ್ತೆ ಮಾರೀಚನೆಡೆಗೆ ಪಯಣ. 246

36. ಸೀತಾಪಹಾರಕ್ಕಾಗಿ ಸಹಾಯ ಮಾಡುವಂತೆ ಮತ್ತೆ ರಾವಣನಿಂದ ಮಾರೀಚನಲ್ಲಿ ಮೊರೆ. ರಾಮನಾಮಶ್ರವಣದಿಂದಲೆ ಹೆದರುವ ಮಾರೀಚನ ವಿಷಾದ. 254

37. ಮಾರೀಚನಿಂದ ರಾವಣನಿಗೆ ಹಿತೋಪದೇಶ. 259

38. ವಿಶ್ವಾಮಿತ್ರರ ಯಾಗದ ಸಂದರ್ಭದಲ್ಲಿ ತಾನು ಅನುಭವಿಸಿದ ರಾಮ-ಬಾಣದ ಪ್ರಹಾರದ ಗರಿಮೆಯನ್ನು ಬಣ್ಣಿಸಿ ಮಾರೀಚನಿಂದ ರಾವಣನಿಗೆ ಹಿತೋಪದೇಶ. 265

39. 'ಒಮ್ಮೆ ಇದೇ ಕಾಡಿನಲ್ಲಿ ಇಬ್ಬರು ರಕ್ಕಸರೊಂದಿಗೆ ರಾಮನನ್ನು ಕೊಲ್ಲಲು ಮೃಗರೂಪದಿಂದ ಹೋದಾಗ ಶ್ರೀರಾಮನು ತನ್ನ ಸಹಚರಮಿತ್ರ ರಕ್ಕಸರನ್ನು ಕೊಂದುಹಾಕಿದ. ನಾನು ಹೇಗೋ ತಪ್ಪಿಸಿಕೊಂಡೆ. ಆದ್ದರಿಂದ ನೀನೂ ಆತ್ಮರಕ್ಷಣೆಗಾಗಿ ಹಿಂದಿರುಗು' –ಎಂದು ಮಾರೀಚನಿಂದ ರಾವಣನಿಗೆ ಉಪದೇಶ. 273

40. ಮಾರೀಚನ ಸಲಹೆಯನ್ನು ಧಿಕ್ಕರಿಸಿ ಮಾಯಾಮೃಗನಾಗಿ ಸೀತಾಪಹಾರಕ್ಕೆ ಸಹಕರಿಸದಿದ್ದರೆ ಕೊಂದುಬಿಡುತ್ತೇನೆಂದು ಮಾರೀಚನಿಗೆ ರಾವಣನಿಂದ ಬೆದರಿಕೆ. 279

41. ಮಾರೀಚನಿಂದ ಮತ್ತೊಮ್ಮೆ ರಾವಣನ ಬಗೆಗೆ ವಿಷಾದ ಅಭಿವ್ಯಕ್ತಿ. 286

42. ಒಲ್ಲದ ಮನಸಿನಿಂದ ಮಾಯಾಮೃಗರೂಪ ತೊಟ್ಟು ರಾಮನ ಆಶ್ರಮದ ಮುಂದೆ ಮಾರೀಚನ ಸಂಚಾರ. ಕವಿಗಳಿಂದ ಮಾಯಾಮೃಗರೂಪ ವರ್ಣನೆ, ಹೂಗಳನ್ನು ಬಿಡಿಸುತ್ತಿದ್ದ ಸೀತೆಯಿಂದ ಮಾಯಾಮೃಗ ಅವಲೋಕನ. 291

43. ರಾಮ-ಲಕ್ಷ್ಮಣರನ್ನು ಕರೆದು ಮಾಯಾಮೃಗವನ್ನು ತಂದುಕೊಡುವಂತೆ ಸೀತೆಯ ಒತ್ತಾಯ. ಮಾಯಾಮೃಗ ಮಾರೀಚನ ಮಾಯಾರೂಪ ಎಂದು ಹೇಳಿ ಲಕ್ಷ್ಮಣನಿಂದ ನಿವಾರಣೆ. ಸೀತೆಯ ಆಗ್ರಹದ ಪ್ರಾರ್ಥನೆಗೆ ಓಗೊಟ್ಟು ರಾಮನಿಂದ ತಂದುಕೊಡುವ ಭರವಸೆ. 298

44. ಮೃಗವನ್ನು ತರಲು ರಾಮನ ಓಡಾಟ. ಕೊನೆಗೆ ಮಾಯಾಮೃಗರೂಪ ಮಾರೀಚನ ಸಂಹಾರ. ಮಾರೀಚನಿಂದ ಸಾಯುವಾಗ ಹಾ ಸೀತೆ! ಹಾ ಲಕ್ಷ್ಮಣ! ಎಂದು ಜೋರಾಗಿ ಆಕ್ರೋಶ. 308

45. ರಾಮನ ಆರ್ತಸ್ವರವೆಂದು ಭಾವಿಸಿ ಸೀತೆಯಿಂದ ರಾಮನ ಬಳಿ ಹೋಗುವಂತೆ ರಾಮನಿಗೆ ಪ್ರಚೋದನೆ. ರಾಮನಿಗೆ ಯಾವ ವಿಪತ್ತೂ ಬಾರದು ಎಂದು ಲಕ್ಷ್ಮಣನ ಸಮರ್ಥನೆ. ಕೊನೆಗೆ ಸೀತೆಯ ನಿಷ್ಠುರ ವಚನಗಳನ್ನು ಸಹಿಸಲಾರದೆ ರಾಮನೆಡೆಗೆ ಲಕ್ಷ್ಮಣನ ನಿರ್ಗಮನ. 321

46. ಸನ್ಯಾಸಿ ವೇಷವನ್ನು ಸ್ವೀಕರಿಸಿ ರಾವಣನ ಆಗಮನ. ಅಭ್ಯಾಗತ ಸನ್ನ್ಯಾಸಿಗೆ ಸೀತೆಯ ಸತ್ಕಾರ. 331

47. 'ನಾನು ರಾವಣ, ನನ್ನ ಭಾರ್ಯೆಯಾಗು' ಎಂದು ರಾವಣನಿಂದ ಸೀತೆಗೆ ನಿವೇದನೆ. ಸೀತೆಯ ಗದರಿಕೆ. 340

48. ತನ್ನ ಪ್ರಭಾವವನ್ನು ವರ್ಣಿಸಿಕೊಂಡು, ಮತ್ತೊಮ್ಮೆ ತನ್ನ ಭಾರ್ಯೆ-ಯಾಗುವಂತೆ ರಾವಣನ ಒತ್ತಾಯ. ಸೀತೆಯಿಂದ ಕೋಪದಿಂದ ರಾವಣನ ನಿಂದನೆ. 352

49. ತನ್ನ ನಿಜರೂಪವನ್ನು ಪರಿಗ್ರಹಿಸಿ ಸೀತೆಯನ್ನು ತನ್ನ ರಥದಲ್ಲಿ ಏರಿಸಿ-ಕೊಂಡು ಲಂಕೆಗೆ ರಾವಣನ ಪಯಣ. ಬಹಳ ಆಕ್ರಂದನ ಮಾಡುತ್ತಿದ್ದ ಸೀತೆಗೆ ಜಟಾಯುವಿನ ದರ್ಶನ. 358

50. ಸೀತೆಯ ಬಿಡುಗಡೆಗಾಗಿ ಜಟಾಯುವಿನ ಹೋರಾಟ. 367

51. ತನ್ನೊಂದಿಗೆ ಹೋರಾಡುತ್ತಿರುವ ಜಟಾಯುವಿನ ರೆಕ್ಕೆಗಳ ಛೇದನ -ರಾವಣನಿಂದ. 374

52. ಮತ್ತೆ ಸೀತೆಯನ್ನು ಹೊತ್ತು ಆಗಸಮಾರ್ಗದಿಂದ ರಾವಣನ ಲಂಕೆಗೆ ಪಯಣ. 384

53. ಮಾರ್ಗಮಧ್ಯದಲ್ಲಿ ಸೀತೆಯಿಂದ ರಾವಣನ ನಿಂದನೆ. 394

54. ಋಷ್ಯಮೂಕ ಶಿಖರದಲ್ಲಿದ್ದ ಸುಗ್ರೀವಾದಿ ವಾನರರ ನಡುವೆ ಸೀತೆಯಿಂದ ತನ್ನ ಆಭರಣಗಳ ಪ್ರಕ್ಷೇಪ. ಲಂಕೆಯಲ್ಲಿ ರಾವಣನಿಂದ ಸೀತೆಯ ಸ್ಥಾಪನೆ. 401

55. ಬಯಸದಿದ್ದರೂ ಸೀತೆಗೆ ರಾವಣನಿಂದ ಲಂಕೆಯ ವೈಭವದ ಪ್ರದರ್ಶನ. ಪ್ರಲೋಭನೆಗಾಗಿ ಬಹುಬಗೆಯ ರಾವಣನ ಆಲಾಪ. 408

56. ರಾವಣನ ಪ್ರಲೋಭನೆಯ ಬಣ್ಣದ ಮಾತುಗಳಿಗೆ ಮರುಳಾಗದ ಸೀತೆಯಿಂದ ತೃಣವನ್ನು ಅಡ್ಡಹಿಡಿದು ರಾವಣನಿಗೆ ರಾಮವಧ್ಯತ್ವದ ಪ್ರತಿಪಾದನೆ. ಹನ್ನೆರಡು ತಿಂಗಳ ಒಳಗಾಗಿ ತನ್ನನ್ನು ಒಪ್ಪಿಕೊಳ್ಳದಿದ್ದರೆ ಕೊಲ್ಲುತ್ತೇನೆಂದು ರಾವಣನ ಪ್ರತಿಜ್ಞೆ. 416

ಪ್ರಕ್ಷಿಪ್ತ ಸರ್ಗ – ಬ್ರಹ್ಮನಿಂದ ರಾವಣ ಅಪಹೃತ ಸೀತೆಯ ಪ್ರಾಣಧಾರಣೆಗೆ ವ್ಯವಸ್ಥೆ ಮಾಡುವಂತೆ ಇಂದ್ರನಿಗೆ ಸೂಚನೆ. ಇಂದ್ರನಿಂದ ರಾಕ್ಷಸಿಯರಿಗೆ ನಿದ್ರಾ-ದೇವಿಯಿಂದ ಮೋಹಬರಿಸಿ ಸೀತೆಗೆ ಹಸಿವೆ ತೃಷೆಗಳನ್ನು ಪರಿಹರಿಸುವ ಪಾಯಸದ ಪ್ರದಾನ. 424

57. ಮಾರೀಚನ ಮರಣೋತ್ತರದಲ್ಲಿ ದುರ್ನಿಮಿತ್ತಗಳ ದರ್ಶನವಾಗಿ ಸೀತೆಗೆ ಆಪತ್ತು ಬಂದಿರಬಹುದೆಂದು ಶಂಕಿಸಿ ಬರುತ್ತಿದ್ದ ರಾಮನಿಗೆ ಮಾರ್ಗ-ಮಧ್ಯದಲ್ಲಿ ಲಕ್ಷ್ಮಣನ ದರ್ಶನ. ಲಕ್ಷ್ಮಣನನ್ನು ಗದರಿಸಿ ಸೀತೆಗೆ ಆಪತ್ತು ಸಂಭವಿಸಿರಬಹುದೆಂದು ರಾಮನ ಆತಂಕ. 430

58. ರಾಮನಿಂದ ಸೀತಾಗುಣ ವರ್ಣನೆ. ತಾನು ಮಾಡಿದ ಖರಸಂಹಾರಕ್ಕೆ ಪ್ರತೀಕಾರವಾಗಿ ರಾಕ್ಷಸರು ಸೀತೆಯನ್ನು ಕೊಂದಿರಬಹುದೇನೋ ಎಂದು ರಾಮನ ಊಹೆ. 436

59. ಸೀತೆಯನ್ನು ಬಿಟ್ಟು ಬಂದದ್ದೇಕೆ? ಎಂದು ರಾಮನ ಪ್ರಶ್ನೆ. ಸೀತೆಯ ಪರುಷ ವಚನಗಳನ್ನು ಸಹಿಸದೆ ಬಂದೆನೆಂದು ಲಕ್ಷ್ಮಣನ ಉತ್ತರ. ಆದರೂ ಬಿಟ್ಟು ಬರಬಾರದಿತ್ತು ಎಂದು ಹೇಳಿ, ತಾನು ಮಾರೀಚನ ಸಂಹಾರ ಮಾಡಿದ ವೃತ್ತಾಂತನಿವೇದನೆ. 441

60. ಲಕ್ಷ್ಮಣನೊಂದಿಗೆ ವರ್ಣಶಾಲೆಗೆ ಶ್ರೀರಾಮನ ಪುನರಾಗಮನ. ಅಲ್ಲಿ ಸೀತೆಯನ್ನು ಕಾಣದೆ ಮೃತಳೋ ಅಪಹೃತಳೋ ಎಂದು ನಾನಾಬಗೆಯ ಚಿಂತೆ ಮಾಡುತ್ತ ರಾಮನ ವಿಷಾದ. 447

61. ಲಕ್ಷ್ಮಣನಿಂದ ರಾಮನಿಗೆ ಸಾಂತ್ವನ. ಇಬ್ಬರಿಂದ ಗಿರಿಗುಹೆಗಳಲ್ಲಿ ಸೀತೆಯ ಹುಡುಕಾಟ. 456

62. ಸೀತೆಯನ್ನು ನೆನೆದು ರಾಮನ ವಿರಹವಿಲಾಪ. 463

63. ರಾಮನ ಸೀತೆಯ ಕುರಿತಾಗಿ ಬಗೆಬಗೆಯ ಕನವರಿಕೆ, ಶೋಕ, ಲಕ್ಷ್ಮಣನಿಂದ ಸಾಂತ್ವನ. 469

64. ಸೀತೆ ಗೋದಾವರಿ ನದಿಯ ಬಳಿಗೆ ಹೋಗಿರಬಹುದೇನೋ ಎಂದು ಭಾವಿಸಿ ಗೋದಾವರಿಯ ಬಳಿಹೋಗಿ 'ಸೀತೆಯ ಕಂಡೆಯಾ?' ಎಂದು ಪ್ರಶ್ನೆ. ಮರ-ಗಿರಿಗಳನ್ನೆಲ್ಲ ಸೀತೆಯ ಬಗೆಗೆ ವಿಚಾರಿಸುತ್ತಾ ಅಲೆಯುತ್ತಿದ್ದ ರಾಮನಿಂದ ಒಂದೆಡೆ ರಾವಣ-ಸೀತೆಯರ ಹೆಜ್ಜೆಗುರುತುಗಳ ದರ್ಶನ. ಮತ್ತೊಂದೆಡೆ ಸತ್ತುಬಿದ್ದಿರುವ ರಾವಣ ಸಾರಥಿ ಮುಂತಾದವುಗಳ ದರ್ಶನ. ಆಕ್ರೋಶಗೊಂಡ ರಾಮನಿಂದ ಸರ್ವಲೋಕ ಸಂಹಾರದ ಘೋಷಣೆ. 476

65. ಲಕ್ಷ್ಮಣನಿಂದ ಸಯುಕ್ತಿಕವಾಗಿ ರಾಮನಿಗೆ ಸಾಂತ್ವವಚನ. 491

66. ನಮ್ಮ ಕರ್ಮಫಲವನ್ನು ಅವಶ್ಯ ಅನುಭವಿಸಲೇಬೇಕೆಂದು ಪ್ರತಿಪಾದಿಸಿ ಲಕ್ಷ್ಮಣನಿಂದ ರಾಮನಿಗೆ ಸಮಾಧಾನ ವಚನ. 495

67. ಮತ್ತೆ ಸೀತೆಯನ್ನು ಅರಸಿ ಹೊರಟ ರಾಮನಿಗೆ ರೆಕ್ಕೆ ಕಳೆದುಕೊಂಡು ನೆಲಕ್ಕುರುಳಿರುವ ಸಾಯುವ ಸ್ಥಿತಿಯಲ್ಲಿದ್ದ ಜಟಾಯುವಿನ ದರ್ಶನ. ಜಟಾಯುವಿನಿಂದ ರಾವಣನ ಸೀತಾಪಹಾರದ ಕಥನ. 500

68. ರಾವಣನ ಸುದ್ದಿ ಅರ್ಧ ಹೇಳುತ್ತಿರುವಾಗಲೇ ಜಟಾಯುವಿನ ಮರಣ. ರಾಮನಿಂದ ಜಟಾಯುದೇಹಕ್ಕೆ ಔರ್ಧ್ವದೈಹಿಕ ಸಂಸ್ಕಾರ. 507

69. ಮುಂದೆ ಸಾಗುತ್ತಿರುವ ರಾಮಲಕ್ಷ್ಮಣರಿಗೆ 'ಅಯೋಮುಖೀ' ರಾಕ್ಷಸಿಯ ಭೇಟಿ. ಲಕ್ಷ್ಮಣನಿಂದ ಅವಳ ಸ್ತನ, ಕರ್ಣ, ನಾಸಿಕಾಗಳ ಛೇದನ. ಬಳಿಕ ಕಬಂಧನ ದರ್ಶನ. 516

70. ಕಬಂಧನಿಂದ ತೊಳೆಕ್ಕೆಯಲ್ಲಿ ರಾಮ-ಲಕ್ಷ್ಮಣರ ಬಂಧನ. ಅವರಿಂದ ಕಬಂಧನ ಬಾಹುಗಳ ಛೇದನ. ರಾಮಲಕ್ಷ್ಮಣರ ಪರಿಚಯ ಮಾಡಿಕೊಂಡು ಕಬಂಧನಿಂದ ತನ್ನ ವೃತ್ತಾಂತದ ನಿರೂಪಣೆ. 526

71. ತನ್ನ ಈ ರಾಕ್ಷಸಜನ್ಮದ ಹಿನ್ನೆಲೆಯನ್ನು ವಿವರಿಸಿ ತನ್ನ ದೇಹದ ದಹನಾನಂತರ ಸೀತಾವೃತ್ತಾಂತವನ್ನು ತಿಳಿಸುತ್ತೇನೆಂದು ಕಬಂಧನ ನಿವೇದನೆ. 530

72. ರಾಮ-ಲಕ್ಷ್ಮಣರಿಂದ ಕಬಂಧನ ದೇಹದಹನ. ಚಿತೆಯ ಮಧ್ಯದಿಂದ ಎದ್ದು ವಿಮಾನಾರೂಢನಾದ ಕಬಂಧನಿಂದ, ಋಷ್ಯಮೂಕದಲ್ಲಿರುವ ಸುಗ್ರೀವನ ನೆರವಿನಿಂದ ಸೀತಾನ್ವೇಷಣೆಯ ಕಥನ. 537

73. ಕಬಂಧನಿಂದ ಋಷ್ಯಮೂಕಮಾರ್ಗಪ್ರದರ್ಶನ. 543

74. ಕಬಂಧ ತೋರಿದ ದಾರಿಯಲ್ಲಿ ಪಯಣಿಸುವಾಗ ಪಂಪಾತೀರದಲ್ಲಿ ಶಬರೀದರ್ಶನ. ಫಲದಾನದ ಮೂಲಕ ಶಬರಿಯಿಂದ ರಾಮ-ಲಕ್ಷ್ಮಣರಿಗೆ ಆತಿಥ್ಯ. ಮತಂಗಋಷಿಯ ಪ್ರಭಾವವನ್ನು ವರ್ಣಿಸಿ ರಾಮನ ಅನುಮತಿ ಪಡೆದು ಅಗ್ನಿಪ್ರವೇಶ ಮಾಡಿ ಸ್ವರ್ಗದತ್ತ ಶಬರಿಯ ಪಯಣ. 552

75. ತೀರ್ಥಸ್ನಾನ ಪೂರೈಸಿ ಪ್ರಾತರಾಹ್ನಿಕವನ್ನು ಮುಗಿಸಿಕೊಂಡು ರಾಮ-ಲಕ್ಷ್ಮಣರ ಮುಂದಿನ ಪ್ರಯಾಣ. 560

ಅರಣ್ಯಕಾಂಡ ಮುಗಿಯಿತು.

ಶುಭಾಶಂಸನೆ

ಶ್ರೀಯುತರಾದ ದಿ. ಗುರುರಾಜ ರಾಯರು ABB ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಶ್ರೀರಾಘವೇಂದ್ರಸ್ವಾಮಿಗಳವರಿಗೆ ವಿಶೇಷಸೇವೆ ಸಲ್ಲಿಸಿದವರು. ಶ್ರೀಸತ್ಯನಾಥತೀರ್ಥರ ಮೂಲವೃಂದಾವನಕ್ಕೆ ರಜತಕವಚದ ವಿಶೇಷಸೇವೆ ಸಲ್ಲಿಸಿದವರು.

ಇಂತಹ ಉದಾರದಾನಿಗಳಾದ ಶ್ರೀಯುತ ದಿ. ಗುರುರಾಜ್ ಭುಜಂಗರಾವ್ ಇವರ ಸ್ಮರಣಾರ್ಥವಾಗಿ ಅವರ ಪತ್ನಿ ಶ್ರೀಮತಿ ಜಯಶ್ರೀ ಗುರುರಾಜ್ ಇವರು ಹಾಗೂ ಅವರ ಮಗಳು ಶ್ರೀಮತಿ ಸಿಂಧೂಜಾ ಗುರುರಾಜ್ ಇವರು ರಾಮಾಯಣದ ಅರಣ್ಯಕಾಂಡದ ಈ ಸಂಪುಟದ ಪ್ರಕಾಶನಕ್ಕೆ ಸಂಪೂರ್ಣ ಆರ್ಥಿಕಸೇವೆ ಸಲ್ಲಿಸಿದ್ದಾರೆ.

ಈ ಮೂಲಕ ಶ್ರೀರಾಮಚಂದ್ರನ, ಶ್ರೀವೇದವ್ಯಾಸದೇವರ, ಶ್ರೀಮದಾಚಾರ್ಯರ ವಿಶೇಷಸೇವೆ ಸಲ್ಲಿಸಿದ ಶ್ರೀಮತಿ ಜಯಶ್ರೀ ಗುರುರಾಜ್ ಹಾಗೂ ಶ್ರೀಮತಿ ಸಿಂಧೂಜಾ ಗುರುರಾಜ್ ಇವರಿಗೆ ಹಾಗೂ ಇವರ ಕುಟುಂಬಕ್ಕೆ ಭಗವಂತ ಉತ್ತಮ ಆರೋಗ್ಯ, ಆಯುಷ್ಯ ನೀಡಿ, ಜ್ಞಾನ-ಭಕ್ತಿ-ವೈರಾಗ್ಯಗಳನ್ನು ಕೊಟ್ಟು ಅವರಿಂದ ಹೆಚ್ಚೆಚ್ಚು ಸಾಧನೆ ಮಾಡಿಸಲಿ ಎಂಬುದಾಗಿ ಪ್ರಾರ್ಥಿಸುತ್ತ, ಅವರಿಗೆ ಈ ಸಂದರ್ಭದಲ್ಲಿ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

-ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು, ದ್ವೈತವೇದಾಂತ ಅಧ್ಯಯನ
ಮತ್ತು ಸಂಶೋಧನ ಪ್ರತಿಷ್ಠಾನ

॥ ಶ್ರೀಮದ್ವಾಲ್ಮೀಕಿರಾಮಾಯಣಮ್ ॥

ಅರಣ್ಯಕಾಂಡಮ್

॥ ಶ್ರೀಗುರುಭ್ಯೋನಮಃ ॥ ಹರಿಃ ಓಂ ॥

॥ ಶ್ರೀರಾಮಾಯ ನಮಃ ॥ ಹನುಮತೇ ನಮಃ ॥ ವಿಘ್ನೇಶಾಯ ನಮಃ ॥

ಸರ್ಗ 1 ಮತ್ತು 2ರ ಕಥಾಸಾರಾಂಶ

ಶ್ರೀರಾಮಚಂದ್ರ ದಂಡಕಾರಣ್ಯವನ್ನು ಸೀತಾಲಕ್ಷ್ಮಣರೊಂದಿಗೆ ಪ್ರವೇಶ ಮಾಡುತ್ತಾನೆ. ಹರವಿದ ಸಮಿತ್ ಕುಶಗಳು, ಕಂದಮೂಲ ಫಲಗಳು, ಸ್ರುಕ್‌ಸ್ರುವ ಮುಂತಾದ ಯಜ್ಞೋಪಯೋಗಿ ವಸ್ತುಗಳು, ಹಾಸಿದ ಮೃಗಚರ್ಮಗಳು, ಜಲಪೂರ್ಣ ಮಂಗಲಕಲಶಗಳು ಆಶ್ರಮದ ತುಂಬಿ ಶೋಭಿಸುತ್ತಿತ್ತು. ಆಶ್ರಮ ಪರಿಸರ. ಬಗೆಬಗೆಯ ಹೂವು ಹಣ್ಣುಗಳಿಂದ ಕಂಗೊಳಿಸುವ ಕಾಡಿನ ಹೆಮ್ಮರಗಳು, ತಾವರೆಯ ತಂಪು ಕೊಳಗಳು, ವಿಚಿತ್ರ, ವರ್ಣರಂಚಿತ ಪಶು ಪಕ್ಷಿ ಪ್ರಾಣ ಸಂಕುಲಗಳು ಪರಿಸರದ ಕಳೆ ಹೆಚ್ಚಿಸಿದ್ದವು.

ನಿರಂತರವಾದ ಸನಾತನ ವೇದಘೋಷಗಳು ಪರಿಸರವನ್ನೆಲ್ಲ ಆವರಿಸಿದ್ದವು. ತೇಜಸ್ವಿ ಮಹನೀಯ ತಪಸ್ವಿಗಳ ಸಮುದಾಯಗಳಿಂದ ವಿಲಕ್ಷಣವಾದ ಬ್ರಹ್ಮ ತೇಜಸ್ಸು ಆಶ್ರಮದಲ್ಲಿ ತುಂಬಿತ್ತು.

ಸೀತಾಲಕ್ಷ್ಮಣ ಶ್ರೀರಾಮರನ್ನು ಕಂಡ ಋಷಿಗಳು ಕೂಡಲೆ ಭಕ್ತಿಗೌರವಗಳಿಂದ ಎದ್ದು ಬಂದು ಗೌರವಿಸಿದರು. ಪರ್ಣಕುಟೀರದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾದಿ ಸತ್ಕಾರ ಮಾಡಿದರು. ಚಿತ್ತಾಕರ್ಷಕ ರಾಮಸೌಂದರ್ಯವನ್ನು ಎಲೆಯಿಕ್ಕದೆ ದಿಟ್ಟಿಸಿ ನೋಡಿ ಆನಂದಿಸಿದರು. ಕಾಡಿನ ಕಂದಮೂಲಗಳನ್ನಿತ್ತರು. ಮೂವರಿಗೂ ಮಂಗಲಾಶಂಸನ ಮಾಡಿದರು.

ರಾಮಚಂದ್ರ! ನಾವು ನಿನ್ನಿಂದ ರಕ್ಷಣೀಯರು. ನಿನ್ನ ದೇಶದವರು. ನೀನು ನಗರದಲ್ಲಿರಲಿ ವನದಲ್ಲಿರಲಿ ನೀನೆ ನಮ್ಮ ರಾಜ.

ಮುನಿಗಳ ಆತಿಥ್ಯವನ್ನು ಸ್ವೀಕರಿಸಿ ಅವನ ಅನುಮತಿ ಪಡೆದು ಶ್ರೀರಾಮ ಚಂದ್ರ ಸೀತಾಲಕ್ಷ್ಮಣರೊಂದಿಗೆ ಅರಣ್ಯದ ಮಧ್ಯಭಾಗವನ್ನು ಪ್ರವೇಶಿಸಿದನು.

ಅಲ್ಲಿ 'ವಿರಾಧ' ಎಂಬ ನರಭಕ್ಷಕ ರಕ್ಕಸ ಎದುರಾದ. ಒಂದು ಕಬ್ಬಿಣದ ಎತ್ತರದ ಶೂಲದಲ್ಲಿ ಆಗತಾನೆ ಕೊಂದ ಸಿಂಹ, ಹುಲಿ, ತೋಳ, ಜಿಂಕೆಗಳನ್ನು ಸಿಕ್ಕಿಸಿಕೊಂಡು ಭಯಂಕರನಾಗಿ ಬರುತ್ತಿದ್ದ. ರಕ್ತ ಸುರಿಯುತ್ತಿರುವ ಹುಲಿ ಚರ್ಮವನ್ನು ಸುತ್ತಿಕೊಂಡ ಅವನು ಬಲು ಭೀಭತ್ಸನಾಗಿದ್ದ.

ಸೀತೆಯನ್ನು ಗಕ್ಕನೆ ಅಪಹರಿಸಿ, ಜಟಾವೇಷಧಾರಿ ತಾಪಸರಾದ ನಿಮಗೇಕೆ ಈ ಹೆಣ್ಣಿನ ಒಡನಾಟ. ಇವರು ನನ್ನ ಸತಿಯಾಗುವವಳು ಎಂದು ಕರ್ಕಶವಾಗಿ ಗರ್ಜನೆಗೈದ. ಶ್ರೀರಾಮ ಸಾಮಾನ್ಯ ಮನುಜನಂತೆ ಲಕ್ಷ್ಮಣನಲ್ಲಿ ತನ್ನ ಮನದಾಳದ ಅಳಲನ್ನು ಅಲವತ್ತುಕೊಂಡ— ''ತಂದೆಯ ಮರಣಕಾಲದಲ್ಲಿ, ರಾಜ್ಯ ಕಳೆದುಕೊಂಡಾಗಲೂ ಇಂಥ ದುಃಖವಾಗಿರಲಿಲ್ಲ. ಇಂದು ವೈದೇಹಿ ಪರಪುರುಷನಿಂದ ಅಪಹಾರವಾದದ್ದು ನನಗೆ ತುಂಬ ದುಃಖ ತಂದಿದೆ.''

''ಎಲ್ಲರೊಡೆಯನಾದ ನೀನಿಂತು ದುಃಖಿಸುವುದು ತರವಲ್ಲ. ಲಕ್ಷ್ಮಣನಂಥ ತಮ್ಮನಿರುವಾಗ ಚಿಂತೆ ಏಕೆ? ಸಮಾಧಾನ ಮಾಡಿಕೋ. ಭರತನ ಮೇಲಿರುವ ನನ್ನ ಕ್ರೋಧವನ್ನು ಈ ವಿರಾಧನ ಮೇಲೆ ಪ್ರಯೋಗಿಸುತ್ತೇನೆ. ನೆಲಕ್ಕೆ ಬಿದ್ದು ನರಳಿ ಹೊರಳಿ ಸಾಯುತ್ತಾನೆ. ಈ ನರಭಕ್ಷಕ ರಕ್ಕಸ'' ಎಂದು ಲಕ್ಷ್ಮಣ ರಾಮನನ್ನು ಸಾಂತ್ವನ-ಗೊಳಿಸಿದ.

ವಿಶೇಷಾಂಶ : ದಂಡಕಾರಣ್ಯ ಎಂದು ಹೆಸರು ಬರಲು ಕಾರಣವಾದ ಕಥೆ ಹೀಗಿದೆ— ಇಕ್ಷ್ವಾಕು ರಾಜನ ಮಕ್ಕಳಲ್ಲಿ ಕೊನೆಯ ಮಗ ದಂಡಕ. ಇವನು ಮೂಢ ಹಾಗೂ ಅವಿದ್ಯಾವಂತನಾಗಿದ್ದ. ಇವನ ಅವಿವೇಕದ ನಡೆಯಿಂದ ಎಂದೋ ಯಾರೋ ಮಹಾತ್ಮರ ಶಾಪ ದಂಡನೆಗೆ ಇವನು ಒಳಗಾಗುವನೆಂದು ಊಹಿಸಿ ದಂಡಕ ಎಂದೇ ಹೆಸರಿಟ್ಟ. ಇವನಿಗೆ ವಿಂಧ್ಯ, ಶೈವಲ ಪರ್ವತಗಳ ನಡುವಿನ ರಾಜ್ಯವನ್ನು ಇಕ್ಷ್ವಾಕು ಕೊಟ್ಟಿದ್ದ.

ದಂಡಕ ತನ್ನ ವಸತಿಗಾಗಿ ಸುಂದರ ನಗರವೊಂದನ್ನು ನಿರ್ಮಿಸಿಕೊಂಡು ಶುಕ್ರಾಚಾರ್ಯರನ್ನು ತನ್ನ ಪುರೋಹಿತರನ್ನಾಗಿ ಸ್ವೀಕರಿಸಿದ. ಸಮೃದ್ಧ ಸಾಮ್ರಾಜ್ಯದ ಅರಸನಾಗಿದ್ದ. ದಂಡಕ ಒಮ್ಮೆ ಚೈತ್ರದ ವಸಂತಮಾಸದಲ್ಲಿ ಶುಕ್ರಾಚಾರ್ಯರ ಆಶ್ರಮಕ್ಕೆ ಬಂದ. ಆಗ ಶುಕ್ರಾಚಾರ್ಯರು ಆಶ್ರಮದಲ್ಲಿರಲಿಲ್ಲ. ಅವನ ಮಗಳು 'ಅರಜಾ' ಇದ್ದಳು. ಹೂ ಬನದಲ್ಲಿ ಸುಂದರಿ ಶುಕ್ರತನಯೆಯನ್ನು ನೋಡಿ ಕಾಮಬಾಧೆಗೆ ಒಳಗಾಗಿ ಅವಳಲ್ಲಿನ ಬಯಕೆಯನ್ನು ಬಯಲು ಮಾಡಿದ. 'ರಾಜನ್! ನಾನು ಶುಕ್ರಾಚಾರ್ಯರ ಜ್ಯೇಷ್ಠಪುತ್ರಿ. ಅವರು ನಿನಗೆ ಗುರು. ನೀನು ಅವರ ಶಿಷ್ಯ. ತಂದೆ ಮಹಾತಪಸ್ವಿಗಳು. ನಾನು ಅವರ ಅಧೀನ. ಅವರಲ್ಲಿ ಬೇಡಿಕೋ. ಅವರು ಕೊಟ್ಟರೆ ಮಾತ್ರ ನಾನು ನಿನ್ನ ಭಾರ್ಯೆಯಾಗಬಹುದು. ಹಾಗೇ ಸ್ಪರ್ಶ ಮಾಡಿದರೆ ಅವರು ಶಾಪ ನೀಡಿಯಾರು ಎಚ್ಚರಿಕೆ!'' ಎಂದಳು ಅರಜಾ.

ಸುಶ್ರೋಣಿ! ಕಾಲ ಕಳೆಯದೆ ಒಪ್ಪಿಗೆ ನೀಡು. ಕಾಮಬಾಧೆ ಸೈರಿಸಲಾರೆ. ನಿನ್ನನ್ನು ಭೋಗಿಸಿದ ಮೇಲೆ ಶಾಪವೋ ಮರಣವೋ ವಿಚಾರ ಮಾಡೋಣ ಎಂದು ಅವಳನ್ನು ಬಲಾತ್ಕಾರವಾಗಿ ಭೋಗಿಸಿಯೇ ಬಿಟ್ಟ! ಎಲ್ಲ ಮುಗಿಸಿ ತನ್ನ ನಗರಕ್ಕೆ ಹಿಂತಿರುಗಿದ.

ಹೊರಗಿನಿಂದ ಹಿಸಿದು ಬಂದ ಶುಕ್ರಾಚಾರ್ಯರು ಮಗಳ ಆಕ್ರಂದನ, ದಂಡಕನ ಆಕ್ರಮಣಗಳನ್ನು ಕೇಳಿ ಕುಪಿತರಾಗಿ ಆಶ್ರಮವಾಸಿಗಳನ್ನು ರಾಜ್ಯದ ಹೊರಭಾಗಕ್ಕೆ ಕಳುಹಿಸಿ ಈ ದಂಡಕನ ರಾಜ್ಯವೆಲ್ಲ 7 ರಾತ್ರಿಗಳೊಳಗೆ ಇಂದ್ರ ಸುರಿಸುವ ಧೂಳಿನ ಮಳೆಯಿಂದಾಗಿ ಹಾಳಾಗಿ ಹೋಗಲಿ ಎಂದು ಶಪಿಸಿದರು. ದಂಡಕನೂ ತನ್ನ ಪುತ್ರ ಸೈನ್ಯ ವಾಹನಗಳೊಂದಿಗೆ ನಾಶವಾಗುವಂತೆಯೂ ಶಪಿಸಿದರು. ನಾಶವಾದ ಆ ದಂಡಕನ ರಾಜ್ಯವೇ ಈಗ ದಂಡಕಾರಣ್ಯವೆನಿಸಿದೆ. ಕಾಲಕ್ರಮದಲ್ಲಿ ತಪಸ್ವಿಗಳು ಇಲ್ಲಿ ನೆಲೆಸಿದ್ದರಿಂದ 'ಜನಸ್ಥಾನ' ಎಂದೂ ಹೆಸರಾಯಿತು.

ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಮೊದಲು ಶರಭಂಗಮುನಿಯ ದೇಹತ್ಯಾಗವಾದುದನ್ನು ತಿಳಿಸಿ ಬಳಿಕ ವಿರಾಧವಧ ಪ್ರಸಂಗವನ್ನು ನಿರೂಪಣೆ ಮಾಡಿರುವರು.

❖

ಪ್ರಥಮ ಸರ್ಗಃ

ಮಹರ್ಷಿಸಂಗಃ

ಪ್ರವಿಶ್ಯ ತು ಮಹಾರಣ್ಯಂ ದಂಡಕಾರಣ್ಯಮಾತ್ಮವಾನ್ ।
ದದರ್ಶ ರಾಮೋ ದುರ್ಧರ್ಷಸ್ತಾಪಸಾಶ್ರಮಮಂಡಲಮ್ ॥೧॥

ಧೈರ್ಯಶಾಲಿ, ಶತ್ರುಗಳಿಗೆ ಅಪ್ರಧೃಷ್ಯನೂ ಆದ ಶ್ರೀರಾಮನು ದಂಡಕಾರಣ್ಯ-ವೆಂಬ ಮಹಾವನವನ್ನು ಪ್ರವೇಶಿಸಿ ತಪಸ್ವೀ ಮುನಿಗಳ ಆಶ್ರಮ ಸಮುದಾಯವನ್ನು ಕಂಡನು.

ಕುಶಚೀರಪರಿಕ್ಷಿಪ್ತಂ ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮಾವೃತಮ್ ।
ಯಥಾ ಪ್ರದೀಪ್ತಂ ದುರ್ದರ್ಶಂ ಗಗನೇ ಸೂರ್ಯಮಂಡಲಮ್ ॥೨॥

ಆ ಆಶ್ರಮದ ಪರಿಸರದಲ್ಲಿ ದರ್ಭೆಗಳು, ಚೀರವಸನಗಳು ಹರಡಿಕೊಂಡಿ-ದ್ದವು. ನಿರಂತರ ಬ್ರಹ್ಮವಿದ್ಯಾಭ್ಯಾಸದ ಫಲವಾಗಿ ಬ್ರಹ್ಮ ತೇಜಸ್ ತುಂಬಿತ್ತು. ಅದರಿಂದಾಗಿಯೇ ದುಷ್ಟರಿಗೆ ದುರ್ದರ್ಶನೀಯವಾಗಿತ್ತು—ಗಗನದಲ್ಲಿರುವ ತೇಜಸ್ವಿ ಸೂರ್ಯಮಂಡಲದಂತೆ.

ಶರಣ್ಯಂ ಸರ್ವಭೂತಾನಾಂ ಸುಸಂಮೃಷ್ಟಾಜಿರಂ ಸದಾ ।
ಮೃಗೈರ್ಬಹುಭಿರಾಕೀರ್ಣಂ ಪಕ್ಷಿಸಂಘೈಃ ಸಮಾವೃತಮ್ ॥೩॥

ಎಲ್ಲ ಪ್ರಾಣಿಗಳಿಗೆ ಆಸರೆಯಾಗಿತ್ತು. ಚೆನ್ನಾಗಿ ಗುಡಿಸಿ ಸಾರಿಸಿದ ಸ್ವಚ್ಛ ಅಂಗಳ-ಗಳಿದ್ದವು. ಬಹು ಬಗೆಯ ಮೃಗಗಳಿಂದ ತುಂಬಿತ್ತು. ಹಕ್ಕಿಗಳ ಸಂಕುಲವೂ ಆವರಿಸಿತ್ತು.

ಪೂಜಿತಂ ಚೋಪನೃತ್ತಂ ಚ ನಿತ್ಯಮಪ್ಸರಸಾಂ ಗಣೈಃ ।
ವಿಶಾಲೈರಗ್ನಿಶರಣೈಃ ಸ್ರುಗ್ಭಾಂಡೈರಜಿನೈಃ ಕುಶೈಃ ॥೪॥

ಸಮಿದ್ಭಿಸ್ತೋಯಕಲಶೈಃ ಫಲಮೂಲೈಶ್ಚ ಶೋಭಿತಮ್ ।
ಆರಣ್ಯೈಶ್ಚ ಮಹಾವೃಕ್ಷೈಃ ಪುಣ್ಯೈಃ ಸ್ವಾದುಫಲೈರ್ಯುತಮ್ ॥೫॥

ಅಲ್ಲಿಯ ಸೊಬಗಿಗೆ ಬೆರಗಾಗಿ ಅಪ್ಸರೆಯರ ಗುಂಪು ಆಶ್ರಮವನ್ನು ಆದರಿಸಿತ್ತು. ಮತ್ತು ಅಲ್ಲಿ ನೃತ್ಯ ಮಾಡುತ್ತಿತ್ತು. ವಿಶಾಲವಾದ ಯಾಗಶಾಲೆಗಳು, ಸ್ರುಕ್‌ಸ್ರುವ ಮುಂತಾದ ಯಜ್ಞಸಾಮಗ್ರಿಗಳು, ಕೃಷ್ಣಾಜಿನಗಳು ಮತ್ತು ಕುಶಗಳಿಂದ ಕೂಡಿತ್ತು. ಸಮಿತ್ತುಗಳಿಂದ, ಸಲಿಲಪೂರ್ಣಕಲಶಗಳಿಂದ, ಕಂದಮೂಲ ಫಲಗಳಿಂದ ಕಳೆ-ಗೊಂಡಿತ್ತು. ಸ್ವಾದುಫಲಗಳು ತುಂಬಿದ ಪುಣ್ಯದ ಕಾಡಿನ ಹೆಮ್ಮರಗಳಿಂದ ಸಮಾವೃತವಾಗಿತ್ತು.

ಬಲಿಹೋಮಾರ್ಚಿತಂ ಪುಣ್ಯಂ ಬ್ರಹ್ಮಘೋಷನಿನಾದಿತಮ್ ।
ಪುಷ್ಪೈರ್ವನ್ಯೈಃ ಪರಿಕ್ಷಿಪ್ತಂ ಪದ್ಮಿನ್ಯಾ ಚ ಸಪದ್ಮಯಾ ॥೬॥

ಬಲಿಹೋಮಾದಿಗಳಿಂದ ದೇವತಾರ್ಚನೆಗಳು ನಡೆದಿದ್ದವು. ವೇದಘೋಷಗಳ ನಿನಾದ ಅನುರಣಿಸುತ್ತಿತ್ತು. ಪೂಜೆ ಮಾಡಿದ ಬಗೆಬಗೆ ಹೂಗಳು ಹರಡಿಕೊಂಡಿದ್ದವು. ಅರಳು ತಾವರೆಗಳ ಕೊಳಗಳು ಹೊಳೆದಿದ್ದವು.

ಫಲಮೂಲಾಶನೈರ್ದಾಂತೈಶ್ಚೀರಕೃಷ್ಣಾಜಿನಾಂಬರೈಃ ।
ಸೂರ್ಯವೈಶ್ವಾನರಾಭೈಶ್ಚ ಪುರಾಣೈರ್ಮುನಿಭಿರ್ವೃತಮ್ ॥೭॥

ಫಲ-ಮೂಲಗಳೇ ಆಹಾರವಾಗಿರುವ, ಜಿತೇಂದ್ರಿಯರು, ನಾರುಮಡಿ, ಕೃಷ್ಣಮೃಗಚರ್ಮಗಳನ್ನು ತೊಟ್ಟಿದ್ದು ಸೂರ್ಯಾಗ್ನಿಗಳಂತೆ ತೇಜಸ್ವಿಗಳಾದ ಪುರಾತನ ಋಷಿಗಳಿಂದ ಕೂಡಿತ್ತು ಆಶ್ರಮ.

ಪುಣ್ಯೈಶ್ಚ ನಿಯತಾಹಾರೈಃ ಶೋಭಿತಂ ಪರಮರ್ಷಿಭಿಃ ।
ತದ್ಬ್ರಹ್ಮಭವನಪ್ರಖ್ಯಂ ಬ್ರಹ್ಮಘೋಷನಿನಾದಿತಮ್ ।
ಬ್ರಹ್ಮವಿದ್ಭಿರ್ಮಹಾಭಾಗೈರ್ಬ್ರಾಹ್ಮಣೈರುಪಶೋಭಿತಮ್ ॥೮॥

ನಿಯಮಿತ ಆಹಾರವುಳ್ಳ ಪುಣ್ಯಾತ್ಮರಾದ ಪರಮರ್ಷಿಗಳಿಂದ ಶೋಭಿತ-ವಾಗಿತ್ತು. ಬ್ರಹ್ಮಘೋಷನಿನಾದ ತುಂಬಿದ, ಮಹಾಭಾಗ್ಯಶಾಲಿ ಬ್ರಹ್ಮಜ್ಞಾನಿ ಬ್ರಾಹ್ಮಣರಿಂದ ಶೋಭಿಸುತ್ತಿದ್ದ ಆಶ್ರಮ ಬ್ರಹ್ಮಲೋಕದಂತಿತ್ತು !

ತದ್ದೃಷ್ಟ್ವಾ ರಾಘವಃ ಶ್ರೀಮಾಂಸ್ತಾಪಸಾಶ್ರಮಮಂಡಲಮ್ ।
ಅಭ್ಯಗಚ್ಛನ್ಮಹಾತೇಜಾ ವಿಜ್ಯಂ ಕೃತ್ವಾ ಮಹದ್ಧನುಃ ॥೯॥

ತೇಜಸ್ವೀ ಶ್ರೀಮಾನ್ ರಾಘವನು ತಾಪಸಾಶ್ರಮ ಸಮುದಾಯವನ್ನು ನೋಡಿ ತನ್ನ ಶ್ರೇಷ್ಠ ಬಿಲ್ಲಿನ ಹೆದೆಯನ್ನು ಬಿಚ್ಚಿ ವಿನೀತನಾಗಿ ಒಳಹೊಕ್ಕನು.

ದಿವ್ಯಜ್ಞಾನೋಪಪನ್ನಾಸ್ತೇ ರಾಮಂ ದೃಷ್ಟ್ವಾ ಮಹರ್ಷಯಃ ।
ಅಭ್ಯಗಚ್ಛಂಸ್ತಥಾ ಪ್ರೀತಾ ವೈದೇಹಿಂ ಚ ಯಶಸ್ವಿನೀಮ್ ।
ತೇ ತೇ ಸೋಮಮಿವೋದ್ಯಂತಂ ದೃಷ್ಟ್ವಾ ವೈ ಧರ್ಮಚಾರಿಣಃ॥೧೦॥

ದಿವ್ಯಜ್ಞಾನಿಗಳಾದ ಆ ಮಹರ್ಷಿಗಳು ಶ್ರೀರಾಮನನ್ನು ನೋಡಿ, ಯಶಸ್ವಿಯಾದ ಸೀತೆಯನ್ನೂ ಕಂಡು ಸಂತಸಗೊಂಡು ಎದುರುಗೊಂಡರು. ಇದುಸುವ ಚಂದ್ರನಂತೆ ಕಂಗೊಳಿಸುವ ಶ್ರೀರಾಮನನ್ನು ಕಂಡು ಋಷಿಯಾದರು.

ಲಕ್ಷ್ಮಣಂ ಚೈವ ದೃಷ್ಟ್ವಾ ತು ವೈದೇಹೀಂ ಚ ಯಶಸ್ವಿನೀಮ್ ।
ಮಂಗಲಾನಿ ಪ್ರಯುಂಜಾನಾಃ ಪ್ರತ್ಯಗೃಹ್ಣನ್ ದೃಢವ್ರತಾಃ ॥೧೧॥

ಲಕ್ಷ್ಮಣನನ್ನು ಹಾಗು ಯಶಸ್ವಿಯಾದ ವಿದೇಹ ರಾಜಕುವರಿಯನ್ನೂ ಕಂಡು ದೃಢವ್ರತರಾದ ಆ ಮಹರ್ಷಿಗಳು ಮಂಗಲ ಆಶೀರ್ವಾದಗಳನ್ನು ಪ್ರಯೋಗಿಸುತ್ತ ಅವರನ್ನು ಅತಿಥಿಗಳನ್ನಾಗಿ ಸ್ವೀಕರಿಸಿದರು.

ರೂಪಸಂಹನನಂ ಲಕ್ಷ್ಮೀಂ ಸೌಕುಮಾರ್ಯಂ ಸುವೇಷತಾಮ್ ।
ದದೃಶುರ್ವಿಸ್ಮಿತಾಕಾರಾ ರಾಮಸ್ಯ ವನವಾಸಿನಃ ॥೧೨॥

ವನವಾಸಿಯಾದ ಶ್ರೀರಾಮನ ಸೌಂದರ್ಯ ತುಂಬಿದ ಆಕಾರವನ್ನು, ಕಾಂತಿ-ಯನ್ನು, ಸುಕುಮಾರತೆಯನ್ನು, ಸುಂದರ ವೇಷವನ್ನು ಕಂಡು ಋಷಿಗಳು ಆಶ್ಚರ್ಯಗೊಂಡರು.

ವೈದೇಹೀಂ ಲಕ್ಷ್ಮಣಂ ರಾಮಂ ನೇತ್ರೈರನಿಮಿಷೈರಿವ ।
ಆಶ್ಚರ್ಯಭೂತಾನ್ ದದೃಶುಃ ಸರ್ವೇ ತೇ ವನಚಾರಿಣಃ ॥೧೩॥

ಆ ಎಲ್ಲ ವನಚಾರಿಗಳು ಅಚ್ಚರಿಗಳಾದ ಸೀತೆ ಲಕ್ಷ್ಮಣ ರಾಮರನ್ನು ಎವೆಯಿಕ್ಕದೆ ನೋಡುತ್ತಲೇ ಇದ್ದರು.

ಅತ್ಯೈನಂ ಹಿ ಮಹಾಭಾಗಾಃ ಸರ್ವಭೂತಹಿತೇ ರತಮ್ ।
ಅತಿಥಿಂ ಪರ್ಣಶಾಲಾಯಾಂ ರಾಘವಂ ಸಂನ್ಯವೇಶಯನ್ ॥೧೪॥

ಭಾಗ್ಯಶಾಲಿಗಳಾದ ಆ ಅರಣ್ಯನಿವಾಸಿಗಳು ಸರ್ವಭೂತಹಿತರತನಾದ ಅತಿಥಿಯಾದ ಶ್ರೀರಾಮನನ್ನು ಈ ಎಲೆಮನೆಯಲ್ಲಿ ಕುಳ್ಳಿರಿಸಿದರು.

ತತೋ ರಾಮಸ್ಯ ಸತ್ಕೃತ್ಯ ವಿಧಿನಾ ಪಾವಕೋಪಮಾಃ ।
ಆಜಹ್ರುಸ್ತು ಮಹಾಭಾಗಾಃ ಸಲಿಲಂ ಧರ್ಮಚಾರಿಣಃ ॥೧೫॥

ಬಳಿಕ ಅಗ್ನಿಯಂತೆ ಬೆಳಗುವ ಪುಣ್ಯಾತ್ಮರಾದ ಆ ಧರ್ಮಾಚಾರರತರು ವಿಧಿಯಂತೆ ರಾಮನನ್ನು ಸತ್ಕರಿಸಿ ನೀರನ್ನು ಕೊಟ್ಟರು.

ಮೂಲಂ ಪುಷ್ಪಂ ಫಲಂ ವನ್ಯಮಾಶ್ರಮಂ ಚ ಮಹಾತ್ಮನಃ ।
ನಿವೇದಯಿತ್ವಾ ಧರ್ಮಜ್ಞಾಸ್ತತಃ ಪ್ರಾಂಜಲಯೋಽಬ್ರುವನ್ ॥೧೬॥

ಕಾಡಿನ ಗಡ್ಡೆ ಪುಷ್ಪಫಲಗಳನ್ನು, ಆಶ್ರಮವನ್ನೂ ಮಹಾತ್ಮ ಶ್ರೀರಾಮನಿಗೆ ನಿವೇದನೆಮಾಡಿ ಬಳಿಕ ಧರ್ಮವನ್ನು ಬಲ್ಲ ಆ ಮಹರ್ಷಿಗಳು ಕೈಮುಗಿದು ಹೇಳಿದರು.

ಧರ್ಮಪಾಲೋ ಜನಸ್ಯಾಸ್ಯ ಶರಣ್ಯಸ್ತ್ವಂ ಮಹಾಯಶಾಃ ।
ಪೂಜನೀಯಶ್ಚ ಮಾನ್ಯಶ್ಚ ರಾಜಾ ದಂಡಧರೋ ಗುರುಃ ॥೧೭॥

ಧರ್ಮವನ್ನು ಕಾಪಿಡುವ ಮಹಾಯಶೋವಂತನಾದ ನೀನು ಕಾಡಿನ ಈ ಜನರಿಗೆ ಆಸರೆಯು, ಪೂಜ್ಯನು, ಮಾನ್ಯನು, ದಂಡಧರನಾದ ಹಿರಿಯ ರಾಜ-ನಾಗಿರುವಿ.

ಇಂದ್ರಸ್ಯೇಹ ಚತುರ್ಭಾಗಃ ಪ್ರಜಾ ರಕ್ಷತಿ ರಾಘವ ।
ರಾಜಾ ತಸ್ಮಾದ್ವರಾನ್ ಭೋಗಾನ್ ಭುಂಕ್ತೇ ಲೋಕನಮಸ್ಕೃತಃ ॥೧೮॥

ರಾಘವ! ಇಂದ್ರನ ನಾಲ್ಕನೇ ಒಂದಂಶನಾಗಿ ರಾಜ ಈ ಭೂಮಿಯಲ್ಲಿ ಪ್ರಜೆಗಳನ್ನು ರಕ್ಷಿಸುತ್ತಾನೆ. ಆದ್ದರಿಂದ ಎಲ್ಲರಿಂದ ನಮಸ್ಕೃತನಾಗಿ ಉತ್ತಮ ಭೋಗಗಳನ್ನು ಅನುಭವಿಸುತ್ತಾನೆ.

ತೇ ವಯಂ ಭವತಾ ರಕ್ಷ್ಯಾ ಭವದ್ವಿಷಯವಾಸಿನಃ ।
ನಗರಸ್ಥೋ ವನಸ್ಥೋ ವಾ ತ್ವಂ ನೋ ರಾಜಾ ಜನೇಶ್ವರಃ ॥೧೯॥

ನಿನ್ನ ದೇಶನಿವಾಸಿಗಳಾದ ನಾವು ನಿನ್ನಿಂದ ರಕ್ಷಣೀಯರಾಗಿದ್ದೇವೆ. ನೀನು ನಗರದಲ್ಲಿದ್ದರೂ ಕಾಡಿನಲ್ಲಿದ್ದರೂ ನೀನೆ ನಮಗೆ ಒಡೆಯ.

ನ್ಯಸ್ತದಂಡಾ ವಯಂ ರಾಜನ್ ಜಿತಕ್ರೋಧಾ ಜಿತೇಂದ್ರಿಯಾಃ ।
ರಕ್ಷಿತವ್ಯಾಸ್ತ್ವಯಾ ಶಶ್ವದ್ಗರ್ಭಭೂತಾಸ್ತಪೋಧನಾಃ ॥೨೦॥

ನಾವು ದಂಡನೆಯನ್ನು ಬಿಟ್ಟವರು, ಕ್ರೋಧವನ್ನು ಗೆದ್ದವರು. ಜಿತೇಂದ್ರಿಯರು. ಆದ್ದರಿಂದ ಗರ್ಭಗತ ಶಿಶುವನ್ನು ತಾಯಿ ರಕ್ಷಿಸುವಂತೆ ತಪೋಧನರಾದ ನಾವು ನಿನ್ನಿಂದ ರಕ್ಷಣೀಯರು.

ಏವಮುಕ್ತ್ವಾ ಫಲೈರ್ಮೂಲೈಃ ಪುಷ್ಪೈರ್ವನ್ಯೈಶ್ಚ ರಾಘವಮ್ ।
ಅನ್ಯೈಶ್ಚ ವಿವಿಧಾಹಾರೈಃ ಸಲಕ್ಷ್ಮಣಮಪೂಜಯನ್ ॥೨೧॥

ಹೀಗೆ ಹೇಳಿ ಕಾಡಿನ ಕಂದಮೂಲ ಫಲಪುಷ್ಪಗಳಿಂದ ಹಾಗು ಬೇರೆ ತರಹದ ಬಗೆಬಗೆಯ ಆಹಾರಗಳಿಂದ ಲಕ್ಷ್ಮಣನೊಡಗೂಡಿದ ಶ್ರೀರಾಮನನ್ನು ಪೂಜಿಸಿ ದರು.

ತಥಾನ್ಯೇ ತಾಪಸಾಃ ಸಿದ್ಧಾ ರಾಮಂ ವೈಶ್ವಾನರೋಪಮಾಃ ।
ನ್ಯಾಯವೃತ್ತಾ ಯಥಾನ್ಯಾಯಂ ತರ್ಪಯಾಮಾಸುರೀಶ್ವರಮ್ ॥೨೨॥

ಹಾಗೆಯೇ ಇನ್ನಿತರ ಅಗ್ನಿಯಂತೆ ತೇಜಸ್ವಿಗಳಾದ ತಾಪಸರು, ಸಿದ್ಧಪುರುಷರು, ನ್ಯಾಯವಾಗಿ ಬದುಕುವವರು ಯಥೋಚಿತವಾಗಿ ಒಡೆಯ ಶ್ರೀರಾಮನನ್ನು ಸಂತಸಗೊಳಿಸಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೊದಲನೇ ಸರ್ಗ ಮುಗಿಯಿತು.

❖

ದ್ವಿತೀಯಃ ಸರ್ಗಃ

ವಿರಾಧಸಂರೋಧಃ

ಕೃತಾತಿಥ್ಯೋಽಥ ರಾಮಸ್ತು ಸೂರ್ಯಸ್ಯೋದಯನಂ ಪ್ರತಿ ।
ಆಮಂತ್ರ್ಯ ಸ ಮುನೀನ್ ಸರ್ವಾನ್ ವನಮೇವಾನ್ವಗಾಹತ ॥೧॥

ಅತಿಥಿ ಸತ್ಕಾರವನ್ನು ಪಡೆದ ಶ್ರೀರಾಮ ಮರುದಿನ ಸೂರ್ಯೋದಯವಾಗುತ್ತಲೆ ಎಲ್ಲ ಮುನಿಗಳ ಅನುಮತಿ ಪಡೆದು ಕಾಡನ್ನು ಪ್ರವೇಶಿಸಿಯೇ ಬಿಟ್ಟ.

ನಾನಾಮೃಗಗಣಾಕೀರ್ಣಂ ಶಾರ್ದೂಲವೃಕಸೇವಿತಮ್ ।
ಧ್ವಸ್ತವೃಕ್ಷಲತಾಗುಲ್ಮಂ ದುರ್ದರ್ಶಸಲಿಲಾಶಯಮ್ ॥೨॥

ನಿಷ್ಕೂಜನಾನಾಶಕುನಿ ಝಿಲ್ಲಿಕಾಗಣನಾದಿತಮ್ ।
ಲಕ್ಷ್ಮಣಾನುಚರೋ ರಾಮೋ ವನಮಧ್ಯಂ ದದರ್ಶ ಹ ॥೩॥

ಲಕ್ಷ್ಮಣನನ್ನು ಹಿಂಬಾಲಿಸಿದ ಶ್ರೀರಾಮ ಕಾಡಿನ ಮಧ್ಯಭಾಗವನ್ನು ಕಂಡನು. ಆ ಪ್ರದೇಶವು ಬಗೆಬಗೆಯ ಮೃಗ ಸಮೂಹದಿಂದ ತುಂಬಿತ್ತು . ಹುಲಿ, ತೋಳಗಳು ತುಂಬಿದ್ದವು. ರಾಕ್ಷಸ ಸಂಚಾರ ಕಾರಣದಿಂದ ಮರಗಿಡ ಬಳ್ಳಿಗಳು ಧ್ವಂಸಗೊಂಡಿದ್ದವು. ಎಲ್ಲೂ ಜಲಾಶಯಗಳಿರಲಿಲ್ಲ. ರಾಕ್ಷಸ ಭಯದಿಂದ ಬಹು ಬಗೆಯ ಹಕ್ಕಿಗಳಿದ್ದರೂ ಚಿಲಿಪಿಲಿ ಗುಟ್ಟುತ್ತಿರಲಿಲ್ಲ. ದುಃಖಿಗಳ ಝೇಂಕಾರ ಮಾತ್ರ ಕೇಳಿಸುತ್ತಿದ್ದವು.

ವನಮಧ್ಯೇ ತು ಕಾಕುತ್ಸ್ಥಸ್ತಸ್ಮಿನ್ ಘೋರಮೃಗಾಯುತೇ ।
ದದರ್ಶ ಗಿರಿಶೃಂಗಾಭಂ ಪುರುಷಾದಂ ಮಹಾಸ್ವನಮ್ ॥೪॥

ಘೋರಮೃಗಗಳಿಂದ ಕೂಡಿದ್ದ ಆ ಕಾಡಿನಲ್ಲಿ ಸೀತೆಯೊಡನಿದ್ದ ಶ್ರೀರಾಮ, ಗಿರಿಶಿಖರದಂತಿದ್ದ ಜೋರಾಗಿ ಗರ್ಜನೆ ಮಾಡುತ್ತಿರುವ ನರಭಕ್ಷಕರಾಕ್ಷಸನೊಬ್ಬನನ್ನು ಕಂಡನು.

ಗಂಭೀರಾಕ್ಷಂ ಮಹಾವಕ್ತ್ರಂ ವಿಕಟಂ ವಿಷಮೋದರಮ್ ।
ಬೀಭತ್ಸಂ ವಿಷಮಂ ದೀರ್ಘಂ ವಿಕೃತಂ ಘೋರದರ್ಶನಮ್ ॥೫॥

ಆಳವಾಗಿ ಗುಳಿಬಿದ್ದ ಕಣ್ಣು, ದೊಡ್ಡ ಮುಖ, ವಿಶಾಲವಾದ ಕಾಯ. ಡೊಳ್ಳುಹೊಟ್ಟೆ, ರಕ್ತಸಿಕ್ತವಾಗಿ ಕುತ್ಸಿತವಾದ ಕಾಯ. ವಿಕಾರವಾದ ಉಬ್ಬು ತಗ್ಗುಗಳು

ದೀರ್ಘವೂ, ವಿಕೃತವೂ ಆದ್ದರಿಂದಲೇ ನೋಡಲು ಭಯಂಕರನೂ ಆಗಿದ್ದ ಆ ರಾಕ್ಷಸ.

ವಸಾನಂ ಚರ್ಮ ವೈಯಾಘ್ರಂ ವಸಾರ್ದ್ರಂ ರುಧಿರೋಕ್ಷಿತಮ್ ।
ತ್ರಾಸನಂ ಸರ್ವಭೂತಾನಾಂ ವ್ಯಾದಿತಾಸ್ಯಮಿವಾಂತಕಮ್ ॥೬॥

ವಸಾರ್ದ್ರವಾದ ರಕ್ತಸಿಕ್ತ ಹುಲಿಯ ಚರ್ಮವನ್ನು ಧರಿಸಿದ್ದ. ಎಲ್ಲರಿಗೆ ಹೆದರಿಕೆಯಾಗುವಂತಿದ್ದ. ಬಾಯ್ತೆರೆದ ಅಂತಕನಂತಿದ್ದ ರಾಕ್ಷಸ.

ತ್ರೀನ್ ಸಿಂಹಾಶ್ಚತುರೋ ವ್ಯಾಘ್ರಾನ್ ದ್ವೌ ವೃಕೌ ಪೃಷತಾನ್ ದಶ ।
ಸವಿಷಾಣಂ ವಸಾದಿಗ್ಧಂ ಗಜಸ್ಯ ಚ ಶಿರೋ ಮಹತ್ ।
ಅವಸಜ್ಯಾಯಸೇ ಶೂಲೇ ವಿನದಂತಂ ಮಹಾಸ್ವನಮ್ ॥೭॥

ದೊಡ್ಡ ಶೂಲದಲ್ಲಿ ಮೂರು ಸಿಂಹಗಳನ್ನು, ನಾಲ್ಕು ಹುಲಿಗಳನ್ನು, ಎರಡು ತೋಳಗಳನ್ನು ವಸಾದಿಗ್ಧವಾದ ಕೊಂಬಿನಿಂದ ಕೂಡಿದ ಹತ್ತು ಜಿಂಕೆಗಳನ್ನು, ದೊಡ್ಡ ಆನೆಯ ತಲೆಯನ್ನು ಸಿಕ್ಕಿಸಿಕೊಂಡು ಏರುದನಿಯಲ್ಲಿ ಗರ್ಜಿಸುತ್ತಿದ್ದನು. ಅಂತಹ ರಾಕ್ಷಸನನ್ನು ಶ್ರೀರಾಮ ಕಂಡನು.

ಸ ರಾಮಂ ಲಕ್ಷ್ಮಣಂ ಚೈವ ಸೀತಾಂ ದೃಷ್ಟ್ವಾಥ ಮೈಥಿಲೀಮ್
ಅಭ್ಯಧಾವತ ಸಂಕ್ರುದ್ಧಃ ಪ್ರಜಾಃ ಕಾಲ ಇವಾಂತಕಃ ।
ಸ ಕೃತ್ವಾ ಭೈರವಂ ನಾದಂ ಚಾಲಯನ್ನಿವ ಮೇದಿನೀಮ್ ॥೮॥

ಆ ರಕ್ಕಸನು ರಾಮಲಕ್ಷ್ಮಣ ಮೈಥಿಲಿ ಸೀತೆಯರನ್ನು ಕಂಡು ಕಡುಕ್ರೋಧ-ಗೊಂಡವನಾಗಿ ಭೈರವ ನಾದ ಮಾಡುತ್ತ ಭೂಮಿಯನ್ನೆ ಅಲುಗಾಡಿಸುವವನಂತೆ, ಸಂಹಾರಕನಾದ ಅಂತಕನು ಪ್ರಜೆಗಳ ಬಳಿ ಧಾವಿಸುವಂತೆ ಮುನ್ನುಗ್ಗಿ ಬಂದ.

ಅಂಕೇನಾದಾಯ ವೈದೇಹೀಮಪಕ್ರಮ್ಯ ತತೋಽಬ್ರವೀತ್ ।
ಯುವಾಂ ಜಟಾಚೀರಧರೌ ಸಭಾರ್ಯೌ ಕ್ಷೀಣಜೀವಿತೌ ।
ಪ್ರವಿಷ್ಟೌ ದಂಡಕಾರಣ್ಯಂ ಶರಚಾಪಾಸಿಧಾರಿಣೌ ॥೯॥

ಸೀತೆಯನ್ನು ಎತ್ತಿಕೊಂಡು ಹೋಗಿ ಮತ್ತೆ ತಿರುಗಿ ನುಡಿದ— ಜಟಾಚೀರ-ಧಾರಿಗಳು, ಬಿಲ್ಲು ಬಾಣ ಖಡ್ಗಧಾರಿಗಳೂ ಆದ ನೀವು ದಂಡಕಾರಣ್ಯವನ್ನು ಹೊಕ್ಕಿರುವಿರಿ. ಇನ್ನು ನಿಮ್ಮ ಬದುಕು ಕ್ಷೀಣವಾಯಿತು.

ಕಥಂ ತಾಪಸಯೋರ್ವಾಂ ಚ ವಾಸಃ ಪ್ರಮದಯಾ ಸಹ ।
ಅಧರ್ಮಚಾರಿಣೌ ಪಾಪೌ ಕೌ ಯುವಾಂ ಮುನಿದೂಷಕೌ ॥೧೦॥

ತಾಪಸರಾದ ನೀವಿಬ್ಬರು ಈ ಹೆಣ್ಣಿನೊಂದಿಗೆ ಹೇಗೆ ಇರುವಿರಿ. ಅಧರ್ಮ-ಚಾರಿಗಳಾದ ಪಾಪಿಗಳು ನೀವು ಮುನಿವೇಷವನ್ನು ಕಲುಷಿತಗೊಳಿಸುತ್ತಿರುವಿರಿ.

ಅಹಂ ವನಮಿದಂ ದುರ್ಗಂ ವಿರಾಧೋ ನಾಮ ರಾಕ್ಷಸಃ ।
ಚರಾಮಿ ಸಾಯುಧೋ ನಿತ್ಯಮೃಷಿಮಾಂಸಾನಿ ಭಕ್ಷಯನ್ ॥೧೧॥

ನಾನು ವಿರಾಧ ಎಂಬ ರಕ್ಕಸ! ಈ ದುರ್ಗಮವಾದ ವನದಲ್ಲಿ ಋಷಿಮಾಂಸ-ಗಳನ್ನು ತಿನ್ನುತ್ತ ಆಯುಧ ಹಿಡಿದು ತಿರುಗುತ್ತಿರುತ್ತೇನೆ.

ಇಯಂ ನಾರೀ ವರಾರೋಹಾ ಮಮ ಭಾರ್ಯಾ ಭವಿಷ್ಯತಿ ।
ಯುವಯೋಃ ಪಾಪಯೋಶ್ಚಾಹಂ ಪಾಸ್ಯಾಮಿ ರುಧಿರಂ ಮೃಧೇ॥೧೨॥

ಈ ಸುಂದರಿಯಾದ ಹೆಣ್ಣು ನನ್ನ ಹೆಂಡತಿಯಾಗುತ್ತಾಳೆ. ಪಾಪಿಗಳಾದ ನಿಮ್ಮಿಬ್ಬರನ್ನು ಯುದ್ಧದಲ್ಲಿ ನಿಗ್ರಹಿಸಿ ರಕ್ತ ಕುಡಿಯುತ್ತೇನೆ.

ತಸ್ಯೈವಂ ಬ್ರುವತೋ ಧೃಷ್ಟಂ ವಿರಾಧಸ್ಯ ದುರಾತ್ಮನಃ
ಶ್ರುತ್ವಾ ಸಗರ್ವಿತಂ ವಾಕ್ಯಂ ಸಂಭ್ರಾಂತಾ ಜನಕಾತ್ಮಜಾ ।
ಸೀತಾ ಪ್ರಾವೇಪತೋದ್ವೇಗಾತ್ ಪ್ರವಾತೇ ಕದಲೀ ಯಥಾ ॥೧೩॥

ಹೀಗೆ ಹೇಳುತ್ತಿರುವ ದುರಾತ್ಮ ವಿರಾಧನ ಗರ್ವದ ದಿಟ್ಟತನದ ಮಾತನ್ನು ಕೇಳಿ ಜನಕನಂದಿನೀ ಸೀತೆ ಉದ್ವೇಗದಿಂದ ನಡುಗಿದಳು; ಬಿರುಗಾಳಿಗೆ ನಡುಗುವ ಬಾಳೆಗಿಡದಂತೆ.

ತಾಂ ದೃಷ್ಟ್ವಾ ರಾಘವಃ ಸೀತಾಂ ವಿರಾಧಾಂಕಗತಾಂ ಶುಭಾಮ್ ।
ಅಬ್ರವೀಲ್ಲಕ್ಷ್ಮಣಂ ವಾಕ್ಯಂ ಮುಖೇನ ಪರಿಶುಷ್ಯತಾ ॥೧೪॥

ವಿರಾಧನ ತೊಡೆಯಲ್ಲಿರುವ ಶುಭಳಾದ ಸೀತೆಯನ್ನು ರಾಘವನು ನೋಡಿ ಬಾಡಿದ ಮೊಗದಿಂದ ಲಕ್ಷ್ಮಣನನ್ನು ಕುರಿತು ಮುಂದಿನ ಮಾತನ್ನಾಡಿದನು.

ಪಶ್ಯ ಸೌಮ್ಯ ನರೇಂದ್ರಸ್ಯ ಜನಕಸ್ಯಾತ್ಮಸಂಭವಾನ್ ।
ಮಮ ಭಾರ್ಯಾಂ ಶುಭಾಚಾರಾಂ ವಿರಾಧಾಂಕೇ ಪ್ರವೇಶಿತಾಮ್ ।
ಅತ್ಯಂತಸುಖಸಂವೃದ್ಧಾಂ ರಾಜಪುತ್ರೀಂ ಯಶಸ್ವಿನೀಮ್ ॥೧೫॥

ಸೌಮ್ಯ ಲಕ್ಷ್ಮಣ! ನೋಡು, ಜನಕರಾಜನ ಕುವರಿ, ನನ್ನ ಹೆಂಡತಿ. ಶುಭಾಚಾರಳು, ತುಂಬ ಸುಖವಾಗಿ ಬೆಳೆದವಳು. ಯಶಸ್ವಿನೀ ರಾಜಪುತ್ರಿ ಸೀತೆ ವಿರಾಧನ ವಶಳಾಗಿದ್ದಾಳೆ!

ಯದಭಿಪ್ರೇತಮಸ್ಮಾಸು ಪ್ರಿಯಂ ವರವೃತಂ ಚ ಯತ್ ।
ಕೈಕೇಯ್ಯಾಸ್ತು ಸುಸಂಪನ್ನಂ ಕ್ಷಿಪ್ರಮದ್ಯೈವ ಲಕ್ಷ್ಮಣ ।
ಯಾ ನ ತುಷ್ಯತಿ ರಾಜ್ಯೇನ ಪುತ್ರಾರ್ಥೇ ದೀರ್ಘದರ್ಶಿನೀ ॥೧೬॥

ನಮ್ಮ ವಿಷಯದಲ್ಲಿ ಕೈಕೇಯಿಗೆ ಏನು ಅಭಿಪ್ರೇತವಾಗಿತ್ತೋ ಏನು ಪ್ರಿಯವಾಗಿತ್ತೋ ಏನನ್ನು ವರಕೇಳಿ ಪಡೆದಿದ್ದಳೋ, ಲಕ್ಷ್ಮಣ! ಅದು ಇಂದೇ ಸುಸಂಪನ್ನವಾಯಿತು. ಯಾವ ಕೈಕೇಯಿ ದೂರದೃಷ್ಟಿಯವಳಾಗಿ ಮಗನಿಗಾಗಿ ಕೇವಲ ರಾಜ್ಯ ಪಡೆದು ತೃಪ್ತಿಪಟ್ಟಿರಲಿಲ್ಲ. ಅದು ಇಂದು ನೆರವೇರಿತು.

ಯಯಾಹಂ ಸರ್ವಭೂತಾನಾಂ ಹಿತಃ ಪ್ರಸ್ಥಾಪಿತೋ ವನಮ್ ।
ಅದ್ಯೇದಾನೀಂ ಸಕಾಮಾ ಸಾ ಯಾ ಮಾತಾ ಮಮ ಮಧ್ಯಮಾ॥೧೭॥

ಯಾವ ಕೈಕೇಯಿಯಿಂದ ಎಲ್ಲರಿಗೂ ಹಿತನಾದ ನಾನು ಕಾಡಿಗೆ ಅಟ್ಟಲ್ಪಟಿದ್ದೆನೋ ಆ ಕೈಕೇಯಿ–ನನ್ನ ನಡುವಿನ ತಾಯಿ–ಇಂದು ಆಸೆ ಪೂರೈಸಿ ಕೊಂಡಿರುವಳು.

ಪರಸ್ಪರ್ಶಾತ್ತು ವೈದೇಹ್ಯಾ ನ ದುಃಖತರಮಸ್ತಿ ಮೇ ।
ಪಿತುರ್ವಿಯೋಗಾತ್ ಸೌಮಿತ್ರೇ ಸ್ವರಾಜ್ಯಹರಣಾತ್ತಥಾ ॥೧೮॥

ಸುಮಿತ್ರಾನಂದನನೇ! ವಿದೇಹಕುಮಾರಿಯಾದ ಸೀತೆಯನ್ನು ಪರರು ಸ್ಪರ್ಶ ಮಾಡುವುದಕ್ಕಿಂತಲೂ ಅತ್ಯಂತ ದುಃಖದ ಸಂಗತಿ ನನಗೆ ಬೇರೊಂದಿಲ್ಲ. ತಂದೆಯನ್ನು ಕಳೆದುಕೊಂಡಾಗಲು, ರಾಜ್ಯವನ್ನು ಕಳೆದುಕೊಂಡಾಗಲೂ ನನಗೆ ಇಷ್ಟು ದುಃಖವಾಗಿರಲಿಲ್ಲ.

ಇತಿ ಬ್ರುವತಿ ಕಾಕುತ್ಸ್ಥೇ ಬಾಷ್ಪಶೋಕಪರಿಪ್ಲುತೇ ।
ಅಬ್ರವೀಲ್ಲಕ್ಷ್ಮಣಃ ಕ್ರುದ್ಧೋ ರುದ್ಧೋ ನಾಗ ಇವ ಶ್ವಸನ್ ॥೧೯॥

ಶೋಕದಿಂದ ಕಂಬನಿಗರೆಯುತ್ತ ಶ್ರೀರಾಮನು ಹೀಗೆ ಹೇಳುತ್ತಿರಲು ಲಕ್ಷ್ಮಣನು ಮಂತ್ರರುದ್ಧವಾದ ಬುಸುಗುಟ್ಟುವ ಸರ್ಪದಂತೆ ಕುಪಿತನಾಗಿ ಹೀಗೆ ಹೇಳಿದನು.

ಅನಾಥ ಇವ ಭೂತಾನಾಂ ನಾಥಸ್ತ್ವಂ ವಾಸವೋಪಮಃ ।
ಮಯಾ ಪ್ರೇಷ್ಯೇಣ ಕಾಕುತ್ಸ್ಥ ಕಿಮರ್ಥಂ ಪರಿತಪ್ಯಸೇ ॥೨೦॥

ಕಾಕುತ್ಸ! ಎಲ್ಲ ಪ್ರಾಣಿಗಳಿಗೆ ಇಂದ್ರನಂತೆ ಒಡೆಯನಾದ ನೀನು ಭೃತ್ಯನಾಗಿ ನಾನಿರುವಾಗ ಅನಾಥನಂತೆ ಏಕೆ ಪರಿತಪಿಸುವೆ?

ಶರೇಣ ನಿಹತಸ್ಯಾದ್ಯ ಮಯಾ ಕ್ರುದ್ಧೇನ ರಕ್ಷಸಃ ।
ವಿರಾಧಸ್ಯ ಗತಾಸೋರ್ಹಿ ಮಹೀ ಪಾಸ್ಯತಿ ಶೋಣಿತಮ್ ॥೨೧॥

ಕ್ರುದ್ಧನಾದ ನನ್ನಿಂದ ಬಾಣದಿಂದ ಹತನಾಗುವ ರಕ್ಕಸ ವಿರಾಧನ ರಕ್ತವನ್ನು ಭೂಮಿ ಕುಡಿಯಲಿದೆಯಲ್ಲವೆ?

ರಾಜ್ಯಕಾಮೇ ಮಮ ಕ್ರೋಧೋ ಭರತೇ ಯೋ ಬಭೂವ ಹ ।
ತಂ ವಿರಾಧೇ ಪ್ರಮೋಕ್ಷ್ಯಾಮಿ ವಜ್ರೀ ವಜ್ರಮಿವಾಚಲೇ ॥೨೨॥

ರಾಜ್ಯವನ್ನು ಬಯಸಿದ ಭರತನ ಮೇಲಿರುವ ಕ್ರೋಧವನ್ನು ವಿರಾಧನ ಮೇಲೆ ಪ್ರಯೋಗಿಸುತ್ತೇನೆ. ಇಂದ್ರ ಪರ್ವತದ ಮೇಲೆ ವಜ್ರವನ್ನು ಬಿಟ್ಟಂತೆ!

ಮಮ ಭುಜಬಲವೇಗವೇಗಿತಃ
ಪತತು ಶರೋಽಸ್ಯ ಮಹಾನ್ ಮಹೋರಸಿ ।
ವ್ಯಪನಯತು ತನೋಶ್ಚ ಜೀವಿತಂ
ಪತತು ತತಃ ಸ ಮಹೀಂ ವಿಘೂರ್ಣಿತಃ ॥೨೩॥

ನನ್ನ ಹೆದೆ ಎಳೆಯುವ ಭಜಬಲದ ವೇಗದಿಂದ ವೇಗ ಪಡೆವ ಮಹಾಬಾಣ ವಿರಾಧನ ವಿಶಾಲ ಎದೆಯಲ್ಲಿ ಬೀಳಲಿ. ಅವನ ದೇಹದಿಂದ ಪ್ರಾಣವನ್ನು ಹೊರಸೆಳೆಯಲಿ. ಬಳಿಕ ಗರಗರ ತಿರುಗುತ್ತ ಅವನು ನೆಲದ ಮೇಲೆ ಉರುಳಲಿ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎರಡನೇ ಸರ್ಗ ಮುಗಿಯಿತು.

❖

ತೃತೀಯಃ ಸರ್ಗಃ

ವಿರಾಧಪ್ರಹಾರಃ

ಅಥೋವಾಚ ಪುನರ್ವಾಕ್ಯಂ ವಿರಾಧಃ ಪೂರಯನ್ ವನಮ್ ।
ಆತ್ಮಾನಂ ಪೃಚ್ಛತೇ ಬ್ರೂತಂ ಕೌ ಯುವಾಂ ಕ್ವ ಗಮಿಷ್ಯಥಃ ॥೧॥

ಅನಂತರ ಮತ್ತೆ ವಿರಾಧ ವನವೆಲ್ಲ ತುಂಬುವಂತೆ ಗರ್ಜನೆ ಮಾಡುತ್ತ ಹೇಳಿದ. 'ಯಾರು ನೀವು? ಎಲ್ಲಿಗೆ ಹೊರಟಿರುವಿರಿ' ಹೇಳಿ. ಕೇಳುತ್ತಿದ್ದೇನೆ.

ತಮುವಾಚ ತತೋ ರಾಮೋ ರಾಕ್ಷಸಂ ಜ್ವಲಿತಾನನಮ್ ।
ಪೃಚ್ಛಂತಂ ಸುಮಹಾತೇಜಾ ಇಕ್ಷ್ವಾಕುಕುಲಮಾತ್ಮನಃ ॥೨॥

ಮಹಾತೇಜಸ್ವಿಯಾದ ಶ್ರೀರಾಮನು ತನ್ನ ಪರಿಚಯವನ್ನು ಕೇಳುತ್ತಿರುವ ಉರಿಮೊಗದ ರಾಕ್ಷಸನಿಗೆ ಹೇಳಿದನು–ನಮ್ಮದು ಇಕ್ಷ್ವಾಕುವಂಶ.

ಕ್ಷತ್ರಿಯೌ ವೃತ್ತಸಂಪನ್ನೌ ವಿದ್ಧಿ ನೌ ವನಗೋಚರೌ ।
ತ್ವಾಂ ತು ವೇದಿತುಮಿಚ್ಛಾವಃ ಕಸ್ತ್ವಂ ಚರಸಿ ದಂಡಕಾನ್ ॥೩॥

ಕಾಡಿನಲ್ಲಿ ಅಲೆಯುವ ಸನ್ನಡತೆಯ ಕ್ಷತ್ರಿಯರು ನಾವು ಎಂದು ತಿಳಿ. ನಿನ್ನನ್ನು ತಿಳಿಯಲು ಬಯಸುತ್ತಿದ್ದೇವೆ. ದಂಡಕ ವನದಲ್ಲಿ ಸಂಚರಿಸುವ ನೀನು ಯಾರು?

ತಮುವಾಚ ವಿರಾಧಸ್ತು ರಾಮಂ ಸತ್ಯಪರಾಕ್ರಮಮ್ ।
ಹಂತ ವಕ್ಷ್ಯಾಮಿ ತೇ ರಾಜನ್ನಿಬೋಧ ಮಮ ರಾಘವ ॥೪॥

ಸತ್ಯಪರಾಕ್ರಮಿ ಶ್ರೀರಾಮನನ್ನು ಕುರಿತು ವಿರಾಧನು ಹೇಳಿದನು— ಸಂತೋಷ! ರಾಜ ರಾಘವ! ಹೇಳುತ್ತೇನೆ ಕೇಳು.

ಪುತ್ರಃ ಕಿಲ ಜಯಸ್ಯಾಹಂ ಮಮ ಮಾತಾ ಶತಹ್ರದಾ ।
ವಿರಾಧ ಇತಿ ಮಾಮಾಹುಃ ಪೃಥಿವ್ಯಾಂ ಸರ್ವರಾಕ್ಷಸಾಃ ॥೫॥

ನಾನು 'ಜಯ'ನ ಪುತ್ರ . ನನ್ನ ತಾಯಿ ಶತಹ್ರದಾ. ಪೃಥಿವಿಯಲ್ಲಿ ಎಲ್ಲ ರಕ್ಕಸರೂ ನನ್ನನ್ನು 'ವಿರಾಧ' ಎಂದು ಹೇಳುವರು.

ತಪಸಾ ಚಾಪಿ ಮೇ ಪ್ರಾಪ್ತಾ ಬ್ರಹ್ಮಣೋ ಹಿ ಪ್ರಸಾದಜಾ ।
ಶಸ್ತ್ರೇಣಾವಧ್ಯತಾ ಲೋಕೇಽಚ್ಛೇದ್ಯಾಭೇದ್ಯತ್ವಮೇವ ಚ ॥೬॥

ತಪಸಿನಿಂದ ಒಲಿದ ಬ್ರಹ್ಮದೇವರಿಂದ ಶಸ್ತ್ರದಿಂದ ಅವಧ್ಯತ್ವ, ಅಚ್ಛೇದ್ಯತ್ವ ಮತ್ತು ಅಭೇದ್ಯತ್ವಗಳೂ ನನ್ನಿಂದ ಹೊಂದೋಣವಾಗಿದೆ.

ಉತ್ಸೃಜ್ಯ ಪ್ರಮದಾಮೇನಾಮನಪೇಕ್ಷೌ ಯಥಾಗತಮ್ ।
ತ್ವರಮಾಣೌ ಪಲಾಯೇಥಾಂ ನ ವಾಂ ಜೀವಿತಮಾದದೇ ॥೭॥

ಈ ಹೆಣ್ಣಿನ ಆಸೆ ಬಿಟ್ಟು ಇವಳನ್ನು ಇಲ್ಲೆ ಇಟ್ಟು ಕೂಡಲೆ ಓಡಿಹೋಗಿರಿ. ನಿಮ್ಮ ಜೀವನವನ್ನು ಕಸಿಯುವುದಿಲ್ಲ.

ತಂ ರಾಮಃ ಪ್ರತ್ಯುವಾಚೇದಂ ಕೋಪಸಂರಕ್ತಲೋಚನಃ ।
ರಾಕ್ಷಸಂ ವಿಕೃತಾಕಾರಂ ವಿರಾಧಂ ಪಾಪಚೇತಸಮ್ ॥೮॥

ಕೋಪದ ಕೆಂಗಣ್ಣಿನ ಶ್ರೀರಾಮ ವಿಕೃತಾಕಾರದ ಪಾಪದ ಆಲೋಚನೆಯ ರಕ್ಕಸ ವಿರಾಧನನ್ನು ಕುರಿತು ಇಂತೆಂದನು.

ಕ್ಷುದ್ರ ಧಿಕ್ ತ್ವಾಂ ತು ಹೀನಾರ್ಥಂ ಮೃತ್ಯುಮನ್ವೇಷಸೇ ಧ್ರುವಮ್ ।
ರಣೇ ಸಂಪ್ರಾಪ್ಸ್ಯಸೇ ತಿಷ್ಠ ನ ಮೇ ಜೀವನ್ ಗಮಿಷ್ಯಸಿ ॥೯॥

ನೀಚನೆ! ಕೆಟ್ಟ ಆಶಯದ ನಿನಗೆ ಧಿಕ್ಕಾರ! ನಿಶ್ಚಯವಾಗಿಯೂ ಮೃತ್ಯುವಿನ ಹುಡುಕಾಟದಲ್ಲಿರುವಿ. ಯುದ್ಧದಲ್ಲಿ ಮೃತ್ಯು ಭೇಟಿಯಾಗುತ್ತದೆ. ನಿಲ್ಲು! ನನ್ನಿಂದ ಜೀವಸಹಿತ ಹಿಂತಿರುಗಲಾರೆ!

ತತಃ ಸಜ್ಯಂ ಧನುಃ ಕೃತ್ವಾ ರಾಮಃ ಸುನಿಶಿತಾನ್ ಶರಾನ್ ।
ಸುಶೀಘ್ರಮಭಿಸಂಧಾಯ ರಾಕ್ಷಸಂ ನಿಜಘಾನ ಹ ॥೧೦॥

ಬಳಿಕ ಶ್ರೀರಾಮ ಕೂಡಲೆ ಬಿಲ್ಲಿಗೆ ಹೆದೆಯೇರಿಸಿ ಹರಿತವಾದ ಬಾಣಗಳನ್ನು ಬೇಗನೆ ಸಂಧಾನಗೊಳಿಸಿ ರಾಕ್ಷಸನನ್ನು ಕೊಲ್ಲ ತೊಡಗಿದನು.

ಧನುಷಾ ಜ್ಯಾಗುಣವತಾ ಸಪ್ತ ಬಾಣಾನ್ ಮುಮೋಚ ಹ ।
ರುಗ್ಮಪುಂಖಾನ್ ಮಹಾವೇಗಾನ್ ಸುಪರ್ಣಾನಿಲತುಲ್ಯಗಾನ್ ॥೧೧॥

ಹೆದೆಯೇರಿಸಿದ ಬಿಲ್ಲಿನಿಂದ ಬಂಗಾರದ ಪುಕ್ಕವಿರುವ ಗರುಡ ವಾಯುಗಳಂತೆ ವೇಗಶಾಲಿಗಳಾದ ಏಳು ಬಾಣಗಳನ್ನು ಬಿಟ್ಟನು.

ತೇ ಶರೀರಂ ವಿರಾಧಸ್ಯ ಭಿತ್ತ್ವಾ ಬರ್ಹಿಣವಾಸಸಃ ।
ನಿಪೇತುಃ ಶೋಣಿತಾದಿಗ್ಧಾ ಧರಣ್ಯಾಂ ಪಾವಕೋಪಮಾಃ ॥೧೨॥

ನವಿಲುಗರಿ ಜೋಡಿಸಿದ್ದ ಪ್ರಜ್ವಲಿಸಿದ ಅಗ್ನಿಯಂಥ ಆ ಬಾಣಗಳು ವಿರಾಧನನ್ನು ಭೇದಿಸಿ ರಕ್ತಸಿಕ್ತವಾಗಿ ನೆಲದಲ್ಲಿ ಬಿದ್ದವು.

ಸ ವಿದ್ಧೋ ನ್ಯಸ್ಯ ವೈದೇಹೀಂ ಶೂಲಮುದ್ಯಮ್ಯ ರಾಕ್ಷಸಃ ।
ಅಭ್ಯದ್ರವತ್ ಸುಸಂಕ್ರುದ್ಧಸ್ತದಾ ರಾಮಂ ಸಲಕ್ಷ್ಮಣಮ್ ॥೧೩॥

ಬಾಣ ತಾಡಿತನಾದ ಆ ವಿರಾಧ ತುಂಬ ಕೋಪಗೊಂಡು ಸೀತೆಯನ್ನು ಕೆಳಗಿಟ್ಟು ಶೂಲವೆತ್ತಿ ಲಕ್ಷ್ಮಣ ಸಹಿತ ಶ್ರೀರಾಮನ ಬಳಿಗೆ ಮುನ್ನುಗ್ಗಿದನು.

ಸ ವಿನದ್ಯ ಮಹಾನಾದಂ ಶೂಲಂ ಶಕ್ರಧ್ವಜೋಪಮಮ್ ।
ಪ್ರಗೃಹ್ಯಾಶೋಭತ ತದಾ ವ್ಯಾತ್ತಾನನ ಇವಾಂತಕಃ ॥೧೪॥

ಆಗ ಇಂದ್ರಧ್ವಜದಂತೆ ಎತ್ತರವಾದ ಶೂಲವನ್ನು ಎತ್ತಿ ಹಿಡಿದು ಸಿಂಹನಾದ ಮಾಡುತ್ತಿದ್ದಾಗ ಬಾಯ್ತೆರೆದು ಬಂದ ಹಂತಕನಂತೆ ಶೋಭಿಸಿದ.

ಅಥ ತೌ ಭ್ರಾತರೌ ದೀಪ್ತಂ ಶರವರ್ಷಂ ವವರ್ಷತುಃ ।
ವಿರಾಧೇ ರಾಕ್ಷಸೇ ತಸ್ಮಿನ್ ಕಾಲಾಂತಕಯಮೋಪಮೇ ॥೧೫॥

ಬಳಿಕ ಸಹೋದರರಾದ ರಾಮಲಕ್ಷ್ಮಣರು ಕಾಲಾಂತಕ ಯಮನಂತಿದ್ದ ಆ ರಕ್ಕಸನಲ್ಲಿ ಬೆಳಗುವ ಬಾಣವೃಷ್ಟಿಯನ್ನೆ ಸುರಿಸಿದರು.

ಸ ಪ್ರಹಸ್ಯ ಮಹಾರೌದ್ರಃ ಸ್ಥಿತ್ವಾऽಜೃಂಭತ ರಾಕ್ಷಸಃ ।
ಜೃಂಭಮಾಣಸ್ಯ ತೇ ಬಾಣಾಃ ಕಾಯಾನ್ನಿಷ್ಪೇತುರಾಶುಗಾಃ ॥೧೬॥

ಮಹಾಭಯಂಕರನಾದ ಆ ರಾಕ್ಷಸ ಜೋರಾಗಿ ನಕ್ಕು ಮೈ ಮುರಿಯುತ್ತಾ ಆಕಳಿಸಿದ! ಶೀಘ್ರಗಾಮಿಗಳಾದ ಆ ಬಾಣಗಳು ಅವನ ದೇಹದಿಂದ ಉದುರಿ ಬಿದ್ದವು!

ಸ್ಪರ್ಶಾತ್ತು ವರದಾನೇನ ಪ್ರಾಣಾನ್ ಸಂರುಧ್ಯ ರಾಕ್ಷಸಃ ।
ವಿರಾಧಃ ಶೂಲಮುದ್ಯಮ್ಯ ರಾಘವಾವಭ್ಯಧಾವತ ॥೧೭॥

ವರಬಲದಿಂದ ರಾಮಬಾಣ ಸ್ಪರ್ಶವಾದರೂ ಪ್ರಾಣವನ್ನು ಉಳಿಸಿಕೊಂಡು ವಿರಾಧನು ಶೂಲವನ್ನೆತ್ತಿಕೊಂಡು ರಘುವಂಶದ ಕುಮಾರರ ಮೇಲೆ ಎರಗಿ ಬಂದನು.

ತಚ್ಛೂಲಂ ವಜ್ರಸಂಕಾಶಂ ಗಗನೇ ಜ್ವಲನೋಪಮಮ್ ।
ದ್ವಾಭ್ಯಾಂ ಚಿಚ್ಛೇದ ಬಾಣಾಭ್ಯಾಂ ರಾಮಃ ಶಸ್ತ್ರಭೃತಾಂ ವರಃ ॥೧೮॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಶ್ರೀರಾಮನು ವಜ್ರಾಯುಧದಂತೆ ತೀಕ್ಷ್ಣವಾದ ಗಗನದಲ್ಲಿ ಬೆಂಕಿಯಂತೆ ಬೆಳಗುತ್ತಿದ್ದ ಆ ಶೂಲವನ್ನು ಎರಡು ಬಾಣಗಳಿಂದ ತುಂಡರಿಸಿದನು.

ತದ್ರಾಮವಿಶಿಖಚ್ಛಿನ್ನಂ ಶೂಲಂ ತಸ್ಯ ಕರಾದ್ಭುವಿ ।
ಪಪಾತಾಶನಿನಾ ಭಿನ್ನಂ ಮೇರೋರಿವ ಶಿಲಾತಲಮ್ ॥೧೯॥

ರಾಮಬಾಣದಿಂದ ತುಂಡಾದ ಆ ಶೂಲವು ರಕ್ಕಸನ ಕೈಯಿಂದ ನೆಲಕ್ಕುರು-ಳಿತು–ವಜ್ರಾಯುಧದಿಂದ ಭಿನ್ನವಾದ ಮೇರುವಿನ ಬಂಡೆಯಂತೆ.

ತೌ ಖಡ್ಗೌ ಕ್ಷಿಪ್ರಮುದ್ಯಮ್ಯ ಕೃಷ್ಣಸರ್ಪೋಪಮೌ ಶುಭೌ ।
ತೂರ್ಣಮಾಪತತಸ್ತಸ್ಯ ತದಾ ಪ್ರಾಹರತಾಂ ಬಲಾತ್ ॥೨೦॥

ಕೂಡಲೆ ಆ ರಾಮಲಕ್ಷ್ಮಣರು ಕೃಷ್ಣಸರ್ಪದಂತಿದ್ದ ಎರಡು ಖಡ್ಗಗಳನ್ನು ಎತ್ತಿ ರಕ್ಕಸನ ಮೇಲೆರಗಿ ಪ್ರಬಲವಾಗಿ ಹೊಡೆಯ ಹತ್ತಿದರು.

ಸ ವಧ್ಯಮಾನಃ ಸುಭೃಶಂ ಬಾಹುಭ್ಯಾಂ ಪರಿರಭ್ಯ ತೌ ।
ಅಪ್ರಕಂಪ್ಯೌ ನರವ್ಯಾಘ್ರೌ ರೌದ್ರಃ ಪ್ರಸ್ಥಾತುಮೈಚ್ಛತ ॥೨೧॥

ಕತ್ತಿಗಳ ಪೆಟ್ಟಿನಿಂದ ಘಾಸಿಗೊಂಡ ರೌದ್ರ ರಕ್ಕಸನು ರಾಮಲಕ್ಷ್ಮಣರನ್ನು ತೋಳುಗಳಿಂದ ಎತ್ತಿಕೊಂಡು ಹೊರಡಲು ಬಯಸಿದ.

ತಸ್ಯಾಭಿಪ್ರಾಯಮಾಜ್ಞಾಯ ರಾಮೋ ಲಕ್ಷ್ಮಣಮಬ್ರವೀತ್ ।
ವಹತ್ವಯಮಲಂ ತಾವತ್ ಪಥಾಽನೇನ ತು ರಾಕ್ಷಸಃ ॥೨೨॥

ಯಥಾ ಚೇಚ್ಛತಿ ಸೌಮಿತ್ರೇ ತಥಾ ವಹತು ರಾಕ್ಷಸಃ ।
ಅಯಮೇವ ಹಿ ನಃ ಪಂಥಾ ಯೇನ ಯಾತಿ ನಿಶಾಚರಃ ॥೨೩॥

ರಕ್ಕಸನ ಅಭಿಪ್ರಾಯವನ್ನು ಅರಿತ ಶ್ರೀರಾಮ ಲಕ್ಷ್ಮಣನಿಗೆ ಹೇಳಿದನು—ಇವನು ನಮ್ಮನ್ನು ಹೊತ್ತು ಈ ಮಾರ್ಗದಿಂದ ಪಯಣಿಸಲಿ. ಸೌಮಿತ್ರಿ! ರಕ್ಕಸನು ತನ್ನಿಚ್ಛೆಯಂತೆ ಹೊತ್ತು ಸಾಗಲಿ. ಅದೇ ನಮಗೆ ಇಲ್ಲಿಂದ ಮುಂದೆ ಸಾಗುವ ಹಾದಿಯಾಗುತ್ತದೆ!

ಸ ತು ಸ್ವಬಲವೀರ್ಯೇಣ ಸಮುತ್ಕ್ಷಿಪ್ಯ ನಿಶಾಚರಃ ।
ಬಾಲಾವಿವ ಸ್ಕಂಧಗತೌ ಚಕಾರಾತಿಬಲೋದ್ಧತಃ ॥೨೪॥

ಆ ನಿಶಾಚರನಾದರೋ ತನ್ನ ಬಲದ ಪ್ರಭಾವದಿಂದ ಅತಿ ಬಲಿಷ್ಠರಾದ ರಾಮ-ಲಕ್ಷ್ಮಣರನ್ನು ಮಕ್ಕಳನ್ನೆಂಬಂತೆ ಎತ್ತಿ ಹೆಗಲಲ್ಲಿರಿಸಿಕೊಂಡನು.

ತಾವಾರೋಪ್ಯ ತತಃ ಸ್ಕಂಧಂ ರಾಘವೌ ರಜನೀಚರಃ ।
ವಿರಾಧೋ ನಿನದನ್ ಘೋರಂ ಜಗಾಮಾಭಿಮುಖೋ ವನಮ್ ॥೨೫

ರಜನೀಚರ ವಿರಾಧನು ಅವರೀರ್ವರನ್ನು ಹೆಗಲಲ್ಲಿರಿಸಿಕೊಂಡು ಘೋರವಾಗಿ ಸದ್ದು ಮಾಡುತ್ತ ಕಾಡಿಗೆ ಸಮ್ಮುಖನಾಗಿ ಹೊರಟ.

ವನಂ ಮಹಾಮೇಘನಿಭಂ ಪ್ರವಿಷ್ಟೋ
ದ್ರುಮೈರ್ಮಹದ್ಭಿರ್ವಿವಿಧೈರುಪೇತಮ್ ।
ನಾನಾವಿಧೈಃ ಪಕ್ಷಿಶತೈರ್ವಿಚಿತ್ರಂ
ಶಿವಾಯುತಂ ವ್ಯಾಲಮೃಗೈರ್ವಿಕೀರ್ಣಮ್ ॥೨೬॥

ವಿವಿಧ ಹೆಮ್ಮರಗಳಿಂದ ಕೂಡಿದ, ನಾನಾಬಗೆಯ ನೂರಾರು ಪಕ್ಷಿಗಳಿಂದ ತುಂಬಾ ವಿಚಿತ್ರವಾದ, ನರಿಗಳು, ಕ್ರೂರಮೃಗಗಳಿಂದ ಆವೃತವಾದ ಮಹಾಮೇಘ-ದಂತೆ ದಟ್ಟವಾದ ಕಾಡನ್ನು ವಿರಾಧನು ಹೊಕ್ಕನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂರನೇ ಸರ್ಗ ಮುಗಿಯಿತು.

❖

ಚತುರ್ಥಃ ಸರ್ಗಃ

ಕಥಾಸಾರಾಂಶ– ವಿರಾಧ ರಾಕ್ಷಸನು ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋದನು. ಅದನ್ನು ಕಂಡು ಸೀತೆ, ಈ ಕ್ರೂರರಕ್ಕಸ ರಾಮ ಲಕ್ಷ್ಮಣರನ್ನು ಎತ್ತಿಕೊಂಡು ಹೋಗುತ್ತಿದ್ದಾನಲ್ಲ! 'ರಾಕ್ಷಸನೆ! ನಿನಗೆ ಕೈ ಮುಗಿಯುತ್ತೇನೆ. ನನ್ನನ್ನು ಕಾಡಿನ ಕರಡಿ ಹುಲಿ ಚಿರತೆಗಳು ತಿಂದುಬಿಡುತ್ತವೆ! ನನ್ನನ್ನು ಎತ್ತಿಕೊಂಡು ಹೋಗು. ಆ ರಾಮಲಕ್ಷ್ಮಣರನ್ನು ಬಿಟ್ಟುಬಿಡು'' ಎಂದು ಕೂಗಿ ಹೇಳಿದಳು.

ಸೀತೆಯ ಆತಂಕವನ್ನು ಕಂಡ ರಾಮಲಕ್ಷ್ಮಣರು ವಿರಾಧನ ತೋಳುಗಳನ್ನು ಕತ್ತರಿಸಿ ಅವನನ್ನು ಸಂಹರಿಸುವ ಅವಸರ ತೋರಿದರು. ಅವನನ್ನು ಯಾವ ರೀತಿಯಿಂದಲೂ ಕೊಲ್ಲಲಾಗದಿದ್ದಾಗ ವರದಿಂದ ಅವಧ್ಯನಾಗಿದ್ದ ಅವನನ್ನು ಹಳ್ಳ ತೋಡಿ ಅದರಲ್ಲಿ ಹಾಕಿ ಕಲ್ಲುಗಳನ್ನು ಹಾಕಿ ಮುಚ್ಚಲು ಶ್ರೀರಾಮ ಹೇಳಿದನು. ಅದನ್ನು ಕೇಳಿದಾಗ ವಿರಾಧರಾಕ್ಷಸನು ಹೇಳಿದನು– 'ನಾನು ತುಂಬುರು ಎಂಬ ಗಂಧರ್ವ. ರಂಭಾಸಕ್ತಿಯಿಂದ ಸಕಾಲದಲ್ಲಿ ಕುಬೇರನ ಮುಂದೆ ಉಪಸ್ಥಿತನಾಗದೆ ಇದ್ದದ್ದರಿಂದಾಗಿ ಅವನಿಂದ ರಾಕ್ಷಸನಾಗೆಂದು ಶಸ್ತನಾದೆ. ನೀವು ನನ್ನನ್ನು ಹೊಂಡದಲ್ಲಿ ಹಾಕಿ ಮುಚ್ಚಿರಿ. ನಾನು ಶರೀರ ಬಿಟ್ಟು ಉತ್ತಮಲೋಕವನ್ನು ಸೇರುತ್ತೇನೆ. ಒಂದುವರೆ ದೋಜನದ ಮುಂದೆ ಶರಭಂಗಮುನಿಗಳ ಆಶ್ರಮವಿದೆ. ಅಲ್ಲಿಗೆ ಹೋಗಿ ಎಂದು ತಿಳಿಸಿದನು. ಶ್ರೀರಾಮಲಕ್ಷ್ಮಣರು ಅದೇ ರೀತಿ ವಿರಾಧ–ನನ್ನು ಸಂಹರಿಸಿದರು. ಗಂಧರ್ವ ರಾಕ್ಷಸಜನ್ಮದಿಂದ ಬಿಡುಗಡೆಗೊಂಡ.

ವಿರಾಧನಿಖನನಮ್

ಹ್ರಿಯಮಾಣೌ ತು ತೌ ದೃಷ್ಟ್ವಾ ವೈದೇಹೀ ರಾಮಲಕ್ಷ್ಮಣೌ ।
ಉಚ್ಚೈಃಸ್ವರೇಣ ಚುಕ್ರೋಶ ಪ್ರಗೃಹ್ಯ ಸುಭುಜಾ ಭುಜೌ ॥೧॥

ರಘುವಂಶದ ವೀರಪುರುಷರಾದ ರಾಮಲಕ್ಷ್ಮಣರನ್ನು ವಿರಾಧನು ಎತ್ತಿಕೊಂಡು ಹೋದದ್ದನ್ನು ಕಂಡು ಸುಂದರ ತೋಳಿನ ಸೀತೆ ಎರಡು ಕೈಗಳನ್ನು ಎತ್ತಿ ಗಟ್ಟಿಯಾದ ಸ್ವರದಿಂದ ಕೂಗಿಕೊಂಡಳು.

ಏಷ ದಾಶರಥೀ ರಾಮಃ ಸತ್ಯವಾನ್ ಶೀಲವಾನ್ ಶುಚಿಃ ।
ರಕ್ಷಸಾ ರೌದ್ರರೂಪೇಣ ಹ್ರಿಯತೇ ಸಹಲಕ್ಷ್ಮಣಃ ॥೨॥

ಸತ್ಯವಂತನು, ಶೀಲವಂತನು, ಶುಚಿಯೂ ಆದ ದಶರಥತನಯನಾದ ಶ್ರೀರಾಮನು ತಮ್ಮ ಲಕ್ಷ್ಮಣನೊಂದಿಗೆ ಭಯಂಕರ ರೂಪದ ರಕ್ಕಸನಿಂದ ಅಪಹರಿಸಲ್ಪಡುತ್ತಿದ್ದಾನೆ!

ಮಾಂ ವೃಕಾ ಭಕ್ಷಯಿಷ್ಯಂತಿ ಶಾರ್ದೂಲಾ ದ್ವೀಪಿನಸ್ತಥಾ ।
ಮಾಂ ಹರೋತ್ಸೃಜ್ಯ ಕಾಕುತ್ಸ್ಥೌ ನಮಸ್ತೇ ರಾಕ್ಷಸೋತ್ತಮ ॥೩॥

ರಾಕ್ಷಸೋತ್ತಮ! ನಿನಗೆ ನಮಸ್ಕಾರ. ತೋಳಗಳು, ಹುಲಿಗಳು, ಚಿರತೆಗಳು ನನ್ನನ್ನು ತಿನ್ನುತ್ತವೆ. ಕಕುತ್ಸ್ಥವಂಶದವರಾದ ರಾಮಲಕ್ಷ್ಮಣರನ್ನು ಬಿಟ್ಟು ನನ್ನನ್ನು ಕೊಂಡೊಯ್ಯು .

ತಸ್ಯಾಸ್ತದ್ವಚನಂ ಶ್ರುತ್ವಾ ವೈದೇಹ್ಯಾ ರಾಮಲಕ್ಷ್ಮಣೌ ।
ವೇಗಂ ಪ್ರಚಕ್ರತುರ್ವೀರೌ ವಧೇ ತಸ್ಯ ದುರಾತ್ಮನಃ ॥೪॥

ವೈದೇಹಿಯ ಆ ಮಾತನ್ನು ಕೇಳಿ ವೀರರಾದ ರಾಮಲಕ್ಷ್ಮಣರು ಆ ದುರಾತ್ಮನ ಸಂಹಾರದಲ್ಲಿ ಅವಸರದಿಂದ ತೊಡಗಿದರು.

ತಸ್ಯ ರೌದ್ರಸ್ಯ ಸೌಮಿತ್ರಿರ್ಬಾಹುಂ ಸವ್ಯಂ ಬಭಂಜ ಹ ।
ರಾಮಸ್ತು ದಕ್ಷಿಣಂ ಬಾಹುಂ ತರಸಾ ತಸ್ಯ ರಾಕ್ಷಸಃ ॥೫॥

ಆ ಭಯಂಕರ ರಕ್ಕಸನ ಎಡತೋಳನ್ನು ಸೌಮಿತ್ರಿಯು ಕತ್ತರಿಸಿದನು. ಬಲತೋಳನ್ನು ಶ್ರೀರಾಮನು ಕೂಡಲೆ ತುಂಡರಿಸಿದನು.

ಸ ಭಗ್ನಬಾಹುಃ ಸಂವಿಗ್ನೋ ನಿಪಪಾತಾಶು ರಾಕ್ಷಸಃ ।
ಧರಣ್ಯಾಂ ಮೇಘಸಂಕಾಶೋ ವಜ್ರಭಿನ್ನ ಇವಾಚಲಃ ॥೬॥

ತುಂಡಾದ ತೋಳಿನ ದೊಡ್ಡ ಮೋಡದಂತಿದ್ದ ಆ ರಾಕ್ಷಸ ಉದ್ವೇಗಗೊಂಡು ನೆಲಕ್ಕೆ ಬಿದ್ದ! ವಜ್ರಾಯುಧದಿಂದ ತುಂಡಾದ ಬೆಟ್ಟದಂತೆ.

ಮುಷ್ಟಿಭಿರ್ಜಾನುಭಿಃ ಪದ್ಭಿಃ ಸೂದಯಂತೌ ತು ರಾಕ್ಷಸಮ್।
ಉದ್ಯಮ್ಯೋದ್ಯಮ್ಯ ಚಾಪ್ಯೇನಂ ಸ್ಥಂಡಿಲೇ ನಿಷ್ಪಿಪೇಷತುಃ ॥೭॥

ಮುಷ್ಟಿಗಳಿಂದ, ಮಂಡಿಗಳಿಂದ, ಪಾದಗಳಿಂದ ಹೊಡೆಯುವವರಾಗಿ ರಾಮ-ಲಕ್ಷ್ಮಣರು ಆ ರಾಕ್ಷಸನನ್ನು ಎತ್ತಿ ಎತ್ತಿ ನೆಲದಲ್ಲಿ ಹಾಕಿ ಹೊಸಕಿದರು.

ಸ ವಿದ್ಧೋ ಬಹುಭಿರ್ಬಾಣೈಃ ಖಡ್ಗಾಭ್ಯಾಂ ಚ ಪರಿಕ್ಷತಃ ।
ನಿಷ್ಪಿಷ್ಟೋ ಬಹುಧಾ ಭೂಮೌ ನ ಮಮಾರ ಸ ರಾಕ್ಷಸಃ ॥೮॥

ಅನೇಕ ಬಾಣಗಳಿಂದ, ಖಡ್ಗಗಳಿಂದ ಪೀಡಿತನಾದರೂ ಬಹಳವಾಗಿ ಪುಡಿಗುಟ್ಟಿದರೂ ಆ ರಕ್ಕಸ ಸಾಯಲೇ ಇಲ್ಲ!

ತಂ ಪ್ರೇಕ್ಷ್ಯ ರಾಮಃ ಸುಭೃಶಮವಧ್ಯಮಚಲೋಪಮಮ್ ।
ಭಯೇಷ್ವಭಯದಃ ಶ್ರೀಮಾನಿದಂ ವಚನಮಬ್ರವೀತ್ ॥೯॥

ಏನೇ ಮಾಡಿದರೂ ಸಾಯದೇ ಇರುವ ಬೆಟ್ಟದಂತೆ ಗಟ್ಟಿಯಾದ ಆ ಅಸುರನನ್ನು ಗಮನಿಸಿ ಭಯದ ಸಂದರ್ಭಗಳಲ್ಲಿ ಅಭಯಪ್ರದನಾದ ಶ್ರೀಮನ್ ಶ್ರೀರಾಮನು ಹೀಗೆಂದನು.

ತಪಸಾ ಪುರುಷವ್ಯಾಘ್ರ ರಾಕ್ಷಸೋಽಯಂ ನ ಶಕ್ಯತೇ ।
ಶಸ್ತ್ರೇಣ ಯುಧಿ ನಿರ್ಜೇತುಂ ರಾಕ್ಷಸಂ ನಿಖಿನಾವಹೇ ॥೧೦॥

ತಪಸಿನಿಂದ ಅವಶ್ಯನಾದ ಈ ರಕ್ಕಸನನ್ನು ಯುದ್ಧ ಮಾಡಿ ಶಸ್ತ್ರದಿಂದ ಕೊಲ್ಲಲು ಸಾಧ್ಯವಿಲ್ಲ. ಪುರುಷಶ್ರೇಷ್ಠ ಲಕ್ಷ್ಮಣ! ಇವನನ್ನು ಹೊಂಡ ತೆಗೆದು ಹೂತು ಬಿಡೋಣ!

ತಚ್ಛ್ರುತ್ವಾ ರಾಘವೇಣೋಕ್ತಂ ರಾಕ್ಷಸಃ ಪ್ರಶ್ರಿತಂ ವಚಃ ।
ಇದಂ ಪ್ರೋವಾಚ ಕಾಕುತ್ಸ್ಥಂ ವಿರಾಧಃ ಪುರುಷರ್ಷಭಮ್ ॥೧೧॥

ರಾಮ ನುಡಿದ ಆ ಮಾತನ್ನು ಕೇಳಿ ವಿರಾಧನು ಪುರುಷಶ್ರೇಷ್ಠನಾದ ರಾಘವನನ್ನು ಕುರಿತು ಮುಂದೆ ತಿಳಿಸಿದಂತೆ ವಿನೀತನಾಗಿ ಮಾತನಾಡಿದನು.

ಹತೋಽಹಂ ಪುರುಷವ್ಯಾಘ್ರ ಶಕ್ರತುಲ್ಯಬಲೇನ ವೈ ।
ಮಯಾ ತು ಪೂರ್ವಂ ತ್ವಂ ಮೋಹಾನ್ನ ಜ್ಞಾತಃ ಪುರುಷರ್ಷಭ ॥೧೨॥

ಇಂದ್ರತುಲ್ಯಪರಾಕ್ರಮಿಯಾದ ನಿನ್ನಿಂದ ಹತನಾದೆ! ಮೋಹದಿಂದ ಮೊದಲು ಪುರುಷಶ್ರೇಷ್ಠನಾದ ನೀನು ತಿಳಿಯಲ್ಪಡಲಿಲ್ಲ.

ಕೌಸಲ್ಯಾಸುಪ್ರಜಾ ತಾತ ರಾಮಸ್ತ್ವಂ ವಿದಿತೋ ಮಯಾ ।
ವೈದೇಹೀ ಚ ಮಹಾಭಾಗಾ ಲಕ್ಷ್ಮಣಶ್ಚ ಮಹಾಯಶಾಃ ॥೧೩॥

ಕೌಸಲ್ಯೆಯ ಸುಪುತ್ರನಾದ ಶ್ರೀರಾಮ ನೀನಾರೆಂದು ತಿಳಿಯಿತು. ಮಹಾಭಾಗ್ಯ-ಶಾಲಿ ಸೀತೆ, ಮಹಾಯಶನಾದ ಲಕ್ಷ್ಮಣ ಇವರು. ತಿಳಿಯಿತು.

ಅಭಿಶಾಪಾದಹಂ ಘೋರಾಂ ಪ್ರವಿಷ್ಟೋ ರಾಕ್ಷಸೀಂ ತನುಮ್ ।
ತುಂಬುರುರ್ನಾಮ ಗಂಧರ್ವಃ ಶಪ್ತೋ ವೈಶ್ರವಣೇನ ಹ ॥೧೪॥

ನಾನು ತುಂಬುರು ಎಂಬ ಗಂದರ್ವ. ಕುಬೇರನ ಶಾಪದಿಂದ ಘೋರ ರಾಕ್ಷಸದೇಹವನ್ನು ಪಡೆದೆ.

ಪ್ರಸಾದ್ಯಮಾನಶ್ಚ ಮಯಾ ಸೋಽಬ್ರವೀನ್ಮಾಂ ಮಹಾಯಶಾಃ ।
ಯದಾ ದಾಶರಥೀ ರಾಮಸ್ತಾ ತ್ವಂ ವಧಿಷ್ಯತಿ ಸಂಯುಗೇ ॥೧೫॥

ತದಾ ಪ್ರಕೃತಿಮಾಪನ್ನೋ ಭವಾನ್ ಸ್ವರ್ಗಂ ಗಮಿಷ್ಯತಿ ।
ಇತಿ ವೈಶ್ರವಣೋ ರಾಜಾ ರಂಭಾಸಕ್ತಂ ಪುರಾನಘ ।
ಅನುಪಸ್ಥೀಯಮಾನೋ ಮಾಂ ಸಂಕ್ರುದ್ಧೋ ವ್ಯಾಜಹಾರ ಹ॥ ೧೬ ॥

ನನ್ನಿಂದ ಪ್ರಸನ್ನೀಕೃತನಾದ ಬಳಿಕ ಆ ಮಹಾಯಶನಾದ ಕುಬೇರ ನುಡಿದ-ಯಾವಾಗ ದಶರಥಪುತ್ರರಾಮನು ಯುದ್ಧದಲ್ಲಿ ನಿನ್ನನ್ನು ಕೊಲ್ಲುವನೋ ಆಗ ಮೂಲರೂಪವನ್ನು ಹೊಂದಿ ನೀನು ಸ್ವರ್ಗಕ್ಕೆ ಹೋಗುವಿ. ಹೀಗೆ ರಂಭಾಸಕ್ತನಾದ ನನ್ನಿಂದ ಅವಮಾನಿತನಾದ ಕುಬೇರ ಕ್ರುದ್ಧನಾಗಿ ನುಡಿದಿದ್ದ!

ತವ ಪ್ರಸಾದಾನ್ಮುಕ್ತೋಽಹಮಭಿಶಾಪಾತ್ ಸುದಾರುಣಾತ್ ।
ಭುವನಂ ಸ್ವಂ ಗಮಿಷ್ಯಾಮಿ ಸ್ವಸ್ತಿ ವೋಽಸ್ತು ಪರಂತಪ ॥ ೧೭ ॥

ನಿನ್ನ ಅನುಗ್ರಹದಿಂದ ಅತ್ಯಂತ ದಾರುಣವಾದ ಅಭಿಶಾಪದಿಂದ ಬಿಡುಗಡೆಗೊಂಡೆ. ನನ್ನ ಸ್ವರ್ಗಲೋಕವನ್ನು ಕುರಿತು ಹೊರಡುತ್ತೇನೆ. ನಿಮಗೆ ಮಂಗಳವಾಗಲಿ, ಶತ್ರುತಾಪನ!

ಇತೋ ವಸತಿ ಧರ್ಮಾತ್ಮಾ ಶರಭಂಗಃ ಪ್ರತಾಪವಾನ್ ।
ಅಧ್ಯರ್ಧಯೋಜನೇ ತಾತ ಮಹರ್ಷಿಃ ಸೂರ್ಯಸನ್ನಿಭಃ ।
ತಂ ಕ್ಷಿಪ್ರಮಭಿಗಚ್ಛ ತ್ವಂ ಸ ತೇ ಶ್ರೇಯೋ ವಿಧಾಸ್ಯತಿ ॥೧೮॥

ಅಪ್ಪ ರಾಮ! ಇಲ್ಲಿಯೇ ನಾಕುಮೈಲಿಯ ದೂರದಲ್ಲಿ ಪ್ರತಾಪವಂತ ಧರ್ಮಾತ್ಮ ಸೂರ್ಯ ಸದೃಶರಾದ ಮಹರ್ಷಿ ಶರಭಂಗರು ವಾಸವಾಗಿದ್ದಾರೆ. ಬೇಗ ಅವರೆಡೆಗೆ ಹೋಗು. ಅವರು ನಿನಗೆ ಶ್ರೇಯಸ್ಸನ್ನುಂಟು ಮಾಡುತ್ತಾರೆ.

ಅವಟೇ ಚಾಪಿ ಮಾಂ ರಾಮ ಪ್ರಕ್ಷಿಪ್ಯ ಕುಶಲೀ ವ್ರಜ ।
ರಕ್ಷಸಾಂ ಗತಸತ್ತ್ವಾನಾಮೇಷ ಧರ್ಮಃ ಸನಾತನಃ
ಅವಟೇ ಯೇ ನಿಧೀಯಂತೇ ತೇಷಾಂ ಲೋಕಾಃ ಸನಾತನಾಃ ॥೧೯॥

ನನ್ನನ್ನು ಹೊಂಡದಲ್ಲಿ ಹಾಕಿ ಕುಶಲಿಯನಾದ ನೀನು ಹೊರಡು. ಬಲ ಕಳೆದುಕೊಂಡ ರಕ್ಕಸರಿಗೆ ಹೀಗೆ ಮಾಡುವುದು ಸನಾತನಧರ್ಮ. ಯಾರ ದೇಹ ವನ್ನು ಹಳ್ಳದಲ್ಲಿ ಹಾಕಿ ಮುಚ್ಚುತ್ತಾರೆ ಅವರಿಗೆ ಹಿಂದಿನ ಲೋಕಗಳು ದೊರಕುತ್ತವೆ.

ಏವಮುಕ್ತ್ವಾ ತು ಕಾಕುತ್ಸ್ಥಂ ವಿರಾಧಃ ಶರಪೀಡಿತಃ
ಬಭೂವ ಸ್ವರ್ಗತಿಂ ಪ್ರಾಪ್ತೋ ನ್ಯಸ್ತದೇಹೋ ಮಹಾಬಲಃ ॥೨೦॥

ರಾಮನಿಗೆ ಹೀಗೆ ಹೇಳಿ ಶರಪೀಡಿತನಾದ ವಿರಾಧ ದೇಹ ಬಿಟ್ಟು ಮಹಾಬಲನಾಗಿ ಸ್ವರ್ಗ ಸೇರಿದ.

ತಚ್ಛ್ರುತ್ವಾ ರಾಘವೋ ವಾಕ್ಯಂ ಲಕ್ಷ್ಮಣಂ ವ್ಯಾದಿದೇಶ ಹ ।
ಕುಂಜರಸ್ಯೇವ ರೌದ್ರಸ್ಯ ರಾಕ್ಷಸಸ್ಯಾಸ್ಯ ಲಕ್ಷ್ಮಣ ।
ವನೇಽಸ್ಮಿನ್ ಸುಮಹಚ್ಛ್ವಭ್ರಂ ಖನ್ಯತಾಂ ರೌದ್ರಕರ್ಮಣಃ ॥೨೧॥

ಆ ವಿರಾಧನ ಮಾತನ್ನು ಕೇಳಿ ರಾಘವನು ಲಕ್ಷ್ಮಣನಿಗೆ ಹೇಳಿದನು— ಆನೆಯಂತೆ ಬೃಹದಾಕಾರದ ಈ ರೌದ್ರಕರ್ಮದ ರೌದ್ರ ರಾಕ್ಷಸನಿಗೆ ಈ ಕಾಡಿನಲ್ಲಿ ದೊಡ್ಡ ಹಳ್ಳವನ್ನು ತೋಡು.

ಇತ್ಯುಕ್ತ್ವಾ ಲಕ್ಷ್ಮಣಂ ರಾಮಃ ಪ್ರದರಃ ಖನ್ಯತಾಮಿತಿ ।
ತಸ್ಥೌ ವಿರಾಧಮಾಕ್ರಮ್ಯ ಕಂಠೇ ಪಾದೇನ ವೀರ್ಯವಾನ್ ॥೨೨॥

ಹೀಗೆ ಲಕ್ಷ್ಮಣನಿಗೆ ಹೇಳಿ ವೀರ ಶ್ರೀರಾಮ ವಿರಾಧನನ್ನು ಕಂಠದಲ್ಲಿ ತುಳಿದು ನಿಂತನು.

ತತಃ ಖನಿತ್ರಮಾದಾಯ ಲಕ್ಷ್ಮಣಃ ಶ್ವಭ್ರಮುತ್ತಮಮ್ ।
ಅಖನತ್ ಪಾರ್ಶ್ವತಸ್ತಸ್ಯ ವಿರಾಧಸ್ಯ ಮಹಾತ್ಮನಃ ॥೨೩॥

ಬಳಿಕ ಲಕ್ಷ್ಮಣ ಗುದ್ದಲಿಯನ್ನು ಹಿಡಿದು ದೊಡ್ಡ ಹಳ್ಳ ತೋಡಿದನು. ವಿರಾಧನ ಬದಿಯಲ್ಲಿ.

ತಂ ಮುಕ್ತಕಂಠಂ ನಿಪ್ಪಿಷ್ಯ ಶಂಕುಕರ್ಣಂ ಮಹಾಸ್ವನಮ್ ।
ವಿರಾಧಂ ಪ್ರಾಕ್ಷಿಪಚ್ಛ್ವಭ್ರೇ ನದಂತಂ ಭೈರವಸ್ವನಮ್ ॥೨೪॥

ಆಗ ಶ್ರೀರಾಮನು ವಿರಾಧನ ಕಂಠದ ಮೇಲಿದ್ದ ಕಾಲು ತೆಗೆದನು. ಲಕ್ಷ್ಮಣನು ಗೂಟದಂತೆ ಕಿವಿಯುಳ್ಳ ವಿರಾಧನನ್ನು ಎತ್ತಿ ಆ ಹೊಂಡದಲ್ಲಿ ಹಾಕಿದನು. ಆಗ ಅವನು ಭಯಾನಕವಾಗಿ ಗರ್ಜಿಸುತ್ತಿದ್ದನು.

ತಮಾಹವೇ ನಿರ್ಜಿತಮಾಶುವಿಕ್ರಮೌ
ಸ್ಥಿರಾವುಭೌ ಸಂಯತಿ ರಾಮಲಕ್ಷ್ಮಣೌ ।
ಮುದಾನ್ವಿತೌ ಚಿಕ್ಷಿಪತುರ್ಭಯಾವಹಂ
ನದಂತಮುತ್ಕ್ಷಿಪ್ಯ ಬಿಲೇ ತು ರಾಕ್ಷಸಮ್ ॥೨೫॥

ಯುದ್ಧದಲ್ಲಿ ಗಟ್ಟಿಯಾಗಿ ನಿಂತು ಕ್ಷಿಪ್ರವಾಗಿ ಪರಾಕ್ರಮ ತೋರುವ ಆ ಇಬ್ಬರು ಸಹೋದರ ರಾಮ–ಲಕ್ಷ್ಮಣರು ಖುಷಿಯಿಂದ ಕೂಡಿಕೊಂಡು ರಣಭಯಂಕರನಾದ ರಕ್ಕಸನನ್ನು ಆ ಹೊಂಡದಲ್ಲಿ ಹಾಕಿಬಿಟ್ಟರು.

ಅವಧ್ಯತಾಂ ಪ್ರೇಕ್ಷ್ಯ ಮಹಾಸುರಸ್ಯ ತೌ
ಶಿತೇನ ಶಸ್ತ್ರೇಣ ತದಾ ನರರ್ಷಭೌ ।
ಸಮರ್ಥ್ಯ ಚಾತ್ಯರ್ಥವಿಶಾರದಾವುಭೌ
ಬಿಲೇ ವಿರಾಧಸ್ಯ ವಧಂ ಪ್ರಚಕ್ರತುಃ ॥೨೬॥

ಮಹಾಸುರನ ವಧೆ ಶಸ್ತ್ರದಿಂದಾಗದೆಂಬುದನ್ನು ಅರಿತ ಅತ್ಯಂತ ವಿಶಾರದರಾದ ಆ ರಾಮ ಲಕ್ಷ್ಮಣರು ಹೊಂಡದಲ್ಲಿ ಹಾಕಿ ಮುಚ್ಚಿ ಸಂಹರಿಸಿದರು.

ಸ್ವಯಂ ವಿರಾಧೇನ ಹಿ ಮೃತ್ಯುರಾತ್ಮನಃ
ಪ್ರಸಹ್ಯ ರಾಮೇಣ ವಧಾರ್ಥಮೀಪ್ಸಿತಃ ।
ನಿವೇದಿತಃ ಕಾನನಚಾರಿಣಾ ಸ್ವಯಂ
ನ ಮೇ ವಧಃ ಶಸ್ತ್ರಕೃತೋ ಭವೇದಿತಿ ॥೨೭॥

ಸ್ವಯಂ ವಿರಾಧನೇ ಶ್ರೀರಾಮನಿಂದ ತನ್ನ ಸಂಹಾರವನ್ನು ಬಯಸಿ ವನಚಾರಿಯಾದ ಅವನೆ ನನ್ನ ಸಂಹಾರ ಶಸ್ತ್ರದಿಂದ ಆಗದೆಂದು ವಿನಂತಿಸಿಕೊಂಡಿದ್ದ.

ತದೇವ ರಾಮೇಣ ನಿಶಮ್ಯ ಭಾಷಿತಂ
ಕೃತಾ ಮತಿಸ್ತಸ್ಯ ಬಿಲಪ್ರವೇಶನೇ ।
ಬಿಲಂ ಚ ರಾಮೇಣ ಬಲೇನ ರಕ್ಷಸಾ
ಪ್ರವೇಶ್ಯಮಾನೇನ ವನಂ ವಿನಾದಿತಮ್ ॥೨೮॥

ವಿರಾಧನ ಆ ಮಾತನ್ನು ಕೇಳಿಯೇ ಅವನನ್ನು ಹೊಂಡದಲ್ಲಿ ಹಾಕುವ ವಿಚಾರ ಮಾಡಿದನು. ಶ್ರೀರಾಮ ಅವನನ್ನು ಬಿಲದಲ್ಲಿ ಪ್ರವೇಶ ಮಾಡಿಸುತ್ತಿರುವಾಗ ಅವನು ಜೋರಾಗಿ ಗರ್ಜಿಸುತ್ತಿದ್ದನು. ಅದು ಕಾಡಿನಲ್ಲಿ ಪ್ರತಿಧ್ವನಿಸಿತ್ತು!

ಪ್ರಹೃಷ್ಟರೂಪಾವಿವ ರಾಮಲಕ್ಷ್ಮಣೌ
ವಿರಾಧಮುಗ್ರಂ ಪ್ರದರೇ ನಿಖಾಯ ತಮ್ ।
ನನಂದತುರ್ವೀತಭಯೌ ಮಹಾವನೇ
ಶಿಲಾಭಿರಂತರ್ದಧತುಶ್ಚ ರಾಕ್ಷಸಮ್ ॥೨೯॥

ಸಂತಸಗೊಂಡ ರಾಮಲಕ್ಷ್ಮಣರು ಭೂಮಿಯ ಬಿಲದಲ್ಲಿ ವಿರಾಧನನ್ನು ಹಾಕಿ ಮೇಲೆ ಕಲ್ಲುಗಳನ್ನು ಹಾಕಿ ಮುಚ್ಚಿದರು. ಮಹಾವನದಲ್ಲಿ ನಿರ್ಭಯರಾಗಿ ಸಂತೋಷದಿಂದ ಸಂಚರಿಸಿದರು.

ತತಸ್ತು ತೌ ಕಾರ್ಮುಕಖಡ್ಗಧಾರಿಣೌ
ನಿಹತ್ಯ ರಕ್ಷಃ ಪರಿಗೃಹ್ಯ ಮೈಥಿಲೀಮ್ ।
ವಿಜಹ್ರತುಸ್ತೌ ಮುದಿತೌ ಮಹಾವನೇ
ದಿವಿ ಸ್ಥಿತೌ ಚಂದ್ರದಿವಾಕರಾವಿವ ॥೩೦॥

ಬಳಿಕ ಬಂಗಾರದ ಚಿತ್ತಾರದ ಬಿಲ್ಲು ಹಿಡಿದ ಆ ರಾಮಲಕ್ಷ್ಮಣರು ರಕ್ಕಸನನ್ನು ಕೊಂದು ಸೀತೆಯನ್ನು ಕರೆದುಕೊಂಡು ಆಗಸದಲ್ಲಿರುವ ಸೂರ್ಯಚಂದ್ರರಂತೆ ಬೆಳಗುತ್ತ ಮಹಾವನದಲ್ಲಿ ಸಂತಸದಿಂದ ಸಂಚರಿಸಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಾಲ್ಕನೇ ಸರ್ಗ ಮುಗಿಯಿತು.

ವಿಶೇಷಾಂಶ

ರಾಮೋಽಪಿ ತತ್ರ ದದೃಶೇ ಧನದಸ್ಯ ಶಾಪಾದ್
ಗಂಧರ್ವಮುರ್ವಶಿರತೇರಥ ಯಾತುಧಾನೀಮ್ ।

ಪ್ರಾಪ್ತಂ ದಶಾಂ ಸಪದಿ ತುಂಬುರುನಾಮಧೇಯಂ
ನಾಮ್ನಾ ವಿರಾಧಮಪಿ ಶರ್ವವರಾದವಧ್ಯಮ್ ॥
ಭಂಕ್ತ್ವಾಽಸ್ಯ ಬಾಹುಯುಗಲಂ ಬಿಲಗಂ ಚಕಾರ
ಸಮ್ಮಾನಯನ್ ವಚನಮಂಬುಜಜನ್ಮನೋಽಸೌ ।
ಪ್ರಾದಾಚ್ಚ ತಸ್ಯ ಸುಗತಿಂ ನಿಜಗಾಯಕಸ್ಯ
ಭಕ್ಷಾರ್ಥಮಂಸಕಮಿತೋಽಪಿ ಸಹಾನುಜೇನ ॥

ಮ.ಭಾ.ತಾ.ನಿ ೫-೨೦,೨೧

ವಿರಾಧ ವಧ ಪ್ರಸಂಗ

ಅರಣ್ಯಕಾಂಡದಲ್ಲಿ ಮೊದಲು ಶರಭಂಗಮುನಿ ದರ್ಶನ ನಡೆದದ್ದು ಬಳಿಕ ವಿರಾಧವಧಪ್ರಸಂಗ ನಡೆದದ್ದು ಎಂದು ಅದೇ ಕ್ರಮದಲ್ಲಿ ಮಹಾಭಾರತ ತಾತ್ಪರ್ಯನಿರ್ಣಯ- ದಲ್ಲಿ ಕಥಾ ನಿರೂಪಣೆಯಿದೆ.

ಭಾರತದ ವನಪರ್ವದಲ್ಲಿ ಮೊದಲು ಶರಭಂಗಾಶ್ರಮಕ್ಕೆ ಬಂದನೆಂದೇ ನಿರೂಪಣೆಯಿದೆ—ಪ್ರವಿದೇಶ ಮಹಾರಣ್ಯಂ ಶರಭಂಗಾಶ್ರಮಂ ಪ್ರತಿ ।

ಆಚಾರ್ಯರು ಭಾರತಕ್ಕೆ ಅನುಗುಣವಾಗಿ ಕಥೆ ಹೇಳಿದ್ದಾರೆ.

ಶ್ರೀರಾಘವೇಂದ್ರಗುರುಗಳು ರಾಮಚಾರಿತ್ರ್ಯಮಂಜರಿಯಲ್ಲಿ 'ವನಮಥ ಸಮಿತೋ ದಂಡಕಂ ತಾಪಸೇಷ್ಟಮ್ । ಕುರ್ವನ್ ಹತ್ವಾ ವಿರಾಧಂ' ಎಂದೇ ಆಚಾರ್ಯರ ನಿರ್ಣಯಾನುಸಾರಿಯಾಗಿ ಹೇಳಿದ್ದಾರೆ.

ಒಮ್ಮೆ ತುಂಬುರು ಗಂಧರ್ವ ಕುಬೇರ ಬಯಸಿದ್ದ ಊರ್ವಶಿಯನ್ನು ಬಯಸಿ ಬಲಾತ್ಕರಿಸಿದ. ಕುಬೇರ ರಾಕ್ಷಸನಾಗಿ ಹುಟ್ಟುವಂತೆ ಶಾಪವಿತ್ತ. ತುಂಬುರು ಗಂಧರ್ವ 'ವಿರಾಧ'ನಾಗಿ ಹುಟ್ಟಿದ್ದ.

ವಿರಾಧ ಜನ್ಮದಲ್ಲಿ ರುದ್ರದೇವರಿಂದ ಶಸ್ತ್ರದಿಂದ ಅಭೇದ್ಯತ್ವ ವರವನ್ನು ಬ್ರಹ್ಮದೇವರಿಂದ ಶಸ್ತ್ರದಿಂದ ಅವಧ್ಯತ್ವ ವರವನ್ನು ಪಡೆದಿದ್ದ.

ಶಸ್ತ್ರದಿಂದ ಅಭೇದ್ಯತ್ವವರವನ್ನು ಬ್ರಹ್ಮದೇವರು ಕೊಟ್ಟಿದ್ದರೆ ಲಕ್ಷ್ಮಣ ವಿರಾಧನ ತೋಳನ್ನು ಕತ್ತರಿಸಲಾಗುತ್ತಿರಲಿಲ್ಲ. ಶ್ರೀರಾಮ ಬ್ರಹ್ಮದೇವರ ವಚನವನ್ನು ಮನ್ನಿಸಿ ಶಸ್ತ್ರದಿಂದ ಕೊಲ್ಲದೆ ಬಿಲದಲ್ಲಿ ಹಾಕಿದ.

ವಾಲ್ಮೀಕಿ ರಾಮಾಯಣದಲ್ಲಿ ಬ್ರಹ್ಮದೇವರ ವರದಿಂದ ಅವಧ್ಯತ್ವವನ್ನು ಹೇಳಿದೆ. ಆಚಾರ್ಯರು 'ಶರ್ವವರಾದ್ ಅವಧ್ಯತ್ವಂ' ಎಂದು ಶಿವನ ವರವಿತ್ತೆನ್ನುವುದನ್ನೂ ಹೇಳುತ್ತಾರೆ. 'ಸಮ್ಮಾನಯನ್ ವಚನಮಂಬುಜ ಜನ್ಮನೋಽಸೌ' ಎಂದು ಬ್ರಹ್ಮದೇವರ ವರದ ಉಲ್ಲೇಖವನ್ನೂ ಮಾಡುತ್ತಾರೆ.

ಸಂಗ್ರಹರಾಮಾಯಣದಲ್ಲಿ ''ಶಂಭೋರ್ವರಾದವಧ್ಯೋಽಸೌ'' ಎಂದು ನಾರಾಯಣ ಪಂಡಿತಾಚಾರ್ಯರು 'ಶಂಭುವರದಿಂದ ಅವಧ್ಯ' ಎಂದಿದ್ದಾರೆ. 'ಶಂಭೂಬ್ರಹ್ಮತ್ರಿಲೋಚನೌ' ಎಂಬ ಕೋಶದಂತೆ ಶಂಭು ಶಬ್ದಕ್ಕೆ ಬ್ರಹ್ಮ, ರುದ್ರ ಎಂದು ಎರಡೂ ಅರ್ಥವಿದೆ.

ತುಂಬುರುವಿಗೆ ಊರ್ವಶೀ ರತಿಯಿಂದ ಶಾಪ ಎಂದು ಆಚಾರ್ಯರು ಹೇಳಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿ 'ರಂಭಾಸಕ್ತಂ ಪುರಾऽನಘ' ಎಂದು ರಂಭಾಸಕ್ತಿಯಿಂದ ಶಾಪ ಎಂದಿದೆ. 'ರಂಭೆ–ಊರ್ವಶೀ ಇಬ್ಬರಲ್ಲಿಯೂ ಆಸಕ್ತ' ಎಂದಿಟ್ಟುಕೊಳ್ಳಬೇಕು. ಆದ್ದರಿಂದಲೇ 'ಅನುಪಸ್ಥೀಯಮಾನೋ ಮಾಂ ಸಂಕ್ರುದ್ಧಃ' ಎಂದು ರಾಮಾಯಣದಲ್ಲಿ ಬರೇ ಕ್ರುದ್ಧ ಅಲ್ಲ–ಸಂಕ್ರುದ್ಧ ತುಂಬ ಕ್ರೋಧಗೊಂಡಿದ್ದ ಕುಬೇರ' ಎಂದೇ ಹೇಳಲಾಗಿದೆ. (–ಬನ್ನಂಜೆ)

ವಾಲ್ಮೀಕಿರಾಮಾಯಣದ 'ರಂಭಾಸಕ್ತ' ಎಂಬ ಮಾತಿಗೆ— ರಂಭಾ ಎಂದರೆ ಬಾಳೆಗಿಡ. ಬಾಳೆಗಿಡದಂತೆ ಊರ್ವಶಿ ಭಯದಿಂದ ನಡುಗಿದಳು ಎಂಬ ಭಾವವನ್ನು ಇಟ್ಟುಕೊಳ್ಳಬೇಕು. ನಿರ್ಣಯದಲ್ಲಿ ಉರ್ವಶಿರತೇಃ ಎಂದು ಹೇಳುವ ಬದಲು ದೀರ್ಘಲೋಪ ಮಾಡಿ ಉರ್ವಶಿ–ರತೇಃ ಎಂದು ಹೇಳಿರುವುದು ಭಯದಿಂದ ಕೃಶಳಾಗಿ ನಡುಗಿದಳು ಎಂಬುದರ ಸೂಚನೆ– ಶ್ರೀ ಹಯವದನ ಪುರಾಣಿಕರ ತಾತ್ಪರ್ಯನಿರ್ಣಯದ ಅನುವಾದ.

'ಉರ್ವಶಿ–ರತೇಃ' ಎಂಬಲ್ಲಿ ಉರ್ವಶಿ–ಎಂಬ ಹ್ರಸ್ವವು ' ಸಂಜ್ಞಾಯಾಂ' ಸಂಜ್ಞಾವಾಚಕಶಬ್ದವು ಸಮಾಸದಲ್ಲಿ ಹ್ರಸ್ವವಾಗುತ್ತದೆ ಎಂಬ ವ್ಯಾಕರಣದ ನಿಯಮದಂತೆ. ಉದಾ. 'ದೇವಕಿನಂದನ'–ಬನ್ನಂಜೆ.

❖

ಪಂಚಮಃ ಸರ್ಗಃ

ಕಥಾಸಾರಾಂಶ– ಸೀತಾರಾಮಲಕ್ಷ್ಮಣರು ಶರಭಂಗಮುನಿಯ ಆಶ್ರಮಕ್ಕೆ ತೆರಳಿದರು. ಇಂದ್ರ ಶರಭಂಗಮುನಿಗಳಿಗೆ ಬ್ರಹ್ಮಲೋಕಕ್ಕೆ ತೆರಳುವಂತೆ ಹೇಳುತ್ತಿದ್ದನು. ಶ್ರೀರಾಮ ಬರುವಾಗ ದೇವೇಂದ್ರ ಹಿಂತಿರುಗಿದ ಶರಭಂಗರು ತಮ್ಮ ಸಾಧನೆಯನ್ನು ಶ್ರೀರಾಮನಿಗೆ ಅರ್ಪಿಸಿ ಅವನ ಮುಂದೆಯೇ ಅಗ್ನಿಪ್ರವೇಶದ ಮೂಲಕ ದೇಹತ್ಯಾಗವನ್ನು ಮಾಡಿ ಬ್ರಹ್ಮಲೋಕ ಸೇರಿದರು.

ಶರಭಂಗರು ಸುತೀಕ್ಷ್ಣಮುನಿಗಳ ಆಶ್ರಮಕ್ಕೆ ಹೋಗುವ ದಾರಿ ತೋರಿಸಿ ಅಲ್ಲಿಗೆ ಹೋಗುವಂತೆ ತಿಳಿಸಿದರು.

ಶರಭಂಗಬ್ರಹ್ಮಲೋಕಪ್ರಸ್ಥಾನಮ್

ಹತ್ವಾ ತು ತಂ ಭೀಮಬಲಂ ವಿರಾಧಂ ರಾಕ್ಷಸಂ ವನೇ ।
ತತಃ ಸೀತಾಂ ಪರಿಷ್ವಜ್ಯ ಸಮಾಶ್ವಾಸ್ಯ ಚ ವೀರ್ಯವಾನ್ ।
ಅಬ್ರವೀಲ್ಲಕ್ಷ್ಮಣಂ ರಾಮೋ ಭ್ರಾತರಂ ದೀಪ್ತತೇಜಸಮ್ ॥೧॥

ವೀರ್ಯವಂತನಾದ ರಾಮನು ಭೀಮಬಲ ರಾಕ್ಷಸ ವಿರಾಧನನ್ನು ಕಾಡಿನಲ್ಲಿ ಕೊಂದು ಸೀತೆಯನ್ನು ಅಪ್ಪಿ ಸಂತೈಸಿದನು. ತೇಜಸ್ವಿ ತಮ್ಮ ಲಕ್ಷ್ಮಣನನ್ನು ಕುರಿತು ಹೀಗೆ ಹೇಳಿದನು.

ಕಷ್ಟಂ ವನಮಿದಂ ದುರ್ಗಂ ನ ಚ ಸ್ಮ ವನಗೋಚರಾಃ ।
ಅಭಿಗಚ್ಛಾಮಹೇ ಶೀಘ್ರಂ ಶರಭಂಗಂ ತಪೋಧನಮ್ ॥೨॥

ಲಕ್ಷ್ಮಣ! ಈ ದುರ್ಗಮವಾದ ವನ ಕಷ್ಟಪ್ರದವಾಗಿದೆ. ಈ ಮುಂಚೆ ಇಂಥ ಗಹನಾರಣ್ಯದಲ್ಲಿ ನಾವೆಂದೂ ಇರಲಿಲ್ಲ. ಬೇಗ ತಪೋಧನ ಶರಭಂಗರ ಆಶ್ರಮಕ್ಕೆ ಹೋಗೋಣ.

ಆಶ್ರಮಂ ಶರಭಂಗಸ್ಯ ರಾಘವೋऽಭಿಜಗಾಮ ಹ ।
ತಸ್ಯ ದೇವಪ್ರಭಾವಸ್ಯ ತಪಸಾ ಭಾವಿತಾತ್ಮನಃ ॥೩॥

ದೇವತೆಗಳನ್ನೂ ಪ್ರಭಾವಗೊಳಿಸುವಂತಹ ತಪಸಿನಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಶುದ್ಧ ಮನಸಿನ ಶರಭಂಗರ ಆಶ್ರಮಕ್ಕೆ ರಾಘವ ಹೊಕ್ಕನು.

ಸಮೀಪೇ ಶರಭಂಗಸ್ಯ ದದರ್ಶ ಮಹದದ್ಭುತಮ್ ।
ವಿಭ್ರಾಜಮಾನಂ ವಪುಷಾ ಸೂರ್ಯವೈಶ್ವಾನರೋಪಮಮ್ ॥೪॥

ಶರಭಂಗರ ಸಮೀಪದಲ್ಲಿ ಸೂರ್ಯ ಅಗ್ನಿಗಳಂತೆ ಕಂಗೊಳಿಸುವ ಶರೀರದ ಅದ್ಭುತ ವ್ಯಕ್ತಿಯನ್ನು ರಾಮ ಕಂಡನು.

ಅವರುಹ್ಯ ರಥೋತ್ಸಂಗಾತ್ಸಕಾಶೇ ವಿಬುಧಾನುಗಮ್ ।
ಅಸಂಸ್ಪೃಶಂತಂ ವಸುಧಾಂ ದದರ್ಶ ವಿಬುಧೇಶ್ವರಮ್ ॥೫॥

ರಥದಿಂದ ಇಳಿದು ಶರಭಂಗರ ಬಳಿ ಇರುವ ಅನುಚರ ದೇವತೆಗಳಿಂದ ಕೂಡಿದ ಭೂಮಿಯನ್ನು ಸ್ಪರ್ಶಮಾಡದೆ ಇರುವ ದೇವೇಂದ್ರನನ್ನು ರಾಮ ಕಂಡನು.

ಸುಪ್ರಭಾಭರಣಂ ದೇವಂ ವಿರಜೋಽಂಬರಧಾರಿಣಮ್ ।
ತದ್ವಿಧೈರೇವ ಬಹುಭಿಃ ಪೂಜ್ಯಮಾನಂ ಮಹಾತ್ಮಭಿಃ ॥೬॥

ಚೆನ್ನಾಗಿ ಬೆಳಗುವ ಆಭರಣಗಳನ್ನು ಧರಿಸಿರುವ, ನಿರ್ಮಲಾಂಬರ ಧಾರಿಯಾದ ಅದೆ ತರಹ ಶೋಭಿಸುವ ಮಹಾತ್ಮರಿಂದ ಪೂಜೆಗೊಳ್ಳುತ್ತಿರುವ ಇಂದ್ರನನ್ನು ಕಂಡ.

ಹರಿಭಿರ್ವಾಜಿಭಿರ್ಯುಕ್ತಮಂತರಿಕ್ಷಗತಂ ರಥಮ್ ।
ದದರ್ಶಾದೂರತಸ್ತಸ್ಯ ತರುಣಾದಿತ್ಯಸಂನಿಭಮ್ ॥೭॥

ಅವರ ಹತ್ತಿರದಲ್ಲಿದ್ದ ರಥವನ್ನು ಕಂಡ. ಹರಿದ್ವರ್ಣದ ಕುದುರೆಗಳು ಕಟ್ಟಿದ ರಥ, ಸೂರ್ಯನಂತೆ ಹೊಳೆಯುತ್ತಿರುವ ಅಂತರಿಕ್ಷಗತ ರಥ ಅದು.

ಪಾಂಡರಾಭ್ರಘನಪ್ರಖ್ಯಂ ಚಂದ್ರಮಂಡಲಸಂನಿಭಮ್
ಅಪಶ್ಯದ್ವಿಮಲಂ ಛತ್ರಂ ಚಿತ್ರಮಾಲ್ಯೋಪಶೋಭಿತಮ್ ॥೮॥

ಇಂದ್ರನ ತಲೆಯ ಮೇಲೆ ಛತ್ರವಿತ್ತು. ಬೆಳ್ಳಗಿನ ಮೋಡದಂತೆ ಇತ್ತು. ಚಂದ್ರಮಂಡಲದಂತಿತ್ತು. ಬಗೆಬಗೆಯ ಮಾಲೆಗಳಿಂದ ಶೋಭಿತವಾದ ಅಂತಹ ನಿರ್ಮಲ ಛತ್ರವನ್ನು ಶ್ರೀರಾಮ ಕಂಡ.

ಚಾಮರವ್ಯಜನೇ ಚಾಗ್ರ್ಯೇ ರುಗ್ಮದಂಡೇ ಮಹಾಧನೇ
ಗೃಹೀತೇ ವರನಾರೀಭ್ಯಾಂ ಧೂಯಮಾನೇ ಚ ಮೂರ್ಧನಿ ॥೯॥

ಬೆಲೆಬಾಳುವ ಬಂಗಾರದ ಹಿಡಿಯ ಚಾಮರ ಬೀಸಣಿಗೆಗಳನ್ನು ಉತ್ತಮ ನಾರಿಯರು ಬೀಸುತ್ತಿದುದನ್ನು ಕಂಡನು.

ಗಂಧರ್ವಾಮರಸಿದ್ಧಾಶ್ಚ ಬಹವಃ ಪರಮರ್ಷಯಃ ।
ಅಂತರಿಕ್ಷಗತಂ ದೇವಂ ವಾಗ್ಭಿರಗ್ರ್ಯಾಭಿರೀಡಿರೇ ॥೧೦॥

ಅನೇಕ ಗಂಧರ್ವರು ದೇವತೆಗಳು ಸಿದ್ಧರು ಮಹರ್ಷಿಗಳು ಉತ್ತಮ ವಚನಗಳಿಂದ ಅಂತರಿಕ್ಷದಲ್ಲಿದ್ದ ದೇವೇಂದ್ರನನ್ನು ಸ್ತುತಿಸುತ್ತಿದ್ದರು.

ಸಹ ಸಂಭಾಷಮಾಣೇತು ಶರಭಂಗೇಣ ವಾಸವೇ ॥೧೧॥

ದೃಷ್ಟ್ವಾ ಶತಕ್ರತುಂ ತತ್ರ ರಾಮೋ ಲಕ್ಷ್ಮಣಮಬ್ರವೀತ್ ।
ರಾಮೋಽಥ ರಥಮುದ್ದಿಶ್ಯ ಲಕ್ಷ್ಮಣಾಯ ಪ್ರದರ್ಶಯನ್ ॥೧೨॥

ದೇವೇಂದ್ರನು ಶರಭಂಗಮುನಿಗಳೊಂದಿಗೆ ಮಾತನಾಡುತ್ತಿರಲು ಅವನನ್ನು ಕಂಡು ರಾಮನು ಲಕ್ಷ್ಮಣನಿಗೆ ಹೇಳಿದನು—ದೇವೇಂದ್ರನ ರಥವನ್ನು ತೋರಿಸಿ ಅದರ ಬಗ್ಗೆ.

ಅರ್ಚಿಷ್ಮಂತಂ ಶ್ರಿಯಾ ಜುಷ್ಟಮದ್ಭುತಂ ಪಶ್ಯ ಲಕ್ಷ್ಮಣ ।
ಪ್ರತಪಂತಮಿವಾದಿತ್ಯಮಂತರಿಕ್ಷಗತಂ ರಥಮ್ ॥೧೩॥

ಲಕ್ಷ್ಮಣ! ಆ ಅದ್ಭುತ ರಥವನ್ನು ನೋಡು—ಕಾಂತಿ ತುಂಬಿದ ಆದಿತ್ಯನಂತೆ ಹೊಳೆಯುತ್ತ ಅಂತರಿಕ್ಷದಲ್ಲಿದೆ. ಹೊಮ್ಮುವ ಕಿರಣಗಳನ್ನು ಹೊಂದಿದೆ.

ಯೇ ಹಯಾಃ ಪುರುಹೂತಸ್ಯ ಪುರಾ ಶಕ್ರಸ್ಯ ನಃ ಶ್ರುತಾಃ ।
ಅಂತರಿಕ್ಷಗತಾ ದಿವ್ಯಾಸ್ತ ಇಮೇ ಹರಯೋ ಧ್ರುವಮ್ ॥೧೪॥

ದೇವೇಂದ್ರನ ಯಾವ ಕುದುರೆಗಳ ಬಗ್ಗೆ ಕೇಳಿದ್ದೆವೊ ನಿಶ್ಚಯವಾಗಿ ಅದೇ ಕುದುರೆಗಳು ಅಂತರಿಕ್ಷದಲ್ಲಿರುವುವು.

ಇಮೇ ಚ ಪುರುಷವ್ಯಾಘ್ರಾ ಯೇ ತಿಷ್ಠಂತ್ಯಭಿತೋ ರಥಮ್ ।
ಶತಂ ಶತಂ ಕುಂಡಲಿನೋ ಯುವಾನಃ ಖಡ್ಗಪಾಣಯಃ ॥೧೫॥

ವಿಸ್ತೀರ್ಣವಿಪುಲೋರಸ್ಕಾಃ ಪರಿಘಾಯತಬಾಹವಃ ।
ಶೋಣಾಂಶುವಸನಾಃ ಸರ್ವೇ ವ್ಯಾಘ್ರಾ ಇವ ದುರಾಸದಾಃ ॥೧೬॥

ರಥದ ಇಕ್ಕೆಲಗಳಲ್ಲಿ ಪುರುಷಶ್ರೇಷ್ಠರು ನಿಂತಿರುವರು— ಕುಂಡಲಧಾರಿಗಳಾದ ಕೈಯಲ್ಲಿ ಖಡ್ಗ ಹಿಡಿದಿರುವ ನೂರು ನೂರು ಯುವಕರು. ಅವರ ವಕ್ಷಸ್ಥಳವು ಉಬ್ಬಿ ವಿಶಾಲವಾಗಿದೆ. ತೋಳುಗಳು ಪರಿಘಾಯುಧದಂತೆ ದೃಢ ಹಾಗೂ ದಷ್ಟಪುಷ್ಟ-

ವಾಗಿವೆ. ಕೆಂಪು ಹೊಳಪಿನ ವಸ್ತ್ರಧಾರಿಗಳಾಗಿದ್ದಾರೆ. ದುರ್ಜಯ ವ್ಯಾಘ್ರಗಳಂತೆ ಇದ್ದಾರೆ!

ಉರೋದೇಶೇಷು ಸರ್ವೇಷಾಂ ಹಾರಾ ಜ್ವಲನಸನ್ನಿಭಾಃ ।
ರೂಪಂ ಭಿಭ್ರತಿ ಸೌಮಿತ್ರೇ ಪಂಚವಿಂಶತಿವಾರ್ಷಿಕಮ್ ॥೧೭॥

ಸುಮಿತ್ರಾನಂದನನೇ! ಇವರ ಎದೆಯಲ್ಲಿ ಅಗ್ನಿಯಂತೆ ಹೊಳೆಯುವ ಹಾರಗಳು ಕಂಗೊಳಿಸುತ್ತಿವೆ. ಇಪ್ಪತ್ತೈದರ ಹರೆಯದ ರೂಪ ಇವರದು.

ಏತದ್ಧಿ ಕಿಲ ದೇವಾನಾಂ ವಯೋ ಭವತಿ ನಿತ್ಯದಾ ।
ಯಥೇಮೇ ಪುರುಷವ್ಯಾಘ್ರ ದೃಶ್ಯಂತೇ ಪ್ರಿಯದರ್ಶನಾಃ ॥೧೮॥

ದೇವತೆಗಳದು ಸದಾ ಇದೆ ವಯಸ್ಸು ತಾನೆ. ಇವರನ್ನು ನೋಡುವುದೇ ಒಂದು ಖುಷಿ!

ಇಹೈವ ಸಹ ವೈದೇಹ್ಯಾ ಮುಹೂರ್ತಂ ತಿಷ್ಠ ಲಕ್ಷ್ಮಣ ।
ಯಾವಜ್ಜಾನಾಮ್ಯಹಂ ವ್ಯಕ್ತಂ ಕ ಏಷ ದ್ಯುತಿಮಾನ್ ರಥೇ ॥೧೯॥

ಲಕ್ಷ್ಮಣ! ವಿದೇಹಪುತ್ರಿ ಸೀತೆಯೊಂದಿಗೆ ಇಲ್ಲಿಯೇ ಎರಡು ಘಳಿಗೆ ಇರು. ರಥದಲ್ಲಿರುವ ಆ ಕಾಂತಿಮಂತನಾರೆಂದು ತಿಳಿದು ಬರುವ ತನಕ.

ತಮೇವಮುಕ್ತ್ವಾ ಸೌಮಿತ್ರಿಮಿಹೈವ ಸ್ಥೀಯತಾಮಿತಿ ।
ಅಭಿಚಕ್ರಾಮ ಕಾಕುತ್ಸ್ಥಃ ಶರಭಂಗಾಶ್ರಮಂ ಪ್ರತಿ ॥೨೦॥

ಶರಭಂಗಮನುಜ್ಞಾಪ್ಯ ವಿಬುಧಾನಿದಮಬ್ರವೀತ್ । ಪಾಠಾಂತರ (ಪ)(ಗೋ)

ಲಕ್ಷ್ಮಣನಿಗೆ ಇಲ್ಲಿಯೇ ಇರು ಎಂದು ಹೇಳಿ ಕಕುತ್‌ಸ್ಥ ವಂಶದ ಶ್ರೀರಾಮ ಶರಭಂಗರ ಆಶ್ರಮಕ್ಕೆ ಹೋದನು.

ತತಃ ಸಮಭಿಗಚ್ಛಂತಂ ಪ್ರೇಕ್ಷ್ಯ ರಾಮಂ ಶಚೀಪತಿಃ ।
ಶರಭಂಗಮನುಜ್ಞಾಪ್ಯ ವಿಬುಧಾನಿದಮಬ್ರವೀತ್ ॥೨೧॥

ಬಳಿಕ ಆಶ್ರಮಕ್ಕೆ ಬರುತ್ತಿರುವ ರಾಮನನ್ನು ನೋಡಿ ಶಚೀಪತಿಯು ಶರಭಂಗರಿಂದ ಸತ್ಕೃತನಾಗಿ ತನ್ನವರಿಗೆ ರಹಸ್ಯವಾಗಿ ಇಂತೆಂದನು.

ಸಹೋಪಯಾತ್ಯಸೌ ರಾಮೋ ಯಾವನ್ಮಾಂ ನಾಭಿಭಾಷತೇ ।
ನಿಷ್ಠಾಂ ನಯತು ತಾವತ್ತು ತತೋ ಮಾಂ ದ್ರಷ್ಟುಮರ್ಹತಿ ॥೨೨॥

ನಿಷ್ಠಾಂ ನಯತ । ತತೋ ಮಾऽದ್ರಷ್ಟುಮರ್ಹತಿ । (ಪ)(ಗೋ)

ಇಲ್ಲಿಗೆ ಶ್ರೀರಾಮನು ಬರುತ್ತಿರುವನು. ಅವನು ನನ್ನೊಂದಿಗೆ ಏನಾದರೂ ಮಾತನಾಡುವ ಮೊದಲೆ ನೀವು ನನ್ನನ್ನು ಬೇರೆ ಕಡೆಗೆ ಒಯ್ಯಿರಿ. ಮುಂದೆ ನನ್ನನ್ನು ರಾಮನು ಕಾಣಲಿ.

ಜಿತವಂತಂ ಕೃತಾರ್ಥಂ ಚ ದ್ರಷ್ಟಾಹಮಚಿರಾದಿಮಮ್ ।
ಕರ್ಮ ಹ್ಯನೇನ ಕರ್ತವ್ಯಂ ಮಹದನ್ಯೈಃ ಸುದುಷ್ಕರಮ್
ನಿಷ್ಪಾದಯಿತ್ವಾ ತತ್ ಕರ್ಮ ತತೋ ಮಾಂ ದ್ರಷ್ಟುಮರ್ಹತಿ ॥೨೩॥

ಇನ್ನೊಬ್ಬರಿಂದ ಸಾಧ್ಯವಾಗದ ರಾವಣವಧಾದಿ ಕಾರ್ಯಗಳನ್ನು ಶ್ರೀರಾಮ ಮಾಡುವನು. ರಾವಣನನ್ನು ಗೆದ್ದು ಶ್ರೀರಾಮ ಕೃತಕಾರ್ಯನಾದ ಮೇಲೆ ಕೂಡಲೆ ನಾನೇ ಶ್ರೀರಾಮನ ದರ್ಶನ ಮಾಡುತ್ತೇನೆ.

ಅಥ ವಜ್ರೀ ತಮಾಮಂತ್ರ್ಯ ಮಾನಯಿತ್ವಾ ಚ ತಾಪಸಮ್ ।
ರಥೇನ ಹರಿಯುಕ್ತೇನ ಯಯೌ ದಿವಮರಿಂದಮಃ ॥೨೪॥

ವಜ್ರಾಯುಧದಾರಿ ಶತ್ರುದಮನ ಇಂದ್ರನು ಹೀಗೆ ಹೇಳಿ, ತಾಪಸ ಶರಭಂಗ-ರನ್ನು ಸತ್ಕರಿಸಿ ಅವರಿಂದ ಅನುಮತಿ ಪಡೆದು ಕುದುರೆಗಳನ್ನು ಹೂಡಿದ ರಥದಿಂದ ಸ್ವರ್ಗಕ್ಕೆ ಹೋದನು.

ಪ್ರಯಾತೇ ತು ಸಹಸ್ರಾಕ್ಷೇ ರಾಘವಃ ಸಪರಿಚ್ಛದೇ ।
ಅಗ್ನಿಹೋತ್ರಮುಪಾಸೀನಂ ಶರಭಂಗಮುಪಾಗಮತ್ ॥೨೫॥

ಸಪರಿಚ್ಛದಃ(ಪ)

ಸಹಸ್ರನೇತ್ರ ಇಂದ್ರನು ಹೊರಟ ಬಳಿಕ ಶ್ರೀರಾಮನು ಹೆಂಡತಿ ಸಹೋದರ-ನೊಂದಿಗೆ ಅಗ್ನಿಹೋತ್ರ ಮಾಡುತ್ತಿರುವ ಶರಭಂಗರ ಬಳಿ ಬಂದನು.

ತಸ್ಯ ಪಾದೌ ಚ ಸಂಗೃಹ್ಯ ರಾಮಃ ಸೀತಾ ಚ ಲಕ್ಷ್ಮಣಃ ।
ನಿಷೇದುಃ ಸಮನುಜ್ಞಾತಾ ಲಬ್ಧವಾಸಾ ನಿಮಂತ್ರಿತಾಃ ॥೨೬॥

ಶ್ರೀರಾಮ ಸೀತೆ ಲಕ್ಷ್ಮಣರು ಮುನಿಚರಣಕ್ಕೆ ನಮಸ್ಕರಿಸಿ ಮುನಿಗಳ ಅನುಜ್ಞೆ ಪಡೆದು ಅವರಿಂದ ನಿಮಂತ್ರಿತರಾಗಿ ಅವರು ತೋರಿದ ತಾಣದಲ್ಲಿ ಕುಳಿತರು.

ತತಃ ಶಕ್ರೋಪಯಾನಂ ತು ಪರ್ಯಪೃಚ್ಛತ್ ಸ ರಾಘವಃ ।
ಶರಭಂಗಶ್ಚ ತತ್ಸರ್ವಂ ರಾಘವಾಯ ನ್ಯವೇದಯತ್ ॥೨೭॥

ಬಳಿಕ ರಾಘವನು ಇಂದ್ರ ಹಿಂತೆರಳಿದ ಕಾರಣವನ್ನು ಕೇಳಿದನು. ಶರಭಂಗರು ಎಲ್ಲವನ್ನು ಶ್ರೀರಾಮನಲ್ಲಿ ನಿವೇದಿಸಿದರು.

ಮಾಮೇಷ ವರದೋ ರಾಮ ಬ್ರಹ್ಮಲೋಕಂ ನಿನೀಷತಿ ।
ಜಿತಮುಗ್ರೇಣ ತಪಸಾ ದುಷ್ಪ್ರಾಪಮಕೃತಾತ್ಮಭಿಃ ॥೨೮॥

ಶ್ರೀರಾಮ! ವರಪ್ರದನಾದ ಇಂದ್ರ ಉಗ್ರ ತಪಸ್ಸಿನಿಂದ ನಾನು ಗೆದ್ದ–ಜಿತೇಂದ್ರಿಯರಾಗದವರಿಗೆ ದುರ್ಲಭವಾದ ಬ್ರಹ್ಮಲೋಕವನ್ನು ಕುರಿತು ನನ್ನನ್ನು ಕೊಂಡೊಯ್ಯಲು ಬಯಸಿದ್ದಾನೆ.

ಅಹಂ ಜ್ಞಾತ್ವಾ ನರವ್ಯಾಘ್ರ ವರ್ತಮಾನಮದೂರತಃ ।
ಬ್ರಹ್ಮಲೋಕಂ ನ ಗಚ್ಛಾಮಿ ತ್ವಾಮದೃಷ್ಟ್ವಾ ಪ್ರಿಯಾತಿಥಿಮ್ ॥೨೯॥

ಪುರುಷಶ್ರೇಷ್ಠ! ಬಳಿಯಲ್ಲಿರುವ ಪ್ರಿಯ ಅತಿಥಿಯಾದ ನಿನ್ನನ್ನು ಕಾಣದೆ ನಾನು ಬ್ರಹ್ಮಲೋಕವನ್ನು ಕುರಿತು ಹೋಗುವುದಿಲ್ಲ!

ತ್ವಯಾಹಂ ಪುರುಷವ್ಯಾಘ್ರ ಧಾರ್ಮಿಕೇಣ ಮಹಾತ್ಮನಾ ।
ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವಸೇವಿತಮ್ ॥೩೦॥

ಧಾರ್ಮಿಕನು ಮಹಾತ್ಮನು ಆದ ನಿನ್ನನ್ನು ಭೇಟಿಮಾಡಿ ಬಳಿಕ ಸ್ವರ್ಗವನ್ನೋ ಅಥವಾ ಅದರ ಮೇಲಿನ ಬ್ರಹ್ಮಲೋಕವನ್ನೋ ಕುರಿತು ಹೋಗುತ್ತೇನೆ.

ಅಕ್ಷಯಾ ನರಶಾರ್ದೂಲ ಮಯಾ ಲೋಕಾ ಜಿತಾಃ ಶುಭಾಃ ।
ಬ್ರಾಹ್ಮ್ಯಾಶ್ಚ ನಾಕಪೃಷ್ಠ್ಯಾಶ್ಚ ಪ್ರತಿಗೃಹ್ಣೀಷ್ವ ಮಾಮಕಾನ್ ॥೩೧॥

ನರಶ್ರೇಷ್ಠನೆ! ನಾನು ಸಾಧನೆಯಿಂದ ಗೆದ್ದಿರುವ ಸ್ವರ್ಗಲೋಕ ಬ್ರಹ್ಮಲೋಕ–ಗಳನ್ನು ನಿನಗೆ ಅರ್ಪಿಸುತ್ತೇನೆ. ಸ್ವೀಕರಿಸು.

ಏವಮುಕ್ತೋ ನರವ್ಯಾಘ್ರಃ ಸರ್ವಶಾಸ್ತ್ರವಿಶಾರದಃ ।
ಋಷಿಣಾ ಶರಭಂಗೇಣ ರಾಘವೋ ವಾಕ್ಯಮಬ್ರವೀತ್ ॥೩೨॥

ಶರಭಂಗ ಋಷಿಗಳಿಂದ ಹೀಗೆ ಹೇಳಲ್ಪಟ್ಟ ಸರ್ವಶಾಸ್ತ್ರ ವಿಶಾರದನಾದ ಪುರುಷೋತ್ತಮ ರಾಘವನು ಈ ಮಾತನ್ನು ಹೇಳಿದನು.

ಅಹಮೇವಾಹರಿಷ್ಯಾಮಿ ಸರ್ವಲೋಕಾನ್ ಮಹಾಮುನೇ ।
ಆವಾಸಂ ತ್ವಹಮಿಚ್ಛಾಮಿ ಪ್ರದಿಷ್ಟಮಿಹ ಕಾನನೇ ॥೩೩॥

ನಾನೇ ನಿಮಗೆ ಎಲ್ಲ ಲೋಕಗಳನ್ನು ಕೊಡುತ್ತೇನೆ. ಪ್ರಕೃತ ಈ ಕಾಡಿನಲ್ಲಿ ನೀವು ತಿಳಿಸಿದ ಸ್ಥಳದಲ್ಲಿ ವಾಸ ಮಾಡಲು ಬಯಸಿದ್ದೇನೆ.

ರಾಘವೇಣೈವಮುಕ್ತಸ್ತು ಶಕ್ರತುಲ್ಯಬಲೇನ ವೈ ।
ಶರಭಂಗೋ ಮಹಾಪ್ರಾಜ್ಞಃ ಪುನರೇವಾಬ್ರವೀದ್ವಚಃ ॥೩೪॥

ಇಂದ್ರನಂತೆ ಬಲಶಾಲಿಯಾದ ರಾಘವನು ಹೀಗೆ ಮಾಡಿದಾಗ ಮಹಾಪ್ರಾಜ್ಞ ಶರಭಂಗರು ಮತ್ತೆ ಈ ಮಾತನ್ನು ಹೇಳಿದರು.

ಇಹ ರಾಮ ಮಹಾತೇಜಾಃ ಸುತೀಕ್ಷ್ಣೋ ನಾಮ ಧಾರ್ಮಿಕಃ ।
ವಸತ್ಯರಣ್ಯೇ ಧರ್ಮಾತ್ಮಾ ಸ ತೇ ವಾಸಂ ವಿಧಾಸ್ಯತಿ ॥೩೫॥

ವಸತ್ಯರಣ್ಯೇ ನಿಯತಃ । (ಪ) (ಗೋ)

ಶ್ರೀರಾಮ ಈ ಕಾಡಿನಲ್ಲಿ ಮಹಾತೇಜಸ್ವಿಗಳಾದ ಸುತೀಕ್ಷ್ಣ ಎಂಬ ಧಾರ್ಮಿಕ ಋಷಿಗಳು ವಾಸಮಾಡಿದ್ದಾರೆ. ಅವರು ನಿನಗೆ ಶ್ರೇಯಸ್ಸನ್ನು ಉಂಟುಮಾಡುತ್ತಾರೆ.

ಸುತೀಕ್ಷ್ಣಮಭಿಗಚ್ಛ ತ್ವಂ ಶುಚೌ ದೇಶೇ ತಪಸ್ವಿನಮ್ ।
ರಮಣೀಯೇ ವನೋದ್ದೇಶೇ ಸ ತೇ ವಾಸಂ ವಿಧಾಸ್ಯತಿ ॥೩೬॥

ನೀನು ತಪಸ್ವಿ ಸುತೀಕ್ಷ್ಣರನ್ನು ಭೇಟಿಯಾಗು. ಸುಂದರವು ಶುಚಿಯೂ ಆದ ವನಪ್ರದೇಶವೊಂದರಲ್ಲಿ ನಿನಗೆ ವಾಸಮಾಡಲು ವ್ಯವಸ್ಥೆ ಮಾಡುತ್ತಾರೆ.

ಇಮಾಂ ಮಂದಾಕಿನೀಂ ರಾಮ ಪ್ರತಿಸ್ರೋತಾಮನುವ್ರಜ ।
ನದೀಂ ಪುಷ್ಪೋಡುಪವಹಾಂ ತತ್ರ ತತ್ರ ಗಮಿಷ್ಯಸಿ ॥೩೭॥

ತತಸ್ತತ್ರ ಗಮಿಷ್ಯತಿ । (ಪ)

ಶ್ರೀರಾಮ! ಹೂವುಗಳೆಂಬ ದೋಣಿಗಳನ್ನು ಹೊಂದಿರುವ ಈ ಮಂದಾಕಿನೀ ನದಿಯ ಬದಿಯಲ್ಲಿ ಅದರ ವಿರುದ್ಧ ದಿಕ್ಕಿನಲ್ಲಿ ಹೋಗು. ಅಲ್ಲಿ ಅವರ ಆಶ್ರಮವಿದೆ.

ಏಷ ಪಂಥಾ ನರವ್ಯಾಘ್ರ ಮುಹೂರ್ತಂ ಪಶ್ಯ ತಾತ ಮಾಮ್ ।
ಯಾವಜ್ಜಹಾಮಿ ಗಾತ್ರಾಣಿ ಜೀರ್ಣಾಂ ತ್ವಚಮಿವೋರಗಃ ॥೩೮॥

ನರಶ್ರೇಷ್ಠ! ಇದೇ ದಾರಿ. ಆದರೆ ಮುಹೂರ್ತಕಾಲ ನನ್ನನ್ನೆ ನೋಡುತ್ತಿರು. ಪೊರೆಯನ್ನು ಬಿಡುವ ಸರ್ಪದಂತೆ ಜೀರ್ಣವಾದ ಈ ಶರೀರವನ್ನು ಬಿಡುತ್ತೇನೆ.

ತತೋಽಗ್ನಿಂ ಸುಸಮಾಧಾಯ ಹುತ್ವಾ ಚಾಜ್ಯೇನ ಮಂತ್ರವಿತ್ ।
ಶರಭಂಗೋ ಮಹಾತೇಜಾಃ ಪ್ರವಿವೇಶ ಹುತಾಶನಮ್ ॥೩೯॥

ತತೋಽಗ್ನಿಂ ಸ ಸಮಾಧಾಯ । (ಪ)(ಗೋ) ಚಾಜ್ಯೇನ ಮಂತ್ರವತ್ ॥ (ಪ)

ಬಳಿಕ ಮಂತ್ರವಿದರಾದ ಮಹಾತೇಜಸ್ವಿ ಶರಭಂಗರು ಅಗ್ನಿ ಪ್ರತಿಷ್ಠೆಯನ್ನು ಮಾಡಿ ತುಪ್ಪದಿಂದ ಆಹುತಿ ಹಾಕಿ ತಾವು ಅಗ್ನಿ ಪ್ರವೇಶ ಮಾಡಿದರು.

ತಸ್ಯ ರೋಮಾಣಿ ಕೇಶಾಂಶ್ಚ ದದಾಹಾಗ್ನಿರ್ಮಹಾತ್ಮನಃ ।
ಜೀರ್ಣಾಂ ತ್ವಚಂ ತಥಾಸ್ಥೀನಿ ಯಚ್ಚ ಮಾಂಸಂ ಸಶೋಣಿತಮ್॥೪೦॥

ಅಗ್ನಿಯು ಆ ಮಹಾತ್ಮರ ರೋಮ, ಕೇಶ, ಜೀರ್ಣವಾದ ತ್ವಚೆ, ಅಸ್ಥಿ, ಮಾಂಸ, ರಕ್ತ ಎಲ್ಲವನ್ನೂ ಸುಟ್ಟು ಹಾಕಿತು.

ರಾಮಸ್ತು ವಿಸ್ಮಿತೋ ಭ್ರಾತ್ರಾ ಭಾರ್ಯಯಾ ಚ ಸಹಾತ್ಮವಾನ್ ॥೪೧॥

ಈ ಶ್ಲೋಕ(ಪ)ದಲ್ಲಿ ಇಲ್ಲ.

ರಾಮನು ತಮ್ಮ ಲಕ್ಷ್ಮಣ, ಸತೀ ಸೀತೆಯೊಂದಿಗೆ ಅಚ್ಚರಿಗೊಂಡನು.

ಸ ಚ ಪಾವಕಸಂಕಾಶಃ ಕುಮಾರಃ ಸಮಪದ್ಯತ ।
ಉತ್ಥಾಯಾಗ್ನಿಚಯಾತ್ತಸ್ಮಾಚ್ಛರಭಂಗೋ ವ್ಯರೋಚಿತ ॥೪೨॥

ಆ ಶರಭಂಗರು ಅಗ್ನಿಯಂತೆ ಹೊಳೆಯುವ ಸುಂದರ ಕುಮಾರ ರೂಪವನ್ನು ಪಡೆದರು. ಅಗ್ನಿಯಿಂದ ಹೊರಬಂದು ಶರಭಂಗರು ಶೋಭಿಸಿದರು.

ಸಲೋಕಾನಾಹಿತಾಗ್ನೀನಾಮೃಷೀಣಾಂ ಭಾವಿತಾತ್ಮನಾಮ್ ।
ದೇವಾನಾಂ ಚ ವ್ಯತಿಕ್ರಮ್ಯ ಬ್ರಹ್ಮಲೋಕಂ ವ್ಯರೋಹತ ॥೪೩॥

ಅವರು ಅಗ್ನಿಹೋತ್ರಿಗಳ ಲೋಕಗಳನ್ನು ದೇವತೆಗಳ ಲೋಕವನ್ನೂ ದಾಟಿ ಬ್ರಹ್ಮಲೋಕವನ್ನು ಏರಿದರು.

ಸ ಪುಣ್ಯಕರ್ಮಾ ಭವನೇ ದ್ವಿಜರ್ಷಭಃ
ಪಿತಾಮಹಂ ಸಾನುಚರಂ ದದರ್ಶ ಹ ।
ಪಿತಾಮಹಾಶ್ಚಾಪಿ ಸಮೀಕ್ಷ್ಯ ತಂ ದ್ವಿಜಮ್
ನನಂದ ಸುಸ್ವಾಗತಮಿತ್ಯುವಾಚ ಹ ॥೪೪॥

ಪುಣ್ಯಕರ್ಮರಾದ ಆ ದ್ವಿಜಶ್ರೇಷ್ಠರು ಬ್ರಹ್ಮಲೋಕದಲ್ಲಿ ಅನುಚರರೊಂದಿಗಿರುವ ಪಿತಾಮಹ–ಬ್ರಹ್ಮದೇವರನ್ನು ಕಂಡರು. ಬ್ರಹ್ಮದೇವರೂ ಆ ಬ್ರಾಹ್ಮಣನನ್ನು ಅಭಿನಂದಿಸಿದರು. ಸುಸ್ವಾಗತ ಎಂದೂ ಹೇಳಿದರು. ಅಹೋ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐದನೇ ಸರ್ಗ ಮುಗಿಯಿತು.

❖

ಶರಭಂಗರ ಶರೀರಭಂಗ – ಮೋಕ್ಷ

ಅಸೀಚ್ಚ ತತ್ರ ಶರಭಂಗ ಇತಿ ಸ್ಮ ಜೀರ್ಣೋ
ಲೋಕಂ ಹರೇರ್ಜಿಗಮಿಷುರ್ಮುನಿರುಗ್ರತೇಜಾಃ ।
ತೇನಾದರೋಪಹೃತಸಾರ್ಘ್ಯಸಪರ್ಯಯಾ ಸಃ
ಪ್ರೀತೋ ದದೌ ನಿಜಪದಂ ಪರಮಂ ರಮೇಶಃ ॥

ಧರ್ಮೋ ಯತೋಽಸ್ಯ ವನಗಸ್ಯ ನಿತಾಂತಶಕ್ತೆ
ಹ್ರಾಸೇ ಸ್ವಧರ್ಮಕರಣಸ್ಯ ಹುತಾಶನಾದೌ ।
ದೇಹಾತ್ಯಯಃ ಸ ತತ ಏವ ತನುಂ ನಿಜಾಗ್ನೌ
ಸಂತ್ಯಜ್ಯ ರಾಮಪುರತಃ ಪ್ರಯಯೌ ಪರೇಶಮ್ ॥

(ಮ.ಭಾ.ತಾ.ನಿ. ೪-೧೮,೧೯)

ಶರಭಂಗರು ವಾನಪ್ರಸ್ಥಾಶ್ರಮಿಗಳು. ಅವರ ದೇಹ ವೃದ್ಧಾಪ್ಯದಿಂದ ಜರ್ಜರಿತವಾಗಿ ತಮ್ಮ ನಿತ್ಯ ಕರ್ಮಾನುಷ್ಠಾನಕ್ಕೂ ಅಸಮರ್ಥವಾಗಿತ್ತು. ವಿಷ್ಣುಲೋಕವನ್ನು ಬಯಸಿದ್ದ ಮಹಾ ತೇಜಸ್ವಿ ಶರಭಂಗರು ಶ್ರೀರಾಮನನ್ನು ಆದರದಿಂದ ಅರ್ಘ್ಯಾದಿಗಳನ್ನಿತ್ತು ಪೂಜಿಸಿದರು. ಸುಪ್ರೀತನಾದ ಶ್ರೀರಾಮ ಅವರಿಗೆ ತನ್ನ ಲೋಕವನ್ನಿತ್ತನು.

ತನ್ನ ವಿಹಿತಕರ್ಮಾನುಷ್ಠಾನಕ್ಕೆ ಬೇಕಾಗುವ ಶಕ್ತಿ ಪೂರ್ಣಹ್ರಾಸವಾದಾಗ ಅಗ್ನಿ ಮೊದಲಾದವುಗಳಲ್ಲಿ ಶರೀರತ್ಯಾಗ ಮಾಡುವುದು ವಾನಪ್ರಸ್ತಾಶ್ರಮಿಗಳಾದ ಶರಭಂಗರಿಗೆ ಧರ್ಮವಾಗಿತ್ತು. ಆದ್ದರಿಂದಲೇ ಶ್ರೀರಾಮನೆದುರು ಅಗ್ನಿಯಲ್ಲಿ ಶರೀರ ತ್ಯಾಗ ಮಾಡಿ ಶರಭಂಗರು ಪರಮಾತ್ಮನನ್ನು ಹೊಂದಿದರು. ಇದು ಆತ್ಮಹತ್ಯೆಯಾಗುವುದಿಲ್ಲ. ಪುಣ್ಯವೇ ಲಭಿಸುತ್ತದೆ. ವಿಷ್ಣುಲೋಕವು ದೊರಕುತ್ತದೆ.

❖

ಷಷ್ಠಃ ಸರ್ಗಃ

ಕಥಾಸಾರಾಂಶ– ಶರಭಂಗ ಮುನಿಗಳು ಬ್ರಹ್ಮಲೋಕಕ್ಕೆ ಹೊರಟಬಳಿಕ ಇತ್ತ ಮುನಿಗಳೆಲ್ಲ ಶ್ರೀರಾಮಚಂದ್ರನ ಬಳಿಗೆ ಬಂದರು.

ಪ್ರಜೆಗಳನ್ನು ರಾಜ ತನ್ನ ಮಕ್ಕಳಂತೆ ಮಮತೆಯಿಂದ ಸದಾ ರಕ್ಷಿಸಬೇಕು. ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ಕಂದಾಯವಾಗಿ ಪಡೆದು ಅವರನ್ನು ಸರಿಯಾಗಿ ರಕ್ಷಣೆ ಮಾಡದಿದ್ದ ರಾಜ ಅಧರ್ಮ ಭಾಗಿಯಾಗುತ್ತಾನೆ.

ಯಾವ ರಾಜನ ರಾಜ್ಯದಲ್ಲಿ ಋಷಿಮುನಿಗಳು ನೆಮ್ಮದಿಯಾಗಿ ಸಾಧನಾನುಷ್ಠಾನ ಮಾಡಿಕೊಂಡಿರುವರೋ ಆ ಮಹಾತ್ಮರ ಪುಣ್ಯದ ನಾಲ್ಕನೆಯ ಒಂದಂಶವನ್ನು ರಾಜ ಪಡೆಯುವನು.

ಈ ವನದಲ್ಲಿ ಅನೇಕ ಮುನಿಗಳನ್ನು ರಾಕ್ಷಸರು ಸಂಹಾರ ಮಾಡಿದ್ದಾರೆ. ನಾವು ನಿನ್ನಲ್ಲಿ ಶರಣು ಬಂದಿರುವುದು ಆ ರಾಕ್ಷಸರಿಂದ ಮುನಿಗಳನ್ನು ರಕ್ಷಣೆ ಮಾಡು ಎಂದು ಪ್ರಾರ್ಥಿಸುವುದಕ್ಕಾಗಿ ಎಂದರು.

ಋಷಿಗಳ್ಳ ಅಹವಾಲನ್ನು ಕೇಳಿ ಶ್ರೀರಾಮಚಂದ್ರ, 'ನಾನು ನಿಮ್ಮ ಆಜ್ಞಾಪಾಲಕ, ನಿಮ್ಮ ಸೇವೆಗಾಗಿಯೇ ಪಿತೃವಾಕ್ಯ ಪರಿಪಾಲನೆಯ ನೆಪದಲ್ಲಿ ಈ ವನದಲ್ಲಿ ಸಂಚರಿಸುತ್ತಿದ್ದೇನೆ.

ದುರುಳ ರಕ್ಕಸರನ್ನು ಸಂಹರಿಸಿ ನಿಮ್ಮನ್ನು ಕಾಪಾಡುತ್ತೇನೆಂದನು. ಹೀಗೆ ಅಭಯವಿತ್ತು ಋಷಿಮುನಿಗಳೊಂದಿಗೆ ಸುತೀಕ್ಷ್ಣಮುನಿಗಳ ಆಶ್ರಮಕ್ಕೆ ಶ್ರೀರಾಮನು ಹೊರಟನು.

ರಕ್ಷೋವಧಪ್ರತಿಜ್ಞಾನಮ್

ಶರಭಂಗೇ ದಿವಂ ಯಾತೇ ಮುನಿಸಂಘಾಃ ಸಮಾಗತಾಃ ।
ಅಭ್ಯಗಚ್ಛಂತ ಕಾಕುತ್ಸ್ಥಂ ರಾಮಂ ಜ್ವಲಿತತೇಜಸಮ್ ॥೧॥

ಶರಭಂಗರು ದಿವಂಗತರಾದ ಬಳಿಕ ಋಷಿ ಸಮುದಾಯಗಳು ಉಜ್ವಲತೇಜಸ್ವಿ ಕಕುತ್ಸ್ಥವಂಶದ ರಾಮನ ಬಳಿ ಬಂದರು.

ವೈಖಾನಸಾ ವಾಲಖಿಲ್ಯಾಃ ಸಂಪ್ರಾಕ್ಷಾಲಾ ಮರೀಚಿಪಾಃ ।
ಅಶ್ಮಕುಟ್ಟಾಶ್ಚ ಬಹವಃ ಪತ್ರಾಹಾರಾಶ್ಚ ತಾಪಸಾಃ ॥೨॥

ದಂತೋಲೂಖಲಿನಶ್ಚೈವ ತಥೈವೋನ್ಮಜ್ಜಕಾಃ ಪರೇ ।
ಗಾತ್ರಶಯ್ಯಾ ಅಶಯ್ಯಾಶ್ಚ ತಥೈವಾನಾವಕಾಶಿಕಾಃ ॥೩॥

ಇಂತಹ ಮುನಿಗಳು ಬಂದಿದ್ದರು–ಧಾರ್ಮಿಕರಾದ, ಬ್ರಹ್ಮದೇವರ ಉಗುರಿನಿಂದ ಹುಟ್ಟಿದ ವೈಖಾನಸರು– 'ಯೇ ನಖಾಸ್ತೇ ವೈಖಾನಸಾಃ' ಶ್ರುತಿ. ಬ್ರಹ್ಮದೇವರ ರೋಮದಿಂದ ಹುಟ್ಟಿದ ವಾಲಖಿಲ್ಯರು– 'ಯೇ ವಾಲಾಸ್ತೇ ವಾಲಖಿಲ್ಯಾಃ'–ಶ್ರುತಿ. ಯಾವಾಗಲೂ ಮೈ ತೊಳೆದುಕೊಳ್ಳುತ್ತಿದ್ದ 'ಸಂಪ್ರಾಕ್ಷಳ'ರು. ಸೂರ್ಯಚಂದ್ರರ ಕಿರಣಗಳನ್ನು ಕುಡಿದುಕೊಂಡೆ ಬದುಕುವ 'ಮರೀಚಿಪರು' ಬೇಯಿಸದ ಹಸಿ ಆಹಾರ ಪದಾರ್ಥಗಳನ್ನು ಕಲ್ಲಿನಿಂದ ಕುಟ್ಟಿ ಅದನ್ನು ಮಾತ್ರ ತಿಂದು ಬದುಕುವ ಬಹಳ 'ಅಶ್ಮಕುಟ್ಟ'ರು. ಎಲೆಗಳನ್ನು ಮಾತ್ರ ಆಹಾರವಾಗಿಸಿಕೊಂಡ, 'ಪತ್ರಾಹಾರ'ರು. ಹಲ್ಲುಗಳನ್ನೆ ಒರಳಾಗಿಸಿ ಕೊಂಡವರು– 'ದಂತೋಲೂಖಲಿ'ಗಳು. ಕಂಠದವರೆಗಿನ ನೀರಿನಲ್ಲಿ ನಿಂತು ತಪಸ್ಸು ಮಾಡುವವರು=ಉನ್ಮಜ್ಜಕರು. ತಮ್ಮ ದೇಹವನ್ನೆ ಹಾಸಿಗೆ ಮಾಡಿಕೊಂಡು ಕುಳಿತುಕೊಂಡೇ ನಿದ್ರೆ ಮಾಡುವವರು– 'ಗಾತ್ರಶಯ್ಯ'ರು. ಎಂದೂ ನಿದ್ರೆಯನ್ನೆ ಮಾಡದವರು– ಅಶಯ್ಯರು. ಹಗಲಿರುಳು ಸತ್ಕರ್ಮ ನಿರತ ರಾದುದರಿಂದ ಅವಕಾಶವೇ ಇರದವರು– ಅನವಕಾಶಿಕರು. ಕೆಲವು ಪಾಠದಲ್ಲಿ ಮಳೆ ಬಿಸಿಲು ಗಾಳಿಗಳಲ್ಲಿಯೂ, ಆವರಣವಿಲ್ಲದ ದೇಶದಲ್ಲಿ ನೆಲೆಸುವವರು– 'ಅಭ್ರಾವಕಾಶಕ'ರು.

ಮುನಯಃ ಸಲಿಲಾಹಾರಾ ವಾಯುಭಕ್ಷಾಸ್ತಥಾಪರೇ ।
ಆಕಾಶನಿಲಯಾಶ್ಚೈವ ತಥಾ ಸ್ಥಂಡಿಲಶಾಯಿನಃ ॥೪॥

ಶಾಸ್ತ್ರಮನನರತರಾದ ಮುನಿಗಳು–ನೀರನ್ನು ಮಾತ್ರ ಕುಡಿದು ಬದುಕುವವರು. ಕೇವಲ ಗಾಳಿಯನ್ನು ಕುಡಿದು ಬದುಕುತ್ತಿದ್ದವರು. ಯಾವ ಮೇಲಿನ ಆವರಣಗಳೂ ಇಲ್ಲದ ಸ್ಥಳದಲ್ಲಿಯ ವಾಸ ಮಾಡುವ ಅಥವಾ ಮರದ ತುದಿಯಲ್ಲಿಯೇ ವಾಸಮಾಡುವ– 'ಆಕಾಶನಿಲಯ'ರು. ಬರೆ ನೆಲದಲ್ಲಿಯೇ ಮಲಗುವ– 'ಸ್ಥಂಡಿಲ-ಶಾಯಿ'ಗಳು.

ತಥೋರ್ದ್ಧವಾಸಿನೋ ದಾಂತಾಸ್ತಥಾರ್ದ್ರಪಟವಾಸಸಃ ।
ಸಜಪಾಶ್ಚ ತಪೋನಿತ್ಯಾಸ್ತಥಾ ಪಂಚತಪೋಽನ್ವಿತಾಃ ॥೫॥

ವ್ರತೋಪವಾಸಿನೋ - ಪಾಠಾಂತರ.

ಬಗೆಬಗೆಯ ವ್ರತ ಉಪವಾಸಗಳಲ್ಲಿನಿರತರು. ಗಿರಿಶಿಖರ ಮುಂತಾದ ಸ್ಥಾನದಲ್ಲಿ ವಾಸಿಸುವರು ಜಿತೇಂದ್ರಿಯರು. ಯಾವಾ ಗಲೂ ಒದ್ದೆ ಬಟ್ಟೆಯಲ್ಲಿಯೇ ಇರುವವರು, ಯಾವಾಗಲು ಜಪದಲ್ಲಿಯೇ ನಿರತರಾದವರು. ಸ್ವಾಧ್ಯಾಯದಲ್ಲಿ ನಿರತರು. ಪಂಚಾಗ್ನಿ ತಪಸ್ವಿಗಳು=ಮೇಲೆ ಸೂರ್ಯನ ತಾಪ. ತನ್ನ ಸುತ್ತ ನಾಕು ದಿಕ್ಕಿನಲ್ಲಿಯೂ ಅಗ್ನಿಯನ್ನಿರಿಸಿ ಮಧ್ಯದಲ್ಲಿ ಕುಳಿತು ತಪಸ್ಸು ಮಾಡುವವರು.

ಸರ್ವೇ ಬ್ರಾಹ್ಮ್ಯಾ ಶ್ರಿಯಾ ಜುಷ್ಟಾ ದೃಢಯೋಗಾಃ ಸಮಾಹಿತಾಃ ।
ಶರಭಂಗಾಶ್ರಮೇ ರಾಮಮಭಿಜಗ್ಮುಶ್ಚ ತಾಪಸಾಃ ॥೬॥

ಎಲ್ಲರು ಬ್ರಹ್ಮತೇಜಸ್ವಿಗಳು. ದೃಢವಾದ ಯೋಗವುಳ್ಳವರು. ಸಮಾಧಾನದ ಚಿತ್ತದವರು. ಕೆಲವು ಪಾಠದಲ್ಲಿ–ದೃಢಯೋಗ ಸಮಾಹಿತಾಃ ಎಂದಿದೆ–ದೃಢವಾದ ಯೋಗದಲ್ಲಿ ಏಕಾಗ್ರತೆಯುಳ್ಳವರು. ಇಂತಹ ತಾಪಸರು ಶರಭಂಗರ ಆಶ್ರಮದಲ್ಲಿ ರಾಮನ ಎದುರು ಬಂದರು.

ಅಭಿಗಮ್ಯ ಚ ಧರ್ಮಜ್ಞಾ ರಾಮಂ ಧರ್ಮಭೃತಾಂ ವರಮ್ ।
ಊಚುಃ ಪರಮಧರ್ಮಜ್ಞಮೃಷಿಸಂಘಾಃ ಸಮಾಹಿತಾಃ ॥೭॥

'ಸಮಾಗತಾಃ' ಕೆಲವು ಪಾಠದಲ್ಲಿ..

ಧರ್ಮಾತ್ಮರಲ್ಲಿ ಶ್ರೇಷ್ಠನು, ಪರಮಧರ್ಮಜ್ಞನು ಆದ ಶ್ರೀರಾಮನ ಬಳಿಗೆ ಬಂದು ಧರ್ಮವನ್ನು ಬಲ್ಲ ಋಷಿಗಳ ಗುಂಪುಗಳು ಹೀಗೆ ಮಾತನಾಡಿದವು.

ತ್ವಮಿಕ್ಷ್ವಾಕುಕುಲಸ್ಯಾಸ್ಯ ಪೃಥಿವ್ಯಾಶ್ಚ ಮಹಾರಥ ।
ಪ್ರಧಾನಶ್ಚಾಸಿ ನಾಥಶ್ಚ ದೇವಾನಾಂ ಮಘವಾನಿವ ॥೮॥

'ಮಹಾರಥಃ' ಕೆಲವು ಪಾಠದಲ್ಲಿ

ಮಹಾರಥ ಶ್ರೀರಾಮನೇ! ನೀನು ಇಕ್ಷ್ವಾಕುವಂಶಕ್ಕೂ ಈ ಪೃಥಿವಿಗೂ ಪ್ರಧಾನಸ್ವಾಮಿಯಾಗಿರುವಿ–ದೇವತೆಗಳಿಗೆ ಇಂದ್ರನಂತೆ.

ವಿಶ್ರುತಸ್ತ್ರಿಷು ಲೋಕೇಷು ಯಶಸಾ ವಿಕ್ರಮೇಣ ಚ ।
ಪಿತೃವ್ರತತ್ವಂ ಸತ್ಯಂ ಚ ತ್ವಯಿ ಧರ್ಮಶ್ಚ ಪುಷ್ಕಲಃ ॥೯॥

ಪಿತೃಭಕ್ತಿಶ್ಚ -ಪಾಠಾಂತರ.

ಯಶಸ್ಸು ವಿಕ್ರಮಗಳಿಂದ ಮೂರು ಲೋಕಗಳಲ್ಲಿ ನೀನು ವಿಖ್ಯಾತನಾಗಿರುವಿ. ಪಿತೃಭಕ್ತಿ, ಸತ್ಯ, ಪುಷ್ಕಲವಾದ ಧರ್ಮ–ಇವು ನಿನ್ನಲ್ಲಿ ನೆಲೆಸಿದೆ.

ತ್ವಾಮಾಸಾದ್ಯ ಮಹಾತ್ಮಾನಂ ಧರ್ಮಜ್ಞಂ ಧರ್ಮವತ್ಸಲಮ್ ।
ಅರ್ಥಿತ್ವಾನ್ನಾಥ ವಕ್ಷ್ಯಾಮಸ್ತಚ್ಚ ನಃ ಕ್ಷಂತುಮರ್ಹಸಿ ॥೧೦॥

ಮಹಾತ್ಮನು, ಧರ್ಮಜನು, ಧರ್ಮವತ್ಸಲನೂ ಆದ ಸ್ವಾಮಿಯೇ! ನಿನ್ನ ಬಳಿ ಬಂದು ಸ್ವಾರ್ಥನಿವೇದನೆಯನ್ನು ಮಾಡುತ್ತಿದ್ದೇವೆ. ಇದಕ್ಕಾಗಿ ನೀನು ನಮ್ಮನ್ನು ಮನ್ನಿಸು.

ಅಧರ್ಮಸ್ತು ಮಹಾಂಸ್ತಾತ ಭವೇತ್ತಸ್ಯ ಮಹೀಪತೇಃ ।
ಯೋ ಹರೇದ್ಬಲಿಷಡ್ಭಾಗಂ ನ ಚ ರಕ್ಷತಿ ಪುತ್ರವತ್ ॥೧೧॥

ಅಧರ್ಮಃ ಸುಮಹಾನ್ನಾಥ ಭವೇತ್ತಸ್ಯ ತು ಭೂಪತೇಃ–ಪಾಠಾಂತರ.

ಪ್ರಜೆಗಳ ಆದಾಯದಲ್ಲಿ ಆರನೇ ಒಂದು ಭಾಗವನ್ನು ಪಡೆದು ಯಾವ ರಾಜ ಪ್ರಜೆಗಳನ್ನು ಮಕ್ಕಳಂತೆ ರಕ್ಷಿಸುವುದಿಲ್ಲ ಅವನಿಗೆ ಮಹಾ ಅಧರ್ಮ ಬರುತ್ತದೆ.

ಯುಂಜಾನಃ ಸ್ವಾನಿವ ಪ್ರಾಣಾನ್ ಪ್ರಾಣೈರಿಷ್ಟಾನ್ ಸುತಾನಿವ ।
ನಿತ್ಯಯುಕ್ತಃ ಸದಾ ರಕ್ಷನ್ ಸರ್ವಾನ್ ವಿಷಯವಾಸಿನಃ ॥೧೨॥

ಪ್ರಾಪ್ನೋತಿ ಶಾಶ್ವತೀಂ ರಾಮ ಕೀರ್ತಿಂ ಸ ಬಹುವಾರ್ಷಿಕೀಮ್ ।
ಬ್ರಹ್ಮಣಃ ಸ್ಥಾನಮಾಸಾದ್ಯ ತತ್ರ ಚಾಪಿ ಮಹೀಯತೇ ॥೧೩॥

ನಿತ್ಯದಲ್ಲಿ ಸ್ವಕರ್ತವ್ಯನಿರತನಾಗಿ ದೇಶವಾಸಿ ಪ್ರಜೆಗಳನ್ನು ತನ್ನ ಪ್ರಾಣಗಳನ್ನು ಎಂಬಂತೆ, ಪ್ರಾಣಗಳಿಗಿಂತಲೂ ಅಧಿಕ ಪ್ರಿಯರಾದ ಮಕ್ಕಳನ್ನು ಎಂಬಂತೆ ಸದಾ ಎಚ್ಚರಿಕೆಯಿಂದ ಯಾರು ರಕ್ಷಣೆ ಮಾಡುತ್ತಾನೆ, ರಾಮ! ಅಂತಹ ರಾಜ ಬಹುವರ್ಷಗಳ ಕಾಲ ಶಾಶ್ವತವಾದ ಕೀರ್ತಿಯನ್ನು ಪಡೆಯುತ್ತಾನೆ. ಬ್ರಹ್ಮಲೋಕವನ್ನು ಹೊಂದಿ ಅಲ್ಲಿಯೂ ಪೂಜ್ಯನಾಗುತ್ತಾನೆ.

ಯತ್ ಕರೋತಿ ಪರಂ ಧರ್ಮಂ ಮುನಿರ್ಮೂಲಫಲಾಶನಃ ।
ತತ್ರ ರಾಜ್ಞಶ್ಚತುರ್ಭಾಗಃ ಪ್ರಜಾ ಧರ್ಮೇಣ ರಕ್ಷತಃ ॥೧೪॥

ಕಂದಮೂಲಗಳನ್ನು ಆಹಾರವಾಗಿಸಿಕೊಂಡ ಮುನಿಯು ಯಾವ ಶ್ರೇಷ್ಠ ಧರ್ಮವನ್ನು ಆಚರಿಸುತ್ತಾನೆ ಅದರ ನಾಲ್ಕನೇ ಒಂದು ಭಾಗವು ಪ್ರಜೆಗಳನ್ನು ಧರ್ಮದಿಂದ ರಕ್ಷಣೆ ಮಾಡುವ ರಾಜನಿಗೆ ತಲುಪುತ್ತದೆ.

ಸೋಽಯಂ ಬ್ರಾಹ್ಮಣಭೂಯಿಷ್ಠೋ ವಾನಪ್ರಸ್ಥಗಣೋ ಮಹಾನ್ ।
ತ್ವನ್ನಾಥೋಽನಾಥವದ್ರಾಮ ರಾಕ್ಷಸೈರ್ವಧ್ಯತೇ ಭೃಶಮ್ ॥೧೫॥

ಬ್ರಾಹ್ಮಣರೇ ಹೆಚ್ಚಾಗಿರುವ ಈ ದೊಡ್ಡ ವಾನಪ್ರಸ್ಥರ ಸಮುದಾಯಕ್ಕೆ ನೀನೇ ಸ್ವಾಮಿಯು. ಆದರೂ ಅನಾಥರಂತೆ ರಾಕ್ಷಸರಿಂದ ಬಹಳವಾಗಿ ಸಾಯುತ್ತಿದೆ.

ಏಹಿ ಪಶ್ಯ ಶರೀರಾಣಿ ಮುನೀನಾಂ ಭಾವಿತಾತ್ಮನಾಮ್ ।
ಹತಾನಾಂ ರಾಕ್ಷಸೈಘೋರೈರ್ಬಹೂನಾಂ ಬಹುಧಾ ವನೇ ॥೧೬॥

ಬಾ. ನೋಡು ಕಾಡಿನಲ್ಲಿ ಘೋರ ರಾಕ್ಷಸರಿಂದ ಬಹಳ ಬಗೆಯಿಂದ ಹತರಾದ ಶುದ್ಧಾತ್ಮ ಮುನಿಗಳ ಶರೀರಗಳನ್ನು ನೋಡು.

ಪಂಪಾನದಿನಿವಾಸಾನಾಮನು ಮಂದಾಕಿನೀಮಪಿ ।
ಚಿತ್ರಕೂಟಾಲಯಾನಾಂ ಚ ಕ್ರಿಯತೇ ಕದನಂ ಮಹತ್ ॥೧೭॥

ಪಂಪಾಸರೋವರ ಹಾಗೂ ಅದರ ಬಳಿಯ ನದೀ ನಿವಾಸಿಗಳು, ಮಂದಾಕಿನೀ ತೀರನಿವಾಸಿಗಳು, ಚಿತ್ರಕೂಟ ನಿವಾಸಿಗಳೂ ಆದ ಮುನಿಗಳ ವಿಷಯದಲ್ಲಿ ರಾಕ್ಷಸರು ದೊಡ್ಡ ಕದನ ಮಾಡುತ್ತಾರೆ.

ಏವಂ ವಯಂ ನ ಮೃಷ್ಯಾಮೋ ವಿಪ್ರಕಾರಂ ತಪಸ್ವಿನಾಮ್ ।
ಕ್ರಿಯಾಮಾಣಂ ವನೇ ಘೋರಂ ರಕ್ಷೋಭಿರ್ಮಮಕರ್ಮಭಿಃ ॥೧೮॥

ಭಯಂಕರ ಕೃತ್ಯವೆಸಗುವ ರಕ್ಕಸರಿಂದ ವನದಲ್ಲಿ ತಪಸ್ವಿಗಳಿಗಾಗುತ್ತಿರುವ ಘೋರ ದುಃಖವನ್ನು ಹಿಂಸೆಯನ್ನೂ ನಾವು ಸಹಿಸಲಾರೆವು.

'ವಿಕಾರೋ ವಿಪ್ರಕಾಶಃ ಸ್ಯಾತ್' -ಇತ್ಯಮರಃ ।

ತತಸ್ತಾ ತ್ವಂ ಶರಣಾರ್ಥಂ ಚ ಶರಣ್ಯಂ ಸಮುಪಸ್ಥಿತಾಃ ।
ಪರಿಪಾಲಯ ನೋ ರಾಮ ವಧ್ಯಮಾನಾನ್ನಿಶಾಚರೈಃ ॥೧೯॥

ರಾಮ! ಎಲ್ಲರಿಗೂ ಆಸರೆಯಾದ ನಿನ್ನಲ್ಲಿ ರಕ್ಷಣೆಗಾಗಿ ಶರಣಾಗತರಾಗಿದ್ದೇವೆ. ನಿಶಾಚರರಿಂದ ಹಿಂಸೆಗೊಳಗಾಗುತ್ತಿರುವ ನಮ್ಮನ್ನು ಪರಿಪಾಲಿಸು.

ಪರಾ ತ್ವತ್ತೋ ಗತಿರ್ವೀರ ಪೃಥಿವ್ಯಾಂ ನೋಪಪದ್ಯತೇ ।
ಪರಿಪಾಲಯ ನಃ ಸರ್ವಾನ್ ರಾಕ್ಷಸೇಭ್ಯೋ ನೃಪಾತ್ಮಜ ॥೨೦॥

ವೀರನೇ! ಈ ಪೃಥಿವಿಯಲ್ಲಿ ನಿನಗಿಂತ ದೊಡ್ಡ ಆಸರೆ ಬೇರಾರೂ ಇಲ್ಲ. ರಾಜಪುತ್ರ ! ನಮ್ಮನ್ನೆಲ್ಲ ರಾಕ್ಷಸರಿಂದ ಕಾಪಾಡು.

ಏತಚ್ಛ್ರುತ್ವಾ ತು ಕಾಕುತ್ಸ್ಥಸ್ತಾಪಸಾನಾಂ ತಪಸ್ವಿನಾಮ್ ।
ಇದಂ ಪ್ರೋವಾಚ ಧರ್ಮಾತ್ಮಾ ಸರ್ವಾನೇನ ತಪಸ್ವಿನಃ ॥೨೧॥

ಧರ್ಮಾತ್ಮನಾದ ಕಾಕುತ್ಸ್ಥನು ತಪಸ್ವೀ ಋಷಿಗಳ ಈ ಮಾತನ್ನು ಕೇಳಿ ಎಲ್ಲ ತಾಪಸರನ್ನು ಕುರಿತು ಇದನ್ನು ಹೇಳಿದನು.

ನೈವಮರ್ಹತ ಮಾಂ ವಕ್ತುಮಾಜ್ಞಾಪ್ಯೋಽಹಂ ತಪಸ್ವಿನಾಮ್ ।
ಕೇವಲೇನಾತ್ಮಕಾರ್ಯೇಣ ಪ್ರವೇಷ್ಟವ್ಯಂ ಮಯಾ ವನಮ್ ॥೨೨॥

ಮುನಿಗಳೇ! ತಾವು ಹೀಗೆ ಹೇಳಬೇಡಿ. ನಾನು ತಪಸ್ವಿಗಳಾದ ನಿಮ್ಮ ಆಜ್ಞಾಧಾರಕನಾಗಿದ್ದೇನೆ. ಕೇವಲ ಸ್ವಕರ್ತವ್ಯವಾಗಿ ನಾನು ವನವನ್ನು ಪ್ರವೇಶ ಮಾಡೋಣವಾಗಿದೆ.

ವಿಪ್ರಕಾರಮಪಾಕ್ರಷ್ಟುಂ ರಾಕ್ಷಸೈರ್ಭವತಾಮಿಮಮ್ ।
ಪಿತುಸ್ತು ನಿರ್ದೇಶಕರಃ ಪ್ರವಿಷ್ಟೋಽಹಮಿದಂ ವನಮ್ ॥೨೩॥

ರಾಕ್ಷಸರಿಂದ ನಿಮಗಾಗುತ್ತಿರುವ ದುಃಖವನ್ನು ಪರಿಹರಿಸಲು ಪಿತೃಆಜ್ಞಾ ಪಾಲಕನಾಗಿ ಈ ಕಾಡಿಗೆ ಬಂದಿದ್ದೇನೆ.

ಭವತಾಮರ್ಥ ಸಿದ್ಧ್ಯರ್ಥಮಾಗತೋಽಹಂ ಯದೃಚ್ಛಯಾ ।
ತಸ್ಯ ಮೇಽಯಂ ವನೇ ವಾಸೋ ಭವಿಷ್ಯತಿ ಮಹಾಫಲಃ ॥೨೪॥

ನಿಮ್ಮ ಪ್ರಯೋಜನ ಸಿದ್ಧಿಗಾಗಿ ದೈವೇಚ್ಛೆಯಿಂದ ನಾನು ಬಂದವನಾಗಿದ್ದೇನೆ. ಇದರಿಂದ ಈ ನನ್ನ ವನವಾಸ ಮಹಾಫಲವುಳ್ಳದ್ದಾಗಿದೆ.

ತಪಸ್ವಿನಾಂ ರಣೇ ಶತ್ರೂನ್ ಹಂತುಮಿಚ್ಛಾಮಿ ರಾಕ್ಷಸಾನ್ ।
ಪಶ್ಯಂತು ವೀರ್ಯಮೃಷಯಃ ಸಭ್ರಾತುರ್ಮೇ ತಪೋಧನಾಃ ॥೨೫॥

ತಪಸ್ವಿಗಳ ಶತ್ರುಗಳಾದ ರಾಕ್ಷಸರನ್ನು ಯುದ್ಧದಲ್ಲಿ ಕೊಲ್ಲಲು ಬಯಸಿದ್ದೇನೆ. ತಪೋಧನರಾದ ಋಷಿಗಳು ತಮ್ಮ ಲಕ್ಷ್ಮಣನಿಂದ ಕೂಡಿದ ನನ್ನ ವೀರ್ಯವನ್ನು ನೋಡಿರಿ.

ದತ್ತ್ವಾ ಭಯಂ ಚಾಪಿ ತಪೋಧನಾನಾಂ
ಧರ್ಮೇ ಧೃತಾತ್ಮಾ ಸಹ ಲಕ್ಷ್ಮಣೇನ ।
ತಪೋಧನೈಶ್ಚಾಪಿ ಸಭಾಜ್ಯವೃತ್ತಃ
ಸುತೀಕ್ಷ್ಣಮೇವಾಭಿಜಗಾಮ ವೀರಃ ॥೨೬॥

ಧರ್ಮನಿಯತನಾದ ಶ್ರೀರಾಮ ಲಕ್ಷ್ಮಣನೊಂದಿಗೆ ತಪೋಧನರಿಗೆ ಅಭಯವಿತ್ತ. ತಪೋಧನರಿಂದಲೂ ಆದರಿಸಿದ ನಡತೆಯುಳ್ಳವನಾಗಿ ವೀರರಾಮನು 'ಸುತೀಕ್ಷ್ಣ' ಮುನಿಯ ಬಳಿಗೆ ಧಾವಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಆರನೇ ಸರ್ಗ ಮುಗಿಯಿತು.

❖

ಸಪ್ತಮಃ ಸರ್ಗಃ

ಕಥಾಸಾರಾಂಶ– ಶ್ರೀರಾಮ ಮಹರ್ಷಿಗಳೊಂದಿಗೆ ಹಾಗೂ ಸೀತಾಲಕ್ಷ್ಮಣರೊಂದಿಗೆ ಸುತೀಕ್ಷ್ಣಮುನಿಗಳ ಆಶ್ರಮಕ್ಕೆ ಬಂದ. ಸಂತಸಗೊಂಡ ಸುತೀಕ್ಷ್ಣರು ಪ್ರೀತಿ ಆದರಗಳಿಂದ ಸ್ವಾಗತಿಸಿದರು. ತಮ್ಮ ಆಶ್ರಮದಲ್ಲಿಯೇ ವಾಸ ಮಾಡುವಂತೆ ಆಜ್ಞಾಪಿಸಿದರು. ಸಂಜೆಯಾಯಿತು. ಶ್ರೀರಾಮ ಲಕ್ಷ್ಮಣರು ಸಂಧ್ಯಾವಂದನೆ ಪೂರೈಸಿದರು. ರಾತ್ರಿಗೆ ತಾಪಸರ ಆಹಾರವನ್ನು ಸುತೀಕ್ಷ್ಣರು ರಾಮನಿಗೆ ಕೊಟ್ಟು ಉಪಚರಿಸಿದರು.

❖

ಸುತೀಕ್ಷ್ಣಾಶ್ರಮಃ

ರಾಮಸ್ತು ಸಹಿತೋ ಭ್ರಾತ್ರಾ ಸೀತಯಾ ಚ ಪರಂತಪಃ ।
ಸುತೀಕ್ಷ್ಣಸ್ಯಾಶ್ರಮಪದಂ ಜಗಾಮ ಸಹ ತೈರ್ದ್ವಿಜೈಃ ॥೧॥

ಶ್ರೀರಾಮ ಲಕ್ಷ್ಮಣ ಸೀತೆಯರಿಂದೊಡಗೂಡಿ ಮಹರ್ಷಿಗಳೊಂದಿಗೆ ಸುತೀಕ್ಷ್ಣರ ಆಶ್ರಮಕ್ಕೆ ತೆರಳಿದ.

ಸ ಗತ್ವಾ ದೂರಮಧ್ವಾನಂ ನದೀಸ್ತೀರ್ತ್ವಾ ಬಹೂದಕಾಃ ।
ದದರ್ಶ ವಿಪುಲಂ ಶೈಲಂ ಮಹಾಮೇಘಮಿವೋನ್ನತಮ್ ॥೨॥

ಮಹಾಮೇರುಮಿವೋನ್ನತಂ–ಪಾಠಾಂತರ.

ಆ ರಾಮನು ತುಂಬ ನೀರಿರುವ ಅನೇಕ ನದಿಗಳನ್ನು ದಾಟಿ ಮುಂದೆ ಹೋದಾಗ ವಿಶಾಲ ಹಾಗು ಮಹಾಮೇಘದಂತೆ ಎತ್ತರವೂ ಆದ ಒಂದು ಪರ್ವತವನ್ನು ನೋಡಿದನು.

ತತಸ್ತದಿಕ್ಷ್ವಾಕುವರೌ ಸಂತತಂ ವಿವಿಧೈರ್ದ್ರುಮೈಃ ।
ಕಾನನಂ ತೌ ವಿವಿಶತುಃ ಸೀತಯಾ ಸಹ ರಾಘವೌ ॥೩॥

ಅಲ್ಲಿಂದ ಮುಂದುವರಿದು ಇಷ್ವಾಕುವಂಶಪ್ರವರರಾದ ರಾಮಲಕ್ಷ್ಮಣರು ಬಗೆಬಗೆಯ ಹೆಮ್ಮರಗಳಿಂದ ತುಂಬ ಒಂದು ಕಾಡನ್ನು ಪ್ರವೇಶಿಸಿದರು.

ಪ್ರವಿಷ್ಟಸ್ತು ವನಂ ಘೋರಂ ಬಹುಪುಷ್ಪಫಲದ್ರುಮಮ್ ।
ದದರ್ಶಾಶ್ರಮಮೇಕಾಂತೇ ಚೀರಮಾಲಪರಿಷ್ಕೃತಮ್ ॥೪॥

ಘೋರ ವನವನ್ನು ಪ್ರವೇಶಿಸಿದ ಶ್ರೀರಾಮ ಶಾಂತವಿಕಾಂತ ಪರಿಸರದಲ್ಲಿದ್ದ ಆಶ್ರಮವೊಂದನ್ನು ಕಂಡನು. ಹೂವು ಹಣ್ಣುಗಳು ತುಂಬಿದ ಮರಗಳು ತುಂಬಿದ್ದವು. ಅನೇಕ ನಾರುಮಡಿಗಳನ್ನು ಒಣಹಾಕಿದ್ದರು–ಆ ಆಶ್ರಮದಲ್ಲಿ.

ತತ್ರ ತಾಪಸಮಾಸೀನಂ ಮಲಪಂಕಜಟಾಧರಮ್ ।
ರಾಮಃ ಸುತೀಕ್ಷ್ಣಂ ವಿಧಿವತ್ತಪೋಧನಮಭಾಷತ ॥೫॥

ಅಲ್ಲಿ ಕುಳಿತಿದ್ದ ಸುತೀಕ್ಷ್ಣರನ್ನು, ಧೂಳು ತುಂಬಿದ ಜಟೆಯನ್ನು ಹೊತ್ತ ತಪೋವೃದ್ಧರನ್ನು ವಿಧಿವತ್ತಾಗಿ ಮಾತನಾಡಿದನು.

ರಾಮೋಽಹಮಸ್ಮಿ ಭಗವನ್ ಭವಂತಂ ದ್ರಷ್ಟುಮಾಗತಃ ।
ತನ್ಮಾಭವದ ಧರ್ಮಜ್ಞ ಮಹರ್ಷೇ ಸತ್ಯವಿಕ್ರಮ ॥೬॥

ಪೂಜ್ಯ ಸತ್ಯವಿಕ್ರಮ ಮಹರ್ಷೇ! ನಾನು ಶ್ರೀರಾಮ, ನಿಮ್ಮನ್ನು ಕಾಣಲು ಬಂದಿದ್ದೇನೆ. ನನ್ನೊಂದಿಗೆ ಮಾತನಾಡಿ.

ಸ ನಿರೀಕ್ಷ್ಯ ತತೋ ವೀರಂ ರಾಮಂ ಧರ್ಮಭೃತಾಂ ವರಮ್ ।
ಸಮಾಶ್ಲಿಷ್ಯ ಚ ಬಾಹುಭ್ಯಾಮಿದಂ ವಚನಮಬ್ರವೀತ್ ॥೭॥

ಬಳಿಕ ಆ ಸುತೀಕ್ಷ್ಣರು ಧರ್ಮಾತ್ಮರಲ್ಲಿ ಶ್ರೇಷ್ಠನಾದ ವೀರ ಶ್ರೀರಾಮನನ್ನು ನೋಡಿ ಎರಡೂ ತೋಳುಗಳಿಂದ ಬಿಗಿದಪ್ಪಿ ಹೀಗೆ ಮಾತನಾಡಿದರು.

ಸ್ವಾಗತಂ ಖಲು ತೇ ವೀರ ರಾಮ ಧರ್ಮಭೃತಾಂ ವರ ।
ಆಶ್ರಮೋಽಯಂ ತ್ವಯಾ ಪ್ರಾಪ್ತಃ ಸನಾಥ ಇವ ಸಾಂಪ್ರತಮ್ ॥೮॥

ಧರ್ಮಪೋಷಕರಲ್ಲಿ ಶ್ರೇಷ್ಠನಾದ ವೀರ ರಾಮನೇ! ನಿನಗೆ ಸ್ವಾಗತ. ನೀನು ಆಶ್ರಮಕ್ಕೆ ಬಂದದ್ದರಿಂದ ಆಶ್ರಮವು ಈಗ ಸನಾಥ ಎನಿಸಿದೆ.

ಪ್ರತೀಕ್ಷಮಾಣಸ್ತ್ವಾಮೇವ ನಾರೋಹೇಽಹಂ ಮಹಾಯಶಃ ।
ದೇವಲೋಕಮಿತೋ ವೀರ ದೇಹಂ ತ್ಯಕ್ತ್ವಾ ಮಹೀತಲೇ । ॥೯॥

ಮಹಾಯಶಸ್ಸಿನ ವೀರನೇ! ನಿನ್ನನ್ನು ನಿರೀಕ್ಷೆ ಮಾಡುತ್ತಿದ್ದ ನಾನು ಈ ಭೂಮಿಯಲ್ಲಿ ದೇಹತ್ಯಾಗ ಮಾಡಿ ದೇವಲೋಕಕ್ಕೆ ಹೋಗದೆ ಕಾಯುತ್ತಿದ್ದೇನೆ.

ಚಿತ್ರಕೂಟಮುಪಾದಾಯ ರಾಜ್ಯಭ್ರಷ್ಟೋಽಸಿ ಮೇ ಶ್ರುತಃ ।
ಇಹೋಪಯಾತಃ ಕಾಕುತ್ಸ್ಥ ದೇವರಾಜಃ ಶತಕ್ರತುಃ ॥೧೦॥

ನೀನು ರಾಜ್ಯಭ್ರಷ್ಟನಾಗಿ ಚಿತ್ರಕೂಟಕ್ಕೆ ಬಂದು ನೆಲೆಸಿದ್ದು ತಿಳಿಯಿತು. ಕಾಕುತ್ಸ್ಥನೇ! ದೇವರಾಜ ಇಂದ್ರ ಇಲ್ಲಿಗೆ ಬಂದಿದ್ದರು.

ಉಪಾಗಮ್ಯ ಚ ಮಾಂ ದೇವೋ ಮಹಾದೇವಃ ಸುರೇಶ್ವರಃ ।
ಸರ್ವಾನ್ ಲೋಕಾನ್ ಜಿತಾನಾಹ ಮಮ ಪುಣ್ಯೇನ ಕರ್ಮಣಾ ॥೧೧

ಹಿರಿದೇವತೆಯಾದ ಆ ಸುರೇಶ್ವರ ಬಂದು, 'ನಾನು ನನ್ನ ಪುಣ್ಯಕರ್ಮಗಳಿಂದ ಮೇಲಿನ ಎಲ್ಲ ಲೋಕವನ್ನು ಗೆದ್ದಿದ್ದೇನೆ–ವಶಮಾಡಿಕೊಂಡಿದ್ದೇನೆ' ಎಂದು ಹೇಳಿದನು.

ತೇಷು ದೇವರ್ಷಿಜುಷ್ಟೇಷು ಜಿತೇಷು ತಪಸಾ ಮಯಾ ।
ಮತ್ಪ್ರಸಾದಾತ್ ಸಭಾರ್ಯಸ್ತ್ವಂ ವಿಹರಸ್ವ ಸಲಕ್ಷ್ಮಣಃ ॥೧೨॥

ದೇವರ್ಷಿಗಳು ಸೇವಿಸುವ, ತಪಸ್ಸಿನಿಂದ ನಾನು ಗೆದ್ದಿರುವ ಆ ಲೋಕಗಳಲ್ಲಿ ನನ್ನ ಸಂತೋಷದ ನಿಮಿತ್ತವಾಗಿ ನೀನು, ಸತೀ, ಸಹೋದರರೊಂದಿಗೆ ವಿಹರಿಸು.

ತಮುಗ್ರತಪಸಾ ಯುಕ್ತಂ ಮಹರ್ಷಿಂ ಸತ್ಯವಾದಿನಮ್ ।
ಪ್ರತ್ಯುವಾಚಾತ್ಮವಾನ್ ರಾಮೋ ಬ್ರಹ್ಮಾಣಮಿವ ವಾಸವಃ ॥೧೩॥

ಉಗ್ರತಪಸ್ಸಿನಿಂದ ಕೂಡಿರುವ ಸತ್ಯವಾದಿ ಮಹರ್ಷಿಯನ್ನು ಕುರಿತು ಮನೋನಿಗ್ರಹವುಳ್ಳ ಶ್ರೀರಾಮನು ಪ್ರತ್ಯುತ್ತರಿಸಿದನು–ಕಶ್ಯಪ ಪುತ್ರ ದೇವೇಂದ್ರನು ಬ್ರಹ್ಮದೇವರಲ್ಲಿ ನಿವೇದಿಸುವಂತೆ.

ಅಹಮೇವಾಹರಿಷ್ಯಾಮಿ ಸ್ವಯಂ ಲೋಕಾನ್ ಮಹಾಮುನೇ ।
ಆವಾಸಂ ತ್ವಹಮಿಚ್ಛಾಮಿ ಪ್ರದಿಷ್ಟಮಿಹ ಕಾನನೇ ॥೧೪॥

ಮುನಿಗಳೇ! ಆ ಲೋಕಗಳನ್ನೆಲ್ಲ ನಾನೇ ನಿಮಗೆ ಕೊಡುತ್ತೇನೆ. ನನಗೆ ಈ ವನದಲ್ಲಿ ವಾಸದ ಸ್ಥಲವನ್ನು ನೀವು ನಿರ್ದೇಶಿಸುವುದನ್ನು ಬಯಸುತ್ತೇನೆ.

ಭವಾನ್ ಸರ್ವತ್ರ ಕುಶಲಃ ಸರ್ವಭೂತಹಿತೇ ರತಃ ।
ಆಖ್ಯಾತಃ ಶರಭಂಗೇಣ ಗೌತಮೇನ ಮಹಾತ್ಮನಾ ॥೧೫॥

ತಾವು ಎಲ್ಲ ವಿಷಯದಲ್ಲಿ ಕುಶಲರು. ಸರ್ವಭೂತ ಹಿತತತ್ಪರರು ಎಂದು ಮಹಾತ್ಮ ಶರಭಂಗದಿಂದ ಹೇಳೋಣವಾಯಿತು.

ಏವಮುಕ್ತಸ್ತು ರಾಮೇಣ ಮಹರ್ಷಿರ್ಲೋಕವಿಶ್ರುತಃ ।
ಅಬ್ರವೀನ್ಮಧುರಂ ವಾಕ್ಯಂ ಹರ್ಷೇಣ ಮಹತಾಪ್ಲುತಃ ॥೧೬॥

ರಾಮನು ಇಂತೆಂದಾಗ ಲೋಕಪ್ರಸಿದ್ಧರಾದ ಆ ಸುತೀಕ್ಷ್ಣರು ತುಂಬ ಸಂತೋಷದಲ್ಲಿ ಮುಳುಗಿದವರಾಗಿ ಮಧುರವಾದ ಮಾತನ್ನಾಡಿದರು.

ಮಹತಾಯುತಃ – ಪಾಠಾಂತರ.

ಅಯಮೇವಾಶ್ರಮೋ ರಾಮ ಗುಣವಾನ್ ರಮ್ಯತಾಮಿಹ ।
ಋಷಿಸಂಘಾನುಚರಿತಃ ಸದಾ ಮೂಲಫಲಾನ್ವಿತಃ ॥೧೭॥

ರಾಮನೇ! ಇದೇ ಆಶ್ರಮ ವಾಸಕ್ಕೆ ಅನುಕೂಲವಾಗಿದೆ. ಇಲ್ಲಿಯೇ ಸುಖವಾಗಿ ವಾಸಿಸು. ಸದಾ ಇಲ್ಲಿಗೆ ಋಷಿಗಳ ಸಮುದಾಯ ಬರುತ್ತಿರುತ್ತದೆ. ಫಲ ಮೂಲಗಳೂ ಸದಾ ಸುಲಭವಾಗಿ ಸಿಗುತ್ತವೆ.

ಇಮಮಾಶ್ರಮಮಾಗಮ್ಯ ಮೃಗಸಂಘಾ ಮಹಾಯಶಃ ।
ಅಟಿತ್ವಾ ಪ್ರತಿಗಚ್ಛಂತಿ ಲೋಭಯಿತ್ವಾऽಕುತೋಭಯಾಃ ।
ನಾನ್ಯೋ ದೋಷೋ ಭವೇದತ್ರ ಮೃಗೇಭ್ಯೋऽನ್ಯತ್ರ ವಿದ್ಧಿ ವೈ ॥೧೮॥

ಅಹತ್ವಾ ಪ್ರತಿಗಚ್ಛಂತಿ – ಪಾಠಾಂತರ=ಹಿಂಸೆ ಮಾಡದೆ.

ಮಹಾಯಶನೇ! ಜಿಂಕೆ ಸಮುದಾಯಗಳು ಎಲ್ಲರ ಮನಸೂರೆಗೊಂಡು ನಿರ್ಭಯವಾಗಿ ಈ ಆಶ್ರಮಕ್ಕೆ ಬಂದು ಓಡಾಡಿಕೊಂಡು ಹೋಗುತ್ತವೆ. ಜಿಂಕೆಯ ಓಡಾಟ ಬಿಟ್ಟರೆ ಬೇರೇನೂ ತೊಂದರೆ ಇಲ್ಲ ಇಲ್ಲಿ.

ತಚ್ಛ್ರುತ್ವಾ ವಚನಂ ತಸ್ಯ ಮಹರ್ಷೇರ್ಲಕ್ಷ್ಮಣಾಗ್ರಜಃ ।
ಉವಾಚ ವಚನಂ ಧೀರೋ ವಿಕೃಷ್ಯ ಸಶರಂ ಧನುಃ ॥೧೯॥

ಮಹರ್ಷಿಗಳ ಆ ಮಾತನ್ನು ಕೇಳಿ ಲಕ್ಷ್ಮಣಾಗ್ರಜನಾದ ಧೀರ ಬಿಲ್ಲು ಬಾಣಗಳನ್ನೆತ್ತಿಕೊಂಡು ಮಾತನಾಡಿದ.

ತಾನಹಂ ಸುಮಹಾಭಾಗ ಮೃಗಸಂಘಾನ್ ಸಮಾಗತಾನ್ ।
ಹನ್ಯಾಂ ನಿಶಿತಧಾರೇಣ ಶರೇಣಾಶನಿವರ್ಚಸಾ ॥೨೦॥

ಮಹಾಭಾಗನೇ! ಆಶ್ರಮಕ್ಕೆ ಬರುವ ಜಿಂಕೆಗಳ ಗುಂಪನ್ನು ವಜ್ರಾಯುಧ-ದಂತಿರುವ ಹರಿತವಾದ ಬಾಣದಿಂದ ಕೊಲ್ಲಬಲ್ಲೆ.

ಭವಾಂಸ್ತತ್ರಾಭಿಷಜ್ಯೇತ ಕಿಂ ಸ್ಯಾತ್ ಕೃಚ್ಛ್ರತರಂ ತತಃ ॥೨೧॥

ಏತಸ್ಮಿನ್ನಾಶ್ರಮೇ ವಾಸಂ ಚಿರಂ ತು ನ ಸಮರ್ಥಯೇ ।
ತಮೇವಮುಕ್ತ್ವಾಪರಮಂ ರಾಮಃ ಸಂಧ್ಯಾಮುಪಾವಿಶತ್ ॥೨೨॥

ತಮೇವೋಕ್ತ್ವಾ ಪರಮಂ – ಪಾಠಾಂತರ.

ನಾನು ಜಿಂಕೆಗಳನ್ನು ಕೊಂದರೆ ನಿಮ್ಮ ಮನಸ್ಸಿಗೆ ನೋವಾಗುತ್ತದೆ. ಅದಕ್ಕಿಂತ ದೊಡ್ಡ ಅಪರಾಧವೇನಿದೆ? ಆದ್ದರಿಂದ ಈ ಆಶ್ರಮದಲ್ಲಿ ಬಹುಕಾಲ ನಾನಿರಲಾರೆ. ಇಷ್ಟು ಹೇಳಿ ಶ್ರೀರಾಮ ಸಂಧ್ಯಾವಂದನೆಗಾಗಿ ಹೊರಟನು.

ಅನ್ವಾಸ್ಯ ಪಶ್ಚಿಮಾಂ ಸಂಧ್ಯಾಂ ತತ್ರ ವಾಸಮಕಲ್ಪಯತ್ ।
ಸುತೀಕ್ಷ್ಣಸ್ಯಾಶ್ರಮೇ ರಮ್ಯೇ ಸೀತಯಾ ಲಕ್ಷ್ಮಣೇನ ಚ ॥೨೩॥

ಸಾಯಂ ಸಂಧ್ಯಾವಂದನೆಯನ್ನು ಪೂರೈಸಿ ಆ ಸುತೀಕ್ಷ್ಣರ ಆಶ್ರಮದಲ್ಲಿ ಸೀತಾಲಕ್ಷ್ಮಣರ ಜೊತೆ ಶ್ರೀರಾಮ ವಾಸ ಮಾಡಿದನು.

ತತಃ ಶುಭಂ ತಾಪಸಭೋಜ್ಯಮನ್ನಂ
ಸ್ವಯಂ ಸುತೀಕ್ಷ್ಣಃ ಪುರುಷರ್ಷಭಾಭ್ಯಾಮ್ ।
ತಾಭ್ಯಾಂ ಸುಸತ್ಕೃತ್ಯ ದದೌ ಮಹಾತ್ಮಾ
ಸಂಧ್ಯಾನಿವೃತ್ತೌ ರಜನೀಮವೇಕ್ಷ್ಯ ॥೨೪॥

ಸಂಧ್ಯಾಕಾಲ ಮುಗಿದು ರಾತ್ರಿಯಾಗಲು ಮಹಾತ್ಮ ಸುತೀಕ್ಷ್ಣರು ತಾವೇ ತಾಪಸಭೋಜ್ಯವಾದ ಪವಿತ್ರ ಅನ್ನವನ್ನು ಆ ರಾಮಲಕ್ಷ್ಮಣರಿಗೆ ಆದರ ಪೂರ್ವಕವಾಗಿ ಇತ್ತರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಏಳನೇ ಸರ್ಗ ಮುಗಿಯಿತು.

❖

ಅಷ್ಟಮಃ ಸರ್ಗಃ

ಕಥಾಸಾರಾಂಶ– ಶ್ರೀರಾಮ ರಾತ್ರಿ ಕಳೆದು ಮರುದಿನದ ಪ್ರಭಾತ ಸಮಯದಲ್ಲಿ ಸ್ನಾನಮಾಡಿ ತನ್ನ ಅನುಷ್ಠಾನಗಳನ್ನು ಪೂರೈಸಿಕೊಂಡು ಸುತೀಕ್ಷ್ಣರಲ್ಲಿ 'ನಾನು ಹೊರಡುತ್ತೇನೆ. ಈ ಮಹರ್ಷಿಗಳು ಅವಸರಿಸುತ್ತಿರುವರು. ಸೂರ್ಯ ನೆತ್ತಿ ಮೇಲೆ ಬರುವ ಮುಂಚೆ ಮುಂದಿನ ತಾಣವನ್ನು ಸೇರುತ್ತೇವೆ. ದಂಡಕಾರಣ್ಯನಿವಾಸಿಗಳಾದ ಅನೇಕ ಋಷಿಗಳ ಆಶ್ರಮವನ್ನು ಇನ್ನೂ ಸಂದರ್ಶಿಸಬೇಕಿದೆ. ಮುನಿಗಳೇ ಅನುಮತಿ ಕೊಡಿ' ಎಂದು ಹೇಳಿ ಹೊರಟುನಿಂತ, ಋಷಿಗಳಿಗೆ ವಂದಿಸಿದ. ಋಷಿಗಳು ಅವನ ಪ್ರಯಾಣವನ್ನು ಸಮ್ಮತಿಸಿದರು. 'ಮತ್ತೊಮ್ಮೆ ಬಾ' ಎಂದು ಹೇಳಿ ಬೀಳ್ಕೊಟ್ಟರು. ಸೀತೆ ಕೊಟ್ಟ ತಮ್ಮ ಬಿಲ್ಲು ಬಾಣ–ಕತ್ತಿಗಳನ್ನು ಹಿಡಿದುಕೊಂಡು ತಮ್ಮನೊಂದಿಗೆ ಶ್ರೀರಾಮನು ಪ್ರಯಾಣ ಮುಂದುವರಿಸಿದನು.

❖

ಸುತೀಕ್ಷ್ಣಾಭ್ಯನುಜ್ಞಾ

ರಾಮಸ್ತು ಸಹಸೌಮಿತ್ರಿಃ ಸುತೀಕ್ಷ್ಣೇನಾಭಿಪೂಜಿತಃ ।
ಪರಿಣಾಮ್ಯ ನಿಶಾಂ ತತ್ರ ಪ್ರಭಾತೇ ಪ್ರತ್ಯಬುಧ್ಯತ ॥೧॥

ಲಕ್ಷ್ಮಣ ಸಹಿತನಾದ ಶ್ರೀರಾಮ ಸುತೀಕ್ಷ್ಣರಿಂದ ಪೂಜಿತನಾಗಿ ರಾತ್ರಿಯನ್ನು ಕಳೆದು ಬೆಳಗಾಗುತ್ತಲೆ ಎಚ್ಚರಗೊಂಡ.

ಉತ್ಥಾಯ ತು ಯಥಾಕಾಲಂ ರಾಘವಃ ಸಹ ಸೀತಯಾ ।
ಉಪಾಸ್ಪೃಶತ್ ಸುಶೀತೇನ ಜಲೇನೋತ್ಪಲಗಂಧಿನಾ ॥೨॥

ಸೀತೆಯೊಂದಿಗೆ ಶ್ರೀರಾಮ ಸಮಯಕ್ಕೆ ಸರಿಯಾಗಿ ಎದ್ದು ತಾವರೆಯ ಸೌರಭ ಬೆರೆತ ತಣ್ಣನೆಯ ನೀರಿನಿಂದ ಸ್ನಾನ ಮಾಡಿದರು.

ಅಥ ತೇऽಗ್ನಿಂ ಸುರಾಂಶ್ಚೈವ ವೈದೇಹೀ ರಾಮಲಕ್ಷ್ಮಣೌ ।
ಕಲ್ಯಂ ವಿಧಿವದಭ್ಯರ್ಚ್ಯ ತಪಸ್ವಿಶರಣೇ ವನೇ ॥೩॥

ಆ ರಾಮ ಸೀತಾಲಕ್ಷ್ಮಣರು ಕಾಲಪ್ರಾಪ್ತವಾದ ಅಗ್ನಿ ಹಾಗು ದೇವತೆಗಳ ಅರ್ಚನೆಯನ್ನು ವಿಧಿವತ್ತಾಗಿ ಸಲ್ಲಿಸಿದರು—ತಪಸ್ವಿಗಳ ನೆಲೆಯಾದ ವನದಲ್ಲಿ.

ಉದಯಂತಂ ದಿನಕರಂ ದೃಷ್ಟ್ವಾ ವಿಗತಕಲ್ಮಷಾಃ ।
ಸುತೀಕ್ಷ್ಣಮಭಿಗಮ್ಯೇದಂ ಶ್ಲಕ್ಷ್ಣಂ ವಚನಮಬ್ರುವನ್ ॥೪॥

ಕಲ್ಪಷರಹಿತರಾದ ಅವರು ಉದಿಸುವ ಸೂರ್ಯನನ್ನು ಗಮನಿಸಿ ಸುತೀಕ್ಷ್ಣರ ಬಳಿ ಸಾರಿ ಮಧುರವಾಗಿ ಮಾತನಾಡಿದರು.

ಸುಖೋಷಿತಾಃ ಸ್ಮ ಭಗವಂಸ್ತ್ವಯಾ ಪೂಜ್ಯೇನ ಪೂಜಿತಾಃ ।
ಅಪೃಚ್ಛಾಮಃ ಪ್ರಯಾಸ್ಯಾಮೋ ಮುನಯಸ್ತ್ವರಯಂತಿ ನಃ ॥೫॥

ಪೂಜ್ಯರೇ! ಪೂಜ್ಯರಾದ ತಮ್ಮಿಂದ ಸತ್ಕೃತರಾಗಿ ಸುಖವಾಗಿ ವಾಸ ಮಾಡಿದೆವು. ಮುನಿಗಳು ನಮ್ಮನ್ನು ಅವಸರಿಸುತ್ತಿದ್ದಾರೆ. ತಮ್ಮಲ್ಲಿ ಅಪ್ಪಣೆಯನ್ನು ಕೇಳುತ್ತಿದ್ದೇವೆ.

ತ್ವರಾಮಹೇ ವಯಂ ದ್ರಷ್ಟುಂ ಕೃತ್ಸ್ನಮಾಶ್ರಮಮಂಡಲಮ್ ।
ಋಷೀಣಾಂ ಪುಣ್ಯಶೀಲಾನಾಂ ದಂಡಕಾರಣ್ಯವಾಸಿನಾಮ್ ॥೬॥

ದಂಡಕಾರಣ್ಯ ನಿವಾಸಿಗಳಾದ ಪುಣ್ಯಶೀಲ ಋಷಿಗಳ ಎಲ್ಲ ಆಶ್ರಮ ಸಮುದಾಯವನ್ನು ಕಾಣಲು ತವಕಿಸುತ್ತಿದ್ದೇವೆ.

ಅಭ್ಯನುಜ್ಞಾತುಮಿಚ್ಛಾಮಃ ಸಹೈಭಿರ್ಮುನಿಪುಂಗವೈಃ ।
ಧರ್ಮನಿತ್ಯೈಸ್ತಪೋದಾಂತೈರ್ವಿಶಿಖೈರಿವ ಪಾವಕೈಃ ॥೭॥

ನಿತ್ಯಧರ್ಮಪರಾಯಣರು, ತಪಸ್ಸು ಮಾಡಿ ಜಿತೇಂದ್ರಿಯರು ಆದ ಪ್ರಜ್ವಲಿಸುವ ಅಗ್ನಿಯ ಜ್ವಾಲೆಗಳಂತೆ ಕಂಗೊಳಿಸುತ್ತಿರುವ ಈ ಮುನಿಪುಂಗವರೊಂದಿಗೆ ಹೊರಡಲು ತಮ್ಮ ಅನುಮತಿಯನ್ನು ಕೋರುತ್ತಿದ್ದೇವೆ.

ಅವಿಷಹ್ಯಾತಪೋ ಯಾವತ್ ಸೂರ್ಯೋ ನಾತಿವಿರಾಜತೇ ।
ಅಮಾರ್ಗೇಣಾಗತಾ ಲಕ್ಷ್ಮೀಂ ಪ್ರಾಪ್ಯೇವಾನ್ವಯವರ್ಜಿತಃ ॥೮॥

ತಾವದಿಚ್ಛಾಮಹೇ ಗಂತುಮಿತ್ಯುಕ್ತ್ವಾ ಚರಣೌ ಮುನೇಃ ।
ವವಂದೇ ಸಹಸೌಮಿತ್ರಿಃ ಸೀತಯಾ ಸಹ ರಾಘವಃ ॥೯॥

ಸೂರ್ಯನು ಸಹಿಸಲಾಗದ ಬಿಸಿಲನ್ನು ಬೀರುತ್ತ ವಿರಾಜಮಾನನಾಗುವ– ಅನ್ಯಾಯಮಾರ್ಗದಿಂದ ಬಂದ ಸಂಪತ್ತನ್ನು ಪಡೆದು ನಿರ್ಧನನು ಅಸಹ್ಯನಾಗುವಂತೆ– ಅದರ ಮುಂಚೆ ಹೊರಡಲು ಬಯಸುತ್ತಿದ್ದೇವೆ ಎಂದು ಹೇಳಿ ರಾಘವನು ಸೀತಾಲಕ್ಷ್ಮಣರೊಂದಿಗೆ ಶ್ರೀರಾಮನ ಪಾದಗಳನ್ನು ನಮಸ್ಕರಿಸಿದನು.

ತೌ ಸಂಸ್ಪೃಶಂತೌ ಚರಣಾವುತ್ಥಾಪ್ಯ ಮುನಿಪುಂಗವಃ ।
ಗಾಢಮಾಲಿಂಗ್ಯ ಸಸ್ನೇಹಮಿದಂ ವಚನಬ್ರವೀತ್ ॥೧೦॥

ಪಾದವನ್ನು ಮುಟ್ಟಿ ನಮಿಸುತ್ತಿರುವ ರಾಮಲಕ್ಷ್ಮಣರನ್ನು ಎಬ್ಬಿಸಿ ಗಾಢವಾಗಿ ಅಪ್ಪಿಕೊಂಡು ಸ್ನೇಹಪೂರ್ವಕ ಹೀಗೆ ಮಾತನಾಡಿದರು.

ಅರಿಷ್ಟಂ ಗಚ್ಛ ಪಂಥಾನಂ ರಾಮ ಸೌಮಿತ್ರಿಣಾ ಸಹ ।
ಸೀತಯಾ ಚಾನಯಾ ಸಾರ್ಧಂ ಛಾಯಯೇವಾನುವೃತ್ತಯಾ ॥೧೧॥

ರಾಮ! ಲಕ್ಷ್ಮಣ ಹಾಗು ನೆರಳಿನಂತೆ ಹಿಂಬಾಲಿಸಿ ಬರುವ ಸೀತೆಯೊಂದಿಗೆ ಹೊರಡಿರಿ. ನಿಮ್ಮ ದಾರಿ ಶುಭವಾಗಿರಲಿ.

ಪಶ್ಯಾಶ್ರಮಪದಂ ರಮ್ಯಂ ದಂಡಕಾರಣ್ಯವಾಸಿನಾಮ್ ।
ಏಷಾಂ ತಪಸ್ವಿನಾಂ ವೀರ ತಪಸಾ ಭಾವಿತಾತ್ಮನಾಮ್ ॥೧೨॥

ವೀರ! ತಪಸಿನಿಂದ ಶುದ್ಧಾಂತಃಕರಣರಾದ ದಂಡಕಾರಣ್ಯ ನಿವಾಸಿ ತಪಸ್ವಿಗಳ ಆಶ್ರಮದ ತಾಣಗಳನ್ನು ನೋಡು.

ಸಪ್ರಾಜ್ಯಫಲಮೂಲಾನಿ ಪುಷ್ಪಿತಾನಿ ವನಾನಿ ಚ ।
ಪ್ರಶಾಂತಮೃಗಯೂಥಾನಿ ಶಾಂತಪಕ್ಷಿಗಣಾನಿ ಚ ॥೧೩॥

ಉತ್ತಮ ಫಲಮೂಲಗಳನ್ನು, ಹೂಬಿಟ್ಟ ಕಾಡುಗಳನ್ನು, ಉತ್ತಮವಾದ ಜಿಂಕೆ ಗುಂಪುಗಳನ್ನು, ಶಾಂತವಾದ ಪಕ್ಷಿಸಮೂಹಗಳನ್ನು ಕಾಣುವಿರಿ.

ಫುಲ್ಲಪಂಕಜಷಂಡಾನಿ ಪ್ರಸನ್ನಸಲಿಲಾನಿ ಚ ।
ಕಾರಂಡವವಿಕೀರ್ಣಾನಿ ತಟಾಕಾನಿ ಸರಾಂಸಿ ಚ ॥೧೪॥

ಅರಳು ತಾವರೆಗಳನ್ನು ಹೊಂದಿರುವ, ಪ್ರಸನ್ನವಾದ ನೀರು ತುಂಬಿದ ಕಾರಂಡವ ಎಂಬ ನೀರಹಕ್ಕಿಗಳು ತುಂಬಿದ ತಟಾಕಗಳನ್ನು ಸರೋವರಗಳನ್ನು ನೋಡುವಿರಿ.

ದ್ರಕ್ಷ್ಯಸೇ ದೃಷ್ಟಿರಮ್ಯಾಣಿ ಗಿರಿಪ್ರಸ್ರವಣಾನಿ ಚ ।
ರಮಣೀಯಾನ್ಯರಣ್ಯಾನಿ ಮಯೂರಾಭಿರುತಾನಿ ಚ ॥೧೫॥

ಕಾಣಲು ಸುಂದರವಾದ ಬೆಟ್ಟದ ಝರಿಗಳಿರುವ, ನವಿಲುಗಳ ಕೇಕಾರವದಿಂದ ರಮಣೀಯಗಳಾದ ಅರಣ್ಯಗಳನ್ನು ಕಾಣುವಿ.

ಗಣ್ಯತಾಂ ವತ್ಸ ಸೌಮಿತ್ರೇ ಭವಾನಪಿ ಚ ಗಚ್ಛತು ।
ಆಗಂತವ್ಯಂ ತ್ವಯಾ ತಾತ ಪುನರೇವಾಶ್ರಮಂ ಮಮ ॥೧೬॥

ವತ್ಸ! ರಾಮ! ಹೊರಡೋಣವಾಗಲಿ. ಸುಮಿತ್ರಾನಂದನ! ನೀನೂ ಹೊರಡು. ಅಪ್ಪ! ರಾಮ ಮತ್ತೊಮ್ಮೆ ಕೂಡ ಆಶ್ರಮಕ್ಕೆ ಬರಬೇಕು.

ಏವಮುಕ್ತಸ್ತಥೇತ್ಯುಕ್ತ್ವಾ ಕಾಕುತ್ಸ್ಥಃ ಸಹಲಕ್ಷ್ಮಣಃ ।
ಪ್ರದಕ್ಷಿಣಂ ಮುನಿಂ ಕೃತ್ವಾ ಪ್ರಸ್ಥಾತುಮುಪಚಕ್ರಮೇ ॥೧೭॥

ಹೀಗೆ ಋಷಿಗಳಿಂದ ಹೇಳಲ್ಪಟ್ಟವನಾಗಿ ರಾಮನು ಹಾಗೆ ಆಗಲೆಂದು ಹೇಳಿ ಲಕ್ಷ್ಮಣನ ಜೊತೆಗೆ ಮುನಿಗಳಿಗೆ ಪ್ರದಕ್ಷಿಣೆ ಬಂದು ಹೊರಡಲು ಅನುವಾದನು.

ತತಃ ಶುಭತರೇ ತೂಣೀ ಧನುಷೀ ಚಾಯತೇಕ್ಷಣಾ ।
ದದೌ ಸೀತಾ ತಯೋರ್ಭ್ರಾತ್ರೋಃ ಖಡ್ಗೌ ಚ ವಿಮಲೌ ತತಃ ॥೧೮॥

ತರುವಾಯ ವಿಶಾಲನೇತ್ರೆ ಸೀತೆಯು ಆ ಅಣ್ಣತಮ್ಮಂದಿರಿಗೆ ಎರಡು ಬಿಲ್ಲುಗಳನ್ನು ಬತ್ತಳಿಕೆಗಳನ್ನು ಮತ್ತು ನಿರ್ಮಲವಾದ ಖಡ್ಗವನ್ನು ಕೊಟ್ಟಳು.

ಆಬಧ್ಯ ಚ ಶುಭೇ ತೂಣೀ ಚಾಪೌ ಚಾದಾಯ ಸಸ್ವನೌ ।
ನಿಷ್ಕ್ರಾಂತಾವಾಶ್ರಮಾದ್ಗಂತುಮುಭೌ ತೌ ರಾಮಲಕ್ಷ್ಮಣೌ ॥೧೯॥

ಶುಭವಾದ ಎರಡು ಬತ್ತಳಿಕೆಗಳನ್ನು ಹೆಗಲಿಗೆ ಕಟ್ಟಿಕೊಂಡು ಎರಡು ಬಿಲ್ಲುಗಳನ್ನೂ ಹಿಡಿದು ಅವರಿಬ್ಬರೂ ಆಶ್ರಮದಿಂದ ಹೊರಗೆ ಹೊರಟರು.

ಶ್ರೀಮಂತೌ ರೂಪಸಂಪನ್ನೌ ದೀಪ್ಯಮಾನೌ ಸ್ವತೇಜಸಾ ।
ಪ್ರಸ್ಥಿತೌ ಧೃತಚಾಪೌ ತೌ ಸೀತಯಾ ಸಹ ರಾಘವೌ ॥೨೦॥

ಶೀಘ್ರಂ ತೌ-ಪಾಠಾಂತರ. ಧೃತಚಾಪಾಸೀ-ಪಾಠಾಂತರ

ರೂಪವಂತರು, ತಮ್ಮ ತೇಜಸ್ಸಿನಿಂದ ಬೆಳಗುವವರಾದ ಕಾಂತಿಯುಕ್ತರೂ ಆದ ರಾಮಲಕ್ಷ್ಮಣರು ಧನುರ್ಧಾರಿಗಳಾಗಿ ಸೀತೆಯೊಂದಿಗೆ ಹೊರಟರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಂಟನೇ ಸರ್ಗ ಮುಗಿಯಿತು.

❖

ನವಮಃ ಸರ್ಗಃ

ಕಥಾಸಾರಾಂಶ– ಆಯುಧಪಾಣಿಗಳಾದ ರಾಮಲಕ್ಷ್ಮಣರನ್ನು ಕುರಿತು ಸೀತೆಯು ಕೇಳುತ್ತಾಳೆ— ಕಾಮದಿಂದ ಉಂಟಾಗುವ ಮೂರು ವ್ಯಸನಗಳನ್ನು ಬಿಟ್ಟವನು ಮಹಾಪುಣ್ಯಾತ್ಮನೆನಿಸುವನು. (1) ತನ್ನ ದೇಹ, ಸತೀಸುತರ ಮೇಲೆ ಮೋಹದಿಂದ ಸುಳ್ಳು ಹೇಳುವುದು. ಇದಕ್ಕಿಂತಲೂ ದೊಡ್ಡ ವ್ಯಸನಗಳು ಎರಡು. 1. ಪರಸ್ತ್ರೀಗಮನ, 2. ವೈರವಿಲ್ಲದೆ ಹಿಂಸಾಕರ್ಮ ನಿರತನಾಗುವುದು. ಶ್ರೀರಾಮ! ನಿಮ್ಮಲ್ಲಿ ಮಿಥ್ಯಾವಚನ ಎಂದೂ ಇಲ್ಲ. ನೀವೆಂದೂ ಪರಸ್ತ್ರೀಕಾಮುಕರಲ್ಲ. ಆದರೆ ಮೂರನೇ ಅಪರಾಧ-ವನ್ನೇಕೆ ಎಸಗುತ್ತಿರುವಿರಿ? ದಂಡಕಾರಣ್ಯವಾಸಿ ಮುನಿಗಳ ಮೇಲಿನ ಮೋಹದಿಂದ ನಿಮ್ಮಲ್ಲಿ ವೈರತೋರದ ರಕ್ಕಸರ ಸಂಹಾರ ಏಕೆ? ಶಸ್ತ್ರ ಹಿಡಿಯುವುದು, ವನವಾಸ ಮಾಡುವುದು, ಕ್ಷಾತ್ರಕರ್ಮವೆಲ್ಲಿ? ಮುನಿಗಳಂತೆ ಮಾಡುವ ತಪಸ್ಸು ಎಲ್ಲಿ? ವಿರುದ್ಧವಾದ ಈ ನಡೆ ಏಕೆ?

ಶಸ್ತ್ರದ ಸಹವಾಸ ಹಿಂಸೆಗೆ ಪ್ರೇರಣೆ ನೀಡುತ್ತದೆ. ಸ್ತ್ರೀ ಚಾಪಲ್ಯದಿಂದ ಕೇಳುತ್ತಿದ್ದೇನೆ. ಯಾತಕ್ಕೂ ಒಮ್ಮೆ ವಿಚಾರಮಾಡಿ ಬಳಿಕ ಇಷ್ಟ ಬಂದಂತೆ ಮಾಡು.

❖

ಸೀತಾಧರ್ಮಾವೇದನಮ್

ಸುತೀಕ್ಷ್ಣೇನಾಭ್ಯನುಜ್ಞಾತಂ ಪ್ರಸ್ಥಿತಂ ರಘುನಂದನಮ್ ।
ಹೃದ್ಯಯಾ ಸ್ನಿಗ್ಧಯಾ ವಾಚಾ ಭರ್ತಾರಮಿದಮಬ್ರವೀತ್ ॥೧॥

ಸುತೀಕ್ಷ್ಣಮುನಿಗಳಿಂದ ಅಪ್ಪಣೆ ಪಡೆದು ಹೊರಟ ಪತಿ ರಘುನಂದನನನ್ನು ಕುರಿತು ಸೀತೆ ಮನೋಹರ ಹಾಗೂ ಮಧುರವಾದ ಮಾತಿನಿಂದ ಹೀಗೆಂದಳು.

ಅಯಂ ಧರ್ಮಃ ಸುಸೂಕ್ಷ್ಮೇಣ ವಿಧಿನಾ ಪ್ರಾಪ್ಯತೇ ಮಹಾನ್ ।
ನಿವೃತ್ತೇನ ತು ಶಕ್ಯೋಽಯಂ ವ್ಯಸನಾತ್ ಕಾಮಜಾದಿಹ ॥೨॥

ಅಧರ್ಮಂ ತು ಸುಸೂಕ್ಷ್ಮೇಣ – ಪಾಠಾಂತರ.

ಮುನಿಧರ್ಮ ಶ್ರೇಷ್ಠ. ಅದನ್ನು ಬಹಳ ಸೂಕ್ಷ್ಮಮಾರ್ಗದಿಂದ ಕಾಪಾಡ ಬೇಕಾಗುತ್ತದೆ. ಬಯಸಿ ಮಾಡುವ ವ್ಯಸನಗಳಿಂದ ನಿವೃತ್ತನಾದವನು ಮಾತ್ರ ಮುನಿಧರ್ಮಗಳನ್ನು ಕಾಪಿಡಲು ಶಕ್ಯ.

ತ್ರೀಣ್ಯೇವ ವ್ಯಸನಾನ್ಯತ್ರ ಕಾಮಜಾನಿ ಭವಂತ್ಯುತ ।

ಮಿಥ್ಯಾವಾಕ್ಯಂ ಗುರುತರಂ ತಸ್ಮಾದ್ಗುರುತಮೇ ಉಭೇ
ಪರದಾರಾಭಿಗಮನಂ ವಿನಾ ವೈರಂ ಚ ರೌದ್ರತಾ ॥ ೩ ॥

ಕಾಮದಿಂದಾಗುವ ವ್ಯಸನಗಳು ಮೂರೇ. ಸುಳ್ಳಾಡುವುದು, ಪರಸ್ತ್ರೀ ಸಹವಾಸ. ವೈರವಿಲ್ಲದವರೊಂದಿಗೆ ಹಿಂಸೆಗೆ ತೊಡಗುವುದು. ಸುಳ್ಳಾಡುವುದಕ್ಕಿಂತ ಮುಂದಿನವು ಪ್ರಬಲವಾದವು.

ಮಿಥ್ಯಾವಾಕ್ಯಂ ನ ತೇ ಭೂತಂ ನ ಭವಿಷ್ಯತಿ ರಾಘವ ।
ಕುತೋಽಭಿಲಷಣಂ ಸ್ತ್ರೀಣಾಂ ಪರೇಷಾಂ ಧರ್ಮನಾಶನಮ್ ॥೪॥

ರಾಘವ! ನೀನು ಹಿಂದೆಯು ಸುಳ್ಳಾಡಿಲ್ಲ. ಮುಂದೆಯೂ ಸುಳ್ಳಾಡುವುದಿಲ್ಲ. ಪುಣ್ಯವನ್ನು ಹಾಳುಗೆಡಹುವ ಪರಸ್ತ್ರೀ ಬಯಕೆಯಂತು ನಿನ್ನಲ್ಲಿ ಎಲ್ಲಿಂದ ಬರಬೇಕು !

ತವ ನಾಸ್ತಿ ಮನುಷ್ಯೇಂದ್ರ ನ ಚಾಭೂತ್ತೇ ಕದಾಚನ ।
ಮನಸ್ಯಪಿ ತಥಾ ರಾಮ ನ ಚೈತದ್ವಿದ್ಯತೇ ಕ್ವಚಿತ್ ॥೫॥

ಮನುಷ್ಯೇಂದ್ರ ! ಪರಸ್ತ್ರೀಕಾಮುಕತೆ ಈಗಲೂ ಇಲ್ಲ. ಹಿಂದೆಯೂ ಇರಲಿಲ್ಲ. ಎಂದೂ ಯಾವತ್ತೂ ನಿನ್ನ ಮನದಲ್ಲಿ ಅದು ಸುಳಿಯುವುದೇ ಇಲ್ಲ !

ಸ್ವದಾರನಿರತಸ್ತ್ವಂ ಚ ನಿತ್ಯಮೇವ ನೃಪಾತ್ಮಜ ।
ಧರ್ಮಿಷ್ಠಃ ಸತ್ಯಸಂಧಶ್ಚ ಪಿತುರ್ನಿರ್ದೇಶಕಾರಕಃ ॥೬॥

ರಾಜಪುತ್ರ ! ನೀನು ನಿತ್ಯದಲ್ಲಿಯೂ ಸ್ವಪತ್ನೀಮಾತ್ರನಿಯತನು. ಧರ್ಮಿಷ್ಠನು. ಸತ್ಯಸಂಧನು ಮತ್ತು ಪಿತೃವಾಕ್ಯ ಪರಿಪಾಲಕನು.

ತ್ವಯಿ ಸತ್ಯಂ ಚ ಧರ್ಮಶ್ಚ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೭॥

ನಿನ್ನಲ್ಲಿ ಸತ್ಯ ಧರ್ಮ ಎಲ್ಲವೂ ನೆಲೆಗೊಂಡಿದೆ.

ತಚ್ಚ ಸರ್ವಂ ಮಹಾಬಾಹೋ ಶಕ್ಯಂ ಧರ್ತುಂ ಜಿತೇಂದ್ರಿಯೈಃ ।
ತವ ವಶ್ಯೇಂದ್ರಿಯತ್ವಂ ಚ ಜಾನಾಮಿ ಶುಭದರ್ಶನ ॥೮॥

ಸತ್ಯಧರ್ಮಗಳನ್ನು ಜಿತೇಂದ್ರಿಯರು ಮಾತ್ರ ಧರಿಸಲು ಸಾಧ್ಯ. ಶುಭದರ್ಶನನೇ! ನಿನ್ನ ಜಿತೇಂದ್ರಿಯತ್ವವನ್ನು ನಾನು ತಿಳಿದಿದ್ದೇನೆ.

ತೃತೀಯಂ ಯದಿದಂ ರೌದ್ರಂ ಪರಪ್ರಾಣಾಭಿಹಿಂಸನಮ್ ।
ನಿರ್ವೈರಂ ಕ್ರಿಯತೇ ಮೋಹಾತ್ತಚ್ಚ ತೇ ಸಮುಪಸ್ಥಿತಮ್ ॥೯॥

ವೈರವಿಲ್ಲದಿದ್ದರೂ ಮತ್ತೊಬ್ಬರಿಗೆ ಪ್ರಾಣ ಹಿಂಸೆ ಮಾಡುವುದು ಮೂರನೇ ವ್ಯಸನ. ಅದು ನಿನ್ನ ಪಾಲಿಗೆ ಈಗ ಮುನಿಜನ ಮೋಹದಿಂದ ಒದಗಿ ಬಂದಿದೆ.

ಪ್ರತಿಜ್ಞಾತಸ್ತ್ವಯಾ ವೀರ ದಂಡಕಾರಣ್ಯವಾಸಿನಾಮ್ ।
ಋಷೀಣಾಂ ರಕ್ಷಣಾರ್ಥಾಯ ವಧಃ ಸಂಯತಿ ರಕ್ಷಸಾಮ್ ॥೧೦॥

ವೀರ! ದಂಡಕಾರಣ್ಯನಿವಾಸಿ ಋಷಿಗಳ ರಕ್ಷಣೆಗಾಗಿ ಯುದ್ಧದಲ್ಲಿ ರಾಕ್ಷಸರ ವಧೆ ಮಾಡುವೆನೆಂದು ಪ್ರತಿಜ್ಞೆ ಮಾಡಿರುವಿಯಷ್ಟೇ?

ಏತನ್ನಿಮಿತ್ತಂ ಚ ವನಂ ದಂಡಕಾ ಇತಿ ವಿಶ್ರುತಮ್ ।
ಪ್ರಸ್ಥಿತಸ್ತ್ವಂ ಸಹ ಭ್ರಾತ್ರಾ ಧೃತಬಾಣಶರಾಸನಃ ॥೧೧॥

ಈ ರಕ್ಕೋ ವಧ ನಿಮಿತ್ತವಾಗಿಯೇ ದಂಡಕ ಎಂದು ಪ್ರಸಿದ್ಧವಾದ ಅರಣ್ಯವನ್ನು ಕುರಿತು ತಮ್ಮನೊಂದಿಗೆ ಬಿಲ್ಲುಬಾಣಗಳನ್ನು ಹಿಡಿದು ಹೊರಟಿರುವುದು.

ತತಸ್ತ್ವಾಂ ಪ್ರಸ್ಥಿತಂ ದೃಷ್ಟ್ವಾ ಮಮ ಚಿಂತಾಕುಲಂ ಮನಃ ।
ತ್ವದ್ವತ್ತಂ ಚಿಂತಯಂತ್ಯಾ ವೈ ಭವೇನ್ನಿಃಶ್ರೇಯಸಂ ಮಹತ್ ॥೧೨॥

ನಿನ್ನ ನಡೆ ನಿಃಶ್ರೇಯಸ್ಸಿಗೆ ಹಿತಕ್ಕೆ ಸಾಧನವಾಗಬೇಕೆಂದು ಬಯಸುವ ನನ್ನ ಮನ ರಕ್ಕೋವಧೆಗಾಗಿ ದಂಡಕಾರಣ್ಯಕ್ಕೆಂದು ಹೊರಟಿರುವ ನಿನ್ನ ಬಗ್ಗೆ ಚಿಂತೆಗೊಳಗಾಗಿದೆ.

ನ ಹಿ ಮೇ ರೋಚತೇ ವೀರ ಗಮನಂ ದಂಡಕಾನ್ ಪ್ರತಿ ।
ಕಾರಣಂ ತತ್ರ ವಕ್ಷ್ಯಾಮಿ ವದಂತ್ಯಾಃ ಶ್ರೂಯತಾಂ ಮಮ ॥೧೩॥

ವೀರನೇ! ನೀನು ದಂಡಕಕ್ಕೆ ಹೊರಟಿರುವುದು ನನಗೆ ಇಷ್ಟವಾಗುವುದಿಲ್ಲ. ಅದಕ್ಕೆ ಕಾರಣ ಹೇಳುತ್ತೇನೆ ಕೇಳು.

ತ್ವಂ ಹಿ ಬಾಣಧನುಷ್ಪಾಣಿರ್ಭ್ರಾತ್ರಾ ಸಹ ವನಂ ಗತಃ ।
ದೃಷ್ಟ್ವಾ ವನಚರಾನ್ ಸರ್ವಾನ್ ಕಚ್ಚಿತ್ ಕುರ್ಯಾಃ ಶರವ್ಯಯಮ್ ॥

ನೀನು ಬಿಲ್ಲು ಬಾಣಗಳನ್ನು ಹಿಡಿದು ತಮ್ಮನೊಂದಿಗೆ ಕಾಡಿಗೆ ಹೊರಟವನು. ಕಾಡಿನಲ್ಲಿ ವನೇಚರ ಅಸುರರನ್ನು ಕಂಡು ಬಾಣವನ್ನು ಖರ್ಚು ಮಾಡುವಿ.

ಕ್ಷತ್ರಿಯಾಣಾಂ ಚ ಹಿ ಧನುರ್ಹುತಾಶಸ್ಯೇಂಧನಾನಿ ಚ ।
ಸಮೀಪತಃ ಸ್ಥಿತಂ ತೇಜೋ ಬಲಮುಚ್ಛ್ರಯತೇ ಭೃಶಮ್ ॥೧೫॥

ಕ್ಷತ್ರಿಯರಿಗೆ ಬಿಲ್ಲು, ಬೆಂಕಿಗೆ ಕಟ್ಟಿಗೆಗಳು ಬಳಿಯಲ್ಲಿದ್ದರೆ ಬಲ ತೇಜಸ್ಸುಗಳನ್ನು ಕೆರಳಿಸುತ್ತದೆ.

ಪುರಾ ಕಿಲ ಮಹಾಬಾಹೋ ತಪಸ್ವೀ ಸತ್ಯವಾಕ್ ಶುಚಿಃ ।
ಕಸ್ಮಿಂಶ್ಚಿದಭವತ್ ಪುಣ್ಯೇ ವನೇ ರತಮೃಗದ್ವಿಜೇ ॥೧೬॥

ಮಹಾಬಾಹುವೇ! ತುಂಬ ಹಿಂದೆ ನಡೆದ ಕಥೆಯಿದು—ಮೃಗಗಳು ಹಕ್ಕಿಗಳು ಆನಂದವಾಗಿದ್ದ ಒಂದು ಪುಣ್ಯಾರಣ್ಯದಲ್ಲಿ ಶುದ್ಧನು ಸತ್ಯವಚನನು ತಪಸ್ವಿಯೂ ಆದ ಒಬ್ಬನಿದ್ದ.

ತಸ್ಯೈವ ತಪಸೋ ವಿಘ್ನಂ ಕರ್ತುಮಿಂದ್ರಃ ಶಚೀಪತಿಃ ।
ಖಡ್ಗಪಾಣಿರಥಾಗಚ್ಛದಾಶ್ರಮಂ ಭಟರೂಪಧೃತ್ ॥೧೭॥

ಅವನ ತಪಸ್ಸಿಗೇ ವಿಘ್ನ ಉಂಟುಮಾಡಲು ಶಚೀಪತಿ ಇಂದ್ರನು ಖಡ್ಗಪಾಣಿಯಾದ ಭಟನ ರೂಪ ತೊಟ್ಟು ಅವನ ಆಶ್ರಮಕ್ಕೆ ಬಂದನು.

ತಸ್ಮಿಂಸ್ತದಾಶ್ರಮಪದೇ ನಿಶಿತಃ ಖಡ್ಗ ಉತ್ತಮಃ ।
ಸ ನ್ಯಾಸವಿಧಿನಾ ದತ್ತಃ ಪುಣ್ಯೇ ತಪಸಿ ತಿಷ್ಠತಃ ॥೧೮॥

ಆ ಆಶ್ರಮದಲ್ಲಿ ಪುಣ್ಯಕರವಾದ ತಪಸ್ಸಿನಲ್ಲಿ ನಿರತನಾಗಿದ್ದ ವಿಪ್ರನಿಗೆ ಹರಿತವಾದ ಉತ್ತಮವಾದ ಖಡ್ಗವನ್ನು ನ್ಯಾಸರೂಪವಾಗಿ ಇರಿಸಿದನು.

ಸ ತಚ್ಛಸ್ತ್ರಮನುಪ್ರಾಪ್ಯ ನ್ಯಾಸರಕ್ಷಣತತ್ಪರಃ ।
ವನೇ ತಂ ವಿಚರತ್ಯೇವ ರಕ್ಷನ್ ಪ್ರತ್ಯಯಮಾತ್ಮನಃ ॥೧೯॥

ಆ ವಿಪ್ರ ಆ ಅಸ್ತ್ರವನ್ನು ಪಡೆದು ನ್ಯಾಸದ ರಕ್ಷಣೆಯಲ್ಲಿ ತತ್ಪರನಾಗಿ ಭಟನು ತನ್ನಲ್ಲಿಟ್ಟಿದ್ದ ವಿಶ್ವಾಸವನ್ನು ಉಳಿಸಿಕೊಳ್ಳುವ ಸಲುವಾಗಿ ಖಡ್ಗವನ್ನು ಹಿಡಿದೇ ಕಾಡಲ್ಲಿ ಸಂಚರಿಸುತ್ತಿದ್ದನು.

ಯತ್ರ ಗಚ್ಛತ್ಯುಪಾದಾತುಂ ಮೂಲಾನಿ ಚ ಫಲಾನಿ ಚ ।
ನ ವಿನಾ ಯಾತಿ ತಂ ಖಡ್ಗಂ ನ್ಯಾಸರಕ್ಷಣತತ್ಪರಃ ॥೨೦॥

ಫಲಮೂಲಗಳನ್ನು ತರಲು ಎಲ್ಲಿಗೆ ಹೋಗುತ್ತಾನೆ. ನ್ಯಾಸ ರಕ್ಷಣ ತತ್ಪರನಾದ ಅವನು ಅಲ್ಲೆಲ್ಲ ಕಡೆಗೂ ಖಡ್ಗವಿಲ್ಲದೆ ಹೋಗುತ್ತಿರಲಿಲ್ಲ.

ನಿತ್ಯಂ ಶಸ್ತ್ರಂ ಪರಿವಹನ್ ಕ್ರಮೇಣ ಸ ತಪೋಧನಃ ।
ಚಕಾರ ರೌದ್ರೀಂ ಸ್ವಾಂ ಬುದ್ಧಿಂ ತ್ಯಕ್ತ್ವಾ ತಪಸಿನಿಶ್ಚಯಮ್ ॥೨೧॥

ತಪೋಧನನಾಗಿದ್ದ ಆ ವಿಪ್ರ ನಿತ್ಯ ಶಸ್ತ್ರವನ್ನು ಹಿಡಿದವನಾಗಿ ತಪೋನಿಶ್ಚಯವನ್ನು ಬಿಟ್ಟು ರೌದ್ರಕರ್ಮರತನಾದನು.

ತತಃ ಸ ರೌದ್ರೇಽಭಿರತ ಪ್ರಮತ್ತೋಽಧರ್ಮಕರ್ಶಿತಃ ।
ತಸ್ಯ ಶಸ್ತ್ರಸ್ಯ ಸಂವಾಸಾಜ್ಜಗಾಮ ನರಕಂ ಮುನಿಃ ॥೨೨॥

ಏವಮೇತತ್ ಪುರಾವೃತ್ತಂ ಶಸ್ತ್ರಸಂಯೋಗಕಾರಣಮ್ ।

ಬಳಿಕ ಧರ್ಮದ ಗೆಳೆತನದಿಂದ ಹೊರಬಂದು ಹಿಂಸಾಕಾರ್ಯದಲ್ಲಿ ಮುಳುಗಿ ಆ ಖಡ್ಗದ ಸಹವಾಸದಿಂದ ನರಕ ಸೇರಿದನು. ಶಸ್ತ್ರಸಂಪರ್ಕದಿಂದ ಹಿಂದೆ ಹೀಗೆ ನಡೆಯಿತು.

ಅಗ್ನಿಸಂಯೋಗವದ್ಧೇತುಃ ಶಸ್ತ್ರಸಂಯೋಗ ಉಚ್ಯತೇ ॥೨೩॥

ಸ್ನೇಹಾಚ್ಚ ಬಹುಮಾನಾಚ್ಚ ಸ್ಮಾರಯೇ ತ್ವಾಂ ನ ಶಿಕ್ಷಯೇ ।

ಬೆಂಕಿ ಸಹವಾಸದಂತೆ ಶಸ್ತ್ರದ ಸಹವಾಸ. ನಿಮ್ಮ ಮೇಲಿನ ಸ್ನೇಹ ಗೌರವಗಳಿಂದ ಹಿಂದೆ ನಡೆದದ್ದನ್ನು ನಿಮಗೆ ನೆನಪಿಸುತ್ತಿದ್ದೇನೆ ಅಷ್ಟೆ. ಶಿಕ್ಷಣ ನೀಡುತ್ತಿಲ್ಲ.

ನ ಕಥಂಚನ ಸಾ ಕಾರ್ಯಾ ಗೃಹೀತಧನುಷಾ ತ್ವಯಾ ॥೨೪॥

ಬುದ್ಧಿರ್ವೈರಂ ವಿನಾ ಹಂತುಂ ರಾಕ್ಷಸಾನ್ ದಂಡಕಾಶ್ರಿತಾನ್ ।
ಅಪರಾಧಂ ವಿನಾ ಹಂತುಂ ಲೋಕಾನ್ ವೀರ ನ ಕಾಮಯೇ ॥೨೫॥

ಬಿಲ್ಲು ಹಿಡಿದ ನಿನ್ನಿಂದ ವೈರವಿಲ್ಲದೆ ಸುಮ್ಮನೆ ದಂಡಕಾರಣ್ಯ ನಿವಾಸಿ ರಾಕ್ಷಸರನ್ನು ಕೊಲ್ಲುವ ಬುದ್ಧಿ ಮಾಡಬಾರದು. ಅಪರಾಧವಿಲ್ಲದೆ ಯಾವ ಜನರನ್ನೂ ಕೊಲ್ಲುವುದನ್ನು ನಾನು ಇಷ್ಟಪಡುವುದಿಲ್ಲ.

ಕ್ಷತ್ರಿಯಾಣಾಂ ತು ವೀರಾಣಾಂ ವನೇಷು ನಿಯತಾತ್ಮನಾಮ್ ।
ಧನುಷಾಂ ಕಾರ್ಯಮೇತಾವದಾರ್ತಾನಾಮಭಿರಕ್ಷಣಮ್ ॥೨೬॥

ವನವಾಸನಿರತರಾದ ವೀರಕ್ಷತ್ರಿಯರಿಗೆ ಧನುಸ್ಸಿನ ಕಾರ್ಯ ಆರ್ತರಕ್ಷಣೆ ಮಾತ್ರ .

ಕ್ವ ಚ ಶಸ್ತ್ರಂ ಕ್ವ ಚ ವನಂ ಕ್ವ ಚ ಕ್ಷಾತ್ರಂ ತಪಃ ಕ್ವ ಚ ।
ವ್ಯಾವಿದ್ಧಮಿದಮಸ್ಮಾಭಿರ್ದೇಶಧರ್ಮಸ್ತು ಪೂಜ್ಯತಾಮ್ ॥೨೭॥

ಶಸ್ತ್ರ ಎಲ್ಲಿ? ಕಾಡೆಲ್ಲಿ! ಕ್ಷಾತ್ರಧರ್ಮವೆಲ್ಲಿ? ಶಾಂತ ತಪಸ್ಸು ಎಲ್ಲಿ? ಇವೆಲ್ಲ ವಿರುದ್ಧವಾದ ಸಂಗತಿಗಳು. ವನದಲ್ಲಿರುವ ನಾವು ಈ ದೇಶಧರ್ಮವನ್ನು ಗೌರವಿಸಬೇಕು.

ತದಾರ್ಯ ಕಲುಷಾ ಬುದ್ಧಿರ್ಜಾಯತೇ ಶಸ್ತ್ರಸೇವನಾತ್ ।
ಪುನರ್ಗತ್ವಾ ತ್ವಯೋಧ್ಯಾಯಾಂ ಕ್ಷತ್ರಧರ್ಮಂ ಚರಿಷ್ಯಸಿ ॥೨೮॥

ಆರ್ಯ! ಆದ್ದರಿಂದ ಶಸ್ತ್ರ ಸೇವನೆಯಿಂದ ಬುದ್ಧಿ ಕಲುಷವಾಗುತ್ತದೆ. ಅಯೋಧ್ಯೆಗೆ ಹೋದ ಬಳಿಕ ಕ್ಷತ್ರಿಯಧರ್ಮವನ್ನು ಆಚರಿಸುವಂತೆ.

ಅಕ್ಷಯಾ ತು ಭವೇತ್ ಪ್ರೀತಿಃ ಶ್ವಶ್ರೂಶ್ವಶುರಯೋರ್ಮಮ ।
ಯದಿ ರಾಜ್ಯಂ ಪರಿತ್ಯಜ್ಯ ಭವೇಸ್ತ್ವಂ ನಿರತೋ ಮುನಿಃ ॥೨೯॥

ರಾಜ್ಯ ಪರಿತ್ಯಾಗ ಮಾಡಿ ನೀನು ತಪೋನಿರತ ಮುನಿಯಾದರೆ ನನ್ನ ಅತ್ತೆ ಮಾವಂದಿರಿಗೂ ತುಂಬ ಸಂತಸವಾಗುತ್ತದೆ.

ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಮ್ ।
ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥೩೦॥

ಧರ್ಮದಿಂದ ಸಂಪತ್ತು; ಧರ್ಮದಿಂದ ಸುಖ. ಧರ್ಮದಿಂದಲೇ ಎಲ್ಲವು. ಈ ಜಗತ್ತಿನಲ್ಲಿ ಧರ್ಮವೇ ಸಾರ.

ಆತ್ಮಾನಂ ನಿಯಮೈಸ್ತೈಸ್ತೈಃ ಕರ್ಶಯಿತ್ವಾ ಪ್ರಯತ್ನತಃ ।
ಪ್ರಾಪ್ಯತೇ ನಿಪುಣೈರ್ಧರ್ಮೋ ನ ಸುಖಾಲ್ಲಭ್ಯತೇ ಸುಖಮ್ ॥೩೧॥

ನಾನಾ ಬಗೆಯ ನಿಯಮಗಳಿಂದ ತನ್ನನ್ನು ತಾನು ಪ್ರಯತ್ನಪೂರ್ವಕವಾಗಿ ನಿಯಂತ್ರಿಸಿಕೊಂಡು ಸಾಧನೆಯಲ್ಲಿ ನಿಪುಣರಾದವರು ಪುಣ್ಯವನ್ನು ಸಂಪಾದಿಸುತ್ತಾರೆ. ಸುಖದಿಂದ (ಅನಾಯಸದಿಂದ) ಸುಖ ದೊರೆಯುವುದಿಲ್ಲ.

ನಿತ್ಯಂ ಶುಚಿಮತಿಃ ಸೌಮ್ಯ ಚರ ಧರ್ಮಂ ತಪೋವನೇ ।
ಸರ್ವಂ ಹಿ ವಿದಿತಂ ತುಭ್ಯಂ ತ್ರೈಲೋಕ್ಯಮಪಿ ತತ್ತ್ವತಃ ॥೩೨॥

ಸೌಮ್ಯ ! ತಪೋವನದಲ್ಲಿ ಶುದ್ಧಬುದ್ಧಿಯವನಾಗಿ ಧರ್ಮವನ್ನು ಆಚರಿಸು. ಮೂರ್ಲೋಕವೂ ಯಥಾರ್ಥವಾಗಿ ನಿನಗೆ ತಿಳಿದೇ ಇದೆ.

ಸ್ತ್ರೀಚಾಪಲಾದೇತದುದಾಹೃತಂ ಮೇ
ಧರ್ಮಂ ಚ ವಕ್ತುಂ ತವ ಕಃ ಸಮರ್ಥಃ ।
ವಿಚಾರ್ಯ ಬುದ್ಧ್ಯಾ ತಾ ಸಹಾನುಚೇನ
ಯದ್ರೋಚತೇ ತತ್ ಕುರು ಮಾ ಚಿರೇಣ ॥೩೩॥

ಹೆಣ್ಣಿನ ಚಾಪಲದಿಂದ ಈ ಮಾತು ಹೇಳಿದೆ. ನಿನಗೆ ಧರ್ಮವನ್ನು ಹೇಳಿಕೊಡಲು ಯಾರು ಸಮರ್ಥರು? ಲಕ್ಷ್ಮಣನೊಂದಿಗೆ ವಿವೇಕದಿಂದ ವಿಚಾರಮಾಡಿ ನಿನಗೆ ಯಾವುದು ಇಷ್ಟವಾಗುತ್ತದೆ. ಅದನ್ನು ಬೇಗ ಮಾಡು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಒಂಭತ್ತನೇ ಸರ್ಗ ಮುಗಿಯಿತು.

❖

ದಶಮಃ ಸರ್ಗಃ

ಕಥಾಸಾರಾಂಶ– ಸೀತೆಯ ಪ್ರಿಯವಾದ ಹಿತನುಡಿಯನ್ನು ಆಲಿಸಿದ ಶ್ರೀರಾಮಚಂದ್ರ ಅವಳ ಹಿತಾಕಾಂಕ್ಷೆಯನ್ನು ಪ್ರಶಂಸೆ ಮಾಡಿದನು. 'ಸೀತೆ! ನೀನೆ ತಿಳಿಸಿದ ಹಾಗೆ ಕ್ಷತ್ರಿಯರ ಬಿಲ್ಲು ಆರ್ತರ ರಕ್ಷಣೆಗಾಗಿ. ದಂಡಕಾರಣ್ಯವನ್ನು ಪ್ರವೇಶಿಸಿದಾಗ, ಅನೇಕ ಆರ್ತರಾದ ಮುನಿಗಳು ನನ್ನಲ್ಲಿ ಶರಣಾಗಿ ಬಿನ್ನವಿಸಿದರು— 'ಹೋಮ ಕಾಲದಲ್ಲಿ, ಪರ್ವಕಾಲದಲ್ಲಿ ರಾಕ್ಷಸರು ಬಂದು ಆಕ್ರಮಿಸುತ್ತಾರೆ, ಕೊಲ್ಲುತ್ತಾರೆ. ಅವರ ಹಿಂಸಾಕಾಂಡಕ್ಕೆ ಅನೇಕ ಮುನಿಗಳು ಬಲಿಯಾಗುತ್ತಿದ್ದಾರೆ. ರಕ್ಕಸರ ಹಿಂಸೆ ಆಕ್ರಮಗಳಿಗೆ ಬಲಿಯಾದ ನಮ್ಮನ್ನು ನೀನು ರಕ್ಷಣೆ ಮಾಡಬೇಕು. ಬೇರೆ ಯಾರೂ ನಮಗೆ ರಕ್ಷಕರಿಲ್ಲ. ಹಿಂಸ್ರರಾಕ್ಷಸರನ್ನು ನಮ್ಮ ತಪಶ್ಶಕ್ತಿಯಿಂದಲೆ ಕೊಲ್ಲಬಹುದಾದರೂ ಕಠಿಣತಪಸ್ಸಿನ ಪುಣ್ಯವನ್ನು ಹಾಳು ಮಾಡಿಕೊಳ್ಳಬಾರದೆಂದು ನಾವು ಹಿಂಸೆಯನ್ನು ಸಹಿಸಿಕೊಂಡಿದ್ದೇವೆ''.

ಆರ್ತಋಷಿ ಸಮುದಾಯದವರಿಗೆ ರಾಕ್ಷಸರನ್ನು ಕೊಂದು ನಿಮ್ಮನ್ನು ಕಾಪಾಡುತ್ತೇನೆಂದು ಪ್ರತಿಜ್ಞೆ ಮಾಡಿದ್ದೇನೆ. ಬದುಕನ್ನು ಬಿಡುತ್ತೇನೆ. ಲಕ್ಷ್ಮಣನನ್ನು ನಿನ್ನನ್ನೂ ಬಿಡಬಲ್ಲೆ. ಪ್ರತಿಜ್ಞೆಯನ್ನು ಬಿಡಲೊಲ್ಲೆ. ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರಿಗೆ ಕೊಟ್ಟ ಮಾತನ್ನು ಮೀರುವುದಂತೂ ಸಾಧ್ಯವೇ ಇಲ್ಲ.

ಋಷಿಗಳು ಕೇಳಿಕೊಳ್ಳದೆ ಇದ್ದರೂ ನಾನು ಅವರ ರಕ್ಷಣೆಗೆ ಧಾವಿಸಬೇಕು. ಇನ್ನು ಪ್ರತಿಜ್ಞೆ ಮಾಡಿದ ಮೇಲೆ ಅದನ್ನು ಬಿಡಲು ಹೇಗೆ ಸಾಧ್ಯ ? ಅದರಿಂದ ಆರ್ತಋಷಿಗಳ ರಕ್ಷಣೆ ನನ್ನ ಕರ್ತವ್ಯ .

ಸ್ನೇಹಸೌಹಾರ್ದಗಳ ನಿಮಿತ್ತವಾಗಿ ನೀನು ಹಿತವನ್ನು ಚಿಂತನೆ ಮಾಡಿದ್ದು ನನಗೆ ಸಂತೋಷವಾಯಿತು. ನಿನ್ನ ಹಾಗು ನನ್ನ ಕುಲಕ್ಕೆ ತಕ್ಕ ಮಾತು. ನನ್ನ ಸಹಧರ್ಮಚಾರಿಣಿಯಾದ ನೀನು ಪ್ರಾಣಕ್ಕಿಂತಲೂ ಹೆಚ್ಚು!

ಹೀಗೆ ಶ್ರೀರಾಮನು ಸೀತೆಯನ್ನು ಸಂತೈಸಿದನು.

❖

ರಕ್ಷೋವಧಸಮರ್ಥನಮ್

ವಾಕ್ಯಮೇತತ್ತು ವೈದೇಹ್ಯಾ ವ್ಯಾಹೃತಂ ಭರ್ತೃಭಕ್ತಯಾ ।
ಶ್ರುತ್ವಾ ಧರ್ಮೇ ಸ್ಥಿತೋ ರಾಮಃ ಪ್ರತ್ಯುವಾಚಾಥ ಮೈಥಿಲೀಮ್॥೧॥

ಪತಿಭಕ್ತಳಾದ ವೈದೇಹಿಯ ಈ ಮಾತನ್ನು ಕೇಳಿ ಧರ್ಮನಿಷ್ಠ ಶ್ರೀರಾಮನು ಮೈಥಿಲಿಗೆ ಪ್ರತ್ಯುತ್ತರಿಸಿದನು.

ಹಿತಮುಕ್ತಂ ತ್ವಯಾ ದೇವಿ ಸ್ನಿಗ್ಧಯಾ ಸದೃಶಂ ವಚಃ ।
ಕುಲಂ ವ್ಯಪದಿಶಂತ್ಯಾ ಚ ಧರ್ಮಜ್ಞೇ ಜನಕಾತ್ಮಜೇ ॥೨॥

ದೇವಿ! ಸ್ನಿಗ್ಧಳಾದ ನೀನು ಹಿತವಾದುದನ್ನೆ ಹೇಳಿರುವೆ. ಧರ್ಮಜ್ಞೆ! ಜನಕಾತ್ಮಜೇ! ನಿನ್ನ ವಂಶದ ಹಿರಿಮೆಯನ್ನು ಎತ್ತಿ ತೋರಿಸುವಂತಹ ನಡೆ ನಿನ್ನದು.

ಕಿಂ ತು ವಕ್ಷ್ಯಾಮ್ಯಹಂ ದೇವಿ ತ್ವಯ್ಯೇವೋಕ್ತಮಿದಂ ವಚಃ ।
ಕ್ಷತ್ತ್ರಿಯೈರ್ಧಾರ್ಯತೇ ಚಾಪೋ ನಾರ್ತಶಬ್ದೋ ಭವೇದಿತಿ ॥೩॥

ಮತ್ತೇನೆಂದರೆ ಹೇಳುತ್ತೇನೆ ಕೇಳು–ನೀನೇ ಹೇಳಿದ ಮಾತು ಕ್ಷತ್ರಿಯರು ಬಿಲ್ಲು ಹಿಡಿಯುವುದು–ಆರ್ತರ ಅಳಲು ಆಗಬಾರದೆಂದು.

ಮಾಂ ಸೀತೇ ಸ್ವಯಮಾಗಮ್ಯ ಶರಣ್ಯಾಃ ಶರಣಂ ಗತಾಃ ।
ತೇ ಚಾರ್ತಾ ದಂಡಕಾರಣ್ಯೇ ಮುನಯಃ ಸಂಶಿತವ್ರತಾಃ ॥೪॥

ಸೀತೆ! ರಕ್ಷಣೀಯರಾದ ಋಷಿಗಳು ಸ್ವಯಂ ಬಂದು ಶರಣು ಹೊಂದಿದರು. ಅವರೆಲ್ಲ ವ್ರತನಿಷ್ಠರಾದ ಆರ್ತರಾದ ದಂಡಕಾರಣ್ಯನಿವಾಸಿ ಮುನಿಗಳು.

ವಸಂತೋ ಧರ್ಮನಿರತಾ ವನೇ ಮೂಲಫಲಾಶನಾಃ ।
ನ ಲಭಂತೇ ಸುಖಂ ಭೀತಾ ರಾಕ್ಷಸೈಃ ಕ್ರೂರಕರ್ಮಭಿಃ ॥೫॥

ಗೆಡ್ಡೆ ಗೆಣಸುಗಳನ್ನು ತಿಂದುಕೊಂಡು ವನದಲ್ಲಿ ವಾಸಮಾಡುವ ತಪೋನಿರತ ತಾಪಸರು ಕ್ರೂರಕರ್ಮದ ರಕ್ಕಸರಿಂದ ಹೆದರಿ ಸುಖವನ್ನು ಹೊಂದುತ್ತಿಲ್ಲ.

ಕಾಲೇ ಕಾಲೇ ಚ ನಿರತಾ ನಿಯಮೈರ್ವಿವಿಧೈರ್ವನೇ ।
ಭಕ್ಷ್ಯಂತೇ ರಾಕ್ಷಸೈರ್ಘೋರೈರ್ನ ಮಾಂಸೋಪಜೀವಿಭಿಃ ॥೬॥

ಕಾಲಕಾಲಕ್ಕೆ ಬಗೆಬಗೆಯ ನಿಯಮಗಳಲ್ಲಿ ನಿರತರಾದ ಋಷಿಗಳು ವನದಲ್ಲಿ ನರಮಾಂಸೋಪಜೀವಿಗಳಾದ ಭಯಂಕರ ರಾಕ್ಷಸರಿಂದ ತಿನ್ನಲ್ಪಡುತ್ತಿದ್ದಾರೆ.

ತೇ ಭಕ್ಷ್ಯಮಾಣಾ ಮುನಯೋ ದಂಡಕಾರಣ್ಯವಾಸಿನಃ ।
ಅಸ್ಮಾನಭ್ಯವಪದ್ಯೇತಿ ಮಾಮೂಚುರ್ದ್ವಿಜಸತ್ತಮಾಃ ॥೭॥

ರಾಕ್ಷಸರಿಗೆ ಆಹಾರವಾಗುತ್ತಿರುವ ದಂಡಕಾರಣ್ಯನಿವಾಸಿ ಮುನಿಗಳು ನನ್ನಲ್ಲಿ ಬಂದು ನಮ್ಮನ್ನು ಅನುಗ್ರಹಿಸು ಎಂದು ಕೇಳಿಕೊಂಡಿದ್ದಾರೆ.

ಮಯಾ ತು ವಚನಂ ಶ್ರುತ್ವಾ ತೇಷಾಮೇವ ಮುಖಾಚ್ಚ್ಯುತಮ್ ।
ಕೃತ್ವಾ ಚರಣಶುಶ್ರೂಷಾಂ ವಾಕ್ಯಮೇತದುದಾಹೃತಮ್ ॥೮॥

ಅವರ ಮುಖದಿಂದ ಹೊಮ್ಮಿದ ಮಾತನ್ನು ಕೇಳಿ ಅವರ ಚರಣ ಶುಶ್ರೂಷೆ-ಯನ್ನು ಮಾಡಿ ಈ ಮಾತು ನನ್ನಿಂದ ಹೇಳೋಣವಾಯಿತು.

ಪ್ರಸೀದಂತು ಭವಂತೋ ಮೇ ಹ್ರೀರೇಷಾ ಹಿ ಮಮಾತುಲಾ ।
ಯದೀದೃಶೈರಹಂ ವಿಪ್ರೈರುಪಸ್ಥೇಯೈರುಪಸ್ಥಿತಃ ॥೯॥

ತಾವು ಪ್ರಸನ್ನರಾಗಿರಿ. ನನಗೆ ತುಂಬ ಸಂಕೋಚವಾಗುತ್ತಿದದೆ. ನಾನೇ ಭೇಟಿಯಾಗಬೇಕಿದ್ದ ತಾವು ವಿಪ್ರರು ನೀವೇ ನನ್ನ ಬಳಿ ಬಂದು ನಿವೇದನೆ ಮಾಡುತ್ತಿದ್ದೀರಿ!

ಕಿಂ ಕರೋಮಿತಿ ಚ ಮಯಾ ವ್ಯಾಹೃತಂ ದ್ವಿಜಸನ್ನಿಧೌ ।

ನಾನು ಏನು ಮಾಡಲಿ ಎಂದು ತಿಳಿಸಿ–ಹೀಗೆ ಬ್ರಾಹ್ಮಣರ ಸನ್ನಿಧಿಯಲ್ಲಿ ಹೇಳಿದೆ.

ಸರ್ವೈರೇತೈಃ ಸಮಾಗಮ್ಯ ವಾಗಿಯಂ ಸಮುದಾಹೃತಾ ॥೧೦॥

ಈ ಎಲ್ಲ ವಿಪ್ರರೂ ಬಂದು ಈ ಮಾತನ್ನು ಹೇಳಿದರು.

ರಾಕ್ಷಸೈರ್ದಂಡಕಾರಣ್ಯೇ ಬಹುಭಿಃ ಕಾಮರೂಪಿಭಿಃ ।
ಅರ್ದಿತಾಃ ಸ್ಮ ಭೃಶಂ ರಾಮ ಭವನ್ನಸ್ತ್ರಾತುಮರ್ಹತಿ ॥೧೧॥

ರಾಮ! ಬಯಸಿದ ರೂಪ ಪಡೆಯುವ ಬಹಳ ರಾಕ್ಷಸರು ದಂಡಕಾರಣ್ಯದಲ್ಲಿ ನಮ್ಮನ್ನು ಹಿಂಸಿಸುತ್ತಿದ್ದಾರೆ. ನಿಶ್ಚಿತವಾಗಿ ನೀನೇ ನಮ್ಮನ್ನು ರಕ್ಷಿಸು.

ಹೋಮಕಾಲೇಷು ಸಂಪ್ರಾಪ್ತಾಃ ಪರ್ವಕಾಲೇಷು ಚಾನಘ ।
ಧರ್ಷಯಂತಿ ಸುದುರ್ಧರ್ಷಾ ರಾಕ್ಷಸಾಃ ಪಿಶಿತಾಶನಾಃ ॥೧೨॥

ನಿರ್ದೋಷನೇ! ಧರ್ಷಣೆಗೆ ಸಾಧ್ಯವಾಗದ ಮಾಂಸಾಹಾರಿ ರಕ್ಕಸರು ಹೋಮ ಸಮಯದಲ್ಲಿ ಪರ್ವಕಾಲಗಳಲ್ಲಿ ಆಕ್ರಮಿಸುತ್ತಿದ್ದಾರೆ.

ರಾಕ್ಷಸೈರ್ಧರ್ಷಿತಾನಾಂ ಚ ತಾಪಸಾನಾಂ ತಪಸ್ವಿನಾಮ್ ।
ಗತಿಂ ಮೃಗಯಮಾಣಾನಾಂ ಭವಾನ್ನಃ ಪರಮಾ ಗತಿಃ ॥೧೩॥

ರಾಕ್ಷಸರ ಆಕ್ರಮಣಕ್ಕೆ ತುತ್ತಾಗಿ ಆಸರೆಯನ್ನು ಅರಸುತ್ತಿರುವ ತಪಸ್ವೀ ತಾಪಸರಿಗೆ ನಿನ್ನೆ ಉತ್ತಮವಾದ ಆಸರೆ.

ಕಾಮಂ ತಪಃಪ್ರಭಾವೇಣ ಶಕ್ತಾ ಹಂತುಂ ನಿಶಾಚರಾನ್ ।
ಚಿರಾರ್ಜಿತಂ ತು ನೇಚ್ಛಾಮಸ್ತಪಃ ಖಂಡಯಿತುಂ ವಯಮ್ ॥೧೪॥

ಇಚ್ಛೆಪಟ್ಟರೆ ನಮ್ಮ ತಪಃಪ್ರಭಾವದಿಂದ ನಿಶಾಚರರನ್ನು ಕೊಲ್ಲಲು ನಾವು ಸಮರ್ಥರು. ಆದರೆ ಬಹುಕಾಲದಿಂದ ಆಚರಿಸುವ ತಪಸ್ಸನ್ನು ಹಾನಿಮಾಡಿಕೊಳ್ಳಲು ಬಯಸುತ್ತಿಲ್ಲ.

ಬಹುವಿಘ್ನಂ ತಪೋ ನಿತ್ಯಂ ದುಶ್ಚರಂ ಚೈವ ರಾಘವ ।
ತೇನ ಶಾಪಂ ನ ಮುಂಚಾಮೋ ಭಕ್ಷ್ಯಮಾಣಾಶ್ಚ ರಾಕ್ಷಸೈಃ ॥೧೫॥

ಬಹಳ ವಿಘ್ನಗಳಿಂದಾಗಿ ನಿತ್ಯ ತಪಸ್ಸು ಮಾಡುವುದು ಕಷ್ಟವಾಗಿದೆ. ಆದ್ದರಿಂದ ರಾಕ್ಷಸರಿಂದ ನಾವು ತಿನ್ನೋಣರಾದರೂ ಶಾಪವನ್ನು ಹಾಕುತ್ತಿಲ್ಲ.

ತದದ್ಯಮಾನಾನ್ ರಕ್ಷೋಭಿರ್ದಂಡಕಾರಣ್ಯವಾಸಿಭಿಃ ।
ರಕ್ಷ ನಸ್ತ್ವಂ ಸಹ ಭ್ರಾತ್ರಾ ತ್ವನ್ನಾಥಾ ಹಿ ವಯಂ ವನೇ ॥೧೬॥

ಆದ್ದರಿಂದ ದಂಡಕಾರಣ್ಯವಾಸಿ ರಾಕ್ಷಸರಿಂದ ಹಿಂಸೆಗೊಳಗಾದ ನಮ್ಮನ್ನು ನೀನು ಲಕ್ಷ್ಮಣನೊಂದಿಗೆ ಜೊತೆಗೂಡಿ ರಕ್ಷಿಸು. ಈ ಕಾಡಿನಲ್ಲಿ ನೀನೇ ನಮಗೆ ಸ್ವಾಮಿ.

ಮಯಾ ಚೈತದ್ವಚಃ ಶ್ರುತ್ವಾ ಕಾರ್ತ್ಸ್ನ್ಯೇನ ಪರಿಪಾಲನಮ್ ।
ಋಷೀಣಾಂ ದಂಡಕಾರಣ್ಯೇ ಸಂಶ್ರುತಂ ಜನಕಾತ್ಮಜೇ ॥೧೭॥

ಜಾನಕಿ! ಋಷಿಗಳ ಮಾತನ್ನು ಕೇಳಿ ಅವರ ಸಂಪೂರ್ಣ ರಕ್ಷಣೆಯ ಭರವಸೆಯನ್ನು ದಂಡಕಾರಣ್ಯದಲ್ಲಿ ಪ್ರತಿಜ್ಞೆ ಮಾಡಿದ್ದೇನೆ.

ಸಂಶ್ರುತ್ಯ ಚ ನ ಶಕ್ಷ್ಯಾಮಿ ಜೀವಮಾನಃ ಪ್ರತಿಶ್ರವಮ್ ।
ಮುನೀನಾಮನೃತಾ ಕರ್ತುಂ ಸತ್ಯಮಿಷ್ಟಂ ಹಿ ಮೇ ಸದಾ ॥೧೮॥

ಋಷಿಗಳ ಮುಂದೆ ರಕ್ಷಣೆಯ ಪ್ರತಿಜ್ಞೆ ಮಾಡಿ ನಾನು ಬದುಕಿದ್ದು ಅವರಿಗಾಗಿ

ಮಾಡಿದ ಪ್ರತಿಜ್ಞೆಯನ್ನು ವ್ಯರ್ಥಗೊಳಿಸಲಾರೆ. ನನಗೆ ಯಾವಾಗಲೂ ಸತ್ಯ ಇಷ್ಟ ತಾನೆ!

ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್ ।
ನ ತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ॥೧೯॥

ಬೇಕಾದರೆ ನನ್ನ ಬದುಕನ್ನೇ ಬಿಟ್ಟೇನು! ಅಥವಾ ಲಕ್ಷ್ಮಣ ಸಹಿತ, ಸೀತೆಯನ್ನೂ ಬಿಟ್ಟೇನು! ಮಾಡಿದ ಪ್ರತಿಜ್ಞೆಯಯನ್ನು ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರಿಗಾಗಿ ಮಾಡಿದ ಪ್ರತಿಜ್ಞೆಯನ್ನು ಬಿಡಲಾರೆ.

ತದವಶ್ಯಂ ಮಯಾ ಕಾರ್ಯಮೃಷೀಣಾಂ ಪರಿಪಾಲನಮ್ ।
ಅನುಕ್ತೇನಾಪಿ ವೈದೇಹಿ ಪ್ರತಿಜ್ಞಾಯ ತು ಕಿಂ ಪುನಃ ॥೨೦॥

ಅವರು ಹೇಳದಿದ್ದರೂ ಋಷಿಗಳ ಪರಿಪಾಲನೆಯು ನನ್ನ ಅವಶ್ಯ ಕರ್ತವ್ಯ. ವೈದೇಹಿ! ಪಾಲಿಸುವ ಪ್ರತಿಜ್ಞೆ ಮಾಡಿದ ಬಳಿಕವಂತು ಅವರನ್ನು ಕಾಪಾಡುವುದು ಕರ್ತವ್ಯವೆಂದು ಹೇಳುವುದೇನಿದೆ?

ಮಮ ಸ್ನೇಹಾಚ್ಚ ಸೌಹಾರ್ದಾದಿದಮುಕ್ತಂ ತ್ವಯಾನಘೇ ।
ಪರಿತುಷ್ಟೋಽಸ್ಮ್ಯಹಂ ಸೀತೇ ನ ಹ್ಯನಿಷ್ಟೋಽನುಶಿಷ್ಯತೇ ॥೨೧॥

ನನ್ನ ಮೇಲಿನ ಸ್ನೇಹ ಸೌಹಾರ್ದಗಳಿಂದಾಗಿ, ಅನಘೇ! ನಿನ್ನಿಂದ ಹೀಗೆ ಹೇಳೋಣವಾಗಿದೆ. ಅದರಿಂದ ನಾನು ಸಂತುಷ್ಟನಾಗಿದ್ದೇನೆ. ಸೀತೆ ಇಷ್ಟವಲ್ಲದ್ದನ್ನು ಮಾಡು ಎಂದೇನು ಹೇಳುತ್ತಿಲ್ಲ ತಾನೆ.

ಸದೃಶಂ ಚಾನುರೂಪಂ ಚ ಕುಲಸ್ಯ ತವ ಚಾತ್ಮನಃ ।
ಸಧರ್ಮಚಾರಿಣೀ ಮೇ ತ್ವಂ ಪ್ರಾಣೇಭ್ಯೋಽಪಿ ಗರಿಯಸೀ ॥೨೨॥

ನಿನ್ನ ಹಾಗು ನನ್ನ ಕುಲಕ್ಕೆ ಶೋಭೆತರುವಂತಹ ಉಚಿತವಾದುದನ್ನೇ ಹೇಳಿರುವಿ. ನನ್ನ ಸಹಧರ್ಮಚಾರಿಣಿಯಾದ ನೀನು ನನಗೆ ಪ್ರಾಣಕ್ಕಿಂತಲೂ ಹೆಚ್ಚಿನವಳು.

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ಸೀತಾಂ ಪ್ರಿಯಾಂ ಮೈಥಿಲರಾಜಪುತ್ರೀಮ್ ।
ರಾಮೋ ಧನುಷ್ಮಾನ್ ಸಹ ಲಕ್ಷ್ಮಣೇನ
ಜಗಾಮ ರಮ್ಯಾಣಿ ತಪೋವನಾನಿ ॥೨೩॥

ಮಹಾತ್ಮ ರಾಮನು ಮೈಥಿಲರಾಜಪುತ್ರಿಯಾದ ಪ್ರಿಯ ಸೀತೆಯನ್ನು ಕುರಿತು ಹೀಗೆ ಹೇಳಿ ಲಕ್ಷ್ಮಣನಿಂದ ಸಹಿತನಾಗಿ ಧನುರ್ಧಾರಿಯಾಗಿ ರಮ್ಯತಪೋವನ ಗಳನ್ನು ಕುರಿತು ಹೊರಟನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹತ್ತನೇ ಸರ್ಗ ಮುಗಿಯಿತು.

❖

ಸಂಗ್ರಹರಾಮಾಯಣದಲ್ಲಿ—

ಸೀತೆಯ ಮಾತು– ತಾಪಸ್ಯಕ್ತರಾಜ್ಯಸ್ತ್ವಂ ವ್ಯಸ್ತದಂಡೋಽಸಿ ರಾಘವ ।
ಕಥಂ ರಕ್ಷೋವಧೋ ಧರ್ಮಸ್ತವೇತ್ಯೂಚೇ ಹಿ ವಿಸ್ಮಿತಾ ॥

ರಾಜ್ಯವನ್ನು ಬಿಟ್ಟು ದಂಡನೆ ಮಾಡುವುದನ್ನು ಬಿಟ್ಟು ತಾಪಸನಾಗಿ ವನವಾಸ ಮಾಡುತ್ತಿರುವ ನಿನಗೆ ರಕ್ಕಸರ ಸಂಹಾರ ಹೇಗೆ ಸರಿಯಾಗುತ್ತದೆ ಎಂದು ಅಚ್ಚರಿಗೊಂಡ ಸೀತೆ ಕೇಳಿದಳು.

ರಾಮನ ಉತ್ತರ—

ದಹನಂ ದಹನಸ್ಯೈವ ರಾಜ್ಞೋ ದುರ್ಜನನಿಗ್ರಹಃ ।
ಸರ್ವಾವಸ್ಥಾಸು ಧರ್ಮಃ ಸ್ಯಾದಿತಿ ರಾಮೋಽಭ್ಯಭಾಷತ ॥

(ಅರಣ್ಯಕಾಂಡ–೨–೩೭,೩೮)

ಬೆಂಕಿಗೆ ಸುಡುವುದು ಹೇಗೆ ಸಾರ್ವಕಾಲಿಕ ಧರ್ಮವೋ ಹಾಗೆ ಕ್ಷತ್ರಿಯನಿಗೆ ಅಧಿಕಾರ ಇರಲಿ ಬಿಡಲಿ ಎಲ್ಲ ಅವಸ್ಥೆಗಳಲ್ಲಿಯೂ ದುರ್ಜನ ನಿಗ್ರಹ ಧರ್ಮ ಎಂದು ರಾಮನು ಹೇಳಿದ.

ಏಕಾದಶಃ ಸರ್ಗಃ

ಕಥಾಸಾರಾಂಶ– ಮುಂದೆ ರಾಮ. ಮಧ್ಯ ಸೀತೆ. ಹಿಂದೆ ಧನುಷ್ಪಾಣಿ ಲಕ್ಷ್ಮಣ– ಈ ಕ್ರಮದಲ್ಲಿ ಕಾಡಿನ ಸುಂದರ ಪರ್ವತಗಳನ್ನು ನದೀ ತೊರೆಗಳನ್ನು ಸರೋವರಗಳನ್ನು ಜಿಂಕೆ, ಚಕ್ರವಾಕ ಮುಂತಾದ ಚಿತ್ತಾಕರ್ಷಕ ಹಕ್ಕಿಗಳನ್ನು ಎಮ್ಮೆ ಹಂದಿ ನಾಗಗಳನ್ನು ನೋಡುತ್ತಾ , ಸಂಜೆ ತನಕ ಪಯಣಿಸಿದರು.

ಅಲ್ಲೊಂದು ಅದ್ಭುತ ಸುಂದರ ಸರೋವರವನ್ನು ಕಂಡರು. ಗೀತ ವಾದ್ಯಗಳ ಘೋಷ ಕೇಳಿತು. ಆದರೆ ಯಾವ ವ್ಯಕ್ತಿಗಳೂ ಕಾಣಲಿಲ್ಲ. ಕುತೂಹಲದಿಂದ ಧರ್ಮಭೃತ್ ಎಂಬ ಮುನಿಯನ್ನು ವಿಚಾರಿಸಿದರು. ಆ ಚಮತ್ಕಾರದ ಹಿನ್ನಲೆಯನ್ನು ವಿವರಿಸಿದರು—ಇಲ್ಲಿ ಮಾಂಡಕರ್ಣಿ ಎಂಬ ಋಷಿಗಳು ಜಲಾಶಯದಲ್ಲಿ ನಿಂತು ಹತ್ತುಸಾವಿರ ವರ್ಷ ತಪಸ್ಸು ಮಾಡುತ್ತಿದ್ದರು. ಇದನ್ನು ಗಮನಿಸಿದ ದೇವತೆಗಳು ಪರಸ್ಪರ ಮಾತಾಡಿಕೊಂಡರು—ನಮ್ಮಲ್ಲಿ ಯಾರದೋ ಸ್ಥಾನವನ್ನು ಬಯಸಿ ಈ ಮುನಿ ತಪಸ್ಸು ಮಾಡುತ್ತಿರಬೇಕು. ತಪೋವಿಘ್ನವನ್ನುಂಟು ಮಾಡೋಣ. ಹೀಗೆ ವಿಚಾರ ಮಾಡಿ ಐದು ಜನ ಅಪ್ಸರೆಯರನ್ನು ಅಲ್ಲಿಗೆ ಕಳುಹಿಸಿದರು. ಮಾಂಡಕರ್ಣಿಗಳು–ಯೌವನದ ಹರೆಯದವರು–ಆ ಐದು ಜನ ಅಪ್ಸರೆಯರನ್ನು ವಿವಾಹವಾಗಿ ಅವರಿಗೆ ಈ ಸರೋವರದೊಳಗೆ ತಪಃ ಪ್ರಭಾವದಿಂದ ಮನೆ ಮಾಡಿಕೊಟ್ಟಿದ್ದಾರೆ. ಅವರ ಗೀತ ವಾದ್ಯಗಳ ಘೋಷವಿದು ಎಂದು ಹೇಳಿದರು.

ಆ ರಾತ್ರಿ ಅಲ್ಲಿ ಕಳೆದು ಮರುದಿನ ಹೊರಟವರು ಬೇರೆ ಬೇರೆ ಮುನಿಗಳ ಆಶ್ರಮಗಳಲ್ಲಿ ಕೆಲವೆಡೆ ಸಂವತ್ಸರ, ಕೆಲವೆಡೆ ಹತ್ತು ತಿಂಗಳು, ಆರು, ನಾಲ್ಕು ತಿಂಗಳು –ಈ ರೀತಿ ವಾಸ ಮಾಡುತ್ತ ಸಂಚಾರ ಮಾಡುತ್ತ ಹತ್ತು ವರ್ಷ ಕಳೆದು ಮತ್ತೆ ಸುತೀಕ್ಷ್ಣರ ಆಶ್ರಮಕ್ಕೆ ಹಿಂತಿರುಗಿದರು.

ಅಗಸ್ತ್ಯರ ಆಶ್ರಮಕ್ಕೆ ಹೋಗುವ ಬಯಕೆಯನ್ನು ವ್ಯಕ್ತಮಾಡಿ ಆಶ್ರಮದ ದಾರಿ ಕೇಳಿದರು.

ಇಂದೇ ಪ್ರಯಾಣ ಮಾಡಿ ಇಲ್ಲಿಂದ ನಾಕು ಯೋಜನ ದೂರದಲ್ಲಿರುವ ಅಗಸ್ತ್ಯರ ತಮ್ಮಂದಿರ ಆಶ್ರಮದಲ್ಲಿ ಉಳಿದುಕೊಂಡು ಮರುದಿನ ಯೋಜನ ಅಂತರದಲ್ಲಿರುವ ಅಗಸ್ತ್ಯಾಶ್ರಮಕ್ಕೆ ಹೋಗುವಂತೆ ಸುತೀಕ್ಷ್ಣರು ಮಾರ್ಗದರ್ಶನ ಮಾಡಿದರು.

ಅದೇರೀತಿ ಶ್ರೀರಾಮನು ಸೀತೆ ಲಕ್ಷ್ಮಣರೊಂದಿಗೆ ಪ್ರಯಾಣ ಮಾಡಿ ಅಗಸ್ತ್ಯಭ್ರಾತೃವಿನ ಆಶ್ರಮದಲ್ಲಿ ತಂಗಿ ಮರುದಿನ ಅಗಸ್ತ್ಯಾಶ್ರಮ ತಲುಪಿದರು.

❖

ಅಗಸ್ತ್ಯಾಶ್ರಮಃ

ಅಗ್ರತಃ ಪ್ರಯಯೌ ರಾಮಃ ಸೀತಾ ಮಧ್ಯೇ ಸುಮಧ್ಯಮಾ ।
ಪೃಷ್ಠತಸ್ತು ಧನುಷ್ಪಾಣಿರ್ಲಕ್ಷ್ಮಣೋಽನುಜಗಾಮ ಹ ॥೧॥

ಮುಂದೆ ಶ್ರೀರಾಮ ನಡೆದ. ಮಧ್ಯದಲ್ಲಿ ಸುಂದರನಡುವಿನ ಸೀತೆ. ಹಿಂದೆ ಧನುಷ್ಪಾಣಿ ಲಕ್ಷ್ಮಣ ಅನುಸರಿಸಿ ಹೋದ.

ತೌ ಪಶ್ಯಮಾನೌ ವಿವಿಧಾನ್ ಶೈಲಪ್ರಸ್ಥಾನ್ ವನಾನಿ ಚ ।
ನದೀಶ್ಚ ವಿವಿಧಾ ರಮ್ಯಾ ಜಗ್ಮತುಃ ಸೀತಯಾ ಸಹ ॥೨॥

ರಾಮಲಕ್ಷ್ಮಣರು ಸೀತೆಯೊಂದಿಗೆ ಬಗೆಬಗೆ ಗಿರಿಶಿಖರಗಳನ್ನು ವನಗಳನ್ನು ರಮ್ಯವಾದ ನಾನಾನದಿಗಳನ್ನು ನೋಡುತ್ತ ಮುಂದೆ ಸಾಗಿದರು.

ಸಾರಸಾಂಶ್ಚಕ್ರವಾಕಾಂಶ್ಚ ನದೀಪುಲಿನಚಾರಿಣಃ ।
ಸರಾಂಸಿ ಚ ಸಪದ್ಮಾನಿ ಯುಕ್ತಾನಿ ಜಲಜೈಃ ಖಗೈಃ ॥೩॥

ನದೀತೀರದಲ್ಲಿ ಸಂಚರಿಸುತ್ತಿದ್ದ ಸಾರಸ ಚಕ್ರವಾಕಗಳನ್ನು ತಾವರೆಯ ಕೊಳಗಳನ್ನು ಅಲ್ಲಿರುವ ನೀರಹಕ್ಕಿಗಳನ್ನೂ ನೋಡಿದರು.

ಯೂಥಬದ್ಧಾಂಶ್ಚ ಪೃಷತಾನ್ ಮದೋನ್ಮತ್ತಾನ್ ವಿಷಾಣಿನಃ ।
ಮಹಿಷಾಂಶ್ಚ ವರಾಹಾಂಶ್ಚ ನಾಗಾಂಶ್ಚ ದ್ರುಮವೈರಿಣಃ ॥೪॥

ಗುಂಪುಗುಂಪಾಗಿದ್ದ ಚುಕ್ಕೆಯ ಜಿಂಕೆಗಳನ್ನು, ಉದ್ದವಾದ ತೀಷ್ಣವಾದ ಕೊಂಬುಗಳುಳ್ಳ ಕಾಡುಕೋಣಗಳನ್ನು, ಕೋರೆ ದಾಡೆಯ ಹಂದಿಗಳನ್ನು ಮರಗಳನ್ನು ಉರುಳಿಸುವ ಉದ್ದ ದಂತದ ಆನೆಗಳನ್ನು ಕೂಡ ನೋಡುತ್ತಾ ಪಯಣಿಸಿದರು.

ತೇ ಗತ್ವಾ ದೂರಮಧ್ವಾನಂ ಲಂಬಮಾನೇ ದಿವಾಕರೇ ।
ದದೃಶುಃ ಸಹಿತಾ ರಮ್ಯಂ ತಟಾಕಂ ಯೋಜನಾಯತಮ್ ॥೫॥

ದೂರದ ದಾರಿಯಲ್ಲಿ ಸಾಗಿ ಸೂರ್ಯ ಮುಳುಗುತ್ತಿರುವಾಗ ಯೋಜನದಷ್ಟು ಅಗಲದ ತಟಾಕವೊಂದನ್ನು ಕಂಡರು.

ಪದ್ಮಪುಷ್ಕರಸಂಬಾಧಂ ಗಜಯೂಥೈರಲಂಕೃತಮ್ ।
ಸಾರಸೈರ್ಹಂಸಕಾದಂಬೈಃ ಸಂಕುಲಂ ಜಲಚಾರಿಭಿಃ ॥೬॥

ಆ ಸರೋವರದಲ್ಲಿ ಕೆಂದಾವರೆ ಹಾಗು ಬಿಳಿ ತಾವರೆಗಳು ತುಂಬಿದ್ದವು. ಆನೆಯ ಹಿಂಡುಗಳಿಂದ ಅಲಂಕೃತವಾಗಿತ್ತು. ಸಾರಸಹಂಸ ಕಲಹಂಸಗಳಿಂದ ಜಲಚರ-ಗಳಿಂದಲೂ ತುಂಬಿತ್ತು.

ಪ್ರಸನ್ನಸಲಿಲೇ ರಮ್ಯೇ ತಸ್ಮಿನ್ ಸರಸಿ ಶುಶ್ರುವೇ ।
ಗೀತವಾದಿತ್ರನಿರ್ಘೋಷೋ ನ ತು ಕಶ್ಚನ ದೃಶ್ಯತೇ ॥೭॥

ಪ್ರಸನ್ನ ಸಲಿಲದ ಆ ಸರೋವರದಲ್ಲಿ ಗೀತವಾದ್ಯಗಳ ಘೋಷ ಕೇಳಿಸುತ್ತಿತ್ತು. ಆದರೆ ಯಾರೂ ಕಾಣುತ್ತಿರಲಿಲ್ಲ.

ತತಃ ಕೌತೂಹಲಾದ್ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ಮುನಿಂ ಧರ್ಮಭೃತಂ ನಾಮ ಪ್ರಷ್ಟುಂ ಸಮುಪಚಕ್ರಮೇ ॥೮॥

ಆಗ ಕುತೂಹಲದಿಂದ ಮಹಾಬಲಶಾಲಿಯಾದ ರಾಮ ಹಾಗು ಲಕ್ಷ್ಮಣರು ಧರ್ಮಭೃತ ಎಂಬ ಮುನಿಯನ್ನು ಕೇಳಲು ಆರಂಭಿಸಿದರು.

ಇದಮತ್ಯದ್ಭುತಂ ಶ್ರುತ್ವಾ ಸರ್ವೇಷಾಂ ನೋ ಮಹಾಮುನೇ ।
ಕೌತೂಹಲಂ ಮಹಜ್ಜಾತಂ ಕಿಮಿದಂ ಸಾಧು ಕಥ್ಯತಾಮ್ ।
ವಕ್ತವ್ಯಂ ಯದಿ ಚೇದ್ವಿಪ್ರ ನಾತಿಗುಹ್ಯಮಪಿ ಪ್ರಭೋ ॥೯॥

ಈ ಅತ್ಯದ್ಭುತವಾದ ಗೀತವಾದ್ಯಗಳ ಘೋಷವನ್ನು ಕೇಳಿ ನಮಗೆಲ್ಲ ಬಹಳ ಕೌತುಕ ಮೂಡಿದೆ. ಮಹಾಮುನಿಗಳೇ! ಇದೇನು ಹೇಳೋಣವಾಗಲಿ. ಅತಿಗುಹ್ಯ-ವಾಗಿರದೆ ಹೇಳಬಹುದಾಗಿದ್ದರೆ ಪ್ರಭುಗಳೇ ಹೇಳಿ.

ತೇನೈವಮುಕ್ತೋ ಧರ್ಮಾತ್ಮಾ ರಾಘವೇಣ ಮುನಿಸ್ತದಾ
ಪ್ರಭವಂ ಸರಸಃ ಕೃತ್ಸ್ನಮಾಖ್ಯಾತುಮುಪಚಕ್ರಮೇ ॥೧೦॥

ಪ್ರಭಾವಂ – ಪಾಠಾಂತರ.

ಶ್ರೀರಾಮ ಹೀಗೆ ಕೇಳಿದಾಗ ಧರ್ಮಾತ್ಮಾ ಧರ್ಮಭೃತ ಎಂಬ ಮುನಿಗಳು ಆ ಸರೋವರ ಮಹಿಮೆಯನ್ನು ಸಮಗ್ರವಾಗಿ ಹೇಳಲುಪಕ್ರಮಿಸಿದರು.

ಇದಂ ಪಂಚಾಪ್ಸರೋ ನಾಮ ತಟಾಕಂ ಸಾರ್ವಕಾಲಿಕಮ್ ।
ನಿರ್ಮಿತಂ ತಪಸಾ ರಾಮ ಮುನಿನಾ ಮಾಂಡಕರ್ಣಿನಾ ॥೧೧॥

ಇದು ಎಲ್ಲ ಕಾಲದಲ್ಲಿಯೂ ನೀರು ತುಂಬಿರುವ 'ಪಂಚಾಪ್ಸರ' ಎಂಬ ತಾಟಕ. ರಾಮ! ಮಾಂಡಕರ್ಣಿಮುನಿಗಳು ತಪಸ್ಸಿನಿಂದ ನಿರ್ಮಾಣವಾದದ್ದು.

ಸ ಹಿ ತೇಪೇ ತಪಸ್ತೀವ್ರಂ ಮಾಂಡಕರ್ಣಿರ್ಮಹಾಮುನಿಃ ।
ದಶ ವರ್ಷಸಹಸ್ರಾಣಿ ವಾಯುಭಕ್ಷೋ ಜಲಾಶ್ರಯಃ ॥೧೨॥

ಜಲಾಶ್ರಯೀ, ಜಲಾಶಯೀ – ಪಾಠಾಂತರ.

ಆ ಪ್ರಸಿದ್ಧ ಮಾಂಡಕರ್ಣಿ ಮಹಾಮುನಿಗಳು ಬರೇ ಗಾಳಿಯನ್ನು ಆಹಾರವಾಗಿಸಿಕೊಂಡು ಈ ಜಲಾಶಯದಲ್ಲಿ ಹತ್ತು ಸಾವಿರ ವರ್ಷಗಳ ಕಾಲ ತೀವ್ರ ತಪಸ್ಸನ್ನು ಮಾಡಿದರು.

ಸರಃ ಪಂಚಾಪ್ಸರೋ ನಾಮ ಪ್ರಾಪುಸ್ತೇ ಯತ್ರ ರೇಮಿರೇ ।
ಪಂಚಾಗ್ಯಾsಪ್ಸರಸೋsದೃಶ್ಯಾಮುನಿನಾ ಮಂದಕರ್ಣಿನಾ ॥

–ಸಂಗ್ರಹರಾಮಾಯಣ

ತತಃ ಪ್ರವ್ಯಥಿತಾಃ ಸರ್ವೇ ದೇವಾಃ ಸಾಗ್ನಿಪುರೋಗಮಾಃ ।
ಅಬ್ರುವನ್ ವಚನಂ ಸರ್ವೇ ಪರಸ್ಪರಸಮಾಗತಾಃ ॥೧೩॥

ಆಗ ಅಗ್ನಿ ಮುಂತಾದ ಎಲ್ಲ ದೇವತೆಗಳು ಕಳವಳಗೊಂಡವರಾಗಿ ಎಲ್ಲರೂ ಕಲೆತು ಹೀಗೆ ಮಾತನಾಡಿಕೊಂಡರು.

ಅಸ್ಮಾಕಂ ಕಸ್ಯಚಿತ್ಸ್ಥಾನಮೇಷ ಪ್ರಾರ್ಥಯತೇ ಮುನಿಃ ।
ಇತಿ ಸಂವಿಗ್ನಮನಸಃ ಸರ್ವೇ ತೇ ತ್ರಿದಿವೌಕಸಃ ॥೧೪॥

ನಮ್ಮಲ್ಲಿ ಯಾರದೋ ಒಬ್ಬರ ಸ್ಥಾನವನ್ನು ಈ ಮುನಿಯು ಬೇಡುತ್ತಿದ್ದಾನೆ ಎಂದು ಅಂದುಕೊಂಡು ಆ ದೇವತೆಗಳು ಉದ್ವೇಗಕ್ಕೊಳಗಾದರು.

ತತ್ರ ಕರ್ತುಂ ತಪೋವಿಘ್ನಂ ದೇವೈಃ ಸರ್ವೈರ್ನಿಯೋಜಿತಾಃ ।
ಪ್ರಧಾನಾಪ್ಸರಸಃ ಪಂಚ ವಿದ್ಯುಚ್ಚಲಿತವರ್ಚಸಃ ॥೧೫॥

ತತಃ ಕರ್ತುಂ – ಪಾಠಾಂತರ.

ಎಲ್ಲ ದೇವತೆಗಳು ಆ ಮುನಿಯ ತಪಸ್ಸಿಗೆ ವಿಘ್ನವುಂಟುಮಾಡಲು ಚಂಚಲ ಮಿಂಚಿನ ವರ್ಚಸ್ವಿಗಳಾದ ಪಂಚ ಅಪ್ಸರೆಯರನ್ನು ನಿಯೋಜನಗೊಳಿಸಿದರು.

ಅಪ್ಸರೋಭಿಸ್ತತಸ್ತಾಭಿರ್ಮುನಿರ್ದೃಷ್ಟಪರಾವರಃ ।
ನೀತೋ ಮದನವಶ್ಯತ್ವಂ ಸುರಾಣಾಂ ಕಾರ್ಯಸಿದ್ಧಯೇ ॥೧೬॥

ಬಳಿಕ ಆ ಅಪ್ಸರೆಗಳಿಂದ ಪರಾಪರತತ್ವ ತಿಳಿದಿದ್ದ ಆ ಮುನಿಯು ಸುರಕಾರ್ಯಸಿದ್ಧಿಗಾಗಿ ಮದನವಶಗೊಳಿಸಲ್ಪಟ್ಟನು.

ತಾಶ್ಚೈವಾಪ್ಸರಸಃ ಪಂಚ ಮುನೇಃ ಪತ್ನೀತ್ವಮಾಗತಾಃ ।
ತಟಾಕೇ ನಿರ್ಮಿತಂ ತಾಸಾಮಸ್ಮಿನ್ನಂತರ್ಹಿತಂ ಗೃಹಮ್ ॥೧೭॥

ತಸ್ಮಿನ್ -ಪಾಠಾಂತರ.

ಆ ಐದೂ ಜನ ಅಪ್ಸರೆಯರು ಅವನ ಮಡದಿಯರಾದರು. ಈ ತಟಾಕದೊಳಗೆ ಅವರಿಗೆ ಮನೆ ನಿರ್ಮಾಣವಾಯಿತು.

ತಥೈವಾಪ್ಸರಸಃ ಪಂಚ ನಿವಸಂತ್ಯೋ ಯಥಾಸುಖಮ್ ।
ರಮಯಂತಿ ತಪೋಯೋಗಾನ್ಮುನಿಂ ಯೌವನಮಾಸ್ಥಿತಮ್ ॥೧೮॥

ಹಾಗೆಯೇ ಆ ಅಪ್ಸರೆಯರು ಯೌವನದಲ್ಲಿರುವ ಆ ಮುನಿಯನ್ನು ಚೆನ್ನಾಗಿ ಸುಖ ಸಂತೋಷಗೊಳಿಸಿದರು–ತಮ್ಮ ತಪಃ ಪ್ರಭಾವದಿಂದ.

ತಾಸಾಂ ಸಂಕ್ರೀಡಮಾನಾನಾಮೇಷ ವಾದಿತ್ರನಿಃಸ್ವನಃ ।
ಶ್ರೂಯತೇ ಭೂಷಣೋನ್ಮಿಶ್ರೋ ಗೀತಶಬ್ದೋ ಮನೋಹರಃ ॥೧೯॥

ಮುನಿಯೊಂದಿಗೆ ಕ್ರೀಡಿಸುತ್ತಿರುವ ಆ ಅಪ್ಸರೆಯರ ವಾದ್ಯಘೋಷ ಅವರ ಆಭರಣಗಳ ಶಬ್ದದೊಂದಿಗೆ ಬೆರೆತು ಕೇಳಿಸುತ್ತಿದೆ. ಹಾಗೇ ಅವರ ಮಧುರ ಗಾಯನದ ದನಿಯೂ ಕೇಳುತ್ತಿದೆ.

ಆಶ್ಚರ್ಯಮಿತಿ ತಸ್ಯೈತದ್ವಚನಂ ಭಾವಿತಾತ್ಮನಃ ।
ರಾಘವಃ ಪ್ರತಿಜಗ್ರಾಹ ಸಹ ಭ್ರಾತ್ರಾ ಮಹಾಯಶಾಃ ॥೨೦॥

ಮಂಗಲ ಯಶಸ್ಸಿನ ರಾಘವ! ತನ್ನ ಸಹೋದರನೊಂದಿಗೆ ಶುದ್ಧಾತ್ಮ ಮಾಂಡಕರ್ಣಿಯ ಕಥೆಯನ್ನು ಧರ್ಮಭೃತರಿಂದ ಕೇಳಿ ಆಶ್ಚರ್ಯ! ಎಂದು ಗ್ರಹಿಸಿದನು.

ಏವಂ ಕಥಯಮಾನಸ್ಯ ದದರ್ಶಾಶ್ರಮಮಂಡಲಮ್ ।
ಕುಶಚೀರಪರಿಕ್ಷಿಪ್ತಂ ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮಾವೃತಮ್ ॥೨೧॥

ಹೀಗೆ ಹೇಳುತ್ತಿರುವಾಗಲೆ ಒಂದು ಆಶ್ರಮಗಳ ಸಮುದಾಯವನ್ನು ಆ ರಾಮನು ಕಂಡನು. ಆಶ್ರಮದ ತುಂಬ ಕುಶ, ನಾರು ಮಡಿಗಳು ಹರಡಿಕೊಂಡಿದ್ದವು. ಬ್ರಾಹ್ಮ ತೇಜಸ್ಸಿನಿಂದ ಆಶ್ರಮ ತುಂಬಿಕೊಂಡಿತ್ತು .

ಪ್ರವಿಶ್ಯ ಸಹ ವೈದೇಹ್ಯಾ ಲಕ್ಷ್ಮಣೇನ ಚ ರಾಘವಃ ।
ಉವಾಸ ಮುನಿಭಿಃ ಸರ್ವೈಃ ಪೂಜ್ಯಮಾನೋ ಮಹಾಯಶಾಃ ॥೨೨॥

ವೈದೇಹಿ ಹಾಗು ಲಕ್ಷ್ಮಣನೊಂದಿಗೆ ಯಶಸ್ವಿ ರಾಘವನು ಆ ಆಶ್ರಮವನ್ನು ಪ್ರವೇಶಿಸಿ ಮಹರ್ಷಿಗಳಿಂದ ಪೂಜೆಗೊಳ್ಳುತ್ತ ವಾಸ ಮಾಡಿದನು.

ತಥಾ ತಸ್ಮಿನ್ ಸ ಕಾಕುತ್ಸ್ಥಃ ಶ್ರೀಮತ್ಯಾಶ್ರಮಮಂಡಲೇ ।
ಉಷಿತ್ವಾ ತು ಸುಖಂ ತತ್ರ ಪೂಜ್ಯಮಾನೋ ಮಹರ್ಷಿಭಿಃ ॥೨೩॥

ಜಗಾಮ ಚಾಶ್ರಮಾಂಸ್ತೇಷಾಂ ಪರ್ಯಾಯೇಣ ತಪಸ್ವಿನಾಮ್ ।
ತೇಷಾಮುಷಿತವಾನ್ ಪೂರ್ವಂ ಸಕಾಶೇ ಸ ಮಹಾಸ್ತ್ರವಿತ್ ॥೨೪॥

ಹಾಗೆ ಆಶ್ರಮ ಮಂಡಲದಲ್ಲಿ ಮಹರ್ಷಿಗಳಿಂದ ಪೂಜಿತನಾಗುತ್ತ ಅವರೊಂದಿಗೆ ವಾದಮಾಡಿ ಮಹಾಸ್ತ್ರವೇತ್ತನಾದ ಶ್ರೀರಾಮನು ತಾನು ಯಾರ ಬಳಿ ವಾಸಮಾಡಿದ್ದನು ಅವರ ಆಶ್ರಮಗಳಿಗೆ ಹೋಗಿ ಮತ್ತೊಮ್ಮೆ ವಾಸ ವಾಗಿದ್ದನು.

ಕ್ವಚಿತ್ಪರಿದಶಾನ್ ಮಾಸಾನೇಕಂ ಸಂವತ್ಸರಂ ಕ್ವಚಿತ್ ।
ಕ್ವಚಿಚ್ಚ ಚತುರೋ ಮಾಸಾನ್ ಪಂಚ ಷಟ್ ಚಾಪರಾನ್ ಕ್ವಚಿತ್ ॥೨೫

ಅಪರತ್ರಾಧಿಕಂ ಮಾಸಾದಪ್ಯರ್ಧಮಧಿಕಂ ಕ್ವಚಿತ್ ।
ತ್ರೀನ್ ಮಾಸಾನಷ್ಟಮಾಸಾಂಶ್ಚ ರಾಘವೋ ನ್ಯವಸತ್ಸುಖಮ್ ॥೨೬॥

ಅಪರತ್ರಾಧಿಕಾನ್ ಮಾಸಾನ್–ಪಾಠಾಂತರ.

ಕೆಲವೆಡೆ ಹತ್ತು ತಿಂಗಳು, ಕೆಲವೆಡೆ ಒಂದು ವರ್ಷ ಕೆಲವೆಡೆ ನಾಲ್ಕು ತಿಂಗಳು, ಕೆಲವೆಡೆ ಐದು ಅಥವಾ ಆರು ತಿಂಗಳು, ಕೆಲವೆಡೆ ಆರುವರೆ ಏಳು ತಿಂಗಳು, ಮತ್ತೆ ಕೆಲವೆಡೆ ಮೂರು ತಿಂಗಳು, ಎಂಟು ತಿಂಗಳವರೆಗೆ ಶ್ರೀರಾಮಚಂದ್ರ ಸುಖವಾಗಿ ವಾಸ ಮಾಡಿದನು.

ಏವಂ ಸಂವಸತಸ್ತಸ್ಯ ಮುನೀನಾಮಾಶ್ರಮೇಷು ವೈ ।
ರಮತಶ್ಚಾನುಕೂಲ್ಯೇನ ಯಯುಃ ಸಂವತ್ಸರಾ ದಶ ॥೨೭॥

ಹಾಗೆ ಅನೇಕ ಮುನಿಗಳ ಆಶ್ರಮಗಳಲ್ಲಿ ಅಲ್ಲಲ್ಲಿಗೆ ಅನುಕೂಲವಾಗಿ ವಿಹರಿಸುತ್ತಿರುವಾಗಲೆ ಹತ್ತು ವರ್ಷಗಳು ಕಳೆದವು.

ಸುಂದರೀಮಿಂದಿರಾಮೇನಾಂ ಸ್ವಾನಂದೀ ಸಾಧು ನಂದಯನ್ ।
ಸಸೌಮಿತ್ರಿರ್ನವ ಸಮಾ ನಿನ್ಯೇ ಮುನಿಜನಪ್ರಿಯಃ ॥ -ಸಂಗ್ರಹರಾಮಾಯಣ

ಪರಿವೃತ್ಯ ಚ ಧರ್ಮಜ್ಞೋ ರಾಘವಃ ಸಹ ಸೀತಯಾ ।
ಸುತೀಕ್ಷ್ಣಸ್ಯಾಶ್ರಮೇ ಶ್ರೀಮಾನ್ ಪುನರೇವಾಜಗಾಮ ಹ ॥೨೮॥

ಧರ್ಮಜ್ಞ ಶ್ರೀರಾಮನು ಹೀಗೆ ಸೀತೆಯೊಂದಿಗೆ ಸುತ್ತಾಡಿ ಮತ್ತೆ ಸುತೀಕ್ಷ್ಣರ ಆಶ್ರಮಕ್ಕೆ ಹಿಂತಿರುಗಿ ಬಂದ.

ಸ ತಮಾಶ್ರಮಮಾಸಾದ್ಯ ಮುನಿಭಿಃ ಪ್ರತಿಪೂಜಿತಃ ।
ತತ್ರಾಪಿ ನ್ಯವಸದ್ರಾಮಃ ಕಂಚಿತ್ಕಾಲಮರಿಂದಮಃ ॥೨೯॥

ಶತ್ರುದಮನ ಆ ರಾಮನು ಆ ಸುತೀಕ್ಷ್ಣರ ಆಶ್ರಮಕ್ಕೆ ಬಂದು ಅಲ್ಲಿ ಮುನಿಗಳಿಂದ ಪೂಜಿತನಾಗುತ್ತ ಕೆಲವು ಸಮಯ ವಾಸಮಾಡಿದನು.

ಅಥಾಶ್ರಮಸ್ಥೋ ವಿನಯಾತ್ಕದಾಚಿತ್ತಂ ಮಹಾಮುನಿಮ್ ।
ಉಪಾಸೀನಃ ಸ ಕಾಕುತ್ಸ್ಥಃ ಸುತೀಕ್ಷ್ಣಮಿದಮಬ್ರವೀತ್ ॥೩೦॥

ಕೆಲವು ಕಾಲದ ಬಳಿಕ ಆಶ್ರಮದಲ್ಲಿದ್ದ ಕಾಕುತ್ಸ್ಥನು ಒಮ್ಮೆ ವಿನಯದಿಂದ ಮಹಾಮುನಿ ಸುತೀಕ್ಷ್ಣರಲ್ಲಿ ಹೀಗೆ ಹೇಳಿದ.

ಅಸ್ಮಿನ್ನರಣ್ಯೇ ಭಗವನ್ನಗಸ್ತ್ಯೋ ಮುನಿಸತ್ತಮಃ ।
ವಸತೀತಿ ಮಯಾ ನಿತ್ಯಂ ಕಥಾಃ ಕಥಯತಾಂ ಶ್ರುತಮ್ ॥೩೧॥

ಪೂಜ್ಯರೇ! ಮುನಿಶ್ರೇಷ್ಠರಾದ ಅಗಸ್ತರು ಈ ಕಾಡಿನಲ್ಲಿ ವಾಸಮಾಡುತ್ತಾ ರೆಂದು ಕಥೆ ಹೇಳುವವರ ಮೂಲಕ ಕೇಳಿದ್ದೇನೆ.

ನ ತು ಜಾನಾಮಿ ತಂ ದೇಶಂ ವನಸ್ಯಾಸ್ಯ ಮಹತ್ತಯಾ ।
ಕುತ್ರಾಶ್ರಮಮಿದಂ ಪುಣ್ಯಂ ಮಹರ್ಷೇಸ್ತಸ್ಯ ಧೀಮತಃ ॥೩೨॥

ಆದರೆ ಈ ಕಾಡು ವಿಶಾಲವಾದ್ದರಿಂದ ಅಗಸ್ತ್ಯರ ನೆಲೆಯನ್ನು ತಿಳಿದಿಲ್ಲ. ಆ ಧೀಮಂತ ಮಹರ್ಷಿಗಳ ಆಶ್ರಮ ಎಲ್ಲಿದೆ?

ಪ್ರಸಾದಾತ್ತತ್ರಭವತಃ ಸಾನುಜಃ ಸಹ ಸೀತಯಾ ।
ಅಗಸ್ತ್ಯಮಭಿಗಚ್ಛೇಯಮಭಿವಾದಯಿತುಂ ಮುನಿಮ್ ॥೩೩॥

ನಿಮ್ಮ ಅನುಗ್ರಹದಿಂದ ಸೀತಾಲಕ್ಷ್ಮಣಸಹಿತನಾಗಿ ಅಗಸ್ತ್ಯರ ಆಶ್ರಮಕ್ಕೆ ಹೋಗುವೆನು—ಆ ಮುನಿಗಳನ್ನು ನಮಸ್ಕಾರ ಮಾಡುವುದಕ್ಕಾಗಿ.

ಮನೋರಥೋ ಮಹಾನೇಷ ಹೃದಿ ಮೇ ಪರಿವರ್ತತೇ ।
ಯದಹಂ ತಂ ಮುನಿವರಂ ಶುಶ್ರೂಷೇಯಮಪಿ ಸ್ವಯಮ್ ॥೩೪॥

ಆ ಮುನಿಗಳ ಬಳಿ ಹೋಗಿ ಅವರ ಸೇವೆ ಮಾಡಬೇಕೆಂಬ ಮನೋರಥ ಮನದೊಳಗೆ ಸುತ್ತುತ್ತಿದೆ!

ಇತಿ ರಾಮಸ್ಯ ಸ ಮುನಿಃ ಶ್ರುತ್ವಾ ಧರ್ಮಾತ್ಮನೋ ವಚಃ ।
ಸುತೀಕ್ಷ್ಣಃ ಪ್ರತ್ಯುವಾಚೇದಂ ಪ್ರೀತೋ ದಶರಥಾತ್ಮಜಮ್ ॥೩೫॥

ಧರ್ಮಾತ್ಮ ಶ್ರೀರಾಮನ ಈ ಮಾತನ್ನು ಕೇಳಿ ಸುತೀಕ್ಷ್ಣರು ದಶರಥನಂದನನಿಗೆ ಇಂತೆಂದರು.

ಅಹಮಪ್ಯೇತದೇವತ್ವಾಂ ವಕ್ತುಕಾಮಃ ಸಲಕ್ಷ್ಮಣಮ್ ।
ಅಗಸ್ತ್ಯಮಭಿಗಚ್ಛೇತಿ ಸೀತಯಾ ಸಹ ರಾಘವ ॥೩೬॥

ರಾಘವ! ನಾನೂ ಇದನ್ನೇ ನಿನಗೆ ಹೇಳಲು ಬಯಸಿದ್ದೆ. ಸೀತಾಲಕ್ಷ್ಮಣರೊಂದಿಗೆ ಅಗಸ್ತ್ಯರ ಬಳಿ ಹೋಗೆಂದು.

ದಿಷ್ಟ್ಯಾ ತ್ವಿದಾನೀಮರ್ಥೇಽಸ್ಮಿನ್ ಸ್ವಯಮೇವ ಬ್ರವೀಷಿ ಮಾಮ್ ।
ಅಹಮಾಖ್ಯಾಮಿ ತೇ ವತ್ಸ ಯತ್ರಾಗಸ್ತ್ಯೋ ಮಹಾಮುನಿಃ ॥೩೭॥

ದೈವೇಚ್ಛೆ! ನೀನೂ ಇದೇ ವಿಷಯವನ್ನು ಈಗ ಸ್ವಯಂ ಪ್ರಸ್ತಾವ ಮಾಡಿರುವಿ. ವತ್ಸ! ಅಗಸ್ತ್ಯ ಮಹಾಮುನಿಗಳು ಎಲ್ಲಿಹರೆಂದು ನಾನು ಹೇಳುತ್ತೇನೆ.

ಯೋಜನಾನ್ಯಾಶ್ರಮಾದಸ್ಮಾತ್ತಥಾ ಚತ್ವಾರಿ ವೈ ತತಃ ।
ದಕ್ಷಿಣೇನ ಮಹಾನ್ ಶ್ರೀಮಾನಗಸ್ತ್ಯಭ್ರಾತುರಾಶ್ರಮಃ ॥೩೮॥

ಯೋಜನಾನ್ಯಾಶ್ರಮಾತ್ತಾತ ಯಾಹಿ – ಪಾಠಾಂತರ.

ಈ ಆಶ್ರಮದಿಂದ ನಾಲ್ಕು ಯೋಜನ ದಕ್ಷಿಣಕ್ಕೆ ಹೋದರೆ ಅಲ್ಲಿ ಸುಂದರವಾದ ಅಗಸ್ತ್ಯರ ತಮ್ಮನವರ ಆಶ್ರಮವಿದೆ.

ಸ್ಥಲೀಪ್ರಾಯೇ ವನೋದ್ದೇಶೇ ಪಿಪ್ಪಲೀವನಶೋಭಿತೇ ।
ಬಹುಪುಷ್ಪಫಲೇ ರಮ್ಯೇ ನಾನಾಶಕುನಿನಾದಿತೇ ॥೩೯॥

ಸ್ಥಲೀಪ್ರಾಯವನೋದ್ದೇಶೇ – ಪಾಠಾಂತರ.

ಸಹಜವಾದ ಸಮತಟ್ಟಾದ ವಿಶಾಲ ಭೂ ಭಾಗವೆ ಹೆಚ್ಚಾಗಿರುವ ವನ ಪ್ರದೇಶ. ಪಿಪ್ಪಲಮರಗಳ ಗುಂಪಿನಿಂದ ಶೋಭಿತವಾಗಿದೆ. ಫಲ–ಪುಷ್ಪಗಳು ಸಮೃದ್ಧವಾಗಿವೆ. ಬಗೆಬಗೆಯ ಹಕ್ಕಿಯ ಕಲರವಗಳು ತುಂಬಿರುತ್ತವೆ.

ಪದ್ಮಿನ್ಯೋ ವಿವಿಧಾಸ್ತತ್ರ ಪ್ರಸನ್ನಸಲಿಲಾಃ ಶಿವಾಃ ।
ಹಂಸಕಾರಂಡವಾಕೀರ್ಣಾಶ್ಚಕ್ರವಾಕೋಪಶೋಭಿತಾಃ ॥೪೦॥

ಹಂಸ ಕಾರಂಡವ ಚಕ್ರವಾಕಗಳಿಂದ ತುಂಬಿಶೋಭಿಸುವ ತಿಳಿನೀರು ತುಂಬಿರುವ ಮಂಗಲಮಯಗಳಾದ ಬಗೆ ಬಗೆಯ ತಾವರೆಕೊಳಗಳು ಕಂಗೊಳಿಸುತ್ತವೆ.

ತತ್ರೈಕಾಂ ರಜನೀಂ ವ್ಯುಷ್ಯ ಪ್ರಭಾತೇ ರಾಮ ಗಮ್ಯತಾಮ್ ।
ದಕ್ಷಿಣಾಂ ದಿಶಮಾಸ್ಥಾಯ ವನಷಂಡಸ್ಯ ಪಾರ್ಶ್ವತಃ ॥೪೧॥

ಅಗಸ್ತ್ಯರ ತಮ್ಮನ ಆ ಆಶ್ರಮದಲ್ಲಿ ರಾತ್ರಿ ಉಳಿದುಕೊಂಡು ರಾಮ! ಮರುದಿನ ಬೆಳಿಗ್ಗೆ ಹೋಗೋಣವಾಗಲಿ. ಆ ವನ ಸಮೂಹದ ಬದಿಯ ದಕ್ಷಿಣ ದಿಕ್ಕಿಗೆ.

ತತ್ರಾಗಸ್ತ್ಯಾಶ್ರಮಪದಂ ಗತ್ವಾ ಯೋಜನಮಂತರಮ್ ।
ರಮಣೀಯೇ ವನೋದ್ದೇಶೇ ಬಹುಪಾದಪಸಂವೃತೇ ॥೪೨॥

ಹೀಗೆ ಒಂದು ಯೋಜನೆ ಮುಂದೆ ಹೋದಾಗ ಅನೇಕ ಮರಗಳಿಂದ ತುಂಬಿದ ಸುಂದರ ಪರಿಸರದಲ್ಲಿ ಅಗಸ್ತ್ಯರ ಆಶ್ರಮವಿದೆ.

ರಂಸ್ಯತೇ ತತ್ರ ವೈದೇಹೀ ಲಕ್ಷ್ಮಣಶ್ಚ ಸಹ ತ್ವಯಾ ।
ಸ ಹಿ ರಮ್ಯೋ ವನೋದ್ದೇಶೋ ಬಹುಪಾದಪಸಂಕುಲಃ ॥೪೩॥

ಆ ಆಶ್ರಮದ ವಾತಾವರಣದಲ್ಲಿ ಸೀತಾ ಲಕ್ಷ್ಮಣರು ನಿನ್ನೊಂದಿಗೆ ತುಂಬ ಖುಷಿಪಡುತ್ತಾರೆ! ಅನೇಕ ವೃಕ್ಷ ಸಂಕುಲದಿಂದ ಸುಂದರವಾದ ಪರಿಸರ ಅದು.

ಯದಿ ಬುದ್ಧಿಃ ಕೃತಾ ದ್ರಷ್ಟುಮಗಸ್ತ್ಯಂ ತಂ ಮಹಾಮುನಿಮ್ ।
ಅದ್ಯೈವ ಗಮನೇ ಬುದ್ಧಿಂ ರೋಚಯಸ್ವ ಮಹಾಯಶಃ ॥೪೪॥

ರೋಚಯಸ್ವ ಮಹಾಮತೇ – ಪಾಠಾಂತರ.

ಮಹಾಯಶನೆ! ಮಹಾಮುನಿ ಅಗಸ್ತ್ಯರನ್ನು ನೋಡಲು ನಿಶ್ಚಯಿಸಿದ್ದರೆ ಇಂದೇ ಹೊರಡುವ ಮನಸ್ಸು ಮಾಡು.

ಇತಿ ರಾಮೋ ಮುನೇಃ ಶ್ರುತ್ವಾ ಸಹ ಭ್ರಾತ್ರಾಭಿವಾದ್ಯ ಚ ।
ಪ್ರತಸ್ಥೇಽಗಸ್ತ್ಯಮುದ್ದಿಶ್ಯ ಸಾನುಜಃ ಸೀತಯಾ ಸಹ ॥೪೫॥

ಹೀಗೆ ಸುತೀಕ್ಷ್ಣರ ಮಾತು ಕೇಳಿ ತಮ್ಮನೊಂದಿಗೆ ಮುನಿಗಳಿಗೆ ಅಭಿವಾದನ ಮಾಡಿ ಸೀತಾಲಕ್ಷ್ಮಣರೊಂದಿಗೆ ಶ್ರೀರಾಮ ಹೊರಟೇಬಿಟ್ಟನು.

ಪಶ್ಯನ್ ವನಾನಿ ರಮ್ಯಾಣಿ ಪರ್ವತಾಂಶ್ಚಾಭ್ರಸಂನಿಭಾನ್ ।
ಸರಾಂಸಿ ಸರಿತಶ್ಚೈವ ಪಥಿ ಮಾರ್ಗವಶಾನುಗಾಃ ॥೪೬॥

ಮಾರ್ಗವಶಾನುಗಾನ್ – ಪಾಠಾಂತರ.

ದಾರಿಯಲ್ಲಿ ದೊರೆತ ಚಿತ್ರ–ವಿಚಿತ್ರ ವನಗಳನ್ನು, ಮೋಡಗಳಂತಿದ್ದ ಪರ್ವತ ಸಾಲುಗಳನ್ನು, ಸರೋವರಗಳನ್ನು ನದಿಗಳನ್ನು ನೋಡುತ್ತಾ ಪಯಣಿಸಿದನು.

ಸುತೀಕ್ಷ್ಣೋಪದಿಷ್ಟೇನ ಗತ್ವಾ ತೇನ ಪಥಾ ಸುಖಮ್ ।
ಇದಂ ಪರಮಸಂಹೃಷ್ಟೋ ವಾಕ್ಯಂ ಲಕ್ಷ್ಮಣಮಬ್ರವೀತ್ ॥೪೭॥

ಸುತೀಕ್ಷ್ಣರು ಹೇಳಿದ ಮಾರ್ಗದಿಂದ ಅನಾಯಾಸವಾಗಿ ಹೊರಟ ಶ್ರೀರಾಮ ತುಂಬ ಸಂತಸಗೊಂಡು ಲಕ್ಷ್ಮಣನಿಗೆ ಈ ಮಾತನ್ನು ಹೇಳಿದನು.

ಏತದೇವಾಶ್ರಮಪದಂ ನೂನಂ ತಸ್ಯ ಮಹಾತ್ಮನಃ ।
ಅಗಸ್ತ್ಯಸ್ಯ ಮುನೇರ್ಭ್ರಾತುರ್ದೃಶ್ಯತೇ ಪುಣ್ಯಕರ್ಮಣಃ ॥೪೮॥

ನಿಶ್ಚಯವಾಗಿ ಮಹಾತ್ಮ ಅಗಸ್ತ್ಯರ, ಪುಣ್ಯಕರ್ಮಅನುಷ್ಠಾನರತರಾದ ತಮ್ಮನವರ ಆಶ್ರಮವು ಇದೆ ಆಗಿದೆ.

ಯಥಾ ಹಿ ಮೇ ವನಸ್ಯಾಸ್ಯ ಜ್ಞಾತಾಃ ಪಥಿ ಸಹಸ್ರಶಃ ।
ಸನ್ನತಾಃ ಫಲಭಾರೇಣ ಪುಷ್ಪಭಾರೇಣ ಚ ದ್ರುಮಾಃ ॥೪೯॥

ಯಥಾ ಹೀಮೇ – ಪಾಠಾಂತರ.

ದಾರಿಯಲ್ಲಿ ಹಣ್ಣು ಹೂವುಗಳ ಭಾರದಿಂದ ಬಾಗಿದ ನಮಗೆ ಪರಿಚಿತವಾದ ಸಾವಿರಾರು ವೃಕ್ಷಗಳು ಕಾಣುತ್ತಿವೆ.

ಪಿಪ್ಪಲೀನಾಂ ಚ ಪಕ್ವಾನಾಂ ವನಾದಸ್ಮಾದುಪಾಗತಃ ।
ಗಂಧೋಽಯಂ ಪವನೋತ್ಕ್ಷಿಪ್ತಃ ಸಹಸಾ ಕಟುಕೋದಯಃ ॥೫೦॥

ಈ ಕಾಡಿನಿಂದ ಪಿಪ್ಪಲವೃಕ್ಷದ ಮಾಗಿದ ಹಣ್ಣುಗಳ ಒಗರು ರುಚಿಯ ಗಂಧವು ಗಾಳಿಯಿಂದ ಗಾಢವಾಗಿ ಬರುತ್ತಿದೆ.

ತತ್ರ ತತ್ರ ಚ ದೃಶ್ಯಂತೇ ಸಂಕ್ಷಿಪ್ತಾಃ ಕಾಷ್ಠಸಂಚಯಾಃ ।
ಊನಾಶ್ಚ ಪಥಿ ದೃಶ್ಯಂತೇ ದರ್ಭಾ ವೈಡೂರ್ಯವರ್ಚಸಃ ॥೫೧॥

ಅಲ್ಲಲ್ಲಿ ತುಂಡುಮಾಡಿ ಜೋಡಿಸಿದ ಕಟ್ಟಿಗೆಯ ರಾಶಿಗಳು ಕಾಣುತ್ತಿವೆ. ವೈಡೂರ್ಯದಂತೆ ಕಂಗೊಳಿಸುವ ದರ್ಭೆಗಳು ದಾರಿಗುಂಟ ಕಾಣುತ್ತಿವೆ.

ಏತಚ್ಚ ವನಮಧ್ಯಸ್ಥಂ ಕೃಷ್ಣಾಭ್ರಶಿಖರೋಪಮಮ್ ।
ಪಾವಕಸ್ಯಾಶ್ರಮಸ್ಥಸ್ಯ ಧೂಮಾಗ್ರಂ ಸಂಪ್ರದೃಶ್ಯತೇ ॥೫೨॥

ಕಾಡಿನ ಮಧ್ಯದಲ್ಲಿ ಕಪ್ಪು ಮೋಡದ ಶಿಖರದಂತೆ ಇರುವ ಆಶ್ರಮದ ಅಗ್ನಿಯಿಂದ ಹೊಮ್ಮುತ್ತಿರುವ ಹೊಗೆಯ ತುದಿ ಕಾಣುತ್ತಿದೆ.

ವಿವಿಕ್ತೇಷು ಚ ತೀರ್ಥೇಷು ಕೃತಸ್ನಾನಾ ದ್ವಿಜಾತಯಃ ।
ಪುಷ್ಪೋಪಹಾರಂ ಕುರ್ವಂತಿ ಕುಸುಮೈಃ ಸ್ವಯಮಾರ್ಜಿತೈಃ ॥೫೩॥

ಬೇರೆಬೇರೆ ಪವಿತ್ರ ತೀರ್ಥಗಳಲ್ಲಿ ಮಿಂದ ಬ್ರಾಹ್ಮಣರು ತಾವು ಬಿಡಿಸಿದ ಹೂವುಗಳಿಂದ ಪೂಜೆ ಸಲ್ಲಿಸುತ್ತಿದ್ದಾರೆ.

ವಿಶೇಷಾಂಶ : ಸಮಿತ್‌ಪುಷ್ಪ ಕುಶಾದೀನಿ ಶ್ರೋತ್ರಿಯಃ ಸ್ವಯಮಾಹರೇತ್ – ಸ್ಮೃತಿ.

ವಿವಿಕ್ತೈಃಪೂತವಿಜನೌ – ಅಮರ.

ತತ್ಸುತೀಕ್ಷ್ಣಸ್ಯ ವಚನಂ ಯಥಾ ಸೌಮ್ಯ ಮಯಾ ಶ್ರುತಮ್ ।
ಅಗಸ್ತ್ಯಸ್ಯಾಶ್ರಮೋ ಭ್ರಾತುರ್ನೂನಮೇಷ ಭವಿಷ್ಯತಿ ॥೫೪॥

ತತಃ ಸುತೀಕ್ಷ್ಣವಚನಂ–ಪಾಠಾಂತರ.

ಈ ಪರಿಸರದಲ್ಲಿ ಕಾಣುತ್ತಿರುವ ವಿಶೇಷಗಳಿಂದ ಖಂಡಿತವಾಗಿಯೂ ನಾನು ಕೇಳಿದ ಸುತೀಕ್ಷ್ಣರ ವಚನದಂತೆ ಇದು ಅಗಸ್ತ್ಯರ ತಮ್ಮನವರ ಆಶ್ರಮವೇ ಆಗಿದೆ.

ನಿಗೃಹ್ಯ ತರಸಾ ಮೃತ್ಯುಂ ಲೋಕಾನಾಂ ಹಿತಕಾಮ್ಯಯಾ ।
ಯಸ್ಯ ಭ್ರಾತ್ರಾ ಕೃತೇಯಂ ದಿಕ್ಕರಣ್ಯಾ ಪುಣ್ಯಕರ್ಮಣಾ ॥೫೫॥

ಯಾರ ಅಗ್ರಜ ಪುಣ್ಯಕರ್ಮರಹತರಾದ ಅಗಸ್ತ್ಯರು ಲೋಕಹಿತದ ಬಯಕೆ-ಯಿಂದ ತಾಪಸರ ಮಾರಕ ಅಸುರರನ್ನು ಕೊಂದು ಈ ದಕ್ಷಿಣ ದಿಕ್ಕನ್ನು ಆಶ್ರಯಿಸಲು ಅರ್ಹರಾಗಿಸಿದರೋ ಅಂತಹ ಅಗಸ್ತ್ಯರ ತಮ್ಮಂದಿರ ಆಶ್ರಮವಿದು– ನಿಶ್ಚಯವಾಗಿ.

ಇಹೈಕದಾ ಕಿಲ ಕ್ರೂರೋ ವಾತಾಪಿರಪಿ ಚೇಲ್ವಲಃ ।
ಭ್ರಾತರೌ ಸಹಿತಾವಾಸ್ತಾಂ ಬ್ರಾಹ್ಮಣಘ್ನೌ ಮಹಾಸುರೌ ॥೫೬॥

ಇಲ್ಲಿ ಒಂದುಕಾಲದಲ್ಲಿ ಬ್ರಾಹ್ಮಣರನ್ನು ಕೊಲ್ಲುತ್ತಿದ್ದ ಕ್ರೂರ ಮಹಾಸುರರಾದ ವಾತಾಪಿ–ಇಲ್ವಲ ಎಂಬ ಸಹೋದರರಿದ್ದರು.

ಧಾರಯನ್ ಬ್ರಾಹ್ಮಣಂ ರೂಪಮಿಲ್ವಲಃ ಸಂಸ್ಕೃತಂ ವದನ್ ।
ಆಮಂತ್ರಯತಿ ವಿಪ್ರಾನ್ ಸ್ಮ ಶ್ರಾದ್ಧಮುದ್ದಿಶ್ಯ ನಿರ್ಘೃಣಃ ॥೫೭॥

ಇಲ್ವಲನು ಬ್ರಾಹ್ಮಣರೂಪವನ್ನು ತೊಟ್ಟು ವ್ಯಾಕರಣಾದಿ ಸಂಸ್ಕಾರ ಸಂಪನ್ನವಾದ ಮಾತನಾಡುತ್ತ ನಿರ್ದಯನಾಗಿ ಶ್ರಾದ್ಧಕ್ಕೆ ಬರುವಂತೆ ವಿಪ್ರರನ್ನು ಆಮಂತ್ರಿಸುತ್ತಿದ್ದ.

ಭ್ರಾತರಂ ಸಂಸ್ಕೃತಂ ಕೃತ್ವಾ ತತಸ್ತಂ ಮೇಷರೂಪಿಣಮ್ ।
ತಾನ್ ದ್ವಿಜಾನ್ ಭೋಜಯಾಮಾಸ ಶ್ರಾದ್ಧದೃಷ್ಟೇನ ಕರ್ಮಣಾ ॥ ೫೮

ಮೇಷರೂಪಿಯಾದ ಸಹೋದರ ವಾತಾಪಿಯನ್ನು ಪಾಕಸಂಸ್ಕಾರಗೊಳಿಸಿ ಆಹೂತರಾದ ಬ್ರಾಹ್ಮಣರಿಗೆ ಶ್ರಾದ್ಧವಿಹಿತ ಕರ್ಮಾನುಸಾರವಾಗಿ ಉಣಬಡಿಸು-ತ್ತಿದ್ದನು.

ತತೋ ಭುಕ್ತವತಾಂ ತೇಷಾಂ ವಿಪ್ರಾಣಾಮಿಲ್ವಲೋಽಬ್ರವೀತ್ ।
ವಾತಾಪೇ ನಿಷ್ಕ್ರಮಸ್ವೇತಿ ಸ್ವರೇಣ ಮಹತಾ ವದನ್ ॥೫೯॥

ಬ್ರಾಹ್ಮಣರು ಉಂಡಬಳಿಕ ಅವರ ಉದರ ಸೇರಿದ ವಾತಾಪಿಯನ್ನು ಎತ್ತರದ ಸ್ವರದಿಂದ–'ವಾತಾಪಿಯೇ! ಹೊರಗೆ ಬಾ' ಎಂದು ಕೂಗುತ್ತಿದ್ದನು.

ತತೋ ಭ್ರಾತುರ್ವಚಃ ಶ್ರುತ್ವಾ ವಾತಾಪಿರ್ಮೇಷವನ್ನದನ್ ।
ಭಿತ್ತ್ವಾ ಭಿತ್ತ್ವಾ ಶರೀರಾಣಿ ಬ್ರಾಹ್ಮಣಾನಾಂ ವಿನಿಷ್ಪತತ್ ॥೬೦॥

ಬಳಿಕ ಅಣ್ಣನ ಮಾತು ಕೇಳಿ ಮೇಕೆಯಂತೆ ಶಬ್ದ ಮಾಡುತ್ತಾ ವಾತಾಪಿಯು ಬ್ರಾಹ್ಮಣರ ಶರೀರಗಳನ್ನು ಸೀಳಿ ಸೀಳಿ ಹೊರಬರುತ್ತಿದ್ದ.

ಬ್ರಾಹ್ಮಣಾನಾಂ ಸಹಸ್ರಾಣಿ ತೈರೇವಂ ಕಾಮರೂಪಿಭಿಃ ।
ವಿನಾಶಿತಾನಿ ಸಂಹತ್ಯ ನಿತ್ಯಶಃ ಪಿಶಿತಾಶನೈಃ ॥೬೧॥

ಮಾಂಸಾಶನರಾದ ಆ ಅಸುರರು ಕಾಮರೂಪಗಳಾಗಿ ನಿತ್ಯ ಸಾವಿರಾರು ಬ್ರಾಹ್ಮಣರನ್ನು ಕೊಂದರು.

ಅಗಸ್ತ್ಯೇನ ತದಾ ದೇವೈಃ ಪ್ರಾರ್ಥಿತೇನ ಮಹರ್ಷಿಣಾ ।
ಅನುಭೂಯ ಕಿಲ ಶ್ರಾದ್ಧೇ ಭಕ್ಷಿತಃ ಸ ಮಹಾಸುರಃ ॥೬೨॥

ಆಗ ದೇವತೆಗಳಿಂದ ಪ್ರಾರ್ಥಿತರಾದ ಅಗಸ್ತ್ಯ ಮಹರ್ಷಿಗಳು ಆ ಅಸುರರ ಮನೆಗೆ ಬಂದು ಶ್ರಾದ್ಧದೂಟಮಾಡಿ ವಾತಾಪಿಯನ್ನು ತಿಂದರು!

ತತಃ ಸಂಪನ್ನಮಿತ್ಯುಕ್ತ್ವಾ ದತ್ತ್ವಾ ಹಸ್ತೋದಕಂ ತತಃ ।
ಭ್ರಾತರಂ ನಿಷ್ಕ್ರಮಸ್ವೇತಿ ಚೇಲ್ವಲಃ ಸೋಽಭ್ಯಭಾಷತ ॥೬೩॥

ಬಳಿಕ ಶ್ರಾದ್ಧಸಂಪನ್ನವಾಯಿತೆಂದು ಕೈತೊಳೆಯಲು ನೀರು ಕೊಟ್ಟು ಇಲ್ವಲ ವಾತಾಪಿಯನ್ನು 'ಹೊರಗೆ ಬಾ' ಎಂದು ಕೂಗಿದನು.

ಸ ತಂ ತಥಾ ಭಾಷಮಾಣಂ ಭ್ರಾತರಂ ವಿಪ್ರಘಾತಿನಮ್ ।
ಅಬ್ರವೀತ್ಪ್ರಹಸನ್ ಧೀಮಾನಗಸ್ತ್ಯೋ ಮುನಿಸತ್ತಮಃ ॥೬೪॥

ಸ ತದಾ ಭಾಷಮಾಣಂ ತು–ಪಾಠಾಂತರ.

ಬ್ರಾಹ್ಮಣ ಹಂತಕನಾದ, 'ವಾತಾಪಿ ಬಾ' ಎಂದು ಕರೆಯುತ್ತಿರುವ ಇಲ್ವಲನನ್ನು ಕುರಿತು ಮುನಿಶ್ರೇಷ್ಠ ಧೀಮಂತ ಅಗಸ್ತ್ಯರು ನಗುತ್ತ ಹೀಗೆಂದರು.

ಕುತೋ ನಿಷ್ಕ್ರಮಿತುಂ ಶಕ್ತಿರ್ಮಯಾ ಜೀರ್ಣಸ್ಯ ರಕ್ಷಸಃ ।
ಭ್ರಾತುಸ್ತೇ ಮೇಷರೂಪಸ್ಯ ಗತಸ್ಯ ಯಮಸಾದನಮ್ ॥೬೫॥

ಭ್ರಾತುಸ್ತು – ಪಾಠಾಂತರ.

ನನ್ನಿಂದ ಜೀರ್ಣನಾಗಿ ಯಮಲೋಕ ಸೇರಿದ ಮೇಕೆರೂಪದ ನಿನ್ನ ತಮ್ಮನಿಗೆ ಹೊರಬರಲು ಶಕ್ತಿ ಎಲ್ಲಿದೆ?

ಅಥ ತಸ್ಯ ವಚಃ ಶ್ರುತ್ವಾ ಭ್ರಾತುರ್ನಿಧನಸಂಶ್ರಯಮ್ ।
ಪ್ರಧರ್ಷಯಿತುಮಾರೇಭೇ ಮುನಿಂ ಕ್ರೋಧಾನ್ನಿಶಾಚರಃ ॥೬೬॥

ತಮ್ಮನ ಮರಣದ ಬಗೆಗಿನ ಅಗಸ್ತ್ಯರ ಮಾತು ಕೇಳಿ ನಿಶಾಚರ ಇಲ್ವಲ ಕ್ರೋಧಗೊಂಡು ಅವರನ್ನು ಹಿಂಸಿಸಲು ಆರಂಭಿಸಿದನು.

ಸೋಽಭಿದ್ರವನ್ಮುನಿಶ್ರೇಷ್ಠಂ ಮುನಿನಾ ದೀಪ್ತತೇಜಸಾ ।
ಚಕ್ಷುಷಾನಲಕಲ್ಪೇನ ನಿರ್ದಗ್ಧೋ ನಿಧನಂ ಗತಃ ॥೬೭॥

ಅಗಸ್ತ್ಯರ ಮೇಲೆ ಮುಗಿಬಿದ್ದ ಇಲ್ವಲ ಬೆಳಗುವ ತೇಜದ ಅಗಸ್ತ್ಯರ ಬೆಂಕಿಯಂಥ ಕಣ್ಣಿಗೆ ಬಲಿಯಾಗಿ ಸುಟ್ಟು ಸತ್ತ.

ತಸ್ಯಾಯಮಾಶ್ರಮೋ ಭ್ರಾತುಸ್ತಟಾಕವನಶೋಭಿತಃ ।
ವಿಪ್ರಾನುಕಂಪಯಾ ಯೇನ ಕರ್ಮೇದಂ ದುಷ್ಕರಂ ಕೃತಮ್ ॥೬೮॥

ಬ್ರಾಹ್ಮಣರ ಮೇಲಿನ ಅನುಕಂಪದಿಂದ ಇತರರಿಂದ ಅಸಾಧ್ಯವಾದ ಅಸುರಸಂಹಾರಗೈದ ಅಗಸ್ತ್ಯರ ತಮ್ಮನ ಆಶ್ರಮವಿದು–ವನ–ತಟಾಕಗಳಿಂದ ಶೋಭಿತವಾದುದು.

ಏವಂ ಕಥಯಮಾನಸ್ಯ ತಸ್ಯ ಸೌಮಿತ್ರಿಣಾ ಸಹ ।
ರಾಮಸ್ಯಾಸ್ತಂ ಗತಃ ಸೂರ್ಯಃ ಸಂಧ್ಯಾಕಾಲೋಽಭ್ಯವರ್ತತ ॥೬೯॥

ಹೀಗೆ ಲಕ್ಷ್ಮಣನೊಂದಿಗೆ ಶ್ರೀರಾಮ ಮಾತನಾಡುತ್ತಿರುವಾಗಲೆ ಸೂರ್ಯ ಅಸ್ತಂಗತನಾದ ಸಂಧ್ಯಾಕಾಲವಾಯಿತು.

ಉಪಾಸ್ಯ ಪಶ್ಚಿಮಾಂ ಸಂಧ್ಯಾಂ ಸಹ ಭ್ರಾತ್ರಾ ಯಥಾವಿಧಿ ।
ಪ್ರವಿವೇಶಾಶ್ರಮಪದಂ ತಮೃಷಿಂ ಸೋಽಭ್ಯವಾದಯತ್ ॥೭೦॥

ತಮ್ಮನೊಂದಿಗೆ ವಿಧಿಗನುಗುಣವಾಗಿ ಸಂಜೆಯ ಸಂಧ್ಯೆಯನ್ನು ಪೂರೈಸಿ ಅಗಸ್ತ್ಯರ ಅನುಜರ ಆಶ್ರಮವನ್ನು ಪ್ರವೇಶಿಸಿದನು. ಆ ಮುನಿಯನ್ನು ಶ್ರೀರಾಮನು ಅಭಿವಾದನ ಮಾಡಿದನು.

ಸಮ್ಯಕ್ಪ್ರತಿಗೃಹೀತಶ್ಚ ಮುನಿನಾ ತೇನ ರಾಘವಃ ।
ನ್ಯವಸತ್ತಾಂ ನಿಶಾಮೇಕಾಂ ಪ್ರಾಶ್ಯ ಮೂಲಫಲಾನಿ ಚ ॥೭೧॥

ಆ ಮುನಿಗಳು ರಾಘವನನ್ನು ಚೆನ್ನಾಗಿ ಆದರಿಸಿ ಸತ್ಕರಿಸಿದರು. ಅವರಿತ್ತ ಮೂಲ, ಫಲಗಳನ್ನು ತಿಂದು ಆ ಒಂದು ರಾತ್ರಿ ಅಲ್ಲಿ ತಂಗಿದರು.

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ವಿಮಲೇ ಸೂರ್ಯಮಂಡಲೇ ।
ಭ್ರಾತರಂ ತಮಗಸ್ತ್ಯಸ್ಯ ಹ್ಯಾಮಂತ್ರಯತ ರಾಘವಃ ॥೭೨॥

ಆ ರಾತ್ರಿ ಕಳೆದು ಸೂರ್ಯಮಂಡಲ ಬೆಳಗಲು ಆ ಅಗಸ್ತ್ಯರ ಅನುಜರಲ್ಲಿ ರಾಘವ ಅನುಮತಿ ಬೇಡಿದನು.

ಅಭಿವಾದಯೇ ತ್ವಾಂ ಭಗವನ್ ಸುಖಮಧ್ಯುಷಿತೋ ನಿಶಾಮ್ ।
ಆಮಂತ್ರಯೇ ತ್ವಾಂ ಗಚ್ಛಾಮಿ ಗುರುಂ ತೇ ದ್ರಷ್ಟುಮಗ್ರಜಮ್ ॥೭೩

ಸುಖಮಸ್ಮ್ಯುಷಿತೋ – ಪಾಠಾಂತರ.

ಪೂಜ್ಯರೇ! ತಮಗೆ ಅಭಿವಾದನ ಮಾಡುತ್ತೇನೆ. ರಾತ್ರಿ ಸುಖವಾಗಿ ವಾಸ ಮಾಡಿದೆವು. ನಿಮ್ಮ ಹಿರಿಯಣ್ಣನನ್ನು ಕಾಣಲು ಹೊರಟಿದ್ದೇವೆ. ಅನುಜ್ಞೆ ಕೋರುತ್ತಿದ್ದೇನೆ.

ಗಮ್ಯತಾಮಿತಿ ತೇನೋಕ್ತೋ ಜಗಾಮ ರಘುನಂದನಃ ।
ಯಥೋದ್ದಿಷ್ಟೇನ ಮಾರ್ಗೇಣ ವನಂ ತಚ್ಚಾವಲೋಕಯನ್ ॥೭೪॥

ಹೋಗೋಣವಾಗಲೆಂದು ಆ ಮುನಿಗಳಿಂದ ಹೇಳಿಸಿಕೊಂಡ ರಘುನಂದನ ಸುತೀಕ್ಷ್ಣರು ಹೇಳಿದ ದಾರಿಯಿಂದ ಆ ಕಾಡನ್ನೆಲ್ಲ ನೋಡುತ್ತಾ ಪಯಣಿಸಿದನು.

ನೀವಾರಾನ್ ಪನಸಾಂಸ್ತಾಲಾಂಸ್ತಿಮಿಶಾನ್ ವಂಜುಲಾನ್ ಧವಾನ್ ।
ಚಿರಿಬಿಲ್ವಾನ್ ಮಧೂಕಾಂಶ್ಚ ಬಿಲ್ವಾನಪಿ ಚ ತಿಂದುಕಾನ್ ॥೭೫॥

ಹೂವು ತುಂಬಿದ ನಿವಾರ ಹಲಸು ತಾಲ ತಿಮಿಶ ಬೆಳ್ಳಗಿನ ವಂಜಲ ಚಿರಿಬಿಲ್ವ ಮಧೂಕ ಬಿಲ್ವ ತಿಂದುಕ ಮರಗಳನ್ನು,

ಪುಷ್ಪಿತಾನ್ ಪುಷ್ಪಿತಾಗ್ರಾಭಿರ್ಲತಾಭಿರನುವೇಷ್ಟಿತಾನ್ ।
ದದರ್ಶ ರಾಮಃ ಶತಶಸ್ತತ್ರ ಕಾಂತಾರಪಾದಪಾನ್ ॥೭೬॥

ಹೂಬಳ್ಳಿಗಳಿಂದ ಸುತ್ತುವರಿದ ನೂರಾರು ಕಾಡು ಮರಗಳನ್ನು ಶ್ರೀರಾಮ ಕಂಡನು.

ಹಸ್ತಿಹಸ್ತೈರ್ಮೃದಿತಾನ್ ವಾನರೈರುಪಶೋಭಿತಾನ್ ।
ಮತ್ತೈಃ ಶಕುನಿಸಂಘೈಶ್ಚ ಶತಶಃ ಪ್ರತಿನಾದಿತಾನ್ ॥೭೭॥

ಪ್ರಣಾದಿತಾನ್ –ಪಾಠಾಂತರ.

ಆನೆಯ ಸೊಂಡಿಲುಗಳಿಂದ ಮುರಿದ ಮರಗಳು, ವಾನರ ಸಮೂಹಗಳಿಂದ ಶೋಭಿಸುತ್ತಿದ್ದ ಮರಗಳು ಮತ್ತೇರಿದ ನೂರಾರು ಹಕ್ಕಿಗಳಿಂದ ಉಲಿಯುತ್ತಿದ್ದಂತೆ ಕಂಡ ಮರಗಳನ್ನು ಶ್ರೀರಾಮ ನೋಡಿದನು.

ತತೋಽಬ್ರವೀತ್ಸಮೀಪಸ್ಥಂ ರಾಮೋ ರಾಜೀವಲೋಚನಃ ।
ಪೃಷ್ಠತೋಽನುಗತಂ ವೀರಂ ಲಕ್ಷ್ಮಣಂ ಲಕ್ಷ್ಮಿವರ್ಧನಮ್ ॥೭೮॥

ಬಳಿಕ ಶ್ರೀರಾಮ ತನ್ನನ್ನು ಹಿಂಬಾಲಿಸಿಕೊಂಡು ಹತ್ತಿರದಲ್ಲಿಯೇ ಇದ್ದ ವೀರ, ಕಾಂತಿವರ್ಧನ ಲಕ್ಷ್ಮಣನನ್ನು ಕುರಿತು ಹೇಳಿದನು.

ಸ್ನಿಗ್ಧಪತ್ರಾ ಯಥಾ ವೃಕ್ಷಾ ಯಥಾ ಶಾಂತಮೃಗದ್ವಿಜಾಃ ।
ಆಶ್ರಮೋ ನಾತಿದೂರಸ್ಥೋ ಮಹರ್ಷೇರ್ಭಾವಿತಾತ್ಮನಃ ॥೭೯॥

ಯಥಾ ಕ್ಷಾಂತಾಃ – ಪಾಠಾಂತರ.

ಪಸೆಯಾದ ನವಿರಾದ ಮರದೆಲೆಗಳು, ಮೃಗಪಕ್ಷಿಗಳು ಶಾಂತವಾಗಿವೆ. ಆದುದರಿಂದ ಭಗವಂತನನ್ನು ಕಂಡ ಅಗಸ್ತ್ಯರ ಆಶ್ರಮ ಸಮೀಪದಲ್ಲಿರಬೇಕು.

ಅಗಸ್ತ್ಯ ಇತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ ।
ಆಶ್ರಮೋ ನಾತಿದೂರಸ್ಥೋ ಮಹರ್ಷೇರ್ಭಾವಿತಾತ್ಮನಃ ॥೮೦॥

ಸೆಟೆದು ನಿಂತ ಪರ್ವತವನ್ನೆ ಸ್ತಂಭಿಸಿದ ತಮ್ಮ ಅಚ್ಚರಿಯ ಕರ್ಮದಿಂದಲೆ 'ಅಗಸ್ತ್ಯ' ಎಂದು ಪ್ರಸಿದ್ಧರಾದ ಮುನಿಗಳ ಆಶ್ರಮ ಕಾಣುತ್ತಿದೆ! ಬಳಲಿದವರ ಪರಿಶ್ರಮವನ್ನು ಪರಿಹರಿಸುವಂತಹ ಪರಿಸರದ ಆಶ್ರಮ.

ಪ್ರಾಜ್ಯಧೂಮಾಕುಲವನಶ್ಚೀರಮಾಲಾಪರಿಷ್ಕೃತಃ ।
ಪ್ರಶಾಂತಮೃಗಯೂಥಶ್ಚ ನಾನಾಶಕುನಿನಾದಿತಃ ॥೮೧॥

ಯಜ್ಞಯಾಗಗಳ ಪವಿತ್ರ ಹೊಗೆಯಿಂದ ತುಂಬಿದ ಆಶ್ರಮ. ನಾರುಮಡಿಗಳ ಮಾಲೆಯಿಂದ ಪರಿಷ್ಕಾರಗೊಂಡ ಆಶ್ರಮ. ವೈರ ಮರೆತು ಶಾಂತವಾದ ಮೃಗಗಳ ಕೂಟ, ಹಕ್ಕಿಗಳ ಚಿಲಿಪಿಲಿ ನಾದಗಳ ಅನುರಣನ ತುಂಬಿದ ಆಶ್ರಮ!

ನಿಗೃಹ್ಯ ತರಸಾ ಮೃತ್ಯುಂ ಲೋಕಾನಾಂ ಹಿತಕಾಮ್ಯಯಾ ।
ದಕ್ಷಿಣಾ ದಿಕೃತಾ ಯೇನ ಶರಣ್ಯಾ ಪುಣ್ಯಕರ್ಮಣಾ ॥೮೨॥

ಎಲ್ಲ ಲೋಕಗಳಿಗೆ ಹಿತವನ್ನುಂಟು ಮಾಡುವ ಬಯಕೆಯಿಂದ ನೂರಾರು ಅಸುರರನ್ನು ನಿಗ್ರಹಿಸಿ ದಕ್ಷಿಣದಿಕ್ಕು ಆಶ್ರಯಾರ್ಹವಾಗಿಸಿದವರು ಪುಣ್ಯಕರ್ಮ ಅಗಸ್ತ್ಯರು.

ತಸ್ಯೇದಮಾಶ್ರಮಪದಂ ಪ್ರಭಾವಾದ್ಯಸ್ಯ ರಾಕ್ಷಸೈಃ ।
ದಿಗಿಯಂ ದಕ್ಷಿಣಾ ತ್ರಾಸಾದ್ದೃಶ್ಯತೇ ನೋಪಭುಜ್ಯತೇ ॥೮೩॥

ಯಾರ ಪ್ರಭಾವದಿಂದ ರಕ್ಕಸರು ದಕ್ಷಿಣದಿಕ್ಕನ್ನು ದೂರದಿಂದ ನೋಡುವರೇ ಹೊರತು ಇಲ್ಲಿ ಬಂದು ವಾಸ ಮಾಡುವುದಿಲ್ಲ–ಅಂತಹ ಅಗಸ್ತ್ಯರ ಆಶ್ರಮವಿದು.

ಯದಾ ಪ್ರಭೃತಿ ಚಾಕ್ರಾಂತಾ ದಿಗಿಯಂ ಪುಣ್ಯಕರ್ಮಣಃ ।
ತದಾ ಪ್ರಭೃತಿ ನಿರ್ವೈರಾಃ ಪ್ರಶಾಂತಾಃ ಪಿಶಿತಾಶನಾಃ ॥೮೪॥

ಎಂದಿನಿಂದ ಪುಣ್ಯಕರ್ಮ ಅಗಸ್ತ್ಯರು ಇಲ್ಲಿ ನೆಲೆಸಿದರೋ ಆ ಕಾಲದಿಂದ ನಿಶಾಚರರು ವೈರಮಾಡದೆ ಶಾಂತರಾಗಿರುವರು.

ನಾಮ್ನಾ ಚೇಯಂ ಭಗವತೋ ದಕ್ಷಿಣಾ ದಿಕ್ಪದಕ್ಷಿಣಾ ।
ಪ್ರಥಿತಾ ತ್ರಿಷು ಲೋಕೇಷು ದುರ್ಧರ್ಷಾ ಕ್ರೂರಕರ್ಮಭಿಃ ॥೮೫॥

ಅಗಸ್ತ್ಯರ ಪ್ರಭಾವದಿಂದ ಕ್ರೂರಕರ್ಮರಾದ ಅಸುರರಿಗೆ ದುರ್ಜಯವಾದ ಕಾರಣ ಈ ದಿಕ್ಕು ಶ್ರೇಷ್ಠವಾದ ದಕ್ಷಿಣ ದಿಕ್ಕು ಎಂದೆನಿಸಿ ಸಾರ್ಥವಾಗಿದೆ.

ಗತಿಂ ನಿರೋದ್ಧುಂ ನಿರತೋ ಭಾಸ್ಕರಸ್ಯಾಚಲೋತ್ತಮಃ ।
ನಿದೇಶಂ ಪಾಲಯನ್ ಯಸ್ಯ ವಿಂಧ್ಯಃ ಶೈಲೋ ನ ವರ್ಧತೇ ॥೮೬॥

ಸೂರ್ಯನ ಸಂಚಾರಕ್ಕೆ ಅಡ್ಡಿಯಾಗಿ ನಿಂತಿದ್ದ ವಿಂಧ್ಯಪರ್ವತವು ಅಗಸ್ತ್ಯರು ನೀಡಿದ ಆದೇಶದಂತೆ ತಲೆ ತಗ್ಗಿಸಿ ಕುಗ್ಗಿದ್ದು ಇದುವರೆಗೆ ತಲೆ ಎತ್ತೇ ಇಲ್ಲ!

ಅಯಂ ದೀರ್ಘಾಯುಷಸ್ತಸ್ಯ ಲೋಕೇ ವಿಶ್ರುತಕರ್ಮಣಃ ।
ಅಗಸ್ತ್ಯಸ್ಯಾಶ್ರಮಃ ಶ್ರೀಮಾನ್ ವಿನೀತಜನಸೇವಿತಃ ॥೮೭॥

ಲೋಕಪ್ರಸಿದ್ಧ ಮಹಿಮರು ದೀರ್ಘಾಯುಷಿಗಳೂ ಆದ ಅಗಸ್ತ್ಯರ ಆಶ್ರಮವಿದು–ವಿಧೇಯಜನರಿಂದ ಸೇವಿತವಾದ ತೇಜಸ್ವಿಯಾದುದು.

ಏಷ ಲೋಕಾರ್ಚಿತಃ ಸಾಧುರ್ಹಿತೇ ನಿತ್ಯರತಃ ಸತಾಮ್ ।
ಅಸ್ಮಾನಭಿಗತಾನೇಷ ಶ್ರೇಯಸಾ ಯೋಜಯಿಷ್ಯತಿ ॥೮೮॥

ಲೋಕಪೂಜಿತರು, ಸಜ್ಜನರ ನಿತ್ಯ ಹಿತೈಷಿಗಳೂ ಆದ ಈ ಅಗಸ್ತ್ಯಮುನಿಗಳು ನಮ್ಮನ್ನು ಶ್ರೇಯೋಮಾರ್ಗದಲ್ಲಿ ಮುನ್ನಡೆಸುತ್ತಾರೆ.

ಆರಾಧಯಿಷ್ಯಾಮ್ಯಹಮಾತ್ಮವಾನಹಮಗಸ್ತ್ಯಂ ತಂ ಮಹಾಮುನಿಮ್ ।
ಶೇಷಂ ಚ ವನವಾಸಸ್ಯ ಸೌಮ್ಯ ವತ್ಸ್ಯಾಮ್ಯಹಂ ಪ್ರಭೋ ॥೮೯॥

ಸೌಮ್ಯ ಲಕ್ಷ್ಮಣ! ವನವಾಸದ ಉಳಿದ ಭಾಗವನ್ನು ಇಲ್ಲೆ ಉಳಿದು ಅಗಸ್ತ್ಯರ ಸೇವೆಯನ್ನು ಮಾಡಿಕೊಂಡು ಸಾರ್ಥಕಪಡಿಸಿಕೊಳ್ಳುತ್ತೇನೆ.

ಅತ್ರ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಅಗಸ್ತ್ಯಂ ನಿಯತಾಹಾರಂ ಸತತಂ ಪರ್ಯುಪಾಸತೇ ॥೯೦॥

ಇಲ್ಲಿ ದೇವತೆಗಳು ಗಂಧರ್ವರು ಸಿದ್ಧರು ಪರಮರ್ಷಿಗಳು, ಆಹಾರ ನಿಯಮವನ್ನು ಪಾಲಿಸಿಕೊಂಡು ಅಗಸ್ತ್ಯರ ಸೇವೆಯನ್ನು ನಿತ್ಯ ಮಾಡುತ್ತಾರೆ.

ನಾತ್ರ ಜೀವನ್ಮೃಷಾವಾದೀ ಕ್ರೂರೋ ವಾ ಯದಿ ವಾ ಶಠಃ ।
ನೃಶಂಸಃ ಕಾಮವೃತ್ತೋ ವಾ ಮುನಿರೇಷ ತಥಾವಿಧಃ ॥೯೧॥

ಈ ಪವಿತ್ರ ಪರಿಸರದಲ್ಲಿ ಸುಳ್ಳು ಹೇಳುವವನಾಗಲಿ, ಕ್ರೂರನಾಗಲಿ, ವಂಚಕನಾಗಲಿ, ಹಿಂಸೆಯ ಸ್ವಭಾವದವನಾಗಲಿ ಕಾಮುಕನೂ ಆಗಲಿ ಯಾರು ಬದುಕಿ ಉಳಿಯರು. ಅಂತಹ ಮಹಾನುಭಾವ ಮುನಿಗಳು ಅಗಸ್ತ್ಯರು.

ಅತ್ರ ದೇವಾಶ್ಚ ಯಕ್ಷಾಶ್ಚ ನಾಗಾಶ್ಚ ಪತಗೈಃ ಸಹ ।
ವಸಂತಿ ನಿಯತಾಹಾರಾ ಧರ್ಮಮಾರಾಧಯಿಷ್ಣವಃ ॥೯೨॥

ಇಲ್ಲಿ ದೇವತೆಗಳು ಯಕ್ಷರು ನಾಗಗಳು ಗರುಡಪಕ್ಷಿಗಳೊಂದಿಗೆ ನಿಯಮಿತ ಆಹಾರರಾಗಿ ಧರ್ಮಾರಾಧನ ತತ್ಪರರಾಗಿ ವಾಸಿಸುತ್ತಾರೆ.

ಅತ್ರ ಸಿದ್ಧಾ ಮಹಾತ್ಮಾನೋ ವಿಮಾನೈಃ ಸೂರ್ಯಸನ್ನಿಭೈಃ ।
ತ್ಯಕ್ತದೇಹಾ ನವೈರ್ದೇಹೈಃ ಸ್ವರ್ಯಾತಾಃ ಪರಮರ್ಷಯಃ ॥೯೩॥

ಇಲ್ಲಿ ಮಹಾತ್ಮರಾದ ಸಿದ್ಧಪುರುಷರಾದ ಪರಮರ್ಷಿಗಳು ದೇಹತ್ಯಾಗ ಮಾಡಿ

ಹೊಸ ದಿವ್ಯದೇಹವನ್ನು ಪಡೆದವರಾಗಿ ಸೂರ್ಯನಂತೆ ಹೊಳೆಯುವ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋಗಿದ್ದಾರೆ!

ಯಕ್ಷತ್ವಮಮರತ್ವಂ ಚ ರಾಜ್ಯಾನಿ ವಿವಿಧಾನಿ ಚ ।
ಅತ್ರ ದೇವಾಃ ಪ್ರಯಚ್ಛಂತಿ ಭೂತೈರಾರಾಧಿತಾಃ ಶುಭೈಃ ॥೯೪॥

ಇಲ್ಲಿ ಶುಭ ಜೀವರಿಂದ ಆರಾಧಿತರಾದ ದೇವತೆಗಳು ಯಕ್ಷತ್ವವನ್ನು, ಅಮರತ್ವವನ್ನು, ಬಗೆಬಗೆಯ ರಾಜ್ಯಸಂಪತ್ತನ್ನು ಕರುಣಿಸುತ್ತಾರೆ.

ಆಗತಾಃ ಸ್ಮಾಶ್ರಮಪದಂ ಸೌಮಿತ್ರೇ ಪ್ರವಿಶಾಗ್ರತಃ ।
ನಿವೇದಯೇಹ ಮಾಂ ಪ್ರಾಪ್ತಮೃಷಯೇ ಸೀತಯಾ ಸಹ ॥೯೫॥

ಸೌಮಿತ್ರೆ! ಆಶ್ರಮಕ್ಕೆ ಬಂದದ್ದಾಯಿತು. ಮೊದಲು ನೀನು ಆಶ್ರಮವನ್ನು ಪ್ರವೇಶ ಮಾಡು. ಸೀತೆಯೊಂದಿಗೆ ನಾನು ಬಂದಿರುವುದನ್ನು ಮುನಿಗಳಿಗೆ ನಿವೇದಿಸು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹನ್ನೊಂದನೇ ಸರ್ಗ ಮುಗಿಯಿತು.

❖

ದ್ವಾದಶಃ ಸರ್ಗಃ

ಕಥಾಸಾರಾಂಶ– ಲಕ್ಷ್ಮಣ ಆಶ್ರಮದ ಪ್ರದೇಶವನ್ನು ಪ್ರವೇಶಿಸಿ ಅಗಸ್ತ್ಯರ ಶಿಷ್ಯರೊಬ್ಬರಿಗೆ, 'ಪ್ರಸಿದ್ಧರಾಜ ದಶರಥನ ಜ್ಯೇಷ್ಠಪುತ್ರ ಶ್ರೀರಾಮ ತನ್ನ ಪತ್ನಿ ಸೀತೆಯೊಂದಿಗೆ ಅಗಸ್ತ್ಯರನ್ನು ಕಾಣಲು ಬಂದಿರುವನು. ನಾನು ಅವನ ತಮ್ಮ ಲಕ್ಷ್ಮಣ. ನಾವು ಅಗಸ್ತ್ಯರನ್ನು ಕಾಣಲು ಬಯಸಿದ್ದೇವೆ. ಅವರಿಗೆ ನಿವೇದನೆ ಮಾಡಿ' ಎಂದು ಹೇಳಿದನು.

ಯಜ್ಞಶಾಲೆಯಲ್ಲಿದ್ದ ಅಗಸ್ತ್ಯರಲ್ಲಿ ಅವರ ಶಿಷ್ಯ ಸೀತಾರಾಮಲಕ್ಷ್ಮಣರು ತಮ್ಮ ದರ್ಶನಕ್ಕೆ ಬಂದಿರುವರು ಎಂದು ತಿಳಿಸಿದ. ಬೇಗ ಕರೆತಾ. ಏಕಿಷ್ಟು ತಡ ಮಾಡಿದಿ ಎಂದರು.

ಶ್ರೀರಾಮಚಂದ್ರ ಒಳ ಬಂದು ಅಗಸ್ತ್ಯರ ಪಾದಮುಟ್ಟಿ ನಮಸಿದನು. ಬಹುಕಾಲ-ದಿಂದ ನಾನೂ ನಿಮ್ಮ ದರ್ಶನದ ನಿರೀಕ್ಷೆಯಲ್ಲಿದ್ದೆ. ತುಂಬಾ ಸಂತೋಷ ಎಂದರು.

ಅಗ್ನಿಯನ್ನು ಆರಾಧಿಸಿ, ಅರ್ಘ್ಯವಿತ್ತು ಅತಿಥಿಯನ್ನು ಆರಾಧಿಸಿ ಸೀತಾರಾಮ ಲಕ್ಷ್ಮಣರಿಗೆ ಊಟ ಹಾಕಿದರು. ಬಳಿಕ ವಿಶ್ವಕರ್ಮನಿರ್ಮಿತ ವೈಷ್ಣವಾಸ್ತ್ರ ಬಿಲ್ಲನ್ನೂ ಬ್ರಹ್ಮದತ್ತವಾದ ಬಾಣವನ್ನೂ, ಇಂದ್ರಕೊಟ್ಟ ಬಾಣಗಳು ತುಂಬಿದ ಅಕ್ಷಯ ಬತ್ತಳಿಕೆ-ಗಳನ್ನು, ಬಂಗಾರದ ಕೊಳವಿರುವ ಖಡ್ಗವನ್ನೂ ಅಗಸ್ತ್ಯರು ಶ್ರೀರಾಮನಿಗೆ ಅರ್ಪಿಸಿದರು.

❖

ಅಗಸ್ತ್ಯದರ್ಶನಮ್

ಸ ಪ್ರವಿಶ್ಯಾಶ್ರಮಪದಂ ಲಕ್ಷ್ಮಣೋ ರಾಘವಾನುಜಃ ।
ಅಗಸ್ತ್ಯಶಿಷ್ಯಮಾಸಾದ್ಯ ವಾಕ್ಯಮೇತದುವಾಚ ಹ ॥೧॥

ಆ ರಾಮಾನುಜ ಲಕ್ಷ್ಮಣನು ಆಶ್ರಮವನ್ನು ಪ್ರವೇಶಿಸಿ ಅಗಸ್ತ್ಯ ಶಿಷ್ಯರೊಬ್ಬರನ್ನು ಭೇಟಿ ಮಾಡಿ ಈ ಮಾತನ್ನು ಕೇಳಿದನು.

ರಾಜಾ ದಶರಥೋ ನಾಮ ಜ್ಯೇಷ್ಠಸ್ತಸ್ಯ ಸುತೋ ಬಲೀ ।
ರಾಮಃ ಪಾಪ್ತೋ ಮುನಿಂ ದ್ರಷ್ಟುಂ ಭಾರ್ಯಯಾ ಸಹ ಸೀತಯಾ ॥೨॥

ಪ್ರಸಿದ್ಧನಾದ ರಾಜಾ ದಶರಥನ ಹಿರಿಯ ಮಗ ಶ್ರೀರಾಮನು ತನ್ನ ಸತೀ ಸೀತೆಯೊಂದಿಗೆ ಅಗಸ್ತ್ಯರನ್ನು ಕಾಣಲು ಬಂದಿರುವನು.

ಲಕ್ಷ್ಮಣೋ ನಾಮ ತಸ್ಯಾಹಂ ಭ್ರಾತಾ ತ್ವವರಜೋ ಹಿತಃ ।
ಅನುಕೂಲಶ್ಚ ಭಕ್ತಶ್ಚ ಯದಿ ತೇ ಶ್ರೋತ್ರಮಾಗತಃ ॥೩॥

ನಾನು ಲಕ್ಷ್ಮಣ ಎಂದು ಪ್ರಸಿದ್ಧನಾದ ರಾಮನ ತಮ್ಮ. ಅವನಿಗೆ ಅನುಕೂಲನು, ಹಿತನೂ, ಭಕ್ತನೂ ಆದವನು, ನೀವು ಕೇಳಿರಬೇಕು.

ತೇ ವಯಂ ವನಮತ್ಯುಗ್ರಂ ಪ್ರವಿಷ್ಟಾಃ ಪಿತೃಶಾಸನಾತ್ ।
ದ್ರಷ್ಟುಮಿಚ್ಛಾಮಹೇ ಸರ್ವೇ ಭಗವಂತಂ ನಿವೇದ್ಯತಾಮ್ ॥೪॥

ನಾವು ಪಿತೃ ಆಜ್ಞಾನುಸಾರವಾಗಿ ಕಾಡಿಗೆ ಬಂದವರು. ಅಗಸ್ತ್ಯರನ್ನು ಕಾಣಲು ಬಯಸಿದ್ದೇವೆ. ಅವರಿಗೆ ತಿಳಿಸೋಣವಾಗಲಿ.

ತಸ್ಯ ತದ್ವಚನಂ ಶ್ರುತ್ವಾ ಲಕ್ಷ್ಮಣಸ್ಯ ತಪೋಧನಃ ।
ತಥೇತ್ಯುಕ್ತ್ವಾಗ್ನಿಶರಣಂ ಪ್ರವಿವೇಶ ನಿವೇದಿತುಮ್ ॥೫॥

ಆ ಲಕ್ಷ್ಮಣನ ಆ ಮಾತನ್ನು ಕೇಳಿ ತಪೋಧನರಾದ ಅಗಸ್ತ್ಯ ಶಿಷ್ಯರು ತಿಳಿಸಲು ಅಗ್ನಿಶಾಲೆಯನ್ನು ಹೊಕ್ಕರು.

ಸ ಪ್ರವಿಶ್ಯ ಮುನಿಶ್ರೇಷ್ಠಂ ತಪಸಾ ದುಷ್ಪ್ರಧರ್ಷಣಮ್ ।
ಕೃತಾಂಜಲಿರುವಾಚೇದಂ ರಾಮಾಗಮನಮಂಜಸಾ ।
ಯಥೋಕ್ತಂ ಲಕ್ಷ್ಮಣೇನೈವ ಶಿಷ್ಯೋಽಗಸ್ತ್ಯಸ್ಯ ಸಂಮತಃ ॥೬॥

ಆ ಶಿಷ್ಯರು ಪ್ರವೇಶಿಸಿ ತಪಶಕ್ತಿಯಿಂದ ದುರ್ಧರ್ಷರಾದ ಮುನಿಶ್ರೇಷ್ಠರನ್ನು ಕುರಿತು ಕೈಮುಗಿದು ಲಕ್ಷ್ಮಣನು ಹೇಳಿದಂತೆ ರಾಮಾಗಮನ ವಾರ್ತೆಯನ್ನು ಅರುಹಿದರು.

ಪುತ್ರೌ ದಶರಥಸ್ಯೇಮೌ ರಾಮೋ ಲಕ್ಷ್ಮಣ ಏವ ಚ ।
ಪ್ರವಿಷ್ಟಾವಾಶ್ರಮಪದಂ ಸೀತಯಾ ಸಹ ಭಾರ್ಯಯಾ ॥೭॥

ದಶರಥನ ಪುತ್ರರಾದ ರಾಮಲಕ್ಷ್ಮಣರು ಸೀತೆಯೊಂದಿಗೆ ಆಶ್ರಮವನ್ನು ಪ್ರವೇಶಿಸಿರುವರು.

ದ್ರಷ್ಟುಂ ಭವಂತಮಾಯಾತೌ ಶುಶ್ರೂಷಾರ್ಥಮರಿಂದಮೌ ।
ಯದತ್ರಾನಂತರಂ ತತ್ತ್ವಮಾಜ್ಞಾಪಯಿತುಮರ್ಹಸಿ ॥೮॥

ತಮ್ಮನ್ನು ಕಾಣಲು ಸೇವಿಸಲು ಶತ್ರುದಮನರಾದ ರಾಮ–ಲಕ್ಷ್ಮಣರು ಬಂದಿರುವರು. ಮುಂದೇನು ಮಾಡಬೇಕು? ತಾವು ಅಪ್ಪಣೆ ಮಾಡಬೇಕು.

ತತಃ ಶಿಷ್ಯಾದುಪಶ್ರುತ್ಯ ಪ್ರಾಪ್ತಂ ರಾಮಂ ಸಲಕ್ಷ್ಮಣಮ್ ।
ವೈದೇಹೀಂ ಚ ಮಹಾಭಾಗಾಮಿದಂ ವಚನಮಬ್ರವೀತ್ ॥೯॥

ಬಳಿಕ ಅಗಸ್ತ್ಯ ಶಿಷ್ಯರು ಲಕ್ಷ್ಮಣಸಹಿತ ರಾಮನನ್ನು ಮಹಾಭಾಗ್ಯಶಾಲಿನಿ ವಿದೇಹನಂದಿನೀ ಸೀತೆಯನ್ನು ಸಮೀಪಿಸಿ ಈ ಮಾತನ್ನು ಹೇಳಿದರು.

ದಿಷ್ಟ್ಯಾ ರಾಮಶ್ಚಿರಸ್ಯಾದ್ಯ ದ್ರಷ್ಟುಂ ಮಾಂ ಸಮುಪಾಗತಃ ।
ಮನಸಾ ಕಾಂಕ್ಷಿತಂ ಹ್ಯಸ್ಯ ಮಯಾಪ್ಯಾಗಮನಂ ಪ್ರತಿ ॥೧೦॥

ದೊಡ್ಡ ಸೌಭಾಗ್ಯ! ಬಹುಕಾಲದ ಅನಂತರ ಶ್ರೀರಾಮ ನನ್ನನ್ನು ಕಾಣಲು ಬಂದಿರುವನು. ನನ್ನ ಮನವೂ ಅವನ ಆಗಮನವನ್ನು ಬಯಸಿತ್ತು!

ಗಮ್ಯತಾಂ ಸತ್ಕೃತೋ ರಾಮಃ ಸಭಾರ್ಯಃ ಸಹಲಕ್ಷ್ಮಣಃ ।
ಪ್ರವೇಶ್ಯತಾಂ ಸಮೀಪಂ ಮೇ ಕಿಂ ಚಾಸೌ ನ ಪ್ರವೇಶಿತಃ ॥೧೧॥

ಹೋಗೋಣವಾಗಲಿ. ಸೀತಾ ಲಕ್ಷ್ಮಣ ಸಹಿತ ಶ್ರೀರಾಮನನ್ನು ಸತ್ಕರಿಸಿ ಬಳಿಗೆ ಕರೆತನ್ನಿ. ಇಷ್ಟರೊಳಗೆ ಯಾಕೆ ಅವರನ್ನು ಕರೆತಂದಿಲ್ಲ?

ಏವಮುಕ್ತಸ್ತು ಮುನಿನಾ ಧರ್ಮಜ್ಞೇನ ಮಹಾತ್ಮನಾ ।
ಅಭಿವಾದ್ಯಬ್ರವೀಚ್ಛಿಷ್ಯಸ್ತಥೇತಿ ನಿಯತಾಂಜಲಿಃ ॥೧೨॥

ಹೀಗೆ ಧರ್ಮಜ್ಞ ಮಹಾತ್ಮ ಮುನಿಯಿಂದ ಹೇಳಿಸಿಕೊಂಡ ಶಿಷ್ಯ ಹಾಗೆ ಆಗಲೆಂದು ತಲೆಬಾಗಿ ಕೈಮುಗಿದನು.

ತತೋ ನಿಷ್ಕ್ರಮ್ಯ ಸಂಭ್ರಾಂತಃ ಶಿಷ್ಯೋ ಲಕ್ಷ್ಮಣಮಬ್ರವೀತ್ ।
ಕ್ವಾಸೌ ರಾಮೋ ಮುನಿಂ ದ್ರಷ್ಟುಮೇತು ಪ್ರವಿಶತು ಸ್ವಯಮ್ ॥೧೩॥

ಕೂಡಲೆ ವೇಗವಾಗಿ ಆ ಶಿಷ್ಯ ಲಕ್ಷ್ಮಣನ ಬಳಿ ಬಂದು, ರಾಮ ಎಲ್ಲಿರುವನು? ಬರಲಿ. ಮುನಿಯ ದರ್ಶನ ಮಾಡಲಿ ಎಂದನು.

ತತೋ ಗತ್ವಾಶ್ರಮದ್ವಾರಂ ಶಿಷ್ಯೇಣ ಸಹ ಲಕ್ಷ್ಮಣಃ ।
ದರ್ಶಯಾಮಾಸ ಕಾಕುತ್ಸ್ಥಂ ಸೀತಾಂ ಚ ಜನಕಾತ್ಮಜಾಮ್ ॥೧೪॥

ಬಳಿಕ ಲಕ್ಷ್ಮಣನು ಶಿಷ್ಯರೊಂದಿಗೆ ಆಶ್ರಮದ್ವಾರದ ಬಳಿ ಹೋಗಿ ರಾಮನನ್ನು ಜಾನಕಿಯನ್ನೂ ಕೂಡ ತೋರಿಸಿದನು.

ತಂ ಶಿಷ್ಯಃ ಪ್ರಶ್ರಿತೋ ವಾಕ್ಯಮಗಸ್ತ್ಯವಚನಂ ಬ್ರುವನ್ ।
ಪ್ರಾವೇಶಯದ್ಯಥಾನ್ಯಾಯಂ ಸತ್ಕಾರಾರ್ಹಂ ಸುಸತ್ಕೃತಮ್ ॥೧೫॥

ಮುನಿಶಿಷ್ಯರು ರಾಮನ ಬಳಿ ವಿನೀತನಾಗಿ ಅಗಸ್ತ್ಯರ ಮಾತನ್ನು ಹೇಳಿ ಸತ್ಕಾರಾರ್ಹನಾದ ಅವನನ್ನು ಸತ್ಕರಿಸಿ ಆಶ್ರಮವನ್ನು ಪ್ರವೇಶ ಮಾಡಿಸಿದ.

ಪ್ರವಿವೇಶ ತತೋ ರಾಮಃ ಸೀತಯಾ ಸಹಲಕ್ಷ್ಮಣಃ ।
ಪ್ರಶಾಂತಹರಿಣಾಕೀರ್ಣಮಾಶ್ರಮಂ ಹ್ಯವಲೋಕಯನ್ ॥೧೬॥

ಬಳಿಕ ಸೀತಾಸಹಿತ ಶ್ರೀರಾಮನು ಲಕ್ಷ್ಮಣನೂ ಪ್ರವೇಶಿಸಿದರು– ಪ್ರಶಾಂತವಾದ ಜಿಂಕೆಗಳಿಂದ ತುಂಬಿದ ಆಶ್ರಮವನ್ನೆಲ್ಲ ಅವಲೋಕನ ಮಾಡುತ್ತ.

ಸ ತತ್ರ ಬ್ರಹ್ಮಣಃ ಸ್ಥಾನಮಗ್ನೇಃ ಸ್ಥಾನಂ ತಥೈವ ಚ
ವಿಷ್ಣೋಃ ಸ್ಥಾನಂ ಮಹೇಂದ್ರಸ್ಯ ಸ್ಥಾನಂ ಚೈವ ವಿವಸ್ವತಃ ॥೧೭॥

ಸೋಮಸ್ಥಾನಂ ಭಗಸ್ಥಾನಂ ಸ್ಥಾನಂ ಕೌಬೇರಮೇವ ಚ ।
ಧಾತುರ್ವಿಧಾತುಃ ಸ್ಥಾನೇ ಚ ವಾಯೋಃ ಸ್ಥಾನಂ ತಥೈವ ಚ ॥೧೮॥

ನಾಗರಾಜಸ್ಯ ಚ ಸ್ಥಾನಮನಂತಸ್ಯ ಮಹಾತ್ಮನಃ ।
ಸ್ಥಾನಂ ತಥೈವ ಗಾಯತ್ರ್ಯಾ ವಸೂನಾಂ ಸ್ಥಾನಮೇವ ಚ ॥೧೯॥

ಸ್ಥಾನಂ ಚ ಪಾಶಹಸ್ತಸ್ಯ ವರುಣಸ್ಯ ಮಹಾತ್ಮನಃ ।
ಕಾರ್ತಿಕೇಯಸ್ಯ ಚ ಸ್ಥಾನಂ ಧರ್ಮಸ್ಥಾನಂ ಚ ಪಶ್ಯತಿ ॥೨೦॥

ಆ ಶ್ರೀರಾಮನು ಆಶ್ರಮದಲ್ಲಿ ಬ್ರಹ್ಮನ ಸ್ಥಾನವನ್ನು, ಯಜ್ಞೇಶ್ವರನ ಸ್ಥಾನವನ್ನು ನೋಡಿದನು. ಮತ್ತೆ ಕ್ರಮವಾಗಿ ಭಗವಾನ್ ವಿಷ್ಣು, ಮಹೇಂದ್ರ, ಸೂರ್ಯ, ಚಂದ್ರ, ಭಗ, ಕುಬೇರ, ಧಾತಾ, ವಿಧಾತಾ, ವಾಯು, ಪಾಶಧಾರೀ ಮಹಾತ್ಮ ವರುಣ, ಗಾಯತ್ರೀ, ವಸು, ನಾಗರಾಜ, ಅನಂತ, ಗರುಡ ಕಾರ್ತಿಕೇಯ ಹಾಗು ಧರ್ಮರಾಜ—ಇವರ ಬೇರೆ ಬೇರೆ ಸ್ಥಾನಗಳನ್ನೂ ನೋಡಿದನು.

ತತಃ ಶಿಷ್ಯೈಃ ಪರಿವೃತೋ ಮುನಿರಪ್ಯಭಿನಿಷ್ಪತತ್ ।
ತಂ ದದರ್ಶಾಗ್ರತೋ ರಾಮೋ ಮುನೀನಾಂ ದೀಪ್ತತೇಜಸಾಮ್ ॥೨೧

ಅಷ್ಟರಲ್ಲಿ ಶಿಷ್ಯರಿಂದ ಕೂಡಿಕೊಂಡು ಅಗಸ್ತ್ಯರು ಎದುರಿಗೆ ಬಂದರು. ಬೆಳಗುವ ತೇಜಸ್ವಿಮುನಿಗಳ ಮುಂದಿದ್ದ ಅಗಸ್ತ್ಯರನ್ನು ಶ್ರೀರಾಮ ಕಂಡನು.

ಅಬ್ರವೀದ್ವಚನಂ ವೀರೋ ಲಕ್ಷ್ಮಣಂ ಲಕ್ಷ್ಮಿವರ್ಧನಮ್ ॥೨೨॥

ಏಷ ಲಕ್ಷ್ಮಣ ನಿಷ್ಕಾಮತ್ಯಗಸ್ತ್ಯೋ ಭಗವಾನೃಷಿಃ ।
ಔದಾರ್ಯೇಣಾವಗಚ್ಛಾಮಿ ನಿಧಾನಂ ತಪಸಾಮಿಮಮ್ ॥೨೩॥

ಬಹಿರ್ಲಕ್ಷ್ಮಣ –ಪಾಠಾಂತರ.

ಕಾಂತಿವರ್ಧನನಾದ ಲಕ್ಷ್ಮಣನಿಗೆ ವೀರ ಶ್ರೀರಾಮ ಇಂತೆಂದನು— ಇದೋ ಪೂಜ್ಯರಾದ ಅಗಸ್ತ್ಯಋಷಿಗಳು ಬರುತ್ತಿದ್ದಾರೆ. ತಪೋನಿಧಿಗಳಾದ ಇವರನ್ನು ಆ ಉದಾರ ನಿಲುವಿನಿಂದ ಗುರುತಿಸಿ ತಿಳಿಯುತ್ತಿದ್ದೇನೆ.

ಏವಮುಕ್ತ್ವಾ ಮಹಾಬಾಹುರಗಸ್ತ್ಯಂ ಸೂರ್ಯವರ್ಚಸಮ್ ।
ಜಗ್ರಾಹ ಪರಮಪ್ರೀತಸ್ತಸ್ಯ ಪಾದೌ ಪರಂತಪಃ ॥೨೪॥

ಹೀಗೆ ಹೇಳಿ ನೀಳತೋಳಿನ ಶತ್ರುತಾಪನನಾದ ಶ್ರೀರಾಮನು ಸೂರ್ಯನಂತೆ ಬೆಳಗುವ ಅಗಸ್ತ್ಯರನ್ನು ಕಂಡು ಪರಮ ಪ್ರೀತನಾಗಿ ಅವರ ಎರಡೂ ಪಾದಗಳನ್ನು ಹಿಡಿದನು.

ಅಭಿವಾದ್ಯ ತು ಧರ್ಮಾತ್ಮಾ ತಸ್ಥೌ ರಾಮಃ ಕೃತಾಂಜಲಿಃ ।
ಸೀತಯಾ ಸಹ ವೈದೇಹ್ಯಾ ತದಾ ರಾಮಃ ಸಲಕ್ಷ್ಮಣಃ ॥೨೫॥

ಧರ್ಮಾತ್ಮ ಶ್ರೀರಾಮ ಕೈಮುಗಿದು ಅಭಿವಾದನ ಮಾಡಿ ನಿಂತನು. ವೈದೇಹಿ ಸೀತೆಯೊಂದಿಗೆ ಹಾಗು ಲಕ್ಷ್ಮಣನೊಂದಿಗೆ.

ಪ್ರತಿಜಗ್ರಾಹ ಕಾಕುತ್ಸ್ಥಮರ್ಚಯಿತ್ವಾಸನೋದಕೈಃ ।
ಕುಶಲಪ್ರಶ್ನಮುಕ್ತ್ವಾ ಚ ಹ್ಯಾಸ್ಯತಾಮಿತಿ ಚಾಬ್ರವೀತ್ ॥೨೬॥

ಪ್ರತಿಗೃಹ್ಯ – ಪಾಠಾಂತರ.

ಶ್ರೀರಾಮನನ್ನು ಅಗಸ್ತ್ಯರು ಹಿಡಿದು ಬಿಗಿದಪ್ಪಿ ಸಂತಸದಿಂದ ಆಸನ ಅರ್ಘ್ಯಪಾದ್ಯಗಳಿಂದ ಸತ್ಕರಿಸಿ ಕುಶಲವನ್ನು ಕೇಳಿ 'ಕುಳಿತುಕೋ' ಎಂದರು.

ಅಗ್ನಿಂ ಹುತ್ವಾ ಪ್ರದಾಯಾರ್ಘ್ಯಮತಿಥೀನ್ ಪ್ರತಿಪೂಜ್ಯ ಚ ।
ವಾನಪ್ರಸ್ಥೇನ ಧರ್ಮೇಣ ಸ ತೇಷಾಂ ಭೋಜನಂ ದದೌ ॥೨೭॥

ಅಗಸ್ತ್ಯರು ಮೊದಲಿಗೆ ಅಗ್ನಿಯಲ್ಲಿ ಆಹುತಿಯಿತ್ತು ವಾನಪ್ರಸ್ಥಧರ್ಮದಂತೆ ಅರ್ಘ್ಯವನ್ನು ಕೊಟ್ಟು ಅವರಿಗೆ ಭೋಜನವನ್ನು ನೀಡಿದರು.

ಪ್ರಥಮಂ ಚೋಪವಿಶ್ಯಾಥ ಧರ್ಮಜ್ಞೋ ಮುನಿಪುಂಗವಃ ।
ಉವಾಚ ರಾಮಮಾಸೀನಂ ಪ್ರಾಂಜಲಿಂ ಧರ್ಮಕೋವಿದಮ್ ॥೨೮॥

ಬಳಿಕ ಅಗಸ್ತ್ಯರು ತಾವು ಮೊದಲು ಕುಳಿತು ಆಮೇಲೆ ಕುಳಿತ ಧರ್ಮಕೋವಿದನಾದ ಕೈಮುಗಿದ ಶ್ರೀರಾಮನನ್ನು ಕುರಿತು ಹೇಳಿದರು.

ಅಗ್ನಿಂ ಹುತ್ವಾ ಪ್ರದಾಯಾರ್ಘ್ಯಮತಿಥಿಂ ಪ್ರತಿಪೂಜಯೇತ್ ।
ಅನ್ಯಥಾ ಖಲು ಕಾಕುತ್ಸ್ಥ ತಪಸ್ವೀ ಸಮುದಾಚರನ್
ದುಃಸಾಕ್ಷೀವ ಪರೇ ಲೋಕೇ ಸ್ವಾನಿ ಮಾಂಸಾನಿ ಭಕ್ಷಯೇತ್ ॥೨೯॥

ಕಾಕುತ್ಸ್ಥ! ಮೊದಲು ಅಗ್ನಿಯಲ್ಲಿ ಹೋಮಿಸಿ ಬಳಿಕ ಅತಿಥಿಯನ್ನು ಪೂಜಿಸಬೇಕು. ಇದಕ್ಕೆ ವಿಪರೀತವಾಗಿ ಆಚರಿಸುವ ತಪಸ್ವಿಯು ಸುಳ್ಳು ಸಾಕ್ಷಿ ಹೇಳಿದವನಂತೆ ಪರಲೋಕದಲ್ಲಿ ತನ್ನ ಮಾಂಸವನ್ನೇ ತಿನ್ನಬೇಕಾಗುತ್ತದೆ.

ರಾಜಾ ಸರ್ವಸ್ಯ ಲೋಕಸ್ಯ ಧರ್ಮಚಾರೀ ಮಹಾರಥಃ ।
ಪೂಜನೀಯಶ್ಚ ಮಾನ್ಯಶ್ಚ ಭವಾನ್ ಪ್ರಾಪ್ತಃ ಪ್ರಿಯಾತಿಥಿಃ ॥೩೦॥

ಎಲ್ಲ ಲೋಕದ ರಾಜ, ಧರ್ಮಾಚರಣಶೀಲ ಮಹಾರಥ! ಪೂಜನೀಯನು ಮಾನ್ಯನೂ ಆದ ನೀನು ಪ್ರಿಯಾತಿಥಿಯಾಗಿ ಬಂದಿರುವೆ.

ಏವಮುಕ್ತ್ವಾ ಫಲೈರ್ಮೂಲೈಃ ಪುಷ್ಪೈರನ್ಯೈಶ್ಚ ರಾಘವಮ್ ।
ಪೂಜಯಿತ್ವಾ ಯಥಾಕಾಮಂ ಪುನರೇವ ತತೋಽಬ್ರವೀತ್ ॥೩೧॥

ಹೀಗೆ ಹೇಳಿ ಫಲ ಮೂಲ ಪುಷ್ಪಗಳಿಂದ ರಾಘವನನ್ನು ತಮ್ಮಿಚ್ಛೆಯಂತೆ ಪೂಜಿಸಿ ಮತ್ತೆ ಹೀಗೆ ಹೇಳಿದರು.

ಇದಂ ದಿವ್ಯಂ ಮಹಚ್ಚಾಪಂ ಹೇಮರತ್ನವಿಭೂಷಿತಮ್ ।
ವೈಷ್ಣವಂ ಪುರುಷವ್ಯಾಘ್ರ ನಿರ್ಮಿತಂ ವಿಶ್ವಕರ್ಮಣಾ ॥೩೨॥

ಪುರುಷಶ್ರೇಷ್ಠನೇ! ಹೇಮರತ್ನ ವಿಭೂಷಿತವು, ವಿಶ್ವಕರ್ಮನಿರ್ಮಿತವೂ ಆದ ಇದು ಮಹಾಧನಸ್ಸು.

ಅಮೋಘಃ ಸೂರ್ಯಸಂಕಾಶೋ ಬ್ರಹ್ಮದತ್ತಃ ಶರೋತ್ತಮಃ ।
ದತ್ತೌ ಮಮ ಮಹೇಂದ್ರೇಣ ತೂಣೀ ಚಾಕ್ಷಯಸಾಯಕೌ ॥೩೩॥

ಇದು ಸೂರ್ಯನಂತೆ ಹೊಳೆವ ಅಮೋಘವಾದ ಬ್ರಹ್ಮದತ್ತವಾದ ಉತ್ತಮ ಬಾಣವು. ಮಹೇಂದ್ರನಿಂದ ಪ್ರದತ್ತವಾದ ಅಕ್ಷಯ ಬಾಣಗಳಿಂದ ತುಂಬಿದ ಇವೆರಡು ಬತ್ತಳಿಕೆಗಳು.

ಸಂಪೂರ್ಣೌ ನಿಶಿತೈರ್ಬಾಣೈರ್ಜ್ವಲದ್ಭಿರಿವ ಪಾವಕೈಃ ।
ಮಹಾರಜತಕೋಶೋಽಯಮಸಿರ್ಹೇಮವಿಭೂಷಿತಃ ॥೩೪॥

ಅಗ್ನಿಯಂತೆ ಪ್ರಜ್ವಲಿಸುವ ಹರಿತವಾದ ಬಾಣಗಳಿಂದ ತುಂಬಿದ ಬತ್ತಳಿಕೆಗಳು. ಇನ್ನು ಈ ಖಡ್ಗ–ಬಂಗಾರದ ಹಿಡಿ ಬಂಗಾರದ ಕೋಶಗಳನ್ನು ಹೊಂದಿರು-ವಂತಹುದು.

ಅನೇನ ಧನುಷಾ ರಾಮ ಹತ್ವಾ ಸಂಖ್ಯೇ ಮಹಾಸುರಾನ್ ।
ಆಜಹಾರ ಶ್ರಿಯಂ ದೀಪ್ತಾಂ ಪುರಾ ವಿಷ್ಣುರ್ದಿವೌಕಸಾಮ್ ॥೩೫॥

ರಾಮ! ಹಿಂದೆ ವಿಷ್ಣು ಈ ಬಿಲ್ಲಿನಿಂದ ಯುದ್ಧದಲ್ಲಿ ಮಹಾಸುರರನ್ನೆಲ್ಲ ಸಂಹರಿಸಿ ದೇವತೆಗಳ ದೀಪ್ತಸಂಪತ್ತನ್ನು ಪಡೆದನು.

ತದ್ಧನುಸ್ತೌ ಚ ತೂಣೀರೌ ಶರಂ ಖಡ್ಗಂ ಚ ಮಾನದ ।
ಜಯಾಯ ಪ್ರತಿಗೃಹ್ಣೀಷ್ವ ವಜ್ರಂ ವಜ್ರಧರೋ ಯಥಾ ॥೩೬॥

ಆ ಬಿಲ್ಲನ್ನು ಆ ಎರಡು ಬತ್ತಳಿಕೆಗಳನ್ನು ಬಾಣವನ್ನು ಖಡ್ಗವನ್ನೂ ಕೂಡ ಮಾನದ! ಅಸುರ ಜಯಕ್ಕಾಗಿ ಸ್ವೀಕರಿಸು—ವಜ್ರಧಾರಿ ಇಂದ್ರನು ವಜ್ರಾಯುಧ ವನ್ನು ಪಡೆದಂತೆ.

ಏವಮುಕ್ತ್ವಾ ಮಹಾತೇಜಾಃ ಸಮಸ್ತಂ ತದ್ವರಾಯುಧಮ್ ।
ದತ್ತ್ವಾ ರಾಮಾಯ ಭಗವಾನಾನಗಸ್ತ್ಯಃ ಪುನರಬ್ರವೀತ್ ॥೩೭॥

ಹೀಗೆ ಹೇಳಿ ಮಹಾತೇಜಸ್ವಿಗಳಾದ ಅಗಸ್ತ್ಯರು ಆ ಎಲ್ಲ ಉತ್ತಮ ಆಯುಧ-ಗಳನ್ನು ಶ್ರೀರಾಮನಿಗೆ ಕೊಟ್ಟರು. ಭಗವಾನ್ ಅಗಸ್ತ್ಯರು ಮತ್ತೆ ಹೀಗೆ ಹೇಳಿದರು—

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹನ್ನೆರಡನೇ ಸರ್ಗ ಮುಗಿಯಿತು.

❖

ತ್ರಯೋದಶಃ ಸರ್ಗಃ

ಕಥಾಸಾರಾಂಶ– ಶ್ರೀರಾಮಚಂದ್ರ ಸೀತಾಲಕ್ಷ್ಮಣರೊಂದಿಗೆ ಅಗಸ್ತ್ಯಾಶ್ರಮಕ್ಕೆ ಬಂದದ್ದರಿಂದ ಸಂತಸಗೊಂಡ ಅಗಸ್ತ್ಯರು, ''ರಾಜಪುತ್ರಿ ಸೀತೆಗೆ ಈ ವನವಾಸದ ಕ್ಲೇಶ ಇದೇ ಮೊದಲು. ತುಂಬ ಬಳಲಿದ್ದಾಳೆ. ಅವಳು ವಿಶ್ರಮಿಸಲಿ. ಸಾಮಾನ್ಯಸ್ತ್ರೀಯರು ಗಂಡ ಕಷ್ಟದಲ್ಲಿರುವಾಗ ಬಿಟ್ಟು ಹೋಗುತ್ತಾರೆ. ಪತಿವ್ರತೆಯಾದ ಸೀತೆ ಅಂತಹವಳಲ್ಲ'' ಎಂದು ಸೀತೆಯನ್ನು ಅಭಿವಂದಿಸಿದರು.

ಶ್ರೀರಾಮ ಅಗಸ್ತ್ಯರಲ್ಲಿ ನೀರಿನ ಸೌಕರ್ಯವಿದ್ದು ಆಶ್ರಮ ನಿರ್ಮಿಸಿಕೊಂಡು ತಂಗಲು ಅನುಕೂಲವಾದ ತಾಣ ಎಲ್ಲಿದೆ? ಎಂದು ವಿಚಾರಿಸಿದ. ಅಗಸ್ತ್ಯರು ಹತ್ತಿರದ ಗೋದಾವರೀ ತೀರದ 'ಪಂಚವಟೀ' ಎಂಬ ಸ್ಥಲದ ಮಾಹಿತಿ ನೀಡಿದರು. ಅಗಸ್ತ್ಯರು ತಪೋಬಲದಿಂದ ರಾಮನ–ದುಷ್ಟಸಂಹಾರದ– ಇಂಗಿತವನ್ನರಿತು ಅನುಮತಿ ಕೇಳಿದ ಶ್ರೀರಾಮನ ಪ್ರಯಾಣವನ್ನು ಸಮ್ಮತಿಸಿದರು.

❖

ಪಂಚವಟೀಗಮನಮ್

ರಾಮ ಪ್ರೀತೋಽಸ್ಮಿ ಭದ್ರಂ ತೇ ಪರಿತುಷ್ಟೋಽಸ್ಮಿ ಲಕ್ಷ್ಮಣ ।
ಅಭಿವಾದಯಿತುಂ ಯನ್ಮಾಂ ಸಂಪ್ರಾಪ್ತೌ ಸಹ ಸೀತಯಾ ॥೧॥

ಶ್ರೀರಾಮ! ಪ್ರೀತನಾಗಿದ್ದೇನೆ. ಲಕ್ಷ್ಮಣ! ಸಂತಸಗೊಂಡಿದ್ದೇನೆ. ಏಕೆಂದರೆ ನೀವಿಬ್ಬರೂ ಸೀತೆಯೊಂದಿಗೆ ಅಭಿವಾದನ ಮಾಡಲು ಇಲ್ಲಿಯವರೆಗೆ ಬಂದಿರುವಿರಿ!

ಅಧ್ವಶ್ರಮೇಣ ವಾಂ ಖೇದೋ ಬಾಧತೇ ಪ್ರಚುರಶ್ರಮಃ ।
ವ್ಯಕ್ತಮುತ್ಕಂಠತೇ ಚಾಪಿ ಮೈಥಿಲೀ ಜನಕಾತ್ಮಜಾ ॥೨॥

ಮಾರ್ಗಾಯಾಸದಿಂದ ತುಂಬ ಶ್ರಮವಾಗಿ ಬಳಲಿದ್ದೀರಿ. ಮಿಥಿಲೆಯ ಹೆಣ್ಣಾದ ಜಾನಕಿಯೂ ವಿಶ್ರಾಂತಿಯನ್ನು ಪಡೆಯಲು ಉತ್ಕಂಠಿತಳಾಗಿದ್ದಾಳೆ.

ಏಷಾ ಹಿ ಸುಕುಮಾರೀ ಚ ದುಃಖೈಶ್ಚ ನ ವಿಮಾನಿತಾ ।
ಪ್ರಾಜ್ಯದೋಷಂ ವನಂ ಪ್ರಾಪ್ತಾ ಭರ್ತೃಸ್ನೇಹಪ್ರಚೋದಿತಾ ॥೩॥

'ಖೇದೈಶ್ಚ' – ಪಾಠಾಂತರ.

ಈ ಸೀತೆ ಸುಕುಮಾರೀ, ಇಂಥ ದುಃಖಗಳಿಂದ ಈ ಮುಂಚೆ ಪೀಡಿತಳಾದವಳಲ್ಲ. ಪತಿಸ್ನೇಹದ ಪ್ರಚೋದನೆಯಿಂದ ತುಂಬ ಕ್ಲೇಶದ ಕಾಡಿಗೆ ಬಂದಿಹಳು.

ಯಥೈಷಾ ರಮತೇ ರಾಮ ಇಹ ಸೀತಾ ತಥಾ ಕುರು ।
ದುಷ್ಕರಂ ಕೃತವತ್ಯೇಷಾ ವನೇ ತ್ವಾಮನುಗಚ್ಛತೀ ॥೪॥

ಈ ಸೀತೆ ಹೇಗೆ ಸುಖಪಡುವಳೋ ಹಾಗೆ ನೋಡಿಕೋ. ನಿನ್ನನ್ನು ಅನುಸರಿಸಿ-ಕೊಂಡು ಬಂದು ದುಷ್ಕರ ಸಾಹಸಕ್ಕೆ ಒಳಗಾಗಿದ್ದಾಳೆ.

ಏಷಾ ಹಿ ಪ್ರಕೃತಿಃ ಸ್ತ್ರೀಣಾಮಾಸೃಷ್ಟೇ ರಘುನಂದನ ।
ಸಮಸ್ಥಮನುರಂಜಂತಿ ವಿಷಮಸ್ಥಂ ತ್ಯಜಂತಿ ಚ ॥೫॥

ರಘುನಂದನ! ಸೃಷ್ಟಿಯಾದಂದಿನಿಂದ ಇಂದಿನವರೆಗೂ ಹೆಣ್ಣಿನ ಸ್ವಭಾವ ಹೀಗೆ–ಗಂಡ ಸುಖಿ ಸಂಪನ್ನನಾಗಿದ್ದರೆ ಅನುರಕ್ತರಾಗುತ್ತಾರೆ. ಅದೇ ದುಃಖ ವಿಪನ್ನನಾಗಿದ್ದರೆ ಅಂತಹವನನ್ನು ಬಿಟ್ಟೇ ಬಿಡುತ್ತಾರೆ!

ಶತಹ್ರದಾನಾಂ ಲೋಲತ್ವಂ ಶಸ್ತ್ರಾಣಾಂ ತೀಕ್ಷ್ಣತಾಂ ತಥಾ ।
ಗರುಡಾನಿಲಯೋಃ ಸೈಫ್ರ್ಯಮನುಗಚ್ಛಂತಿ ಯೋಷಿತಃ ॥೬॥

ಒಂದೆಡೆ ಸ್ಥಿರವಾಗಿರದ ಮಿಂಚಿನ ಚಂಚಲತೆ, ಬಹುಕಾಲದ ಸ್ನೇಹವನ್ನೂ ಕಡಿದುಕೊಳ್ಳುವುದರಲ್ಲಿ ಶಸ್ತ್ರ ತೀಕ್ಷ್ಣತೆ, ನಿಂದಿತಕಾರ್ಯದಲ್ಲಿ ಪ್ರವೃತ್ತಿ ಯಾಗುವುದರಲ್ಲಿ ಗರುಡ ಹಾಗು ಗಾಳಿಯ ವೇಗವನ್ನು ಹೆಂಗಸರು ಹೊಂದಿರುತ್ತಾರೆ!

ಇಯಂ ತು ಭವತೋ ಭಾರ್ಯಾ ದೋಷೈರೇತೈರ್ವಿವರ್ಜಿತಾ ।
ಶ್ಲಾಘ್ಯಾ ಚ ವ್ಯಪದೇಶ್ಯಾ ಚ ಯಥಾ ದೇವೀ ಹ್ಯರುಂಧತೀ ॥೭॥

ಆದರೆ ನಿನ್ನ ಹೆಂಡತಿಯಾದ ಈ ಸೀತೆ ಎಲ್ಲ ದೋಷಗಳಿಂದ ರಹಿತಳು. ಪ್ರಶಂಸೆಗೆ ಅರ್ಹಳು. ದೇವಿಯರಲ್ಲಿ ಅರುಂಧತಿಯಂತೆ ಪತಿವ್ರತೆಯರಲ್ಲಿ ಅಗ್ರಗಣ್ಯಳು.

ಅಲಂಕೃತೋಽಯಂ ದೇಶಶ್ಚ ಯತ್ರ ಸೌಮಿತ್ರಿಣಾ ಸಹ ।
ವೈದೇಹ್ಯಾ ಚಾನಯಾ ರಾಮ ವತ್ಸ್ಯಸಿ ತ್ವಮರಿಂದಮ ॥೮॥

ಶತ್ರುದಮನ ಶ್ರೀರಾಮ! ಯಾವ ಆಶ್ರಮಪ್ರದೇಶದಲ್ಲಿ ಸುಮಿತ್ರಾನಂದನ ಲಕ್ಷ್ಮಣನೊಂದಿಗೆ, ಇಂಥ ಸೀತೆಯೊಂದಿಗೆ ನೀನು ವಾಸ ಮಾಡಿರುವೆಯೋ ಈ ಪ್ರದೇಶ ನಿಮ್ಮಿಂದ ತುಂಬ ಅಲಂಕಾರಗೊಂಡಿದೆ.

ಏವಮುಕ್ತಃ ಸ ಮುನಿನಾ ರಾಘವಃ ಸಂಯತಾಂಜಲಿಃ ।
ಉವಾಚ ಪ್ರಶ್ರಿತಂ ವಾಕ್ಯಮೃಷಿಂ ದೀಪ್ತಮಿವಾನಲಮ್ ॥೯॥

ಮುನಿಗಳು ಹೀಗೆ ಹೇಳಿದಾಗ ಶ್ರೀರಾಮ ವಿನೀತನಾಗಿ ಕೈಮುಗಿದು ಅಗ್ನಿಯಂತೆ ತೇಜಸ್ವಿಗಳಾದ ಅಗಸ್ತ್ಯರನ್ನು ಕುರಿತು ಹೀಗೆ ನುಡಿದ—

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಯಸ್ಯ ಮೇ ಮುನಿಪುಂಗವಃ ।
ಗುಣೈಃ ಸಭ್ರಾತೃಭಾರ್ಯಸ್ಯ ವರದಃ ಪರಿತುಷ್ಯತಿ ॥೧೦॥

ನಾನು ಧನ್ಯ! ಅನುಗೃಹೀತನಾಗಿದ್ದೇನೆ. ವರಪ್ರದರಾದ ಮುನಿಶ್ರೇಷ್ಠರು ಸೀತಾ–ಲಕ್ಷ್ಮಣರೊಂದಿಗೆ ಕೂಡಿದ ನನ್ನ ಗುಣಗಳಿಂದ ಸಂತೋಷಗೊಂಡರಲ್ಲ!

ಕಿಂ ತು ವ್ಯಾದಿಶ ಮೇ ದೇಶಂ ಸೋದಕಂ ಬಹುಕಾನನಮ್ ।
ಯತ್ರಾಶ್ರಮಪದಂ ಕೃತ್ವಾ ವಸೇಯಂ ನಿರತಃ ಸುಖಮ್ ॥೧೧॥

ಆದರೆ ನೀರಿನ ಸೌಕರ್ಯವಿರುವ ಆಶ್ರಮ ನಿರ್ಮಿಸಿಕೊಂಡು ಸುಖವಾಗಿ ವಾಸಿಸಲು ಯೋಗ್ಯವಾದ ದಟ್ಟಕಾಡಿನ ಪ್ರದೇಶವೊಂದನ್ನು ತಿಳಿಸಿರಿ.

ತತೋಽಬ್ರವೀನ್ಮುನಿಶ್ರೇಷ್ಠಃ ಶ್ರುತ್ವಾ ರಾಮಸ್ಯ ತದ್ವಚಃ ।
ಧ್ಯಾತ್ವಾ ಮುಹೂರ್ತಂ ಧರ್ಮಾತ್ಮಾ ಧೀರೋ ಧೀರತರಂ ವಚಃ॥೧೨॥

'ರಾಮಸ್ಯ ಭಾಷಿತಮ್' 'ತತೋವಾಚ ವಚಃ ಶುಭಮ್' –ಪಾಠಾಂತರ.

ಧೀರಮಹಾತ್ಮ ಮುನಿಶ್ರೇಷ್ಠರು ರಾಮನ ಮಾತು ಕೇಳಿ ಮುಹೂರ್ತಕಾಲ ಚಿಂತಿಸಿ ಧೀಮಂತಿಕೆಯ ಮಾತೊಂದನ್ನು ಹೇಳಿದರು.

ಇತೋ ದ್ವಿಯೋಜನೇ ತಾತ ಬಹುಮೂಲಫಲೋದಕಃ ।
ದೇಶೋ ಬಹುಮೃಗಃ ಶ್ರೀಮಾನ್ ಪಂಚವಟ್ಯಭಿವಿಶ್ರುತಃ ॥೧೩॥

ಅಪ್ಪಾ! ಇಲ್ಲಿಂದ ಎರಡು ಯೋಜನದೂರದಲ್ಲಿ ಪಂಚವಟೀ ಎಂದು ಪ್ರಸಿದ್ಧವಾದ ಪ್ರದೇಶವಿದೆ. ಅಲ್ಲಿ ಮೂಲ, ಫಲ, ಉದಕ ಎಲ್ಲವೂ ಸಮೃದ್ಧವಾಗಿದೆ. ತುಂಬ ಮೃಗಗಳೂ ಇವೆ.

ತತ್ರ ಗತ್ವಾಶ್ರಮಪದಂ ಕೃತ್ವಾ ಸೌಮಿತ್ರಿಣಾ ಸಹ ।
ರಂಸ್ಯಸೇ ತ್ವಂ ಪಿತುರ್ವಾಕ್ಯಂ ಯಥೋಕ್ತಮನುಪಾಲಯನ್ ॥೧೪॥

'ರಮಸ್ವ' – ಪಾಠಾಂತರ.

ಅಲ್ಲಿಗೆ ಹೋಗಿ ನೀನು ಲಕ್ಷ್ಮಣನೊಂದಿಗೆ ಆಶ್ರಮವನ್ನು ಕಟ್ಟಿಕೊಂಡು ಪಿತೃವಾಕ್ಯ ಪರಿಪಾಲನೆ ಮಾಡುತ್ತ ಖುಷಿಯಾಗಿರುವಿ!

ಕಾಲೋಽಯಂ ಗತಭೂಯಿಷ್ಠೋ ಯಃ ಕಾಲಸ್ತವ ರಾಘವ ।
ಸಮಯೋ ಯೋ ನರೇಂದ್ರೇಣ ಕೃತೋ ದಶರಥೇನ ತೇ ॥೧೫॥

ದಶರಥ ಮಹಾರಾಜನಿಂದ ನಿಗದಿತವಾದ ನಿನ್ನ ವನವಾಸದ ಸಮಯವು ಈಗಾಗಲೆ ತುಂಬ ಕಳೆದುಹೋಗಿದೆ.

ವಿ.ಸೂ.: ಇಲ್ಲಿಂದ ಎರಡುವರೆ ಶ್ಲೋಕಗಳು ಕೆಲವು ಪುಸ್ತಕಗಳಲ್ಲಿಲ್ಲ.

ತೀರ್ಣಪ್ರತಿಜ್ಞಃ ಕಾಕುತ್ಸ್ಥ ಸುಖಂ ರಾಜ್ಯೇ ನಿವತ್ಸ್ಯಸಿ ।
ಧನ್ಯಸ್ತೇ ಜನಕೋ ರಾಮ ಸ ರಾಜಾ ರಘುನಂದನ
ಯಸ್ತ್ವಯಾ ಜ್ಯೇಷ್ಠಪುತ್ರೇಣ ಯಯಾತಿರಿವ ತಾರಿತಃ ॥೧೬॥

ಕಾಕುತ್ಸ್ಥ! ಪ್ರತಿಜ್ಞೆ ಪೂರೈಸಿದವನಾಗಿ ರಾಜ್ಯಕ್ಕೆ ಹಿಂತಿರುಗಿ ಸುಖವಾಗಿ ವಾಸಮಾಡುವಿ. ರಘುನಂದನ! ನಿನ್ನ ತಂದೆ ರಾಜಾ ದಶರಥನು ಧನ್ಯ. ಜ್ಯೇಷ್ಠಪುತ್ರನಿಂದ ಯಯಾತಿಯಂತೆ ನಿನ್ನಿಂದ ನಿನ್ನ ತಂದೆ ಸತ್ಯವಚನದಿಂದ ಉದ್ಧೃತರಾದರು.

ವಿದಿತೋ ಹ್ಯೇಷ ವೃತ್ತಾಂತೋ ಮಮ ಸರ್ವಸ್ತವಾನಘ ।
ತಪಸಶ್ಚ ಪ್ರಭಾವೇಣ ಸ್ನೇಹಾದ್ದಶರಥಸ್ಯ ಚ ॥೧೭॥

ತಪಸಿನ ಪ್ರಭಾವ ಹಾಗು ನಿನ್ನ ದಶರಥನ ಗಾಢ ಸ್ನೇಹಗಳಿಂದ ನಿನ್ನ ವೃತ್ತಾಂತವೆಲ್ಲ ನನಗೆ ಮೊದಲೇ ತಿಳಿದಿತ್ತು!

ಹೃದಯಸ್ಥಶ್ಚ ತೇ ಛಂದೋ ವಿಜ್ಞಾತಸ್ತಪಸಾ ಮಯಾ ।
ಇಹ ವಾಸಂ ಪ್ರತಿಜ್ಞಾಯ ಮಯಾ ಸಹ ತಪೋವನೇ ।
ಅತಶ್ಚ ತ್ವಾಮಹಂ ಬ್ರೂಮಿ ಗಚ್ಛ ಪಂಚವಟೀಮಿತಿ ॥೧೮॥

ಹೃದಯಸ್ಥಂ...ವಿಜ್ಞಾತಂ–ಪಾಠಾಂತರ.

ನಾನು ತಪೋಬಲದಿಂದ ನಿನ್ನ ಮನದ ಖರದೂಷಣಾದಿ ಸಂಹಾರದ ಇಂಗಿತವನ್ನು ಬಲ್ಲೆ. ಆದ್ದರಿಂದಲೆ ಇಲ್ಲಿ ವಾಸ ಮಾಡು ಎಂದು ಹೇಳಿಯೇ ಪಂಚವಟೀ ಪ್ರದೇಶಕ್ಕೆ ಹೋಗಿ ನೆಲೆಸು ಎಂದು ಹೇಳುತ್ತಿರುವೆ.

ಸ ಹಿ ರಮ್ಯೋ ವನೋದ್ದೇಶೋ ಮೈಥಿಲೀ ತತ್ರ ರಂಸ್ಯತೇ ।
ಸ ದೇಶಃ ಶ್ಲಾಘನೀಯಶ್ಚ ನಾತಿದೂರೇ ಚ ರಾಘವ ॥೧೯॥

ಆ ಪಂಚವಟೀ ವನಪ್ರದೇಶವೂ ರಮ್ಯವಾಗಿದೆ. ಮೈಥಿಲೀ ಅಲ್ಲಿ ಖುಷಿಪಡುವಳು. ಶ್ಲಾಘ್ಯವಾದ ಆ ತಾಣ ಇಲ್ಲಿಗೆ ಹತ್ತಿರದಲ್ಲಿಯೇ ಇದೆ.

ಗೋದಾವರ್ಯಾಃ ಸಮೀಪೇ ಚ ಮೈಥಿಲೀ ತತ್ರ ರಂಸ್ಯತೇ ।
ಪ್ರಾಜ್ಯಮೂಲಫಲಶ್ಚೈವ ನಾನಾದ್ವಿಜಗಣಾಯುತಃ
ವಿವಿಕ್ತಶ್ಚ ಮಹಾಬಾಹೋ ಪುಣ್ಯೋ ರಮ್ಯಸ್ತಥೈವ ಚ ॥೨೦॥

ಗೋದಾವರಿಯ ಸಮೀಪದ ದೇಶವದು. ಮೈಥಿಲೀ ಅಲ್ಲಿ ಸುಖಪಡುವಳು. ಮೂಲ, ಫಲಗಳಿಂದ ತುಂಬಿರುವ ದೇಶ. ಬಗೆಬಗೆಯ ಹಕ್ಕಿಗಳ ಗುಂಪೇ ತುಂಬಿದೆ. ಮಹಾಬಾಹುವೇ! ಏಕಾಂತ ರಮ್ಯವಾದ ಪುಣ್ಯಸ್ಥಲ ಅದು.

ಭವಾನಪಿ ಸದಾರಶ್ಚ ಶಕ್ತಶ್ಚ ಪರಿರಕ್ಷಣೇ
ಅಪಿ ಚಾತ್ರ ವಸನ್ ರಾಮ ತಾಪಸಾನ್ ಪಾಲಯಿಷ್ಯಸಿ ॥೨೧॥

ಸಂರಕ್ಷಣೆಯ ವಿಷಯದಲ್ಲಿ ಸಮರ್ಥನಾದ ನೀನು ಭಾರ್ಯೆಯೊಂದಿಗೆ ಅಲ್ಲಿ ವಾಸ ಮಾಡಿಕೊಂಡು ತಾಪಸರನ್ನು ರಕ್ಷಣೆ ಮಾಡುವಿ.

ಏತದಾಲಕ್ಷ್ಯತೇ ವೀರ ಮಧೂಕಾನಾಂ ಮಹದ್ವನಮ್
ಉತ್ತರೇಣಾಸ್ಯ ಗಂತವ್ಯಂ ನ್ಯಗ್ರೋಧಮಭಿಗಚ್ಛತಾ ॥೨೨॥

ಮಹಾವನಮ್–ಪಾಠಾಂತರ.

(ಹಿಪ್ಪೆ) ಮಧೂಕ ವೃಕ್ಷಗಳ ಮಹಾವನ ಕಾಣುತ್ತಿದೆಯಲ್ಲ. ಅದಕ್ಕೆ ಉತ್ತರದಿಕ್ಕಿನ ದಾರಿಯಿಂದ ಹೋದರೆ ಆಲದ ಮರವೊಂದು ಸಿಗುವುದು.

ತತಃ ಸ್ಥಲಮುಪಾರುಹ್ಯ ಪರ್ವತಸ್ಯಾವಿದೂರತಃ ।
ಖ್ಯಾತಃ ಪಂಚವಟೀತ್ಯೇವ ನಿತ್ಯಪುಷ್ಪಿತಕಾನನಃ ॥೨೩॥

ಅಲ್ಲಿಂದ ಮುಂದೆ–ಆಲದ ಮರದಿಂದ ಮುಂದೆ ಸಾಗಿದರೆ ಪರ್ವತವೊಂದು ಕಾಣಿಸುತ್ತದೆ. ಅಲ್ಲಿಂದ ಹತ್ತಿರದಲ್ಲಿ ನಿತ್ಯ ಹೂಬಿಡುವ ಮರಗಳಿಂದ ಕೂಡಿದ ಪಂಚವಟೀ ಎಂಬ ಪ್ರಸಿದ್ಧ ಪ್ರದೇಶವಿದೆ.

ಅಗಸ್ತ್ಯೇನೈವಮುಕ್ತಸ್ತು ರಾಮಃ ಸೌಮಿತ್ರಿಣಾ ಸಹ ।
ಸತ್ಕೃತ್ಯಾಮಂತ್ರಯಾಮಾಸ ತಮೃಷಿಂ ಸತ್ಯವಾದಿನಮ್ ॥೨೪॥

ಅಗಸ್ತ್ಯರು ಹೀಗೆ ಹೇಳಿದ ಬಳಿಕ ರಾಮನು ಲಕ್ಷ್ಮಣನೊಂದಿಗೆ ಅವರನ್ನು ಸತ್ಕರಿಸಿ ಸತ್ಯವಚನರಾದ ಆ ಋಷಿಗಳಲ್ಲಿ ಅನುಮತಿ ಪಡೆದನು.

ತೌ ತು ತೇನಾಭ್ಯನುಜ್ಞಾತೌ ಕೃತಪಾದಾಭಿವಂದನೌ
ತದಾಶ್ರಮಾತ್ ಪಂಚವಟೀಂ ಜಗ್ಮತುಃ ಸಹ ಸೀತಯಾ ॥೨೫॥

ಆ ರಾಮಲಕ್ಷ್ಮಣರು ಋಷಿಗಳಿಂದ ಅನುಮತಿ ಪಡೆದವರಾಗಿ ಅವರ ಪಾದಾಭಿವಂದನೆಯನ್ನು ಮಾಡಿ ಸೀತೆಯೊಂದಿಗೆ ಆ ಆಶ್ರಮದಿಂದ ಪಂಚವಟಿಯತ್ತ ತೆರಳಿದರು.

ಗೃಹೀತಚಾಪೌ ತು ನರಾಧಿಪಾತ್ಮಜೌ
ವಿಷಕ್ತತೂಣೌ ಸಮರೇಷ್ವಕಾತರೌ ।
ಯಥೋಪದಿಷ್ಟೇನ ಪಥಾ ಮಹರ್ಷಿಣಾ
ಪ್ರಜಗ್ಮತುಃ ಪಂಚವಟೀಂ ಸಮಾಹಿತೌ ॥೨೬॥

ಯುದ್ಧಮಾಡುವ ತವಕವಿಲ್ಲದ ರಾಜಪುತ್ರರಾದ ಆ ರಾಮಲಕ್ಷ್ಮಣರು ಬಿಲ್ಲು ಬತ್ತಳಿಕೆಗಳನ್ನು ಹಿಡಿದುಕೊಂಡು ಮಹರ್ಷಿ ಅಗಸ್ತ್ಯರು ತೋರಿದ ದಾರಿಯಿಂದ ಸಮಾಧಾನಚಿತ್ತರಾಗಿ ಪಂಚವಟಿಯೆಡೆಗೆ ಸಾಗಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹದಿಮೂರನೇ ಸರ್ಗ ಮುಗಿಯಿತು.

❖

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ—

ಪ್ರೀತಿಂ ವಿಧಿತ್ಸುರಗಮದ್ ಭವನಂ ನಿಜಸ್ಯ
ಕುಂಭೋದ್ಭವಸ್ಯ ಪರಮಾದರತೋऽಮುನಾ ಚ ।
ಸಂಪೂಜಿತೋ ಧನುರನೇನ ಗೃಹೀತ-
ಮಿಂದ್ರಾಚ್ಚಾರ್ಙ್ಗಂ ತದಾದಿಪುರುಷೋ ನಿಜಮಾಜಹಾರ ॥

ಆತ್ಮಾರ್ಥಮೇವ ಹಿ ಪುರಾ ಹರಿಣಾ ಪ್ರದತ್ತ-
ಮಿಂದ್ರೇ ತದಿಂದ್ರ ಉತ ರಾಮಕರಾರ್ಥಮೇವ ।
ಪ್ರಾದಾದಗಸ್ತ್ಯಮುನಯೇ ತದವಾಪ್ಯ ರಾಮೋ
ರಕ್ಷನ್ನೃಷೀನವಸದೇವ ಸ ದಂಡಕೇಷು ॥ (ಶ.೨೨,೨೩)

ಅಗಸ್ತ್ಯಸ್ಯ ಸ್ವಭಕ್ತಸ್ಯ ಪ್ರೀತ್ಯೈ ಪ್ರಪಾಶ್ರಮಂ ಪ್ರಭುಃ
ಸದಾರಸೋದರಂ ದೇವಂ ಸಂಪೂಜ್ಯಾऽಸಾವಭಾಷತ ।
ಕೋದಂಡಂ ಕಾಲದಂಡಾಭಂ ತ್ವದ್ದೋರ್ದಂಡೈಕಮಂಡನಮ್ ।
ವೈಷ್ಣವಂ ವಿಷ್ಣುಮೂರ್ತೇ ತ್ವಂ ಗೃಹಾಣೇಂದ್ರೇಣ ಯಾಪಿತಮ್ ॥
ಸಂಗ್ರಹ-೧ ಅರಣ್ಯಕಾಂಡ-೨-೪೪.೪೫

ಪರಶುರಾಮದೇವರು ರಾಮನಿಗೆ ಕೊಟ್ಟ ವೈಷ್ಣವ ಶಾರ್ಙ್ಗ ಧನುಸ್ಸನ್ನು ರಾಮ ವರುಣನಿಗೆ ಕೊಟ್ಟ. ವರುಣ ಶ್ರೀಹರಿಗೆ ಕೊಟ್ಟ. ಶ್ರೀಹರಿ ಪುನಃ ತನ್ನ ರಾಮ ರೂಪಕ್ಕೆ ಕೊಡಲೋಸುಗವೇ ಇಂದ್ರನಿಗೆ ಕೊಟ್ಟ. ಇಂದ್ರ ರಾಮನ ಕೈಗೆ ಅರ್ಪಿಸಲೆಂದೇ ಅಗಸ್ತ್ಯರಿಗೆ ಕೊಟ್ಟ. ಅದನ್ನೇ ಭಗವಂತನ ಧನುಸ್ಸನ್ನೇ ಭಗವಂತನ ಅವತಾರವಾದ ಶ್ರೀರಾಮನಿಗೆ ಅಗಸ್ತ್ಯರು ಅರ್ಪಿಸಿದರು.

ಮಹಾಭಾರತತಾತ್ಪರ್ಯ ನಿರ್ಣಯದ ವ್ಯಾಖ್ಯಾನ–ಪ್ರಮಾಣ ಸಂಗ್ರಹ ಕಾರರು ಮಹಾಭಾರತ ಅನುಶಾಸನ ಪರ್ವದ ಶ್ಲೋಕಗಳನ್ನು ಉದಾಹರಿಸಿದ್ದಾರೆ.

ಅಸ್ತ್ರಾಗಮಂ ತೇ ವಕ್ಷ್ಯಾಮಿ ಶೃಣು ಧರ್ಮಂ ಶುಚಿಸ್ಮಿತೇ ।
ಯುಗಾಂತರೇ ಮಹಾದೇವಿ ಕಣ್ವೋನಾಮ ಮಹಾಮುನಿಃ ।
ಮನಃ ಸಮಾಧಾಯ ತಥಾ ತಪಃಕರ್ತುಂ ಪ್ರಚಕ್ರಮೇ ।
ವಲ್ಮೀಕಂ ಪುನರುದ್ಭೂತಂ ತಸ್ಯೈವ ಶಿರಸಿ ಪ್ರಿಯೇ ।
ವೇಣುರ್ವಲ್ಮೀಕ ಸಂಯೋಗಾತ್ ಮೂರ್ಧ್ನಿ ತಸ್ಯ ಬಭೂವ ಹ ।
ಧಾತಾ ತಸ್ಮೈವರಂ ದಾತುಂ ಜಗಾಮ ತಪಸಾರ್ಚಿತಃ ।
ದತ್ವಾ ತಸ್ಮೈವರಂ ದೇವೋ ವೇಣುಂ ದೃಷ್ಟ್ವಾऽಪ್ಯಚಿಂತಯತ್ ।
ಚಿಂತಯಿತ್ವಾ ತಮಾದಾಯ ಕಾರ್ಮುಕಾರ್ಥೇ ತ್ವಯೋಜಯತ್ ।
ವಿಷ್ಣೋರ್ಮಮ ಚ ಸಾಮರ್ಥ್ಯಂ ಜ್ಞಾತುಂ ಲೋಕಪಿತಾಮಹಃ ।
ಧನುಷೀ ದ್ವೇ ತದಾ ಪ್ರಾದಾತ್ ವಿಷ್ಣವೇ ಮಮ ಚೈವ ಹಿ ।

ಶಿವ ಪಾರ್ವತಿಗೆ ಹೇಳುತ್ತಾನೆ— 'ಹಿಂದೆ ಕಣ್ವಮುನಿ ತಪಸ್ಸು ಮಾಡಿದಾಗ ಅವನ ಮೈಮೇಲೆ ಹುತ್ತ ಬೆಳೆಯಿತು. ಹುತ್ತದ ತುದಿಯಲ್ಲಿ ಒಂದು ಬಿದಿರು ಬೆಳೆಯಿತು. ಆ ಬಿದಿರಿನಿಂದ ಬ್ರಹ್ಮ ಪಿನಾಕ ಶಾರ್ಙ ಗಾಂಡೀವವೆಂದು ಮೂರು ಧನುಸ್ಸುಗಳನ್ನು ಮಾಡಿಸಿದ. ಹರಿಹರನ ಸಾಮರ್ಥ್ಯ ಪರೀಕ್ಷೆಗೆ ಈ ಪಿನಾಕ ಶಾರ್ಙಗಳನ್ನು ಅವರಿಗೆ ನೀಡಿದ.'

❖

ಚತುರ್ದಶಃ ಸರ್ಗಃ

ಕಥಾಸಾರಾಂಶ– ಶ್ರೀರಾಮಚಂದ್ರ ಪಂಚವಟಿಗೆ ಹೋಗುವ ದಾರಿಯಲ್ಲಿ ಜಟಾಯುಪಕ್ಷಿಯ ಭೇಟಿಯಾಗುತ್ತದೆ. 'ನಾನು ನಿನ್ನ ದಶರಥನ ಮಿತ್ರ' ಎಂದು ತನ್ನನ್ನು ಜಟಾಯು ಪರಿಚಯಿಸಿಕೊಳ್ಳುತ್ತದೆ. ಅದರಿಂದ ಶ್ರೀರಾಮನಿಗೆ ಜಟಾಯು–ವಿನ ಮೇಲೆ ಗೌರವ ಹುಟ್ಟುತ್ತದೆ. ಆತ್ಮೀಯತೆ ಉಂಟಾಗುತ್ತದೆ.

ಶ್ರೀರಾಮ ಜಟಾಯುವಿನ ಕುಲ ಹಾಗೂ ಹೆಸರಿನ ಬಗ್ಗೆ ವಿಚಾರಿಸಿದಾಗ ಕರ್ದಮರಿಂದ ಪ್ರಾರಂಭಿಸಿ ವಿವರವಾಗಿ ವಂಶಾವಳಿಯನ್ನೆಲ್ಲ ನಿರೂಪಿಸಿ 'ವಿನತೆಯ ಮಗನಾದ ಅರುಣನಿಂದ ಜನ್ಮಪಡೆದವನು ನಾನು. ನನ್ನ ಅಣ್ಣ ಸಂಪಾತಿ. ನನ್ನ ಹೆಸರು ಜಟಾಯು' ಎಂದು ಪರಿಚಯಿಸಿಕೊಳ್ಳುತ್ತದೆ. ಮೃಗ ರಾಕ್ಷಸರಿಂದ ಆಶ್ರಿತವಾದ ಭಯಂಕರವಾದ ಈ ಕಾನನದಲ್ಲಿ ನಾನು ನಿಮಗೆ ಸಹಾಯಕ– ನಾಗಿರುತ್ತೇನೆ. ನೀವು ಕಾಡಿನಲ್ಲಿ ಹೊಕ್ಕಾಗ ಸೀತೆಯ ರಕ್ಷಣೆಯ ಹೊಣೆ ನನಗಿರಲಿ– ಎಂದೂ ಹೇಳುತ್ತದೆ! ಶ್ರೀರಾಮ ಹಕ್ಕಿಯೊಂದಿಗೆ ಪಂಚವಟಿಗೆ ಹೊರಡುತ್ತಾನೆ.

❖

ಜಟಾಯುಸ್ಸಂಗಮಃ

ಅಥ ಪಂಚವಟೀಂ ಗಚ್ಛನ್ನಂತರಂ ರಘುನಂದನಃ ।
ಆಸಸಾದ ಮಹಾಕಾಯಂ ಗೃಧ್ರಂ ಭೀಮಪರಾಕ್ರಮಮ್ ॥೧॥

ಪಂಚವಟಿಗೆ ಹೋಗುವ ದಾರಿಯ ಮಧ್ಯದಲ್ಲಿ ರಘುನಂದನ ಭಯಂಕರ ಪರಾಕ್ರಮದ ಮಹಾಕಾಯದ ಹಕ್ಕಿಯೊಂದನ್ನು ಭೇಟಿಯಾದ.

ತಂ ದೃಷ್ಟ್ವಾ ತೌ ಮಹಾಭಾಗೌ ವಟಸ್ಥಂ ರಾಮಲಕ್ಷ್ಮಣೌ ।
ಮೇನಾತೇ ರಾಕ್ಷಸಂ ಪಕ್ಷಿಂ ಬ್ರುವಾಣೌ ಕೋ ಭವಾನಿತಿ ॥೨॥

ವನಸ್ಥಂ–ಪಾಠಾಂತರ.

ಭಾಗ್ಯವಂತರಾದ ರಾಮಲಕ್ಷ್ಮಣರು ಆಲದ ಮರದಲ್ಲಿದ್ದ ಹಕ್ಕಿಯನ್ನು ಕಂಡು ರಾಕ್ಷಸ ಎಂದು ಭಾವಿಸಿ 'ಯಾರು ನೀನು?' ಎಂದು ಕೇಳಿದರು.

ಸ ತೌ ಮಧುರಯಾ ವಾಚಾ ಸೌಮ್ಯಯಾ ಪ್ರೀಣಯನ್ನಿವ ।
ಉವಾಚ ವತ್ಸ ಮಾಂ ವಿದ್ಧಿ ವಯಸ್ಯಂ ಪಿತುರಾತ್ಮನಃ ॥೩॥

ಆ ಹಕ್ಕಿಯು ಮಧುರವೂ ಸೌಮ್ಯವೂ ಆದ ಮಾತಿನಿಂದ ಸಂತೋಷ

ಗೊಳಿಸುವಂತೆ ರಾಮಲಕ್ಷ್ಮಣರನ್ನು ಕುರಿತು 'ವತ್ಸ! ನಾನು ನಿಮ್ಮ ತಂದೆಯ ಮಿತ್ರನೆಂದು ತಿಳಿ' ಎಂದು ಹೇಳಿತು.

ಸ ತಂ ಪಿತೃಸಖಿಂ ಬುದ್ಧ್ವಾ ಪೂಜಯಮಾಸ ರಾಘವಃ ।
ಸ ತಸ್ಯ ಕುಲಮವ್ಯಗ್ರಮಥ ಪಪ್ರಚ್ಛ ನಾಮ ಚ ॥೪॥

ಪಿತೃಸಖಿಂ ಮತ್ವಾ – ಪಾಠಾಂತರ.

ಆ ರಾಘವನು ಆ ಹಕ್ಕಿಯು ತನ್ನ ತಂದೆಯ ಗೆಳೆಯನೆಂದು ತಿಳಿದು ಗೌರವಿಸಿದ. ಹಕ್ಕಿಯ ಕುಲನಾಮಗಳನ್ನು ವಿಚಾರಿಸಿದ.

ರಾಮಸ್ಯ ವಚನಂ ಶ್ರುತ್ವಾ ಸರ್ವಭೂತಸಮುದ್ಭವಮ್ ।
ಆಚಚಕ್ಷೇ ದ್ವಿಜಸ್ತಸ್ಮೈ ಕುಲಮಾತ್ಮಾನಮೇವ ಚ ॥೫॥

ರಾಮನ ಮಾತು ಕೇಳಿ ಅವನಿಗೆ ತನ್ನ ಕುಲ–ನಾಮಗಳನ್ನು ಹೇಳುತ್ತಾ ಎಲ್ಲ ಪ್ರಾಣಿಯ ಉತ್ಪತ್ತಿಕ್ರಮವನ್ನು ಹಕ್ಕಿ ಅರುಹಿತು.

ಪೂರ್ವಕಾಲೇ ಮಹಾಬಾಹೋ ಯೇ ಪ್ರಜಾಪತಯೋऽಭವನ್ ।
ತಾನ್ ಮೇ ನಿಗದತಃ ಸರ್ವಾನಾದಿತಃ ಶೃಣು ರಾಘವ ॥೬॥

ಮಹಾಬಾಹುವೆ! ಹಿಂದೆ ಆಗಿಹೋದ ಎಲ್ಲ ಪ್ರಜಾಪತಿಗಳನ್ನು ಆರಂಭದಿಂದ ಹೇಳುತ್ತೇನೆ. ಕೇಳು ರಾಘವ!

ಕರ್ದಮಃ ಪ್ರಥಮಸ್ತೇಷಾಂ ವಿಕ್ರೀತಸ್ತದನಂತರಃ ।
ಶೇಷಶ್ಚ ಸಂಶ್ರಯಶ್ಚೈವ ಬಹುಪುತ್ರಃ ಪ್ರತಾಪವಾನ್ ॥೭॥

ಆ ಪ್ರಜಾಪತಿಗಳಲ್ಲಿ ಮೊದಲನೆಯವರು ಕರ್ದಮರು. ಅನಂತರದವರು ವಿಕ್ರೀತ. ಬಳಿಕ ಶೇಷ, ಸಂಶ್ರಯ, ವೀರ್ಯವಂತನಾದ ಬಹುಪುತ್ರರು.

ಸ್ಥಾಣುರ್ಮರೀಚಿರತ್ರಿಶ್ಚ ಕ್ರತುಶ್ಚೈವ ಮಹಾಬಲಃ ।
ಪುಲಸ್ತ್ಯಶ್ಚಾಂಗಿರಾಶ್ಚೈವ ಪ್ರಚೇತಾಃ ಪುಲಹಸ್ತಥಾ ॥೮॥

ಸ್ಥಾಣು, ಮರೀಚಿ, ಅತ್ರಿ ಮಹಾಬಲರಾದ ಕ್ರತು, ಪುಲಸ್ತ್ಯ, ಅಂಗಿರಸ, ಪ್ರಚೇತಸ, ಪುಲಹರು.

ದಕ್ಷೋ ವಿವಸ್ವಾನಪರೋऽರಿಷ್ಟನೇಮಿಶ್ಚ ರಾಘವ ।
ಕಶ್ಯಪಶ್ಚ ಮಹಾತೇಜಾಸ್ತೇಷಾಮಾಸೀಚ್ಚ ಪಶ್ಚಿಮಃ ॥೯॥

ದಕ್ಷ ವಿವಸ್ವಾನ್ ಅರಿಷ್ಟನೇಮಿ, ಕಾಶ್ಯಪರು–ಕೊನೆಯವನು.

ಪ್ರಜಾಪತೇಸ್ತು ದಕ್ಷಸ್ಯ ಬಭೂವುರಿತಿ ವಿಶ್ರುತಮ್ ।
ಷಷ್ಟಿರ್ದುಹಿತರೋ ರಾಮ ಯಶಸ್ವಿನ್ಯೋ ಮಹಾಯಶಃ ॥೧೦॥

ಯಶಸ್ವಿ ರಾಮ! ದಕ್ಷಪ್ರಜಾಪತಿಗೆ ಅರವತ್ತು ಯಶಸ್ವಿನಿಯರಾದ ಕನ್ಯೆಯರು ಹುಟ್ಟಿದರು.

ಕಶ್ಯಪಃ ಪ್ರತಿಜಗ್ರಾಹ ತಾಸಾಮಷ್ಟೌ ಸುಮಧ್ಯಮಾಃ ।
ಅದಿತಿಂ ಚ ದಿತಿಂ ಚೈವ ದನುಮಪ್ಯಥ ಕಾಲಿಕಾಮ್
ತಾಮ್ರಾಂ ಕ್ರೋಧವಶಾಂ ಚೈವ ಮನುಂ ಚಾಪ್ಯನಲಾಮಪಿ ॥೧೧॥

ಕಾಶ್ಯಪರು ಅರವತ್ತು ಕನ್ಯೆಯರಲ್ಲಿ ಸುಂದರ ನಡುವಿನ ಎಂಟು ಕನ್ಯೆಯರನ್ನು ಪತ್ನಿಯರನ್ನಾಗಿ ಸ್ವೀಕರಿಸಿದರು; ಅದಿತಿ ದಿತಿ ದನು ಕಾಲಿಕಾ ತಾಮ್ರಾ ಕ್ರೋಧವಶಾ ಮನು ಅನಲಾ.

ವಿಶೇಷಾಂಶ : ಭಾಗವತದಲ್ಲಿ 'ಕಶ್ಯಪಾಯ ತ್ರಯೋದಶ' (ಭಾಗ.೬.೬-೨) ದಕ್ಷಪ್ರಜಾಪತಿಯು 'ಕಶ್ಯಪರಿಗೆ ಹದಿಮೂರು ಹೆಣ್ಣುಮಕ್ಕಳನ್ನು ಕೊಟ್ಟ' ಎಂದಿದೆ. ಇಲ್ಲಿ ಎಂಟುಜನ ಹೆಣ್ಣುಗಳನ್ನು ದಕ್ಷ ಕಾಶ್ಯಪರಿಗೆ ಕೊಟ್ಟು ವಿವಾಹ ಮಾಡಿದ ಎಂದು ಹೇಳಿರುವುದು ಮುಂದೆ ಪ್ರಸ್ತಾವ ಆಗುವ ಕಥೋಪಯೋಗಿಯಾಗಿ. ಆದ್ದರಿಂದ ವಿರೋಧವಿಲ್ಲ. (ವಾಲ್ಮೀಕಿ ರಾ.ರಾ.ಟೀ)

ತಾಸ್ತು ಕನ್ಯಾಸ್ತತಃ ಪ್ರೀತಃ ಕಶ್ಯಪಃ ಪುನರಬ್ರವೀತ್
ಪುತ್ರಾಂಸ್ತ್ರೈಲೋಕ್ಯಭರ್ತೄನ್ ವೈ ಜನಯಿಷ್ಯಥ ಮತ್ಸಮಾನ್ ॥೧೨॥

ಪ್ರೀತರಾದ ಕಾಶ್ಯಪರು ಅವರಿಗೆ ಹೇಳಿದರು— ಮೂರು ಲೋಕವನ್ನು ರಕ್ಷಣೆ ಮಾಡಬಲ್ಲಂಥ–ನನಗೆ ಸರಿಸಾಟಿಯಾಗುವಂಥ ಗಂಡುಮಕ್ಕಳಿಗೆ ಜನ್ಮ ಕೊಡಿರಿ.

ಅದಿತಿಸ್ತನ್ಮನಾ ರಾಮ ದಿತಿಶ್ಚ ದನುರೇವ ಚ ।
ಕಾಲಿಕಾ ಚ ಮಹಾಬಾಹೋ ಶೇಷಾಸ್ತ್ವಮನಸೋಽಭವನ್ ॥೧೩॥

ಮಹಾಬಾಹೋ! ಅದಿತಿ ದಿತಿ ಕಾಲಿಕಾ ಈ ಮೂವರು ಕಶ್ಯಪರ ಮಾತನ್ನು ಮನಸಾ ಸ್ವೀಕರಿಸಿದರು. ಉಳಿದವರು ಅವರ ಮಾತಿಗೆ ಮನ ಕೊಡಲಿಲ್ಲ.

ಅದಿತ್ಯಾಂ ಜಜ್ಞಿರೇ ದೇವಾಸ್ತ್ರಯಸ್ತ್ರಿಂಶದರಿಂದಮ ।
ಆದಿತ್ಯಾ ವಸವೋ ರುದ್ರಾ ಹ್ಯಶ್ವಿನೌ ಚ ಪರಂತಪ ॥೧೪॥

ಅರಿದಮನನೆ! ಅದಿತಿಯಲ್ಲಿ ಮೂವತ್ತಮೂರು ದೇವತೆಗಳು ಹುಟ್ಟಿದರು. ಶತ್ರುತಾಪನೆ! ಹನ್ನೆರಡು ಆದಿತ್ಯರು, ಎಂಟು ವಸುಗಳು, ಹನ್ನೊಂದು ರುದ್ರರು, ಇಬ್ಬರು ಅಶ್ವಿನೀಕುಮಾರರು.

ದಿತಿಸ್ತ್ವಜನಯತ್ ಪುತ್ರಾನ್ ದೈತ್ಯಾಂಸ್ತಾತ ಯಶಸ್ವಿನಃ ।
ತೇಷಾಮಿಯಂ ವಸುಮತೀ ಪುರಾಸೀತ್ ಸವನಾರ್ಣವಾ ॥೧೫॥

ದಿತಿಯು ಯಶಸ್ವಿಗಳಾದ ದೈತ್ಯರೆಂದೆ ಪ್ರಸಿದ್ಧರಾದ ಮಕ್ಕಳಿಗೆ ಜನ್ಮ ನೀಡಿದಳು. ಹಿಂದೆ ವನ ಸಾಗರಗಳಿಂದ ಕೂಡಿದ ಈ ಭೂಮಿ ಅವರ ವಶದಲ್ಲಿತ್ತು!

ದನುಸ್ತ್ವಜನಯತ್ ಪುತ್ರಮಶ್ವಗ್ರೀವಮರಿಂದಮ ।
ನರಕಂ ಕಾಲಕಂ ಚೈವ ಕಾಲಿಕಾಪಿ ವ್ಯಜಾಯತ ॥೧೬॥

ದನುವು 'ಅಶ್ವಗ್ರೀವ' ಎಂಬ ಸುತನಿಗೆ, ಕಾಲಕೆಯು 'ನರಕ, ಕಾಲಕ' ಎಂಬ ಇಬ್ಬರು ಮಕ್ಕಳಿಗೆ ಜನ್ಮ ನೀಡಿದರು.

ಕ್ರೌಂಚೀಂ ಭಾಸೀಂ ತಥಾ ಶ್ಯೇನೀಂ ಧೃತರಾಷ್ಟ್ರೀಂ ತಥಾ ಶುಕೀಮ್ ।
ತಾಮ್ರಾಪಿ ಸುಷುವೇ ಕನ್ಯಾಃ ಪಂಚೈತಾ ಲೋಕವಿಶ್ರುತಾಃ ॥೧೭॥

ತಾಮ್ರೆಯು ಕ್ರೌಚೀ, ಭಾಸೀ, ಶ್ಯೇನೀ, ಧೃತರಾಷ್ಟ್ರೀ, ಶುಕೀ ಎಂಬ ಲೋಕವಿಖ್ಯಾತರಾದ ಐವರು ಹೆಣ್ಣು ಮಕ್ಕಳನ್ನು ಪಡೆದಳು.

ಉಲೂಕಾನ್ ಜನಯತ್ ಕ್ರೌಂಚೀ ಭಾಸೀ ಭಾಸಾನ್ ವ್ಯಜಾಯತ ।
ಶ್ಯೇನೀ ಶ್ಯೇನಾಂಶ್ಚ ಗೃಧ್ರಾಂಶ್ಚ ವ್ಯಜಾಯತ ಸುತೇಜಸಃ ॥೧೮॥

ಕ್ರೌಂಚಿಯು ಗೂಬೆಗಳನ್ನೂ, ಭಾಸಿಯು ಭಾಸ ಎಂಬ ಹಕ್ಕಿಗಳನ್ನು ಶ್ಯೇನಿಯು ತೇಜಸ್ವಿಗಳಾದ ಶ್ಯೇನ ಹಾಗು ಗೃಧ್ರಗಳನ್ನು ಹಡೆದಳು.

ಧೃತರಾಷ್ಟ್ರೀ ತು ಹಂಸಾಶ್ಚ ಕಲಹಂಸಾಂಶ್ಚ ಸರ್ವಶಃ ॥೧೯॥

ಚಕ್ರವಾಕಾಂಶ್ಚ ಭದ್ರಂ ತೇ ವಿಜಜ್ಞೇ ಸಾಪಿ ಭಾಮಿನೀ ।
ಶುಕೀ ನತಾಂ ವಿಜಜ್ಞೇ ತು ನತಾಯಾ ವಿನತಾ ಸುತಾ ॥೨೦॥

ಧೃತರಾಷ್ಟ್ರಿಯು ಎಲ್ಲ ಹಂಸ, ಕಲಹಂಸಗಳನ್ನು ಹುಟ್ಟಿಸಿದಳು. ಶ್ರೀರಾಮ! ಮಂಗಳವಾಗಲಿ ಕೇಳು. ಅದೇ ಧೃತರಾಷ್ಟ್ರ ಭಾಮಿನಿಯು ಚಕ್ರವಾಕಗಳನ್ನೂ ಹಡೆದಳು.

ಶುಕಿಯು 'ನತಾ' ಎಂಬ ಕನ್ಯೆಗೂ, ನತಾಳು 'ವಿನತಾ' ಎಂಬ ಪುತ್ರಿಗೂ ಜನ್ಮ ನೀಡಿದಳು.

ದಶ ಕ್ರೋಧವಶಾ ರಾಮ ವಿಜಜ್ಞೇ ಹ್ಯಾತ್ಮಸಂಭವಾಃ ।
ಮೃಗೀಂ ಚ ಮೃಗಮಂದಾಂ ಚ ಹರೀಂ ಭದ್ರಮದಾಮಪಿ ॥೨೧॥

ಮಾತಂಗೀಮಪಿ ಶಾರ್ದೂಲೀಂ ಶ್ವೇತಾಂ ಚ ಸುರಭಿಂ ತಥಾ ।
ಸರ್ವಲಕ್ಷಣಸಂಪನ್ನಾಂ ಸುರಸಾಂ ಕದ್ರುಕಾಮಪಿ ॥೨೨॥

ರಾಮ! ಕ್ರೋಧವಶೆಯು ಮೃಗೀ, ಮೃಗಮಂದಾ, ಹರಿ, ಭದ್ರಮದಾ, ಮಾತಂಗೀ, ಶಾರ್ದೂಲೀ, ಶ್ವೇತಾ, ಸುರಭಿ, ಸರ್ವಲಕ್ಷಣಸಂಪನ್ನೆ ಸುರಸಾ, ಕದ್ರೂ ಎಂಬ ಹತ್ತು ಹೆಣ್ಣುಮಕ್ಕಳನ್ನು ಜನಿಸಿದಳು.

ಅಪತ್ಯಂ ತು ಮೃಗಾಃ ಸರ್ವೇ ಮೃಗ್ಯಾ ನರವರೋತ್ತಮ ।
ಋಕ್ಷಾಶ್ಚ ಮೃಗಮಂದಾಯಾಃ ಸೃಮರಾಶ್ಚಮರಾಸ್ತಥಾ ॥೨೩॥

ನರವರೋತ್ತಮನೇ! ಸರ್ವ ಮೃಗಗಳೂ ಮೃಗೀಯ ಮಕ್ಕಳು, ಕರಡಿಗಳು, ಸೃಮರ ಚಮರಗಳು ಮೃಗಮಂದೆಯ ಮಕ್ಕಳು.

ಹರ್ಯಾಶ್ಚ ಹರಯೋಽಪತ್ಯಂ ವಾನರಾಶ್ಚ ತರಸ್ವಿನಃ ।
ತತಸ್ತ್ವಿರಾವತೀಂ ನಾಮ ಜಜ್ಞೇ ಭದ್ರಮದಾ ಸುತಾಮ್ ॥೨೪॥

ಹರಿಯು ಸಿಂಹಗಳಿಗೆ, ವೇಗಶಾಲಿಗಳಾದ ವಾನರಗಳಿಗೆ ತಾಯಿಯಾದಳು. ಭದ್ರಮದೆಯು ಇರಾವತಿಯನ್ನು ಹಡೆದಳು.

ತಸ್ಯಾಸ್ತ್ವೈರಾವತಃ ಪುತ್ರೋ ಲೋಕನಾಥೋ ಮಹಾಗಜಃ ।
ಮಾತಂಗಾಸ್ತ್ವಥ ಮಾತಂಗ್ಯಾ ಅಪತ್ಯಂ ಮನುಜರ್ಷಭ ॥೨೫॥

ಆ ಇರಾವತಿಗೆ ಲೋಕನಾಥವಾದ ಶ್ರೇಷ್ಠಗಜ ಐರಾವತ ಮಗನಾದ. ಮಾತಂಗಿಗೆ ಮಾತಂಗಗಳು (ಆನೆಗಳು) ಮಕ್ಕಳಾದವು.

ಗೋಲಾಂಗೂಲಾಂಶ್ಚ ಶಾರ್ದೂಲೀ ವ್ಯಾಘ್ರಾಂಶ್ಚಾಜನಯತ್ಸುತಾನ್ ।
ದಿಶಾಗಜಾಂಶ್ಚ ಕಾಕುತ್ಸ್ಥ ಶ್ವೇತಾಪ್ಯಜನಯತ್ ಸುತಾನ್ ॥೨೬॥

ಶಾರ್ದೂಲಿಯು ಗೋಲಾಂಗೂಲಗಳನ್ನು ವ್ಯಾಘ್ರಗಳನ್ನು ಮಕ್ಕಳನ್ನಾಗಿ ಪಡೆದಳು. ಕಾಕುತ್ಸ್ಥ! ಶ್ವೇತೆಯು ದಿಗ್ಗಜಗಳನ್ನು ಮಕ್ಕಳನ್ನಾಗಿ ಹಡೆದಳು.

ತತೋ ದುಹಿತರೌ ರಾಮ ಸುರಭಿರ್ವೈ ವ್ಯಜಾಯತ ।
ರೋಹಿಣೀಂ ನಾಮ ಭದ್ರಂ ತೇ ಗಂಧರ್ವೀಂ ಚ ಯಶಸ್ವಿನೀಮ್ ॥

ರಾಮ ನಿನಗೆ ಮಂಗಳವಾಗಲಿ! ಬಳಿಕ ಸುರಭಿಯು 'ರೋಹಿಣಿ'ಯನ್ನು ಯಶಸ್ವಿನಿಯ ಗಂಧರ್ವಿಯನ್ನೂ ಹುಟ್ಟಿಸಿದಳು.

ರೋಹಿಣ್ಯಜನಯದ್ಗಾವೈ ಗಂಧರ್ವೀ ವಾಜಿನಃ ಸುತಾನ್ ।
ಸುರಸಾಜನಯನ್ನಾಗಾನ್ ರಾಮ ಕದ್ರೂಸ್ತು ಪನ್ನಗಾನ್ ॥೨೮॥

ಮನುರ್ಮನುಷ್ಯಾನ್ ಜನಯದ್ರಾಮ ಪುತ್ರಾನ್ ಯಶಸ್ವಿನಃ ।
ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನ್ ಶೂದ್ರಾಂಶ್ಚ ಮನುಜರ್ಷಭ ॥

ಸರ್ವಾನ್ ಪುಣ್ಯಫಲಾನ್ ವೃಕ್ಷಾನನಲಾಪಿ ವ್ಯಜಾಯತ ।

ರೋಹಿಣಿಯು ಗೋವುಗಳನ್ನು ಗಂಧರ್ವಿಯು ಕುದುರೆಗಳನ್ನು ಸುರಸಾ ನಾಗಗಳನ್ನು, ಕದ್ರೂ ಪನ್ನಗಗಳನ್ನು ಹಡೆದರು. ರಾಮ! ಮನು– ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ಯಶಸ್ವಿಗಳಾದ ಮನುಷ್ಯಪುತ್ರರನ್ನು ಹಡೆದರು. ಪುಣ್ಯಫಲಗಳನ್ನು ಹೊಂದಿರುವ ಎಲ್ಲ ಮರಗಳಿಗೆ 'ಅನಲಾ' ಜನ್ಮ ನೀಡಿದಳು.

ಮುಖತೋ ಬ್ರಾಹ್ಮಣಾ ಜಾತಾ ಉಪರಸಃ ಕ್ಷತ್ರಿಯಾಸ್ತಥಾ ।
ಊರುಭ್ಯಾಂ ಜಜ್ಞಿರೇ ವೈಶ್ಯಾಃ ಪದ್ಭ್ಯಾಂ ಶೂದ್ರಾ ॥ ಇತಿ ಶ್ರುತಿಃ.

ಭಗವಂತನ ಮುಖದಿಂದ ಬ್ರಾಹ್ಮಣರು, ಎದೆಯಿಂದ ಕ್ಷತ್ರಿಯರು, ತೊಡೆ–ಗಳಿಂದ ವೈಶ್ಯರು, ಪಾದಗಳಿಂದ ಶೂದ್ರರು ಹುಟ್ಟಿದರೆಂದು ಶ್ರುತಿ ಹೇಳುತ್ತದೆ– ಪಾಠಾಂತರ.

ವಿನತಾ ಚ ಶುಕೀಪೌತ್ರೀ ಕದ್ರೂಶ್ಚ ಸುರಸಾಸ್ವಸಾ ।
ಕದ್ರೂರ್ನಾಗಂ ಸಹಸ್ರಾಸ್ಯಂ ವಿಜಜ್ಞೇ ಧರಣೀಧರಮ್ ॥೩೦॥

ವಿನತೆಯು ಕಶ್ಯಪಪತ್ನೀ ತಾಮ್ರಾಳ ಮೊಮ್ಮಗಳು, ಕ್ರೋಧವಶೆಯ ಮಗಳು

ಕದ್ರು ಸುರಸೆಯ ತಂಗಿ. ಕದ್ರೂವು ಧರಣಿಯನ್ನು ಹೊತ್ತ ಸಾವಿರಹೆಡೆಯ ನಾಗವನ್ನು ಹಡೆದಳು.

ದ್ವೌ ಪುತ್ರೌ ವಿನತಾಯಾಸ್ತು ಗರುಡೋಽರುಣ ಏವ ಚ ॥೩೧॥

ತಸ್ಮಾಜ್ಜಾತೋಽಹಮರುಣಾತ್ ಸಂಪಾತಿಸ್ತು ಮಮಾಗ್ರಜಃ ।
ಜಟಾಯುರಿತಿ ಮಾಂ ವಿದ್ಧಿ ಶ್ಯೇನೀಪುತ್ರಮರಿಂದಮ ॥೩೨॥

ವಿನತೆಗೆ ಗರುಡ, ಅರುಣ ಎಂಬ ಇಬ್ಬರು ಮಕ್ಕಳು. ನಾನು ಅರುಣನ ಮಗ. ಸಂಪಾತಿ ನನ್ನ ಅಣ್ಣ. ಅರಿದಮನನೇ! ತಿಳಿ–ನಾನು ಜಟಾಯು ಎಂದು ಹೆಸರಿನವನು.

ವಿಶೇಷಾಂಶ : ನನು ತಾಮ್ರಾಪುತ್ರ್ಯೋ ಶುಕೀಶ್ಯೇಣ್ಯ್ಯೋ, ಸಾಶ್ಯೇನೀ– ಶುಕೀಪೌತ್ರಿ–ಪುತ್ರಸ್ಯ ಅರುಣಸ್ಯ ಕಥಂ ಭಾರ್ಯೇ ಚೇತ್, ತತ್ಸಂತಾಪರಂಪರಾ ಪತಿತಾ ಅನ್ಯೈಷಾ ಶ್ಯೇನೀತ್ಯದೋಷಃ । ವಿಧಿನಿಷೇಧಯೋಃ ಮನುಷ್ಯಾದಿಕಾರತ್ವಾದ್ವಾ । (ಪಾಠಾಂತರ ತಿ.ಟೀ.)

ಅಯಂ ಚ ಸೃಷ್ಟಿಕ್ರಮಃ ವೈವಸ್ವತಮನ್ವಂತರಪ್ರಕಾರಃ ।
ಅತೋ ನ ಪುರಾಣಾಂತರವಿರೋಧಃ । (ಗೋ.ಟೀ.)

ತಾಮ್ರಾಳ ಪುತ್ರಿ ಶ್ಯೇನಿಯ ಪರಂಪರೆಯಲ್ಲಿ ಹುಟ್ಟಿದ ಮತ್ತೋರ್ವ ಶ್ಯೇನಿಯು ಜಟಾಯುವಿನ ತಾಯಿ.

ಸೋಽಹಂ ವಾಸಸಹಾಯಸ್ತೇ ಭವಿಷ್ಯಾಮಿ ಯದೀಚ್ಛಸಿ ।
ಇದಂ ದುರ್ಗಂ ಹಿ ಕಾಂತಾರಂ ಮೃಗರಾಕ್ಷಸಸೇವಿತಮ್
ಸೀತಾಂ ಚ ತಾತ ರಕ್ಷಿಷ್ಯೇ ತ್ವಯೀ ಯಾತೇ ಸಲಕ್ಷ್ಮಣೇ ॥೩೩॥

ನೀನು ಬಯಸಿದರೆ ನಾನು ನಿನ್ನ ವಾಸಕ್ಕೆ ಸಹಾಯಕನಾಗುತ್ತೇನೆ. ಮೃಗ ರಾಕ್ಷಸರು ಆಶ್ರಯಿಸಿರುವ ಈ ಕಾಡು ದುರ್ಗಮವಾದುದು.

ಅಪ್ಪ! ನೀನು ಲಕ್ಷ್ಮಣನೊಂದಿಗೆ ಕಾಡಿಗೆ ಹೋದಾಗ ನಾನು ಸೀತೆಯನ್ನು ಕಾಯುತ್ತೇನೆ ಕೂಡ.

ಜಟಾಯುಷಂ ತಂ ಪ್ರತಿಪೂಜ್ಯ ರಾಘವೋ
ಮುದಾ ಪರಿಷ್ವಜ್ಯ ಚ ಸನ್ನತೋಽಭವತ್ ।
ಪಿತುರ್ಹಿ ಶುಶ್ರಾವ ಸಖಿತ್ವಮಾತ್ಮವಾನ್
ಜಟಾಯುಷಾ ಸಂಕಥಿತಂ ಪುನಃ ಪುನಃ ॥೩೪॥

ರಾಘವನು ಆ ಜಟಾಯುವನ್ನು ಗೌರವಿಸಿದ. ಆಲಿಂಗಿಸಿದ. ನಮಿಸಿದ. ತಂದೆಯ ಗೆಳೆಯನೆಂದು ಜಟಾಯು ಹೇಳಿದ ಮಾತನ್ನು ಮತ್ತೆಮತ್ತೆ ಕೇಳಿ ಸಂತಸಗೊಂಡ.

ಸ ತತ್ರ ಸೀತಾ ಪರಿದಾಯ ಮೈಥಿಲೀಂ
ಸಹೈವ ತೇನಾತಿಬಲೇನ ಪಕ್ಷಿಣಾ ।
ಜಗಾಮ ತಾಂ ಪಂಚವಟೀಂ ಸಲಕ್ಷ್ಮಣೋ
ರಿಪೂನ್ ದಿಧಕ್ಷನ್ ಶಲಭಾನಿವಾನಲಃ ॥೩೫॥

ಆ ರಾಮನು ಮಡದಿ ಮೈಥಿಲೀ ಸೀತೆಯನ್ನು ಬಲಶಾಲಿ ಜಟಾಯುವಿನೊಂದಿಗೆ ಬಿಟ್ಟು ಲಕ್ಷ್ಮಣನೊಂದಿಗೆ ಶತ್ರುಗಳನ್ನು ಬೆಂಕಿ ಶಲಭಗಳನ್ನೆಂಬಂತೆ ಸುಡಲು ಬಯಸಿ ಪಂಚವಟಿಯೆಡೆಗೆ ನಡೆದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹದಿನಾಲ್ಕನೇ ಸರ್ಗ ಮುಗಿಯಿತು.

❖

ಪಂಚದಶಃ ಸರ್ಗಃ

ಕಥಾಸಾರಾಂಶ– ಪಂಚವಟಿಗೆ ಬಂದ ಶ್ರೀರಾಮ ಲಕ್ಷ್ಮಣನಿಗೆ ''ಕಾಡಿನ ಪರಿಸರ–ವನ್ನು ಗಮನಿಸಿ ಆಶ್ರಮ ನಿರ್ಮಾಣಕ್ಕೆ ಸೂಕ್ತ ಸ್ಥಲವನ್ನು ಆಯ್ಕೆ ಮಾಡು; ಹತ್ತಿರದಲ್ಲಿ ಸಮಿತ್ ಕುಶ ಉದಕಗಳು ದೊರೆಯುವಂತಿರಬೇಕು''– ಎಂದು ಹೇಳಿದ.

'ಶ್ರೀರಾಮ! ನಾನು ಎಂದೆಂದೂ ನಿನ್ನಾಧೀನ. ನಿನಗೆ ಯಾವ ಪ್ರದೇಶ ಇಷ್ಟವಾಗುತ್ತದೆ ತೋರಿಸು. ನಾನಲ್ಲಿ ಆಶ್ರಮ ನಿರ್ಮಾಣ ಮಾಡುತ್ತೇನೆ' ಎಂದ ಲಕ್ಷ್ಮಣ.

ಸುತ್ತಲಿನ ಪ್ರದೇಶದ ಸೌಂದರ್ಯ ಸೌಕರ್ಯಗಳನ್ನು ಗಮನಿಸಿ ಸೂಕ್ತವಾದ ಸ್ಥಲವೊಂದನ್ನು ಶ್ರೀರಾಮ ನಿರ್ದೇಶಿಸಿದ. ಲಕ್ಷ್ಮಣ ಶ್ರದ್ಧೆಯಿಂದ ಅತಿಶೀಘ್ರದಲ್ಲಿ ಅಲ್ಲಿ ಸುಂದರ ಹಾಗು ಅಚ್ಚುಕಟ್ಟಾದ ಆಶ್ರಮವನ್ನು ನಿರ್ಮಾಣ ಮಾಡಿದ. ಶ್ರೀರಾಮ ಆ ಆಶ್ರಮದ ಸೊಬಗನ್ನು ನೋಡಿ ಲಕ್ಷ್ಮಣನನ್ನು ಮನದುಂಬಿ ಪ್ರಶಂಸಗೈದ. ಉಡುಗೊರೆಯಾಗಿ ಪ್ರೀತಿಯಿಂದ ಆಲಿಂಗಿಸಿದ.

❖

ಪಂಚವಟೀಪರ್ಣಶಾಲಾ

ತತಃ ಪಂಟವಟೀಂ ಗತ್ವಾ ನಾನಾವ್ಯಾಲಮೃಗಾಯುತಾಮ್ ।
ಉವಾಚ ಭ್ರಾತರಂ ರಾಮಃ ಸೌಮಿತ್ರಿಂ ದೀಪ್ತತೇಜಸಮ್ ॥೧॥

ಬಗೆಬಗೆಯ ಸರ್ಪಗಳು ಮೃಗಗಳಿಂದ ಕೂಡಿದ ಪಂಚವಟಿಯನ್ನು ತಲುಪಿ ಶ್ರೀರಾಮ ತಮ್ಮ ತೇಜಸ್ವಿ ಲಕ್ಷ್ಮಣನನ್ನು ಕುರಿತು ಹೀಗೆ ಹೇಳಿದನು.

ಆಗತಾಃ ಸ್ಮ ಯಥೋದ್ದಿಷ್ಟಂ ಯಂ ದೇಶಂ ಮುನಿರಬ್ರವೀತ್ ।
ಅಯಂ ಪಂಚವಟೀದೇಶಃ ಸೌಮ್ಯ ಪುಷ್ಪಿತಪಾದಪಃ ॥೨॥

ಯಂದ ಏಶಂ ಮುನಿರಬ್ರವೀತ್–ಪಾಠಾಂತರ

ಸೌಮ್ಯನೇ! ಅಗಸ್ತ್ಯಮಹರ್ಷಿಗಳು ತಿಳಿಸಿದ ಪಂಚವಟಿ ಪ್ರದೇಶಕ್ಕೆ ಬಂದಿದ್ದೇವೆ. ಈ ಪಂಚವಟೀ ಪ್ರದೇಶದಲ್ಲಿ ಹೂತುಂಬಿದ ಮರಗಳು ತುಂಬಿವೆ!

ಸರ್ವತಶ್ಚಾರ್ಯತಾಂ ದೃಷ್ಟಿಃ ಕಾನನೇ ನಿಪುಣೋ ಹ್ಯಸಿ ।
ಆಶ್ರಮಃ ಕತರಸ್ಮಿನ್ನೋ ದೇಶೇ ಭವತಿ ಸಂಮತಃ ॥೩॥

ಲಕ್ಷ್ಮಣ! ಕಾಡಿನ ಸುತ್ತಲೂ ಕಣ್ಣಾಡಿಸು. ನೀನು ನಿಪುಣನಾಗಿರುವಿ. ಯಾವ ಪ್ರದೇಶದಲ್ಲಿ, ಆಶ್ರಮ ನಿರ್ಮಾಣ ನಮಗೆ ಸಮ್ಮತವಾಗಬಹುದು?

ರಮತೇ ಯತ್ರ ವೈದೇಹೀ ತ್ವಮಹಂ ಚೈವ ಲಕ್ಷ್ಮಣ ।
ತಾದೃಶೋ ದೃಶ್ಯತಾಂ ದೇಶಃ ಸನ್ನಿಕೃಷ್ಟಜಲಾಶಯಃ ॥೪॥

ನಾನು ನೀನು ಸೀತೆ ಎಲ್ಲಿ ಖುಷಿಯಾಗಿ ವಾಸ ಮಾಡಬಹುದು ಅಂತಹ ನೀರಿಗೆ ಹತ್ತಿರವಾದ ಪ್ರದೇಶವನ್ನು ಗಮನಿಸು.

ವನರಾಮಣ್ಯಕಂ ಯತ್ರ ಜಲರಾಮಣ್ಯಕಂ ತಥಾ ।
ಸನ್ನಿಕೃಷ್ಟಂ ಚ ಯತ್ರ ಸ್ಯಾತ್ ಸಮಿತ್ಪುಷ್ಪಕುಶೋದಕಮ್ ॥೫॥

ವನಸೌಂದರ್ಯ, ಸ್ಥಳಸೌಂದರ್ಯಗಳು ಮೇಳೈಸಿರಬೇಕು. ಸಮಿತ್, ಕುಶ ಪುಷ್ಪ ಉದಕಗಳು ಸಮೀಪದಲ್ಲಿರಬೇಕು. ಅಂತಹ ತಾಣವನ್ನು ಪತ್ತೆ ಮಾಡು.

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಸಂಯತಾಂಜಲಿಃ ।
ಸೀತಾಸಮಕ್ಷಂ ಕಾಕುತ್ಸ್ಥಮಿದಂ ವಚನಮಬ್ರವೀತ್ ॥೬॥

ರಾಮನಿಂದ ಹೀಗೆ ಹೇಳೋಣನಾದ ಲಕ್ಷ್ಮಣನು ಕೈ ಮುಗಿದು ಸೀತೆಯ ಎದುರಲ್ಲಿ ಶ್ರೀರಾಮನಿಗೆ ಈ ಮಾತನ್ನು ಹೇಳಿದನು.

ಪರವಾನಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂ ಸ್ಥಿತೇ ।
ಸ್ವಯಂ ತು ರುಚಿರೇ ದೇಶೇ ಕ್ರಿಯತಾಮಿತಿ ಮಾಂ ವದ ॥೭॥

ಕಾಕುತ್ಸ್ಥ! ನೂರಾರು ವರ್ಷಗಳು ಸುರರೂ ನಾನು ನಿನ್ನ ಅಧೀನನೇ. ನೀನೆ ನಿನಗೆ ಇಷ್ಟವಾದ ತಾಣದಲ್ಲಿ ಆಶ್ರಮ ನಿರ್ಮಾಣ ಮಾಡಲು ಆದೇಶ ನೀಡು.

ಸುಪ್ರೀತಸ್ತೇನ ವಾಕ್ಯೇನ ಲಕ್ಷ್ಮಣಸ್ಯ ಮಹಾತ್ಮನಃ ।
ವಿಮೃಶನ್ ರೋಚಯಾಮಾಸ ದೇಶಂ ಸರ್ವಗುಣಾನ್ವಿತಮ್ ॥೮॥

ಲಕ್ಷ್ಮಣಸ್ಯ ಮಹಾದ್ಯುತಿಃ –ಪಾಠಾಂತರ.

ಮಹಾತ್ಮ ಲಕ್ಷ್ಮಣನ ಆ ಮಾತಿನಿಂದ ಶ್ರೀರಾಮ ಸುಪ್ರೀತನಾದ. ವಿಮರ್ಶೆ ಮಾಡಿ ಎಲ್ಲ ವಾಸಯೋಗ್ಯ ಗುಣಗಳಿಂದ ಪ್ರದೇಶವೊಂದನ್ನು ಇಷ್ಟಪಟ್ಟ.

ಸ ತಂ ರುಚಿರಮಾಕ್ರಮ್ಯ ದೇಶಮಾಶ್ರಮಕರ್ಮಣಿ ।
ಹಸ್ತೌ ಗೃಹೀತ್ವಾ ಹಸ್ತೇನ ರಾಮಃ ಸೌಮಿತ್ರಿಮಬ್ರವೀತ್ ॥೯॥

ತನಗಿಷ್ಟವಾದ ಆ ಪ್ರದೇಶಕ್ಕೆ ಬಂದು ಆಶ್ರಮ ನಿರ್ಮಾಣ ವಿಷಯದಲ್ಲಿ ತನ್ನ ಕೈಯಿಂದ ಲಕ್ಷ್ಮಣನ ಕೈಹಿಡಿದು ಹೇಳಿದ.

ಅಯಂ ದೇಶಃ ಸಮಃ ಶ್ರೀಮಾನ್ ಪುಷ್ಪಿತೈಸ್ತರುಭಿರ್ವೃತಃ ।
ಇಹಾಶ್ರಮಪದಂ ಸೌಮ್ಯ ಯಥಾವತ್ ಕರ್ತುಮರ್ಹಸಿ ॥೧೦॥

ಸೌಮ್ಯ ! ಈ ಪ್ರದೇಶ ಸಮತಟ್ಟಾಗಿದೆ. ಹೂಬಿಟ್ಟ ಮರಗಳಿಂದ ತುಂಬಿ ಕಂಗೊಳಿಸುತ್ತಿದೆ. ಇಲ್ಲಿ ಯಥೋಚಿತವಾಗಿ ಆಶ್ರಮ ನಿರ್ಮಾಣ ಮಾಡಲು ಅರ್ಹನಾಗಿರುವಿ.

ಇಯಮಾದಿತ್ಯಸಂಕಾಶೈಃ ಪದ್ಮೈಃ ಸುರಭಿಗಂಧಿಭಿಃ ।
ಅದೂರೇ ದೃಶ್ಯತೇ ರಮ್ಯಾ ಪದ್ಮಿನೀ ಪದ್ಮಶೋಭಿತಾ ॥೧೧॥

ರವಿಯಂತೆ ಕಾಂತಿಯುಕ್ತವಾದ ಸುರಭಿಗಂಧ ತುಂಬಿದ ತಾವರೆಗಳಿಂದ ಶೋಭಿಸುತ್ತಿರುವ ಪುಷ್ಕರಣಿ ಹತ್ತಿರದಲ್ಲಿಯೆ ಇದೆ!

ಯಥಾಖ್ಯಾತಮಗಸ್ತ್ಯೇನ ಮುನಿನಾ ಭಾವಿತಾತ್ಮನಾ ।
ಇಯಂ ಗೋದಾವರೀ ರಮ್ಯಾ ಪುಷ್ಪಿತೈಸ್ತರುಭಿರ್ವೃತಾ ॥೧೨॥

ಹಂಸಕಾರಂಡವಾಕೀರ್ಣಾ ಚಕ್ರವಾಕೋಪಶೋಭಿತಾ ।

ಶುದ್ಧಾತ್ಮ ಅಗಸ್ತ್ಯರು ಹೇಳಿದ ಹೂ ತುಂಬಿದ ಮರಗಳಿಂದ ಆವೃತವಾದ ಈ ಗೋದಾವರಿ ನದೀ ರಮ್ಯವಾಗಿದೆ. ಹಂಸ ಕಾರಂಡವ–ಚಕ್ರವಾಕ ಮುಂತಾದ ಹಕ್ಕಿಗಳಿಂದ ಶೋಭಿತವಾಗಿದೆ.

ನಾತಿದೂರೇ ನ ಚಾಸನ್ನೇ ಮೃಗಯೂಥನಿಪೀಡಿತಾ ॥೧೩॥

ಮಯೂರನಾದಿತಾ ರಮ್ಯಾಃ ಪ್ರಾಂಶವೋ ಬಹುಕಂದರಾಃ ।
ದೃಶ್ಯಂತೇ ಗಿರಯಃ ಸೌಮ್ಯ ಪುಲ್ಲೈಸ್ತರುಭಿರಾವೃತಾಃ ॥೧೪॥

ಸೌಮ್ಯ ! ಅತಿದೂರವೂ ಅಲ್ಲದ ಅತಿ ಹತ್ತಿರವೂ ಅಲ್ಲದ ಸ್ಥಲದಲ್ಲಿ ಮೃಗ–ಸಮೂಹಗಳಿಂದ ಕೂಡಿದ, ನವಿಲುಗಳ ಕೇಕಾರವಗಳಿಂದಲೂ ಪ್ರತಿಧ್ವನಿತ ವಾಗುವ ಅನೇಕ ಗುಹೆಗಳನ್ನೊಳಗೊಂಡ ಹೂಮರಗಳಿಂದ ಆವೃತವಾದ ಪರ್ವತಗಳು ಕಾಣುತ್ತಿವೆ.

ಸೌವರ್ಣೈ ರಾಜತೈಸ್ತಾಮ್ರೈರ್ದೇಶೇ ದೇಶೇ ಚ ಧಾತುಭಿಃ ।
ಗವಾಕ್ಷಿತಾ ಇವಾಭಾಂತಿ ಗಜಾಃ ಪರಮಭಕ್ತಿಭಿಃ ॥೧೫॥

ಅಲ್ಲಲ್ಲಿ ಬಂಗಾರ ಬೆಳ್ಳಿ ತಾಮ್ರಗಳಂತೆ ಬಣ್ಣಬಣ್ಣದ ಗೈರಿಕಾದಿ ಧಾತುಗಳಿಂದ ಕಿಟಕಿಯಂತೆ ರೇಖಾ ವಿನ್ಯಾಸಗಳಿಂದ ಚಿತ್ರಿತಗಳಾದ ಆನೆಗಳಂತೆ ಪರ್ವತಗಳು ಕಾಣುತ್ತಿವೆ.

ಸಾಲೈಸ್ತಾಲೈಸ್ತಮಾಲೈಶ್ಚ ಖರ್ಜೂರಪನಸಾಮ್ರಕೈಃ ।
ನೀವಾರೈಸ್ತಿನಿಶೈಶ್ಚೈವ ಪುಂನಾಗೈಶ್ಚೋಪಶೋಭಿತಾ ॥೧೬॥

ಚೂತೈರಶೋಕೈಸ್ತಿಲಕೈಶ್ಚಂಪಕೈಃ ಕೇತಕೈರಪಿ ।
ಪುಷ್ಪಗುಲ್ಮಲತೋಪೇತೈಸ್ಸೈಸ್ತರುಭಿರಾವೃತಾಃ ॥೧೭॥

ಚಂದನೈಃ ಸ್ಯಂದನೈರ್ನೀಪೈಃ ಪರ್ಣಾಸೈರ್ಲಿಕುಚೈರಪಿ ।
ಧವಾಶ್ವಕರ್ಮಖದಿರೈಃ ಶಮೀಕಿಂಶುಕಪಾಟಲೈಃ ॥೧೮॥

ಹೂವುಗಳಿಂದ ಪೊದೆಗಳಿಂದ ಬಳ್ಳಿಗಳಿಂದ ಕೂಡಿದ ಸಾಲ, ತಾಲ, ತಮಾಲ, ಖರ್ಜೂರ, ಹಲಸು, ಹುಣಸೆ, ನೆಮ್ಮಿ, ಪನ್ನಾಗ, ಆಮ್ರ, ಅಶೋರ, ತಿಲಕ, ಕೇದಗೆ, ಸಂಪಿಗೆ, ಸ್ಯಂದನ, ಚಂದನ, ಕದಂಬ ಈಚಲ ಹೆಬ್ಬಲಸು, ಧವ, ಅಶ್ವಕರ್ಣ, ಮತ್ತಿ, ಕಗ್ಗಲಿ, ಶಮಿ, ಪಾಲಾಶ, ಪಾದರೀ ಮೊದಲಾದ ಮರಗಳಿಂದ ಸಮಾವೃತವಾದ ಪರ್ವತವು ಚೆನ್ನಾಗಿ ಶೋಭಿಸುತ್ತಿವೆ.

ಇದಂ ಪುಣ್ಯಮಿದಂ ಮೇಧ್ಯಮಿದಂ ಬಹುಮೃಗದ್ವಿಜಮ್ ।
ಇಹ ವತ್ಸ್ಯಾಮ ಸೌಮಿತ್ರೇ ಸಾರ್ಧಮೇತೇನ ಪಕ್ಷಿಣಾ ॥೧೯॥

ಸೌಮಿತ್ರಿ ! ಇದು ಪುಣ್ಯಕರವಾದ ರಮ್ಯವಾದ, ನಾನಾ ಪಕ್ಷಿಮೃಗಗಳು ನೆಲೆಸಿರುವ ತಾಣವಾಗಿದೆ. ಜಟಾಯುವಿನೊಂದಿಗೆ ನಾವು ಇಲ್ಲೇ ವಾಸ ಮಾಡೋಣ.

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಪರವೀರಹಾ ।
ಅಚಿರೇಣಾಶ್ರಮಂ ಭ್ರಾತುಶ್ಚಕಾರ ಸುಮಹಾಬಲಃ ॥೨೦॥

ಶ್ರೀರಾಮನಿಂದ ಹೀಗೆ ಹೇಳಿಸಿಕೊಂಡ ಶತ್ರುವೀರರನ್ನು ಸದೆಬಡಿವ ಮಹಾಬಲಶಾಲಿಯಾದ ಲಕ್ಷ್ಮಣನು ಕೂಡಲೆ ಅಣ್ಣನಿಗಾಗಿ ಆಶ್ರಮ ಕಟ್ಟಿದನು.

ಪರ್ಣಶಾಲಾಂ ಸುವಿಪುಲಾಂ ತತ್ರ ಸಂಘಾತಮೃತ್ತಿಕಾಮ್ ।
ಸುಸ್ತಂಭಾ ಮಸ್ಕರೈರ್ದೀರ್ಘೈಃ ಕೃತವಂಶಾಂ ಸುಶೋಭನಾಮ್ ॥೨೧॥

ಶಮೀಶಾಖಾಭಿರಾಸ್ತೀರ್ಣಾಂ ದೃಢಪಾಶಾವಪಾಶಿತಾಮ್ ।
ಕುಶಕಾಶಶರೈಃ ಪರ್ಣೈಃ ಸುಪರಿಚ್ಛಾದಿತಾಂ ತಥಾ ॥೨೨॥

ಸಮೀಕೃತತಲಾಂ ರಮ್ಯಾಂ ಚಕಾರ ಲಘುವಿಕ್ರಮಃ ।
ನಿವಾಸಂ ರಾಘವಸ್ಯಾರ್ಥೇ ಪ್ರೇಕ್ಷಣೀಯಮನುತ್ತಮಮ್ ॥೨೩॥

ಲಕ್ಷ್ಮಣನು ಅತ್ಯಂತ ವಿಸ್ತಾರವಾದ ಪರ್ಣಶಾಲೆಯನ್ನು ನಿರ್ಮಿಸಿದನು. ಅಗೆದ ಮಣ್ಣಿನಿಂದ ಗೋಡೆಯನ್ನು ಕಟ್ಟಿ ಬಳಿಕ ಸುಂದರ ಹಾಗೂ ಸುದೃಢ ಕಂಬಗಳನ್ನು ನೆಟ್ಟನು. ಕಂಬಗಳ ಮೇಲೆ ದೊಡ್ಡ ದೊಡ್ಡ ಬಿದಿರುಗಳನ್ನು ಇಟ್ಟನು. ಆಗ ಸುಂದರವಾಗಿ ಕಾಣುತ್ತಿತ್ತು ಕುಟೀರ. ಬಿದಿರುಗಳ ಮೇಲೆ ಶಮಿಯ ರೆಂಬೆಗಳನ್ನು ಜೋಡಿಸಿದನು. ಗಟ್ಟಿಯಾದ ಬಳ್ಳಿ ಹಗ್ಗಗಳಿಂದ ಬಿಗಿಯಾಗಿ ಕಟ್ಟಿದನು. ಅನಂತರ ಅದರ ಮೇಲೆ ಕುಶ ಕಾಶ ಜಾತಿಯ ಹುಲ್ಲುಗಳಿಂದ ಮತ್ತು ಎಲೆಗಳಿಂದ ಮೇಲ್ಛಾವಣಿಯನ್ನು ನಿರ್ಮಿಸಿದನು. ನೆಲವನ್ನು ಸಮತಟ್ಟಾಗಿಸಿದನು. ಶೀಘ್ರಸಾಹಸಿಯಾದ ಲಕ್ಷ್ಮಣನು ಅಣ್ಣ ರಾಮನಿಗಾಗಿ ಹೀಗೆ ಪ್ರೇಕ್ಷಣೀಯವಾದ ಅತ್ಯುತ್ತಮವಾದ ಆಶ್ರಮವನ್ನು ನಿರ್ಮಾಣ ಮಾಡಿದನು.

ಚಕಾರಸುಮಹಾಬಲಃ–ಶ್ಲೋ.೨೩. –ಪಾಠಾಂತರ.

ಸ ಗತ್ವಾ ಲಕ್ಷ್ಮಣಃ ಶ್ರೀಮಾನ್ನದೀಂ ಗೋದಾವರೀಂ ತದಾ ।
ಸ್ನಾತ್ವಾ ಪದ್ಮಾನಿ ಚಾದಾಯ ಸಫಲಃ ಪುನರಾಗತಃ ॥೨೪॥

ಆ ಲಕ್ಷ್ಮಣನು ಗೋದಾವರಿನದಿಗೆ ಹೋಗಿ ಸ್ನಾನಮಾಡಿ ತಾವರೆ ಹೂ, ಹಣ್ಣುಗಳಿಂದ ಸಹಿತನಾಗಿ ಆಶ್ರಮದ ಬಳಿ ಬಂದನು.

ತತಃ ಪುಷ್ಪಬಲಿಂ ಕೃತ್ವಾ ಶಾಂತಿಂ ಚ ಸ ಯಥಾವಿಧಿ ।
ದರ್ಶಯಾಮಾಸ ರಾಮಾಯ ತದಾಶ್ರಮಪದಂ ಕೃತಮ್ ॥೨೫॥

ಬಳಿಕ ದೇವತೆಗಳಿಗೆ ಹೂವುಗಳಿಂದ ಪೂಜೆ ಮಾಡಿ ವಾಸ್ತು ಶಾಂತಿಯನ್ನು ನೆರವೇರಿಸಿದನು. ಬಳಿಕ ಶ್ರೀರಾಮನಿಗೆ ಆಶ್ರಮವನ್ನು ತೋರಿಸಿದನು.

ಸ ತಂ ದೃಷ್ಟ್ವಾ ಕೃತಂ ಸೌಮ್ಯಮಾಶ್ರಮಂ ಸಹ ಸೀತಯಾ ।
ರಾಘವಃ ಪರ್ಣಶಾಲಾಯಾಂ ಹರ್ಷಮಾಹಾರಯದ್ಭೃಶಮ್ ॥೨೬॥

ಶ್ರೀರಾಮನು ಆಗತಾನೆ ನಿರ್ಮಿಸಿದ ಆ ಸುಂದರ ಪರ್ಣಶಾಲೆಯನ್ನು ನೋಡಿ ಮುದಗೊಂಡು ಸೀತೆಯೊಂದಿಗೆ ಒಳಪ್ರವೇಶಿಸಿ ಎಲ್ಲೆಡೆ ಓಡಾಡಿ ತುಂಬ ಸಂತಸಗೊಂಡನು.

ಸುಸುಂಹೃಷ್ಟಃ ಪರಿಷ್ವಜ್ಯ ಬಾಹುಭ್ಯಾಂ ಲಕ್ಷ್ಮಣಂ ತದಾ ।
ಅತಿಸ್ನಿಗ್ಧಂ ಚ ಗಾಢಂ ಚ ವಚನಂ ಚೇದಮಬ್ರವೀತ್ ॥೨೭॥

ಶ್ರೀರಾಮನು ತುಂಬ ಹರ್ಷಗೊಂಡವನಾಗಿ ತೋಳುಗಳಿಂದ ಲಕ್ಷ್ಮಣನನ್ನು ಬರಸೆಳೆದು ಬಿಗಿದಪ್ಪಿಕೊಂಡನು. ಬಹಳ ಸ್ನೇಹಪೂರ್ವಕವಾಗಿ ಹೀಗೆ ಹೇಳಿದನು.

ಪ್ರೀತೋಽಸ್ಮಿ ತೇ ಮಹತ್ ಕರ್ಮ ತ್ವಯಾ ಕೃತಮಿದಂ ಪ್ರಭೋ ।
ಪ್ರದೇಯೋ ಯನ್ನಿಮಿತ್ತಂ ತೇ ಪರಿಷ್ವಂಗೋ ಮಯಾ ಕೃತಃ ॥೨೮॥

ಸಮರ್ಥನಾದ ಲಕ್ಷ್ಮಣ! ನಿನ್ನ ಮಹತ್ಕಾರ್ಯದಿಂದ ನಾನು ತುಂಬ ಸಂತೋಷಗೊಂಡಿದ್ದೇನೆ. ಇದಕ್ಕಾಗಿ ಬೇರೇನೂ ಉಡುಗೊರೆ ಕೊಡಲಾರದೆ ಪ್ರೀತಿಯ ಆಲಿಂಗನವನ್ನು ಕೊಡುತ್ತಿದ್ದೇನೆ.

ಭಾವಜ್ಞೇನ ಕೃತಜ್ಞೇನ ಧರ್ಮಜ್ಞೇನ ಚ ಲಕ್ಷ್ಮಣ ।
ತ್ವಯಾ ಪುತ್ರೇಣ ಧರ್ಮಾತ್ಮಾ ನ ಸಂವೃತ್ತಃ ಪಿತಾ ಮಮ ॥೨೯॥

ಲಕ್ಷ್ಮಣ! ಇಂಗಿತಜ್ಞನು, ಕೃತಜ್ಞನು, ಧರ್ಮಜ್ಞನು ಆದ ನಿನ್ನಂತಹ ಮಗನಿಂದಾಗಿ ನನ್ನ ತಂದೆ ಪುಣ್ಯಾತ್ಮರಾದ ದಶರಥರಾಜರು ಸತ್ತೇ ಇಲ್ಲ. ನಿನ್ನ ರೂಪದಲ್ಲಿ ಜೀವಂತವಾಗಿದ್ದಾರೆ!

ಏವಂ ಲಕ್ಷ್ಮಣಮುಕ್ತ್ವಾ ತು ರಾಘವೋ ಲಕ್ಷ್ಮಿವರ್ಧನಃ ।
ತಸ್ಮಿನ್ ದೇಶೇ ಬಹುಫಲೇ ನ್ಯವಸತ್ ಸುಸುಖಂ ವಶೀ ॥೩೦॥

ಲಕ್ಷ್ಮಣನಿಗೆ ಹೀಗೆ ಹೇಳಿ ಕಾಂತಿವರ್ಧನನಾದ ಜಿತೇಂದ್ರಿಯನಾದ ರಾಘವನು ಬಹುಫಲಭರಿತವಾದ ಆ ಪ್ರದೇಶದಲ್ಲಿ ತುಂಬ ಸುಖವಾಗಿ ವಾಸ ಮಾಡಿದನು.

ಸ ಸುಖಂ – ಪಾಠಾಂತರ.

ಕಂಚಿತ್ ಕಾಲಂ ಸ ಧರ್ಮಾತ್ಮಾ ಸೀತಯಾ ಲಕ್ಷ್ಮಣೇನ ಚ ।
ಅನ್ವಾಸ್ಯಮಾನೋ ನ್ಯವಸತ್ ಸ್ವರ್ಗಲೋಕೇ ಯಥಾಮರಃ ॥೩೧॥

ಸೀತೆ–ಲಕ್ಷ್ಮಣರಿಂದ ಸೇವಿಸಲ್ಪಡುವವನಾಗಿ ಶ್ರೀರಾಮ ಆ ಆಶ್ರಮದಲ್ಲಿ ಸ್ವರ್ಗದಲ್ಲಿ ಅಮರರು ವಾಸಮಾಡುವಂತೆ ಹಾಯಾಗಿ ವಾಸಮಾಡಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹದಿನೈದನೇ ಸರ್ಗ ಮುಗಿಯಿತು.

ಷೋಡಶಃ ಸರ್ಗಃ

ಕಥಾಸಾರಾಂಶ– ಶ್ರೀರಾಮ ಆಶ್ರಮದಲ್ಲಿರುವಾಗ ಶರದೃತು ಕಳೆದು ಹೇಮಂತ ಋತು ಬಂದಿತು. ಒಂದುದಿನ ಶ್ರೀರಾಮನು ಮುಂಜಾನೆ ಸೀತಾ ಲಕ್ಷ್ಮಣರೊಂದಿಗೆ ಗೋದಾವರಿ ನದಿಗೆ ಸ್ನಾನಕ್ಕೆ ಹೊರಟನು.

ಶ್ರೀರಾಮನನ್ನು ಬಿಂದಿಗೆ ಹಿಡಿದು ಹಿಂಬಾಲಿಸುತ್ತಿದ್ದ ಲಕ್ಷ್ಮಣನು ಹೇಮಂತ ಋತುವಿನ ವರ್ಣನೆ ಮಾಡುತ್ತಾನೆ. ಪ್ರಕೃತಿಯಲ್ಲಿ ಪರಿವರ್ತನೆಯ ಸೊಬಗನ್ನು ವರ್ಣಿಸುತ್ತಾ ''ನಂದಿಗ್ರಾಮದಲ್ಲಿ ಭರತನೂ ಇದೇ ಸಮಯದಲ್ಲಿ ತುಂಬ ಚಳಿಯಲ್ಲಿ ಸರಯೂನದಿಗೆ ತನ್ನ ಮಂತ್ರಿಪರಿವಾರದೊಂದಿಗೆ ಸ್ನಾನಕ್ಕೆ ಹೋಗಿರು– ತ್ತಾನೆ. ಅವನೂ ಮುನಿವೃತ್ತಿಯ ಜೀವನ ನಡೆಸುತ್ತಿದ್ದಾನೆ. ಅರಮನೆಯಲ್ಲಿ ಸುಖ– ವಾಗಿರಬೇಕಾದ, ಸುಖವಾಗಿದ್ದು ಅಭ್ಯಾಸವಾಗಿರುವ ಭರತ ಈ ಚಳಿಯಲ್ಲಿಯೂ ನೆಲದ ಮೇಲೆಯೇ ಮಲಗುತ್ತಾನೆ. ಪಾಪ. ಎಲ್ಲ ಬಗೆಯ ಭೋಗ ಪರಿತ್ಯಾಗ ಮಾಡಿ ಧರಾಶಾಯಿಯಾಗಿ ವನವಾಸಿ ಜೀವನವನ್ನು ನಡೆಸುತ್ತಿದ್ದಾನೆ!

'ಮನುಷ್ಯನು ಸಾಮಾನ್ಯವಾಗಿ ಅಮ್ಮನ ಗುಣವನ್ನು ಹೊಂದಿರುತ್ತಾನೆ. ತಂದೆ ಗುಣವನ್ನಲ್ಲ' ಎಂಬ ಲೋಕೋಕ್ತಿ ಭರತನ ವಿಷಯದಲ್ಲಿ ತಿರುವು ಮುರುವು ಆಗಿದೆ. ದಶರಥನಂಥ ಪತಿ, ಭರತನಂಥ ಮಗನನ್ನು ಪಡೆದಿರುವ ಕೈಕೇಯಿ ಕ್ರೂರದೃಷ್ಟಿ– ಯವಳು ಹೇಗಾದಳೋ'' ಎಂದು ಹೇಳುವನು.

ಲಕ್ಷ್ಮಣನ ಮಾತನ್ನು ಕೇಳಿ ಶ್ರೀರಾಮ 'ಲಕ್ಷ್ಮಣ! ಭರತನ ಬಗ್ಗೆ ಇನ್ನೂ ವರ್ಣನೆ ಮಾಡು. ಹಿತವಾಗಿರುತ್ತದೆ; ಕೇಳೋಣ. ತಾಯಿ ಕೈಕೇಯಿಯ ನಿಂದನೆ ಸಾಕು ಮಾಡು'.

ನಿನ್ನೊಂದಿಗೆ ತೆರಳಿ ಆ ಪ್ರೀತಿಯ ಭರತನನ್ನು ಶತ್ರುಘ್ನನನ್ನು ಯಾವಾಗ ಭೇಟಿ– ಯಾಗುತ್ತೇನೋ ಎಂದು ನನ್ನ ಮನ ಹಾತೊರೆಯುತ್ತಿದೆ, ಕಾತರದಿಂದ ಎಂದು ಹೇಳಿದನು.

ಹೀಗೆ ವಿಲಾಪಿಸುತ್ತ ಶ್ರೀರಾಮ ಸೀತಾ ಲಕ್ಷ್ಮಣರೊಂದಿಗೆ ಗೋದಾವರಿ ನದೀ ಸ್ನಾನ ಮುಗಿಸಿದನು. ರಾಮಲಕ್ಷ್ಮಣರು ದೇವತೆಗಳಿಗೆ ಪಿತೃದೇವತೆಗಳಿಗೆ ತರ್ಪಣ ಕೊಟ್ಟರು. ಮೂರು ಮಂದಿ ಸೂರ್ಯನಿಗೆ ಉಪಸ್ಥಾನಮಾಡಿ ದೇವತೆಗಳನ್ನು ತುತಿಸಿ ಶೋಭಿಸಿದರು.

❖

ಹೇಮಂತವರ್ಣನಮ್

ವಸತಸ್ತ ತು ಸುಖಂ ರಾಘವಸ್ಯ ಮಹಾತ್ಮನಃ ।
ಶರದ್ವ್ಯಪಾಯೇ ಹೇಮಂತ ಋತುರಿಷ್ಟಃ ಪ್ರವರ್ತತೇ ॥೧॥

ಮಹಾತ್ಮ ಶ್ರೀರಾಮನು ಆಶ್ರಮದಲ್ಲಿ ವಾಸಮಾಡುತ್ತಿರುವಾಗ ಶರದ್ಋತು ಕಳೆದು ಇಷ್ಟವಾದ ಹೇಮಂತ ಋತು ಬಂದಿತು.

ಸ ಕದಾಚಿತ್ ಪ್ರಭಾತಾಯಾಂ ಶರ್ವರ್ಯಾಂ ರಘುನಂದನಃ ।
ಪ್ರಯಯಾವಭಿಷೇಕಾರ್ಥಂ ರಮ್ಯಾಂ ಗೋದಾವರೀಂ ನದೀಮ್॥೨॥

ಒಂದುದಿನ ಮುಂಜಾನೆ ರಘುನಂದನ ಶ್ರೀರಾಮ ಸ್ನಾನ ಮಾಡಲು ರಮ್ಯಗೋದಾವರಿ ನದೀತೀರಕ್ಕೆ ಹೋದನು.

ಪ್ರಹ್ವಃ ಕಲಶಹಸ್ತಸ್ತಂ ಸೀತಯಾ ಸಹ ವೀರ್ಯವಾನ್ ।
ಪೃಷ್ಠತೋಽನುವ್ರಜನ್ ಭ್ರಾತಾ ಸೌಮಿತ್ರಿರಿದಮಬ್ರವೀತ್ ॥೩॥

ಬಹಳ ವಿನೀತನು ವೀರ್ಯವಂತನು ಆಗಿದ್ದ ಅವನ ತಮ್ಮ ಲಕ್ಷ್ಮಣನೂ ಸೀತೆಯ ಜೊತೆ ಕೈಯಲ್ಲಿ ಬಿಂದಿಗೆ ಹಿಡಿದುಕೊಂಡು ರಾಮನನ್ನು ಹಿಂಬಾಲಿಸುತ್ತ ಮಾತನಾಡಿದನು.

ಅಯಂ ಸ ಕಾಲಃ ಸಂಪ್ರಾಪ್ತಃ ಪ್ರಿಯೋ ಯಸ್ತೇ ಪ್ರಿಯಂವದ ।
ಅಲಂಕೃತ ಇವಾಭಾತಿ ಯೇನ ಸಂವತ್ಸರಃ ಶುಭಃ ॥೪॥

ಪ್ರಿಯಮಾತಿನ ಅಣ್ಣ! ನಿಮಗೆ ಹೆಚ್ಚು ಪ್ರಿಯವಾದ ಹೇಮಂತಕಾಲ ಪ್ರಾಪ್ತವಾಗಿದೆ. ಇದರಿಂದ ಈ ಶುಭ ಸಂವತ್ಸರ ಅಲಂಕೃತವಾಗಿದೆ.

ನೀಹಾರಪರುಷೋ ಲೋಕಃ ಪೃಥಿವೀ ಸಸ್ಯಶಾಲಿನೀ ।
ಜಲಾನ್ಯನುಪಭೋಗ್ಯಾನಿ ಸುಭಗೋ ಹವ್ಯವಾಹನಃ ॥೫॥

ಈ ಋತುವಿನಲ್ಲಿ ತುಂಬ ಚಳಿ ಅಥವಾ ಮಂಜಿನಿಂದ ಜನರ ಶರೀರಗಳು ಒರಟಾಗಿವೆ. ಪೃಥ್ವಿಯು ಸಸ್ಯಶಾಲಿನಿಯಾಗಿ ನಳನಳಿಸುತ್ತದೆ. ನೀರು ಹೆಚ್ಚು ತಂಪಾಗಿರುವುದರಿಂದ ಅಷ್ಟಾಗಿ ಉಪಯೋಗಕ್ಕೆ ಬರುವುದಿಲ್ಲ. ಬೆಂಕಿಯು ಮಾತ್ರ ಪ್ರಿಯವಾಗಿರುತ್ತದೆ.

ನವಾಗ್ರಯಣಪೂಜಾಭಿರಭ್ಯರ್ಚ್ಯ ಪಿತೃದೇವತಾಃ ।
ಕೃತಾಗ್ರಯಣಕಾಃ ಕಾಲೇ ಸಂತೋ ವಿಗತಕಲ್ಮಷಾಃ ॥೬॥

ಈ ಹೇಮಂತಋತುವಿನಲ್ಲಿ ಸಜ್ಜನರು ನವಾಗ್ರಯಣ (ಹೊಸಧಾನ್ಯ ಸಮರ್ಪಣೆಯ) ಪೂಜೆಯಿಂದ ಪಿತೃಗಳನ್ನೂ ದೇವತೆಗಳನ್ನೂ ತೃಪ್ತಿಪಡಿಸಿ ಪಾಪರಹಿತರಾಗುತ್ತಾರೆ.

ಪ್ರಾಜ್ಯಕಾಮಾ ಜನಪದಾಃ ಸಂಪನ್ನತರಗೋರಸಾಃ ।
ವಿಚರಂತಿ ಮಹೀಪಾಲಾ ಯಾತ್ರಾಸ್ಥಾ ವಿಜಿಗೀಷವಃ ॥೭॥

ಈ ಋತುವಿನಲ್ಲಿ ಎಲ್ಲ ದೇವತೆಗಳ ಅನ್ನಪ್ರಾಪ್ತಿಕಾಮನೆಗಳು ಪೂರ್ಣ-ವಾಗುತ್ತವೆ. ಹಾಲು-ಮೊಸರು-ಬೆಣ್ಣೆ-ತುಪ್ಪಗಳು ಸಮೃದ್ಧವಾಗುತ್ತವೆ. ವಿಜಯದ ಬಯಕೆಯ ರಾಜರು ಯುದ್ಧಕ್ಕಾಗಿ ಸಂಚರಿಸುವರು.

ಸೇವಮಾನೇ ದೃಢಂ ಸೂರ್ಯೇ ದಿಶಮಂತಕಸೇವಿತಾಮ್ ।
ವಿಹೀನತಿಲಕೇವ ಸ್ತ್ರೀ ನೋತ್ತರಾ ದಿಕ್ ಪ್ರಕಾಶತೇ ॥೮॥

ದಕ್ಷಿಣಾಯನವಾದುದರಿಂದ ಸೂರ್ಯ ದಕ್ಷಿಣದಿಕ್ಕಿಗೆ ಇಳಿದಾಗ ಉತ್ತರದಿಕ್ಕು ತಿಲಕವಿಲ್ಲದ ಹೆಣ್ಣಿನಂತೆ ಶೋಭಿಸುತ್ತಿರಲಿಲ್ಲ.

ಪ್ರಕೃತ್ಯಾ ಹಿಮಕೋಶಾಢ್ಯೋ ದೂರಸೂರ್ಯಶ್ಚ ಸಾಂಪ್ರತಮ್ ।
ಯಥಾರ್ಥನಾಮಾ ಸುವ್ಯಕ್ತಂ ಹಿಮವಾನ್ ಹಿಮವಾನ್ ಗಿರಿಃ ॥೯॥

ಸ್ವಾಭಾವಿಕವಾಗಿ ಶೀತಲಸ್ಪರ್ಶದ ಹಿಮವಂತನೀಗ ಸೂರ್ಯ (ದಕ್ಷಿಣದಿಕ್ಕಿಗೆ) ದೂರಹೋದದ್ದರಿಂದ ಇನ್ನಷ್ಟು ಹಿಮಶೀತಲನಾಗಿ 'ಹಿಮವಂತ' ಎಂಬ ಹೆಸರು ಯಥಾರ್ಥವಾಗಿದೆ.

ಅತ್ಯಂತಸುಖಸಂಚಾರಾ ಮಧ್ಯಾಹ್ನೇ ಸ್ಪರ್ಶತಃ ಸುಖಾಃ ।
ದಿವಸಾಃ ಸುಭಗಾದಿತ್ಯಾಶ್ಛಾಯಾಸಲಿಲದುರ್ಭಗಾಃ ॥೧೦॥

ಈ ಋತುವಿನಲ್ಲಿ ಮಧ್ಯಾಹ್ನದಲ್ಲಿ ಸೂರ್ಯನ ಎಳೆಬಿಸಿಲು ಬಿದ್ದಾಗ ಸಂಚಾರ ಸುಖಮಯವಾಗುತ್ತದೆ. ಸೂರ್ಯ ಸುಸೇವ್ಯನಾಗುತ್ತಾನೆ. ಬೇರೆ ಸಮಯದಲ್ಲಿ ಸುಸೇವ್ಯಗಳಾಗಿದ್ದ ನೆರಳು ನೀರು ಶೈತ್ಯದಿಂದ ಈಗ ಸೇವ್ಯವಾಗುವುದಿಲ್ಲ.

ಮೃದುಸೂರ್ಯಾಃ ಸನೀಹಾರಾಃ ಪಟುಶೀತಾಃ ಸಮಾರುತಾಃ ।
ಶೂನ್ಯಾರಣ್ಯಾ ಹಿಮಧ್ವಸ್ತಾ ದಿವಸಾ ಭಾಂತಿ ಸಾಂಪ್ರತಮ್ ॥೧೧॥

ಈ ಋತುವಿನ ದಿನಗಳಲ್ಲಿ ಸೂರ್ಯ ಬಿಸಿಲಿನ ಸ್ಪರ್ಶ ಕೋಮಲವಾಗಿರುತ್ತದೆ. ಹಗಲು ಹಿಮಾವೃತವಾಗಿರುತ್ತದೆ. ಪ್ರಬಲ ಚಳಿಯಿರುತ್ತದೆ. ತಂಗಾಳಿಯು ಬೀಸು-ತ್ತಿರುತ್ತದೆ. ಹಿಮದಿಂದ ಎಲೆಗಳು ಉದುರಿಹೋಗಿ ಅರಣ್ಯಗಳು ಶೂನ್ಯವಾಗುತ್ತವೆ.

ನಿವೃತ್ತಾಕಾಶಶಯನಾಃ ಪುಷ್ಯನೀತಾ ಹಿಮಾರುಣಾಃ ।
ಶೀತಾ ವೃದ್ಧತರಾ ಯಾಮಾಸ್ತ್ರಿಯಾಮಾ ಯಾಂತಿ ಸಾಂಪ್ರತಮ್॥೧೨॥

ಈಗ ಆವರಣವಿಲ್ಲದ ಬಯಲಿನಲ್ಲಿ ಯಾರೂ ಮಲಗುವುದಿಲ್ಲ. ರಾತ್ರಿಗಳು ಥಂಡಿಯ ಜೊತೆ ಬಹಳ ಉದ್ದವಾಗಿರುತ್ತವೆ.

ರವಿಸಂಕ್ರಾಂತಸೌಭಾಗ್ಯಸ್ತುಷಾರಾವೃತಮಂಡಲಃ ।
ನಿಃಶ್ವಾಸಾಂಧ ಇವಾದರ್ಶಶ್ಚಂದ್ರಮಾ ನ ಪ್ರಕಾಶತೇ ॥೧೩॥

ಚಂದ್ರ ತನ್ನ ಸೌಭಾಗ್ಯವನ್ನು ಸೂರ್ಯನಿಗೆ ಕೊಟ್ಟುಬಿಡುತ್ತಾನೆ. ಹಿಮದಿಂದ ಮಂಡಲ ಆಚ್ಛಾದಿತವಾಗಿ ಚಂದ್ರ ಶೋಭಿಸುವುದಿಲ್ಲ. ಉಸುರಿನಿಂದ ಮುಸುಕಾದ ಕನ್ನಡಿಯಂತೆ.

ಜ್ಯೋತ್ಸ್ನಾ ತುಷಾರಮಲಿನಾ ಪೌರ್ಣಮಾಸ್ಯಾಂ ನ ರಾಜತೇ ।
ಸೀತೇವ ಚಾತಪಶ್ಯಾಮಾ ಲಕ್ಷ್ಯತೇ ನ ತು ಶೋಭತೇ ॥೧೪॥

ಹುಣ್ಣಿಮೆಯ ಬೆಳದಿಂಗಳು ಮಂಜಿನ ಹನಿಗಳಿಂದ ಶೋಭಿಸುವುದಿಲ್ಲ. ಬಿಸಿಲಿನಿಂದ ಕಪ್ಪಾದ ಸೀತೆಯಂತೆ ಕಾಣುತ್ತದೆ. ಆದರೆ ಸೀತೆಯಂತೆ ಶೋಭಿಸು-ವುದಿಲ್ಲ!

ಪ್ರಕೃತ್ಯಾ ಶೀತಲಸ್ಪರ್ಶೋ ಹಿಮವಿದ್ಧಶ್ಚ ಸಾಂಪ್ರತಮ್ ।
ಪ್ರವಾತಿ ಪಶ್ಚಿಮೋ ವಾಯುಃ ಕಾಲೇ ದ್ವಿಗುಣಶೀತಲಃ ॥೧೫॥

ಸ್ವಾಭಾವಿಕವಾಗಿ ತಂಪಾಗಿರುವ ಮುಂಜಾವಿನ ಗಾಳಿ ಈಗಂತೂ ಹಿಮದ ಹೊಡೆತದಿಂದ ಎರಡುಪಟ್ಟು ಥಂಡಿಯಾಗಿ ಬೀಸುತ್ತಿದೆ.

ಬಾಷ್ಪಚ್ಛನ್ನಾನ್ಯರಣ್ಯಾನಿ ಯವಗೋಧೂಮವಂತಿ ಚ ।
ಶೋಭಂತೋಽಭ್ಯುದಿತೇ ಸೂರ್ಯೇ ನದದ್ಭಿಃ ಕ್ರೌಂಚಸಾರಸೈಃ ॥೧೬॥

ಯವ–ಗೋಧಿಯ ಹೊಲಗಳಿಂದ ಕೂಡಿದ ಅರಣ್ಯ ಮಂಜಿನ ಮುಸುಕು ಹೊದ್ದಿದೆ. ಕ್ರೌಂಚ ಹಾಗು ಸಾರಸಪಕ್ಷಿಗಳ ಕಲರವ ತುಂಬಿದೆ. ಸೂರ್ಯನುದಿಸಲು ಈ ಕಾಡು ಕಳೆಗೊಳ್ಳುತ್ತದೆ.

ಖರ್ಜೂರಪುಷ್ಪಾಕೃತಿಭಿಃ ಶಿರೋಭಿಃ ಪೂರ್ಣತಂಡುಲೈಃ ।
ಶೋಭಂತೇ ಕಿಂಚಿದಾನಮ್ರಾಃ ಶಾಲಯಃ ಕನಕಪ್ರಭಾಃ ॥೧೭॥

ಖರ್ಜೂರಪುಷ್ಪದ ಆಕೃತಿಯ ಅಕ್ಕಿಯ ಕಾಳುಗಳಿಂದ ತುಂಬಿದ ಹೊನ್ನ ಬಣ್ಣದ ಭತ್ತದ ತೆನೆಗಳನ್ನು ತಲೆಯಲ್ಲಿ ಹೊತ್ತು ಅದರ ಭಾರದಿಂದ ಬಾಗಿದ ಭತ್ತದ ಸಸಿಗಳು ಸುಂದರವಾಗಿ ಶೋಭಿಸುತ್ತಿವೆ.

ಮಯೂಖೈರುಪಸರ್ಪದ್ಭಿರ್ಹಿಮನೀಹಾರಸಂವೃತೈಃ ।
ದೂರಮಭ್ಯುದಿತಃ ಸೂರ್ಯಃ ಶಶಾಂಕ ಇವ ಲಕ್ಷ್ಯತೇ ॥೧೮॥

ಮಂಜು ಮುಸುಕಿದ ಕಿರಣಗಳನ್ನು ಚೆಲ್ಲುತ್ತ ದೂರದಲ್ಲಿ ಉದಯಿಸುವ ಸೂರ್ಯ ಚಂದಿರನಂತೆ ಕಾಣುತ್ತಿದ್ದಾನೆ.

ಅಗ್ರಾಹ್ಯವೀರ್ಯಃ ಪೂರ್ವಾಹ್ಣೇ ಮಧ್ಯಾಹ್ನೇ ಸ್ಪರ್ಶತಃ ಸುಖಃ ।
ಸಂರಕ್ತಃ ಕಿಂಚಿದಾಪಾಂಡುರಾತಪಃ ಶೋಭತೇ ಕ್ಷಿತೌ ॥೧೯॥

ಸೂರ್ಯನ ಬಿಸಿಲಿನ ಪರಾಕ್ರಮ ಪೂರ್ವಾಹ್ಣದಲ್ಲಿ ಅಷ್ಟು ತೋರುವುದಿಲ್ಲ. ಮಧ್ಯಾಹ್ನ ಬಿಸಿಲಿನ ಸ್ಪರ್ಶ ಸುಖಕರವಾಗಿರುತ್ತದೆ. ಹೆಚ್ಚು ಕೆಂಪು ಸ್ವಲ್ಪ ಬಿಳಿ ಬಣ್ಣದ ಬಿಸಿಲು ನೆಲದಲ್ಲಿ ಹರಡಿ ಶೋಭಿಸುತ್ತಿದೆ.

ಅವಶ್ಯಾಯನಿಪಾತೇನ ಕಿಂಚಿತ್ಪ್ಲಕ್ಷಿನ್ನಶಾದ್ವಲಾ ।
ವನಾನಾಂ ಶೋಭತೇ ಭೂಮಿರ್ನಿರ್ವಿಷ್ಟತರುಣಾತಪಾ ॥೨೦॥

ಮಂಜಿನ ಹನಿಗಳು ಬಿದ್ದು ಇಲ್ಲಿನ ಹುಲ್ಲುಗಾವಲು ಸ್ವಲ್ಪ ಒದ್ದೆಯಾಗಿದೆ. ಕಾಡುಗಳ ನೆಲ ಸೂರ್ಯನ ಎಳೆಬಿಸಿಲಿನಿಂದ ಕಂಗೊಳಿಸುತಿದೆ.

ಸ್ಪೃಶಂಸ್ತು ವಿಪುಲಂ ಶೀತಮುದಕಂ ದ್ವಿರದಃ ಸುಖಮ್ ।
ಅತ್ಯಂತತೃಷಿತೋ ವನ್ಯಃ ಪ್ರತಿಸಂಹರತೇ ಕರಮ್ ॥೨೧॥

ತುಂಬ ಬಾಯಾರಿದ ಕಾಡಾನೆ ಸುಖಕರವಾದ ತುಂಬ ಶೀತಲವಾದ ನೀರನ್ನು ಮುಟ್ಟುತ್ತಲೆ ತನ್ನ ಸೊಂಡಿಲನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದೆ!

ಏತೇ ಹಿ ಸಮುಪಾಸೀನಾ ವಿಹಗಾ ಜಲಚಾರಿಣಃ ।
ನಾವಗಾಹಂತಿ ಸಲಿಲಮಪ್ರಗಲ್ಭಾ ಇವಾಹವಮ್ ॥೨೨॥

ಈ ಹಕ್ಕಿಗಳು ತೀರದಲ್ಲಿ ಕುಳಿತಿವೆಯೇ ಹೊರತು ನೀರಿನಲ್ಲಿ ಮುಳುಗುತ್ತಿಲ್ಲ–ಥಂಡಿಗೆ ಹೆದರಿ–ಹೆದರುವ ಹೇಡಿ ರಣರಂಗವನ್ನು ಪ್ರವೇಶ ಮಾಡದಿರುವಂತೆ!

ಅವಶ್ಯಾಯತಮೋನದ್ಧಾ ನೀಹಾರತಮಸಾ ವೃತಾಃ ।
ಪ್ರಸುಪ್ತಾ ಇವ ಲಕ್ಷ್ಯಂತೇ ವಿಪುಷ್ಪಾ ವನರಾಜಯಃ ॥೨೩॥

ರಾತ್ರಿಯ ಕತ್ತಲೆಯೊಂದಿಗೆ ಹಿಮಬಿಂದುಪಾತ. ಮುಂಜಾನೆ ಮಂಜಿನ ಮುಸುಕಿನ ಕತ್ತಲೆ. ಅರಳುಹೂವುಗಳಿಲ್ಲದ ಈ ವನರಾಜಿಗಳು ಚೆನ್ನಾಗಿ ಮಲಗಿರುವಂತೆ ಕಾಣುತ್ತಿವೆ.

ಬಾಷ್ಪಸಂಛನ್ನಸಲಿಲಾ ರುತವಿಜ್ಞೇಯಸಾರಸಾಃ ।
ಹಿಮಾರ್ದ್ರವಾಲುಕೈಸ್ತೀರೈಃ ಸರಿತೋ ಭಾಂತಿ ಸಾಂಪ್ರತಮ್ ॥೨೪॥

ನದಿಗಳ ನೀರಮೇಲೆ ಮಂಜಿನ ತೆರೆ. ಕಲರವದಿಂದ ಮಾತ್ರ ಸಾರಸಪಕ್ಷಿಗಳ ಇರವು ತಿಳಿಯುತ್ತದೆ. ತೀರದ ಮರಳುಗಳೆಲ್ಲ, ಬಿದ್ದ ಹಿಮಗಳಿಂದ ಒದ್ದೆಯಾಗಿವೆ.

ತುಷಾರಪತನಾಚ್ಚೈವ ಮೃದುತ್ವಾದ್ಭಾಸ್ಕರಸ್ಯ ಚ ।
ಶೈತ್ಯಾದಗಾಗ್ರಸ್ಥಮಪಿ ಪ್ರಾಯೇಣ ರಸವಜ್ಜಲಮ್ ॥೨೫॥

ಹಿಮಪಾತದಿಂದ, ಸೂರ್ಯನೂ ಮೃದುವಾಗಿರುವುದರಿಂದಾಗಿ ಪರ್ವತದ ತುದಿಯಲ್ಲಿರುವ ನೀರೂ ರಸವತ್ತಾಗಿದೆ!

ಜರಾಜರ್ಜರಿತೈಃ ಪದ್ಮೈಃ ಶೀರ್ಣಕೇಸರಕರ್ಣಿಕೈಃ ।
ನಾಲಶೇಷೈರ್ಹಿಮಧ್ವಸ್ತೈರ್ನ ಭಾಂತಿ ಕಮಲಾಕರಾಃ ॥೨೬॥

ತಾವರೆಯ ಕೊಳಗಳು ಶೋಭಿಸುತ್ತಿಲ್ಲ; ಹೂವುಗಳು ಜರಾಜರ್ಝರಿತವಾಗಿರುವುದರಿಂದ, ಹೂವಿನ ಪರಾಗದೆಸಳುಗಳು ಉದುರಿ ಹೋಗಿರುವುದ ರಿಂದ, ಹಿಮಪಾತದಿಂದ ಹೂವುಗಳು ಅಳಿದು ನಾಳಗಳು ಮಾತ್ರ ಉಳಿದಿರುವುದ ರಿಂದ.

ಅಸ್ಮಿಂಸ್ತು ಪುರುಷವ್ಯಾಘ್ರಃ ಕಾಲೇ ದುಃಖಸಮನ್ವಿತಃ ।
ತಪಶ್ಚರತಿ ಧರ್ಮಾತ್ಮಾ ತ್ವದ್ಭಕ್ತ್ಯಾ ಭರತಃ ಪುರೇ ॥೨೭॥

ಈ ಚಳಿಗಾಲದಲ್ಲಿ ಪುರುಷಶ್ರೇಷ್ಠನಾದ ಧರ್ಮಾತ್ಮಾ ಭರತನು ದುಃಖದಿಂದ ಕೂಡಿದವನಾಗಿ ನಿನ್ನಲ್ಲಿರುವ ಭಕ್ತಿಯಿಂದ ನಂದಿಗ್ರಾಮದಲ್ಲಿ ತಪಸ್ಸು ಮಾಡುತ್ತಿರುತ್ತಾನೆ.

ಪುರುಷವ್ಯಾಘ್ರ–ಪಾಠಾಂತರ

ತ್ಯಕ್ತ್ವಾ ರಾಜ್ಯಂ ಚ ಮಾನಂ ಚ ಭೋಗಾಂಶ್ಚ ವಿವಿಧಾನ್ ಬಹೂನ್ ।
ತಪಸ್ವೀ ನಿಯತಾಹಾರಃ ಶೇತೇ ಶೀತೇ ಮಹೀತಲೇ ॥೨೮॥

ರಾಜ್ಯವನ್ನು, ಅಭಿಮಾನವನ್ನು, ಬಗೆಬಗೆಯ ಬಹುಭೋಗಗಳನ್ನು ಬಿಟ್ಟು ತಪಸ್ವಿಯಾಗಿ ನಿಯತಾಹಾರನಾಗಿ ಥಂಡಿಯ ಬರೇ ನೆಲದ ಮೇಲೆ ಮಲಗಿರುತ್ತಾನೆ.

ಸೋಽಪಿ ವೇಲಾಮಿಮಾಂ ನೂನಮಭಿಷೇಕಾರ್ಥಮುದ್ಯತಃ ।
ವೃತಃ ಪ್ರಕೃತಿಭಿರ್ನಿತ್ಯಂ ಪ್ರಯಾತಿ ಸರಯೂಂ ನದೀಮ್ ॥೨೯॥

ಆ ಭರತನೂ ಕೂಡ ಇದೇ ಸಮಯದಲ್ಲಿ ಪ್ರಜೆಗಳಿಂದ ಕೂಡಿಕೊಂಡು ನಿತ್ಯದಲ್ಲಿ ಸ್ನಾನಕ್ಕಾಗಿ ಸರಯೂ ನದಿಗೆ ಹೊರಟಿರುತ್ತಾನೆ.

ಅತ್ಯಂತಸುಖಸಂವೃದ್ಧಃ ಸುಕುಮಾರಃ ಸುಖೋಚಿತಃ ।
ಕಥಂ ನ್ವಪರರಾತ್ರೇಷು ಸರಯೂಮವಗಾಹತೇ ॥೩೦॥

ಅತ್ಯಂತ ಸುಖದಲ್ಲಿ ಬೆಳೆದಿರುವ, ಸುಖಪಡಲು ಅರ್ಹನಾದ ಸುಕುಮಾರ ಭರತನು ಅಪರರಾತ್ರಿಯಲ್ಲಿ ಹೇಗೆ ಸರಯುವಿನಲ್ಲಿ ಮುಳುಗುವನೋ?

ಹಿಮಾರ್ದಿತಃ-ಪಠಾಂತರ.

ಪದ್ಮಪತ್ರೇಕ್ಷಣೋ ವೀರಃ ಶ್ಯಾಮೋ ನಿರುದರೋ ಮಹಾನ್ ।
ಧರ್ಮಜ್ಞಃ ಸತ್ಯವಾದಿ ಚ ಹ್ರೀನಿಷೇಧೋ ಜಿತೇಂದ್ರಿಯಃ ॥೩೧॥

ಪ್ರಿಯಾಭಿಭಾಷೀ ಮಧುರೋ ದೀರ್ಘಬಾಹುರರಿಂದಮಃ ।
ಸಂತ್ಯಜ್ಯ ವಿವಿಧಾನ್ ಭೋಗಾನಾರ್ಯಂ ಸರ್ವಾತ್ಮನಾ ಶ್ರಿತಃ ॥೩೨॥

ತಾವರೆಗಣ್ಣಿನವನು. ವೀರನು. ಸುಂದರನು. ತೆಳುವಾದ ಉದರದವನು. ಮಹಾನ್ ಧರ್ಮಜ್ಞ. ಸತ್ಯವಾದಿ. ಅಧರ್ಮದಲ್ಲಿ ಸಂಕೋಚಪಡುವವನು. ಜಿತೇಂದ್ರಿಯನು. ಪ್ರಿಯವಾಗಿ ಮಾತನಾಡುವವನು. ಮಧುರಸ್ವಭಾವದವನು. ನೀಳತೋಳಿನವನು. ಶತ್ರುದಮನನು ಇಂಥ ಭರತ ಎಲ್ಲ ಭೋಗಗಳನ್ನು ತ್ಯಾಗಮಾಡಿ ಹಿರಿಯಣ್ಣನನ್ನು ಸರ್ವಾತ್ಮನಾ ಆಶ್ರಯಿಸಿ ನಡೆಯುವನು.

ಜಿತಃ ಸ್ವರ್ಗಸ್ತವ ಭ್ರಾತ್ರಾ ಭರತೇನ ಮಹಾತ್ಮನಾ ।
ವನಸ್ಥಮಪಿ ತಾಪಸ್ಯೇ ಯಸ್ತ್ವಾಮನುವಿಧೀಯತೇ ॥೩೩॥

ಮಹಾತ್ಮ ಭರತ ಸ್ವರ್ಗವನ್ನೆ ಗೆದ್ದಿದ್ದಾನೆ–ವಶ ಮಾಡಿಕೊಂಡಿದ್ದಾನೆ. ಏಕೆಂದರೆ ನೀನು ಕಾಡಿನಲ್ಲಿದ್ದರೂ ತಾನೂ ತಪಸ್ಸು ಮಾಡುತ್ತ ನಿನ್ನನ್ನೆ ಅನುಸರಿಸಿದ್ದಾನೆ.

ನ ಪಿತ್ರ್ಯಮನುವರ್ತಂತೇ ಮಾತೃಕಂ ದ್ವಿಪದಾ ಇತಿ ।
ಖ್ಯಾತೋ ಲೋಕಪ್ರಮಾದೋಽಯಂ ಭರತೇನಾನ್ಯಥಾಕೃತಃ ॥೩೪॥

'ಮನುಷ್ಯರು ತಂದೆಯ ಸ್ವಭಾವವನ್ನು ಅನುಸರಿಸುವುದಿಲ್ಲ. ತಾಯಿಯ ಸ್ವಭಾವವನ್ನು ಅನುಸರಿಸುತ್ತಾರೆ' ಎಂಬ ಲೋಕೋಕ್ತಿಯನ್ನು ಭರತ ವಿಪರೀತ ಗೊಳಿಸಿದ್ದಾನೆ—ತಾಯಿಯ ಸ್ವಭಾವವನ್ನು ಅನುಸರಿಸದೆ ತಂದೆಯ ಸ್ವಭಾವವನ್ನು ಅನುಸರಿಸಿದ್ದಾನೆ!

ಭರ್ತಾ ದಶರಥೋ ಯಸ್ಯಾಃ ಸಾಧುಶ್ಚ ಭರತಃ ಸುತಃ ।
ಕಥಂ ನು ಸಾಂಬಾ ಕೈಕೇಯೀ ತಾದೃಶೀ ಕ್ರೂರದರ್ಶಿನೀ ॥೩೫॥

ದಶರಥನಂತಹ ಗಂಡ, ಭರತನಂತಹ ಸಾಧು ಸುತನನ್ನು ಪಡೆದ ಆ ತಾಯಿ ಕೈಕೇಯೀ–ತಾನು ಮಾತ್ರ ಕ್ರೂರದೃಷ್ಟಿಯವಳು ಹೇಗಾದಳೊ?

ಇತ್ಯೇವಂ ಲಕ್ಷ್ಮಣೇ ವಾಕ್ಯಂ ಸ್ನೇಹಾದ್ಬ್ರುವತಿ ಧಾರ್ಮಿಕೇ ।
ಪರಿವಾದಂ ಜನನ್ಯಾಸ್ತಮಸಹನ್ ರಾಘವೋಽಬ್ರವೀತ್ ॥೩೬॥

ಧಾರ್ಮಿಕವಾದ ಲಕ್ಷ್ಮಣನು ಭರತನ ಮೇಲಿನ ಸ್ನೇಹದಿಂದ ಹೀಗೆ ಮಾತನಾಡುವಾಗ ತಾಯಿಯ ನಿಂದನೆಯನ್ನು ಸಹಿಸದೆ ಶ್ರೀರಾಮನು ಇಂತೆಂದನು.

ನ ತೇಽಂಬಾ ಮಧ್ಯಮಾ ತಾತ ಗರ್ಹಿತವ್ಯಾ ಕಥಂಚನ ।
ತಾಮೇವೇಕ್ಷ್ವಾಕುನಾಥಸ್ಯ ಭರತಸ್ಯ ಕಥಾಂ ಕುರು ॥೩೭॥

ಲಕ್ಷ್ಮಣ! ಕೈಕೆಯಿಯನ್ನು ಯಾವರೀತಿಯಿಂದಲೂ ನಿಂದಿಸಬೇಡ. ಬೇಕಾದರೆ ಇಕ್ಷ್ವಾಕುನಾಥ ಭರತನ ಕಥೆಯನ್ನು ಇನ್ನೂ ಹೇಳು.

ನಿಶ್ಚಿತಾಪಿ ಹಿ ಮೇ ಬುದ್ಧಿರ್ವನವಾಸೇ ದೃಢವ್ರತಾ ।
ಭರತಸ್ನೇಹಸಂತಪ್ತಾ ಬಾಲಿಶೀಕ್ರಿಯತೇ ಪುನಃ ॥೩೮॥

ದೃಢಸಂಕಲ್ಪದ ನನ್ನ ಬುದ್ಧಿ ವನವಾಸದ ವಿಷಯದಲ್ಲಿ ಗಟ್ಟಿಯಾಗಿದ್ದರೂ ಭರತನನ್ನು ನೆನೆದಾಗ ಅವನ ಮೇಲಿನ ಸ್ನೇಹದಿಂದ ಸಂತಪ್ತವಾದ ಬುದ್ಧಿ– ವನವಾಸ ಮುಗಿಯದಿದ್ದರೂ ಹೋಗಿ ಭರತನನ್ನು ಕಂಡುಬಿಡೋಣ ಎಂದು ಬಾಲಿಶ–ವಾಗುತ್ತದೆ.

ಸಂಸ್ಮರಾಮ್ಯಸ್ಯ ವಾಕ್ಯಾನಿ ಪ್ರಿಯಾಣಿ ಮಧುರಾಣಿ ಚ ।
ಹೃದ್ಯಾನ್ಯಮೃತಕಲ್ಪಾನಿ ಮನಃಪ್ರಹ್ಲಾದನಾನಿ ಚ ॥೩೯॥

ಭರತನಾಡಿದ ಪ್ರಿಯ ಮಧುರ ಹೃದ್ಯ ಅಮೃತಸದೃಶ ಮನಃಸಂತೋಷಕರ ಮಾತುಗಳನ್ನು ತುಂಬ ನೆನೆಯುತ್ತೇನೆ.

ಕದಾ ನ್ವಹಂ ಸಮೇಷ್ಯಾಮಿ ಭರತೇನ ಮಹಾತ್ಮನಾ ।
ಶತ್ರುಘ್ನೇನ ಚ ವೀರೇಣ ತ್ವಯಾ ಚ ರಘುನಂದನ ॥೪೦॥

ರಘುನಂದನ ಲಕ್ಷ್ಮಣ! ನಿನ್ನೊಂದಿಗೆ ಹೊರಟು ಯಾವಾಗ ಮಹಾತ್ಮ ಭರತನೊಂದಿಗೆ ವೀರಶತ್ರುಘ್ನನೊಂದಿಗೆ ಯಾವಾಗ ಸೇರುತ್ತೇನೆಯೊ?

ಇತ್ಯೇವಂ ವಿಲಪಂಸ್ತತ್ರ ಪ್ರಾಪ್ಯ ಗೋದಾವರೀಂ ನದೀಮ್ ।
ಚಕ್ರೇಽಭಿಷೇಕಂ ಕಾಕುತ್ಸ್ಥಃ ಸಾನುಜಃ ಸಹ ಸೀತಯಾ ॥೪೧॥

ಹೀಗೇ ವಿಲಾಪ ಮಾಡುತ್ತಾ ತಮ್ಮ ಹಾಗೂ ಸೀತೆಯೊಂದಿಗೆ ಗೋದಾವರಿ ನದಿಯನ್ನು ಸಮೀಪಿಸಿ ಸ್ನಾನ ಮಾಡಿದನು.

ತರ್ಪಯಿತ್ವಾಥ ಸಲಿಲೈಸ್ತೇ ಪಿತೄನ್ ದೈವತಾನಿ ಚ ।
ಸ್ತುವಂತಿ ಸ್ಮೋದಿತಂ ಸೂರ್ಯಂ ದೇವತಾಶ್ಚ ಸಮಾಹಿತಾಃ ॥೪೨॥

ಸ್ನಾನದ ಬಳಿಕ ಗೋದಾವರೀ ಜಲದಿಂದ ಪಿತೃಗಳನ್ನು ದೇವತೆಗಳನ್ನು ತರ್ಪಣದಿಂದ ಆದರಿಸಿ ಎದ್ದುನಿಂತು ಸೂರ್ಯನನ್ನು ಇತರ ದೇವತೆಗಳನ್ನು ಸ್ತೋತ್ರ ಮಾಡಿದರು.

ಕೃತಾಭಿಷೇಕಃ ಸ ರರಾಜ ರಾಮಃ ಸೀತಾದ್ವಿತೀಯಃ ಸಹ ಲಕ್ಷ್ಮಣೇನ ।
ಕೃತಾಭಿಷೇಕೋ ಗಿರಿರಾಜಪುತ್ರ್ಯಾ ರುದ್ರಃ ಸನಂದೀ ಭಗವಾನಿವೇಶಃ ॥

ಸ್ನಾನ ಪೂರೈಸಿದ ಸೀತಾಸಮೇತನಾದ ಶ್ರೀರಾಮ ಲಕ್ಷ್ಮಣನೊಂದಿಗೆ ವಿರಾಜಮಾನನಾದ–ಗಿರಿಜೆ ನಂದಿಯರೊಂದಿಗೆ, ಅಭಿಷೇಕ ಪೂರೈಸಿದ ಶಿವ ಶೋಭಿಸುವಂತೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹದಿನಾರನೇ ಸರ್ಗ ಮುಗಿಯಿತು.

❖

ಸಪ್ತದಶಃ ಸರ್ಗಃ

ಕಥಾಸಾರಾಂಶ– ಗೋದಾವರಿಯಲ್ಲಿ ಸ್ನಾನಮುಗಿಸಿ ರಾಮಲಕ್ಷ್ಮಣಸೀತೆಯರು ಆಶ್ರಮಕ್ಕೆ ಹಿಂತಿರುಗಿದರು. ರಾಮ–ಲಕ್ಷ್ಮಣರು ಪೂರ್ವಾಹ್ಣದ ಅನುಷ್ಠಾನಗಳನ್ನು ಪೂರೈಸಿದರು. ಅನೇಕ ಮಹರ್ಷಿಗಳು ಬಂದು ಶ್ರೀರಾಮನನ್ನು ಪೂಜಿಸಿದರು. ಶ್ರೀರಾಮ ಲಕ್ಷ್ಮಣನೊಂದಿಗೆ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದನು.

ಅದೇ ಸಮಯದಲ್ಲಿ ಶೂರ್ಪಣಖೆ ಅಲ್ಲಿಗೆ ಬಂದಳು. ರಾಮನ ಸೌಂದರ್ಯ ಅವಳ ಮನಸೂರೆಗೊಂಡಿತು. ಯಾರು ನೀವು? ಈ ರಾಕ್ಷಸರ ವನಕ್ಕೆ ಏಕೆ ಬಂದಿರಿ? ಎಂದು ಶ್ರೀರಾಮನನ್ನು ಕೇಳಿದಳು.

ಶ್ರೀರಾಮನು ತುಂಬ ಋಜುವಾಗಿಯೇ ಉತ್ತರಿಸಿದ— ದಶರಥನ ಪುತ್ರರು ನಾವು. ತಂದೆ ಹಾಗು ತಾಯಿ ಕೈಕೇಯಿಯ ಆದೇಶದಂತೆ ಕಾಡಿಗೆ ಬಂದಿದ್ದೇವೆ– ಎಂದು.

ರಾಮನ ಕುತೂಹಲದ ಪ್ರಶ್ನೆಗೆ ಶೂರ್ಪಣಖೆಯೂ ತನ್ನನ್ನು ಪರಿಚಯಿಸಿ–ಕೊಂಡಳು. ರಾವಣನ ತಂಗಿ ನಾನು. ಅತಿನಿದ್ರೆಯ ಕುಂಭಕರ್ಣ ವೀರ ರಾವಣ ನನ್ನ ಸಹೋದರರು. ಖರ–ದೂಷಣರೂ ನನ್ನವರೇ.

ಸುಂದರಿಯಾದ ನನ್ನನ್ನು ನಿನ್ನ ಹೆಂಡತಿಯಾಗಿ ಮಾಡಿಕೋ. ಈ ಸೀತೆಯನ್ನು ನಾನು ನುಂಗಿಬಿಡುತ್ತೇನೆ. ನಾವಿಬ್ಬರು ಆಗಸದಲ್ಲಿ ಹಾರುತ್ತ ಅನೇಕ ರಮ್ಯಪ್ರದೇಶ–ಗಳಲ್ಲಿ ವಿಹರಿಸೋಣ–ಎಂದಳು.

ರಾಮನ ಪ್ರತಿಯೊಂದು ಅಂಗವೂ ಪರಮಸುಂದರ. ಸುಲಕ್ಷಣಸಂಪನ್ನ. ಅದಕ್ಕೆ ವಿರುದ್ಧವಾಗಿ ಶೂಪರ್ಣಖೆಯ ಪ್ರತಿಯೊಂದು ಅಂಗಗಳೂ ವಿರೂಪ, ಅವಲಕ್ಷಣ. ಇಂಥ ಕುರೂಪದ ಸುಂದರಿ ಶೂರ್ಪಣಖೆಗೆ ಶ್ರೀಸುಂದರ ರಾಮನನ್ನು ವಿವಾಹವಾಗುವ ಬಯಕೆ!

❖

ಶೂಪರ್ಣಖಾಭಾವಾವಿಷ್ಕರಣಮ್

ಕೃತಾಭಿಷೇಕೋ ರಾಮಸ್ತು ಸೀತಾ ಸೌಮಿತ್ರೇರೇವ ಚ ।
ತಸ್ಮಾದ್ಗೋದಾವರೀತೀರಾತ್ತತೋ ಜಗ್ಮುಃ ಸ್ವಮಾಶ್ರಮಮ್ ॥೧॥

ಸ್ನಾನ ಪೂರೈಸಿದ ರಾಮ ಸೀತಾಲಕ್ಷ್ಮಣರು ಆ ಗೋದಾವರೀ ತೀರದಿಂದ ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

ಆಶ್ರಮಂ ತಮುಪಾಗಮ್ಯ ರಾಘವಃ ಸಹಲಕ್ಷ್ಮಣಃ ।
ಕೃತ್ವಾ ಪೌರ್ವಾಹ್ಣಿಕಂ ಕರ್ಮ ಪರ್ಣಶಾಲಾಮುಪಾಗಮತ್ ॥೨॥

ಆಶ್ರಮಕ್ಕೆ ಬಂದು ರಾಘವನು ಲಕ್ಷ್ಮಣನೊಂದಿಗೆ ಪೂರ್ವಾಹ್ಣಕಾಲದ ಅನುಷ್ಠಾನಗಳನ್ನು ಪೂರೈಸಿ ಪರ್ಣಶಾಲೆಗೆ ಹೋದನು.

ಉವಾಸ ಸುಖಿತಸ್ತತ್ರ ಪೂಜ್ಯಮಾನೋ ಮಹರ್ಷಿಭಿಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಚಕಾರ ವಿವಿಧಾಃ ಕಥಾಃ ॥೩॥

ಸುಖವಾಗಿ ವಾಸಮಾಡಿದ ಶ್ರೀರಾಮ ಮಹರ್ಷಿಗಳಿಂದ ಪೂಜಿತನಾದ. ಲಕ್ಷ್ಮಣನೊಂದಿಗೆ ನಾನಾ ಮಾತುಕತೆಗಳನ್ನು ನಡೆಸಿದ.

ಸ ರಾಮಃ ಪರ್ಣಶಾಲಾಯಾಮಾಸೀನಃ ಸಹ ಸೀತಯಾ ।
ವಿರರಾಜ ಮಹಾಬಾಹುಶ್ಚಿತ್ರಯಾ ಚಂದ್ರಮಾ ಇವ ॥೪॥

ಪರ್ಣಶಾಲೆಯಲ್ಲಿ ಸೀತೆಯ ಜೊತೆ ಕುಳಿತು ಮಹಾಬಾಹು ರಾಮ ಚಿತ್ರಾನಕ್ಷತ್ರದೊಂದಿಗೆ ಇರುವ ಚಂದ್ರನಂತೆ ಶೋಭಿಸುತ್ತಿದ್ದನು.

ತಥಾಸೀನಸ್ಯ ರಾಮಸ್ಯ ಕಥಾಸಂಸಕ್ತಚೇತಸಃ ।
ತಂ ದೇಶಂ ರಾಕ್ಷಸೀ ಕಾಚಿದಾಜಗಾಮ ಯದೃಚ್ಛಯಾ ॥೫॥

ಹಾಗೆ ಮಾತಾಡುತ್ತ ಶ್ರೀರಾಮ ಕುಳಿತಿರುವಾಗ ಆಕಸ್ಮಿಕವಾಗಿ ಆ ಪ್ರದೇಶಕ್ಕೆ ರಾಕ್ಷಸಿಯೊಬ್ಬಳು ಬಂದಳು.

ಸಾ ತು ಶೂರ್ಪಣಖಾ ನಾಮ ದಶಗ್ರೀವಸ್ಯ ರಕ್ಷಸಃ ।
ಭಗಿನೀ ರಾಮಮಾಸಾದ್ಯ ದದರ್ಶ ತ್ರಿದಶೋಪಮಮ್ ॥೬॥

ಅವಳು ರಕ್ಕಸ ರಾವಣನ ತಂಗಿ ಶೂರ್ಪಣಖಾ. ದೇವತೆಯಂತೆ ಇದ್ದ ರಾಮನ ಬಳಿ ಬಂದು ಅವನನ್ನು ಕಂಡಳು.

ಸಿಂಹೋರಸ್ಕಂ ಮಹಾಬಾಹುಂ ಪದ್ಮಪತ್ರನಿಭೇಕ್ಷಣಮ್ ।
ಆಜಾನುಬಾಹುಂ ದೀಪ್ತಾಸ್ಯಮತೀವ ಪ್ರಿಯದರ್ಶನಮ್ ॥೭॥

ಗಜವಿಕ್ರಾಂತಗಮನಂ ಜಟಾಮಂಡಲಧಾರಿಣಮ್ ।
ಸುಕುಮಾರಂ ಮಹಾಸತ್ತ್ವಂ ಪಾರ್ಥಿವವ್ಯಂಜನಾನ್ವಿತಮ್ ॥೮॥

ರಾಮಮಿಂದೀವರಶ್ಯಾಮಂ ಕಂದರ್ಪಸದೃಶಪ್ರಭಮ್ ।
ಬಭೂವೇಂದ್ರೋಪಮಂ ದೃಷ್ಟ್ವಾ ರಾಕ್ಷಸೀ ಕಾಮಮೋಹಿತಾ ॥೯॥

ಸಿಂಹದ ಉರಸ್ಸ್ಥಳದಂತೆ ಉರಸ್. ಮಹಾಬಾಹು. ತಾವರೆದಳದಂಥ ಕಣ್ಣು, ಮೊಣಗಂಟಿನವರೆಗೆ ಉದ್ದ ತೋಳುಗಳು. ಬೆಳಗುವ ಮುಖ. ಅವನನ್ನು ಕಾಣುವುದೇ ಪ್ರಿಯ. ಗಜವಿಕ್ರಮದ ನಡಿಗೆ. ಶಿರಸಿನಲ್ಲಿ ಜಟಾಮಂಡಲ. ಮಹಾ-ಬಲಶಾಲಿ. ಸುಕುಮಾರ. ರಾಜ ಲಕ್ಷಣ ಸಂಪನ್ನ. ನೀಲಕಮಲದ ಕಾಂತಿಯವ. ಮನ್ಮಥನಂಥ ಚೆಲುವು. ಇಂದ್ರನಂತೆ ಹೊಳೆವ ಶ್ರೀರಾಮನನ್ನು ನೋಡಿ ರಾಕ್ಷಸೀ ಕಾಮಮೋಹಿತಳಾದಳು.

ಸುಮುಖಂ ದುರ್ಮುಖೀ ರಾಮಂ ವೃತ್ತಮಧ್ಯಂ ಮಹೋದರೀ ।
ವಿಶಾಲಾಕ್ಷಂ ವಿರೂಪಾಕ್ಷೀ ಸುಕೇಶಂ ತಾಮ್ರಮೂರ್ಧಜಾ ॥೧೦॥

ಪ್ರೀತಿರೂಪಂ ವಿರೂಪಾ ಸಾ ಸುಸ್ವರಂ ಭೈರವಸ್ವರಾ ।
ತರುಣಂ ದಾರುಣಾ ವೃದ್ಧಾ ದಕ್ಷಿಣಂ ವಾಮಭಾಷಿಣೀ ॥೧೧॥

ನ್ಯಾಯವೃತ್ತಂ ಸುದುರ್ವೃತ್ತಾ ಪ್ರಿಯಮಪ್ರಿಯದರ್ಶನಾ ।
ಶರೀರಜಸಮಾವಿಷ್ಟಾ ರಾಕ್ಷಸೀ ವಾಕ್ಯಮಬ್ರವೀತ್ ॥೧೨॥

ಶ್ರೀರಾಮ ಸುಮುಖ. ಅವಳು ದುರ್ಮುಖೀ. ಇವನು ತೆಳುಹೊಟ್ಟೆಯವನು. ಅವಳು ಮಹೋದರೀ. ರಾಮ ವಿಶಾಲಾಕ್ಷ. ಅವಳು ವಿರೂಪಾಕ್ಷೀ. ಒಳ್ಳೆ ಕಪ್ಪಾದ ಕೇಶದವನು ಇವ. ಅವಳು ಕೆಂಜಡೆಯವಳು. ಇವನದು ಪ್ರೀತಿಹುಟ್ಟುವ ರೂಪ. ಅವಳು ವಿರೂಪ. ಇವನದು ಸುಸ್ವರ. ಅವಳದು ಭೈರವ ಸ್ವರ. ಇವನು ಸುಂದರ ತರುಣ ಹಾಗು ಸೌಮ್ಯ. ಅವಳು ದಾರುಣವೃದ್ಧೆ. ಇವನು ಋಜು ಮಾತಿನವ. ಅವಳು ವಕ್ರಭಾಷಿಣೀ. ಉತ್ತಮ ನಡೆಯವ ಇವನು. ಅವಳು ದುರ್ನಡೆಯವಳು. ನೋಡಲು ಪ್ರಿಯ ಇವನು. ಅವಳು ಅಪ್ರಿಯದರ್ಶನದವಳು. ಇಂಥ ಶ್ರೀರಾಮ-ನನ್ನು ಅಂಥ ರಾಕ್ಷಸಿಯು ಕಾಮಾವಿಷ್ಟಳಾಗಿ ಮಾತನಾಡಿದಳು.

ಜಟೀ ತಾಪಸರೂಪೇಣ ಸಭಾರ್ಯಃ ಶರಚಾಪಧೃತ್ ।
ಆಗತಸ್ತ್ವಮಿಮಂ ದೇಶಂ ಕಥಂ ರಾಕ್ಷಸಸೇವಿತಮ್ ।
ಕಿಮಾಗಮನಕೃತ್ಯಂ ತೇ ತತ್ತ್ವಮಾಖ್ಯಾತುಮರ್ಹಸಿ ॥೧೩॥

ಪತ್ನೀ ಸಮೇತನು, ಬಿಲ್ಲು ಬಾಣಗಳನ್ನು ಧರಿಸಿದವನು ಜಟಾಧಾರಿಯು ಆದ

ನೀನು ತಾಪಸರೂಪದಿಂದ ರಾಕ್ಷಸ ಸೇವಿತವಾದ ಈ ಪ್ರದೇಶಕ್ಕೆ ಏಕೆ ಬಂದೆ? ಬಂದ ಪ್ರಯೋಜನವೇನು? ಎಲ್ಲ ಸತ್ಯವನ್ನು ಹೇಳು.

ಏವಮುಕ್ತಸ್ತು ರಾಕ್ಷಸ್ಯಾ ಶೂರ್ಪಣಖ್ಯಾ ಪರಂತಪಃ ।
ಋಜುಬುದ್ಧಿತಯಾ ಸರ್ವಮಾಖ್ಯಾತುಮುಪಚಕ್ರಮೇ ॥೧೪॥

ಶೂರ್ಪಣಖಿ ರಾಕ್ಷಸಿಯಿಂದ ಹೀಗೆ ಹೇಳಿಸಿಕೊಂಡ ಶತ್ರುತಾಪನ ಶ್ರೀರಾಮ ಋಜುಬುದ್ಧಿಯವನಾದುದರಿಂದ ಎಲ್ಲವನ್ನು ಹೇಳಲುಪಕ್ರಮಿಸಿದನು.

ಅನೃತಂ ನ ಹಿ ರಾಮಸ್ಯ ಕದಾಚಿದಪಿ ಸಂಮತಮ್ ।
ವಿಶೇಷೇಣಾಶ್ರಮಸ್ಥಸ್ಯ ಸಮೀಪೇ ಸ್ತ್ರೀಜನಸ್ಯ ಚ ॥೧೫॥

ರಾಮನಿಗೆ ಸುಳ್ಳಾಡುವುದು ಎಂದೂ ಸಮ್ಮತವಲ್ಲ. ವಿಶೇಷವಾಗಿ ಆಶ್ರಮ ದಲ್ಲಿರುವಾಗ, ಮತ್ತೂ ಸ್ತ್ರೀಜನರ ಮುಂದೆ ಸುಳ್ಳಾಡುವುದು ಸರ್ವಥಾ ಸಮ್ಮತವಲ್ಲ.

ಆಸೀದ್ದಶರಥೋ ನಾಮ ರಾಜಾ ತ್ರಿದಶವಿಕ್ರಮಃ
ತಸ್ಯಾಹಮಗ್ರಜಃ ಪುತ್ರೋ ರಾಮೋ ನಾಮ ಜನೈಃ ಶ್ರುತಃ ॥೧೬॥

ಇಂದ್ರ ವಿಕ್ರಮನಾದ ದಶರಥ ಎಂದು ಪ್ರಸಿದ್ಧ ರಾಜರಿದ್ದರು. ಅವರ ಹಿರಿಯ ಮಗ ನಾನು. ರಾಮ ಎಂದು ಜನರಿಗೆ ಪ್ರಸಿದ್ಧನಾದವನು.

ಭ್ರಾತಾಯಂ ಲಕ್ಷ್ಮಣೋ ನಾಮ ಯವೀಯಾನ್ ಮಾಮನುವ್ರತಃ ॥೧೭

ಇವನು ನನ್ನನ್ನು ಅನುಸರಿಸಿಕೊಂಡಿರುವ ತಮ್ಮ ಲಕ್ಷ್ಮಣ.

ಇಯಂ ಭಾರ್ಯಾ ಚ ವೈದೇಹೀ ಮಮ ಸೀತೇತಿ ವಿಶ್ರುತಾ ।
ನಿಯೋಗಾತ್ತು ನರೇಂದ್ರಸ್ಯ ಪಿತುರ್ಮಾತುಶ್ಚ ಯಂತ್ರಿತಃ ॥೧೮॥

ಇವಳು ನನ್ನ ಹೆಂಡತಿ ವಿದೇಹ ರಾಜಕುಮಾರೀ ಸೀತೆ ಎಂದು ಪ್ರಸಿದ್ಧಳಾದವಳು. ರಾಜರಾದ ತಮ್ಮ ತಂದೆಯ ಹಾಗೂ ತಾಯಿ ಕೈಕೇಯಿಯ ಆದೇಶದಂತೆ ಕಟ್ಟುಬಿದ್ದು ಕಾಡಿಗೆ ಬಂದಿದ್ದೇವೆ.

ಧರ್ಮಾರ್ಥಂ ಧರ್ಮಕಾಂಕ್ಷೀ ಚ ವನಂ ವಸ್ತುಮಿಹಾಗತಃ ।
ತ್ವಾಂ ತು ವೇದಿತುಮಿಚ್ಛಾಮಿ ಕಥ್ಯತಾ ಕಾಸಿ ಕಸ್ಯ ವಾ ॥೧೯॥

ಪಿತೃವಾಕ್ಯ ಪರಿಪಾಲನಾ ಧರ್ಮವನ್ನು ಬಯಸಿ ತಪೋರೂಪ ಧರ್ಮಕ್ಕಾಗಿ

ಕಾಡಿನಲ್ಲಿ ವಾಸಿಸಲು ಬಯಸಿ ಬಂದವನು. ನಿನ್ನನ್ನು ತಿಳಿಯಲು ಬಯಸಿದ್ದೇನೆ ಯಾರು ನೀನು ಯಾವ ವಂಶಕ್ಕೆ ಸೇರಿದವಳು? ಹೇಳೋಣವಾಗಲಿ.

ನ ಹಿ ತಾವನ್ಮನೋಜ್ಞಾಂಗೀ ರಾಕ್ಷಸೀ ಪ್ರತಿಭಾಸಿ ಮೇ ।
ಇಹ ವಾ ಕಿಂ ನಿಮಿತ್ತಂ ತ್ವಮಾಗತಾ ಬ್ರೂಹಿ ತತ್ತ್ವತಃ ॥೨೦॥

ಸುಂದರ ಅವಯವದವಳಲ್ಲದ ನೀನು ರಾಕ್ಷಸೀ ಎಂದು ನನಗೆ ತೋರುತ್ತದೆ. ನೀನು ಇಲ್ಲಿಗೆ ಬಂದ ನಿಮಿತ್ತವೇನು? ಯಥಾರ್ಥವಾಗಿ ಹೇಳು.

ಸಾಬ್ರವೀದ್ವಚನಂ ಶ್ರುತ್ವಾ ರಾಕ್ಷಸೀ ಮದನಾರ್ದಿತಾ ।
ಶ್ರೂಯತಾಂ ರಾಮ ವಕ್ಷ್ಯಾಮಿ ತತ್ತ್ವಾರ್ಥಂ ವಚನಂ ಮಮ ॥೨೧॥

ರಾಮನ ಮಾತು ಕೇಳಿ ಮದನಾರ್ತಳಾದ ರಾಕ್ಷಸೀ ಹೇಳಿದಳು— ಕೇಳೋಣ–ವಾಗಲಿ ರಾಮ. ನನ್ನ ಸತ್ಯವಚನವನ್ನು.

ಅಹಂ ಶೂರ್ಪಣಖಾ ನಾಮ ರಾಕ್ಷಸೀ ಕಾಮರೂಪಿಣೀ ।
ಅರಣ್ಯಂ ವಿಚರಾಮೀದಮೇಕಾ ಸರ್ವಭಯಂಕರಾ ॥೨೨॥

ನಾನು ರಾಕ್ಷಸೀ—ಶೂರ್ಪಣಖಾ. ಬಯಸಿದ ರೂಪ ಪಡೆಯಬಲ್ಲವಳು. ಸರ್ವಭಯಂಕರಳಾಗಿ ಏಕಾಕಿನಿಯಾಗಿ ಈ ಅರಣ್ಯದಲ್ಲಿ ಅಲೆಯುತ್ತಿದ್ದೇನೆ.

ರಾವಣೋ ನಾಮ ಮೇ ಭ್ರಾತಾ ಬಲೀಯಾನ್ ರಾಕ್ಷಸೇಶ್ವರಃ ।
ವೀರೋ ವಿಶ್ರವಸಃ ಪುತ್ರೋ ಯದಿ ತೇ ಶ್ರೋತ್ರಮಾಗತಃ ॥೨೩॥

ರಾಕ್ಷಸೇಶ್ವರನಾದ ಬಲಶಾಲಿ ರಾವಣ–ವಿಶ್ರವಸ್ ಮುನಿಯ ವೀರಪುತ್ರ–ನನ್ನ ಅಣ್ಣ. ಅವನ ವಿಷಯ ನಿನ್ನ ಕಿವಿಗೂ ಬಿದ್ದಿರಬೇಕು.

ಪ್ರವೃದ್ಧನಿದ್ರಶ್ಚ ಸದಾ ಕುಂಭಕರ್ಣೋ ಮಹಾಬಲಃ ।
ವಿಭೀಷಣಸ್ತು ಧರ್ಮಾತ್ಮಾ ನ ತು ರಾಕ್ಷಸಚೇಷ್ಟಿತಃ ॥೨೪॥

ಮಹಾಬಲಶಾಲಿ, ಸದಾ ಹೆಚ್ಚು ನಿದ್ರೆ ಮಾಡುವ ಕುಂಭಕರ್ಣ ಮತ್ತೊಬ್ಬ ಅಣ್ಣ. ಮಗದೊಬ್ಬ ಧರ್ಮಾತ್ಮ ವಿಭೀಷಣ. ರಾಕ್ಷಸನಾದರೂ ರಾಕ್ಷಸರ ನಡೆಯವನಲ್ಲ ಅವನು.

ಪ್ರಖ್ಯಾತವೀರ್ಯೌ ಚ ರಣೇ ಭ್ರಾತರೌ ಖರದೂಷಣೌ ।

ತಾನಹಂ ಸಮತಿಕ್ರಾಂತಾ ರಾಮ ತ್ವಾಪೂರ್ವದರ್ಶನಾತ್ ।
ಸಮುಪೇತಾಸ್ಮಿ ಭಾವೇನ ಭರ್ತಾರಂ ಪುರುಷೋತ್ತಮಮ್ ॥೨೫॥

ರಣದಲ್ಲಿ ಪ್ರಖ್ಯಾತವೀರ್ಯರಾದ ಖರದೂಷಣರು ನನ್ನ ಸಹೋದರರು. ಅವರಿಗಿಂತ ಹೆಚ್ಚಿನ ಪರಾಕ್ರಮದವಳು ನಾನು. ಮೊದಲ ನೋಟದಲ್ಲಿಯೇ ಮನಸಾರೆ ಪುರುಷೋತ್ತಮನಾದ ನಿನ್ನನ್ನು ಪತಿಯನ್ನಾಗಿ ವರಿಸಿದ್ದೇನೆ.

ಅಹಂ ಪ್ರಭಾವಸಂಪನ್ನಾ ಸ್ವಚ್ಛಂದಬಲಗಾಮಿನೀ ।
ಚಿರಾಯ ಭವ ಮೇ ಭರ್ತಾ ಸೀತಯಾ ಕಿಂ ಕರಿಷ್ಯಸಿ ॥೨೬॥

ನಾನು ಅತಿತೇಜಸ್ಸಿನಿಂದ ತುಂಬಿದವಳು. ಸ್ವಾಧೀನಬಲದಿಂದಲೇ ಧೈರ್ಯ-ವಾಗಿರುವವಳು. ನನ್ನೊಂದಿಗೆ ಬಹುಕಾಲ ಗಂಡನಾಗಿರು. ಈ ಸೀತೆ ಏನು ಸುಖಕೊಟ್ಟಾಳು?

ವಿಕೃತಾ ಚ ವಿರೂಪಾ ಚ ನ ಚೇಯಂ ಸದೃಶೀ ತವ ।
ಅಹಮೇವಾನುರೂಪಾ ತೇ ಭಾರ್ಯಾರೂಪೇಣ ಪಶ್ಯ ಮಾಮ್ ॥೨೭

ವಿಕೃತಳೂ ವಿರೂಪಳೂ ಆದ ಈ ಸೀತೆ ನಿನಗೆ ಸಲ್ಲಲು ಯೋಗ್ಯಳಲ್ಲ. ನಾನೇ ನಿನಗೆ ಅನುರೂಪಳು. ಹೆಂಡತಿ ಎಂಬ ಭಾವದಿಂದ ನನ್ನ ನೋಡು.

ಇಮಾಂ ವಿರೂಪಾಮಸತೀಂ ಕರಾಲಾಂ ನಿರ್ಣತೋದರೀಮ್ ।
ಅನೇನ ತೇ ಸಹ ಭ್ರಾತ್ರಾ ಭಕ್ಷಯಿಷ್ಯಾಮಿ ಮಾನುಷೀಮ್ ॥೨೮॥

ವಿರೂಪಳು ಭಯಂಕರಳು ಒಳಹೋದ ಬಡಉದರದವಳು. ಹೆಂಡತಿ ಯಾಗಲು ಅನರ್ಹಳಾದ ಈ ಮಾನುಷೀ ಸೀತೆಯನ್ನು ನಿಮ್ಮ ತಮ್ಮನೊಂದಿಗೆ ತಿಂದುಬಿಡುತ್ತೇನೆ.

ತತಃ ಪರ್ವತಶೃಂಗಾಣಿ ವನಾನಿ ವಿವಿಧಾನಿ ಚ ।
ಪಶ್ಯನ್ ಸಹ ಮಯಾ ಕಾಂತ ದಂಡಕಾನ್ ವಿಚರಿಷ್ಯಸಿ ॥೨೯॥

ಇವರಿಬ್ಬರನ್ನು ತಿಂದ ಬಳಿಕ ಪರ್ವತಶಿಖರಗಳನ್ನು, ಬಗೆಬಗೆಯ ಕಾಡು ಗಳನ್ನು ನೋಡಿಕೊಂಡು ನನ್ನೊಂದಿಗೆ ದಂಡಕಾರಣ್ಯವನ್ನೆಲ್ಲ ಆಲೆಯುವಿಯಂತೆ.

ಇತ್ಯೇವಮುಕ್ತಃ ಕಾಕುತ್ಸ್ಥಃ ಪ್ರಹಸ್ಯ ಮದಿರೇಕ್ಷಣಾಮ್ ।
ಇದಂ ವಚನಮಾರೇಭೇ ವಕ್ತುಂ ವಾಕ್ಯವಿಶಾರದಃ ॥೩೦॥

ಹೀಗೆ ರಾಕ್ಷಸಿ ಹೇಳಿದಾಗ ಕಾಕುತ್ಸ್ಥ ರಾಮನು ನಗುತ್ತ ಮತ್ತೇರಿದ ಕಣ್ಣಿನವಳಾದ ರಕ್ಕಸಿಯನ್ನು ಕುರಿತು ಮಾತಿನಲ್ಲಿ ವಿಶಾರದನಾದ ಶ್ರೀರಾಮನು ಈ ಮಾತನಾಡಲು ಪ್ರಕ್ರಮಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹದಿನೇಳನೇ ಸರ್ಗ ಮುಗಿಯಿತು.

ಅಷ್ಟಾದಶಃ ಸರ್ಗಃ

ಕಥಾಸಾರಾಂಶ– ತನ್ನನ್ನು ಮದುವೆಯಾಗುವಂತೆ ಕೇಳಿಕೊಂಡ ಶೂರ್ಪಣಖೆ–ಯನ್ನು ಕುರಿತು ರಾಮ ಹೇಳಿದ—ನಾನು ವಿವಾಹಿತನಾಗಿದ್ದೇನೆ. ಈ ಸೀತೆ ನನ್ನ ಹೆಂಡತಿ. ನಿಮ್ಮಂಥ ಸ್ತ್ರೀಯರಿಗೆ ಸವತಿಯರಾಗುವುದು ಸರಿಯಲ್ಲ.

ಈ ಲಕ್ಷ್ಮಣ ನನ್ನ ತಮ್ಮ. ಹೆಂಡತಿ ಸುಖವನ್ನು ಅನುಭವಿಸಿ ಬಹಳ ಸಮಯ–ವಾಗಿದೆ. ನಿನಗೆ ಹೊಂದುವಂಥ ರೂಪವಂತ. ತರುಣ. ಇವನನ್ನು ಮದುವೆಯಾದರೆ ಸವತಿಯ ಕಾಟ ಇಲ್ಲ.

ಹೀಗೆ ರಾಮ ಹೇಳಿದ ಬಳಿಕ ಶೂರ್ಪಣಖೆ ಲಕ್ಷ್ಮಣನ ಬಳಿ ಬಂದು 'ನನ್ನನ್ನು ಮದುವೆಯಾಗು. ನಾವಿಬ್ಬರು ಗಿರಿಕಾನನಗಳಲ್ಲಿ ವಿಹರಿಸೋಣ' ಎಂದು ದುಂಬಾಲು ಬಿದ್ದಳು. ಲಕ್ಷ್ಮಣ ಹೇಳಿದ—ನಾನು ರಾಮನ ದಾಸ. ನನ್ನನ್ನು ಮದುವೆಯಾದರೆ ನೀನೂ ದಾಸಿಯಾಗುವಿ. ಇನ್ನೊಬ್ಬರ ದಾಸ=ಭೃತ್ಯನ ಮಡದಿಯಾಗುವುದು ನಿನ್ನ ಘನತೆಗೆ ಒಪ್ಪುವುದಿಲ್ಲ. ರಾಜಾ ರಾಮನ ಬಳಿ ಹೋಗು.

ಮತ್ತೆ ರಾಮನ ಬಳಿ ಬಂದು ಈ ವಿರೂಪ–ವೃದ್ಧ ಸೀತೆಯನ್ನು ಬಿಟ್ಟು ನನ್ನನ್ನು ಮದುವೆಯಾಗು ಎಂದು ಒತ್ತಾಯಿಸಿ ಸೀತೆಯನ್ನು ನುಂಗಲು ಧಾವಿಸಿದಳು.

ಆಗ ಶ್ರೀರಾಮ ಲಕ್ಷ್ಮಣನಿಗೆ—ಇಂಥವರೊಂದಿಗೆ ಪರಿಹಾಸ ಅಪಾಯಕಾರಿ. ಇವಳನ್ನು ದಂಡಿಸು ಎಂದು ಆದೇಶಿಸುತ್ತಾನೆ. ಲಕ್ಷ್ಮಣ ಕೂಡಲೆ ಖಡ್ಗದಿಂದ ಶೂರ್ಪಣಖಿಯ ಕಿವಿ ಮೂಗುಗಳನ್ನು ಕತ್ತರಿಸಿದನು.

ಅವಮಾನಗೊಂಡ ಶೂಪರ್ಣಖೆ ತನ್ನ ಸಹೋದರರಾದ ಖರದೂಷಣರ ಮುಂದೆ ಹೋಗಿ ಎಲ್ಲ ವೃತ್ತಾಂತವನ್ನು ಹೇಳುತ್ತಾಳೆ.

❖

ಶೂರ್ಪಣಖಾವಿರೂಪಣಮ್

ತತಃ ಶೂರ್ಪಣಖಾಂ ರಾಮಃ ಕಾಮಪಾಶಾವಪಾಶಿತಾಮ್ ।
ಸ್ವಚ್ಛಯಾ ಶ್ಲಕ್ಷ್ಣಯಾ ವಾಚಾ ಸ್ಮಿತಪೂರ್ವಮಥಾಬ್ರವೀತ್ ॥೧॥

'ಸ್ವೇಚ್ಛಯಾ' – ಪಾಠಾಂತರ.

ಅನಂತರ ಕಾಮಪಾಶನಿಬದ್ಧಳಾದ ಶೂಪರ್ಣಖೆಯನ್ನು ಕುರಿತು ಶ್ರೀರಾಮನು ಸ್ಪಷ್ಟವಾದ ಮಧುರವಾದ ಮಾತನ್ನು ಮುಗುಳ್ನಗುತ್ತ ಆಡಿದನು.

ಕೃತದಾರೋಽಸ್ಮಿ ಭವತಿ ಭಾರ್ಯೇಯಂ ದಯಿತಾ ಮಮ ।
ತ್ವದ್ವಿಧಾನಾಂ ತು ನಾರೀಣಾಂ ಸುದುಃಖಾ ಸಸಪತ್ನತಾ ॥೨॥

ನಾನು ಮದುವೆಯಾದವನು. ಇವಳು ನನ್ನ ಪ್ರಿಯ ಭಾರ್ಯೆ. ನಿನ್ನಂಥ ಹೆಣ್ಣಿಗೆ ಸವತಿಯ ಸಾಹಿತ್ಯ ದುಃಖಕರವಾದುದು.

ಅನುಜಸ್ತೇ ಽಪಿ ಮೇ ಭ್ರಾತಾ ಶೀಲವಾನ್ ಪ್ರಿಯದರ್ಶನಃ ।
ಶ್ರೀಮಾನಕೃತದಾರಶ್ಚ ಲಕ್ಷ್ಮಣೋ ನಾಮ ವೀರ್ಯವಾನ್ ॥೩॥

ಈ ನನ್ನ ತಮ್ಮ ಲಕ್ಷ್ಮಣ ಶೀಲವಂತ. ನೋಡಿದರೆ ಪ್ರಿಯವಾಗುವವನು. ಕಾಂತಿಮಂತ. ಜೊತೆಗೆ ಹೆಂಡತಿ ಇಲ್ಲದವನು. ವೀರ್ಯವಂತ.

ಅಪೂರ್ವೀ ಭಾರ್ಯಯಾ ಚಾರ್ಥೀ ತರುಣಃ ಪ್ರಿಯದರ್ಶನಃ ।
ಅನುರೂಪಶ್ಚ ತೇ ಭರ್ತಾ ರೂಪಸ್ಯಾಸ್ಯ ಭವಿಷ್ಯತಿ ॥೪॥

ಬಹಳ ದಿನದಿಂದ ಪತ್ನೀಸುಖದಿಂದ ವಂಚಿತನಾದವನು. ಮಡದಿ ಸುಖದ ಪ್ರಯೋಜನದವನು. ತರುಣ. ಪ್ರಿಯದರ್ಶನ. ನಿನ್ನ ರೂಪಕ್ಕೆ ಅನುರೂಪನಾಗುವನು.

ಏನಂ ಭಜ ವಿಶಾಲಾಕ್ಷಿ ಭರ್ತಾರಂ ಭ್ರಾತರಂ ಮಮ ।
ಅಸಪತ್ನಾ ವರಾರೋಹೇ ಮೇರುಮರ್ಕಪ್ರಭಾ ಯಥಾ ॥೫॥

ವಿಶಾಲಾಕ್ಷಿ! ಈ ನನ್ನ ತಮ್ಮನನ್ನು ಪತಿಯನ್ನಾಗಿ ಮಾಡಿಕೋ. ಸದ್ಯ ಸವತಿಯ ಕಾಟ ಇಲ್ಲ. ಸೂರ್ಯಪ್ರಭೆ ಮೇರುಪರ್ವತವನ್ನು ಹೊಂದಿದಂತೆ ಆಗುತ್ತದೆ.

ಇತಿ ರಾಮೇಣ ಸಾ ಪ್ರೋಕ್ತಾ ರಾಕ್ಷಸಿ ಕಾಮಮೋಹಿತಾ ।
ವಿಸೃಜ್ಯ ರಾಮಂ ಸಹಸಾ ತತೋ ಲಕ್ಷ್ಮಣಮಬ್ರವೀತ್ ॥೬॥

ಹೀಗೆ ರಾಮನಿಂದ ಹೇಳಲ್ಪಟ್ಟ ರಾಕ್ಷಸಿ ರಾಮನನ್ನು ಬಿಟ್ಟು ಕೂಡಲೆ ಕಾಮಮೋಹಿತಳಾಗಿ ಲಕ್ಷ್ಮಣನಿಗೆ ಹೇಳಿದಳು.

ಅಸ್ಯ ರೂಪಸ್ಯ ತೇ ಯುಕ್ತಾ ಭಾರ್ಯಾಹಂ ವರವರ್ಣಿನೀ ।
ಮಯಾ ಸಹ ಸುಖಂ ಸರ್ವಾನ್ ದಂಡಕಾನ್ ವಿಚರಿಷ್ಯಸಿ ॥೭॥

ನಿನ್ನ ರೂಪಕ್ಕೆ ನಾನು ಸುಂದರಿ ಭಾರ್ಯೆಯಾಗಲು ಯೋಗ್ಯಳು. ನನ್ನೊಂದಿಗೆ ಸುಖವಾಗಿ ದಂಡಕಾರಣ್ಯವನ್ನೆಲ್ಲ ಸಂಚರಿಸುವಿಯಂತೆ.

ಏವಮುಕ್ತಸ್ತು ಸೌಮಿತ್ರೀ ರಾಕ್ಷಸ್ಯಾ ವಾಕ್ಯಕೋವಿದಃ ।
ತತಃ ಶೂರ್ಪಣಖೀಂ ಸ್ಮಿತ್ವಾ ಲಕ್ಷ್ಮಣೋ ಯುಕ್ತಮಬ್ರವೀತ್ ॥೮॥

ರಾಕ್ಷಸಿ ಹೀಗೆ ಹೇಳಿದಾಗ ಜಾಣಮಾತುಗಾರನಾದ ಲಕ್ಷ್ಮಣ ಶೂರ್ಪಣಖಿಗೆ ನಕ್ಕು ಹೀಗೆ ಹೇಳಿದನು.

ಕಥಂ ದಾಸಸ್ಯ ಮೇ ದಾಸೀ ಭಾರ್ಯಾ ಭವಿತುಮಿಚ್ಛಸಿ ।
ಸೋಽಹಮಾರ್ಯೇಣ ಪರವಾನ್ ಭ್ರಾತ್ರಾ ಕಮಲವರ್ಣಿನಿ ॥೯॥

ಕಮಲದಂಥ ಸುಂದರಿ! ದಾಸನಾದ ನನ್ನ ಹೆಂಡತಿಯಾಗಿ ದಾಸಿಯಾಗಲು ಹೇಗೆ ಅರ್ಹಳು ನೀನು. ನಾನು ನನ್ನ ಅಣ್ಣ ರಾಮನ ಅಧೀನ.

ಸಮೃದ್ಧಾರ್ಥಸ್ಯ ಸಿದ್ಧಾರ್ಥಾ ಮುದಿತಾ ವರವರ್ಣಿನೀ ।
ಆರ್ಯಸ್ಯ ತ್ವಂ ವಿಶಾಲಾಕ್ಷಿ ಭಾರ್ಯಾ ಭವ ಯವೀಯಸೀ ॥೧೦॥

ಐಶ್ವರ್ಯಸಂಪನ್ನನಾದ ಪೂಜ್ಯ ಅಣ್ಣನ ಕಿರಿ ಹೆಂಡತಿಯಾಗಿ ಸಂಪನ್ನಳಾಗು. ಖುಷಿಯಾಗಿರು. ನಿರ್ಮಲ ಸುಂದರಿಯಾಗಿರು.

ಏನಾಂ ವಿರೂಪಾಮಸತೀಂ ಕರಾಲಾಂ ನಿರ್ಣತೋದರೀಮ್ ।
ಭಾರ್ಯಾಂ ವೃದ್ಧಾಂ ಪರಿತ್ಯಜ್ಯ ತ್ವಾಮೇವೈಷ ಭಜಿಷ್ಯತಿ ॥೧೧॥

ವಿರೂಪಳು ಕೆಟ್ಟವಳು ಭಯಂಕರವಾಗಿ ಬಡೋದರಿಯು ಮುದುಕಿಯು ಆದ ಹೆಂಡತಿಯಾದ ಸೀತೆಯನ್ನು ಬಿಟ್ಟು ಈ ರಾಮನು ನಿನ್ನನ್ನು ಸೇವಿಸುವನು.

ಕೋ ಹಿ ರೂಪಮಿದಂ ಶ್ರೇಷ್ಠಂ ಸಂತ್ಯಜ್ಯ ವರವರ್ಣಿನಿ ।
ಮಾನುಷೀಷು ವರಾರೋಹೇ ಕುರ್ಯಾದ್ಭಾವಂ ವಿಚಕ್ಷಣಃ ॥೧೨॥

ಸುಂದರಿ! ಇಂಥ ನಿನ್ನ ಸೌಂದರ್ಯವನ್ನು ಬಿಟ್ಟು ಯಾರು ತಾನೆ ಬುದ್ಧಿವಂತ ಮಾನುಷ ಹೆಣ್ಣಿನ ಮೇಲೆ ಪ್ರೀತಿಯನ್ನು ಮಾಡುತ್ತಾನೆ.

ಇತಿ ಸಾ ಲಕ್ಷ್ಮಣೇನೋಕ್ತಾ ಕರಾಲಾ ನಿರ್ಣತೋದರೀ ।
ಮನ್ಯತೇ ತದ್ವಚಸ್ತಥ್ಯಂ ಪರಿಹಾಸಾವಿಚಕ್ಷಣಾ ॥೧೩॥

ಹೀಗೆ ಲಕ್ಷ್ಮಣನು ಹೇಳಿದಾಗ ಪರಿಹಾಸವೆಂಬುದನ್ನು ಅರಿಯದ ದಡ್ಡಿ ಆ ಭಯಂಕರ ರಕ್ಕಸಿ ಲಕ್ಷ್ಮಣನ ಮಾತನ್ನು ಸತ್ಯವೆಂದೇ ತಿಳಿದಳು!

ಸಾ ರಾಮಂ ಪರ್ಣಶಾಲಾಯಾಮುಪವಿಷ್ಟಂ ಪರಂತಪಮ್ ।
ಸೀತಯಾ ಸಹ ದುರ್ಧರ್ಷಮಬ್ರವೀತ್ ಕಾಮಮೋಹಿತಾ ॥೧೪॥

ಆ ಶೂರ್ಪಣಖೆಯು ಪರ್ಣಶಾಲೆಯಲ್ಲಿ ಸೀತೆಯೊಂದಿಗೆ ಕುಳಿತಿದ್ದ ದುಧರ್ಷ ಶತ್ರುತಾಪದ ರಾಮನನ್ನು ಕುರಿತು ಕಾಮಮೋಹಿತಳಾಗಿ ಹೀಗೆಂದಳು.

ಏನಾಂ ವಿರೂಪಾಮಸತೀಂ ಕರಾಲಾಂ ನಿರ್ಣತೋದರೀಮ್ ।
ವೃದ್ಧಾಂ ಭಾರ್ಯಾಮವಷ್ಟಭ್ಯ ನ ಮಾಂ ತ್ವಂ ಬಹು ಮನ್ಯಸೇ ॥೧೫॥

ಅದ್ಯೇಮಾಂ ಭಕ್ಷಯಿಷ್ಯಾಮಿ ಪಶ್ಯತಸ್ತವ ಮಾನುಷೀಮ್ ।
ತ್ವಯಾ ಸಹ ಚರಿಷ್ಯಾಮಿ ನಿಃಸಪತ್ನಾ ಯಥಾಸುಖಮ್ ॥೧೬॥

ವಿರೂಪಳು ಒಳ್ಳೆಯವಳಲ್ಲದ ಭಯಂಕರಳೂ ಬಡಹೊಟ್ಟೆಯವಳು ಮುದುಕಿಯಾದ ಈ ಹೆಂಡತಿಯನ್ನು ನೆಚ್ಚಿಕೊಂಡು ನನ್ನನ್ನು ನೀನು ಆದರಿಸುತ್ತಿಲ್ಲ. ನಿನ್ನ ಕಣ್ಣೆದುರಿಗೇ ಈ ಮಾನುಷಪತ್ನಿಯನ್ನು ತಿಂದು ಬಿಡುತ್ತೇನೆ. ಸವತಿರಹಿತಳಾಗಿ ನಿನ್ನೊಂದಿಗೆ ಸುಖವಾಗಿ ಸಂಚರಿಸುವೆ.

ಇತ್ಯುಕ್ತ್ವಾ ಮೃಗಶಾವಾಕ್ಷೀಮಲಾತಸದೃಶೇಕ್ಷಣಾ ।
ಅಭ್ಯಧಾವತ್ ಸುಸಂಕ್ರುದ್ಧಾ ಮಹೋಲ್ಕಾ ರೋಹಿಣೀಮಿವ ॥೧೭॥

ಹೀಗೆ ಹೇಳಿ ಬೆಂಕಿಕಣ್ಣಿನವಳು ಅತ್ಯಂತ ಕೋಪಗೊಂಡವಳೂ ಆಗಿ ರಕ್ಕಸಿಯು ಜಿಂಕೆಕಣ್ಣಿನ ಸೀತೆಯ ಕಡೆ ನುಗ್ಗಿದಳು; ದೊಡ್ಡ ಉಲ್ಕೆಯು ರೋಹಿಣೀನಕ್ಷತ್ರದ ಮೇಲೆ ಬೀಳುವಂತೆ.

ತಾಂ ಮೃತ್ಯುಪಾಶಪ್ರತಿಮಾಮಾಪತಂತೀಂ ಮಹಾಬಲಃ ।
ನಿಗೃಹ್ಯ ರಾಮಃ ಕುಪಿತಸ್ತತೋ ಲಕ್ಷ್ಮಣಮಬ್ರವೀತ್ ॥೧೮॥

ಮೃತ್ಯುಪಾಶದಂತೆ ನುಗ್ಗಿ ಬರುತ್ತಿರುವ ರಾಕ್ಷಸಿಯನ್ನು ಮಹಾಬಲ ಶ್ರೀರಾಮನು ನಿಗ್ರಹಿಸಿ ಕೋಪಗೊಂಡು ಲಕ್ಷ್ಮಣನಿಗೆ ಹೇಳಿದನು.

ಕ್ರೂರೈರನಾರ್ಯೈಃ ಸೌಮಿತ್ರೇಃ ಪರಿಹಾಸಃ ಕಥಂಚನ ।
ನ ಕಾರ್ಯಃ ಪಶ್ಯ ವೈದೇಹೀಂ ಕಥಂಚಿತ್ ಸೌಮ್ಯ ಜೀವತೀಮ್ ॥೧೯

ಸೌಮಿತ್ರಿ ! ಕ್ರೂರಳು ಅನಾರ್ಯರು ಇವರೊಂದಿಗೆ ಸರ್ವಥಾ ತಮಾಷೆ ಮಾಡಬಾರದು. ಸೌಮ್ಯ ! ಪ್ರಯಾಸದಿಂದ ಬದುಕುಳಿದ ಸೀತೆಯನ್ನು ಗಮನಿಸು.

ಇಮಾಂ ವಿರೂಪಾಮಸತೀಮತಿಮತ್ತಾಂ ಮಹೋದರೀಮ್ ।
ರಾಕ್ಷಸೀಂ ಪುರುಷವ್ಯಾಘ್ರ ವಿರೂಪಯಿತುಮರ್ಹಸಿ ॥೨೦॥

ಪುರುಷವ್ಯಾಘ್ರನೇ! ವಿರೂಪಳು ದುಷ್ಟಳು ಅತಿಮತ್ತಳು ದೊಳ್ಳುಹೊಟ್ಟೆಯ ಈ ರಾಕ್ಷಸಿಯನ್ನು ವಿರೂಪಗೊಳಿಸಲು ಉಚಿತನಾಗಿರುವೆ.

ಇತ್ಯುಕ್ತೋ ಲಕ್ಷ್ಮಣಸ್ತಸ್ಯಾಃ ಕ್ರುದ್ಧೋ ರಾಮಸ್ಯ ಪಶ್ಯತಃ ।
ಉದ್ಧೃತ್ಯ ಖಡ್ಗಂ ಚಿಚ್ಛೇದ ಕರ್ಣನಾಸಂ ಮಹಾಬಲಃ ॥೨೧॥

ರಾಮನಿಂದ ಹೀಗೆ ಹೇಳಲ್ಪಟ್ಟವನಾದ ಮಹಾಬಲಿ ಲಕ್ಷ್ಮಣ ಕೂಡಲೆ ರಾಮನ ಬದಿಯಲ್ಲಿ ಖಡ್ಗ ಸೆಳೆದು ರಕ್ಕಸಿಯ ಕಿವಿ ಮೂಗುಗಳನ್ನು ಕತ್ತರಿಸಿಯೇಬಿಟ್ಟ.

ಪಶ್ಯಂತಃ । ಪಾಠಾಂತರ

ನಿಕೃತ್ತಕರ್ಣನಾಸಾ ತು ವಿಸ್ವರಂ ಸಾ ವಿನದ್ಯ ಚ ।
ಯಥಾಗತಂ ಪ್ರದುದ್ರಾವ ಘೋರಾ ಶೂರ್ಪಣಖಾ ವನಮ್ ॥೨೨॥

ಕತ್ತರಿಸಿದ ಕಿವಿಮೂಗಿನವಳಾಗಿ ವಿಕಾರಸ್ವರದಿಂದ ಬೊಬ್ಬೆ ಹಾಕುತ್ತಾ ಘೋರ ಶೂರ್ಪಣಖೆಯು ಬಂದ ಹಾಗೆ ಕಾಡಿಗೆ ಹಿಂತಿರುಗಿದಳು.

ಸಾ ವಿರೂಪಾ ಮಹಾಘೋರಾ ರಾಕ್ಷಸೀ ಶೋಣಿತೋಕ್ಷಿತಾ ।
ನನಾದ ವಿವಿಧಾನ್ನಾದಾನ್ ಯಥಾ ಪ್ರಾವೃಷಿ ತೋಯದಃ ॥೨೩॥

ರಕ್ತದಿಂದ ತೊಯ್ದಿರುವ ವಿರೂಪಳು ಮಹಾಘೋರಳು ಆದ ಆ ರಾಕ್ಷಸಿ ಮಳೆಗಾಲದ ಮೋಡದಂತೆ ಬಗೆ ಬಗೆಯಾಗಿ ಶಬ್ದಮಾಡುತ್ತ ಚೀತ್ಕಾರ ಮಾಡಿದಳು.

ಸಾ ವಿಕ್ಷರಂತೀ ರುಧಿರಂ ಬಹುಧಾ ಘೋರದರ್ಶನಾ ।
ಪ್ರಗೃಹ್ಯ ಬಾಹೂ ಗರ್ಜಂತೀ ಪ್ರವಿವೇಶ ಮಹಾವನಮ್ ॥೨೪॥

ತುಂಬ ರಕ್ತ ಸುರಿಸಿಕೊಂಡವಳಾಗಿ ಭಯಂಕರಳಾಗಿ ಕಾಣುತ್ತಿದ್ದ ಎರಡೂ ತೋಳೆತ್ತುಕೊಂಡು ಗರ್ಜಿಸುತ್ತ ಮಹಾವನವನ್ನು ಹೊಕ್ಕಳು.

ತತಸ್ತು ಸಾ ರಾಕ್ಷಸಸಂಘಸಂವೃತಂ
ಖರಂ ಜನಸ್ಥಾನಗತಂ ವಿರೂಪಿತಾ ।
ಉಪೇತ್ಯ ತಂ ಭ್ರಾತರಮುಗ್ರದರ್ಶನಂ
ಪಪಾತ ಭೂಮೌ ಗಗನಾದ್ಯಥಾಶನಿಃ ॥೨೫॥

ಬಳಿಕ ವಿರೂಪಗೊಂಡ ಅವಳು ರಾಕ್ಷಸ ಸಂಘದಿಂದ ತುಂಬಿರುವ ಜನಸ್ಥಾನದಲ್ಲಿರುವ ಅಣ್ಣ ಉಗ್ರದರ್ಶನ ಖರನ ಮುಂದೆ ಹೋಗಿ ನೆಲದ ಮೇಲೆ ಬಿದ್ದಳು; ಆಕಾಶದಿಂದ ಸಿಡಿಲು ಬೀಳುವಂತೆ.

ತತಃ ಸಭಾರ್ಯಂ ಭಯಮೋಹಮೂರ್ಚ್ಛಿತಾ
ಸಲಕ್ಷ್ಮಣಂ ರಾಘವಮಾಗತಂ ವನಮ್ ।
ವಿರೂಪಣಂ ಚಾತ್ಮನಿ ಶೋಣಿತೋಕ್ಷಿತಾ
ಶಶಂಸ ಸರ್ವಂ ಭಗಿನೀ ಖರಸ್ಯ ಸಾ ॥೨೬॥

ರಕ್ತದಿಂದ ತೋಯ್ದುವಳು ಭಯ–ಮೋಹದಿಂದ ಮೂರ್ಛಿತಳೂ ಆದ ಶೂರ್ಪಣಖೆ, 'ಕಾಡಿಗೆ ಸೀತಾಲಕ್ಷ್ಮಣ ಸಹಿತನಾಗಿ, ರಾಮ ಬಂದಿರುವುದನ್ನು ತನ್ನನ್ನು ವಿರೂಪಗೊಳಿಸುದುದನ್ನೂ ಖರನ ಮುಂದೆ ಉಸುರಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹದಿನೆಂಟನೇ ಸರ್ಗ ಮುಗಿಯಿತು.

❖

ಏಕೋನವಿಂಶಃ ಸರ್ಗಃ

ಕಥಾಸಾರಾಂಶ– ರಕ್ತಸೋರಿಸಿಕೊಂಡು ವಿರೂಪಳಾಗಿ ತನ್ನ ಬಳಿ ಬಿದ್ದ ಶೂರ್ಪಣಖೆಯನ್ನು ನೋಡಿ ಅವನ ಅಣ್ಣ ಖರನು ಕೋಪಗೊಂಡು ವಿಚಾರಿಸಿದ.

ತಂಗಿ! ನಿನಗೆ ಈ ವಿಕಾರವನ್ನು ಮಾಡಿದವರು ಯಾರು? ಇವರು ಸುಮ್ಮನೆ ಕುಳಿತಿದ್ದ ವಿಷಸರ್ಪವನ್ನು ಬೆರಳ ತುದಿಯಿಂದ ಕೀಟಲೆ ಮಾಡಿ ಕೆಣಗಿದಂತಾಗಿದೆ.

ತನ್ನ ಕೊರಳಿಗೆ ಕಾಲಪಾಶವನ್ನು ಸುತ್ತಿಕೊಂಡಿರುವುದನ್ನು ಮೋಹದಿಂದ ತಿಳಿಯದವನಂತೆ ನಿನ್ನನ್ನು ಹಿಂಸೆ ಮಾಡಿದನು.

ಪರಾಕ್ರಮಸಂಪನ್ನಳು ಕಾಮರೂಪಿಣಿಯೂ ಆದ ನಿನಗೆ ಈ ದುರವಸ್ಥೆ ಯನ್ನು ತಂದೊಡ್ಡಿದವರು ಯಾರು? ದೇವ ಗಂಧರ್ವ ಋಷಿ ಇಂಥ ಮಹಾತ್ಮರಲ್ಲಿ ಯಾರು?

ನನಗೆ ಅಪ್ರಿಯ ಮಾಡುವ ಅದಟು ಈ ಜಗತ್ತಿನಲ್ಲಿ ಯಾರಿಗೂ ಇಲ್ಲ. ನನ್ನ ಬಾಣಗಳಿಂದ ಅವನ ಪ್ರಾಣವನ್ನು ತೆಗೆಯುತ್ತೇನೆ. ನನ್ನಿಂದ ಹತನಾಗುವವನ ಬಿಸಿನೆತ್ತರು ಕುಡಿಯಲು ಈ ಪೃಥ್ವಿಗೆ ಬಯಕೆಯಾಗಿದೆ.

ಈ ಪಕ್ಷಿಗಳು ನಾನು ಕೊಲ್ಲುವ ವ್ಯಕ್ತಿಯ ಮಾಂಸವನ್ನು ಕಿತ್ತು ತಿನ್ನಲು ಹಾತೊರೆಯುತ್ತಿವೆ.

ತಂಗಿ ಸಾವರಿಸಿಕೊಂಡು ಹೇಳು. ಯಾರವರು?

ಶೂರ್ಪಣಖೆ ಎಚ್ಚರಗೊಂಡು ಹೇಳಿದಳು— ಸುಂದರ ತರುಣರು. ಫಲ-ಮೂಲಾಹಾರಿಗಳಾದ ಬ್ರಹ್ಮಚರ್ಯೆಯಿಂದಿರುವ ಬಲಶಾಲಿ ತಾಪಸರು. ದಶರಥನ ಮಕ್ಕಳು. ಅವರ ಜೊತೆ ಸುಂದರಿ ತರುಣಿಯೊಬ್ಬಳಿರುವಳು. ಅವಳ ನಿಮಿತ್ತವಾಗಿ ಅವರಿಬ್ಬರೂ ಒಟ್ಟಾಗಿ ನನಗೆ ಈ ಘೋರ ಅವಸ್ಥೆಯನ್ನು ತಂದೊಡ್ಡಿದರು.

ಅವರನ್ನೆಲ್ಲ ಕೊಲ್ಲಬೇಕು. ಅವರ ದೇಹದ ಬಿಸಿರಕ್ತವನ್ನು ನಾನು ಕುಡಿಯಬೇಕು. ಇದೆ ನನ್ನ ಮೊದಲ ಹೆಬ್ಬಯಕೆ.

ಇದನ್ನು ಕೇಳಿ ಖರ ಹದಿನಾಲ್ಕು ರಾಕ್ಷಸರನ್ನು ಕರೆದು ಆದೇಶಿಸಿದ— ''ಕೂಡಲೆ ದಂಡಕಾರಣ್ಯದಲ್ಲಿರುವ ಅವರನ್ನು ಕೊಂದು ಬನ್ನಿ. ಅವರ ಬಿಸಿರಕ್ತವನ್ನು ತಂದು ತಂಗಿಗೆ ಕೊಡಬೇಕು. ಅವಳು ಋಷಿಯಿಂದ ಅದನ್ನು ಕುಡಿಯಬೇಕು. ಹೊರಡಿರಿ ಬೇಗ'' ಎಂದು.

❖

ಖರಕ್ರೋಧಃ

ತಾಂ ತಥಾ ಪತಿತಾಂ ದೃಷ್ಟ್ವಾ ವಿರೂಪಾಂ ಶೋಣಿತೋಕ್ಷಿತಾಮ್ ।
ಭಗಿನೀಂ ಕ್ರೋಧಸಂತಪ್ತಃ ಖರಃ ಪಪ್ರಚ್ಛ ರಾಕ್ಷಸೀಮ್ ॥೧॥

ಹಾಗೆ ರಕ್ತದಿಂದ ತೋಯ್ದು ವಿರೂಪಗೊಂಡ ನೆಲದಲ್ಲಿ ಬಿದ್ದಿರುವ ಶೂರ್ಪಣಖೆಯನ್ನು ನೋಡಿ ಕ್ರೋಧಸಂತಪ್ತನಾದ ರಾಕ್ಷಸ ಖರ ಕೇಳಿದನು.

ಉತ್ತಿಷ್ಠ ತಾವದಾಖ್ಯಾಹಿ ಪ್ರಮೋಹಂ ಜಹಿ ಸಂಭ್ರಮಮ್ ।
ವ್ಯಕ್ತಮಾಖ್ಯಾಹಿ ಕೇನ ತ್ವಮೇವಂರೂಪಾಂ ವಿರೂಪಿತಾ ॥೨॥

ಏಳು ತಂಗಿ! ಈ ಮೂರ್ಚ್ಛಾವಸ್ಥೆಯನ್ನು ಉದ್ವೇಗವನ್ನು ಬಿಟ್ಟು ಸ್ಪಷ್ಟವಾಗಿ ಹೇಳು. ಯಾರು ನಿನ್ನನ್ನು ವಿರೂಪಗೊಳಿಸಿದವರು?

ಕಃ ಕೃಷ್ಣಸರ್ಪಮಾಸೀನಮಾಶೀವಿಷಮನಾಗಸಮ್ ।
ತುದತ್ಯಭಿಸಮಾಪನ್ನಮಂಗುಲ್ಯಗ್ರೇಣ ಲೀಲಯಾ ॥೩॥

ಸುಮ್ಮನೆ ಕುಳಿತಿರುವ ನಿರಪರಾಧಿ ಕೃಷ್ಣಸರ್ಪವನ್ನು ಬೆರಳ ತುದಿಯಿಂದ ಹುಡುಗಾಟಿಕೆಯಿಂದ ಕೆಣಕಿದವನು ಯಾರು?

ಕಃ ಕಾಲಪಾಶಮಾಸಜ್ಯ ಕಂಠೇ ಮೋಹಾನ್ನ ಬುಧ್ಯತೇ ।
ಯಸ್ತಾ ತ್ವಮದ್ಯ ಸಮಾಸಾದ್ಯ ಪೀತವಾನ್ ವಿಷಮುತ್ತಮಮ್ ॥೪॥

ನಿನ್ನ ತಂಟೆಗೆ ಬಂದವನು ಮಹಾವಿಷವನ್ನು ಕುಡಿದಿರಬೇಕು. ಅದಕ್ಕೇ ಮೋಹವಶನಾಗಿ ಕಂಠದಲ್ಲಿ ಕಾಲಪಾಶವನ್ನು ಹಾಕಿಕೊಂಡಿರುವುದರ ಅರಿವಿಲ್ಲ.

ಬಲವಿಕ್ರಮಸಂಪನ್ನಾ ಕಾಮಗಾ ಕಾಮರೂಪಿಣೀ ।
ಇಮಾಮವಸ್ಥಾಂ ನೀತಾ ತ್ವಂ ಕೇನಾಂತಕಸಮಾऽಗತಾ ॥೫॥

ನೀನು ಬಲ– ವಿಕ್ರಮಸಂಪನ್ನಳು. ಬಯಸಿದ ಕಡೆಗೆ ಹೋಗಬಲ್ಲವಳು. ಬಯಸಿದ ರೂಪವನ್ನು ಪಡೆಯಬಲ್ಲವಳು. ಉಳಿದವರಿಗೆ ಯಮನಂತೆ ಇರುವವಳು. ಇಂತಹ ನಿನ್ನನ್ನು ಈ ದುರವಸ್ಥೆಗೆ ಒಯ್ದವನು ಯಾರು?

ದೇವಗಂಧರ್ವಭೂತಾನಾಮೃಷೀಣಾಂ ಚ ಮಹಾತ್ಮನಾಮ್ ।
ಕೋऽಯಮೇವಂ ವಿರೂಪಾಂ ತ್ವಾಂ ಮಹಾವೀರ್ಯಶ್ಚಕಾರ ಹ ॥೬॥

ದೇವತೆ ಗಂಧರ್ವ ಭೂತ ಋಷಿ—ಇಂತಹ ಮಹಾತ್ಮರಲ್ಲಿ ಯಾವ ಮಹಾವೀರ್ಯನು ನಿನ್ನನ್ನು ಹೀಗೆ ವಿರೂಪಗೊಳಿಸಿದವನು?

ನ ಹಿ ಪಶ್ಯಾಮ್ಯಹಂ ಲೋಕೇ ಯಃ ಕುರ್ಯಾನ್ಮಮ ವಿಪ್ರಿಯಮ್ ।
ಅಂತರೇಣ ಸಹಸ್ರಾಕ್ಷಂ ಮಹೇಂದ್ರಂ ಪಾಕಶಾಸನಮ್ ॥೭॥

ಪಾಕಶಾಸನ ಇಂದ್ರನೂ ನನಗಾವ ವಿಪ್ರಿಯವನ್ನು ಮಾಡಲಾರ. ಇನ್ನು ಯಾವ ಮನುಷ್ಯ ನನಗೇನು ಮಾಡಬಲ್ಲ.

ಅದ್ಯಾಹಂ ಮಾರ್ಗಣೈಃ ಪ್ರಾಣಾನಾದಾಸ್ಯೇ ಜೀವಿತಾಂತಕೈಃ ।
ಸಲಿಲೇ ಕ್ಷೀರಮಾಸಕ್ತಂ ನಿಷ್ಪಿಬನ್ನಿವ ಸಾರಸಃ ॥೮॥

ನಾನಿಂದು ಬದುಕನ್ನೆ ಕೊನೆಗೊಳಿಸುವ ತೀಕ್ಷ್ಣಬಾಣಗಳಿಂದ ನಿನ್ನ ಅಪರಾಧಿಯ ಪ್ರಾಣಗಳನ್ನು ದೇಹದಿಂದ ಹೊರತೆಗೆಯುತ್ತೇನೆ; ಸಾರಸಹಂಸ ನೀರಿನಲ್ಲಿ ಸೇರಿದ ಹಾಲನ್ನು ಬೇರ್ಪಡಿಸುವಂತೆ.

ಜೀವಿತಾಂತಗೈಃ – ಪಾಠಾಂತರ

ನಿಹತಸ್ಯ ಮಯಾ ಸಂಖ್ಯೇ ಶರಸಂಕೃತ್ತಮರ್ಮಣಃ ।
ಸಫೇನಂ ರುಧಿರಂ ರಕ್ತಂ ಮೇದಿನೀ ಕಸ್ಯ ಪಾಸ್ಯತಿ ॥೯॥

ನನ್ನಿಂದ ಬಾಣಗಳಿಂದ ಚೆನ್ನಾಗಿ ಕತ್ತರಿಸಿದ ಮರ್ಮವುಳ್ಳ ಯುದ್ಧದಲ್ಲಿ ಹತನಾದ ಯಾರ ನೊರೆಸಹಿತವಾದ ಬಿಸಿನೆತ್ತರನ್ನು ಈ ನೆಲ ಕುಡಿಯಲಿದೆ?

ಕಸ್ಯ ಪತ್ರರಥಾಃ ಕಾಯಾನ್ಮಾಂಸಮುತ್ಕೃತ್ಯ ಸಂಗತಾಃ ।
ಪ್ರಹೃಷ್ಟಾ ಭಕ್ಷಯಿಷ್ಯಂತಿ ನಿಹತಸ್ಯ ಮಯಾ ರಣೇ ॥೧೦॥

ನಾನು ರಣದಲ್ಲಿ ಸಂಹರಿಸಿದ ಮೇಲೆ ದೇಹದಿಂದ ಮಾಂಸವನ್ನು ಹಕ್ಕಿಗಳು ಪುಕ್ಕಟೆ ಕಿತ್ತು ತಿಂದು ಋಷಿಪಡಲಿವೆ?

ತಂ ನ ದೇವಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಮಯಾಪಕೃಷ್ಟಂ ಕೃಪಣಂ ಶಕ್ತಾಸ್ತ್ರಾತುಮಿಹಾಹವೇ ॥೧೧॥

ಯುದ್ಧದಲ್ಲಿ ನಾನು ಯಾವ ಕೃಷಣನನ್ನು ಆಕ್ರಮಿಸುತ್ತೇನೆ. ಅವನನ್ನು ದೇವತೆಗಳಾಗಲಿ, ಗಂಧರ್ವರಾಗಲಿ, ಪಿಶಾಚಗಳಾಗಲಿ, ರಾಕ್ಷಸರೇ ಆಗಲಿ ಕಾಪಾಡಲು ಸಾಧ್ಯವಿಲ್ಲ.

ಉಪಲಭ್ಯ ಶನೈಃ ಸಂಜ್ಞಾಂ ತಂ ಮೇ ಶಂಸಿತುಮರ್ಹಸಿ ।
ಯೇನ ತ್ವಂ ದುರ್ವಿನೀತೇನ ವನೇ ವಿಕ್ರಮ್ಯ ನಿರ್ಜಿತಾ ॥೧೨॥

ಕಾಡಿನಲ್ಲಿ ಯಾವ ದುರ್ವಿನೀತನಿಂದ ಪರಾಕ್ರಮ ತೋರಿಸಿ ಸೋತೆಯೋ ನಿಧಾನವಾಗಿ ಎಚ್ಚರ ತಂದುಕೊಂಡು ಸಾವರಿಸಿಕೊಂಡು ತಿಳಿಸು ನನಗೆ.

ಇತಿ ಭ್ರಾತುರ್ವಚಃ ಶ್ರುತ್ವಾ ಕ್ರುದ್ಧಸ್ಯ ಚ ವಿಶೇಷತಃ ।
ತತಃ ಶೂರ್ಪಣಖಾ ವಾಕ್ಯಂ ಸಬಾಷ್ಪಮಿದಮಬ್ರವೀತ್ ॥೧೩॥

ವಿಶೇಷವಾಗಿ ಕ್ರುದ್ಧನಾಗಿದ್ದ ಅಣ್ಣನ ಮೇಲಿನ ಮಾತುಗಳನ್ನು ಕೇಳಿ ಶೂರ್ಪಣಖೆ ಕಣ್ಣೀರು ಸುರಿಸುತ್ತ ಈ ಮಾತನ್ನು ಹೇಳಿದಳು.

ತರುಣೌ ರೂಪಸಂಪನ್ನೌ ಸುಕುಮಾರೌ ಮಹಾಬಲೌ ।
ಪುಂಡರೀಕವಿಶಾಲಾಕ್ಷೌ ಚೀರಕೃಷ್ಣಾಜಿನಾಂಬರೌ ॥೧೪॥

ಫಲಮೂಲಾಶನೌ ದಾಂತೌ ತಾಪಸೌ ಧರ್ಮಚಾರಿಣೌ ।
ಪುತ್ರೌ ದಶರಥಸ್ಯಾಸ್ತಾಂ ಭ್ರಾತರೌ ರಾಮಲಕ್ಷ್ಮಣೌ ॥೧೫॥

ಗಂಧರ್ವರಾಜಪ್ರತಿಮೌ ಪಾರ್ಥಿವವ್ಯಂಜನಾನ್ವಿತೌ ।
ದೇವೌ ವಾ ಮಾನುಷೌ ವಾ ತೌ ನ ತರ್ಕಯಿತುಮುತ್ಸಹೇ ॥೧೬॥

ತರುಣ ರೂಪಸಂಪನ್ನರು ಸುಕುಮಾರರು ಮಹಾಬಲವಂತರು ತಾವರೆ ಯಂತೆ ಅರಳುಗಣ್ಣಿನವರು, ನಾರುಮಡಿ–ಕೃಷ್ಣಾಜಿನವನ್ನು ಧರಿಸಿದವರು. ಫಲಮೂಲಗಳ ಆಹಾರದವರು, ಜಿತೇಂದ್ರಿಯರು, ಧರ್ಮವನ್ನು ಆಚರಿಸುವ ತಾಪಸರು. ದಶರಥನ ಮಕ್ಕಳು. ಅಣ್ಣತಮ್ಮಂದಿರಾದ ರಾಮಲಕ್ಷ್ಮಣರು ಆಗಿದ್ದಾರೆ ಅವರು. ಗಂಧರ್ವರಾಜ ಸದೃಶರು. ರಾಜರ ಲಕ್ಷಣವನ್ನು ಹೊಂದಿರುವವರು. ಅವರು ದೇವತೆಗಳೋ ಮನುಷ್ಯರೋ ನಾನು ಊಹಿಸಲಾರೆ.

ತರುಣೀ ರೂಪಸಂಪನ್ನಾ ಸರ್ವಾಭರಣಭೂಷಿತಾ ।
ದೃಷ್ಟಾ ತತ್ರ ಮಯಾ ನಾರೀ ತಯೋರ್ಮಧ್ಯೇ ಸುಮಧ್ಯಮಾ ॥೧೭॥

ಸರ್ವಾಭರಣಭೂಷಿತಳು ರೂಪಸಂಪನ್ನಳು ತರುಣಿಯು ಸುಂದರನಡುವಿನ ಒಬ್ಬ ಹೆಣ್ಣನ್ನೂ ಅವರಿಬ್ಬರ ಮಧ್ಯದಲ್ಲಿ ಕಂಡೆ.

ತಾಭ್ಯಾಮುಭಾಭ್ಯಾಂ ಸಂಭೂಯ ಪ್ರಮದಾಮಧಿಕೃತ್ಯ ತಾಮ್ ।
ಇಮಾಮವಸ್ಥಾಂ ನೀತಾಹಂ ಯಥಾನಾಥಾಸತೀ ತಥಾ ॥೧೮॥

ಆ ಇಬ್ಬರು ಪುರುಷರಿಂದ ಆ ಹೆಣ್ಣಿನ ನಿಮಿತ್ತವಾಗಿ ಅನಾಥೆಯಾದ ವೇಶ್ಯೆಯಂತೆಯೆ ನಾನು ಈ ದುರವಸ್ಥೆಗಳೊಗಾದೆ.

ತಸ್ಯಾಶ್ಚಾನೃಜುವೃತ್ತಾಯಾಸ್ತಯೋಶ್ಚ ಹತಯೋರಹಮ್ ।
ಸಫೇನಂ ಪಾತುಮಿಚ್ಛಾಮಿ ರುಧಿರಂ ರಣಮೂರ್ಧನಿ ॥೧೯॥

ಯುದ್ಧದಲ್ಲಿ ಕೊಲ್ಲಲ್ಪಟ್ಟ ಆ ವಂಚಕ ನಡೆಯವಳ ಹಾಗು ಇಬ್ಬರು ಪುರುಷರ ನೊರೆಭರಿತ ಬಿಸಿನೆತ್ತರವನ್ನು ಕುಡಿಯಲು ಬಯಸಿದ್ದೇನೆ.

ಏಷ ಮೇ ಪ್ರಥಮಃ ಕಾಮಃ ಕೃತಸ್ತಾತ ತ್ವಯಾ ಭವೇತ್ ।
ತಸ್ಯಾಸ್ತಯೋಶ್ಚ ರುಧಿರಂ ಪಿಬೇಯಮಹಾಮಾಹವೇ ॥೨೦॥

ಯುದ್ಧದಲ್ಲಿ ಅವಳ ಹಾಗು ಅವರಿಬ್ಬರ ರಕ್ತವನ್ನು ನಾನು ಕುಡಿಯಬೇಕು—ಇದು ನನ್ನ ಪ್ರಥಮ ಕಾಮನೆ. ಇದನ್ನು ನೀನು ಪೂರೈಸಿ ಕೊಡಬೇಕು.

ಇತಿ ತಸ್ಯಾಂ ಬ್ರುವಾಣಾಯಾಂ ಚತುರ್ದಶ ಮಹಾಬಲಾನ್ ।
ವ್ಯಾದಿದೇಶ ಖರಃ ಕ್ರುದ್ಧೋ ರಾಕ್ಷಸಾನಂತಕೋಪಮಾನ್ ॥೨೧॥

ಆ ಶೂರ್ಪಣಖೆಯು ಹೀಗೆ ಹೇಳುತ್ತಿರುವಾಗ ಕ್ರುದ್ಧನಾದ ಖರ ಮಹಾ ಬಲಶಾಲಿಗಳಾದ ಯಮೋಪಮರಾದ ಹದಿನಾಲ್ಕು ರಾಕ್ಷಸರನ್ನು ಆದೇಶಿಸಿದ.

ಮಾನುಷೌ ಶಸ್ತ್ರಸಂಪನ್ನೌ ಚೀರಕೃಷ್ಣಾಜಿನಾಂಬರೌ ।
ಪ್ರವಿಷ್ಟೌ ದಂಡಕಾರಣ್ಯಂ ಘೋರಂ ಪ್ರಮದಯಾ ಸಹ ॥೨೨॥

ತೌ ಹತ್ವಾ ತಾಂ ಚ ದುರ್ವೃತ್ತಾಮುಪಾವರ್ತಿತುಮರ್ಹಥ ।
ಇಯಂ ಚ ರುಧಿರಂ ತೇಷಾಂ ಭಗಿನೀ ಮಮ ಪಾಸ್ಯತಿ ॥೨೩॥

ಶಸ್ತ್ರಸಂಪನ್ನರು ಚೀರ–ಕೃಷ್ಣಾಜಿನಧಾರಿಗಳು ಆದ ಇಬ್ಬರು ಮನುಷ್ಯರು ಹೆಣ್ಣಿನೊಂದಿಗೆ ಘೋರವಾದ ದಂಡಕಾರಣ್ಯವನ್ನು ಹೊಕ್ಕಿರುವರು. ಅವರಿಬ್ಬರನ್ನು, ಆ ಹೆಣ್ಣನ್ನೂ ಕೊಂದು ಹಾಕಿರಿ. ಈ ನನ್ನ ತಂಗಿ ಅವರ ರುಧಿರವನ್ನು ಕುಡಿಯಬೇಕು.

ಮನೋರಥೋಽಯಮಿಷ್ಟೋಽಸ್ಯಾ ಭಗಿನ್ಯಾ ಮಮ ರಾಕ್ಷಸಾಃ ।
ಶೀಘ್ರಂ ಸಂಪಾದ್ಯತಾಂ ಗತ್ವಾ ತೌ ಪ್ರಮಥ್ಯ ಸ್ವತೇಜಸಾ ॥೨೪॥

ರಕ್ಕಸರೇ! ಅವರ ರಕ್ತಪಾನ–ನನ್ನ ತಂಗಿಯ ಹೆಬ್ಬಯಕೆ! ಸ್ವಸಾಮರ್ಥ್ಯದಿಂದ ಅವರನ್ನು ಕೊಂದು ಇವಳ ಬಯಕೆಯನ್ನು ಸಂಪನ್ನಗೊಳಿಸಿರಿ.

ಯುಷ್ಮಾಭಿರ್ನಿಹತೌ ದೃಷ್ಟ್ವಾ ತಾವುಭೌ ಭ್ರಾತರೌ ರಣೇ ।
ಇಯಂ ಪ್ರಹೃಷ್ಟಾ ಮುದಿತಾ ರುಧಿರಂ ಯುಧಿ ಪಾಸ್ಯತಿ ॥೨೫॥

ಯುದ್ಧದಲ್ಲಿ ನಿಮ್ಮಿಂದ ಹತರಾದ ಆ ಸಹೋದರರನ್ನು ನೋಡಿ ಇವಳು ತುಂಬ ಹರ್ಷಗೊಂಡು ಸಂತಸಗೊಂಡವಳಾಗಿ ಅವರ ರಕ್ತವನ್ನು ಕುಡಿಯುವಳು.

ಇತಿ ಪ್ರತಿಸಮಾದಿಷ್ಟಾ ರಾಕ್ಷಸಾಸ್ತೇ ಚತುರ್ದಶ ।
ತತ್ರ ಜಗ್ಮುಸ್ತಯಾ ಸಾರ್ಧಂ ಘನಾ ವಾತೇರಿತಾ ಯಥಾ ॥೨೬॥

ಹೀಗೆ ಆದೇಶಿಸಲ್ಪಟ್ಟ ಆ ಹದಿನಾಲ್ಕು ರಾಕ್ಷಸರು ಗಾಳಿಯಿಂದ ಪ್ರೇರಿತವಾದ ಮೋಡಗಳಂತೆ ಆ ಶೂರ್ಪಣಖೆಯೊಂದಿಗೆ ದಂಡಕಾರಣ್ಯಕ್ಕೆ ಹೋದರು.

ತತಸ್ತು ತೇ ತಂ ಸಮುದಗ್ರತೇಜಸಂ
ತಥಾಪಿ ತೀಕ್ಷ್ಣಪ್ರದರಾ ನಿಶಾಚರಾಃ ।
ದುರಾಸದಂ ಧರ್ಷಯಿತುಂ ನ ಚಾಶಕನ್
ವನದ್ವಿಪಾ ದೀಪ್ತಮಿವಾಗ್ನಿಮುತ್ಥಿತಮ್ ॥೨೭॥

ಬಳಿಕ ನಿಶಾಚರರು ತೀಕ್ಷ್ಣಬಾಣಗಳುಳ್ಳವರಾದರೂ ಪ್ರಖರ ತೇಜಸ್ಸಿನ ಶ್ರೀರಾಮನನ್ನು ಸುಲಭವಾಗಿ ಮಥನ ಮಾಡಲು ಸಮರ್ಥರಾಗಲಿಲ್ಲ. ಬಲವಾದ ಕಾಡಾನೆಗಳೂ ಕಾಡ್ಗಿಚ್ಚನ್ನು ಎದುರಿಸಲಾಗದಂತೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಹತ್ತೊಂಭತ್ತನೇ ಸರ್ಗ ಮುಗಿಯಿತು.

❖

ವಿಂಶಃ ಸರ್ಗಃ

ಕಥಾಸಾರಾಂಶ– ಶೂರ್ಪಣಖೆ ಹದಿನಾಲ್ಕು ರಾಕ್ಷಸರೊಂದಿಗೆ ಶ್ರೀರಾಮನಿದ್ದ ಆಶ್ರಮದ ಬಳಿ ಬಂದು ರಾಮಸೀತಾಲಕ್ಷ್ಮಣರನ್ನು ತೋರಿಸಿದಳು. ರಾಕ್ಷಸಿ ಹಾಗು ಹದಿನಾಲ್ಕು ರಕ್ಕಸರು ಬಂದದ್ದನ್ನು ಗಮನಿಸಿದ ಶ್ರೀರಾಮ, ಸೀತೆಯ ಬಳಿ ಲಕ್ಷ್ಮಣ–ನನ್ನು ಇರುವಂತೆ ಆದೇಶಿಸಿ ಇವರ ಬಳಿ ಬಂದನು.

ತನ್ನನ್ನು ಪರಿಚಯಿಸಿಕೊಂಡ ಶ್ರೀರಾಮ ಋಷಿಗಳ ಆದೇಶದಿಂದ ನಿಮ್ಮನ್ನು ಕೊಲ್ಲಲು ಇಲ್ಲಿ ನೆಲೆಸಿದ್ದೇವೆ ಎಂದ. ಬದುಕಬೇಕಿದ್ದರೆ ಹಿಂತಿರುಗಿ ಹೋಗಿ ಎಂದು ಎಚ್ಚರಿಸಿದ.

ಆಗ ಆ ರಕ್ಕಸರು ನಮ್ಮ ನಾಯಕ ಖರನನ್ನು ಕೋಪಗೊಳಿಸಿದ ನೀವೆ ನಮ್ಮ ಬಾಣಗಳಿಂದ ಪ್ರಾಣಬಿಡುತ್ತೀರಿ ಎಂದು ಗರ್ಜಿಸಿದರು. ಬಹುಸಂಖ್ಯೆಯ ನಮ್ಮ ಮುಂದೆ ನಿಲ್ಲಲು ಕೂಡ ನಿನಗೆ ಶಕ್ತಿಯಿಲ್ಲ. ಇನ್ನು ಯುದ್ಧ ಮಾಡಲು ಎಲ್ಲಿ ಶಕ್ತಿ ? ನಾವು ಬೀಸುವ ಪರಿಘಶೂಲಗಳಿಂದ ನಿನ್ನ ಪ್ರಾಣವನ್ನು ಕಳೆದುಕೊಳ್ಳುವಿ ಎಂದು ಹೇಳಿ ಹದಿನಾಲ್ಕು ಮಂದಿ ರಾಕ್ಷಸರೂ ರಾಮನ ಮೇಲೆ ಶೂಲಗಳನ್ನೆಸೆದರು. ಶ್ರೀರಾಮನೂ ಹದಿನಾಲ್ಕು ಬಾಣಗಳಿಂದಲೆ ಆ ಶೂಲಗಳನ್ನು ಮಧ್ಯದಲ್ಲಿ ತುಂಡರಿಸಿದನು–ಸೂರ್ಯನಂತೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದ ರಕ್ಕಸರ ಮೇಲೆ. ಬಾಣಗಳ ಪ್ರಹಾರದಿಂದ ಎಲ್ಲ ರಕ್ಕಸರೂ ಎದೆಸೀಳಿ ರಕ್ತಸಿಕ್ತರಾಗಿ ಗತಪ್ರಾಣರಾಗಿ ನೆಲಕ್ಕುರುಳಿದರು.

ಗಾಬರಿಯಿಂದ ಶೋಕತಪ್ತಳಾದ ಶೂರ್ಪಣಖೆ ಜೋರಾಗಿ ಕಿರುಚಿಕೊಂಡು ಖರನ ಬಳಿ ಹೋಗಿ ಎಲ್ಲವರನ್ನೂ ತಿಳಿಸಿದಳು.

❖

ಚತುರ್ದಶರಕ್ಷೋವಧಃ

ತತಃ ಶೂರ್ಪಣಖಾ ಘೋರಾ ರಾಘವಾಶ್ರಮಮಾಗತಾ ।
ರಕ್ಷಸಾಮಾಚಚಕ್ಷೇ ತೌ ಭ್ರಾತರೌ ಸಹ ಸೀತಯಾ ॥೧॥

ಬಳಿಕ ಘೋರಳಾದ ಶೂರ್ಪಣಖೆ ರಾಘವನ ಆಶ್ರಮಕ್ಕೆ ಬಂದವಳಾಗಿ ರಾಕ್ಷಸರಿಗೆ ಸೀತೆಯೊಂದಿಗಿದ್ದ ಆ ಇಬ್ಬರು ಸಹೋದರರನ್ನು ಪರಿಚಯಿಸಿದಳು.

ತೇ ರಾಮಂ ಪರ್ಣಶಾಲಾಯಾಮುಪವಿಷ್ಟಂ ಮಹಾಬಲಮ್ ।
ದದೃಶುಃ ಸೀತಯಾ ಸಾರ್ಧಂ ವೈದೇಹ್ಯಾ ಲಕ್ಷ್ಮಣೇನ ಚ ॥೨॥

ಲಕ್ಷ್ಮಣೇನಾऽಪಿ ಸೇವಿತಮ್ – ಪಾಠಾಂತರ.

ಆ ರಾಕ್ಷಸರು ಪರ್ಣಶಾಲೆಯಲ್ಲಿ ವಿದೇಹನಂದಿನಿ ಸೀತೆ ಹಾಗೂ ಲಕ್ಷ್ಮಣ-ನೊಂದಿಗೆ ಕುಳಿತಿರುವ ರಾಮನನ್ನು ಕಂಡರು.

ತಾನ್ ದೃಷ್ಟ್ವಾ ರಾಘವಃ ಶ್ರೀಮಾನಾಗತಾಂಸ್ತಾಂ ಚ ರಾಕ್ಷಸೀಮ್ ।
ಅಬ್ರವೀದ್ಭ್ರಾತರಂ ರಾಮೋ ಲಕ್ಷ್ಮಣಂ ದೀಪ್ತತೇಜಸಮ್ ॥೩॥

ಶ್ರೀಮಾನ್ ರಾಘವನು ಆ ರಾಕ್ಷಸರನ್ನು ಹಾಗು ಆ ರಾಕ್ಷಸಿಯನ್ನು ಕಂಡನು. ತಮ್ಮನಾದ ತೇಜಸ್ವಿ ಲಕ್ಷ್ಮಣನನ್ನು ಕುರಿತು ರಾಮನು ಹೀಗೆ ಹೇಳಿದನು.

ಮುಹೂರ್ತಂ ಭವ ಸೌಮಿತ್ರೇ ಸೀತಾಯಾಃ ಪ್ರತ್ಯನಂತರಃ ।
ಇಮಾನಸ್ಯಾ ವಧಿಷ್ಯಾಮಿ ಪದವೀಮಾಗತಾನಿಹ ॥೪॥

ಸೌಮಿತ್ರೇ! ನೀನು ಮುಹೂರ್ತಕಾಲ ಸೀತೆಯ ಬಳಿ ಇರು. ಈ ರಾಕ್ಷಸಿಯ ಸಹಾಯಕರನ್ನು ಈಗಲೇ ಕೊಂದು ಬರುತ್ತೇನೆ.

ವಾಕ್ಯಮೇತತ್ತತಃ ಶ್ರುತ್ವಾ ರಾಮಸ್ಯ ವಿದಿತಾತ್ಮನಃ ।
ತಥೇತಿ ಲಕ್ಷ್ಮಣೋ ವಾಕ್ಯಂ ರಾಮಸ್ಯ ಪ್ರತ್ಯಪೂಜಯತ್ ॥೫॥

ಆತ್ಮಜ್ಞಾನಿ ರಾಮನ ಈ ವಾಕ್ಯವನ್ನು ಕೇಳಿ ಹಾಗೆ ಆಗಲೆಂದು ಅವನ ಮಾತನ್ನು ಲಕ್ಷ್ಮಣ ಗೌರವಿಸಿದನು.

ರಾಘವೋऽಪಿ ಮಹಚ್ಚಾಪಂ ಚಾಮೀಕರವಿಭೂಷಿತಮ್ ।
ಚಕಾರ ಸಜ್ಯಂ ಧರ್ಮಾತ್ಮಾ ತಾನಿ ರಕ್ಷಾಂಸಿ ಚಾಬ್ರವೀತ್ ॥೬॥

ಧರ್ಮಾತ್ಮ ರಾಘವನು ಸುವರ್ಣಭೂಷಿತವಾದ ತನ್ನ ಮಹಾ ಧನುಸ್ಸನ್ನು ಹೆಡೆಕಟ್ಟಿ ಸಜ್ಜುಗೊಳಿಸಿಕೊಂಡು ರಾಕ್ಷಸರಿಗೆ ಹೀಗೆ ಹೇಳಿದನು.

ಪುತ್ರೌ ದಶರಥಸ್ಯಾವಾಂ ಭ್ರಾತರೌ ರಾಮಲಕ್ಷ್ಮಣೌ ।
ಪ್ರವಿಷ್ಟೌ ಸೀತಯಾ ಸಾರ್ಧಂ ದುಶ್ಚರಂ ದಂಡಕಾನನಮ್ ॥೭॥

ಫಲಮೂಲಾಶನೌ ದಾಂತೌ ತಾಪಸೌ ಧರ್ಮಚಾರಿಣೌ ।
ವಸಂತೌ ದಂಡಕಾರಣ್ಯೇ ಕಿಮರ್ಥಮುಪಹಿಂಸಥ ॥೮॥

ದಶರಥನ ಮಕ್ಕಳು ಸಹೋದರರು ಆದ ರಾಮ-ಲಕ್ಷ್ಮಣರು ನಾವು. ಸೀತೆಯೊಂದಿಗೆ ದುರ್ಗಮ ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದೇವೆ. ಗಡ್ಡೆ

ಗೆಣಸುಗಳನ್ನು ತಿಂದುಕೊಂಡು ಜಿತೇಂದ್ರಿಯರು ಧರ್ಮಾಚಾರರತರಾಗಿ ತಪಸ್ಸು ಮಾಡಿಕೊಂಡು ಇಲ್ಲಿ ವಾಸ ಮಾಡಿದ್ದೇವೆ. ನಮ್ಮನ್ನೇಕೆ ನೀವು ಹಿಂಸಿಸುತ್ತೀರಿ?

ಯುಷ್ಮಾನ್ ಪಾಪಾತ್ಮಕಾನ್ ಹಂತು ವಿಪ್ರಕಾರಾನ್ ಮಹಾಹವೇ ।
ಋಷೀಣಾಂ ತು ನಿಯೋಗೇನ ಪ್ರಾಪ್ತೋಽಹಂ ಸಶರಾಯುಧಃ ॥೯॥

ಋಷಿಗಳಿಗೆ ತೊಂದರೆ ಕೊಡುತ್ತಿರುವ ಪಾಪಾತ್ಮರಾದ ನಿಮ್ಮನ್ನು ಋಷಿಗಳ ಆದೇಶದಿಂದ ಮಹಾಯುದ್ಧದಲ್ಲಿ ಕೊಲ್ಲಲು ನಾನು ಬಿಲ್ಲುಬಾಣಗಳ ಸಹಿತ ಬಂದಿದ್ದೇನೆ.

ತಿಷ್ಠತೈವಾತ್ರ ಸಂತುಷ್ಟಾ ನೋಪಾವರ್ತಿತುಮರ್ಹಥ ।
ಯದಿ ಪ್ರಾಣೈರಿಹಾರ್ಥೋ ವಾ ನಿವರ್ತಧ್ವಂ ನಿಶಾಚರಾಃ ॥೧೦॥

ಯುದ್ಧಮಾಡುವ ಋಷಿಯಿದ್ದರೆ ಇಲ್ಲೇ ನಿಲ್ಲಿರಿ. ಪ್ರಾಣಗಳನ್ನು ಉಳಿಸಿ-ಕೊಳ್ಳುವ ಆಸೆಯಿದ್ದರೆ ಕೂಡಲೆ ಇಲ್ಲಿಂದ ಹೊರಡಿರಿ.

ತಸ್ಯ ತದ್ವಚನಂ ಶ್ರುತ್ವಾ ರಾಕ್ಷಸಾಸ್ತೇ ಚತುರ್ದಶ ।
ಊಚುರ್ವಾಚಂ ಸುಸಂಕ್ರುದ್ಧಾ ಬ್ರಹ್ಮಘ್ನಾಃ ಶೂಲಪಾಣಯಃ ॥೧೧॥

ರಾಮನ ಆ ಮಾತನ್ನು ಕೇಳಿ ಆ ಹದಿನಾಲ್ಕು ರಾಕ್ಷಸರು-ಬ್ರಾಹ್ಮಣರನ್ನು ಕೊಲ್ಲುವವರು-ಕೈಯ್ಯಲ್ಲಿ ಶೂಲ ಹಿಡಿದವರು-ಅತ್ಯಂತ ಕ್ರೋಧಗೊಂಡವರಾಗಿ ಕೆಂಗಣ್ಣಿನವರಾಗಿ ಘೋರರಾದವರು-ಪ್ರಸಿದ್ಧ ಪರಾಕ್ರಮಿಯು ಮಧುರ ಭಾಷಿಯೂ ಆದ ರಾಮನನ್ನು ಕಂಡು ಋಷಿಪಡುವವರಾಗಿ ಪರುಷರಾಗಿ ಇಂತೆಂದರು.

ಕ್ರೋಧಮುತ್ಪಾದ್ಯ ನೋ ಭರ್ತುಃ ಖರಸ್ಯ ಸುಮಹಾತ್ಮನಃ ।
ತ್ವಮೇವ ಹಾಸ್ಯಸೇ ಪ್ರಾಣಾನದ್ಯಾಸ್ಮಾಭಿರ್ಹತೋ ಯುಧಿ ॥೧೨॥

ನಮ್ಮ ಒಡೆಯ ಮಹಾತ್ಮ ಖರನಿಗೆ ಕೋಪಗೊಳಿಸಿ ನೀನೇ ಈಗ ನಮ್ಮಿಂದ ಯುದ್ಧದಲ್ಲಿ ಹತನಾಗಿ ಪ್ರಾಣಬಿಡುವೆ!

ಕಾ ಹಿ ತೇ ಶಕ್ತಿರೇಕಸ್ಯ ಬಹೂನಾಂ ರಣಮೂರ್ಧನಿ ।
ಅಸ್ಮಾಕಮಗ್ರತಃ ಸ್ಥಾತುಂ ಕಿಂ ಪುನರ್ಯೋದ್ಧುಮಾಹವೇ ॥೧೩॥

ಬಹುಸಂಖ್ಯೆಯ ನಮ್ಮ ಮುಂದೆ ಯುದ್ಧದಲ್ಲಿ ಒಂಟಿಯಾಗಿರುವ ನಿನಗೆ ಶಕ್ತಿ ಎಲ್ಲಿದೆ? ಇನ್ನು ಯುದ್ಧ ಮಾಡುವ ಮಾತೆಲ್ಲಿ?

ಏಹಿ ಬಾಹುಪ್ರಯುಕ್ತೈರ್ನಃ ಪರಿಘೈಃ ಶೂಲಪಟ್ಟಿಶೈಃ ।
ಪ್ರಾಣಾಂಸ್ತಕ್ಷ್ಯಸಿ ವೀರ್ಯಂ ಚ ಧನುಶ್ಚ ಕರಪೀಡಿತಮ್ ॥೧೪॥

ಏಭಿರ್ಬಾ – ಪಾಠಾಂತರ.

ಬಾ. ನಮ್ಮ ತೋಳುಗಳಿಂದ ಪ್ರಯೋಗಿಸಿದ ಪರಿಘ, ಶೂಲ, ಪಟ್ಟಿಶಗಳಿಂದ ಪ್ರಾಣವನ್ನು, ಪರಾಕ್ರಮಿ ಎಂಬ ಅಭಿಮಾನವನ್ನು, ಕೈಯಲ್ಲಿರುವ ಬಿಲ್ಲನ್ನೂ ಒಟ್ಟಿಗೆ ಬಿಟ್ಟುಬಿಡುವೆ!

ಇತ್ಯೇವಮುಕ್ತ್ವಾ ಸಂಕ್ರುದ್ಧಾ ರಾಕ್ಷಸಾಸ್ತೇ ಚತುರ್ದಶ ।
ಉದ್ಯತಾಯುಧನಿಸ್ತ್ರಿಂಶಾ ರಾಮಮೇವಾಭಿದುದ್ರುವುಃ ॥೧೫॥

ಇತ್ಯೇವ–ಚತುರ್ದಶ – ''ಉದ್ಯತಾಯುಧನಿಸ್ತ್ರೀಶಾ ರಾಮಮೇವಾಭಿ ದುದ್ರುವುಃ' –ಪಾಠಾಂತರ.

ಹೀಗೆ ಹೇಳಿ ಸಂಕ್ರುದ್ಧರಾದ ಆ ಹದಿನಾಲ್ಕು ರಾಕ್ಷಸರು ಬಗೆಬಗೆಯ ಆಯುಧ-ಗಳನ್ನು ಖಡ್ಗಗಳನ್ನು ಹಿಡಿದು ರಾಮನ ಮೇಲೆ ಮುಗಿಬಿದ್ದರು. ದುರ್ಜನರು ರಾಘವನ ಮೇಲೆ ಆ ಶೂಲಗಳನ್ನು ಎಸೆದರು.

ಅಭಿಪತ್ಯ ತತೋ ವೇಗಾತ್ ಪೃಷ್ಠತಸ್ತೇ ನಿಶಾಚರಾಃ ।
ಪರಿಘಾನ್ ಪಟ್ಟಶಾನ್ ಶೂಲಾನ್ ನಿಸ್ತ್ರಿಂಶಾನ್ ಹೇಮಭೂಷಿತಾನ್ ।
ಚಿಕ್ಷಿಪುಸ್ತಾನಿ ಶೂಲಾನಿ ರಾಘವಂ ಪ್ರತಿ ದುರ್ಜಯಮ್ ॥೧೬॥

ಬಳಿಕ ಆ ನಿಶಾಚರರು ವೇಗದಿಂದ ಮುಗಿಬಿದ್ದು ಪರಿಘ, ಪಟ್ಟಿಶ ಶೂಲ, ಹೇಮಭೂಷಿತಗಳಾದ ನಿಸ್ತ್ರಿಂಶಗಳನ್ನು ಶೂಲಗಳನ್ನು ದುರ್ಜಯನಾದ ರಾಮನ ಮೇಲೆ ಎಸೆದರು.

ತಾನಿ ಶೂಲಾನಿ ಕಾಕುತ್ಸ್ಥಃ ಸಮಸ್ತಾನಿ ಚತುರ್ದಶ ।
ತಾವದ್ಭಿರೇವ ಚಿಚ್ಛೇದ ಶರೈಃ ಕಾಂಚನಭೂಷಣೈಃ ॥೧೭॥

ಕಕುತ್ಸ್ಥ ಕುಲಸಂಜಾತನಾದ ರಾಮನು ಆ ಹದಿನಾಲ್ಕು ಶೂಲಗಳನ್ನು ಅಷ್ಟೇ ಬಾಣಗಳಿಂದಲೆ ತುಂಡರಿಸಿದನು.

ತತಃ ಪಶ್ಚಾನ್ಮಹಾತೇಜಾ ನಾರಾಚಾನ್ ಸೂರ್ಯಸಂನಿಭಾನ್ ।
ಜಗ್ರಾಹ ಪರಮಕ್ರುದ್ಧಶ್ಚತುರ್ದಶ ಶಿಲಾಶಿತಾನ್ ॥೧೮॥

ಗೃಹೀತ್ವಾ ಧನುರಾಯಮ್ಯ ಲಕ್ಷ್ಯಾನುದ್ದಿಶ್ಯ ರಾಕ್ಷಸಾನ್ ।
ಮುಮೋಚ ರಾಘವೋ ಬಾಣಾನ್ ವಜ್ರಾನಿವ ಶತಕ್ರತುಃ ॥೧೯॥

ಬಳಿಕ ಮಹಾತೇಜಸ್ವಿ ರಾಮನು ಸೂರ್ಯನಂತೆ ಪ್ರಖರವಾಗಿರುವ ಹರಿತವಾಗಿರುವ ಬಾಣಗಳನ್ನು ಪರಮಕ್ರುದ್ಧನಾಗಿ ಸ್ವೀಕರಿಸಿದ. ರಾಘವನು ಬಿಲ್ಲಿನಲ್ಲಿ ಆ ಬಾಣಗಳನ್ನು ಸಂಧಾನಗೊಳಿಸಿ ಚೆನ್ನಾಗಿ ಎಳೆದು ಆ ರಾಕ್ಷಸರಿಗೆ ಗುರಿಯಿಟ್ಟು ಪ್ರಯೋಗಿಸಿದನು—ಇಂದ್ರನು ವಜ್ರಾಯುಧವನ್ನು ಪ್ರಯೋಗಿಸುವಂತೆ.

ರುಕ್ಮಪುಂಖಾಶ್ಚ ವಿಶಿಖಾ ದೀಪ್ತಾ ಹೇಮವಿಭೂಷಿತಾಃ ।
ತೇ ಭಿತ್ತ್ವಾ ರಕ್ಷಸಾಂ ವೇಗಾದ್ವಾಕ್ಷಾಂಸಿ ರುಧಿರಾಪ್ಲುತಾಃ ॥೨೦॥
ವಿನಿಷ್ಪೇತುಸ್ತದಾ ಭೂಮೌ ವಲ್ಮೀಕಾದಿವ ಪನ್ನಗಾಃ ॥೨೧॥

ರುಕ್ಮ ಎಂಬ ಸಾಲು ಕೆಲವು ಪಾಠಗಳಲ್ಲಿ ಇಲ್ಲ.

ಬಂಗಾರದ ಪುಕ್ಕಗಳನ್ನು ಹೊಂದಿರುವ ಸುವರ್ಣಭೂಷಿತಗಳಾದ ಅಗ್ನಿಯಂತೆ ಬೆಳಗುತ್ತಿರುವ ಆ ಬಾಣಗಳು ವೇಗವಾಗಿ ತೆರಳಿ ರಕ್ಕಸರ ಎದೆಗಳನ್ನು ಸೀಳಿ ರಕ್ತಸಿಕ್ತವಾಗಿ ನೆಲಕ್ಕೆ ಬಿದ್ದವು–ಹುತ್ತಗಳಿಂದ ಸರ್ಪಗಳು ಹೊರಬರುವಂತೆ.

ತೇ ಭಿನ್ನಹೃದಯಾ ಭೂಮೌ ಛಿನ್ನಮೂಲಾ ಇವ ದ್ರುಮಾಃ ।
ನಿಪೇತುಃ ಶೋಣಿತಾದ್ರ್ಯಂಗಾ ವಿಕೃತಾ ವಿಗತಾಸವಃ ॥೨೨॥

ತೈಭಗ್ನಹೃದಯಾಃ–ಪಾಠಾಂತರ. ಶೋಣಿತಸ್ನಾತಾಃ–ಪಾಠಾಂತರ.

ಆ ರಕ್ಕಸರು ಎದೆಸೀಳಿದವರಾಗಿ–ಬುಡ ಕಡಿದ ಮರಗಳಂತೆ ರಕ್ತದಿಂದ ತೋಯ್ದ ಅಂಗವುಳ್ಳವರಾಗಿ ವಿಕೃತರಾಗಿ ಗತಪ್ರಾಣರಾಗಿ ನೆಲಕ್ಕೆ ಉರುಳಿದರು.

ತಾನ್ ದೃಷ್ಟ್ವಾ ಪತಿತಾನ್ ಭೂಮೌ ರಾಕ್ಷಸೀ ಕ್ರೋಧಮೂರ್ಛಿತಾ।
ಪರಿತ್ರಸ್ತಾ ಪುನಸ್ತತ್ರ ವ್ಯಸೃಜದ್ಭೈರವಸ್ವನಾನ್ ॥೨೩॥

(ತಾನ್ ಭೂಮೌ ಪತಿತಾನ್ ದೃಷ್ಟ್ವಾ–ಪಾಠಾಂತರ. 'ಪರಿತ್ರಸ್ತ' ಎಂಬ ಉತ್ತರಾರ್ಧ ಕೆಲವು ಪಾಠದಲ್ಲಿ ಇಲ್ಲ.)

ನೆಲಕ್ಕುರುಳಿದ ಆ ರಾಕ್ಷಸರನ್ನು ಕಂಡು ಕ್ರೋಧದಿಂದ ಮೂರ್ಛಿತಳಾದ ಬಳಿಕ ಸಾವರಿಸಿಕೊಂಡು ಭಯಂಕರ ಶಬ್ದ ಮಾಡಿದಳು—ಜೋರಾಗಿ ಬೊಬ್ಬೆಯಿಟ್ಟಳು.

ಸಾ ನದಂತೀ ಮಹಾನಾದಂ ಜವಾಚ್ಛೂರ್ಪಣಖಾ ಪುನಃ ।
ಉಪಗಮ್ಯ ಖರಂ ಸಾ ತು ಕಿಂಚಿತ್ ಸಂಶುಷ್ಕಶೋಣಿತಾ ।
ಪಪಾತ ಪುನರೇವಾರ್ತಾ ಸನಿರ್ಯಾಸೇವ ಸಲ್ಲಕೀ ॥೨೪॥

(ಸಾ ವದಂತೀ–ಈ ಪೂರ್ವಾರ್ಧ ಕೆಲವು ಪಾಠಗಳಲ್ಲಿ ಇಲ್ಲ)

ಜೋರಾಗಿ ಶಬ್ದ ಮಾಡುತ್ತ ಶೂರ್ಪಣಖೆಯು ವೇಗವಾಗಿ ಖರನ ಬಳಿ ಹೋದಳು. ಕಿವಿ ಮೂಗುಗಳ ಶೋಣಿತ ಸ್ವಲ್ಪ ಒಣಗಿತ್ತು. ಖರನ ಬಳಿ ಹೋಗಿ ಮತ್ತೆ ನೆಲಕ್ಕೆ ಬಿದ್ದಳು–ರಸ ಒಸರುತ್ತಿರುವ ಬಳ್ಳಿಯಂತೆ.

ಭ್ರಾತುಃ ಸಮೀಪೇ ಶೋಕಾರ್ತಾ ಸಸರ್ಜ ನಿನದಂ ಮುಹುಃ ।
ಸಸ್ವರಂ ಮುಮುಚೇ ಬಾಷ್ಪಂ ವಿಷಣ್ಣವದನಾ ತದಾ ॥೨೫॥

ಶೋಕಾರ್ತಳಾಗಿ ಅಣ್ಣನ ಬಳಿ ಹೋಗಿ ಮತ್ತೆ ಜೋರಾಗಿ ಬೊಬ್ಬಿಟ್ಟಳು. ವಿಷಣ್ಣವದನಳಾಗಿ ಶಬ್ದಮಾಡಿಕೊಂಡು ಅಳುತ್ತಾ ಕಣ್ಣೀರಿಟ್ಟಳು.

ಸಸರ್ಜ ನಿನದಂ ಮಹತ್–ಪಾಠಾಂತರ.
ವಿವರ್ಣವದನಾ ತದಾ–ಪಾಠಾಂತರ.

ನಿಪಾತಿತಾನ್ ದೃಶ್ಯ ರಣೇ ತು ರಾಕ್ಷಸಾನ್
ಪ್ರಧಾವಿತಾ ಶೂರ್ಪಣಖಾ ಪುನಸ್ತತಃ ।
ವಧಂ ಚ ತೇಷಾಂ ನಿಖಿಲೇನ ರಕ್ಷಸಾಂ
ಶಶಂಸ ಸರ್ವಂ ಭಗಿನೀ ಖರಸ್ಯ ಸಾ ॥೨೬॥

ವಿಪಾತಿತಾನ್ ಪ್ರೇಕ್ಷ್ಯ–ಪಾಠಾಂತರ.

ರಣಭೂಮಿಯಲ್ಲಿ ಎಲ್ಲ ರಾಕ್ಷಸರು ಸತ್ತುಬಿದ್ದಿರುವುದನ್ನು ನೋಡಿ ಖರನ ತಂಗಿ ಆ ಶೂರ್ಪಣಖೆಯು ಓಡಿಬಂದು ಖರನ ಮುಂದೆ ರಕ್ಕಸರ ವಧವನ್ನೆಲ್ಲ ಹೇಳಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತನೇ ಸರ್ಗ ಮುಗಿಯಿತು.

❖

ಏಕವಿಂಶಃ ಸರ್ಗಃ

ಕಥಾಸಾರಾಂಶ– ಶೂರ್ಪಣಖೆ ಮತ್ತೆ ಖರನ ಮುಂದೆ ಬಂದು ನೆಲದಲ್ಲಿ ಬಿದ್ದು ಹೊರಳಾಡಿದಳು. ಖರ ಕೇಳಿದ–ನಿನಗಾಗಿ ಹದಿನಾಲ್ಕು ಶೂರರಾಕ್ಷಸರನ್ನು ಕಳುಹಿಸಿ–ಕೊಟ್ಟೆ. ಮತ್ತೇಕೆ ಅಳುತ್ತಿರುವೆ?

ಆ ರಾಕ್ಷಸರು ನನ್ನ ಭಕ್ತರು. ನನ್ನಲ್ಲಿ ಅನುರಕ್ತರು. ನನ್ನ ಹಿತದಲ್ಲಿ ಪ್ರವೃತ್ತರು. ಯಾರನ್ನು ಬೇಕಾದರೂ ಕೊಲ್ಲುವರೇ ಹೊರತು ಯಾರಿಂದಲೂ ಸಾಯುವ ವರಲ್ಲ. ನನ್ನ ಆಜ್ಞೆಯನ್ನು ಎಂದು ಉಲ್ಲಂಘಿಸಿರುವವರಲ್ಲ. 'ಅಯ್ಯೋ ನಾಥ!' ಎಂದು ದೈನ್ಯದಿಂದ ಅಳುತ್ತ ಹಾವಿನಂತೆ ನೆಲದಲ್ಲಿ ಏಕೆ ತೆವಳುತ್ತಿರುವೆ?! ನಾನು ನಿನ್ನ ಪಾಲಿಗೆ ನಾಥನಾಗಿರುವಾಗ ಅನಾಥಳಂತೆ ಒದ್ದಾಡುವುದು–ಏಕೆ?

ಶೂರ್ಪಣಖೆ ಹೇಳುತ್ತಾಳೆ—ನೀನು ವೀರ ರಾಕ್ಷಸ ಸಮೂಹವನ್ನು ಕಳುಹಿಸಿದೆ. ಆದರೆ ಶ್ರೀರಾಮ ಅವರನ್ನೆಲ್ಲ ತೀಕ್ಷ್ಣವಾದ ಬಾಣಗಳಿಂದ ಕೊಂದು ಹಾಕಿದ. ಅದರಿಂದ ನನಗೆ ಭಯವಾಗುತ್ತಿದೆ.

ನನ್ನ ಮೇಲೆ ಸತ್ತ ರಾಕ್ಷಸರ ಮೇಲೆ ಅನುಕಂಪವಿದ್ದರೆ, ರಾಮನಿಗೆ ಪ್ರತೀಕಾರ ಮಾಡುವ ಶಕ್ತಿ ನಿನ್ನಲ್ಲಿದ್ದರೆ ರಾಮನನ್ನು ಕೊಲ್ಲು ಬೇಗ. ಇಲ್ಲದಿದ್ದರೆ ನಾನು ಪ್ರಾಣತ್ಯಾಗ ಮಾಡುತ್ತೇನೆ.

ನಿನಗೆ ಅವನ ಮುಂದೆ ನಿಂತು ಯಜ್ಞ ಮಾಡಿ ಗೆಲ್ಲುವ ಶೌರ್ಯವಿಲ್ಲ ಎಂದು ನನಗನಿಸುತ್ತಿದೆ. ಅವರನ್ನು ಕೊಲ್ಲಲಾಗದಿದ್ದರೆ ನಿನ್ನ ಕುಲಕ್ಕೆ ಕಲಂಕ. ಈ ಜನಸ್ಥಾನದಿಂದ ಓಡಿಹೋಗು.

ಶ್ರೀರಾಮನ ತೇಜಸ್ಸಿನಿಂದ ಕ್ಷಣಮಾತ್ರದಲ್ಲಿ ನೀನು ನಾಶವಾಗುವೆ. ಅವನು ಮಹಾ ಪರಾಕ್ರಮಶಾಲಿ. ಅವನ ತಮ್ಮನೂ ಬಹಳ ತೇಜಸ್ವಿ. ಅವನೇ ನನ್ನ ವಿರೂಪ ಗೊಳಿಸಿದ್ದು.

ಹೀಗೆ ಬಹುಪ್ರಕಾರವಾಗಿ ವಿಲಾಪ ಮಾಡುತ್ತ ಶೂರ್ಪಣಖೆ ಶೋಕಮೂರ್ಛಿತಳಾದಳು. ಮತ್ತು ತುಂಬ ದುಃಖವಾಗಿ ಹೊಟ್ಟೆ ಹೊಡೆದುಕೊಂಡು ಅಳತೊಡಗಿದಳು.

❖

ಖರಸಂಧುಕ್ಷಣಮ್

ಸ ಪುನಃ ಪತಿತಾಂ ದೃಷ್ಟ್ವಾ ಕ್ರೋಧಾಚ್ಛೂರ್ಪಣಖಾಂ ಖರಃ ।
ಉವಾಚ ವ್ಯಕ್ತಯಾ ವಾಚಾ ತಾಮನರ್ಹಾರ್ಥಮಾಗತಮ್ ॥೧॥

ಶೂರ್ಪಣಖೆಯು ಮತ್ತೆ ನೆಲದಲ್ಲಿ ಬಿದ್ದಿರುವುದನ್ನು ಕಂಡು ಕ್ರೋಧಗೊಂಡು ಅನರ್ಥನಿವೃತ್ತಿಗಾಗಿ ಬಂದಿರುವ ಅವಳನ್ನು ಕುರಿತು ಸ್ಪಷ್ಟವಾಗಿ ಮಾತನಾಡಿದನು.

ಮಯಾ ತ್ವದಾನೀಂ ಶೂರಾಸ್ತೇ ರಾಕ್ಷಸಾ ರುಧಿರಾಶನಾಃ ।
ತವ ಪ್ರಿಯಾರ್ಥಂ ವಿನಿರ್ದಿಷ್ಟಾಃ ಕಿಮರ್ಥಂ ರುದ್ಯತೇ ಪುನಃ ॥೨॥

ನಾನೀಗತಾನೆ ನಿನ್ನ ಪ್ರೀತಿಗಾಗಿ ರುಧಿರಾಶನರಾದ ಶೂರ ರಾಕ್ಷಸರನ್ನು ಆದೇಶ ಮಾಡಿ ಕಳುಹಿಸಿದ್ದೇನಲ್ಲ? ಮತ್ತೇಕೆ ಅಳುತ್ತಿರುವೆ?

ಭಕ್ತಾಶ್ಚೈವಾನುರಕ್ತಾಶ್ಚ ಹಿತಾಶ್ಚ ಮಮ ನಿತ್ಯಶಃ ।
ಘ್ನಂತೋಽಪಿ ನ ನಿಹಂತವ್ಯಾ ನ ನ ಕುರ್ಯುರ್ವಚೋ ಮಮ ॥೩॥

ಅವರು ನನ್ನ ಭಕ್ತರು. ನನ್ನಲ್ಲಿ ಅನುರಕ್ತರು. ಸದಾ ನನ್ನಲ್ಲಿ ಹಿತರಾದವರು. ಅವರು ಕೊಲ್ಲುವವರೆ ಹೊರತು ಸಾಯುವವರಲ್ಲ. ನನ್ನ ಆದೇಶ ವಚನವನ್ನು ಪಾಲಿಸದವರು ಅಲ್ಲ.

ಕಿಮೇತಚ್ಛ್ರೋತುಮಿಚ್ಛಾಮಿ ಕಾರಣಂ ಯತ್ಕೃತೇ ಪುನಃ ।
ಹಾ ನಾಥೇತಿ ವಿನರ್ದಂತೀ ಸರ್ಪವಲ್ಲುಠಸಿ ಕ್ಷಿತೌ ॥೪॥

ಯಾತಕ್ಕಾಗಿ ಅಳುತ್ತಿರುವೆ? ಆ ಕಾರಣವನ್ನು ಕೇಳಲು ಬಯಸುತ್ತಿದ್ದೇನೆ. 'ಅಯ್ಯೋ ನಾಥನೆ' ಎಂದು ಕೂಗಿಕೊಂಡು ಹಾವಿನ ಹಾಗೆ ನೆಲದಲ್ಲಿ ಹೊರಳಾಡುತ್ತಿರುವೆಯಲ್ಲ?

ಅನಾಥವದ್ವಿಲಪಸಿ ನಾಥೇ ತು ಮಯಿ ಸಂಸ್ಥಿತೇ ।
ಉತ್ತಿಷ್ಠೋತ್ತಿಷ್ಠ ಮಾ ಭೈಷೀರ್ವೈಕ್ಲವ್ಯಂ ತ್ಯಜ್ಯತಾಮಿಹ ॥೫॥

ನಾನು ನಾಥನಾಗಿರುವಾಗ ಅನಾಥರಂತೆ ವಿಲಾಪಮಾಡುತ್ತಿರುವಿ. ಏಳು ಏಳು. ಈ ವೈಕಲ್ಯವನ್ನು ಬಿಡೋಣವಾಗಲಿ.

ಇತ್ಯೇವಮುಕ್ತಾ ದುರ್ಧರ್ಷಾ ಖರೇಣ ಪರಿಸಾಂತ್ವಿತಾ ।
ವಿಮೃಜ್ಯ ನಯನೇ ಸಾಸ್ರೇ ಖರಂ ಭ್ರಾತರಮಬ್ರವೀತ್ ॥೬॥

ಹೀಗೆ ಹೇಳಲ್ಪಟ್ಟ ಖರನಿಂದ ಸಂತೈಸಲಾದ ದುರ್ಧರ್ಷಳಾದ ಶೂರ್ಪಣಖೆಯು ದುಃಖದ ನೀರಿನಿಂದ ಕೂಡಿದ ಕಣ್ಣುಗಳನ್ನು ಒರೆಸಿಕೊಂಡು ಅಣ್ಣ ಖರನನ್ನು ಕುರಿತು ಹೇಳಿದಳು.

ಅಸ್ಮೀದಾನೀಮಹಂ ಪ್ರಾಪ್ತಾ ಹೃತಶ್ರವಣನಾಸಿಕಾ ।
ಶೋಣಿತೌಘಪರಿಕ್ಲಿನ್ನಾ ತ್ವಯಾ ಚ ಪರಿಸಾಂತ್ವಿತಾ ॥೭॥

ನಾನೀಗ ತಾನೆ ಕಿವಿ ಮೂಗುಗಳನ್ನು ಕಳೆದುಕೊಂಡು ರಾಶಿರಕ್ತದಿಂದ ತೋಯ್ದು ಬಂದೆ. ನೀನು ಸಂತೈಸಿದೆ.

ಪ್ರೇಷಿತಾಶ್ಚ ತ್ವಯಾ ವೀರ ರಾಕ್ಷಸಾಸ್ತೇ ಚತುರ್ದಶ ।
ನಿಹಂತುಂ ರಾಘವಂ ಕ್ರೋಧಾನ್ಮತ್ಪ್ರಿಯಾರ್ಥಂ ಸಲಕ್ಷ್ಮಣಮ್ ॥೮॥

ವೀರನೇ! ಲಕ್ಷ್ಮಣನಿಂದ ಕೂಡಿದ ರಾಮನನ್ನೂ ಕೊಲ್ಲಲು ನನ್ನ ಮೇಲಿನ ಪ್ರೀತಿಯಿಂದಾಗಿ ಕ್ರೋಧದಿಂದ ಹದಿನಾಲ್ಕು ರಾಕ್ಷಸರನ್ನು ನೀನು ಕಳುಹಿಸಿದೆ.

ತೇ ತು ರಾಮೇಣ ಸಾಮರ್ಷಾಃ ಶೂಲಪಟ್ಟಿಶಪಾಣಯಃ ।
ಸಮರೇ ನಿಹತಾಃ ಸರ್ವೇ ಸಾಯಕೈರ್ಮರ್ಮಭೇದಿಭಿಃ ॥೯॥

ಅಸಹನೆಯಿಂದ ಶೂಲಪಟ್ಟಿಶಪಾಣಿಗಳಾಗಿ ಹೋರಾಡಲು ಬಂದ ಅವರೆಲ್ಲ ಸಮರದಲ್ಲಿ ರಾಮನಿಂದ ಮರ್ಮಭೇದಿ ಬಾಣಗಳಿಂದ ನಿಹತರಾದರು.

ತಾನ್ ದೃಷ್ಟ್ವಾ ಪತಿತಾನ್ ಭೂಮೌ ಕ್ಷಣೇನೈವ ಮಹಾಬಲಾನ್ ।
ರಾಮಸ್ಯ ಚ ಮಹತ್ ಕರ್ಮ ಮಹಾಂಸ್ತ್ರಾಸೋಽಭವನ್ಮಮ ॥೧೦॥

ಕ್ಷಣಮಾತ್ರದಲ್ಲಿ ಧರೆಗುರುಳಿದ ಆ ಮಹಾಬಲರನ್ನು ನೋಡಿ ರಾಮ ಮಹಾಸಾಹಸವನ್ನು ನೋಡಿ ನನಗೆ ಮಹಾಭಯವಾಯಿತು.

ಅಹಮಸ್ಮಿ ಸಮುದ್ವಿಗ್ನಾ ವಿಷಣ್ಣಾ ಚ ನಿಶಾಚರ ।
ಶರಣಂ ತ್ವಾಂ ಪುನಃ ಪ್ರಾಪ್ತಾ ಸರ್ವತೋಭಯದರ್ಶಿನೀ ॥೧೧॥

ನಿಶಾಚರ! ತುಂಬ ಉದ್ವಿಗ್ನಳಾಗಿ ವಿಷಣ್ಣಳಾಗಿ ಬಂದಿದ್ದೇನೆ. ಎಲ್ಲೆಡೆ ಭಯವನ್ನೆ ಕಾಣುತ್ತಾ ಮತ್ತೊಮ್ಮೆ ನಿನ್ನಲ್ಲಿ ಶರಣು ಹೊಂದಿದ್ದೇನೆ.

ವಿಷಾದನಕ್ರಾಧ್ಯುಷಿತೇ ಪರಿತ್ರಾಸೋರ್ಮಿಮಾಲಿನಿ ।
ಕಿಂ ಮಾಂ ನ ತ್ರಾಯಸೇ ಮಗ್ನಾಂ ವಿಪುಲೇ ಶೋಕಸಾಗರೇ ॥೧೨॥

ವಿಷಾದ ಎಂಬ ಮೊಸಳೆ ವಾಸವಾಗಿರುವ, ಭಯವೆಂಬ ಅಲೆಗಳ ಸಮೂಹ ದಿಂದ ಉಕ್ಕಿರುವ ಶೋಕಸಾಗರದಲ್ಲಿ ಮುಳುಗಿರುವ ನನ್ನನ್ನು ಕಾಪಾಡುವು ದಿಲ್ಲವೆ?

ಏತೇ ಚ ನಿಹತಾ ಭೂಮೌ ರಾಮೇಣ ನಿಶಿತೈಃ ಶರೈಃ ।
ಯೇऽಪಿ ಮೇ ಪದವೀಂ ಪ್ರಾಪ್ತಾ ರಾಕ್ಷಸಾಃ ಪಿಶಿತಾಶನಾಃ ॥೧೩॥

ಯಾವ ಮಾಂಸಭಕ್ಷಕ ರಾಕ್ಷಸರು ನನ್ನನ್ನು ಹಿಂಬಾಲಿಸಿ ಬಂದರೊ ಅವರೆಲ್ಲ ರಾಮನ ನಿಶಿತ ಬಾಣಗಳಿಂದ ಭೂಮಿಯಲ್ಲಿ ನಿಹತರಾಗಿ ಬಿದ್ದರು.

ಮಯಿ ತೇ ಯದ್ಯನುಕ್ರೋಶೋ ಯದಿ ರಕ್ಷಃಸು ತೇಷು ಚ ।
ರಾಮೇಣ ಯದಿ ತೇ ಶಕ್ತಿಸ್ತೇಜೋ ವಾಸ್ತಿ ನಿಶಾಚರ ।
ದಂಡಕಾರಣ್ಯನಿಲಯಂ ಜಹಿ ರಾಕ್ಷಸಕಂಟಕಮ್ ॥೧೪॥

ನನ್ನಲ್ಲಿ ಹಾಗೂ ಆ ರಾಕ್ಷಸರ ಬಗ್ಗೆ ನಿನಗೆ ಅನುಕಂಪವಿದ್ದರೆ ಅಥವಾ ರಾಮನನ್ನು ಎದುರಿಸುವ ಧೈರ್ಯ ಇದೆಯಾದರೆ ನಿಶಾಚರನೇ! ರಾಕ್ಷಸರಿಗೆ ಕಂಟಕನಾದ ದಂಡ ಕಾರಣ್ಯನಿಲಯನಾದ ರಾಮನನ್ನು ಕೊಲ್ಲು.

ಯದಿ ರಾಮಂ ಮಮಾಮಿತ್ರಂ ನ ತ್ವಮದ್ಯ ವಧಿಷ್ಯಸಿ ।
ತವ ಚೈವಾಗ್ರತಃ ಪ್ರಾಣಾಂಸ್ಯಕ್ಷ್ಯಾಮಿ ನಿರಪತ್ರಪಾ ॥೧೫॥

ನನ್ನ ಶತ್ರುವಾದ ರಾಮನನ್ನು ನೀನು ಕೊಲ್ಲದಿದ್ದರೆ ನಿನ್ನ ಮುಂದೆಯೇ ನಿರ್ಲಜ್ಜಳಾಗಿ ಪ್ರಾಣ ಬಿಡುತ್ತೇನೆ.

ಬುದ್ಧ್ಯಾಹಮನುಪಶ್ಯಾಮಿ ನ ತ್ವಂ ರಾಮಸ್ಯ ಸಂಯುಗೇ ।
ಸ್ಥಾತುಂ ಪ್ರತಿಮುಖೇ ಶಕ್ತಃ ಸಬಲೋऽಪಿ ಮಹಾರಣೇ ॥೧೬॥

ನನ್ನ ಬುದ್ಧಿಗೆ ಅನುಸಾರವಾಗಿ ಭಾವಿಸುತ್ತಿದ್ದೇನೆ–ನೀನು ಯುದ್ಧದಲ್ಲಿ ರಾಮ–ನೆದುರು ನಿಲ್ಲಲು ಸಮರ್ಥನೂ ಅಲ್ಲ. ಸಬಲನೂ ಅಲ್ಲ.

ಶೂರಮಾನೀ ನ ಶೂರಸ್ತ್ವಂ ಮಿಥ್ಯಾರೋಪಿತವಿಕ್ರಮಃ ।
ಮಾನುಷೌ ಯೌ ನ ಶಕ್ನೋಷಿ ಹಂತುಂ ತೌ ರಾಮಲಕ್ಷ್ಮಣೌ ॥೧೭॥

(ಅಪಯಾಹಿ ಜನಸ್ಥಾನಾತ್ ತ್ವರಿತಃ ಸಹಬಾಂಧವಃ)–ಪಾಠಾಂತರ

ಮನುಷ್ಯರಾದ ಇಬ್ಬರು ರಾಮಲಕ್ಷ್ಮಣರನ್ನು ಕೊಲ್ಲಲು ನೀನು ಸಮರ್ಥನಲ್ಲ ಎಂದಮೇಲೆ ಶೂರ ಎಂಬ ಅಭಿಮಾನವೇ ಹೊರತು ನೀನು ನಿಜವಾಗಿ ಶೂರನಲ್ಲ. ವಿಕ್ರಮ ನಿನ್ನಲ್ಲಿ ಮಿಥ್ಯಾರೋಪಿತ. ಕೂಡಲೆ ಜನಸ್ಥಾನದಿಂದ ಬಾಂಧವ ಸಹಿತನಾಗಿ ಹೊರಹೋಗು.

ರಾಮೇಣ ಯದಿ ತೇ ಶಕ್ತಿಸ್ತೇಜೋ ವಾಸ್ತಿ ನಿಶಾಚರ ।
ದಂಡಕಾರಣ್ಯನಿಲಯಂ ಜಹಿ ತಂ ಕುಲಪಾಂಸನ ॥೧೮॥

ರಾಮನೊಡನೆ ಹೋರಾಡುವ ಶಕ್ತಿ ಸಾಮರ್ಥ್ಯಗಳು ಇದ್ದರೆ ಕುಲಪಾಂಸನ ನಿಶಾಚರನೇ! ದಂಡಕಾರಣ್ಯದಲ್ಲಿ ಬೀಡುಬಿಟ್ಟಿರುವ ರಾಮನನ್ನು ಕೊಲ್ಲು.

ನಿಃಸತ್ತ್ವಸ್ಯಾಲ್ಪವೀರ್ಯಸ್ಯ ವಾಸಸ್ತೇ ಕೀದೃಶಸ್ತ್ವಿಹ ।
ಅಪಯಾಹಿ ಜನಸ್ಥಾನಾತ್ತ್ವರಿತಃ ಸಹಬಾಂಧವಃ ॥೧೯॥

ಸತ್ವ–ಬಲವಿಲ್ಲದ, ಅಲ್ಪವೀರ್ಯನಾದ ನೀನು ಇಲ್ಲಿ ನೆಲೆಸಿರುವುದು ಯಾವ ಪ್ರಯೋಜನಕ್ಕೆ? ಕೂಡಲೇ ಈ ಜನಸ್ಥಾನದಿಂದ ಬಾಂಧವರಿಂದ ಸಹಿತನಾಗಿ ಹೊರಹೊರಡು.

ರಾಮತೇಜೋಽಭಿಭೂತೋ ಹಿ ತ್ವಂ ಕ್ಷಿಪ್ರಂ ವಿನಶಿಷ್ಯಸಿ ।
ಸ ಹಿ ತೇಜಃಸಮಾಯುಕ್ತೋ ರಾಮೋ ದಶರಥಾತ್ಮಜಃ ॥೨೦॥

ರಾಮನ ತೇಜಸ್ಸಿನಿಂದಾಗಿ ಕ್ಷಿಪ್ರವಾಗಿ ನೀನು ನಾಶವಾಗುವಿ. ದಶರಥಪುತ್ರ ಆ ರಾಮ ತೇಜಸ್ವಿಯಾದವನು.

ಭ್ರಾತಾ ಚಾಸ್ಯ ಮಹಾವೀರ್ಯೋ ಯೇನ ಚಾಸ್ಮಿ ವಿರೂಪಿತಾ ॥೨೧॥

ಅವನ ತಮ್ಮನೂ ಮಹಾವೀರ್ಯಸಂಪನ್ನ; ಯಾರು ನನ್ನನ್ನು ವಿರೂಪಗೊಳಿಸಿದನೋ.

ಏವಂ ವಿಲಪ್ಯ ಬಹುಶೋ ರಾಕ್ಷಸೀ ಪ್ರತತೋದರೀ ।
ಕರಾಭ್ಯಾಮುದರಂ ಹತ್ವಾ ರುರೋದ ಭೃಶದುಃಖಿತಾ ॥೨೨॥

ಹೀಗೆ ಬಹುವಾಗಿ ವಿಲಾಪಮಾಡಿ ದೊಡ್ಡಹೊಟ್ಟೆಯ ಶೂರ್ಪಣಖೆ (ಅಣ್ಣನ ಸಮೀಪದಲ್ಲಿ ದುಃಖಾರ್ತಳಾಗಿ ಎಚ್ಚರತಪ್ಪಿದಳು) ಎರಡೂ ಕೈಗಳಿಂದ ಹೊಟ್ಟೆ ಹೊಡೆದುಕೊಂಡು ತುಂಬ ದುಃಖಿತಳಾಗಿ ಅತ್ತೇ ಅತ್ತಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತೊಂದನೇ ಸರ್ಗ ಮುಗಿಯಿತು.

❖

ದ್ವಾವಿಂಶಃ ಸರ್ಗಃ

ಶೂರ್ಪಣಖೆಯ ನಿಂದನೆ ಅಪಮಾನದ ಮಾತುಗಳನ್ನು ಕೇಳಿ ಅಸಹನೆಯಿಂದ ಖರ ಕ್ರೂರವಾದ ಮಾತುಗಳನ್ನು ಆಡುತ್ತಾನೆ— ನಿನ್ನ ಅವಮಾನದಿಂದ ಅತುಲ ಕ್ರೋಧ ಉಕ್ಕೇರಿದೆ—ಅದುಮಿಡಲಾರದಷ್ಟು– ಅಲೆಗಳ ಅಬ್ಬರದ ಸಮುದ್ರದಂತೆ. ಮಾನುಷ ರಾಮನನ್ನು ಕಡೆಗಣಿಸುತ್ತೇನೆ. ಇನ್ನು ಅವನ ಬದುಕು ಮುಗಿಯಿತು. ತನ್ನ ದುರ್ನಡೆಯಿಂದ ಈಗಲೆ ಅವನ ಪ್ರಾಣ ಹೋದಂತೆ. ನಿನ್ನ ಕಣ್ಣೀರು ಆತಂಕ ಉದ್ವೇಗಗಳನ್ನು ಬಿಡು, ಪರಶು ಹಿಡಿದು ಅವನನ್ನು ಕೊಲ್ಲುತ್ತೇನೆ. ಅವನ ಬಿಸಿ ನೆತ್ತರನ್ನು ಕುಡಿಯಲು ನೀನು ಸಿದ್ಧಳಾಗು' ಎಂದು.

ಹಿಂದೆ ನಿಂದಿಸಿದ್ದ ಶೂರ್ಪಣಖೆ ಈಗ ಖುಷಿಪಟ್ಟು ಹೊಗಳಿದಳು.

ಖರ ತನ್ನ ಸೇನಾಪತಿ ದೂಷಣನನ್ನು ಕರೆದು, 'ಕ್ರೂರ ಕರ್ಮಿಗಳಾದ ಹಿಂಸಾ–ವಿಹಾರರೂ ರಣಭಯಂಕರರೂ ಆದ ಹದಿನಾಲ್ಕು ಸಾವಿರ ರಾಕ್ಷಸ ಸೈನ್ಯವನ್ನು ಬಗೆಬಗೆಯ ಆಯುಧಗಳಿಂದ ತುಂಬಿದ ನನ್ನ ರಥವನ್ನು ಸಿದ್ಧಗೊಳಿಸು. ಕಾದಾಡಲು ಹೊರಡಿಸು. ಭೀಕರ ಸೇನಾಸಮೂಹವನ್ನು' ಎಂದು ಆದೇಶಿಸಿದ.

ದೂಷಣ ಖರನ ಮಾತಿನಂತೆ ಸೈನ್ಯವನ್ನು ಸಿದ್ಧಗೊಳಿಸಿದ. ತನಗಾಗಿ ಸಿದ್ಧಪಡಿಸಿದ ರಥವೇರಿ ಖರನೂ ಸೈನ್ಯದೊಂದಿಗೆ ವೀರಾವೇಶದಿಂದ ಹೊರಟ.

❖

ಖರಸಂನಾಹಃ

ಏವಮಾಧರ್ಷಿತಃ ಶೂರಃ ಶೂರ್ಪಣಖ್ಯಾ ಖರಸ್ತದಾ ।
ಉವಾಚ ರಕ್ಷಸಾಂ ಮಧ್ಯೇ ಖರಃ ಖರತರಂ ವಚಃ ॥೧॥

ಶೂರ್ಪಣಖೆಯಿಂದ ಹೀಗೆ ನಿಂದಿಸಲ್ಪಟ್ಟ ಖರ ರಾಕ್ಷಸರ ಮಧ್ಯದಲ್ಲಿ ಅತ್ಯಂತ ಕ್ರೂರವಾದ ಮಾತುಗಳನ್ನಾಡಿದ.

ತವಾವಮಾನಪ್ರಭವಃ ಕ್ರೋಧೋಽಯಮತುಲೋ ಮಮ ।
ನ ಶಕ್ಯತೇ ಧಾರಯಿತುಂ ಲವಣಾಂಭ ಇವೋತ್ಥಿತಮ್ ॥೨॥

ನಿನ್ನ ಅವಮಾನದಿಂದ ಉಂಟಾಗಿರುವ ಅತುಲ ಕ್ರೋಧವನ್ನು ಧರಿಸಲಾಗುತ್ತಿಲ್ಲ –ಉಕ್ಕೇರಿದ ಸಮುದ್ರವನ್ನೆಂಬಂತೆ.

ನ ರಾಮಂ ಗಣಯೇ ವೀರ್ಯಾನ್ಮಾನುಷಂ ಕ್ಷೀಣಜೀವಿತಮ್ ।
ಆತ್ಮದುಶ್ಚರಿತೈಃ ಪ್ರಾಣಾನ್ ಹತೋ ಯೋಽದ್ಯ ವಿಮೋಕ್ಷ್ಯತಿ ॥೩॥

ವೀರತನದಲ್ಲಿ ಮಾನುಷ ರಾಮನನ್ನು ನಾನು ಲೆಕ್ಕಿಸುವುದಿಲ್ಲ. ಅವನ ಬದುಕು ಈಗ ಕ್ಷೀಣವಾಗಿದೆ. ತನ್ನ ದುರ್ನಡೆಯಿಂದ ಈಗಲೇ ಸತ್ತಿರುವ ಅವನು ಪ್ರಾಣ ಬಿಡಲಿದ್ದಾನೆ.

ಬಾಷ್ಪಃ ಸಂಹ್ರಿಯತಾಮೇಷ ಸಂಭ್ರಮಶ್ಚ ವಿಮುಚ್ಯತಾಮ್ ।
ಅಹಂ ರಾಮಂ ಸಹ ಭ್ರಾತ್ರಾ ನಯಾಮಿ ಯಮಸಾದನಮ್ ॥೪॥

ಕಂಬನಿಯನ್ನು ನಿಲ್ಲಿಸು. ಭಯ ಬಿಡು. ತಮ್ಮ ದೂಷಣನೊಂದಿಗೆ ಕಾಮನನ್ನು ಯಮಲೋಕಕ್ಕೆ ಅಟ್ಟುತ್ತೇನೆ.

ಪರಶ್ವಧಹತಸ್ಯಾದ್ಯ ಮಂದಪ್ರಾಣಸ್ಯ ಸಂಯುಗೇ ।
ರಾಮಸ್ಯ ರುಧಿರಂ ರಕ್ತಮುಷ್ಣಂ ಹಾಸ್ಯಸಿ ರಾಕ್ಷಸಿ ॥೫॥

ರಾಕ್ಷಸಿ! ಕೊಡಲಿಯ ಹೊಡೆತದಿಂದ ಪ್ರಾಣಬಿಡುವ ರಾಮನ ಬಿಸಿರಕ್ತವನ್ನು ನೀನು ಸದ್ಯದಲ್ಲಿಯೇ ಕುಡಿಯಲಿರುವಿ.

ಸಾ ಪ್ರಹೃಷ್ಟಾ ವಚಃ ಶ್ರುತ್ವಾ ಖರಸ್ಯ ವದನಾಚ್ಚ್ಯುತಮ್ ।
ಪ್ರಶಶಂಸ ಪುನರ್ಮೌಖ್ಯಾದ್ಭ್ರಾತರಂ ರಕ್ಷಸಾಂ ವರಮ್ ॥೬॥

ಖರನ ಮುಖದಿಂದ ಹೊಮ್ಮಿದ ವೀರತನದ ಮಾತುಗಳನ್ನು ಕೇಳಿ ಹರ್ಷಗೊಂಡ ಶೂರ್ಪಣಖೆ ರಾಕ್ಷಸ ಶ್ರೇಷ್ಠ ಸಹೋದರನನ್ನು ಮೂರ್ಖತನದಿಂದ ಮತ್ತೆ ಪ್ರಶಂಸಿಸಿದಳು.

ತಯಾ ಪರುಷಿತಃ ಪೂರ್ವಂ ಪುನರೇವ ಪ್ರಶಂಸಿತಃ ।
ಅಬ್ರವೀದ್ದೂಷಣಂ ನಾಮ ಖರಃ ಸೇನಾಪತಿಂ ತದಾ ॥೭॥

ಆ ಶೂಪರ್ಣಖೆಯಿಂದ ಮೊದಲು ನಿಂದಿತನಾಗಿ ಈಗ ಪ್ರಶಂಸಿತನಾದ ಖರ ತನ್ನ ಸೇನಾಪತಿ ದೂಷಣನನ್ನು ಕರೆದು ಹೇಳಿದ.

ಚತುರ್ದಶ ಸಹಸ್ರಾಣಿ ಮಮ ಚಿತ್ತಾನುವರ್ತಿನಾಮ್ ।
ರಕ್ಷಸಾಂ ಭೀಮವೇಗಾನಾಂ ಸಮರೇಷ್ವನಿವರ್ತಿನಾಮ್ ॥೮॥

ನೀಲಜೀಮೂತವರ್ಣಾನಾಂ ಘೋರಾಣಾಂ ಕ್ರೂರಕರ್ಮಣಾಮ್ ।
ಲೋಕಹಿಂಸಾವಿಹಾರಾಣಾಂ ಬಲಿನಾಮುಗ್ರತೇಜಸಾಮ್ ॥೯॥

ತೇಷಾಂ ಶಾರ್ದೂಲದರ್ಪಾಣಾಂ ಮಹಾಸ್ಯಾನಾಂ ಮಹೌಜಸಾಮ್ ।
ಸರ್ವೋದ್ಯೋಗಮುದೀರ್ಣಾನಾಂ ರಕ್ಷಸಾಂ ಸೌಮ್ಯ ಕಾರಯ ॥೧೦॥

ನನ್ನ ಚಿತ್ತಾನುವರ್ತಿಗಳು, ಭಯಂಕರವೇಗದ, ಸಮರದಲ್ಲಿ ಹಿಂದಿರುಗದ, ನೀಲಮೋಡಗಳ ವರ್ಣದವರು, ಘೋರರು, ಕ್ರೂರಕರ್ಮಿಗಳು, ಲೋಕಹಿಂಸಾ-ವಿಹಾರರು, ಬಲಶಾಲಿಗಳು, ಉಗ್ರತೇಜಸ್ವಿಗಳು, ಶಾರ್ದೂಲ ದರ್ಪದವರು, ಮಹಾಮುಖದವರು, ಮಹಾ ಓಜಸ್ಸಿನವರು, ಸಮರ್ಥರೂ ಆದ ಹದಿನಾಲ್ಕು ಸಾವಿರ ರಾಕ್ಷಸರ ಸೈನ್ಯವನ್ನು ಸಿದ್ಧಗೊಳಿಸು.

ಉಪಸ್ಥಾಪಯ ಮೇ ಕ್ಷಿಪ್ರಂ ರಥಂ ಸೌಮ್ಯ ಧನೂಂಷಿ ಚ ।
ಶರಾಂಶ್ಚಿತ್ರಾಂಶ್ಚ ಖಡ್ಗಾಂಶ್ಚ ಶಕ್ತೀಶ್ಚ ವಿವಿಧಾಃ ಶಿತಾಃ ॥೧೧॥

ಸೌಮ್ಯನೇ! ಕೂಡಲೆ ರಥವನ್ನು ಸಿದ್ಧಗೊಳಿಸು. ಚಿತ್ರ ವಿಚಿತ್ರ ಬಾಣಗಳನ್ನು ಖಡ್ಗಗಳನ್ನು ಹರಿತವಾದ ಬಗೆಬಗೆಯ ಶಕ್ತಿ ಆಯುಧಗಳನ್ನೂ ರಥದಲ್ಲಿಡು.

ಅಗ್ರೇ ನಿರ್ಯಾತುಮಿಚ್ಛಾಮಿ ಪೌಲಸ್ತ್ಯಾನಾಂ ಮಹಾತ್ಮನಾಮ್ ।
ವಧಾರ್ಥಂ ದುರ್ವಿನೀತಸ್ಯ ರಾಮಸ್ಯ ರಣಕೋವಿದಃ ॥೧೨॥

ಮಹಾತ್ಮ ಪೌಲಸ್ತ್ಯರ ಅಗ್ರೇಸರನಾಗಿ ರಣಕೋವಿದನಾದ ನಾನು ದುರ್ವಿನೀತ ರಾಮನ ವಧೆಗಾಗಿ ಹೊರಡಲು ಬಯಸಿದ್ದೇನೆ.

ಇತಿ ತಸ್ಯ ಬ್ರುವಾಣಸ್ಯ ಸೂರ್ಯವರ್ಣಂ ಮಹಾರಥಮ್ ।
ಸದಶ್ವೈಃ ಶಬಲೈರ್ಯುಕ್ತಮಾಚಚಕ್ಷೇऽಥ ದೂಷಣಃ ॥೧೩॥

ಹೀಗೆ ಖರ ಹೇಳಿದಾಗ ಅವನ ಸೂರ್ಯವರ್ಣದ ಮಹಾರಥವನ್ನು ನಾನಾ ಬಣ್ಣದ ಉತ್ತಮ ಕುದುರೆಗಳಿಂದ ಕೂಡಿದ ರಥ ಸಿದ್ಧವಾದುದನ್ನು ದೂಷಣ ಖರನಿಗೆ ತಿಳಿಸಿದನು.

ತಂ ಮೇರುಶಿಖರಾಕಾರಂ ತಪ್ತಕಾಂಚನಭೂಷಣಮ್ ।
ಹೇಮಚಕ್ರಮಸಂಬಾಧಂ ವೈಡೂರ್ಯಮಯಕೂಬರಮ್ ॥೧೪॥

ಮತ್ಸ್ಯೈಃ ಪುಷ್ಪೈರ್ದ್ರುಮೈಃ ಶೈಲೈಶ್ಚಂದ್ರಸೂರ್ಯೈಶ್ಚ ಕಾಂಚನೈಃ ।
ಮಂಗಲೈಃ ಪಕ್ಷಿಸಂಘೈಶ್ಚ ತಾರಾಭಿರಭಿರಸಂವೃತಮ್ ॥೧೫॥

ಧ್ವಜನಿಸ್ತ್ರಿಂಶಸಂಪನ್ನಂ ಕಿಂಕಿಣೀಕವಿರಾಜಿತಮ್ ।
ಸದಶ್ವಯುಕ್ತಂ ಸೋಽಮರ್ಷಾದಾರುರೋಹ ಖರೋ ರಥಮ್॥೧೬॥

ಮೇರುಶಿಖರದಂತೆ ಉನ್ನತವು, ಕಾದಚಿನ್ನದ ಅಲಂಕಾರ ಯುಕ್ತವು, ಬಂಗಾರ ಖಚಿತ ಚಕ್ರವುಳ್ಳದ್ದು, ವೈಡೂರ್ಯಮಯವಾದ ನೊಗವನ್ನಿಟ್ಟು ಕಟ್ಟುವ ಉದ್ದದ ಮರವುಳ್ಳದ್ದು.

ಮೀನು, ಪುಷ್ಪ, ಮರ, ಶೈಲ, ಚಂದ್ರ ಸೂರ್ಯರ ಬಂಗಾರದ ಕೆತ್ತನೆಯ ಚಿತ್ರಗಳುಳ್ಳದ್ದು, ಮಂಗಲಮಯ ಸುವರ್ಣಮಯ ಹಕ್ಕಿಗಳ ಚಿತ್ರ , ನಕ್ಷತ್ರಗಳಿಂದ ಅಲಂಕೃತವು, ಧ್ವಜ, ಆಯುಧಗಳಿಂದ ಸಂಪನ್ನವು, ಸಣ್ಣ–ಸಣ್ಣ ಗಂಟೆಗಳಿಂದ ಕೂಡಿದುದು ಒಳ್ಳೆ ಕುದುರೆಗಳಿಂದ ಯುಕ್ತವಾದ ಸುಂದರ ರಥವನ್ನು ಖರನು ಆಗ ತುಂಬ ಸಿಟ್ಟಿನಿಂದ ಏರಿದನು.

ನಿಶಾಮ್ಯ ತು ರಥಸ್ಥಂ ತಂ ರಾಕ್ಷಸಾ ಭೀಮವಿಕ್ರಮಾಃ ।
ತಸ್ಥುಃ ಸಂಪರಿವಾರ್ಯೈನಂ ದೂಷಣಂ ಚ ಮಹಾಬಲಮ್ ॥೧೭॥

(ಈ ಶ್ಲೋಕವು ಕೆಲವು ಪಾಠದಲ್ಲಿಲ್ಲ)

ಖರನು ರಥವೇರಿದುದನ್ನು ನೋಡಿ ಭೀಮ ವಿಕ್ರಮರಾದ ರಾಕ್ಷಸರು ಈ ಖರನನ್ನು ಮಹಾಬಲ ದೂಷಣನನ್ನು ಸುತ್ತುವರಿದು ನಿಂತರು.

ಖರಸ್ತು ತಾನ್ ಮಹೇಷ್ವಾಸಾನ್ ಘೋರವರ್ಮಾಯುಧಧ್ವಜಾನ್ ।
ನಿರ್ಯಾತೇತ್ಯಬ್ರವೀದ್ಧೃಷ್ಟೋ ರಥಸ್ಥಃ ಸರ್ವರಾಕ್ಷಸಾನ್ ॥೧೮॥

ಖರನು ಮಹಾಬಿಲ್ಲುಗಾರರಾದ, ಘೋರ ಕವಚ ಆಯುಧ, ಧ್ವಜವುಳ್ಳ ಎಲ್ಲ ರಾಕ್ಷಸರನ್ನು ರಥಸ್ಥನಾಗಿ ನೋಡಿ ಖುಷಿಗೊಂಡು ಹೊರಡಿರಿ ಎಂದು ಆದೇಶಿಸಿದ.

ರಥಚರ್ಮಾಯುದ್ಧ ಧ್ವಜವರ್ಣ–ಪಾಠಾಂತರ.

ನಿರ್ಯಾತೇತ್ಯಬ್ರವೀತ್ ಪ್ರೇಕ್ಷ್ಯ ದೂಷಣಃ ಸರ್ವರಾಕ್ಷಸಾನ್-ಪಾಠಾಂತರ

ತತಸ್ತದ್ರಾಕ್ಷಸಂ ಸೈನ್ಯಂ ಘೋರವರ್ಮಾಯುಧಧ್ವಜಮ್ ।
ನಿರ್ಜಗಾಮ ಜನಸ್ಥಾನಾನ್ಮಹಾನಾದಂ ಮಹಾಜವಮ್ ॥೧೯॥

(ಘೋರಚರ್ಮಾಯುಧಧ್ವಜಮ್-ಪಾಠಾಂತರ)

ಬಳಿಕ ಘೋರ ಕವಚಾಯುಧ ಧ್ವಜಗಳನ್ನೊಳಗೊಂಡ, ಮಹಾವೇಗದ ಆ ರಾಕ್ಷಸ ಸೈನ್ಯವು ಮಹಾನಾದಗೈಯ್ಯುತ್ತಾ ಜನಸ್ಥಾನದಿಂದ ಹೊರಟಿತು.

ಮುದ್ಗರೈಃ ಪಟ್ಟಿಶೈಃ ಶೂಲೈಃ ಸುತೀಕ್ಷ್ಣೈಶ್ಚ ಪರಶ್ವಧೈಃ ।
ಖಡ್ಗೈಶ್ಚಕ್ರೈಶ್ಚ ಹಸ್ತಸ್ಥೈರ್ಭ್ರಾಜಮಾನೈಶ್ಚ ತೋಮರೈಃ ॥೨೦॥

ಶಕ್ತಿಭಿಃ ಪರಿಘೈಘೋರೈರತಿಮಾತ್ರೈಶ್ಚ ಕಾರ್ಮುಕೈಃ ।
ಗದಾಸಿಮುಸಲೈರ್ವಜ್ರೈರ್ಗೃಹೀತೈರ್ಭೀಮದರ್ಶನೈಃ ॥೨೧॥

ರಾಕ್ಷಸಾನಾಂ ಸುಘೋರಾಣಾಂ ಸಹಸ್ರಾಣಿ ಚತುರ್ದಶ ।
ನಿರ್ಯಾತಾನಿ ಜನಸ್ಥಾನಾತ್ ಖರಚಿತ್ತಾನುವರ್ತಿನಾಮ್ ॥೨೨॥

ಮುದ್ಗರ ಪಟ್ಟಿಂಶ ಶೂಲ ಹರಿತವಾದ ಗಂಡುಕೊಡಲಿಗಳು, ಖಡ್ಗ, ಚಕ್ರ, ವಜ್ರ ಪೊಳೆಯುವ ತೋಮರ ಶಕ್ತಿ, ಘೋರ ಪರಿಘಗಳು, ಅತ್ಯಂತ ಎತ್ತರದ ಬಿಲ್ಲು-ಗಳು, ಗದಾ ಖಡ್ಗ ಮುಸಲ-ಇವುಗಳನ್ನು ಕೈಯಲ್ಲಿ ಹಿಡಿದಿರುವ ಖರಚಿತ್ತಾನು-ವರ್ತಿಗಳಾದ ಮಹಾಘೋರರಾದ ಹದಿನಾಲ್ಕು ಸಾವಿರ ರಾಕ್ಷಸರ ಮಹಾಸೈನ್ಯವು ಜನಸ್ಥಾನದಿಂದ ಹೊರಟಿತು.

ತಾಂಸ್ತ್ವಭಿದ್ರವತೋ ದೃಷ್ಟ್ವಾ ರಾಕ್ಷಸಾನ್ ಭೀಮವಿಕ್ರಮಾನ್ ।
ಖರಸ್ಯಾಪಿ ರಥಃ ಕಿಂಚಿಜ್ಜಗಾಮ ತದನಂತರಮ್ ॥೨೩॥

ಭಯಂಕರ ಪರಾಕ್ರಮದ ರಾಕ್ಷಸರು ಮುಂದೋಡುತ್ತಿರುವುದನ್ನು ನೋಡಿ ಅವರ ಅನಂತರ ಖರನ ರಥವೂ ಸ್ವಲ್ಪ ಮುನ್ನಡೆಯಿತು.

ತತಸ್ತಾನ್ ಶಬಲಾನಶ್ವಾಂಸ್ತಪ್ತಕಾಂಚನಭೂಷಿತಾನ್ ।
ಖರಸ್ಯ ಮತಿಮಾಜ್ಞಾಯ ಸಾರಥಿಃ ಸಮಚೋದಯತ್ ॥೨೪॥

ಬಳಿಕ ಸುವರ್ಣಭೂಷಿತಗಳಾದ ಬಗೆಬಗೆಯ ಬಣ್ಣಗಳ ಕುದುರೆಗಳನ್ನು ಖರನ ಅಭಿಪ್ರಾಯ ತಿಳಿದು ಸಾರಥಿಯು ಚೆನ್ನಾಗಿ ಪ್ರಚೋದಿಸಿದನು.

ಸ ಚೋದಿತೋ ರಥಃ ಶೀಘ್ರಂ ಖರಸ್ಯ ರಿಪುಘಾತಿನಃ ।
ಶಬ್ದೇನಾಪೂರಯಾಮಾಸ ದಿಶಶ್ಚ ಪ್ರದಿಶಸ್ತದಾ ॥೨೫॥

ಆ ರಥವು ಚೆನ್ನಾಗಿ ಪ್ರಚೋದಿತವಾಗುತ್ತಲೆ ಶೀಘ್ರವಾಗಿ ದಿಕ್ಕು ವಿದಿಕ್ಕುಗಳನ್ನು ಶಬ್ದದಿಂದ ತುಂಬಿಸಿತು.

ಪ್ರವೃದ್ಧಮನ್ಯುಸ್ತು ಖರಃ ಖರಸ್ವನೋ
ರಿಪೋರ್ವಧಾರ್ಥಂ ತ್ವರಿತೋ ಯಥಾಂತಕಃ ।
ಅಚೂಚುದತ್ ಸಾರಥಿಮುನ್ನದನ್ ಘನಂ
ಮಹಾಬಲೋ ಮೇಘ ಇವಾಶ್ಮವರ್ಷವಾನ್ ॥೨೬॥

ಪ್ರವೃದ್ಧಕೋಪದ ಖರ ಖರಸ್ವನನಾಗಿ–ಭಯಂಕರ ಶಬ್ದ ಮಾಡುತ್ತ ಶತ್ರುವಧೆಗಾಗಿ ಆತುರನಾಗಿ ಯಮನಂತೆ ಜೋರಾಗಿ ಗರ್ಜನೆ ಮಾಡುತ್ತ ಸಾರಥಿಯನ್ನು ಪ್ರೇರೇಪಿಸಿದನು. ಕಲ್ಲು ಮಳೆ ಸುರಿಸುವ ಮಹಾಬಲದ ಮೇಘವು ಆಕಾಶವನ್ನು ಪ್ರಚೋದಿಸುವಂತೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತೆರಡನೇ ಸರ್ಗ ಮುಗಿಯಿತು.

❖

ತ್ರಯೋವಿಂಶಃ ಸರ್ಗಃ

ಕಥಾಸಾರಾಂಶ– ಜನಸ್ಥಾನದಿಂದ ಖರದೂಷಣರು ತಮ್ಮ ಸೇನೆಯೊಂದಿಗೆ ಯುದ್ಧಕ್ಕೆ ಹೊರಡು– ತ್ತಲೆ ಮಾರ್ಗದಲ್ಲಿ ಭಯಂಕರ ಅಪಶಕುನಗಳು ಉಂಟಾದವು. ಮೋಡಗಳು ನೀರಿನ ಬದಲು ರಕ್ತಸುರಿಸಿದವು.

ಖರನ ರಥದ ಧ್ವಜಸ್ತಂಭದ ಮೇಲೆ ಹದ್ದು ಕೂತಿತು. ಪಶು–ಪಕ್ಷಿಗಳು ವಿಕೃತವಾಗಿ ಕೂಗತೊಡಗಿದವು. ನರಿಗಳು ಬೆಂಕಿಯುಗುಳುತ್ತ ಭೈರವ ನಾದ ಮಾಡಿದವು.

ನೀರಿನ ಬದಲು ರಕ್ತವನ್ನು ತುಂಬಿಕೊಂಡ ಮೋಡಗಳು ದಟ್ಟವಾಗಿ ದಿಕ್ಕೆಲ್ಲ ಕೆಂಪಾಯಿತು. ಅಮಾವಾಸ್ಯೆಯಿಲ್ಲದಿದ್ದರೂ ರಾಹು ಸೂರ್ಯನನ್ನು ನುಂಗಿದ. ರಭಸದ ಸುಂಟರಗಾಳಿಯು ಬೀಸಿತು.

ರಾತ್ರಿ ಆಲ್ಲದಿದ್ದರೂ ಆಗಸ ನಕ್ಷತ್ರಗಳು ಮಿನುಗಿದವು. ಸರೋವರದ ತಾವರೆಗಳು ಒಣಗಿದವು. ಮೀನು ನೀರಹಕ್ಕಿಗಳು ಅಲ್ಲಿಯೇ ಲೀನವಾದವು. ಅನೇಕ ಉತ್ಪಾತ–ಗಳಾದವು.

ಗಾಳಿಯಿರದೆ ದಟ್ಟ ಧೂಳು ನೆಲದಿಂದ ಆಗಸದವರೆಗೆ ಹಮ್ಮಿಕೊಂಡವು. ಖರನ ಎಡಭುಜ ಅದುರಿತು.

ದುರುಳ ಖರ ಜೋರಾಗಿ ನಗುತ್ತ ತನ್ನ ಬಲದಲ್ಲಿ ಭರವಸೆಯಿರುವ ವೀರ ದುರ್ಬಲ ಶತ್ರುಗಳನ್ನು ಕಡೆಗಣಿಸುವಂತೆ ಈ ಎಲ್ಲ ಉತ್ಪಾತಗಳನ್ನು ಗಣನೆಗೇ ತೆಗೆದು–ಕೊಳ್ಳುವುದಿಲ್ಲ. ಐರಾವತವನ್ನೇರಿ ಬರುವ ಇಂದ್ರನನ್ನೆ ಉರುಳಿಸಬಲ್ಲೆ. ಇಬ್ಬರು ರಾಮ–ಲಕ್ಷ್ಮಣರು ಯಾವ ಲೆಕ್ಕ ಎಂದು ದುರಹಂಕಾರದ ಮಾತುಗಳನ್ನಾಡಿದ. ಅವನ ಸೈನಿಕರೂ ಅದರಿಂದ ಹರ್ಷಗೊಳ್ಳುತ್ತಿದ್ದರು.

ಯುದ್ಧವನ್ನು ನೋಡುವ ಕುತೂಹಲದಿಂದ ಅಂತರಿಕ್ಷದಲ್ಲಿ ನೆಲೆಸಿದ ಮಹಾತ್ಮರಾದ ಋಷಿಗಳು ದೇವಗಂಧರ್ವರು ಸಿದ್ಧಚಾರಣರು ಹೀಗೆ ಮಾತಾಡಿಕೊಂಡರು—

ಗೋ ಬ್ರಾಹ್ಮಣರಿಗೆ ಮಂಗಲವಾಗಲಿ. ಶ್ರೀರಾಘವನು ಪೌಲಸ್ತ್ಯವಂಶದ ಈ ರಜನೀಚರರನ್ನು ಸಂಹರಿಸಿ ಗೆಲ್ಲಲಿ.

ಖರನು ವೇಗವಾಗಿ ಮುನ್ನುಗ್ಗಿ ತನ್ನ ಸೈನ್ಯದ ಮುಂಭಾಗಕ್ಕೆ ಬಂದು ನಿಂತನು. ಹನ್ನೆರಡು ಪರಾಕ್ರಮಿ ರಾಕ್ಷಸರು ಅವನ ಸುತ್ತ ಬಂದು ನಿಂತರು.

ನಾಲ್ಕು ವೀರರಕ್ಕಸರು ದೂಷಣನ ಸುತ್ತಲೂ ನಿಂತರು.

❖

ಉತ್ಪಾತದರ್ಶನಮ್

ತಸ್ಮಿನ್ ಯಾತೇ ಜನಸ್ಥಾನಾದಶಿವಂ ಶೋಣಿತೋದಕಮ್ ।
ಅಭ್ಯವರ್ಷನ್ಮಹಾಮೇಘಸ್ತುಮುಲೋ ಗರ್ದಭಾರುಣಃ ॥೧॥

ತತ್ ಪ್ರಯಾತಂ ಬಲಂ ಘೋರ – ಪಾಠಾಂತರ.

ಜನಸ್ಥಾನದಿಂದ ಆ ಖರನ ಸೈನ್ಯವು ಹೊರಡಲು ಕತ್ತೆಯಂತೆ ಕೆಂಪಾದ ತುಮುಲವಾದ ಮಹಾಮೋಡ ಅಮಂಗಲವಾದ ರಕ್ತ ನೀರನ್ನು ಸುರಿಸಿತು.

ನಿಪೇತುಸ್ತುರಗಾಸ್ತಸ್ಯ ರಥಯುಕ್ತಾ ಮಹಾಜವಾಃ ।
ಸಮೇ ಪುಷ್ಪಚಿತೇ ದೇಶೇ ರಾಜಮಾರ್ಗೇ ಯದೃಚ್ಛಯಾ ॥೨॥

ರಥಕ್ಕೆ ಕಟ್ಟಿದ ಮಹಾವೇಗದ ಕುದುರೆಗಳು ಹೂವುಗಳು ನಿಬಿಡವಾದ ಸಮತಟ್ಟಾದ ದೇಶದಲ್ಲಿಯೂ ಬಿದ್ದವು.

ಶ್ಯಾಮಂ ರುಧಿರಪರ್ಯಂತಂ ಬಭೂವ ಪರಿವೇಷಣಮ್ ।
ಅಲಾತಚಕ್ರಪ್ರತಿಮಂ ಪರಿಗೃಹ್ಯ ದಿವಾಕರಮ್ ॥೩॥

ಸೂರ್ಯನ ಸುತ್ತಲೂ ಕೆಂಪು ತುದಿಯಿರುವ ಶ್ಯಾಮ ವರ್ಣದ ಕೊಳ್ಳಿ ಚಕ್ರದಂತೆ ಪ್ರಾಕಾರ ಕಂಡಿದೆ.

ತತೋ ಧ್ವಜಮುಪಾಗಮ್ಯ ಹೇಮದಂಡ ಸಮುಚ್ಛ್ರಿತಮ್।
ಸಮಾಕ್ರಮ್ಯ ಮಹಾಕಾಯಸ್ತಸ್ಥೌ ಗೃಧ್ರಃ ಸುದಾರುಣಃ ॥೪॥

ಬಳಿಕ ಎತ್ತರದ ಸುವರ್ಣದಂಡದ ಧ್ವಜದ ಸ್ತಂಭದ ಮೇಲೆ ಮಹಾಕಾಯದ ಭಯಂಕರವಾದ ಹದ್ದು ಕುಳಿತಿತು.

ಜನಸ್ಥಾನಸಮೀಪೇ ತೇ ಸಮಾಗಮ್ಯ ಖರಸ್ವನಾಃ ।
ವಿಸ್ವರಾನ್ ವಿವಿಧಾಂಶ್ಚಕ್ರುರ್ಮಾಂಸಾದಾ ಮೃಗಪಕ್ಷಿಣಃ ॥೫॥

ಜನಸ್ಥಾನದ ಬಳಿ ಬಂದು ಮಾಂಸತಿನ್ನುವ ಮೃಗಪಕ್ಷಿಗಳು ಭೀಕರವಾಗಿ ವಿಕೃತವಾಗಿ ಶಬ್ದ ಮಾಡಿದವು.

ವ್ಯಾಜಹ್ರುಶ್ಚ ಪ್ರದೀಪ್ತಾಯಾಂ ದಿಶಿ ವೈ ಭೈರವಸ್ವನಮ್ ।
ಅಶಿವಂ ಯಾತುಧಾನಾನಾಂ ಶಿವಾ ಘೋರಾ ಮಹಾಸ್ವನಾಃ ॥೬॥

ವ್ಯಾಜಹ್ರುರಭಿದೀಪ್ತಾಯಾಂ–ಪಾಠಾಂತರ

ಬಾಯಿಯಿಂದ ಬೆಂಕಿಯನ್ನುಗುಳುವ ಭಯಂಕರ ನರಿಗಳು ರಾಕ್ಷಸರಿಗೆ ಅಮಂಗಲಕರವಾಗಿ ಜೋರುಜೋರಾಗಿ ಭೈರವನಾದ ಮಾಡಿದವು.

ಪ್ರಭಿನ್ನಗಜಸಂಕಾಶಾಸ್ತೋಯಶೋಣಿತಧಾರಿಣಃ ।
ಆಕಾಶಂ ತದನಾಕಾಶಂ ಚಕ್ರುರ್ಭೀಮಾ ಬಲಾಹಕಾಃ ॥೭॥

ಪ್ರಭಿನ್ನಗಜಸಂಕಾಶಾಃ–ಪಾಠಾಂತರ.

ಸೀಳಿದ ಬೆಟ್ಟಗಳಂತೆ ಕಾಣುತ್ತಿದ್ದ ಮೋಡಗಳು ನೀರಿನಂತೆ ರಕ್ತವನ್ನು ತುಂಬಿಕೊಂಡ ಮೋಡಗಳು ಆವರಿಸಿಕೊಂಡು ಆಕಾಶದಲ್ಲಿ ಅವಕಾಶವೇ ಇಲ್ಲದಂತಾಯಿತು.

ಬಭೂವ ತಿಮಿರಂ ಘೋರಮುದ್ಧತಂ ರೋಮಹರ್ಷಣಮ್ ।
ದಿಶೋ ವಾ ವಿದಿಶೋ ವಾಪಿ ನ ಚ ವ್ಯಕ್ತಂ ಚಕಾಶಿರೇ ॥೮॥

ಮೈರೋಮಗಳು ನಿಮಿರಿಸುವ ಭಯ ಹುಟ್ಟಿಸುವ ದಟ್ಟವಾದ ಕತ್ತಲೆ ಹಬ್ಬಿಕೊಂಡು ದಿಕ್ಕು ವಿದಿಕ್ಕುಗಳೇ ಕಾಣಿಸಲಿಲ್ಲ.

ಕ್ಷತಜಾರ್ದ್ರಸವರ್ಣಾಭಾ ಸಂಧ್ಯಾ ಕಾಲಂ ವಿನಾ ಬಭೌ ।
ಖರಸ್ಯಾಭಿಮುಖಾ ನೇದುಸ್ತದಾ ಘೋರಮೃಗಾಃ ಖಗಾಃ ।
ಕಂಕಗೋಮಾಯುಗೃಧ್ರಾಶ್ಚ ಚುಕ್ರುಶುರ್ಭಯಶಂಸಿನಃ ॥೯॥

ಸಂಧ್ಯಾಕಾಲವಲ್ಲದೆ ರಕ್ತದಿಂದ ತೋಯ್ದ ಬಟ್ಟೆಯಂತೆ ಸಂಧ್ಯೆ ಭಾಸವಾಗುತ್ತಿತ್ತು. ಭಯಂಕರ ಪಶು–ಪಕ್ಷಿಗಳು ಖರನ ಮುಂದೆ ಅರಚುತ್ತಿದ್ದವು. ಬಿಳಿ ಕೆಂಪು ಹದ್ದುಗಳು ಗುಳ್ಳೆನರಿಗಳು ಭಯ ಸೂಚಿಸುತ್ತ ಕಿರುಚುತ್ತಿದ್ದವು.

ನಿತ್ಯಾಶುಭಕರಾ ಯುದ್ಧೇ ಶಿವಾ ಘೋರನಿದರ್ಶನಾಃ ।
ನೇದುರ್ಬಲಸ್ಯಾಭಿಮುಖಂ ಜ್ವಾಲೋದ್ಗಾರಿಭಿರಾನನೈಃ ॥೧೦॥

ನಿತ್ಯಾಶಿವಕಾರಾಃ–ಪಾಠಾಂತರ.

ನರಿಗಳು ನಿತ್ಯ ಅಶುಭಕರಗಳಾದ ಯುದ್ಧದಲ್ಲಿ ಘೋರತೆಯನ್ನು ತೋರಿಸು–ವಂತಹ ನರಿಗಳು ಸೇನೆಯ ಅಭಿಮುಖವಾಗಿ ಜ್ವಾಲೆಗಳನ್ನು ಉಗುಳುತ್ತ ಕೂಗುತ್ತಿದ್ದವು.

ಕಬಂಧಃ ಪರಿಘಾಭಾಸೋ ದೃಶ್ಯತೇ ಭಾಸ್ಕರಾಂತಿಕೇ ।
ಜಗ್ರಾಹ ಸೂರ್ಯಂ ಸ್ವರ್ಭಾನುರಪರ್ವಣಿ ಮಹಾಗ್ರಹಃ ॥೧೧॥

ಸೂರ್ಯನ ಬದಿಯಲ್ಲಿ ತಲೆಯಿಲ್ಲದ ಮುಂಡವು ಪರಿಘಾಯುಧದಂತೆ ಕಾಣುತ್ತಿತ್ತು. ಮಹಾಗ್ರಹ ರಾಹು ಅಮಾವಾಸ್ಯೆಯಿಲ್ಲದಿದ್ದರೂ ಸೂರ್ಯನನ್ನು ಕಬಳಿಸುತ್ತಿದ್ದ.

ಪ್ರವಾತಿ ಮಾರುತಃ ಶೀಘ್ರಂ ನಿಷ್ಪ್ರಭೋಽಭೂದ್ದಿವಾಕರಃ ।
ಉತ್ಪೇತುಶ್ಚ ವಿನಾ ರಾತ್ರಿಂ ತಾರಾಃ ಖದ್ಯೋತಸಪ್ರಭಾಃ ॥೧೨॥

ಸುಂಟರಗಾಳಿ ರಭಸದಿಂದ ಬೀಸುತ್ತಿತ್ತು. ಸೂರ್ಯ ಪ್ರಕಾಶಹೀನನಾದ. ರಾತ್ರಿಯಲ್ಲದೆಯೂ ಆಗಸದಲ್ಲಿ ಮಿಣುಕು ಹುಳದಂತೆ ತಾರೆಗಳು ಮಿನುಗು ತ್ತಿದ್ದವು.

ಸಂಲೀನಮೀನವಿಹಗಾ ನಲಿನ್ಯಃ ಶುಷ್ಕಪಂಕಜಾಃ ।
ತಸ್ಮಿನ್ ಕ್ಷಣೇ ಬಭೂವುಶ್ಚ ವಿನಾ ಪುಷ್ಪಫಲೈರ್ದ್ರುಮಾಃ ॥೧೩॥

ಮೀನು ನೀರಹಕ್ಕಿಗಳು ಸರೋವರದಲ್ಲಿ ಮುಳುಗಿ ಹೋದವು. ತಾವರೆಗಳು ಒಣಗಿಹೋದವು. ಅದೇ ಕ್ಷಣದಲ್ಲಿ ಮರಗಳು ಹೂಹಣ್ಣುಗಳಿಲ್ಲದಾದವು.

ಉದ್ಧೂತಶ್ಚ ವಿನಾ ವಾತಂ ರೇಣುರ್ಜಲಧರಾರುಣಃ ।
ವೀಚೀಕೂಚೀತಿ ವಾಶ್ಯಂತ್ಯೋ ಬಭೂವುಸ್ತತ್ರ ಶಾರಿಕಾಃ ॥೧೪॥

ಮೋಡಗಳಂತೆ ದಟ್ಟಕಪ್ಪಿನ ಧೂಳಿನ ರಾಶಿ ಗಾಳಿಯಿಲ್ಲದೆ ಮೇಲೆದ್ದಿತು. ನಾರಿಕೆಗಳು ಮೀಚೀ ಕೂಚೀ ಎಂದು ಚೀರುತ್ತಿದ್ದವು.

ಉಲ್ಕಾಶ್ಚಾಪಿ ಸನಿರ್ಘಾತಾ ನಿಪೇತುಘೋರದರ್ಶನಾಃ ।
ಪ್ರಚಚಾಲ ಮಹೀ ಸರ್ವಾ ಸಶೈಲವನಕಾನನಾ ॥೧೫॥

ನೋಡಲು ಭಯಂಕರವಾದ ಉಲ್ಕಗಳು ಬೀಳುತ್ತಿದ್ದವು. ಶೈಲ ಗಹನಾರಣ್ಯ ಸರಳಾರಣ್ಯಗಳಿಂದ ಕೂಡಿದ ಭೂಮಿ ಕಂಪಿಸಿತು.

ಖರಸ್ಯ ಚ ರಥಸ್ಥಸ್ಯ ನರ್ದಮಾನಸ್ಯ ಧೀಮತಃ ।
ಪ್ರಾಕಂಪತ ಭುಜಃ ಸವ್ಯಃ ಸ್ವರಶ್ಚಾಸ್ಯಾವಸಜ್ಜತ ॥೧೬॥

ರಥದಲ್ಲಿ ಕುಳಿತು ಗರ್ಜಿಸುತ್ತಿರುವ ಧೀಮಂತ ಖರನ ಎಡಭುಜ ಅದುರಿತು. ಸ್ವರ ಕುಗ್ಗಿತು.

ಸಾಸ್ರಾ ಸಂಪದ್ಯತೇ ದೃಷ್ಟಿಃ ಪಶ್ಯಮಾನಸ್ಯ ಸರ್ವತಃ ।
ಲಲಾಟೇ ಚ ರುಜಾ ಜಾತಾ ನ ಚ ಮೋಹಾನ್ನ್ಯವರ್ತತ ॥೧೭॥

ಎಲ್ಲೆಡೆ ದೃಷ್ಟಿ ಹಾಯಿಸುತ್ತಿರುವ ಕಣ್ಣುಗಳು ನೀರು ತುಂಬಿಕೊಂಡವು. ಹಣೆ-ಯಲ್ಲಿ ವೇದನೆ ಶುರುವಾಯಿತು. ಆದರೂ ಮೋಹದಿಂದ ಯುದ್ಧಪ್ರವೃತ್ತಿಯಿಂದ ಹಿಂದಿರುಗಲಿಲ್ಲ.

ತಾನ್ ಸಮೀಕ್ಷ್ಯ ಮಹೋತ್ಪಾತಾನುತ್ಥಿತಾನ್ ರೋಮಹರ್ಷಣಾನ್।
ಅಬ್ರವೀದ್ರಾಕ್ಷಸಾನ್ ಸರ್ವಾನ್ ಪ್ರಹಸನ್ ಸ ಖರಸ್ತದಾ ॥೧೮॥

ಮಹೋತ್ಪಾತಾನಿಮಾನ್ ಸರ್ವಾನುತ್ಥಿತಾನ್ ಘೋರದರ್ಶನಾನ್ ।
ನ ಚಿಂತಯಾಮ್ಯಹಂ ವೀರ್ಯಾದ್ಬಲವಾನ್ ದುರ್ಬಲಾನಿವ ॥೧೯॥

ಮೈನಿಮಿರೇಳಿಸುವ ಮಹೋತ್ಪಾತಗಳನ್ನು ನೋಡಿ ಖರ ಎಲ್ಲ ರಕ್ಕಸರನ್ನು ಕುರಿತು ನಗುತ್ತಲೆ ಹೇಳಿದ—

ತಾರಾ ಅಪಿ ಶರೈಸ್ತೀಕ್ಷ್ಣೈಃ ಪಾತಯಾಮಿ ನಭಃಸ್ಥಲಾತ್ ।
ಮೃತ್ಯುಂ ಮರಣಧರ್ಮೀಣ ಸಂಕ್ರುದ್ಧೋ ಯೋಜಯಾಮ್ಯಹಮ್ ॥

ನಾನು ತೀಕ್ಷ್ಣವಾದ ಬಾಣಗಳಿಂದ ಆಗಸದಿಂದ ತಾರೆಗಳನ್ನೆ ಕೆಳಗೆ ಬೀಳಿಸುತ್ತೇನೆ. ಸಂಕ್ರುದ್ಧನಾದರೆ ಮೃತ್ಯುವಿಗೇ ಮರಣ ಹೊಂದಿಸುತ್ತೇನೆ.

ರಾಘವಂ ತಂ ಬಲೋತ್ಸಿಕ್ತಂ ಭ್ರಾತರಂ ಚಾಸ್ಯ ಲಕ್ಷ್ಮಣಮ್ ।
ಅಹತ್ವಾ ಸಾಯಕೈಸ್ತೀಕ್ಷ್ಣೈರ್ನೋಪಾವರ್ತಿತುಮುತ್ಸಹೇ ॥೨೧॥

ಬಲಮದದ ರಾಮನನ್ನು ಲಕ್ಷ್ಮಣನನ್ನು ಕೊಲ್ಲದೆ ನಾನು ಇಲ್ಲಿಂದ ಹಿಂತಿರುಗುವುದಿಲ್ಲ.

ಸಕಾಮಾ ಭಗಿನೀ ಮೇಽಸ್ತು ಪೀತ್ವಾ ತು ರುಧಿರಂ ತಯೋಃ ।
ಯನ್ನಿಮಿತ್ತಸ್ತು ರಾಮಸ್ಯ ಲಕ್ಷ್ಮಣಸ್ಯ ವಿಪರ್ಯಯಃ ॥೨೨॥

ಯಾವ ಶೂರ್ಪಣಖೆಯ ನಿಮಿತ್ತವಾಗಿ ರಾಮಲಕ್ಷ್ಮಣ ತಪ್ಪಾಗಿ ನಡೆದರೋ ಆ ನನ್ನ ತಂಗಿ ಅವರಿಬ್ಬರ ನೆತ್ತರ ಕುಡಿದು ತನ್ನ ತೃಷೆಯನ್ನು ಸಂತೈಸಿಕೊಳ್ಳಲಿ.

ನ ಕ್ವಚಿತ್ ಪ್ರಾಪ್ತಪೂರ್ವೋ ಮೇ ಸಂಯುಗೇಷು ಪರಾಜಯಃ ।
ಯುಷ್ಮಾಕಮೇತತ್ ಪ್ರತ್ಯಕ್ಷಂ ನಾನೃತಂ ಕಥಯಾಮ್ಯಹಮ್ ॥೨೩॥

ಈ ಮುಂಚೆ ಯಾವ ಯುದ್ಧದಲ್ಲಿಯೂ ನಾನು ಪರಾಜಯ ಪಡೆದಿಲ್ಲ. ನಿಮಗಿದು ಪ್ರತ್ಯಕ್ಷಸಿದ್ಧವಾಗಿದೆ. ನಾನು ಸುಳ್ಳು ಹೇಳುವುದಿಲ್ಲ.

ದೇವರಾಜಮಪಿ ಕ್ರುದ್ಧೋ ಮತ್ತೈರಾವತಯಾಯಿನಮ್ ।
ವಜ್ರಹಸ್ತಂ ರಣೇ ಹನ್ಯಾಂ ಕಿಂ ಪುನಸ್ತೌ ಕುಮಾನುಷೌ ॥೨೪॥

ನಾನು ಕ್ರುದ್ಧನಾದರೆ ಮತ್ತು ಐರಾವತದ ಮೇಲೇರಿ ಬರುವ ವಜ್ರಪಾಣಿ ದೇವೇಂದ್ರನನ್ನೆ ಯುದ್ಧದಲ್ಲಿ ಕೊಲ್ಲಬಲ್ಲೆ. ಇನ್ನು ಕ್ಷುದ್ರ ಮನುಜರಾದ ಆ ರಾಮ-ಲಕ್ಷ್ಮಣರು ಯಾವ ಲೆಕ್ಕ?

ಸಾ ತಸ್ಯ ಗರ್ಜಿತಂ ಶ್ರುತ್ವಾ ರಾಕ್ಷಸಸ್ಯ ಮಹಾಚಮೂಃ ।
ಪ್ರಹರ್ಷಮತುಲಂ ಲೇಭೇ ಮೃತ್ಯುಪಾಶಾವಪಾಶಿತಾ ॥೨೫॥

ಆ ಖರನ ಗರ್ಜನೆ ಕೇಳಿ ಮೃತ್ಯುಪಾಶದ ಬಂಧನಕ್ಕೊಳಗಾಗಿರುವ ಅವನ ಆ ದೊಡ್ಡಸೇನೆ ಅತುಲ ಹರ್ಷವನ್ನು ಹೊಂದಿತು.

ಸಮೀಯುಶ್ಚ ಮಹಾತ್ಮಾನೋ ಯುದ್ಧದರ್ಶನಕಾಂಕ್ಷಿಣಃ ॥
ಋಷಯೋ ದೇವಗಂಧರ್ವಾಃ ಸಿದ್ಧಾಶ್ಚ ಸಹ ಚಾರಣೈಃ ॥೨೬॥

ಸಮೇತ್ಯ ಚೋಚುಃ ಸಹಿತಾಸ್ತೇಽನ್ಯೋನ್ಯಂ ಪುಣ್ಯಕರ್ಮಣಃ ॥೨೭॥

ಯುದ್ಧವನ್ನು ಕಾಣಲು ಬಯಸಿದವರಾಗಿ ಋಷಿ, ದೇವ ಗಂಧರ್ವರು, ಚರಣರೊಂದಿಗೆ ಸಿದ್ಧರು—ಎಲ್ಲ ಮಹಾತ್ಮರು ಆಗಮಿಸಿದರು. ಪುಣ್ಯಕರ್ಮರಾದ ಅವರು ಒಂದೆಡೆ ಕಲೆತು ಪರಸ್ಪರ ಹೀಗೆ ಮಾತನಾಡಿಕೊಂಡರು.

ಸ್ವಸ್ತಿ ಗೋಬ್ರಾಹ್ಮಣೇಭ್ಯೋಽಸ್ತು ಲೋಕಾನಾಂ ಯೇಽಭಿಸಂಗತಾಃ ।
ಜಯತಾಂ ರಾಘವಃ ಸಂಖ್ಯೇ ಪೌಲಸ್ತ್ಯಾನ್ ರಜನೀಚರಾನ್ ॥೨೮॥

ಚಕ್ರಹಸ್ತೋ ಯಥಾ ಯುದ್ಧೇ ಸರ್ವಾನಸುರಪುಂಗವಾನ್।
ಏತಚ್ಚಾನ್ಯಚ್ಚ ಬಹುಶೋ ಬ್ರುವಾಣಾಃ ಪರಮರ್ಷಯಃ ॥೨೯॥

ಜಾತಕೌತೂಹಲಾಸ್ತತ್ರ ವಿಮಾನಸ್ಥಾಶ್ಚ ದೇವತಾಃ ।
ದದೃಶುರ್ವಾಹಿನೀಂ ತೇಷಾಂ ರಾಕ್ಷಸಾನಾಂ ಗತಾಯುಷಾಮ್ ॥೩೦॥

ಗೋಬ್ರಾಹ್ಮಣರಿಗೆ ಮಂಗಳವಾಗಲಿ. ಬೇರೆ ಲೋಕದಲ್ಲಿರುವ ಸಜ್ಜನರಿಗೆ ಸಹ ಮಂಗಳವಾಗಲಿ. ಯುದ್ಧದಲ್ಲಿ ಪೌಲಸ್ತ್ಯವಂಶದ ರಜನೀಚರರನ್ನು ರಾಘವನು

ಸೋಲಿಸಲಿ—ಚಕ್ರಪಾಣಿ ವಿಷ್ಣು ಯುದ್ಧದಲ್ಲಿ ಎಲ್ಲ ಅಸುರರನ್ನು ಸೋಲಿಸುವಂತೆ. ಇನ್ನೂ ಅನೇಕ ಮಾತುಗಳನ್ನಾಡುತ್ತಿದ್ದ ಪರಮರ್ಷಿಗಳು ದೇವತೆಗಳೂ ಕೂಡ ಈ ಯುದ್ಧದ ಬಗ್ಗೆ ಕುತೂಹಲವುಳ್ಳವರಾಗಿ ವಿಮಾನದಲ್ಲಿ ನಿಂತವರಾಗಿ ಆಯುಷ್ಯಹೀನರಾದ ರಾಕ್ಷಸರ ದೊಡ್ಡ ಸೇನೆಯನ್ನು ಕಂಡರು.

ರಥೇನ ತು ಖರೋ ವೇಗಾತ್ ಸೈನ್ಯಸ್ಯಾಗ್ರಾದ್ವಿನಿಃಸೃತಃ ।
ತಂ ದೃಷ್ಟ್ವಾ ರಾಕ್ಷಸಂ ಭೂಯೋ ರಾಕ್ಷಸಾಶ್ಚ ವಿನಿಃಸೃತಾಃ ॥೫೧॥

ಉಗ್ರಸೈನ್ಯದ ಖರನು ವೇಗವಾಗಿ ರಥದಿಂದ ಹೊರಟ. ಅವನನ್ನು ಗಮನಿಸಿದ ರಾಕ್ಷಸರೂ ಹೊರಟರು.

ಸೈನ್ಯಸ್ಯಾಗ್ರಾತ್ –ಪಾಠಾಂತರ.

ಶ್ಯೇನಗಾಮೀ ಪೃಥಗ್ಗ್ರೀವೋ ಯಜ್ಞಶತ್ರುರ್ವಿಹಂಗಮಃ ।
ದುರ್ಜಯಃ ಕರವೀರಾಕ್ಷಃ ಪರುಷಃ ಕಾಲಕಾರ್ಮುಕಃ ॥೫೨॥

ಮೇಘಮಾಲೀ ಮಹಾಮಾಲೀ ಸರ್ಪಾಸ್ಯೋ ರುಧಿರಾಶನಃ ।
ದ್ವಾದಶೈತೇ ಮಹಾವೀರ್ಯಾಃ ಪ್ರತಸ್ಥುರಭಿತಃ ಖರಮ್ ॥೫೩॥

ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಕರವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲೀ, ಮಹಾಮಾನೀ, ಸರ್ಪಾಸ್ಯ, ರುಧಿರಾಶನ ಮಹಾವೀರ್ಯವಂತರಾದ ಈ ಹನ್ನೆರಡು ಮಂದಿ ಖರನನ್ನು ಸುತ್ತುವರಿದು ಪಯಣಿಸಿದರು.

ಹೇಮಮಾಲೀ ಮಹಾಮಾಲೀ –ಪಾಠಾಂತರ.

ಮಹಾಕಪಾಲಃ ಸ್ಥೂಲಾಕ್ಷಃ ಪ್ರಮಾಥೀ ತ್ರಿಶಿರಾಸ್ತಥಾ ।
ಚತ್ವಾರ ಏತೇ ಸೇನಾನ್ಯೋ ದೂಷಣಂ ಪೃಷ್ಠತೋ ಯಯುಃ ॥೫೪॥

ಮಹಾಕಪಾಲ, ಸ್ಥೂಲಾಕ್ಷ, ಪ್ರಮಾಥೀ, ತ್ರಿಶಿರ–ಈ ನಾಲ್ಕು ಸೇನಾಪತಿಗಳು ದೂಷಣನನ್ನು ಹಿಂಬಾಲಿಸಿದರು.

ಸೇನಾಸ್ತೇ – ಪಾಠಾಂತರ.

ಸಾ ಭೀಮವೇಗಾ ಸಮರಾಭಿಕಾಮಾ
ಮಹಾಬಲಾ ರಾಕ್ಷಸವೀರಸೇನಾ ।

ತೌ ರಾಜಪುತ್ರೌ ಸಹಸಾಭ್ಯುಪೇತಾ
ಮಾಲಾ ಗ್ರಹಾಣಾಮಿವ ಚಂದ್ರಸೂರ್ಯೌ ॥೩೫॥

ಯುದ್ಧದ ಬಯಕೆಯ ಮಹಾಬಲಶಾಲಿ ಭೀಮವೇಗದ ಆ ರಾಕ್ಷಸ ವೀರಸೇನೆಯು ಆ ರಾಜಪುತ್ರ–ರಾಮಲಕ್ಷ್ಮಣರನ್ನು ಕೂಡಲೆ ಸಮೀಪಿಸಿತು. ತಾರೆಗಳ ಮೇಲೆ ಚಂದ್ರಸೂರ್ಯರನ್ನು ಸಮೀಪಿಸಿದಂತೆ!

ಸಮರಾಭಿಕಾಂಕ್ಷಿಣೀ – ಪಾಠಾಂತರ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತಮೂರನೇಸರ್ಗ ಮುಗಿಯಿತು.

❖

ಚತುರ್ವಿಂಶಃ ಸರ್ಗಃ

ಕಥಾಸಾರಾಂಶ– ಖರನ ಸೈನ್ಯವು ಆಶ್ರಮದ ಕಡೆ ಸುಳಿಯುತ್ತಿರುವಾಗ ಅತ್ತ ರಾಮನು ಉತ್ಪಾತ ಸೂಚಿತ ಲಕ್ಷಣಗಳನ್ನು ಗಮನಿಸಿ ಲಕ್ಷ್ಮಣನಿಗೆ ಹೇಳಿದನು—

ಮಹಾಬಾಹು ಲಕ್ಷ್ಮಣ! ರಕ್ಕಸರ ಸಂಹಾರಕ್ಕಾಗಿ ಪ್ರಕಟವಾಗುತ್ತಿರುವ ಈ ಮಹೋತ್ಪಾತಗಳನ್ನು ಗಮನಿಸು.

ಕತ್ತೆಯಂತೆ ಕಪ್ಪಾದ ಮೋಡಗಳು ಜೋರಾದ ಗುಡುಗಿನೊಂದಿಗೆ ರಕ್ತಧಾರೆ ಯನ್ನು ಸುರಿಸುತ್ತಿವೆ. ನನ್ನ ಬಾಣಗಳು ಹೊಗೆಯುಗುಳುತ್ತಿವೆ. ಹೆಗಲಿಗೆ ಆತು– ಕೊಂಡಿರುವ ಬಿಲ್ಲು ಯುದ್ಧೋತ್ಸಾಹದಿಂದ ಚಲಿಸುತ್ತಿರುವಂತೆ ಭಾಸವಾಗುತ್ತಿದೆ. ನನ್ನ ಬಲಭುಜ ಅದುರುತ್ತಿದೆ. ಸದ್ಯದಲ್ಲಿಯೇ ಮಹಾಭಯದ ಸಂಗ್ರಾಮ ಶುರುವಾಗಲಿದೆ. ನಮಗೆ ಜಯ ಶತ್ರುಗಳಿಗೆ ಪರಾಜಯವುಂಟಾಗುವ ಸೂಚನೆ ಗಳು ಗೋಚರಿಸುತ್ತಿವೆ. ನಿನ್ನ ಮುಖ ಪ್ರಸನ್ನವಾಗಿಯು ಪ್ರಭಾಸಂಪನ್ನ ವಾಗಿಯೂ ಕಂಗೊಳಿಸುತ್ತಿದೆ. ಯುದ್ಧಕ್ಕೆ ತೊಡಗಿದವರ ಮುಖ ಮುಂಚೆಯೇ ಬಾಡಿದ್ದರೆ ಅದು ಆಯುಃಕ್ಷಯದ ಸೂಚಕವಾಗುತ್ತದೆ. ನಿನ್ನ ಮುಖಲಕ್ಷಣವು ನಮ್ಮ ಜಯವನ್ನು ಸೂಚಿಸುತ್ತಿದೆ.

ಗರ್ಜಿಸುತ್ತಿರುವ ರಾಕ್ಷಸರ ಮಹಾಧ್ವನಿ ಕೇಳಿಬರುತ್ತಿದೆ. ಬುದ್ಧಿವಂತನಾದವನು ಆಪತ್ತು ಬರುವ ಮುಂಚೆ ಅದನ್ನು ಎದುರಿಸಲು ಸಿದ್ಧನಾಗಿ ದಿಟ್ಟತನದಿಂದಿರಬೇಕು.

ಲಕ್ಷ್ಮಣ! ನೀನು ಶರಪಾಣಿಯಾಗಿ ಸಮೀಪದಲ್ಲಿರುವ ಗುಹೆಗೆ ಸೀತೆಯನ್ನು ಒಯ್ದು ನೀನಲ್ಲೆ ಇರು. ನನ್ನ ಪಾದದ ಮೇಲಾಣೆ–ನೀನು ಯುದ್ಧಕ್ಕೆ ಬರದೆ ಸೀತೆ ರಕ್ಷಣೆಯಲ್ಲಿ ಪ್ರವೃತ್ತನಾಗಬೇಕು. ನಿನಗೂ ಈ ರಕ್ಷಸರನ್ನು ಕೊಲ್ಲುವ ಶೌರ್ಯವಿದೆ. ಆದರೆ ನಾನೊಬ್ಬನೇ ಇವರನ್ನು ಸಂಹರಿಸುವ ಸಂಕಲ್ಪ ಮಾಡಿದ್ದೇನೆ–ಎಂದು.

ರಾಮನ ಆಣತಿಯಂತೆ ಲಕ್ಷ್ಮಣನು ಸೀತೆಯೊಂದಿಗೆ ಗುಹೆಯ ಬಳಿ ನಡೆದ.

ಇತ್ತ ರಾಮನು ಕವಚ ತೊಟ್ಟು ಬಿಲ್ಲು ಹಿಡಿದು ಹೆಡೆ ಎಳೆದು ಅದರ ಟಂಕಾರದಿಂದ ದಿಕ್ಕುಗಳನ್ನು ತುಂಬಿಸುತ್ತ ಸಿದ್ಧನಾಗಿ ನಿಂತನು.

ಯುದ್ಧವನ್ನು ಕಾಣುವ ಬಯಕೆಯಿಂದ ಮಹರ್ಷಿಗಳು ಬ್ರಹ್ಮರ್ಷಿಗಳೆಲ್ಲ ಕುತೂಹಲಿಗಳಾಗಿ ಕಲೆತು–ಗೋ ಬ್ರಾಹ್ಮಣರಿಗೆ ಮಂಗಲವಾಗಲಿ. ರಾಘವನು ರಕ್ಕಸರನ್ನು ಜಯಿಸಲಿ–ಎಂದು ಮಾತಾಡಿಕೊಂಡರು. ಅತ್ತ ಭೀಮಕರ್ಮದ ಹದಿನಾಲ್ಕು ಸಾವಿರ ರಕ್ಕಸರು. ಇತ್ತ , ಏಕಾಕಿ ರಾಮಚಂದ್ರ . ಯುದ್ಧ ಹೇಗಾಗ ಬಹುದು ಎಂದು ಆತಂಕಿಸಿದರು.

ಅಷ್ಟರಲ್ಲಿ ರಣಕಹಳೆ ರಣದುಂದುಭಿಗಳನ್ನು ಬಾರಿಸುತ್ತ ವಿಸ್ತಾರ ರಾಕ್ಷಸಸೇನೆ ನುಗ್ಗಿ ಬಂತು.

ಶ್ರೀರಾಮಚಂದ್ರ ಸಂಕ್ರುದ್ಧನಾಗಿ ನಿಂತ–ದಕ್ಷಯಜ್ಞಧ್ವಂಸಕ್ಕೆ ಬಂದ ಶಿವನಂತೆ!

❖

ರಾಮಖರಬಲಸಂಘರ್ಷಃ

ಆಶ್ರಮಂ ಪ್ರತಿಯಾತೇ ತು ಖರೇ ಖರಪರಾಕ್ರಮೇ ।
ತಾನೇವೌತ್ಪಾತಿಕಾನ್ ರಾಮಃ ಸಹ ಭ್ರಾತ್ರಾ ದದರ್ಶ ಹ ॥೧॥

ಭಯಂಕರ ಪರಾಕ್ರಮದ ಖರನು ಆಶ್ರಮಕ್ಕೆ ಬಂದಾಗ ತಮ್ಮನೊಂದಿಗೆ ಉತ್ಪಾತಗಳ ಸೂಚನೆಗಳನ್ನು ಗಮನಿಸಿದ.

ತಾನುತ್ಪಾತಾನ್ ಮಹಾಘೋರಾನುತ್ಥಿತಾನ್ ರೋಮಹರ್ಷಣಾನ್ ।
ಪ್ರಜಾನಾಮಹಿತಾನ್ ದೃಷ್ಟ್ವಾ ರಾಮೋ ಲಕ್ಷ್ಮಣಮಬ್ರವೀತ್ ॥೨॥

ಮೈನಿಮಿರೇಳಿಸುವ ಮಹಾಘೋರಗಳಾಗಿ ಉತ್ಥಿತ ಉತ್ಪಾತಗಳನ್ನು ಪ್ರಜೆಗಳಿಗೆ ಅಹಿತಕಾರಕಗಳನ್ನು ಗಮನಿಸಿ ಲಕ್ಷ್ಮಣನಿಗೆ ಹೇಳಿದನು.

ಇಮಾನ್ ಪಶ್ಯ ಮಹಾಬಾಹೋ ಸರ್ವಭೂತಾಪಹಾರಿಣಃ ।
ಸಮುತ್ಥಿತಾನ್ ಮಹೋತ್ಪಾತಾನ್ ಸಂಹರ್ತುಂ ಸರ್ವರಾಕ್ಷಸಾನ್ ॥೩॥

ಮಹಾಬಾಹು ಲಕ್ಷ್ಮಣ! ಸರ್ವಭೂತಾಪಹಾರಿಗಳು, ಎಲ್ಲ ರಾಕ್ಷಸರನ್ನು ಸಂಹರಿಸಲು ಎದ್ದು ಬಂದ ಮಹೋತ್ಪಾತಗಳನ್ನು ನೋಡು.

ಅಮೀ ರುಧಿರಧಾರಾಸ್ತು ವಿಸೃಜಂತಃ ಖರಸ್ವನಾನ್ ।
ವ್ಯೋಮ್ನಿ ಮೇಘಾ ವಿವರ್ತಂತೇ ಪರುಷಾ ಗರ್ದಭಾರುಣಾಃ ॥೪॥

ಕತ್ತೆಗಳಂತೆ ಕಪ್ಪಾದ ಮೋಡಗಳು ಕ್ರೂರದನಿಗಳ ಗರ್ಜನೆಗಳನ್ನು ಮಾಡುತ್ತ ರುಧಿರಧಾರೆಗಳನ್ನು ಸುರಿಸುತ್ತಿವೆ.

ಸಧೂಮಾಶ್ಚ ಶರಾಃ ಸರ್ವೇ ಮಮ ಯುದ್ಧಾಭಿನಂದಿನಃ ।
ರುಗ್ಮಪೃಷ್ಠಾನಿ ಚಾಪಾನಿ ವಿಚೇಷ್ಟಂತೇ ಚ ಲಕ್ಷ್ಮಣ ॥೫॥

ನನ್ನೆಲ್ಲ ಬಾಣಗಳು ಯುದ್ಧವನ್ನು ಅಭಿನಂದಿಸುತ್ತ ಹೊಗೆ ಉಗುಳುತ್ತಿವೆ. ಬಂಗಾರದ ಚಿನ್ನಾಭರಣದ ಬಿಲ್ಲುಗಳು ಲಕ್ಷ್ಮಣ! ಅದುರುತ್ತಿವೆ!

ಯಾದೃಶಾ ಇಹ ಕೂಜಂತಿ ಪಕ್ಷಿಣೋ ವನಚಾರಿಣಃ ।
ಅಗ್ರತೋ ನೋ ಭಯಂ ಪ್ರಾಪ್ತಂ ಸಂಶಯೋ ಜೀವಿತಸ್ಯ ಚ ॥೬॥

ಈ ವನಚಾರಿ ಹಕ್ಕಿಗಳು ಇಲ್ಲಿ ಕೂಗುತ್ತಿವೆ. ಸದ್ಯದಲ್ಲಿಯೇ ನಮ್ಮ ಮುಂದೆ ಭಯ ಪ್ರಾಪ್ತವಾಗಿದೆ. ಸಂಶಯದ ಜೀವನಗಳನ್ನು ತೋರಿಸುತ್ತಿವೆ.

ಸಂಪ್ರಹಾರಸ್ತು ಸುಮಹಾನ್ ಭವಿಷ್ಯತಿ ನ ಸಂಶಯಃ ।
ಅಯಮಾಖ್ಯಾತಿ ಮೇ ಬಾಹುಃ ಸ್ಫುರಮಾಣೋ ಮುಹುರ್ಮುಹುಃ ॥

ಸನ್ನಿಕರ್ಷೇ ತು ನಃ ಶೂರ ಜಯಂ ಶತ್ರೋಃ ಪರಾಜಯಮ್ ।

ಮುಂದೆ ಬಹಳ ದೊಡ್ಡ ಯುದ್ಧ ಒದಗಲಿದೆ–ಎಂಬುದನ್ನು ಅದುರುವ ನನ್ನ ತೋಳುಗಳು ಹೇಳುತ್ತಿವೆ. ಶೂರನೆ! ಸಮೀಪದಲ್ಲಿಯೇ ನಮ್ಮ ಜಯ, ಶತ್ರುಗಳ ಪರಾಜಯವಾಗಲಿದೆ.

ಸಪ್ರಭಂ ಚ ಪ್ರಸನ್ನಂ ಚ ತವ ವಕ್ತ್ರಂ ಹಿ ಲಕ್ಷ್ಯತೇ ॥೮॥

ಉದ್ಯತಾನಾಂ ಹಿ ಯುದ್ಧಾರ್ಥಂ ಯೇಷಾಂ ಭವತಿ ಲಕ್ಷ್ಮಣ ।
ನಿಷ್ಪ್ರಭಂ ವದನಂ ತೇಷಾಂ ಭವತ್ಯಾಯುಃಪರಿಕ್ಷಯಃ ॥೯॥

ಲಕ್ಷ್ಮಣ! ನಿನ್ನ ಮುಖ ಕಾಂತಿಯುತವು ಪ್ರಸನ್ನವು ಆಗಿ ಕಂಡು ಬರುತ್ತಿದೆ. ಲಕ್ಷ್ಮಣ! ಯುದ್ಧಕ್ಕಾಗಿ ತೊಡಗುವವರ ಮುಖವು ಬಾಡಿದ್ದರೆ ಅವರ ಆಯುಷ್ಯದ ಪರಿಕ್ಷಯವಾಗುತ್ತದೆ.

ರಕ್ಷಸಾಂ ನರ್ದತಾಂ ಘೋರಃ ಶ್ರೂಯತೇ ಚ ಮಹಾಧ್ವನಿಃ ।
ಆಹತಾನಾಂ ಚ ಭೇರೀಣಾಂ ರಾಕ್ಷಸೈಃ ಕ್ರೂರಕರ್ಮಭಿಃ ॥೧೦॥

ರಕ್ಕಸರ ಗರ್ಜನೆಯ ಮಹಾಧ್ವನಿ ಕೇಳಿಸುತ್ತಿದೆ. ಕ್ರೂರಕರ್ಮದ ರಕ್ಕಸರು ಬಡಿದ ಭೇರಿಯ ಮಹಾಧ್ವನಿಯೂ ಕೇಳಿಸುತ್ತಿದೆ.

ಅನಾಗತವಿಧಾನಂ ತು ಕರ್ತವ್ಯಂ ಶುಭಮಿಚ್ಛತಾ ।
ಆಪದಂ ಶಂಕಮಾನೇ ಪುರುಷೇಣ ವಿಪಶ್ಚಿತಾ ॥೧೧॥

ಒಳಿತನ್ನೂ ಬಯಸುವ, ಮುಂದಣ ಆಪತ್ತನ್ನು ಊಹಿಸಿದ ಬುದ್ಧಿವಂತ ಪುರುಷ ಆಪತ್ತು ಬರುವ ಮುಂಚೆ ಅದರ ಪ್ರತಿಕ್ರಿಯೆಗೆ ಸಜ್ಜಾಗಬೇಕು.

ತಸ್ಮಾದ್ಗೃಹೀತ್ವಾ ವೈದೇಹೀಂ ಶರಪಾಣಿರ್ಧನುರ್ಧರಃ ।
ಗುಹಾಮಾಶ್ರಯ ಶೈಲಸ್ಯ ದುರ್ಗಾಂ ಪಾದಪಸಂಕುಲಾಮ್ ॥೧೨॥

ಆದ್ದರಿಂದ ಬಿಲ್ಲು–ಬಾಣಗಳನ್ನು ಹಿಡಿದು ಪರ್ವತದ–ಮರಗಳಿಂದ ತುಂಬಿದ ದುರ್ಗಮವಾದ ಗುಹೆಯೆಡೆಗೆ ವೈದೇಹಿಯನ್ನು ಕರೆದುಕೊಂಡು ಹೋಗು.

ಪ್ರತಿಕೂಲಿತುಮಿಚ್ಛಾಮಿ ನ ಹಿ ವಾಕ್ಯಮಿದಂ ತ್ವಯಾ ।
ಶಾಪಿತೋ ಮಮ ಪಾದಾಭ್ಯಾಂ ಗಮ್ಯತಾಂ ವತ್ಸ ಮಾ ಚಿರಮ್ ॥೧೩

ಈ ನನ್ನ ಮಾತನ್ನು ನೀನು ಮೀರಬಾರದು. ತಡಮಾಡಬೇಡ ಹೊರಡು–ನನ್ನ ಪಾದದ ಮೇಲೆ ಆಣೆ.

ತ್ವಂ ಹಿ ಶೂರಶ್ಚ ಬಲವಾನ್ ಹನ್ಯಾ ಹ್ಯೇತಾನ್ನ ಸಂಶಯಃ ।
ಸ್ವಯಂ ತು ಹಂತುಮಿಚ್ಛಾಮಿ ಸರ್ವಾನೇವ ನಿಶಾಚರಾನ್ ॥೧೪॥

ನೀನು ಶೂರ, ಬಲಿಷ್ಠ. ಖರಾದಿ ದುಷ್ಟರನ್ನು ಕೊಲ್ಲಬಲ್ಲೆ. ಸಂಶಯವಿಲ್ಲ. ಆದರೆ ಎಲ್ಲ ನಿಶಾಚರರನ್ನು ನಾನೆ ಕೊಲ್ಲಲು ಬಯಸಿದ್ದೇನೆ.

ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಸಹ ಸೀತಯಾ ।
ಶರಾನಾದಾಯ ಚಾಪಂ ಚ ಗುಹಾಂ ದುರ್ಗಾಂ ಸಮಾಶ್ರಯತ್॥೧೫॥

ಹೀಗೆ ರಾಮನಿಂದ ಹೇಳಿಸಿಕೊಂಡ ಲಕ್ಷ್ಮಣ, ಸೀತೆಯೊಂದಿಗೆ ಕೂಡಿಕೊಂಡು ಬಿಲ್ಲು–ಬಾಣಗಳನ್ನು ಹಿಡಿದು ದುರ್ಗಮವಾದ ಗುಹೆಯನ್ನು ಆಶ್ರಯಿಸಿದನು.

ತಸ್ಮಿನ್ ಪ್ರವಿಷ್ಟೇ ತು ಗುಹಾಂ ಲಕ್ಷ್ಮಣೇ ಸಹ ಸೀತಯಾ ।
ಹಂತ ನಿರ್ಯುಕ್ತಮಿತ್ಯುಕ್ತ್ವಾ ರಾಮಃ ಕವಚಮಾವಿಶತ್ ॥೧೬॥

ಸೀತೆಯೊಂದಿಗೆ ಲಕ್ಷ್ಮಣ ಗುಹೆಗೆ ಹೋಗಲು, ಉಪಾಯವು ನಿಶ್ಚಿತವಾಯಿತು ಎಂದು ತೀರ್ಮಾನಿಸಿ ರಾಮನು ಕವಚವನ್ನು ಧರಿಸಿದನು.

ಸ ತೇನಾಗ್ನಿನಿಕಾಶೇನ ಕವಚೇನ ವಿಭೂಷಿತಃ ।
ಬಭೂವ ರಾಮಸ್ತಿಮಿರೇ ವಿಧೂಮೋಽಗ್ನಿರಿವೋತ್ಥಿತಃ ॥೧೭॥

ಬೆಂಕಿಯಂತೆ ಬೆಳಗುವ ಕವಚದಿಂದ ಅಲಂಕೃತನಾದ ರಾಮ ಹೊಗೆಯಿಲ್ಲದ ಕತ್ತಲೆಯಲ್ಲಿ ಎದ್ದ ಬೆಂಕಿಯಂತೆ ಬೆಳಗುತ್ತಿದ್ದ.

ಸ ಚಾಪಮುದ್ಯಮ್ಯ ಮಹಚ್ಚರಾನಾದಾಯ ವೀರ್ಯವಾನ್ ।
ಬಭೂವಾವಸ್ಥಿತಸ್ತತ್ರ ಜ್ಯಾಸ್ವನೈಃ ಪೂರಯನ್ ದಿಶಃ ॥೧೮॥

ಆ ವೀರ್ಯವಂತ ರಾಮ ಬಿಲ್ಲನ್ನು ಎತ್ತಿ ಬಾಣಗಳನ್ನು ತೆಗೆದುಕೊಂಡು ಹೆದೆಯ ಠೇಂಕಾರದಿಂದ ಎಲ್ಲ ಧ್ವನಿಗಳನ್ನು ತುಂಬುತ್ತ ನಿಂತ.

ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಸಹ ಚಾರಣೈಃ ।
ಸಮೇಯುಶ್ಚ ಮಹಾತ್ಮಾನೋ ಯುದ್ಧದರ್ಶನಕಾಂಕ್ಷಿಣಃ ॥೧೯॥

ಬಳಿಕ ಮಹಾತ್ಮರಾದ ಗಂಧರ್ವಸಹಿತರಾದ ದೇವತೆಗಳು, ಚಾರಣರಿಂದ ಕೂಡಿದ ಸಿದ್ಧರು ಯುದ್ಧವನ್ನು ನೋಡುವ ಬಯಕೆಯಿಂದ ಸೇರಿದರು.

ಋಷಯಶ್ಚ ಮಹಾತ್ಮಾನೋ ಲೋಕೇ ಬ್ರಹ್ಮರ್ಷಿಸತ್ತಮಾಃ ।
ಸಮೇತ್ಯ ಚೋಚುಃ ಸಹಿತಾ ಅನ್ಯೋನ್ಯಂ ಪುಣ್ಯಕರ್ಮಣಃ ॥೨೦॥

ಲೋಕಪ್ರಸಿದ್ಧ ಮಹಾತ್ಮರಾದ ಋಷಿಗಳು, ಶ್ರೇಷ್ಠಬ್ರಹ್ಮರ್ಷಿಗಳು ಕಲೆತು ಪುಣ್ಯಕರ್ಮ ರಾಮನ ಬಗೆಗೆ ಪರಸ್ಪರ ಮಾತಾಡಿಕೊಂಡರು.

ಸ್ವಸ್ತಿ ಗೋಬ್ರಾಹ್ಮಣೇಭ್ಯೋಽಸ್ತು ಲೋಕಾನಾಂ ಯೇಽಭಿಸಂಗತಾಃ ।
ಜಯತಾಂ ರಾಘವೋ ಯುದ್ಧೇ ಪೌಲಸ್ತ್ಯಾನ್ ರಜನೀಚರಾನ್ ॥೨೧॥

ವಿಶ್ವದಲ್ಲಿ ಸೇರಿದ ಗೋಬ್ರಾಹ್ಮಣರಿಗೆ ಮಂಗಳವಾಗಲಿ. ಯುದ್ಧದಲ್ಲಿ ರಾಘವನು ಪುಲಸ್ತ್ಯವಂಶದ ರಜನೀಚರರನ್ನು ಗೆಲ್ಲಲಿ.

ಚಕ್ರಹಸ್ತೋ ಯಥಾ ಯುದ್ಧೇ ಸರ್ವಾನಸುರಪುಂಗವಾನ್ ।
ಏವಮುಕ್ತ್ವಾ ಪುನಃ ಪ್ರೋಚುರಾಲೋಕ್ಯ ಚ ಪರಸ್ಪರಮ್ ॥೨೨॥

ಚಕ್ರಪಾಣಿ ಶ್ರೀಹರಿ ಹೇಗೆ ಎಲ್ಲ ಅಸುರರನ್ನು ಸಂಹರಿಸುವನೋ ಹಾಗೆ. ಹೀಗೆ ಹೇಳಿ ಪರಸ್ಪರ ನೋಡುತ್ತ ಮತ್ತೆ ಹೇಳಿದರು.

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ಏಕಶ್ಚ ರಾಮೋ ಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ॥೨೩॥

ಘೋರಕೃತ್ಯರಾದ ರಕ್ಕಸರು ಹದಿನಾಲ್ಕು ಸಾವಿರ ಇದ್ದಾರೆ. ಧರ್ಮಾತ್ಮ ರಾಮ ಒಬ್ಬನೆ! ಈ ಯುದ್ಧ ಹೇಗೆ ಸಾಗುತ್ತದೆ?!

ಇತಿ ರಾಜರ್ಷಯಃ ಸಿದ್ಧಾಃ ಸಗಣಾಶ್ಚ ದ್ವಿಜರ್ಷಭಾಃ ।
ಜಾತಕೌತೂಹಲಾಸ್ತಸ್ಥುರ್ವಿಮಾನಸ್ಥಾಶ್ಚ ದೇವತಾಃ ॥೨೪॥

ಹೀಗೆ ರಾಜರ್ಷಿಗಳು, ಸಿದ್ಧರು, ತಮ್ಮ ಗಣದೊಂದಿಗೆ ವಿಪ್ರಶ್ರೇಷ್ಠರು ಸಮರಕುತೂಹಲದ ದೇವತೆಗಳು ವಿಮಾನದಲ್ಲಿ ನಿಂತರು.

ಆವಿಷ್ಟಂ ತೇಜಸಾ ರಾಮಂ ಸಂಗ್ರಾಮಶಿರಸಿ ಸ್ಥಿತಮ್ ।
ದೃಷ್ಟ್ವಾ ಸರ್ವಾಣಿ ಭೂತಾನಿ ಭಯಾದ್ವಿವ್ಯಥಿರೇ ತದಾ ॥೨೫॥

ತೇಜಸ್ಸು ತುಂಬಿದ, ಸಂಗ್ರಾಮದ ಮುನ್ನೆಲೆಯಲ್ಲಿ ನಿಂತ ರಾಮನನ್ನು ನೋಡಿ ಪ್ರಾಣಿಗಳು ಹೆದರಿ ವ್ಯಥೆಗೊಂಡವು!

ರೂಪಮಪ್ರತಿಮಂ ತಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಬಭೂವ ರೂಪಂ ಕ್ರುದ್ಧಸ್ಯ ರುದ್ರಸ್ಯೇವ ಪಿನಾಕಿನಃ ।
ಇತಿ ಸಂಭಾಷ್ಯಮಾಣೇ ತು ದೇವಗಂಧರ್ವಚಾರಣೈಃ ॥೨೬॥

ಯಾವ ಕರ್ಮದಲ್ಲಿಯೂ ಕ್ಲೇಶವಿಲ್ಲದ ಕ್ರುದ್ಧನಾದ ಶ್ರೀರಾಮನರೂಪ ಅಪ್ರತಿಮವಾಗಿತ್ತು–ಪಿನಾಕಧನುರ್ಧಾರಿ ರುದ್ರನ ರೂಪದಂತೆ! ಹೀಗೆ ದೇವ ಗಂಧರ್ವ ಚಾರಣರು ಮಾತನಾಡುತ್ತಿರುವಾಗಲೆ,

ತತೋ ಗಂಭೀರನಿರ್ಹ್ರಾದಂ ಘೋರವರ್ಮಾಯುಧಧ್ವಜಮ್ ।
ಅನೀಕಂ ಯಾತುಧಾನಾನಾಂ ಸಮಂತಾತ್ ಪ್ರತ್ಯದೃಶ್ಯತ ॥೨೭॥

ಗಂಭೀರಧ್ವನಿಯ ಘೋರಕವಚ ಆಯುಧಧ್ವಜಗಳನ್ನು ಧರಿಸಿದ ರಕ್ಕಸರ ಸೈನ್ಯ ಎಲ್ಲೆಡೆ ಕಾಣಿಸಿಕೊಂಡಿತು.

ಸಿಂಹನಾದಂ ವಿಸೃಜತಾಮನ್ಯೋನ್ಯಮಭಿಗರ್ಜತಾಮ್ ।
ಚಾಪಾನಿ ವಿಸ್ಫಾರಯತಾಂ ಜೃಂಭತಾಂ ಚಾಪ್ಯಭೀಕ್ಷ್ಣಶಃ ॥೨೮॥

ವಿಪ್ರಘುಷ್ಟಸ್ವನಾನಾಂ ಚ ದುಂದುಭೀಂಶ್ಚಾಪಿ ನಿಘ್ನತಾಮ್ ।
ತೇಷಾಂ ಸುತುಮುಲಃ ಶಬ್ದಃ ಪೂರಯಾಮಾಸ ತದ್ವನಮ್ ॥೨೯॥

ಸಿಂಹನಾದ ಗೈಯ್ಯುತ್ತಿರುವ, ಅನ್ಯೋನ್ಯವಾಗಿ ಗರ್ಜಿಸುತ್ತಿರುವ, ಬಿಲ್ಲುಗಳನ್ನು ಠೇಂಕಾರಗೊಳಿಸುತ್ತಿರುವ, ಎಲ್ಲೆಡೆ ವಿಜೃಂಭಿಸುತ್ತಿರುವ, ಋಷಿಯ ಕೂಗುಗಳಿಂದ ಕೂಡಿರುವ, ರಣದುಂದುಭಿಗಳನ್ನು ಮೊಳಗಿಸುತ್ತಿರುವ ಆ ಸೈನಿಕರ ಕೋಲಾಹಲ ಧ್ವನಿ ಆ ವನವೆಲ್ಲ ತುಂಬಿಕೊಂಡಿತು.

ತೇನ ಶಬ್ದೇನ ವಿತ್ರಸ್ತಾಃ ಶ್ವಾಪದಾ ವನಚಾರಿಣಃ ।
ದುದ್ರುವುರ್ಯತ್ರ ನಿಃಶಬ್ದಂ ಪೃಷ್ಠತೋ ನ ವ್ಯಲೋಕಯನ್ ॥೫೦॥

ಆ ಸದ್ದುಗಳಿಂದ ಹೆದರಿದ ವನಚಾರಿ ಸಿಂಹ ವ್ಯಾಘ್ರಾದಿಗಳು ಹಿಂತಿರುಗಿ ನೋಡದೆ ಸದ್ದಿಲ್ಲದೆ ತಾಣಗಳೆಡೆಗೆ ಧಾವಿಸಿದವು.

ತತ್ತ್ವನೀಕಂ ಮಹಾವೇಗಂ ರಾಮಂ ಸಮುಪಸರ್ಪತ ।
ಧೃತನಾನಾಪ್ರಹರಣಂ ಗಂಭೀರಂ ಸಾಗರೋಪಮಮ್ ॥೫೧॥

ಮಹಾವೇಗಶಾಲಿಯು, ನಾನಾಯುಧಧಾರಿಯು, ಗಂಭೀರವು ಆದ ಆ ಸೇನೆ ಸಾಗರದೋಪಾದಿಯಲ್ಲಿ ರಾಮನ ಬಳಿಗೆ ಸುಳಿಯಿತು.

ರಾಮೋಽಪಿ ಚಾರಯಂಶ್ಚಕ್ಷುಃ ಸರ್ವತೋ ರಣಪಂಡಿತಃ ।
ದದರ್ಶ ಖರಸೈನ್ಯಂ ತದ್ಯುದ್ಧಾಭಿಮುಖಮುತ್ಥಿತಮ್ ॥೫೨॥

ರಣಪಂಡಿತ ರಾಮನೂ ಕೂಡ ಎಲ್ಲೆಡೆ ಕಣ್ಣು ಹಾಯಿಸಿದ. ಯುದ್ಧಾಭಿ-ಮುಖವಾಗಿ ಬಂದ ಖರನ ಸೈನ್ಯವನ್ನು ರಾಮನು ಕಂಡನು.

ವಿತತ್ಯ ಚ ಧನುರ್ಭೀಮಂ ತೂಣ್ಯಾಶ್ಚೋದ್ಧೃತ್ಯ ಸಾಯಕಾನ್ ।
ಕ್ರೋಧಮಾಹಾರಯತ್ತೀವ್ರಂ ವಧಾರ್ಥಂ ಸರ್ವರಕ್ಷಸಾಮ್ ॥೫೩॥

ರಾಮನು ಬಿಲ್ಲನ್ನು ಹಿಗ್ಗಿಸಿ ಬತ್ತಳಿಕೆಯಿಂದ ಬಾಣಗಳನ್ನು ಎತ್ತಿ ಎಲ್ಲ ರಕ್ಕಸರ ವಧೆಗಾಗಿ ಕ್ರೋಧವನ್ನು ತೋರಿದ.

ದುಷ್ಪ್ರೇಕ್ಷಃ ಸೋಽಭವತ್ ಕ್ರುದ್ಧೋ ಯುಗಾಂತಾಗ್ನಿರಿವ ಜ್ವಲನ್ ।
ತಂ ದೃಷ್ಟ್ವಾ ತೇಜಸಾವಿಷ್ಟಂ ಪ್ರಾದ್ರವನ್ ವನದೇವತಾಃ ॥೫೪॥

ಕ್ರುದ್ಧನಾಗಿ ಯುಗಾಂತದ ಬೆಂಕಿಯಂತೆ ಬೆಳಗುತ್ತ ಇದ್ದ ತೇಜಸ್ವಿಯಾಗಿದ್ದ ರಾಮನನ್ನು ನೋಡಿ ವನದೇವತೆಗಳು ಓಡಿಹೋದವು.

ತಸ್ಯ ಕ್ರುದ್ಧಸ್ಯ ರೂಪಂ ತು ರಾಮಸ್ಯ ದದೃಶೇ ತದಾ ।
ದಕ್ಷಸ್ಯೇವ ಕ್ರತುಂ ಹಂತುಮುದ್ಯತಸ್ಯ ಪಿನಾಕಿನಃ ॥೫೫॥

ಕ್ರುದ್ಧನಾದ ರಾಮನರೂಪ ದಕ್ಷಯಜ್ಞನನ್ನು ಕೊಲ್ಲಲು ಉದ್ಯುಕ್ತನಾದ ಪಿನಾಕಿಯ ರೂಪದಂತೆ ಕಾಣುತ್ತಿತ್ತು.

ಆವಿಷ್ಟಂ ತೇಜಸಾ ರಾಮಂ ಸಂಗ್ರಾಮಶಿರಸಿ ಸ್ಥಿತಮ್ ।
ದೃಷ್ಟ್ವಾ ಸರ್ವಾಣಿ ಭೂತಾನಿ ಭಯಾರ್ತಾನಿ ಪ್ರದುದ್ರುಮುಃ ॥೩೬॥

ಸಂಗ್ರಾಮದ ಮುಂದೆ ತೇಜಸ್ಸಿನಿಂದ ಕೂಡಿದ ರಾಮನನ್ನು ನೋಡಿ ಭಯಾರ್ತರಾದ ಪ್ರಾಣಿಗಳು ಓಡಹತ್ತಿದವು.

ತತ್ಕಾರ್ಮುಕೈರಾಭರಣೈರ್ಧ್ವಜೈಶ್ಚ
ತೈರ್ವರ್ಮಭಿಶ್ಚಾಗ್ನಿಸಮಾನವರ್ಣೈಃ ।
ಬಭೂವ ಸೈನ್ಯಂ ಪಿಶಿತಾಶನಾನಾಂ
ಸೂರ್ಯೋದಯೇ ನೀಲಮಿವಾಭ್ರವೃಂದಮ್ ॥೩೭॥

ಕಾರ್ಮುಕಗಳು ಆಭರಣಗಳು ಧ್ವಜಗಳು ಅಗ್ನಿಯಂತೆ ಹೊಳೆಯುವ ಕವಚ-ಗಳಿಂದ ಕೂಡಿದ ಮಾಂಸಾಹಾರಿ ದೈತ್ಯರ ಸೈನ್ಯ ಸೂರ್ಯೋದಯದಲ್ಲಿ ನೀಲಮೋಡಗಳ ಸಮೂಹದಂತೆ ಕಾಣುತ್ತಿತ್ತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತನಾಲ್ಕನೇ ಸರ್ಗ ಮುಗಿಯಿತು.

❖

ಪಂಚವಿಂಶಃ ಸರ್ಗಃ

ಕಥಾಸಾರಾಂಶ– ಧನುಷ್ಪಾಣಿಯಾಗಿ ಕ್ರುದ್ಧನಾಗಿ ನಿಂತಿದ್ದ ಶ್ರೀರಾಮನನ್ನು ನೋಡಿ ಖರನು ತನ್ನ ಸಾರಥಿಗೆ ರಥವನ್ನು ರಾಮನ ಮುಂದಕ್ಕೆ ಒಯ್ಯುವಂತೆ ಹೇಳಿದನು. ಕೂಡಲೆ ಖರನ ಮಂತ್ರಿಪರಿವಾರದವರು ಖರನನ್ನು ಆವರಿಸಿ ನಿಂತರು. ಖರನು ರಾಮನ ಮೇಲೆ ಸಾವಿರಾರು ಬಾಣಗಳನ್ನು ಪ್ರಯೋಗಿಸಿದನು.

ಖರನ ಸೈನಿಕರೂ ಮುದ್ಗರ ಶೂಲ ಪ್ರಾಸ ಖಡ್ಗ ಕೊಡಲಿಗಳಿಂದ ಪ್ರಹಾರ-ಗೈದರು. ಶ್ರೀರಾಮನ ಶರೀರದಲ್ಲಿ ಆ ಶಸ್ತ್ರಾಸ್ತ್ರಗಳು ನೆಟ್ಟವು. ದೇವ ಗಂಧರ್ವ ಸಿದ್ಧರು ಪರಮರ್ಷಿಗಳು ವಿಷಾದಗೊಂಡರು.

ಬಲಶಾಲಿ ಶ್ರೀರಾಮ ಸ್ವಲ್ಪವೂ ವ್ಯಥಿತನಾಗದೆ ತನ್ನ ಬಿಲ್ಲನ್ನು ಮಂಡಲಾಕಾರ-ವಾಗಿ ಬಾಗಿಸಿ ಸಾವಿರಾರು ಬಾಣಗಳನ್ನು ಪ್ರಯೋಗಿಸಿದನು. ದುಸ್ಸಹಗಳಾದ ಆ ತೀಕ್ಷ್ಣಶರಗಳು ಕಾಲಪಾಶದಂತೆ ರಾಕ್ಷಸರ ಪ್ರಾಣಗಳನ್ನು ಆಹುತಿಗೊಂಡವು.

ಶತ್ರುಗಳು ಬಿಟ್ಟ ಬಗೆಬಗೆಯ ಶಸ್ತ್ರಾಸ್ತ್ರಗಳನ್ನು ಆಯುಧಗಳನ್ನು ಆಕಾಶ ದಲ್ಲಿಯೇ ರಾಮನ ಬಾಣಗಳು ಛಿನ್ನ–ಛಿನ್ನಗೊಳಿಸಿದವು.

ಹೆದರಿದ ಸೈನಿಕರು ಖರನ ಬಳಿಗೆ ಧಾವಿಸಿ ಬಂದರು. ಅಷ್ಟರಲ್ಲಿ ದೂಷಣ ಆ ಸೈನಿಕರನ್ನೆಲ್ಲ ಹುರಿದುಂಬಿಸಿ ಮತ್ತೆ ರಾಮನೆಡೆಗೆ ನುಗ್ಗಿ ಬಂದ. ಎಲ್ಲರೂ ಶ್ರೀರಾಮನ ಮೇಲೆ ವೃಕ್ಷಗಳನ್ನು ಬಂಡೆಗಳನ್ನು ಬಿಸಾಡುತ್ತ ಅವನನ್ನು ಆಕ್ರಮಿಸಿ ದರು.

ಶ್ರೀರಾಮ ಎರಡು ಬಾಣಗಳಿಂದ ದೂಷಣನ ಎರಡು ತೋಳುಗಳನ್ನು ಕತ್ತರಿಸಿದ. ದೂಷಣ ಧರೆಗುರುಳಿದ. ರಾಮ ಪುಂಖಾನುಪುಂಖವಾಗಿ ಸಾವಿರಾರು ಬಾಣಗಳನ್ನು ಪ್ರಯೋಗಿಸಿದ. ರಥದ ಕುದುರೆ, ಆನೆಗಳು ಅದರ ಸವಾರಿಗಳು, ಧ್ವಜಗಳು, ಯೋಧರ ತೋಳುಗಳು, ತೊಡೆಗಳು, ತಲೆಗಳು, ಕಡಿದ ಖಡ್ಗಗಳು ಬಾಣಗಳು ಬಿಲ್ಲುಗಳು, ಈಟಿಗಳು, ಛತ್ರ, ಚಾಮರಗಳು ಕಾಡಿನ ನೆಲದಲ್ಲಿ ಚೆಲ್ಲಾಪಿಲ್ಲಿಯಾಗಿ ಚದುರಿ ಬಿದ್ದಿದ್ದವು. ರಕ್ತಸಿಕ್ತವಾದ ಕಾಡಿನ ನೆಲ ಭಯಂಕರ ವಾಗಿತ್ತು.

❖

ಖರಸೈನ್ಯಾವರ್ಮಃ

ಅವಷ್ಟಬ್ಧಧನುಂ ರಾಮಂ ಕ್ರುದ್ಧಂ ಚ ರಿಪುಘಾತಿನಮ್ ।
ದದರ್ಶಾಶ್ರಮಮಾಗಮ್ಯ ಖರಃ ಸಹ ಪುರಃಸರೈಃ ॥೧॥

ಖರ ತನ್ನ ಸೈನಿಕರೊಡನೆ ಆಶ್ರಮದ ಬಳಿ ಬಂದು ಶತ್ರುಘಾತಿಯಾದ ಸಂಕ್ರುದ್ಧನಾಗಿ ಬಿಲ್ಲು ಹಿಡಿದು ನಿಂತಿದ್ದ ರಾಮನನ್ನು ಕಂಡನು.

ತಂ ದೃಷ್ಟ್ವಾ ಸಶರಂ ಚಾಪಮುದ್ಯಮ್ಯ ಖರನಿಃಸ್ವನಮ್ ।
ರಾಮಸ್ಯಾಭಿಮುಖಂ ಸೂತಂ ಚೋದ್ಯತಾಮಿತ್ಯಚೋದಯತ್ ॥೨॥

ರಾಮನನ್ನು ನೋಡಿ ಧನುಷ್ಟಂಕಾರಮಾಡಿ ರಾಮನೆದುರಿಗೆ ರಥವನ್ನು ಒಯ್ಯುವಂತೆ ಸಾರಥಿಯನ್ನು ಪ್ರಚೋದಿಸಿದನು.

ಸ ಖರಸ್ಯಾಜ್ಞಯಾ ಸೂತಸ್ತುರಗಾನ್ ಸಮಚೋದಯತ್ ।
ಯತ್ರ ರಾಮೋ ಮಹಾಬಾಹುರೇಕೋ ಧೂನ್ವನ್ ಸ್ಥಿತೋ ಧನುಃ॥೩॥

ಆ ಸಾರಥಿಯು ಖರನಾಜ್ಞೆಯಿಂದ ಏಕಾಕಿಯಾಗಿ ಮಹಾಬಾಹು ಏಕಾಕಿ ಧನುಷ್ಟಂಕಾರ ಮಾಡುತ್ತಿದ್ದ ನಿಂತ ರಾಮನಿರುವಲ್ಲಿಗೆ ಕುದುರೆಯನ್ನು ಪ್ರಚೋದಿಸಿದ.

ತಂ ತು ನಿಷ್ಪತಿತಂ ದೃಷ್ಟ್ವಾ ಸರ್ವೇ ತೇ ರಜನೀಚರಾಃ ।
ನರ್ದಮಾನಾ ಮಹಾನಾದಂ ಸಚಿವಾಃ ಪರ್ಯವಾರಯನ್ ॥೪॥

ರಾಮನ ಬಳಿ ಸಾರಿದ ಖರನನ್ನು ನೋಡಿ ರಜನೀಚರರೆಲ್ಲ ಮಹಾನಾದ ಮಾಡುತ್ತ ಅವನನ್ನು ಸುತ್ತುವರಿದರು.

ಸ ತೇಷಾಂ ಯಾತುಧಾನಾನಾಂ ಮಧ್ಯೇ ರಥಗತಃ ಖರಃ ।
ಬಭೂವ ಮಧ್ಯೇ ತಾರಾಣಾಂ ಲೋಹಿತಾಗ ಇವೋದಿತಃ ॥೫॥

ಆ ರಾಕ್ಷಸರ ನಡುವೆ ರಥಸ್ಥನಾದ ಖರ ನಕ್ಷತ್ರಗಳ ನಡುವೆ ಮಂಗಳನಂತೆ ಕಾಣುತ್ತಿದ್ದ.

ತತಃ ಶರಸಹಸ್ರೇಣ ರಾಮಮಪ್ರತಿಮೌಜಸಮ್ ।
ಅರ್ದಯಿತ್ವಾ ಮಹಾನಾದಂ ನನಾದ ಸಮರೇ ಖರಃ ॥೬॥

ಬಳಿಕ ಸಾವಿರಾರು ಬಾಣಗಳಿಂದ ಅಪ್ರತಿಮ ಬಲಶಾಲಿಯಾದ ಶ್ರೀರಾಮ ನನ್ನು ಪೀಡಿಸುತ್ತ ಖರ ಸಮರಭೂಮಿಯಲ್ಲಿ ಗರ್ಜನೆಗೈದನು.

ತತಸ್ತಂ ಭೀಮಧನ್ವಾನಂ ಕ್ರುದ್ಧಾಃ ಸರ್ವೇ ನಿಶಾಚರಾ ।
ರಾಮಂ ನಾನಾವಿಧೈಃ ಶಸ್ತ್ರೈರಭ್ಯವರ್ಷಂತ ದುರ್ಜಯಮ್ ॥೭॥

ಬಳಿಕ ಕ್ರುದ್ಧರಾದ ಎಲ್ಲ ನಿಶಾಚರರೂ ದುರ್ಜಯರಾಮನ ಮೇಲೆ ಬಗೆಬಗೆಯಾದ ಶಸ್ತ್ರಗಳ ಮಳೆ ಸುರಿಸಿದರು.

ಮುದ್ಗರೈಃ ಪಟ್ಟಿಶೈಃ ಶೂಲೈಃ ಪ್ರಾಸೈಃ ಖಡ್ಗೈಃ ಪರಶ್ವಧೈಃ ।
ರಾಕ್ಷಸಾಃ ಸಮರೇ ರಾಮಂ ನಿಜಘ್ನೂ ರೋಷತತ್ಪರಾಃ ॥೮॥

ರೋಷತತ್ಪರರಾದ ರಾಕ್ಷಸರು ಸಮರದಲ್ಲಿ ಮುದ್ಗರಗಳು, ಪಟ್ಟಿಶಗಳು, ಶೂಲಗಳು, ಪ್ರಾಸಗಳು, ಖಡ್ಗಗಳು, ಪರಶುಗಳಿಂದ ರಾಮನನ್ನು ಹೊಡೆದರು.

ತೇ ಬಲಾಹಕಸಂಕಾಶಾ ಮಹಾನಾದಾ ಮಹೌಜಸಃ ।
ಅಭ್ಯಧಾವಂತ ಕಾಕುತ್ಸ್ಥಂ ರಥೈರ್ವಾಜಿಭಿರೇವ ಚ ।
ಗಜೈಃ ಪರ್ವತಕೂಟಾಭೈ ರಾಮಂ ಯುದ್ಧೇ ಜಿಘಾಂಸವಃ ॥೯॥

ಮಹಾಗರ್ಜನೆಯ ಮಹಾಸಾಮರ್ಥ್ಯದ ಮೋಡಗಳಂತೆ ರಥ, ಕುದುರೆ, ಪರ್ವತದಂತಿದ್ದ ಆನೆಗಳಿಂದ, ಕೊಲ್ಲುವ ಬಯಕೆಯ ರಕ್ಕಸರು ರಾಮನೆದುರು ಧಾವಿಸಿದರು.

ತೇ ರಾಮೇ ಶರವರ್ಷಾಣಿ ವ್ಯಸೃಜನ್ ರಕ್ಷಸಾಂ ಗಣಾಃ ॥೧೦॥

ಶೈಲೇಂದ್ರಮಿವ ಧಾರಾಭಿರ್ವರ್ಷಮಾಣಾ ಬಲಾಹಕಾಃ ।
ಸ ತೈಃ ಪರಿವೃತೋ ಘೋರೈ ರಾಘವೋ ರಕ್ಷಸಾಂ ಗಣೈಃ ॥೧೧॥

ತಿಥಿಷ್ವಿವ ಮಹಾದೇವೋ ವೃತಃ ಪರಿಷದಾಂ ಗಣೈಃ ।

ಆ ರಕ್ಕಸರ ಗುಂಪುಗಳು ಮೋಡಗಳು ಬೆಟ್ಟದ ಮೇಲೆ ಮಹಾಜಲಧಾರೆ ಗಳನ್ನು ಸುರಿಯುವಂತೆ ರಾಮನ ಮೇಲೆ ಬಾಣಗಳ ಮಳೆ ಸುರಿಸಿದವು.

ಆ ಘೋರ ರಾಕ್ಷಸರ ಗಣಗಳಿಂದ ಶ್ರೀರಾಮನು ಪರಿವೃತನಾಗಿದ್ದ.

ತಾನಿ ಮುಕ್ತಾನಿ ಶಸ್ತ್ರಾಣಿ ಯಾತುಧಾನೈಃ ಸ ರಾಘವಃ ।
ಪ್ರತಿಜಗ್ರಾಹ ವಿಶಿಖೈರ್ನದ್ಯೋಘಾನಿವ ಸಾಗರಃ ॥೧೨॥

ಆ ರಾಕ್ಷಸರು ಬಿಟ್ಟ ಶಸ್ತ್ರಗಳನ್ನು ರಾಘವನು ಸ್ವೀಕರಿಸಿದ. ನದೀಪ್ರವಾಹಗಳನ್ನು ಸಾಗರ ಒಪ್ಪಿಕೊಳ್ಳುವಂತೆ.

ಸ ತೈಃ ಪ್ರಹರಣೈರ್ಘೋರೈರ್ಭಿನ್ನಗಾತ್ರೋ ನ ವಿವ್ಯಥೇ ।
ರಾಮಃ ಪ್ರದೀಪ್ತೈರ್ಬಹುಭಿರ್ವಜ್ರೈರಿವ ಮಹಾಚಲಃ ॥೧೩॥

ಘೋರ ಆಯುಧಗಳಿಂದ ಕಾಯ ಪೀಡಿತವಾದರೂ ರಾಮ ವ್ಯಥೆಗೊಳ್ಳ ಲಿಲ್ಲ. ಬಹು ಪ್ರದೀಪ್ತ ವಜ್ರಾಯುಧಗಳಿಂದಲೂ ಮಹಾಚಲ ವ್ಯಥಿತವಾಗದಿರು ವಂತೆ!

ಸ ವಿದ್ಧಃ ಕ್ಷತಜಾದಿಗ್ಧಃ ಸರ್ವಗಾತ್ರೇಷು ರಾಘವಃ ।
ಬಭೂವ ರಾಮಃ ಸಂಧ್ಯಾಭ್ರೈರ್ದಿವಾಕರ ಇವಾವೃತಃ ॥೧೪॥

ಅನೇಕ ಶಸ್ತ್ರಾಸ್ತ್ರಗಳಿಂದ ವಿದ್ಧನಾಗಿ ರಕ್ತ ಒಸರುತ್ತಿದ್ದ ಗಾಯಗಳಿಂದ ಮುಸ್ಸಂಜೆಯ ಮೋಡಗಳು ಆವರಿಸಿದ ಸೂರ್ಯನಂತೆ ಕೆಂಪಾಗಿ ಕಾಣುತ್ತಿದ್ದ.

ವಿಶೇಷಾಂಶ

ಅಸಂಗಶ್ಚಾವ್ಯಥೋಽಭೇದ್ಯೋಽನಿಗ್ರಾಹ್ಯೋಽಶೋಚ್ಯ ಏವ ಚ । ವಿದ್ಧೋಽಸೃಗಂಚಿತೋ ಬದ್ಧ ಇತಿ ವಿಷ್ಣುಃ ಪ್ರದೃಶ್ಯತೇ । ಅಸುರಾನ್ ಮೋಹಯನ್ ದೇವಃ ಕ್ರೀಡಯೈವ ಸುರೇಷ್ವಪಿ । ಮಾನುಷಾನ್ ಮಧ್ಯಯಾ ದೃಷ್ಟ್ಯಾ ನ ಮುಕ್ತೇಷು ಕಥಂಚನ ॥ ಇತಿ ಸ್ಕಾಂದೇ ॥ -ಭಾಗವತ ತಾತ್ಪರ್ಯ ನಿರ್ಣಯ.

ವಿಷ್ಣು ಸಂಗರಹಿತ. ವ್ಯಥೆ ಇರದವನು. ಅಭೇದ್ಯನು ಯಾರಿಂದಲೂ ನಿಗ್ರಹಗೊಳ್ಳದವನು. (ಶೋಚನೀಯನೂ ಅಲ್ಲ) ಶೋಕವಿರದವನು ಆದರೂ ಆಯುಧಗಳಿಂದ ಹಿಂಸೆಗೊಳಗಾದವನಂತೆ, ರಕ್ತ ಸುರಿಯುವಂತೆ, ಬಂಧನಕ್ಕೆ ಒಳಗಾದವನಂತೆ ತೋರಿಕೊಳ್ಳುತ್ತಾನೆ—ಅಸುರರನ್ನು ಮೋಹಗೊಳಿಸಲು. ದೇವತೆಗಳಿಗೆ ಖುಷಿಪಡಿಸಲು. ಮನುಷ್ಯರನ್ನು ಗೊಂದಲಗೊಳಿಸಲು. ಮುಕ್ತರಲ್ಲಿ ಎಂದೂ ಮೋಹಗಳಿಸುವುದಿಲ್ಲ—ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ವಿಷೇದುರ್ದೇವಗಂದರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಏಕಂ ಸಹಸ್ರೈರ್ಬಹುಭಿಸ್ತದಾ ದೃಷ್ಟ್ವಾ ಸಮಾವೃತಮ್ ॥೧೫॥

ಒಬ್ಬ ರಾಮ ಅನೇಕ ಸಾವಿರ ರಾಕ್ಷಸರಿಂದ ಮುತ್ತಿಗೆಗೆ ಒಳಗಾದನೆಂದು ದೇವಗಂಧರ್ವರು ಸಿದ್ಧರು ಪರಮರ್ಷಿಗಳೂ ವಿಷಾದಗೊಂಡರು.

ತತೋ ರಾಮಃ ಸುಸಂಕ್ರುದ್ಧೋ ಮಂಡಲೀಕೃತಕಾರ್ಮುಕಃ ।
ಸಸರ್ಜ ನಿಶಿತಾನ್ ಬಾಣಾನ್ ಶತಶೋಽಥ ಸಹಸ್ರಶಃ ॥೧೬॥

ಬಳಿಕ ತುಂಬ ಕ್ರುದ್ಧನಾದ ರಾಮ ಬಿಲ್ಲನ್ನು ಮಂಡಲಾಕಾರಗೊಳಿಸಿ ನೂರಾರು ಸಾವಿರಾರು ಬಾಣಗಳನ್ನು ಪ್ರಯೋಗಿಸಿದ.

ದುರಾವಾರಾನ್ ದುರ್ವಿಷಹಾನ್ ಕಾಲದಂಡೋಪಮಾನ್ ರಣೇ ।
ಮುಮೋಚ ಲೀಲಯಾ ರಾಮಃ ಕಂಕಪತ್ರಾನಜಿಹ್ಮಗಾನ್ ॥೧೭॥

ಯುದ್ಧದಲ್ಲಿ ಶ್ರೀರಾಮ ನಿವಾರಿಸಲಾಗದ ತಡೆಯಲಾದ ಮೃತ್ಯು ದಂಡದಂತಿರುವ ಬಾಣಗಳನ್ನು ಅನಾಯಸವಾಗಿ ಬಿಟ್ಟನು.

ಕಾಲಪಾಶೋಪಮಾನ್। ಕಾಂಚನ ಭೂಷಣಾನ್ – ಪಾಠಾಂತರ.

ತೇ ಶರಾಃ ಶತ್ರುಸೈನ್ಯೇಷು ಮುಕ್ತಾ ರಾಮೇಣ ಲೀಲಯಾ ।
ಆದದೂ ರಕ್ಷಸಾಂ ಪ್ರಾಣಾನ್ ಪಾಶಾಃ ಕಾಲಕೃತಾ ಇವ ॥೧೮॥

ಶತ್ರುಸೈನ್ಯದೆಡೆ ಲೀಲಾಜಾಲವಾಗಿ ಪ್ರಯೋಗಿಸಿದ ಆ ಬಾಣಗಳು ಕಾಲಯಮನ ಪಾಶಗಳಂತೆ ರಾಕ್ಷಸರ ಪ್ರಾಣಗಳನ್ನು ತೆಗೆದವು.

ಭಿತ್ತ್ವಾ ರಾಕ್ಷಸದೇಹಾಂಸ್ತಾಂಸ್ತೇ ಶರಾ ರುಧಿರಾಪ್ಲುತಾಃ ।
ಅಂತರಿಕ್ಷಗತಾ ರೇಜುರ್ದೀಪ್ತಾಗ್ನಿಸಮತೇಜಸಃ ॥೧೯॥

ಆ ಬಾಣಗಳು ರಾಕ್ಷಸರ ದೇಹಗಳನ್ನು ಸೀಳಿ ರಕ್ತದಲ್ಲಿ ತೋಯ್ದವುಗಳಾಗಿ ಅಂತರಿಕ್ಷಗತಗಳಾಗಿ ಪ್ರಜ್ವಲಿಸುವ ಬೆಂಕಿಯಂತೆ ಕಂಗೊಳಿಸುತ್ತಿದ್ದವು!

ಅಸಂಖ್ಯೇಯಾಸ್ತು ರಾಮಸ್ಯ ಸಾಯಕಾಶ್ಚಾಪಮಂಡಲಾತ್ ।
ವಿನಿಷ್ಪೇತುರತೀವೋಗ್ರಾ ರಕ್ಷಃಪ್ರಾಣಾಪಹಾರಿಣೇಃ ॥೨೦॥

ರಾಮನ ಮಂಡಲಾಕಾರದ ಬಿಲ್ಲಿನಿಂದ ಎಣಿಸಲಾರದಷ್ಟು ಬಾಣಗಳು ಅತೀವ ಉಗ್ರಗಳಾಗಿ ರಕ್ಕಸರ ಪ್ರಾಣ ಹೀರುವಂಥವು ಹೊಮ್ಮಿದವು.

ಧನೂಂಷಿ ಚ ಧ್ವಜಾಗ್ರಾಣಿ ವರ್ಮಾಣಿ ಚ ಶಿರಾಂಸಿ ಚ ॥೨೧॥

ಬಾಹೂನ್ ಸಹಸ್ತಾಭರಣಾನ್ ಊರೂನ್ ಕರಿಕರೋಪಮಾನ್ ।
ಚಿಚ್ಛೇದ ರಾಮಃ ಸಮರೇ ಶತಶೋಽಥ ಸಹಸ್ರಶಃ ॥೨೨॥

ಶ್ರೀರಾಮ ಸಮರದಲ್ಲಿ ಆ ನಿಶಿತಬಾಣಗಳಿಂದ ನೂರಾರು ಸಾವಿರಾರು ಶತ್ರು ಪಡೆಯ ಬಿಲ್ಲುಗಳನ್ನು ತುದಿಯ ಧ್ವಜಗಳನ್ನು, ಕವಚಗಳನ್ನು ಮತ್ತು ತಲೆಗಳನ್ನು, ಆಭರಣಗಳನ್ನು, ಮುಂಗೈಗಳಿಂದ ಕೂಡಿದ ತೋಳುಗಳನ್ನು ಆನೆ ಸೊಂಡಿಲಿನಂತೆ ಇದ್ದ ತೊಡೆಗಳನ್ನು ಕತ್ತರಿಸಿ ಹಾಕಿದ..

ಹಯಾನ್ ಕಾಂಚನಸನ್ನಾಹಾನ್ ರಥಯುಕ್ತಾನ್ ಸಸಾರಥೀನ್ ।
ಗಜಾಂಶ್ಚ ಸಗಜಾರೋಹಾನ್ ಸಹಯಾನ್ ಸಾದಿನಸ್ತಥಾ ॥೨೩॥

ಚಿಚ್ಛಿದುರ್ಬಿಭಿದುಶ್ಚಾಪಿ ರಾಮಚಾಪಗುಣಾಚ್ಚ್ಯುತಾಃ ।
ಪದಾತೀನ್ ಸಮರೇ ಹತ್ವಾ ಹ್ಯನಯದ್ಯಮಸಾದನಮ್ ॥೨೪॥

ಚಿಚ್ಛಿದುರ್ಬಿಭಿದುಶ್ಚೈವ ರಾಮಬಾಣಾಗುಣಾಚ್ಯುತಾಃ –ಪಾಠಾಂತರ.

ರಥಕ್ಕೆ ಕಟ್ಟಿದ ಹೊನ್ನ ಜೀನುಗಳನ್ನು ಧರಿಸಿದ್ದ ಕುದುರೆಗಳನ್ನು, ಅದರ ಸಾರಥಿ-ಗಳನ್ನು, ಆನೆಗಳು–ಅದರ ಆರೋಹಿಗಳನ್ನು, ಅಶ್ವಾರೋಹಿಗಳನ್ನು ಪದಾತಿಗಳನ್ನು ಆ ಸಮರದಲ್ಲಿ ರಾಮನು ಕೊಂದು ಯಮಲೋಕಕ್ಕೆ ಅಟ್ಟಿದನು.

ತತೋ ನಾಲೀಕನಾರಾಚೈಸ್ತೀಕ್ಷ್ಣಾಗ್ರೈಶ್ಚ ವಿಕರ್ಣಿಭಿಃ ।
ಭೀಮಮಾರ್ತಸ್ವರಂ ಚಕ್ರುರ್ಭಿದ್ಯಮಾನಾ ನಿಶಾಚರಾಃ ॥೨೫॥

ತತ್ಸೈನ್ಯಂ ನಿಶಿತೈರ್ಬಾಣೈರರ್ದಿತಂ ಮರ್ಮಭೇದಿಭಿಃ ।
ರಾಮೇಣ ನ ಸುಖಂ ಲೇಭೇ ಶುಷ್ಕಂ ವನಮಿವಾಗ್ನಿನಾ ॥೨೬॥

ತುದಿಯಲ್ಲಿ ಕಬ್ಬಿಣದ ಲೋಹವಿರುವ=ನಾಲೀಕ ಎನಿಸುವ ಬಾಣಗಳಿಂದ, ಪೂರ್ಣಕಬ್ಬಿಣದ=ನಾರಾಚ=ಬಾಣಗಳಿಂದ, ಕಿತ್ತರೆ ಪ್ರಾಣ ತೆಗೆಯುವ ಅಂಕುಶಾಗ್ರದ- =ವಿಕರ್ಣಿ=ಬಾಣಗಳಿಂದ ಸೀಳಿಹೋದ ನಿಶಾಚರರು ಭಯಂಕರ ವಾದ ಆರ್ತಸ್ವರ ಮಾಡಹತ್ತಿದರು.

ಮರ್ಮಭೇದಿಗಳಾದ ನಿಶಿತಬಾಣಗಳಿಂದ ಹಿಂಸೆಗೊಳಗಾದ ಆ ಸೈನ್ಯ ರಾಮನಿಂದ ಇನಿತೂ ಸುಖಪಡಲಿಲ್ಲ—ಬೆಂಕಿಯಿಂದ ಒಣಕಾಡಿನಂತೆ.

ಕೇಚಿದ್ಭೀಮಬಲಾಃ ಶೂರಾಃ ಶೂಲಾನ್ ಖಡ್ಗಾನ್ ಪರಶ್ವಧಾನ್ ।
ರಾಮಸ್ಯಾಭಿಮುಖಂ ಗತ್ವಾ ಚಿಕ್ಷಿಪುಃ ಪರಮಾಯುಧಾನ್ ॥೨೭॥

ಕೆಲವು ಭೀಮಬಲದ ಶೂರರು ರಾಮನ ಇದಿರು ಹೋಗಿ ಶೂಲ ಖಡ್ಗ ಕೊಡಲಿ ಮುಂತಾದ ಪರಮಾಯುಧಗಳನ್ನು ಎಸೆದರು.

ತಾನಿ ಬಾಣೈರ್ಮಹಾಬಾಹುಃ ಶಸ್ತ್ರಾಣ್ಯಾವಾರ್ಯ ರಾಘವ ।
ಜಹಾರ ಸಮರೇ ಪ್ರಾಣಾಂಶ್ಚಿಚ್ಛೇದ ಚ ಶಿರೋಧರಾನ್ ॥೨೮॥

ಆ ಆಯುಧಗಳನ್ನು ಮಹಾತೋಳಿನ ರಾಘವನು ಬಾಣಗಳಿಂದ ನಿವಾರಿಸಿ ಯುದ್ಧದಲ್ಲಿ ಅವರ ಪ್ರಾಣ ತೆಗೆದನು. ಶತ್ರುಗಳನ್ನು ಕತ್ತರಿಸಿದನು ಕೂಡ.

ತೇ ಛಿನ್ನಶಿರಸಃ ಪೇತುಶ್ಛಿನ್ನವರ್ಮಶರಾಸನಾಃ ।
ಸುಪರ್ಣವಾತವಿಕ್ಷಿಪ್ತಾ ಜಗತ್ಯಾಂ ಪಾದಪಾ ಯಥಾ ॥೨೯॥

ಕಡಿದ ತಲೆಯವರು, ತುಂಡಾದ ಕವಚ ಬಾಣದವರು ಆದ ಆ ರಕ್ಕಸರು ಧರೆಗುರುಳಿದರು–ಗರುಡನ ರೆಕ್ಕೆಯ ಗಾಳಿಗೆ ಉದುರುವ ಮರಗಳಂತೆ.

ಅವಶಿಷ್ಟಾಶ್ಚ ಯೇ ತತ್ರ ವಿಷಣ್ಣಾಶ್ಚ ನಿಶಾಚರಾಃ ।
ಖರಮೇವಾಭ್ಯಧಾವಂತ ಶರಣಾರ್ಥಂ ಶರಾರ್ದಿತಾಃ ॥೩೦॥

ಬಾಣದಿಂದ ಹಿಂಸಿತರಾಗಿ ವಿಷಣ್ಣರಾದ ಉಳಿದವರು ರಕ್ಷಣೆಗಾಗಿ ಖರನೆಡೆಗೆ ದೌಡಾಯಿಸಿದರು.

ತಾನ್ ಸರ್ವಾನ್ ಪುನರಾದಾಯ ಸಮಾಶ್ವಾಸ್ಯ ಚ ದೂಷಣಃ ।
ಅಭ್ಯಧಾವತ ಕಾಕುತ್ಸ್ಥಂ ಕ್ರುದ್ಧೋ ರುದ್ರಮಿವಾಂತಕಃ ॥೩೧॥

ಅವರನ್ನೆಲ್ಲ ಸಂತೈಸಿ ಜೊತೆಗೆ ಸೇರಿಸಿಕೊಂಡು ರುದ್ರನಂತೆ ಕ್ರುದ್ಧನಾಗಿ ರಾಮನ ಕಡೆ ಧಾವಿಸಿದ.

ನಿವೃತ್ತಾಸ್ತು ಪುನಃ ಸರ್ವೇ ದೂಷಣಾಶ್ರಯನಿರ್ಭಯಾಃ ।
ರಾಮಮೇವಾಭ್ಯಧಾವಂತ ಸಾಲತಾಲಶಿಲಾಯುಧಾಃ ॥೩೨॥

ಹಿಂತಿರುಗಿದ ಅವರೆಲ್ಲ ಮತ್ತೆ ದೂಷಣನ ಆಸರೆಯಿಂದ ಭಯಹೀನರಾಗಿ ಸಾಲತಾಲ ಶಿಲಾಯುಧರಾಗಿ ರಾಮನ ಮುಂದೆ ಧಾವಿಸಿದರು.

ಶೂಲಮುದ್ಗರಹಸ್ತಾಶ್ಚ ಚಾಪಹಸ್ತಾ ಮಹಾಬಲಾಃ ।
ಸೃಜಂತಃ ಶರವರ್ಷಾಣಿ ಶಸ್ತ್ರವರ್ಷಾಣಿ ಸಂಯುಗೇ ॥೩೩॥

ದ್ರುಮವರ್ಷಾಣಿ ಮುಂಚಂತಃ ಶಿಲಾವರ್ಷಾಣಿ ರಾಕ್ಷಸಾಃ ।

ಮಹಾಬಲಶಾಲಿಗಳಾದ ಆ ರಾಕ್ಷಸರು ಶೂಲ ಮುದ್ಗರಗಳನ್ನು ಹಿಡಿದು, ಬಿಲ್ಲು ಹಿಡಿದು ಬಂದರು. ಯುದ್ಧದಲ್ಲಿ ರಾಮನ ಮೇಲೆ ಬಾಣಗಳ ಮಳೆಯನ್ನು ಶಸ್ತ್ರಗಳ ಮಳೆಯನ್ನು ಸುರಿಸಿದರು. ಮರಗಳ ಶಿಲೆಗಳ ಮಳೆಗರೆದರು.

ತದ್ಬಭೂವಾದ್ಭುತಂ ಯುದ್ಧಂ ತುಮುಲಂ ರೋಮಹರ್ಷಣಮ್॥೩೪॥

ರಾಮಸ್ಯ ಚ ಮಹಾಘೋರಂ ಪುನಸ್ತೇಷಾಂ ಚ ರಕ್ಷಸಾಮ್ ।
ತೇ ಸಮಂತಾದಭಿಕ್ರುದ್ಧಾ ರಾಘವಂ ಪುನರಭ್ಯಯುಃ ॥೩೫॥

ರಾಮ ಹಾಗು ರಕ್ಕಸರ ಆ ಯುದ್ಧ ಅದ್ಭುತವು ಸಂಕುಲವು ರೋಮಾಂಚ ಕಾರಿಯು ಆಗಿತ್ತು.

ಆ ರಕ್ಕಸರು ತುಂಬ ಕ್ರುದ್ಧರಾಗಿ ಮತ್ತೆ ರಾಘವನೆದುರು ಬಂದರು.

ತೈಶ್ಚ ಸರ್ವಾ ದಿಶೋ ದೃಷ್ಟ್ವಾ ಪ್ರದಿಶಶ್ಚ ಸಮಾವೃತಾಃ ।
ರಾಕ್ಷಸೈರುದ್ಯತಪ್ರಾಸೈಃ ಶರವರ್ಷಾಭಿವರ್ಷಿಭಿಃ ॥೩೬॥

ಸ ಕೃತ್ವಾ ಭೈರವಂ ನಾದಮಸ್ತ್ರಂ ಪರಮಭಾಸ್ವರಮ್ ।
ಸಂಯೋಜಯತ ಗಾಂಧರ್ವಂ ರಾಕ್ಷಸೇಷು ಮಹಾಬಲಃ ॥೩೭॥

ಪ್ರಾಸಾಯುಧಗಳನ್ನು ಎತ್ತಿಹಿಡಿದ ರಕ್ಕಸರು, ಬಾಣವೃಷ್ಟಿಗಳನ್ನೆ ಸುರಿಸುತ್ತಿದ್ದ ರಕ್ಕಸರು ದಿಕ್ಕು ವಿದಿಕ್ಕುಗಳಲ್ಲಿ ತುಂಬಿ ಹೋದರು.

ಅದನ್ನು ನೋಡಿ ಶ್ರೀರಾಮಚಂದ್ರ ಸಿಂಹನಾದಗೈಯುತ್ತ ಪರಮಭಾಸ್ವರವಾದ ಗಾಂಧರ್ವಾಸ್ತ್ರವನ್ನು ಬಿಲ್ಲಿನಲ್ಲಿ ಜೋಡಿಸಿದ!

ತತಃ ಶರಸಹಸ್ರಾಣಿ ನಿರ್ಯಯುಶ್ಚಾಪಮಂಡಲಾತ್ ।
ಸರ್ವಾ ದಶ ದಿಶೋ ಬಾಣೈರಾವಾರ್ಯಂತ ಸಮಾಗತೈಃ ॥೩೮॥

ಮತ್ತೆ ಮಂಡಲಾಕಾರದ ಬಿಲ್ಲಿನಿಂದ ಸಾವಿರಾರು ಬಾಣಗಳು ಹೊರ ಹೊಮ್ಮಿದವು. ಆ ಬಾಣಗಳಿಂದ ಹತ್ತೂ ದಿಕ್ಕುಗಳು ಮುಚ್ಚಿಹೋದವು.

ನಾದದಾನಂ ಶರಾನ್ ಘೋರಾನ್ನ ಮುಂಚಂತಂ ಶಿಲೀಮುಖಾನ್ ।
ವಿಕರ್ಷಮಾಣಂ ಪಶ್ಯಂತಿ ರಾಕ್ಷಸಾಸ್ತೇ ಶರಾರ್ದಿತಾಃ ॥೩೯॥

ರಾಮನು ಘೋರಬಾಣಗಳನ್ನು ಎತ್ತುಕೊಳ್ಳುವುದನ್ನು ಬಿಡುತ್ತಿದ್ದುದನ್ನು ಹೆದೆಯನ್ನು ಎಳೆಯುತ್ತಿದ್ದುದನ್ನೂ ಪ್ರತ್ಯೇಕವಾಗಿ ಗುರುತಿಸದಾದರು ಶರಪೀಡಿತ ರಕ್ಕಸರು.

ಶರಾಂಧಕಾರಮಾಕಾಶಮಾವೃಣೋತ್ ಸದಿವಾಕರಮ್ ।
ಬಭೂವಾವಸ್ಥಿತೋ ರಾಮಃ ಪ್ರವಮನ್ನಿವ ತಾನ್ ಶರಾನ್ ॥೪೦॥

ಪ್ರಕ್ಷಿಪನ್ನಿವ–ಪಾಠಾಂತರ.

ಸೂರ್ಯನಿಂದ ಕೂಡಿದ ಆಗಸವನ್ನೂ ಶರಸಮೂಹಗಳಿಂದ ಮುಚ್ಚಿ ಕತ್ತಲೆಯಾಗಿಸಿದ ಶ್ರೀರಾಮ ಬಾಣಗಳನ್ನೆಲ್ಲ ವಮನ ಮಾಡುತ್ತಿರುವಂತೆ ಭಾಸವಾದನು.

ಯುಗಪತ್ ಪತಮಾನೈಶ್ಚ ಯುಗಪಚ್ಚ ಹತೈರ್ಭೃಶಮ್ ।
ಯುಗಪತ್ ಪತಿತೈಶ್ಚೈವ ವಿಕೀರ್ಣಾ ವಸುಧಾऽಭವತ್ ॥೪೧॥

ಮೊತ್ತಮೊತ್ತವಾಗಿ ಬೀಳುತ್ತಿರುವವರು, ಮೊತ್ತಮೊತ್ತವಾಗಿ ಒಟ್ಟೊಟ್ಟಿಗೆ ಹತರಾಗುತ್ತಿರುವರು, ಒಟ್ಟೊಟ್ಟಿಗೆ ಹಿಂದೆ ಬಿದ್ದವರು–ಇಂಥ ರಕ್ಕಸರಿಂದ ನೆಲವೆಲ್ಲ ತುಂಬಿಹೋಯಿತು.

ನಿಹತಾಃ ಪತಿತಾಃ ಕ್ಷೀಣಾಶ್ಚಿನ್ನಾ ಭಿನ್ನಾ ವಿದಾರಿತಾಃ ।
ತತ್ರ ತತ್ರ ಸ್ಮ ದೃಶ್ಯಂತೇ ರಾಕ್ಷಸಾಸ್ತೇ ಸಹಸ್ರಶಃ ॥೪೨॥

ಅಲ್ಲಲ್ಲಿ ಸತ್ತವರು ಬಿದ್ದವರು ಕ್ಷೀಣರಾದವರು ಛಿನ್ನ ಭಿನ್ನರಾದವರು ತುಂಡಾಗಿ ಸೀಳಿದವರಾದವರು ಇಂತಹ ರಕ್ಕಸರು ಕಂಡು ಬರುತ್ತಿದ್ದರು.

ಸೋಷ್ಣೀಷೈರುತ್ತಮಾಂಗೈಶ್ಚ ಸಾಂಗದೈರ್ಬಾಹುಭಿಸ್ತಥಾ ।
ಊರುಭಿರ್ಜಾನುಭಿಶ್ಚಿನ್ನೈರ್ನಾನಾರೂಪವಿಭೂಷಣೈಃ ॥೪೩॥

ಹಯೈಶ್ಚ ದ್ವಿಪಮುಖ್ಯೈಶ್ಚ ರಥೈರ್ಭಿನ್ನೈರನೇಕಶಃ ।
ಚಾಮರೈರ್ವ್ಯಜನೈಶ್ಛತ್ರೈರ್ಧ್ವಜೈರ್ನಾನಾವಿಧೈರಪಿ ॥೪೪॥

ರಾಮಸ್ಯ ಬಾಣಾಭಿಹತೈರ್ವಿಚಿತ್ರೈಃ ಶೂಲಪಟ್ಟಿಶೈಃ ।
ವಿಚ್ಛಿನ್ನೈಃ ಸಮರೇ ಭೂಮಿರ್ವಿಕೀರ್ಣಾಭೂದ್ಭಯಂಕರಾ ॥೪೫॥

ಶಿರಸ್ತ್ರಾಣಸಹಿತ ತಲೆಗಳು, ಅಂಗದದಿಂದ ಕೂಡಿದ ತೋಳುಗಳು, ತುಂಡಾದ ತೊಡೆಗಳು, ಮೊಣಕಾಲುಗಳು, ಚೆಲ್ಲಾಪಿಲ್ಲಿಯಾದ ಚದುರಿ ಬಿದ್ದ ಆಭರಣಗಳು, ಅನೇಕ ಕುದುರೆಗಳು, ಉತ್ತಮ ಆನೆಗಳು, ಮುರಿದ ರಥಗಳು, ಚಾಮರಗಳು, ವ್ಯಜನಗಳು, ಬಗೆಬಗೆಯ ಛತ್ರಗಳು, ಧ್ವಜಗಳು, ರಾಮನ ಬಾಣದಿಂದ ತುಂಡಾದ ವಿಚಿತಶೂಲಪಟ್ಟಿಶಗಳು, ಖಂಡತುಂಡಾದ ಖಡ್ಗಗಳು, ಚದುರಿದ ಪ್ರಾಸಗಳು, ಕೊಡಲಿಗಳು, ಪುಡಿಪುಡಿಯಾದ ಬಂಡೆ ತುಂಡುಗಳು, ಛಿನ್ನ–ವಿಚ್ಛಿನ್ನಗಳಾದ ವಿಚಿತ್ರ ಬಾಣಗಳು ಆ ರಣರಂಗದಲ್ಲಿ ಹರಡಿಕೊಂಡು ಭೂಮಿಯೇ ಭಯಂಕರವಾಗಿತ್ತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತೈದನೇ ಸರ್ಗ ಮುಗಿಯಿತು.

ಷಡ್ವಿಂಶಃ ಸರ್ಗಃ

ಕಥಾಸಾರಾಂಶ– ದೂಷಣ ತನ್ನ ಸೈನ್ಯ ರಾಮನಿಂದ ನಾಶವಾಗುತ್ತಿರುವುದನ್ನು ನೋಡಿ ತನ್ನ ಐದು ಸಾವಿರ ರಾಕ್ಷಸ ಸೇನೆಯನ್ನು ಯುದ್ಧಕ್ಕೆ ಆದೇಶ ನೀಡಿದ. ಅವರು ಶೂಲ ಖಡ್ಗ ಶಿಲೆ ದ್ರುಮ ಬಾಣಗಳ ಮಳೆ ಸುರಿಸಿದರು. ಶ್ರೀರಾಮ ತೀಕ್ಷ್ಣಬಾಣ–ಗಳಿಂದ ರಾಕ್ಷಸರ ಆಯುಧಗಳನ್ನು ತಡೆದನು. ಕ್ರೋಧಗೊಂಡ ರಾಘವ ಸೈನ್ಯಸಹಿತ ದೂಷಣನ ಮೇಲೆ ಬಾಣಗಳ ಆವರಣವನ್ನೇ ಸೃಜಿಸಿದ. ಕುಪಿತನಾದ ದೂಷಣ ರಾಮನ ಮೇಲೆ ವಜ್ರಾಯುಧದಂತೆ ಇರುವ ಬಾಣಗಳ ರಾಶಿಯನ್ನೆ ಸುರಿಸಿದ. ಶ್ರೀರಾಮ ಖಡ್ಗದಿಂದ ಅವನ ಧನುಸ್ಸನ್ನೇ ಮುರಿದು ಹಾಕಿದ. ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು ಹಾಗು ಅರ್ಧಚಂದ್ರಾಕಾರದ ಬಾಣದಿಂದ ಸಾರಥಿಯ ತಲೆಯನ್ನು ಕಡಿದು ಹಾಕಿದ. ಕುದುರೆ ರಥ ಸಾರಥಿಗಳನ್ನು ಕಳೆದುಕೊಂಡ ದೂಷಣ ಗಿರಿಶಿಖರ–ದಂತಿದ್ದ ಪರಿಘಾಯುಧವನ್ನೆ ಹಿಡಿದು ರಾಮನೆದುರು ನುಗ್ಗಿ ಬಂದ. ಕೂಡಲೆ ಶ್ರೀರಾಮ ಎರಡು ಬಾಣಗಳಿಂದ ಆಯುಧ ಸಹಿತವಾದ ದೂಷಣನ ಎರಡು ಕೈಗಳನ್ನೆ ಕತ್ತರಿಸಿ ಹಾಕಿದ. ಧರೆಗುರುಳಿದ ದೂಷಣನನ್ನು ನೋಡಿ ಎಲ್ಲರೂ ರಾಮನನ್ನು ಸಾಧು ಸಾಧು ಎಂದು ಕೊಂಡಾಡಿದರು.

ಇದೇ ಸಂದರ್ಭದಲ್ಲಿ ಮಹಾಕಪಾಲ ಸ್ಥೂಲಾಕ್ಷ ಪ್ರಮಾಥಿ ಎಂಬ ಮೂವರು ರಾಮನ ಮೇಲೆರಗಿದರು. ಮಹಾಕಪಾಲಶೂಲವನ್ನು ಹಿಡಿದು, ಸ್ಥೂಲಾಕ್ಷ ಪಟ್ಟಿಶವನ್ನು, ಪ್ರಮಾಥಿ ಪರಶುವನ್ನು ಹಿಡಿದು ನುಗ್ಗಿ ಬಂದರು.

ರಾಘವನು ತೀಕ್ಷ್ಣಬಾಣಗಳಿಂದ ಮಹಾಕಪಾಲನ ತಲೆ ಕಡಿದನು. ಅಸಂಖ್ಯ ಬಾಣರಾಶಿಗಳಿಂದ ಪ್ರಮಾಥಿಯನ್ನು ಚೆನ್ನಾಗಿ ಥಳಿಸಿದನು. ಅವನು ನೆಲಕ್ಕರುಳಿದ. ಸ್ಥೂಲಾಕ್ಷನ ಕಣ್ಣಿನೊಳಗೆ ಬಾಣಗಳನ್ನು ತುರುಕಿದ. ದೂಷಣನ ಅನುಗರಾದ ಐದುಸಾವಿರ ಸೈನಿಕರನ್ನು ಐದುಸಾವಿರ ಬಾಣಗಳಿಂದ ಕ್ಷಣ ಮಾತ್ರದಲ್ಲಿ ಯಮಲೋಕಕ್ಕೆ ಅಟ್ಟಿದನು.

ದೂಷಣ ಹಾಗೂ ಅನುಯಾಯಿ ಸೈನ್ಯ ನಾಶವಾದದ್ದನ್ನು ನೋಡಿ ಸಿಟ್ಟಿನಿಂದ ರಾಮನನ್ನು ಕೊಲ್ಲಿರೆಂದು ಆದೇಶಿಸಿ ತನ್ನ ಮಹಾಸೇನೆಯೊಂದಿಗೆ ಖರ ರಾಮನೆಡೆ ದೌಡಾಯಿಸಿದ. ಖರನ ಹಿಂದೆ ಹನ್ನೆರಡು ರಾಕ್ಷಸರು ತಮ್ಮ ಸೈನಿಕರೊಂದಿಗೆ ಹಿಂಬಾಲಿಸಿದರು. ಅವರು ಶರವರ್ಷಗೈಯ್ಯುತ್ತಿದ್ದಾಗ ಶ್ರೀರಾಮ ನೂರು ರಾಕ್ಷಸರನ್ನು ನೂರು ಬಾಣಗಳಿಂದ 1 ಸಾವಿರ ರಾಕ್ಷಸರನ್ನು ಸಾವಿರ ಬಾಣಗಳಿಂದ ಕೊಂದು ಹಾಕಿದ.

ಹೀಗೆ ನೆಲದ ಮೇಲೆ ನಿಂತ ಒಬ್ಬ ರಾಮನಿಂದ ಹದಿನಾರು ಸಾವಿರ ರಕ್ಕಸರು ಸತ್ತರು—ಖರ, ತ್ರಿಶಿರಸ್ಸು ಇಬ್ಬರು ಮಾತ್ರ ಉಳಿದರು.

ತನ್ನ ಭೀಮಬಲ ರಾಮನಿಂದ ಹತವಾದುದನ್ನು ನೋಡಿ ಖರ ರಥವೇರಿ ಮತ್ತೆ ಧಾವಿಸಿ ಬಂದ ರಾಮನೆಡೆಗೆ.

❖

ದೂಷಣಾದಿವಧಃ

ದೂಷಣಸ್ತು ಸ್ವಕಂ ಸೈನ್ಯಂ ಹನ್ಯಮಾನಂ ನಿರೀಕ್ಷ್ಯ ಸಃ ।
ಸಂದಿದೇಶ ಮಹಾಬಾಹುರ್ಭೀಮವೇಗಾನ್ ದುರಾಸದಾನ್ ।
ರಾಕ್ಷಸಾನ್ ಪಂಚಸಾಹಸ್ರಾನ್ ಸಮರೇಷ್ವನಿವರ್ತಿನಃ ॥೧॥

ಮಹಾಬಾಹು ದೂಷಣ ತನ್ನ ಸೈನ್ಯ ಸಾಯುತ್ತಿರುವುದನ್ನು ನೋಡಿ ಭಯಂಕರವೇಗದ, ಎದುರಿಸಲಾಗದ, ಯುದ್ಧಗಳಲ್ಲಿ ಹಿಂತಿರುಗದ ಐದು ಸಾವಿರ ರಾಕ್ಷಸರನ್ನು ಯುದ್ಧ ಮಾಡುವಂತೆ ಸಂದೇಶವಿತ್ತ.

ತೇ ಶೂಲೈ ಪಟ್ಟಿಶೈಃ ಖಡ್ಗೈಃ ಶಿಲಾವಪೈರ್ದ್ರುಮೈರಪಿ ।
ಶರವರ್ಷೈರವಿಚ್ಛಿನ್ನಂ ವವೃಷುಸ್ತಂ ಸಮಂತತಃ ॥೨॥

ಅವರು ಶ್ರೀರಾಮನ ಮೇಲೆ ಸುತ್ತಲೂ ಶೂಲ, ಪಟ್ಟಿಶ, ಖಡ್ಗ, ಕಲ್ಲು ಬಂಡೆಗಳು, ವೃಕ್ಷಗಳು, ಬಾಣಗಳನ್ನು ನಿರಂತರವಾಗಿ ಮಳೆಗರೆದರು.

ಸ ದ್ರುಮಾಣಾಂ ಶಿಲಾನಾಂ ಚ ವರ್ಷಂ ಪ್ರಾಣಹರಂ ಮಹತ್ ।
ಪ್ರತಿಜಗ್ರಾಹ ಧರ್ಮಾತ್ಮಾ ರಾಘವಸ್ತೀಕ್ಷ್ಣಸಾಯಕೈಃ ॥೩॥

ಧರ್ಮಾತ್ಮ ರಾಘವನು ಮರ ಶಿಲೆಗಳ ಪ್ರಾಣಹರ ವರ್ಷವನ್ನು ತೀಕ್ಷ್ಣ ಬಾಣಗಳಿಂದ ತಡೆದನು.

ಪ್ರತಿಗೃಹ್ಯ ಚ ತದ್ವರ್ಷಂ ನಿಮೀಲಿತ ಇವರ್ಷಭಃ ।
ರಾಮಃ ಕ್ರೋಧಂ ಪರಂ ಭೇಜೇ ವಧಾರ್ಥಂ ಸರ್ವರಕ್ಷಸಾಮ್ ॥೪॥

ಆ ಆಯುಧಗಳ ವೃಷ್ಟಿಯನ್ನು ತಡೆದು ರಾಮ ಕಣ್ಣು ಮುಚ್ಚಿಕೊಂಡ ಗೂಳಿಯಂತೆ ಎಲ್ಲ ರಕ್ಕಸರ ವಧೆಗಾಗಿ ಮಹಾಕ್ರೋಧವನ್ನು ಪ್ರಕಟಿಸಿದನು.

ತತಃ ಕ್ರೋಧಸಮಾವಿಷ್ಟಃ ಪ್ರದೀಪ್ತ ಇವ ಪಾವಕಃ ।
ಶರೈರವಾಕಿರತ್ ಸೈನ್ಯಂ ಸರ್ವತಃ ಸಹದೂಷಣಮ್ ॥೫॥

ಬಳಿಕ ಮಹಾಕ್ರೋಧಗೊಂಡ ತೇಜಸ್ಸಿನಿಂದ ಪ್ರದೀಪ್ತನಾದ ರಾಮನು ದೂಷಣಸಹಿತ ಆ ಸೈನ್ಯದ ಸುತ್ತಲು ಬಾಣಗಳ ಮಳೆ ಸುರಿಸಿದನು.

ತತಃ ಸೇನಾಪತಿಃ ಕ್ರುದ್ಧೋ ದೂಷಣಃ ಶತ್ರುದೂಷಣಃ ।
ಶರೈರಶನಿಕಲ್ಪೈಸ್ತಂ ರಾಘವಂ ಸಮವಾಕಿರತ್ ॥೬॥

ಇದರಿಂದ ಶತ್ರುದೂಷಣನಾದ ದೂಷಣ ಕ್ರುದ್ಧನಾಗಿ ವಜ್ರದಂತಹ ಬಾಣಗಳನ್ನು ರಾಮನ ಸುತ್ತಲು ಸುರಿದನು.

ಸಮವಾರಯತ್–ಪಾಠಾಂತರ.

ತತೋ ರಾಮಃ ಸುಸಂಕ್ರುದ್ಧಃ ಕ್ಷುರೇಣಾಸ್ಯ ಮಹದ್ಧನುಃ ।
ಚಿಚ್ಛೇದ ಸಮರೇ ವೀರಶ್ಚತುರ್ಭಿಶ್ಚತುರೋ ಹಯಾನ್ ॥೭॥

ಹತ್ವಾ ಚಾಶ್ವಾನ್ ಶರೈಸ್ತಿಕ್ಷ್ಣೈರರ್ಧಚಂದ್ರೇಣ ಸಾರಥೇಃ ।
ಶಿರೋ ಜಹಾರ ತದ್ರಕ್ಷಸ್ತ್ರಿಭಿರ್ವಿವ್ಯಾಧ ವಕ್ಷಸಿ ॥೮॥

ಬಳಿಕ ಅತ್ಯಂತ ಕ್ರುದ್ಧನಾದ ರಾಮನು ಕತ್ತಿಯ ಅಲುಗಿನಂತೆ ಹರಿತವಾದ ಬಾಣದಿಂದ ಆತನ ಮಹಾಧನುಸ್ಸನ್ನು ತುಂಡರಿಸಿದನು. ನಾಕು ಬಾಣಗಳಿಂದ ನಾಕು ಕುದುರೆಗಳನ್ನು ಕೊಂದು ಅರ್ಧ ಚಂದ್ರಾಕಾರದ ಬಾಣದಿಂದ ಸಾರಥಿಯ ತಲೆ ತರಿದ. ಮೂರು ಬಾಣಗಳಿಂದ ಆ ರಕ್ಕಸನ ಎದೆಗೆ ಹೊಡೆದನು.

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ॥೯॥

ಜಗ್ರಾಹ ಗಿರಿಶೃಂಗಾಭಂ ಪರಿಘಂ ರೋಮಹರ್ಷಣಮ್ ।
ವೇಷ್ಟಿತಂ ಕಾಂಚನೈಃ ಪಟ್ಟೈರ್ದೇವಸೈನ್ಯಪ್ರಮರ್ದನಮ್ ॥೧೦॥

ಧನುಷ್ ತುಂಡಾಗಿ ರಥ ಕುದುರೆ ಸಾರಥಿ ಕಳೆದುಕೊಂಡು ದೂಷಣನು ಸುವರ್ಣ ಪಟ್ಟಿಗಳಿಂದ ಖಚಿತವಾದ ದೇವಸೈನ್ಯವನ್ನು ಸದೆಯಬಲ್ಲ ರೋಮಾಂಚಕಾರಿ ಪರಿಘಾಯುಧವನ್ನು ಎತ್ತಿಕೊಂಡನು.

ಆಯಸೈಃ ಶಂಕುಭಿಸ್ತೀಕ್ಷ್ಣೈಃ ಕೀರ್ಣಂ ಪರವಸೋಕ್ಷಿತಮ್ ।
ವಜ್ರಾಶನಿಸಮಸ್ಪರ್ಶಂ ಪರಘೋಪುರದಾರಣಮ್ ॥೧೧॥

ತ್ರಾಸನಂ ಸರ್ವಭೂತಾನಾಂ ಕಾಂಚನಾಂಗದಭೂಷಣಮ್ ।
ತಂ ಮಹೋರಗಸಂಕಾಶಂ ಪ್ರಗೃಹ್ಯ ಪರಿಘಂ ರಣೇ ॥೧೨॥

ದೂಷಣೋಽಭ್ಯದ್ರವದ್ರಾಮಂ ಕ್ರೂರಕರ್ಮಾ ನಿಶಾಚರಃ ।

ಕಬ್ಬಿಣದ ಗೂಟಗಳಿಂದ ಕೂಡಿದ ಶತ್ರುದೇಹದ ವಸಾದಿಂದ ತೊಯ್ದ ವಜ್ರ ಹಾಗು ವಜ್ರಾಯುಧದಂತೆ ಕಠಿಣ ಸ್ಪರ್ಶದ, ಶತ್ರುವಿನ ನಗರದ್ವಾರಗಳನ್ನು ಸೀಳಬಲ್ಲ ಮಹಾಸರ್ಪದಂತಿದ್ದ ಪರಿಘಾಯುಧವನ್ನು ಹಿಡಿದು–ಕ್ರೂರಕರ್ಮಿ ಯಾದ ನಿಶಾಚರ ದೂಷಣನು ರಾಮನ ಮೇಲೆ ಎರಗಿದನು.

ತಸ್ಯಾಭಿಪತಮಾನಸ್ಯ ದೂಷಣಸ್ಯ ಸ ರಾಘವಃ ।
ದ್ವಾಭ್ಯಾಂ ಶರಾಭ್ಯಾಂ ಚಿಚ್ಛೇದ ಸಹಸ್ತಾಭರಣೌ ಭುಜೌ ॥೧೩॥

ಭ್ರಷ್ಟಸ್ತಸ್ಯ ಮಹಾಕಾಯಃ ಪಪಾತ ರಣಮೂರ್ಧನಿ ।
ಪರಿಘಶ್ಚಿನ್ನಹಸ್ತಸ್ಯ ಶಕ್ರಧ್ವಜ ಇವಾಗ್ರತಃ ॥೧೪॥

ಸ ಕರಾಭ್ಯಾಂ ವಿಕೀರ್ಣಾಭ್ಯಾಂ ಪಪಾತ ಭುವಿ ದೂಷಣಃ ।
ವಿಷಾಣಾಭ್ಯಾಂ ವಿಶೀರ್ಣಾಭ್ಯಾಂ ಮನಸ್ವೀವ ಮಹಾಗಜಃ ॥೧೫॥

ತನ್ನ ಮೇಲೆರಗಿ ಬರುತ್ತಿರುವ ದೂಷಣನ ಹಸ್ತಾಭರಣಗಳಿಂದ ಕೂಡಿದ ಎರಡೂ ಕೈಗಳನ್ನು ಶ್ರೀರಾಮ ಎರಡು ಬಾಣಗಳಿಂದ ತುಂಡರಿಸಿದನು.

ಯುದ್ಧದಲ್ಲಿ ಎರಡೂ ತೋಳುಗಳು ತುಂಡಾಗಿ ದೂಷಣನ ಕೈಯಿಂದ ಆ ಮಹಾಕಾಯದ ಪರಿಘಾಯುಧವು ಇಂದ್ರಧ್ವಜದಂತೆ ಜಾರಿ ಎದುರಿಗೆ ಬಿದ್ದು ಹೋಯಿತು.

ತುಂಡಾಗಿ ಬೆಲ್ಲಿಬಿದ್ದ ತೋಳುಗಳೊಂದಿಗೆ ದೂಷಣನು ಧರೆಗುರುಳಿದ— ಎರಡೂ ದಂತಗಳು ತುಂಡಾಗಿ ಸ್ವೇಚ್ಛಾಚಾರಿ ಮದಗಜ ಬಿದ್ದಂತೆ.

ತಂ ದೃಷ್ಟ್ವಾ ಪತಿತಂ ಭೂಮೌ ದೂಷಣಂ ನಿಹತಂ ರಣೇ ।
ಸಾಧು ಸಾಧ್ವಿತಿ ಕಾಕುತ್ಸ್ಥಂ ಸರ್ವಭೂತಾನ್ಯಪೂಜಯನ್ ॥೧೬॥

ಯುದ್ಧದಲ್ಲಿ ರಾಮನಿಂದ ಹತನಾಗಿ ನೆಲಕ್ಕೆ ಉರುಳಿದ ದೂಷಣನನ್ನು ಕಂಡು ಎಲ್ಲ ಜೀವಗಳು 'ಒಳ್ಳೆಯದು ಒಳ್ಳೆಯದು' ಎಂದು ರಾಮನನ್ನು ಪ್ರಶಂಸಿಸಿದರು.

ಏತಸ್ಮಿನ್ನಂತರೇ ಕ್ರುದ್ಧಾಸ್ತ್ರಯಃ ಸೇನಾಗ್ರಯಾಯಿನಃ ।
ಸಂಹತ್ಯಾಭ್ಯದ್ರವನ್ ರಾಮಂ ಮೃತ್ಯುಪಾಶಾವಪಾಶಿತಾಃ ॥೧೭॥

ಮಹಾಕಪಾಲಃ ಸ್ಥೂಲಾಕ್ಷಃ ಪ್ರಮಾಥೀ ಚ ಮಹಾಬಲಃ ।
ಮಹಾಕಪಾಲೋ ವಿಪುಲಂ ಶೂಲಮುದ್ಯಮ್ಯ ರಾಕ್ಷಸಃ ॥೧೮॥

ಸ್ಥೂಲಾಕ್ಷಃ ಪಟ್ಟಿಶಂ ಗೃಹ್ಯ ಪ್ರಮಾಥೀ ಚ ಪರಶ್ವಧಮ್ ॥೧೯॥

ಇದೇ ಸಂದರ್ಭದಲ್ಲಿ ಮೃತ್ಯುಪಾಶದ ಬಂಧನದ ಬಂಧಿಗಳಾದ ಮೂವರು ಸೇನಾಗ್ರಚರರು ಮೂರು ಮಂದಿ ಒಟ್ಟಾಗಿ ರಾಮನ ಮೇಲೆ ಎರಗಿಬಂದರು—ಮಹಾಕಪಾಲ, ಸ್ಥೂಲಾಕ್ಷ ಮಹಾಬಲಿ ಪ್ರಮಾಥಿ. ರಾಕ್ಷಸ ಮಹಾಕಪಾಲನು ವಿಸ್ತಾರವಾದ ಶೂಲವನ್ನು, ಸ್ಥೂಲಾಕ್ಷನು ಪಟ್ಟಿಶವನ್ನು, ಪ್ರಮಾಥಿಯು ಕೊಡಲಿಯನ್ನೂ ಹಿಡಿದು ಬಂದರು.

ದೃಷ್ಟ್ವೈವಾಪತತಸ್ತೂರ್ಣಂ ರಾಘವಃ ಸಾಯಕೈಃ ಶಿತೈಃ ।
ತೀಕ್ಷ್ಣಾಗ್ರೈಃ ಪ್ರತಿಜಗ್ರಾಹ ಸಂಪ್ರಾಪ್ತಾನತಿಥೀನಿವ ॥೨೦॥

ಮಹಾಕಪಾಲಸ್ಯ ಶಿರಶ್ಚಿಚ್ಛೇದ ಪರಮೇಷುಭಿಃ ।
ಅಸಂಖ್ಯೇಯೈಸ್ತು ಬಾಣೌಘೈಃ ಪ್ರಮಮಾಥ ಪ್ರಮಾಥಿನಮ್ ॥೨೧॥

ಸ ಪಪಾತ ಹತೋ ಭೂಮೌ ವಿಟಪೀವ ಮಹಾದ್ರುಮಃ ।
ಸ್ಥೂಲಾಕ್ಷಸ್ಯಾಕ್ಷಿಣೀ ತೀಕ್ಷ್ಣೈಃ ಪೂರಯಾಮಾಸ ಸಾಯಕೈಃ ॥೨೨॥

ಎರಗಿ ಬರುತ್ತಿರುವ ಆ ರಕ್ಕಸರನ್ನು ನೋಡಿದ ಕೂಡಲೆ ರಾಘವನು ಚೂಪಾದ ತುದಿಯುಳ್ಳ ಹರಿತವಾದ ಬಾಣಗಳಿಂದ—ಮನೆಗೆ ಬಂದ ಅತಿಥಿಗಳನ್ನು ಹೇಗೋ ಹಾಗೆ ಅವರನ್ನು ಸ್ವಾಗತಿಸಿದ.

ಉತ್ತಮ ಬಾಣಗಳಿಂದ ಮಹಾಕಪಾಲನ ಶಿರವನ್ನು ತರಿದನು. ಎಣಿಸಲಾಗ ದಷ್ಟು ಬಾಣ ಸಮುದಾಯಗಳಿಂದ ಪ್ರಮಾಥಿಯನ್ನು ಚೆನ್ನಾಗಿ ಮಥನಗೊಳಿಸಿ ದನು. ಕೊಂಬೆಗಳೊಂದಿಗಿನ ಮಹಾಮರದಂತೆ ಅವನು ಭೂಮಿಯಲ್ಲಿ ಬಿದ್ದ. ಸ್ಥೂಲಾಕ್ಷನ ದೊಡ್ಡ ಕಣ್ಣುಗಳನ್ನು ತೀಕ್ಷ್ಣಬಾಣಗಳಿಂದ ತುಂಬಿದನು.

ದೂಷಣಸ್ಯಾನುಗಾನ್ ಪಂಚ ಸಾಹಸ್ರಾನ್ ಕುಪಿತಃ ಕ್ಷಣಾತ್ ।
ಬಾಣೌಘೈಃ ಪಂಚಸಾಹಸ್ರೈರನಯದ್ಯಮಸಾದನಮ್ ॥೨೩॥

ದೂಷಣನ ಹಿಂಬಾಲಕರಾದ ಐದು ಸಾವಿರ ಸೈನಿಕರನ್ನು ಕ್ಷಣ ಮಾತ್ರದಲ್ಲಿ ಐದು ಸಾವಿರ ಬಾಣಗಳಿಂದಲೇ ಯಮಲೋಕಕ್ಕೇ ಅಟ್ಟಿದನು.

ದೂಷಣಂ ನಿಹತಂ ದೃಷ್ಟ್ವಾ ತಸ್ಯ ಚೈವ ಪದಾನುಗಾನ್ ।
ವ್ಯಾದಿದೇಶ ಖರಃ ಕ್ರುದ್ಧಃ ಸೇನಾಧ್ಯಕ್ಷಾನ್ ಮಹಾಬಲಾನ್ ॥೨೪॥

ಅಯಂ ವಿನಿಹತಃ ಸಂಖ್ಯೇ ದೂಷಣಃ ಸಪದಾನುಗಃ ।
ಮಹತ್ಯಾ ಸೇನಯಾ ಸಾರ್ಧಂ ಯುದ್ಧ್ವಾ ರಾಮಂ ಕುಮಾನುಷಮ್ ॥

ಶಸ್ತ್ರೈರ್ನಾನಾವಿಧಾಕಾರೈರ್ಹನಧ್ವಂ ಸರ್ವರಾಕ್ಷಸಾಃ ।
ಏವಮುಕ್ತ್ವಾ ಖರಃ ಕ್ರುದ್ಧೋ ರಾಮಮೇವಾಭಿದುದ್ರುವೇ ॥೨೬॥

ದೂಷಣ ಹಾಗು ಅವನ ಅನುಯಾಯಿಗಳು ಹತರಾದುದನ್ನು ನೋಡಿ ಕ್ರುದ್ಧನಾದ ಖರ ಮಹಾಬಲಶಾಲಿಗಳಾದ ಸೇನಾಧ್ಯಕ್ಷರನ್ನು ಆದೇಶಿಸಿದ— 'ಯುದ್ಧದಲ್ಲಿ ದೂಷಣ ಹಾಗೂ ಅವನ ಅನುಗತರು ವಿಹತರಾಗಿದ್ದಾರೆ. ಮಹಾ-ಸೇನೆಯೊಂದಿಗೆ ಕೆಟ್ಟ ಮನುಷ್ಯ ರಾಮನನ್ನು ಯುದ್ಧಮಾಡಿ ನಾನಾವಿಧ ಶಸ್ತ್ರಗಳಿಂದ ಎಲ್ಲ ರಾಕ್ಷಸರು ಕೊಲ್ಲಿರಿ.' ಹೀಗೆ ಹೇಳಿ ಕ್ರುದ್ಧನಾದ ಖರ ರಾಮನೆಡೆಗೇ ಓಡಿದನು.

ಶ್ಯೇನಗಾಮೀ ಪೃಥುಗ್ರೀವೋ ಯಜ್ಞಶತ್ರುರ್ವಿಹಂಗಮಃ ।
ದುರ್ಜಯಃ ಕರವೀರಾಕ್ಷಃ ಪರುಷಃ ಕಾಲಕಾರ್ಮುಕಃ ॥೨೭॥

ಮೇಘಮಾಲೀ ಮಹಾಮಾಲೀ ಸರ್ಪಾಸ್ಯೋ ರುಧಿರಾಶನಃ ।
ದ್ವಾದಶೈತೇ ಮಹಾವೀರ್ಯಾ ಬಲಾಧ್ಯಕ್ಷಾಃ ಸಸೈನಿಕಾಃ ॥೨೮॥

ರಾಮಮೇವಾಭ್ಯವರ್ತಂತ ವಿಸೃಜಂತಃ ಶರೋತ್ತಮಾನ್ ।

ಹೇಮಮಾಲೀ –ಪಾಠಾಂತರ.

ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಕರ-ವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲೀ, ಮಹಾಮಾಲೀ, ಸರ್ಪಾಸ್ಯ ಮತ್ತು ರುಧಿರಾಶನ—ಹೀಗೆ ಸೇನಾಧ್ಯಕ್ಷರಾದ ಹನ್ನೆರಡು ಮಂದಿ ತಮ್ಮ ಸೈನಿಕ-ರೊಂದಿಗೆ ಉತ್ತಮ ಬಾಣಗಳನ್ನು ಪ್ರಯೋಗಿಸುತ್ತಾ ರಾಮನೆಡೆ ಎರಗಿ ಬಂದರು.

ತತಃ ಪಾವಕಸಂಕಾಶೈರ್ಹೇಮವಜ್ರವಿಭೂಷಿತೈಃ ॥೨೯॥

ಜಘಾನ ಶೇಷಂ ತೇಜಸ್ವೀ ತಸ್ಯ ಸೈನ್ಯಸ್ಯ ಸಾಯಕೈಃ ।
ತೇ ರುಕ್ಮಪುಂಖಾ ವಿಶಿಖಾಃ ಸಧೂಮಾ ಇವ ಪಾವಕಾಃ ॥೩೦॥

ನಿಜಘ್ನುಸ್ತಾನಿ ರಕ್ಷಾಂಸಿ ವಜ್ರಾ ಇವ ಮಹಾದ್ರುಮಾನ್ ।
ರಕ್ಷಸಾಂ ತು ಶತಂ ರಾಮಃ ಶತೇನೈಕೇನ ಕರ್ಣಿನಾ ॥೩೧॥

ಸಹಸ್ರಂ ಚ ಸಹಸ್ರೇಣ ಜಘಾನ ರಣಮೂರ್ಧನಿ ।
ತೈರ್ಭಿನ್ನವರ್ಮಾಭರಣಾಶ್ಚಿನ್ನಭಿನ್ನಶರಾಸನಾಃ ॥೩೨॥

ನಿಪೇತುಃ ಶೋಣಿತಾದಿಗ್ಧಾ ಧರಣ್ಯಾಂ ರಜನೀಚರಾಃ ।
ತೈರ್ಮುಕ್ತಕೇಶೈಃ ಸಮರೇ ಪತಿತೈಃ ಶೋಣಿತೋಕ್ಷಿತೈಃ ॥೩೩॥

ಆಸ್ತೀರ್ಣಾ ವಸುಧಾ ಕೃತ್ಸ್ನಾ ಮಹಾವೇದಿಃ ಕುಶೈರಿವ ।
ಕ್ಷಣೇನ ತು ಮಹಾಘೋರಂ ವನಂ ನಿಹತರಾಕ್ಷಸಮ್ ॥೩೪॥

ಬಭೂವ ನಿರಯಪ್ರಖ್ಯಂ ಮಾಂಸಶೋಣಿತಕರ್ದಮಮ್ ।

ಬಳಿಕ ತೇಜಸ್ವೀ ರಾಮನು ಹೇಮ–ವಜ್ರಗಳಿಂದ ಭೂಷಿತಗಳಾದ ಅಗ್ನಿಯಂತಿರುವ ಸಾಯಕಗಳಿಂದ ಆ ಸೈನ್ಯದ ಅಳಿದುಳಿದವರನ್ನು ಕೊಂದು ಹಾಕಿದ.

ರಾಮಬಿಟ್ಟ ಬಂಗಾರದ ಗರಿಗಳ ಆ ಬಾಣಗಳು ವಜ್ರವು ಮಹಾವೃಕ್ಷಗಳನ್ನು ಹೇಗೆ ಹಾಗೆ ಆ ರಾಕ್ಷಸರನ್ನು ಸಂಹರಿಸಿದವು.

ನೂರು ರಕ್ಕಸರನ್ನು ಕರ್ಣಾಕಾರದ ನೂರು ಬಾಣಗಳಿಂದ, ಸಾವಿರ ರಕ್ಕಸರನ್ನು ಸಾವಿರ ಬಾಣಗಳಿಂದ ಸಮರಭೂಮಿಯಲ್ಲಿ ಸಂಹರಿಸಿದನು.

ಸೀಳಿದ ಕವಚ, ಕಡಿದ ಆಭರಣಗಳುಳ್ಳ ಛಿನ್ನ–ಭಿನ್ನ ಬಿಲ್ಲುಗಳ ರಕ್ತಸಿಕ್ತರಾದ ರಕ್ಕಸರು ನೆಲಕ್ಕುರುಳಿದರು. ಕೂದಲು ಬಿಚ್ಚಿ ಬಿದ್ದ ರಕ್ಕಸರಿಂದ ರಕ್ತಸಿಂಚನಗೊಂಡ ಭೂಮಿ ದರ್ಭೆ ಹರಡಿದ ನೆಲದಂತೆ ಕಾಣುತ್ತಿತ್ತು.

ಕ್ಷಣಮಾತ್ರದಲ್ಲಿ ಸತ್ತರಾಕ್ಷಸರ ಆ ವನವು ಮಾಂಸ ರಕ್ತಗಳ ಕೆಸರಿನಿಂದ ನರಕ ಸದೃಶವಾಗಿತ್ತು.

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ॥೩೫॥

ಹತಾನ್ಯೇಕೇನ ರಾಮೇಣ ಮಾನುಷೇಣ ಪದಾತಿನಾ ।
ತಸ್ಯ ಸೈನ್ಯಸ್ಯ ಸರ್ವಸ್ಯ ಖರಃ ಶೇಷೋ ಮಹಾರಥಃ ॥೩೬॥

ರಾಕ್ಷಸಸ್ತ್ರಿಶಿರಾಶ್ಚೈವ ರಾಮಶ್ಚ ರಿಪುಸೂದನಃ ।
ಶೇಷಾ ಹತಾ ಮಹಾಸತ್ತ್ವಾ ರಾಕ್ಷಸಾ ರಣಮೂರ್ಧನಿ ॥೩೭॥

ಘೋರಾ ದುರ್ವಿಷಹಾಃ ಸರ್ವೇ ಲಕ್ಷ್ಮಣಸ್ಯಾಗ್ರಜೇನ ತೇ ॥

ಮಾನುಷರೂಪಧಾರಿ ಶ್ರೀರಾಮ ಪಾದಯಾತ್ರಿಯಾಗಿದ್ದರೂ, ಏಕಾಕಿಯಾಗಿ-ದ್ದರೂ ಭಯಂಕರ ಕರ್ಮದ ಹದಿನಾಲ್ಕು ಸಾವಿರ ರಕ್ಕಸರನ್ನು ಕೊಂದು ಹಾಕಿದ.

ಆ ಎಲ್ಲ ಸೈನ್ಯದಲ್ಲಿ ಮಹಾರಥ ಖರ ರಕ್ಕಸ ತ್ರಿಶಿರಸ್ಸು ಇಬ್ಬರು ಮಾತ್ರ ಉಳಿದಿದ್ದರು. ರಾಮನಂತು ಶತ್ರುಸಂಹಾರಕ್ಕೆ ಅಣಿಯಾಗಿದ್ದನು.

ಆ ಇಬ್ಬರನ್ನುಳಿದು ಮಹಾವೀರ್ಯವಂತರಾದ ಸಹಿಸಲಸದಳರಾದ ಘೋರರಾದ ಎಲ್ಲ ರಕ್ಕಸರು ಲಕ್ಷ್ಮಣಾಗ್ರಜ ರಾಮನಿಂದ ಹತರಾದರು.

ತತಸ್ತು ತದ್ಭೀಮಬಲಂ ಮಹಾಹವೇ
ಸಮೀಕ್ಷ್ಯ ರಾಮೇಣ ಹತಂ ಬಲೀಯಸಾ ।
ರಥೇನ ರಾಮಂ ಮಹತಾ ಖರಸ್ತದಾ
ಸಮಾಸಸಾದೇಂದ್ರ ಇವೋದ್ಯತಾಶನಿಃ ॥೩೮॥

ತರುವಾಯ ಆ ಮಹಾಯುದ್ಧದಲ್ಲಿ ತನ್ನ ಭಯಂಕರ ಸೈನ್ಯವು ಪ್ರಬಲ-ರಾಮನಿಂದ ನಿಹತವಾದುದನ್ನು ನೋಡಿ ಖರನು ಮಹಾರಥದಲ್ಲಿ ಕುಳಿತು—ವಜ್ರಾಯುಧ ಹಿಡಿದು ಯುದ್ಧಕ್ಕೆ ಹೊರಟ ಇಂದ್ರನಂತೆ–ಸೆಣಸಾಡಲು ರಾಮನೆಡೆಗೆ ಬಂದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತಾರನೇ ಸರ್ಗ ಮುಗಿಯಿತು.

❖

ಸಪ್ತವಿಂಶಃ ಸರ್ಗಃ

ಕಥಾಸಾರಾಂಶ– ರಾಮನೆಡೆಗೆ ಖರ ಹೊರಟಾಗ ಸೇನಾಪತಿ–ತ್ರಿಶಿರಸ್ ಬಂದು ಹೇಳಿದ— ನನ್ನನ್ನು ಪರಾಕ್ರಮ ತೋರಲು ನಿಯೋಜನೆಗೊಳಿಸು. ಈ ಸಮರಸಾಹಸ–ದಿಂದ ಹಿಂತಿರುಗು. ಮಹಾಬಾಹು ರಾಮ ನನ್ನಿಂದ ನಿಪಾತಿತನಾಗುವುದನ್ನು ಕಾಣು. ನನ್ನ ಆಯುಧದ ಮೇಲೆ ಆಣೆಯಿಟ್ಟು ಪ್ರತಿಜ್ಞೆ ಮಾಡುತ್ತೇನೆ. ಎಲ್ಲ ರಾಕ್ಷಸರಿಗೆ ವಧಾರ್ಹನಾದ ರಾಮನನ್ನು ಹೇಗೆ ಸಂಹಾರ ಮಾಡುತ್ತೇನೆ, ನೋಡು. ಈ ರಣದಲ್ಲಿ ರಾಮ ಸಾಯುತ್ತಾನೋ ನಾನು ಸಾಯುತ್ತೇನೋ? ರಣೋತ್ಸಾಹದಿಂದ ನಿವೃತ್ತಿ–ಯಾಗಿ ಮುಹೂರ್ತಕಾಲ ತಾಳು. ಆಮೇಲೆ ನೀನೇ ಜಯಾಪಜಯ ನಿರ್ಣಾಯಕ–ನಾಗು. ರಾಮ ಸತ್ತರೆ ಸಂತುಷ್ಟನಾಗಿ ಜನಸ್ಥಾನಕ್ಕೆ ಹಿಂತಿರುಗು. ನಾನು ಸತ್ತರೆ ನೀನು ರಾಮನೆಡೆ ಹೋರಾಡು.

ತ್ರಿಶಿರಸ್ಸಿನ ಮಾತು ಕೇಳಿ ಖರ, ಹೋಗು. ಯುದ್ಧಮಾಡು ಎಂದು ಒಪ್ಪಿಗೆಯಿತ್ತ .

ತ್ರಿಶಿರಸ್ಸು ರಥದಲ್ಲಿ ರಾಮನೆಡೆಗೆ ಹೊರಟ. ಮಹಾಮೇಘದಂತೆ ಬಾಣಗಳ ಮಳೆ ಸುರಿಸುತ್ತ ನುಗ್ಗಿದ ತ್ರಿಶಿರಸ್ಸನ್ನು ಶ್ರೀರಾಮ ಧನುಷ್ಟಂಕಾರ ಮಾಡುತ್ತ , ಸ್ವಾಗತಿಸಿದನು.

ತನ್ನ ಹಣೆಗೆ ಬಾಣಬಿಟ್ಟ ತ್ರಿಶಿರಸ್ಸಿಗೆ ರಾಮ ಹದಿನಾಲ್ಕು ಬಾಣಗಳನ್ನು ಅವನ ಎದೆಗೆ ಪ್ರಯೋಗಿಸಿದ.

ನಾಲ್ಕು ಬಾಣಗಳಿಂದ ನಾಕು ಕುದುರೆಗಳನ್ನು ಬೀಳಿಸಿದ. ಎಂಟು ಬಾಣಗಳಿಂದ ಸೂತ–ಸಾರಥಿಯನ್ನು ನೆಲಕ್ಕುರುಳಿಸಿದನು. ಒಂದು ಬಾಣದಿಂದ ಅವನ ರಥದ ಎತ್ತರದ ಧ್ವಜವನ್ನು ತುಂಡರಿಸಿದ. ರಥ ಕಳೆದುಕೊಂಡು ಏಳುತ್ತಿದ್ದ ತ್ರಿಶಿರಸ್ಸಿನ ಹೃದಯವನ್ನು ರಾಮ ಹಲವು ಬಾಣಗಳಿಂದ ಸೀಳಿದನು. ರಕ್ತಕಾರಿಕೊಂಡು ಕಡಿದ ತನ್ನ ತಲೆಗಳೊಂದಿಗೆ ತ್ರಿಶಿರಸ್ಸು ನೆಲಕ್ಕುರುಳಿದ. ಆಗ ಉಳಿದ ರಕ್ಕಸರು ಹೆದರಿ ರಣದಿಂದ ಓಡಿದರು. ಸಿಟ್ಟುಗೊಂಡ ಖರ ಅವರನ್ನೆಲ್ಲ ನೋಡಿ ತಾನೇ ರಾಮನ ಮುಂದೆ ನುಗ್ಗಿದ. ರಾಹು ಚಂದ್ರನೆಡೆ ಸಾಗಿದಂತೆ.

❖

ತ್ರಿಶಿರೋವಧಃ

ಖರಂ ತು ರಾಮಾಭಿಮುಖಂ ಪ್ರಯಾಂತಂ ವಾಹಿನೀಪತಿಃ ।
ರಾಕ್ಷಸಸ್ತ್ರಿಶಿರಾ ನಾಮ ಸಂನಿಪತ್ಯೇದಮಬ್ರವೀತ್ ॥೧॥

ಖರನು ರಾಮನೆಡೆ ಹೋಗುವುದನ್ನು ನೋಡಿ ಸೇನಾಪತಿ ರಾಕ್ಷಸ ತ್ರಿಶಿರನು ಕೂಡಲೆ ಅವನ ಬಳಿ ಸುಳಿದು ಹೇಳಿದನು.

ಮಾಂ ನಿಯೋಜಯ ವಿಕ್ರಾಂತ ಸಂನಿವರ್ತಸ್ವ ಸಾಹಸಾತ್ ।
ಪಶ್ಯ ರಾಮಂ ಮಹಾಬಾಹುಂ ಸಂಯುಗೇ ವಿನಿಪಾತಿತಮ್ ॥೨॥

ವಿಕ್ರಾಂತಂ–ಪಾಠಾಂತರ.

ಪರಾಕ್ರಮಿ ಖರನೇ! ನೀನು ರಣದ ಸಾಹಸದಿಂದ ದೂರವುಳಿದು ನನ್ನನ್ನು ಈ ಯುದ್ಧದಲ್ಲಿ ನಿಯೋಜಿಸು. ನನ್ನಿಂದ ಧರೆಗೆ ಉರುಳಿ ಬೀಳಿಸಲ್ಪಟ್ಟ ರಾಮನನ್ನು ನೋಡುವಿಯಂತೆ.

ಪ್ರತಿಜಾನಾಮಿ ತೇ ಸತ್ಯಮಾಯುಧಂ ಚಾಹಮಾಲಭೇ ।
ಯಥಾ ರಾಮಂ ವಧಿಷ್ಯಾಮಿ ವಧಾರ್ಹಂ ಸರ್ವರಕ್ಷಸಾಮ್ ॥೩॥

ಎಲ್ಲ ರಕ್ಕಸರಿಗೆ ವಧ್ಯಾರ್ಹನಾದ ರಾಮನನ್ನು ಯಥೋಚಿತವಾಗಿ ಸಂಹಾರ ಮಾಡುತ್ತೇನೆ. ಸತ್ಯವಾಗಿ ಪ್ರತಿಜ್ಞೆ ಮಾಡುತ್ತಿದ್ದೇನೆ. ನನ್ನ ಆಯುಧದ ಮೇಲಾಣೆ!

ಅಹಂ ವಾಸ್ಯ ರಣೇ ಮೃತ್ಯುರೇಷ ವಾ ಸಮರೇ ಮಮ ।
ವಿನಿವೃತ್ಯ ರಣೋತ್ಸಾಹಾನ್ಮುಹೂರ್ತಂ ಪ್ರಾಶ್ನಿಕೋ ಭವ ॥೪॥

ಈ ಯುದ್ಧದಲ್ಲಿ ರಾಮನಿಗೆ ನಾನು ಮಾರಕಮೃತ್ಯುವಾಗುವೆನೋ ಅವನೆ ನನಗೆ ಮೃತ್ಯುವಾಗುವನೋ ನೋಡು. ರಣೋತ್ಸಾಹದಿಂದ ವಿಶ್ರಮಿಸು. ನೀನೆ ಜಯ–ಅಪಜಯಗಳಿಗೆ ಸಾಕ್ಷಿಯಾಗಿರು.

ಪ್ರಹೃಷ್ಟೋ ವಾ ಹತೇ ರಾಮೇ ಜನಸ್ಥಾನಂ ಪ್ರಯಾಸ್ಯಸಿ ।
ಮಯಿ ವಾ ನಿಹತೇ ರಾಮಂ ಸಂಯುಗಾಯೋಪಯಾಸ್ಯಸಿ ॥೫॥

ನನ್ನಿಂದ ರಾಮನು ಹತನಾದರೆ ಅತ್ಯಂತ ಖುಷಿಗೊಂಡು ಜನಸ್ಥಾನಕ್ಕೆ ಹಿಂತಿರುಗು. ನಾನೇ ರಾಮನಿಂದ ಹತನಾದರೆ ನೀನೆ ಅವನೊಡನೆ ಯುದ್ಧಕ್ಕಾಗಿ ಹೋಗುವಿಯಂತೆ.

ಖರಸ್ತ್ರಿಶಿರಸಾ ತೇನ ಮೃತ್ಯುಲೋಭಾತ್ ಪ್ರಸಾದತಃ ।
ಗಚ್ಛ ಯುಧ್ಯೇತ್ಯನುಜ್ಞಾತೋ ರಾಘವಾಭಿಮುಖೋ ಯಯೌ ॥೬॥

ಸಾವಿನ ಲೋಭದಿಂದ ಹೀಗೆ ತ್ರಿಶಿರಸ್ಸಿಂದ ಒಪ್ಪಿಸಿಕೊಂಡ ಖರನು 'ಆಗಲಿ ಯುದ್ಧ ಮಾಡು' ಎಂದು ಅಪ್ಪಣೆಕೊಟ್ಟ. ಅನುಜ್ಞಾತನಾದ ತ್ರಿಶಿರಸ್ಸು ರಾಮನಿಗಭಿ-ಮುಖವಾಗಿ ಹೊರಟ.

ತ್ರಿಶಿರಾಶ್ಚ ರಥೇನೈವ ವಾಜಿಯುಕ್ತೇನ ಭಾಸ್ವತಾ ।
ಅಭ್ಯದ್ರವದ್ರಣೇ ರಾಮಂ ತ್ರಿಶೃಂಗ ಇವ ಪರ್ವತಃ ॥೭॥

ಕುದುರೆ ಕಟ್ಟಿದ ಹೊಳೆವ ರಥದಿಂದ ತ್ರಿಶಿರಸ್ಸು ರಣರಂಗದಲ್ಲಿ ರಾಮನೆಡೆಗೆ ಧಾವಿಸಿದನು. ಮೂರು ಶಿಖರದ ಪರ್ವತದಂತೆ.

ಶರಧಾರಸಮೂಹಾನ್ ಸ ಮಹಾಮೇಘ ಇವೋತ್ಸೃಜನ್ ।
ವ್ಯಸೃಜತ್ಸದೃಶಂ ನಾದಂ ಜಲಾರ್ದ್ರಸ್ಯ ತು ದುಂದುಭೇಃ ॥೮॥

ಅವನು ಮಹಾಮೇಘದಂತೆ ರಾಶಿ ಬಾಣಗಳ ಮಳೆಯನ್ನು ಸುರಿಸುತ್ತ ನೀರಿನಿಂದ ತೋಯ್ದ ನಗಾರಿಯಂತೆ ಗರ್ಜಿಸಿದನು.

ಆಗಚ್ಛಂತಂ ತ್ರಿಶಿರಸಂ ರಾಕ್ಷಸಂ ಪ್ರೇಕ್ಷ್ಯ ರಾಘವಃ ।
ಧನುಷಾ ಪ್ರತಿಜಗ್ರಾಹ ವಿಧೂನ್ವನ್ ಸಾಯಕಾನ್ ಶಿತಾನ್ ॥೯॥

ಎದುರು ಬರುತ್ತಿರುವ ತ್ರಿಶಿರಸ್ಸನ್ನು ನೋಡಿ ರಾಘವನು ಬಿಲ್ಲಿನಿಂದ ಹರಿತವಾದ ಬಾಣಗಳನ್ನು ಬಿಡುತ್ತಲೇ ಸ್ವಾಗತಿಸಿದ.

ಸ ಸಂಪ್ರಹಾರಸ್ತುಮುಲೋ ರಾಮತ್ರಿಶಿರಸೋರ್ಮಹಾನ್ ।
ಬಭೂವಾತೀವ ಬಲಿನೋಃ ಸಿಂಹಕುಂಜರಯೋರಿವ ॥೧೦॥

ಅತಿ ಬಲಿಷ್ಠರಾದ ರಾಮ–ತ್ರಿಶಿರಸ್ಸರ ಸಮರವು ಘೋರವಾಗಿತ್ತು. ಸಿಂಹ ಗಜರಾಜರ ಯುದ್ಧದಂತೆ.

ತತಸ್ತ್ರಿಶಿರಸಾ ಬಾಣೈರ್ಲಲಾಟೇ ತಾಡಿತಸ್ತ್ರಿಭಿಃ ।
ಅಮರ್ಷೀ ಕುಪಿತೋ ರಾಮಃ ಸಂರಬ್ಧಮಿದಮಬ್ರವೀತ್ ॥೧೧॥

ಅಹೋ ವಿಕ್ರಮಶೂರಸ್ಯ ರಾಕ್ಷಸಸ್ಯೇದೃಶಂ ಬಲಮ್ ।
ಪುಷ್ಪೈರಿವ ಶರೈರ್ಯಸ್ಯ ಲಲಾಟೇऽಸ್ಮಿ ಪರಿಕ್ಷತಃ ॥೧೨॥

ಮಮಾಪಿ ಪ್ರತಿಗೃಹ್ಣೀಷ್ವ ಶರಾಂಶ್ಚಾಪಗುಣಚ್ಯುತಾನ್ ।
ಏವಮುಕ್ತ್ವಾ ತು ಸಂರಬ್ಧಃ ಶರಾನಾಶೀವಿಷೋಪಮಾನ್ ।
ತ್ರಿಶಿರೋವಕ್ಷಸಿ ಕ್ರುದ್ಧೋ ನಿಜಘಾನ ಚತುರ್ದಶ ॥೧೩॥

ತ್ರಿಶಿರಸ್ಸು ಮೂರು ಬಾಣಗಳನ್ನು ರಾಮನ ಹಣೆಗೆ ಪ್ರಯೋಗಿಸಿದ. ಶ್ರೀರಾಮನು ರಕ್ಕಸನ ಆ ಉದ್ಧಟತನವನ್ನು ಸಹಿಸಲಿಲ್ಲ. ಕುಪಿತನಾಗಿ ಹೀಗೆ ಹೇಳಿದ–

ಅರೆ! ವಿಕ್ರಮಶೂರ ರಾಕ್ಷಸರ ಬಲ ಇಂಥದ್ದು! ಹೂವಿನಿಂದ ಹಾಗೆ ಬಾಣಗಳಿಂದ ಹಣೆಗೆ ಹೊಡೆದಿಹನಲ್ಲ! ಬಿಲ್ಲಿನ ಹೆಡೆಯಿಂದ ಚಿಮ್ಮುವ ನನ್ನ ಬಾಣಗಳನ್ನು ಸ್ವೀಕರಿಸು.

ಹೀಗೆ ಹೇಳಿ ಕ್ರೋಧದಿಂದ ಶ್ರೀರಾಮ ಹದಿನಾರು ಬಾಣಗಳನ್ನು ತ್ರಿಶಿರಸ್ಸಿನ ಎದೆಗೆ ಹೊಡೆದನು.

ಚತುರ್ಭಿಸ್ತುರಗಾನಸ್ಯ ಶರೈಃ ಸನ್ನತಪರ್ವಭಿಃ ।
ನೃಪಾತಯತ ತೇಜಸ್ವೀ ಚತುರಸ್ತಸ್ಯ ವಾಜಿನಃ ॥೧೪॥

ಅಷ್ಟಭಿಃ ಸಾಯಕೈಃ ಸೂತಂ ರಥೋಪಸ್ಥಾನ್ನ್ಯಪಾತಯತ್ ।
ರಾಮಶ್ಚಿಚ್ಛೇದ ಬಾಣೇನ ಧ್ವಜಂ ಚಾಸ್ಯ ಸಮುಚ್ಛ್ರಿತಮ್ ॥೧೫॥

ತತೋ ಹತರಥಾತ್ತಸ್ಮಾದುತ್ಪತಂತಂ ನಿಶಾಚರಮ್ ।
ಬಿಭೇದ ರಾಮಸ್ತಂ ಬಾಣೈರ್ಹೃದಯೇ ಸೋಽಭವಜ್ಜಡಃ ॥೧೬॥

ಸಾಯಕೈಶ್ಚಾಪ್ರಮೇಯಾತ್ಮಾ ಸಾಮರ್ಷಸ್ತಸ್ಯ ರಕ್ಷಸಃ ।
ಶಿರಾಂಸ್ಯಪಾತಯದ್ರಾಮೋ ವೇಗವದ್ಭಿಸ್ತ್ರಿಭಿಃ ಶಿತೈಃ ॥೧೭॥

ಸ ಭೂಮೌ ರುಧಿರೋದ್ಗಾರೀ ರಾಮಬಾಣಾಭಿಪೀಡಿತಃ ।
ನೃಪತತ್ ಪತಿತೈಃ ಪೂರ್ವಂ ಸ್ವಶಿರೋಭಿರ್ನಿಶಾಚರಃ ॥೧೮॥

ತೇಜಸ್ವಿ ರಾಮನು ಬಾಗಿದ ಗಿಣ್ಣುಗಳಿಂದ ಕೂಡಿದ ನಾಲ್ಕು ಬಾಣಗಳಿಂದ ಆ ರಕ್ಕಸನ ನಾಕು ಕುದುರೆಗಳನ್ನು ಕೊಂದನು.

ರಾಮ ಎಂಟು ಬಾಣಗಳಿಂದ ಸಾರಥಿಯನ್ನು ರಥದಿಂದ ಕೆಳಗೆ ಬೀಳಿಸಿ ದನು. ಮತ್ತೊಂದು ಬಾಣದಿಂದ ಅವನ ಎತ್ತರದ ಧ್ವಜವನ್ನು ತುಂಡರಿಸಿದನು.

ಬಳಿಕ ರಾಮನು ನಾಶವಾದ ರಥದಿಂದ ಹಾರುತ್ತಿರುವ ನಿಶಾಚರನ ಹೃದಯ-ವನ್ನು ಬಾಣಗಳಿಂದ ಭೇದಿಸಿದನು. ರಕ್ಕಸ ಜಡವಾದ.

ಅಪ್ರಮೇಯಸ್ವರೂಪನಾದ ಶ್ರೀರಾಮ ಮೂರು ಬಾಣಗಳಿಂದ ರಕ್ಕಸನ ಶಿರಸ್ಸುಗಳನ್ನು ತರಿದನು.

ಮೊದಲು ಬಿದ್ದ ತನ್ನ ತಲೆಗಳೊಂದಿಗೆ ರಕ್ತಕಾರುತ್ತ ರಕ್ಕಸ ರಾಮಬಾಣ ಪೀಡಿತನಾಗಿ ನೆಲಕ್ಕುರುಳಿದ.

ಹತಶೇಷಾಸ್ತತೋ ಭಗ್ನಾ ರಾಕ್ಷಸಾಃ ಖರಸಂಶ್ರಯಾಃ ॥೧೯॥

ದ್ರವಂತಿ ಸ್ಮ ನ ತಿಷ್ಠಂತಿ ವ್ಯಾಘ್ರತ್ರಸ್ತಾ ಮೃಗಾ ಇವ ।

ಹುಲಿಗೆ ಹೆದರಿದ ಮೃಗಗಳಂತೆ ಅಳಿದುಳಿದ ಖರನ ಸೈನಿಕ ರಾಕ್ಷಸರು ನಿಲ್ಲದೆ ಓಡುತ್ತಿದ್ದರು.

ತಾನ್ ಖರೋ ದ್ರವತೋ ದೃಷ್ಟ್ವಾ ನಿವರ್ತ್ಯ ರುಷಿತಃ ಸ್ವಯಮ್ ।
ರಾಮಮೇವಾಭಿದುದ್ರಾವ ರಾಹುಶ್ಚಂದ್ರಮಸಂ ಯಥಾ ॥೨೦॥

ಓಡುತ್ತಿರುವ ಆ ಸೈನಿಕರನ್ನು ನೋಡಿ ಕೋಪದಿಂದ ಖರನು ಎಲ್ಲರನ್ನೂ ಹಿಂತಿರುಗಿಸಿದನು. ರಾಹು ಚಂದ್ರನ ಮೇಲೆ ಆಕ್ರಮಣ ಮಾಡುವಂತೆ ಖರ ರಾಮನ ಮೇಲೆ ಆಕ್ರಮಿಸಿ ಹೊರಟನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟಾವಿಂಶಃ ಸರ್ಗಃ

ಕಥಾಸಾರಾಂಶ– ರಣದಲ್ಲಿ ಶ್ರೀರಾಮ ದೂಷಣತ್ರಿಶಿರಸ್ಸುಗಳನ್ನು ಕೊಂದು ಹಾಕಿದ್ದ. ದೂಷಣನ ಅಸಹ್ಯ ಸೈನ್ಯವನ್ನು ಒಂದೇ ಬಾಣದಿಂದ ಶ್ರೀರಾಮ ಸಂಹರಿಸಿದನು. ರಾಮನ ಈ ಪರಾಕ್ರಮವನ್ನು ಕಂಡ ಖರನಿಗೆ ತ್ರಾಸವಾಯಿತು.

ಬಿಲ್ಲಿನ ಹೆದೆಯನ್ನು ಎಳೆದು ಠೇಂಕಾರ ಮಾಡುತ್ತ ವಿಷಸರ್ಪದಂತಿರುವ ತೀಕ್ಷ್ಣಬಾಣಗಳನ್ನು ರಾಮನ ಮೇಲೆ ಕ್ರೋಧದಿಂದ ಪ್ರಯೋಗಿಸಿದ. ಶ್ರೀರಾಮನೂ ಮಹಾಧನುಸ್ಸಿನಲ್ಲಿ ಕಿಡಿಗಳಿಂದ ಕೂಡಿದ ಬೆಂಕಿಯಂತಿರುವ ಬಾಣಗಳನ್ನು ಸಂಧಾನಿಸಿ ವೇಗದಿಂದ ಪ್ರಯೋಗಿಸಿದ. ಖರ ಹಾಗೂ ರಾಮರು ಪ್ರಯೋಗಿಸಿದ ಬಾಣಗಳ ರಾಶಿಯಿಂದ ಆಕಾಶವೇ ತುಂಬಿ ನಿರ್ವಿವರವಾಯಿತು. ಖರನೂ ಕೈಚಳಕ ತೋರುತ್ತ ಪ್ರಖರ ಶರಸಮೂಹವನ್ನು ಪ್ರಯೋಗಿಸಿದ. ಕೊನೆಯಲ್ಲಿ ಶ್ರೀರಾಮ ಒಂದು ಬಾಣದಿಂದ ಎರಡು ತೋಳುಗಳನ್ನು ಕತ್ತರಿಸಿದ. ಅರ್ಧಚಂದ್ರಾಕೃತಿಯ ಮೂರು ಬಾಣಗಳಿಂದ ವಕ್ಷಸ್ಥಲದಲ್ಲಿ ಹೊಡೆದ. ಮತ್ತೆ ಹದಿಮೂರು ಬಾಣಗಳನ್ನು ಸ್ವೀಕರಿಸಿದ.

ಒಂದು ಬಾಣದಿಂದ ರಥದ ನೊಗವನ್ನು ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು ಆರನೇ ಬಾಣದಿಂದ ಸಾರಥಿಯ ಶಿರವನ್ನು, ಮೂರು ಬಾಣಗಳಿಂದ ನೊಗದ ಆಧಾರವಾದ ಮೂರು ದಂಡಗಳನ್ನು, ಎರಡು ಬಾಣಗಳಿಂದ ರಥಚಕ್ರದ ಅಚ್ಚುಗಳನ್ನು, ಹನ್ನೆರಡನೇ ಬಾಣದಿಂದ ಖರನ ಬಿಲ್ಲುಬಾಣಗಳನ್ನು ಹದಿಮೂರನೇ ಬಾಣದಿಂದ ನಗುನಗುತ ಖರನನ್ನು ಘಾಸಿಗೊಳಿಸಿದ.

ಬಿಲ್ಲು ಮುರಿದು ರಥವು ಮುರಿದು, ಕುದುರೆಗಳು ಸತ್ತು ಸಾರಥಿಯೂ ಮಡಿದಾಗ ಖರನು ಗದಾಪಾಣಿಯಾಗಿ ರಥದಿಂದ ಹಾರಿ ಕೆಳಗೆ ನೆಲದಲ್ಲಿ ನಿಂತನು.

ಇದೇ ಸಮಯದಲ್ಲಿ ವಿಮಾನದಲ್ಲಿ ಕುಳಿತಿರುವ ದೇವತೆಗಳು ಮತ್ತು ಮಹರ್ಷಿಗಳು ಹರ್ಷೋಲ್ಲಾಸದಿಂದ ಪ್ರಾಂಜಲರಾಗಿ ಶ್ರೀರಾಮನ ಮಹಿಮೆಯನ್ನು ಶೌರ್ಯವನ್ನು ಪ್ರಶಂಸಿಸಿದರು.

❖

ಖರರಾಮಸಂಪ್ರಹಾರಃ

ನಿಹತಂ ದೂಷಣಂ ದೃಷ್ಟ್ವಾ ರಣೇ ತ್ರಿಶಿರಸಾ ಸಹ ।
ಖರಸ್ಯಾಪ್ಯಭವತ್ ತ್ರಾಸೋ ದೃಷ್ಟ್ವಾ ರಾಮಸ್ಯ ವಿಕ್ರಮಮ್ ॥೧॥

ತ್ರಿಶಿರನೊಂದಿಗೆ ದೂಷಣನು ರಣರಂಗದಲ್ಲಿ ಸತ್ತು ಬಿದ್ದಿರುವುದನ್ನು ನೋಡಿ ಖರನಿಗೆ ರಾಮನ ಪರಾಕ್ರಮವನ್ನು ನೋಡಿ ಹೆದರಿಕೆಯಾಯಿತು.

ಸ ದೃಷ್ಟ್ವಾ ರಾಕ್ಷಸಂ ಸೈನ್ಯಮವಿಷಹ್ಯಂ ಮಹಾಬಲಃ ।
ಹತಮೇಕೇನ ರಾಮೇಣ ತ್ರಿಶಿರೋದೂಷಣಾವಪಿ ॥೨॥

ತದ್ಬಲಂ ಹತಭೂಯಿಷ್ಠಂ ವಿಮನಾಃ ಪ್ರೇಕ್ಷ್ಯ ರಾಕ್ಷಸಃ ।
ಆಸಸಾದ ಖರೋ ರಾಮಂ ನಮುಚಿರ್ವಾಸವಂ ಯಥಾ ॥೩॥

ಮಹಾಬಲಶಾಲಿ ಶ್ರೀರಾಮನು ಏಕಾಕಿಯಾಗಿ ಸಹಿಸಲಸದಳವಾದ ರಾಕ್ಷಸ ಸೈನ್ಯವನ್ನು ಹಾಗೂ ತ್ರಿಶಿರ ದೂಷಣರನ್ನು ಕೊಂದು ಬಿಟ್ಟನು. ನನ್ನ ಸೈನ್ಯದ ಹದಿನಾಲ್ಕು ಸಾವಿರ ಯೋಧ ವೀರರನ್ನೂ ನಿಶ್ಶೇಷವಾಗಿ ಕೊಂದಿಹನು. ಹೀಗೆ ಯೋಚಿಸಿ ವಿಮನಸ್ಕನಾದನು. ಅವನು ಶ್ರೀರಾಮನ ಮೇಲೆ ಆಕ್ರಮಣ ಮಾಡಿದನು. ನಮುಚಿ ಇಂದ್ರನನ್ನು ಆಕ್ರಮಿಸಿದಂತೆ.

ವಿಕೃಷ್ಯ ಬಲವಚ್ಚಾಪಂ ನಾರಾಚಾನ್ ರಕ್ತಭೋಜನಾನ್ ।
ಖರಶ್ಚಿಕ್ಷೇಪ ರಾಮಾಯ ಕ್ರುದ್ಧಾನಾಶೀವಿಷಾನಿವ ॥೪॥

ಜ್ಯಾಂ ವಿಧೂನ್ವನ್ ಸುಬಹುಶಃ ಶಿಕ್ಷಯಾಸ್ತ್ರಾಣಿ ದರ್ಶಯನ್ ।
ಚಚಾರ ಸಮರೇ ಮಾರ್ಗಾನ್ ಶರೈಃ ರಥಗಥಃ ಖರಃ ॥೫॥

ಖರನು ಪ್ರಬಲನಾದ ಬಿಲ್ಲಿನ ಹೆದೆಯನ್ನು ಸೆಳೆದು ರಕ್ತ ಉಣ್ಣುವ ಬಾಣಗಳನ್ನು ರಕ್ತಭೋಜನದ ಹಾವುಗಳಂತೆ ಇರುವಂಥವನ್ನೂ ಪ್ರಯೋಗಿಸಿದನು. ರಥದಲ್ಲಿ ನಿಂತು ಹೆದೆಯನ್ನು ಸೆಳೆದು ಬಗೆ ಬಗೆಯ ಶಸ್ತ್ರಾಸ್ತ್ರ ಪರಿಣತಿಯನ್ನು ಪ್ರದರ್ಶಿಸುತ್ತ ಬಾಣಗಳನ್ನು ಪ್ರಯೋಗಿಸಿದನು.

ಸ ಸರ್ವಾಶ್ಚ ದಿಶೋ ಬಾಣೈಃ ಪ್ರದಿಶಶ್ಚ ಮಹಾರಥಃ ।
ಪೂರಯಾಮಾಸ ತಂ ದೃಷ್ಟ್ವಾ ರಾಮೋಽಪಿ ಸುಮಹದ್ಧನುಃ ॥೬॥

ಸ ಸಾಯಕೈರ್ದುರ್ವಿಷಹೈಃ ಸಸ್ಫುಲಿಂಗೈರಿವಾಗ್ನಿಭಿಃ ।
ನಭಶ್ಚಕಾರಾವಿವರಂ ಪರ್ಜನ್ಯ ಇವ ವೃಷ್ಟಿಭಿಃ ॥ ೭ ॥

ಆ ಮಹಾರಥ ಖರನು ಅಸಹನೀಯಗಳಾದ ಕಿಡಿಗಳಿಂದ ಕೂಡಿದ ಬಾಣ-ಗಳಿಂದ ದಿಕ್ಕು - ವಿದಿಕ್ಕುಗಳನ್ನು ತುಂಬಿಸಿದನು. ಅದನ್ನು ಕಂಡು ಶ್ರೀರಾಮನೂ ಕಿಡಿಗಳಿಂದ ಕೂಡಿದ ಬೆಂಕಿಗಳಿಂದ ಎಂಬಂತೆ ಬಾಣಗಳಿಂದ ಗಗನವನ್ನು ಆಚ್ಛಾದಿಸಿದ.

ತದ್ಬಭೂವ ಶಿತೈರ್ಬಾಣೈಃ ಖರರಾಮವಿಸರ್ಜಿತೈಃ ।
ಪರ್ಯಾಕಾಶಮನಾಕಾಶಂ ಸರ್ವತಃ ಶರಸಂಕುಲಮ್ ॥೮॥

ಖರ-ರಾಮರು ಪ್ರಯೋಗಿಸಿದ ನಿಶಿತಬಾಣಗಳಿಂದ ಸುತ್ತಲಿನ ಆಕಾಶವೆಲ್ಲ ಅವಕಾಶರಹಿತವಾಯಿತು. ಬಾಣಗಳಿಂದ ತುಂಬಿ ಹೋಗಿತ್ತು.

ಶರಜಾಲಾವೃತಃ ಸೂರ್ಯೋ ನ ತದಾ ಸ್ಮ ಪ್ರಕಾಶತೇ ।
ಅನ್ಯೋನ್ಯವಧಸಂರಂಭಾದುಭಯೋಃ ಸಂಪ್ರಯುಧ್ಯತೋಃ ॥೯॥

ಪರಸ್ಪರ ವಧೇಪ್ಸುಗಳಾಗಿ ಶ್ರೀರಾಮ - ಖರರು ಪ್ರಯೋಗಿಸಿದ ಬಾಣಗಳ ಜಾಲಗಳಿಂದ ಆಚ್ಛಾದಿತನಾದ ಸೂರ್ಯ ಬೆಳಗುತ್ತಿರಲಿಲ್ಲ.

ತತೋ ನಾಲೀಕನಾರಾಚೈಸ್ತೀಕ್ಷ್ಣಾಗ್ರೈಶ್ಚ ವಿಕರ್ಣಿಭಿಃ ।
ಆಜಘಾನ ಖರೋ ರಾಮಂ ತೋತ್ತ್ರೈರಿವ ಮಹಾದ್ವಿಪಮ್ ॥೧೦॥

. ಬಳಿಕ ಖರನು ನಾಲೀಕ -ನಾರಾಚ-ವಿಕರ್ಣಿ ಮುಂತಾದ ಚೂಪು ತುದಿಯ ತೀಕ್ಷ್ಣ ಬಾಣಗಳಿಂದ ರಾಮನನ್ನು ಪೀಡಿಸಿದನು. ಅಂಕುಶಗಳಿಂದ ಮದ್ದಾನೆಯನ್ನು ಹಿಂಸಿಸುವಂತೆ.

ತಂ ರಥಸ್ಥಂ ಧನುಷ್ಪಾಣಿಂ ರಾಕ್ಷಸಂ ಪರ್ಯವಸ್ಥಿತಮ್ ।
ದದೃಶುಃ ಸರ್ವಭೂತಾನಿ ಪಾಶಹಸ್ತಮಿವಾಂತಕಮ್ ॥೧೧॥

ರಥದಲ್ಲಿ ನಿಂತ ಧನುಷ್ಪಾಣಿ ರಾಕ್ಷಸ ಖರನನ್ನು ಎಲ್ಲ ಜೀವರೂ ಪಾಶ ಹಿಡಿದು ಎದುರು ಬಂದ ಯಮನಂತೆ ಭಾವಿಸಿದರು.

ಹಂತಾರಂ ಸರ್ವಸೈನ್ಯಸ್ಯ ಪೌರುಷೇ ಪರ್ಯವಸ್ಥಿತಮ್ ।
ಪರಿಶ್ರಾಂತಂ ಮಹಾಸತ್ತ್ವಂ ಮೇನೇ ರಾಮಂ ಖರಸ್ತದಾ ॥೧೨॥

ಎಲ್ಲ ಸೈನ್ಯದ ಸಂಹಾರಕನು, ಪೌರುಷತುಂಬಿದವನು, ಮಹಾಬಲಸಂಪನ್ನನು ಆದ ಶ್ರೀರಾಮನನ್ನು ದುರುಳ ಖರನು ಆಯಾಸಗೊಂಡಿರುವನೆಂದು ಭಾವಿಸಿದನು!

ತಂ ಸಿಂಹಮಿವ ವಿಕ್ರಾಂತಂ ಸಿಂಹವಿಕ್ರಾಂತಗಾಮಿನಮ್ ।
ದೃಷ್ಟ್ವಾ ನೋದ್ವಿಜತೇ ರಾಮಃ ಸಿಂಹಃ ಕ್ಷುದ್ರಮೃಗಂ ಯಥಾ ॥೧೩॥

ಸಿಂಹದಂತೆ ವಿಕ್ರಮವುಳ್ಳ, ಸಿಂಹದಂತೆ ವೀರನಡಿಗೆಯ ಖರನನ್ನು ನೋಡಿ

ಶ್ರೀರಾಮ ಸ್ವಲ್ಪವೂ ಉದ್ವೇಗಗೊಳ್ಳಲಿಲ್ಲ; ಕ್ಷುದ್ರಮೃಗವನ್ನು ಕಂಡು ಸಿಂಹ ಹೆದರದಂತೆ;

ತತಃ ಸೂರ್ಯನಿಕಾಶೇನ ರಥೇನ ಮಹತಾ ಖರಃ ।
ಆಸಸಾದ ರಣೇ ರಾಮಂ ಪತಂಗ ಇವ ಪಾವಕಮ್ ॥೧೪॥

ಸೂರ್ಯನಂತೆ ಪ್ರಕಾಶವಾದ ಮಹಾರಥದಲ್ಲಿ ಕುಳಿತು ಖರನು ರಣದಲ್ಲಿ ರಾಮನ ಬಳಿಗೆ ಸುಳಿದ; ಪತಂಗ ಬೆಂಕಿಯ ಬಳಿ ಬಂದಂತೆ.

ತತೋಽಸ್ಯ ಸಶರಂ ಚಾಪಂ ಮುಷ್ಟಿದೇಶೇ ಮಹಾತ್ಮನಃ ।
ಖರಶ್ಚಿಚ್ಛೇದ ರಾಮಸ್ಯ ದರ್ಶಯನ್ ಪಾಣಿಲಾಘವಮ್ ॥೧೫॥

ಖರನು ಕೈಚಳಕ ತೋರಿ ಕೂಡಲೆ ಶ್ರೀರಾಮನು ಮುಷ್ಟಿಯಲ್ಲಿ ಹಿಡಿದ ಮಹಾಧನುಸ್ಸನ್ನು ಕತ್ತರಿಸಿದ.

ಸ ಪುನಸ್ತ್ವಪರಾನ್ ಸಪ್ತ ಶರಾನಾದಾಯ ವರ್ಮಣಿ ।
ನಿಜಘಾನ ಖರಃ ಕ್ರುದ್ಧಃ ಶಕ್ರಾಶನಿಸಮಪ್ರಭಾನ್ ॥೧೬॥

ಆ ಖರನು ಮತ್ತೆ ಇಂದ್ರನ ವಜ್ರಾಯುಧದಂತಿರುವ ಏಳು ಬಾಣಗಳನ್ನು ಬತ್ತಳಿಕೆಯಿಂದ ತೆಗೆದು ಶ್ರೀರಾಮನ ಕವಚದಲ್ಲಿ ಪ್ರಯೋಗಿಸಿದನು.

ತತಸ್ತತ್ ಪ್ರಹತಂ ಬಾಣೈಃ ಖರಮುಕ್ತೈಃ ಸುಪರ್ವಭಿಃ ।
ಪಪಾತ ಕವಚಂ ಭೂಮೌ ರಾಮಸ್ಯಾದಿತ್ಯವರ್ಚಸಃ ॥೧೭॥

ಶ್ರೀರಾಮನ ಸೂರ್ಯನಂಥ ಕಾಂತಿಯ ಕವಚವು ಖರನು ಪ್ರಯೋಗಿಸಿದ ತೀಕ್ಷ್ಣವಾದ ಒಳ್ಳೆ ಪರ್ವಗಳಿಂದ ಕೂಡಿದ ಬಾಣಗಳಿಂದ ಕಳಚಿತು.

ತತಃ ಶರಸಹಸ್ರೇಣ ರಾಮಮಪ್ರತಿಮೌಜಸಮ್ ।
ಅರ್ದಯಿತ್ವಾ ಮಹನಾದಂ ನನಾದ ಸಮರೇ ಖರಃ ॥೧೮॥

ಮತ್ತೆ ಖರ ಅನಂತಪರಾಕ್ರಮಿಯಾದ ಶ್ರೀರಾಮನನ್ನು ಸಾವಿರ ಬಾಣಗಳಿಂದ ಘಾಸಿಗೊಳಿಸಿ ಆ ಸಮರದಲ್ಲಿ ಸಿಂಹಗರ್ಜನೆಯನ್ನು ಮಾಡಿದನು.

ಸ ಶರೈರರ್ಪಿತಃ ಕ್ರುದ್ಧಃ ಸರ್ವಗಾತ್ರೇಷು ರಾಘವಃ ।
ರರಾಜ ಸಮರೇ ರಾಮೋ ವಿಧೂಮೋಽಗ್ನಿರಿವ ಜ್ವಲನ್ ॥೧೯॥

ಮೈಯೆಲ್ಲ ಬಾಣಗಳಿಂದ ಆವರಿಸಿದ್ದ ಶ್ರೀರಾಮ ತುಂಬ ಕ್ರುದ್ಧನಾದ; ಶ್ರೀರಾಮನು ಹೊಗೆಯಿಲ್ಲದ ಬೆಂಕಿಯಂತೆ ಕಂಗೊಳಿಸಿದನು.

ತತೋ ಗಂಭೀರನಿರ್ಹ್ರಾದಂ ರಾಮಃ ಶತ್ರುನಿಬರ್ಹಣಃ ।
ಚಕಾರಾಂತಾಯ ಸ ರಿಪೋಃ ಸಜ್ಯಮನ್ಯನ್ಮಹದ್ಧನುಃ ॥೨೦॥

ಬಳಿಕ ಶತ್ರುಸಂಹಾರಕ ಶ್ರೀರಾಮನು ಗಂಭೀರಗರ್ಜನೆ ಮಾಡಿದನು. ಶತ್ರು ಖರನ ವಿನಾಶಕ್ಕಾಗಿ ಮತ್ತೊಂದು ಧನುಸ್ಸನ್ನು ಸಜ್ಜುಗೊಳಿಸಿದನು.

ಸುಮಹದ್ವೈಷ್ಣವಂ ಯತ್ತದತಿಸೃಷ್ಟಂ ಮಹರ್ಷಿಣಾ ।
ವರಂ ತದ್ಧನುರುದ್ಯಮ್ಯ ಖರಂ ಸಮಭಿಧಾವತ ॥೨೧॥

ತತಃ ಕನಕಪುಂಖೈಸ್ತು ಶರೈಃ ಸನ್ನತಪರ್ವಭಿಃ ।
ಬಿಭೇದ ರಾಮಃ ಸಂಕ್ರುದ್ಧಃ ಖರಸ್ಯ ಸಮರೇ ಧ್ವಜಮ್ ॥೨೨॥

ಸ ದರ್ಶನೀಯೋ ಬಹುಧಾ ವಿಕೀರ್ಣಃ ಕಾಂಚನಧ್ವಜಃ ।
ಜಗಾಮ ಧರಣೀಂ ಸೂರ್ಯೋ ದೇವತಾನಾಮಿವಾಜ್ಞಯಾ ॥೨೩॥

ಅಗಸ್ತ್ಯರು ಕೊಟ್ಟ ವರವೈಷ್ಣವಧನುಸ್ಸನ್ನು ಎತ್ತಿ ಹಿಡಿದು ಖರನೆಡೆ ಧಾವಿಸಿದನು.

ಚಿನ್ನದ ರೆಕ್ಕೆಗಳಿಂದ ಬಾಗಿದ ಗಿಣ್ಣುಗಳಿಂದ ಕೂಡಿದ ಬಾಣಗಳಿಂದ ಶ್ರೀರಾಮ ಕ್ರುದ್ಧನಾಗಿ ಸಮರದಲ್ಲಿ ಖರನ ಧ್ವಜವನ್ನು ಸೀಳಿದನು. ಕಾಣಲು ಸುಂದರವಾದ ಬಹುವಾಗಿ ಹರಡಿಕೊಂಡು ಕೆಳಗೆ ಬಿದ್ದ ಆ ಕಾಂಚನ ಧ್ವಜವು ದೇವತೆಗಳ ಆಜ್ಞೆಯಿಂದ ಧರೆಗಿಳಿದ ಸೂರ್ಯನಂತೆ ಕಂಗೊಳಿಸಿತು.

ತಂ ಚತುರ್ಭಿಃ ಖರಃ ಕ್ರುದ್ಧೋ ರಾಮಂ ಗಾತ್ರೇಷು ಮಾರ್ಗಣೈಃ ।
ವಿವ್ಯಾಧ ಯುಧಿ ಮರ್ಮಜ್ಞೋ ಮಾತಂಗಮಿವ ತೋಮರೈಃ ॥೨೪॥

ಸ ರಾಮೋ ಬಹುಭಿರ್ಬಾಣೈಃ ಖರಕಾರ್ಮುಕನಿಃಸೃತೈಃ ।
ವಿದ್ಧೋ ರುಧಿರಸಿಕ್ತಾಂಗೋ ಬಭೂವ ರುಷಿತೋ ಭೃಶಮ್ ॥೨೫॥

ಕ್ರುದ್ಧನಾದ ಖರನು – ಯುದ್ಧಮರ್ಮವನ್ನರಿತವನು – ನಾಲ್ಕು ಬಾಣಗಳಿಂದ ರಾಮನ ದೇಹವನ್ನು –ತೋಮರಗಳಿಂದ –ಮದ್ದಾನೆಯನ್ನು ಘಾಸಿಗೊಳಿಸುವಂತೆ –ಘಾಸಿಗೊಳಿಸಿದನು.

ಖರನ ಬಿಲ್ಲಿನಿಂದ ಹೊಮ್ಮಿದ ಬಾಣಗಳಿಂದ ವಿದ್ಧನಾದ ರಾಮನು ರಕ್ತಸಿಕ್ತಾಂಗನಾಗಿ ಬಹಳ ಕೋಪಗೊಂಡನು.

ಸ ಧನುರ್ಧನ್ವಿನಾಂ ಶ್ರೇಷ್ಠ ಪ್ರಗೃಹ್ಯ ಪರಮಾಹವೇ ।
ಮುಮೋಚ ಪರಮೇಷ್ವಾಸಃ ಷಟ್ ಶರಾನಭಿಲಕ್ಷಿತಾನ್ ॥೨೬॥

ಶಿರಸ್ಯೇಕೇನ ಬಾಣೇನ ದ್ವಾಭ್ಯಾಂ ಬಾಹ್ವೋರಥಾರ್ದಯತ್ ।
ತ್ರಿಭಿಶ್ಚಂದ್ರಾರ್ಧವಕ್ತ್ರೈಶ್ಚ ವಕ್ಷಸ್ಯಭಿಜಘಾನ ಹ ॥೨೭॥

ಶ್ರೇಷ್ಠ ಬಿಲ್ಲುಗಾರನಾದ ಶ್ರೀರಾಮನು ಆ ಮಹಾಯುದ್ಧದಲ್ಲಿ ಬಿಲ್ಲು ಹಿಡಿದು ಗುರಿಯೆಡೆಗೆ ನುಗ್ಗಲು ಸಮರ್ಥವಾದ ಆರು ಬಾಣಗಳನ್ನು ಪ್ರಯೋಗಿಸಿದನು.

ಒಂದು ಬಾಣದಿಂದ ತಲೆಯನ್ನು ಎರಡು ಬಾಣಗಳಿಂದ ಎರಡು ತೋಳು-ಗಳನ್ನು, ಅರ್ಧಚಂದ್ರಾಕಾರದ ಮೂರು ಬಾಣಗಳಿಂದ ಖರನ ವಕ್ಷಃಸ್ಥಳವನ್ನೂ ಭೇದಿಸಿದನು.

ತತಃ ಪಶ್ಚಾನ್ಮಹಾತೇಜಾ ನಾರಾಚಾನ್ ಭಾಸ್ಕರೋಪಮಾನ್ ।
ಜಿಘಾಂಸೂ ರಾಕ್ಷಸಂ ಕ್ರುದ್ಧಸ್ತ್ರಯೋದಶ ಸಮಾದದೇ ॥೨೮॥

ತತೋಽಸ್ಯ ಯುಗಮೇಕೇನ ಚತುರ್ಭಿಶ್ಚತುರೋ ಹಯಾನ್ ।
ಷಷ್ಠೇನ ತು ಶಿರಃ ಸಂಖ್ಯೇ ಖರಸ್ಯ ರಥಸಾರಥೇಃ ॥೨೯॥

ತ್ರಿಭಿಸ್ತ್ರಿವೇಣು ಬಲವಾನ್ ದ್ವಾಭ್ಯಾಮಕ್ಷಂ ಮಹಾಬಲಃ ।
ದ್ವಾದಶೇನ ತು ಬಾಣೇನ ಖರಸ್ಯ ಸಶರಂ ಧನುಃ ॥೩೦॥

ಧಿತ್ವಾ ವಜ್ರನಿಕಾಶೇನ ರಾಘವಃ ಪ್ರಹಸನ್ನಿವ ।
ತ್ರಯೋದಶೇನೇಂದ್ರಸಮೋ ಬಿಭೇದ ಸಮರೇ ಖರಮ್ ॥೩೧॥

ಪ್ರಭಗ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಗದಾಪಾಣಿರವಪ್ಲುತ್ಯ ತಸ್ಥೌ ಭೂಮೌ ಖರಸ್ತದಾ ॥೩೨॥

ಬಳಿಕ ಮಹಾತೇಜಸ್ವಿ ಶ್ರೀರಾಮನು ಭಾಸ್ಕರನಂತೆ ಬೆಳಗುತ್ತಿದ್ದ ನಾರಾಚಗಳನ್ನು ಕ್ರುದ್ಧನಾಗಿ ರಾಕ್ಷಸನನ್ನು ಕೊಲ್ಲುವ ಬಯಕೆಯುಳ್ಳವನಾಗಿ ಹದಿಮೂರು ಬಾಣಗಳನ್ನು ತೆಗೆದುಕೊಂಡನು.

ಇಂದ್ರಸಮನಾದ ರಾಘವನು ಒಂದು ಬಾಣದಿಂದ ರಥದ ನೊಗವನ್ನು, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು, ಆರನೆಯ ಬಾಣದಿಂದ ಖರನ ಸಾರಥಿಯ ಶಿರಸ್ಸನ್ನು, ಮೂರು ಬಾಣಗಳಿಂದ ನೊಗಕ್ಕೆ ಆಧಾರವಾದ ದಂಡವನ್ನು, ಇನ್ನೆರಡು ಬಾಣಗಳಿಂದ ಚಕ್ರಾಧಾರವಾದ ಅಚ್ಚಿನ ಮರಗಳನ್ನು ಹನ್ನೆರಡನೆಯ ಬಾಣದಿಂದ ಖರನ ಶರಸಹಿತವಾದ ಬಿಲ್ಲನ್ನೂ ಕತ್ತರಿಸಿ, ವಜ್ರಾಯುಧ ಸದೃಶವಾದ ಹದಿಮೂರನೆಯ ಬಾಣದಿಂದ ನಗು – ನಗುತ್ತಲೆ ಖರನನ್ನು ಹೊಡೆದನು.

ಖರನ ಧನುಸ್ಸು ರಥ ಕುದುರೆ ಸಾರಥಿಗಳು ನಾಶವಾದವು. ಖರನು ಗದಾಪಾಣಿಯಾಗಿ ನೆಲದಲ್ಲಿಳಿದು ನಿಂತನು.

ತತ್ ಕರ್ಮ ರಾಮಸ್ಯ ಮಹಾರಥಸ್ಯ
ಸಮೇತ್ಯ ದೇವಾಶ್ಚ ಮಹರ್ಷಯಶ್ಚ ।
ಅಪೂಜಯನ್ ಪ್ರಾಂಜಲಯಃ ಪ್ರಹೃಷ್ಟಾ-
ಸ್ತದಾ ವಿಮಾನಾಗ್ರಗತಾಃ ಸಮೇತಾಃ ॥೩೩॥

ಮಹಾರಥ ಶ್ರೀರಾಮನ ಈ ಅದ್ಭುತ ಕರ್ಮವನ್ನು ದೇವತೆಗಳು ಮತ್ತು ಮಹರ್ಷಿಗಳು ಖುಷಿಗೊಂಡವರಾಗಿ ವಿಮಾನಾಗ್ರದಲ್ಲಿ ನಿಂತು ಪ್ರಾಂಜಲರಾಗಿ ಕೊಂಡಾಡಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನತ್ರಿಂಶಃ ಸರ್ಗಃ

ಕಥಾಸಾರಾಂಶ– ರಥಹೀನನಾಗಿ ನೆಲದಲ್ಲಿ ನಿಂತಿದ್ದ ಖರನಿಗೆ ಶ್ರೀರಾಮನು ಮೃದುವಾಗಿಯೇ ಕಠಿಣವಾದ ಮಾತುಗಳನ್ನಾಡಿದನು –

ಪ್ರಾಣಿಗಳಿಗೆ ಭಯೋತ್ಪಾದಕನು, ಹಿಂಸೆ ಮಾಡುವವನು ಲೋಕೇಶ್ವರನಾದರೂ ಬಹುಕಾಲ ಉಳಿಯುವುದಿಲ್ಲ. ದುಷ್ಟಸರ್ಪವನ್ನು ಎಲ್ಲರೂ ಹೊಡೆದು ಕೊಲ್ಲುವಂತೆ ಪಾಪಿಯನ್ನು ಎಲ್ಲರೂ ಹೊಡೆದು ಕೊಲ್ಲುತ್ತಾರೆ. ಪರಿಣಾಮದ ಬಗ್ಗೆ ಯೋಚನೆ ಮಾಡದೆ ಕಾಮ ಲೋಭವಶನಾಗಿ ಪಾಪಕರ್ಮ ಮಾಡುವವನು ಮಳೆಯಲ್ಲಿ ಬಿದ್ದ ಆಲಿಕಲ್ಲನ್ನು ತಿಂದು ಜಿಗಣೆ ಸಾಯುವಂತೆ ನಾಶವಾಗುವನು.

ಮನುಷ್ಯ ಪಾಪಕರ್ಮದ ಫಲವನ್ನು ಕಾಲಪಕ್ವವಾದಾಗ ಅನುಭವಿಸಿಯೇ ತೀರುತ್ತಾನೆ. ತಾಪಸರನ್ನು ವೃಥಾ ಹಿಂಸಿಸುವ ನಿನ್ನನ್ನು – ನಿನ್ನಂತಹವರನ್ನು ದಂಡಿಸಲೆಂದೆ ರಾಜಾದಶರಥನಿಂದ ನಾನು ನಿಯುಕ್ತನಾಗಿದ್ದೇನೆ. ಇಂದು ನಾನು ಕೊಲ್ಲುವ ನಿನ್ನನ್ನು, ನಿನ್ನ ನರಕದುಃಖವನ್ನು ನಿನ್ನಿಂದ ಹತರಾಗಿ ಊರ್ಧ್ವಲೋಕ ಸೇರಿದ ಋಷಿಗಳು ದಿವ್ಯದೇಹಧಾರಿಗಳಾಗಿ ಆಗಸದಲ್ಲಿ ನಿಂತು ನೋಡಿ ಆನಂದಿಸಲಿ.

ನೀನು ತೃಪ್ತಿಯಾಗುವಷ್ಟು ನನ್ನನ್ನು ಪ್ರಹರಿಸು. ತಾಲಫಲವನ್ನು ಕೆಳಕೆಡಹುವಂತೆ ನಿನ್ನ ತಲೆಯನ್ನು ಹೊಡೆದುರುಳಿಸುತ್ತೇನೆ.

ರಾಮನ ಮಾತಿನಿಂದ ಕ್ರುದ್ಧನಾದ ಖರನು ಪ್ರಖರವಾಗಿ ಮಾತನಾಡಿದನು – 'ಯಾರೋ ಅಲ್ಪಬಲದ ವೀರರನ್ನು ಕೊಂದು ಆತ್ಮಪ್ರಶಂಸೆ ಮಾಡಿಕೊಳ್ಳುವುದು ತರವಲ್ಲ. ಮಾತಿಗೇ ಅವಕಾಶವಿಲ್ಲದ ಯುದ್ಧದ ಸಂದರ್ಭದಲ್ಲಿ ತನ್ನನ್ನು ತಾನು ಹೊಗಳಿಕೊಳ್ಳುವುದು ರಾಮನಂತಹವರು ಮಾತ್ರ. ನಿನ್ನನ್ನು ನಿನ್ನಂತಹ ಅನೇಕರನ್ನು ಪ್ರಾಣ ತೆಗೆಯಲು ಸಮರ್ಥ ಪರಾಕ್ರಮಿ ನಾನು. ಸೂರ್ಯಾಸ್ತ ಸಮೀಪಿಸುತ್ತಿದೆ. ಹೆಚ್ಚು ಮಾತಿಗೆ ಸಮಯವಿಲ್ಲ. ನಿನ್ನನ್ನು ಕೊಂದು ನೀನು ಕೊಂದ ಹದಿನಾಲ್ಕು ಸಾವಿರ ವೀರ ಪುರುಷರ ಬಂಧುಗಳ ಕಣ್ಣೀರನ್ನು ಒರೆಸುತ್ತೇನೆ.

ಇಷ್ಟು ಹೇಳಿ ಕೈಯ್ಯಲ್ಲಿದ್ದ ಗದೆಯನ್ನು ರಾಮನೆಡೆಗೆ ಬಲವಾಗಿ ಬೀಸಿದ. ಅವನಿಗೂ ರಾಮನಿಗೂ ಮಧ್ಯದಲ್ಲಿದ್ದ ಮರ ಬಳ್ಳಿಗಳನ್ನೆಲ್ಲ ತೀಕ್ಷ್ಣವಾಗಿ ಕತ್ತರಿಸಿ ಹಾಕುತ್ತ ರಾಮನೆಡೆಗೆ ವೇಗವಾಗಿ ಬರುತ್ತಿದ್ದ ಗದೆಯನ್ನು ಶ್ರೀರಾಮ ಕೆಲವು ಬಾಣಗಳಿಂದ ಕತ್ತರಿಸಿ ಹಾಕಿದ. ಗದೆ ನುಚ್ಚು ನೂರಾಗಿ ಚೂರು ಚೂರಾಗಿ ಉದುರಿ ಬಿತ್ತು.

❖

ಖರಗದಾಭೇದನಮ್

ಖರಂ ತು ವಿರಥಂ ರಾಮೋ ಗದಾಪಾಣಿಮವಸ್ಥಿತಮ್ ।
ಮೃದುಪೂರ್ವಂ ಮಹಾತೇಜಾ ಪರುಷಂ ವಾಕ್ಯಮಬ್ರವೀತ್ ॥೧॥

ರಥಹೀನನಾಗಿ ಗದಾಪಾಣಿಯಾಗಿ ನಿಂತಿದ್ದ ಖರನನ್ನು ಮಹಾತೇಜಸ್ವಿರಾಮನು ಮೃದುಪೂರ್ವಕವಾಗಿ ಕಠೋರವಾದ ಮಾತನ್ನಾಡಿದನು.

ಗಜಾಶ್ವರಥಸಂಬಾಧೇ ಬಲೇ ಮಹತಿ ತಿಷ್ಠತಾ ।
ಕೃತಂ ಸುದಾರುಣಂ ಕರ್ಮ ಸರ್ವಲೋಕಜುಗುಪ್ಸಿತಮ್ ॥೨॥

ಗಜ ಅಶ್ವರಥಗಳಿಂದ ಕೂಡಿದ ಸೇನೆಯ ಅಧಿಪತಿಯಾಗಿರುವ ನೀನು ಸಕಲಲೋಕನಿಂದ್ಯವಾದ ಅತ್ಯಂತ ದಾರುಣ ಕರ್ಮವನ್ನು ಮಾಡಿರುವಿ.

ಉದ್ವೇಜನೀಯೋ ಭೂತಾನಾಂ ನೃಶಂಸಃ ಪಾಪಕರ್ಮಕೃತ್ ।
ತ್ರಯಾಣಾಮಪಿ ಲೋಕಾನಾಮೀಶ್ವರೋಽಪಿ ನ ತಿಷ್ಠತಿ ॥೩॥

ಪ್ರಾಣಿಗಳಿಗೆ ಉದ್ವೇಗವುಂಟು ಮಾಡುವ ಕ್ರೂರಿಯಾದ, ಪಾಪಕರ್ಮಗಳನ್ನು ಮಾಡುವ ಪುರುಷ ಲೋಕೇಶ್ವರನಾದರೂ ಹಚ್ಚುಕಾಲ ನೆಮ್ಮದಿಯಾಗಿ ಉಳಿಯಲಾರ.

ಕರ್ಮ ಲೋಕವಿರುದ್ಧಂ ತು ಕುರ್ವಾಣಂ ಕ್ಷಣದಾಚರ ।
ತೀಕ್ಷ್ಣಂ ಸರ್ವಜನೋ ಹಂತಿ ಸರ್ಪಂ ದುಷ್ಟಮಿವಾಗತಮ್ ॥೪॥

ರಾಕ್ಷಸನೇ ! ಲೋಕ ವಿರುದ್ಧವಾದ ಕರ್ಮವನ್ನು ಮಾಡುವ ಉಗ್ರ ಪುರುಷನನ್ನು ದುಷ್ಟ ಸರ್ಪವನ್ನು ಎಲ್ಲರೂ ಹೊಡೆದು ಕೊಲ್ಲುವಂತೆ ಕೊಲ್ಲುತ್ತಾರೆ !

ಲೋಭಾತ್ ಪಾಪಾನಿ ಕುರ್ವಾಣಃ ಕಾಮಾದ್ವಾ ಯೋ ನ ಬುಧ್ಯತೇ ।
ಹೃಷ್ಟಃ ಪಶ್ಯತಿ ತಸ್ಯಾಂತಂ ಬ್ರಾಹ್ಮಣೇ ಕರಕಾದಿವ ॥೫॥

ಪರಿಣಾಮದ ಬಗ್ಗೆ ಯೋಚನೆ ಮಾಡದೆ ಲೋಭ ಹಾಗೂ ಕಾಮಗಳಿಂದ ಪಾಪಕರ್ಮವನ್ನು ಮಾಡುವವನು ಐಶ್ವರ್ಯಭ್ರಷ್ಟನಾಗಿ ಮಳೆಯೊಂದಿಗೆ ಬೀಳುವ ಆಲಿಕಲ್ಲನ್ನು ತಿಂದು ಸಾಯುವ ಜಿಗಣೆಯಂತೆ ತನ್ನ ವಿನಾಶವನ್ನು ತಾನೆ ಅನುಭವಿಸುತ್ತಾನೆ.

ವಸತೋ ದಂಡಕಾರಣ್ಯೇ ತಾಪಸಾನ್ ಧರ್ಮಚಾರಿಣಃ ।
ಕಿಂ ನು ಹತ್ವಾ ಮಹಾಭಾಗಾನ್ ಫಲಂ ಪ್ರಾಪ್ಸ್ಯಸಿ ರಾಕ್ಷಸ ॥೬॥

ದಂಡಕಾರಣ್ಯ ನಿವಾಸಿಗಳಾದ ಧರ್ಮಾಚಾರರತರು ಮಹಾಭಾಗರು ಆದ ತಾಪಸರನ್ನು ಕೊಂದು ಯಾವ ಫಲವನ್ನು ಪಡೆಯುವಿ ಎಂದು ತಿಳಿದಿದೆಯಾ ?

ನ ಚಿರಂ ಪಾಪಕರ್ಮಾಣಃ ಕ್ರೂರಾ ಲೋಕಜುಗುಪ್ಸಿತಾಃ ।
ಐಶ್ವರ್ಯಂ ಪ್ರಾಪ್ಯ ತಿಷ್ಠಂತಿ ಶೀರ್ಣಮೂಲಾ ಇವ ದ್ರುಮಾಃ ॥೭॥

ಲೋಕನಿಂದಿತರಾದ ಪಾಪಕರ್ಮಿಗಳಾದ ಕ್ರೂರ ಪುರುಷರು ಐಶ್ವರ್ಯವನ್ನು ಹೊಂದಿದರೂ ಬಹುಕಾಲ ಸ್ಥಿರವಾಗಿರಲು ಸಾಧ್ಯವಿಲ್ಲ; ಬುಡತರಿದ ಮರಗಳಂತೆ.

ಅವಶ್ಯಂ ಲಭತೇ ಜಂತುಃ ಫಲಂ ಪಾಪಸ್ಯ ಕರ್ಮಣಃ ।
ಘೋರಂ ಪರ್ಯಾಗತೇ ಕಾಲೇ ದ್ರುಮಃ ಪುಷ್ಪಮಿವಾರ್ತವಮ್ ॥೮॥

ಪಾಪಕರ್ಮದ ಫಲವನ್ನು ಕಾಲ ಪಕ್ವವಾದಾಗ ಅವಶ್ಯವಾಗಿ ಅನುಭವಿಸಿಯೇ ತೀರುತ್ತಾನೆ. ಆಆ ಕಾಲ ಬಂದಾಗ ಮರಗಳು ಹೂ ಬಿಡುವಂತೆ.

ನಚಿರಾತ್ ಪ್ರಾಪ್ಯತೇ ಲೋಕೇ ಪಾಪಾನಾಂ ಕರ್ಮಣಾಂ ಫಲಮ್ ।
ಸವಿಷಾಣಾಮಿವಾನ್ನಾನಾಂ ಭುಕ್ತಾನಾಂ ಕ್ಷಣದಾಚರ ॥೯॥

ಲೋಕದಲ್ಲಿ ಪಾಪದ ಫಲವನ್ನು ಕ್ಷಿಪ್ರವಾಗಿ ಅನುಭವಿಸಬೇಕಾಗುತ್ತದೆ- ವಿಷ-ಬೆರೆತ ಅನ್ನವನ್ನು ತಿಂದರೆ ಕೂಡಲೆ ಅದರ ಪರಿಣಾಮವನ್ನು ಅನುಭವಿಸುವಂತೆ.

ಪಾಪಮಾಚರತಾಂ ಘೋರಂ ಲೋಕಸ್ಯಾಪ್ರಿಯಮಿಚ್ಛತಾಮ್ ।
ಅಹಮಾಸಾದಿತೋ ರಾಜ್ಞಾ ಪ್ರಾಣಾನ್ ಹಂತುಂ ನಿಶಾಚರ ॥೧೦॥

ಲೋಕಕ್ಕೆ ಅಪ್ರಿಯವನ್ನು ಬಯಸಿ ಕೇಡು ಬಗೆವವರ ಪ್ರಾಣ ತೆಗೆಯಲು ದಶರಥ ರಾಜರು ನನಗೆ ಆಜ್ಞೆ ಮಾಡಿದ್ದಾರೆ.

ಅದ್ಯ ಹಿ ತ್ವಾಂ ಮಯಾ ಮುಕ್ತಾಃ ಶರಾಃ ಕಾಂಚನಭೂಷಣಾಃ ।
ವಿದಾರ್ಯ ನಿಪತಿಷ್ಯಂತಿ ವಲ್ಮೀಕಮಿವ ಪನ್ನಗಾಃ ॥೧೧॥

ಸುವರ್ಣಭೂಷಿತವಾದ ನಾನು ಪ್ರಯೋಗಿಸುವ ಬಾಣಗಳು ನಿನ್ನನ್ನು ಸೀಳಿ ಬೀಳುತ್ತವೆ. ಹುತ್ತವನ್ನು ಭೇದಿಸಿ ಹೊಮ್ಮುವ ಹಾವುಗಳಂತೆ.

ಯೇ ತ್ವಯಾ ದಂಡಕಾರಣ್ಯೇ ಭಕ್ಷಿತಾ ಧರ್ಮಚಾರಿಣಃ ।
ತಾನದ್ಯ ನಿಹತಃ ಸಂಖ್ಯೇ ಸಸೈನ್ಯೋಽನುಗಮಿಷ್ಯಸಿ ॥೧೨॥

ಯಾವ ಧರ್ಮಚಾರಿಗಳು ನಿನ್ನಿಂದ ಭಕ್ಷಿತರಾದರೋ ಈ ಯುದ್ಧದಲ್ಲಿ ನನ್ನಿಂದ ಹತನಾಗಿ ನೀನೂ ಅವರನ್ನು ಅನುಸರಿಸುವೆ.

ಅದ್ಯ ತ್ವಾಂ ವಿಹತಂ ಬಾಣೈಃ ಪಶ್ಯಂತು ಪರಮರ್ಷಯಃ ।
ನಿರಯಸ್ಥಂ ವಿಮಾನಸ್ಥಾ ಯೇ ತ್ವಯಾ ಹಿಂಸಿತಾಃ ಪುರಾ ॥೧೩॥

ಇಂದು ನನ್ನಿಂದ ಬಾಣಗಳಿಂದ ಹತನಾಗಿ ನರಕಕ್ಕೆ ಹೋಗಿ ನೆಲೆಸುವ ನಿನ್ನನ್ನು ನಿನ್ನಿಂದ ಹತರಾದ ಪರಮರ್ಷಿಗಳು ವಿಮಾನದಲ್ಲಿ ನಿಂತು ನೋಡಲಿ.

ಪ್ರಹರ ತ್ವಂ ಯಥಾಕಾಮಂ ಕುರು ಯತ್ನಂ ಕುಲಾಧಮ ।
ಅದ್ಯ ತೇ ಪಾತಯಿಷ್ಯಾಮಿ ಶಿರಸ್ತಾಲಫಲಂ ಯಥಾ ॥೧೪॥

ನೀನು ಮನಬಂದಂತೆ ಪ್ರಹರಿಸು, ಪ್ರಯತ್ನಿಸು ಕುಲಾಧಮ ! ಇಂದು ತಾಲ ಫಲದಂತೆ ನಿನ್ನ ಶಿರವನ್ನು ಬೀಳಿಸುತ್ತೇನೆ.

ಏವಮುಕ್ತಸ್ತು ರಾಮೇಣ ಕ್ರುದ್ಧಃ ಸಂರಕ್ತಲೋಚನಃ ।
ಪ್ರತ್ಯುವಾಚ ಖರೋ ರಾಮಂ ಪ್ರಹಸನ್ ಕ್ರೋಧಮೂರ್ಚ್ಛಿತಃ ॥೧೫॥

ಹೀಗೆ ರಾಮ ಹೇಳಿದಾಗ ಕ್ರುದ್ಧನಾಗಿ ಕೆಂಗಣ್ಣಿನ ಖರನು ಕ್ರೋಧದಿಂದ ಎಚ್ಚರ ಕಳೆದುಕೊಂಡು ಅಟ್ಟಹಾಸ ಗೈಯ್ಯುತ್ತ ಪ್ರತ್ಯುತ್ತರಿಸಿದನು.

ಪ್ರಾಕೃತಾನ್ ರಾಕ್ಷಸಾನ್ ಹತ್ವಾ ಯುದ್ಧೇ ದಶರಥಾತ್ಮಜ ।
ಆತ್ಮನಾ ಕಥಮಾತ್ಮಾನಮಪ್ರಶಸ್ಯಂ ಪ್ರಶಂಸಸಿ ॥೧೬॥

ದಶರಥಪುತ್ರನೇ ! ಸಾಧಾರಣವಾದ ರಾಕ್ಷಸರನ್ನು ಕೊಂದು ಪ್ರಶಂಸೆಗೆ ಅಯೋಗ್ಯನಾದ ನಿನ್ನನ್ನು ಹೊಗಳಿ ಕೊಳ್ಳುತ್ತಿರುವೆಯಲ್ಲ !

ವಿಕ್ರಾಂತಾ ಬಲವಂತೋ ವಾ ಯೇ ಭವಂತಿ ನರರ್ಷಭಾಃ ।
ಕಥಯಂತಿ ನ ತೇ ಕಿಂಚಿತ್ತೇಜಸಾ ಸ್ವೇನ ಗರ್ವಿತಾಃ ॥೧೭॥

ಪರಾಕ್ರಮಶಾಲಿಗಳಾದ ಬಲಿಷ್ಠರಾದ ಪುರುಷ ಶ್ರೇಷ್ಠರು ತಮ್ಮ ಸಾಮರ್ಥ್ಯದ ವಿಷಯದಲ್ಲಿ ಗರ್ವಿಷ್ಠರಾಗಿ ಯಾವ ಮಾತನ್ನೂ ಆಡುವುದಿಲ್ಲ.

ಪ್ರಾಕೃತಾಸ್ತ್ವಕೃತಾತ್ಮಾನೋ ಲೋಕೇ ಕ್ಷತ್ರಿಯಪಾಂಸನಾಃ ।
ನಿರರ್ಥಕಂ ವಿಕತ್ಥಂತೇ ಯಥಾ ರಾಮ ವಿಕತ್ಥಸೇ ॥೧೮॥

ರಾಮ ! ಯುದ್ಧ ಕೌಶಲವಿರದ ಅಜಿತೇಂದ್ರಿಯರಾದ ಕ್ಷತ್ರಿಯ ಕುಲ ಕಲಂಕರು ಮಾತ್ರವೇ ನಿನ್ನಂತೆ ವ್ಯರ್ಥವಾಗಿ ಬಡಾಯಿ ಕೊಚ್ಚಿಕೊಳ್ಳುತ್ತಾರೆ.

ಕುಲಂ ವ್ಯಪದಿಶನ್ ವೀರಃ ಸಮರೇ ಕೋಽಭಿಧಾಸ್ಯತಿ ।
ಮೃತ್ಯುಕಾಲೇ ಹಿ ಸಂಪ್ರಾಪ್ತೇ ಸ್ವಯಮಪ್ರಸ್ತವೇ ಸ್ತವಮ್ ॥೧೯॥

ಮರಣಕಾಲ ಸಮೀಪದ ಘೋರಯುದ್ಧದ ಸಮಯದಲ್ಲಿ ಯಾವ ವೀರತಾನೆ ಕುಲೀನತೆಯನ್ನು ಕೊಚ್ಚಿಕೊಳ್ಳುತ್ತಾನೆ ?

ಸರ್ವಥೈವ ಲಘುತ್ವಂ ತೇ ಕತ್ಥನೇನ ವಿದರ್ಶಿತಮ್ ।
ಸುವರ್ಣಪ್ರತಿರೂಪೇಣ ತಪ್ತೇನೇವ ಕುಶಾಗ್ನಿನಾ ॥೨೦॥

ಆತ್ಮಪ್ರಶಂಸೆಯ ಮೂಲಕ ತೀರ ಲಾಘವವನ್ನು ತೋರಿದಿ - ದರ್ಭಾಗ್ನಿಯು ಸುವರ್ಣದಂತೆ ಹೊಳೆದರು ಕ್ಷಿಪ್ರದಲ್ಲಿ ನಾಶವಾಗುವಂತೆ.

ನ ತು ಮಾಮಿಹ ತಿಷ್ಠಂತಂ ಪಶ್ಯಸಿ ತ್ವಂ ಗದಾಧರಮ್ ।
ಧರಾಧರಮಿವಾಕಂಪ್ಯಂ ಪರ್ವತಂ ಧಾತುಭಿಶ್ಚಿತಮ್ ॥೨೧॥

ಗೈರಿಕಾದಿ ಧಾತುಗಳಿಂದ ತುಂಬಿದ ಭೂಮಿಯನ್ನು ಪರ್ವತದಂತೆ ಗದಾಪಾಣಿ-ಯಾಗಿ ಅಕಂಪ್ಯನು ಅಚಲನು ಆಗಿ ನಿಂತಿರುವ ನನ್ನನ್ನು ಕಾಣುತ್ತಿಲ್ಲವೆ ?

ಪರ್ಯಾಪ್ತೋಽಹಂ ಗದಾಪಾಣಿರ್ಹಂತುಂ ಪ್ರಾಣಾನ್ ರಣೇ ತವ ।
ತ್ರಯಾಣಾಮಪಿ ಲೋಕಾನಾಂ ಪಾಶಹಸ್ತ ಇವಾಂತಕಃ ॥೨೨॥

ಪಾಶಧಾರಿ ಅಂತಕನಂತೆ ಗದಾಪಾಣಿಯಾದ ನಾನು ನಿನ್ನ ಪ್ರಾಣವನ್ನು ಸಂಹರಿಸಲು, ಮೂರು ಲೋಕದಲ್ಲಿರುವ ಎಲ್ಲರ ಪ್ರಾಣವನ್ನೂ ಕಸಿಯಲು ಸಮರ್ಥನಾಗಿದ್ದೇನೆ.

ಕಾಮಂ ಬಹ್ವಪಿ ವಕ್ತವ್ಯಂ ತ್ವಯಿ ವಕ್ಷ್ಯಾಮಿ ನ ತ್ವಹಮ್ ।
ಅಸ್ತಂ ಗಚ್ಛೇದ್ಧಿ ಸವಿತಾ ಯುದ್ಧವಿಘ್ನಸ್ತತೋ ಭವೇತ್ ॥೨೩॥

ನಿನ್ನಲ್ಲಿ ಹೇಳಬೇಕಾದದ್ದು ಬಹಳ ಇದೆ. ಆದರೂ ಹೇಳುವುದಿಲ್ಲ. ಸೂರ್ಯ ಅಸ್ತನಾಗುವ ಸಮಯವಾಗುತ್ತಿದೆ. ಸೂರ್ಯಾಸ್ತವಾಗಿ ಬಿಟ್ಟರೆ ಯುದ್ಧಕ್ಕೆ ವಿಘ್ನ-ವುಂಟಾಗುತ್ತದೆ.

ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ ಹತಾನಿ ತೇ ।
ತ್ವದ್ವಿನಾಶಾತ್ ಕರೋಮ್ಯೇಷ ತೇಷಾಮಸ್ರಪ್ರಮಾರ್ಜನಮ್ ॥೨೪॥

ಹದಿನಾಲ್ಕು ಸಾವಿರ ರಾಕ್ಷಸರು ನಿನ್ನಿಂದ ಹತರಾದರು. ಈ ಖರನು ನಿನ್ನನ್ನು ನಾಶಮಾಡಿ ಅವರ ಕಣ್ಣೀರನ್ನು ಒರೆಸುವನು.

ಇತ್ಯುಕ್ತ್ವಾ ಪರಮಕ್ರುದ್ಧಸ್ತಾಂ ಗದಾಂ ಪರಮಾಂಗದಃ ।
ಖರಶ್ಚಿಕ್ಷೇಪ ರಾಮಾಯ ಪ್ರದೀಪ್ತಾಮಶನಿಂ ಯಥಾ ॥೨೫॥

ಹೀಗೆ ಹೇಳಿ ಪರಮಕ್ರುದ್ಧನಾದ ಖರನು ಇಂದ್ರ ಶತ್ರುವಿನ ಮೇಲೆ ವಜ್ರಾಯುಧವನ್ನು ಎಸೆವಂತೆ ರಾಮನ ಮೇಲೆ ಗದೆಯನ್ನು ಎಸೆದನು.

ಖರಬಾಹುಪ್ರಯುಕ್ತಾ ಸಾ ಪ್ರದೀಪ್ತಾ ಮಹತೀ ಗದಾ ।
ಭಸ್ಮ ವೃಕ್ಷಾಂಶ್ಚ ಗುಲ್ಮಾಂಶ್ಚ ಕೃತ್ವಾಗಾತ್ತತ್ಸಮೀಪತಃ ॥೨೬॥

ಖರನ ತೋಳಿನಿಂದ ಮುಕ್ತವಾದ ಮಹಾ ಗದೆಯು ಪ್ರಜ್ವಲಿಸುತ್ತಾ ಎದುರಿರುವ ಮರ ಪೊದರುಗಳನ್ನೆಲ್ಲ ಬೂದಿ ಮಾಡುತ್ತ ರಾಮನ ಬಳಿ ಸುಳಿಯಿತು.

ತಾಮಾಪತಂತೀಂ ಜ್ವಲಿತಾಂ ಮೃತ್ಯುಪಾಶೋಪಮಾಂ ಗದಾಮ್ ।
ಅಂತರಿಕ್ಷಗತಾಂ ರಾಮಶ್ಚಿಚ್ಛೇದ ಬಹುಧಾ ಶರೈಃ ॥೨೭॥

ಮೃತ್ಯು ಪಾಶದಂತಿರುವ ಪ್ರಜ್ವಲಿಸುತ್ತ ಬರುತ್ತಿರುವ ಅಂತರಿಕ್ಷದಲ್ಲಿರುವ ಆ ಗದೆಯನ್ನು ರಾಮನು ಬಾಣಗಳಿಂದ ಬಹುವಾಗಿ ಕತ್ತರಿಸಿ ಹಾಕಿದನು.

ಸಾ ವಿಶೀರ್ಣಾ ಶರೈರ್ಭಗ್ನಾ ಪಪಾತ ಧರಣೀತಲೇ ।
ಗದಾ ಮಂತ್ರೌಷಧಬಲೈರ್ವ್ಯಾಲೀವ ವಿನಿಪಾತಿತಾ ॥೨೮॥

ರಾಮನ ಬಾಣಗಳಿಂದ ಭಂಗಗೊಂಡ ಆ ಗದೆಯು ನೆಲದ ಮೇಲೆ ಚೂರು ಚೂರಾಗಿ ಬಿತ್ತು – ಮಂತ್ರೌಷಧ ಬಲದಿಂದ ಕೆಳಗೆ ಬಿದ್ದ ಸರ್ಪದಂತೆ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಇಪ್ಪತ್ತೊಂಭತ್ತನೇ ಸರ್ಗ ಮುಗಿಯಿತು.

❖

ತ್ರಿಂಶಃ ಸರ್ಗಃ

ಕಥಾಸಾರಾಂಶ– ಖರನ ಗದೆಯನ್ನು ತುಂಡರಿಸಿದ ಶ್ರೀರಾಮ ಖರನನ್ನು ಕುರಿತು ಇಂತೆದನು. ನಿನ್ನ ಬಲ ತೋರಿಸಿದೆ. ನಾನದನ್ನು ವ್ಯರ್ಥಗೊಳಿಸಿದೆ. ನಿನ್ನ ಗರ್ಜನೆ ವೃಥಾ. ನಿನ್ನ ಗದೆ ಪುಡಿಯಾಗಿ ನೆಲದಲ್ಲಿ ಬಿದ್ದಿದೆ. ನಿನ್ನ ಗರ್ವ ಪರಿಹಾರಮಾಡಿದೆ. ಬರೇ ವಾಕ್‌ಶೂರ ನೀನು.

ನಿನ್ನ ತಲೆಯನ್ನು ಕತ್ತರಿಸಿ ಧರೆಗೆ ಉರುಳಿಸುತ್ತೇನೆ. ನೆಲ ನೆತ್ತರು ಕುಡಿಯಲಿ. ಧರಣಿಯನ್ನು ಅಪ್ಪಿ ಶಾಶ್ವತ ನಿದ್ರೆಮಾಡು. ನಿನ್ನ ಸಂಹಾರದಿಂದ ದಂಡಕಾರಣ್ಯದಲ್ಲಿ ಮಹರ್ಷಿಗಳು ನಿರ್ಭಯವಾಗಿ ಸಂಚರಿಸುತ್ತಾರೆ.

ಭಯೋತ್ಪಾದಕರಾದ ನಿನ್ನ ಹೆಂಡತಿಯರು ಶೋಕದ ರುಚಿ ತಿಳಿಯಲಿ. ಭಯ–ದಿಂದ ದೀನರಾಗಿ ನಿನ್ನ ಸುತ್ತ ಸುತ್ತುವರಿದು ಅಳುತ್ತ ಅಲೆಯಲಿ ಅಳುವಿನಲೆಯಲ್ಲಿ.

ರೋಷಾಗ್ನಿಯಿಂದ ಉರಿಯುತ್ತಿರುವ ಖರ ಖರತರಸ್ವರದಿಂದ ರಾಮನನ್ನು ಗದರಿದನು. ರಾಮ ! ಭಯದಿಂದ ಕಂಗೆಡುವ ಸಮಯದಲ್ಲಿ ನಿರ್ಭಯನಾಗಿ ಹರಟುತ್ತಿರುವೆ. ಮೃತ್ಯುವಶರಾದವರಿಗೆ ಕಾರ್ಯಾಕಾರ್ಯವಿವೇಕ ಮರೆಯಾಗುತ್ತದೆ.

ಹೀಗೆ ಹೇಳಿ ಹುಬ್ಬು ಗಂಟಿಕ್ಕಿ ತುಟಿ ಕಚ್ಚಿ ಆಚೀಚೆ ಪರಿಕಿಸಿ ಮಹಾಸಾಲವೃಕ್ಷ–ವೊಂದನ್ನು ಗಮನಿಸಿ ಬಿಗಿದ ರೆಟ್ಟೆಗಳಿಂದ ಅದನ್ನು ಕಿತ್ತು ಅದನ್ನೆ ಆಯುಧವಾಗಿ ಭಾವಿಸಿ ರಾಮನ ಮೇಲೆ ವೇಗದಿಂದ ಎಸೆ ! ನೀ ಸತ್ತೆ ಎಂದಬ್ಬರಿಸಿದ.

ಬಾಣರಾಶಿಗಳಿಂದ ಆ ಮರವನ್ನು ತುಂಡರಿಸಿದ ರಾಮ ಸಾವಿರ ಬಾಣಗಳನ್ನು ಖರನ ಮೇಲೆ ಪ್ರಯೋಗಿಸಿದ. ಬೆಟ್ಟದಿಂದ ತೊರೆ ಹರಿದು ಬರುವಂತೆ ಖರನ ದೇಹದಿಂದ ರಕ್ತ ಉಕ್ಕಿ ಸುರಿಯಿತು. ನೆತ್ತರ ವಾಸನೆಯಿಂದ ಮತ್ತನಾಗಿ ಖರ ಮತ್ತೆ ರಾಮನನ್ನು ಹಿಂಬಾಲಿಸಿ ಧಾವಿಸಿದ. ಕೂಡಲೆ ರಾಮ ಇಂದ್ರಕೊಟ್ಟ ತೀಕ್ಷ್ಣಬಾಣವೊಂದನ್ನು ಖರನ ವಧೆಗಾಗಿ ಪ್ರಯೋಗಿಸಿದ. ಬಾಣದ ಬೆಂಕಿಯಿಂದ ಖರ ನೆಲಕ್ಕುರುಳಿ ಧಗಧಗ ದಹಿಸಿದ.

ರಾಜರ್ಷಿಗಳು ಪರಮರ್ಷಿಗಳೆಲ್ಲ ಸಂತಸಗೊಂಡು ರಾಮನನ್ನು ಸತ್ಕರಿಸಿ ನುಡಿದರು – 'ಇದಕ್ಕಾಗಿಯೇ ಋಷಿಗಳು ನಿನ್ನನ್ನು ಇಲ್ಲಿಗೆ ಬರುವಂತೆ ಮಾಡಿದರು. ತಾಪಸತಾಪಕಾರಿ ರಕ್ಕಸರನ್ನು ವಿಶೇಷವಾಗಿ ದೂಷಣ ಹಾಗೂ ಈ ಖರನನ್ನು ಕೊಂದು ಭಯಪರಿಹಾರ ಮಾಡಿರುವಿ ರಾಮ ! ಇನ್ನು ಮುಂದೆ ಮುನಿಗಳು ಇಲ್ಲಿ ನಿರ್ಭಯರಾಗಿ ಸಾಧನೆಯಲ್ಲಿ ತೊಡಗುವರು.

ಇಷ್ಟರಲ್ಲಿ ದೇವತೆಗಳು ಚಾರಣರೊಂದಿಗೆ ಸಂಗತರಾಗಿ ಶ್ರೀರಾಮನ ಮೇಲೆ ಹೂಮಳೆಗರೆದರು. ದುಂದುಭಿಗಳನ್ನು ಮೊಳಗಿಸಿದರು.

ಆಹಾ ! ಒಂದೂವರೆ ಮುಹೂರ್ತದಲ್ಲಿ ಶ್ರೀರಾಮ ಹದಿನಾರು ಸಾವಿರ ರಕ್ಕಸರನ್ನು ಹಾಗು ಅವರ ಮುಖಂಡರಾದ ಖರದೂಷಣರನ್ನು ಸಂಹರಿಸಿದನು. ಶ್ರೀರಾಮನ ವೀರ್ಯ, ದಕ್ಷತೆಗಳು ವಿಷ್ಣುವಿನಂತೆಯೇ ತೋರುತ್ತಿವೆ.

ಹೀಗೆ ಕೊಂಡಾಡಿ ದೇವತೆಗಳು ಹಿಂತೆರಳಿದರು. ಅಷ್ಟರಲ್ಲಿ ಲಕ್ಷ್ಮಣನು ಸೀತೆಯನ್ನು ಕರೆದುಕೊಂಡು ಅಲ್ಲಿಯ ದುರ್ಗಮ ದುರ್ಗದಿಂದ ಇಳಿದು ಬಂದು ಆಶ್ರಮ ಸೇರಿದರು. ಬಳಿಕ ಶ್ರೀರಾಮ ಋಷಿಮುನಿಗಳಿಂದ ಪೂಜೆಗೊಳ್ಳುತ್ತಾ ತನ್ನ ಆಶ್ರಮಕ್ಕೆ ಹಿಂತೆರಳಿದ.

ಶತ್ರುಗಳನ್ನು ಕೊಂದು ಮಹರ್ಷಿಗಳಿಗೆ ಸುಖವುಂಟು ಮಾಡಿದ ಶ್ರೀರಾಮನನ್ನು ಕಂಡು ಸೀತೆ ಸಂತಸದಿಂದ ಬಿಗಿದಪ್ಪಿದಳು. ತುಂಬ ಮುದಗೊಂಡ ಸೀತೆ ಶ್ರೀರಾಮನಿಂದ ಹತವಾದ ರಾಕ್ಷಸಸಮೂಹವನ್ನು ನೋಡಿ ಘಾಸಿಗಳೊಗಾಗದ ಶ್ರೀರಾಮನನ್ನು ನೋಡಿ ತುಂಬ ಹರ್ಷಗೊಂಡಳು.

ಬಳಿಕ ರಾಕ್ಷಸಸಂಘಮರ್ದನ ಮಾಡಿ ಮುದಗೊಂಡ ಮಹರ್ಷಿಗಳ ಸತ್ಕಾರಕ್ಕೆ ಪಾತ್ರನಾದ ಶ್ರೀರಾಮನನ್ನು ಚಂದಿರನ ಬೆಳದಿಂಗಳಿನಂತೆ ಹೊಳೆಯುವ ಮೊಗದ ಸೀತೆ ಮತ್ತೆ ಆಲಿಂಗಿಸಿ ಹರ್ಷಗೊಂಡಳು.

❖

ಖರಸಂಹಾರಃ

ಭಿತ್ತ್ವಾ ತು ತಾಂ ಗದಾಂ ಬಾಣೈ ರಾಘವೋ ಧರ್ಮವತ್ಸಲಃ ।
ಸ್ಮಯಮಾನಃ ಖರಂ ವಾಕ್ಯಂ ಸಂರಬ್ಧಮಿದಮಬ್ರವೀತ್ ॥೧॥

ಧರ್ಮವತ್ಸಲನಾದ ಶ್ರೀರಾಮನು ಖರನ ಗದೆಯನ್ನು ಸೀಳಿ ನಸುನಕ್ಕು ಸಂಭ್ರಾಂತನಾದ ಖರನಿಗೆ ಹೀಗೆ ಹೇಳಿದನು.

ಏತತ್ತೇ ಬಲಸರ್ವಸ್ವಂ ದರ್ಶಿತಂ ರಾಕ್ಷಸಾಧಮ ।
ಶಕ್ತಿಹೀನತರೋ ಮತ್ತೋ ವೃಥಾ ತ್ವಮವಗರ್ಜಸಿ ॥೨॥

ರಾಕ್ಷಸಾಧಮ ! ನಿನ್ನ ಬಲಸರ್ವಸ್ವವೆಲ್ಲ ಪ್ರದರ್ಶಿತವಾಯಿತಲ್ಲ ? ನನಗಿಂತ ತುಂಬ ಶಕ್ತಿ ಹೀನನಾದವನು ನೀನು. ಸುಮ್ಮನೇ ವ್ಯರ್ಥವಾಗಿ ಗರ್ಜಿಸುತ್ತಿರುವೆ.

ಏಷಾ ಬಾಣವಿನಿರ್ಭಿನ್ನಾ ಗದಾ ಭೂಮಿತಲಂ ಗತಾ ।
ಅಭಿಧಾನಪ್ರಗಲ್ಭಸ್ಯ ತವ ಪ್ರತ್ಯಯಘಾತಿನೀ ॥೩॥

ಕೇವಲ ವಾಕ್ ಶೂರನಾದ ಈ ನಿನ್ನ ಶತ್ರು ಘಾತಿನಿಯಾದ ಗದೆಯು ನನ್ನ ಬಾಣಗಳಿಂದ ತುಂಡು ತುಂಡಾಗಿ ನೆಲದ ಮೇಲೆ ಬಿದ್ದಿದೆ.

ಯತ್ತ್ವಯೋಕ್ತಂ ವಿನಷ್ಟಾನಾಮಹಮಶ್ರು ಪ್ರಮಾರ್ಜನಮ್ ।
ರಾಕ್ಷಸಾನಾಂ ಕರೋಮೀತಿ ಮಿಥ್ಯಾ ತದಪಿ ತೇ ವಚಃ ॥೪॥

ಸತ್ತ ರಕ್ಕಸರ ಕಣ್ಣೀರ ಒರೆಸುವೆ ಎಂದು ಕೊಚ್ಚಿಕೊಂಡ ನಿನ್ನ ಮಾತು ಸುಳ್ಳಾಯಿತಲ್ಲ !

ನೀಚಸ್ಯ ಕ್ಷುದ್ರಶೀಲಸ್ಯ ಮಿಥ್ಯಾವೃತ್ತಸ್ಯ ರಕ್ಷಸಃ ।
ಪ್ರಾಣಾನಪಹರಿಷ್ಯಾಮಿ ಗರುತ್ಮಾನಮೃತಂ ಯಥಾ ॥೫॥

ನೀಚನು ದುಃಶೀಲನು ಕೆಟ್ಟನಡತೆಯ ರಕ್ಕಸನಾದ ನಿನ್ನ ಪ್ರಾಣವನ್ನು ಅಪಹರಿಸುತ್ತೇನೆ ಗರುಡ ಅಮೃತವನ್ನು ಅಪಹರಿಸಿದಂತೆ.

ಅದ್ಯ ತೇ ಛಿನ್ನಕಂಠಸ್ಯ ಫೇನಬುದ್ಬುದಭೂಷಿತಮ್ ।
ವಿದಾರಿತಸ್ಯ ಮದ್ಬಾಣೈರ್ಮಹೀ ಪಾಸ್ಯತಿ ಶೋಣಿತಮ್ ॥೬॥

ನನ್ನ ಬಾಣದಿಂದ ಸೀಳಿಹೋದ ತುಂಡಾದ ನಿನ್ನ ಕಂಠದಿಂದ ಸುರಿಯುವ ಗುಳ್ಳೆ ನೊರೆಗಳಿಂದ ಕೂಡಿದ ಬಿಸಿ ನೆತ್ತರನ್ನು ಈ ಭೂಮಿ ಸದ್ಯದಲ್ಲಿಯೇ ಕುಡಿಯುತ್ತದೆ !

ಪಾಂಸುರೂಷಿತಸರ್ವಾಂಗಃ ಸ್ರಸ್ತನ್ಯಸ್ತಭುಜದ್ವಯಃ ।
ಸ್ವಪ್ಸ್ಯಸೇ ಗಾಂ ಸಮಾಲಿಂಗ್ಯ ದುರ್ಲಭಾಂ ಪ್ರಮದಾಮಿವ ॥೭॥

ಧೂಳು ಮೆತ್ತಿಕೊಂಡಸರ್ವಾಂಗನು, ಚೆಲ್ಲಿದಂತೆ ಹರವಿಕೊಂಡ ಎರಡು ತೋಳುಳ್ಳವನಾಗಿ ನೆಲವನ್ನು ಅಪ್ಪಿಕೊಂಡು ಮಲಗುವಿ ದುರ್ಲಭವಾದ ಹೆಣ್ಣನ್ನು ಗಾಢವಾಗಿ ಆಲಿಂಗಿಸಿಕೊಂಡಂತೆ !

ಪ್ರವೃದ್ಧನಿದ್ರೇ ಶಯಿತೇ ತ್ವಯಿ ರಾಕ್ಷಸಪಾಂಸನೇ ।
ಭವಿಷ್ಯಂತ್ಯಶರಣ್ಯಾನಾಂ ಶರಣ್ಯಾ ದಂಡಕಾ ಇಮೇ ॥೮॥

ದುಷ್ಟರಕ್ಕಸನಾದ ನೀನು ದೀರ್ಘ ನಿದ್ರೆಯಲ್ಲಿ ಮಲಗಿದರೆ ರಕ್ಷಕರಿಲ್ಲದ ಋಷಿಜನರಿಗೆ ಈ ದಂಡಕಾರಣ್ಯ ಆಸರೆಯಾಗುತ್ತದೆ.

ಜನಸ್ಥಾನೇ ಹತಸ್ಥಾನೇ ತವ ರಾಕ್ಷಸ ಮಚ್ಛರೈಃ ।
ನಿರ್ಭಯಾ ವಿಚರಿಷ್ಯಂತಿ ಸರ್ವತೋ ಮುನಯೋ ವನೇ ॥೯॥

ರಾಕ್ಷಸನೇ ! ನಿನ್ನ ಈ ಜನಸ್ಥಾನ ರಕ್ಕಸರು ಸತ್ತ ತಾಣವಾದರೆ ಈ ಕಾಡಿನಲ್ಲಿ ಎಲ್ಲ ಮುನಿಗಳೂ ಭಯರಹಿತರಾಗಿ ಸಂಚರಿಸುವರು.

ಅದ್ಯ ವಿಪ್ರಸರಿಷ್ಯಂತಿ ರಾಕ್ಷಸ್ಯೋ ಹತಬಾಂಧವಾಃ ।
ಬಾಷ್ಪಾರ್ದ್ರವದನಾ ದೀನಾ ಭಯಾದನ್ಯಭಯಾವಹಾಃ ॥೧೦॥

ಪತಿ ಸುತ ಬಂಧು ಬಾಂಧವರನ್ನು ಕಳೆದುಕೊಂಡು, ಮುನಿಗಳಿಗೆ ಭಯೋತ್ಪಾದಕಿಯರಾಗಿದ್ದ ರಕ್ಕಸಿಯರು ತಾವೇ ಭಯದಿಂದ ದೀನರಾಗಿ ಕಣ್ಣೀರಿನಿಂದ ತೊಯ್ದ ಮುಖವುಳ್ಳವರಾಗಿ ಇಲ್ಲಿಂದ ಓಡಿ ಹೋಗುತ್ತಾರೆ.

ಅದ್ಯ ಶೋಕರಸಜ್ಞಾಸ್ತಾ ಭವಿಷ್ಯಂತಿ ನಿರರ್ಥಕಾಃ ।
ಅನುರೂಪಕಲಾಃ ಪತ್ನ್ಯೋ ಯಾಸಾಂ ತ್ವಂ ಪತಿರೀದೃಶಃ ॥೧೧॥

ಯಾವ ಹೆಣ್ಣುಗಳಿಗೆ ನಿನ್ನಂತಹ ನೀನು ಪತಿಯಾಗಿರುವಿಯೋ ನಿನ್ನ ಅನುರೂಪಕುಲದವರಾದ ಆ ರಕ್ಕಸಿಯರು ಬಾಳು ನಿರರ್ಥಕವಾಗಿ ಇಂದು ಶೋಕವೆಂದರೇನೆಂಬುದನ್ನು ಅರಿಯುತ್ತಾರೆ.

ನೃಶಂಸ ನೀಚ ಕ್ಷುದ್ರಾತ್ಮನ್ನಿತ್ಯಂ ಬ್ರಾಹ್ಮಣಕಂಟಕ ।
ಯತ್ಕೃತೇ ಶಂಕಿತೈರಗ್ನೌ ಮುನಿಭಿಃ ಪಾತ್ಯತೇ ಹವಿಃ ॥೧೨॥

ನೃಶಂಸ ! ನೀಚ ! ಕ್ಷುದ್ರಾತ್ಮನೇ ನಿತ್ಯದಲ್ಲಿ ಬ್ರಾಹ್ಮಣಕಂಟಕನೇ ! ನಿನಗೆ ಹೆದರಿದ ಮುನಿಗಳು ನಿನ್ನ ನಾಶಕ್ಕಾಗಿಯೇ ನಿತ್ಯ ಅಗ್ನಿಯಲ್ಲಿ ಹವಿಸ್ಸನ್ನು ಹಾಕುತ್ತಿದ್ದರು.

ತಮೇವಮಭಿಸಂರಬ್ಧಂ ಬ್ರುವಾಣಂ ರಾಘವಂ ರಣೇ ।
ಖರೋ ನಿರ್ಭರ್ತ್ಸಯಾಮಾಸ ರೋಷಾತ್ ಖರತರಸ್ವನಃ ॥೧೩॥

ತುಂಬ ಕುಪಿತನಾಗಿ ಹೀಗೆ ಮಾತಾಡುತ್ತಿದ್ದ ರಾಘವನನ್ನು ಖರನು ಅತ್ಯಂತ ಕ್ರೂರವಾದ ಧ್ವನಿಯುಳ್ಳವನಾಗಿ ರೋಷದಿಂದ ನಿಂದನೆ ಮಾಡಿದನು.

ದೃಢಂ ಖಲ್ವವಲಿಪ್ತೋಽಸಿ ಭಯೇಷ್ವಪಿ ಚ ನಿರ್ಭಯಃ ।
ವಾಚ್ಯಾವಾಚ್ಯಂ ತತೋ ಹಿ ತ್ವಂ ಮೃತ್ಯುವಶ್ಯೋ ನ ಬುಧ್ಯಸೇ ॥೧೪॥

ನೀನು ತುಂಬ ಗರ್ವಿಷ್ಠನಾಗಿರುವಿ ಎಂಬುದು ದೃಢವಾಯಿತು. ಭಯವಾಗಿ-ದ್ದರೂ ಭಯವಿಲ್ಲದವನಂತೆ ನಡೆದುಕೊಳ್ಳುತ್ತಿರುವಿ. ನೀನು ಮೃತ್ಯುವಶನಾಗಿರುವಿ. ಅದಕೆಂದೆ ಏನು ಮಾತಾಡಬೇಕು ? ಏನು ಮಾತಾಡಬಾರದು ಎಂಬುದನ್ನು ತಿಳಿಯದೆ ಹರಟುತ್ತಿರುವಿ.

ಕಾಲಪಾಶಪರಿಕ್ಷಿಪ್ತಾ ಭವಂತಿ ಪುರುಷಾ ಹಿ ಯೇ ।
ಕಾರ್ಯಾಕಾರ್ಯಂ ನ ಜಾನಂತಿ ತೇ ನಿರಸ್ತಷಂಡಿಂದ್ರಿಯಾಃ ॥೧೫॥

ಯಾವ ಪುರುಷರು ಕಾಲಪಾಶದ ಬಂಧನಕ್ಕೆ ಸಿಲುಕಿರುತ್ತಾರೆ. ಅವರು ಆರೂ ಇಂದ್ರಿಯಗಳ ವ್ಯಾಪಾರವನ್ನು ಕಳೆದುಕೊಂಡವರಾಗಿ ಕಾರ್ಯಾಕಾರ್ಯ ವಿವೇಕ ಹೀನರಾಗಿರುತ್ತಾರೆ.

ಏವಮುಕ್ತ್ವಾ ತತೋ ರಾಮಂ ಸಂರುಧ್ಯ ಭ್ರುಕುಟೀಂ ತತಃ ।
ಸ ದದರ್ಶ ಮಹಾಸಾಲಮವಿದೂರೇ ನಿಶಾಚರಃ ॥೧೬॥

ರಣೇ ಪ್ರಹರಣಸ್ಯಾರ್ಥೇ ಸರ್ವತೋ ಹ್ಯವಲೋಕಯನ್ ।

ಬಳಿಕ ರಾಮನಿಗೆ ಹೀಗೆ ಉತ್ತರಿಸಿ ಹುಬ್ಬು ಗಂಟಿಕ್ಕಿ ಆಯುಧಕ್ಕಾಗಿ ಸುತ್ತಲೂ ಪರಿಕಿಸಿ ಸಮೀಪದಲ್ಲಿದ್ದ ಮಹಾಸಾಲ ವೃಕ್ಷವನ್ನು ನಿಶಾಚರನು ದಿಟ್ಟಿಸಿ ನೋಡಿದನು.

ಸ ತಮುತ್ಪಾಟಯಾಮಾಸ ಸಂದಂಶ್ಯ ದಶನಚ್ಛದಮ್ ॥೧೭॥

ತಂ ಸಮುತ್ಪಾಟ್ಯ ಬಾಹುಭ್ಯಾಂ ವಿನದ್ಯ ಚ ಮಹಾಬಲಃ ।
ರಾಮಮುದ್ದಿಶ್ಯ ಚಿಕ್ಷೇಪ ಹತಸ್ತ್ವಮಿತಿ ಚಾಬ್ರವೀತ್ ॥೧೮॥

ಆ ಖರನು ಹಲ್ಲು ಕಚ್ಚಿ ಆ ಮರವನ್ನು ಕಿತ್ತಿದನು. ಎರಡು ತೋಳುಗಳಿಂದ ಆ ಮರವನ್ನು ಎತ್ತಿ ಹಿಡಿದು ಗರ್ಜನೆ ಮಾಡಿ ರಾಮನ ಮೇಲೆ ಎಸೆದನು; 'ಸತ್ತೆ ನೀನು' ಎಂದೂ ಹೇಳಿದನು.

ತಮಾಪತಂತಂ ಬಾಣೌಘೈಶ್ಛಿತ್ತ್ವಾ ರಾಮಃ ಪ್ರತಾಪವಾನ್ ।
ರೋಷಮಾಹಾರಯತ್ತೀವ್ರಂ ನಿಹಂತುಂ ಸಮರೇ ಖರಮ್ ॥೧೯॥

ಪ್ರತಾಪಿಯಾದ ಶ್ರೀರಾಮನು ಎದುರು ಬರುತ್ತಿರುವ ಸಾಲವೃಕ್ಷವನ್ನು ಬಾಣಸಮುದಾಯಗಳಿಂದ ತುಂಡರಿಸಿದನು. ಸಮರದಲ್ಲಿ ಖರನನ್ನು ಕೊಲ್ಲಲ್ಲು ತೀವ್ರವಾಗಿ ಕೋಪಗೊಂಡನು.

ಜಾತಸ್ವೇದಸ್ತತೋ ರಾಮೋ ರೋಷಾದ್ರಕ್ತಾಂತಲೋಚನಃ ।
ನಿರ್ಬಿಭೇದ ಸಹಸ್ರೇಣ ಬಾಣಾನಾಂ ಸಮರೇ ಖರಮ್ ॥೨೦॥

ಸಿಟ್ಟಿನಿಂದ ಮೈಬೆವರಿಟ್ಟು ರೋಷದಿಂದ ಕಡೆಗಣ್ಣು ಕೆಂಪಾದವನಾಗಿ ಸಮರದಲ್ಲಿ ಸಾವಿರಬಾಣಗಳಿಂದ ಖರನನ್ನು ಸೀಳಿ ಹಾಕಿದ.

ತಸ್ಯ ಬಾಣಾಂತರಾದ್ರಕ್ತಂ ಬಹು ಸುಸ್ರಾವ ಫೇನಿಲಮ್।
ಗಿರೇಃ ಪ್ರಸ್ರವಣಸ್ಯೇವ ತೋಯಧಾರಾಪರಿಸ್ರವಃ ॥೨೧॥

ಪ್ರಸ್ರವಣಪರ್ವತದಿಂದ ಜಲ ಧಾರೆ ಸುರಿಯುವಂತೆ ಬಾಣದಿಂದ ಗಾಯ-ಗೊಂಡ ಖರನ ದೇಹದಿಂದ ನೊರೆಯಿಂದ ಕೂಡಿದ ರಕ್ತದ ಧಾರೆಯು ಸುರಿಯಿತು.

ವಿಹ್ವಲಃ ಸ ಕೃತೋ ಬಾಣೈಃ ಖರೋ ರಾಮೇಣ ಸಂಯುಗೇ ।
ಮತ್ತೋ ರುಧಿರಗಂಧೇನ ತಮೇವಾಭ್ಯದ್ರವದ್ದ್ರುತಮ್ ॥೨೨॥

ಯುದ್ಧದಲ್ಲಿ ಖರನು ರಾಮನ ಬಾಣಗಳಿಂದ ವಿಹ್ವಲಗೊಂಡನು. ನೆತ್ತರಿನ ವಾಸನೆಯಿಂದ ಅಮಲೇರಿ ರಾಮನೆಡೆಗೆ ವೇಗವಾಗಿ ಧಾವಿಸಿದನು.

ತಮಾಪತಂತಂ ಸಂರಬ್ಧಂ ಕೃತಾಸ್ತ್ರೋ ರುಧಿರಾಪ್ಲುತಮ್ ।
ಅಪಾಸರ್ದ್ವಿತ್ರಿಪದಂ ಕಿಂಚಿತ್ತ್ವರಿತವಿಕ್ರಮಃ ॥೨೩॥

ಸಿಟ್ಟುಗೊಂಡು ತನ್ನ ಮೇಲೆರಗಿ ಬರುತ್ತಿದ್ದ, ನೆತ್ತರಿನಿಂದ ತೋಯ್ದಿದ್ದ ಖರನನ್ನು ನೋಡಿ ಶ್ರೀರಾಮ ಶೀಘ್ರವಿಕ್ರಮಿಯಾಗಿ ಒಂದು ಹೆಜ್ಜೆ ಹಿಂದೆ ಸರಿದನು.

ತತಃ ಪಾವಕಸಂಕಾಶಂ ವಧಾಯ ಸಮರೇ ಶರಮ್ ।
ಖರಸ್ಯ ರಾಮೋ ಜಗ್ರಾಹ ಬ್ರಹ್ಮದಂಡಮಿವಾಪರಮ್ ॥೨೪॥

ಸ ತಂ ದತ್ತಂ ಮಘವತಾ ಸುರರಾಜೇನ ಧೀಮತಾ ।
ಸಂದಧೇ ಚಾಪಿ ಧರ್ಮಾತ್ಮಾ ಮುಮೋಚ ಚ ಖರಂ ಪ್ರತಿ ॥೨೫॥

ಬಳಿಕ ಶ್ರೀರಾಮನು ಅಗ್ನಿಯಂತಿದ್ದ, ಮತ್ತೊಂದು ಬ್ರಹ್ಮದಂಡದಂತಿದ್ದ ಬಾಣವನ್ನು ಸಮರದಲ್ಲಿ ಖರನ ಸಂಹಾರಕ್ಕೋಸ್ಕರ ತೆಗೆದುಕೊಂಡನು.

ಆ ಬಾಣ ಧೀಮಂತ ಸುರರಾಜ ದೇವೇಂದ್ರನಿಂದ ಪ್ರದತ್ತವಾದುದು. ಧರ್ಮಾತ್ಮ ರಾಮನು ಆ ಬಾಣವನ್ನು ಹೆದೆಯಲ್ಲಿ ಜೋಡಿಸಿದನು. ಖರನ ಮೇಲೆ ಪ್ರಯೋಗಿಸಿದನು ಕೂಡ.

ಸ ವಿಮುಕ್ತೋ ಮಹಾಬಾಣೋ ನಿರ್ಘಾತಸಮನಿಃಸ್ವನಃ ।
ರಾಮೇಣ ಧನುರಾಯಮ್ಯ ಖರಸ್ಯೋರಸಿ ಚಾಪತತ್ ॥೨೬॥

ರಾಮನು ಬಿಲ್ಲಿನ ಹೆದೆಯನ್ನು ಎಳೆದು ಪ್ರಯೋಗಿಸಿದ ಆ ಮಹಾ ಬಾಣವು ಬಿರುಗಾಳಿಯಂತೆ ಸದ್ದು ಮಾಡುತ್ತ ಖರನೆದೆಯಲ್ಲಿ ನೆಟ್ಟಿತು.

ಸ ಪಪಾತ ಖರೋ ಭೂಮೌ ದಹ್ಯಮಾನಃ ಶರಾಗ್ನಿನಾ ।
ರುದ್ರೇಣೇವ ವಿನಿರ್ದಗ್ಧಃ ಶ್ವೇತಾರಣ್ಯೇ ಯಥಾಂತಕಃ ॥೨೭॥

ಶ್ವೇತಾರಣ್ಯದಲ್ಲಿ ರುದ್ರನಿಂದ ಬೂದಿಯಾದ ಅಂಧಕಾಸುರನಂತೆ ರಾಮನ ಬಾಣಾಗ್ನಿಯಂತೆ ದಗ್ಧನಾಗಿ ಖರನು ಭೂಮಿಯಲ್ಲಿ ಬಿದ್ದನು.

ಸ ವೃತ್ರ ಇವ ವಜ್ರೇಣ ಫೇನೇನ ನಮುಚಿರ್ಯಥಾ ।
ಬಲೋ ವೇಂದ್ರಾಶನಿಹತೋ ನಿಪಪಾತ ಹತಃ ಖರಃ ॥೨೮॥

ವಜ್ರಾಯುಧದಿಂದ ವೃತ್ರಾಸುರನಂತೆ, ಪ್ರಬಲವಾದ ನೊರೆಯಿಂದ ನಮುಚಿ-ಯಂತೆ, ಇಂದ್ರನ ವಜ್ರಾಯುಧದಿಂದ ಹತವಾದ ಸೇನೆಯಂತೆ ದುಷ್ಟ ಖರ ಸತ್ತು ಬಿದ್ದ !

ತತೋ ರಾಜರ್ಷಯಃ ಸರ್ವೇ ಸಂಗತಾಃ ಪರಮರ್ಷಯಃ ।
ಸಭಾಜ್ಯ ಮುದಿತಾ ರಾಮಮಿದಂ ವಚನಮಬ್ರುವನ್ ॥೨೯॥

ತರುವಾಯ ಎಲ್ಲ ರಾಜರ್ಷಿಗಳು ಮಹರ್ಷಿಗಳು ಒಟ್ಟೈಸಿ ಮುದಿತರಾಗಿ ಗೌರವಿಸಿ ರಾಮನಿಗೆ ಇಂತೆಂದರು.

ಏತದರ್ಥಂ ಮಹಾಭಾಗ ಮಹೇಂದ್ರಃ ಪಾಕಶಾಸನಃ ।
ಶರಭಂಗಾಶ್ರಮಂ ಪುಣ್ಯಮಾಜಗಾಮ ಪುರಂದರಃ ॥೩೦॥

ಆನೀತಸ್ತ್ವಮಿಮಂ ದೇಶಮುಪಾಯೇನ ಮಹರ್ಷಿಭಿಃ ।
ಏಷಾಂ ವಧಾರ್ಥಂ ಕ್ರೂರಾಣಾಂ ರಕ್ಷಸಾಂ ಪಾಪಕರ್ಮಣಾಮ್ ॥೩೧

ತದಿದಂ ನಃ ಕೃತಂ ಕಾರ್ಯಂ ತ್ವಯಾ ದಶರಥಾತ್ಮಜ ।
ಸುಖಂ ಧರ್ಮಂ ಚರಿಷ್ಯಂತಿ ದಂಡಕೇಷು ಮಹರ್ಷಯಃ ॥೩೨॥

ಈ ವಿಪ್ರಕಂಟಕ ರಕ್ಕಸರ ಸಂಹಾರಕ್ಕೇ ಹಿಂದೆ ಶರಭಂಗ ಮುನಿಗಳ ಆಶ್ರಮಕ್ಕೆ

ಪಾಕಶಾಸನ ಪುರಂದರನು ಬಂದಿದ್ದನು. ಈ ಪಾಪಕರ್ಮಿಗಳಾದ ಕ್ರೂರ ರಾಕ್ಷಸರ ಸಂಹಾರಕ್ಕಾಗಿಯೇ ಮಹರ್ಷಿಗಳು ನಿನ್ನನ್ನು ಉಪಾಯವಾಗಿ ಕರೆತಂದರು.

ದಶರಥನಂದನನೇ ! ನಾವು ಬಯಸಿದ ಕಾರ್ಯವನ್ನು ಈಗ ಸಾಧಿಸಿಕೊಟ್ಟೆ. ಇನ್ನು ಮಹರ್ಷಿಗಳು ಅನಾಯಾಸವಾಗಿ ಧರ್ಮಾಚರಣೆ ಮಾಡುವರು.

ಏತಸ್ಮಿನ್ನಂತರೇ ದೇವಾಶ್ಚಾರಣೈಃ ಸಹ ಸಂಗತಾಃ ।
ದುಂದುಭಿಂಶ್ಚಾಭಿನಿಘ್ನಂತಃ ಪುಷ್ಪವರ್ಷಂ ಸಮಂತತಃ ॥೩೩॥

ರಾಮಸ್ಯೋಪರಿ ಸಂಹೃಷ್ಟಾ ವವೃಷುರ್ವಿಸ್ಮಿತಾಸ್ತದಾ ।

ಇದೇ ಸಮಯದಲ್ಲಿ ದೇವತೆಗಳು ಚಾರಣರೊಂದಿಗೆ ಸೇರಿ ದೇವದುಂದುಭಿ-ಗಳನ್ನು ಮೊಳಗಿಸುತ್ತ ಎಲ್ಲೆಡೆ ಹೂಮಳೆಗರೆದರು.

ಅರ್ಧಾಧಿಕಮುಹೂರ್ತೇನ ರಾಮೇಣ ನಿಶಿತೈಃ ಶರೈಃ ॥೩೪॥

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ಖರದೂಷಣಮುಖ್ಯಾನಾಂ ನಿಹತಾನಿ ಮಹಾಹವೇ ॥೩೫॥

ಅಹೋ ಬತ ಮಹತ್ ಕರ್ಮ ರಾಮಸ್ಯ ವಿದಿತಾತ್ಮನಃ ।
ಅಹೋ ವೀರ್ಯಮಹೋ ದಾಕ್ಷ್ಯಂ ವಿಷ್ಣೋರಿವ ಹಿ ದೃಶ್ಯತೇ॥೩೬॥

ಇತ್ಯೇವಮುಕ್ತ್ವಾ ತೇ ಸರ್ವೇ ಯಯುರ್ದೇವಾ ಯಥಾಗತಮ್ ।

ಕೇವಲ ಒಂದೂವರೆ ಮುಹೂರ್ತದಲ್ಲಿ ಮಹಾಸಂಗ್ರಾಮದಲ್ಲಿ ಖರದೂಷಣ ಮುಖ್ಯರಾದ ಉಗ್ರಕರ್ಮಿಗಳಾದ ಹದಿನಾಲ್ಕು ಸಾವಿರ ರಕ್ಕಸರನ್ನು ಕೊಂದು ಹಾಕಿದ ಶ್ರೀರಾಮ. ಅಬ್ಬಾ ! ವಿದಿತಾತ್ಮನಾದ ಶ್ರೀರಾಮನ ಮಹಾಸಾಹಸ ಕಾರ್ಯವು ಎಷ್ಟು ಅದ್ಭುತ !

ಇವನ ಪರಾಕ್ರಮವೂ ಅದ್ಭುತ ! ದಕ್ಷತೆಯೂ ಅದ್ಭುತ ! ವಿಷ್ಣುವಿನ ವೀರ್ಯಪರಾಕ್ರಮಗಳಂತೆಯೇ ! ಹೀಗೆ ಹೇಳಿ ದೇವತೆಗಳೆಲ್ಲ ಬಂದ ಹಾಗೆ ಹಿಂತಿರುಗಿದರು.

ಏತಸ್ಮಿನ್ನಂತರೇ ವೀರೋ ಲಕ್ಷ್ಮಣಂ ಸಹ ಸೀತಯಾ ॥೩೭॥
ಗಿರಿದುರ್ಗಾದ್ವಿನಿಷ್ಕ್ರಮ್ಯ ಸಂವಿವೇಶಾಶ್ರಮಂ ಸುಖೀ ।

ಇದೇ ಸಮಯದಲ್ಲಿ ವೀರಲಕ್ಷ್ಮಣನು ಸೀತೆಯೊಂದಿಗೆ ಗಿರಿದುರ್ಗದಿಂದ ಹೊರ ಬಂದು ಸುಖವಾಗಿ ಆಶ್ರಮವನ್ನು ಹೊಕ್ಕಿದನು.

ತತೋ ರಾಮಸ್ತು ವಿಜಯೀ ಪೂಜ್ಯಮಾನೋ ಮಹರ್ಷಿಭಿಃ ॥೩೮॥
ಪ್ರವಿವೇಶಾಶ್ರಮಂ ವೀರೋ ಲಕ್ಷ್ಮಣೇನಾಭಿಪೂಜಿತಃ ।

ಬಳಿಕ ವೀರ ರಾಮನಾದರೋ ಮಹರ್ಷಿಗಳಿಂದ ಪೂಜೆಗೊಳ್ಳುತ್ತ ಆಶ್ರಮವನ್ನು ಪ್ರವೇಶಿಸಿದ. ಲಕ್ಷ್ಮಣನಿಂದ ಚೆನ್ನಾಗಿ ಪೂಜೆಗೊಂಡನು.

ತಂ ದೃಷ್ಟ್ವಾ ಶತ್ರುಹಂತಾರಂ ಮಹರ್ಷೀಣಾಂ ಸುಖಾವಹಮ್॥೩೯॥
ಬಭೂವ ಹೃಷ್ಟಾ ವೈದೇಹೀ ಭರ್ತಾರಂ ಪರಿಷಸ್ವಜೇ ।

ಶತ್ರು ಸಂಹಾರಕನಾಗಿ ಮಹರ್ಷಿಗಳಿಗೆ ಸುಖದಾಯಿಯಾದ ಶ್ರೀರಾಮನನ್ನು ನೋಡಿ ವೈದೇಹಿಯು ಗಂಡನನ್ನು ಗಾಢವಾಗಿ ಆಲಿಂಗಿಸಿಕೊಂಡಳು.

ಮುದಾ ಪರಮಯಾ ಯುಕ್ತಾ ದೃಷ್ಟ್ವಾ ರಕ್ಷೋಗಣಾನ್ ಹತಾನ್ ॥೪೦
ರಾಮಂ ಚೈವಾವ್ಯಥಂ ದೃಷ್ಟ್ವಾ ತುತೋಷ ಜನಕಾತ್ಮಜಾ ॥

ತುಂಬ ಸಂತಸದಿಂದ ಕೂಡಿದವಳಾಗಿ ಸೀತೆ ರಾಮನಿಂದ ರಕ್ಷೋಗಣದವರು ಹತರಾದುದನ್ನು ಕಂಡು ರಾಮನು ವ್ಯಥೆ ಇಲ್ಲದುದನ್ನು ತಿಳಿದು ಸಂತೋಷ-ಗೊಂಡಳು.

ತತಸ್ತು ತಂ ರಾಕ್ಷಸಸಂಘಮರ್ದನಂ
ಸಭಾಜ್ಯಮಾನಂ ಮುದಿತೈರ್ಮಹರ್ಷಿಭಿಃ ।
ಪುನಃ ಪರಿಷ್ವಜ್ಯ ಶಶಿಪ್ರಭಾನನಾ
ಬಭೂವ ಹೃಷ್ಟಾ ಜನಕಾತ್ಮಜಾ ತದಾ ॥೪೧॥

ಬಳಿಕ ರಾಕ್ಷಸಸಂಘಸಂಹಾರಕನಾಗಿ ಮುದಿತರಾದ ಮಹರ್ಷಿಗಳಿಂದ ಪೂಜಿಸಲ್ಪಡುತ್ತಿರುವ ರಾಮನನ್ನು ಶಶಿಪ್ರಭೆಯಂತಹ ಮೊಗದವಳಾದ ಸೀತೆ, ಹರ್ಷಗೊಂಡು ಮತ್ತೊಮ್ಮೆ ಗಾಢವಾಗಿ ಆಲಿಂಗಿಸಿಕೊಂಡಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮುವತ್ತನೇ ಸರ್ಗ ಮುಗಿಯಿತು.

ಏಕತ್ರಿಂಶಃ ಸರ್ಗಃ

ಕಥಾಸಾರಾಂಶ– ರಾಮನಿಂದ ಹತನಾಗದೇ ಉಳಿದಿದ್ದ ಅಕಂಪನ ರಾಕ್ಷಸನು ರಾವಣನ ಬಳಿ ಬಂದು ಜನ ಸ್ಥಾನದಲ್ಲಿ ಖರದೂಷಣರನ್ನು ಅವನ ಅನುಚರ ರಕ್ಕಸರನ್ನು ರಾಮಚಂದ್ರ ಕೊಂದ ಸುದ್ದಿಯನ್ನು ವಿವರಿಸಿದನು.

ಅದನ್ನು ಕೇಳಿ ಕೆರಳಿ ಕೆಂಡವಾದ ರಾವಣ ಯಾರು ಈ ಕೃತ್ಯ ಎಸಗಿದ್ದು ? ಅವನಿಗೆ ಸಾಯುವ ಸಮಯ ಬಂದಿರಬೇಕು. ಇಂದ್ರ ಯಮ ಕುಬೇರ ವಿಷ್ಣು ಯಾರೇ ಆಗಿರಲಿ ಅವರಿನ್ನು ಸುಖವಾಗಿರಲು ಸಾಧ್ಯವೇ ಇಲ್ಲ.

ನಾನು ಕಾಲನಿಗೂ ಕಾಲ. ಅಗ್ನಿಯನ್ನು ಸುಡಬಲ್ಲೆ. ವಾಯು ವೇಗವನ್ನು ತಡೆಯಬಲ್ಲೆ ಮುಂತಾಗಿ ಕೋಪದಿಂದ ಅಬ್ಬರಿಸಿದ.

ರಾವಣನ ಆರ್ಭಟದ ಆವೇಶ ಕಂಡು ಅಕಂಪನ ಹೆದರಿದ. ಅವನನ್ನು ಸಮಾಧಾನಿಸಿ ದಶರಥನ ಪುತ್ರ ಯುವ ರಾಮಚಂದ್ರ ಎಲ್ಲ ರಕ್ಕಸರ ಸಂಹಾರ ಮಾಡಿದ ಸಂಗತಿಯನ್ನು ತಿಳಿಸಿ ಅವನ ಅದ್ಭುತ ಪರಾಕ್ರಮವನ್ನು, ಅವನು ಅನೇಕ ರೂಪಗಳನ್ನು ತಾಳಿ ರಕ್ಕಸರನ್ನು ಸಂಹರಿಸಿದ ಪರಿಯನ್ನು ಅರಿಕೆ ಮಾಡಿಕೊಂಡ. ರಾಮನು ಏಕಾಂಗಿಯಾಗಿ ಪರಾಕ್ರಮ ತೋರಿದ ಸಂಗತಿಯನ್ನು ತಿಳಿಸಿ, ರಾಮನ ಸಂಹಾರ ಮಾಡುವೆನೆಂದು ರಾವಣ ಹೇಳಿದಾಗ ಅದು ಅಸಾಧ್ಯವಾಗಬಹುದೇನೋ ಎಂದ ಅಕಂಪನ ಸೀತೆಯ ಸೌಂದರ್ಯವನ್ನು ವರ್ಣನೆ ಮಾಡಿ 'ಸೀತಾಪಹಾರ ಮಾಡಿದರೆ ಸೀತಾವಿರಹದಿಂದ ರಾಮ ಬದುಕಲಾರ' ಎಂದು ಸಲಹೆಯಿತ್ತ.

ರಾವಣ ಮಾರೀಚನ ಆಶ್ರಮಕ್ಕೆ ತೆರಳಿದ. ಅವನ ಸತ್ಕಾರವನ್ನು ಸ್ವೀಕರಿಸಿದ. ತನ್ನ ಸೀತಾಪಹಾರದ ಸಂಕಲ್ಪವನ್ನು ತಿಳಿಸಿದ. ಮಾರೀಚ, ರಾವಣನಿಗೆ 'ಈ ಕೆಟ್ಟ ಸಲಹೆ ಕೊಟ್ಟು ನಿನ್ನ ತಲೆ ಕೆಡಿಸಿದವರು ಯಾರು ? ಶ್ರೀರಾಮನ ಪರಾಕ್ರಮದ ಸಾಕಾರ ರೂಪವೆಂಬುದನ್ನು ವಿವರವಾಗಿ ತಿಳಿಸಿ ಲಂಕೆಗೆ ಹೋಗಿ ಪತ್ನಿಯೊಡನೆ ಸುಖವಾಗಿ ಮಲಗು' ಎಂದ.

ಮಾರೀಚನ ಮಾತು ಕೇಳಿ ರಾವಣ ಲಂಕೆಗೆ ಹಿಂತಿರುಗಿದ.

❖

ರಾವಣಖರವೃತ್ತೋಪಲಂಭಃ

ತ್ವರಮಾಣಸ್ತತೋ ಗತ್ವಾ ಜನಸ್ಥಾನಾದಕಂಪನಃ ।
ಪ್ರವಿಶ್ಯ ಲಂಕಾಂ ವೇಗೇನ ರಾವಣಂ ವಾಕ್ಯಮಬ್ರವೀತ್ ॥೧॥

ಅಕಂಪನ ಆ ಜನಸ್ಥಾನದಿಂದ ಅವಸರವಸರವಾಗಿ ಹೊರಟು ವೇಗದಿಂದ ಲಂಕೆಯನ್ನು ಪ್ರವೇಶಿಸಿ ರಾವಣನಿಗೆ ಈ ಮಾತನ್ನು ಹೇಳಿದನು.

ಜನಸ್ಥಾನಸ್ಥಿತಾ ರಾಜನ್ ರಾಕ್ಷಸಾ ಬಹವೋ ಹತಾಃ ।
ಖರಶ್ಚ ನಿಹತಃ ಸಂಖ್ಯೇ ಕಥಂಚಿದಹಮಾಗತಃ ॥೨॥

ರಾಜನೇ ! ಜನಸ್ಥಾನದಲ್ಲಿದ್ದ ರಕ್ಕಸರೆಲ್ಲ ಹತರಾದರು. ಯುದ್ಧದಲ್ಲಿ ಖರನೂ ಸತ್ತ. ನಾನು ಹೇಗೋ ತಪ್ಪಿಸಿಕೊಂಡು ಬಂದೆ !

ಏವಮುಕ್ತೋ ದಶಗ್ರೀವಃ ಕ್ರುದ್ಧಃ ಸಂರಕ್ತಲೋಚನಃ ।
ಅಕಂಪನಮುವಾಚೇದಂ ನಿರ್ದಹನ್ನಿವ ಚಕ್ಷುಷಾ ॥೩॥

ಹೀಗೆ ಹೇಳಿಸಿಕೊಂಡ ರಾವಣ ಕ್ರುದ್ಧನಾಗಿ ಕಣ್ಣು ಕೆಂಪಗೆ ಮಾಡಿಕೊಂಡು ಸುಡುವಂತೆ ನೋಡುತ್ತ ಅಕಂಪನನಿಗೆ ಹೇಳಿದ.

ಕೇನ ರಮ್ಯಂ ಜನಸ್ಥಾನಂ ಹತಂ ಮಮ ಪರಾಸುನಾ ।
ಕೋ ಹಿ ಸರ್ವೇಷು ಲೋಕೇಷು ಗತಿಂ ನಾಧಿಗಮಿಷ್ಯತಿ ॥೪॥

ಪರಾಧೀನಪ್ರಾಣನಾದ ಯಾವನು ರಮ್ಯವಾದ ಜನಸ್ಥಾನವನ್ನು ಹಾಳುಗೆಡ-ವಿದ ? ಅಂತಹವನು ಯಾವ ಲೋಕದಲ್ಲಿ ಆಸರೆ ಪಡೆದಾನು ?

ನ ಹಿ ಮೇ ವಿಪ್ರಿಯಂ ಕೃತ್ವಾ ಶಕ್ಯಂ ಮಘವತಾ ಸುಖಮ್ ।
ಪ್ರಾಪ್ತುಂ ವೈಶ್ರವಣೇನಾಪಿ ನ ಯಮೇನ ನ ವಿಷ್ಣುನಾ ॥೫॥

ನನಗೆ ಅಪ್ರಿಯವನ್ನುಂಟು ಮಾಡಿದವನು ಇಂದ್ರನೇ ಆಗಲಿ ಕುಬೇರನೇ ಆಗಲಿ ಯಮನೇ ಆಗಲಿ ವಿಷ್ಣುವೇ ಆಗಲಿ ಸುಖವಾಗಿರಲು ಸಾಧ್ಯವಿಲ್ಲ.

ಕಾಲಸ್ಯ ಚಾಪ್ಯಹಂ ಕಾಲೋ ದಹೇಯಮಪಿ ಪಾವಕಮ್ ।
ಮೃತ್ಯುಂ ಮರಣಧರ್ಮೇಣ ಸಂಯೋಜಯಿತುಮುತ್ಸಹೇ ॥೬॥

ನಾನು ಕಾಲಕ್ಕೇ ಕಾಲ. ಅಗ್ನಿಯನ್ನು ಸುಡಬಲ್ಲೆ ! ಮೃತ್ಯುವಿಗೂ ಮರಣ ತರಬಲ್ಲೆ !

ದಹೇಯಮಪಿ ಸಂಕ್ರುದ್ಧಸ್ತೇಜಸಾದಿತ್ಯಪಾವಕೌ ।
ವಾತಸ್ಯ ತರಸಾ ವೇಗಂ ನಿಹಂತುಮಹಮುತ್ಸಹೇ ॥೭॥

ನನ್ನ ತೇಜಸ್ಸಿನಿಂದ ಸೂರ್ಯ ಅಗ್ನಿಗಳನ್ನೂ ಸುಡಬಲ್ಲೆ. ಗಾಳಿಯ ವೇಗವನ್ನೂ ತಡೆ ಹಿಡಿಯಬಲ್ಲೆ.

ತಥಾ ಕ್ರುದ್ಧಂ ದಶಗ್ರೀವಂ ಕೃತಾಂಜಲಿರಕಂಪನಃ ।
ಭಯಾತ್ಸಂದಿಗ್ಧಯಾ ವಾಚಾ ರಾವಣಂ ಯಾಚತೇಽಭಯಮ್ ॥೮॥

ಹಾಗೆ ಕ್ರುದ್ಧನಾದ ದಶಗ್ರೀವನನ್ನು, ಕೃತಾಂಜಲಿಯಾಗಿ ಹೆದರಿಕೆಯಿಂದ ಅಸ್ಪಷ್ಟಮಾತಿನಿಂದ ಅಭಯವನ್ನು ಯಾಚಿಸಿದನು.

ದಶಗ್ರೀವೋಽಭಯಂ ತಸ್ಮೈ ಪ್ರದದೌ ರಕ್ಷಸಾಂ ವರಃ ।
ಸ ವಿಸ್ರಬ್ಧೋಽಬ್ರವೀದ್ವಾಕ್ಯಮಸಂದಿಗ್ಧಮಕಂಪನಃ ॥೯॥

ರಾಕ್ಷಸಶ್ರೇಷ್ಠನಾದ ರಾವಣ ಅಭಯವನ್ನು ಕೊಟ್ಟ. ವಿಶ್ವಾಸಗೊಂಡು ಅಕಂಪನ ನಿಸ್ಸಂಶಯವಾಗಿ ಎಲ್ಲವನ್ನು ಹೇಳತೊಡಗಿದ.

ಪುತ್ರೋ ದಶರಥಸ್ಯಾಸ್ತಿ ಸಿಂಹಸಂಹನನೋ ಯುವಾ ।
ರಾಮೋ ನಾಮ ವೃಷಸ್ಕಂಧೋ ವೃತ್ತಾಯತಮಹಾಭುಜಃ ॥೧೦॥

ವೀರಃ ಪೃಥುಯಶಾಃ ಶ್ರೀಮಾನತುಲ್ಯಬಲವಿಕ್ರಮಃ ।
ಹಂತಂ ತೇನ ಜನಸ್ಥಾನಂ ಖರಶ್ಚ ಸಹದೂಷಣಃ ॥೧೧॥

ಸುಂದರಾಂಗರೂಪನು, ಎತ್ತಿನಂಥ ಎತ್ತರದ ಭುಜದವನು. ಉರುಟಾದ ನೀಳವಾದ ತೋಳಿನವನು. ಇಂಥ ರಾಮನೆಂದು ಪ್ರಸಿದ್ಧನಾದ ದಶರಥನ ಪುತ್ರ.

ಶ್ರೀರಾಮನು ವೀರನು ವಿಸ್ತಾರವಾದ ಯಶದವನು, ಕಾಂತಿಯುತನು, ಅತುಲ್ಯಬಲವಿಕ್ರಮನು. ಅವನು ದೂಷಣ ಸಹಿತನಾದ ಖರನನ್ನು ಕೊಂದವನು.

ಅಕಂಪನವಚಃ ಶ್ರುತ್ವಾ ರಾವಣೋ ರಾಕ್ಷಸಾಧಿಪಃ ।
ನಾಗೇಂದ್ರ ಇವ ನಿಃಶ್ವಸ್ಯ ವಚನಂ ಚೇದಮಬ್ರವೀತ್ ॥೧೨॥

ಅಕಂಪನನ ಮಾತು ಕೇಳಿ ರಾಕ್ಷಸಾಧಿಪ ರಾವಣ ಘಟಸರ್ಪದಂತೆ ನಿಟ್ಟುಸಿರು-ಬಿಡುತ್ತ ಈ ಮಾತನ್ನು ಹೇಳಿದನು.

ಸ ಸುರೇಂದ್ರೇಣ ಸಂಯುಕ್ತೋ ರಾಮಃ ಸರ್ವಾಮರೈಃ ಸಹ ।
ಉಪಯಾತೋ ಜನಸ್ಥಾನಂ ಬ್ರೂಹಿ ಕಚ್ಚಿದಕಂಪನ ॥೧೩॥

ಆ ರಾಮನೇನು ಎಲ್ಲ ಅಮರರೊಂದಿಗೆ ಇಂದ್ರನಿಂದ ಕೂಡಿ ಜನಸ್ಥಾನಕ್ಕೆ ಬಂದಿದ್ದನೋ ? ಹೇಳು ಅಕಂಪನ.

ರಾವಣಸ್ಯ ಪುನರ್ವಾಕ್ಯಂ ನಿಶಮ್ಯ ತದಕಂಪನಃ ।
ಆಚಚಕ್ಷೇ ಬಲಂ ತಸ್ಯ ವಿಕ್ರಮಂ ಚ ಮಹಾತ್ಮನಃ ॥೧೪॥

ಆ ರಾವಣನ ಮಾತುಕೇಳಿ ಅಕಂಪನ ಆ ಮಹಾತ್ಮರಾಮನ ಬಲ ವಿಕ್ರಮಗಳನ್ನು ಸ್ಪಷ್ಟವಾಗಿ ತಿಳಿಸಿದನು.

ರಾಮೋ ನಾಮ ಮಹಾತೇಜಾಃ ಶ್ರೇಷ್ಠಃ ಸರ್ವಧನುಷ್ಮತಾಮ್ ।
ದಿವ್ಯಾಸ್ತ್ರಗುಣಸಂಪನ್ನಃ ಪುರಂದರಸಮೋ ಯುಧಿ ॥೧೫॥

ರಾಮನೆಂದರೆ ಮಹಾತೇಜಸ್ವಿ. ಎಲ್ಲ ಬಿಲ್ಲುಗಾರರಿಗಿಂತ ಶ್ರೇಷ್ಠ. ದಿವ್ಯಾಸ್ತ್ರಗಳನ್ನು ಅದರ ಉಪಯೋಗ ಉಪಸಂಹಾರವೆಂಬ ಗುಣಗಳನ್ನು ಅರಿತವನು. ಯುದ್ಧದಲ್ಲಿ ಪುರಂದರನಿಗೆ ಸದೃಶ.

ತಸ್ಯಾನುರೂಪೋ ಬಲವಾನ್ ರಕ್ತಾಕ್ಷೋ ದುಂದುಭಿಸ್ವನಃ ।
ಕನೀಯಾನ್ ಲಕ್ಷ್ಮಣೋ ನಾಮ ಭ್ರಾತಾ ಶಶಿನಿಭಾನನಃ ॥೧೬॥

ಅವನಿಗೆ ಅನುರೂಪನು. ಬಲಶಾಲಿ, ರಕ್ತಾಕ್ಷನು, ದುಂದುಭಿಯಂತಹ ದನಿಯವನು. ಚಂದ್ರನಂಥ ಮೊಗದವನು ರಾಮನ ತಮ್ಮ ಲಕ್ಷ್ಮಣನೆಂದು ಪ್ರಸಿದ್ಧನಾದವನು.

ಸ ತೇನ ಸಹ ಸಂಯುಕ್ತಃ ಪಾವಕೇನಾನಿಲೋ ಯಥಾ ।
ಶ್ರೀಮಾನ್ ರಾಜವರಸ್ತೇನ ಜನಸ್ಥಾನಂ ನಿಪಾತಿತಮ್ ॥೧೭॥

ನೈವ ದೇವಾ ಮಹಾತ್ಮಾನೋ ನಾತ್ರ ಕಾರ್ಯಾ ವಿಚಾರಣಾ ।
ಶರಾ ರಾಮೇಣ ತೂತ್ಸೃಷ್ಟಾ ರುಕ್ಮಪುಂಖಾಃ ಪತತ್ರಿಣಃ ॥೧೮॥

ಸರ್ಪಾಃ ಪಂಚಾನನಾ ಭೂತ್ವಾ ಭಕ್ಷಯಂತಿ ಸ್ಮ ರಾಕ್ಷಸಾನ್ ।
ಯೇನ ಯೇನ ಚ ಗಚ್ಛಂತಿ ರಾಕ್ಷಸಾ ಭಯಕರ್ಶಿತಾಃ ॥೧೯॥

ತೇನ ತೇನ ಸ್ಮ ಪಶ್ಯಂತಿ ರಾಮಮೇವಾಗ್ರತಃ ಸ್ಥಿತಮ್ ।
ಇತ್ಥಂ ವಿನಾಶಿತಂ ತೇನ ಜನಸ್ಥಾನಂ ತವಾನಘ ॥೨೦॥

ಬೆಂಕಿಯೊಡನೆ ಗಾಳಿಯಿರುವಂತೆ ಜೊತೆ ಜೊತೆಯಾಗಿರುವ ತಮ್ಮ ಲಕ್ಷ್ಮಣ-ನೊಡನೆ ಶ್ರೀರಾಮ ಜನಸ್ಥಾನಕ್ಕೆ ಬಂದಿರುವನು. ಆದರೆ ಶ್ರೀರಾಮನೊಬ್ಬನೆ ಜನಸ್ಥಾನದ ರಕ್ಕಸರನ್ನು ಕೊಂದವನು. ಮಹಾತ್ಮರಾದ ಯಾವ ದೇವತೆಗಳು ಅವನೊಡನೆ ಸಹಾಯಕ್ಕೆ ಇರಲಿಲ್ಲ. ಈ ವಿಷಯವನ್ನು ವಿಮರ್ಶೆ ಮಾಡುವುದೇ ಬೇಡ.

ರಾಮನು ವೇಗದಿಂದ ಪ್ರಯೋಗಿಸುತ್ತಿದ್ದ ಬಾಣಗಳು ಐದು ಹೆಡೆಯ ಸರ್ಪ-ಗಳಾಗಿ ರಾಕ್ಷಸರನ್ನು ಕಬಳಿಸುತ್ತಿದ್ದವು. ರಾಮಬಾಣದ ಭಯದಿಂದ ಪೀಡಿತರಾದ ರಾಕ್ಷಸರು ಅದರಿಂದ ಪಾರಾಗಲು ಯಾವ ಯಾವ ಮಾರ್ಗದಿಂದ ಹೋದರೂ ಆಯಾಯಾ ಮಾರ್ಗದಲ್ಲಿ ತಮ್ಮೆದುರು ಧನುಷ್ಪಾಣಿ ರಾಮನನ್ನೇ ಕಾಣುತ್ತಿದ್ದರು.

ಅಕಂಪನವಚಃ ಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ।
ಜನಸ್ಥಾನಂ ಗಮಿಷ್ಯಾಮಿ ಹಂತುಂ ರಾಮಂ ಸಲಕ್ಷ್ಮಣಮ್ ॥೨೧॥

ಅಥೈವಮುಕ್ತೇ ವಚನೇ ಪ್ರೋವಾಚೇದಮಕಂಪನಃ ।
ಶೃಣು ರಾಜನ್ ಯಥಾವೃತ್ತಂ ರಾಮಸ್ಯ ಬಲಪೌರುಷಮ್ ॥೨೨॥

ಅಸಾಧ್ಯಃ ಕುಪಿತೋ ರಾಮೋ ವಿಕ್ರಮೇಣ ಮಹಾಯಶಾಃ ।
ಆಪಗಾಯಾಃ ಸುಪೂರ್ಣಾಯಾ ವೇಗಂ ಪರಿಹರೇಚ್ಛರೈಃ ॥೨೩॥

ಸತಾರಗ್ರಹನಕ್ಷತ್ರಂ ನಭಶ್ಚಾಪ್ಯವಸಾದಯೇತ್ ।
ಅಸೌ ರಾಮಸ್ತು ಮಜ್ಜಂತೀಂ ಶ್ರೀಮಾನಭ್ಯುದ್ಧರೇನ್ಮಹೀಮ್ ॥೨೪॥

ಭಿತ್ತ್ವಾ ವೇಲಾಂ ಸಮುದ್ರಸ್ಯ ಲೋಕಾನಾಪ್ಲಾವಯೇದ್ವಿಭುಃ ।
ವೇಗಂ ವಾಪಿ ಸಮುದ್ರಸ್ಯ ವಾಯುಂ ವಾ ವಿಧಮೇಚ್ಛರೈಃ ॥೨೫॥

ಸಂಹೃತ್ಯ ವಾ ಪುನರ್ಲೋಕಾನ್ ವಿಕ್ರಮೇಣ ಮಹಾಯಶಾಃ ।
ಶಕ್ತಃ ಸ ಪುರುಷವ್ಯಾಘ್ರಃ ಸ್ರಷ್ಟುಂ ಪುನರಪಿ ಪ್ರಜಾಃ ॥೨೬॥

ನ ಹಿ ರಾಮೋ ದಶಗ್ರೀವ ಶಕ್ಯೋ ಜೇತುಂ ತ್ವಯಾ ಯುಧಿ ।
ರಕ್ಷಸಾಂ ವಾಪಿ ಲೋಕೇನ ಸ್ವರ್ಗಃ ಪಾಪಜನೈರಿವ ॥೨೭॥

ನ ತಂ ವಧ್ಯಮಹಂ ಮನ್ಯೇ ಸರ್ವೈರ್ದೇವಾಸುರೈರಪಿ ।
ಅಯಂ ತಸ್ಯ ವಧೋಪಾಯಸ್ತಂ ಮಮೈಕಮನಾಃ ಶೃಣು ॥೨೮॥

ಪಾಪರಹಿತನೇ ! ಹೀಗೆ ಶ್ರೀರಾಮನಿಂದ ಜನಸ್ಥಾನವು ವಿನಾಶಿತವಾಯಿತು.

ಅಕಂಪನನ ಮಾತು ಕೇಳಿ ರಾವಣ ಹೇಳಿದ- 'ಲಕ್ಷ್ಮಣನ ಸಹಿತನಾದ ರಾಮನನ್ನು ಕೊಲ್ಲಲು ಈಗಲೇ ಜನಸ್ಥಾನಕ್ಕೆ ಹೊರಡುತ್ತೇನೆ'.

ರಾವಣ ಹೀಗೆ ಹೇಳಿದಾಗ ಅಕಂಪನ ಈ ಮಾತನ್ನು ಹೇಳಿದನು.

-ಕೇಳು ರಾವಣ. ರಾಮನ ಬಲಪೌರುಷಗಳು ಹೇಗಿದೆಯೆಂದು.

ಮಹಾಯಶಸ್ವಿ ರಾಮ ಕುಪಿತನಾದರೆ ಯಾರೂ ಪರಾಕ್ರಮದಿಂದ ಅವನನ್ನು ಜಯಿಸಲು ಸಾಧ್ಯವಿಲ್ಲ.

ತುಂಬು ನದಿಯ ವೇಗವನ್ನು ಬಾಣಗಳಿಂದಲೆ ತಡೆಯಬಲ್ಲ ! ತಾರಾಗ್ರಹ-ನಕ್ಷತ್ರಗಳಿಂದ ಕೂಡಿದ ನಭೋ ಮಂಡಲವನ್ನೇ ಸುಡಬಲ್ಲ ! ಮುಳುಗುತ್ತಿರುವ ಭೂಮಿಯನ್ನೇ ಎತ್ತಿಡಬಲ್ಲ ! ಸಮುದ್ರದ ದಡವನ್ನೆ ಒಡೆದು ಲೋಕಗಳನ್ನೇ ಮುಳುಗಿಸಿಬಿಡಬಲ್ಲ !

ವಾಯುವೇಗವನ್ನು, ಸಮುದ್ರದ ವೇಗವನ್ನೇ ಬಾಣಗಳಿಂದ ತಡೆಯಬಲ್ಲ ! ಅತುಲ ಪರಾಕ್ರಮದಿಂದ ಎಲ್ಲ ಲೋಕಗಳನ್ನೆಲ್ಲ ಸಂಹಾರಗೊಳಿಸಿ ಮತ್ತೆ ಮೊದಲಿನಂತೆ ಎಲ್ಲ ಪ್ರಜೆಗಳನ್ನು ಸೃಷ್ಟಿ ಮಾಡಬಲ್ಲ !

ದಶಗ್ರೀವ ! ನೀನು ಯುದ್ಧದಲ್ಲಿ ರಾಮನನ್ನು ಗೆಲ್ಲಲು ಸಾಧ್ಯವಿಲ್ಲ. ರಾಕ್ಷಸ ಸಮೂಹದಿಂದಲೂ ಸಾಧ್ಯವಿಲ್ಲ. ಪಾಪಿಗಳಿಗೆ ಸ್ವರ್ಗಕ್ಕೆ ಹೋಗಲು ಸಾಧ್ಯವಿಲ್ಲದಂತೆ ಎಲ್ಲ ದೇವ - ಅಸುರರಿಂದಲು ರಾಮನು ವಧ್ಯನಾಗಬಲ್ಲನೆಂದು ನಾನು ಭಾವಿಸು-ವುದಿಲ್ಲ. ಅವನ ವಧೋಪಾಯವೊಂದಿದೆ. ಏಕಾಗ್ರಚಿತ್ತನಾಗಿ ಕೇಳು.

ಭಾರ್ಯಾ ತಸ್ಯೋತ್ತಮಾ ಲೋಕೇ ಸೀತಾ ನಾಮ ಸುಮಧ್ಯಮಾ ।
ಶ್ಯಾಮಾ ಸಮವಿಭಕ್ತಾಂಗೀ ಸ್ತ್ರೀರತ್ನಂ ರತ್ನಭೂಷಿತಾ ॥೨೯॥

ನೈವ ದೇವೀ ನ ಗಂಧರ್ವಿ ನಾಪ್ಸರಾ ನಾಪಿ ದಾನವೀ ।
ತುಲ್ಯಾ ಸೀಮಂತಿನೀ ತಸ್ಯಾ ಮಾನುಷೀಷು ಕುತೋ ಭವೇತ್ ॥೩೦॥

ತಸ್ಯಾಪಹರ ಭಾರ್ಯಾಂ ತ್ವಂ ಪ್ರಮಥ್ಯ ತು ಮಹಾವನೇ ।
ಸ ತಯಾ ರಹಿತಃ ಕಾಮೀ ರಾಮೋ ಹಾಸ್ಯತಿ ಜೀವಿತಮ್ ॥೩೧॥

ಲೋಕದಲ್ಲಿ ಪ್ರಸಿದ್ಧಳಾದ ಸೀತೆ ಎಂಬುವಳು ರಾಮನ ಹೆಂಡತಿಯಾಗಿದ್ದಾಳೆ. ಸೀತೆ ಸುಂದರ ನಡುವಿನವಳು. ಅವಳು ಶ್ಯಾಮ. ಅಂದರೆ ಯೌವನ ಮಧ್ಯಸ್ಥಳು. ಶೀತಕಾಲದಲ್ಲಿ ಸುಖೋಷ್ಣಕರ ಅಂಗದವಳು. ಬೇಸಿಗೆಯಲ್ಲಿ ಹಿತಶೀತವಾಗುವ ಸರ್ವಾಂಗದವಳು. ಯಾವ ಯಾವ ಅಂಗಗಳು ಎಷ್ಟೆಷ್ಟು ಪ್ರಮಾಣದಲ್ಲಿರಬೇಕೋ ಅಷ್ಟೆಷ್ಟೇ ಪ್ರಮಾಣದಲ್ಲಿರುವಂತಹ ಸಮ-ವಿಭಕ್ತ-ಅಂಗದವಳು. ರತ್ನಾಲಂಕೃತೆ-ಯಾದ ಸ್ತ್ರೀರತ್ನ. ದೇವತಾಸ್ತ್ರೀ, ಗಂಧರ್ವಸ್ತ್ರೀ, ಅಪ್ಸರೆ, ದಾನವಸ್ತ್ರೀ ಇವರಾರು ಅವಳಿಗೆ ಸದೃಶರಲ್ಲ ! ಇನ್ನು ಮಾನುಷ ಸ್ತ್ರೀ ಅವಳಿಗೆ ಸರಿಸಾಟಿಯಾಗಬಲ್ಲಳೇ ?

ರಾಮನ ಆ ಸುಂದರಮಡದಿಯನ್ನು ಜನಾರಣ್ಯಕ್ಕೆ ತೆರಳಿ ಅಪಹರಿಸು. ಅಂತಹ ಲಲಿತಾಂಗಿಯಾದ ಸತಿಯನ್ನು ತೊರೆದು ಕಾಮಿರಾಮ ಬದುಕನ್ನೆ ಕಳೆದುಕೊಳ್ಳುತ್ತಾನೆ !

ಅರೋಚಯತ ತದ್ವಾಕ್ಯಂ ರಾವಣೋ ರಾಕ್ಷಸಾಧಿಪಃ ।
ಚಿಂತಯಿತ್ವಾ ಮಹಾಬಾಹುರಕಂಪನಮುವಾಚ ಹ ॥೩೨॥

ಬಾಢಂ ಕಲ್ಯಂ ಗಮಿಷ್ಯಾಮಿ ಹ್ಯೇಕ ಸಾರಥಿನಾ ಸಹ ।
ಆನಯಿಷ್ಯಾಮಿ ವೈದೇಹೀಮಿಮಾಂ ಹೃಷ್ಟೋ ಮಹಾಪುರೀಮ್॥೩೩॥

ಅಕಂಪನನ ಮಾತು ಇಷ್ಟವಾಯಿತು. ರಾಕ್ಷಸಾಧಿಪ ರಾವಣ ಯೋಚನೆ ಮಾಡಿ ಅಕಂಪನನಿಗೆ ಹೇಳಿದನು.

ಹಾಗೆ ಆಗಲಿ. ನೀನು ಹೇಳಿದಂತೆ ಮಾಡುತ್ತೇನೆ. ನಾಳೆ ಬೆಳಿಗ್ಗೆ ಏಕಾಕಿಯಾಗಿ ಸಾರಥಿಯೊಡನೆ ದಂಡಕಾರಣ್ಯಕ್ಕೆ ಹೋಗಿ ವೈದೇಹಿಯನ್ನು ಈ ಮಹಾನಗರಿಗೆ ಸಂತಸ ತುಂಬಿದವನಾಗಿ ಕರೆ ತರುತ್ತೇನೆ.

ಅಥೈವಮುಕ್ತ್ವಾ ಪ್ರಯಯೌ ಖರಯುಕ್ತೇನ ರಾವಣಃ ।
ರಥೇನಾದಿತ್ಯವರ್ಣೇನ ದಿಶಃ ಸರ್ವಾಃ ಪ್ರಕಾಶಯನ್ ॥೩೪॥

ಸ ರಥೋ ರಾಕ್ಷಸೇಂದ್ರಸ್ಯ ನಕ್ಷತ್ರಪಥಗೋ ಮಹಾನ್ ।
ಸಂಚಾರ್ಯಮಾಣಃ ಶುಶುಭೇ ಜಲದೇ ಚಂದ್ರಮಾ ಇವ ॥೩೫॥

ಸ ಮಾರೀಚಾಶ್ರಮಂ ಪ್ರಾಪ್ಯ ತಾಟಕೇಯಮುಪಾಗಮತ್ ।
ಮಾರೀಚೇನಾರ್ಚಿತೋ ರಾಜಾ ಭಕ್ಷ್ಯಭೋಜ್ಯೈರಮಾನುಷೈಃ ॥೩೬॥

ತಂ ಸ್ವಯಂ ಪೂಜಯಿತ್ವಾ ತು ಆಸನೇನೋದಕೇನ ಚ ।
ಅಥೋಪಹಿತಯಾ ವಾಚಾ ಮಾರೀಚೋ ವಾಕ್ಯಮಬ್ರವೀತ್ ॥೩೭॥

ಬಳಿಕ ಹೀಗೆ ಹೇಳಿ ರಾವಣ ಹೇಸರಕತ್ತೆಗಳಿಂದ ಸಂಯೋಜಿತವಾದ ಸೂರ್ಯ-ನಂತೆ ಬೆಳಗುವ ಬಣ್ಣದ ರಥವೇರಿ ಎಲ್ಲ ದಿಕ್ಕುಗಳನ್ನು ಬೆಳಗುತ್ತ ಹೊರಟನು. ರಾಕ್ಷಸೇಂದ್ರನ ಆ ರಥವು ನಕ್ಷತ್ರಮಾರ್ಗದಲ್ಲಿ ಸಂಚರಿಸುತ್ತ ಮೋಡಗಳ ನಡುವೆ ಚಂದ್ರಮನಂತೆ ಶೋಭಿಸುತ್ತಿತ್ತು. ಆ ರಾವಣನು ತಾಟಕಿಯ ಮಗನಾದ ಮಾರೀಚನ ಆಶ್ರಮಕ್ಕೆ ತೆರಳಿದನು. ಮಾರೀಚನು ಮನುಷ್ಯ ದುರ್ಲಭಗಳಾದ ಭಕ್ಷ್ಯಭೋಜ್ಯ-ಗಳಿಂದ ಉಪಚರಿಸಿದನು. ಮಾರೀಚನು ತಾನೇ ಖುದ್ದಾಗಿ ಆಸನ ಉದಕಗಳಿಂದ ರಾವಣನನ್ನು ಪೂಜಿಸಿದನು. ಬಳಿಕ ಗೂಡಾರ್ಥಯುಕ್ತವಾದ ಮಾತಿನಿಂದ ರಾವಣನ ಬಳಿ ಹೇಳಿದನು.

ಕಚ್ಚಿತ್ ಸುಕುಶಲಂ ರಾಜನ್ ಲೋಕಾನಾಂ ರಾಕ್ಷಸೇಶ್ವರ ।
ಆಶಂಕೇ ನಾಧಿಜಾನೇ ತ್ವಂ ಯತಸ್ತೂರ್ಣಮಿಹಾಗತಃ ॥೩೮॥

ರಾಜನ್ ! ರಾಕ್ಷಸೇಶ್ವರ ! ಲೋಕವೆಲ್ಲ ಕುಶಲವಾಗಿದೆಯಷ್ಟೇ ? ಯಾವ ಪೂರ್ವಸೂಚನೆಯಿಲ್ಲದೆ ಅವಸರವಾಗಿ ನೀನು ಬಂದಿರುವುದರಿಂದ ನನಗೆ ಸಂಶಯ ಬಂದಿದೆ.

ಏವಮುಕ್ತೋ ಮಹಾತೇಜಾ ಮಾರೀಚೇನ ಸ ರಾವಣಃ ।
ತತಃ ಪಶ್ಚಾದಿದಂ ವಾಕ್ಯಮಬ್ರವೀದ್ವಾಕ್ಯಕೋವಿದಃ ॥೩೯॥

ಖರಕ್ಷೋ ಮೇ ಹತಸ್ತಾತ ರಾಮೇಣಾಕ್ಲಿಷ್ಟಕರ್ಮಣಾ ।
ಜನಸ್ಥಾನಮವಧ್ಯಂ ತತ್ ಸರ್ವಂ ಯುಧಿ ನಿಪಾತಿತಮ್ ॥೪೦॥

ತಸ್ಯ ಮೇ ಕುರು ಸಾಚಿವ್ಯಂ ತಸ್ಯ ಭಾರ್ಯಾಪಹಾರಣೇ ।
ರಾಕ್ಷಸೇಂದ್ರವಚಃ ಶ್ರುತ್ವಾ ಮಾರೀಚೋ ವಾಕ್ಯಮಬ್ರವೀತ್ ॥೪೧॥

ಮಹಾತೇಜಸ್ವಿಯಾದ ರಾವಣನಿಗೆ ಮಾರೀಚನಿಂದ ಹೀಗೆ ಹೇಳೋಣವಾಗಲು ವಾಕ್ಯಕೋವಿದನಾದ ರಾವಣನು ಬಳಿಕ ಈ ಮಾತನ್ನು ಹೇಳಿದನು – ಜನಸ್ಥಾನದ ರಕ್ಷಕನಾಗಿದ್ದ ಖರನು ಅನಾಯಾಸವಾಗಿ ಸಾಹಸ ಕರ್ಮಮಾಡಬಲ್ಲ ರಾಮನಿಂದ ಹತನಾದನು. ಅವಧ್ಯವಾಗಿದ್ದ ಜನಸ್ಥಾನವು ಯುದ್ಧದಲ್ಲಿ ರಾಮನಿಂದ ಪೂರ್ಣ ನಾಶವಾಯಿತು. ರಾಮನ ಹೆಂಡತಿಯನ್ನು ಅಪಹಾರ ಮಾಡಬೇಕೆಂದಿದ್ದೇನೆ. ನೀನು ನೆರವು ನೀಡು. ರಾಕ್ಷಸೇಂದ್ರನ ಮಾತು ಕೇಳಿ ಮಾರೀಚ ಮಾತನಾಡಿದನು.

ಆಖ್ಯಾತಾ ಕೇನ ಸೀತಾ ಸಾ ಮಿತ್ರರೂಪೇಣ ಶತ್ರುಣಾ ।
ತ್ವಯಾ ರಾಕ್ಷಸಶಾರ್ದೂಲ ಕೋ ನ ನಂದತಿ ನಿಂದಿತಃ ॥೪೨॥

ಸೀತಾಮಿಹಾನಯಸ್ವೇತಿ ಕೋ ಬ್ರವೀತಿ ಬ್ರವೀಹಿ ಮೇ ।
ರಕ್ಷೋಲೋಕಸ್ಯ ಸರ್ವಸ್ಯ ಕಃ ಶೃಂಗಂ ಛೇತ್ತುಮಿಚ್ಛತಿ ॥೪೩॥

ಪ್ರೋತ್ಸಾಹಯತಿ ಕಶ್ಚ ತ್ವಾಂ ಸ ಹಿ ಶತ್ರುರಸಂಶಯಃ ।
ಆಶೀವಿಷಮುಖಾದ್ದಂಷ್ಟ್ರಾಮುದ್ಧರ್ತುಂ ಚೇಚ್ಛತಿ ತ್ವಯಾ ॥೪೪॥

ಕರ್ಮಣಾ ತೇನ ಕೇನಾಸಿ ಕಾಪಥಂ ಪ್ರತಿಪಾದಿತಃ ।
ಸುಖಸುಪ್ತಸ್ಯ ತೇ ರಾಜನ್ ಪ್ರಹೃತಂ ಕೇನ ಮೂರ್ಧನಿ ॥೪೫॥

ವಿಶುದ್ಧವಂಶಾಭಿಜನಾಗ್ರಹಸ್ತ-
ಸ್ತೇಜೋಮದಃ ಸಂಸ್ಥಿತದೋರ್ವಿಷಾಣಃ ।
ಉದೀಕ್ಷಿತುಂ ರಾವಣ ನೇಹ ಯುಕ್ತಃ
ಸ ಸಂಯುಗೇ ರಾಘವಗಂಧಹಸ್ತೀ ॥೪೬॥

ರಾಕ್ಷಸಶ್ರೇಷ್ಠ ! ಯಾರು ನಿನಗೆ ಸೀತಾಪಹಾರದ ಸಲಹೆ ಕೊಟ್ಟನು ? ಅವನು ನಿಶ್ಚಯವಾಗಿಯೂ ಮಿತ್ರರೂಪದ ಶತ್ರು. ಯಾರೋ ಹಿಂದೆ ನಿನ್ನಿಂದ ಅವಮಾನಿತನಾದವನು ಮಿತ್ರ ರೂಪದಿಂದ ತನ್ನ ಹಗೆತನ ಸಾಧಿಸಿರಬೇಕು.

ಸೀತೆಯನ್ನು ಇಲ್ಲಿಗೆ ತರಲು ಯಾರು ಹೇಳಿದ್ದು ? ಹೇಳೆನಗೆ, ರಾಕ್ಷಸಲೋಕದ ಶಿಖರವನ್ನು ಹಾಳುಗೆಡವಲು ಯಾರು ಬಯಸಿದರು. ಈ ದುಸ್ಸಾಹಸಕ್ಕೆ ನಿನ್ನನ್ನು ಪ್ರೋತ್ಸಾಹಿಸಿದವನು ಯಾರು ? ಅವನು ನಿಸ್ಸಂಶಯವಾಗಿ ನಿನ್ನ ಶತ್ರುವೇ.

ನಿನ್ನಿಂದ ಹಾವಿನ ಮುಖದಿಂದ ಕೈ ಹಾಕಿ ಹಲ್ಲು ಕೀಳಿಸಲು ಬಯಸಿದ್ದಾನೆ ! ಸೀತಾಪಹಾರದಂತಹ ದುರ್ಮಾಗದ ಪ್ರತಿಪಾದನೆ ಮಾಡಿದವರು ಯಾರು ?

ಸುಖವಾಗಿ ಮಲಗಿದ್ದ ನಿನ್ನ ತಲೆಯಲ್ಲಿ ಹೊಡೆದವರಾರು? – ನಿನ್ನ ತಲೆ ಕೆಡಿಸಿದವರಾರು ?

ಯಾವುದರ ಗಂಧದಿಂದ ಇತರ ಗಜಗಳು ಪಲಾಯನ ಮಾಡುತ್ತವೆಯೋ ಅಂತಹ ಗಂಧಹಸ್ತಿ – ಮದ್ದಾನೆ ಶ್ರೀರಾಮ. ಸತ್ಕುಲದಲ್ಲಿ ಜನ್ಮವೆಂಬುದೆ ಈ ರಾಮಗಜದ ಮುಂದಿನ ಸೊಂಡಿಲು. ಪ್ರತಾಪವೆಂಬುದೇ ಮದೋದಕ. ನೀಳ ತೋಳುಗಳೇ ದಂತಗಳು. ಯುದ್ಧದಲ್ಲಿ ರಾಮ ಎಂಬ ಮದ್ದಾನೆಯನ್ನು, ರಾವಣ ! ದಿಟ್ಟಿಸಿ ನೋಡುವುದೂ ಉಚಿತವಲ್ಲ.

ಅಸೌ ರಣಾಂತಃಸ್ಥಿತಿಸಂಧಿವಾಲೋ
ವಿದಗ್ಧರಕ್ಷೋಮೃಗಹಾ ನೃಸಿಂಹಃ ।
ಸುಪ್ತಸ್ತ್ವಯಾ ಬೋಧಯಿತುಂ ನ ಯುಕ್ತಃ
ಶರಾಂಗಪೂರ್ಣೋ ನಿಶಿತಾಸಿದಂಷ್ಟ್ರಃ ॥೪೭॥

ಚಾಪಾವಹಾರೇ ಭುಜವೇಗಪಂಕೇ
ಶರೋರ್ಮಿಮಾಲೇ ಸುಮಹಾಹವೌಘೇ ।
ನ ರಾಮಪಾತಾಲಮುಖೇಽತಿಘೋರೇ
ಪ್ರಸ್ಕಂದಿತುಂ ರಾಕ್ಷಸರಾಜ ಯುಕ್ತಮ್ ॥೪೮॥

ಆ ಶ್ರೀರಾಮ ನೃಸಿಂಹ. ರಣದೊಳಗೆ ನಿಲ್ಲುವ ದಾರ್ಢ್ಯವೆ ಈ ಸಿಂಹದ ಸಂಧಿ ವಾಲ – (ಸಿಂಹವು ಕೋಪಗೊಂಡು ಬೇರೆಡೆಗೆ ಹೊರಟಾಗ ಅದರ ಬಾಲ ನಡುವಿನ ಮೇಲಿರುತ್ತದೆ.) ರಣಕುಶಲ ರಾಕ್ಷಸರೆಂಬ ಮೃಗವನ್ನು ಸದೆಬಡಿಯುವುದು. ಬಾಣಗಳೆಂಬ ಉಗುರು ಮೊದಲಾದ ಅಂಗಗಳಿಂದ ತುಂಬಿದೆ. ತೀಕ್ಷ್ಣಖಡ್ಗವೆ ಇದರ ಕೋರೆದಾಡೆ. ಇಂತಹ ಮಲಗಿರುವ ರಾಮಸಿಂಹವನ್ನು ಎಚ್ಚರಗೊಳಿಸುವುದು ತರವಲ್ಲ.

ಶ್ರೀರಾಮ ಪಾತಾಳದವರೆಗೆ ಹಬ್ಬಿರುವ ಸಾಗರ. ರಾಮನ ಧನುಸ್ಸೆ ಪ್ರಾಣಿ ಪ್ರಾಣಾಪಹಾರಕ ಮೊಸಳೆ. ಬಾಣ ಗ್ರಹಣ – ಸಂಧಾನ – ಮೋಚನಗಳ ವೇಗವೆ ದಾಟಲಾಗದ ಕೆಸರು. ಬಾಣಗಳೇ ಅಲೆಗಳ ಸರಮಾಲೆ. ಮಹಾಯುದ್ಧವೇ ಅಗಾಧಜಲರಾಶಿ. ರಾಕ್ಷಸರಾಜನೇ ! ಇಂತಹ ಅತಿಘೋರವಾದ ರಾಮನೆಂಬ ಪಾತಾಳವಾಸಿ ಸಮುದ್ರದ ಮುಖದಲ್ಲಿ ಬೀಳುವುದು ಉಚಿತವಲ್ಲ !

ಪ್ರಸೀದ ಲಂಕೇಶ್ವರ ರಾಕ್ಷಸೇಂದ್ರ
ಲಂಕಾಂ ಪ್ರಸನ್ನೋ ಭವ ಸಾಧು ಗಚ್ಛ ।
ತ್ವಂ ಸ್ವೇಷು ದಾರೇಷು ರಮಸ್ವ ನಿತ್ಯಂ
ರಾಮಃ ಸಭಾರ್ಯೋ ರಮತಾಂ ವನೇಷು ॥೪೯॥

ಲಂಕೇಶ್ವರ ! ರಾಕ್ಷಸೇಂದ್ರ! ಪ್ರಸನ್ನನಾಗು. ನೆಮ್ಮದಿಯಿಂದ ಲಂಕೆಗೆ ಹಿಂತಿರುಗು. ನೀನು ನಿನ್ನ ಹೆಂಡತಿಯರೊಡನೆ ಸುಖವಾಗಿ ವಿಹರಿಸಿಕೊಂಡಿರು. ರಾಮನು ತನ್ನ ಹೆಂಡತಿಯೊಂದಿಗೆ ವನದಲ್ಲಿ ವಿಹರಿಸಿಕೊಂಡಿರಲಿ.

ಏವಮುಕ್ತೋ ದಶಗ್ರೀವೋ ಮಾರೀಚೇನ ಸ ರಾವಣಃ ।
ನ್ಯವರ್ತತ ಪುರೀಂ ಲಂಕಾಂ ವಿವೇಶ ಚ ಗೃಹೋತ್ತಮಮ್ ॥೫೦॥

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮುವತ್ತೊಂದನೇ ಸರ್ಗ ಮುಗಿಯಿತು.

ಮಾರೀಚನಿಂದ ಹೀಗೆ ಹೇಳಿಸಿಕೊಂಡ ಆ ರಾವಣ ಲಂಕಾಪುರಿಗೆ ಹಿಂತಿರುಗಿದ. ತನ್ನ ಅರಮನೆಯನ್ನು ಪ್ರವೇಶಿಸಿದ.

ಮೂವತ್ತೊಂದನೆಯ ಸರ್ಗ ಮುಗಿಯಿತು.

ದ್ವಾತ್ರಿಂಶಃ ಸರ್ಗಃ

ಕಥಾಸಾರಾಂಶ– ಶೂರ್ಪಣಖೆಯು ತ್ರಿಶಿರಸ್ ಖರ ದೂಷಣಾದಿ ದುರುಳರನ್ನು ಶ್ರೀರಾಮನೊಬ್ಬನೇ ಸಂಹಾರ ಮಾಡಿರುವುದನ್ನು ಕಂಡು ಸಮುದ್ವಿಗ್ನಳಾಗಿ ಗಟ್ಟಿಯಾಗಿ ಅರಚಿದಳು.

ಲಂಕೆಗೆ ಹೋಗಿ ಮಂತ್ರಿಗಳೊಂದಿಗೆ ಕುಳಿತಿದ್ದ ರಾವಣನ ಬಳಿ ತೆರಳಿ ಖರ ದೂಷಣಾದಿಗಳ ವಧೆಯೆಂಬ ಭಯಾನಕ ದುರಂತದ ಸುದ್ದಿ ಹೇಳಲುಪಕ್ರಮಿಸಿದಳು.

❖

ಶೂರ್ಪಣಖೋದ್ಯಮಃ

ತತಃ ಶೂರ್ಪಣಖಾ ದೃಷ್ಟ್ವಾ ಸಹಸ್ರಾಣಿ ಚತುರ್ದಶ ।
ಹತಾನ್ಯೇಕೇನ ರಾಮೇಣ ರಕ್ಷಸಾಂ ಭೀಮಕರ್ಮಣಾಮ್ ॥೧॥

ದೂಷಣಂ ಚ ಖರಂ ಚೈವ ಹತಂ ತ್ರಿಶಿರಸಾ ಸಹ ।
ದೃಷ್ಟ್ವಾ ಪುನರ್ಮಹಾನಾದಂ ನನಾದ ಜಲದೋ ಯಥಾ ॥೨॥

ಸಾ ದೃಷ್ಟ್ವಾ ಕರ್ಮ ರಾಮಸ್ಯ ಕೃತಮನ್ಯೈಃ ಸುದುಷ್ಕರಮ್ ।
ಜಗಾಮ ಪರಮೋದ್ವಿಗ್ನಾ ಲಂಕಾಂ ರಾವಣಪಾಲಿತಾಮ್ ॥೩॥

ಬಳಿಕ ಶೂರ್ಪಣಖೆಯು ಒಬ್ಬನೇ ಒಬ್ಬ ರಾಮನಿಂದ ನಡೆದ ಉಗ್ರಕರ್ಮದ ಹದಿನಾಕುಸಾವಿರ ರಕ್ಕಸರ ಸಂಹಾರ, ತ್ರಿಶಿರಸ್ಸಿನೊಂದಿಗೆ ಖರದೂಷಣಾದಿಗಳ ನಾಶವಾಗಿರುವುದನ್ನು ನೋಡಿ ಮೋಡ ಗುಡುಗುವಂತೆ ಬೊಬ್ಬಿಟ್ಟಳು.

ಶ್ರೀರಾಮನ ಇತರರಿಂದ ಮಾಡಲು ಸಾಧ್ಯವಿಲ್ಲದ ರಕ್ಕಸರ ವಧ ಕರ್ಮವನ್ನು ನೋಡಿ ತುಂಬ ಉದ್ವೇಗಗೊಂಡವಳಾಗಿ ರಾವಣಪಾಲಿತವಾದ ಲಂಕೆಗೆ ತೆರಳಿದಳು.

ಸಾ ದದರ್ಶ ವಿಮಾನಾಗ್ರೇ ರಾವಣಂ ದೀಪ್ತತೇಜಸಮ್ ।
ಉಪೋಪವಿಷ್ಟಂ ಸಚಿವೈರ್ಮರುದ್ಭಿರಿವ ವಾಸವಮ್ ॥೪॥

ಆಸೀನಂ ಸೂರ್ಯಸಂಕಾಶೇ ಕಾಂಚನೇ ಪರಮಾಸನೇ ।
ರುಕ್ಮವೇದಿಗತಂ ಪ್ರಾಜ್ಯಂ ಜ್ವಲಂತಮಿವ ಪಾವಕಮ್ ॥೫॥

ದೇವಗಂಧರ್ವಭೂತಾನಾಮೃಷೀಣಾಂ ಚ ಮಹಾತ್ಮನಾಮ್ ।
ಅಜೇಯಂ ಸಮರೇ ಶೂರಂ ವ್ಯಾತ್ತಾನನಮಿವಾಂತಕಮ್ ॥೬॥

ದೇವಾಸುರವಿಮರ್ದೇಷು ವಜ್ರಾಶನಿಕೃತವ್ರಣಮ್ ।
ಐರಾವತವಿಷಾಣಾಗ್ರೈರುದ್ಧೃಷ್ಟಕಿಣವಕ್ಷಸಮ್ ॥೭॥

ವಿಂಶದ್ಭುಜಂ ದಶಗ್ರೀವಂ ದರ್ಶನೀಯಪರಿಚ್ಛದಮ್ ।
ವಿಶಾಲವಕ್ಷಸಂ ವೀರಂ ರಾಜಲಕ್ಷಣಶೋಭಿತಮ್ ॥೮॥

ಸ್ನಿಗ್ಧವೈಡೂರ್ಯಸಂಕಾಶಂ ತಪ್ತಕಾಂಚನಕುಂಡಲಮ್ ।
ಸುಭುಜಂ ಶುಕ್ಲದಶನಂ ಮಹಾಸ್ಯಂ ಪರ್ವತೋಪಮಮ್ ॥೯॥

ವಿಷ್ಣುಚಕ್ರನಿಪಾತೈಶ್ಚ ಶತಶೋ ದೇವಸಂಯುಗೇ ।
ಅನ್ಯೈಃ ಶಸ್ತ್ರಪ್ರಹಾರೈಶ್ಚ ಮಹಾಯುದ್ಧೇಷು ತಾಡಿತಮ್ ॥೧೦॥

ಆಹತಾಂಗಂ ಸಮಸ್ತೈಶ್ಚ ದೇವಪ್ರಹರಣೈಸ್ತಥಾ ।
ಅಕ್ಷೋಭ್ಯಾಣಾಂ ಸಮುದ್ರಾಣಾಂ ಕ್ಷೋಭಣಂ ಕ್ಷಿಪ್ರಕಾರಿಣಮ್ ॥೧೧॥

ಕ್ಷೇಪ್ತಾರಂ ಪರ್ವತೇಂದ್ರಾಣಾಂ ಸುರಾಣಾಂ ಚ ಪ್ರಮರ್ದನಮ್ ।
ಉಚ್ಚೇತ್ತಾರಂ ಚ ಧರ್ಮಾಣಾಂ ಪರದಾರಾಭಿಮರ್ಶನಮ್ ॥೧೨॥

ಸರ್ವದಿವ್ಯಾಸ್ತ್ರಯೋಕ್ತಾರಂ ಯಜ್ಞವಿಘ್ನಕರಂ ಸದಾ ।
ಪುರೀಂ ಭೋಗವತೀಂ ಪ್ರಾಪ್ಯ ಪರಾಜಿತ್ಯ ಜಹಾರ ಯಃ ।
ಕೈಲಾಸಪರ್ವತಂ ಗತ್ವಾ ವಿಜಿತ್ಯ ನರವಾಹನಮ್ ॥೧೪॥

ವಿಮಾನಂ ಪುಷ್ಪಕಂ ತಸ್ಯ ಕಾಮಗಂ ವೈ ಜಹಾರ ಯಃ ।
ವನಂ ಚೈತ್ರರಥಂ ದಿವ್ಯಂ ನಲಿನೀಂ ನಂದನಂ ವನಮ್ ॥೧೫॥

ವಿನಾಶಯತಿ ಯಃ ಕ್ರೋಧಾದ್ದೇವೋದ್ಯಾನಾನಿ ವೀರ್ಯವಾನ್ ।
ಚಂದ್ರಸೂರ್ಯೌ ಮಹಾಭಾಗಾವುತ್ತಿಷ್ಠಂತೌ ಪರಂತಪೌ ॥೧೬॥

ನಿವಾರಯತಿ ಬಾಹುಭ್ಯಾಂ ಯಃ ಶೈಲಶಿಖರೋಪಮಃ ।
ದಶವರ್ಷಸಹಸ್ರಾಣಿ ತಪಸ್ತಪ್ತ್ವಾ ಮಹಾವನೇ ॥೧೭॥

ಪುರಾ ಸ್ವಯಂಭುವೇ ಧೀರಃ ಶಿರಾಂಸ್ಯುಪಜಹಾರ ಯಃ ।
ದೇವದಾನವಗಂಧರ್ವವಿಶಾಚಪತಗೋರಗೈಃ ॥೧೮॥

ಅಭಯಂ ಯಸ್ಯ ಸಂಗ್ರಾಮೇ ಮೃತ್ಯುತೋ ಮಾನುಷಾದೃತೇ ।
ಮಂತ್ರೈರಭಿಷ್ಟುತಂ ಪುಣ್ಯಮಧ್ವರೇಷು ದ್ವಿಜಾತಿಭಿಃ ॥೧೯॥

ಹವಿರ್ಧಾನೇಷು ಯಃ ಸೋಮಮುಪಹಂತಿ ಮಹಾಬಲಃ ।
ಆಪ್ತಯಜ್ಞಹರಂ ಕ್ರೂರಂ ಬ್ರಹ್ಮಘ್ನಂ ದುಷ್ಟಚಾರಿಣಮ್ ॥೨೦॥

ಕರ್ಕಶಂ ನಿರನುಕ್ರೋಶಂ ಪ್ರಜಾನಾಮಹಿತೇ ರತಮ್ ।
ರಾವಣಂ ಸರ್ವಭೂತಾನಾಂ ಸರ್ವಲೋಕಭಯಾವಹಮ್ ॥೨೧॥

ರಾಕ್ಷಸೀ ಭ್ರಾತರಂ ಶೂರಂ ಸಾ ದದರ್ಶ ಮಹಾಬಲಮ್ ।
ತಂ ದಿವ್ಯವಸ್ತ್ರಾಭರಣಂ ದಿವ್ಯಮಾಲ್ಯೋಪಶೋಭಿತಮ್ ॥೨೨॥

ಆಸನೇ ಸೂಪವಿಷ್ಟಂ ಚ ಕಾಲಕಾಲಮಿವೋದ್ಯತಮ್ ।
ರಾಕ್ಷಸೇಂದ್ರಂ ಮಹಾಭಾಗಂ ಪೌಲಸ್ತ್ಯಕುಲನಂದನಮ್ ॥೨೩॥

ರಾವಣಂ ಶತ್ರುಹಂತಾರಂ ಮಂತ್ರಿಭಿಃ ಪರಿವಾರಿತಮ್ ।
ಅಭಿಗಮ್ಯಾಬ್ರವೀದ್ವಾಕ್ಯಂ ರಾಕ್ಷಸೀ ಭಯವಿಹ್ವಲಾ ॥೨೪॥

ತಮಬ್ರವೀದ್ದೀಪ್ತವಿಶಾಲಲೋಚನಂ
ಪ್ರದರ್ಶಯಿತ್ವಾ ಭಯಮೋಹಮೂರ್ಚ್ಛಿತಾ ।
ಸುದಾರುಣಂ ವಾಕ್ಯಮಭೀತಚಾರಿಣೀ
ಮಹಾತ್ಮನಾ ಶೂರ್ಪಣಖಾ ವಿರೂಪಿತಾ ॥೨೫॥

ಮರುದ್ಗಣಗಳಿಂದ ಕೂಡಿದ ಇಂದ್ರನಂತೆ ಅರಮನೆಯ ಉಪ್ಪರಿಗೆಯಲ್ಲಿ ಸಚಿವರೊಂದಿಗೆ ಎತ್ತರದಲ್ಲಿ ಕುಳಿತಿರುವ ತೇಜಸ್ವಿಯಾದ ರಾವಣನನ್ನು ಶೂರ್ಪಣಖೆಯು ಕಂಡಳು.

ಸೂರ್ಯನಂತೆ ಬೆಳಗುವ ಸಿಂಹಾಸನದಲ್ಲಿ ಕುಳಿತ ರಾವಣ ಸುವರ್ಣಮಯ ವೇದಿಕೆಯಲ್ಲಿ ಆಜ್ಯಾಹುತಿಯಿಂದ ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಶೋಭಿಸುತ್ತಿದ್ದನು.

ಸಮರದಲ್ಲಿ ದೇವಗಂಧರ್ವಭೂತರಿಗೆ ಮಹಾತ್ಮ ಋಷಿಗಳಿಗೂ ಅಜೇಯನು, ಬಾಯ್ತರೆದ ಅಂತಕನಂತೆ ಘೋರನಾದವನು. ದೇವಾಸುರ ಘರ್ಷಣೆಗಳಲ್ಲಿ ಚುಚ್ಚಿದ ವಜ್ರಾಯುಧದ ಚಿಹ್ನೆಯುಳ್ಳವನು. ಐರಾವತದ ದಂತದ ತುದಿಯಿಂದ ಗಾಯವಾದ ವಕ್ಷಃಸ್ಥಲದವನು.

ಇಪತ್ತು ಕೈಗಳವನು. ಹತ್ತು ತಲೆಯವನು. ನೋಡಲು ಸುಂದರವಾದ ಛತ್ರ ಚಾಮರಾದಿ ಅಲಂಕಾರಗಳುಳ್ಳವನು. ವಿಶಾಲ ಎದೆಯವನು. ವೀರನು,

ರಾಜಲಕ್ಷಣ ಸಂಪನ್ನನು. ತನ್ನ ಮೈಯಲ್ಲಿ ತೊಟ್ಟ ನೀಲಾಭರಣದ ಕಾಂತಿಯವನು. ಪುಟಕ್ಕಿಟ್ಟ ಚಿನ್ನದ ಆಭರಣಗಳ ತೊಟ್ಟವನು. ಸುಂದರ ತೋಳಿನವನು. ಬೆಳ್ಳಗಿನ ದಂತಪಂಕ್ತಿಯವನು. ಅಗಲಮುಖದವನು. ಪರ್ವತದಂತೆ ಕಾಣುವ ರಾವಣನನ್ನು ಕಂಡಳು.

ದೇವತೆಗಳೊಂದಿಗೆ ನಡೆದ ಯುದ್ಧದಲ್ಲಿ ನೂರಾರು ಬಾರಿ ವಿಷ್ಣುಚಕ್ರದಿಂದಾದ ಗುರುತು ಅವನ ದೇಹದಲ್ಲಿತ್ತು. ದೊಡ್ಡ ಯುದ್ಧಗಳಲ್ಲಿ ಇತರ ಪ್ರಹರಣಾಸ್ತ್ರಗಳಿಂದ ಪೆಟ್ಟುತಿಂದ ಗುರುತುಗಳಿದ್ದವು. ದೇವತೆಗಳ ಎಲ್ಲ ಬಗೆಯ ಆಯುಧಗಳಿಂದ ಅವನ ಅವಯವಗಳು ಆಹತವಾಗಿದ್ದವು. ಕ್ಷೋಭೆಗೊಳಿಸಲು ಅಸಾಧ್ಯವಾದ ಸಮುದ್ರ-ವನ್ನು ಕ್ಷೋಭೆಗೊಳಿಸುವವನು. ಅಂದುಕೊಂಡ ಕಾರ್ಯವನ್ನು ಕೂಡಲೇ ಮಾಡಿ ಮುಗಿಸುವವನು.

ಶ್ರೇಷ್ಠ ಪರ್ವತಗಳನ್ನೆ ಕಿತ್ತು ಎಸೆಯುವವನು. ದೇವತೆಗಳನ್ನು ಮರ್ದನ ಮಾಡುವವನು. ಧರ್ಮವನ್ನು ಬುಡಮೇಲು ಮಾಡುವವನು. ಪರಸ್ತ್ರೀಯರನ್ನು ಬಲಾತ್ಕರಿಸುವವನು.

ಎಲ್ಲ ಬಗೆಯ ದಿವ್ಯಾಸ್ತ್ರವನ್ನು ಪ್ರಯೋಗಿಸಬಲ್ಲವನು. ಸದಾ ಯಜ್ಞಗಳಿಗೆ ವಿಘ್ನಕಾರಕನು. ಪಾತಾಲದ 'ಭೋಗವತೀ' ಪುರಿಗೆ ನುಗ್ಗಿ ವಾಸುಕಿಯನ್ನು ಪರಾಜಯಗೊಳಿಸಿ, ತಕ್ಷಕನನ್ನು ಸೋಲಿಸಿ ಅವನ ಹೆಂಡತಿಯನ್ನು ಅಪಹರಿಸಿ-ದವನು.

ಕೈಲಾಸ ಪರ್ವತಕ್ಕೆ ಹೋಗಿ ಕುಬೇರನನ್ನು ಸೋಲಿಸಿ, ಬಯಸಿದೆಡೆ ಹೋಗಬಲ್ಲ ಪುಷ್ಪಕವಿಮಾನವನ್ನು ಅಪಹರಿಸಿದವನು. ಕುಬೇರನ 'ಚೈತ್ರರಥ' ವನವನ್ನೂ ಅಲ್ಲಿದ್ದ ಸರೋವರವನ್ನು, ನಂದನವನವನ್ನು ಮತ್ತು ದೇವತೆಗಳ ಅನೇಕ ಉದ್ಯಾನವನ್ನು ಕ್ರೋಧದಿಂದ ನಾಶಗೊಳಿಸಿದ ವೀರ್ಯವಂತನು. ಕ್ರೋಧದಿಂದ ಪರಂತಪರೂ, ಮಹಾಭಾಗ್ಯವಂತರು ಆದ ಉದಯಿಸುತ್ತಿರುವ ಚಂದ್ರಸೂರ್ಯರನ್ನೆ ಬಾಹುಗಳಿಂದ ತಡೆಯುವವನು.

ಹಿಂದೆ ಮಹಾವನದಲ್ಲಿ ಹತ್ತು ಸಾವಿರ ವರ್ಷ ತಪಸ್ಸು ಮಾಡಿ ಬ್ರಹ್ಮನಿಗೆ ತನ್ನ ತಲೆಯನ್ನೆ ಕಡಿದು ಅರ್ಪಿಸಿದ ಧೀರ. ಮನುಷ್ಯರ ಹೊರತು ದೇವ-ದಾನವ-ಗಂಧರ್ವ-ಪಿಚಾಚ-ಹಕ್ಕಿ-ಹಾವುಗಳಿಂದ ಸಂಗ್ರಾಮದಲ್ಲಿ ಭಯ-ಮರಣಗಳು ಬಾರದಿರಲೆಂದು ವರ ಪಡೆದವನು.

ಮಹಾಬಲಿಷ್ಠನಾದ ರಾವಣನು ಸೋಮಸವನಯಜ್ಞಗಳಲ್ಲಿ ಬ್ರಾಹ್ಮಣರಿಂದ ವೇದಮಂತ್ರೋಚ್ಚಾರಪುರಸ್ಸರವಾಗಿ ತೆಗೆದ ಸೋಮರಸವನ್ನು ಹಾಳುಗೆಡವವನು.

ಸಮಾಪ್ತಗೊಳ್ಳುತ್ತಿದ್ದ ಯಾಗಗಳನ್ನು ಹಾಳುಗೆಡವುವನು. ಬ್ರಾಹ್ಮಣರ ಹತ್ಯೆ ಮಾಡುವವನು. ಕೆಟ ನಡೆಯವನು. ಕರ್ಕಶನು, ನಿರ್ದಯನು, ಪ್ರಜೆಗಳಿಗೆ ಅಹಿತ ಮಾಡುವುದರಲ್ಲಿ ಆಸಕ್ತನು.

ಎಲ್ಲ ಜೀವರನ್ನು ಅಳಿಸುತ್ತಿದ್ದ ಸರ್ವಲೋಕಭಯಂಕರನು ಆದ ಇಂಥ ಶೂರ ಅಣ್ಣ ರಾವಣನನ್ನು ಶೂರ್ಪಣಖಿ ಕಂಡಳು.

ದಿವ್ಯವಸ್ತ್ರಾಭರಣ, ದಿವ್ಯಮಾಲೆಗಳಿಂದ ಭೂಷಿತನಾಗಿ ಆಸನದಲ್ಲಿ ಕುಳಿತವನು. ಮೃತ್ಯುವಿಗೆ ಕೂಡ ಮೃತ್ಯುವಂತಿರುವವನು. ಪೌಲಸ್ತ್ಯಕುಲನಂದನನು. ಮಹಾ-ಭಾಗ್ಯವಂತನು, ರಾಕ್ಷಸೇಂದ್ರನು ಶತ್ರು ಸಂಹಾರಕನು, ಮಂತ್ರಿಗಳಿಂದ ಪರಿವೃತನು ಆದ ರಾವಣನನ್ನು ಸಮೀಪಿಸಿ ಭಯದಿಂದ ವಿಹ್ವಲಳಾದ ರಾಕ್ಷಸಿ ಶೂರ್ಪಣಖೆಯು ಮಾತನಾಡಿದಳು.

ನಿರ್ಭಯಳಾಗಿ ಎಲ್ಲೆಡೆ ಸಂಚರಿಸುವ ಸ್ವಭಾವದವಳಾದ ರಕ್ಕಸಿಯು ಈಗ ಭಯ ಮೋಹಗಳಿಂದ ತತ್ತರಿಸಿದವಳಾಗಿ ಬೆಳಗುವ ವಿಶಾಲನೇತ್ರನಾದ ರಾವಣನಿಗೆ ಮಹಾತ್ಮ ಲಕ್ಷ್ಮಣನಿಂದ ವಿರೂಪಗೊಳಿಸಲ್ಪಟ್ಟ ತನ್ನ ಸ್ಥಿತಿಯನ್ನು ತೋರಿಸಿ ಉಗ್ರವಾದ ಮಾತುಗಳನ್ನಾಡಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★

ತ್ರಯಸ್ತ್ರಿಂಶಃ ಸರ್ಗಃ

ಕಥಾಸಾರಾಂಶ– ದೀನಳಾದ ಶೂರ್ಪಣಖೆಯು ಅಮಾತ್ಯರ ಮಧ್ಯದಲ್ಲಿದ್ದ ರಾವಣನನ್ನು ನೋಡಿ ಉಗ್ರವಾಗಿ ಗದರಿದಳು – ಕಾಮಭೋಗಗಳಲ್ಲಿ ಮುಳುಗಿ ಮೈಮರೆತು ಅವಶ್ಯವಾಗಿ ತಿಳಿಯಬೇಕಾದ ಭಯದ ಸಂಗತಿಯನ್ನೆ ಅರಿಯದೆ ಮೂರ್ಖನಾಗಿರುವಿ. ಯೋಗ್ಯ ಸಮರ್ಥ ಗೂಢಚಾರರ ಮೂಲಕ ತನ್ನ ದೇಶದ ಸುತ್ತಮುತ್ತ ಏನೇನು ನಡೆಯುತ್ತಿದೆ ಎಂಬುದನ್ನು ಚೆನ್ನಾಗಿ ಅರಿತು ನಿತ್ಯಜಾಗರೂಕ–ನಾಗಿ ಸಮಯೋಚಿತವಾದ ಕರ್ತವ್ಯದಲ್ಲಿ ತೊಡಗದಿರುವ ನೀನು ಹೇಗೆ ರಾಜನೆನಿಸುವಿ ?

ಒಬ್ಬ ರಾಮನು ದಂಡಕಾರಣ್ಯದಲ್ಲಿ ಹದಿನಾಲ್ಕು ಸಾವಿರ ರಕ್ಕಸರೊಂದಿಗೆ ಖರದೂಷಣರನ್ನು ನಾಶ ಮಾಡಿ ಅಲ್ಲಿನ ತಾಪಸ ಮುನಿಗಳ ಕ್ಷೇಮವನ್ನು ಉಂಟು ಮಾಡಿದ್ದಾನೆ.

ಇಂಥ ಘೋರಸಂಗತಿಯನ್ನೆ ಅರಿಯದೆ ಭೋಗಮಗ್ನನಾಗಿರುವೆ ನೀನು. ಅಹಂಕಾರಿಯು, ಆತ್ಮಸಂಭಾವಿತನು, ಕ್ರೋಧಶೀಲನು, ಪ್ರಮತ್ತನು ಆದ ರಾಜನನ್ನು ಸಂಕಟಬಂದಾಗ ಸ್ವಜನರೇ ಕೊಂದುಬಿಡುತ್ತಾರೆ !

ಜನರಿಗೆ ಒಣಗಿದ ಕಟ್ಟಿಗೆಗಳಿಂದ, ಮಣ್ಣ ಹೆಂಟೆಗಳಿಂದ, ಧೂಳಿನಿಂದಲೂ ಪ್ರಯೋಜನವಾಗುತ್ತದೆ. ಆದರೆ ಸ್ಥಾನಭ್ರಷ್ಟನಾದ ರಾಜನಿಂದ ಪ್ರಯೋಜನವಿಲ್ಲ.

ಯಾವ ರಾಜ ಅಪ್ರಮತ್ತನು, ಜಿತೇಂದ್ರಿಯನು, ಕೃತಜ್ಞನು, ಧರ್ಮಶೀಲನು, ಕಣ್ಣುಮುಚ್ಚಿದರೂ ಒಳಗೆ ಜಾಗೃತನಾಗಿರುವನೋ ನಯಕೋವಿದನು ಆದ ಸಮಯೋಚಿತವಾಗಿ ಕ್ರೋಧ ಹಾಗೂ ಪ್ರಸಾದಗಳನ್ನು ತೋರಬಲ್ಲ ರಾಜನು ಬಹುಕಾಲ ಪೂಜ್ಯನಾಗುವನು.

ಇಂಥ ಗುಣಗಳನ್ನು ಹೊಂದಿರದ, ಚಾರಪುರುಷರಿಂದ ದೊಡ್ಡ ದುರಂತದ ವಾರ್ತೆಯನ್ನು ತಿಳಿದಿರದ ನೀನು ಸದ್ಯದಲ್ಲಿಯೇ ಮಹಾವಿಪತ್ತಿಗೊಳಗಾಗುವೆ !

ಹೀಗೆ ತನ್ನ ದೋಷಗಳನ್ನು ಎತ್ತಿ ತೋರಿಸಿದ ತಂಗಿಯ ಮಾತು ಕೇಳಿ ರಾವಣ ಬಹುಕಾಲ ಚಿಂತಿಸಿದನು.

❖

ರಾವಣನಿಂದಾ

ತತಃ ಶೂರ್ಪಣಖಾ ದೀನಾ ರಾವಣಂ ಲೋಕರಾವಣಮ್ ।
ಅಮಾತ್ಯಮಧ್ಯೇ ಸಂಕ್ರುದ್ಧಾ ಪರುಷಂ ವಾಕ್ಯಮಬ್ರವೀತ್ ॥೧॥

ಬಳಿಕ ದೀನಳಾದ ಶೂರ್ಪಣಖೆಯು ಲೋಕವನ್ನೆ ಅಳಿಸುವ ರಾವಣನಿಗೆ ಅಮಾತ್ಯರ ಮಧ್ಯದಲ್ಲಿ ತುಂಬ ಕ್ರೋಧಗೊಂಡವಳಾಗಿ ಕಠೋರವಚನ-ವನ್ನಾಡಿದಳು.

ಪ್ರಮತ್ತಃ ಕಾಮಭೋಗೇಷು ಸ್ವೈರವೃತ್ತೋ ನಿರಂಕುಶಃ ।
ಸಮುತ್ಪನ್ನಂ ಭಯಂ ಘೋರಂ ಬೋದ್ಧವ್ಯಂ ನಾವಬುಧ್ಯಸೇ ॥೨॥

ಕಾಮಭೋಗಗಳಲ್ಲಿ ಪ್ರಮತ್ತನಾಗಿ ಸ್ವೈರಾಚಾರಿಯಾಗಿ ಯಾವ ನಿಯಂತ್ರಣಕ್ಕೂ ಒಳಗಾಗದೆ, ಪ್ರಸಕ್ತವಾದ ಅವಶ್ಯವಾಗಿ ತಿಳಿಯಲೇ ಬೇಕಾದ ಘೋರಭಯದ ಸಂಗತಿಯನ್ನೆ ತಿಳಿದಿಲ್ಲ !

ಸಕ್ತಂ ಗ್ರಾಮ್ಯೇಷು ಭೋಗೇಷು ಕಾಮವೃತ್ತಂ ಮಹೀಪತಿಮ್ ।
ಲುಬ್ಧಂ ನ ಬಹು ಮನ್ಯಂತೇ ಶ್ಮಶಾನಾಗ್ನಿಮಿವ ಪ್ರಜಾಃ ॥೩॥

ಸ್ವಯಂ ಕಾರ್ಯಾಣಿ ಯಃ ಕಾಲೇ ನಾನುತಿಷ್ಠತಿ ಪಾರ್ಥಿವಃ ।
ನ ತು ವೈ ಸಹ ರಾಜ್ಯೇನ ತೈಶ್ಚ ಕಾರ್ಯೈರ್ವಿನಶ್ಯತಿ ॥೪॥

ಅಯುಕ್ತಚಾರಂ ದುರ್ದರ್ಶಮಸ್ವಾಧೀನಂ ನರಾಧಿಪಮ್ ।
ವರ್ಜಯಂತಿ ನರಾ ದೂರಾನ್ನದೀಪಂಕಮಿವ ದ್ವಿಪಾಃ ॥೫॥

ಯೇ ನ ರಕ್ಷಂತಿ ವಿಷಯಮಸ್ವಾಧೀನಾ ನರಾಧಿಪಾಃ ।
ತೇ ನ ವೃದ್ಧ್ಯಾ ಪ್ರಕಾಶಂತೇ ಗಿರಯಃ ಸಾಗರೇ ಯಥಾ ॥೬॥

ಗ್ರಾಮ್ಯ ಭೋಗಗಳಲ್ಲಿ ಆಸಕ್ತನು, ಮನಬಂದಂತೆ ನಡೆಯುವನು, ಲೋಭಿ-ಯಾದ ರಾಜನನ್ನು ಪ್ರಜೆಗಳು ಮನ್ನಿಸುವುದಿಲ್ಲ – ಸ್ಮಶಾನದ ಬೆಂಕಿಯನ್ನು ಹೇಗೋ ಹಾಗೆ.

ಯಾವ ರಾಜ ಮಾಡಬೇಕಾದ ಕರ್ತವ್ಯಗಳನ್ನು ಸಕಾಲದಲ್ಲಿ ಅನುಷ್ಠಾನ-ಗೊಳಿಸುವುದಿಲ್ಲವೋ ಅವನು ತನ್ನ ರಾಜ್ಯ ಹಾಗೂ ಕರ್ತವ್ಯಗಳೊಂದಿಗೆ ನಾಶ-ವಾಗುತ್ತಾನೆ.

ರಾಜ್ಯದ ರಕ್ಷಣೆಗಾಗಿ ಸಮರ್ಥರಾದ ಗೂಢಚಾರರನ್ನು ನೇಮಿಸದೇ ಇರುವ, ಪ್ರಜೆಗಳಿಗೆ ದರ್ಶನ ಕೊಟ್ಟು ಅವರ ಸುಖದುಃಖಗಳನ್ನು ವಿಚಾರಿಸದಿರುವ, ಭೋಗಪರವಶತೆಯಿಂದ ಸ್ವಾಧೀನತೆಯನ್ನು ಕಳೆದುಕೊಂಡಿರುವ ರಾಜನನ್ನು

ಪ್ರಜೆಗಳು ದೂರದಿಂದಲೆ ಬಿಟ್ಟು ಬಿಡುತ್ತಾರೆ. ನದಿಯ ಕೆಸರಿನಿಂದ ಆನೆಗಳು ದೂರದಲ್ಲಿಯೇ ಉಳಿಯುವಂತೆ.

ಸ್ವಾಧೀನತೆಯನ್ನು ಕಳೆದುಕೊಂಡು ದೇಶವನ್ನು ಯಾವ ರಾಜರು ಕಾಪಾಡಿ-ಕೊಳ್ಳುವುದಿಲ್ಲವೋ ಅವರು ಸಾಗರದಲ್ಲಿ ಮುಳುಗಿದ ಪರ್ವತದಂತೆ ತನ್ನ ಅಭ್ಯುದಯದಿಂದ ಬೆಳಗುವುದಿಲ್ಲ.

ಆತ್ಮವದ್ಭಿರ್ವಿಗೃಹ್ಯ ತ್ವಂ ದೇವಗಂಧರ್ವದಾನವೈಃ ।
ಅಯುಕ್ತಚಾರಶ್ಚಪಲಃ ಕಥಂ ರಾಜಾ ಭವಿಷ್ಯಸಿ ॥೭॥

ತ್ವಂ ತು ಬಾಲಸ್ವಭಾವಶ್ಚ ಬುದ್ಧಿಹೀನಶ್ಚ ರಾಕ್ಷಸ ।
ಜ್ಞಾತವ್ಯಂ ತು ನ ಜಾನೀಷೇ ಕಥಂ ರಾಜಾ ಭವಿಷ್ಯಸಿ ॥೮॥

ಜಿತೇಂದ್ರಿಯರಾದ ದೇವಗಂಧರ್ವದಾನವರೊಂದಿಗೆ ದ್ವೇಷ ಕಟ್ಟಿಕೊಂಡಿರುವ, ಗೂಢಚಾರರನ್ನು ಸರಿಯಾಗಿ ನಿಯೋಜಿಸದಿರುವ ಚಪಲನಾದ ರಾಜನೆಂತಾಗುವೆ ? ರಾಕ್ಷಸ ! ನೀನಂತು ಹುಡುಗಾಡಿಕೆಯ ಸ್ವಭಾವದವನು. ಬುದ್ಧಿಯಿಲ್ಲದವನು. ತಿಳಿದಿರಬೇಕಾದ ಸಂಗತಿಗಳನ್ನು ತಿಳಿಯದಿರುವ ನೀನು ಹೇಗೆ ರಾಜನಾಗುವೆ ?

ಯೇಷಾಂ ಚಾರಶ್ಚ ಕೋಶಶ್ಚ ನಯಶ್ಚ ಜಯತಾಂ ವರ ।
ಅಸ್ವಾಧೀನಾ ನರೇಂದ್ರಾಣಾಂ ಪ್ರಾಕೃತೈಸ್ತೇ ಜನೈಃ ಸಮಾಃ ॥೯॥

ಯಸ್ಮಾತ್ ಪಶ್ಯಂತಿ ದೂರಸ್ಥಾನ್ ಸರ್ವಾನರ್ಥಾನ್ನರಾಧಿಪಾಃ ।
ಚಾರೇಣ ತಸ್ಮಾದುಚ್ಯಂತೇ ರಾಜಾನೋ ದೀರ್ಘಚಕ್ಷುಷಃ ॥೧೦॥

ಅಯುಕ್ತಚಾರಂ ಮನ್ಯೇ ತ್ವಾಂ ಪ್ರಾಕೃತೈಃ ಸಚಿವೈರ್ವೃತಮ್ ।
ಸ್ವಜನಂ ತು ಜನಸ್ಥಾನೇ ಹತಂ ಯೋ ನಾವಬುಧ್ಯಸೇ ॥೧೧॥

ಗೆಲ್ಲುಗರಲ್ಲಿ ಶ್ರೇಷ್ಠನೇ ! ಗೂಢಚಾರರು, ಕೋಶ, ನೀತಿ ಯಾವ ರಾಜರ ವಶದಲ್ಲಿರುವುದಿಲ್ಲವೋ ಅಂತಹವರು ಮೂಢ ಜನರಿಗೆ ಸಮಾನರು.

ನರಾಧಿಪತಿಗಳು ಕಣ್ಣಿಗೆ ಕಾಣದ ದೂರದ ವಿಷಯಗಳನ್ನೆಲ್ಲ ಚಾರರ ಮೂಲಕ ತಿಳಿದಿರುತ್ತಾರೆ. ಆದ್ದರಿಂದಲೇ ಅವರನ್ನು ದೀರ್ಘಚಕ್ಷುಗಳು (ದೂರದರ್ಶಿಗಳು) ಎನ್ನುತ್ತಾರೆ.

ಗೂಢಚಾರ ವ್ಯವಸ್ಥೆಯೇ ನಿನ್ನ ಬಳಿ ಇಲ್ಲವೇನೋ ! ಅನ್ನಿಸುತ್ತಿದೆ. ಮೂರ್ಖಸಚಿವರೊಂದಿಗೆ ಕೂಡಿರುವೆ ನೀನು. ಸ್ವಜನರು ಹತರಾದದ್ದು, ಜನಸ್ಥಾನ ನಾಶವಾದದ್ದು ನಿನಗೆ ತಿಳಿದೇ ಇಲ್ಲ !!

ಚತುರ್ದಶ ಸಹಸ್ರಾಣಿ ರಕ್ಷಸಾಂ ಕ್ರೂರಕರ್ಮಣಾಮ್ ।
ಹತಾನ್ಯೇಕೇನ ರಾಮೇಣ ಖರಶ್ಚ ಸಹದೂಷಣಃ ॥೧೨॥

ಋಷೀಣಾಮಭಯಂ ದತ್ತಂ ಕೃತಕ್ಷೇಮಾಶ್ಚ ದಂಡಕಾಃ ।
ಧರ್ಷಿತಂ ಚ ಜನಸ್ಥಾನಂ ರಾಮೇಣಾಕ್ಲಿಷ್ಟಕರ್ಮಣಾ ॥೧೩॥

ತ್ವಂ ತು ಲುಬ್ಧಃ ಪ್ರಮತ್ತಶ್ಚ ಪರಾಧೀನಶ್ಚ ರಾವಣ ।
ವಿಷಯೇ ಸ್ವೇ ಸಮುತ್ಪನ್ನಂ ಭಯಂ ಯೋ ನಾವಬುಧ್ಯಸೇ ॥೧೪॥

ಕ್ರೂರಕರ್ಮದ ಹದಿನಾಲ್ಕು ಸಾವಿರ ರಾಕ್ಷಸರು ಹಾಗೂ ದೂಷಣನೊಂದಿಗೆ ಖರನು ಒಬ್ಬನೇ ಒಬ್ಬ ರಾಮನಿಂದ ಹತರಾದರು !

ಋಷಿಗಳಿಗೆ ಅಭಯಪ್ರದಾನ ಮಾಡಿದ್ದಾನೆ. ಈಗ ದಂಡಕಾರಣ್ಯ ಪ್ರದೇಶಗಳು ಕ್ಷೇಮಂಕರವಾಗಿವೆ. ಅನಾಯಾಸವಾಗಿ ಕಾರ್ಯವನ್ನು ಸಾಧಿಸುವ ಶ್ರೀರಾಮನಿಂದ ಜನಸ್ಥಾನವು ಹಾನಿಗೊಳಗಾಗಿದೆ.

ರಾವಣ ! ನೀನು ಪ್ರಮತ್ತನಾಗಿರುವಿ. ಲೋಭಿಯು ಪರಾಧೀನನೂ ಆಗಿರುವಿ. ನಿನ್ನ ದೇಶದಲ್ಲಿಯೇ ನಡೆದ ಈ ಭಯಂಕರ ದುರಂತವನ್ನೆ ನೀನು ತಿಳಿದಿಲ್ಲ !

ತೀಕ್ಷ್ಣಮಲ್ಪಪ್ರದಾತಾರಂ ಪ್ರಮತ್ತಂ ಗರ್ವಿತಂ ಶಠಮ್ ।
ವ್ಯಸನೇ ಸರ್ವಭೂತಾನಿ ನಾಭಿಧಾವಂತಿ ಪಾರ್ಥಿವಮ್ ॥೧೫॥

ಅತಿಮಾನಿನಮಗ್ರಾಹ್ಯಮಾತ್ಮಸಂಭಾವಿತಂ ನರಮ್ ।
ಕ್ರೋಧನಂ ವ್ಯಸನೇ ಹಂತಿ ಸ್ವಜನೋಽಪಿ ಮಹೀಪತಿಮ್ ॥೧೬॥

ನಾನುತಿಷ್ಠತಿ ಕಾರ್ಯಾಣಿ ಭಯೇಷು ನ ಬಿಭೇತಿ ಚ ।
ಕ್ಷಿಪ್ರಂ ರಾಜ್ಯಾಚ್ಚ್ಯುತೋ ದೀನಸ್ತೃಣೈಸ್ತುಲ್ಯೋ ಭವೇದಿಹ ॥೧೭॥

ಕ್ರೂರಿಯು, ಸೇವಕರಿಗೆ ಅತ್ಯಲ್ಪವೇತನವನ್ನು ನೀಡುವವನು, ಪ್ರಮತ್ತನು, ಗರ್ವಿಷ್ಠನು, ವಂಚಕನು ಆದ ರಾಜನ ಸಂಕಟದ ಸಮಯದಲ್ಲಿ ಯಾರೂ ಕೂಡ ಅವನ ರಕ್ಷಣೆಗೆ ಧಾವಿಸಿ ಬರುವುದಿಲ್ಲ.

ಅತಿ ಅಹಂಕಾರಿಯು, ಸಜ್ಜನರು ಸ್ವೀಕರಿಸಲು ಅನರ್ಹನು, ತನ್ನನ್ನು ತಾನೇ ಸಂಭಾವಿತನೆಂದು ಭಾವಿಸಿರುವವನು, ಕ್ರೋಧಿಯು ಆದ ರಾಜನನ್ನು ಕಷ್ಟಕಾಲದಲ್ಲಿ ಸ್ವಜನರೇ ಕೊಲ್ಲುತ್ತಾರೆ !

ಮಾಡಬೇಕಾದ ಕರ್ತವ್ಯವನ್ನು ಸಕಾಲದಲ್ಲಿ ಮಾಡದವನು, ಹೆದರಬೇಕಾದ ಕಡೆ ಹೆದರದೆ ಇರುವವನು. ಭಯನಿವಾರಣ ಯತ್ನಗಳನ್ನು ಮಾಡದಿರುವ ರಾಜ ಕೂಡಲೆ ರಾಜ್ಯದಿಂದ ಭ್ರಷ್ಟನಾಗಿ ದೀನನು ತೃಣಸಮಾನನೂ ಆಗುತ್ತಾನೆ.

ಶುಷ್ಕೈಃ ಕಾಷ್ಠೈರ್ಭವೇತ್ ಕಾರ್ಯಂ ಲೋಷ್ಟೈರಪಿ ಚ ಪಾಂಸುಭಿಃ ।
ನ ತು ಸ್ಥಾನಾತ್ ಪರಿಭ್ರಷ್ಟೈಃ ಕಾರ್ಯಂ ಸ್ಯಾದ್ವಸುಧಾಧಿಪೈಃ ॥೧೮॥

ಒಣಗಿದಕಟ್ಟಿಗೆಗಳಿಂದ, ಮಣ್ಣಿನ ಹೆಂಟೆಗಳಿಂದ, ಧೂಳುಗಳಿಂದಲೂ ಉಪಯೋಗವಾಗುತ್ತದೆ. ತಮ್ಮ ಸ್ಥಾನದಿಂದ ಪರಿಭ್ರಷ್ಟರಾದ ರಾಜರಿಂದ ಏನೂ ಪ್ರಯೋಜನವಿಲ್ಲ.

ಉಪಭುಕ್ತಂ ಯಥಾ ವಾಸಃ ಸ್ರಜೋ ವಾ ಮೃದಿತಾ ಯಥಾ ।
ಏವಂ ರಾಜ್ಯಾತ್ ಪರಿಭ್ರಷ್ಟಃ ಸಮರ್ಥೋಽಪಿ ನಿರರ್ಥಕಃ ॥೧೯॥

ಉಟ್ಟು ಬಿಚ್ಚಿದ ಬಟ್ಟೆ, ಬಾಡಿಹೋದ ಹೂಮಾಲೆ ಹೇಗೆ ವ್ಯರ್ಥವೋ ಹಾಗೆ ರಾಜ ಪರಿಭ್ರಷ್ಟನಾದ ರಾಜನೂ ಸಮರ್ಥನಾಗಿದ್ದರೂ ನಿಷ್ಪ್ರಯೋಜನನಾಗುತ್ತಾನೆ.

ಅಪ್ರಮತ್ತಶ್ಚ ಯೋ ರಾಜಾ ಸರ್ವಜ್ಞೋ ವಿಜಿತೇಂದ್ರಿಯಃ ।
ಕೃತಜ್ಞೋ ಧರ್ಮಶೀಲಶ್ಚ ಸ ರಾಜಾ ತಿಷ್ಠತೇ ಚಿರಮ್ ॥೨೦॥

ಯಾವ ರಾಜ ಅಪ್ರಮತ್ತನು ಜಿತೇಂದ್ರಿಯನು ಕೃತಜ್ಞನು ಧರ್ಮಶೀಲನು ಆಗಿರುವನೋ ಅಂತಹ ರಾಜ ಕೃತಜ್ಞನು ಚಿರಸ್ಥಾಯಿಯಾಗುವನು.

ನಯನಾಭ್ಯಾಂ ಪ್ರಸುಪ್ತೋಽಪಿ ಜಾಗರ್ತಿ ನಯಚಕ್ಷುಷಾ ।
ವ್ಯಕ್ತಕ್ರೋಧಪ್ರಸಾದಶ್ಚ ಸ ರಾಜಾ ಪೂಜ್ಯತೇ ಜನೈಃ ॥೨೧॥

ಹೊರಗಣ್ಣುಗಳಿಂದ ಮಲಗಿದ್ದರೂ ನೀತಿ ಎಂಬ ಒಳಗಣ್ಣಿನಿಂದ ಜಾಗರೂಕನಾಗಿರುವನೋ, ಸಕಾಲದಲ್ಲಿ ದಂಡನೆಯ ಮೂಲಕ ಕ್ರೋಧವನ್ನೂ, ದಾನದ ಮೂಲಕ ಪ್ರಸನ್ನತೆಯನ್ನು ವ್ಯಕ್ತಪಡಿಸುವನೋ ಅಂತಹ ರಾಜ ಜನರಿಂದ ಪೂಜ್ಯನಾಗುತ್ತಾನೆ.

ತ್ವಂ ತು ರಾವಣ ದುರ್ಬುದ್ಧಿರ್ಗುಣೈರೇತೈರ್ವಿವರ್ಜಿತಃ ।
ಯಸ್ಯ ತೇಽವಿದಿತಶ್ಚಾರೈ ರಕ್ಷಸಾಂ ಸುಮಹಾನ್ ವಧಃ ॥೨೨॥

ರಾವಣ ! ನೀನಾದರೋ ದುರ್ಬುದ್ಧಿಯವನು. ಹಿಂದೆ ತಿಳಿಸಿದ ರಾಜನಿಗಿರಬೇಕಾದ ಸದ್ಗುಣಗಳಿಂದ ವರ್ಜಿತನು. ರಕ್ಕಸರ ಮಹಾಸಂಹಾರವೇ ನಿನಗೆ ಗೂಢಚಾರರ ಮೂಲಕ ತಿಳಿದಿಲ್ಲ ! (ನಿನ್ನ ಅಸಾಮರ್ಥ್ಯ ಗೂಢಚರ್ಯೆಯು ವೈಫಲ್ಯವಿದು).

ಪರಾವಮಂತಾ ವಿಷಯೇಷು ಸಂಗತೋ
ನ ದೇಶಕಾಲಪ್ರವಿಭಾಗತತ್ತ್ವವಿತ್ ।
ಅಯುಕ್ತಬುದ್ಧಿರ್ಗುಣದೋಷನಿಶ್ಚಯೇ
ವಿಪನ್ನರಾಜ್ಯೋ ನಚಿರಾದ್ವಿಪತ್ಸ್ಯಸೇ ॥೨೩॥

ಶತ್ರುಗಳನ್ನು ಉಪೇಕ್ಷಿಸುವವನು. ವಿಷಯಾಸಕ್ತನು, ದೇಶ ಕಾಲಗಳ ವಿಭಾಗಗಳ ಪರಿಜ್ಞಾನವಿರದವನು, ಗುಣ ದೋಷಗಳ ನಿರ್ಧಾರದಲ್ಲಿ ಬುದ್ಧಿಯನ್ನು ತೊಡಗಿಸಿಕೊಳ್ಳದವನು. ಇಂತಹ ನಿನ್ನ ರಾಜ್ಯವು ವಿಪತ್ತಿಗೊಳಗಾಗುತ್ತದೆ. ನೀನೂ ಕೂಡಲೇ ವಿಪತ್ತಿಗೊಳಗಾಗುವಿ.

ಇತಿ ಸ್ವದೋಷಾನ್ ಪರಿಕೀರ್ತಿತಾಂಸ್ತಯಾ
ಸಮೀಕ್ಷ್ಯ ಬುದ್ಧ್ಯಾ ಕ್ಷಣದಾಚರೇಶ್ವರಃ ।
ಧನೇನ ದರ್ಪೇಣ ಬಲೇನ ಚಾನ್ವಿತೋ
ವಿಚಿಂತಯಾಮಾಸ ಚಿರಂ ಸ ರಾವಣಃ ॥೨೪॥

ಹೀಗೆ ತಂಗಿ ಶೂರ್ಪಣಖೆಯು ತನ್ನ ದೋಷಗಳನ್ನು ಹೇಳಿದಾಗ ಧನ, ದರ್ಪ, ಬಲದಿಂದಲೂ ಕೂಡಿದ ರಾಕ್ಷಸೇಶ್ವರನಾದ ರಾವಣನು ಬುದ್ಧಿಯಿಂದ ವಿಚಾರ ಮಾಡಿ ಮುಂದೇನು ಮಾಡಬೇಕೆಂದು ಬಹಳ ಹೊತ್ತು ಚಿಂತಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂವತ್ತಮೂರನೆಯ ಅಧ್ಯಾಯ ಮುಗಿಯಿತು.

❖

ಚತುಸ್ತ್ರಿಂಶಃ ಸರ್ಗಃ

ಕಥಾಸಾರಾಂಶ– ಅಮಾತ್ಯರ ಮಧ್ಯದಲ್ಲಿ ಉಪವಿಷ್ಟನಾದ ರಾವಣ ಶೂರ್ಪಣಖೆಯ ಬಿರುನುಡಿಯನ್ನು ಕೇಳಿ ಕ್ರುದ್ಧನಾಗಿ ಅವಳನ್ನು ಕೇಳಿದನು –

ಯಾರು ರಾಮ ? ಅವನ ಸಾಮರ್ಥ್ಯ ಎಂಥದು ? ಅವನ ರೂಪ ಪರಾಕ್ರಮಗಳು ಎಂಥವು ? ದಂಡಕಾರಣ್ಯಕ್ಕೆ ಏಕೆ ಬಂದ ? ಕ್ರೂರ ಪ್ರಬಲ ರಕ್ಕಸರನ್ನು ಕೊಂದ ಅವನ ಆಯುಧ ಎಂಥದು ?

ಶೂರ್ಪಣಖೆ ಉತ್ತರಿಸಿದಳು – "ದೀರ್ಘಬಾಹು, ವಿಶಾಲಾಕ್ಷ, ಚೀರಕೃಷ್ಣಾಜಿನಧರ, ಕಂದರ್ಪನಂಥ ಚೆಲುವು, ದಶರಥ ಪುತ್ರರಾಮ.

ಅವನು ಬಾಣ ತೆಗೆದುಕೊಳ್ಳುವುದು, ಬಿಲ್ಲಿನಲ್ಲಿ ಹೂಡುವುದು, ಹೆದೆಯನ್ನು ಎಳೆದು ಪ್ರಯೋಗಿಸುವುದು ಯಾವುದನ್ನೂ ನೋಡಲೇ ಸಾಧ್ಯವಾಗಲಿಲ್ಲ.

ಬೆಳೆದ ಸಸ್ಯಗಳು ಇಂದ್ರ ಸುರಿವ ಆಲಿಕಲ್ಲು ಮಳೆಯಿಂದ ಕ್ಷಿಪ್ರವಾಗಿ ನಾಶವಾಗುವಂತೆ ರಾಮ ಬಾಣದ ಮಳೆ ಸುರಿಸಿ ಎಲ್ಲ ರಕ್ಕಸರನ್ನು ಒಂದುವರೆ ಮುಹೂರ್ತದಲ್ಲಿ ಸಂಹರಿಸಿಬಿಟ್ಟ! ನಾನು ಹೇಗೋ ಪಾರಾಗಿ ಬಂದೆ.

ಗುಣ ಪರಾಕ್ರಮಗಳಲ್ಲಿ ಸಮನಾದ ಅವನ ತಮ್ಮ ಲಕ್ಷ್ಮಣ. ಅಣ್ಣನಲ್ಲಿ ಭಕ್ತ, ಅನುರಕ್ತ. ರಾಮನ ಬಲಗೈ. ಅವನು ರಾಮನ ಬಾಹ್ಯಪ್ರಾಣ.

ರಾಮನ ಪ್ರಿಯಪತ್ನೀ ಸೀತೆ. ವನದೇವತೆಯ ಮತ್ತೊಂದು ರೂಪವೇ ಅನಿಸುತ್ತದೆ. ತುಂಬ ಸುಂದರಿ. ಅಂತಹ ಸೌಂದರ್ಯ ತುಂಬಿದ ಹೆಣ್ಣನ್ನು ದೇವ – ಗಂಧರ್ವ – ಯಕ್ಷ – ಕಿನ್ನರರ ಗುಂಪಿನಲ್ಲಿ ನಾನಿದುವರೆಗೂ ಕಂಡಿಲ್ಲ. ಯಾರಿಗೆ ಸೀತೆ ಹೆಂಡತಿಯಾಗು-ತ್ತಾಳೆ. ಹರ್ಷಗೊಂಡು ಸೀತೆ ಯಾರನ್ನು ಆಲಿಂಗಿಸಿಕೊಳ್ಳುತ್ತಾಳೆ. ಆ ಪುಣ್ಯ ಪುರುಷ ಎಲ್ಲ ಲೋಕಗಳಲ್ಲಿಯೂ ಇಂದ್ರನನ್ನೂ ಮೀರಿ ಬದುಕುತ್ತಾನೆ. ಆ ಸುಂದರಹೆಣ್ಣನ್ನು ತಂದು ನಿನ್ನ ಹೆಂಡತಿಯನ್ನಾಗಿ ಮಾಡಬೇಕೆಂದು ಬಯಸಿದೆ. ಅಷ್ಟರಲ್ಲಿ ಕ್ರೂರ ಲಕ್ಷ್ಮಣನಿಂದ ನಾನು ವಿರೂಪಗೊಂಡೆ !

ಅಂಥ ಸೀತೆ ನಿನಗೆ ಹೆಂಡತಿಯಾಗಬೇಕಿದ್ದರೆ ಮುಂದಡಿಯಿಟ್ಟು ಸಿದ್ಧನಾಗು. ತೀಕ್ಷ್ಣಶರಗಳಿಂದ ರಾಮ ಲಕ್ಷ್ಮಣರನ್ನು ಸಂಹರಿಸಿ ಸೀತೆಯನ್ನು ಅಪಹರಿಸಿ ನಿನ್ನವಳನ್ನಾಗಿ ಮಾಡಿಕೋ."

❖

ಸೀತಾಪಹರಣೋಪದೇಶಃ

ತತಃ ಶೂರ್ಪಣಖಾಂ ಕ್ರುದ್ಧಾಂ ಬ್ರುವಂತೀಂ ಪರುಷಂ ವಚಃ ।
ಅಮಾತ್ಯಮಧ್ಯೇ ಸಂಕ್ರುದ್ಧಃ ಪರಿಪಪ್ರಚ್ಛ ರಾವಣಃ ॥೧॥

ಅನಂತರ ಕೋಪಗೊಂಡು ಕಠೋರವಾದ ಮಾತುಗಳನ್ನು ಹೇಳುತ್ತಿರುವ ಶೂರ್ಪಣಖೆಯನ್ನು ನೋಡಿ ಅಮಾತ್ಯರ ಮಧ್ಯದಲ್ಲಿದ್ದ ರಾವಣ ತುಂಬ ಕ್ರುದ್ಧನಾಗಿ ಹೇಳಿದನು.

ಕಶ್ಚ ರಾಮಃ ಕಥಂವೀರ್ಯಃ ಕಿಂರೂಪಃ ಕಿಂಪರಾಕ್ರಮಃ ।
ಕಿಮರ್ಥಂ ದಂಡಕಾರಣ್ಯಂ ಪ್ರವಿಷ್ಟಃ ಸ ದುರಾಸದಮ್ ॥೨॥

ಆಯುಧಂ ಕಿಂ ಚ ರಾಮಸ್ಯ ನಿಹತಾ ಯೇನ ರಾಕ್ಷಸಾಃ ।
ಖರಶ್ಚ ನಿಹತಃ ಸಂಖ್ಯೇ ದೂಷಣಸ್ತ್ರಿಶಿರಾಸ್ತಥಾ ॥೩॥

ಇತ್ಯುಕ್ತಾ ರಾಕ್ಷಸೇಂದ್ರೇಣ ರಾಕ್ಷಸೀ ಕ್ರೋಧಮೂರ್ಚ್ಛಿತಾ ।
ತತೋ ರಾಮಂ ಯಥಾ ತತ್ತ್ವಮಾಖ್ಯಾತುಮುಪಚಕ್ರಮೇ ॥೪॥

ರಾಮ ಯಾರು ? ಅವನ ಬಲ ಎಂಥದು ? ಅವನ ರೂಪ ಪರಾಕ್ರಮಗಳು ಎಂಥವು ? ಅತ್ಯಂತ ದುಸ್ತರವಾದ ದಂಡಕಾರಣ್ಯವನ್ನು ಅವನು ಏಕೆ ಪ್ರವೇಶಿಸಿದ ?

ಯುದ್ಧದಲ್ಲಿ ಖರ ದೂಷಣ ತ್ರಿಶಿರ ಹಾಗೂ ಎಲ್ಲ ರಾಕ್ಷಸರನ್ನು ಸಂಹರಿಸಿದ ಅವನ ಆಯುಧ ಎಂಥದು ?

ಮನೋಹರಾಂಗಿಯೇ ! ಯಾರು ನಿನ್ನನ್ನು ವಿರೂಪಗೊಳಿಸಿದರು ? ಎಲ್ಲವನ್ನು ಸರಿಯಾಗಿ ಹೇಳು.

ರಾಕ್ಷಸೇಂದ್ರನು ಹೀಗೆ ಹೇಳಿದಾಗ ರಾಕ್ಷಸಿಯು ಕ್ರೋಧದಿಂದ ಎಚ್ಚರ ತಪ್ಪಿದಳು. ಬಳಿಕ ರಾಮನನ್ನು ಯಥಾವತ್ತಾಗಿ ನಿರೂಪಿಸಲು ಮುಂದಾದಳು.

ದೀರ್ಘಬಾಹುರ್ವಿಶಾಲಾಕ್ಷಶ್ಚೀರಕೃಷ್ಣಾಜಿನಾಂಬರಃ ।
ಕಂದರ್ಪಸಮರೂಪಶ್ಚ ರಾಮೋ ದಶರಥಾತ್ಮಜಃ ॥೫॥

ಶಕ್ರಚಾಪನಿಭಂ ಚಾಪಂ ವಿಕೃಷ್ಯ ಕನಕಾಂಗದಮ್ ।
ದೀಪ್ತಾನ್ ಕ್ಷಿಪತಿ ನಾರಾಚಾನ್ ಸರ್ಪಾನಿವ ಮಹಾವಿಷಾನ್ ॥೬॥

ನಾದದಾನಂ ಶರಾನ್ ಘೋರಾನ್ನ ಮುಂಚಂತಂ ಶಿಲೀಮುಖಾನ್
ನ ಕಾರ್ಮುಕಂ ವಿಕರ್ಷಂತಂ ರಾಮಂ ಪಶ್ಯಾಮಿ ಸಂಯುಗೇ ॥೭॥

ಹನ್ಯಮಾನಂ ತು ತತ್ ಸೈನ್ಯಂ ಪಶ್ಯಾಮಿ ಶರವೃಷ್ಟಿಭಿಃ ।
ಇಂದ್ರೇಣೇವೋತ್ತಮಂ ಸಸ್ಯಮಾಹತಂ ತ್ವಶ್ಮವೃಷ್ಟಿಭಿಃ ॥೮॥

ರಕ್ಷಸಾಂ ಭೀಮರೂಪಾಣಾಂ ಸಹಸ್ರಾಣಿ ಚತುರ್ದಶ ।
ನಿಹತಾನಿ ಶರೈಸ್ತೀಕ್ಷ್ಣೈಸ್ತೇನೈಕೇನ ಪದಾತಿನಾ ॥೯॥

ಅರ್ಧಾಧಿಕಮುಹೂರ್ತೇನ ಖರಶ್ಚ ಸಹದೂಷಣಃ ।
ಋಷೀಣಾಮಭಯಂ ದತ್ತಂ ಕೃತಕ್ಷೇಮಾಶ್ಚ ದಂಡಕಾಃ ॥೧೦॥

ರಾಮನು ದಶರಥಪುತ್ರನು, ನೀಳ ತೋಳಿನವನು, ವಿಶಾಲನೇತ್ರನು. ನಾರುಮಡಿ ಕೃಷ್ಣಾಜಿನಗಳನ್ನು ತೊಟ್ಟವನು. ಮನ್ಮಥನಂತಹ ರೂಪದವನು.

ಅವನು ಇಂದ್ರ ಧನುಸ್ಸಿನಂತೆ ಇರುವ ಕನಕಭೂಷಿತ ಬಿಲ್ಲು ಹೆದೆಯನ್ನು ಸೆಳೆದು ಮಹಾವಿಷವುಳ್ಳ ಸರ್ಪಗಳಂತೆ ಬೆಳಗುವ ಬಾಣಗಳನ್ನು ಪ್ರಯೋಗಿಸುತ್ತಾನೆ.

ಯುದ್ಧದಲ್ಲಿ ಅವನು ಬಾಣವನ್ನು ತೆಗೆದುಕೊಳ್ಳುವುದನ್ನಾಗಲಿ, ಅವುಗಳನ್ನು ಪ್ರಯೋಗಿಸುವುದನ್ನಾಗಲಿ ಬಿಲ್ಲನ್ನು ಸೆಳೆಯುವುದನ್ನಾಗಲಿ ತಿಳಿಯಲು ಸಾಧ್ಯವಾಗಲೇ ಇಲ್ಲ.

ಇಂದ್ರ ಆಲಿಕಲ್ಲು ಮಳೆ ಸುರಿಸಿ ಸಸ್ಯಗಳನ್ನು ನಾಶಗೊಳಿಸುವಂತೆ ಬಾಣದ ಮಳೆಗಳಿಂದ ಸೈನ್ಯವನ್ನು ನಾಶಮಾಡಿದ್ದನ್ನು ಮಾತ್ರ ನೋಡಿದೆ.

ಭಯಂಕರ ರೂಪದ ಹದಿನಾಲ್ಕು ಸಾವಿರ ರಾಕ್ಷಸರನ್ನು ಹಾಗೂ ಖರದೂಷಣರನ್ನು ನೆಲದಲ್ಲಿ ನಿಂತ ಏಕಾಕಿರಾಮನು ಒಂದೂವರೆ ಮುಹೂರ್ತದಲ್ಲಿ ತೀಕ್ಷ್ಣಬಾಣಗಳಿಂದ ಕೊಂದು ಹಾಕಿದನು. ಋಷಿಗಳಿಗೆ ಅಭಯವಿತ್ತನು. ದಂಡಕಾರಣ್ಯವು ಸುಕ್ಷೇಮವಾಗುವಂತೆ ಮಾಡಿದನು.

ನಾನ್ನೊಬ್ಬಳು ಮಾತ್ರ ಮಹಾತ್ಮ ಶ್ರೀರಾಮನಿಂದ ಸ್ತ್ರೀವಧ ಶಂಕೆಯಿಂದ ವಿರೂಪಗೊಳಿಸಲ್ಪಟ್ಟು ಮುಕ್ತಳಾದೆ.

ಭ್ರಾತಾ ಚಾಸ್ಯ ಮಹಾತೇಜಾ ಗುಣತಸ್ತುಲ್ಯವಿಕ್ರಮಃ ।
ಅನುರಕ್ತಶ್ಚ ಭಕ್ತಶ್ಚ ಲಕ್ಷ್ಮಣೋ ನಾಮ ವೀರ್ಯವಾನ್ ॥೧೨॥

ಅಮಷೀ ದುರ್ಜಯೋ ಜೇತಾ ವಿಕ್ರಾಂತೋ ಬುದ್ಧಿಮಾನ್ ಬಲೀ ।
ರಾಮಸ್ಯ ದಕ್ಷಿಣೋ ಬಾಹುರ್ನಿತ್ಯಂ ಪ್ರಾಣೋ ಬಹಿಶ್ಚರಃ ॥೧೩॥

ಇವನಿಗೊಬ್ಬ ತಮ್ಮ. ಹೆಸರು ಲಕ್ಷ್ಮಣ. ಗುಣ ವಿಕ್ರಮಗಳಿಂದ ಇವನಿಗೆ ಸದೃಶನು. ಅಣ್ಣನಲ್ಲಿ ಅನುರಕ್ತ ಹಾಗೂ ಭಕ್ತ. ವೀರ್ಯವಂತ. ಶತ್ರುಗಳನ್ನು ಸಹಿಸಿದವನು. ಯಾರಿಂದಲೂ ಅವನನ್ನು ಗೆಲ್ಲಲಾಗದು. ಅವನು ಎಲ್ಲರನ್ನೂ ಗೆಲ್ಲುವವನು. ಸಾಹಸಿಗ, ಬುದ್ಧಿವಂತ, ಬಲವಂತ. ರಾಮನಿಗೆ ಬಲಗೈ. ರಾಮನ ಹೊರಗಿರುವ ಪ್ರಾಣದಂತೆ.

ರಾಮಸ್ಯ ತು ವಿಶಾಲಾಕ್ಷೀ ಪೂರ್ಣೇಂದುಸದೃಶಾನನಾ ।
ಧರ್ಮಪತ್ನೀ ಪ್ರಿಯಾ ಭರ್ತುರ್ನಿತ್ಯಂ ಪ್ರಿಯಹಿತೇ ರತಾ ॥೧೪॥

ಸಾ ಸುಕೇಶೀ ಸುನಾಸೋರೂಃ ಸುರೂಪಾ ಚ ಯಶಸ್ವಿನೀ ।
ದೇವತೇವ ವನಸ್ಯಾಸ್ಯ ರಾಜತೇ ಶ್ರೀರಿವಾಪರಾ ॥೧೫॥

ತಪ್ತಕಾಂಚನವರ್ಣಾಭಾ ರಕ್ತತುಂಗನಖೀ ಶುಭಾ ।
ಸೀತಾ ನಾಮ ವರಾರೋಹಾ ವೈದೇಹೀ ತನುಮಧ್ಯಮಾ ॥೧೬॥

ನೈವ ದೇವೀ ನ ಗಂಧರ್ವೀ ನ ಯಕ್ಷೀ ನ ಚ ಕಿಂನರೀ ।
ನೈವಂರೂಪಾ ಮಯಾ ನಾರೀ ದೃಷ್ಟಪೂರ್ವಾ ಮಹೀತಲೇ ॥೧೭॥

ಯಸ್ಯ ಸೀತಾ ಭವೇದ್ಭಾರ್ಯಾ ಯಂ ಚ ಹೃಷ್ಟಾ ಪರಿಷ್ವಜೇತ್ ।
ಅತಿಜೀವೇತ್ ಸ ಸರ್ವೇಷಾಂ ಲೋಕೇಷ್ವಪಿ ಪುರಂದರಾತ್ ॥೧೮॥

ಸಾ ಸುಶೀಲಾ ವಪುಃಶ್ಲಾಘ್ಯಾ ರೂಪೇಣಾಪ್ರತಿಮಾ ಭುವಿ ।
ತವಾನುರೂಪಾ ಭಾರ್ಯಾ ಸ್ಯಾತ್ತ ್ವಂ ಚ ತಸ್ಯಾಸ್ತಥಾ ಪತಿಃ ॥೧೯॥

ತಾಂ ತು ವಿಸ್ತೀರ್ಣಜಘನಾಂ ಪೀನಶ್ರೋಣಿಪಯೋಧರಾಮ್ ।
ಭಾರ್ಯಾರ್ಥೇ ಚ ತವಾನೇತುಮುದ್ಯತಾಹಂ ವರಾನನಾಮ್
ವಿರೂಪಿತಾಸ್ಮಿ ಕ್ರೂರೇಣ ಲಕ್ಷ್ಮಣೇನ ಮಹಾಭುಜ ॥೨೦॥

ಶ್ರೀರಾಮನಿಗೆ ಧರ್ಮಪತ್ನಿಯೋರ್ವಳು ಇರುವಳು. ಅವಳು ವಿಶಾಲಾಕ್ಷಿ. ಪೂರ್ಣಚಂದ್ರನಿಗೆ ಹೋಲುವ ಮುಖದವಳು. ಗಂಡನಿಗೆ ಪ್ರಿಯಳಾದವಳು. ನಿತ್ಯದಲ್ಲಿಯೂ ಗಂಡನಿಗೆ ಪ್ರಿಯವನ್ನು ಹಿತವನ್ನು ಮಾಡುವುದರಲ್ಲಿ ನಿರತಳು.

ಇವಳ ಕೇಶ ಮೂಗು ತೊಡೆ ಎಲ್ಲ ಸುಂದರ. ರೂಪವೂ ಸುಂದರ. ಪ್ರಶಸ್ತ ಯಶಸ್ಸಿನವಳು. ದಂಡಕಾರಣ್ಯದ ದೇವತೆಯಂತಿರುವಳು. ಮತ್ತೊಬ್ಬ ಲಕ್ಷ್ಮಿಯಂತೆ ಇರುವಳು. ಪುಟಕ್ಕಿಟ್ಟ ಚಿನ್ನದಂಥ ಸೊಬಗಿನವಳು. ಕೆಂಪಾಗಿಯೂ ಉನ್ನತ-ವಾಗಿಯೂ ಇರುವ ಉಗುರಿನವಳು. ಶುಭಸ್ವರೂಪಳು. ಬಡನಡುವಿನವಳು, ವಿದೇಹರಾಜನ ಮಗಳು. ಹೆಸರು ಸೀತೆ.

ದೇವ ಗಂಧರ್ವ ಯಕ್ಷ ಕಿನ್ನರ ಸ್ತ್ರೀಯರಲ್ಲಿ ಇಂಥ ಚೆಲುವಿನ ಹೆಣ್ಣನ್ನು ಈ ಭೂಮಿಯಲ್ಲಿ ಈ ಮುಂಚೆ ನಾನು ಕಂಡಿಲ್ಲ.

ಇಂಥ ಸೀತೆ ಯಾರಿಗೆ ಭಾರ್ಯೆಯಾಗಿ ದೊರಕುವಳೋ, ಹರ್ಷಗೊಂಡು ಇವಳು ಯಾರನ್ನು ಅಪ್ಪಿಕೊಳ್ಳುವಳೋ ಅವನು ಎಲ್ಲ ಲೋಕದಲ್ಲಿ ಇಂದ್ರನನ್ನೇ ಮೀರಿಸುವನು !

ಉತ್ತಮ ಶೀಲದವಳು, ಶ್ಲಾಘ್ಯವಾದ ಶರೀರದವಳು. ಈ ಭೂಮಿಯಲ್ಲಿ ಅಪ್ರತಿಮ ಸುಂದರಿ. ಆ ಚೆಲುವೆ ನಿನಗೆ ಅನುರೂಪಳಾದ ಭಾರ್ಯೆ. ನೀನು ಅವಳಿಗೆ ಅನುರೂಪನಾದ ಪತಿ.

ಮಹಾಭುಜನೇ ! ವಿಶಾಲವಾದ ಜಘನಪ್ರದೇಶದವಳು, ಪೀನವಾದ ನಿತಂಬ ಹಾಗೂ ಸ್ತನದವಳು ಆದ ಅವಳನ್ನು ನಿನ್ನ ಹೆಂಡತಿಯನ್ನಾಗಿಸಲು ತರಲು ತೊಡಗಿದ ನನ್ನನ್ನು ಕ್ರೂರನಾದ ಲಕ್ಷ್ಮಣ ವಿರೂಪಗೊಳಿಸಿಬಿಟ್ಟ !

ತಾಂ ತು ದೃಷ್ಟ್ವಾದ್ಯ ವೈದೇಹೀಂ ಪೂರ್ಣಚಂದ್ರನಿಭಾನನಾಮ್ ।
ಮನ್ಮಥಸ್ಯ ಶರಾಣಾಂ ವೈ ತ್ವಂ ವಿಧೇಯೋ ಭವಿಷ್ಯಸಿ ॥೨೧॥

ಯದಿ ತಸ್ಯಾಮಭಿಪ್ರಾಯೋ ಭಾರ್ಯಾರ್ಥೇ ತವ ಜಾಯತೇ ॥೨೨॥

ಶೀಘ್ರಮುದ್ಧ್ರಿಯತಾಂ ಪಾದೋ ಜಯಾರ್ಥಮಿಹ ದಕ್ಷಿಣಃ ।
ಕುರು ಪ್ರಿಯಂ ತಥಾ ತೇಷಾಂ ರಕ್ಷಸಾಂ ರಾಕ್ಷಸೇಶ್ವರ ॥೨೩॥

ವಧಾತ್ತಸ್ಯ ನೃಶಂಸಸ್ಯ ರಾಮಸ್ಯಾಶ್ರಮವಾಸಿನಃ ।
ತಂ ಶರೈರ್ನಿಶಿತೈರ್ಹತ್ವಾ ಲಕ್ಷ್ಮಣಂ ಚ ಮಹಾರಥಮ್ ।
ಹತನಾಥಾಂ ಸುಖಂ ಸೀತಾಂ ಯಥಾವದುಪಭೋಕ್ಷ್ಯಸಿ ॥೨೪॥

ಪೂರ್ಣಚಂದ್ರನಿಗೆ ಸಮವಾದ ಮೊಗದ ಆ ವೈದೇಹಿಯನ್ನು ನೋಡಿ ನೀನು

ಮನ್ಮಥನ ಬಾಣಗಳಿಗೆ ಬಲಿಯಾಗುವಿ ! ಅವಳನ್ನು ಭಾರ್ಯೆಯನ್ನಾಗಿಸಿ ಕೊಳ್ಳುವ ಅಭಿಪ್ರಾಯ ನಿನಗುಂಟಾದರೆ ಕೂಡಲೆ ಬಲಗಾಲು ಮುಂದಿಟ್ಟು ಗೆಲುವಿಗಾಗಿ ಸಿದ್ಧನಾಗು. ರಾಕ್ಷಸೇಶ್ವರ ! ಆಶ್ರಮವಾಸಿಯಾದ ಆ ಕ್ರೂರ ರಾಮನ ಸಂಹಾರದಿಂದ ಸತ್ತ ರಕ್ಕಸರಿಗೆ ಪ್ರಿಯವನ್ನುಂಟಮಾಡು. ಮಹಾರಥ ಲಕ್ಷ್ಮಣನನ್ನೂ ಬಾಣಗಳಿಂದ ಕೊಂದು ನಾಥನನ್ನು ಕಳೆದುಕೊಂಡ ಸೀತೆಯನ್ನು ಸುಖವಾಗಿ ಅನುಭವಿಸು !

ರೋಚತೇ ಯದಿ ತೇ ವಾಕ್ಯಂ ಮಮೈತದ್ರಾಕ್ಷಸೇಶ್ವರ ।
ಕ್ರಿಯತಾಂ ನಿರ್ವಿಶಂಕೇನ ವಚನಂ ಮಮ ರಾವಣ ॥೨೫॥

ವಿಜ್ಞಾಯೇಹಾತ್ಮಶಕ್ತಿಂ ಚ ಹ್ರಿಯತಾಮಬಲಾ ಬಲಾತ್ ।
ಸೀತಾ ಸರ್ವಾನವದ್ಯಾಂಗೀ ಭಾರ್ಯಾರ್ಥೇ ರಾಕ್ಷಸೇಶ್ವರ ॥೨೬॥

ನಿಶಮ್ಯ ರಾಮೇಣ ಶರೈರಜಿಹ್ಮಗೈ-
ರ್ಹತಾನ್ ಜನಸ್ಥಾನಗತಾನ್ನಿಶಾಚರಾನ್ ।
ಖರಂ ಚ ಬುದ್ಧ್ವಾ ನಿಹತಂ ಚ ದೂಷಣಂ
ತ್ವಮತ್ರ ಕೃತ್ಯಂ ಪ್ರತಿಪತ್ತುಮರ್ಹಸಿ ॥೨೭॥

ನನ್ನ ಈ ಮಾತು ನಿನಗೆ ಇಷ್ಟವಾದರೆ ರಾವಣ ನಿಸ್ಸಂಶಯವಾಗಿ ನನ್ನ ಮಾತನ್ನು ನೆರವೇರಿಸು.

ತನ್ನ ಸಾಮರ್ಥ್ಯವನ್ನು ಅರಿತುಕೊಂಡು, ರಾಕ್ಷಸೇಶ್ವರ! ಸರ್ವಾಂಗ ನಿರ್ದೋಷಿಯಾದ ಅಬಲೆ ಸೀತೆಯು ಭಾರ್ಯೆಯಾಗಿಸಲು ಅಪಹರಿಸೋಣವಾಗಲಿ.

ಜನಸ್ಥಾನನಿವಾಸಿಗಳಾದ ರಕ್ಕಸರು ರಾಮನ ತೀಕ್ಷ್ಣಬಾಣಗಳಿಂದ ಹತರಾದುದನ್ನು ಖರ ದೂಷಣರು ಹತರಾದುದನ್ನು ತಿಳಿದು ನಿನ್ನ ಕರ್ತವ್ಯವನ್ನು ನಿರ್ಧರಿಸಲು ಸಮರ್ಥನಾಗಿರುವಿ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂವತ್ತನಾಲ್ಕನೆಯ ಸರ್ಗ ಮುಗಿಯಿತು

★

ಪಂಚತ್ರಿಂಶಃ ಸರ್ಗಃ

ಸರ್ಗದ ಸಾರಾಂಶ– ಶೂರ್ಪಣಖೆ ಹೇಳಿದ ಮೈ ನಿಮಿರೇಳಿಸುವ ಮಾತುಗಳನ್ನು ಕೇಳಿ ರಾವಣನು ಅಮಾತ್ಯರ ಸಲಹೆ ಪಡೆದು, ಮುಂದೆ ಮಾಡಬೇಕಾದ ಕರ್ತವ್ಯಗಳ ಬಗ್ಗೆ ಮನದಲ್ಲಿ ಚೆನ್ನಾಗಿ ವಿಚಾರಮಾಡಿ ಒಂದು ನಿರ್ಧಾರಕ್ಕೆ ಬಂದನು.

ವೇಷ ಮರೆಸಿಕೊಂಡೇ ವಾಹನ ಶಾಲೆಗೆ ಹೋಗಿ ಸಾರಥಿಗೆ ರಥ ತೆಗೆಯಲು ಹೇಳಿದ. ಸುವರ್ಣಭೂಷಿತವಾದ ಪಿಶಾಚದಂತಹ ಮುಖದ ಹೇಸರ ಕತ್ತೆಗಳು ಹೊತ್ತ ಕಾಮಚಾರಿ ರಥವೊಂದನ್ನು ಏರಿ ಆಕಾಶಮಾರ್ಗದಲ್ಲಿ ಸಂಚರಿಸಿದನು.

ಬಗೆ ಬಗೆಯ ಹೂ ಹಣ್ಣು ಹಕ್ಕಿಗಳಿಂದ ತುಂಬಿದ ಹೆಮ್ಮರಗಳಿಂದ ಶೋಭಿಸುತ್ತಿದ್ದ ಅರಣ್ಯ ಪ್ರದೇಶಗಳನ್ನು ದಾಟಿ ಸಮುದ್ರತೀರಕ್ಕೆ ಬಂದ. ಅಲ್ಲಿ ನಾನಾ ಮುನಿಗಳ ಆಶ್ರಮಗಳನ್ನು, ವಿಹರಿಸುತ್ತಿದ್ದ ಅಪ್ಸರೆಯರನ್ನೊಳಗೊಂಡ ಆಶ್ರಮಗಳ ಸುಂದರ ಪರಿಸರದಲ್ಲೆಲ್ಲ ಓಡಾಡಿ ದೊಡ್ಡ ಆಲದ ಮರದ ಬುಡದ ಆಶ್ರಮದಲ್ಲಿದ್ದ ಮಾರೀಚನ ಬಳಿ ಬಂದ. ಮಾರೀಚ ಯಥೋಚಿತ ಸತ್ಕಾರವನ್ನು ನೀಡಿದ. ಮಾರೀಚನಿಂದ ಸತ್ಕೃತನಾದ ರಾವಣ ಅವನೊಂದಿಗೆ ಮಾತಾಡಲು ಆರಂಭಿಸಿದನು.

❖

ಮಾರೀಚಾಶ್ರಮಪುನರ್ಗಮನಮ್

ತತಃ ಶೂರ್ಪಣಖಾವಾಕ್ಯಂ ತಚ್ಛ್ರುತ್ವಾ ರೋಮಹರ್ಷಣಮ್ ।
ಸಚಿವಾನಭ್ಯನುಜ್ಞಾಯ ಕಾರ್ಯಂ ಬುದ್ಧ್ವಾ ಜಗಾಮ ಸಃ ॥೧॥

ತತ್ಕಾರ್ಯಮನುಗಮ್ಯಾಥ ಯಥಾವದುಪಲಭ್ಯ ಚ ।
ದೋಷಾಣಾಂ ಚ ಗುಣಾನಾಂ ಚ ಸಂಪ್ರಧಾರ್ಯ ಬಲಾಬಲಮ್॥೨॥

ಇತಿ ಕರ್ತವ್ಯಮಿತ್ಯೇವ ಕೃತ್ವಾ ನಿಶ್ಚಯಮಾತ್ಮನಃ ।
ಸ್ಥಿರಬುದ್ಧಿಸ್ತತೋ ರಮ್ಯಂ ಯಾನಶಾಲಾಮುಪಾಗಮತ್ ॥೩॥

ಬಳಿಕ ಶೂರ್ಪಣಖೆಯ ರೋಮಾಂಚಕಾರಿ ಮಾತನ್ನು ಕೇಳಿ ಸಚಿವರನ್ನು ಹೋಗಲು ಸಮ್ಮತಿಸಿ ಮುಂದಿನ ಕರ್ತವ್ಯವನ್ನು ತಿಳಿದು ಅಲ್ಲಿಂದ ರಾವಣ ಹೊರಟ.

ತನ್ನ ಮುಂದಿನ ಕಾರ್ಯದ ಬಗ್ಗೆ ಯೋಚಿಸಿ ಗುಣದೋಷಗಳ ಬಲಾಬಲ-ಗಳನ್ನು ವಿಮರ್ಶಿಸಿ ಹೀಗೆ ಮಾಡಬೇಕೆಂದು ಒಂದು ನಿರ್ಧಾರಕ್ಕೆ ಬಂದು ಸ್ಥಿರ ಬುದ್ಧಿಯವನಾಗಿ ರಾವಣನು ವಾಹನಶಾಲೆಯ ಕಡೆಗೆ ಹೊರಟನು.

ಯಾನಶಾಲಾಂ ತತೋ ಗತ್ವಾ ಪ್ರಚ್ಛನ್ನೋ ರಾಕ್ಷಸಾಧಿಪಃ ।
ಸೂತಂ ಸಂಚೋದಯಾಮಾಸ ರಥಃ ಸಂಯೋಜ್ಯತಾಮಿತಿ ॥೪॥

ಏವಮುಕ್ತಃ ಕ್ಷಣೇನೈವ ಸಾರಥಿರ್ಲಘುವಿಕ್ರಮಃ ।
ರಥಂ ಸಂಯೋಜಯಾಮಾಸ ತಸ್ಯಾಭಿಮತಮುತ್ತಮಮ್ ॥೫॥

ಕಾಂಚನಂ ರಥಮಾಸ್ಥಾಯ ಕಾಮಗಂ ರತ್ನಭೂಷಿತಮ್ ।
ಪಿಶಾಚವದನೈರ್ಯುಕ್ತಂ ಖರೈಃ ಕನಕಭೂಷಣೈಃ ॥೬॥

ಮೇಘಪ್ರತಿಮನಾದೇನ ಸ ತೇನ ಧನದಾನುಜಃ ।
ರಾಕ್ಷಸಾಧಿಪತಿಃ ಶ್ರೀಮಾನ್ ಯಯೌ ನದನದೀಪತಿಮ್ ॥೭॥

ಸ ಶ್ವೇತವಾಲವ್ಯಜನಃ ಶ್ವೇತಚ್ಛತ್ರೋ ದಶಾನನಃ ।
ಸ್ನಿಗ್ಧವೈಡೂರ್ಯಸಂಕಾಶಸ್ತಪ್ತಕಾಂಚನಕುಂಡಲಃ ॥೮॥

ವಿಂಶದ್ಭುಜೋ ದಶಗ್ರೀವೋ ದರ್ಶನೀಯಪರಿಚ್ಛದಃ ।
ತ್ರಿದಶಾರಿರ್ಮುನೀಂದ್ರಘ್ನೋ ದಶಶೀರ್ಷ ಇವಾದ್ರಿರಾಟ್ ॥೯॥

ಕಾಮಗಂ ರಥಮಾಸ್ಥಾಯ ಶುಶುಭೇ ರಾಕ್ಷಸೇಶ್ವರಃ ।
ವಿದ್ಯುನ್ಮಂಡಲವಾನ್ ಮೇಘಃ ಸಬಲಾಕ ಇವಾಂಬರೇ ॥೧೦॥

ಯಾರಿಗೂ ತಿಳಿಯದಂತೆ ಪ್ರಚ್ಛನ್ನನಾಗಿ ರಾಕ್ಷಸಾಧಿಪನಾದ ರಾವಣ ವಾಹನ ಶಾಲೆಗೆ ಹೋಗಿ ರಥವನ್ನು ಸಜ್ಜುಗೊಳಿಸೆಂದು ಸೂತನನ್ನು ಪ್ರಚೋದಿಸಿದನು.

ರಾವಣನು ಹೇಳಿದೊಡನೆಯೇ ಕ್ಷಣದಲ್ಲಿ ಚುರುಕು ನಡೆಯ ಸಾರಥಿಯು ಅವನಿಗೆ ಸಮ್ಮತವಾದ ಉತ್ತಮ ರಥವನ್ನು ಸಜ್ಜುಗೊಳಿಸಿದನು.

ರತ್ನಗಳಿಂದ ಅಲಂಕೃತವಾದ ಬಯಸಿದೆಡೆ ಹೋಗಬಲ್ಲ ಪಿಶಾಚ ಮುಖದ ಕಾಂಚನ ಭೂಷಣಗಳಿಂದ ಯುಕ್ತವಾದ ಹೇಸರಕತ್ತೆಗಳಿಂದ ಹೊತ್ತಕಾಂಚನ ರಥವನ್ನು ಏರಿ ಗುಡುಗಿನಂತೆ ಗುಡುಗುವ ಆ ರಥದಿಂದ ಕುಬೇರನ ತಮ್ಮ ರಾಕ್ಷಸಾಧಿಪತಿ ಶ್ರೀಮಾನ್ ರಾವಣನು ನದ ನದಿಗಳ ಪತಿಯಾದ ಸಾಗರದ ತೀರಕ್ಕೆ ಹೋದನು.

ಬಿಳಿಯಾದ ಚಾಮರ, ಬೆಳ್ಗೊಡೆಗಳನ್ನೊಳಗೊಂಡ ವೈಡೂರ್ಯಮಣಿಗೆ ಸದೃಶವಾಗಿ, ಪುಟ್ಟಕ್ಕಿಟ್ಟ ಚಿನ್ನದ ಕುಂಡಲದವನಾಗಿ ಇಪ್ಪತ್ತು ತೋಳುಗಳು, ಹತ್ತು

ಮುಖಗಳನ್ನುಳ್ಳ, ಸುಂದರ ವಸ್ತ್ರವನ್ನು ಧರಿಸಿರುವ, ದೇವತೆಗಳ ಶತ್ರುವಾದ ಮುನಿಶ್ರೇಷ್ಠರನ್ನು ಕೊಂದಿರುವ ರಾವಣನು ಹತ್ತು ಶಿಖರದ ಪರ್ವತರಾಜನಂತಿದ್ದನು. ಕಾಮಗಾಮಿ ರಥವನ್ನು ಏರಿದ ರಾಕ್ಷಸೇಶ್ವರನು ಆಗಸದಲ್ಲಿ ಮಿಂಚುಗೊಂಚಲುಗಳಿಂದ, ಬೆಳ್ಳಕ್ಕಿಗಳಿಂದ ಕೂಡಿದ ಮೋಡವು ಶೋಭಿಸುವಂತೆ ಕಳೆಕಳೆಯಾಗಿ ಹೊಳೆಯುತ್ತಿದ್ದನು.

ಸಶೈಲಂ ಸಾಗರಾನೂಪಂ ವೀರ್ಯವಾನವಲೋಕಯನ್ ।
ನಾನಾಪುಷ್ಪಫಲೈರ್ವೃಕ್ಷೈರನುಕೀರ್ಣಂ ಸಹಸ್ರಶಃ ॥೧೧॥

ಶೀತಮಂಗಲತೋಯಾಭಿಃ ಪದ್ಮಿನೀಭಿಃ ಸಮಂತತಃ ।
ವಿಶಾಲೈರಾಶ್ರಮಪದೈರ್ವೇದಿಮದ್ಭಿರಲಂಕೃತಮ್ ॥೧೨॥

ಕದಲ್ಯಟವಿಸಂಬಾಧಂ ನಾಲಿಕೇರೋಪಶೋಭಿತಮ್ ।
ಸಾಲೈಸ್ತಾಲೈಸ್ತಮಾಲೈಶ್ಚ ಪುಷ್ಪಿತೈಸ್ತರುಭಿರ್ವೃತಮ್ ॥೧೩॥

ಅತ್ಯಂತನಿಯತಾಹಾರೈಃ ಶೋಭಿತಂ ಪರಮರ್ಷಿಭಿಃ ।
ನಾಗೈಃ ಸುಪರ್ಣೈರ್ಗಂಧರ್ವೈಃ ಕಿಂನರೈಶ್ಚ ಸಹಸ್ರಶಃ ॥೧೪॥

ಅಜೈರ್ವೈಖಾನಸೈಧೂಮ್ರೈರ್ವಾಲಖಿಲ್ಯೈರ್ಮರೀಚಿಪೈಃ ।
ಜಿತಕಾಮೈಶ್ಚ ಸಿದ್ಧೈಶ್ಚ ಚಾರಣೈರುಪಶೋಭಿತಮ್ ॥೧೫॥

ದಿವ್ಯಾಭರಣಮಾಲಾಭಿರ್ದಿವ್ಯರೂಪಾಭಿರಾವೃತಮ್ ।
ಕ್ರೀಡಾರತಿವಿಧಿಜ್ಞಾಭಿರಪ್ಸರೋಭಿಃ ಸಹಸ್ರಶಃ ॥೧೬॥

ಸೇವಿತಂ ದೇವಪತ್ನೀಭಿಃ ಶ್ರೀಮತೀಭಿರುಪಾಸಿತಮ್ ।
ದೇನದಾನವಸಂಘೈಶ್ಚ ಚರಿತಂ ತ್ವಮೃತಾಶಿಭಿಃ ॥೧೭॥

ಹಂಸಕ್ರೌಂಚಪ್ಲವಾಕೀರ್ಣಂ ಸಾರಸೈಃ ಸಂಪ್ರಣಾದಿತಮ್ ।
ವೈಡೂರ್ಯಪ್ರಸ್ತರಂ ರಮ್ಯಂ ಸ್ನಿಗ್ಧಂ ಸಾಗರತೇಜಸಾ ॥೧೮॥

ಪಾಂಡರಾಣಿ ವಿಶಾಲಾನಿ ದಿವ್ಯಮಾಲ್ಯಯುತಾನಿ ಚ ।
ತೂರ್ಯಗೀತಾಭಿಜುಷ್ಟಾನಿ ವಿಮಾನಾನಿ ಸಮಂತತಃ ॥೧೯॥

ತಪಸಾ ಜಿತಲೋಕಾನಾಂ ಕಾಮಗಾನ್ಯಭಿಸಂಪತನ್ ।
ಗಂಧರ್ವಾಪ್ಸರಸಶ್ಚೈವ ದದರ್ಶ ಧನದಾನುಜಃ ॥೨೦॥

ಪರಾಕ್ರಮಿ ರಾವಣನು ಶೈಲಗಳಿಂದ ಕೂಡಿದ ಸಾಗರತೀರವನ್ನು ಕಂಡನು. ಸಮುದ್ರತೀರದ ಪ್ರದೇಶವು ಇಷ್ಟು ಸುಂದರವಾಗಿತ್ತು. ಬಗೆ ಬಗೆಯ ಹೂ ಹಣ್ಣುಗಳಿಂದ ಕೂಡಿದ ಸಾವಿರಾರು ವೃಕ್ಷಗಳಿಂದ ಕೂಡಿತ್ತು.

ಶೀತಮಂಗಲ ಸಲಿಲಗಳ ತಾವರೆಯ ಕೊಳಗಳಿದ್ದವು. ಯಜ್ಞವೇದಿಕೆಗಳುಳ್ಳ ವಿಶಾಲ ಆಶ್ರಮಗಳಿಂದ ಸಮಾವೃತವಾಗಿತ್ತು. ಬಾಳೆ ಮರಗಳು, ತೊಗರಿ ಗಿಡಗಳು, ತೆಂಗಿನ ಮರಗಳ ತೋಟಗಳಿದ್ದವು.

ಹೂ ಬಿಟ್ಟಿರುವ ಸಾಲ ತಾಲ ತಮಾಲ ವೃಕ್ಷಗಳು ತುಂಬಿದ್ದವು.

ಸಾವಿರಾರು ನಾಗ-ಗರುಡ - ಗಂಧರ್ವ - ಕಿನ್ನರ - ಅಯೋನಿಜರಾದ ಬ್ರಹ್ಮ ದೇವರ ಉಗುರಿನಿಂದ ಹುಟ್ಟಿದವರಾದ ವೈಖಾನಸರು, ಮಾಪಗೋತ್ರಜರಾದ ಬ್ರಹ್ಮದೇವರ ಕೇಶಗಳಿಂದ ಉತ್ಪನ್ನರಾದ ವಾಲಖಿಲ್ಯರು ಸೂರ್ಯ ಕಿರಣಗಳನ್ನೇ ಕುಡಿಯುವ ಮರೀಚರು ಮುಂತಾದ ಅತ್ಯಂತ ನಿಯತಾಹಾರರಾದ ಜಿತ ಕಾಮರಾದ ಪರಮರ್ಷಿಗಳಿಂದ ಶೋಭಿತವಾಗಿತ್ತು. ಸಿದ್ಧ ಚಾರಣರಿಂದಲು ಕಳೆಗೊಂಡಿತ್ತು.

ದಿವ್ಯ ಮಾಲಾಭರಣಗಳಿಂದ ಕಂಗೊಳಿಪ ದಿವ್ಯರೂಪದ ರತಿಕ್ರೀಡಾವಿಧಾನಗಳ-ನ್ನರಿತ ಸಾವಿರಾರು ಅಪ್ಸರೆಯರಿಂದ ಶೋಭಿತವಾಗಿತ್ತು.

ಕಾಂತಿಯುತರಾದ ದೇವಪತ್ನಿಯರಿಂದ ಕೂಡಿ ಸುಂದರವಾಗಿತ್ತು. ಅಮೃತಾಶನರಾದ ದೇವತಾಸಮುದಾಯಗಳೂ ದಾನವ ಸಮುದಾಯಗಳೂ ಸಂಚರಿಸುವ ಪ್ರದೇಶವಾಗಿತ್ತು.

ಹಂಸ -ಕ್ರೌಂಚ ಮಂಡೂಕ ಸಾರಸ ಪಕ್ಷಿಗಳಿಂದ ಕೂಡಿದ ವೈಡೂರ್ಯ-ಮಯವಾದ ಹಾಸುವುಳ್ಳ ಸಾಗರದ ತೇಜಸ್ಸಿನಿಂದ ಸ್ನಿಗ್ಧಗಳಾದ ಸರೋವರಗಳಿದ್ದವು.

ಬೆಳ್ಳಗೆ ವಿಶಾಲವಾಗಿರುವ ದಿವ್ಯಮಾಲೆಗಳಿಂದ ಕೂಡಿದ ವಾದ್ಯ ಗಾಯನಗಳಿಂದ ತುಂಬಿದ ವಿಮಾನಗಳು ಸುತ್ತಲೂ ಹಾರಾಡುತ್ತಿದ್ದವು. ತಪಸ್ಸಿನಿಂದ ಪುಣ್ಯಲೋಕ-ಗಳನ್ನು ವಶ ಮಾಡಿಕೊಂಡಿರುವವರ ವಿಮಾನಗಳೂ ಸಂಚರಿಸುತ್ತಿದ್ದವು. ಗಂಧರ್ವ ಅಪ್ಸರೆಯರೆಲ್ಲ ತುಂಬಿದ್ದ ಆ ಸುಂದರ ಪ್ರದೇಶವನ್ನು ಕುಬೇರನ ತಮ್ಮ ರಾವಣನು ಕಂಡ.

ನಿರ್ಯಾಸರಸಮೂಲಾನಾಂ ಚಂದನಾನಾಂ ಸಹಸ್ರಶಃ ।
ವನಾನಿ ಪಶ್ಯನ್ ಸೌಮ್ಯಾನಿ ಘ್ರಾಣತೃಪ್ತಿಕರಾಣಿ ಚ ॥೨೧॥

ಅಗರೂಣಾಂ ಚ ಮುಖ್ಯಾನಾಂ ವನಾನ್ಯುಪವನಾನಿ ಚ ।
ತಕ್ಕೋಲಾನಾಂ ಚ ಜಾತ್ಯಾನಾಂ ಫಲಾನಾಂ ಚ ಸುಗಂಧಿನಾಮ್॥೨೨॥

ಪುಷ್ಪಾಣಿ ಚ ತಮಾಲಸ್ಯ ಗುಲ್ಮಾನಿ ಮರಿಚಸ್ಯ ಚ ।
ಮುಕ್ತಾನಾಂ ಚ ಸಮೂಹಾನಿ ಶುಷ್ಯಮಾಣಾನಿ ತೀರತಃ ॥೨೩॥

ಶಂಖಾನಾಂ ಪ್ರಸ್ತರಂ ಚೈವ ಪ್ರವಾಲನಿಚಯಂ ತಥಾ ।
ಕಾಂಚನಾನಿ ಚ ಶೈಲಾನಿ ರಜತಾನಿ ಚ ಸರ್ವಶಃ ॥೨೪॥

ಪ್ರಸ್ರಾವಾಣಿ ಮನೋಜ್ಞಾನಿ ಪ್ರಸನ್ನಾನಿ ಹ್ರದಾನಿ ಚ ।
ಧನಧಾನ್ಯೋಪಪನ್ನಾನಿ ಸ್ತ್ರೀರತ್ನೈರಾವೃತಾನಿ ಚ ॥೨೫॥

ಹಸ್ತ್ಯಶ್ವರಥಗಾಢಾನಿ ನಗರಾಣ್ಯವಲೋಕಯನ್ ।
ತಂ ಸಮಂ ಸರ್ವತಃ ಸ್ನಿಗ್ಧಂ ಮೃದುಸಂಸ್ಪರ್ಶಮಾರುತಮ್ ॥೨೬॥

ಮುಂದುವರೆದ ರಾವಣ ಇಂಥ ಸುಂದರವಾದ ಸಾಗರ ತೀರವನ್ನು ಕಂಡ. ಗೊಂದು ಸುರಿಸುವ ಮರಗಳು, ಸಾವಿರಾರು ಚಂದನವೃಕ್ಷಗಳು ಇವುಗಳಿಂದ ಸೌಮ್ಯವೂ, ಪರಿಮಳದಿಂದ ಮೂಗಿಗೆ ತೃಪ್ತಿಕೊಡುವಂಥ ವನಗಳು ಇದ್ದವು.

ಅಗರು ಮುಂತಾದ ಸೌರಭ ಸೂಸುವ ಮರಗಳು ತುಂಬಿದ ವನಗಳೂ, ಒಳ್ಳೆ ಜಾತಿಯ ಸುಗಂಧಿ ಫಲಗಳ ಅಂಕೋಲ ವೃಕ್ಷಗಳ ಉಪವನಗಳಿದ್ದವು. ಹೂ-ಗೊಂಚಲುಗಳಿಂದ ಮಿಂಚುತ್ತಿದ್ದ ಹೊಂಗೆಮರಗಳು, ಕಾಳು ಮೆಣಸಿನ ಬಳ್ಳಿಗಳು ಕಳೆಗೊಂಡಿದ್ದವು. ಸಾಗರದ ತೀರದಲ್ಲಿ ಒಣಗಿ ಹೊಳೆಯುವ ಮುತ್ತಿನ ರಾಶಿಗಳು, ಶಂಖದ ರಾಶಿಗಳು, ಹವಳದ ರಾಶಿಗಳಿದ್ದವು. ಬೆಳ್ಳಿ ಬಂಗಾರದ ಪರ್ವತಗಳಿದ್ದವು. ಸುಂದರವಾದ ಜಲಪಾತಗಳು, ಪ್ರಸನ್ನವಾದ ನೀರ ಕೊಳಗಳಿದ್ದವು.

ಧನಧಾನ್ಯಗಳಿಂದ ತುಂಬಿದ ಹೆಣ್ಣುರತ್ನಗಳಿಂದ ಶೋಭಿತವಾದ ಗಜ ಅಶ್ವರಥ-ಗಳಿಂದ ತುಂಬಿದ ನಗರಗಳನ್ನು ನೋಡುತ್ತ ಎಲ್ಲ ಕಡೆಯಿಂದ ಸ್ನಿಗ್ಧವಾದ ಸಮತಟ್ಟಾದ ಒಂದು ಪ್ರದೇಶವನ್ನು ಕಂಡ. ಹಿತಸ್ಪರ್ಶದ ಮಂದಮಾರುತ ತಣ್ಣಗೆ ಬೀಸುತ್ತಿತ್ತು. ಇಂಥ ಸುಂದರ ಸಮುದ್ರತೀರವನ್ನು ರಾವಣ ನೋಡಿದ.

ಅನೂಪಂ ಸಿಂಧುರಾಜ್ಯಸ್ಯ ದದರ್ಶ ತ್ರಿದಿವೋಪಮಮ್ ।
ತತ್ರಾಪಶ್ಯತ್ ಸ ಮೇಘಾಭ್ಯಂ ನ್ಯಗ್ರೋಧಮೃಷಿಭಿರ್ವೃತಮ್ ॥೨೭॥

ಸಮಂತಾದ್ಯಸ್ಯ ತಾಃ ಶಾಖಾಃ ಶತಯೋಜನಮಾಯತಾಃ ।
ಯಸ್ಯ ಹಸ್ತಿನಮಾದಾಯ ಮಹಾಕಾಯಂ ಚ ಕಚ್ಛಪಮ್ ॥೨೮॥

ಭಕ್ಷಾರ್ಥಂ ಗರುಡಃ ಶಾಖಾಮಾಜಾಗಾಮ ಮಹಾಬಲಃ ।
ತಸ್ಯ ತಾಂ ಸಹಸಾ ಶಾಖಾಂ ಭಾರೇಣ ಪತಗೋತ್ತಮಃ ॥೨೯॥

ಸುಪರ್ಣಃ ಪರ್ಣಬಹುಲಾಂ ಬಭಂಜ ಚ ಮಹಾಬಲಃ ।
ತತ್ರ ವೈಖಾನಸಾ ಮಾಷಾ ವಾಲಖಿಲ್ಯಾ ಮರೀಚಿಪಾಃ ॥೩೦॥

ಅಜಾ ಬಭೂವುರ್ಧೂಮ್ರಾಶ್ಚ ಸಂಗತಾಃ ಪರಮರ್ಷಯಃ ।
ತೇಷಾಂ ದಯಾರ್ಥಂ ಗರುಡಸ್ತಾಂ ಶಾಖಾಂ ಶತಯೋಜನಾಮ್ ॥೩೧

ಭಗ್ನಾಮಾದಾಯ ವೇಗೇನ ತೌ ಚೋಭೌ ಗಜಕಚ್ಛಪೌ ।
ಏಕಪಾದೇನ ಧರ್ಮಾತ್ಮಾ ಭಕ್ಷಯಿತ್ವಾ ತದಾಮಿಷಮ್ ॥೩೨॥

ನಿಷಾದವಿಷಯಂ ಹತ್ವಾ ಶಾಖಾಯ ಪತಗೋತ್ತಮಃ ।
ಪ್ರಹರ್ಷಮತುಲಂ ಲೇಭೇ ಮೋಕ್ಷಯಿತ್ವಾ ಮಹಾಮುನೀನ್ ॥೩೩॥

ಆ ರಾವಣನು ಅಲ್ಲೊಂದು ಮೋಡದಂತೆ ಹಬ್ಬಿಕೊಂಡಿದ್ದ ಆಲದ ಮರವನ್ನು ಕಂಡ. ನೂರು ಯೋಜನದಷ್ಟು ಉದ್ದವಾದ ಕೊಂಬೆಗಳು ಸುತ್ತಲು ಹರವಿಕೊಂಡಿದ್ದವು. ಹಿಂದೊಮ್ಮೆ ಗರುಡನು ಆನೆಯನ್ನು, ದೊಡ್ಡ ಗಾತ್ರದ ಆಮೆಯನ್ನು ತಿನ್ನಲು ಎತ್ತುಕೊಂಡು ಬಂದು ಆ ಆಲದ ಮರದ ಕೊಂಬೆಯೊಂದರ ಮೇಲೆ ಕುಳಿತ. ಗರುಡ ಆನೆ ಆಮೆಗಳ ಭಾರದಿಂದ ಎಲೆಗಳಿಂದ ತುಂಬಿದ ಆ ಕೊಂಬೆಯು ಮುರಿಯಿತು. ಅಲ್ಲಿಯೇ ವೈಖಾನಸರು, ಮಾಷಗೋತ್ರೋತ್ಪನ್ನರಾದ ವಾಲಖಿಲ್ಯರು ಮರೀಚಿಪರು, ಅಯೋನಿಜರಾದ ಧೂಮ್ರರು ಮೊದಲಾದ ಪರಮರ್ಷಿಗಳು ಇದ್ದರು. ಅವರ ಮೇಲಿನ ಅನುಕಂಪದಿಂದ ನೂರು ಯೋಜನ ಉದ್ದದ ಆ ಕೊಂಬೆಯನ್ನು ಗರುಡನು ಎತ್ತುಕೊಂಡೇ ವೇಗದಿಂದ ಹಾರಿದ. ಒಂದು ಪಾದದಿಂದ ಆನೆ - ಆಮೆಗಳ ಮಾಂಸವನ್ನು ತಿಂದು ಮುಂದೆ ಸಾಗಿ ಬೇಟೆಗಾರರ ಪ್ರದೇಶವನ್ನು ಆ ಕೊಂಬೆಯಿಂದಲೆ ನಾಶಗೊಳಿಸಿ ಮಹಾಮುನಿಗಳನ್ನು ಆಪತ್ತಿನಿಂದ ಪಾರು ಮಾಡಿ ಅತುಲಹರ್ಷಗೊಂಡನು.

ಸ ತೇನೈವ ಪ್ರಹರ್ಷೇಣ ದ್ವಿಗುಣೀಕೃತವಿಕ್ರಮಃ ।
ಅಮೃತಾನಯನಾರ್ಥಂ ವೈ ಚಕಾರ ಮತಿಮಾನ್ ಮತಿಮ್ ॥೩೪॥

ಅಯೋಜಾಲಾನಿ ನಿರ್ಮಥ್ಯ ಭಿತ್ತ್ವಾ ರತ್ನಮಯಂ ಗೃಹಮ್ ।
ಮಹೇಂದ್ರಭವನಾದ್ಗುಪ್ತಮಾಜಹಾರಾಮೃತಂ ತತಃ ॥೩೫॥

ತಂ ಮಹರ್ಷಿಗಣೈರ್ಜುಷ್ಟಂ ಸುಪರ್ಣಕೃತಲಕ್ಷಣಮ್ ।
ನಾಮ್ನಾ ಸುಭದ್ರಂ ನ್ಯಗ್ರೋಧಂ ದದರ್ಶ ಧನದಾನುಜಃ ॥೩೬॥

ಆ ಬುದ್ಧಿವಂತ ಗರುಡನು ಅದೇ ಪ್ರಹರ್ಷದಿಂದ ತನ್ನ ಪರಾಕ್ರಮವನ್ನು ಎರಡುಪಟ್ಟು ಹೆಚ್ಚಿಸಿಕೊಂಡು ಅಮೃತವನ್ನು ತರಲು ಮನಸ್ಸು ಮಾಡಿದ.

ಕಬ್ಬಿಣದ ಸರಪಳಿಗಳನ್ನು ತುಂಡರಿಸಿ ರತ್ನಮಯವಾದ ಭವನವನ್ನು ಧ್ವಂಸಗೈದು ಅಲ್ಲಿ ಸುರಕ್ಷಿತವಾಗಿಟ್ಟಿದ್ದ ಅಮೃತವನ್ನು ಮಹೇಂದ್ರಭವನದಿಂದ ಅಪಹರಿಸಿದ.

ಅಂತಹ ಮಹರ್ಷಿಗಳಿಂದ ಸೇವಿತವಾದ ಗರುಡನಿಂದ ತುಂಡಾದ ಕೊಂಬೆಯ ಚಿಹ್ನೆಯುಳ್ಳ 'ಸುಭದ್ರ' ಎಂಬ ಹೆಸರಿನ ಆ ಆಲದ ಮರವನ್ನು ಕುಬೇರಾನುಜ ರಾವಣ ಕಂಡ.

ತಂ ತು ಗತ್ವಾ ಪರಂ ಪಾರಂ ಸಮುದ್ರಸ್ಯ ನದೀಪತೇಃ ।
ದದರ್ಶಾಶ್ರಮಮೇಕಾಂತೇ ರಮ್ಯೇ ಪುಣ್ಯೇ ವನಾಂತರೇ ॥೩೭॥

ತತ್ರ ಕೃಷ್ಣಾಜಿನಧರಂ ಜಟಾವಲ್ಕಲಧಾರಿಣಮ್ ।
ದದರ್ಶ ನಿಯತಾಹಾರಂ ಮಾರೀಚಂ ನಾಮ ರಾಕ್ಷಸಮ್ ॥೩೮॥

ಸಮುದ್ರದ ಆಚೆ ತೀರವನ್ನು ತಲುಪಿ ರಾವಣನು ಪುಣ್ಯಕರವಾದ ರಮ್ಯವಾದ ಕಾಡ ನಡುವಿನಲ್ಲಿ ನಿರ್ಜನ ಪ್ರದೇಶದಲ್ಲಿ ಒಂದು ಆಶ್ರಮವನ್ನು ಕಂಡ. ಅಲ್ಲಿ ಕೃಷ್ಣಾಜಿನಧರನು ಜಟಾ-ವಲ್ಕಲಧಾರಿಯು, ನಿಯತಾಹಾರನು ಆದ ರಾಕ್ಷಸ ಮಾರೀಚನನ್ನು ಕಂಡ.

ರಾವಣಸ್ತಂ ಸಮಾಗಮ್ಯ ವಿಧಿವತ್ತೇನ ರಕ್ಷಸಾ ।
ಮಾರೀಚೇನಾರ್ಚಿತೋ ರಾಜಾ ಸರ್ವಕಾಮೈರಮಾನುಷೈಃ ॥೩೯॥

ತಂ ಸ್ವಯಂ ಪೂಜಯಿತ್ವಾ ತು ಭೋಜನೇನೋದಕೇನ ಚ ।
ಅಥೋರ್ಪಹಿತಯಾ ವಾಚಾ ಮಾರೀಚೋ ವಾಕ್ಯಮಬ್ರವೀತ್ ॥೪೦॥

ಕಚ್ಚಿತ್ ಸುಕುಶಲಂ ರಾಜನ್ ಲಂಕಾಯಾಂ ರಾಕ್ಷಸೇಶ್ವರ ।
ಕೇನಾರ್ಥೇನ ಪುನಸ್ತ್ವಂ ವೈ ತೂರ್ಣಮೇವಮಿಹಾಗತಃ ॥೪೧॥

ಏವಮುಕ್ತೋ ಮಹಾತೇಜಾ ಮಾರೀಚೇನ ಸ ರಾವಣಃ ।
ತಂ ತು ಪಶ್ಚಾದಿದಂ ವಾಕ್ಯಮಬ್ರವೀದ್ವಾಕ್ಯಕೋವಿದಃ ॥೪೨॥

ಆ ರಾವಣನು ಆ ರಾಕ್ಷಸ ಮಾರೀಚನಿಂದ ಅಮಾನುಷವಾದ ಎಲ್ಲ ಕಾಮ್ಯ ಭೋಜ್ಯ ವಸ್ತುಗಳಿಂದ ಸತ್ಕೃತನಾದನು. ಅನ್ನ ನೀರುಗಳಿಂದ ಸ್ವಯಂ ರಾವಣನು ಪೂಜಿಸಿ ಅರ್ಥವತ್ತಾದ ಮಾತುಗಳಿಂದ ಮಾರೀಚನು ಮಾತನಾಡಿದನು.

ರಾಜನೇ ! ರಾಕ್ಷಸೇಶ್ವರನೇ ! ಲಂಕೆಯಲ್ಲಿ ಎಲ್ಲವೂ ಕುಶಲವೇ ತಾನೆ. ಯಾವ ಪ್ರಯೋಜನವನ್ನು ಬಯಸಿ ಹೀಗೆ ಅವಸರವಾಗಿ ಇಲ್ಲಿಗೆ ಬಂದಿರುವಿ ?

ಹೀಗೆ ಮಾರೀಚನಿಂದ ಹೇಳೋಣನಾದ ಮಹಾತೇಜಸ್ವಿ ರಾವಣನು ಆ ಮಾರೀಚನನ್ನು ಕುರಿತು ಬಳಿಕ ಹೀಗೆಂದನು ವಾಕ್ಯಕೋವಿದನು .

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮುವತ್ತೈದನೇ ಸರ್ಗ ಮುಗಿಯಿತು.

★

ಷಟ್‌ತ್ರಿಂಶಃ ಸರ್ಗಃ

ಕಥಾಸಾರಾಂಶ– ಮಾರೀಚನಲ್ಲಿ ರಾವಣ ಹೀಗೆ ಅಲವತ್ತುಕೊಂಡ – ಅಪ್ಪ ಮಾರೀಚ ! ನನ್ನ ಮಾತು ಕೇಳು. ನಾನು ಈಗ ಆರ್ತನಾಗಿದ್ದೇನೆ. ಆರ್ತನಾದ ನನಗೆ ನೀನೆ ಹಿರಿಯಾಸರೆ.

ಜನಸ್ಥಾನದಲ್ಲಿ ನನ್ನ ತಮ್ಮ ಖರ, ಮಹಾಬಾಹುದೂಷಣ, ತಂಗಿ ಶೂರ್ಪಣಖೆ–ಯರು, ಮಾಂಸ ಭಕ್ಷನಾದ ತ್ರಿಶಿರ ಹಾಗೂ ಯುದ್ಧಕುಶಲರಾದ 14 ಸಾವಿರ ರಕ್ಕಸರು ನನ್ನ ಆಜ್ಞೆಯಿಂದ ಋಷಿಗಳನ್ನು ಬಾಧಿಸುತ್ತ ವಾಸಿಸುತ್ತಿರುವುದು ನಿನಗೂ ತಿಳಿದಿದೆ.

ಆದರೆ ಈಗ ರೋಷಗೊಂಡ ಒಬ್ಬನೇ ಒಬ್ಬ ರಾಮನೆಂಬುವನು ಯಾವ ಕಠೋರ ವಚನವನ್ನು ಆಡದೆ ಬಾಣಗಳಿಂದ ಬಿಲ್ಲನ್ನು ಸಕ್ರಿಯಗೊಳಿಸಿರುವನು.

ಒಬ್ಬ ಕಾಲಾಳು ಮಾನವ ಶ್ರೀರಾಮ ತೀಕ್ಷ್ಣವಾದ ಬಾಣಗಳಿಂದ ಹದಿನಾಲ್ಕು ಸಾವಿರ ರಕ್ಕಸರನ್ನು ಮಾತ್ರವಲ್ಲದೆ ಕ್ರೂರ ಶೂರರಾದ ಖರದೂಷಣ ತ್ರಿಶಿರಸರನ್ನೂ ಸಂಹಾರ ಮಾಡಿದ್ದಾನೆ. ದಂಡಕಾರಣ್ಯವನ್ನು ಭಯ ಮುಕ್ತವನ್ನಾಗಿಸಿದ್ದಾನೆ.

ಕುಪಿತನಾದ ತಂದೆಯಿಂದ ರಾಜ್ಯದಿಂದ ಹೊರ ಹಾಕಲ್ಪಟ್ಟ ಸಪತ್ನೀಕ ಶ್ರೀರಾಮನು ಕ್ಷೀಣ ಜೀವಿತನು. ಯಾವ ವೈರವಿಲ್ಲದೆ ಕೇವಲ ಬಲದಿಂದ ನಮ್ಮ ಸೈನ್ಯವನ್ನು ನಾಶಮಾಡಿರುವನು.ಅವನು ದುಃಶೀಲನು ತೀಕ್ಷ್ಣನು ಮೂರ್ಖನು, ಅಧಾರ್ಮಿಕನು. ನನ್ನ ತಂಗಿಯನ್ನು ಕಿವಿಮೂಗುಗಳನ್ನು ಕತ್ತರಿಸಿ ವಿರೂಪಗೊಳಿಸಿರುವನು.

ಅವನ ಹೆಂಡತಿ ಸೀತೆಯನ್ನು ಜನಸ್ಥಾನದಿಂದ ಅಪಹರಿಸಬೇಕೆಂದಿದ್ದೇನೆ. ನಿನ್ನ ಸಹಾಯ ಬೇಕು.

ತಮ್ಮಂದಿರಾದ ಕುಂಭಕರ್ಣಾದಿಗಳ ಹಾಗೂ ನಿನ್ನ ಸಹಾಯದಿಂದ ಯುದ್ಧದಲ್ಲಿ ಎಲ್ಲ ದೇವತೆಗಳು ಬಂದರೂ ಲೆಕ್ಕಿಸುವುದಿಲ್ಲ.

ನೀನು ಮಹಾಶೂರ. ಸರ್ವಮಾಯಾವಿಶಾರದ, ಉಪಾಯಗಳನ್ನು ಬಲ್ಲವನು. ಅದಕ್ಕಾಗಿ ನಿನ್ನ ಬಳಿ ಬಂದಿದ್ದೇನೆ.

ನನ್ನ ಮಾತಿನಂತೆ ರಜತ ಬಿಂದುಗಳಿಂದ ಕಂಗೊಳಿಪ ಸುವರ್ಣ ಮೃಗವಾಗಿ ನೀನು ರಾಮನ ಆಶ್ರಮದ ಮುಂದೆ ಓಡಾಡು. ಸೀತೆ ನಿಸ್ಸಂಶಯವಾಗಿ ನಿನ್ನನ್ನು ತಂದು–ಕೊಂಡುವಂತೆ ರಾಮ ಲಕ್ಷ್ಮಣರನ್ನು ಒತ್ತಾಯಿಸುತ್ತಾಳೆ. ರಾಮ ಲಕ್ಷ್ಮಣರು ಜಿಂಕೆ–ಯನ್ನು ತರಲು ಹೋದ ಮೇಲೆ ಶೂನ್ಯ ಆಶ್ರಮದಲ್ಲಿರುವ ಸೀತೆಯನ್ನು ನಿರಾಯಾಸವಾಗಿ ಅಪಹರಿಸುತ್ತೇನೆ. ಪತ್ನಿವಿಯೋಗದಿಂದ ದುಃಖಿತನಾಗಿ ದುರ್ಬಲ–ನಾದ ರಾಮನನ್ನು ಅನಾಯಾಸವಾಗಿ ಹೊಡೆದು ಹಾಕುತ್ತೇನೆ.

ರಾವಣ ಹೇಳಿದ ರಾಮಕಥೆಯನ್ನು ಕೇಳಿದ ಮಾರೀಚ ಹೆದರಿದ. ಮುಖ ಒಣಗಿತು. ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ ಮೃತನಂತೆ ಕಣ್ಣು ಮುಚ್ಚದೆ ಆರ್ತನಾಗಿ ರಾವಣನನ್ನೆ ದಿಟ್ಟಿಸಿ ನೋಡಹತ್ತಿದನು.

ರಾಮಪರಾಕ್ರಮವನ್ನು ಅರಿತ ಮಾರೀಚ ತನಗೆ ಹಾಗು ರಾವಣನಿಗೆ ಹಿತವಾದ ಮಾತನ್ನು ಹೇಳಿದನು.

ಸಹಾಯೈಷಣಾ

ಮಾರೀಚ ಶ್ರೂಯತಾಂ ತಾತ ವಚನಂ ಮಮ ಭಾಷತಃ ।
ಆರ್ತೋಽಸ್ಮಿ ಮಮ ಚಾರ್ತಸ್ಯ ಭವಾನ್ ಹಿ ಪರಮಾ ಗತಿಃ ॥೧॥

ಜಾನೀಷೇ ತ್ವಂ ಜನಸ್ಥಾನಂ ಭ್ರಾತಾ ಯತ್ರ ಖರೋ ಮಮ ।
ದೂಷಣಶ್ಚ ಮಹಾಬಾಹುಃ ಸ್ವಸಾ ಶೂರ್ಪಣಖಾ ಚ ಮೇ ॥೨॥

ತ್ರಿಶಿರಾಶ್ಚ ಮಹಾತೇಜಾ ರಾಕ್ಷಸಃ ಪಿಶಿತಾಶನಃ ।
ಅನ್ಯೇ ಚ ಬಹವಃ ಶೂರಾ ಲಬ್ಧಲಕ್ಷಾ ನಿಶಾಚರಾಃ ॥೩॥

ವಸಂತಿ ಮನ್ನಿಯೋಗೇನ ನಿತ್ಯವಾಸಂ ಚ ರಾಕ್ಷಸಾಃ ।
ಬಾಧಮಾನಾ ಮಹಾರಣ್ಯೇ ಮುನೀನ್ ವೈ ಧರ್ಮಚಾರಿಣಃ ॥೪॥

ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ಶೂರಾಣಾಂ ಲಬ್ಧಲಕ್ಷಾಣಾಂ ಖರಚಿತ್ತಾನುವರ್ತಿನಾಮ್ ॥೫॥

ತೇ ತ್ವಿದಾನೀಂ ಜನಸ್ಥಾನೇ ವಸಮಾನಾ ಮಹಾಬಲಾಃ ।
ಸಂಗತಾಃ ಪರಮಾಯತ್ತಾ ರಾಮೇಣ ಸಹ ಸಂಯುಗೇ ॥೬॥

ನಾನಾಪ್ರಹರಣೋಪೇತಾಃ ಖರಪ್ರಮುಖರಾಕ್ಷಸಾಃ ।
ತೇನ ಸಂಜಾತರೋಷೇಣ ರಾಮೇಣ ರಣಮೂರ್ಧನಿ ॥೭॥

ಅನುಕ್ತಾ ತ್ವ ಪರುಷಂ ಕಿಂಚಿಚ್ಚರೈರ್ವ್ಯಾಪಾರಿತಂ ಧನುಃ ।
ಚತುರ್ದಶ ಸಹಸ್ರಾಣಿ ರಕ್ಷಸಾಮುಗ್ರತೇಜಸಾಮ್ ॥೮॥

ನಿಹತಾನಿ ಶರೈಸ್ತೀಕ್ಷ್ಣೈರ್ಮಾನುಷೇಣ ಪದಾತಿನಾ ।
ಖರಶ್ಚ ನಿಹತಃ ಸಂಖ್ಯೇ ದೂಷಣಶ್ಚ ನಿಪಾತಿತಃ ॥೯॥

ಹತಶ್ಚ ತ್ರಿಶಿರಾಶ್ಚಾಪಿ ನಿರ್ಭಯಾ ದಂಡಕಾಃ ಕೃತಾಃ ।

ಅಪ್ಪ ಮಾರೀಚ ! ನನ್ನ ಮಾತನ್ನು ಕೇಳು – ಆರ್ತನಾಗಿದ್ದೇನೆ. ಆರ್ತನಾದ ನನಗೆ ನೀನೆ ತಾನೆ ಹಿರಿಯ ಆಸರೆ ! ಇದನ್ನು ನೀನು ತಿಳಿದಿರುವೆ – ನನ್ನ ತಮ್ಮ ಖರ, ಮಹಾಬಾಹು ದೂಷಣ, ನನ್ನ ತಂಗಿ ಶೂರ್ಪಣಖಾ, ಮಾಂಸಾಹಾರಿ ರಕ್ಕಸ ತೇಜಸ್ವಿ ತ್ರಿಶಿರಸ್, ಸಮರೋತ್ಸಾಹ ತುಂಬಿಕೊಂಡ ಇನ್ನೂ ಹಲವು ರಾಕ್ಷಸರು ನನ್ನ ಆದೇಶದಿಂದ ಜನಸ್ಥಾನದಲ್ಲಿ ನಿತ್ಯವಾಸಿಗಳಾಗಿದ್ದಾರೆ. ಧರ್ಮಚಾರಿಗಳಾದ ಮುನಿಗಳನ್ನು ಬಾಧಿಸುತ್ತಿದ್ದಾರೆ. ಖರಚಿತ್ತ ಅನುವರ್ತಿಗಳಾದ ಸಮರೋತ್ಸಾಹಿಗಳು ಉಗ್ರಕರ್ಮದ ಹದಿನಾಲ್ಕು ಸಾವಿರ ರಾಕ್ಷಸರು – ಜನಸ್ಥಾನದಲ್ಲಿ ವಾಸ ಮಾಡು-ತ್ತಿರುವ ಮಹಾಬಲಶಾಲಿಗಳು. ಯುದ್ಧದಲ್ಲಿ ಬಗೆಬಗೆಯ ಆಯುಧ ಹಿಡಿದವರಾಗಿ ಖರ ಮುಂತಾದವರು ರಾಮನೊಂದಿಗೆ ಸೆಣಸಾಡಿದ್ದಾರೆ. ಅದರಿಂದ ಕೋಪಗೊಂಡ ರಾಮ ಯಾವ ಕಠೋರ ಮಾತುಗಳನ್ನಾಡದೆ ಬಾಣಗಳಿಂದ ಬಿಲ್ಲು ಸಕ್ರಿಯ-ಗೊಳಿಸಿದ್ದಾನೆ. ಉಗ್ರ ಪ್ರಭಾವಿಗಳಾದ ಹದಿನಾಲ್ಕು ಸಾವಿರ ರಕ್ಕಸರನ್ನು ಕಾಲಾಳು ಮಾನುಷನಾದ ಶ್ರೀರಾಮ ಕೊಂದಿದ್ದಾನೆ. ಖರ ದೂಷಣ ತ್ರಿಶಿರರನ್ನು ಸಂಹರಿಸಿ ದಂಡಕಾರಣ್ಯವನ್ನು ರಕ್ಕಸ ಭಯರಹಿತರನ್ನಾಗಿಸಿದ್ದಾನೆ.

ಪಿತ್ರಾ ನಿರಸ್ತಃ ಕ್ರುದ್ಧೇನ ಸಭಾರ್ಯಃ ಕ್ಷೀಣಜೀವಿತಃ ॥೧೦॥

ಸ ಹಂತಾ ತಸ್ಯ ಸೈನ್ಯಸ್ಯ ರಾಮಃ ಕ್ಷತ್ರಿಯಪಾಂಸನಃ ।
ದುಃಶೀಲಃ ಕರ್ಕಶಸ್ತೀಕ್ಷ್ಣೋ ಮೂಖರ್ೋ ಲುಬ್ಧೋಽಜಿತೇಂದ್ರಿಯಃ ॥

ತ್ಯಕ್ತಧರ್ಮೋ ಹ್ಯಧರ್ಮಾತ್ಮಾ ಭೂತಾನಾಮಹಿತೇ ರತಃ ।
ಯೇನ ವೈರಂ ವಿನಾರಣ್ಯೇ ಸತ್ತ್ವಮಾಶ್ರಿತ್ಯ ಕೇವಲಮ್ ॥೧೨॥

ಕರ್ಣನಾಸಾಪಹರಣಾದ್ಭಗಿನೀ ಮೇ ವಿರೂಪಿತಾಃ ।

ಕೋಪಗೊಂಡ ತಂದೆ ಹೊರ ಹಾಕಲ್ಪಟ್ಟ ಸಪತ್ನೀಕನು, ಕ್ಷೀಣಬದುಕಿನವನು ಆದ ಆ ರಾಮ ಕ್ಷತ್ರಿಯಕುಲ ಕಲಂಕನು – ರಾಕ್ಷಸ ಸೈನ್ಯವನ್ನು ಕೊಂದಿರುವನು. ಆ ರಾಮ ಕೆಟ್ಟ ಸ್ವಭಾವದವನು. ಕಠೋರನು, ತೀಕ್ಷ್ಣನು, ಮೂರ್ಖನು, ಆಸೆ-ಬುರುಕನು, ಇಂದ್ರಿಯ ನಿಗ್ರಹವಿಲ್ಲದವನು. ತನ್ನ ಧರ್ಮವನ್ನು ಬಿಟ್ಟವ. ಅಧರ್ಮಾಸಕ್ತನು, ಜೀವರಿಗೆ ಅಹಿತ ಮಾಡುವುದರಲ್ಲಿ ನಿರತನು.

ಯಾರು ವೈರವಿಲ್ಲದೆ ಕೇವಲ ಬಲದ ದರ್ಪದಿಂದ ಕಿವಿ ಮೂಗುಗಳನ್ನು ಕತ್ತರಿಸಿ ನನ್ನ ತಂಗಿ ಶೂರ್ಪಣಖೆಯನ್ನು ವಿರೂಪಗೊಳಿಸಿರುವನು.

ತಸ್ಯ ಭಾರ್ಯಾಂ ಜನಸ್ಥಾನಾತ್ ಸೀತಾಂ ಸುರಸುತೋಪಮಾಮ್॥೧೩

ಆನಯಿಷ್ಯಾಮಿ ವಿಕ್ರಮ್ಯ ಸಹಾಯಸ್ತತ್ರ ಮೇ ಭವ ।
ತ್ವಯಾ ಹ್ಯಹಂ ಸಹಾಯೇನ ಪಾರ್ಶ್ವಸ್ಥೇನ ಮಹಾಬಲ ॥೧೪॥

ಭ್ರಾತೃಭಿಶ್ಚ ಸುರಾನ್ ಯುದ್ಧೇ ಸಮಗ್ರಾನ್ನಾಭಿಚಿಂತಯೇ ।
ತತ್ ಸಹಾಯೋ ಭವ ತ್ವಂ ಮೇ ಸಮರ್ಥೋ ಹ್ಯಸಿ ರಾಕ್ಷಸ ॥೧೫॥

ವೀರ್ಯೇ ಯುದ್ಧೇ ಚ ದರ್ಪೇ ಚ ನ ಹ್ಯಸ್ತಿ ಸದೃಶಸ್ತವ ।
ಉಪಾಯಜ್ಞೋ ಮಹಾನ್ ಶೂರೋ ಮಹಾಮಾಯಾವಿಶಾರದಃ ।
ಏತದರ್ಥಮಹಂ ಪ್ರಾಪ್ತಸ್ತ್ವತ್ಸಮೀಪಂ ನಿಶಾಚರ ॥ ೧೬ ॥

ಆ ರಾಮನ ಹೆಂಡತಿ – ಸುರಸುತೆಯಂತಿರುವ – ಸೀತೆಯನ್ನು ಜನಸ್ಥಾನದಿಂದ ವಿಕ್ರಮ ತೋರಿ ಸೆಳೆದು ತರುತ್ತೇನೆ. ಆ ಕಾರ್ಯದಲ್ಲಿ ನೀನು ನನಗೆ ಸಹಾಯಕನಾಗು.

ಮಹಾಬಲನೆ ! ನೀನು ಹಾಗೂ ಕುಂಭಕರ್ಣಾದಿಗಳು ಪಕ್ಕದಲ್ಲಿದ್ದು ಸಹಾಯ ಮಾಡಿದರೆ ಯುದ್ಧದಲ್ಲಿ ಎಲ್ಲ ದೇವತೆಗಳನ್ನು ಲೆಕ್ಕಿಸುವುದಿಲ್ಲ.

ರಾಕ್ಷಸನೇ ! ಆದ್ದರಿಂದ ನೀನು ಸಹಾಯಕನಾಗು. ನೀನು ಸಮರ್ಥನಾಗಿರುವಿ. ವೀರ್ಯದಲ್ಲಿ ಯುದ್ಧದಲ್ಲಿ ದರ್ಪದಲ್ಲಿ ನಿನಗೆ ಸರಿಸಾಟಿಯಿಲ್ಲ. ನೀನು ಉಪಾಯಗಳನ್ನು ಬಲ್ಲವನು. ಮಹಾಶೂರನು, ಸರ್ವಮಾಯಾ ವಿಶಾರದನು. ಈ ಕಾರಣದಿಂದ ನಿಶಾಚರನೇ ! ನಿನ್ನ ಬಳಿ ಬಂದೆ.

ಶೃಣು ತತ್ಕರ್ಮ ಸಾಹಾಯ್ಯೇ ಯತ್ಕಾರ್ಯಂ ವಚನಾನ್ಮಮ ॥೧೭॥

ಸೌವರ್ಣಸ್ತ್ವಂ ಮೃಗೋ ಭೂತ್ವಾ ಚಿತ್ರೋ ರಜತಬಿಂದುಭಿಃ ।
ಆಶ್ರಮೇ ತಸ್ಯ ರಾಮಸ್ಯ ಸೀತಾಯಾಃ ಪ್ರಮುಖೇ ಚರ ॥೧೮॥

ತ್ವಾಂ ತು ನಿಃಸಂಶಯಂ ಸೀತಾ ದೃಷ್ಟ್ವಾ ತು ಮೃಗರೂಪಿಣಮ್ ।
ಗೃಹ್ಯತಾಮಿತಿ ಭರ್ತಾರಂ ಲಕ್ಷ್ಮಣಂ ಚಾಭಿಧಾಸ್ಯತಿ ॥೧೯॥

ತತಸ್ತಯೋರಪಾಯೇ ತು ಶೂನ್ಯೇ ಸೀತಾಂ ಯಥಾಸುಖಮ್ ।
ನಿರಾಬಾಧೋ ಹರಿಷ್ಯಾಮಿ ರಾಹುಶ್ಚಂದ್ರಪ್ರಭಾಮಿವ ॥೨೦॥

ತತಃ ಪಶ್ಚಾತ್ ಸುಖಂ ರಾಮೇ ಭಾರ್ಯಾಹರಣಕರ್ಶಿತೇ ।
ವಿಸ್ರಬ್ಧಃ ಪ್ರಹರಿಷ್ಯಾಮಿ ಕೃತಾರ್ಥೇನಾಂತರಾತ್ಮನಾ ॥೨೧॥

ನೀನು ಯಾವ ರೀತಿಯ ಸಹಾಯ ಮಾಡಬೇಕು ? ಕೇಳು. ನೀನು ಬೆಳ್ಳಿ ಚುಕ್ಕಿಗಳಿಂದ ಅಚ್ಚರಿಯಾಗಿ ಕಾಣುವ ಬಂಗಾರದ ಜಿಂಕೆಯಾಗು. ಆ ರಾಮನ ಆಶ್ರಮದಲ್ಲಿ ಸೀತೆಯ ಮುಂದೆ ಸಂಚರಿಸು. ಮೃಗರೂಪಿಯಾದ ನಿನ್ನನ್ನು ನೋಡಿ ನಿಸ್ಸಂಶಯವಾಗಿ ಸೀತೆ ನಿನ್ನನ್ನು ಹಿಡಿದು ತಾ ಎಂದು ರಾಮ ಲಕ್ಷ್ಮಣರನ್ನು ಕುಳಿತು ಹೇಳುತ್ತಾಳೆ. ಬಳಿಕ ಅವರು ಬೆಂಕಿ ತರಲು ಹೋದ ಮೇಲೆ ಶೂನ್ಯವಾದ ಕಾಡಿನಲ್ಲಿ ಆ ಸೀತೆಯನ್ನು ಆಯಾಸವಿಲ್ಲದೆ ಆರಾಮವಾಗಿ ಅಪಹರಿಸುತ್ತೇನೆ; ರಾಹು ಚಂದ್ರನ ಪ್ರಭೆಯನ್ನು ಅಪಹರಿಸುವಂತೆ.

ಮತ್ತೆ ಭಾರ್ಯಾಪಹಾರದ ದುಃಖದಿಂದ ಕೃಶನಾದ ಶ್ರೀರಾಮನನ್ನು, ವಿಶ್ವಾಸಪೂರ್ವಕವಾಗಿ ಸೀತೆಯನ್ನು ಪಡೆದು ಅದರ ಆನಂದದಿಂದ ಕೃತಾರ್ಥನಾಗಿ ಸುಖವಾಗಿ ಕೊಲ್ಲುತ್ತೇನೆ.

ತಸ್ಯ ರಾಮಕಥಾಂ ಶ್ರುತ್ವಾ ಮಾರೀಚಸ್ಯ ಮಹಾತ್ಮನಃ ।
ಶುಷ್ಕಂ ಸಮಭವದ್ವಕ್ತ್ರಂ ಪರಿತ್ರಸ್ತೋ ಬಭೂವ ಹ ॥೨೨॥

ಓಷ್ಠೌ ಪರಿಲಿಹನ್ ಶುಷ್ಕೌ ನೇತ್ರೈರನಿಮಿಷೈರಿವ ।
ಮೃತಭೂತ ಇವಾರ್ತಸ್ತು ರಾವಣಂ ಸಮುದೈಕ್ಷತ ॥೨೩॥

ಸ ರಾವಣಂ ತ್ರಸ್ತವಿಷಣ್ಣಚೇತಾ
ಮಹಾವನೇ ರಾಮಪರಾಕ್ರಮಜ್ಞಃ ।
ಕೃತಾಂಜಲಿಸ್ತತ್ತ್ವಮುವಾಚ ವಾಕ್ಯಂ
ಹಿತಂ ಚ ತಸ್ಮೈ ಹಿತಮಾತ್ಮನಶ್ಚ ॥೨೪॥

ಆ ರಾವಣ ಹೇಳಿದ ರಾಮ ಕಥೆಯನ್ನು ಕೇಳಿ ಮಹಾತ್ಮ ಮಾರೀಚನ ಮುಖ ಬಾಡಿಹೋಯಿತು. ಹೆದರಿಬಿಟ್ಟ ! ಒಣಗಿ ಹೋದ ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ ದೇವತೆಗಳಂತೆ ಎವೆಯಿಕ್ಕದೆ ಮೃತನಾದವನಂತೆ ಆರ್ತನಾಗಿ ರಾವಣನನ್ನೆ ದಿಟ್ಟಿಸುತ್ತಿದ್ದ.

ಮಹಾವನದಲ್ಲಿ ರಾಮನ ಪರಾಕ್ರಮವನ್ನು ಬಲ್ಲ, ಭಯವಿಷಾದಗೊಂಡ ಮನದವನಾದ ಆ ಮಾರೀಚನು ಕೈ ಮುಗಿದು ಸತ್ಯವಾದ ರಾವಣನಿಗೆ ಹಾಗು ತನಗೂ ಹಿತವಾದ ಮಾತನ್ನಾಡಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂವತ್ತಾರನೆಯ ಸರ್ಗ ಮುಗಿಯಿತು.

ಸಪ್ತತ್ರಿಂಶಃ ಸರ್ಗಃ

ಕಥಾಸಾರಾಂಶ– ರಾಕ್ಷಸೇಂದ್ರನ ಮಾತು ಕೇಳಿ ಮಾರೀಚನು ಮಾತನಾಡಿದನು – ರಾಜನೇ ! ಯಾವಾಗಲೂ ಪ್ರಿಯವಾದುದನ್ನೆ ಮಾತಾಡುವವರು ಸುಲಭವಾಗಿ ದೊರೆಯುವರು. ಆದರೆ ಅಪ್ರಿಯವು ಪಥ್ಯವೂ ಆದ ಮಾತನ್ನು ಆಡುವವರು ಹಾಗು ಅದನ್ನು ಕೇಳುವವರು ದುರ್ಲಭರು.

ಗುಣೋನ್ನತನು ಮಹಾವೀರ್ಯ ಸಂಪನ್ನನು ಆದ ರಾಮನನ್ನು ನೀನು ತಿಳಿದಿಲ್ಲ. ಅಸಮರ್ಥಗೂಢಚಾರರಿಂದ ಚಪಲನು ನೀನು. ಲೋಕದಲ್ಲಿ ಎಲ್ಲ ರಾಕ್ಷಸರಿಗೂ ಮಂಗಳವಾಗಲಿ. ಶ್ರೀರಾಮ ಸಂಕ್ರುದ್ಧನಾಗಿ ಈ ಲೋಕವನ್ನು ರಾಕ್ಷಸಹೀನವನ್ನಾಗಿ ಮಾಡದಿರಲಿ. ಜನಕಪುತ್ರಿ ಸೀತೆಯು ನಿನ್ನ ಬದುಕಿನ ನಾಶಕ್ಕೇ ಹುಟ್ಟಿರುವವಳು ಆಗದಿರಲಿ. ಸೀತಾನಿಮಿತ್ತವಾಗಿ ನನಗಾವ ದುಃಖ ಬಾರದಿರಲಿ.

ನಿನ್ನಂತಹ ನಿರಂಕುಶ ಸ್ವೇಚ್ಛಾಚಾರಿ ರಾಜನನ್ನು ಪಡೆದು ರಾಕ್ಷಸ ಸಹಿತವಾದ ಲಂಕೆಯು ನಿನ್ನೊಂದಿಗೆ ನಾಶವಾಗದಿರಲಿ. ನಿನ್ನಂತಹ ದುಃಶೀಲನಾದ ಸ್ವೈರಾಚಾರಿ– ಯಾದ ರಾಜನು ತನ್ನನ್ನು, ತನ್ನವರನ್ನು , ತನ್ನ ರಾಷ್ಟವನ್ನು ಹಾಳುಗೆಡಹುತ್ತಾನೆ.

ನೀನು ಹೇಳಿದಂತೆ ಶ್ರೀರಾಮನು ತಂದೆಯಿಂದ ಬಹಿಷ್ಕೃತನೂ ಅಲ್ಲ. ಯಾವ ರೀತಿಯಿಂದಲು ಮರ್ಯಾದೆ ಬಿಟ್ಟವನಲ್ಲ. ಲುಬ್ಧನೂ ಅಲ್ಲ. ದುಃಶೀಲನೂ ಅಲ್ಲ. ಕ್ಷತ್ರಿಯ ಕುಲಕಲಂಕನೂ ಅಲ್ಲ. ತೀಕ್ಷ್ಣನೂ ಅಲ್ಲ. ಸರ್ವರ ಅಹಿತದಲ್ಲಿ ನಿರತನೂ ಅಲ್ಲ.

ಕೈಕೇಯಿಯ ವಂಚನೆಗೆ ಸತ್ಯವಾದಿ ತಂದೆ ಬಲಿಯಾದುದನ್ನು ತಿಳಿದು ತಂದೆಯ ಮಾತನ್ನು ಸತ್ಯಮಾಡುವುದಕ್ಕಾಗಿ ಕಾಡಿಗೆ ಹೊರಟು ಬಂದವನು !

ರಾಮನ ಬಗ್ಗೆ ಅಲ್ಲಸಲ್ಲದ ಮಾತನ್ನು ಆಡದಿರು.

ಧರ್ಮವೇ ಮೂರ್ತಿಮತ್ತಾದವನು ರಾಮ. ಎಲ್ಲರಿಗೂ ಹಿತಕಾರಿಯು ಸತ್ಯಪರಾಕ್ರಮನು. ದೇವತೆಗಳಿಗೆ ಇಂದ್ರನಂತೆ ಎಲ್ಲ ಲೋಕದ ಒಡೆಯ.

ಸೂರ್ಯನ ತೇಜಸ್ಸಿನಿಂದ ಸುರಕ್ಷಿತವಾದ ಅವನ ಪ್ರಭೆಯನ್ನು ಅಪಹರಿಸಲು ಬಯಸಿದಂತೆ ತನ್ನ ತೇಜಸ್ಸಿನಿಂದ ಸುರಕ್ಷಿತಳಾದ ರಾಮನ ಮಡದಿಯನ್ನು ಬಲಾತ್ಕಾರದಿಂದ ಅಪಹರಿಸಲು ಬಯಸುತ್ತಿರುವಿ ಹೇಗೆ ? ರಾಮಾಗ್ನಿಯ ಸಹವಾಸ ಬೇಡ.

ರಾಜ್ಯವನ್ನು ಸುಖವನ್ನು ನಿನಗಿಷ್ಟವಾದ ನಿನ್ನ ಬದುಕನ್ನು ಬಿಟ್ಟು ರಾಮ ಎಂಬ ಯಮನ ಬಳಿಗೆ ಸುಳಿಯಬೇಡ.

ರಾಮನಿಗೆ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳಾದ ರಾಮನ ಬಿಲ್ಲಿನಾಸರೆಯಲ್ಲಿರುವ ಸೀತೆಯನ್ನು ಬೆಂಕಿಯ ಜ್ವಾಲೆಯನ್ನು ಹೇಗೆ ಹಾಗೆ ಆಕ್ರಮಿಸಲು ಸಾಧ್ಯವಿಲ್ಲ.

ಧರ್ಮಿಷ್ಠರಾದ ವಿಭೀಷಣ ಮುಂತಾದ ಸಚಿವರೊಂದಿಗೆ ಸರಿಯಾಗಿ ವಿಚಾರಮಾಡಿ ಗುಣದೋಷಗಳ ಬಲಾಬಲಗಳನ್ನು ರಾಮನ ಸಾಮರ್ಥ್ಯವನ್ನು ವಿಚಾರ ಮಾಡಿ ಸಹನೆಯಿಂದ ಬದುಕುವ ದಾರಿ ನೋಡು. ರಣಭೂಮಿಯಲ್ಲಿ ನಿಶ್ಚಯವಾಗಿಯೂ ರಾಮನನ್ನು ನೀನು ಎದುರಿಸಲಾರೆ.

❖

ಅಪ್ರಿಯಪಥ್ಯವಚನಮ್

ತಚ್ಛ್ರುತ್ವಾ ರಾಕ್ಷಸೇಂದ್ರಸ್ಯ ವಾಕ್ಯಂ ವಾಕ್ಯವಿಶಾರದಃ ।
ಪ್ರತ್ಯುವಾಚ ಮಹಾಪ್ರಾಜ್ಞೋ ಮಾರೀಚೋ ರಾಕ್ಷಸೇಶ್ವರಮ್ ॥೧॥

ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥೨॥

ನ ನೂನಂ ಬುಧ್ಯಸೇ ರಾಮಂ ಮಹಾವೀರ್ಯಂ ಗುಣೋನ್ನತಮ್ ।
ಅಯುಕ್ತಚಾರಶ್ಚಪಲೋ ಮಹೇಂದ್ರವರುಣೋಪಮಮ್ ॥೩॥

ಅಪಿ ಸ್ವಸ್ತಿ ಭವೇತ್ತಾತ ಸರ್ವೇಷಾಂ ಭುವಿ ರಕ್ಷಸಾಮ್ ।
ಅಪಿ ರಾಮೋ ನ ಸಂಕ್ರುದ್ಧಃ ಕುರ್ಯಾಲ್ಲೋಕಮರಾಕ್ಷಸಮ್ ॥೪॥

ಅಪಿ ತೇ ಜೀವಿತಾಂತಾಯ ನೋತ್ಪನ್ನಾ ಜನಕಾತ್ಮಜಾ ।
ಅಪಿ ಸೀತಾನಿಮಿತ್ತಂ ಚ ನ ಭವೇದ್ವ್ಯಸನಂ ಮಹತ್ ॥೫॥

ಅಪಿ ತ್ವಾಮೀಶ್ವರಂ ಪ್ರಾಪ್ಯ ಕಾಮವೃತ್ತಂ ನಿರಂಕುಶಮ್ ।
ನ ವಿನಶ್ಯೇತ್ ಪುರೀ ಲಂಕಾ ತ್ವಯಾ ಸಹ ಸರಾಕ್ಷಸಾ ॥೬॥

ತ್ವದ್ವಿಧಃ ಕಾಮವೃತ್ತೋ ಹಿ ದುಃಶೀಲಃ ಪಾಪಮಂತ್ರಿತಃ ।
ಆತ್ಮಾನಂ ಸ್ವಜನಂ ರಾಷ್ಟ್ರಂ ಸ ರಾಜಾ ಹಂತಿ ದುರ್ಮತಿಃ ॥೭॥

ಮಾತು ಬಲ್ಲ ಮಹಾಪ್ರಾಜ್ಞ ಮಾರೀಚನು ರಾಕ್ಷಸೇಂದ್ರನ ಮಾತು ಕೇಳಿ ಪ್ರತ್ಯುತ್ತರಿಸಿದನು.

ರಾಜನ್ ! ಯಾವಾಗಲೂ ಪ್ರಿಯವಾದುದನ್ನೆ ಹೇಳುವವರು ಸಿಗುವರು. ಆದರೆ ಅಪ್ರಿಯವಾದ ಪಥ್ಯವನ್ನು ಹೇಳುವವರು ದುರ್ಲಭ.

ಸರಿಯಾದ ಗೂಢಚಾರರನ್ನು ನೇಮಿಸದಿರುವ ಚಪಲನಾದ ನೀನು ಗುಣೋ-ನ್ನತನು ಮಹಾವೀರ್ಯಸಂಪನ್ನನು ಮಹೇಂದ್ರ, ವರುಣರಂತಹ ಶ್ರೀರಾಮನನ್ನು ನಿಶ್ಚಯವಾಗಿಯೂ ತಿಳಿದುಕೊಂಡಿಲ್ಲ.

ಭೂಮಿಯಲ್ಲಿ ಎಲ್ಲ ರಕ್ಕಸರಿಗೆ ಕ್ಷೇಮವಾಗುವುದೇನು ? ಶ್ರೀರಾಮನು ಸಂಕ್ರುದ್ಧನಾಗಿ ಲೋಕವನ್ನು ರಾಕ್ಷಸರಹಿತವನ್ನಾಗಿ ಮಾಡುವುದಿಲ್ಲ ತಾನೆ ? ಜನಕಸುತೆ ಸೀತೆ ನಿನ್ನ ಬದುಕಿನ ನಾಶಕ್ಕಾಗಿಯೇ ಹುಟ್ಟಿಲ್ಲ ತಾನೆ ? ಸೀತಾ ನಿಮಿತ್ತವಾಗಿ ನನಗೇನು ಸಂಕಟವಾಗುವುದಿಲ್ಲ ತಾನೆ ?

ನಿರಂಕುಶನು ಕಾಮಚಾರಿಯೂ ಆದ ನಿನ್ನನ್ನು ಒಡೆಯನನ್ನಾಗಿ ಪಡೆದು ರಾಕ್ಷಸ ಸಹಿತವಾದ ಲಂಕೆಯು ನಿನ್ನಿಂದ ನಾಶವಾಗಲಾರದು ತಾನೆ ?

ನಿನ್ನಂತಹ ಸ್ವೇಚ್ಛಾಚಾರಿ ದುರಾಚಾರಿ ಪಾಪ ಬುದ್ಧಿಯ ರಾಜನು ತನ್ನನ್ನು ತನ್ನವರನ್ನು ತನ್ನ ರಾಷ್ಟ್ರವನ್ನು ಹಾಳುಗೆಡಹುತ್ತಾನೆ.

ನ ಚ ಪಿತ್ರಾ ಪರಿತ್ಯಕ್ತೋ ನಾಮರ್ಯಾದಃ ಕಥಂಚನ ।
ನ ಲುಬ್ಧೋ ನ ಚ ದುಃಶೀಲೋ ನ ಚ ಕ್ಷತ್ತ್ರಿಯಪಾಂಸನಃ ॥೮॥

ನ ಚ ಧರ್ಮಗುಣೈರ್ಹೀನಃ ಕೌಸಲ್ಯಾನಂದವರ್ಧನಃ ।
ನ ತೀಕ್ಷ್ಣೋ ನ ಚ ಭೂತಾನಾಂ ಸರ್ವೇಷಾಮಹಿತೇ ರತಃ ॥೯॥

ವಂಚಿತಂ ಪಿತರಂ ದೃಷ್ಟ್ವಾ ಕೈಕೇಯ್ಯಾ ಸತ್ಯವಾದಿನಮ್ ।
ಕರಿಷ್ಯಾಮೀತಿ ಧರ್ಮಾತ್ಮಾ ತಾತ ಪ್ರವ್ರಜಿತೋ ವನಮ್ ॥೧೦॥

ಕೈಕೇಯ್ಯಾಃ ಪ್ರಿಯಕಾಮಾರ್ಥಂ ಪಿತುರ್ದಶರಥಸ್ಯ ಚ ।
ಹಿತ್ವಾ ರಾಜ್ಯಂ ಚ ಭೋಗಾಂಶ್ಚ ಪ್ರವಿಷ್ಟೋ ದಂಡಕಾವನಮ್ ॥೧೧॥

ನ ರಾಮಃ ಕರ್ಕಶಸ್ತಾತ ನಾವಿದ್ವಾನ್ನಾಜಿತೇಂದ್ರಿಯಃ ।
ಅನೃತಂ ದುಃಶ್ರುತಂ ಚೈವ ನೈವ ತ್ವಂ ವಕ್ತುಮರ್ಹಸಿ ॥೧೨॥

ರಾಮನು ನೀನು ಹೇಳಿದಂತೆ ತಂದೆಯಿಂದ ಬಹಿಷ್ಕೃತನು ಅಲ್ಲ. ಲೋಕ-ಮರ್ಯಾದೆಯನ್ನು ಮೀರುವವನೂ ಅಲ್ಲ. ಲುಬ್ಧನೂ ಅಲ್ಲ. ದುಃಶೀಲನೂ ಅಲ್ಲ. ಕ್ಷತ್ರಿಯ ಕುಲಕಲಂಕನೂ ಅಲ್ಲ. ಕೌಸಲ್ಯಾನಂದವರ್ಧನ ರಾಮನು ಧಾರ್ಮಿಕ. ಗುಣರಹಿತನೂ ಅಲ್ಲ. ಯಾರ ಬಗ್ಗೆಯೂ ಕಠಿಣವಾಗಿ ವರ್ತಿಸುವವನಲ್ಲ. ಯಾರಿಗು ಅಹಿತಮಾಡುವುದರಲ್ಲಿ ಆಸಕ್ತನು ಅಲ್ಲ.

ಸತ್ಯವಾದಿ ತಂದೆಯು ಕೈಕೇಯಿಯಿಂದ ವಂಚಿತನಾದದ್ದನ್ನು ಕಂಡು ತಂದೆಯ ಮಾತನ್ನು ಸತ್ಯಗೊಳಿಸಲು ರಾಜ್ಯವನ್ನು ಎಲ್ಲ ಭೋಗಗಳನ್ನು ಪರಿತ್ಯಾಗ ಮಾಡಿ ದಂಡಕಾರಣ್ಯವನ್ನು ಪ್ರವೇಶಿಸಿದವನು.

ರಾಮನು ದಡ್ಡನಲ್ಲ, ಅಜಿತೇಂದ್ರಿಯನೂ ಅಲ್ಲ, ಅವನ ಕುರಿತಾಗಿ ಸುಳ್ಳನ್ನಾಗಲಿ ತಪ್ಪಾಗಿ ಕೇಳಿಸಿಕೊಂಡದ್ದನ್ನಾಗಲಿ ಹೇಳಲು ನೀನು ಅರ್ಹನಲ್ಲ.

ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯಪರಾಕ್ರಮಃ ।
ರಾಜಾ ಸರ್ವಸ್ಯ ಲೋಕಸ್ಯ ದೇವಾನಾಂ ಮಘವಾನಿವ ॥೧೩॥

ಕಥಂ ತ್ವಂ ತಸ್ಯ ವೈದೇಹೀಂ ರಕ್ಷಿತಾಂ ಸ್ವೇನ ತೇಜಸಾ ।
ಇಚ್ಛಸಿ ಪ್ರಸಭಂ ಹರ್ತುಂ ಪ್ರಭಾಮಿವ ವಿವಸ್ವತಃ ॥೧೪॥

ಶರಾರ್ಚಿಷಮನಾಧೃಷ್ಯಂ ಚಾಪಖಡ್ಗೇಂಧನಂ ರಣೇ ।
ರಾಮಾಗ್ನಿಂ ಸಹಸಾ ದೀಪ್ತಿಂ ನ ಪ್ರವೇಷ್ಟುಂ ತ್ವಮರ್ಹಸಿ ॥೧೫॥

ಧನುರ್ವ್ಯಾದಿತದೀಪ್ತಾಸ್ಯಂ ಶರಾರ್ಚಿಷಮಮರ್ಷಣಮ್ ।
ಚಾಪಪಾಶಧರಂ ವೀರಂ ಶತ್ರುಸೈನ್ಯಪ್ರಹಾರಿಣಮ್ ॥೧೬॥

ರಾಜ್ಯಂ ಸುಖಂ ಚ ಸಂತ್ಯಜ್ಯ ಜೀವಿತಂ ಚೇಷ್ಟಮಾತ್ಮನಃ ।
ನಾತ್ಯಾಸಾದಯಿತುಂ ತಾತ ರಾಮಾಂತಕಮಿಹಾರ್ಹಸಿ ॥೧೭॥

ರಾಮ ಎಂದರೆ ಮೂರ್ತಿವೆತ್ತ ಧರ್ಮವೆ. ಸಾಧು ಪುರುಷ, ವ್ಯರ್ಥವಾಗದ ಪರಾಕ್ರಮದವನು. ದೇವತೆಗಳಿಗೆ ಇಂದ್ರ ಹೇಗೋ ಹಾಗೆ ಎಲ್ಲ ಲೋಕಗಳಿಗೆ ರಾಜ.

ರಾಮನ ಸ್ವಂತತೇಜಸ್ಸಿನಿಂದ ಸುರಕ್ಷಿತಳಾದ ಸೀತೆಯನ್ನು ಬಲಾತ್ಕಾರವಾಗಿ ಅಪಹರಿಸಲು ಹೇಗೆ ಬಯಸುವಿ ? ಸೂರ್ಯನ ತೇಜಸ್ಸಿನಿಂದ ಸುರಕ್ಷಿತವಾದ ಅವನ ಪ್ರಭೆಯನ್ನು ಅಪಹರಿಸಲು ಬಯಸಿದಂತೆ !

ಶ್ರೀರಾಮ ಮುಟ್ಟಲಾಗದ ಅಗ್ನಿಯಂತೆ. ಬಾಣಗಳೇ ಜ್ವಾಲೆಗಳು! ರಣಾಂಗಣ-ದಲ್ಲಿ ಬಿಲ್ಲು ಖಡ್ಗಗಳೇ ಇಂಧನಗಳು. ಪ್ರಜ್ವಲಿಸುವ ರಾಮ ಎಂಬ ಬೆಂಕಿಯಲ್ಲಿ ಅವಿವೇಕಿಯಂತೆ ಪ್ರವೇಶಿಸದಿರು.

ಬಿಲ್ಲು ಎಂಬುದೇ ರಾಮ ಎಂಬ ಅಂತಕನ ಬೆಳಗುವ ತೆರೆದ ಬಾಯಿ. ಬಾಣಗಳೇ ಕಿಡಿಗಳು. ಯಾರಿಂದಲೂ ಸಹಿಸಲಾಗದು, ಬಿಲ್ಲು ಎಂಬ ಪಾಶವನ್ನು

ಧರಿಸಿ ಶತ್ರುಸೈನ್ಯವನ್ನು ಸದೆ ಬಡಿವ ವೀರ. ರಾಜ್ಯವನ್ನು ಸುಖವನ್ನು ನಿನಗಿಷ್ಟವಾದ ನಿನ್ನ ಬದುಕನ್ನು ಪರಿತ್ಯಾಗ ಮಾಡಿ ರಾಮ ಎಂಬ ಅಂತಕನ ಬಳಿ ಸುಳಿಯಬೇಡ.

ಅಪ್ರಮೇಯಂ ಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ ।
ನ ತ್ವಂ ಸಮರ್ಥಸ್ತಾಂ ಹರ್ತುಂ ರಾಮಚಾಪಾಶ್ರಯಾಂ ವನೇ ॥೧೮॥

ತಸ್ಯ ಸಾ ನರಸಿಂಹಸ್ಯ ಸಿಂಹೋರಸ್ಕಸ್ಯ ಭಾಮಿನೀ ।
ಪ್ರಾಣೇಭ್ಯೋಽಪಿ ಪ್ರಿಯತರಾ ಭಾರ್ಯಾ ನಿತ್ಯಮನುವ್ರತಾ ॥೧೯॥

ನ ಸಾ ಧರ್ಷಯಿತುಂ ಶಕ್ಯಾ ಮೈಥಿಲ್ಯೋಜಸ್ವಿನಃ ಪ್ರಿಯಾ ।
ದೀಪ್ತಸ್ಯೇವ ಹುತಾಶಸ್ಯ ಶಿಖಾ ಸೀತಾ ಸುಮಧ್ಯಮಾ ॥೨೦॥

ಜನಕತನೆಯ ಸೀತೆ ಯಾರ ಸತಿಯೋ ಅವನ ತೇಜಸ್ ತಿಳಿಯಲಾಗದುದು. ಅಳೆಯಲಾಗದುದು. ರಾಮನ ಬಿಲ್ಲಿನಾಸರೆಯಲ್ಲಿರುವ ಆ ಸೀತೆಯನ್ನು ಅಪಹರಿಸಲು ನೀನು ಸಮರ್ಥನಲ್ಲ.

ಸಿಂಹದ ಎದೆಯಂಥ ಎಂಟೆದೆಯವನಾದ ಪುರುಷೋತ್ತಮನ ಪ್ರಿಯ ಭಾಮಿನೀ ಸೀತೆ ರಾಮನಿಗೆ ನಿತ್ಯದಲ್ಲಿ ಅನುಸರಿಸಿ ನಡೆವ ಪ್ರಾಣಕ್ಕಿಂತ ಹೆಚ್ಚು ಪ್ರಿಯಳಾದ ಮಡದಿ.

ಓಜಸ್ವಿ ರಾಮನ ಪ್ರಿಯ ಮಡದಿ ಸುಂದರ ನಡುವಿನ ಮೈಥಿಲೀ ಪ್ರಜ್ವಲಿಸುವ ಬೆಂಕಿಯ ಜ್ವಾಲೆಯಂತೆ ! ಆಕ್ರಮಿಸಲು ಸಾಧ್ಯವಿಲ್ಲ = ಬಲಾತ್ಕರಿಸಲು ಸಾಧ್ಯವಿಲ್ಲ.

ಕಿಮುದ್ಯಮಮಿಮಂ ವ್ಯರ್ಥಂ ಕೃತ್ವಾ ತೇ ರಾಕ್ಷಸಾಧಿಪ ।
ದೃಷ್ಟಶ್ಚೇತ್ತ್ವಂ ರಣೇ ತೇನ ತದಂತಂ ತವ ಜೀವಿತಮ್ ॥೨೧॥

ಜೀವಿತಂ ಚ ಸುಖಂ ಚೈವ ರಾಜ್ಯಂ ಚೈವ ಸುದುರ್ಲಭಮ್ ।
ಯದೀಚ್ಛಸಿ ಚಿರಂ ಭೋಕ್ತುಂ ಮಾ ಕೃಥಾ ರಾಮವಿಪ್ರಿಯಮ್ ॥೨೨॥

ಈ ವ್ಯರ್ಥವಾದ ಪ್ರವೃತ್ತಿಯಿಂದ ನಿನಗೇನು ಪ್ರಯೋಜನ ? ರಣರಂಗದಲ್ಲಿ ರಾಮನ ಕಣ್ಣಿಗೆ ನೀನು ಗೋಚರನಾದರೆ ಅದು ನಿನ್ನ ಬದುಕಿನ ಕೊನೆಯೆಂದು ಭಾವಿಸು.

ಬದುಕನ್ನು, ಸುಖವನ್ನು ಮತ್ತು ಅತ್ಯಂತ ದುರ್ಲಭವಾದ ಸಾಮ್ರಾಜ್ಯವನ್ನು ಬಹುಕಾಲ ಭೋಗಿಸಲು ಬಯಸುವುದಾದರೆ ರಾಮನಿಗೆ ಅಪ್ರಿಯವಾದುದನ್ನು ಮಾಡಬೇಡ.

ಸ ಸರ್ವೈಃ ಸಚಿವೈಃ ಸಾರ್ಧಂ ವಿಭೀಷಣಪುರೋಗಮೈಃ ।
ಮಂತ್ರಯಿತ್ವಾ ತು ಧರ್ಮಿಷ್ಠೈಃ ಕೃತ್ವಾ ನಿಶ್ಚಯಮಾತ್ಮನಃ ॥೨೩॥

ದೋಷಾಣಾಂ ಚ ಗುಣಾನಾಂ ಚ ಸಂಪ್ರಧಾರ್ಯ ಬಲಾಬಲಮ್ ।
ಆತ್ಮನಶ್ಚ ಬಲಂ ಜ್ಞಾತ್ವಾ ರಾಘವಸ್ಯ ಚ ತತ್ತ್ವತಃ ॥೨೪॥

ಹಿತಾಹಿತಂ ವಿನಿಶ್ಚಿತ್ಯ ಕ್ಷಮಂ ತ್ವಂ ಕರ್ತುಮರ್ಹಸಿ ॥

ಅಹಂ ತು ಮನ್ಯೇ ತವ ನ ಕ್ಷಮಂ ರಣೇ
ಸಮಾಗಮಂ ಕೋಸಲರಾಜಸೂನುನಾ ।
ಇದಂ ಹಿ ಭೂಯಃ ಶೃಣು ವಾಕ್ಯಮುತ್ತಮಂ
ಕ್ಷಮಂ ಚ ಯುಕ್ತಂ ಚ ನಿಶಾಚರೇಶ್ವರ ॥೨೫॥

ವಿಭೀಷಣ ಮುಂತಾದ ಧರ್ಮಿಷ್ಠರಾದ ಸಚಿವರೊಂದಿಗೆ ನಿನ್ನ ನಿರ್ಧಾರದ ಬಗ್ಗೆ ಮಂತ್ರಾಲೋಚನೆ ಮಾಡು. ಸೀತಾಪಹಾರದ ಗುಣದೋಷಗಳನ್ನು ನಿನ್ನ ಹಾಗು ರಾಮನ ಬಲಾಬಲಗಳನ್ನು ವಿಚಾರ ಮಾಡಿ, ಯಾವುದು ಹಿತ ? ಯಾವುದು ಅಹಿತ? ಎಂಬುದನ್ನೂ ವಿಮರ್ಶೆ ಮಾಡಿ ಉಚಿತವಾದ ಕರ್ತವ್ಯವನ್ನು ಮಾಡು.

ರಣರಂಗದಲ್ಲಿ ರಾಮನೊಂದಿಗಿನ ಸಮಾಗಮ ನಿನಗೆ ಯೋಗ್ಯವಲ್ಲವೆಂದು ನಾನು ಭಾವಿಸುತ್ತೇನೆ. ಇದು ಮತ್ತೆ ಮತ್ತೆ ನಿನಗೆ ಹೇಳುವ ಉತ್ತಮವಾದ ಯುಕ್ತವಾದ ನನ್ನ ಮಾತು ನಿಶಾಚರೇಶ್ವರ ! ಕೇಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂವತ್ತೇಳನೆಯ ಸರ್ಗ ಮುಗಿಯಿತು.

❖

ಅಷ್ಟಾತ್ರಿಂಶಃ ಸರ್ಗಃ

ಕಥಾಸಾರಾಂಶ– ಮಾರೀಚ ತನ್ನ ಅನುಭವವನ್ನು ರಾವಣನಿಗೆ ಹೇಳುತ್ತಾನೆ – ನಾನೂ ಒಂದು ಕಾಲದಲ್ಲಿ ಹತ್ತುಸಾವಿರ ಆನೆಯ ಬಲವನ್ನು ಪಡೆದಿದ್ದು ವೀರ್ಯಮದದಿಂದ ಪರಿಘಾಯುಧ ಹಿಡಿದು ಲೋಕಭಯಂಕರನಾಗಿ ಋಷಿ ಮಾಂಸಗಳನ್ನು ತಿನ್ನುತ್ತ ಋಷಿಋಷಿಯಾಗಿ ದಂಡ ಕಾರಣ್ಯದಲ್ಲಿ ಅಲೆಯುತ್ತಿದ್ದೆ – ವರಬಲದಿಂದ ದೃಪ್ತನಾಗಿ.

ನನಗೆ ಹೆದರಿದ ಧರ್ಮಾತ್ಮಾ ವಿಶ್ವಾಮಿತ್ರ ಮುನಿ ದಶರಥನ ಬಳಿ ಹೋಗಿ ತನ್ನ ಯಜ್ಞ ಸಂರಕ್ಷಣೆಗೆ ರಾಮನನ್ನು ಕಳುಹಿಸುವಂತೆ ಕೇಳಿದ. ಇನ್ನೂ ರಾಮನಿಗೆ ಹನ್ನೆರಡು ವರ್ಷ. ನಾನೇ ಚತುರಂಗಸೇನಾಸಮೇತನಾಗಿ ರಾಕ್ಷಸರನ್ನು ಸದೆ ಬಡಿಯಲು ಬರುತ್ತೇನೆಂದ ದಶರಥ. ಆದರೆ ಮುನಿ ವಿಶ್ವಾಮಿತ್ರ, 'ದಶರಥ ! ನೀನು ಮಾಡಿದ ಯುದ್ಧಗಳನ್ನು ಕೇಳಿದ್ದೇನೆ. ಮಾರೀಚನನ್ನು ನಿಗ್ರಹಿಸಲು ನಿನ್ನಿಂದ ಸಾಧ್ಯವಿಲ್ಲ. ರಾಮ ಮಹಾತೇಜಸ್ವಿ. ಮಹಾವೀರ ನೀನು ! ನಿನ್ನ ಸೈನ್ಯ ಬೇಕಾಗಿಲ್ಲ. ಒಬ್ಬ ರಾಮ ಸಾಕು. ಅವನು ಬಾಲಕನಾಗಿದ್ದರೂ ಮಾರೀಚನನ್ನು ನಿಗ್ರಹಿಸಬಲ್ಲ ಸಮರ್ಥ ಎಂದು ಹೇಳಿ ರಾಮನನ್ನು ಕರೆದುಕೊಂಡು ಬಂದರು.

'ಬಾಲಕ ಇವ, ಇವನೇನು ಮಹಾ' ಎಂದು ರಾಮನನ್ನು ಅವಗಣಿಸಿ ವಿಶ್ವಾಮಿತ್ರರ ಯಜ್ಞ ಹಾಳುಗೆಡಹಲು ಹೋಗಿದ್ದೆ. ಆದರೆ ರಾಮ ಒಂದೇ ಬಾಣದಿಂದ ನನ್ನನ್ನು ನೂರು ಯೋಜನದಾಚೆ ಈ ಸಮುದ್ರಕ್ಕೆ ಬಂದು ಬೀಳುವಂತೆ ಮಾಡಿದ ! ಬಹುಕಾಲದ ನಂತರ ಎಚ್ಚರ ಬಂದು ಲಂಕೆಗೆ ಹಿಂತಿರುಗಿದ್ದೆ. ಅವನು ಕೊಲ್ಲಲು ಬಯಸದೆ ಇದ್ದದ್ದರಿಂದ ನಾನು ರಕ್ಷಿತನಾದೆ ಅಷ್ಟೆ.

ನಾನು ತಡೆದರೂ ಈಗ ಅವನೊಂದಿಗೆ ಯುದ್ಧ ಮಾಡಿದರೆ ಘೋರ ಆಪತ್ತಿಗೆ ಒಳಗಾಗುವಿ. ಓಡಾಡಿಕೊಂಡು, ಬಯಸಿದ ಭೋಗಗಳನ್ನು ಅನುಭವಿಸುತ್ತಾ ಆನಂದವಾಗಿರುವ ರಕ್ಕಸರಿಗೆ ಮಹಾ ಅನರ್ಥವನ್ನು ತಂದೊಡ್ಡುವಿ.

ರತ್ನ ಭೂಷಿತವಾಗಿ ಸುಂದರವಾಗಿರುವ ವೈಭವದ ಲಂಕೆ ಸೀತಾನಿಮಿತ್ತವಾಗಿ ಧ್ವಂಸವಾಗುವುದನ್ನು ನೋಡುವಿ. ಶುದ್ಧರಾದವರು ಪಾಪ ಮಾಡದಿದ್ದರೂ ಪಾಪಿಗಳ ಸಹವಾಸದಿಂದ ನಾಶವಾಗುತ್ತಾರೆ ಕೊಳದಲ್ಲಿ ಹಾವುಗಳೊಟ್ಟಿಗೆ ಇರುವ ಮೀನುಗಳು ಗಿಡುಗಗಳಿಗೆ ಬಲಿಯಾಗುವಂತೆ.

ನಿನ್ನ ದೋಷದಿಂದ ಸಪತ್ನೀಕರಾದ, ಅಪತ್ನೀಕರಾದ ರಕ್ಕಸರು ಸತ್ತ ಬಿದ್ದಿರುವುದನ್ನು ನೋಡಬೇಕಾಗುತ್ತದೆ ನೀನು. ಲಂಕೆಯಲ್ಲಿ ಬೆಂಕಿಯಲ್ಲಿ ಬೆಂದು ಹೋಗುವುದನ್ನು

ನೋಡುವಿ. ಸಾವಿರಾರು ಹೆಣ್ಣುಗಳು ನಿನ್ನ ಜೊತೆಯಲ್ಲಿದ್ದಾರೆ. ಸ್ವಪತ್ನೀರತನಾಗಿ ನೆಮ್ಮದಿಯಾಗಿ ಬದುಕುವ ದಾರಿ ನೋಡು. ಯಮಲೋಕಕ್ಕೆ ಹೋಗುವ ಧಾವಂತವೇಕೆ ?

❖

ರಾಮಾಸ್ತ್ರಮಹಿಮಾ

ಕದಾಚಿದಪ್ಯಹಂ ವೀರ್ಯಾತ್ ಪರ್ಯಟನ್ ಪೃಥಿವೀಮಿಮಾಮ್ ।
ಬಲಂ ನಾಗಸಹಸ್ರಸ್ಯ ಧಾರಯನ್ ಪರ್ವತೋಪಮಃ ॥೧॥

ನೀಲಜೀಮೂತಸಂಕಾಶಸ್ತಪ್ತಕಾಂಚನಕುಂಡಲಃ ।
ಭಯಂ ಲೋಕಸ್ಯ ಜನಯನ್ ಕಿರೀಟೀ ಪರಿಘಾಯುಧಃ ॥೨॥

ವ್ಯಚರಂ ದಂಡಕಾರಣ್ಯೇ ಋಷಿಮಾಂಸಾನಿ ಭಕ್ಷಯನ್ ।
ವಿಶ್ವಾಮಿತ್ರೋಽಥ ಧರ್ಮಾತ್ಮಾ ಮದ್ವಿತ್ರಸ್ತೋ ಮಹಾಮುನಿಃ ॥೩॥

ಒಂದೊಮ್ಮೆ ನಾನೂ ಕೂಡ ವೀರ್ಯದ ಹಮ್ಮಿನಿಂದ ಹತ್ತು ಸಾವಿರ ಆನೆಯ ಬಲವನ್ನು ಧರಿಸಿ ಪರ್ವತದಂತೆ, ಈ ಪೃಥಿವಿಯನ್ನು ಅಲೆಯುತ್ತಾ ಕಪ್ಪುಬಣ್ಣದ ಮೋಡದಂತೆ, ಪೊಳೆವ ಬಂಗಾರದ ಕುಂಡಲವುಳ್ಳವನಾಗಿ ಕಿರೀಟಿಯಾಗಿ ಪರಿಘಾಯುಧ ಪಾಣಿಯಾಗಿ ಲೋಕಕ್ಕೆ ಭಯಂಕರನಾಗಿ ದಂಡಕಾರಣ್ಯದಲ್ಲಿ ಋಷಿಗಳ ಮಾಂಸಗಳನ್ನು ತಿನ್ನುತ್ತ ತಿರುಗಾಡುತ್ತಿದ್ದೆ.

ಬಳಿಕ ನನ್ನಿಂದ ಹೆದರಿದ ಧರ್ಮಾತ್ಮ ಮಹಾಮುನಿ ವಿಶ್ವಾಮಿತ್ರ ಮಹಾಮುನಿಗಳು ತಾವು ದಶರಥನ ಬಳಿ ಹೋಗಿ ಇದನ್ನು ಹೇಳಿದರು –

ಸ್ವಯಂ ಗತ್ವಾ ದಶರಥಂ ನರೇಂದ್ರಮಿದಮಬ್ರವೀತ್ ।
ಅಸೌ ರಕ್ಷತು ಮಾಂ ರಾಮಃ ಪರ್ವಕಾಲೇ ಸಮಾಹಿತಃ ॥೪॥

ಮಾರೀಚಾನ್ಮೇ ಭಯಂ ಘೋರಂ ಸಮುತ್ಪನ್ನಂ ನರೇಶ್ವರ ।
ಇತ್ಯೇವಮುಕ್ತೋ ಧರ್ಮಾತ್ಮಾ ರಾಜಾ ದಶರಥಸ್ತದಾ ॥೫॥

ರಾಜನೇ ! ನನಗೆ ಮಾರೀಚನಿಂದ ಘೋರ ಭಯ ಒದಗಿದೆ. ಪರ್ವಕಾಲದಲ್ಲಿ ರಾಮ ಬಂದು ಇಂದು ನನ್ನನ್ನು ರಕ್ಷಿಸಲಿ.

ಮುನಿಗಳು ಹೇಗೆ ಹೇಳಿದಾಗ ಧರ್ಮಾತ್ಮ ದಶರಥ ಮಹಾಭಾಗರು ಮಹಾಮುನಿಗಳೂ ಆದ ವಿಶ್ವಾಮಿತ್ರರಿಗೆ ಇಂತೆಂದನು.

ಪ್ರತ್ಯುವಾಚ ಮಹಾಭಾಗಂ ವಿಶ್ವಾಮಿತ್ರಂ ಮಹಾಮುನಿಮ್ ।
ಬಾಲೋ ದ್ವಾದಶವರ್ಷೋ೯ಽಯಮಕೃತಾಸ್ತ್ರಶ್ಚ ರಾಘವಃ ॥೬॥

ಕಾಮಂ ತು ಮಮ ಯತ್ಸೈನ್ಯಂ ಮಯಾ ಸಹ ಗಮಿಷ್ಯತಿ ।
ಬಲೇನ ಚತುರಂಗೇಣ ಸ್ವಯಮೇತ್ಯ ನಿಶಾಚರಾನ್ ॥೭॥

ವಧಿಷ್ಯಾಮಿ ಮುನಿಶ್ರೇಷ್ಠ ಶತ್ರೂಂಸ್ತವ ಯಥೇಪ್ಸಿತಮ್ ।
ಇತ್ಯೇವಮುಕ್ತಃ ಸ ಮುನೀ ರಾಜಾನಂ ಪುನರಬ್ರವೀತ್ ॥೮॥

ರಾಮಾನ್ನಾನ್ಯದ್ಬಲಂ ಲೋಕೇ ಪರ್ಯಾಪ್ತಂ ತಸ್ಯ ರಕ್ಷಸಃ ।
ದೇವತಾನಾಮಪಿ ಭವಾನ್ ಸಮರೇಷ್ವಭಿಪಾಲಕಃ ॥೯॥

ಆಸೀತ್ತವ ಕೃತಂ ಕರ್ಮ ತ್ರಿಲೋಕೇ ವಿದಿತಂ ನೃಪ ।
ಕಾಮಮಸ್ತು ಮಹತ್ ಸೈನ್ಯಂ ತಿಷ್ಠತ್ವಿಹ ಪರಂತಪ ॥೧೦॥

ಬಾಲೋ೽ಪ್ಯೇಷ ಮಹಾತೇಜಾಃ ಸಮರ್ಥಸ್ತಸ್ಯ ನಿಗ್ರಹೇ ।
ಗಮಿಷ್ಯೇ ರಾಮಮಾದಾಯ ಸ್ವಸ್ತಿ ತೇ೽ಸ್ತು ಪರಂತಪ ॥೧೧॥

ಈ ರಾಘವ ಇನ್ನೂ ಹದಿನಾರು ವರ್ಷದ ಬಾಲಕ. ಅಸ್ತ್ರಾಭ್ಯಾಸದಲ್ಲಿ ಪರಿಣತನಲ್ಲ. ಆದ್ದರಿಂದ ನನ್ನ ಸೈನ್ಯವು ನನ್ನೊಂದಿಗೆ ಬರುತ್ತದೆ.

ಮುನಿಶ್ರೇಷ್ಠರೆ ! ಚತುರಂಗ ಸೇನೆಯ ಜೊತೆಗೆ ನಾನೇ ಬಂದು ನೀವು ಬಯಸಿದ ಶತ್ರುಗಳನ್ನು ಕೊಲ್ಲುತ್ತೇನೆ. ದಶರಥನು ಹೀಗೆನ್ನಲು ವಿಶ್ವಾಮಿತ್ರರು ರಾಜನಿಗೆ ಹೀಗೆ ಹೇಳಿದರು - ರಾಮನ ಹೊರತು ಬೇರಾವ ಬಲವೂ ರಕ್ಕಸ ಮಾರೀಚನ ನಿಗ್ರಹಕ್ಕೆ ಸಮರ್ಥವಲ್ಲ.

ದೇವ - ದಾನವರ ಯುದ್ಧದಲ್ಲಿ ನೀನು ದೇವತೆಗಳ ಪರವಾಗಿ ಯುದ್ಧ ಮಾಡಿರುವಿ. ಅದು ಮೂರು ಲೋಕಕ್ಕೂ ತಿಳಿದ ಸಂಗತಿ. ಈಗ ನಿನ್ನ ಮಹಾಸೈನ್ಯ ಇಲ್ಲಿಯೇ ಇರಲಿ. ರಾಮ ಬಾಲಕನಾದರು ಮಹಾತೇಜಸ್ವಿ. ಅವನೇ ಮಾರೀಚನ ನಿಗ್ರಹದಲ್ಲಿ ಸಮರ್ಥ. ರಾಮನನ್ನು ಕರೆದುಕೊಂಡು ಹೋಗುತ್ತಾನೆ. ನಿನಗೆ ಮಂಗಳವಾಗಲಿ ಪರಂತಪನೇ !

ವಿಶೇಷಾಂಶ - ಇಲ್ಲಿ ದಶರಥ 'ಬಾಲೋ ದ್ವಾದಶವರ್ಷಃ' =ರಾಮನು ಹನ್ನೆರಡುವರ್ಷದ ಬಾಲಕ ಎಂದಿರುವನು. ಆದರೆ ಬಾಲಕಾಂಡದಲ್ಲಿ ದಶರಥ

ವಿಶ್ವಾಮಿತ್ರರಲ್ಲಿ, 'ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ' = ನನ್ನ ರಾಮನಿಗೆ ಇನ್ನೂ ಹದಿನಾರು ತುಂಬಲು ಕೆಲವು ತಿಂಗಳು ಕಡಿಮೆಯಷ್ಟೆ. ಅಷ್ಟು ಚಿಕ್ಕ ಬಾಲಕ' ಎಂದಿರುವನು.

ಹೀಗೆ ವಿರೋಧ ಕಂಡು ಬರುತ್ತದೆ. ವಾಲ್ಮೀಕಿ ರಾಮಾಯಣದ ತಿಲಕ ವ್ಯಾಖ್ಯಾನದಲ್ಲಿ 'ಊನದ್ವಾದಶ ವರ್ಷೋऽಯಂ' ಎಂದು ಪಾಠವಿದೆ. ಹನ್ನೆರಡು ತುಂಬಲು ಕೆಲವು ತಿಂಗಳು ಕಡಿಮೆ ಎಂದು ಅರ್ಥವಾಗುತ್ತದೆ – ಹೀಗೆ ವಿವರಣೆ ಕೊಟ್ಟು ಊನದ್ವಾದಶವರ್ಷಃ – ಎಂಬುದಕ್ಕೆ ಊನಷೋಡಶವರ್ಷಃ = ಹದಿನಾರು ತುಂಬಲು ಕೆಲವು ತಿಂಗಳು ಕಡಿಮೆಯವನು – ಎಂದು ಅರ್ಥೈಸಲಾಗಿದೆ. ಇದಕ್ಕೆ ಆಧಾರವಾಗಿ ಬಾಲಕಾಂಡದ ದಶರಥನ ಮಾತನ್ನು ಉದಾಹರಿಸಲಾಗಿದೆ. 'ದ್ವಾದಶವರ್ಷ' ಎಂಬ ಪದಕ್ಕೆ ಷೋಡಶವರ್ಷ ಎಂಬ ಅರ್ಥ ಹೇಗೆ ? ಎಂಬುದನ್ನು 'ದ್ವೌಚ ದ್ವೌಚ ಇತಿ ಏಕಶೇಷೇಣ ಲಬ್ಧಃ' – ಎಂದು ಏಕಶೇಷಸಮಾಸದಿಂದ ಈ ಅರ್ಥಲಾಭ ಎಂದು ವಿವರಿಸಲಾಗಿದೆ.

ಗೋವಿಂದರಾಜೀಯದಲ್ಲಿ 'ದ್ವಾದಶವರ್ಷಃ = ದ್ವಾದಶವರ್ಷ ವಯಸ್ಕಃ' ಎಂದು ಅರ್ಥ ಬರೆದು 'ಕೇಚಿತ್ತು ಇದಂ ರಾವಣವಿಭೀಷಯೋಕ್ತಂ ವಸ್ತುತಃ ಊನಷೋಡಶವರ್ಷಃ ಇತ್ಯುಕ್ತಮಿತ್ಯೂಚುಃ = ಕೆಲವರು ಮಾರೀಚನ ಮಾತು ರಾವಣನ ಭಯದಿಂದ ಹೇಳೋಣವಾಗಿದೆ. ವಸ್ತುತಃ ಊನ ಷೋಡಶ ವರ್ಷದವನೇ ರಾಮ ಎನ್ನುವರು' – ಎಂದು ಅಭಿಪ್ರಾಯಪಡುತ್ತಾರೆ.

ಶ್ರೀನಾರಾಯಣ ಪಂಡಿತಾಚಾರ್ಯರು ತಮ್ಮ ಸಂಗ್ರಹ ರಾಮಾಯಣದಲ್ಲಿ –''ಊನಷೋಡಶವರ್ಷಸ್ಯ ವಿಶ್ವಾಮಿತ್ರಾರ್ಥಮೀಯುಷಃ'' ಎಂದೆ ಮಾರೀಚನ ಮಾತನ್ನು ವಿವರಿಸುತ್ತಾರೆ.

ದಶರಥ – ವಿಶ್ವಾಮಿತ್ರರ ಬಾಲಕಾಂಡದ ಸಂವಾದಕ್ಕೆ ಮಾರೀಚನೇನೂ ಪ್ರತ್ಯಕ್ಷಸಾಕ್ಷಿಯಲ್ಲ. ಅವನ ಊಹೆ ಎಂದೂ ಭಾವಿಸಬಹುದು. ರಾವಣನ ಆಲೋಚನೆಯಂತೆ ನಡೆದರೆ ತನಗೆ ರಾಮನಿಂದ ಸಾವು ಖಚಿತ ಎಂಬ ಭಯದಲ್ಲಿ ಗಲಿಬಿಲಿಗೊಂಡು ಆಡಿರುವ ಮಾತು.

ತಿಲಕವ್ಯಾಖ್ಯಾನದಂತೆ ಏಕಶೇಷ ಸಮಾಸದಿಂದ ಸಮಾಧಾನಪಡಬಹುದು.

ರಾಮನ ಮುದ್ದು ಮುಖದ ಸೊಬಗನ್ನು ಕಂಡ ಮಾರೀಚನಿಗೆ ಇನ್ನೂ ಹನ್ನೆರಡು ತುಂಬದವನು ಎನಿಸಿರಬೇಕು.

ಸಂಗ್ರಹ ರಾಮಾಯಣವು ವಾಲ್ಮೀಕಿ ರಾಮಾಯಣ ತಾತ್ಪರ್ಯ ನಿರ್ಣಯಗಳ ಸೇತುಗ್ರಂಥವಾಗಿದೆ.

ಏವಮುಕ್ತ್ವಾ ತು ಸ ಮುನಿಸ್ತಮಾದಾಯ ನೃಪಾತ್ಮಜಮ್ ।
ಜಗಾಮ ಪರಮಪ್ರೀತೋ ವಿಶ್ವಾಮಿತ್ರಃ ಸ್ವಮಾಶ್ರಮಮ್ ॥೧೨॥

ತಂ ತದಾ ದಂಡಕಾರಣ್ಯೇ ಯಜ್ಞಮುದ್ದಿಶ್ಯ ದೀಕ್ಷಿತಮ್ ।
ಬಭೂವೋಪಸ್ಥಿತೋ ರಾಮಶ್ಚಿತ್ರಂ ವಿಸ್ಫಾರಯನ್ ಧನುಃ ॥೧೩॥

ಅಜಾತವ್ಯಂಜನಃ ಶ್ರೀಮಾನ್ ಪದ್ಮಪತ್ರನಿಭೇಕ್ಷಣಃ ।
ಕಾಕಪಕ್ಷಧರೋ ಧನ್ವೀ ಶಿಖೀ ಕನಕಮಾಲಯಾ ॥೧೪॥

ಶೋಭಯನ್ ದಂಡಕಾರಣ್ಯಂ ದೀಪ್ತೇನ ಸ್ವೇನ ತೇಜಸಾ ।
ಅದೃಶ್ಯತ ತತೋ ರಾಮೋ ಬಾಲಚಂದ್ರ ಇವೋದಿತಃ ॥೧೫॥

ತತೋಽಹಂ ಮೇಘಸಂಕಾಶಸ್ತಪ್ತಕಾಂಚನಕುಂಡಲಃ ।
ಬಲೀ ದತ್ತವರೋ ದರ್ಪಾದಾಜಗಾಮ ತದಾಶ್ರಮಮ್ ॥೧೬॥

ತೇನ ದೃಷ್ಟಃ ಪ್ರವಿಷ್ಟೋಽಹಂ ಸಹಸೈವೋದ್ಯತಾಯುಧಃ ।
ಮಾಂ ತು ದೃಷ್ಟ್ವಾ ಧನುಃ ಸಜ್ಯಮಸಂಭ್ರಾಂತಶ್ಚಕಾರ ಸಃ ॥೧೭॥

ಅವಜಾನನ್ನಹಂ ಮೋಹಾದ್ಬಾಲೋಽಯಮಿತಿ ರಾಘವಮ್ ।
ವಿಶ್ವಾಮಿತ್ರಸ್ಯ ತಾಂ ವೇದಿಮಭ್ಯಧಾವಂ ಕೃತತ್ವರಃ ॥೧೮॥

ತೇನ ಮುಕ್ತಸ್ತತೋ ಬಾಣಃ ಶಿತಃ ಶತ್ರುನಿಬರ್ಹಣಃ ।
ತೇನಾಹಂ ತ್ವಾಹತಃ ಕ್ಷಿಪ್ತಃ ಸಮುದ್ರೇ ಶತಯೋಜನೇ ॥೧೯॥

ನೇಚ್ಛತಾ ತಾತ ಮಾಂ ಹಂತುಂ ತದಾ ವೀರೇಣ ರಕ್ಷಿತಃ ।
ರಾಮಸ್ಯ ಶರವೇಗೇನ ನಿರಸ್ತೋಽಹಮಚೇತನಃ ॥೨೦॥

ಪಾತಿತೋಽಹಂ ತದಾ ತಾತೇನ ಗಂಭೀರೇ ಸಾಗರಾಂಭಸಿ ।
ಪ್ರಾಪ್ಯ ಸಂಜ್ಞಾಂ ಚಿರಾತ್ತಾತ ಲಂಕಾ ಪ್ರತಿಗತಃ ಪುರೀಮ್ ॥೨೧॥

ಹೀಗೆ ಹೇಳಿ ಆ ವಿಶ್ವಾಮಿತ್ರರು ಪರಮಪ್ರೀತರಾಗಿ ರಾಜಪುತ್ರ ರಾಮನನ್ನು ಕರೆದುಕೊಂಡು ತನ್ನ ಆಶ್ರಮಕ್ಕೆ ತೆರಳಿದರು.

ದಂಡಕಾರಣ್ಯದಲ್ಲಿ ಯಜ್ಞ ದೀಕ್ಷಿತರಾದ ಮುನಿಯ ಪರವಾಗಿ ಚಿತ್ರವಾದ ಬಿಲ್ಲನ್ನು ಠೇಂಕಾರಗೊಳಿಸುತ್ತ ರಾಮನು ರಕ್ಷಣೆಗಾಗಿ ನಿಂತನು.

ಇನ್ನೂ ಯೌವನದ ಕುರುಹುಗಳು ಮೂಡದ ತಾವರೆಯ ಎಲೆಯಂಥ ಕಣ್ಣಿನವನಾದ, ಶಿಖಾಧಾರಿಯಾಗಿ ಏಕವಸ್ತ್ರಧರನಾಗಿದ್ದ ಸುವರ್ಣಮಾಲಾಲಂಕೃತನಾಗಿದ್ದ ಶ್ರೀಮಾನ್ ರಾಮನು ತನ್ನ ಪೊಳೆವ ತೇಜಸ್ಸಿನಿಂದ ಆಗ ತಾನೆ ಉದಿಸಿದ ಚಂದ್ರನಂತೆ ದಂಡ ಕಾರಣ್ಯವನ್ನು ಬೆಳಗುತ್ತಿದ್ದನು.

ಆಗ ನಾನು – ಮೇಘದಂತೆ ಇರುವ ಕನಕಕುಂಡಲಧರನು, ಬಲಿಷ್ಠನು, ವರಪಡೆದವನು – ದರ್ಪದಿಂದ ಆ ಆಶ್ರಮವನ್ನು ಹೊಕ್ಕಿದೆ. ಆಶ್ರಮವನ್ನು ಹೊಕ್ಕ ನಾನು ಅವನ ದೃಷ್ಟಿಗೆ ಗೋಚರನಾದೆ. ಕೂಡಲೆ ಆ ರಾಮ ಆಯುಧ ಎತ್ತಿ ಸ್ವಲ್ಪವೂ ಕಳವಳಗೊಳ್ಳದೆ ಬಿಲ್ಲಿಗೆ ಹೆದೆಯೇರಿಸಿದನು. 'ಇವನು ಹುಡುಗ' ಎಂದು ಮೋಹದಿಂದ ಇವನನ್ನು ಅವಗಣಿಸಿ ಅವಸರವಾಗಿ ಮುನಿಗಳ ಯಜ್ಞವೇದಿಯ ಬಳಿ ಸಾರಿದೆ. ರಾಮ ಬಿಟ್ಟ ಬಾಣವು ಶತ್ರುನಾಶಕವೂ ಹರಿತವು ಆಗಿತ್ತು.

ಆ ರಾಮಬಾಣದಿಂದ ಆಹತವಾಗಿ ನೂರು ಯೋಜನ ದೂರದ ಸಮುದ್ರಕ್ಕೆ ಎಸೆಯಲ್ಪಟ್ಟೆ. ನನ್ನನ್ನು ಕೊಲ್ಲಲು ಬಯಸದ ಆ ವೀರ ರಾಮನಿಂದ ರಕ್ಷಿತನಾಗಿ ಶರದ ವೇಗದಿಂದ ನಿಶ್ಚೇತನನಾಗಿ ನಿರಸ್ತನಾದೆ ನಾನು.

ಆಗ ಆ ರಾಮನಿಂದ ಗಂಭೀರವಾದ ಸಾಗರ ಜಲದಲ್ಲಿ ನಿಪಾತಿತನಾಗಿ ಬಹುಕಾಲದ ಬಳಿಕ ಎಚ್ಚರಗೊಂಡು, ಅಪ್ಪಾ ! ಲಂಕಾಪುರಿಗೆ ಹಿಂತಿರುಗಿದೆ.

ಏವಮಸ್ಮಿ ತದಾ ಮುಕ್ತಃ ಸಹಾಯಾಸ್ತು ನಿಪಾತಿತಾಃ ।
ಅಕೃತಾಸ್ತ್ರೇಣ ಬಾಲೇನ ರಾಮೇಣಾಕ್ಲಿಷ್ಟಕರ್ಮಣಾ ॥೨೨॥

ತನ್ಮಯಾ ವಾರ್ಯಮಾಣಸ್ತ್ವಂ ಯದಿ ರಾಮೇಣ ವಿಗ್ರಹಮ್ ।
ಕರಿಷ್ಯಸ್ಯಾಪದಂ ಘೋರಾಂ ಕ್ಷಿಪ್ರಂ ಪ್ರಾಪ್ಸ್ಯಸಿ ರಾವಣ ॥೨೩॥

ಕ್ರೀಡಾರತಿವಿಧಿಜ್ಞಾನಾಂ ಸಮಾಜೋತ್ಸವದರ್ಶಿನಾಮ್ ।
ರಕ್ಷಸಾಂ ಚೈವ ಸಂತಾಪಮನರ್ಥಂ ಚಾಹರಿಷ್ಯಸಿ ॥೨೪॥

ಹರ್ಮ್ಯಪ್ರಾಸಾದಸಂಬಾಧಾಂ ನಾನಾರತ್ನವಿಭೂಷಿತಾಮ್ ।
ದ್ರಕ್ಷ್ಯಸಿ ತ್ವಂ ಪುರೀಂ ಲಂಕಾಂ ವಿನಷ್ಟಾಂ ಮೈಥಿಲೀಕೃತೇ ॥೨೫॥

ಅಕುರ್ವಂತೋಽಪಿ ಪಾಪಾನಿ ಶುಚಯಃ ಪಾಪಸಂಶ್ರಯಾತ್ ।
ಪರಪಾಪೈರ್ವಿನಶ್ಯಂತಿ ಮತ್ಸ್ಯಾ ನಾಗಹ್ರದೇ ಯಥಾ ॥೨೬॥

ದಿವ್ಯಚಂದನದಿಗ್ಧಾಂಗಾನ್ ದಿವ್ಯಾಭರಣಭೂಷಿತಾನ್ ।
ದ್ರಕ್ಷ್ಯಸ್ಯಭಿಹತಾನ್ ಭೂಮೌ ತವ ದೋಷಾತ್ತು ರಾಕ್ಷಸಾನ್ ॥೨೭॥

ಹೃತದಾರಾನ್ ಸದಾರಾಂಶ್ಚ ದಶ ವಿದ್ರವತೋ ದಿಶಃ ।
ಹತಶೇಷಾನಶರಣಾನ್ ದ್ರಕ್ಷ್ಯಸಿ ತ್ವಂ ನಿಶಾಚರಾನ್ ॥೨೮॥

ಶರಜಾಲಪರಿಕ್ಷಿಪ್ತಾಮಗ್ನಿಜ್ವಾಲಾಸಮಾವೃತಾಮ್ ।
ಪ್ರದಗ್ಧಭವನಾಂ ಲಂಕಾಂ ದ್ರಕ್ಷ್ಯಸಿ ತ್ವಂ ನ ಸಂಶಯಃ ॥೨೯॥

ಹೀಗೆ ಅಂದು ಅಸ್ತ್ರಾಭ್ಯಾಸವನ್ನು ಪೂರೈಸದ, ಕ್ಲೇಶವಿಲ್ಲದೆ ಕಾರ್ಯಮಾಡುವ ಆ ಬಾಲರಾಮನಿಂದ ಹೀಗೆ ಬಿಡುಗಡೆಗೊಂಡೆ. ನನ್ನ ಸಹಾಯಕರೆಲ್ಲ ರಾಮನಿಂದ ನಿಪಾತಿತರಾದರು.

ಆದ್ದರಿಂದ ನನ್ನಿಂದ ತಡೆಯಲ್ಪಟ್ಟರೂ ನೀನು ರಾಮನೊಂದಿಗೆ ಯುದ್ಧ ಮಾಡುವಿಯಾದರೆ ರಾವಣ ! ಕ್ಷಿಪ್ರದಲ್ಲಿ ಘೋರ ಆಪತ್ತಿಗೊಳಗಾಗುವೆ.

ಭೋಗ ವಿಲಾಸಗಳ ಬಲ್ಲ, ತಮ್ಮ ಸಮಾಜದ ಆನಂದ ಕೂಟದ ಉತ್ಸವಗಳಲ್ಲಿ ಖುಷಿಯಿಂದ ಮೈಮರೆವ ರಾಕ್ಷಸರಿಗೆಲ್ಲ ಅನರ್ಥವನ್ನು ತಂದೊಡ್ಡುವಿ.

ಭವ್ಯ ಮಹಲುಗಳಿಂದ ಕಂಗೊಳಿಸುವ ನಾನಾರತ್ನವಿಭೂಷಿತವಾದ ಈ ಲಂಕೆಯು ಮೈಥಿಲಿಯ ನೆಪದಲ್ಲಿ ವಿನಾಶವಾಗುವುದನ್ನು ನೋಡುವಿ.

ಪಾಪಗಳನ್ನು ಮಾಡದಿದ್ದರೂ ಶುಚಿಯಾಗಿರುವವರು ಪಾಪಗಳ ಆಸರೆಯಿಂದ ಮತ್ತೊಬ್ಬರ ಪಾಪದಿಂದ ನಾಶವಾಗುತ್ತಾರೆ. ಕೊಳದಲ್ಲಿ ಹಾವುಗಳ ಜೊತೆಯಿರುವ ಮೀನುಗಳು ಗರುಡ ಪಕ್ಷಿಗೆ ಬಲಿಯಾಗುವಂತೆ !

ದಿವ್ಯ ಚಂದನ ಲೇಪಿಸಿದ ಅಂಗಗಳುಳ್ಳವರು, ದಿವ್ಯಾಭರಣ ಭೂಷಿತರಾದ ರಾಕ್ಷಸರು ನಿನ್ನ ತಪ್ಪಿನಿಂದ ರಣ ಭೂಮಿಯಲ್ಲಿ ಸತ್ತು ಬೀಳುವುದನ್ನು ನೋಡುವಿ.

ಅಳಿದುಳಿದ ಕೆಲ ರಕ್ಕಸರು ಹೆಂಡತಿಯನ್ನು ಕಳೆದುಕೊಂಡವರನ್ನು ಮತ್ತೆ ಕೆಲವರು ಹೆಂಡತಿಯೊಂದಿಗೆ ದಿಕ್ಕಾಪಾಲಾಗಿ ಓಡಿ ಹೋಗುವುದನ್ನು ನೋಡಲಿರುವಿ, ಸಂಶಯವಿಲ್ಲ.

ಪರದಾರಾಭಿಮರ್ಶಾತ್ತು ನಾನ್ಯತ್ ಪಾಪತರಂ ಮಹತ್ ।
ಪ್ರಮದಾನಾಂ ಸಹಸ್ರಾಣಿ ತವ ರಾಜನ್ ಪರಿಗ್ರಹಃ ॥೩೦॥

ಭವ ಸ್ವದಾರನಿರತಃ ಸ್ವಕುಲಂ ರಕ್ಷ ರಾಕ್ಷಸ ।
ಮಾನಮೃದ್ಧಿಂ ಚ ರಾಜ್ಯಂ ಚ ಜೀವಿತಂ ಚೇಷ್ಟಮಾತ್ಮನಃ ॥೩೧॥

ಕಲತ್ರಾಣಿ ಚ ಸೌಮ್ಯಾನಿ ಮಿತ್ರವರ್ಗಂ ತಥೈವ ಚ ।
ಯದೀಚ್ಛಸಿ ಚಿರಂ ಭೋಕ್ತುಂ ಮಾ ಕೃಥಾ ರಾಮವಿಪ್ರಿಯಮ್ ॥೩೨॥

ನಿವಾರ್ಯಮಾಣಃ ಸುಹೃದಾ ಮಯಾ ಭೃಶಂ
ಪ್ರಸಹ್ಯ ಸೀತಾ ಯದಿ ಧರ್ಷಯಿಷ್ಯಸಿ ।
ಗಮಿಷ್ಯಸಿ ಕ್ಷೀಣಬಲಃ ಸಬಾಂಧವೋ
ಯಮಕ್ಷಯಂ ರಾಮಶರಾತ್ತಜೀವಿತಃ ॥೩೩॥

ಪರಸ್ತ್ರೀಯರ ಮೇಲೆ ಮಾಡುವ ಆಕ್ರಮಣಕ್ಕಿಂತ ಮತ್ತೊಂದು ದೊಡ್ಡ ಪಾಪವಿಲ್ಲ. ರಾಜನ್ ! ನಿನಗೆ ಸಾವಿರಾರು ಪ್ರಮದೆಯರು ಹೆಂಡತಿಯಾಗಿದ್ದಾರೆ.

ಸ್ವಪತ್ನೀರತನಾಗಿ ನಿನ್ನ ಕುಲವನ್ನು ರಕ್ಷಿಸಿಕೋ ರಕ್ಕಸ ! ಮಾನ, ಸಮೃದ್ಧಿ, ರಾಜ್ಯ, ನಿನಗಿಷ್ಟವಾದ ನಿನ್ನ ಪ್ರಾಣ ಬದುಕು ಇವುಗಳನ್ನು ಕಾಪಾಡಿಕೊ. ಸೌಮ್ಯರಾದ ಮಡದಿಯರು, ಮಿತ್ರವರ್ಗ ಇವರೊಡನೆ ಬಹುಕಾಲ ಸುಖವನ್ನು ಅನುಭವಿಸ-ಬೇಕೆಂದು ಬಯಸುವಿಯಾದರೆ ರಾಮನಿಗೆ ಅಪ್ರಿಯವಾದುದನ್ನು ಮಾಡಬೇಡ.

ಮಿತ್ರನಾದ ನಾನು ಎಷ್ಟು ತಡೆದರೂ ನೀನು ಸೀತೆಯನ್ನು ಬಲಾತ್ಕಾರವಾಗಿ ಆಕ್ರಮಿಸುವಿಯಾದರೆ ಕ್ಷೀಣ ಬಲನಾಗಿ ಬಾಂಧವರ ಸಹಿತನಾಗಿ ರಾಮಬಾಣಕ್ಕೆ ಬದುಕನ್ನು ಬಲಿಕೊಟ್ಟು ಯಮಸದನಕ್ಕೆ ಹೋಗುವಿ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಮೂವತ್ತೆಂಟನೆಯ ಸರ್ಗ ಮುಗಿಯಿತು

❖

ಏಕೋನಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಹಿಂದೆ ರಾಮ ಬಾಣದಿಂದ ಬಿಡುಗಡೆಯಾದದ್ದನ್ನು ಹೇಳಿದೆ. ಇತ್ತೀಚೆಗೆ ನಡೆದ ಘಟನೆಯನ್ನು ಹೇಳುತ್ತೇನೆ ಕೇಳು ಎಂದ ಮಾರೀಚ ರಾವಣನಿಗೆ –ತಾಪಸರನ್ನು ಬಾಧಿಸುವುದರಲ್ಲಿ ವೈರಾಗ್ಯವಿರದ ನಾನುಮೃಗರೂಪದ ಇಬ್ಬರು ರಕ್ಕಸರಿಂದ ಜೊತೆಯಾಗಿ ಪ್ರಾಣಸಂಕಟವುಂಟು ಮಾಡಿದೆ – ದಂಡಕಾರಣ್ಯದಲ್ಲಿ ಪ್ರವೇಶಿಸಿದವನಾಗಿ. ನಾನೂ ಮಹಾಮೃಗರೂಪ ಧರಿಸಿದೆ. ಮಹಾಕಾಯನು, ಪ್ರಜ್ವಲಿಸುವ ಕೆನ್ನಾಲಗೆಯವನು, ತೀಕ್ಷ್ಣಕೋರೆದಾಡೆಯವನು, ಮಹಾಬಲನೂ, ಮಾಂಸಭಕ್ಷಕನೂ ಆಗಿ ದಂಡಕಾರಣ್ಯದಲ್ಲಿ ಅಲೆದೆ.

ರಾವಣ ! ಅಗ್ನಿಹೋತ್ರಶಾಲೆಗಳಲ್ಲಿ ತೀರ್ಥಗಳಲ್ಲಿ ಆರಳಿ ಮರಗಳಲ್ಲಿದ್ದ ತಾಪಸರನ್ನು ಚೆನ್ನಾಗಿ ಆಕ್ರಮಿಸುತ್ತ ಮಹಾಘೋರನಾಗಿ ತಿರುಗಾಡಿದೆ –ಧರ್ಮಾಚಾರರತರಾದ ತಾಪಸರನ್ನು ಕೊಂದು ಅವರ ರಕ್ತವನ್ನು ಕುಡಿಯುತ್ತ, ಮಾಂಸಗಳನ್ನು ತಿನ್ನುತ್ತ ದಂಡಕಾರಣ್ಯದಲ್ಲಿ.

ಋಷಿಮಾಂಸಾಶನನಾಗಿ ರಕ್ತಪಾನ ಮತ್ತನಾಗಿ ಕ್ರೂರನಾಗಿ ವನವಾಸಿಗಳನ್ನು ಹೆದರಿಸುತ್ತ ಧರ್ಮ ದೂಷಕನಾಗಿ ನಾನು ಧರ್ಮಾಚರಣಶೀಲನಾದ ತಾಪಸರೂಪ ರಾಮನನ್ನು, ಮಹಾಭಾಗ್ಯಳಾದ ವೈದೇಹಿಯನ್ನು ಹಾಗೆ ಮಹಾರಥ ಲಕ್ಷ್ಮಣನನ್ನು ಸಮೀಪಿಸಿದೆ.

ನಿಯತಾಹಾರನು ಸರ್ವಭೂತಹಿತದಲ್ಲಿ ನಿರತನು ಮಹಾಬಲನು ತಾಪಸನೂ ಆದ ವನದಲ್ಲಿದ್ದ ಶ್ರೀರಾಮನನ್ನು ತಿರಸ್ಕರಿಸಿ ಇವನು ತಾಪಸ ಎಂದು ಹಗುರವಾಗಿ ಭಾವಿಸಿ ಹಿಂದಿನ ವೈರವನ್ನು ನೆನೆದು ಸಂಕ್ರುದ್ಧನಾಗಿ ತೀಕ್ಷ್ಣಶೃಂಗದ ಮೃಗಾಕೃತಿಯ ನಾನು ವಿಚಾರಮಾಡದೆ ಹಿಂದಿನ ಪ್ರಹಾರವನ್ನು ಮನಸಿನಲ್ಲಿಟ್ಟುಕೊಂಡು ಕೊಲ್ಲುವ ಬಯಕೆಯಿಂದ ಅವನ ಬಳಿಗೆ ದೌಡಾಯಿಸಿದೆ.

ರಾಮ ಮೂರು ಬಾಣಗಳನ್ನು ಪ್ರಯೋಗಿಸಿದ. ರಾಮನ ಪರಾಕ್ರಮವನ್ನು ಬಲ್ಲ ನಾನು ಹೆದರಿ ಓಡಿದೆ. ಉಳಿದಿಬ್ಬರು ರಾಕ್ಷಸರು ರಾಮಬಾಣಕ್ಕೆ ಬಲಿಯಾಗಿ ಪ್ರಾಣ-ಬಿಟ್ಟರು. ಹೇಗೋ ತಪ್ಪಿಸಿಕೊಂಡು ಸಮುದ್ರದವರೆಗೆ ಓಡಿ ಬಂದು ಇಲ್ಲಿ ತಾಪಸನಾಗಿ ಕುಳಿತಿದ್ದೇನೆ.

ಇಲ್ಲಿಯ ಪ್ರತಿವೃಕ್ಷಗಳಲ್ಲಿಯೂ ಧನುರ್ಧಾರಿ ರಾಮನನ್ನೆ ಪಾಶ ಹಿಡಿದ ಯಮ-ನನ್ನು ಎಂಬಂತೆ ಕಾಣುತ್ತಿದ್ದೇನೆ. ಹೆದರಿದ ನಾನು ಸಾವಿರಾರು ರಾಮರನ್ನು ಕಾಣು-ತ್ತಿದ್ದೇನೆ ! ಇಡೀ ಅರಣ್ಯವೇ ರಾಮಮಯವಾಗಿ ಭಾಸವಾಗುತ್ತಿದೆ ! ಕನಸಿನಲ್ಲಿಯೂ

ರಾಮನನ್ನು ಕಂಡು ಬೆಚ್ಚಿ ಬೀಳುತ್ತಿದ್ದೇನೆ ! ರಾಮನಿಂದ ಹೆದರಿದ ನನಗೆ ರ ಕಾರದಿಂದ ಪ್ರಾರಂಭವಾಗುವ 'ರತ್ನ', 'ರಥ' ಮುಂತಾದ ಶಬ್ದಗಳೂ ಭಯವುಂಟು ಮಾಡುತ್ತಿವೆ !

ರಾಮನ ಪರಾಕ್ರಮ ಪ್ರಭಾವ ನನಗೆ ಗೊತ್ತು. ಖಂಡಿತವಾಗಿಯೂ ಅವನೊಂದಿಗೆ ಸೆಣಸಾಡುವ ಸಾಹಸಬೇಡ. ಪ್ರಾಣ ಹೋದೀತು ! ನಮುಚಿ ಬಲಿಯಂತಹವರನ್ನೆ ಕೊಲ್ಲಬಲ್ಲ ವೀರ ಅವನು.

ರಾಮನೊಡನೆ ಯುದ್ಧವನ್ನೆ ಮಾಡುವೆಯೋ, ಕ್ಷಮೆಯನ್ನು ತೋರುವೆಯೋ ಅದು ನಿನಗೆ ಬಿಟ್ಟದ್ದು. ನನ್ನನ್ನು ನೋಡಲು ಬಯಸುವುದಾದರೆ ನನ್ನೆದುರು ರಾಮನ ಸುದ್ದಿ ತರಬೇಡ. ಎಷ್ಟೊ ಧರ್ಮಾತ್ಮರು ಮತ್ತೊಬ್ಬರ ತಪ್ಪಿನಿಂದ ನಾಶವಾಗುವರು. ನಿನ್ನ ಸಹವಾಸದಿಂದ ನಾನೂ ನಷ್ಟನಾಗುತ್ತೇನೆ. ನೀನೇನಾದರೂ ಮಾಡಿಕೋ. ನಾನಂತು ನಿನ್ನ ಸಹಾಯಕನಾಗಲಾರೆ.

ಶೂರ್ಪಣಖೆಗೆ ಆದ ಅವಮಾನದಿಂದ ಖರ ಯುದ್ಧಕ್ಕೆ ಹೋದ – ರಾಮ–ನೆದುರಿಗೆ. ಯುದ್ಧದಲ್ಲಿ ರಾಮ ಕೊಂದ. ಇದರಲ್ಲಿ ರಾಮನ ಅಪರಾಧವೇನು ?

ನನ್ನ ಮಾತು ಕೇಳದಿದ್ದರೆ ಸಬಾಂಧವನಾಗಿ ರಾಮನ ಬಾಣಗಳಿಂದ ರಣರಂಗದಲ್ಲಿ ಪ್ರಾಣ ಕಳೆದುಕೊಳ್ಳುವಿ !

❖

ಸಾಹಾಯ್ಯಕಾನಭ್ಯುಪಗಮಃ

ಏವಮಸ್ಮಿ ತದಾ ಮುಕ್ತಃ ಕಥಂಚಿತ್ತೇನ ಸಂಯುಗೇ ।
ಇದಾನೀಮಪಿ ಯದ್ವೃತ್ತಂ ತಚ್ಛೃಣುಷ್ವ ನಿರುತ್ತರಮ್ ॥೧॥

ರಾಕ್ಷಸಾಭ್ಯಾಮಹಂ ದ್ವಾಭ್ಯಾಮನಿರ್ವಿಣ್ಣಸ್ತಥಾ ಕೃತಃ ।
ಸಹಿತೋ ಮೃಗರೂಪಾಭ್ಯಾಂ ಪ್ರವಿಷ್ಟೋ ದಂಡಕಾವನಮ್ ॥೨॥

ದೀಪ್ತಜಿಹ್ವೋ ಮಹಾಕಾಯಸ್ತೀಕ್ಷ್ಣದಂಷ್ಟ್ರೋ ಮಹಾಬಲಃ ।
ವ್ಯಚರಂ ದಂಡಕಾರಣ್ಯಂ ಮಾಂಸಭಕ್ಷೋ ಮಹಾಮೃಗಃ ॥೩॥

ಅಗ್ನಿಹೋತ್ರೇಷು ತೀರ್ಥೇಷು ಚೈತ್ಯವೃಕ್ಷೇಷು ರಾವಣ ।
ಅತ್ಯಂತಘೋರೋ ವ್ಯಚರಂ ತಾಪಸಾನ್ ಸಂಪ್ರಧರ್ಷಯನ್ ॥೪॥

ನಿಹತ್ಯ ದಂಡಕಾರಣ್ಯೇ ತಾಪಸಾನ್ ಧರ್ಮಚಾರಿಣಃ ।
ರುಧಿರಾಣಿ ಪಿಬಂಸ್ತೇಷಾಂ ತಥಾ ಮಾಂಸಾನಿ ಭಕ್ಷಯನ್ ॥೫॥

ಋಷಿಮಾಂಸಾಶನಃ ಕ್ರೂರಸ್ತ್ರಾಸಯನ್ ವನಗೋಚರಾನ್ ।
ತಥಾ ರುಧಿರಮತ್ತೋಽಹಂ ವಿಚರನ್ ದಂಡಕಾವನಮ್ ॥೬॥

ಆಸಾದಯಂ ತದಾ ರಾಮಂ ತಾಪಸಂ ಧರ್ಮಮಾಶ್ರಿತಮ್ ।
ವೈದೇಹೀಂ ಚ ಮಹಾಭಾಗಾಂ ಲಕ್ಷ್ಮಣಂ ಚ ಮಹಾರಥಮ್ ॥೭॥

ತಾಪಸಂ ನಿಯತಾಹಾರಂ ಸರ್ವಭೂತಹಿತೇ ರತಮ್ ।
ಸೋಽಹಂ ವನಗತಂ ರಾಮಂ ಪರಿಭೂಯ ಮಹಾಬಲಮ್ ॥೮॥

ತಾಪಸೋಽಯಮಿತಿ ಜ್ಞಾತ್ವಾ ಪೂರ್ವವೈರಮನುಸ್ಮರನ್ ।
ಅಭ್ಯಧಾವಂ ಹಿ ಸಂಕ್ರುದ್ಧಸ್ತೀಕ್ಷ್ಣಶೃಂಗೋ ಮಹಾಕೃತಿಃ ॥೯॥

ಜಿಘಾಂಸುರಕೃತಪ್ರಜ್ಞಸ್ತಂ ಪ್ರಹಾರಮನುಸ್ಮರನ್ ।
ತೇನ ಮುಕ್ತಾಸ್ತ್ರಯೋ ಬಾಣಾಃ ಶಿತಾಃ ಶತ್ರುನಿಬರ್ಹಣಾಃ ॥೧೦॥

ವಿಕೃಷ್ಯ ಸುಮಹಚ್ಚಾಪಂ ಸುಪರ್ಣಾನಿಲನಿಸ್ವನಾಃ ।
ತೇ ಬಾಣಾ ವಜ್ರಸಂಕಾಶಾಃ ಸುಘೋರಾ ರಕ್ತಭೋಜನಾಃ ॥೧೧॥

ಆಜಗ್ಮುಃ ಸಹಿತಾಃ ಸರ್ವೇ ತ್ರಯಃ ಸಂನತಪರ್ವಣಃ ।
ಪರಾಕ್ರಮಜ್ಞೋ ರಾಮಸ್ಯ ಶರೋ ದೃಷ್ಟಭಯಃ ಪುರಾ ॥೧೨॥

ಸಮುತ್ಕ್ರಾಂತಸ್ತತೋ ಮುಕ್ತಸ್ತಾವುಭೌ ರಾಕ್ಷಸೌ ಹತೌ ।
ಶರೇಣ ಮುಕ್ತೋ ರಾಮಸ್ಯ ಕಥಂಚಿತ್ ಪ್ರಾಪ್ಯ ಜೀವಿತಮ್ ॥೧೩॥

ಹೀಗೆ ಆ ಯುದ್ಧದಲ್ಲಿ ಆ ರಾಮನಿಂದ ಹೇಗೋ ಬಿಡುಗಡೆಗೊಂಡು ಬದುಕುಳಿದೆ. ಇತ್ತೀಚೆಗೆ ನಡೆದ ಘಟನೆಯನ್ನು ಹೇಳುತ್ತೇನೆ. ಮಾತನಾಡದೆ ಕೇಳು!

ಮೃಗರೂಪದ ಇಬ್ಬರು ರಾಕ್ಷಸರೊಂದಿಗೆ ನಾನೂ ಮೃಗರೂಪನಾಗಿ ದಂಡಕಾರಣ್ಯವನ್ನು ಪ್ರವೇಶಿಸಿದ್ದೆನು.

ಬೆಳಗುವ ಕೆನ್ನಾಲಗೆಯವನು, ಮಹಾಕಾಯನು, ತೀಕ್ಷ್ಣವಾದ ಕೊರೆದಾಡೆಯವನು, ಮಾಂಸಭಕ್ಷನು ಆದ ನಾನು ಮೃಗರೂಪನಾಗಿ ದಂಡಕಾರಣ್ಯದಲ್ಲಿ ಅಲೆದೆನು.

ರಾವಣ! ಅಗ್ನಿಹೋತ್ರಗಳಲ್ಲಿ, ತೀರ್ಥಸ್ಥಲಗಳಲ್ಲಿ, ಅರಳಿಮರಗಳ ಸಮೀಪದಲ್ಲಿದ್ದ ತಾಪಸರನ್ನು ಬಾಧಿಸುತ್ತ ಘೋರರೂಪನಾಗಿ ತಿರುಗಾಡುತ್ತಿದ್ದೆ.

ದಂಡಕಾರಣ್ಯದಲ್ಲಿ ಧರ್ಮಾಚರಣತತ್ಪರರಾದ ತಾಪಸರನ್ನು ಕೊಂದು ಅವರ ರಕ್ತಗಳನ್ನು ಕುಡಿಯುತ್ತಿದ್ದೆ. ಮಾಂಸಗಳನ್ನು ತಿನ್ನುತ್ತಿದ್ದೆ.

ಋಷಿಮಾಂಸಭಕ್ಷಕನಾಗಿ ಕ್ರೂರನಾಗಿ ವನದಲ್ಲಿ ವಾಸ ಮಾಡುವವರನ್ನು ಹೆದರಿಸುತ್ತ ರಕ್ತಪಾನಮತ್ತನಾಗಿ ಧರ್ಮವನ್ನು ಹಾಳುಗೆಡಹುತ್ತಾ ಸಂಚರಿಸುತ್ತಿದ್ದೆ.

ಆಗ ಧರ್ಮಾಚರಣೆ ಮಾಡುವ ತಾಪಸರಾಮನನ್ನು, ಮಹಾಭಾಗ್ಯಳಾದ ವೈದೇಹಿಯನ್ನು, ಮಹಾರಥ ಲಕ್ಷ್ಮಣನನ್ನು ಭೇಟಿ ಮಾಡಿದೆ.

ನಿಯತಾಹಾರನು, ಸರ್ವಭೂತಹಿತದಲ್ಲಿ ನಿರತನು, ತಾಪಸನು, ವನದಲ್ಲಿದ್ದ ಮಹಾಬಲರಾಮನನ್ನು ಕಡೆಗಣಿಸಿ ಇವನು ತಾಪಸನೆಂದು ಭಾವಿಸಿ ಹಿಂದಿನ ವೈರವನ್ನು ನೆನೆದು ತೀಕ್ಷ್ಣಶೃಂಗದ ಮೃಗಾಕೃತಿಯ ನಾನು ಸಂಕ್ರುದ್ಧನಾಗಿ ಮುನ್ನುಗ್ಗಿ ಧಾವಿಸಿದೆನು – ಅವನ ಹಿಂದಿನ ಪ್ರಹಾರವನ್ನು ಸ್ಮರಿಸಿಕೊಂಡು ಕೊಲ್ಲುವ ಬಯಕೆಯವನಾಗಿ.

ಆ ರಾಮ ಶತ್ರುಸಂಹಾರಕಗಳಾದ ಗರುಡನ ರೆಕ್ಕೆಯ ಗಾಳಿಯಂಥ ಶಬ್ದವುಳ್ಳ ನಿಶಿತವಾದ ಮೂರು ಬಾಣಗಳನ್ನು ಪ್ರಯೋಗಿಸಿದನು. ಬಿಲ್ಲಿನ ಹೆದೆಯನ್ನು ಬಲವಾಗಿ ಎಳೆದು, ವಜ್ರಾಯುಧದಂತೆ ಇರುವ ಚೆನ್ನಾಗಿ ಪ್ರಯೋಗಿಸಿದ – ರಕ್ತಪಾಯಿಗಳಾದ ಬಾಗಿದ ಗಿಣ್ಣುಗಳ ಬಾಣಗಳು ನುಗ್ಗಿ ಬಂದವು. ರಾಮನ ಪರಾಕ್ರಮವನ್ನು ತಿಳಿದಿದ್ದ ಬಾಣವನ್ನು ಕಂಡು ಹಿಂದೆ ಭಯಪಟ್ಟಿದ್ದ ನಾನು ಹೆದರಿ ಪಲಾಯನ ಮಾಡಿದೆ. ಬಳಿಕ ಬಿಡುಗಡೆಯಾದೆ. ಆ ಇಬ್ಬರು ರಕ್ಕಸರು ಸತ್ತರು.

ಇಹ ಪ್ರವ್ರಾಜಿತೋ ಯುಕ್ತಸ್ತಾಪಸೋಽಹಂ ಸಮಾಹಿತಃ ।
ವೃಕ್ಷೇ ವೃಕ್ಷೇ ಚ ಪಶ್ಯಾಮಿ ಚೀರಕೃಷ್ಣಾಜಿನಾಂಬರಮ್ ॥೧೪॥

ಗೃಹೀತಧನುಷಂ ರಾಮಂ ಪಾಶಹಸ್ತಮಿವಾಂತಕಮ್ ।
ಅಪಿ ರಾಮಸಹಸ್ರಾಣಿ ಭೀತಃ ಪಶ್ಯಾಮಿ ರಾವಣ ॥೧೫॥

ರಾಮಭೂತಮಿದಂ ಸರ್ವಮರಣ್ಯಂ ಪ್ರತಿಭಾತಿ ಮೇ ।
ರಾಮಮೇವ ಹಿ ಪಶ್ಯಾಮಿ ರಹಿತೇ ರಾಕ್ಷಸಾಧಿಪ ॥೧೬॥

ದೃಷ್ಟ್ವಾ ಸ್ವಪ್ನಗತಂ ರಾಮಮುದ್ಭ್ರಮಾಮಿ ವಿಚೇತನಃ ।
ರಕಾರಾದೀನಿ ನಾಮಾನಿ ರಾಮತ್ರಸ್ತಸ್ಯ ರಾವಣ ॥೧೭॥

ರತ್ನಾನಿ ಚ ರಥಾಶ್ಚೈವ ವಿತ್ರಾಸಂ ಜನಯಂತಿ ಮೇ ।
ಅಹಂ ತಸ್ಯ ಪ್ರಭಾವಜ್ಞೋ ನ ಯುದ್ಧಂ ತೇನ ತೇ ಕ್ಷಮಮ್ ॥೧೮॥

ರಾಮನ ಬಾಣದಿಂದ ಹೇಗೋ ಬಿಡುಗಡೆಗೊಂಡು ಪ್ರಾಣವನ್ನು ಹೊಂದಿ ಎಲ್ಲ ದುರ್ನಡತೆ ಬಿಟ್ಟವನಾಗಿ ಸಮಾಧಾನ ಚಿತ್ತನಾಗಿ ತಾಪಸನಾಗಿ ಇಲ್ಲಿ ಕುಳಿತೆ.

ಮರ ಮರಗಳಲ್ಲಿ ವಲ್ಕಲಕೃಷ್ಣಾಜಿನಾಂಬರದ ರಾಮನನ್ನು– ಬಿಲ್ಲು ಹಿಡಿದವನನ್ನು ಪಾಶ ಹಿಡಿದ ಅಂತಕನನ್ನು ಎಂಬಂತೆ ಕಾಣುತ್ತಿದ್ದೇನೆ.

ರಾವಣ ! ಹೆದರಿ ಸಾವಿರಾರು ರಾಮನನ್ನು ಕಾಣುತ್ತಿದ್ದೇನೆ. ಈ ಎಲ್ಲ ಅರಣ್ಯವು ರಾಮಮಯವಾಗಿ ಕಾಣುತ್ತಿದೆ. ಏಕಾಂತದಲ್ಲಿಯೂ ಕನಸಿನಲ್ಲಿಯೂ ರಾಮನನ್ನೆ ಕಾಣುತ್ತಿದ್ದೇನೆ.

ರಾಮನಿಂದ ಹೆದರಿದ ನನಗೆ ರ ಕಾರಾದಿ ನಾಮಗಳು – 'ರತ್ನಗಳು' 'ರಥಗಳು' ಭಯವನ್ನು ಹುಟ್ಟಿಸುತ್ತಿವೆ.

ಬಲಿಂ ವಾ ನಮುಚಿಂ ವಾಪಿ ಹನ್ಯಾದ್ಧಿ ರಘುನಂದನಃ ।
ರಣೇ ರಾಮೇಣ ಯುದ್ಧ್ಯಸ್ವ ಕ್ಷಮಾಂ ವಾ ಕುರು ರಾಕ್ಷಸ ॥೧೯॥

ನ ತೇ ರಾಮಕಥಾ ಕಾರ್ಯಾ ಯದಿ ಮಾಂ ದ್ರಷ್ಟುಮಿಚ್ಛಸಿ ।
ಬಹವಃ ಸಾಧವೋ ಲೋಕೇ ಯುಕ್ತಾ ಧರ್ಮಮನುಷ್ಠಿತಾಃ ॥೨೦॥

ಪರೇಷಾಮಪರಾಧೇನ ವಿನಷ್ಟಾಃ ಸಪರಿಚ್ಛದಾಃ ।
ಸೋಽಹಂ ತವಾಪರಾಧೇನ ವಿನಶ್ಯೇಯಂ ನಿಶಾಚರ ॥೨೧॥

ಕುರು ಯತ್ತೇ ಕ್ಷಮಂ ತತ್ತ್ವಮಹಂ ತ್ವಾಂ ನಾನುಯಾಮಿ ಹ ।
ರಾಮಶ್ಚ ಹಿ ಮಹಾತೇಜಾ ಮಹಾಸತ್ತ್ವೋ ಮಹಾಬಲಃ ॥೨೨॥

ಅಪಿ ರಾಕ್ಷಸಲೋಕಸ್ಯ ಭವೇದಂತಕರೋಽಪಿ ಹಿ ।
ಯದಿ ಶೂರ್ಪಣಖಾಹೇತೋರ್ಜನಸ್ಥಾನಗತಃ ಖರಃ ॥೨೩॥

ಅತಿವೃತ್ತೋ ಹತಃ ಪೂರ್ವಂ ರಾಮೇಣಾಕ್ಲಿಷ್ಟಕರ್ಮಣಾ ।
ಅತ್ರ ಬ್ರೂಹಿ ಯಥಾತತ್ತ್ವಂ ಕೋ ರಾಮಸ್ಯ ವ್ಯತಿಕ್ರಮಃ ॥೨೪॥

ಇದಂ ವಚೋ ಬಂಧುಹಿತಾರ್ಥಿನಾ ಮಯಾ
ಯಥೋಚ್ಯಮಾನಂ ಯದಿ ನಾಭಿಪತ್ಸ್ಯಸೇ ।

ಸಬಾಂಧವಸ್ತ್ವಕ್ಷ್ಯಸಿ ಜೀವಿತಂ ರಣೇ
ಹತೋಽದ್ಯ ರಾಮೇಣ ಶರೈರಜಿಹ್ಮಗೈಃ ॥೨೫॥

ನಾನು ಅವನ ಪ್ರಭಾವವನ್ನು ತಿಳಿದಿದ್ದೇನೆ. ಅವನಿಂದ ಯುದ್ಧವನ್ನು ಸಹಿಸ-ಲಸಾಧ್ಯ. ರಘುನಂದನ ಬಲಿಯನ್ನಾಗಲಿ ನಮುಚಿಯನ್ನಾಗಲಿ ಕೊಲ್ಲಬಲ್ಲ ಸಮರ್ಥ.

ರಾಕ್ಷಸ ! ರಾಮನೊಂದಿಗೆ ಯುದ್ಧವನ್ನು ಮಾಡುವಿಯೋ ಸಹನೆಯಿಂದ ನಡೆದುಕೊಳ್ಳುವೆಯೋ ನಿನಗೆ ಬಿಟ್ಟದ್ದು. ಆದರೆ ನನ್ನನ್ನು ನೋಡುವ ಬಯಕೆ-ಯಿದ್ದರೆ ನನ್ನಲ್ಲಿ ರಾಮನ ಸುದ್ದಿ ಹೇಳಬೇಡ.

ಧರ್ಮಾನುಷ್ಠಾನಪರರಾದ ಅನೇಕ ಸಾಧುಗಳು ಸಪರಿವಾರರಾಗಿ ಮತ್ತೊಬ್ಬರ ಅಪರಾಧದಿಂದ ವಿನಾಶವಾಗುತ್ತಾರೆ.

ನಿಶಾಚರ ! ನಾನು ನಿನ್ನ ಅಪರಾಧದಿಂದ ನಾಶವಾದೇನು. ನಿನ್ನ ಕೈಯಲ್ಲಿ ಸಾಧ್ಯವಾದದ್ದು ನೀನು ಮಾಡಿಕೋ. ನಾನು ನಿನ್ನನ್ನು ಅನುಸರಿಸುವುದಿಲ್ಲ.

ರಾಮನು ಮಹಾತೇಜಸ್ವಿ ಮಹಾಸತ್ವನು ಮಹಾಬಲನು. ಎಲ್ಲ ರಾಕ್ಷಸರಿಗೆ ಅವನು ಅಂತಕನಾಗಬಲ್ಲ.

ಶೂರ್ಪಣಖೆಯ ಕಾರಣಕ್ಕಾಗಿ ಜನಸ್ಥಾನದಲ್ಲಿದ್ದ ಖರನ ದುರ್ನಡತೆಯಿಂದ ಕ್ಲೇಶವಿಲ್ಲದೆ ಕರ್ಮ ಮಾಡುವ ರಾಮನು ಅವನನ್ನು ಕೊಂದನು. ಹೇಳು ರಾಮನದು ಏನು ತಪ್ಪು ?

ಬಂಧು ಹಿತವನ್ನು ಬಯಸುವ ನಾನು ಹೇಳಿದ ಮಾತನ್ನು ಕೇಳದೆ ಹೋದರೆ ಬಾಂಧವರೊಂದಿಗೆ ರಣರಂಗದಲ್ಲಿ ನೇರ ನುಗ್ಗುವ ಬಾಣಗಳಿಂದ ರಾಮನಿಂದ ಹತನಾಗುವಿ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಆರಣ್ಯಕಾಂಡದಲ್ಲಿ
ಮೂವತ್ತೊಂಬತ್ತನೆಯ ಸರ್ಗ ಮುಗಿಯಿತು.

❖

ಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಮಾರೀಚನ ಯೋಗ್ಯವಾದ ಮಾತನ್ನು ರಾವಣ ಸ್ವೀಕರಿಸಲಿಲ್ಲ – ಸಾಯುವ ಬಯಕೆಯವನು ಔಷಧವನ್ನು ತೆಗೆದುಕೊಳ್ಳದಿರುವಂತೆ.

ಕಾಲಪುರುಷನ ಪ್ರಚೋದನೆಗೆ ಒಳಗಾದ ರಾವಣ ಹಿತವಾದ ಪಥ್ಯವಾದ ಮಾತನ್ನು ಹೇಳಿದ ಮಾರೀಚನಿಗೆ ಅಯುಕ್ತವಾದ ಕಟುವಾದ ಮಾತನಾಡುತ್ತಾನೆ –

ಮಾರೀಚ ! ನನ್ನ ವಿಷಯದಲ್ಲಿ ಅಯುಕ್ತವಾದ ಮಾತನ್ನು ಏನು ಹೇಳಿರುವೆ ಅದು ಬಂಜರು ಭೂಮಿಯಲ್ಲಿ ಬಿತ್ತಿದ ಹಾಗೆ ನಿಷ್ಫಲ. ನಿನ್ನ ಮಾತುಗಳು ನನ್ನ ನಿರ್ಧಾರದಿಂದ ನನ್ನನ್ನು ಹಿಂದೆ ಸರಿಸುವುದಿಲ್ಲ.

ಪಾಪಶೀಲನು ಮೂರ್ಖನು ವಿಶೇಷವಾಗಿ ಸಾಮಾನ್ಯ ಮನುಷ್ಯನಾದ ರಾಮ ಗೆಳೆಯರನ್ನು ರಾಜ್ಯವನ್ನು ತಾಯಿ ತಂದೆಯರನ್ನು ಬಿಟ್ಟು ಒಂದು ಹೆಣ್ಣಿನ ಮಾತಿಗೆ ಮರುಕ್ಷಣದಲ್ಲಿ ಕಾಡಿಗೆ ಬಂದನಲ್ಲ ! ಯುದ್ಧದಲ್ಲಿ ಖರನನ್ನು ಕೊಂದ ಆ ರಾಮನ ಪ್ರಾಣಕ್ಕಿಂತಲೂ ಪ್ರಿಯಳಾದ ಮಡದಿ ಸೀತೆಯನ್ನು ನಿನ್ನ ಸನ್ನಿಧಿಯಲ್ಲಿ ಅಪಹರಿಸಲೇ-ಬೇಕು. ಇದು ನನ್ನ ಅಚಲ ನಿರ್ಧಾರ. ಇಂದ್ರಾದಿದೇವತೆಗಳಿಂದಲೂ ಈ ನಿರ್ಧಾರವನ್ನು ಬಿಡಿಸಲು ಸಾಧ್ಯವಿಲ್ಲ.

ಈ ಕಾರ್ಯವನ್ನು ಮಾಡಬೇಕೋ ಬಿಡಬೇಕೋ ಎಂದು ನಿನ್ನಲ್ಲಿ ಕೇಳಿದ್ದರೆ, ಇದರಲ್ಲಿರುವ ಗುಣ ದೋಷಗಳ ಬಗ್ಗೆ ನಿನ್ನಲ್ಲಿ ಕೇಳಿದ್ದರೆ ಅದನ್ನು ವಿವರಿಸಬೇಕಾಗಿತ್ತು ನೀನು. ನಾನು ಸೀತಾಪಹಾರದ ನಿರ್ಧಾರ ಮಾಡಿಕೊಂಡೇ ನಿನ್ನ ಸಹಾಯವನ್ನು ಮಾತ್ರ ಕೇಳಲು ಬಂದಿರುವುದು.

ತನ್ನ ಹಿತವನ್ನು ಬಯಸುವ ಬುದ್ಧಿವಂತನಾದ ಸಚಿವನು, ರಾಜ ಕೇಳಿದಾಗ ಕೈಮುಗಿದು ಮೃದುವಾಗಿ ಹಿತವಾಗುವಂತೆ, ಅವನಿಗೆ ಇಷ್ಟವಾಗುವಂತೆ ಸಲಹೆ ಕೊಡಬೇಕು.

ಹಿತವನ್ನೆ ತಿರಸ್ಕಾರಪೂರ್ವಕವಾಗಿ ಒರಟಾಗಿ ಹೇಳಿದರೆ ಮಾನನಿಷ್ಠನಾದ ರಾಜ ಮಾನ ಮರ್ಯಾದೆ ಕೊಡದೆ ಹೇಳಿದ ಮಾತನ್ನು ಅಭಿನಂದಿಸುವುದಿಲ್ಲ.

ಅಗ್ನಿ ಇಂದ್ರ ಸೋಮ ವರುಣ ಯಮ ಈ ಐವರ ರೂಪವನ್ನು ರಾಜ ಧರಿಸಿರು-ತ್ತಾನೆ. ಅವರ ಪ್ರಭಾವದಂತೆ ಅಗ್ನಿಯ ಉಷ್ಣತೆ, ಇಂದ್ರನ ಪರಾಕ್ರಮ, ಚಂದ್ರನ ಸೌಮ್ಯತೆ, ವರುಣನ ಪ್ರಸನ್ನತೆಯನ್ನು, ಯಮನ ದಂಡನೆಗಳನ್ನು ರಾಜ ಹೊಂದಿರು-ತ್ತಾನೆ. ಆದ್ದರಿಂದ ಯಾವಾಗಲೂ ಎಲ್ಲರೂ ರಾಜರಿಗೆ ಮನ್ನಣೆ ನೀಡಬೇಕು, ಆರಾಧಿ ಸಬೇಕು.

ಈ ಧರ್ಮಸೂಕ್ಷ್ಮವನ್ನರಿಯದ ದುರಾತ್ಮ ನೀನು ಸಹಾಯಕ್ಕಾಗಿ ಬಳಿಗೆ ಬಂದ ನನ್ನೊಡನೆ ಕಠಿಣವಾದ ಮಾತುಗಳನ್ನಾಡುತ್ತಿರುವಿ !

ನಿನ್ನಲ್ಲಿ ತಪ್ಪು ಒಪ್ಪುಗಳನ್ನು ಕೇಳುತ್ತಿಲ್ಲ. ಸಹಾಯ ಮಾಡುವಂತೆ ಹೇಳುತ್ತಿದ್ದೇನೆ. ಅದು ಏನೆಂದರೆ –ನೀನು ಬೆಳ್ಳಿ ಚುಕ್ಕೆಗಳಿರುವ ಬಂಗಾರದ ಜಿಂಕೆಯಾಗಿ ಸೀತೆಯ ಮುಂದೆ ಅಡ್ಡಾಡಬೇಕು. ಆಮೇಲೆ ನೀನು ಹೋಗಬಹುದು. ಸೀತೆಯ ಮನಸ್ಸಿನಲ್ಲಿ ನಿನ್ನ ಬಗ್ಗೆ ಆಸೆ ಹುಟ್ಟುವಂತೆ ಮಾಡಬೇಕು. ಆಗ ಮೈಥಿಲಿ ಬಂಗಾರದ ಜಿಂಕೆಯನ್ನು ತಂದುಕೊಡುವಂತೆ ರಾಮನಲ್ಲಿ ಕೇಳುತ್ತಾಳೆ. ರಾಮನನ್ನು ದೂರದ ವರೆಗೆ ಓಡಿಸಿಕೊಂಡು ಹೋಗಿ ಕೊನೆಯಲ್ಲಿ ರಾಮನ ಧ್ವನಿಯನ್ನು ಅನುಕರಿಸಿ ಹಾ ರಾಮ ! ಹಾ ಲಕ್ಷ್ಮಣ ! ಎಂದು ಕೂಗಿಕೋ. ಅದನ್ನು ಕೇಳಿ ಅಣ್ಣನ ಮೇಲಿನ ಪ್ರೀತಿಯಿಂದ, ಸೀತೆಯ ಪ್ರಚೋದನೆಯಿಂದಲೂ ಲಕ್ಷ್ಮಣನು ಕಾಡಿನೆಡೆ ಓಡಿ ಬರುತ್ತಾನೆ. ರಾಮ–ಲಕ್ಷ್ಮಣರು ಹೋದ ಬಳಿಕ ಆಶ್ರಮದಲ್ಲಿ ಏಕಾಕಿನಿಯಾದ ಸೀತೆಯನ್ನು ನಾನು ಸುಲಭವಾಗಿ ಅಪಹಾರ ಮಾಡುತ್ತೇನೆ.

ಇಷ್ಟು ಕಾರ್ಯ ಸಾಧಿಸಿಕೊಟ್ಟು ನೀನು ಇಷ್ಟ ಬಂದಲ್ಲಿಗೆ ಹೋಗಬಹುದು. ನಿನಗೆ ಅರ್ಧರಾಜ್ಯವನ್ನು ಕೊಡುತ್ತೇನೆ. ಯುದ್ಧವನ್ನೆ ಮಾಡದೆ ರಾಮನನ್ನು ವಂಚನೆಗೊಳಿಸಿ ಸೀತೆಯನ್ನು ಲಂಕೆಗೆ ಒಯ್ಯುತ್ತೇನೆ.

ನೀನು ಈ ಸಹಾಯ ಮಾಡದಿದ್ದರೆ ಇಂದು ನಿನ್ನನ್ನು ಕೊಂದು ಬಿಡುತ್ತೇನೆ. ಬಲಪ್ರಯೋಗಿಸಿಯಾದರೂ ಈ ಕಾರ್ಯವನ್ನು ಸಾಧಿಸಬೇಕು ನೀನು.

ರಾಜನಿಗೆ ಪ್ರತಿಕೂಲವಾದ ನಡೆಯುವನು ಸುಖವನ್ನು ಹೊಂದಲಾರ. ನಿನ್ನ ಬದುಕು ಸಾವಿನ ಪ್ರಶ್ನೆಯಿದು. ವಿಚಾರ ಮಾಡಿ ಪಥ್ಯವಾಗಿ ನಡೆದುಕೋ.

❖

ಮಾಯಾಮೃಗರೂಪ ಪರಿಗ್ರಹ ನಿರ್ಬಂಧಃ

ಮಾರೀಚೇನ ತು ತದ್ವಾಕ್ಯಂ ಕ್ಷಮಂ ಯುಕ್ತಂ ನಿಶಾಚರಃ ।
ಉಕ್ತೋ ನ ಪ್ರತಿಜಗ್ರಾಹ ಮರ್ತುಕಾಮ ಇವೌಷಧಮ್ ॥೧॥

ತಂ ಪಥ್ಯಹಿತವಕ್ತಾರಂ ಮಾರೀಚಂ ರಾಕ್ಷಸಾಧಿಪಃ ।
ಅಬ್ರವೀತ್ ಪರುಷಂ ವಾಕ್ಯಮಯುಕ್ತಂ ಕಾಲಚೋದಿತಃ ॥೨॥

ಮಾರೀಚ ಹೇಳಿದ ಯೋಗ್ಯವು ಹಿತವೂ ಆದ ಆ ವಾಕ್ಯವನ್ನು ನಿಶಾಚರ – ರಾವಣ ಸ್ವೀಕರಿಸಲಿಲ್ಲ –ಸಾಯಲು ಬಯಸಿರುವ ರೋಗಿಯು ಔಷಧವನ್ನು ಸ್ವೀಕರಿಸದಿರುವಂತೆ.

ಆರೋಗ್ಯಕರವೂ ಹಿತವೂ ಆದ ಮಾತುಗಳನ್ನು ಹೇಳಿದ ಮಾರೀಚನನ್ನು ಕುರಿತು ಕಾಲಪುರುಷನಿಂದ ಪ್ರಚೋದಿತನಾದ ರಾವಣನು ಅಯುಕ್ತ ಹಾಗು ಕಠೋರವಾದ ಮಾತನ್ನು ಆಡಿದನು.

ಯತ್ತಿಲೈತದಯುಕ್ತಾರ್ಥಂ ಮಾರೀಚ ಮಯಿ ಕಥ್ಯತೇ ।
ವಾಕ್ಯಂ ನಿಷ್ಫಲಮತ್ಯರ್ಥಮುಪ್ತಂ ಬೀಜಮಿವೋಷರೇ ॥೩॥

ತ್ವದ್ವಾಕ್ಯೈರ್ನ ತು ಮಾಂ ಶಕ್ಯಂ ಭೇತ್ತುಂ ರಾಮಸ್ಯ ಸಂಯುಗೇ ।
ಪಾಪಶೀಲಸ್ಯ ಮೂರ್ಖಸ್ಯ ಮಾನುಷಸ್ಯ ವಿಶೇಷತಃ ॥೪॥

ಯಸ್ತ್ಯಕ್ತ್ವಾ ಸುಹೃದೋ ರಾಜ್ಯಂ ಮಾತರಂ ಪಿತರಂ ತಥಾ ।
ಸ್ತ್ರೀವಾಕ್ಯಂ ಪ್ರಾಕೃತಂ ಶ್ರುತ್ವಾ ವನಮೇಕಪದೇ ಗತಃ ॥೫॥

ಅವಶ್ಯಂ ತು ಮಯಾ ತಸ್ಯ ಸಂಯುಗೇ ಖರಘಾತಿನಃ ।
ಪ್ರಾಣೈಃ ಪ್ರಿಯತರಾ ಸೀತಾ ಹರ್ತವ್ಯಾ ತವ ಸಂನಿಧೌ ॥೬॥

ಏವಂ ಮೇ ನಿಶ್ಚಿತಾ ಬುದ್ಧಿರ್ಹೃದಿ ಮಾರೀಚ ವರ್ತತೇ ।
ನ ವ್ಯಾವರ್ತಯಿತುಂ ಶಕ್ಯಾ ಸೇಂದ್ರೈರಪಿ ಸುರಾಸುರೈಃ ॥೭॥

ಮಾರೀಚ ! ಸಮಯ - ಅನನುಗುಣವಾದ ಯಾವ ಮಾತನ್ನು ನನ್ನೊಂದಿಗೆ ಹೇಳಿರುವೆಯೋ ಅದು ಅತ್ಯಂತ ನಿಷ್ಫಲ - ಬಂಜರು ಭೂಮಿಯಲ್ಲಿ ಬಿತ್ತಿದ ಬೀಜದಂತೆ.

ನಿನ್ನ ಉಪದೇಶ ವಚನಗಳಿಂದ ನನ್ನನ್ನು ರಾಮನೊಡನೆ ಯುದ್ಧ ಅಥವಾ ಸೀತಾಪಹಾರಗಳಿಂದ ತಡೆಯಲು ಸಾಧ್ಯವಿಲ್ಲ. ಪಾಪಶೀಲನು ಮೂರ್ಖನು ವಿಶೇಷವಾಗಿ ಸಾಮಾನ್ಯ ಮನುಷ್ಯನಾದ - ಯಾರು ರಾಜ್ಯ, ಗೆಳೆಯರು, ತಾಯಿ-ತಂದೆಗಳು ಎಲ್ಲರನ್ನೂ ಬಿಟ್ಟು ಅವಿವೇಕಿ ಹೆಣ್ಣಿನ ಮಾತೊಂದನ್ನು ಕೇಳಿ ಮರುಕ್ಷಣದಲ್ಲಿಯೇ ಕಾಡಿಗೆ ಹೋದ - ಯುದ್ಧದಲ್ಲಿ ಖರನನ್ನು ಕೊಂದ ಆ ರಾಮನ ಪ್ರಾಣಗಳಿಂದಲೂ ಹೆಚ್ಚು ಪ್ರಿಯತರಳಾದ ಸೀತೆಯನ್ನು ನಿನ್ನ ಸನ್ನಿಧಿ-ಯಲ್ಲಿ ಅಪಹರಿಸಲೇ ಬೇಕು - ಹೀಗೆ ನಿಶ್ಚಿತವಾದ ಬುದ್ಧಿ ನನ್ನ ಮನದಲ್ಲಿದೆ ಮಾರೀಚ ! ಇಂದ್ರಸಹಿತ ಸುರಾಸುರರಿಂದಲೂ ಆ ನಿರ್ಧಾರದಿಂದ ನನ್ನನ್ನು ಹಿಂದೆ ಸರಿಸಲು ಸಾಧ್ಯವಿಲ್ಲ.

ದೋಷಂ ಗುಣಂ ವಾ ಸಂಪೃಷ್ಟಸ್ತ್ವಮೇವಂ ವಕ್ತುಮರ್ಹಸಿ ।
ಅಪಾಯಂ ವಾಪ್ಯುಪಾಯಂ ವಾ ಕಾರ್ಯಸ್ಯಾಸ್ಯ ವಿನಿಶ್ಚಯೇ ॥೮॥

ಸಂಪೃಷ್ಟೇನ ತು ವಕ್ತವ್ಯಂ ಸಚಿವೇನ ವಿಪಶ್ಚಿತಾ ।
ಉದ್ಯತಾಂಜಲಿನಾ ರಾಜ್ಞೋ ಯ ಇಚ್ಛೇದ್ಭೂತಿಮಾತ್ಮನಃ ॥೯॥

ವಾಕ್ಯಮಪ್ರತಿಕೂಲಂ ತು ಮೃದುಪೂರ್ವಂ ಹಿತಂ ಶುಭಮ್ ।
ಉಪಚಾರಜ್ಞೇ ಯುಕ್ತಂ ಚ ವಕ್ತವ್ಯೋ ವಸುಧಾಧಿಪಃ ॥೧೦॥

ಸಾವಮರ್ದಂ ತು ಯದ್ವಾಕ್ಯಂ ಮಾರೀಚ ಹಿತಮುಚ್ಯತೇ ।
ನಾಭಿನಂದತಿ ತದ್ರಾಜಾ ಮಾನಾರ್ಹೋ ಮಾನವರ್ಜಿತಮ್ ॥೧೧॥

ಪಂಚ ರೂಪಾಣಿ ರಾಜಾನೋ ಧಾರಯಂತ್ಯಮಿತೌಜಸಃ ।
ಅಗ್ನೇರಿಂದ್ರಸ್ಯ ಸೋಮಸ್ಯ ಯಮಸ್ಯ ವರುಣಸ್ಯ ಚ ॥೧೨॥

ತೈಷ್ಣ್ಯಂ ತಥಾ ವಿಕ್ರಮಂ ಚ ಸೌಮ್ಯಂ ದಂಡಂ ಪ್ರಸನ್ನತಾಮ್ ।
ಧಾರಯಂತಿ ಮಹಾತ್ಮಾನೋ ರಾಜಾನಃ ಕ್ಷಣದಾಚರ ।
ತಸ್ಮಾತ್ ಸರ್ವಾಸ್ವವಸ್ಥಾಸು ಮಾನ್ಯಾಃ ಪೂಜ್ಯಾಶ್ಚ ಪಾರ್ಥಿವಾಃ ॥೧೩॥

ಈ ಕಾರ್ಯವನ್ನು ಮಾಡಬೇಕೆ ಬಿಡಬೇಕೆ ? ಎಂದು ಸಂಶಯ ಬಂದು ಇದರಲ್ಲಿರುವ ಗುಣದೋಷಗಳನ್ನು, ಅಪಾಯ ಉಪಾಯಗಳನ್ನು ಹೇಳುವಂತೆ ನಿನ್ನಲ್ಲಿ ಕೇಳಿದ್ದರೆ ಆಗ ಇದೆಲ್ಲವನ್ನು ನೀನು ಹೇಳುವುದು ಸರಿಯಾಗುತ್ತಿತ್ತು.

ರಾಜರು ಕೇಳಿದಾಗ ಬುದ್ಧಿವಂತ ಸಚಿವನು - ತನಗೆ ರಾಜನಿಂದ ಐಶ್ವರ್ಯ-ವನ್ನು ಬಯಸುವವನು -ಕೈ ಮುಗಿದು ರಾಜನಿಗೆ ಪ್ರತಿಕೂಲವಾಗದ, ಹಿತವೂ ಶುಭವೂ ಆದ ವಿಷಯವನ್ನು ಮೃದುಪೂರ್ವವಾಗಿ ಹೇಳಬೇಕು.

ಹಿತವನ್ನೆ ಆಗಲಿ ತಿರಸ್ಕಾರ ಪೂರ್ವಕವಾಗಿ ಬಿರುನುಡಿಯಿಂದ ಹೇಳಿದರೆ ಸತ್ಕಾರಾರ್ಹನಾದ ರಾಜನು ಮರ್ಯಾದೆಯಿಲ್ಲದ ಮಾತನ್ನು ಅಭಿನಂದಿಸುವುದಿಲ್ಲ.

ಅಮಿತ ಓಜಸ್ವಿಗಳಾದ ರಾಜರು ಅಗ್ನಿ -ಇಂದ್ರ - ಚಂದ್ರ - ವರುಣ - ಯಮ - ಈ ಐದು ರೂಪಗಳನ್ನು ಧರಿಸಿರುತ್ತಾರೆ.

ನಿಶಾಚರನೆ ! ಅಗ್ನಿಯ ತೀಕ್ಷ್ಣತೆ, ಇಂದ್ರನ ವಿಕ್ರಮ, ಚಂದ್ರನ ಸೌಮ್ಯ -

ಆಹ್ಲಾದಕರತ್ವ –ದಯಾರ್ದ್ರ ಚಿತ್ತತೆ, ವರುಣನ ಪ್ರಸನ್ನತೆ, ಯಮನ ದುಷ್ಟನಿಗ್ರಹಣ ಈ ಐದನ್ನು ಮಹಾತ್ಮ ರಾಜರು ಧರಿಸಿರುತ್ತಾರೆ.

ಆದ್ದರಿಂದ ಎಲ್ಲ ಅವಸ್ಥೆಗಳಲ್ಲಿಯೂ ರಾಜರು ಮಾನನೀಯರು, ಪೂಜನೀಯರು ಕೂಡ.

ತ್ವಂ ತು ಧರ್ಮಮವಿಜ್ಞಾಯ ಕೇವಲಂ ಮೋಹಮಾಸ್ಥಿತಃ ॥೧೪॥

ಅಭ್ಯಾಗತಂ ಮಾಂ ದೌರಾತ್ಮ್ಯಾತ್ ಪರುಷಂ ವದಸೀದೃಶಮ್ ।
ಗುಣದೋಷೌ ನ ಪೃಚ್ಛಾಮಿ ಕ್ಷಮಂ ಚಾತ್ಮನಿ ರಾಕ್ಷಸ ॥೧೫॥

ಮಯೋಕ್ತಂ ತವ ಚೈತಾವತ್ ಸಂಪ್ರತ್ಯಮಿತವಿಕ್ರಮ ।
ಅಸ್ಮಿಂಸ್ತು ತ್ವಂ ಮಹಾಕೃತ್ಯೇ ಸಾಹಾಯ್ಯಂ ಕರ್ತುಮರ್ಹಸಿ ॥೧೬॥

ಶೃಣು ತತ್ ಕರ್ಮ ಸಾಹಾಯ್ಯೇ ಯತ್ ಕಾರ್ಯಂ ವಚನಾನ್ಮಮ ।
ಸೌವರ್ಣಸ್ತ್ವಂ ಮೃಗೋ ಭೂತ್ವಾ ಚಿತ್ರೋ ರಜತಬಿಂದುಭಿಃ ॥೧೭॥

ಆಶ್ರಮೇ ತಸ್ಯ ರಾಮಸ್ಯ ಸೀತಾಯಾಃ ಪ್ರಮುಖೇ ಚರ ।
ಪ್ರಲೋಭಯಿತ್ವಾ ವೈದೇಹೀಂ ಯಥೇಷ್ಟಂ ಗಂತುಮರ್ಹಸಿ ॥೧೮॥

ಆದರೆ ನೀನು ರಾಜಧರ್ಮವನ್ನರಿಯದೆ ಕೇವಲ ಮೋಹವಶನಾಗಿ ನಿನ್ನ ಬಳಿ ಬಂದಿರುವ ನನ್ನೊಂದಿಗೆ ದುಷ್ಟತನದಿಂದ ಕಠೋರವಾಗಿ ಮಾತನಾಡಲು ಬಯಸಿರುವಿ !

ಗುಣದೋಷಗಳನ್ನಾಗಲಿ, ನನಗೆ ಯೋಗ್ಯವಾದುದು ಯಾವುದು ಎಂದಾಗಲಿ ಕೇಳಲು ಬಂದಿಲ್ಲ. ಅಮಿತವಿಕ್ರಮನೇ ! ಈಗ ನಾನು ಹೇಳುತ್ತಿರುವುದು ಇಷ್ಟು – ನಾನು ಮಾಡಬೇಕೆಂದಿರುವ ಮಹಾಕಾರ್ಯದಲ್ಲಿ ನೀನು ಸಹಾಯ ಮಾಡಬೇಕಷ್ಟೆ. ನೀನು ಮಾಡಬೇಕಾದ ಸಹಾಯಕರ್ಮ ಯಾವುದು ? ಹೇಳುತ್ತೇನೆ ಕೇಳು.

ನೀನು ಬೆಳ್ಳಿ ಚುಕ್ಕೆಗಳಿಂದ ಕೂಡಿರುವ ಆಶ್ಚರ್ಯಕರವಾದ ಬಂಗಾರದ ಜಿಂಕೆಯ ರೂಪವನ್ನು ಸ್ವೀಕರಿಸಿ ಆ ರಾಮನ ಆಶ್ರಮದಲ್ಲಿ ಸೀತೆಯ ಮುಂದೆ ಸುಳಿದಾಡು. ಸೀತೆಯನ್ನು ವಂಚನೆಗೊಳಿಸಿ ಇಷ್ಟಬಂದಂತೆ ನೀನು ಹೋಗಬಹುದು.

ತ್ವಾಂ ತು ಮಾಯಾಮೃಗಂ ದೃಷ್ಟ್ವಾ ಕಾಂಚನಂ ಜಾತವಿಸ್ಮಯಾ ।
ಆನಯೈನಮಿತಿ ಕ್ಷಿಪ್ರಂ ರಾಮಂ ವಕ್ಷ್ಯತಿ ಮೈಥಿಲೀ ॥೧೯॥

ಅಪಕ್ರಾಂತೇ ತು ಕಾಕುತ್ಸ್ಥೇ ದೂರಂ ಗತ್ವಾಪ್ಯುದಾಹರ ।
ಹಾ ಸೀತೇ ಲಕ್ಷ್ಮಣೇತ್ಯೇವಂ ರಾಮವಾಕ್ಯಾನುರೂಪಕಮ್ ॥೨೦॥

ತಚ್ಛ್ರುತ್ವಾ ರಾಮಪದವೀಂ ಸೀತಯಾ ಚ ಪ್ರಚೋದಿತಃ ।
ಅನುಗಚ್ಛತಿ ಸಂಭ್ರಾಂತಃ ಸೌಮಿತ್ರಿರಪಿ ಸೌಹೃದಾತ್ ॥೨೧॥

ಅಪಕ್ರಾಂತೇ ಚ ಕಾಕುತ್ಸ್ಥೇ ಲಕ್ಷ್ಮಣೇ ಚ ಯಥಾಸುಖಮ್ ।
ಆಹರಿಷ್ಯಾಮಿ ವೈದೇಹೀಂ ಸಹಸ್ರಾಕ್ಷಃ ಶಚೀಮಿವ ॥೨೨॥

ಏವಂ ಕೃತ್ವಾ ತ್ವಿದಂ ಕಾರ್ಯಂ ಯಥೇಷ್ಟಂ ಗಚ್ಚ ರಾಕ್ಷಸ ।
ರಾಜ್ಯಸ್ಯಾರ್ಧಂ ಪ್ರದಾಸ್ಯಾಮಿ ಮಾರೀಚ ತವ ಸುವ್ರತ ॥೨೩॥

ನಿನ್ನ ಬಂಗಾರ ಜಿಂಕೆಯ ರೂಪವನ್ನು ಅಚ್ಚರಿಕೊಂಡವಳಾಗಿ ಮೈಥಿಲಿಯು ಕೂಡಲೆ 'ಈ ಜಿಂಕೆಯನ್ನು ತಂದುಕೊಡು' ಎಂದು ರಾಮನಿಗೆ ಹೇಳುತ್ತಾಳೆ. ರಾಮ ನಿನ್ನನ್ನು ಬೆನ್ನಟ್ಟಿ ಬಂದಾಗ ಅವನನ್ನು ಬಹುದೂರ ಕರೆದೊಯ್ದು ರಾಮನ ಮಾತಿಗೆ ಅನುರೂಪವಾಗುವಂತೆ, 'ಹಾ ಸೀತೆ, ಹಾ ಲಕ್ಷ್ಮಣ' ಎಂದು ಕೂಗು.

ಆ ಕೂಗನ್ನು ಕೇಳಿ ಗಾಬರಿಯಾಗುವ ಲಕ್ಷ್ಮಣ ರಾಮನ ಮೇಲಿನ ಪ್ರೀತಿ ಹಾಗೂ ಸೀತೆಯ ಪ್ರಚೋದನೆಗಳಿಂದ ರಾಮನ ಹಾದಿಯನ್ನು ಅನುಸರಿಸಿ ಓಡುತ್ತಾನೆ.

ರಾಮ ಲಕ್ಷ್ಮಣರು ಹೋದ ಮೇಲೆ ಅನಾಯಾಸವಾಗಿ ಸೀತೆಯನ್ನು ಕರೆದೊಯ್ಯುತ್ತೇನೆ; ಇಂದ್ರ ಶಚಿಯನ್ನು ಕರೆದೊಯ್ಯುವಂತೆ.

ಹೀಗೆ ಈ ಕಾರ್ಯವನ್ನು ಮಾಡಿಕೊಟ್ಟು ಎಲ್ಲಿಗೆ ಬೇಕಾದರೂ ಹೋಗು. ಸುವ್ರತ ! ಮಾರೀಚನೇ ! ನಿನಗೆ ಅರ್ಧರಾಜ್ಯವನ್ನು ಕೊಡುತ್ತೇನೆ.

ಗಚ್ಛ ಸೌಮ್ಯ ಶಿವಂ ಮಾರ್ಗಂ ಕಾರ್ಯಸ್ಯಾಸ್ಯ ವಿವೃದ್ಧಯೇ ।
ಅಹಂ ತ್ವಾನುಗಮಿಷ್ಯಾಮಿ ಸರಥೋ ದಂಡಕಾವನಮ್ ॥೨೪॥

ಪ್ರಾಪ್ಯ ಸೀತಾಮಯುದ್ಧೇನ ವಂಚಯಿತ್ವಾ ತು ರಾಘವಮ್ ।
ಲಂಕಾಂ ಪ್ರತಿಗಮಿಷ್ಯಾಮಿ ಕೃತಕಾರ್ಯಃ ಸಹ ತ್ವಯಾ ॥೨೫॥

ನ ಚೇತ್ ಕರೋಷಿ ಮಾರೀಚ ಹನ್ಮಿ ತ್ವಾಮಹಮದ್ಯ ವೈ ।
ಏತತ್ ಕಾರ್ಯಮವಶ್ಯಂ ಮೇ ಬಲಾದಪಿ ಕರಿಷ್ಯಸಿ ॥೨೬॥

ರಾಜ್ಞೋ ಹಿ ಪ್ರತಿಕೂಲಸ್ಥೋ ನ ಜಾತು ಸುಖಮೇಧತೇ ॥

ಆಸಾದ್ಯಂ ತಂ ಜೀವಿತಸಂಶಯಸ್ತೇ
ಮೃತ್ಯುಧ್ರುವೋ ಹ್ಯದ್ಯ ಮಯಾ ವಿರುಧ್ಯ ।
ಏತದ್ಯಥಾವತ್ ಪ್ರತಿಗೃಹ್ಯ ಬುದ್ಧ್ಯಾ
ಯದತ್ರ ಪಥ್ಯಂ ಕುರು ತತ್ತಥಾ ತ್ವಮ್ ॥೨೭॥

ಸೌಮ್ಯನೇ! ಈ ಕಾರ್ಯವನ್ನು ಸಾಧಿಸಲು ಶಿವಂಕರ ಮಾರ್ಗವನ್ನು ಅನುಸರಿಸು. ನಾನೂ ರಥಾರೂಢನಾಗಿ ದಂಡಕಾವನಕ್ಕೆ ನಿನ್ನನ್ನು ಹಿಂಬಾಲಿಸಿ ಬರುತ್ತೇನೆ.

ಯುದ್ಧವೇ ಮಾಡದೆ ರಾಘವನನ್ನು ವಂಚಿಸಿ ಸೀತೆಯನ್ನು ಪಡೆದು ಕೃತಕೃತ್ಯನಾಗಿ ನಿನ್ನೊಂದಿಗೆ ಲಂಕೆಗೆ ಹೋಗುತ್ತೇನೆ.

ಮಾರೀಚ ! ಈ ಕೆಲಸವನ್ನು ಮಾಡದಿದ್ದರೆ ನಾನಿಂದು ಕೊಂದೇ ಬಿಡುತ್ತೇನೆ. ಬಲವಂತವಾಗಿಯಾದರೂ ಈ ಕಾರ್ಯವನ್ನು ನೀನು ಅವಶ್ಯವಾಗಿ ಮಾಡುವಿ. ರಾಜನಿಗೆ ಪ್ರತಿಕೂಲವಾಗಿ ನಡೆದುಕೊಳ್ಳುವವನು ಸುಖವಾಗಿ ಏಳಿಗೆಯನ್ನು ಹೊಂದುವುದಿಲ್ಲ.

ರಾಮನ ಬಳಿ ಜಿಂಕೆಯಾಗಿ ಹೋದರೆ ಸಾಯಲೂ ಬಹುದು ಅಥವಾ ಬದುಕಲೂ ಬಹುದು. ಆದರೆ ನನ್ನನ್ನು ವಿರೋಧಿಸಿದರೆ ಇಂದೇ ಮರಣವು ನಿಶ್ಚಯ. ನನ್ನ ಮಾತನ್ನು ಅರ್ಥ ಮಾಡಿಕೊಂಡು ವಿಚಾರಮಾಡಿ ಯಾವುದು ನಿನಗೆ ಪಥ್ಯವೋ ಅದನ್ನು ನೀನು ಮಾಡು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತನೇ ಸರ್ಗ ಮುಗಿಯಿತು.

❖

ಏಕಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಹೀಗೆ ಆದಿಷ್ಟವಾದ ಮಾರೀಚನು ತನಗೆ ಪ್ರತಿಕೂಲವಾಗಿ ಮಾತನಾಡಿದ ರಾವಣನನ್ನು ಕುರಿತು ಕಠೋರವಾದ ಮಾತನಾಡಿದನು. – ರಾಷ್ಟ್ರ ಅಮಾತ್ಯ ಮಕ್ಕಳೊಂದಿಗೆ ಸರ್ವನಾಶವಾಗುವಂಥ ಈ ಉಪದೇಶವನ್ನು ಸಲಹೆಯನ್ನು ನಿನಗಾರು ಕೊಟ್ಟರು ?

ಯಾವ ಪಾಪಿ ನೀನು ಸುಖವಾಗಿರುವುದನ್ನು ಸಹಿಸದೆ ನಿನಗೆ ಉಪಾಯವಾಗಿ, ಮೃತ್ಯುದ್ವಾರವನ್ನು ಪ್ರವೇಶಿಸುವ ಈ ಕೆಟ್ಟ ವಿಧಾನವನ್ನು ಉಪದೇಶಿಸಿದರು ?

ದುರ್ಬಲರಾದ ಶತ್ರುಗಳು ಪ್ರಬಲನ ಆಕ್ರಮಣಕ್ಕೆ ಬಲಿಯಾಗಿ ನೀನು ನಾಶವಾಗುವುದನ್ನು ಬಯಸಿದ್ದಾರೆಂದು ಸ್ಪಷ್ಟವಾಗುತ್ತಿದೆ !

ರಾಜ ದುರ್ಮಾರ್ಗದಲ್ಲಿ ಪ್ರವೃತ್ತನಾದಾಗ ಅವನನ್ನು ತಡೆಯದ ಸಚಿವ ವಧಾರ್ಹನಾಗುತ್ತಾನೆ.

ಧರ್ಮ ಅರ್ಥ ಕಾಮ ಯಶಸ್ ಇವೆಲ್ಲವನ್ನು ಸ್ವಾಮಿ ರಾಜನ ಪ್ರಸಾದದಿಂದ ಸಚಿವರು ಪಡೆಯುತ್ತಾರೆ. ಅಂಥ ರಾಜ ದಾರಿ ತಪ್ಪಿದರೆ ಎಲ್ಲವೂ ನಾಶವಾಗುತ್ತದೆ.

ಧರ್ಮ ಮತ್ತು ಜಯ ಎಂದೂ ರಾಜಮೂಲವಾದುದು. ಆದ್ದರಿಂದ ಎಂದೆಂದೂ ಸಚಿವರು ರಾಜ ತಪ್ಪು ದಾರಿ ತುಳಿಯದಂತೆ ಎಚ್ಚರಿಸಿ ಅವನನ್ನು ಸರ್ವಥಾ ರಕ್ಷಣೆ ಮಾಡಬೇಕು.

ರಾಜ ತೀಕ್ಷ್ಣ ಸ್ವಭಾವದವನಾದರೆ ಪ್ರಜೆಗಳು ಸುರಕ್ಷಿತರಾಗಿರಲು ಸಾಧ್ಯವಿಲ್ಲ – ನರಿಗಳಿಂದ ಕುರಿಗಳ ರಕ್ಷಣೆ ಅಸಾಧ್ಯವಾದಂತೆ.

ರಾವಣ ! ನೀನು ದುರ್ಬುದ್ಧಿಯವನು ಕರ್ಕಶನು ಅಜಿತೇಂದ್ರಿಯನು ಆದರೆ ಖಂಡಿತ ರಾಕ್ಷಸರೆಲ್ಲ ನಾಶವಾಗುತ್ತಾರೆ !

ನನ್ನನ್ನು ಕೊಂದ ಬಳಿಕ ರಾಮನು ನಿನ್ನನ್ನೂ ಶೀಘ್ರವೇ ಕೊಲ್ಲುತ್ತಾನೆ. ಶತ್ರುವಿನಿಂದ ಸತ್ತ ನಾನು ಕೃತಕೃತ್ಯನಾಗುತ್ತಾನೆ. ರಾಮನ ದರ್ಶನವಾದರೆ ಸಾಕು ನಾನು ಸತ್ತನೆಂದೇ ತಿಳಿ. ಸೀತೆಯನ್ನು ಅಪಹರಿಸಿದರೆ ನೀನೂ ಸಬಾಂಧವನಾಗಿ ಸತ್ತೆ ಎಂದೇ ಭಾವಿಸು.

ನಿನ್ನ ಹಿತೈಷಿಯಾದ ನನ್ನ ಮಾತನ್ನು ನೀನು ಸಹಿಸುತ್ತಿಲ್ಲ. ಆಯುಷ್ಯ ತೀರಿದವರು ಗೆಳೆಯರು ಹೇಳಿದ ಹಿತವಚನವನ್ನು ಆಲಿಸುವುದಿಲ್ಲ !

❖

ರಾವಣನಿಂದಾ

ಆಜ್ಞಪ್ತೋ ರಾವಣೇನೇತ್ಥಂ ಪ್ರತಿಕೂಲಂ ಚ ರಾಜವತ್ ।
ಅಬ್ರವೀತ್ ಪರುಷಂ ವಾಕ್ಯಂ ನಿಶ್ಶಂಕೋ ರಾಕ್ಷಸಾಧಿಪಮ್ ॥೧॥

ಕೇನಾಯಮುಪದಿಷ್ಟಸ್ತೇ ವಿನಾಶಃ ಪಾಪಕರ್ಮಣಾ ।
ಸಪುತ್ರಸ್ಯ ಸರಾಷ್ಟ್ರಸ್ಯ ಸಾಮಾತ್ಯಸ್ಯ ನಿಶಾಚರ ॥೨॥

ಕಸ್ತ್ವಯಾ ಸುಖಿನಾ ರಾಜನ್ನಾಭಿನಂದತಿ ಪಾಪಕೃತ್ ।
ಕೇನೇದಮುಪದಿಷ್ಟಂ ತೇ ಮೃತ್ಯುದ್ವಾರಮುಪಾಯತಃ ॥೩॥

ಶತ್ರವಸ್ತವ ಸುವ್ಯಕ್ತಂ ಹೀನವೀರ್ಯಾ ನಿಶಾಚರಾಃ ।
ಇಚ್ಛಂತಿ ತ್ವಾಂ ವಿನಶ್ಯಂತಮುಪರುದ್ಧಂ ಬಲೀಯಸಾ ॥೪॥

ಕೇನೇದಮುಪದಿಷ್ಟಂ ತೇ ಕ್ಷುದ್ರೇಣಾಹಿತವಾದಿನಾ ।
ಯಸ್ತ್ವಾಮಿಚ್ಛತಿ ನಶ್ಯಂತಂ ಸ್ವಕೃತೇನ ನಿಶಾಚರ ॥೫॥

ರಾಜರಿಗೆ ಅರ್ಹವಾಗದಂಥ ಪ್ರತಿಕೂಲವಾಗಿ ಪರಿಣಮಿಸುವಂತೆ ಆದೇಶಿಸಲ್ಪಟ್ಟ ನಿಶಾಚರ ಮಾರೀಚ ರಾಕ್ಷಸಾಧಿಪತಿಗೆ ಕಠೋರವಾದ ಮಾತನಾಡಿದನು –

ಪಾಪಕಾರ್ಯದಿಂದ ರಾಷ್ಟ್ರ ಅಮಾತ್ಯ ಪುತ್ರರೊಂದಿಗೆ ವಿನಾಶವಾಗುವ ಈ ಉಪಾಯವು ನಿನಗೆ ಯಾರಿಂದ ಉಪದಿಷ್ಟವಾಯಿತು ?

ನೀನು ಸುಖವಾಗಿರುವುದನ್ನು ಸಹಿಸದ ಯಾವ ಪಾಪಿ ನಿನಗೆ ಈ ಸಲಹೆ ಕೊಟ್ಟ ? ಸುಲಭವಾಗಿ ಮೃತ್ಯು ದ್ವಾರವನ್ನು ಪ್ರವೇಶಿಸುವ ಈ ಉಪದೇಶ ಯಾರು ಮಾಡಿದರು ?

ನಿನ್ನ ವೀರ್ಯವಿಲ್ಲದ ಶತ್ರುಗಳು ನೀನು ಪ್ರಬಲನ ಆಕ್ರಮಣಕ್ಕೆ ಬಲಿಯಾಗಿ ಸಾಯುವುದನ್ನು ಬಯಸಿದ್ದಾರೆಂದು ಸ್ಪಷ್ಟವಾಗುತ್ತಿದೆ !

ಅಹಿತವಾದುದನ್ನು ಹೇಳುವ ಯಾವ ಕ್ಷುದ್ರಪುರುಷ ನಿನಗೆ ಇದನ್ನು ಉಪದೇಶಿಸಿದ ?

ನಿಶಾಚರನೇ ! ನಿನ್ನದೆ ಕುಕೃತ್ಯದಿಂದ ನೀನು ನಾಶವಾಗುವುದನ್ನು ಬಯಿಸಿದವನು ಯಾರು ?

ವಧ್ಯಾಃ ಖಲು ನ ಹನ್ಯಂತೇ ಸಚಿವಾಸ್ತವ ರಾವಣ ।
ಯೇ ತ್ವಾಮುತ್ಪಥಮಾರೂಢಂ ನ ನಿಗೃಹ್ಣಂತಿ ಸರ್ವಶಃ ॥೬॥

ಅಮಾತ್ಯೈಃ ಕಾಮವೃತ್ತೋ ಹೀ ರಾಜಾ ಕಾಪಥಮಾಶ್ರಿತಃ ।
ನಿಗ್ರಾಹ್ಯಃ ಸರ್ವಥಾ ಸದ್ಭಿರ್ನ ನಿಗ್ರಾಹ್ಯೋ ನಿಗೃಹ್ಯಸೇ ॥೭॥

ಧರ್ಮಮರ್ಥಂ ಚ ಕಾಮಂ ಚ ಯಶಶ್ಚ ಜಯತಾಂ ವರ ।
ಸ್ವಾಮಿಪ್ರಸಾದಾತ್ ಸಚಿವಾಃ ಪ್ರಾಪ್ನುವಂತಿ ನಿಶಾಚರ ॥೮॥

ವಿಪರ್ಯಯೇ ತು ತತ್ಸರ್ವಂ ವ್ಯರ್ಥಂ ಭವತಿ ರಾವಣ ।
ವ್ಯಸನಂ ಸ್ವಾಮಿವೈಗುಣ್ಯಾತ್ ಪ್ರಾಪ್ನುವಂತೀತರೇ ಜನಾಃ ॥೯॥

ದುರ್ಮಾಗದಲ್ಲಿ ಪ್ರವೃತ್ತನಾದ ನಿನ್ನನ್ನು ಯಾರು ತಡೆಯುತ್ತಿಲ್ಲ ಅಂಥ ನಿನ್ನ ಸಚಿವರು ವಧಾರ್ಹರು. ಆದರೆ ಅವರ ವಧೆಯಾಗುತ್ತಿಲ್ಲ.

ಸ್ವೇಚ್ಛೆಯಂತೆ ನಡೆಯುವ ಕುಮಾರ್ಗವನ್ನು ಆಶ್ರಯಿಸಿರುವ ರಾಜನನ್ನು ಅಮಾತ್ಯರು ನಿಯಂತ್ರಿಸಬೇಕು. ಯಾವ ಸಜ್ಜನರೂ ನಿನ್ನನ್ನು ನಿಗ್ರಹಿಸುತ್ತಿಲ್ಲ !

ಜಯಶಾಲಿಗಳಲ್ಲಿ ಶ್ರೇಷ್ಠನೆ ! ನಿಶಾಚರನೇ ! ಧರ್ಮ ಅರ್ಥ ಕಾಮ ಯಶಸ್ಸುಗಳನ್ನು ಒಡೆಯನಾದ ರಾಜನ ಅನುಗ್ರಹದಿಂದ ಸಚಿವರು ಪಡೆಯುತ್ತಾರೆ. ರಾಜನ ಅನುಗ್ರಹವಿರದಿದ್ದರೆ ಎಲ್ಲವೂ ವ್ಯರ್ಥವೆ. ರಾಜನ ತಪ್ಪಿನಿಂದ ಇತರ ಪ್ರಜೆಗಳಿಗೂ ಕಷ್ಟವಾಗುತ್ತದೆ.

ರಾಜಮೂಲೋ ಹಿ ಧರ್ಮಶ್ಚ ಜಯಶ್ಚ ಜಯತಾಂ ವರ ।
ತಸ್ಮಾತ್ ಸರ್ವಾಸ್ವವಸ್ಥಾಸು ರಕ್ಷಿತವ್ಯಾ ನರಾಧಿಪಾಃ ॥೧೦॥

ರಾಜ್ಯಂ ಪಾಲಯಿತುಂ ಶಕ್ಯಂ ನ ತೀಕ್ಷ್ಣೇನ ನಿಶಾಚರ ।
ನ ಚಾಪಿ ಪ್ರತಿಕೂಲೇನ ನಾವಿನೀತೇನ ರಾಕ್ಷಸ ॥೧೧॥

ಯೇ ತೀಕ್ಷ್ಣಮಂತ್ರಾಃ ಸಚಿವಾ ಭಜ್ಯಂತೇ ಸಹ ತೇನ ವೈ ।
ವಿಷಮೇಷು ರಥಾಃ ಶೀಘ್ರಾ ಮಂದಸಾರಥಯೋ ಯಥಾ ॥೧೨॥

ಬಹವಃ ಸಾಧವೋ ಲೋಕೇ ಯುಕ್ತಾ ಧರ್ಮಮನುಷ್ಠಿತಾಃ ।
ಪರೇಷಾಮಪರಾಧೇನ ವಿನಷ್ಟಾಃ ಸಪರಿಚ್ಛದಾಃ ॥೧೩॥

ಸ್ವಾಮಿನಾ ಪ್ರತಿಕೂಲೇನ ಪ್ರಜಾಸ್ತ್ರೀಕ್ಷೀಣೇನ ರಾವಣ ।
ರಕ್ಷ್ಯಮಾಣಾ ನ ವರ್ಧಂತೇ ಮೇಷಾ ಗೋಮಾಯುನಾ ಯಥಾ॥೧೪

ಗೆಲ್ಲುಗರಲ್ಲಿ ಶ್ರೇಷ್ಠನೇ ! ಧರ್ಮ ಜಯ ಎರಡಕ್ಕೂ ರಾಜನೇ ಆಧಾರಮೂಲ. ಆದ್ದರಿಂದ ಎಲ್ಲ ಅವಸ್ಥೆಗಳಲ್ಲಿಯೂ ರಾಜನನ್ನು ರಕ್ಷಿಸಬೇಕು.

ಕ್ರೂರಿಯಾದ ರಾಜನಿಂದ ರಾಜ್ಯವನ್ನು ರಕ್ಷಿಸಲು ಸಾಧ್ಯವಿಲ್ಲ. ಧರ್ಮಕ್ಕೆ ಪ್ರತಿಕೂಲನಾದವನಿಂದಲೂ, ಅವಿನೀತನಾದವನಿಂದಲೂ ರಾಜ್ಯವನ್ನು ಪರಿಪಾಲಿಸಲು ಸಾಧ್ಯವಿಲ್ಲ ರಾಕ್ಷಸ !

ಕ್ರೂರವಾದ ಉಪಾಯಗಳನ್ನು ರಾಜನಿಗೆ ಉಪದೇಶ ಮಾಡುವ ಸಚಿವರು ಆ ರಾಜನೊಂದಿಗೆ ತಾವೂ ಸಾಯುತ್ತಾರೆ - ಕೆಟ್ಟು ಹೋದ ದಾರಿಯಲ್ಲಿ ನೈಪುಣ್ಯ-ವಿಲ್ಲದ ಸಾರಥಿಯೊಡನೆ ವೇಗಗಾಮಿಗಳಾದ ಕುದುರೆಗಳೂ ನಾಶಹೊಂದುವಂತೆ !

ಈ ಲೋಕದಲ್ಲಿ ಯೋಗ್ಯರಾದ ಧರ್ಮಾನುಷ್ಠಾನಪರರೂ ಆದ ಅನೇಕ ಸತ್ಪುರುಷರು ಇನ್ನೊಬ್ಬರ ಅಪರಾಧದಿಂದ ಪರಿ ಜನಸಹಿತರಾಗಿ ನಾಶವಾಗಿರುವರು.

ರಾವಣ ! ಧರ್ಮಕ್ಕೆ ಪ್ರತಿಕೂಲನು ಕ್ರೂರ ಸ್ವಭಾವದವನೂ ಆದ ಒಡೆಯ-ನಿಂದ ರಕ್ಷಿಸಲ್ಪಡುವ ಪ್ರಜೆಗಳು ವೃದ್ಧಿಹೊಂದುವುದಿಲ್ಲ-ನರಿಯಿಂದ ರಕ್ಷಿಸಲ್ಪಡುವ ಕುರಿಗಳಂತೆ !

ಅವಶ್ಯಂ ವಿನಶಿಷ್ಯಂತಿ ಸರ್ವೇ ರಾವಣ ರಾಕ್ಷಸಾಃ ।
ಯೇಷಾಂ ತ್ವಂ ಕರ್ಕಶೋ ರಾಜಾ ದುರ್ಬುದ್ಧಿರಜಿತೇಂದ್ರಿಯಃ ॥೧೫॥

ತದಿದಂ ಕಾಕತಾಲೀಯಂ ಘೋರಮಾಸಾದಿತಂ ಮಯಾ ।
ಅತ್ಯೈವ ಶೋಚನೀಯಸ್ತ್ವಂ ಸಸೈನ್ಯೋ ವಿನಶಿಷ್ಯಸಿ ॥೧೬॥

ಮಾಂ ನಿಹತ್ಯ ತು ರಾಮೋಽಸಾವಚಿರಾತ್ತ್ವಾಂ ವಧಿಷ್ಯತಿ ।
ಅನೇನ ಕೃತಕೃತ್ಯೋಽಸ್ಮಿ ಮ್ರಿಯೇ ಯದರಿಣಾ ಹತಃ ॥೧೭॥

ದರ್ಶನಾದೇವ ರಾಮಸ್ಯ ಹತಂ ಮಾಮವಧಾರಯ ।
ಆತ್ಮಾನಂ ಚ ಹತಂ ವಿದ್ಧಿ ಸೀತಾಂ ಸಬಾಂಧವಮ್ ॥೧೮॥

ಆನಯಿಷ್ಯಸಿ ಚೇತ್ ಸೀತಾಮಾಶ್ರಮಾತ್ ಸಹಿತೋ ಮಯಾ ।
ನೈವ ತ್ವಮಸಿ ನಾಹಂ ಚ ನೈವ ಲಂಕಾ ನ ರಾಕ್ಷಸಾಃ ॥೧೯॥

ನಿವಾರ್ಯಮಾಣಸ್ತು ಮಯಾ ಹಿತೈಷಿಣಾ
ನ ಮೃಷ್ಯಸೇ ವಾಕ್ಯಮಿದಂ ನಿಶಾಚರ ।
ಪರೇತಕಲ್ಪಾ ಹಿ ಗತಾಯುಷೋ ನರಾ
ಹಿತಂ ನ ಗೃಹ್ಣಂತಿ ಸುಹೃದ್ಭಿರೀರಿತಮ್ ॥೨೦॥

ಯಾವ ರಾಕ್ಷಸರಿಗೆ ಕ್ರೂರಿಯು ದುರ್ಬುದ್ಧಿಯು ಅಜಿತೇಂದ್ರಿಯನೂ ಆದ ನೀನು ರಾಜನಾಗಿರುವೆಯೋ ರಾವಣ! ಆ ಎಲ್ಲ ರಕ್ಕಸರು ಅವಶ್ಯವಾಗಿ ಸಾಯುವರು.

ಈ ಘೋರ ಕೃತ್ಯಕ್ಕೆ ಕಾಕತಾಲೀಯವಾಗಿ ನಾನು ಸಿಲುಕಿದ್ದೇನೆ. ನೀನು ಸಸೈನ್ಯ-ವಾಗಿ ನಾಶವಾಗುವಿ ಎಂದು ಶೋಚನೀಯನಾಗಿರುವಿ.

ನನ್ನನ್ನು ಕೊಂದ ಬಳಿಕ ಶೀಘ್ರದಲ್ಲಿ ರಾಮನು ನಿನ್ನನ್ನೂ ಕೊಲ್ಲುವನು. ನಾನು ಶತ್ರುವಿನಿಂದ ಹತನಾಗಿ ಕೃತಕೃತ್ಯನಾಗುತ್ತೇನೆ.

ರಾಮನ ದರ್ಶನವಾದೊಡನೆ ನಾನು ಹತನಾದೆನೆಂದು ತಿಳಿ. ಸೀತೆಯನ್ನು ಅಪಹರಿಸಿ ನೀನೂ ಹತನಾಗುವಿ ಎಂದು ತಿಳಿ.

ಆಶ್ರಮದಿಂದ ನನ್ನೊಂದಿಗೆ ಸೀತೆಯನ್ನು ಲಂಕೆಗೆ ತಂದೆಯೆಂದರೆ ನೀನು ಇರುವುದಿಲ್ಲ. ನಾನೂ ಇರುವುದಿಲ್ಲ ಲಂಕೆಯೂ ಇರುವುದಿಲ್ಲ. ರಾಕ್ಷಸರು ಇರುವುದಿಲ್ಲ.

ನಿಶಾಚರನೇ ! ನಿನ್ನ ಹಿತೈಷಿಯಾಗಿ ಹೇಳುತ್ತಿರುವ ನನ್ನ ಮಾತನ್ನು ನೀನು ಸಹಿಸುತ್ತಿಲ್ಲ. ಆಯುಷ್ಯತೀರಿದ ಮೃತಪ್ರಾಯರಾದ ಜನರು ಗೆಳೆಯರು ಹೇಳುವ ಹಿತವನ್ನು ಸ್ವೀಕರಿಸುವುದಿಲ್ಲ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತೊಂದನೇ ಸರ್ಗ ಮುಗಿಯಿತು.

❖

ದ್ವಿಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ತನ್ನ ಸಲಹೆಯನ್ನು ಕೇಳದ ರಾವಣನೊಂದಿಗೆ ಮಾರೀಚ ಅವನ ಭಯದಿಂದಲೆ ಜಿಂಕೆಯಾಗಲು ಒಪ್ಪಿದ. 'ಮತ್ತೊಮ್ಮೆ ಬಿಲ್ಲುಬಾಣ ಖಡ್ಗಗಳನ್ನು ಹಿಡಿದಿರುವ ರಾಮನ ಕಣ್ಣಿಗೆ ಗೋಚರನಾಗುತ್ತೇನೆ. ನನ್ನ ಬದುಕೇ ಮುಗಿದಿದೆ. ರಾಮನ ಮುಂದೆ ಪರಾಕ್ರಮ ತೋರಿ ಬದುಕಿ ಬರಲು ಸಾಧ್ಯವೇ ?

ಅಪ್ಪ ! ರಾವಣ ! ನಿನಗೆ ಮಂಗಳವಾಗಲಿ ಹೊರಡೋಣ ಎಂದ ಮಾರೀಚ. ರಾವಣ ಖುಷಿಯಾದ 'ಈಗ ನೀನು ನಿಜವಾಗಿ ಮಾರೀಚ. ಇದಕ್ಕೆ ಮುಂಚೆ ಸಾಮಾನ್ಯ ರಾಕ್ಷಸನಾಗಿದ್ದಿ. ರಥವೇರಿ ಹೋಗೋಣ. ನೀನು ಬಂಗಾರದ ಜಿಂಕೆಯಾಗಿ ರಾಮನ ಮಡದಿ ಸೀತೆಯನ್ನು ವಂಚಿಸಿ ಹೊರಟು ಬಿಡು. ಮುಂದೆ ನಾನು ಶೂನ್ಯವಾದ ಆಶ್ರಮದಲ್ಲಿ ಸೀತೆಯನ್ನು ಅಪಹರಿಸುತ್ತೇನೆ' ಎಂದ.

ರಥವೇರಿ ರಾವಣ ಮಾರೀಚರು ವೇಗವಾಗಿ ರಾಮಾಶ್ರಮದ ಬಳಿ ತೆರಳಿದರು. ರಾವಣ ಮಾರೀಚನಿಗೆ ರಾಮನ ಆಶ್ರಮವನ್ನು ತೋರಿಸಿದ. ಮಾರೀಚ ಅದ್ಭುತವಾದ ಜಿಂಕೆಯ ರೂಪ ತೊಟ್ಟ. ಮಾಯಾಮೃಗದ ಕೊಂಬಿನ ತುದಿ ಇಂದ್ರನೀಲಮಣಿ–ಮಯವಾಗಿತ್ತು. ಮುಖದಲ್ಲಿ ಒಂದು ಭಾಗ ಬಿಳಿಯಾಗಿಯೂ ಮತ್ತೊಂದು ಭಾಗ ಕಪ್ಪಾಗಿಯೂ ಹೊಳೆಯುತ್ತಿತ್ತು. ತಾವರೆಯಂತೆ, ಕನ್ನೈದಿಲೆಯಂತೆ, ಚಂದ್ರನಂತೆ, ವಜ್ರದಂತೆ ಸೊಗಸಾದ ಅಂಗಾಂಗಗಳನ್ನು ಹೊಂದಿತ್ತು.

ರಾಮನ ಆಶ್ರಮದ ಮುಂದೆ ಸೀತೆಯ ಸಂದರ್ಶನಕ್ಕಾಗಿ ಹೊಂಚು ಹಾಕಿ ಮಾಯಾಮೃಗ ಗರಿಕೆಗಳನ್ನು ತಿನ್ನುತ್ತ ಮರದ ಚಿಗುರೆಲೆಗಳನ್ನು ತಿನ್ನುತ್ತಾ ಆಗಾಗ ಬಾಳೆ ತೋಟಗಳ ಸಂದುಗೊಂದುಗಳ ಪೊದೆಗಳಲ್ಲಿ ಓಡಾಡುತ್ತಿತ್ತು. ಒಮ್ಮೊಮ್ಮೆ ಎಲ್ಲೋ ಓಡಿಹೋಗುತ್ತ ಮತ್ತೆ ಆಶ್ರಮದ ಅಂಗಳದಲ್ಲಿ ಕಾಣುತ್ತಿತ್ತು. ಇತರ ಜಿಂಕೆಗಳು ತಮ್ಮ ಗುಂಪಿಗೆ ಸೇರಿದ ಈ ಮಾಯಾಮೃಗವನ್ನು ಬಂದು ಮೂಸಿ ನೋಡಿ ಹೆದರಿ ಓಡಿ–ಹೋಗುತ್ತಿದ್ದವು. ಮಾರೀಚ ಮಾಂಸ ಪ್ರಿಯನಾದರೂ ತನ್ನ ವ್ಯಕ್ತಿತ್ವವನ್ನು ಮರೆ ಮಾಚಿಕೊಳ್ಳುವುದಕ್ಕೋಸ್ಕರ ಯಾವ ಜಿಂಕೆಯನ್ನು ತಿನ್ನದೆ ಸುಮ್ಮನೆ ಮುಟ್ಟಿ ಮೂಸಿ ಹೋಗುತ್ತಿದ್ದ.

ಹೂವುಗಳನ್ನು ಕೀಳಲು ತೋಟದ ಬಳಿಗೆ ಬಂದ ಸುಂದರಿ ಸೀತೆ ತನ್ನ ಗಮನ ಸೆಳೆದ ಮಾಯಾಮೃಗವನ್ನು ನೋಡಿ ಈ ತನಕ ಬೇಕಾದಷ್ಟು ಜಿಂಕೆಗಳನ್ನು ನೋಡಿ ಪರಿಚಯವಿದ್ದರೂ ವಿಚಿತ್ರ ಕಾಂತಿಯ ಬೆಳ್ಳಿ ಚುಕ್ಕೆಗಳಿಂದ ಶೋಭಿಸುವ ಈ ಬಂಗಾರದ ಮಾಯಾಮೃಗವನ್ನು ಕಂಡು ವಿಸ್ಮಯಗೊಂಡಳು !

❖

ಸ್ವರ್ಣಮೃಗಪ್ರೇಕ್ಷಣಮ್

ಏವಮುಕ್ತಾ ತು ವಚನಂ ಮಾರೀಚೋ ರಾವಣಂ ತತಃ ।
ಗಚ್ಛಾವೇತ್ಯಬ್ರವೀದ್ದೀನೋ ಭಯಾದ್ರಾತ್ರಿಂಚರಪ್ರಭೋಃ ॥೧॥

ದೃಷ್ಟಃ ಸೋಽಹಂ ಪುನಸ್ತೇನ ಶರಚಾಪಾಸಿಧಾರಿಣಾ ।
ಮದ್ವಧೋದ್ಯತಶಸ್ತ್ರೇಣ ವಿನಷ್ಟಂ ಜೀವಿತಂ ಚ ಮೇ ॥೨॥

ನ ಹಿ ರಾಮಂ ಪರಾಕ್ರಮ್ಯ ಜೀವನ್ ಪ್ರತಿನಿವರ್ತತೇ ।
ವರ್ತತೇ ಪ್ರತಿರೂಪೋಽಸೌ ಯಮದಂಡಹತಸ್ಯ ತೇ ॥೩॥

ಕಿಂ ನು ಶಕ್ಯಂ ಮಯಾ ಕರ್ತುಮೇವಂ ತ್ವಯಿ ದುರಾತ್ಮನಿ ।
ಏಷ ಗಚ್ಛಾಮ್ಯಹಂ ತಾತ ಸ್ವಸ್ತಿ ತೇಽಸ್ತು ನಿಶಾಚರ ॥೪॥

ದೀನ ಮಾರೀಚನು ಹೀಗೆ ಎಚ್ಚರಿಕೆಯ ಮಾತನ್ನು ಹೇಳಿ ರಾಕ್ಷಸರೊಡೆಯನಿಗೆ ಹೆದರಿ 'ಹೋಗೋಣ' ಎಂದು ಹೇಳಿದನು.

ಬಿಲ್ಲು ಬಾಣ ಖಡ್ಗಗಳನ್ನು ಹಿಡಿದ ರಾಮನ ಕಣ್ಣಿಗೆ ಇನ್ನೊಮ್ಮೆ ಗೋಚರನಾದರೆ ಆಯುಧವನ್ನು ಪ್ರಯೋಗಿಸಿ ನನ್ನನ್ನು ಕೊಂದು ಬಿಡುತ್ತಾನೆ. ನನ್ನ ಬದುಕೇ ನಷ್ಟವಾಯಿತು. ರಾಮನೆದುರು ಸೆಣಸಾಡಿ ಬದುಕಿ ಹಿಂತಿರುಗಿದವನೇ ಇಲ್ಲ. ದುರಾಚಾರದ ಕಾರಣ ಯಮದಂಡಹತನಾಗಲಿರುವ ನಿನಗೆ ಸದೃಶನಾಗಿದ್ದೇನೆ ನಾನೂ ಸಹ.

ನೀನು ಹೀಗೆ ದುಷ್ಟನಾದರೆ ನಾನೇನು ಮಾಡಲು ಸಾಧ್ಯ ? ಅಪ್ಪ ! ನಿಶಾಚರ ! ನಿನ್ನೊಂದಿಗೆ ಹೊರಡುತ್ತೇನೆ ನಾನು. ನಿನಗೆ ಮಂಗಳವಾಗಲಿ.

ಪ್ರಹೃಷ್ಟಸ್ತ್ವಭವತ್ತೇನ ವಚನೇನ ಸ ರಾವಣಃ ।
ಪರಿಷ್ವಜ್ಯ ಸುಸಂಶ್ಲಿಷ್ಟಮಿದಂ ವಚನಮಬ್ರವೀತ್ ॥೫॥

ಏತಚ್ಛೌಂಡೀರ್ಯಯುಕ್ತಂ ತೇ ಮಚ್ಛಂದಾದಿವ ಭಾಷಿತಮ್ ।
ಇದಾನೀಮಸಿ ಮಾರೀಚಃ ಪೂರ್ವಮನ್ಯೋ ನಿಶಾಚರಃ ॥೬॥

ಆರುಹ್ಯತಾಮಯಂ ಶೀಘ್ರಂ ರಥೋ ರತ್ನವಿಭೂಷಿತಃ ।
ಮಯಾ ಸಹ ತಥಾ ಯುಕ್ತಂ ಪಿಶಾಚವದನೈಃ ಖರೈಃ ॥೭॥

ಪ್ರಲೋಭಯಿತ್ವಾ ವೈದೇಹೀಂ ಯಥೇಷ್ಟಂ ಗಂತುಮರ್ಹಸಿ ।
ತಾಂ ಶೂನ್ಯೇ ಪ್ರಸಭಂ ಸೀತಾಮಾನಯಿಷ್ಯಾಮಿ ಮೈಥಿಲೀಮ್ ॥೮॥

ಮಾರೀಚನ ಆ ಮಾತಿನಿಂದ ರಾವಣ ಪ್ರಹರ್ಷಗೊಂಡ. ಗಾಢವಾಗಿ ಅವನನ್ನು ಅಪ್ಪಿಕೊಂಡು ಹೀಗೆ ಮಾತನಾಡಿದ –

ನನ್ನಿಷ್ಟದಂತೆ ಆಡಿದ ಈ ಮಾತು ಪರಾಕ್ರಮದ ಮಾತಾಗಿದೆ. ಈಗ ನೀನು ಮಾರೀಚ ಎನಿಸುವಿ. ಮುಂಚೆ ಬೇರಾರೋ ಸಾಮಾನ್ಯರಕ್ಕಸನಾಗಿದ್ದಿ.

ಪಿಶಾಚ ಮುಖದ ಹೇಸರ ಕತ್ತೆಗಳಿಂದ ಕೂಡಿದ ರತ್ನವಿಭೂಷಿತವಾದ ಈ ರಥವು ನನ್ನೊಂದಿಗೆ ಏರೋಣವಾಗಲಿ. ನೀನು ಮೈಥಿಲಿಯನ್ನು ಪ್ರಲೋಭನಗೊಳಿಸಿ ಇಷ್ಟಬಂದ ಕಡೆ ಹೋಗಬಹುದು. ರಾಮ ಲಕ್ಷ್ಮಣ ಶೂನ್ಯವಾದ ಆಶ್ರಮದಲ್ಲಿ ಆ ಮೈಥಿಲಿ ಸೀತೆಯನ್ನು ಅಪಹರಿಸುತ್ತೇನೆ.

ತತೋ ರಾವಣಮಾರೀಚೌ ವಿಮಾನಮಿವ ತಂ ರಥಮ್ ।
ಆರುಹ್ಯ ಯಯತುಃ ಶೀಘ್ರಂ ತಸ್ಮಾದಾಶ್ರಮಮಂಡಲಾತ್ ॥೯॥

ತಥೈವ ತತ್ರ ಪಶ್ಯಂತೌ ಪತ್ತನಾನಿ ವನಾನಿ ಚ ।
ಗಿರೀಂಶ್ಚ ಸರಿತಃ ಸರ್ವಾ ರಾಷ್ಟ್ರಾಣಿ ನಗರಾಣಿ ಚ ॥೧೦॥

ಸಮೇತ್ಯ ದಂಡಕಾರಣ್ಯಂ ರಾಘವಸ್ಯಾಶ್ರಮಂ ತತಃ ।
ದದರ್ಶ ಸಹಮಾರೀಚೋ ರಾವಣೋ ರಾಕ್ಷಸಾಧಿಪಃ ॥೧೧॥

ಬಳಿಕ ರಾವಣ ಮಾರೀಚರು ವಿಮಾನದಂತಿರುವ ಆ ರಥವನ್ನೇರಿ ಆ ಆಶ್ರಮ-ದಿಂದ ಶೀಘ್ರವಾಗಿ ತೆರಳಿದರು – ಅಲ್ಲಿ ಅನೇಕ ಪಟ್ಟಣಗಳನ್ನು ಕಾಡುಗಳನ್ನು ಬೆಟ್ಟಗಳನ್ನು ನದಿಗಳನ್ನು ರಾಷ್ಟ್ರಗಳನ್ನು ನಗರಗಳನ್ನು ನೋಡುತ್ತಾ ಸಾಗಿದರು.

ದಂಡಕಾರಣ್ಯವನ್ನು ಪ್ರವೇಶಿಸಿ ಬಳಿಕ ರಾವಣ ಮಾರೀಚನೊಂದಿಗೆ ರಾಘವನ ಆಶ್ರಮವನ್ನು ಕಂಡನು.

ಅವತೀರ್ಯ ರಥಾತ್ತಸ್ಮಾತ್ತತಃ ಕಾಂಚನಭೂಷಣಾತ್ ।
ಹಸ್ತೇ ಗೃಹೀತ್ವಾ ಮಾರೀಚಂ ರಾವಣೋ ವಾಕ್ಯಮಬ್ರವೀತ್ ॥೧೨॥

ಏತದ್ರಾಮಾಶ್ರಮಪದಂ ದೃಶ್ಯತೇ ಕದಲೀವೃತಮ್ ।
ಕ್ರಿಯತಾಂ ತತ್ ಸಖೇ ಶೀಘ್ರಂ ಯದರ್ಥಂ ವಯಮಾಗತಾಃ ॥೧೩॥

ಸ ರಾವಣವಚಃ ಶ್ರುತ್ವಾ ಮಾರೀಚೋ ರಾಕ್ಷಸಸ್ತದಾ ।
ಮೃಗೋ ಭೂತ್ವಾಶ್ರಮದ್ವಾರಿ ರಾಮಸ್ಯ ವಿಚಚಾರ ಹ ॥೧೪॥

ಕಾಂಚನ ಭೂಷಿತವಾದ ಆ ರಥದಿಂದ ಕೆಳಗಿಳಿದು ರಾವಣ ಮಾರೀಚನ ಕೈ ಹಿಡಿದು ಹೇಳಿದನು.

ಬಾಳೆಗಿಡಗಳಿಂದ ಆವೃತವಾದ ಇದು ರಾಮಾಶ್ರಮದ ತಾಣ. ಗೆಳೆಯನೇ ! ನಾವು ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವೆವೋ ಆ ಕಾರ್ಯವನ್ನು ಕೂಡಲೆ ಮಾಡು.

ರಾವಣನ ಮಾತು ಕೇಳಿ ಮಾರೀಚನು ಆಗ ಮೃಗರೂಪಧರನಾಗಿ ರಾಮನ ಆಶ್ರಮದ ದ್ವಾರದಲ್ಲಿ ಆಚೀಚೆ ಸಂಚರಿಸಿದನು.

ಸ ತು ರೂಪಂ ಸಮಾಸ್ಥಾಯ ಮಹದದ್ಭುತದರ್ಶನಮ್ ।
ಮಣಿಪ್ರವರಶೃಂಗಾಗ್ರಃ ಸಿತಾಸಿತಮುಖಾಕೃತಿಃ ॥೧೫॥

ರಕ್ತಪದ್ಮೋತ್ಪಲಮುಖ ಇಂದ್ರನೀಲೋತ್ಪಲಶ್ರವಾಃ ।
ಕಿಂಚಿದಭ್ಯುನ್ನತಗ್ರೀವ ಇಂದ್ರನೀಲದಲಾಧರಃ ॥೧೬॥

ಕುಂದೇಂದುವಜ್ರಸಂಕಾಶಮುದರಂ ಚಾಸ್ಯ ಭಾಸ್ವರಮ್ ।
ಮಧೂಕನಿಭಪಾರ್ಶ್ವಶ್ಚ ಪದ್ಮಕಿಂಜಲ್ಕಸಂನಿಭಃ ॥೧೭॥

ವೈಡೂರ್ಯಸಂಕಾಶಖುರಸ್ತನುಜಂಘಃ ಸುಸಂಹತಃ ।
ಇಂದ್ರಾಯುಧಸವರ್ಣೇನ ಪುಚ್ಛೇನೋರ್ಧ್ವಂ ವಿರಾಜತಾ ॥೧೮॥

ಮನೋಹರಃ ಸ್ನಿಗ್ಧವರ್ಣೋ ರತ್ನೈರ್ನಾನಾವಿಧೈರ್ವೃತಃ ।
ಕ್ಷಣೇನ ರಾಕ್ಷಸೋ ಜಾತೋ ಮೃಗಃ ಪರಮಶೋಭನಃ ॥೧೯॥

ಮಾರೀಚನು ಜಿಂಕೆಯ ರೂಪ ತಾಳಿದನು. ಆ ರೂಪ ನೋಡಲು ಅದ್ಭುತ-ವಾಗಿತ್ತು. ಕೊಂಬಿನ ತುದಿಗಳು ಶ್ರೇಷ್ಠ ಇಂದ್ರನೀಲಮಣಿಯಂತೆ ಇದ್ದವು. ತಲೆಯ ಭಾಗದಲ್ಲಿ ಒಂದೆಡೆ ಕಪ್ಪಾಗಿಯೂ ಒಂದೆಡೆ ಬಿಳುಪಾಗಿಯೂ ಇತ್ತು. ಕೆಂದಾವರೆ-ಯಂತಹ ಮುಖ. ನೀಲಕಮಲಗಳಂಥ ಕಿವಿಗಳು. ಸ್ವಲ್ಪ ಮೇಲೆತ್ತಿದ್ದ ಕತ್ತು, ಇಂದ್ರನೀಲಮಣಿಯಂಥ ಉದರ ಭಾಗ, ಹಿಪ್ಪೆಯ ಹೂವಿನಂತಹ ಬಣ್ಣದ ಪಕ್ಕೆಗಳು, ತಾವರೆಯ ಕೇಸರದಂತಹ ಬಣ್ಣ.

ವೈಢೂರ್ಯದಂತಹ ಗೊರಸು. ತೆಳ್ಳಗಿನ ಸೊಂಟ. ಸಂಧಿ ಬಂಧಗಳು ಚೆನ್ನಾಗಿ ಸೇರಿಕೊಂಡಿದ್ದವು. ಕಾಮನ ಬಿಲ್ಲಿನ ಬಣ್ಣದ ಬಾಲವು ಮೇಲಕ್ಕೆ ನಿಮಿರಿ ನಿಂತು ಶೋಭಿಸುತ್ತಿತ್ತು. ದೇಹಕಾಂತಿಯು ಸ್ನಿಗ್ಧವೂ ಮನೋಹರವೂ ಆಗಿತ್ತು. ನಾನಾ ಬಗೆಯ ರತ್ನಗಳಿಂದ ಆವೃತವಾಗಿತ್ತು. ಮಾರೀಚನು ಇಂತಹ ಪರಮಶೋಭನ ಮೃಗರೂಪನಾಗಿ ವನವನ್ನು ರಮ್ಯವಾದ ರಾಮಾಶ್ರಮವನ್ನು ಬೆಳಗುತ್ತಿದ್ದನು.

ವನಂ ಪ್ರಜ್ವಲಯನ್ ರಮ್ಯಂ ರಾಮಾಶ್ರಮಪದಂ ಚ ತತ್ ।
ಮನೋಹರಂ ದರ್ಶನೀಯಂ ರೂಪಂ ಕೃತ್ವಾ ಸ ರಾಕ್ಷಸಃ ॥೨೦॥

ಪ್ರಲೋಭನಾರ್ಥಂ ವೈದೇಹ್ಯಾ ನಾನಾಧಾತುವಿಚಿತ್ರಿತಮ್।
ವಿಚರನ್ ಗಚ್ಛತೇ ತಸ್ಮಾಚ್ಚಾದ್ವಲಾನಿ ಸಮಂತತಃ ॥೨೧॥

ರೂಪ್ಯೈರ್ಬಿಂದುಶತೈಶ್ಚಿತ್ರೋ ಭೂತ್ವಾ ಸ ಪ್ರಿಯದರ್ಶನಃ ।
ವಿಟಪೀನಾಂ ಕಿಸಲಯಾನ್ ಭಂಕ್ತ್ವಾದನ್ ವಿಚಚಾರ ಹ ॥೨೨॥

ಕದಲೀಗೃಹಕಂ ಗತ್ವಾ ಕರ್ಣಿಕಾರಾನಿತಸ್ತತಃ ।
ಸಮಾಶ್ರಯನ್ ಮಂದಗತಿಂ ಸೀತಾಸಂದರ್ಶನಂ ತಥಾ ॥೨೩॥

ರಾಜೀವಚಿತ್ರಪೃಷ್ಠಃ ಸ ವಿರರಾಜ ಮಹಾಮೃಗಃ ।
ರಾಮಾಶ್ರಮಪದಾಭ್ಯಾಶೇ ವಿಚಚಾರ ಯಥಾಸುಖಮ್ ॥೨೪॥

ಪುನರ್ಗತ್ವಾ ನಿವೃತ್ತಶ್ಚ ವಿಚಚಾರ ಮೃಗೋತ್ತಮಃ ।
ಗತ್ವಾ ಮುಹೂರ್ತಂ ತ್ವರಯಾ ಪುನಃ ಪ್ರತಿನಿರ್ವತತೇ ॥೨೫॥

ವಿಕ್ರೀಡಂಶ್ಚ ಕ್ವಚಿದ್ಭೂಮೌ ಪುನರೇವ ನಿಷೀದತಿ ।
ಆಶ್ರಮದ್ವಾರಮಾಗಮ್ಯ ಮೃಗಯೂಥಾನಿ ಗಚ್ಛತಿ ॥೨೬॥

ಮೃಗಯೂಥೈರನುಗತಃ ಪುನರೇವ ನಿವರ್ತತೇ ।
ಸೀತಾದರ್ಶನಮಾಕಾಂಕ್ಷನ್ ರಾಕ್ಷಸೋ ಮೃಗತಾಂ ಗತಃ ॥೨೭॥

ವೈದೇಹಿಯ ಪ್ರಲೋಭನೆಗಾಗಿ ಮನೋಹರವು, ದರ್ಶನೀಯವು ಆದ ನಾನಾಧಾತುಗಳಿಂದ ಚಿತ್ರಿತವಾಗಿದ್ದ ಮೃಗರೂಪವನ್ನು ಧರಿಸಿದ ಮಾರೀಚನು ಆ ಆಶ್ರಮದಿಂದ ಸುತ್ತಲು ಹರವಿಕೊಂಡಿದ್ದ ಹುಲ್ಲುಗಾವಲುಗಳಲ್ಲಿ ಎಳೆ ಹುಲ್ಲುಗಳನ್ನು ತಿನ್ನುತ್ತ ಸಂಚರಿಸುತ್ತಿದ್ದ.

ನೂರಾರು ಬೆಳ್ಳಿ ಚುಕ್ಕೆಗಳಿಂದ ಆಚ್ಚರಿಯಾಗಿದ್ದು ನೋಡಲು ಪ್ರಿಯವಾದ ಆ ಮಾಯಾ ಜಿಂಕೆ ಮರಗಳ ಚಿಗುರೆಲೆಗಳನ್ನು ತಿನ್ನುತ್ತ ಅತ್ತಿಂದಿತ್ತ ಓಡಾಡುತ್ತಿತ್ತು.

ಇತ್ತ ಬಾಳೆಯ ತೋಟದಲ್ಲಿ ಅತ್ತ ಕಣಿಗಲೆಗಿಡದ ಬಳಿಯ ಪೊದರುಗಳಲ್ಲಿ ಮತ್ತೆ ಅಲ್ಲಿಂದ ಸೀತೆಯ ದರ್ಶನವನ್ನು ಬಯಸಿ ಅಲೆಯುತ್ತಿತ್ತು.

ತಾವರೆಯ ಕೇಸರದಂತಹ ಬಣ್ಣದ ಪೃಷ್ಠಭಾಗದಿಂದ ಶೋಭಿಸುತ್ತ ಸುಖವಾಗಿ ರಾಮಾಶ್ರಮದ ಸನಿಹದಲ್ಲಿ ಸುಳಿದಾಡುತ್ತಿತ್ತು. ಆಶ್ರಮ ಪರಿಸರದ ಸುತ್ತಲೂ ಸುಳಿದು ಮತ್ತೆ ಹಿಂತಿರುಗಿ ತುಸು ಸಮಯ ಬಿಟ್ಟು ಪುನಃ ವೇಗವಾಗಿ ಆಶ್ರಮದ ಅಂಗಳದಲ್ಲಿ ಕಾಣಿಸಿಕೊಳ್ಳುತ್ತದೆ !

ನೆಲದಲ್ಲೆಲ್ಲ ಆಟವಾಡಿ ಒಂದೆಡೆ ಸ್ವಲ್ಪ ಸಮಯ ಕುಳಿತು ಕೊಳ್ಳುತ್ತದೆ. ಆಶ್ರಮದ ಬಳಿ ಹೋಗಿ ಜಿಂಕೆಗಳ ಗುಂಪಿನಲ್ಲಿ ಸೇರಿಕೊಳ್ಳುತ್ತದೆ. ಪುನಃ ಮೃಗಗಳಿಂದ ಅನುಸೃತವಾಗಿ ಮತ್ತೆ ಹಿಂತಿರುಗುತ್ತದೆ. ಸೀತೆಯ ದರ್ಶನವನ್ನು ಬಯಸಿ ಮಂಡಲಾಕಾರವಾಗಿ ಸುಂದರವಾಗಿ ಸುತ್ತುತ್ತಾನೆ ಜಿಂಕೆಯ ರೂಪ ತಾಳಿದ ರಾಕ್ಷಸ.

ಪರಿಭ್ರಮತಿ ಚಿತ್ರಾಣಿ ಮಂಡಲಾನಿ ವಿನಿಷ್ಪತನ್ ।
ಸಮುದ್ವೀಕ್ಷ್ಯ ಚ ತಂ ಸರ್ವೇ ಮೃಗಾ ಹ್ಯನ್ಯೇ ವನೇಚರಾಃ ॥೨೮॥

ಉಪಾಗಮ್ಯ ಸಮಾಘ್ರಾಯ ವಿದ್ರವಂತಿ ದಿಶೋ ದಶ ।
ರಾಕ್ಷಸಃ ಸೋಽಪಿ ತಾನ್ ವನ್ಯಾನ್ ಮೃಗಾನ್ ಮೃಗವಧೇ ರತಃ ॥೨೯

ಪ್ರಚ್ಛಾದನಾರ್ಥಂ ಭಾವಸ್ಯ ನ ಭಕ್ಷಯತಿ ಸಂಸ್ಪೃಶನ್।
ತಸ್ಮಿನ್ನೇವ ತತಃ ಕಾಲೇ ವೈದೇಹೀ ಶುಭಲೋಚನಾ ॥೩೦॥

ಕುಸುಮಾಪಚಯವ್ಯಗ್ರಾ ಪಾದಪಾನಭ್ಯವರ್ತತ ।
ಕರ್ಣಿಕಾರಾನಶೋಕಾಂಶ್ಚ ಚೂತಾಂಶ್ಚ ಮದಿರೇಕ್ಷಣಾ ॥೩೧॥

ಕುಸುಮಾನ್ಯವಚಿನ್ವಂತೀ ಚಚಾರ ರುಚಿರಾನನಾ ।
ಅನರ್ಹಾರಣ್ಯವಾಸಸ್ಯ ಸಾ ತಂ ರತ್ನಮಯಂ ಮೃಗಮ್ ॥೩೨॥

ಮುಕ್ತಾಮಣಿವಿಚಿತ್ರಾಂಗಂ ದದರ್ಶ ಪರಮಾಂಗನಾ ।
ಸಾ ತಂ ರುಚಿರದಂತೋಷ್ಠಂ ರೂಪ್ಯಧಾತುತನೂರುಹಮ್ ॥೩೩॥

ವಿಸ್ಮಯೋತ್ಫುಲ್ಲನಯನಾ ಸಸ್ನೇಹಂ ಸಮುದೈಕ್ಷತ ।
ಸ ಚ ತಾಂ ರಾಮದಯಿತಾ ಪಶ್ಯನ್ ಮಾಯಾಮಯೋ ಮೃಗಃ ॥೩೪॥

ವಿಚಚಾರ ಪುನಶ್ಚಿತ್ರಂ ದೀಪಯನ್ನಿವ ತದ್ವನಮ್ ।
ಅದೃಷ್ಟಪೂರ್ವಂ ತಂ ದೃಷ್ಟ್ವಾ ನಾನಾರತ್ನಮಯಂ ಮೃಗಮ್ ॥೩೫॥

ವಿಸ್ಮಯಂ ಪರಮಂ ಸೀತಾ ಜಗಾಮ ಜನಕಾತ್ಮಜಾ ॥

ವಿಚಿತ್ರವಾಗಿ ಸುಳಿ ಸುಳಿದಾಡುತ್ತಿರುವ ಈ ಮೃಗವನ್ನು ನೋಡಿ ಇತರ ವನೇಚರ ಜಿಂಕೆಗಳು ಬಳಿ ಬಂದು ಚೆನ್ನಾಗಿ ಮೂಸಿ ನೋಡಿ ಇದರ ದುಷ್ಟತನವನ್ನರಿತು ದಿಕ್ಕಾಪಾಲಾಗಿ ಓಡುತ್ತಿದ್ದವು ! ಯಾವಾಗಲೂ ಮೃಗವಧದಲ್ಲಿಯೇ ರತನಾದ ಮೃಗರೂಪನಾದ ಮಾರೀಚನೂ ತನ್ನ ದುಷ್ಟತನವನ್ನು ಮುಚ್ಚುಕೊಳ್ಳುವ ಸಲುವಾಗಿ ಬಳಿ ಬಂದ ಜಿಂಕೆಯನ್ನು ಸುಮ್ಮನೆ ಮುಟ್ಟುತ್ತಿದ್ದನೇ ಹೊರತು ಆಸೆಯಾದರೂ ತಿನ್ನುತ್ತಿರಲಿಲ್ಲ !

ಅದೇ ಸಮಯದಲ್ಲಿ ಅದೇ ದೇಶದಲ್ಲಿ ಸುಂದರ ಕಣ್ಣಿನ ವೈದೇಹಿಯು ಹೂವು ಕೀಳುವುದರಲ್ಲಿ ಮಗ್ನಳಾಗಿ ಮರದ ಬಳಿ ಬಂದಳು.

ಮತ್ತೇರಿಸುವಂತಹ ಸುಂದರ ನೋಟದ ಸುಮುಖಿಳಾದ ಸೀತೆಯು ಕಣಿಗಲೆ ಅಶೋಕ ಚೂತ ಕುಸುಮಗಳನ್ನು ಬಿಡಿಸುತ್ತ ಅತ್ತಿಂದಿತ್ತ ಸಂಚರಿಸಿದಳು.

ಅರಣ್ಯವಾಸಕ್ಕೆ ಅನರ್ಹಳಾದ ಉತ್ತಮ ಹೆಣ್ಣಾದ ಆ ಸೀತೆಯು ಮುಕ್ತಾಮಣಿ-ಗಳಿಂದ ವಿಚಿತ್ರವಾದ ಅಂಗಗಳ, ರತ್ನಮಯವಾದ ಆ ಜಿಂಕೆಯನ್ನು ಕಂಡಳು. ಅಚ್ಚರಿಯಿಂದ ಅವಳ ಕಣ್ಣುಗಳು ಅರಳಿದವು.

ಆ ಮಾಯಾ ಜಿಂಕೆಯೂ ರಾಮನ ಪತ್ನಿಯನ್ನು ನೋಡುತ್ತ ಮತ್ತೆ ಮತ್ತೆ ಆ ಕಾಡನ್ನು ಬೆಳಗಿಸುತ್ತ ವಿಚಿತ್ರವಾಗಿ ಓಡಾಡಿತು.

ಇದುವರೆಗೆ ಎಂದೂ ಕಂಡಿರದ ನಾನಾ ರತ್ನಮಯವಾದ ಆ ಮೃಗವನ್ನು ನೋಡಿದ ಜಾನಕಿಯು ತುಂಬ ವಿಸ್ಮಯಗೊಂಡಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತರಡನೆ ಸರ್ಗ ಮುಗಿಯಿತು

❖

ತ್ರಿಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಸೀತೆ ಮಾಯಾಮೃಗವನ್ನು ಕಂಡು ವಿಸ್ಮಿತಳಾಗಿ ರಾಮಲಕ್ಷ್ಮಣರನ್ನು ಕರೆದಳು. ರಾಮಲಕ್ಷ್ಮಣರೂ ಬಂದು ನೋಡಿದರು. ಲಕ್ಷ್ಮಣನು ಜಿಂಕೆಯನ್ನು ಕಂಡು ತನ್ನ ಮನದ ಸಂಶಯವನ್ನು ರಾಮನ ಮುಂದೆ ವ್ಯಕ್ತಪಡಿಸಿದ – ಅಣ್ಣಾ ! ಮಾರೀಚನದೇ ಈ ಮಾಯಾಮೃಗರೂಪವೆಂದು ತೋರುತ್ತದೆ. ನಾನಾರೂಪಗಳನ್ನು ಮಾಯೆಯಿಂದ ಧರಿಸುವ ಈ ನೀಚ ಹೀಗೆ ಬೇಟೆಗೆ ಬಂದ ಅನೇಕ ರಾಜರನ್ನು ಹಿಂದೆ ಕೊಂದಿದ್ದಾನೆ. ಮಾರೀಚ ಮಾಯಾವಿದ. ಹೀಗೆ ರತ್ನ ಚಿತ್ರಿತವಾದ ಜಿಂಕೆ ಜಗತ್ತಿನಲ್ಲಿಯೇ ಎಲ್ಲೂ ಇರಲು ಸಾಧ್ಯವಿಲ್ಲ. ನಿಜವಾಗಿ ಇದು ಮಾಯಾಮೃಗ. ಮಾರೀಚನ ಮಾಯೆ !

ಜಿಂಕೆಯ ಅದ್ಭುತ ಸೌಂದರ್ಯ ಕಂಡು ವಿಸ್ಮಿತಳಾದ ಸೀತೆ ಲಕ್ಷ್ಮಣನ ಮಾತನ್ನು ತಡೆದು ರಾಮನಿಗೆ ತನ್ನ ಆಸೆಯನ್ನು ಹೇಳುತ್ತಾಳೆ 'ಆರ್ಯಪುತ್ರ ! ಈ ಸುಂದರವೂ ವಿಚಿತ್ರವೂ ಆದ ಜಿಂಕೆ ನನಗೆ ಬೇಕು. ನಮ್ಮ ಆಶ್ರಮದ ಪರಿಸರದಲ್ಲಿ ಚಮರ ಸೃಮರ ಮುಂತಾದ ಪ್ರಾಣಿಗಳು ಕಾಣ ಸಿಗುತ್ತವೆ. ಆದರೆ ಇಂಥ ಮೃಗ ಮಾತ್ರ ಇಲ್ಲ. ಇದನ್ನು ತಂದು ಕೊಡಿ. ವನವಾಸ ಮುಗಿದು ನಾವು ಅಯೋಧ್ಯೆಗೆ ಹಿಂತಿರುಗಿದಾಗ ನಮ್ಮ ಅಂತಃಪುರಕ್ಕೆ ಇದು ಅಲಂಕಾರವಾಗುತ್ತದೆ. ಅತ್ತೆಯರಿಗೆ ಭರತನಿಗೆ ಎಲ್ಲರಿಗೂ ಇದನ್ನು ಕಂಡು ಆಶ್ಚರ್ಯವೂ ಆನಂದವೂ ಆಗುತ್ತದೆ. ಇದನ್ನು ಜೀವಂತವಾಗಿ ತರಲಾಗದಿದ್ದರೂ ಕೊಂದಾದರೂ ಅದರ ಚರ್ಮವನ್ನು ತಂದು ಕೊಡಿ. ಬರೇ ಹುಲ್ಲಿನ ಚಾಪೆಯಲ್ಲಿ ಕುಳಿತು ಕೊಳ್ಳುವ ನಾನು ನಾನಾರತ್ನ ಚುಕ್ಕೆಗಳಿಂದ ಚಿತ್ರಿತವಾದ ಮೃದು ರೋಮದ ಈ ಆಸನದಲ್ಲಿ ನನ್ನೊಂದಿಗೆ ಕುಳಿತು ಆನಂದಪಡುತ್ತೇನೆ ಎಂದಳು.

ಸೀತೆಯ ಆಸೆಯನ್ನು ಕಂಡು ಸಂಭ್ರಮಿಸಿದ ಶ್ರೀರಾಮನು ಲಕ್ಷ್ಮಣನೊಂದಿಗೆ ಹೇಳುತ್ತಾನೆ –'ಲಕ್ಷ್ಮಣ ! ಈ ಸುಂದರಮೃಗವನ್ನು ಕಂಡು ಸೀತೆ ಎಷ್ಟು ಸಂತೋಷ ಸಂಭ್ರಮ ಪಡುತ್ತಿದ್ದಾಳೆ ನೋಡು. ರಾಜರು ಬೇಟೆಯಾಡುವುದು ಆಹಾರಕ್ಕಾಗಿ ಮಾಂಸವನ್ನು ತರಲು, ಅಥವಾ ಆನಂದ ಉಲ್ಲಾಸಗಳಿಗಾಗಿ. ಮೃಗಗಳಲ್ಲದೆ ಕಾಡಿನಲ್ಲಿ ಅನೇಕ ಅಮೂಲ್ಯ ವಸ್ತುಗಳೂ ದೊರೆಯುತ್ತವೆ. ರಾಜರು ಅದನ್ನೆ ಹುಡುಕುತ್ತಾರೆ. ಅದೆಲ್ಲ ರಾಜರ ಸೊತ್ತೆ ತಾನೆ ! ಈ ಜಿಂಕೆಯನ್ನು ತಂದು ಕೊಟ್ಟು ಸೀತೆಯನ್ನು ಖುಷಿಪಡಿಸೋಣ.

ಅಥವಾ ನೀನು ಹೇಳಿದಂತೆ ಇದು ಮಾರೀಚನ ಮಾಯಾಮೃಗ ರೂಪವಾಗಿದ್ದರೂ ಸರಿ. ಮಾರೀಚನನ್ನು ಹೇಗಿದ್ದರೂ ಕೊಲ್ಲಲೇ ಬೇಕಲ್ಲ. ಅಸುರ ಸಂಹಾರವಾದಂತೆ ಆಯಿತು. ತಪಸ್ವಿ ಮುನಿಗಳನ್ನು ಕೊಲ್ಲುವ ಮಾರೀಚನು ವಧಾರ್ಹನೇ. ಹಿಂದೆ ಅನೇಕ

ಬ್ರಾಹ್ಮಣರ ಸಂಹಾರಕ್ಕೆ ಕಾರಣನಾದ ವಾತಾಪಿಯನ್ನು ಅಗಸ್ತ್ಯರು ಕೊಂದಿರುವುದನ್ನು ಕೇಳಿದ್ದೇವೆ.

ಲಕ್ಷ್ಮಣ ! ನೀನು ಸೀತೆಯನ್ನು ಜಾಗರೂಕನಾಗಿ ರಕ್ಷಣೆ ಮಾಡು. ಬಲಿಷ್ಠ ಬುದ್ಧಿವಂತ ಜಟಾಯು ಪಕ್ಷಿಯ ಸಹಕಾರ ಪಡೆ. ಯಾವ ಕ್ಷಣದಲ್ಲಾದರೂ ಅಪಾಯಗಳು ಬರಬಹುದೆಂಬ ಎಚ್ಚರವಿರಲಿ.

ನಾನು ಒಂದೇ ಬಾಣದಲ್ಲಿ ಜಿಂಕೆಯನ್ನು ಕೊಂದು ಅದರ ಚರ್ಮವನ್ನು ತರುತ್ತೇನೆ''.

❖

ಲಕ್ಷ್ಮಣಶಂಕಾಪ್ರತಿಸಮಾಧಾನಮ್

ಸಾ ತಂ ಸಂಪ್ರೇಕ್ಷ್ಯ ಸುಶ್ರೋಣೀ ಕುಸುಮಾನ್ಯವಚಿನ್ವತೀ ।
ಹೈಮರಾಜತವರ್ಣಾಭ್ಯಾಂ ಪಾರ್ಶ್ವಾಭ್ಯಾಮುಪಶೋಭಿತಮ್ ॥೧॥

ಪ್ರಹೃಷ್ಟಾ ಚಾನವದ್ಯಾಂಗೀ ಮೃಷ್ಟಹಾಟಕವರ್ಣಿನೀ ।
ಭರ್ತಾರಮಭಿಚಕ್ರಂದ ಲಕ್ಷ್ಮಣಂ ಚಾಪಿ ಸಾಯುಧಮ್ ॥೨॥

ತಯಾಹೂತೌ ನರವ್ಯಾಘ್ರೌ ವೈದೇಹ್ಯಾ ರಾಮಲಕ್ಷ್ಮಣೌ ।
ವೀಕ್ಷಮಾಣೌ ತು ತಂ ದೇಶಂ ತದಾ ದದೃಶತುರ್ಮೃಗಮ್ ॥೩॥

ಸುಂದರ ಕಟಿಯವಳು, ನಿರ್ದೋಷ ಅವಯವದವಳು, ಪುಟಕ್ಕಿಟ್ಟ ಚಿನ್ನದ ಬಣ್ಣದವಳಾದ ಆ ಸೀತೆಯು ಹೂ ಬಿಡಿಸುತ್ತ ಬಂಗಾರ ಬೆಳ್ಳಿ ಬಣ್ಣದ ಪಾರ್ಶ್ವಗಳಿಂದ ಶೋಭಿತವಾದ ಜಿಂಕೆಯನ್ನು ಕಂಡು ತುಂಬ ಸಂತಸಗೊಂಡು ರಾಮನನ್ನು ಸಾಯುಧನಾದ ಲಕ್ಷ್ಮಣನನ್ನು ಕೂಡ ಕೂಗಿ ಕರೆದಳು.

ವೈದೇಹಿಯಿಂದ ಆಹೂತರಾದ ಪುರುಷಶ್ರೇಷ್ಠರಾದ ರಾಮ ಲಕ್ಷ್ಮಣರು ಬಂದು ಜಿಂಕೆಯನ್ನು ನೋಡಿದರು.

ಶಂಕಮಾನಸ್ತು ತಂ ದೃಷ್ಟ್ವಾ ಲಕ್ಷ್ಮಣೋ ರಾಮಮಬ್ರವೀತ್ ।
ತಮೇವೈತಮಹಂ ಮನ್ಯೇ ಮಾರೀಚಂ ರಾಕ್ಷಸಂ ಮೃಗಮ್ ॥೪॥

ಚರಂತೋ ಮೃಗಯಾಂ ಹೃಷ್ಟಾಃ ಪಾಪೇನೋಪಾಧಿನಾ ವನೇ ।
ಅನೇನ ನಿಹತಾ ರಾಮ ರಾಜಾನಃ ಕಾಮರೂಪಿಣಾ ॥೫॥

ಅಸ್ಯ ಮಾಯಾವಿದೋ ಮಾಯಾ ಮೃಗರೂಪಮಿದಂ ಕೃತಮ್ ।
ಭಾನುಮತ್ ಪುರುಷವ್ಯಾಘ್ರ ಗಂಧರ್ವಪುರಸಂನಿಭಮ್ ॥೬॥

ಮೃಗೋ ಹ್ಯೇವಂವಿಧೋ ರತ್ನವಿಚಿತ್ರೋ ನಾಸ್ತಿ ರಾಘವ ।
ಜಗತ್ಯಾಂ ಜಗತೀನಾಥ ಮಾಯೈಷಾಂ ಹಿ ನ ಸಂಶಯಃ ॥೭॥

ಆ ಜಿಂಕೆಯನ್ನು ನೋಡಿ ಶಂಕಿಸಿದ ಲಕ್ಷ್ಮಣನು ರಾಮನಿಗೆ ಹೇಳಿದನು – ಅಂದು ನಾವು ಓಡಿಸಿದ ರಾಕ್ಷಸ ಮಾರೀಚನೇ ಮೃಗರೂಪದಿಂದ ಬಂದಿರುವುದು.

ಬಯಸಿದಂಥ ರೂಪವನ್ನು ಪಡೆಯಬಲ್ಲ ಈ ಮಾರೀಚ ಬೇಟೆಗೆಂದು ಋಷಿಯಿಂದ ಬರುವ ಅನೇಕರಾಜರನ್ನು ವಂಚಿಸಿ ಸಂಹರಿಸಿರುವನು.

ನಾನಾಮಾಯೆಗಳನ್ನು ಬಲ್ಲ ಮಾರೀಚನದೆ ಈ ಮಾಯಾಮೃಗರೂಪ ಪುರುಷಶ್ರೇಷ್ಠನೆ ! ಆಕಾಶದಲ್ಲಿ ಕಾಣುವ ಗಂಧರ್ವನಗರದಂತೆ ಇದು ತೋರಿಕೆಯ ಮಾಯಾರೂಪ.

ಜಗನ್ನಾಥ ! ರಾಘವ ! ರತ್ನಚಿತ್ರಿತವಾದ ಇಂಥ ಬಂಗಾರದ ಜಿಂಕೆ ಜಗತ್ತಿನಲ್ಲಿ ಎಲ್ಲೂ ಇಲ್ಲವೇ ಇಲ್ಲ. ಇದು ಕೇವಲ ರಾಕ್ಷಸಮಾಯೆ, ಸಂಶಯವಿಲ್ಲ.

ಏವಂ ಬ್ರುವಾಣಂ ಸೌಮಿತ್ರಿಂ ಪ್ರತಿವಾರ್ಯ ಶುಚಿಸ್ಮಿತಾ ।
ಉವಾಚ ಸೀತಾ ಸಂಹೃಷ್ಟಾ ಚರ್ಮಣಾ ಹೃತಚೇತನಾ ॥೮॥

ಆರ್ಯಪುತ್ರಾಭಿರಾಮೋಽಸೌ ಮೃಗೋ ಹರತಿ ಮೇ ಮನಃ ।
ಆನಯೈನಂ ಮಹಾಬಾಹೋ ಕ್ರೀಡಾರ್ಥಂ ನೋ ಭವಿಷ್ಯತಿ ॥೯॥

ಇಹಾಶ್ರಮಪದೇಽಸ್ಮಾಕಂ ಬಹವಃ ಪುಣ್ಯದರ್ಶನಾಃ ।
ಮೃಗಾಶ್ಚರಂತಿ ಸಹಿತಾಃ ಸೃಮರಾಶ್ಚಮರಾಸ್ತಥಾ ॥೧೦॥

ಋಕ್ಷಾಃ ಪೃಷತಸಂಘಾಶ್ಚ ವಾನರಾಃ ಕಿಂನರಾಸ್ತಥಾ ।
ವಿಚರಂತಿ ಮಹಾಬಾಹೋ ರೂಪಶ್ರೇಷ್ಠಾ ಮನೋಹರಾಃ ॥೧೧॥

ನ ಚಾಸ್ಯ ಸದೃಶೋ ರಾಜನ್ ದೃಷ್ಟಪೂರ್ವೋ ಮೃಗಃ ಪುರಾ ।
ತೇಜಸಾ ಕ್ಷಮಯಾ ದೀಪ್ತ್ಯಾ ಯಥಾಯಂ ಮೃಗಸತ್ತಮಃ ॥೧೨॥

ನಾನಾವರ್ಣವಿಚಿತ್ರಾಂಗೋ ರತ್ನಬಿಂದುಸಮಾಚಿತಃ ।
ದ್ಯೋತಯನ್ ವನಮವ್ಯಗ್ರಂ ಶೋಭತೇ ಶಶಿಸಂನಿಭಃ ॥೧೩॥

ಅಹೋ ರೂಪಮಹೋ ಲಕ್ಷ್ಮೀಃ ಸ್ವರಸಂಪಚ್ಚ ಶೋಭನಾ ।
ಮೃಗೋಽದ್ಭುತೋ ವಿಚಿತ್ರಾಂಗೋ ಹೃದಯಂ ಹರತೀವ ಮೇ॥೧೪॥

ಸ್ವಚ್ಛ ನಗೆಯ ಸೀತೆ ಲಕ್ಷ್ಮಣನನ್ನು ತಡೆದು ಜಿಂಕೆಯನ್ನು ಕಂಡು ಸಂತಸ-ಗೊಂಡವಳಾಗಿ ಹೇಳಿದಳು – ಆರ್ಯಪುತ್ರನೇ ! ಈ ಸುಂದರವಾದ ಜಿಂಕೆ ನನ್ನ ಮನವನ್ನು ಆಕರ್ಷಿಸಿದೆ. ಮಹಾಬಾಹುವೇ ! ಇದನ್ನು ತಂದುಕೊಂಡು ಕ್ರೀಡಾ-ಮೃಗವಾಗುವುದು.

ನಮ್ಮ ಆಶ್ರಮದ ಪರಿಸರದಲ್ಲಿ ಬೇಕಾದಷ್ಟು ಪುಣ್ಯದರ್ಶನಗಳಾದ ಮೃಗಗಳು ಸಂಚರಿಸುತ್ತವೆ – ಕಪ್ಪು ಬಾಲದ ಚಮರೀ ಹಸುಗಳು, ಬಿಳಿ ಬಾಲದ ಚಮರೀ ಹಸುಗಳು, ಕರಡಿಗಳು, ಚುಕ್ಕೆಗಳುಳ್ಳ ಜಿಂಕೆಯ ಗುಂಪು, ವಾನರ ಕಿನ್ನರಗಳು – ಶ್ರೇಷ್ಠ ರೂಪಿಗಳು ಮಹಾಬಲಶಾಲಿಗಳೂ ಆದವು. ಆದರೂ ಈ ಹಿಂದೆ ಈ ಬಂಗಾರದ ಜಿಂಕೆಗೆ ಹೋಲುವ ತೇಜಸ್ವಿ, ಸೌಮ್ಯಭಾವದ ಬೆಳಗುವ ಮೃಗವನ್ನು ನೋಡಿಲ್ಲ. ಬಗೆಬಗೆಯ ಬಣ್ಣದ ವಿಚಿತ್ರಾಂಗವುಳ್ಳ, ರತ್ನಬಿಂದು ಚಿತ್ರಿತವೂ ಆದ ಈ ಕಾಂಚನ ಮೃಗವು ಕಾಡನ್ನೆಲ್ಲ ಬೆಳಗುತ್ತ ಚಂದ್ರನಂತೆ ಕಾಣುತ್ತಿದೆ.

ಅಚ್ಚರಿಯ ರೂಪ ! ಬೆರಗಿನ ಹೊಳಪು ! ಶೋಭಿಸುವಂಥ ಸ್ವರಸಂಪತ್ತು ! ಅದ್ಭುತವೂ ವಿಚಿತ್ರಾಂಗವೂ ಆದ ಜಿಂಕೆಯು ನನ್ನ ಮನವನ್ನು ಸೂರೆಗೊಂಡಿದೆ.

ಯದಿ ಗ್ರಹಣಮಭ್ಯೇತಿ ಜೀವನ್ನೇವ ಮೃಗಸ್ತವ ।
ಆಶ್ಚರ್ಯಭೂತಂ ಭವತಿ ವಿಸ್ಮಯಂ ಜನಯಿಷ್ಯತಿ ॥೧೫॥

ಸಮಾಪ್ತವನವಾಸಾನಾಂ ರಾಜ್ಯಸ್ಥಾನಾಂ ಚ ನಃ ಪುನಃ ।
ಅಂತಃಪುರವಿಭೂಷಾರ್ಥೋ ಮೃಗ ಏಷ ಭವಿಷ್ಯತಿ ॥೧೬॥

ಭರತಸ್ಯಾರ್ಯಪುತ್ರಸ್ಯ ಶ್ವಶ್ರೂಣಾಂ ಮಮ ಚ ಪ್ರಭೋ ।
ಮೃಗರೂಪಮಿದಂ ವ್ಯಕ್ತಂ ವಿಸ್ಮಯಂ ಜನಯಿಷ್ಯತಿ ॥೧೭॥

ಜೀವನ್ನ ಯದಿ ತೇಽಭ್ಯೇತಿ ಗ್ರಹಣಂ ಮೃಗಸತ್ತಮಃ ।
ಅಜಿನಂ ನರಶಾರ್ದೂಲ ರುಚಿರಂ ಮೇ ಭವಿಷ್ಯತಿ ॥೧೮॥

ನಿಹತಸ್ಯಾಸ್ಯ ಸತ್ತ್ವಸ್ಯ ಜಾಂಬೂನದಮಯತ್ವಚಿ ।
ಶಷ್ಪಬೃಸ್ಯಾಂ ವಿನೀತಾಯಾಮಿಚ್ಛಾಮ್ಯಹಮುಪಾಸಿತುಮ್ ॥೧೯॥

ಕಾಮವೃತ್ತಮಿದಂ ರೌದ್ರಂ ಸ್ತ್ರೀಣಾಮಸದೃಶಂ ಮತಮ್ ।
ವಪುಷಾ ತ್ವಸ್ಯ ಸತ್ತ್ವಸ್ಯ ವಿಸ್ಮಯೋ ಜನಿತೋ ಮಮ ॥೨೦॥

ಒಂದು ಪಕ್ಷ ಜೀವಂತವಾಗಿಯೇ ಜಿಂಕೆ ನಿಮ್ಮ ಹಿಡಿತಕ್ಕೆ ಸಿಲುಕಿದರೆ ಒಂದು ಆಶ್ಚರ್ಯದ ವಸ್ತು ದೊರೆತಂತಾಗುವುದು. ಕಂಡವರಿಗೆಲ್ಲ ವಿಸ್ಮಯವನ್ನುಂಟು ಮಾಡುವುದು.

ವನವಾಸವನ್ನು ಮುಗಿಸಿ ರಾಜ್ಯಕ್ಕೆ ಮರಳಿದ ಮೇಲೆ ನಮ್ಮ ಅಂತಃಪುರಕ್ಕೆ ಈ ಮೃಗ ಭೂಷಣಪ್ರಾಯವಾಗುತ್ತದೆ !

ಆರ್ಯಪುತ್ರ ಭರತನಿಗೆ, ನನ್ನ ಅತ್ತೆಯರಿಗೂ ಕೂಡ ಖಂಡಿತವಾಗಿ ಈ ಜಿಂಕೆ ಅಚ್ಚರಿಗೊಳಿಸುತ್ತದೆ.

ನರಶ್ರೇಷ್ಠನೇ ! ಜೀವಂತವಾಗಿ ಈ ಮೃಗ ನಿನ್ನ ಕೈಸರೆಯಾಗದಿದ್ದರೆ ಅದರ ಚರ್ಮ ದೊರೆತರು ಸಾಕು ನನಗೆ ಅದು ಇಷ್ಟವಾಗುತ್ತದೆ.

ಸತ್ತ ಈ ಜಿಂಕೆಯ ಬಂಗಾರಮಯವಾದ ಚರ್ಮವನ್ನು ಹುಲ್ಲಿನ ಚಾಪೆಯ ಮೇಲೆ ಹಾಸಿಕೊಂಡು ನಿನ್ನೊಂದಿಗೆ ಖುಷಿಯಿಂದ ಕುಳಿತುಕೊಳ್ಳುತ್ತೇನೆ.

ನಿಜವಾಗಿ ಇಂಥ ರೌದ್ರವಾದ ಬೇಡಿಕೆ ಸ್ತ್ರೀಯರಿಗೆ ಉಚಿತವಲ್ಲ. ಆದರೆ ಈ ಪ್ರಾಣಿಯ ದೇಹ ನನಗೆ ಅಚ್ಚರಿ ಉಂಟು ಮಾಡಿಬಿಟ್ಟಿದೆ !

ತೇನ ಕಾಂಚನರೋಮ್ಣಾ ತು ಮಣಿಪ್ರವರಶೃಂಗಿಣಾ ।
ತರುಣಾದಿತ್ಯವರ್ಣೇನ ನಕ್ಷತ್ರಪಥವರ್ಚಸಾ ॥೨೧॥

ಏವಂ ಸೀತಾವಚಃ ಶ್ರುತ್ವಾ ದೃಷ್ಟ್ವಾ ಚ ಮೃಗಮದ್ಭುತಮ್ ।
ಬಭೂವ ರಾಘವಸ್ಯಾಪಿ ಮನೋ ವಿಸ್ಮಯಮಾಗತಮ್ ॥೨೨॥

ಲೋಭಿತಸ್ತೇನ ರೂಪೇಣ ಸೀತಯಾ ಚ ಪ್ರಚೋದಿತಃ ।
ಉವಾಚ ರಾಘವೋ ಹೃಷ್ಟೋ ಭ್ರಾತರಂ ಲಕ್ಷ್ಮಣಂ ವಚಃ ॥೨೩॥

ಜಿಂಕೆಯ ಆ ಬಂಗಾರದ ರೋಮದಿಂದ, ಶ್ರೇಷ್ಠ ಮಣಿಯ ಕೊಂಬುಗಳಿಂದ, ಎಳೆ ಸೂರ್ಯನ ಬಣ್ಣದಿಂದ ನಕ್ಷತ್ರ ಲೋಕದ ವರ್ಚಸ್ಸಿನಿಂದ ರಾಘವನ ಮನವೂ ಅಚ್ಚರಿಗೊಂಡಿತು !

ಹಿಂದೆ ಹೇಳಿದ ಸೀತೆಯ ಮಾತನ್ನು ಕೇಳಿ, ಆ ಅದ್ಭುತ ಮೃಗವನ್ನು ನೋಡಿ, ಅದರ ರೂಪದಿಂದ ಮಾರು ಹೋಗಿ ಸೀತೆಯ ಪ್ರಚೋದನೆಯಿಂದಲೂ ಹರ್ಷಗೊಂಡ ರಾಮನು ತಮ್ಮ ಲಕ್ಷ್ಮಣನಿಗೆ ಹೇಳಿದನು.

ಪಶ್ಯ ಲಕ್ಷ್ಮಣ ವೈದೇಹ್ಯಾಃ ಸ್ಪೃಹಾಂ ಮೃಗಗತಾಮಿಮಾಮ್ ।
ರೂಪಶ್ರೇಷ್ಠತಯಾ ಹ್ಯೇಷ ಮೃಗೋಽದ್ಯ ನ ಭವಿಷ್ಯತಿ ॥೨೪॥

ನ ವನೇ ನಂದೋನೋದ್ದೇಶೇ ನ ಚೈತ್ರರಥಸಂಶ್ರಯೇ ।
ಕುತಃ ಪೃಥಿವ್ಯಾಂ ಸೌಮಿತ್ರೇ ಯೋಽಸ್ಯ ಕಶ್ಚಿತ್ ಸಮೋ ಮೃಗಃ॥೨೫॥

ಪ್ರತಿಲೋಮಾನುಲೋಮಾಶ್ಚ ರುಚಿರಾ ರೋಮರಾಜಯಃ ।
ಶೋಭಂತೇ ಮೃಗಮಾಶ್ರಿತ್ಯ ಚಿತ್ರಾಃ ಕನಕಬಿಂದುಭಿಃ ॥೨೬॥

ಪಶ್ಯಾಸ್ಯ ಜೃಂಭಮಾಣಸ್ಯ ದೀಪ್ತಾಮಗ್ನಿಶಿಖೋಪಮಾಮ್ ।
ಜಿಹ್ವಾಂ ಮುಖಾನ್ನಿಃಸರಂತೀಂ ಮೇಘಾದಿವ ಶತಹ್ರದಾಮ್ ॥೨೭॥

ಮಸಾರಗಲ್ವರ್ಕಮುಖಃ ಶಂಖಮುಕ್ತಾನಿಭೋದರಃ ।
ಕಸ್ಯ ನಾಮಾಭಿರೂಪೋಽಸೌ ನ ಮನೋ ಲೋಭಯೇನ್ಮೃಗಃ ॥೨೮॥

ಕಸ್ಯ ರೂಪಮಿದಂ ದೃಷ್ಟ್ವಾ ಜಾಂಬೂನದಮಯಪ್ರಭಮ್ ।
ನಾನಾರತ್ನಮಯಂ ದಿವ್ಯಂ ನ ಮನೋ ವಿಸ್ಮಯಂ ವ್ರಜೇತ್ ॥೨೯॥

ಲಕ್ಷ್ಮಣ ! ನೋಡು, ಜಿಂಕೆಯ ಬಗೆಗಿನ ಸೀತೆಯ ಅಭಿಲಾಷೆಯನ್ನು. ತನ್ನ ಶ್ರೇಷ್ಠರೂಪದಿಂದಲೇ ಈ ಮೃಗ ಇಂದು ಇಲ್ಲವಾಗುವುದು !

ನಂದನವನದಲ್ಲಾಗಲಿ, ಚೈತ್ರರಥವನದಲ್ಲಾಗಲಿ ಇಂಥ ಮೃಗವಿಲ್ಲ. ಇನ್ನು ಭೂಮಿಯಲ್ಲಿ ಎಲ್ಲಿಂದ ಬರಬೇಕು ? ಇದಕ್ಕೆ ಸಮನಾದ ಮೃಗ.

ಅಡ್ಡವಾಗಿಯೂ, ನೇರವಾಗಿಯೂ ಹಬ್ಬಿಕೊಂಡ ಕನಕ ಬಿಂದುಗಳಿಂದ ಆಶ್ಚರ್ಯಕರವಾಗಿ ಕಾಣುವ ರೋಮರಾಶಿಗಳು ಶೋಭಿಸುತ್ತಿದೆ.

ಆಕಳಿಸುವಾಗ ಅದರ ಬಾಯಿಯಿಂದ ಹೊರ ಹೊಮ್ಮುವ ಅಗ್ನಿ ಶಿಖೆಯಂತೆ ಬೆಳಗುವ ನಾಲಿಗೆಯನ್ನು ನೋಡು – ಮೋಡದಿಂದ ಹೊಮ್ಮುವ ಮಿಂಚಿನಂತೆ ಕಾಣುತ್ತದೆ.

ಇಂದ್ರ ನೀಲ ಮಣಿಯ ಪಾನ ಪಾತ್ರದಂಥ ಮುಖ. ಶಂಖ ಮುತ್ತುಗಳಂತೆ ಶೋಭಿಸುವ ಉದರ. ಇಂಥ ಮೃಗ ಯಾರ ಮನವನ್ನು ತಾನೆ ಸೂರೆ-ಗೊಳಿಸುವುದಿಲ್ಲ ? ಹೆಣ್ಣು ಹುಡುಗಿ ಮೈಥಿಲಿ ಸೀತೆ ಅಚ್ಚರಿಗೊಳ್ಳದಿರುತ್ತಾಳೆಯೆ ?

ಮಾಂಸಹೇತೋರಪಿ ಮೃಗಾನ್ ವಿಹಾರಾರ್ಥಂ ಚ ಧನ್ವಿನಃ ।
ಘ್ನಂತಿ ಲಕ್ಷ್ಮಣ ರಾಜಾನೋ ಮೃಗಯಾಯಾಂ ಮಹಾವನೇ ॥೩೦॥

ಧನಾನಿ ವ್ಯವಸಾಯೇನ ವಿಚೀಯಂತೇ ಮಹಾವನೇ ।
ಧಾತವೋ ವಿವಿಧಾಶ್ಚಾಪಿ ಮಣಿರತ್ನಸುವರ್ಣಿನಃ ॥೩೧॥

ತತ್ಸಾರಮಖಿಲಂ ನ್ಯಾಯ್ಯಾಂ ಧನಂ ನಿಚಯವರ್ಧನಮ್ ।
ಮನಸಾ ಚಿಂತಿತಂ ಸರ್ವಂ ಯಥಾ ಶುಕ್ರಸ್ಯ ಲಕ್ಷ್ಮಣ ॥೩೨॥

ಅರ್ಥೀ ಯೇನಾರ್ಥಕೃತ್ಯೇನ ಸಂವ್ರಜತ್ಯವಿಚಾರಯನ್।
ತಮರ್ಥಮರ್ಥಶಾಸ್ತ್ರಜ್ಞಾಃ ಪ್ರಾಹುರರ್ಥ್ಯಾಶ್ಚ ಲಕ್ಷ್ಮಣ ॥೩೩॥

ಏತಸ್ಯ ಮೃಗರತ್ನಸ್ಯ ಪರಾರ್ಧ್ಯೇ ಕಾಂಚನತ್ವಚಿ ।
ಉಪವೇಕ್ಷ್ಯತಿ ವೈದೇಹೀ ಮಯಾ ಸಹ ಸುಮಧ್ಯಮಾ ॥೩೪॥

ನ ಕಾದಲೀ ನ ಪ್ರಿಯಕೀ ನ ಪ್ರವೇಣೀ ನ ಚಾವಿಕೀ ।
ಭವೇದೇತಸ್ಯ ಸದೃಶೀ ಸ್ಪರ್ಶನೇನೇತಿ ಮೇ ಮತಿಃ ॥೩೫॥

ಏಷ ಚೈವ ಮೃಗಃ ಶ್ರೀಮಾನ್ ಯಶ್ಚ ದಿವ್ಯೋ ನಭಶ್ಚರಃ ।
ಉಭಾವೇತೌ ಮೃಗೌ ದಿವ್ಯೌ ತಾರಾಮೃಗಮಹೀಮೃಗೌ ॥೩೬॥

ಲಕ್ಷ್ಮಣ ! ರಾಜರು ಬೇಟೆಯಲ್ಲಿ ಮಾಂಸಕ್ಕಾಗಿಯೂ, ವಿಹಾರಕ್ಕಾಗಿಯೂ, ಪ್ರಾಣಿಗಳನ್ನು ಕೊಲ್ಲುತ್ತಾರೆ.

ಬೇಟೆಯ ಉದ್ಯಮದಿಂದಲೇ ರಾಜರು ವಿಶಾಲವನದಲ್ಲಿ ಧನವನ್ನು ಗಳಿಸು-ವರು. ಏಕೆಂದರೆ ಕಾಡಿನಲ್ಲಿ ಬಗೆಬಗೆಯ ಮಣಿಗಳು, ರತ್ನಗಳು, ಧಾತುಗಳು ದೊರೆಯುತ್ತವೆ.

ಇಂಥ ಅಪೂರ್ವವಸ್ತು ಸಂಗ್ರಹವು ಕೋಶವೃದ್ಧಿಗೆ ಕಾರಣವಾಗುತ್ತವೆ. ನಾನು ಮನಸಾ ಚಿಂತಿಸಿದ ಕಾರ್ಯವು ಶುಕ್ರ ನೀತಿಗೆ ಅನುಗುಣವಾಗಿದೆ.

ಯಾವುದಾದರೊಂದು ವಸ್ತುವನ್ನು ಬಯಸಿ ಅದರ ಸಾಧಕ ಭಾಧಕಗಳನ್ನು ವಿಚಾರ ಮಾಡದೆ ಕಾರ್ಯಪ್ರವೃತ್ತನಾಗುವವನೇ ಅರ್ಥೀ, ಅರ್ಥಶಾಸ್ತ್ರಜ್ಞರು ಅರ್ಥೀ ಶಬ್ದಕ್ಕೆ ಇದೇ ಅರ್ಥವನ್ನು ಹೇಳುತ್ತಾರೆ.

ಶ್ರೇಷ್ಠವಾದ ಈ ಮೃಗರತ್ನವಾದ ಬಂಗಾರದ ಚರ್ಮದಲ್ಲಿ ನನ್ನೊಂದಿಗೆ ಸೀತೆಯು ಕೂಡುತ್ತಾಳೆ !

ಕದಲೀ ಮೃಗದ (ಕೋಮಲ ಚುಕ್ಕೆಗಳಿರುವ ಕಪ್ಪು ರೋಮದ ಮೃಗವಿಶೇಷ) ಚರ್ಮವಾಗಲೀ, ಪ್ರಿಯಕ ಮೃಗದ (ಸ್ನಿಗ್ಧವೂ, ದಟ್ಟವೂ ಆದ ರೋಮವುಳ್ಳ ಮೃಗ ವಿಶೇಷ) ಚರ್ಮವಾಗಲೀ, ಪ್ರವೇಣ ಮೃಗದ (ವಿಶೇಷ ಜಾತಿಯ ಆಡು) ಚರ್ಮವಾಗಲೀ, ಆಡು ಕುರಿಗಳ ಚರ್ಮವಾಗಲಿ ಯಾವುದೂ ಈ ಕಾಂಚನ ಮೃಗ ಚರ್ಮದ ಸ್ಪರ್ಶಕ್ಕೆ ಸದೃಶಗಳಲ್ಲ ಎಂದು ನನ್ನ ಅಭಿಪ್ರಾಯ.

ನೆಲದಲ್ಲಿ ಕಾಣುವ ಈ ಮೃಗ ಹಾಗೂ ಆಕಾಶದಲ್ಲಿ ಕಾಣುವ ಮೃಗಶೀರ್ಷನಕ್ಷತ್ರ ಇವೆರಡು ತಾರಾಮೃಗ – ಮಹೀಮೃಗಗಳು ದಿವ್ಯಗಳಾಗಿವೆ !

ಯದಿ ವಾಯಂ ತಥಾ ಯನ್ಮಾಂ ಭವೇದ್ವದಸಿ ಲಕ್ಷ್ಮಣ ।
ಮಾಯೈಷಾ ರಾಕ್ಷಸಸ್ಯೇತಿ ಕರ್ತವ್ಯೋಽಸ್ಯ ವಧೋ ಮಯಾ ॥೩೭॥

ಏತೇನ ಹಿ ನೃಶಂಸೇನ ಮಾರೀಚೇನಾಕೃತಾತ್ಮನಾ ।
ವನೇ ವಿಚರತಾ ಪೂರ್ವಂ ಹಿಂಸಿತಾ ಮುನಿಪುಂಗವಾಃ ॥೩೮॥

ಉತ್ಥಾಯ ಬಹವೋ ಯೇನ ಮೃಗಯಾಯಾಂ ಜನಾಧಿಪಾಃ ।
ನಿಹತಾಃ ಪರಮೇಷ್ವಾಸಾಸ್ತಸ್ಮಾದ್ವಧ್ಯಸ್ತ್ವಯಂ ಮೃಗಃ ॥೩೯॥

ಲಕ್ಷ್ಮಣ ! ಒಂದು ಪಕ್ಷ ನೀನು ಹೇಳಿದಂತೆ ರಾಕ್ಷಸ ಮಾರೀಚನ ಮಾಯೆಯೇ ಈ ಮೃಗವಾದರೆ ಅವಶ್ಯವಾಗಿದರ ಸಂಹಾರವನ್ನು ನಾನು ಮಾಡಬೇಕಲ್ಲವೇ.

ದುಷ್ಟಾತ್ಮನಾದ ಈ ಕ್ರೂರ ಮಾರೀಚನು ಹಿಂದೆ ಕಾಡಿನಲ್ಲೆ ಅಲೆಯುತ್ತ ಅನೇಕ ಮುನಿಪುಂಗವರನ್ನು ಕೊಂದಿರುವನು. ಬೇಟೆಗೆಂದು ಬಂದ ಅನೇಕ ರಾಜರನ್ನು ಮಾಯಾಮಾರು ವೇಷದಿಂದ ಇವನು ಕೊಂದಿರುವನು. ಆದ್ದರಿಂದ ಮೃಗರೂಪದ ಈ ಮಾರೀಚನು ವಧ್ಯನೇ ಆಗಿರುವನು.

ಪುರಸ್ತಾದಿಹ ವಾತಾಪಿಃ ಪರಿಭೂಯ ತಪಸ್ವಿನಃ ।
ಉದರಸ್ಥೋ ದ್ವಿಜಾನ್ ಹಂತಿ ಸ್ವರ್ಗಭೋಽಶ್ವತರೀಮಿವ ॥೪೦॥

ಸ ಕದಾಚಿಚ್ಚಿರಾಲ್ಲೋಭಾದಾಸಸಾದ ಮಹಾಮುನಿಮ್ ।
ಅಗಸ್ತ್ಯಂ ತೇಜಸಾ ಯುಕ್ತಂ ಭಕ್ಷ್ಯಸ್ತಸ್ಯ ಬಭೂವ ಹ ॥೪೧॥

ಸಮುತ್ಥಾನೇ ಚ ತದ್ರೂಪಂ ಕರ್ತುಕಾಮಂ ಸಮೀಕ್ಷ್ಯ ತಮ್ ।
ಉತ್ಸ್ಮಯಿತ್ವಾ ತು ಭಗವಾನ್ ವಾತಾಪಿಮಿದಮಬ್ರವೀತ್ ॥೪೨॥

ತ್ವಯಾವಿಗಣ್ಯ ವಾತಾಪೇ ಪರಿಭೂತಾಃ ಸ್ಮತೇಜಸಾ ।
ಜೀವಲೋಕೇ ದ್ವಿಜಶ್ರೇಷ್ಠಸ್ತಸ್ಮಾದಸಿ ಜರಾಂ ಗತಃ ॥೪೩॥

ತದೇತನ್ನ ಭವೇದ್ರಕ್ಷೋ ವಾತಾಪಿರಿವ ಲಕ್ಷ್ಮಣ ।
ಮದ್ವಿಧಂ ಯೋಽತಿಮನ್ಯೇತ ಧರ್ಮನಿತ್ಯಂ ಜಿತೇಂದ್ರಿಯಮ್ ॥೪೪॥

ಹಿಂದೆ ವಾತಾಪಿ ಎಂಬ ಅಸುರನು ತಪಸ್ವಿಗಳನ್ನು ಮೋಸಗೊಳಿಸಿ ಮಾಂಸ-ರೂಪದಿಂದ ಅವರ ಉದರ ಸೇರಿ ಅವರ ಹೊಟ್ಟೆಯನ್ನು ಸೀಳಿ ಹೊರಬರುವ ಮೂಲಕ ಅವರನ್ನು ಕೊಲ್ಲುತ್ತಿದ್ದ –ಹೇಸರಕತ್ತೆಯ ಗರ್ಭವು ಹೊಟ್ಟೆಯನ್ನು ಸೀಳಿ ಹೊರಬರುವಂತೆ.

ಬಹಳ ಕಾಲದ ನಂತರ ಒಮ್ಮೆ ತೇಜಸ್ವಿ ಮಹಾಮುನಿ ಅಗಸ್ತ್ಯರನ್ನು ಸಮೀಪಿಸಿ ಅವರ ಆಹಾರನಾದ. ಅವರ ಹೊಟ್ಟೆಯನ್ನು ಸೀಳಿ ಬಂದು ಅವರನ್ನು ಕೊಲ್ಲ-ಬೇಕೆಂಬ ಹವಣಿಕೆಯಲ್ಲಿ ಉದರದಲ್ಲಿ ಪ್ರಯತ್ನಿಸಿದ ವಾತಾಪಿಯನ್ನು ಅಗಸ್ತ್ಯರು ನಗುತ್ತ ಹೇಳಿದರು – ವಾತಾಪಿಯೆ ! ನಿನ್ನ ಬಲದಿಂದ ಈ ಲೋಕದಲ್ಲಿ ಅನೇಕ ದ್ವಿಜಶ್ರೇಷ್ಠರನ್ನು ಹೀಗೆ ವಂಚನೆಯಿಂದ ಕೊಂದಿರುವಿ. ಆದ್ದರಿಂದ ಇಂದು ನನ್ನ ಉದರದಲ್ಲಿ ಜೀರ್ಣವಾಗಿ ಹೋಗು.

ಧರ್ಮನಿತ್ಯನು ಜಿತೇಂದ್ರಿಯನು ಆದ ನನ್ನನ್ನು ಅತಿಕ್ರಮಿಸಿ ವಾತಾಪಿಯಂತೆ ಈ ಮಾರೀಚನೂ ಬದುಕಿರಬಾರದು. ಅಗಸ್ತ್ಯರಿಗೆ ಸಿಕ್ಕ ವಾತಾಪಿಯಂತೆ ಈ ಮಾರೀಚ ನನಗೆ ಸಿಕ್ಕಿರುವನು.

ಭವೇದ್ಧತೋಽಯಂ ವಾತಾಪಿರಗಸ್ತ್ಯೇನೇವ ಮಾಂ ಗತಃ ।
ಇಹಂ ತ್ವಂ ಭವ ಸಂನದ್ಧೋ ಯಂತ್ರಿತೋ ರಕ್ಷ ಮೈಥಿಲೀಮ್ ॥೪೫॥

ಅಸ್ಯಾಮಾಯತ್ತಮಸ್ಮಾಕಂ ಯತ್ ಕೃತ್ಯಂ ರಘುನಂದನ ।
ಅಹಮೇನಂ ವಧಿಷ್ಯಾಮಿ ಗ್ರಹೀಷ್ಯಾಮ್ಯಪಿ ವಾ ಮೃಗಮ್ ॥೪೬॥

ಯಾವದ್ಗಚ್ಛಾಮಿ ಸೌಮಿತ್ರೇ ಮೃಗಮಾನಯಿತುಂ ದ್ರುತಮ್ ।
ಪಶ್ಯ ಲಕ್ಷ್ಮಣ ವೈದೇಹೀಂ ಮೃಗತ್ವಚಿ ಗತಸ್ಪೃಹಾಮ್ ॥೪೭॥

ತ್ವಚಾ ಪ್ರಧಾನಯಾ ಹ್ಯೇಷ ಮೃಗೋಽದ್ಯ ನ ಭವಿಷ್ಯತಿ ।
ಅಪ್ರಮತ್ತೇನ ತೇ ಭಾವ್ಯಮಾಶ್ರಮಸ್ಥೇನ ಸೀತಯಾ ॥೪೮॥

ಯಾವತ್ ಪೃಷತಮೇಕೇನ ಸಾಯಕೇನ ನಿಹನ್ಮ್ಯಹಮ್ ।
ಹತ್ವೈತಚ್ಚರ್ಮ ಚಾದಾಯ ಶೀಘ್ರಮೇಷ್ಯಾಮಿ ಲಕ್ಷ್ಮಣ ॥೪೯॥

ಪ್ರದಕ್ಷಿಣೇನಾತಿಬಲೇನ ಪಕ್ಷಿಣಾ
ಜಟಾಯುಷಾ ಬುದ್ಧಿಮತಾ ಚ ಲಕ್ಷ್ಮಣ ।
ಭವಾಪ್ರಮತ್ತಃ ಪರಿಗೃಹ್ಯ ಮೈಥಿಲೀಂ
ಪ್ರತಿಕ್ಷಣಂ ಸರ್ವತ ಏವ ಶಂಕಿತಃ ॥೫೦॥

ಲಕ್ಷ್ಮಣ ! ನೀನಿಲ್ಲಿ ಆಯುಧ ಪಾಣಿಯಾಗಿ ಸೀತೆಯ ರಕ್ಷಣೆಗೆ ಸನ್ನದ್ಧನಾಗು. ರಘುನಂದನನೇ ! ನಮ್ಮ ಕರ್ತವ್ಯವು ಸೀತೆಯ ಕುರಿತಾಗಿಯೇ ಇದೆ.

ಸೌಮಿತ್ರಿಯೆ ! ನಾನು ಈ ಮಾರೀಚನನ್ನು ಕೊಲ್ಲುತ್ತೇನೆ ಅಥವಾ ಜೀವಂತವಾಗಿ ತರುತ್ತೇನೆ. ಮೃಗವನ್ನು ತರಲು ಬೇಗ ಹೊರಟು ಬರುವ ತನಕ ಸೀತೆಯ ಕಡೆ ಗಮನವಿರಲಿ. ಆಶ್ರಮದಲ್ಲಿ ಸೀತೆಯೊಂದಿಗೆ ಪ್ರಮಾದಕ್ಕೆ ಒಳಗಾಗದೆ ಎಚ್ಚರದಿಂದಿರು. ಮೃಗ ಚರ್ಮದಲ್ಲಿ ಬಯಕೆಯಿಟ್ಟುಕೊಂಡಿರುವ ಸೀತೆಯನ್ನು ನೋಡಿಕೋ. ತನ್ನ ಪ್ರಧಾನವಾದ ಚರ್ಮದ ಸೊಗಸಿನಿಂದಲೆ ... ಇಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿದೆ !

ಲಕ್ಷ್ಮಣ ! ಒಂದೇ ಬಾಣದಿಂದ ಈ ಮೃಗವನ್ನು ಕೊಂದು ಶೀಘ್ರವಾಗಿ ಅದರ ಚರ್ಮವನ್ನು ತರುತ್ತೇನೆ.

ಲಕ್ಷ್ಮಣ ! ಬಹಳ ಸಮರ್ಥನು, ಅತಿ ಬಲಶಾಲಿಯು, ಬುದ್ಧಿ ಶಾಲಿಯೂ ಆದ ಜಟಾಯುವಿನ ಸಹಕಾರದೊಂದಿಗೆ ಪ್ರತಿಕ್ಷಣವೂ ಎಲ್ಲಿಂದ ಬೇಕಾದರೂ ಆಪತ್ತು ಬರಬಹುದೆಂಬ ಶಂಕೆಯಿಂದ ಅಪ್ರಮತ್ತನಾಗಿ ಮೈಥಿಲಿಯನ್ನು ಕಾಯುತ್ತ ಪ್ರತಿಕ್ಷಣದಲ್ಲಿ ಎಚ್ಚರದಿಂದಿರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತಮೂರನೇ ಸರ್ಗ ಮುಗಿಯಿತು.

ಚತುಶ್ಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಸೀತೆಯ ರಕ್ಷಣೆಗೆ ಲಕ್ಷ್ಮಣನನ್ನು ಆದೇಶಿಸಿ ರಘುನಂದನ ಮಾಯಾಮೃಗವನ್ನು ತರಲು ಅಣಿಯಾದನು. ಖಡ್ಗವನ್ನು ಸೊಂಟಕ್ಕೆ ಕಟ್ಟಿಕೊಂಡನು. ಎರಡು ಬತ್ತಳಿಕೆಗಳನ್ನು ಬೆನ್ನಿಗೆ ಸಿಕ್ಕಿಸಿಕೊಂಡನು. ಬಾಗಿದ ಬಿಲ್ಲನ್ನು ಹಿಡಿದು ಮೃಗಾನ್ವೇಷಣೆಗೆ ಹೊರಟ.

ಮಾಯಾಮೃಗ ಧನುಷ್ಪಾಣಿ ರಾಮನನ್ನು ಹಿಂದಿರುಗಿ ನೋಡುತ್ತ ವೇಗವಾಗಿ ಓಡಿತು. ಕೈಗೆ ಸಿಗುವಷ್ಟರಲ್ಲಿ ಮಾಯವಾಗುತ್ತಿತ್ತು. ಒಮ್ಮೆ ಗಾಬರಿಯಾಗಿ ಓಡಾಡುತ್ತಿತ್ತು ! ಮಗದೊಮ್ಮೆ ಗಿಡಮರಗಳ ಮರೆಯಲ್ಲಿ ಅಡಗಿ ಕುಳಿತು ಕೊಂಡಿರುತ್ತಿತ್ತು. ಕೆಲವೊಮ್ಮೆ ಎತ್ತರಕ್ಕೆ ಹಾರಿ ಧಾವಿಸುತ್ತಿತ್ತು. ಕೆಲವೊಮ್ಮೆ ದೃಶ್ಯವಾಗಿ ಕೂಡಲೆ ಮತ್ತೆ ಅದೃಶ್ಯವಾಗಿ ಬಿಡುತ್ತಿತ್ತು. ಕೆಲವೊಮ್ಮೆ ಕಣ್ಣ ಮುಂದೆಯೇ ಇರುತ್ತಿತ್ತು. ಮರುಕ್ಷಣದಲ್ಲಿ ಬಹಳ ದೂರದಲ್ಲಿ ಕಾಣುತ್ತಿತ್ತು. ಹೀಗೆ ರಾಮನನ್ನು ಆಶ್ರಮದಿಂದ ಬಹುದೂರ ಓಡಿಸಿಕೊಂಡು ಬಂತು. ರಾಮನೂ ಅದನ್ನು ಅಟ್ಟಿಸಿಕೊಂಡು ಅಟಕಾಯಿಸಿಕೊಂಡು ಬಹುದೂರ ಬಂದ.

ಕೊನೆಗೆ ರಾಮ ಮೃಗವನ್ನು ಸಂಹರಿಸಲು ತೀರ್ಮಾನಿಸಿದ. ತೀಕ್ಷ್ಣವಾದ ಬಾಣವನ್ನು ಬಿಲ್ಲಿನ ಹೆದೆಯಲ್ಲಿ ನಿಲ್ಲಿಸಿ ಎಳೆದು ಬಿಟ್ಟ. ಮಾಯಾಮೃಗ ಬಾಣದ ತೀವ್ರವಾದ ಹೊಡೆತಕ್ಕೆ ಬಲಿಯಾಗಿ ತಾಳಿ ಮರದಷ್ಟು ಎತ್ತರಕ್ಕೆ ಹಾರಿ ಕೆಳಗೆ ಬಿತ್ತು. ಮೃಗರೂಪವನ್ನು ಕಳೆದುಕೊಂಡು ನಿಜ ರಕ್ಕಸ ಬೃಹದ್ರೂಪದಿಂದ ಮಾರೀಚ ನೆಲಕ್ಕುರುಳಿದ. ತಾನು ಸಾಯುತ್ತೇನೆಂದು ಖಚಿತವಾದೊಡನೆ ರಾವಣನ ಮಾತನ್ನು ನೆನಪಿಸಿಕೊಂಡು ರಾಘವನ ಸ್ವರವನ್ನು ಅನುಕರಣೆ ಮಾಡಿ 'ಹಾ ಸೀತೆ ! ಹಾ ಲಕ್ಷ್ಮಣ' ಎಂದು ಕೂಗಿಕೊಂಡು ಮಡಿದ.

ಬಳಿ ಬಂದು ಸತ್ತ ಮಾರೀಚನನ್ನು ನೋಡಿ ಲಕ್ಷ್ಮಣನ ಮಾತನ್ನು ರಾಮ ಸ್ಮರಿಸಿದ. ತಮ್ಮ ಹೇಳಿದಂತೆ ಇದು ದುರುಳ ಮಾರೀಚನ ಮಾಯೆ. ಸಾಯುವಾಗ ಹಾ ಸೀತೆ ಹಾ ಲಕ್ಷ್ಮಣ ಎಂದು ಕೂಗಿದ ದುಷ್ಟ. ಇದನ್ನು ಕೇಳಿಸಿಕೊಂಡ ಸೀತೆಯ ಗತಿಯೇನು ? ಎಷ್ಟು ಕಳವಳಗೊಂಡಾಳು ? ಲಕ್ಷ್ಮಣನ ಅವಸ್ಥೆ ಏನು ? ಎಂದು ಯೋಚಿಸಿದ. ರಾಮ ಆಶ್ರಮದೆಡೆಗೆ ವೇಗವಾಗಿ ತೆರಳಿದ.

❖

ಮಾರೀಚವಂಚನಾ

ತಥಾ ತು ತಂ ಸಮಾದಿಶ್ಯ ಭ್ರಾತರಂ ರಘುನಂದನಃ ।
ಬಬಂಧಾಸಿಂ ಮಹಾತೇಜಾ ಜಾಂಬೂನದಮಯತ್ಸರುಮ್ ॥೧॥

ತತಸ್ತ್ರ್ಯವನತಂ ಚಾಪಮಾದಾಯಾತ್ಮವಿಭೂಷಣಮ್ ।
ಆಬಧ್ಯ ಚ ಕಲಾಪೌ ದ್ವೌ ಜಗಾಮೋದಗ್ರವಿಕ್ರಮಃ ॥೨॥

ತಂ ವಂಚಯಾನೋ ರಾಜೇಂದ್ರಮಾಪತಂತಂ ನಿರೀಕ್ಷ್ಯ ವೈ ।
ಬಭೂವಾಂತರ್ಹಿತಸ್ತ್ರಾಸಾತ್ ಪುನಃ ಸಂದರ್ಶನೇऽಭವತ್ ॥೩॥

ಮಹಾತೇಜಸ್ವೀ ರಘುನಂದನನು ತಮ್ಮನಿಗೆ ಹಾಗೆ ಆದೇಶಿಸಿ ಬಂಗಾರದ ಹಿಡಿಯ ಖಡ್ಗವನ್ನು ಸೊಂಟಕ್ಕೆ ಕಟ್ಟಿಕೊಂಡನು.

ಉತ್ತಮ ಪರಾಕ್ರಮಿ ಶ್ರೀರಾಮನು ಮೂರು ಕಡೆ ಬಾಗಿರುವ ತನಗೆ ಭೂಷಣ-ವಾದ ಬಿಲ್ಲನ್ನು ತೆಗೆದು ಕೊಂಡು, ಎರಡು ಬತ್ತಳಿಕೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಹೊರಟನು.

ಬರುತ್ತಿರುವ ರಾಜೇಂದ್ರ ರಾಮನನ್ನು ನೋಡಿ ಹೆದರಿದ ಜಿಂಕೆಯು ಅವನನ್ನು ವಂಚನೆಗೊಳಿಸುತ್ತ ಒಮ್ಮೆ ಅಡಗಿತು. ಮತ್ತೆ ಗೋಚರವಾಯಿತು. ಖಡ್ಗ ಧನುಸ್ಸ್ಗಳನ್ನು ಹಿಡಿದ ಶ್ರೀರಾಮನು ಮೃಗವಿರುವೆಡೆಗೆ ಧಾವಿಸಿದನು.

ಬದ್ಧಾಸಿರ್ಧನುರಾದಾಯ ಪ್ರದುದ್ರಾವ ಯತೋ ಮೃಗಃ ।
ತಂ ಸ್ಮ ಪಶ್ಯತಿ ರೂಪೇಣ ದ್ಯೋತಮಾನಮಿವಾಗ್ರತಃ ॥೪॥

ಅವೇಕ್ಷ್ಯವೇಕ್ಷ್ಯ ಧಾವಂತಂ ಧನುಷ್ಪಾಣಿಂ ಮಹಾವನೇ ।
ಅತಿವೃತ್ತಮಿಷೋಃ ಪಾತಾಲ್ಲೋಭಯಾನಂ ಕದಾಚನ ॥೫॥

ಶಂಕಿತಂ ತು ಸಮುದ್ಭ್ರಾಂತಮುತ್ಪತಂತಮಿವಾಂಬರೇ ।
ದೃಶ್ಯಮಾನಮದೃಶ್ಯಂ ಚ ಮನೋದ್ದೇಶೇಷು ಕೇಷುಚಿತ್ ॥೬॥

ಛಿನ್ನಾಭ್ರೈರಿವ ಸಂವೀತಂ ಶಾರದಂ ಚಂದ್ರಮಂಡಲಮ್ ।
ಮುಹೂರ್ತಾದೇವ ದದೃಶೇ ಮುಹುರ್ದೂರಾತ್ ಪ್ರಕಾಶತೇ ॥೭॥

ದರ್ಶನಾದರ್ಶನಾದೇವಂ ಸೋऽಪಾಕರ್ಷತ ರಾಘವಮ್ ।
ಸುದೂರಮಾಶ್ರಮಸ್ಯಾಸ್ಯ ಮಾರೀಚೋ ಮೃಗತಾಂ ಗತಃ ॥೮॥

ತನ್ನ ರೂಪದಿಂದ ಸುತ್ತಣ ಪ್ರದೇಶವನ್ನು ಬೆಳಗುತ್ತಿರುವಂತೆ ಕಾಣುತ್ತ ಆಟ್ಟಿಸಿಕೊಂಡು ಬರುತ್ತಿರುವ ಧನುಷ್ಪಾಣಿ ಶ್ರೀರಾಮನನ್ನು ಹಿಂತಿರುಗಿ ನೋಡಿ ನೋಡಿ ಆ ಮಹಾವನದಲ್ಲಿ ಜಿಂಕೆ ಓಡುತ್ತಿತ್ತು.

ಒಮ್ಮೆ ರಾಮನ ಬಾಣದ ಗುರಿ ತಪ್ಪಿಸಿ ಓಡುತ್ತಿತ್ತು. ಅವನನ್ನು ಕೈಗೆಟುಕುವ ಆಸೆ ತೋರಿಸಿ ಪ್ರಾಣಭಯದಿಂದ ಕಳವಳಗೊಂಡು ಆಗಸಕ್ಕೆ ನೆಗೆದು ಸಾಗುತ್ತಿತ್ತು. ಒಂದು ಕ್ಷಣ ಕಣ್ಣಿಗೆ ಕಂಡರೆ ಮರು ಘಳಿಗೆಯಲ್ಲಿ ಅದೃಶ್ಯವಾಗಿ ಬಿಡುತ್ತಿತ್ತು. ಶರತ್ಕಾಲದ ತುಂಡು ಮೋಡಗಳ ಮರೆಯಲ್ಲಿ ಕಣ್ಣಾ ಮುಚ್ಚಾಲೆಯಾಡುವ ಚಂದ್ರನಂತೆ.

ಒಂದು ಮುಹೂರ್ತದಲ್ಲಿ ಹತ್ತಿರದಲ್ಲಿ ಮತ್ತೊಂದು ಮುಹೂರ್ತದಲ್ಲಿ ದೂರದಲ್ಲಿ ಹೊಳೆಯುತ್ತದೆ ! ಹೀಗೆ ರಾಮನನ್ನು ಸೆಳೆಯಿತು. ಮೃಗರೂಪವನ್ನು ಪಡೆದ ಮಾರೀಚ ರಾಘವನನ್ನು ಆಶ್ರಮದಿಂದ ಬಹಳ ದೂರಕ್ಕೆ ಸೆಳೆದನು.

ಆಸೀತ್ ಕ್ರುದ್ಧಸ್ತು ಕಾಕುತ್ಸ್ಥೋ ವಿವಶಸ್ತೇನ ಮೋಹಿತಃ ।
ಅಥಾವತಸ್ಥೇ ಸಂಭ್ರಾಂತಶ್ಚಾಯಾಮಾಶ್ರಿತ್ಯ ಶಾದ್ವಲೇ ॥೯॥

ಸ ತಮುನ್ಮಾದಯಾಮಾಸ ಮೃಗರೂಪೋ ನಿಶಾಚರಃ ।
ಮೃಗೈಃ ಪರಿವೃತೋ ವನ್ಯೈರದೂರಾತ್ ಪ್ರತ್ಯದೃಶ್ಯತ ॥೧೦॥

ಗ್ರಹೀತುಕಾಮಂ ದೃಷ್ಟ್ವೈನಂ ಪುನರೇವಾಭ್ಯಧಾವತ ।
ತತ್ಕ್ಷಣಾದೇವ ಸಂತ್ರಾಸಾತ್ ಪುನರಂತರ್ಹಿತೋಽಭವತ್ ॥೧೧॥

ಪುನರೇವ ತತೋ ದೂರಾದ್ವಲ್ಕವಷಂಡಾದ್ವಿನಿಃಸೃತಮ್।
ದೃಷ್ಟ್ವಾ ರಾಮೋ ಮಹಾತೇಜಾಸ್ತಂ ಹಂತುಂ ಕೃತನಿಶ್ಚಯಃ ॥೧೨॥

ಭೂಯಸ್ತು ಶರಮುದ್ಧೃತ್ಯ ಕುಪಿತಸ್ತತ್ರ ರಾಘವಃ ।
ಸೂರ್ಯರಶ್ಮಿಪ್ರತೀಕಾಶಂ ಜ್ವಲಂತಮರಿಮರ್ದನಃ ॥೧೩॥

ಮುಮುಚೋ ಜ್ವಲಿತಂ ದೀಪ್ತಮಸ್ತ್ರಂ ಬ್ರಹ್ಮವಿನಿರ್ಮಿತಮ್ ।
ಶರೀರಂ ಮೃಗರೂಪಸ್ಯ ವಿನಿರ್ಭಿದ್ಯ ಶರೋತ್ತಮಃ ॥೧೪॥

ಶ್ರೀರಾಮನು ಜಿಂಕೆಯ ಹುಚ್ಚಾಟ ಹುಡುಗಾಟಗಳಿಂದ ಮೋಹಿತನಾದಂತೆ ತುಂಬ ಕ್ರುದ್ಧನಾದನು. ಅಲೆದಾಟದಿಂದ ಆಯಾಸಗೊಂಡವನಂತೆ ಮರದ ನೆರಳಲ್ಲಿ ನಿಂತನು.

ಮೃಗರೂಪದ ನಿಶಾಚರ ಕಾಡಿನ ಮೃಗಗಳ ಗುಂಪಿನೊಂದಿಗೆ ದೂರದಲ್ಲಿ ಕಂಡ. ರಾಮ ತನ್ನನ್ನು ಹಿಡಿಯಲು ಬಂದದ್ದನ್ನು ನೋಡಿ ಮತ್ತೆ ಓಡಿದ. ರಾಮಬಾಣಕ್ಕೆ ಹೆದರಿ ಮತ್ತೆ ಅದೃಶ್ಯವೂ ಆಯಿತು.

ಮತ್ತೆ ದೂರದಲ್ಲಿ ಮರಗಳ ಗುಂಪಿನಿಂದ ಹೊರಬಂದು ಜಿಂಕೆ ಕಾಣಿಸಿ-ಕೊಂಡಿತು. ಅದನ್ನು ನೋಡಿ ಮಹಾಸಮರ್ಥನಾದ ಶ್ರೀರಾಮ ಕೊಲ್ಲುವ ನಿಶ್ಚಯ ಮಾಡಿ ಮತ್ತೆ ಬಿಲ್ಲನ್ನು ಎತ್ತಿ ಕುಪಿತನಾದನು.

ಸೂರ್ಯರಶ್ಮಿಯಂತೆ ಬೆಳಗುತ್ತಿರುವ ಪ್ರಜ್ವಲಿಸುತ್ತಿರುವ ಬುಸುಗುಟ್ಟುವ ಸರ್ಪದಂತೆ ಇರುವ ಬ್ರಹ್ಮ ನಿರ್ಮಿತವಾದ ದೀಪ್ತ ಅಸ್ತ್ರವನ್ನು ಅರಿಮರ್ದನ ರಾಮನು ಸುದೃಢವಾದ ಬಿಲ್ಲಿನಲ್ಲಿ ಸಂಧಾನಗೊಳಿಸಿ ಆ ಮೃಗವನ್ನು ಉದ್ದೇಶಿಸಿ ಚೆನ್ನಾಗಿ ಎಳೆದು ಪ್ರಯೋಗಿಸಿದನು.

ಸಂಧಾಯ ಸದೃಢೇ ಚಾಪೇ ವಿಕೃಷ್ಯ ಬಲವದ್ಬಲೀ ।
ತಮೇವ ಮೃಗರೂಪಸ್ಯ ವಿನಿರ್ಭಿದ್ಯ ಶರೋತ್ತಮಃ ॥೧೫॥

ಮಾರೀಚಸ್ಯೈವ ಹೃದಯಂ ಬಿಭೇದಾಶನಿಸಂನಿಭಃ ।
ತಾಲಮಾತ್ರಮಥೋತ್ಪ್ಲುತ್ಯ ನ್ಯಪತತ್ ಸ ಶರಾತುರಃ ॥೧೬॥

ವಿನದನ್ ಭೈರವಂ ನಾದಂ ಧರಣ್ಯಾಮಲ್ಪಜೀವಿತಃ ।
ಮ್ರಿಯಮಾಣಸ್ತು ಮಾರೀಚೋ ಜಹೌ ತಾಂ ಕೃತ್ರಿಮಾಂ ತನುಮ್ ॥

ಸ್ಮೃತ್ವಾ ತದ್ವಚನಂ ರಕ್ಷೋ ದಧ್ಯೌ ಕೇನ ತು ಲಕ್ಷ್ಮಣಮ್ ।
ಇಹ ಪ್ರಸ್ತಾಪಯೇತ್ ಸೀತಾ ಶೂನ್ಯೇ ತಾಂ ರಾವಣೋ ಹರೇತ್॥೧೮

ಸ ಪ್ರಾಪ್ತಕಾಲಮಾಜ್ಞಾಯ ಚಕಾರ ಚ ತತಃ ಸ್ವರಮ್ ।
ಸದೃಶಂ ರಾಘವಸ್ಯೈವ ಹಾ ಸೀತೇ ಲಕ್ಷ್ಮಣೇತಿ ಚ ॥೧೯॥

ತೇನ ಮರ್ಮಣಿ ನಿರ್ಭಿದ್ಧಃ ಶರೇಣಾನುಪಮೇನ ಚ ।
ಮೃಗರೂಪಂ ತು ತತ್ಯಕ್ತ್ವಾ ರಾಕ್ಷಸಂ ರೂಪಮಾಸ್ಥಿತಃ ॥೨೦॥

ಚಕ್ರೇ ಸ ಸುಮಹಾಕಾಯೋ ಮಾರೀಚೋ ಜೀವಿತಂ ತ್ಯಜನ್ ।
ತತೋ ವಿಚಿತ್ರಕೇಯೂರಃ ಸರ್ವಾಭರಣಭೂಷಿತಃ ।
ಹೇಮಮಾಲೀ ಮಹಾದಂಷ್ಟ್ರೋ ರಾಕ್ಷಸೋಽಭೂಚ್ಛರಾಹತಃ ॥೨೧॥

ವಜ್ರಾಯುಧಕ್ಕೆ ಸದೃಶವಾದ ಆ ಶ್ರೇಷ್ಠಬಾಣವು ಮೃಗರೂಪ ಮಾರೀಚನ ದೇಹವನ್ನು ಸೀಳಿ ಹೃದಯವನ್ನೇ ಭೇದಿಸಿತು.

ಅಲ್ಪಜೀವಿತನಾದ ಮಾರೀಚನು ಬಾಣದ ಪ್ರಹಾರಕ್ಕೆ ಬಲಿಯಾಗಿ ತಾಲವೃಕ್ಷ-ದಷ್ಟು ಎತ್ತರಕ್ಕೆ ಹಾರಿ ಭೈರವನಾದ ಮಾಡುತ್ತ ನೆಲಕ್ಕೆ ಬಿದ್ದ.

ಸಾಯುವಾಗ ಮಾರೀಚನು ಮೃಗರೂಪವನ್ನು ಬಿಟ್ಟನು. ರಾವಣನ ಮಾತನ್ನು ನೆನೆದು ಯಾವ ಉಪಾಯದಿಂದ ಲಕ್ಷ್ಮಣನು ಇಲ್ಲಿಗೆ ಬರುವಂತೆ ಮಾಡಬೇಕು. ಲಕ್ಷ್ಮಣ ಶೂನ್ಯವಾದ ಆ ಆಶ್ರಮದಲ್ಲಿ ರಾವಣನು ಸೀತೆಯನ್ನು ಅನಾಯಾಸವಾಗಿ ಪರಿಹರಿಸುವಂತಾಗಬೇಕೆಂದು ಯೋಚಿಸಿದ.

ರಾವಣನ ಆದೇಶ ಪರಿಪಾಲಿಸುವ ಕಾಲ ಬಂದಿದೆ ಎಂದು ತಿಳಿದು ಬಳಿಕ ರಾಘವನಂತೆ ಸ್ವರ ಮಾಡುತ್ತ 'ಹಾ ಸೀತೇ ಹಾ ಲಕ್ಷ್ಮಣ !' ಎಂದು ಕೂಗಿದ. ರಾಮನಿಂದ ಮರ್ಮ ಸ್ಥಲದಲ್ಲಿ ಅನುಪಮವಾದ ಬಾಣದಿಂದ ವ್ಯಥಿತನಾಗಿ ಪ್ರಾಣ ಬಿಡುವಾಗ ಆ ಮೃಗರೂಪವನ್ನು ಬಿಟ್ಟು ತನ್ನ ಸುಮಹಾಕಾಯದ ಮಾರೀಚನ ರೂಪ ತೊಟ್ಟನು.

ಬಳಿಕ ವಿಚಿತ್ರ ಕೇಯೂರವನ್ನು ತೊಟ್ಟ, ಸರ್ವಾಭರಣ ಭೂಷಿತನು, ಹೇಮಮಾಲಾಧರನು, ದೊಡ್ಡ ಕೋರೆದಾಡೆಯವನಾದ ರಕ್ಕಸ, ರಾಮ ಶರದಿಂದ ಚೆನ್ನಾಗಿ ಪ್ರಹಾರಕ್ಕೆ ಬಲಿಯಾದನು.

ತಂ ದೃಷ್ಟ್ವಾ ಪತಿತಂ ಭೂಮೌ ರಾಕ್ಷಸಂ ಘೋರದರ್ಶನಮ್ ॥೨೨॥

ರಾಮೋ ರುಧಿರಸಿಕ್ತಾಂಗಂ ವೇಷ್ಟಮಾನಂ ಮಹೀತಲೇ ।
ಜಗಾಮ ಮನಸಾ ಸೀತಾಂ ಲಕ್ಷ್ಮಣಸ್ಯ ವಚಃ ಸ್ಮರನ್ ॥೨೩॥

ಮಾರೀಚಸ್ಯೈವ ಮಾಯೈಷಾ ಪೂರ್ವೋಕ್ತಂ ಲಕ್ಷ್ಮಣೇನ ತು ।
ತತ್ತಥಾ ಹ್ಯಭವಚ್ಚಾದ್ಯ ಮಾರೀಚೋಽಯಂ ಮಯಾ ಹತಃ ॥೨೪॥

ಹಾ ಸೀತೇ ಲಕ್ಷ್ಮಣೇತ್ಯೇವಮಾಕ್ರುಶ್ಯ ಚ ಮಹಾಸ್ವನಮ್ ।
ಮಮಾರ ರಾಕ್ಷಸಃ ಸೋಽಯಂ ಶ್ರುತ್ವಾ ಸೀತಾ ಕಥಂ ಭವೇತ್ ॥೨೫॥

ಲಕ್ಷ್ಮಣಶ್ಚ ಮಹಾಬಾಹುಃ ಕಾಮವಸ್ಥಾಂ ಗಮಿಷ್ಯತಿ ।
ಇತಿ ಸಂಚಿಂತ್ಯ ಧರ್ಮಾತ್ಮಾ ರಾಮೋ ಹೃಷ್ಟತನೂರುಹಃ ॥೨೬॥

ತತ್ರ ರಾಮಂ ಭಯಂ ತೀವ್ರಮಾವಿವೇಶ ವಿಷಾದಜಮ್ ।
ರಾಕ್ಷಸಂ ಮೃಗರೂಪಂ ತಂ ಹತ್ವಾ ಶ್ರುತ್ವಾ ಚ ತತ್ಸ್ವರಮ್ ॥೨೭॥

ನಿಹತ್ಯ ಪೃಷತಂ ಚಾನ್ಯಂ ಮಾಂಸಮಾದಾಯ ರಾಘವಃ ।
ತ್ವರಮಾಣೋ ಜನಸ್ಥಾನಂ ಸಸಾರಾಭಿಮುಖಸ್ತದಾ ॥೨೮॥

ಭೂಮಿಯಲ್ಲಿ ಬಿದ್ದಿರುವ, ನೋಡಲು ಭಯಂಕರನಾದ, ರಕ್ತದಲ್ಲಿ ತೋಯ್ದ ಅಂಗಗಳುಳ್ಳವನು, ನೆಲದಲ್ಲಿ ಹೊರಳಾಡುತ್ತಿರುವ ರಾಕ್ಷಸ ಮಾರೀಚನನ್ನು ನೋಡಿ ಮನದಲ್ಲಿ ಸೀತೆಯನ್ನು ನೆನೆದನು. ಲಕ್ಷ್ಮಣನ ಮಾತನ್ನು ನೆನೆದನು.

ಲಕ್ಷ್ಮಣನು ಮೊದಲೇ ತಿಳಿಸಿದಂತೆ ಈ ಮೃಗರೂಪ ಮಾರೀಚನದೇ ಮಾಯೆ. ಇಂದು ಅವನು ಹೇಳಿದಂತಾಯಿತು.

'ಹಾ ಸೀತೇ ಹಾ ಲಕ್ಷ್ಮಣ ! ಎಂದು ಗಟ್ಟಿಯಾಗಿ ಕೂಗಿ ಈ ರಕ್ಕಸ ಸತ್ತ. ಇದನ್ನು ಕೇಳಿದ ಸೀತೆಯ ಸ್ಥಿತಿ ಏನಾಗಿರಬಹುದು ? ಮಹಾಬಾಹುಲಕ್ಷ್ಮಣ ಯಾವ ಅವಸ್ಥೆಯನ್ನು ಹೊಂದಬಹುದು ? ಹೀಗೆ ಯೋಚನೆ ಮಾಡಿದ ರಾಮನ ರೋಮಗಳು ನಿಮಿರಿ ನಿಂತವು. ವಿಷಾದದಿಂದ ತೀವ್ರ ಭಯವೂ ಆವರಿಸಿತು. (ಹಾಗೆ ತೋರಿದ)

ಮೃಗರೂಪದ ರಕ್ಕಸನನ್ನು ಕೊಂದು ಅವನು ಕೂಗಿದ ಧ್ವನಿಯನ್ನು ಕೇಳಿ, ಇನ್ನೊಂದು ಜಿಂಕೆಯನ್ನು ಕೊಂದು ಅದರ ಮಾಂಸವನ್ನು ಹಿಡಿದುಕೊಂಡು ಜನಸ್ಥಾನದ ಆಶ್ರಮಕ್ಕೆ ಅಭಿಮುಖನಾಗಿ ಹೊರಟನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತನಾಲ್ಕನೇ ಸರ್ಗ ಮುಗಿಯಿತು.

ಮಹಾಭಾರತ ತಾತ್ಪರ್ಯ ನಿರ್ಣಯ

ಅ-5 - 28

ದತ್ತೇಽಭಯೇ ರಘುವರೇಣ ಮಹಾಮುನೀನಾಂ
ದತ್ತೇ ಭಯೇ ಚ ರಜನೀಚರಮಂಡಲಸ್ಯ ।
ರಕ್ಷಃ ಪತಿಃ ಸ್ವಸೃಮುಖಾದವಿಕಂಪನಾಚ್ಚ
ಶ್ರುತ್ವಾ ಬಲಂ ರಘುಪತೇಃ ಪರಮಾಪ ಚಿಂತಾಮ್ ॥ ೨೮ ॥

ಶ್ರೀರಾಮನು ಖರದೂಷಣ ತ್ರಿಶಿರರನ್ನು ಹದಿನಾಲ್ಕು ಸಾವಿರ ಸೈನಿಕ ರಕ್ಕಸರನ್ನೂ ದಂಡಕಾರಣ್ಯದಲ್ಲಿ ಸಂಹರಿಸಿ ಕಾಡಿನ ಮಹಾಮುನಿಗಳಿಗೆ ಅಭಯವನ್ನು, ನಿಶಾಚರ

ಸಮೂಹಕ್ಕೆ ಭಯವನ್ನೂ ಕೊಟ್ಟನು. ರಾವಣನು ತಂಗಿ ಶೂರ್ಪಣಖೆಯಿಂದಲೂ, ಅಕಂಪನನಿಂದಲೂ ರಾಮನ ಬಲವನ್ನು ಕೇಳಿ ತಿಳಿದು ಪರಮಚಿಂತೆಗೆ ಒಳಗಾದನು.

ಸ ತ್ವಾಶು ಕಾರ್ಯಮವಮೃಶ್ಯ ಜಗಾಮ ತೀರೇ
ಕ್ಷೇತ್ರಂ ನದೀನದಪತೇಃ ಶ್ರವಣಂ ಧರಿತ್ರ್ಯಾಃ ।
ಮಾರೀಚಮತ್ರ ತಪಸಿ ಪ್ರತಿವರ್ತಮಾನಂ
ಭೀತಂ ಶರಾದ್ ರಘುಪತೇರ್ನಿತರಾಂ ದದರ್ಶ ॥ ೨೯ ॥

ಆ ರಾವಣ ಕೂಡಲೆ ಮಾಡಬೇಕಾದ ಕಾರ್ಯವನ್ನು ವಿಮರ್ಶಿಸಿಕೊಂಡು ಸಮುದ್ರತೀರದ ಗೋಕರ್ಣಕ್ಷೇತ್ರದಲ್ಲಿ ರಾಮನ ಬಾಣಕ್ಕೆ ತುಂಬ ಹೆದರಿ ತಪಸ್ಸು ಮಾಡುತ್ತಿದ್ದ ಮಾರೀಚನನ್ನು ಭೇಟಿಯಾದ.

ತೇನಾರ್ಥಿತಃ ಸಪದಿ ರಾಘವ ವಂಚನಾರ್ಥೇ
ಮಾರೀಚ ಆಹ ಶರವೇಗಮಮುಷ್ಯ ಜಾನನ್ ।
ಶಕ್ಯೋ ನ ತೇ ರಘುವರೇಣ ಹಿ ವಿಗ್ರಹೇಽತ್ರ
ಜಾನಾಮಿ ಸಂಸ್ಪರ್ಶಮಸ್ಯ ಶರಸ್ಯ ಪೂರ್ವಮ್ ॥ ೩೦ ॥

ರಾಘವನನ್ನು ವಂಚಿಸುವ ಸಲುವಾಗಿ ರಾವಣನಿಂದ ಪ್ರಾರ್ಥಿತನಾದ ಮಾರೀಚ ರಾಮನ ಬಾಣದ ವೇಗವನ್ನು ತಿಳಿದಿದ್ದ ಕಾರಣ ಕೂಡಲೆ ಹೇಳಿದ – ಸೀತಾ ವಿಷಯವಾಗಿ ರಾಮನೊಂದಿಗೆ ಯುದ್ಧಮಾಡುವುದು ನಿನ್ನಿಂದ ಶಕ್ಯವಿಲ್ಲ. ಅವನ ಬಾಣದ ಸ್ಪರ್ಶವನ್ನು ಈ ಮುಂಚೆಯೇ ನಾನು ಅನುಭವಿಸಿದ್ದೇನೆ ಎಂದು.

ಇತ್ಯುಕ್ತವಂತಮಥ ರಾವಣ ಆಹ ಖಡ್ಗಂ
ನಿಷ್ಕೃಷ್ಯ ಹನ್ಮಿ ಯದಿ ಮೇ ನ ಕರೋಷಿ ವಾಕ್ಯಮ್ ।
ತಚ್ಛ್ರುತ್ವಾನ್ ಭಯಯುತೋಽಥ ನಿಸರ್ಗತಶ್ಚ
ಪಾಪೋ ಜಗಾಮ ರಘುವರ್ಯಸಕಾಶಮಾಶು ॥ ೩೧ ॥

ಹೀಗೆ ಹೇಳಿದ ಮಾರೀಚನಿಗೆ ರಾವಣನು ಖಡ್ಗವನ್ನು ಝಳಪಿಸಿ ರಾವಣ ಹೇಳಿದ – 'ನನ್ನ ಮಾತನ್ನು ಕೇಳದಿದ್ದರೆ ಕೊಂದು ಬಿಡುತ್ತೇನೆ'. ಅದನ್ನು ಕೇಳಿದ ಮಾರೀಚ ಇತ್ತ ರಾವಣನಿಂದ, ಅತ್ತ ರಾಮನಿಂದ ನನಗೆ ಮರಣ ನಿಶ್ಚಿತ ಎಂದು ಭಾವಿಸಿ ಭಯದಿಂದ ಕೂಡಿದ ಸಹಜವಾಗಿ ಪಾಪಿಯೂ ಆದ ಮಾರೀಚ ಕೂಡಲೆ ತಡಮಾಡದೆ ರಾಮನ ಬಳಿಗೆ ಹೋದ.

ಸ ಪ್ರಾಪ್ಯ ಹೈಮಮೃಗತಾಂ ಬಹುರತ್ನಚಿತ್ರಃ
ಸೀತಾಸಮೀಪ ಉರುಧಾ ವಿಚಚಾರ ಶೀಘ್ರಮ್ ।
ನಿರ್ದೋಷ ನಿತ್ಯವರಸಂವಿದಪಿ ಸ್ಮ ದೇವೀ
ರಕ್ಷೋವಧಾಯ ಜನಮೋಹಕೃತೇ ತಥಾऽಹ ॥ ೩೨ ॥

ಆ ಮಾರೀಚ ಬಂಗಾರದ ಜಿಂಕೆಯ ರೂಪ ತಾಳಿ ರತ್ನದಂತಹ ಹೊಳಪಿನ ಬಹಳ ಚುಕ್ಕೆಗಳಿಂದ ಆಶ್ಚರ್ಯಕರನಾಗಿ ಶೀಘ್ರವಾಗಿ ಸೀತೆಯ ಬಳಿಯಲ್ಲಿ ನಾನಾ ರೀತಿ-ಯಿಂದ ಸುಳಿದಾಡಿದ. ನಿರ್ದೋಷಳು ನಿತ್ಯವಾದ ಶ್ರೇಷ್ಠವಾದ ಜ್ಞಾನವುಳ್ಳವ-ಳಾದರೂ ಸೀತಾದೇವಿ ರಕ್ಕಸರ ಸಂಹಾರಕ್ಕಾಗಿ ದುರ್ಜನರ ಮೋಹಕ್ಕಾಗಿಯೂ ಹೀಗೆ ಹೇಳಿದಳು.

ದೇವೇಮಮಾಶು ಪರಿಗೃಹ್ಯ ಚ ದೇಹಿ ಮೇ ತ್ವಂ
ಕ್ರೀಡಾಮೃಗಂ ತ್ವಿತಿ ತಯೋದಿತ ಏವ ರಾಮಃ ।
ಅನ್ವಕ್ ಸಸಾರ ಹ ಶರಾಸನಬಾಣಪಾಣಿಃ
ಮಾಯಾಮೃಗಂ ನಿಶಿಚರಂ ನಿಜಘಾನ ಜಾನನ್ ॥ ೩೩ ॥

ದೇವ ! ನೀನು ಈ ಕ್ರೀಡಾಮೃಗವನ್ನು ಬೇಗನೇ ಹಿಡಿದು ತಂದು ಕೊಡು ನನಗೆ ಎಂದು ಸೀತೆ ಹೇಳಿದಳು. ವಿಲಂಬವಿಲ್ಲದೆ ರಾಮನು ಬಿಲ್ಲು ಬಾಣಗಳನ್ನು ಹಿಡಿದವನಾಗಿ ಮಾಯಾ ಮೃಗರೂಪನು ಮಾರೀಚನೆಂದು ತಿಳಿದು ಬೆನ್ನಟ್ಟಿ ಹೋಗಿ ಹೊಡೆದು ಕೊಂದನು.

ತೇನಾಹತಃ ಶರವರೇಣ ಭೃಶಂ ಮಮಾರ
ವಿಕ್ರುಶ್ಯ ಲಕ್ಷ್ಮಣ ಮುರುವ್ಯಥಯಾ ಸ ಪಾಪಃ ।
ಶ್ರುತ್ವೈವ ಲಕ್ಷ್ಮಣಮಚೂಚುದುಗ್ರವಾಕ್ಯೈ ಃ
ಸೋऽಪ್ಯಾಪ ರಾಮಪಥಮೇವ ಸ ಚಾಪಬಾಣಃ ॥ ೩೪ ॥

ಆ ಪಾಪಿ ಮಾರೀಚನು ರಾಮನ ಶ್ರೇಷ್ಠಬಾಣದಿಂದ ಚೆನ್ನಾಗಿ ಹೊಡೆಯಲ್ಪಟ್ಟು ಬಹಳ ವ್ಯಥೆಯಿಂದ ಪೀಡಿತನಾಗಿ 'ಹಾ ಲಕ್ಷ್ಮಣ !' 'ಹಾ ಸೀತೇ' ಎಂದು ರಾಮನ ಸ್ವರವನ್ನು ಅನುಕರಿಸಿ ಕೂಗಿ ಅಳುತ್ತ ಸತ್ತ.

ಯಾಂಯಾಂ ಪರೇಶ ಉರುಧೈವ ಕರೋತಿ ಲೀಲಾಂ
ತಾಂತಾಂ ಕರೋತ್ಯನು ತಥೈವ ರಮಾऽಪಿ ದೇವೀ ।

ನೈತಾವತಾऽಸ್ಯ ಪರಮಸ್ಯ ತಥಾ ರಮಾಯಾಃ
ದೋಷೋऽಣುರಪ್ಯನುವಿಚಿಂತ್ಯ ಉರುಪ್ರಭೂ ಯತ್ ॥ ೩೫ ॥

ಸರ್ವೋತ್ತಮ ಶ್ರೀಹರಿ ಯಾವ ಯಾವ ಬಗೆ ಬಗೆಯ ಲೀಲೆಯನ್ನು ಮಾಡುವನೋ ಅದನ್ನು ಅನುಸರಿಸಿ ರಮೆಯೂ ಅದೇ ಅದೇ ಲೀಲೆಯನ್ನು ತೋರುವಳು. ಅಷ್ಟರಿಂದ ಸರ್ವೋತ್ತಮನಾದ ಶ್ರೀಹರಿಗೆ, ಹಾಗೆ ರಮಾದೇವಿಗೆ ಅಣುವಷ್ಟೂ ದೋಷವನ್ನು ತಿಳಿಯಬಾರದು. ಏಕೆಂದರೆ ಇಬ್ಬರೂ ಮಹಾಸಮರ್ಥರು.

ಕ್ವಾಜ್ಞಾನಮಾಪದಪಿ ಮಂದಕಟಾಕ್ಷಮಾತ್ರ
ಸರ್ಗಸ್ಥಿತಿಪ್ರಳಯ ಸಂಸೃತಿ ಮೋಕ್ಷಹೇತೋಃ ।
ದೇವ್ಯಾಃ ಹರೇ ಕಿಮು? ವಿಡಂಬನಮಾತ್ರಮೇತದ್
ವಿಕ್ರೀಡತೋಃ ಸುರನರಾದಿವದೇವ ತಸ್ಮಾತ್ ॥ ೩೬ ॥

ಕೇವಲ ಕುಡಿನೋಟ ಲೇಶದಿಂದ ಸೃಷ್ಟಿ, ಸ್ಥಿತಿ, ಪ್ರಲಯ, ಸಂಸಾರ ಮೋಕ್ಷಗಳಿಗೆ ಕಾರಣಳಾದ ರಮಾದೇವಿಗೆ ಅಜ್ಞಾನವೆಲ್ಲಿ ? ಆಪತ್ತು ಎಲ್ಲಿ ಬರಲು ಸಾಧ್ಯ ? ಸರ್ವೋತ್ತಮ ಶ್ರೀಹರಿಗಂತು ಅಜ್ಞಾನ -ಆಪತ್ತುಗಳು ಎಂತು ? ಸುರ-ನರರಂತೆ ಆಟವಾಡುವ ರಮಾನಾರಾಯಣರಿಗೆ ಇದು ಲೀಲಾಮಾತ್ರವಷ್ಟೆ.

ಸಂಗ್ರಹ ರಾಮಾಯಣ - ಅರಣ್ಯಕಾಂಡ -೪

ಮಾನವೇನೈವ ರಾಮೇಣ ಖರಾದ್ಯಾಃ ಸ್ವಜನಾ ಹತಾಃ ।
ತಸ್ಯ ಭಾರ್ಯಾಂ ಹರಿಷ್ಯಾಮಿ ತತ್ರ ಮಿತ್ರಂ ಭವಾಂಗ ಮೇ ॥ ೩೩ ॥

ರಾವಣ - ಕೇವಲ ಮಾನವನಾದ ರಾಮನಿಂದ ಖರನೇ ಮೊದಲಾದ ಸ್ವಜನರು ಹತರಾದರು. ಅವನ ಹೆಂಡತಿ ಸೀತೆಯನ್ನು ಅಪಹರಿಸುತ್ತೇನೆ. ಆ ಕಾರ್ಯದಲ್ಲಿ ನನಗೆ ನೀನು ಸಹಾಯಕ ಮಿತ್ರನಾಗು.

ತ್ವಂ ಸುವರ್ಣಮೃಗೋ ಭೂತ್ವಾ ತತ್ರ ಸೀತಾಂ ವಿಲೋಭಯ ।
ಅನುಧಾವತಿ ರಾಮೇ ತ್ವಾಂ ಸೀತಾಂ ನೇಷ್ಯಾಮ್ಯಹಂ ಸುಖಮ್ ॥ ೩೪ ॥

ನೀನು ಬಂಗಾರದ ಜಿಂಕೆಯಾಗಿ ಆ ಆಶ್ರಮಪರಿಸರದಲ್ಲಿ ಸೀತೆಯನ್ನು ವಂಚನೆ ಮಾಡು. ರಾಮನು ನಿನ್ನನ್ನು ಹಿಂಬಾಲಿಸಿ ಹೋದಾಗ ನಾನು ಅನಾಯಾಸವಾಗಿ ಸೀತೆಯನ್ನು ಒಯ್ಯುತ್ತೇನೆ.

ಇತ್ಯುಕ್ತ ಊಚೇ ಮಾರೀಚೋ ನ ರಾಮಂ ವೇತ್ಥ ರಾವಣ ।
ಯಸ್ಯೈಕಃ ಸಾಯಕೋ ಹಂತುಮಲಂ ಸಾಸುರರಾಕ್ಷಸಾನ್ ॥ ೩೫ ॥

ರಾವಣನಿಂದ ಹೀಗೆ ಹೇಳಲ್ಪಟ್ಟ ಮಾರೀಚನು, 'ರಾವಣ ! ನೀನು ರಾಮನ ಬಗ್ಗೆ ತಿಳಿದಿಲ್ಲ. ಅವನ ಒಂದು ಬಾಣವು ಅಸುರ ರಾಕ್ಷಸರನ್ನೆಲ್ಲ ಕೊಲ್ಲಲು ಸಮರ್ಥವು.

ಊನಷೋಡಶವರ್ಷಸ್ಯ ವಿಶ್ವಾಮಿತ್ರಾರ್ಥಮೀಯುಷಃ ।
ಸಿದ್ಧಾಶ್ರಮೇಽನ್ವಭೂವಂ ಹಿ ತೈಕ್ಷ್ಣಂ ರಾಮಸ್ಯ ಪತ್ರಿಣಃ ॥ ೩೬ ॥

ಇನ್ನೂ ಹದಿನಾರು ತುಂಬದ, ವಿಶ್ವಾಮಿತ್ರರ ಕೋರಿಕೆಯಂತೆ ಅವರ ಯಜ್ಞ-ರಕ್ಷಣೆಗೆಂದು ಬಂದಿದ್ದ ಶ್ರೀರಾಮನ ಬಾಣದ ತೀಕ್ಷ್ಣತೆಯನ್ನು ಸಿದ್ಧಾಶ್ರಮದಲ್ಲಿ ನಾನು ಅನುಭವಿಸಿದ್ದೆ.

ಪುನಶ್ಚಾಹಂ ಗತೋ ವೈರಾದ್ ರಾಕ್ಷಸಾಭ್ಯಾಂ ಮೃಗಾಕೃತಿಮ್ ।
ದಂಡಕೇ ತೌ ಹತೌ ತಸ್ಯ ಶರೈರ್ಭಗ್ನೋಽಹಮಾಗತಃ ॥ ೩೭ ॥

ಮತ್ತೊಮ್ಮೆ ದ್ವೇಷದಿಂದ ಮೃಗರೂಪಧರನಾಗಿ ಇಬ್ಬರು ರಾಕ್ಷಸರೊಂದಿಗೆ ದಂಡಕಾರಣ್ಯದಲ್ಲಿ ಹೋದೆನು. ರಾಮನ ಬಾಣಗಳಿಂದ ಆ ಇಬ್ಬರು ರಕ್ಕಸರು ಅಸು ನೀಗಿದರು. ನಾನು ಪರಾಜಿತನಾಗಿ ಹಿಂದಕ್ಕೆ ಬಂದೆ.

ಸ್ವಪಕ್ಷಕ್ಷಯಕೋಪಾಚ್ಚ ಸೀತಾಕಾಮಾಚ್ಚ ಮಾ ಸ್ಮ ಗಾಃ ।
ರಾಮಂ ತ್ವಂ ಜೀವನಾರ್ಥೀ ಚೇತ್ ಪ್ರೋಚ್ಯೇತಿ ಏರರಾಮ ಸಃ ॥ ೩೮ ॥

ನಿನಗೆ ಬದುಕುವ ಬಯಕೆಯಿದ್ದರೆ ತನ್ನ ಪಕ್ಷದವರಾದ ಖರಾದಿಗಳು ನಾಶವಾದ ಕೋಪದಿಂದಾಗಲಿ, ಸೀತೆಯ ಕಾಮನೆಯಿಂದಾಗಲಿ ರಾಮನೆದುರು ಹೋಗಬೇಡ.

ವಿಪಕ್ಷಪಕ್ಷಂ ಹನ್ಯಾಂ ತ್ವಾಮಾಜ್ಞಾಂ ಮೇ ನ ಕರೋಷಿ ಚೇತ್ ।
ಇತಿ ಬ್ರುವನ್ ನಿಶ್ಚಕರ್ಷ ಕೋಪಾತ್ ಖಡ್ಗಂ ದಶಾನನಃ ॥ ೩೯ ॥

ನನ್ನ ಆದೇಶವನ್ನು ಪಾಲಿಸದಿದ್ದರೆ ಶತ್ರುಪಕ್ಷಪಾತಿಯಾದ ನಿನ್ನನ್ನು ಕೊಂದು ಬಿಡುತ್ತೇನೆ ಎಂದು ಹೇಳುತ್ತ ರಾವಣ ಖಡ್ಗವನ್ನು ಒರೆಯಿಂದ ಹೊರಗೆಳೆದ.

ಮಾರೀಚೋ ಮರಣಾದ್ ಭೀತಃ ಪಾಪಾತ್ಮಾ ಚ ನಿಸರ್ಗತಃ ।
ರಾವಣೇನ ಸಹಾರುಹ್ಯ ತಂ ರಥಂ ದಂಡಕಾನ್ ಯಯೌ ॥ ೪೦ ॥

ಮರಣಕ್ಕೆ ಹೆದರಿ ಸ್ವಾಭಾವಿಕವಾಗಿ ಪಾಪಿಯಾದ ಮಾರೀಚನು ರಾವಣನೊಂದಿಗೆ ರಥವೇರಿ ದಂಡಕಾರಣ್ಯಕ್ಕೆ ತೆರಳಿದನು.

ಅವರುಹ್ಯ ರಥಾತ್ ತಸ್ಮಾದ್ ರಾವಣೇನಾऽಭಿನಂದಿತಃ ।
ಮಾಯಾಮೃಗಾತ್ಮಾ ಮಾರೀಚೋ ರಮ್ಯೇ ರಾಮಾಶ್ರಮೇऽಚರತ್ ॥೪೧॥

ರಾವಣನಿಂದ ಅಭಿನಂದಿತನಾಗಿ ಆ ರಥದಿಂದ ಕೆಳಗಿಳಿದು ಮಾರೀಚನು ಮಾಯಾಮೃಗರೂಪವನ್ನು ಪಡೆದು ರಾಮನ ಆಶ್ರಮದಲ್ಲಿ ಓಡಾಡಿದನು.

ಮಾಯಾಮೃಗಂ ಪ್ರೇಷ್ಯದೇವೀ ಮಾಯಾಮಾನುಷಧರ್ಮಿಣೇ ।
ಮಾಯಾಮನುಷ್ಯಸ್ಯ ವಿಭೋರ್ಮಾಯಾಸ್ಮಿತಮವೈಕ್ಷತ॥ ೪೨ ॥

ಸ್ವೇಚ್ಛೆಯಿಂದ ಮಾನುಷ ರೂಪವನ್ನು ಪಡೆದ ಶ್ರೀರಾಮನಿಗೆ ಅನುಸಾರವಾಗಿ ನಟನೆ ಲೀಲೆಗಳನ್ನು ತೋರುವ ದೇವಿ ಸೀತೆಯು ಸ್ವೇಚ್ಛೆಯಿಂದ ಮಾನವ ರೂಪ ತಳೆದ ವಿಭು ರಾಮನ ಮಾಯಾಕೃತ ಮಂದಹಾಸವನ್ನು ಕಂಡಳು.

॥ ನಾಲ್ಕನೆಯ ಸರ್ಗ ಸಮಾಪ್ತಿ ॥

ಐದನೆಯ ಸರ್ಗ

ಕ್ರೀಡಾರ್ಥಂ ಚಿತ್ರಸಾರಂಗಂ ದೇಹೀಮಂ ದೇವದೇವ ಮೇ ।
ಬೃಸ್ಯಾ ಆಸ್ತರಣಾಯಾತ್ರ ವಿಚಿತ್ರಾಮಸ್ಯ ವಾ ತ್ವ ಚವನಾ ॥ ೧ ॥

ದೇವ ದೇವನೇ ! ಈ ಚಿತ್ರವರ್ಣದ ಜಿಂಕೆಯನ್ನು ತಂದು ಕೊಡು. ಅಥವಾ ಹುಲ್ಲುಚಾಪೆಯ ಮೇಲೆ ಹಾಸಿಕೊಳ್ಳುವುದಕ್ಕಾಗಿ ಜಿಂಕೆಯನ್ನು ಕೊಂದು ಅದರ ಚರ್ಮವನ್ನಾದರೂ ತಂದು ಕೊಡು.

ಇತ್ಯುಕ್ತೋ ದೇವ ಆದಾಯ ಚಾಪಂ ಚಾರು ಕಲಾಪವಾನ್ ।
ರಕ್ಷ ಲಕ್ಷ್ಮಣ ಸೀತಾಂ ತ್ವಮಿತ್ಯುಕ್ತಾ ವ್ವ ಮೃಗಮನ್ವಗಾತ್ ॥ ೨ ॥

ಹೀಗೆ ಹೇಳಲ್ಪಟ್ಟ ದೇವ ರಾಮನು ಬಿಲ್ಲನ್ನು ತೆಗೆದುಕೊಂಡು ಸುಂದರವಾದ ಬಾಣ ತುಂಬಿದ ಬತ್ತಳಿಕೆಯುಳ್ಳವನಾಗಿ, 'ಲಕ್ಷ್ಮಣನೇ ! ಸೀತೆಯನ್ನು ರಕ್ಷಿಸು' ಎಂದು ಹೇಳಿ ಜಿಂಕೆಯನ್ನು ಬೆನ್ನಟ್ಟಿದನು.

ದೂರಂ ದುದ್ರಾವ ದುಷ್ಟಾತ್ಮಾ ಮಾರೀಚೋ ವೀಕ್ಷ್ಯ ರಾಘವಮ್ ।
ರಾಮೋऽಪಿ ತಮನುದ್ರುತ್ಯ ಮುಮೋಚಾಂತಕರಂ ಕರಮ್ ॥ ೩ ॥

ದುಷ್ಟಸ್ವಭಾವದ ಮಾರೀಚನು ರಾಘವನನ್ನು ನೋಡಿ ದೂರ ಓಡಿದನು. ರಾಮನೂ ಅವನನ್ನು ಹಿಂಬಾಲಿಸಿ ವಿನಾಶಕರವಾದ ಬಾಣವನ್ನು ಪ್ರಯೋಗಿಸಿದನು.

ಹಾ ಲಕ್ಷ್ಮಣೇತಿ ವಿಕ್ರುಶ್ಯ ರಾವಣಸ್ಯಾರ್ಥಸಿದ್ಧಯೇ ।
ವಿದ್ಧಃ ಸ್ವರೂಪವಾನ್ ಪಾಪೋ ಭುವಮಾರ ಮಮಾರ ಚ ॥ ೪ ॥

ರಾಮನ ಬಾಣದ ಪೆಟ್ಟಿಗೆ ಬಲಿಯಾದ ಪಾಪಿ ಮಾರೀಚನು ರಾವಣನ ಸೀತಾಪಹಾರ ಕಾರ್ಯ ಸಿದ್ಧಿಗೋಸ್ಕರ – ಹಾ ಲಕ್ಷ್ಮಣ !! ಎಂದು ಜೋರಾಗಿ ಕೂಗಿ ತನ್ನ ನೈಜ ರಕ್ಕಸ ರೂಪವನ್ನು ಹೊಂದಿ ನೆಲದಲ್ಲಿ ಬಿದ್ದನು ಮತ್ತು ಸತ್ತನು.

ಸರ್ವಜ್ಞಾಽಪ್ಯಥ ಸರ್ವೇಶೀ ಕರ್ತುಂ ರಕ್ಷಃ ಪರಿಕ್ಷಯಮ್ ।
ಆರ್ತನಾದಂ ತಮಾಕರ್ಣ್ಯ ಲಕ್ಷ್ಮಣಂ ಪ್ರತ್ಯವೋಚತ ॥ ೫ ॥

ಬ್ರಹ್ಮಾದಿ ದೇವತೆಗಳ ಒಡತಿಯಾದ ಸೀತೆ ಸರ್ವಜ್ಞಳಾಗಿದ್ದರೂ ರಕ್ಷೋ ವಿನಾಶ-ವನ್ನು ಮಾಡಲು ಮಾರೀಚನ ಆ ಆರ್ತನಾದವನ್ನು ಕೇಳಿ ಲಕ್ಷ್ಮಣನಿಗೆ ಹೇಳಿದಳು-

ಹಾ ಲಕ್ಷ್ಮಣೇತ್ಯಾರ್ತನಾದೋ ನೂನಂ ರಾಮಸ್ಯ ಲಕ್ಷ್ಮಣ ।
ಗಚ್ಛ ತೂರ್ಣಂ ವಿಜಾನೀಯಾ ಇತ್ಯುಕ್ತೋ ಲಕ್ಷ್ಮಣೋಽಬ್ರವೀತ್ ॥ ೬

ಲಕ್ಷ್ಮಣ ! 'ಹಾ ಲಕ್ಷ್ಮಣ' ಎಂಬ ಈ ಆರ್ತನಾದವು ನಿಶ್ಚಯವಾಗಿ ರಾಮನದೇ ಆಗಿದೆ. ಬೇಗ ರಾಮನ ಬಳಿ ಹೋಗು. ಏನಾಗಿದೆ ತಿಳಿದುಕೋ' ಎಂದಳು. ಆಗ ಲಕ್ಷ್ಮಣನು ಹೇಳಿದನು.

ಯದ್ಭ್ರೂವಿಭ್ರಮಮಾತ್ರೇಣ ಸುರಾಸುರನರಾದಿಕಮ್ ।
ವಿಶ್ವಂ ಸ್ಥಿತಿಲಯೋತ್ಪತ್ತೀರ್ಯಾತಿ ತಸ್ಯಾಂಬ! ಕಿಂ ಭಯಮ್? ॥ ೭ ॥

ಯಾರ ಹುಬ್ಬಿನ ವಿಲಾಸಮಾತ್ರದಿಂದ ಸುರಾಸುರನರಾದಿ ಪ್ರಪಂಚವು ಸ್ಥಿತಿ ಲಯ ಉತ್ಪತ್ತಿಗಳನ್ನು ಹೊಂದುತ್ತದೆಯೋ ಅಂಥ ರಾಮನಿಗೆ ಯಾರಿಂದ ಭಯವಮ್ಮ ?

ನಾಥೋ ನಾರಾಯಣಾತ್ಮಾ ನೋ ನ ಶೋಚ್ಯೋ ದೇವಿ ರಾಘವಃ ।
ಮಾಯಾ ಮಾಯಾವಿನಾಮೇಷಾ ಸ್ಯಾನ್ನೂನಂ ಪಿಶಿತಾಶಿನಾಮ್॥ ೮ ॥

ದೇವಿ ! ನಮ್ಮೊಡೆಯ ರಾಘವನು ನಾರಾಯಣ ಸ್ವರೂಪನು. ಆದ್ದರಿಂದ ಮರಣವಿಲ್ಲದ ಅವನು ಶೋಕಾರ್ಹನಲ್ಲ. ನಿಶ್ಚಯವಾಗಿ ಮಾಂಸಭಕ್ಷಕರಾದ ಮಾಯಾವಿರಾಕ್ಷಸರ ಮಾಯೆ ಈ ಆರ್ತನಾದ.

ಇತ್ಯುಕ್ತಾ ಭಗವತ್ಯೂಚೇ ಸೌಹಾರ್ದಂ ನಾಸ್ತಿ ತೇ ಕಥಮ್ ।
ಇಚ್ಛಸ್ಯುಪರತೇ ದೇವೇ ತ್ವಂ ಕ್ರೂರ! ಶಠ! ಮಾಮಿತಿ ॥ ೯ ॥

ಹೀಗೆ ಲಕ್ಷ್ಮಣನಿಂದ ಹೇಳಲ್ಪಟ್ಟ ಭಗವತೀ ಸೀತೆಯು ಹೇಳಿದಳು – ಕ್ರೂರನೇ ! ನಿನಗೆ ನಿನ್ನ ಅಣ್ಣ ರಾಮನ ಬಗ್ಗೆ ಸ್ನೇಹವಿಲ್ಲವೆ ? ವಂಚಕನೇ ! ರಾಮ ಮೃತನಾದ ಮೇಲೆ ನನ್ನನ್ನು ಭೋಗಿಸಲು ಬಯಸಿರಬೇಕು !

ಶ್ರುತ್ವೇತಿ ದುಃಶ್ರವಂ ವಾಕ್ಯಂ ರುದನ್ನಾಚಷ್ಟ ಲಕ್ಷ್ಮಣಃ ।
ದಿಗ್ಧಿಙ್ ಮಹಾಪಾತಕಿನಂ ಮಾಮೇವಂ ವಚನಾಸ್ಪದಮ್ ॥ ೧೦ ॥

ಲಕ್ಷ್ಮಣನು ಕೇಳಲಾಗದ ಕೆಟ್ಟ ಮಾತನ್ನು ಕೇಳಿ ಅಳುತ್ತ ಹೇಳಿದ – ಇಂಥ ಕೆಟ್ಟಮಾತಿಗೆ ವಿಷಯನಾದ ಮಹಾಪಾತಕಿಯಾದ ನನಗೆ ಧಿಕ್ಕಾರ ! ಧಿಕ್ಕಾರ !

ಆರ್ಯಸ್ಯಾಽಜ್ಞಾವಿಮೋಕ್ಷೋಽಯಮಾರ್ಯಾಯಾ ಲಂಘನಾಲ್ಲಘುಃ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಮಾತಸ್ತ್ವಾಂ ಪಾತು ಶಾರ್ಙ್ಗಭೃತ್ ॥ ೧೧

'ಸೀತೆಯನ್ನು ರಕ್ಷಿಸು' ಎಂಬ ರಾಮಾಜ್ಞೆಯ ಉಲ್ಲಂಘನೆಯು ಸೀತೆಯ ಆಜ್ಞಾ ಉಲ್ಲಂಘನೆಗಿಂತ ಸಣ್ಣ ತಪ್ಪು. ಅಮ್ಮ ! ನಿನಗೆ ಮಂಗಳವಾಗಲಿ. ನಾನು ರಾಮನ ಬಳಿ ಹೋಗುತ್ತೇನೆ. ಶಾರ್ಙ್ಗಧನುರ್ಧಾರಿ ಶ್ರೀಹರಿಯು ನಿನ್ನನ್ನು ಕಾಪಾಡಲಿ.

ಅಲ್ಲಿ ರಾಮಾಜ್ಞೆಯ ಉಲ್ಲಂಘನೆ ಮಾತ್ರ ದೋಷ. ಇಲ್ಲಿ ಸೀತೆಯ ಆಜ್ಞಾ ಉಲ್ಲಂಘನೆ ಮತ್ತು ಕೆಟ್ಟ ಅಪವಾದ ಈ ಎರಡು ದೋಷ!

ಇತ್ಯುಕ್ತ್ವಾನ್ವದ್ರವತ್ ತೂರ್ಣಂ ರಾಘವಂ ರಾಘವಾನುಜಃ ।
ದೇವೀ ಚ ದೇವಕಾರ್ಯಂ ತತ್ ಕುರ್ವಾಣಾತ್ಯಾಶ್ರಮೇಽವಸತ್ ॥

ಲಕ್ಷ್ಮಣನು ಹೀಗೆ ಹೇಳಿ ಕೂಡಲೆ ರಾಮನಲ್ಲಿಗೆ ಓಡಿದನು. ದೇವಿ ಸೀತೆಯೂ ದೇವತೆಗಳ ಹಿತಕ್ಕಾಗಿ ತಾನು ಮಾಡಬೇಕಾದ ಕಾರ್ಯ – ರಾವಣನಿಂದ ಅಪಹಾರದ ಸೌಕರ್ಯಕ್ಕೋಸ್ಕರ ಲಕ್ಷ್ಮಣ ಪ್ರೇಷಣವನ್ನು ಮಾಡಿ ಆಶ್ರಮದಲ್ಲಿ ಉಳಿದಳು.

★

ಪಂಚಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– 'ಹಾ ಸೀತೆ ! ಹಾ ಲಕ್ಷ್ಮಣ ! ' ಎಂಬ ಮಾರೀಚನ ಕೂಗನ್ನು ರಾಮನದೆ ಆರ್ತಸ್ವರ ಎಂದು ತಿಳಿದು ಸೀತೆ ಲಕ್ಷ್ಮಣನಿಗೆ ಹೇಳಿದಳು – ಲಕ್ಷ್ಮಣ ! ನನ್ನ ಮನಸ್ಸು ರಾಮನ ಈ ಆರ್ತನಾದ ಕೇಳಿ ಸ್ಥಿರತೆಯನ್ನು ಕಳೆದು ಕೊಂಡಿದೆ ! ಶೀಘ್ರದಲ್ಲಿ ರಾಮನ ಬಳಿ ಧಾವಿಸು. ಅವನು ಸಿಂಹದ ವಶವಾದ ಎತ್ತಿನಂತೆ ರಕ್ಕಸನ ವಶವಾಗಿರಬೇಕು.

ಇಷ್ಟು ಹೇಳಿದರೂ ಲಕ್ಷ್ಮಣ ಹೊರಡಲಿಲ್ಲ – ರಾಮನ = 'ಸೀತಾರಕ್ಷಣೆಯ' = ಆದೇಶ– ವನ್ನು ಪಾಲಿಸುವವನಾಗಿದ್ದನು. ಬಳಿಕ ಕುಪಿತಳಾದ ಸೀತೆ ಬಿರುನುಡಿಗಳ– ನ್ನಾಡಿದಳು– ಸೌಮಿತ್ರಿಯೆ! ಈ ದುರವಸ್ಥೆಯಲ್ಲಿಯೂ ಅಣ್ಣನ ಬಳಿಗೆ ಹೋಗು– ತ್ತಿಲ್ಲವೇಕೆ ?

ರಾಮನ ವಿನಾಶವನ್ನೇ ನಿನ್ನ ಮನಸ್ಸು ನನ್ನ ಸೆಳೆತದಿಂದ ಬಯಸುತ್ತಿರಬೇಕು. ಅದಕ್ಕೇ ನನ್ನನ್ನು ಬಿಟ್ಟು ರಾಮನ ರಕ್ಷಣೆಗೆ ಧಾವಿಸುತ್ತಿಲ್ಲ ! ರಾಮನ ಕೆಡುಕೇ ನಿನಗೆ ಪ್ರಿಯವಾಗಿದೆಯೆಂದು ತೋರುತ್ತದೆ. ಅವನ ಮೇಲೆ ನಿನಗೆ ಸ್ನೇಹವಿಲ್ಲ. ನನ್ನನ್ನು ಭೋಗಿಸುವ ತವಕದಿಂದ ರಾಮನಿಗೆ ಒದಗಿ ಬಂದ ಆಪತ್ತೂ ನಿನ್ನನ್ನು ವಿಚಲಿತ– ಗೊಳಿಸುತ್ತಿಲ್ಲ''

ಹೆಣ್ಣು ಜಿಂಕೆಯಂತೆ ಹೆದರಿದ ಶೋಕದ ಕಣ್ಣೀರು ಸುರಿಸುತ್ತಿರುವ ಸೀತೆಯನ್ನು ಕುರಿತು ಲಕ್ಷ್ಮಣ ಹೇಳಿದನು – ಹಾವು, ಅಸುರ, ಗಂಧರ್ವ, ದೇವ, ಮಾನುಷ, ರಾಕ್ಷಸರು ಯಾರಿಂದಲೂ ರಾಮನನ್ನು ಗೆಲ್ಲಲು ಶಕ್ಯವಿಲ್ಲ.

ಸಮರದಲ್ಲಿ ರಾಮನ ಮುಂದೆ ಕಾದಾಡುವ ಅದಟು ದೇವ – ಮನುಷ್ಯ – ಗಂಧರ್ವ –ಪಕ್ಷಿ – ರಾಕ್ಷಸ – ಪಿಚಾಚ – ಕಿನ್ನರ, ಮೃಗ – ಘೋರದಾನವರಲ್ಲಿ ಯಾರಿಗೂ ಇಲ್ಲ.

ಯುದ್ಧದಲ್ಲಿ ಅವಧ್ಯನಾದ ರಾಮನ ಬಗ್ಗೆ ಇಂಥ ಆತಂಕದ ಮಾತುಗಳು ಸಲ್ಲದು. ರಾಮನಿಲ್ಲದಿರುವಾಗ ನಿನ್ನನ್ನು ಏಕಾಂಗಿಯಾಗಿ ಬಿಟ್ಟುಹೋಗಲಾರೆ. ಯಾವ ಬಲಿಷ್ಠರಿಂದಲೂ ನಿವಾರಿಸಲಾಗದ ಬಲಶಾಲಿ ರಾಮ. ಆರಾಮವಾಗಿರು, ಆತಂಕಬೇಡ. ಜಿಂಕೆಯನ್ನು ಕೊಂದು ಬರುತ್ತಾನೆ ಶೀಘ್ರದಲ್ಲಿ ನಿನ್ನ ರಾಮ. ಈ ಆರ್ತನಾದ ಮಾಯಾವಿ ರಕ್ಕಸನ ತಾಮಸಮಾಯೆಯಷ್ಟೆ. ಖರನ ಸಂಹಾರದಿಂದ ಈ ಪರಿಸರದ ಎಲ್ಲ ರಕ್ಕಸರು ನಮ್ಮ ವೈರಿಗಳಾಗಿದ್ದಾರೆ. ಹಿಂಸಾವಿಹಾರರಾದ ಅಂತಹ ವೈರಿ ರಕ್ಕಸರ ಉಪದ್ವ್ಯಾಪಗಳು ಇವು''.

ಲಕ್ಷ್ಮಣನ ಸಮಾಧಾನದ ಮಾತ್ತಿನಿಂದ ಸೀತೆ ಕೆರಳಿ ಕೆಂಡವಾದಳು –''ನೃಶಂಸ ! ಅನಾರ್ಯ ! ಅಕರುಣ ! ಕುಲಕಲಂಕ ! ಲಕ್ಷ್ಮಣ ! ರಾಮನ ದುಃಖ ನಿನಗಿಷ್ಟವೇ ಆಗಿದೆ. ನನ್ನ ಮೇಲಿನ ಮೋಹದಿಂದ ಇಂಥ ಕೆಟ್ಟ ನಡೆ ತೋರುತ್ತಿರುವೆ. ಭರತನೇ ರಾಮನ ಕಥೆ ಮುಗಿಸಲು ಕಳಿಹಿಸಿರುವ ಗೂಢ ಶತ್ರುವೇ ನೀನು ?

ಕೇಳು ಲಕ್ಷ್ಮಣ ! ನಾನೆಂದು ನಿನ್ನ ವಶಳಾಗಲಾರೆ. ಇಂದೀವರ ಶ್ಯಾಮನು ಪುಂಡರೀಕಾಕ್ಷನು ಆಗಿರುವ ರಾಮನಿರುವಾಗ ಬೇರೆ ಕ್ಷುದ್ರಜನರನ್ನು ಹೇಗೆ ಬಯಸಿಯೇನು ? ನಿನ್ನೆದುರಿಗೆ ಪ್ರಾಣ ಬಿಟ್ಟೇನು. ರಾಮನಿಲ್ಲದೆ ಬದುಕಲಾರೆ'' – ಎಂದಳು.

ಸೀತೆಯ ಮರ್ಮಭೇದಿ ಕ್ರೂರವಚನಗಳನ್ನು ಕೇಳಿ ಲಕ್ಷ್ಮಣನ ರೋಮ ನಿಮಿರಿ ನಿಂತಿತು.

ಹೇಳಿದ – ಅಮ್ಮ ! ನನಗೆ ನೀನು ಆರಾಧ್ಯ ದೇವತೆ. ಇಂಥ ಮಾತುಗಳನ್ನು ಕೇಳಲಾರೆ.

ಹೆಂಗಳೆಯರ ಸ್ವಭಾವವೇ ಹೀಗೆ – ಚಪಲರು. ಚುಚ್ಚುವ ಮಾತಿನವರು. ದಯಾದಾಕ್ಷಿಣ್ಯವಿರದವರು, ಸಹೋದರರಲ್ಲಿ ಒಡಕು ಮೂಡಿಸುವವರು. ವೈದೇಹಿ ! ಜನಕನಂದಿನಿ ! ನಿನ್ನ ಮಾತುಗಳು ಕಿವಿಗಳಲ್ಲಿ ಕಾದ ನಾರಾಚ ಚುಚ್ಚಿದಂತೆ ಇವೆ. ಇಂಥ ಮಾತುಗಳನ್ನು ದಯವಿಟ್ಟು ಆಡಬೇಡಿ.

ಎಲ್ಲ ವನೇಚರರು ನನ್ನ ನ್ಯಾಯ ಸಮ್ಮತ ಮಾತಿಗೆ ಸಾಕ್ಷಿ. ನನ್ನನ್ನು ಅನುಮಾನಿಸುತ್ತಿರುವ ನಿಮಗೆ ಧಿಕ್ಕಾರವಿರಲಿ. ಹೆಣ್ಣಿನ ಸ್ವಭಾವಕ್ಕೆ ಸರಿಯಾಗಿದೆ ಈ ದುರಾಲೋಚನೆಯ ದುಷ್ಟತನ. ನಿಮಗೆ ಮಂಗಲವಾಗಲಿ. ರಾಮನೆಡೆ ಸಾಗುತ್ತೇನೆ.

ಘೋರ ನಿಮಿತ್ತಗಳು ಅಶುಭ ಸೂಚಕಗಳಾಗಿ ಕಾಣುತ್ತಿವೆ. ವನದೇವತೆಗಳು ನಿಮ್ಮನ್ನು ಕಾಪಾಡಲಿ. ರಾಮನೊಂದಿಗೇ ಬಂದು ನಿಮ್ಮನ್ನು ಕಾಣುತ್ತೇನೆ''.

ಲಕ್ಷ್ಮಣನ ಮಾತಿಗೆ ಸೀತೆಯ ಪ್ರತಿಕ್ರಿಯೆ –ಲಕ್ಷ್ಮಣ ! ರಾಮನು ದೊರೆಯದಿದ್ದರೆ ಗೋದಾವರಿಯಲ್ಲಿ ಬೀಳುತ್ತೇನೆ. ಅಥವಾ ನೇಣುಹಾಕಿಕೊಳ್ಳುತ್ತೇನೆ. ಬೆಟ್ಟದ ದುರ್ಗಮ ಶಿಖರದಿಂದ ಹಾರಿ ಬೀಳುತ್ತೇನೆ. ವಿಷವನ್ನು ಕುಡಿಯುತ್ತೇನೆ ಅಥವಾ ಅಗ್ನಿ ಪ್ರವೇಶ ಮಾಡುತ್ತೇನೆ ಹೊರತು ರಾಮನನ್ನು ಬಿಟ್ಟು ಬೇರೆ ಪುರುಷನನ್ನು ಕಾಲಿನಿಂದಲೂ ಮುಟ್ಟಲಾರೆ.

ಹೀಗೆ ಆಕ್ರಂದನ ಮಾಡುತ್ತ ಎರಡೂ ಕೈಗಳಿಂದ ಎದೆ ಎದೆ ಬಡಿದುಕೊಂಡಳು.

ಲಕ್ಷ್ಮಣ ಅವಳನ್ನು ಸಮಾಧಾನ ಪಡಿಸಿದನು – ಸಾಂತ್ವವಚನಗಳಿಂದ ಮನಸಾರೆ. ಸೀತೆ ಮಾತಾಡಲಿಲ್ಲ. ಲಕ್ಷ್ಮಣ ಸೀತೆಗೆ ನಮಸ್ಕಾರ ಮಾಡಿ ರಾಮನ ಸಮೀಪಕ್ಕೆ ಹೊರಟ – ಹಿಂತಿರುಗಿ ಹಿಂತಿರುಗಿ ಸೀತೆಯನ್ನು ನೋಡುತ್ತ.

❖

ಸೀತಾಪಾರುಷ್ಯಮ್

ಆರ್ತಸ್ವರಂ ತು ತಂ ಭರ್ತುರ್ವಿಜ್ಞಾಯ ಸದೃಶಂ ವನೇ ।
ಉವಾಚ ಲಕ್ಷ್ಮಣಂ ಸೀತಾ ಗಚ್ಛ ಜಾನೀಹಿ ರಾಘವಮ್ ॥೧॥

ನ ಹಿ ಮೇ ಹೃದಯಂ ಸ್ಥಾನೇ ಜೀವಿತಂ ವಾವತಿಷ್ಠತೇ ।
ಕ್ರೋಶತಃ ಪರಮಾರ್ತಸ್ಯ ಶ್ರುತಃ ಶಬ್ದೋ ಮಯಾ ಭೃಶಮ್ ॥೨॥

ಆಕ್ರಂದಮಾನಂ ತು ವನೇ ಭ್ರಾತರಂ ತ್ರಾತುಮರ್ಹಸಿ ।
ತಂ ಕ್ಷಿಪ್ರಮಭಿಧಾವ ತ್ವಂ ಭ್ರಾತರಂ ಶರಣೈಷಿಣಮ್ ॥೩॥

ರಕ್ಷಸಾಂ ವಶಮಾಪನ್ನಂ ಸಿಂಹಾನಾಮಿವ ಗೋವೃಷಮ್ ।

ಕಾಡಿನಲ್ಲಿ, ತನ್ನ ಪತಿಯದೇ ಆರ್ತಸ್ವರವೆಂದು ತಿಳಿದು ಸೀತೆಯು ಲಕ್ಷ್ಮಣನಿಗೆ –'ಹೋಗು, ರಾಮನ ಸಮಾಚಾರವನ್ನು ತಿಳಿ' – ಎಂದು ಹೇಳಿದಳು.

ಪರಮಾರ್ತನಾಗಿ ಕೂಗಿದ ಆ ಶಬ್ದವನ್ನು ನಾನು ಚೆನ್ನಾಗಿ ಕೇಳಿಸಿಕೊಂಡಿದ್ದೇನೆ. ನನ್ನ ಹೃದಯ ಕಳವಳಗೊಂಡಿದೆ. ವನದಲ್ಲಿ ಆಕ್ರಂದನ ಮಾಡುತ್ತಿರುವ ಅಣ್ಣನನ್ನು ರಕ್ಷಣೆ ಮಾಡು. ಆಸರೆಯನ್ನು ಬಯಸುತ್ತಿರುವ ಅಣ್ಣನ ಬಳಿಗೆ ಶೀಘ್ರ ಓಡಿ ಹೋಗು. ಸಿಂಹದ ಕೈಗೆ ಸಿಕ್ಕ ಗೂಳಿಯಂತಾಗಿದೆ ರಾಮನ ಸ್ಥಿತಿ !

ನ ಜಗಾಮ ತಥೋಕ್ತಸ್ತು ಭ್ರಾತುರಾಜ್ಞಾಯ ಶಾಸನಮ್ ॥೪॥

ತಮುವಾಚ ತತಸ್ತತ್ರ ಕುಪಿತಾ ಜನಕಾತ್ಮಜಾ ।
ಸೌಮಿತ್ರೇ ಮಿತ್ರರೂಪೇಣ ಭ್ರಾತುಸ್ತ್ವಮಸಿ ಶತ್ರುವತ್ ॥೫॥

ಯಸ್ತ್ವಮಸ್ಯಾಮವಸ್ಥಾಯಾಂ ಭ್ರಾತರಂ ನಾಭಿಪದ್ಯಸೇ ।
ಇಚ್ಛಸಿ ತ್ವಂ ವಿನಶ್ಯಂತಂ ರಾಮಂ ಲಕ್ಷ್ಮಣ ಮತ್ಕೃತೇ ॥೬॥

ಲೋಭಾನ್ಮಮ ಕೃತೇ ನೂನಂ ನಾನುಗಚ್ಛಸಿ ರಾಘವಮ್ ।
ವ್ಯಸನಂ ತೇ ಪ್ರಿಯಂ ಮನ್ಯೇ ಸ್ನೇಹೋ ಭ್ರಾತರಿ ನಾಸ್ತಿ ತೇ ॥೭॥

ತೇನ ತಿಷ್ಠಸಿ ವಿಸ್ರಬ್ಧಸ್ತಮಪಶ್ಯನ್ ಮಹಾದ್ಯುತಿಮ್ ।
ಕಿಂ ಹಿ ಸಂಶಯಮಾಪನ್ನೇ ತಸ್ಮಿನ್ನಿಹ ಮಯಾ ಭವೇತ್ ॥೮॥

ಕರ್ತವ್ಯಮಿಹ ತಿಷ್ಠಂತ್ಯಾ ಯತ್ತ್ವಧಾನಸ್ತ ್ವಮಾಗತಃ ।
ಇತಿ ಬ್ರುವಾಣಾಂ ವೈದೇಹೀಂ ಬಾಷ್ಪಶೋಕಪರಿಪ್ಲುತಾಮ್ ।
ಅಬ್ರವೀಲ್ಲಕ್ಷ್ಮಣಸ್ತ್ರಸ್ತಾಂ ಸೀತಾಂ ಮೃಗವಧೂಮಿವ ॥ ೯ ॥

ಹೀಗೆ ಹೇಳಲ್ಪಟ್ಟರೂ ಲಕ್ಷ್ಮಣ 'ಸೀತೆಯನ್ನು ರಕ್ಷಣೆ ಮಾಡು' ಎಂಬ ಅಣ್ಣನ ಆಣತಿಯನ್ನು ತಿಳಿದು ಹೊರಡಲಿಲ್ಲ. ಅದರಿಂದ ಕುಪಿತಳಾಗಿ ಜಾನಕಿ ಗದರಿದಳು.

ಸೌಮಿತ್ರಿ ! ಅಣ್ಣನಿಗೆ ಮಿತ್ರರೂಪದಿಂದ ಇರುವ ಶತ್ರುವು ನೀನಾಗಿರುವಿ. ಇಂಥ ಆಪತ್ತಿನ ಸ್ಥಿತಿಯಲ್ಲಿಯೂ ಅಣ್ಣನೆಡೆಗೆ ಹೋಗುತ್ತಿಲ್ಲ !

ಲಕ್ಷ್ಮಣ ! ನನ್ನನ್ನು ಪರಿಗ್ರಹಿಸುವ ಸಲುವಾಗಿಯೇ ರಾಮ ನಾಶವಾಗುವುದನ್ನು ಬಯಸುತ್ತಿರುವಿ. ನನ್ನ ಮೇಲಿನ ಆಸೆಯಿಂದಲೇ ರಾಘವನೆಡೆಗೆ ಹೋಗುತ್ತಿಲ್ಲ.

ಅಣ್ಣನಿಗೆ ಆಪತ್ತು ಒದಗಿರುವುದೇ ನಿನಗೆ ಇಷ್ಟವಾಗಿದೆ. ನಿನಗೆ ಅಣ್ಣನ ಮೇಲೆ ಸ್ನೇಹವಿಲ್ಲ. ತೇಜಸ್ವಿರಾಮನನ್ನು ನೋಡದೆ ನೀನು ನಿಶ್ಚಿಂತನಾಗಿರುವುದಕ್ಕೆ ಇದೇ ಕಾರಣವಾಗಿದೆ.

ರಾಮನ ಸೇವೆಗೆಂದೇ ಪ್ರಧಾನವಾಗಿ ಬಂದಿರುವ ನೀನು ಅವನು ಸಂಕಟಕ್ಕೆ ಸಿಲುಕಿರುವಾಗ ಇಲ್ಲಿ ನಿಂತು ನನ್ನನ್ನು ಕಾಪಾಡುವುದರಲ್ಲಿ ಏನು ಪ್ರಯೋಜನವಿದೆ ?

ಬಾಷ್ಪ ಶೋಕಗಳಲ್ಲಿ ಮುಳುಗಿ ಹೋಗಿ ಸೀತೆ ಹೀಗೆ ಹೇಳಿದಾಗ ಹೆಣ್ಣು ಜಿಂಕೆಯಂತೆ ಹೆದರಿದ ಸೀತೆಯನ್ನು ಕುರಿತು ಲಕ್ಷ್ಮಣ ಹೇಳಿದನು –

ಪನ್ನಗಾಸುರಗಂಧರ್ವದೇವಮಾನುಷರಾಕ್ಷಸೈಃ ॥೧೦॥

ಅಶಕ್ಯಸ್ತವ ವೈದೇಹಿ ಭರ್ತಾ ಜೇತುಂ ನ ಸಂಶಯಃ ।
ದೇವಿ ದೇವಮನುಷ್ಯೇಷು ಗಂಧರ್ವೇಷು ಪತತ್ರಿಷು ॥೧೧॥

ರಾಕ್ಷಸೇಷು ಪಿಶಾಚೇಷು ಕಿಂನರೇಷು ಮೃಗೇಷು ಚ ।
ದಾನವೇಷು ಚ ಘೋರೇಷು ನ ಸ ವಿದ್ಯೇತ ಶೋಭನೇ ॥೧೨॥

ಯೋ ರಾಮಂ ಪ್ರತಿಯುಧ್ಯೇತ ಸಮರೇ ವಾಸವೋಪಮಮ್ ।
ಅವಧ್ಯಃ ಸಮರೇ ರಾಮೋ ನೈವ ತ್ವಂ ವಕ್ತುಮರ್ಹಸಿ ॥೧೩॥

ನ ತ್ವಾಮಸ್ಮಿನ್ ವನೇ ಹಾತುಮುತ್ಸಹೇ ರಾಘವಂ ವಿನಾ ।
ಅನಿವಾರ್ಯಂ ಬಲಂ ತಸ್ಯ ಬಲೈರ್ಬಲವತಾಮಪಿ ॥೧೪॥

ತ್ರಿಭಿರ್ಲೋಕೈಃ ಸಮುದ್ಯುಕ್ತೈಃ ಸೇಶ್ವರೈರಪಿ ಸಾಮರೈಃ ।
ಹೃದಯಂ ನಿರ್ವೃತಂ ತೇಽಸ್ತು ಸಂತಾಪಸ್ಯ್ಯಜ್ಯತಾಮಯಮ್ ॥೧೫॥

ಆಗಮಿಷ್ಯತಿ ತೇ ಭರ್ತಾ ಶೀಘ್ರಂ ಹತ್ವಾ ಮೃಗೋತ್ತಮಮ್ ।
ನ ಚ ತಸ್ಯ ಸ್ವರೋ ವ್ಯಕ್ತಂ ಮಾಯಯಾ ಕೇನಚಿತ್ಕೃತಃ ॥೧೬॥

ಗಂಧರ್ವನಗರಪ್ರಖ್ಯಾ ಮಾಯಾ ಸಾ ತಸ್ಯ ರಕ್ಷಸಃ ।
ನ್ಯಾಸಭೂತಾಸಿ ವೈದೇಹಿ ನ್ಯಸ್ತಾ ಮಯಿ ಮಹಾತ್ಮನಾ ॥೧೭॥

ರಾಮೇಣ ತ್ವಂ ವರಾರೋಹೇ ನ ತ್ವಾಂ ತ್ಯಕ್ತುಮಿಹೋತ್ಸಹೇ ।
ಕೃತವೈರಾಶ್ಚ ಕಲ್ಯಾಣಿ ವಯಮೇತೈರ್ನಿಶಾಚರೈಃ ॥೧೮॥

ಖರಸ್ಯ ನಿಧನಾದೇವ ಜನಸ್ಥಾನವಧಂ ಪ್ರತಿ ।
ರಾಕ್ಷಸಾ ವಿವಿಧಾ ವಾಚೋ ವಿಸೃಂಜತಿ ಮಹಾವನೇ ॥೧೯॥

ಹಿಂಸಾವಿಹಾರಾ ವೈದೇಹಿ ನ ಚಿಂತಯಿತುಮರ್ಹಸಿ ।

ವೈದೇಹಿ ! ಪನ್ನಗ = ಸರ್ಪ, ಅಸುರ, ಗಂಧರ್ವ, ದೇವ, ಮಾನುಷ, ರಾಕ್ಷಸರು ಇವರಾರಿಂದಲೂ ರಾಮನನ್ನು ಸೋಲಿಸಲು ಶಕ್ಯವಿಲ್ಲ. ಇದರಲ್ಲಿ ಸಂಶಯವೇ ಇಲ್ಲ.

ಶೋಭನೆ ! ದೇವಿ ! ಇಂದ್ರನಂತೆ ಮಹಾಸಮರ್ಥನಾದ ರಾಮನೊಂದಿಗೆ ಯುದ್ಧ ಮಾಡುವಂತಹವರು ದೇವ, ಮನುಷ್ಯರಲ್ಲಿ, ಗಂಧರ್ವರಲ್ಲಿ, ಪಕ್ಷಿಗಳಲ್ಲಿ, ರಾಕ್ಷಸಗಳಲ್ಲಿ, ಪಿಶಾಚರಲ್ಲಿ, ಕಿನ್ನರರಲ್ಲಿ, ಮೃಗಗಳಲ್ಲಿ, ಘೋರ ದಾನವರಲ್ಲಿ ಯಾರೂ ಇಲ್ಲ !

ರಾಮನು ಸಮರದಲ್ಲಿ ಅವಧ್ಯನು. ಅವನ ಬಗ್ಗೆ ಇಂತಹ ಆತಂಕದ ಮಾತ-ನಾಡುವುದು ಸಲ್ಲ. ರಾಮನಿಲ್ಲದಿರುವಾಗ ಈ ಕಾಡಿನಲ್ಲಿ ನಿನ್ನೊಬ್ಬಳನ್ನೆ ಬಿಡಲಾರೆನು.

ಬಲಿಷ್ಠರಾಜರ ಪ್ರಬಲ ಸೈನ್ಯವೂ ರಾಮನ ಬಲವನ್ನು ಕುಂಠಿತಗೊಳಿಸಲಾರದು – ಅಮರರಿಂದೊಡಗೂಡಿದ ಬ್ರಹ್ಮಾದಿ ಒಡೆಯರು ಒಟ್ಟಾಗಿ ಬಂದರೂ ರಾಮನನ್ನು ತಡೆಯಲಾಗದು. ಆದ್ದರಿಂದ ನಿನ್ನ ಹೃದಯವು ಶಾಂತವಾಗಿರಲಿ. ಈ ಸಂತಾಪವನ್ನು ಬಿಟ್ಟು ಬಿಡು.

ಮಾಯಾಮೃಗವನ್ನು ಕೊಂದು ನಿನ್ನ ಸ್ವಾಮಿ ಕೂಡಲೆ ಬರುತ್ತಾನೆ.

ಈ ಆರ್ತಸ್ವರ ನಿಶ್ಚಿತವಾಗಿ ರಾಮನದಲ್ಲ. ಯಾರೋ ರಕ್ಕಸರು ನಡೆಸಿದ ಮಾಯೆ. ಗಂಧರ್ವ ನಗರದಂತೆ ಆ ರಕ್ಕಸನ ಮಾಯೆ !

ಸುಂದರಿ ! ವೈದೇಹಿ ! ಮಹಾತ್ಮ ರಾಮನು ನಿನ್ನನ್ನು ರಕ್ಷಿಸುವ ಹೊಣೆ ನನಗಿತ್ತು ನಿನ್ನನ್ನು ನನ್ನಲ್ಲಿ ನ್ಯಾಸವಾಗಿಟ್ಟಿದ್ದಾನೆ. ಆದ್ದರಿಂದ ನಾನು ನಿನ್ನನ್ನು ಒಬ್ಬಂಟಿಗಳನ್ನಾಗಿ ಬಿಟ್ಟು ಹೋಗಲಾರೆ.

ವೈದೇಹಿ ! ಖರನ ಸಂಹಾರದ ನಿಮಿತ್ತವಾಗಿ ಈ ಜನಸ್ಥಾನದ ವಧೆಗಾಗಿ ರಕ್ಕಸರು ನಮ್ಮ ವೈರಿಗಳಾಗಿದ್ದಾರೆ. ಹಿಂಸಾ ವಿಹಾರರಾದ ಆ ರಕ್ಕಸರು ಈ ಮಹಾವನದಲ್ಲಿ ಮನ ಬಂದಂತೆ ಮಾತಾಡುತ್ತಿರುತ್ತಾರೆ. ಅದಕ್ಕೆಲ್ಲ ನೀನು ಚಿಂತಿಸದಿರು.

ಲಕ್ಷ್ಮಣೇನೈವಮುಕ್ತಾ ಸಾ ಕ್ರುದ್ಧಾ ಸಂರಕ್ತಲೋಚನಾ ॥೨೦॥

ಅಬ್ರವೀತ್ಪರುಷಂ ವಾಕ್ಯಂ ಲಕ್ಷ್ಮಣಂ ಸತ್ಯವಾದಿನಮ್।
ಅನಾರ್ಯಾಕರುಣಾರಂಭ ನೃಶಂಸ ಕುಲಪಾಂಸನ ॥೨೧॥

ಅಹಂ ತವ ಪ್ರಿಯಂ ಮನ್ಯೇ ರಾಮಸ್ಯ ವ್ಯಸನಂ ಮಹತ್ ।
ರಾಮಸ್ಯ ವ್ಯಸನಂ ದೃಷ್ಟ್ವಾ ತೇನೈತಾನಿ ಪ್ರಭಾಷಸೇ ॥೨೨॥

ನೈತಚ್ಚಿತ್ರಂ ಸಪತ್ನೇಷು ಪಾಪಂ ಲಕ್ಷ್ಮಣ ಯದ್ಭವೇತ್ ।
ತ್ವದ್ವಿಧೇಷು ನೃಶಂಸೇಷು ನಿತ್ಯಂ ಪ್ರಚ್ಛನ್ನಚಾರಿಷು ॥೨೩॥

ಸುದುಷ್ಟಸ್ತ್ವಂ ವನೇ ರಾಮಮೇಕಮೇಕೋऽನುಗಚ್ಛಸಿ ।
ಮಮ ಹೇತೋಃ ಪ್ರತಿಚ್ಛನ್ನಃ ಪ್ರಯುಕ್ತೋ ಭರತೇನ ವಾ ॥೨೪॥

ತನ್ನ ಸಿಧ್ಯತಿ ಸೌಮಿತ್ರೇ ತವ ವಾ ಭರತಸ್ಯ ವಾ ।
ಕಥಮಿಂದೀವರಶ್ಯಾಮಂ ಪದ್ಮಪತ್ರನಿಭೇಕ್ಷಣಮ್ ॥೨೫॥

ಉಪಸಂಶ್ರಿತ್ಯ ಭರ್ತಾರಂ ಕಾಮಯೇಯಂ ಪೃಥಗ್ಜನಮ್ ।
ಸಮಕ್ಷಂ ತವ ಸೌಮಿತ್ರೇ ಪ್ರಾಣಾಂಸ್ಯಕ್ಷ್ಯೇ ನ ಸಂಶಯಃ ।
ರಾಮಂ ವಿನಾ ಕ್ಷಣಮಪಿ ನ ಹಿ ಜೀವಾಮಿ ಭೂತಲೇ ॥೨೬॥

ಲಕ್ಷ್ಮಣನಿಂದ ಹೀಗೆ ಹೇಳಲ್ಪಟ್ಟ ಆ ಸೀತೆಯು ಕೋಪದಿಂದ ಕೆಂಗಣ್ಣಿನವಳಾದಳು. ಸತ್ಯವಾದಿ ಲಕ್ಷ್ಮಣನಿಗೆ ಹೀಗೆ ಕಠೋರವಚನವನ್ನಾಡಿದಳು- ಅನಾರ್ಯನೇ ! ಕರುಣೆಯ ಪ್ರಸಕ್ತಿಯೇ ಇಲ್ಲದ ಕ್ರೂರಿ ಕುಲಗೇಡಿಯೇ ! ರಾಮನಿಗೆ ಒದಗಿರುವ ಮಹಾದುಃಖ ನಿನಗೆ ಪ್ರಿಯವಾಗಿದೆಯೆಂದು ಭಾವಿಸುತ್ತೇನೆ. ಆದ್ದರಿಂದಲೆ ರಾಮನ ಸಂಕಟವನ್ನು ತಿಳಿದೂ ಹೀಗೆ ಮಾತನಾಡುತ್ತಿರುವಿ.

ಲಕ್ಷ್ಮಣ ! (ಗುಪ್ತಚರರಾದ ನಿನ್ನಂತಹ ಕ್ರೂರಿ) ಶತ್ರುಗಳಲ್ಲಿ ಇಂಥ ನಡೆ ಅಚ್ಚರಿಯೇನಲ್ಲ.

ನೀನು ಅತ್ಯಂತ ದುಷ್ಟನಾಗಿರುವಿ. ನನ್ನನ್ನು ಪಡೆಯುವುದಕ್ಕಾಗಿಯೆ ನೀನೊಬ್ಬನೇ ರಾಮನ ಹಿಂದೆ ಹಿಂಬಾಲಿಸಿಕೊಂಡು ಬರುತ್ತಿರುವಿ. ಅಥವಾ ಭರತನೇ ಕಳುಹಿಸಿರುವನೇನೋ?

ಸೌಮಿತ್ರಿಯೇ ! ನಿನ್ನ ಅಥವಾ ಭರತನ ಉದ್ದೇಶ ನೆರವೇರುವುದಿಲ್ಲ. ಇಂದೀವರಶ್ಯಾಮನು, ತಾವರೆಯ ಕಣ್ಣವನು ಆದ ಶ್ರೀರಾಮನನ್ನು ಗಂಡನನ್ನಾಗಿ ಪಡೆದಾಶ್ರಯಿಸಿದ ಮೇಲೆ ಬೇರಾರನ್ನೆ ಆಗಲಿ ಹೇಗೆ ತಾನೆ ಬಯಸಿಯೇನು ?

ಸೌಮಿತ್ರಿಯೆ ! ನಿನ್ನೆದುರಿಗೇ ಪ್ರಾಣ ಬಿಡುತ್ತೇನೆ. ಸಂಶಯವಿಲ್ಲ, ರಾಮನಿಲ್ಲದೆ ಈ ಭೂಮಿಯ ಮೇಲೆ ಬದುಕಿರಲಾರೆ.

ಇತ್ಯುಕ್ತಃ ಪರುಷಂ ವಾಕ್ಯಂ ಸೀತಯಾ ರೋಮಹರ್ಷಣಮ್ ॥೨೭॥

ಅಬ್ರವೀಲ್ಲಕ್ಷ್ಮಣಃ ಸೀತಾಂ ಪ್ರಾಂಜಲಿರ್ವಿಜಿತೇಂದ್ರಿಯಃ ।
ಉತ್ತರಂ ನೋತ್ಸಹೇ ವಕ್ತುಂ ದೈವತಂ ಭವತೀ ಮಮ ॥೨೮॥

ವಾಕ್ಯಮಪ್ರತಿರೂಪಂ ತು ನ ಚಿತ್ರಂ ಸ್ತ್ರೀಷು ಮೈಥಿಲಿ ।
ಸ್ವಭಾವಸ್ತ್ವೇಷ ನಾರೀಣಾಮೇವಂ ಲೋಕೇಷು ದೃಶ್ಯತೇ ॥೨೯॥

ವಿಮುಕ್ತಧರ್ಮಾಶ್ಚಪಲಾಸ್ತೀಕ್ಷ್ಣಾ ಭೇದಕರಾಃ ಸ್ತ್ರಿಯಃ ।
ನ ಸಹೇ ಹೀದೃಶಂ ವಾಕ್ಯಂ ವೈದೇಹಿ ಜನಕಾತ್ಮಜೇ ॥೩೦॥

ಶ್ರೋತ್ರಯೋರುಭಯೋರ್ಮೇऽದ್ಯ ತಪ್ತನಾರಾಚಸಂನಿಭಮ್ ।
ಉಪಶೃಣ್ವಂತು ಮೇ ಸರ್ವೇ ಸಾಕ್ಷಿಭೂತಾ ವನೇಚರಾಃ ॥೩೧॥

ನ್ಯಾಯವಾದೀ ಯಥಾऽನ್ಯಾಯಮುಕ್ತೋऽಹಂ ಪರುಷಂ ತ್ವಯಾ ।
ಧಿಕ್ತಾ ತ್ವಮದ್ಯ ಪ್ರಣಶ್ಯ ತ್ವಂ ಯನ್ಮಾಮೇವಂ ವಿಶಂಕಸೇ ॥೩೨॥

ಸ್ತ್ರೀತ್ವಾತ್ ದುಷ್ಟಸ್ವಭಾವೇನ ಗುರುವಾಕ್ಯೇ ವ್ಯವಸ್ಥಿತಮ್ ।
ಗಮಿಷ್ಯೇ ಯತ್ರ ಕಾಕುತ್ಸ್ಥಃ ಸ್ವಸ್ತಿ ತೇऽಸ್ತು ವರಾನನೇ ॥೩೩॥

ರಕ್ಷಂತು ತ್ವಾಂ ವಿಶಾಲಾಕ್ಷಿ ಸಮಗ್ರಾ ವನದೇವತಾಃ ।
ನಿಮಿತ್ತಾನಿ ಹಿ ಘೋರಾಣಿ ಯಾನಿ ಪ್ರಾದುರ್ಭವಂತಿ ಮೇ ।
ಅಪಿ ತ್ವಾಂ ಸಹ ರಾಮೇಣ ಪಶ್ಯೇಯಂ ಪುನರಾಗತಃ ॥೩೪॥

ಸೀತೆ ಹೇಳಿದ ಮೈನಿಮಿರೇಳಿಸುವ ಪರುಷ ವಾಕ್ಯವನ್ನು ಕೇಳಿದ ಜಿತೇಂದ್ರಿಯನಾದ ಲಕ್ಷ್ಮಣನು ಕೈಮುಗಿದು ಸೀತೆಗೆ ಹೇಳಿದ – ನೀವು ನನಗೆ ಆರಾಧ್ಯದೇವತೆ. ನಿಮ್ಮ ಮಾತಿಗೆ ಉತ್ತರಿಸಲಾರೆ. ಮೈಥಿಲಿ ! ಅತ್ಯಂತ ಅನುಚಿತವಾದ ಇಂಥ ಮಾತು ಪ್ರಾಕೃತ ಹೆಂಗಸರಲ್ಲಿ ಆಶ್ಚರ್ಯವಲ್ಲ. ಲೋಕದ ಸಾಮಾನ್ಯ ಸ್ತ್ರೀಯರು ವಿನಯಾದಿ ಧರ್ಮವನ್ನು ಬಿಟ್ಟವರು, ಚಪಲೆಯರು ಸಹೋದರರಲ್ಲಿ ಒಡಕುಂಟು ಮಾಡುವವರು. ಇದು ಇಂಥ ಸ್ತ್ರೀಯರ ಸ್ವಭಾವವಾಗಿ ಲೋಕದಲ್ಲಿ ಕಂಡು ಬರುತ್ತದೆ. ವೈದೇಹಿ ! ಜನಕಾತ್ಮಜೆ ! ಎರಡೂ ಕಿವಿಗಳಿಗೆ ಕಾದಬಾಣದಂತೆ ಸಂತಾಪಕಾರಿಯಾದ ಇಂಥ ಮಾತನ್ನು ಇಂದು ತಮ್ಮಿಂದ ಕೇಳಲಾಗುತ್ತಿಲ್ಲ !

ಸಾಕ್ಷಿಯಾದ ವನೇಚರರೆಲ್ಲ ಕೇಳಿಸಿಕೊಳ್ಳಿ. ನ್ಯಾಯವಾದ ಮಾತನ್ನು ಹೇಳಿದ ನಾನು ನಿಮ್ಮಿಂದ ಕಠೋರವಾದ ಮಾತಿಗೆ ವಿಷಯನಾದೆ.

ಅಣ್ಣನ ಆದೇಶದಂತೆ ನಡೆದುಕೊಂಡಿರುವ ನನ್ನನ್ನು ಹೀಗೆ ಸಂಶಯಿಸುವ ನಿಮಗೆ ಧಿಕ್ಕಾರವಿರಲಿ. ಸ್ವಭಾವತಃ ಸ್ತ್ರೀತ್ವವೆ ಹೀಗೆ ದುಷ್ಟವಾಗಿರುತ್ತದೆ .

ವರಾನನೆ ! ರಾಮನಿರುವೆಡೆಗೆ ಹೋಗುತ್ತೇನೆ. ನಿಮಗೆ ಮಂಗಳವಾಗಲಿ. ಎಲ್ಲ ವನದೇವತೆಗಳು ನಿಮ್ಮನ್ನು ಕಾಪಾಡಲಿ.

ನನಗೆ ಘೋರ ನಿಮಿತ್ತಗಳು ಕಾಣುತ್ತವೆ. ಮತ್ತೆ ಬಂದು ರಾಮನೊಂದಿಗೆ ನಿನ್ನನ್ನು ನೋಡುತ್ತೇನೆಯೋ ಇಲ್ಲವೋ ವೈದೇಹಿ ! ಜನಕಾತ್ಮಜೆ ! ನನಗೆ ಗೊತ್ತಿಲ್ಲ !

ಲಕ್ಷ್ಮಣೇನೈವಮುಕ್ತಾ ಸಾ ರುದಂತೀ ಜನಕಾತ್ಮಜಾ ॥೩೫॥

ಪ್ರತ್ಯುವಾಚ ತತೋ ವಾಕ್ಯಂ ತೀವ್ರಂ ಬಾಷ್ಪಪರಿಪ್ಲುತಾ ।
ಗೋದಾವರೀಂ ಪ್ರವೇಕ್ಷ್ಯಾಮಿ ವಿನಾ ರಾಮೇಣ ಲಕ್ಷ್ಮಣ ॥೩೬॥

ಆಬಂಧಿಷ್ಯೇऽಥ ವಾ ತ್ಯಕ್ಷ್ಯೇ ವಿಷಮೇ ದೇಹಮಾತ್ಮನಃ ।
ಪಿಬಾಮ್ಯಹಂ ವಿಷಂ ತೀಕ್ಷ್ಣಂ ಪ್ರವೇಕ್ಷ್ಯಾಮಿ ಹುತಾಶನಮ್ ॥೩೭॥

ನ ತ್ವಹಂ ರಾಘವಾದನ್ಯಂ ಪದಾಪಿ ಪುರುಷಂ ಸ್ಪೃಶೇ ।
ಇತಿ ಲಕ್ಷ್ಮಣಮಾಕ್ರುಶ್ಯ ಸೀತಾ ದುಃಖಸಮನ್ವಿತಾ ॥೩೮॥

ಪಾಣಿಭ್ಯಾಂ ರುದತೀ ದುಃಖಾದುದರಂ ಪ್ರಜಘಾನ ಹ ॥

ತಾಮಾರ್ತರೂಪಾಂ ವಿಮನಾ ರುದಂತೀ
ಸೌಮಿತ್ರಿರಾಲೋಕ್ಯ ವಿಶಾಲನೇತ್ರಾಮ್ ।
ಆಶ್ವಾಸಯಾಮಾಸ ನ ಚೈವ ಭರ್ತುಸ್ತಂ
ಭ್ರಾತರಂ ಕಿಂಚಿದುವಾಚ ಸೀತಾ ॥೩೯॥

ತತಸ್ತು ಸೀತಾಮಭಿವಾದ್ಯ ಲಕ್ಷ್ಮಣಃ
ಕೃತಾಂಜಲಿಃ ಕಿಂಚಿದಭಿಪ್ರಣಮ್ಯ ಚ ।
ಅನ್ವೀಕ್ಷಮಾಣೋ ಬಹುಶಶ್ಚ ಮೈಥಿಲೀಂ
ಜಗಾಮ ರಾಮಸ್ಯ ಸಮೀಪಮಾತ್ಮವಾನ್ ॥೪೦॥

ಲಕ್ಷ್ಮಣನು ಹೀಗೆ ಹೇಳಿದ ಬಳಿಕ ಸೀತೆ ಅಳುತ್ತಾ ಕಣ್ಣೀರಿನಿಂದ ತೊಯ್ದವಳಾಗಿ ತೀವ್ರವಾದ ಮಾತನ್ನು ಆಡಿದಳು. ಲಕ್ಷ್ಮಣ ! ರಾಮನಿರದಿದ್ದರೆ ಗೋದಾವರಿಗೆ ಬೀಳುತ್ತೇನೆ. ಅಥವಾ ನೇಣು ಬಿಗಿದುಕೊಳ್ಳುತ್ತೇನೆ. ವಿಷಮವಾದ ಪ್ರಪಾತಗಳಲ್ಲಿ ಬೀಳುತ್ತೇನೆ. ತೀಕ್ಷ್ಣವಾದ ವಿಷವನ್ನು ಕುಡಿಯುತ್ತೇನೆ. ಅಗ್ನಿ ಪ್ರವೇಶ ಮಾಡುತ್ತೇನೆ. ರಾಮನ ಹೊರತು ಮತ್ತೊಬ್ಬ ಪುರುಷನನ್ನು ಮುಟ್ಟಲಾರೆ. ಹೀಗೆ ಲಕ್ಷ್ಮಣನಿಗೆ ಜೋರಾಗಿ ಆಕ್ರೋಶ ವ್ಯಕ್ತಪಡಿಸಿ ದುಃಖಿತಳಾದ ಸೀತೆ ದುಃಖದಿಂದಾಗಿ ಎರಡೂ ಕೈಗಳಿಂದ ಹೊಟ್ಟೆ ಹೊಡೆದುಕೊಂಡಳು.

ಹೀಗೆ ಆರ್ತರೂಪಳಾದ ಮನನೊಂದು ಅಳುತ್ತಿರುವ ವಿಶಾಲನೇತ್ರೆ ಸೀತೆಯನ್ನು ಆಶ್ವಾಸನಗೊಳಿಸಿದನು ಲಕ್ಷ್ಮಣ. ಮೈದುನನ ಮಾತಿಗೆ ಸೀತೆ ಸ್ವಲ್ಪವೂ ಉತ್ತರಿಸಲಿಲ್ಲ.

ಬಳಿಕ ಶುಧ್ಧಾತ್ಮನಾದ ಲಕ್ಷ್ಮಣ ಸೀತೆಗೆ ನಮಸ್ಕಾರ ಮಾಡಿ ಕೈಮುಗಿದು ಮತ್ತೆ ಸ್ವಲ್ಪ ಬಾಗಿ ನಮಿಸಿ ಅನೇಕ ಬಾರಿ ಮೈಥಿಲಿಯನ್ನು ಹಿಂತಿರುಗಿ ನೋಡುತ್ತ ನೋಡುತ್ತ ರಾಮನ ಬಳಿಗೆ ತೆರಳಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತೈದನೇ ಸರ್ಗ ಮುಗಿಯಿತು.

★

ಷಟ್ಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಸೀತೆಯ ಬಿರುನುಡಿಯಿಂದ ಕುಪಿತನಾದ ಲಕ್ಷ್ಮಣ ಕೂಡಲೆ ರಾಮನೆಡೆಗೆ ತೆರಳಿದನು.

ರಾಮ–ಲಕ್ಷ್ಮಣರಿಬ್ಬರೂ ಇಲ್ಲದ ಇದೇ ಸಂದರ್ಭದಲ್ಲಿ ಸನ್ಯಾಸಿ ವೇಷ ತೊಟ್ಟ ದುಷ್ಟ ರಾವಣ ಆಶ್ರಮದ ಬಳಿ ಬಂದ. ಸೀತೆಯನ್ನು ಕಂಡು ಮನ್ಮಥನ ಬಾಧೆಗೆ ಒಳಗಾದ ನೀಚ ಕಾಮುಕ ರಾವಣ ಸೀತೆಯ ಸರ್ವಾಂಗ ಸೌಂದರ್ಯವನ್ನು ದಿಟ್ಟಿಸಿ ನೋಡುತ್ತ ವರ್ಣನೆ ಮಾಡಿದ.

'ದೇವ ಗಂಧರ್ವ ಯಕ್ಷ ಕಿನ್ನರರಲ್ಲಿ ಇಂಥ ಸುಂದರಿಯನ್ನು ಈ ಮುಂಚೆ ಎಂದೂ ನೋಡಿಲ್ಲ. ಭವ್ಯ ಪ್ರಾಸಾದಗಳ ಮಹಲಿನಲ್ಲಿರಬೇಕಾದ ನೀನು ಉತ್ತಮ ಮಾಲೆ, ಭಕ್ಷ, ವಸ್ತ್ರ ಆಲಂಕಾರಗಳನ್ನು ಹೊಂದಿರಬೇಕಾದ ನೀನು ಈ ಘೋರ ಕಾಡಿನಲ್ಲಿ ಏಕಿರುವಿ ? ನಿನ್ನ ಸತಿಯಾಗಿ ಪಡೆದವನು ಅದೃಷ್ಟವಂತ.

ದೇವ ಗಂಧರ್ವ ಕಿನ್ನರರಾರು ಸುಳಿಯದ ರಾಕ್ಷಸರ ವಾಸಸ್ಥಾನ ಈ ವನಪ್ರದೇಶ. ನೀ ಹೇಗೆ ಇಲ್ಲಿರುವಿ ? ಈ ಕಗ್ಗಾಡು ವಾನರ ಸಿಂಹ ಹುಲಿ ಆನೆ ಕರಡಿ ಮುಂತಾದ ಭಯಂಕರ ಪ್ರಾಣಿಗಳ ಬೀಡು. ಮತ್ತಗಜಗಳ ಸ್ವೈರವಿಹಾರಗಳ ಈ ತಾಣದಲ್ಲಿ ನಿನಗೆ ಭಯವಾಗುತ್ತಿಲ್ಲವೇ'' ? ಎಂದೆಲ್ಲ ರಾವಣ ಆಸೆಗಣ್ಣಿನಿಂದ ವಿಚಾರಿಸಿದ.

ಸೀತೆ ಬ್ರಾಹ್ಮಣ ವೇಷದಲ್ಲಿ ಬಂದ ರಾವಣನಿಗೆ ವೇಷ ನೋಡಿ ಅವನಿಗೆ ಆತಿಥ್ಯ ಉಪಚಾರ ನೀಡುವಳು– ಅತಿಥಿಗಳೇ ! ಅರ್ಘ ಪಾದ್ಯ ಕಂದಮೂಲಗಳ ಆತಿಥ್ಯ– ವೆಲ್ಲವೂ ಸಿದ್ಧವಾಗಿದೆ. ಸ್ವೀಕರಿಸಿ, ವಿಶ್ರಮಿಸಿ ಎಂದಳು. ರಾವಣ ತನ್ನ ಸಾವಿಗೆ ನಿಮಿತ್ತವಾದ ಸೀತಾಪಹಾರವನ್ನು ನಿಶ್ಚಯಿಸಿದ.

ಸೀತೆ ಲಕ್ಷ್ಮಣನೊಂದಿಗೆ ರಾಮನ ಆಗಮನದ ನಿರೀಕ್ಷೆಯಿಂದ ಅವರು ಹೋದ ದಿಕ್ಕನ್ನೆ ದಿಟ್ಟಿಸಿ ನೋಡುತ್ತಿದ್ದಳು.

❖

ರಾವಣಭಿಕ್ಷುಸತ್ಕಾರಃ

ತಥಾ ಪರುಷಮುಕ್ತಸ್ತು ಕುಪಿತೋ ರಾಘವಾನುಜಃ ।
ಸ ವಿಕಾಂಕ್ಷನ್ ಭೃಶಂ ರಾಮಂ ಪ್ರತಸ್ಥೇ ನ ಚಿರಾದಿವ ॥೧॥

ತದಾಸಾದ್ಯ ದಶಗ್ರೀವಃ ಕ್ಷಿಪ್ರಮಂತರಮಾಸ್ಥಿತಃ ।
ಅಭಿಚಕ್ರಾಮ ವೈದೇಹೀಂ ಪರಿವ್ರಾಜಕರೂಪಧೃತ್ ॥೨॥

ಶ್ಲಕ್ಷ್ಣಕಾಷಾಯಸಂವೀತಃ ಶಿಖೀ ಛತ್ತ್ರೀ ಉಪಾನಹೀ ।
ವಾಮೇ ಚಾಂಸೇऽವಸಜ್ಯಾಥ ಶುಭೇ ಯಷ್ಟಿಕಮಂಡಲೂ ॥೩॥

ಸೀತೆಯಿಂದ ಕಠೋರವಾಗಿ ಹೇಳಲ್ಪಟ್ಟ ರಾಘವಾನುಜ ಲಕ್ಷ್ಮಣನು ರಾಮನನ್ನು ಕಾಣುವ ವಿಶೇಷ ಬಯಕೆಯಿಂದ ಕೂಡಲೆ ಹೊರಟನು.

ರಾಮನೆಡೆಗೆ ಲಕ್ಷ್ಮಣನು ಹೋದ ಮೇಲೆ ಅವಕಾಶವನ್ನು ಪಡೆದು ರಾವಣ ಪರಿವ್ರಾಜಕ ರೂಪವನ್ನು ಧರಿಸಿ ವೈದೇಹಿಯ ಬಳಿಗೆ ಬಂದನು.

ನವಿರಾದ ಕಾವಿಬಣ್ಣದ ಕಾಷಾಯವನ್ನು ತೊಟ್ಟು ತಲೆಯಲ್ಲಿ ಶಿಖೆ, ಕೈಯಲ್ಲಿ ಛತ್ರ, ಕಾಲಿನಲ್ಲಿ ಚಪ್ಪಲಿಗಳನ್ನು ಧರಿಸಿ ಎಡಭುಜದಲ್ಲಿ ದಂಡ ಕಮಂಡಲುಗಳನ್ನಿಟ್ಟುಕೊಂಡು ಸನ್ಯಾಸಿರೂಪದಿಂದ ವೈದೇಹಿಯ ಬಳಿಗೆ ಬಂದನು.

ಪರಿವ್ರಾಜಕರೂಪೇಣ ವೈದೇಹೀಮನ್ವಪದ್ಯತ ।
ತಾಮಾಸಸಾದಾತಿಬಲೋ ಭ್ರಾತೃಭ್ಯಾಂ ರಹಿತಾಂ ವನೇ ॥೪॥

ರಹಿತಾಂ ಚಂದ್ರಸೂರ್ಯಾಭ್ಯಾಂ ಸಂಧ್ಯಾಮಿವ ಮಹತ್ತಮಃ ।
ತಾಮಪಶ್ಯತ್ತತೋ ಬಾಲಾಂ ರಾಮಪತ್ನೀಂ ಯಶಸ್ವಿನೀಮ್ ॥೫॥

ರೋಹಿಣೀಂ ಶಶಿನಾ ಹೀನಾಂ ಗ್ರಹವದ್ಭೃಶದಾರುಣಃ ।
ತಮುಗ್ರತೇಜಃಕರ್ಮಾಣಂ ಜನಸ್ಥಾನರುಹಾ ದ್ರುಮಾಃ ॥೬॥

ಸಮೀಕ್ಷ್ಯ ನ ಪ್ರಕಂಪಂತೇ ನ ಪ್ರವಾತಿ ಚ ಮಾರುತಃ ।
ಶೀಘ್ರಸ್ರೋತಾಶ್ಚ ತಂ ದೃಷ್ಟ್ವಾ ವೀಕ್ಷಂತಂ ರಕ್ತಲೋಚನಮ್ ॥೭॥

ಸ್ತಿಮಿತಂ ಗಂತುಮಾರೇಭೇ ಭಯಾದ್ಗೋದಾವರೀ ನದೀ ।
ರಾಮಸ್ಯ ತ್ವಂತರಂ ಪ್ರೇಪ್ಸುರ್ದಶಗ್ರೀವಸ್ತದಂತರೇ ॥೮॥

ಉಪತಸ್ಥೇ ಚ ವೈದೇಹೀಂ ಭಿಕ್ಷುರೂಪೇಣ ರಾವಣಃ ।
ಅಭವ್ಯೋ ಭವ್ಯರೂಪೇಣ ಭರ್ತಾರಮನುಶೋಚತೀಮ್ ॥೯॥

ಕಾಡಿನಲ್ಲಿ ಸಹೋದರರಾದ ರಾಮಲಕ್ಷ್ಮಣರಿಂದ ರಹಿತಳಾದ ಸೀತೆಯ ಬಳಿಗೆ ಅತಿಬಲಿಷ್ಠನಾದ ರಾವಣ ಬಂದ – ಚಂದ್ರ ಸೂರ್ಯರಿಲ್ಲದ ಸಂಧ್ಯಾಕಾಲಕ್ಕೆ ತಮಸ್ಸು ಬರುವಂತೆ.

ಆಶ್ರಮದ ಮುಂದೆ ಬಂದ ರಾವಣ ಯಶಸ್ವಿನಿಯಾದ ಬಾಲೆಯಾದ ರಾಮಪತ್ನಿಯನ್ನು ಕಂಡನು – ಚಂದ್ರನಿಂದ ವಿಹೀನಳಾದ ರೋಹಿಣಿಯನ್ನು ಅತ್ಯಂತ ದಾರುಣವಾದ ದುಷ್ಟಗ್ರಹ, ಅಂಗಾರಕ, ಶನೈಶ್ಚರಗಳು ಕಂಡಂತೆ – (ರೋಹಿಣೀ ನಕ್ಷತ್ರಕ್ಕೆ ಕ್ರೂರ ಗ್ರಹಗಳ ದೃಷ್ಟಿ ಬಿದ್ದರೆ ಲೋಕಕ್ಕೆ ಅನರ್ಥವಾಗುವುದು. ಹಾಗೆ ರಾವಣನ ದೃಷ್ಟಿ ಸೀತೆಯ ಮೇಲೆ ಬೀಳುವುದೂ ಕೂಡ.)

ಭಯಂಕರವಾದ ತೇಜಸ್ಸು ಹಾಗು ಕರ್ಮಗಳುಳ್ಳ ರಾವಣನನ್ನು ನೋಡಿ ಆ ಜನಸ್ಥಾನದಲ್ಲಿದ್ದ ಮರಗಳು ಅಲುಗಾಡಲಿಲ್ಲ. ಗಾಳಿ ಸಂಚರಿಸಲಿಲ್ಲ. ಕೆಂಗಣ್ಣಿನಿಂದ ತನ್ನನ್ನು ನೋಡಿದ ರಾವಣನಿಗೆ ಹೆದರಿ ಜೋರಾಗಿ ಹರಿಯುವ ಗೋದಾವರಿಯೂ ಭಯದಿಂದ ಮೆಲ್ಲನೆ ಹರಿಯಿತು.

ರಾಮನಿಲ್ಲದ ಸಮಯವನ್ನು ಕಾಯುತ್ತಿದ್ದ ರಾವಣ ರಾಮ ಲಕ್ಷ್ಮಣರಿಲ್ಲದ ಆ ಅವಕಾಶದಲ್ಲಿ ಭಿಕ್ಷುರೂಪದಿಂದ ಸೀತೆಯ ಮುಂದೆ ನಿಂತನು.

ಅಮಂಗಳರೂಪನಾದ ಶನಿ ರಾವಣನು ಮಂಗಲರೂಪವನ್ನು ಧರಿಸಿ ಗಂಡನ ಬಗ್ಗೆ ಶೋಕಿಸುತ್ತಿರುವ ಸೀತೆಯ ಬಳಿ ಬಂದನು – ಚಿತ್ರಾ ನಕ್ಷತ್ರದ ತುಲಾರಾಶಿಗೆ – ತನ್ನ ಉಚ್ಚಸ್ಥಾನಕ್ಕೆ ಶನೈಶ್ಚರ ಬಂದಂತೆ. (ತುಲಾರಾಶಿಯ, ಉಚ್ಚ ಸ್ಥಾನದಲ್ಲಿ ಶನಿಪ್ರಬಲ. ಅದರಂತೆ ಪ್ರಬಲನಾದ ರಾವಣ ಬಂದ ಎಂದು ಭಾವ) ಸಾಮಾನ್ಯ-ವಾಗಿ ಅಮಂಗಲಕರನಾದ ಉಚ್ಚಸ್ಥಾನದಲ್ಲಿ ಬಂದಾಗ ಮಂಗಲಕರನಂತೆ ತೋರುತ್ತಾನೆ).

ಅಭ್ಯವರ್ತತ ವೈದೇಹೀಂ ಚಿತ್ರಾಮಿವ ಶನೈಶ್ಚರಃ ।
ಸ ಪಾಪೋ ಭವ್ಯರೂಪೇಣ ತೃಣೈಃ ಕೂಪ ಇವಾವೃತಃ ॥೧೦॥

ಅತಿಷ್ಠತ್ಪ್ರೇಕ್ಷ್ಯ ವೈದೇಹೀಂ ರಾಮಪತ್ನೀಂ ಯಶಸ್ವಿನೀಮ್ ।
ಶುಭಾಂ ರುಚಿರದಂತೋಷ್ಠೀಂ ಪೂರ್ಣಚಂದ್ರನಿಭಾನನಾಮ್ ॥೧೧॥

ಆಸೀನಾಂ ಪರ್ಣಶಾಲಾಯಾಂ ಬಾಷ್ಪಶೋಕಾಭಿಪೀಡಿತಾಮ್ ।
ಸ ತಾಂ ಪದ್ಮಪಲಾಶಾಕ್ಷೀಂ ಪೀತಕೌಶೇಯವಾಸಿನೀಮ್ ॥೧೨॥

ಅಭ್ಯಗಚ್ಛತ ವೈದೇಹೀಂ ಹೃಷ್ಟಚೇತಾ ನಿಶಾಚರಃ ।
ಸ ಮನ್ಮಥಶರಾವಿಷ್ಟೋ ಬ್ರಹ್ಮಘೋಷಮುದೀರಯನ್ ॥೧೩॥

ಅಬ್ರವೀತ್ಪಶ್ರಿತಂ ವಾಕ್ಯಂ ರಹಿತೇ ರಾಕ್ಷಸಾಧಿಪಃ ।
ತಾಮುತ್ತಮಾಂ ಸ್ತ್ರಿಯಂ ಲೋಕೇ ಪದ್ಮಹೀನಾಮಿವ ಶ್ರಿಯಮ್ ॥೧೪॥

ವಿಭ್ರಾಜಮಾನಾಂ ವಪುಷಾ ರಾವಣಃ ಪ್ರಶಶಂಸ ಹ ।
ಕಾ ತ್ವಂ ಕಾಂಚನವರ್ಣಾಭೇ ಪೀತಕೌಶೇಯವಾಸಿನಿ ॥೧೫॥

ಕಮಲಾನಾಂ ಶುಭಾಂ ಮಾಲಾಂ ಪದ್ಮಿನೀವ ಹಿ ಬಿಭ್ರತೀ ।
ಹ್ರೀಃ ಶ್ರೀಃ ಕೀರ್ತಿಃ ಶುಭಾ ಲಕ್ಷ್ಮೀರಪ್ಸರಾ ವಾ ಶುಭಾನನೇ ॥೧೬॥

ಭೂತಿರ್ವಾ ತ್ವಂ ವರಾರೋಹೇ ರತಿರ್ವಾ ಸ್ವೈರಚಾರಿಣೀ ।
ಸಮಾಃ ಶಿಖರಿಣಃ ಸ್ನಿಗ್ಧಾಃ ಪಾಂಡರಾ ದಶನಾಸ್ತವ ॥೧೭॥

ವಿಶಾಲೇ ವಿಮಲೇ ನೇತ್ರೇ ರಕ್ತಾಂತೇ ಕೃಷ್ಣತಾರಕೇ ।
ವಿಶಾಲಂ ಜಘನಂ ಪೀನಮೂರೂ ಕರಿಕರೋಪಮೌ ॥೧೮॥

ಏತಾವುಪಚಿತೌ ವೃತ್ತೌ ಸಂಹತೌ ಸಂಪ್ರವಲ್ಗಿತೌ ।
ಪೀನೋನ್ನತಮುಖೌ ಕಾಂತೌ ಸ್ನಿಗ್ಧೌ ತಾಲಫಲೋಪಮೌ ॥೧೯॥

ಮಣಿಪ್ರವೇಕಾಭರಣೌ ರುಚಿರೌ ತೇ ಪಯೋಧರೌ ।
ಚಾರುಸ್ಮಿತೇ ಚಾರುದತಿ ಚಾರುನೇತ್ರೇ ವಿಲಾಸಿನಿ ॥೨೦॥

ಮನೋ ಹರಸಿ ಮೇ ಕಾಂತೇ ನದೀ ಕೂಲಮಿವಾಂಭಸಾ ।
ಕರಾಂತಮಿತಮಧ್ಯಾಸಿ ಸುಕೇಶೀ ಸಂಹತಸ್ತನೀ ॥೨೧॥

ನೈವ ದೇವೀ ನ ಗಂಧರ್ವೀ ನ ಯಕ್ಷೀ ನ ಚ ಕಿಂನರೀ ।
ನೈವಂರೂಪಾ ಮಯಾ ನಾರೀ ದೃಷ್ಟಪೂರ್ವಾ ಮಹೀತಲೇ ॥೨೨॥

ರೂಪಮಗ್ರ್ಯಂ ಚ ಲೋಕೇಷು ಸೌಕುಮಾರ್ಯಂ ವಯಶ್ಚ ತೇ ।
ಇಹ ವಾಸಶ್ಚ ಕಾಂತಾರೇ ಚಿತ್ತಮುನ್ಮಾದಯಂತಿ ಮೇ ॥೨೩॥

ಸಾ ಪ್ರತಿಕ್ರಾಮ ಭದ್ರಂ ತೇ ನ ತ್ವಂ ವಸ್ತುಮಿಹಾರ್ಹಸಿ ।
ರಾಕ್ಷಸಾನಾಮಯಂ ವಾಸೋ ಘೋರಾಣಾಂ ಕಾಮರೂಪಿಣಾಮ್ ॥

ಪ್ರಾಸಾದಾಗ್ರಾಣಿ ರಮ್ಯಾಣಿ ನಗರೋಪವನಾನಿ ಚ ।
ಸಂಪನ್ನಾನಿ ಸುಗಂಧೀನಿ ಯುಕ್ತಾನ್ಯಾಚರಿತುಂ ತ್ವಯಾ ॥೨೫॥

ವರಂ ಮಾಲ್ಯಂ ವರಂ ಭೋಜ್ಯಂ ವರಂ ವಸ್ತ್ರಂ ಚ ಶೋಭನೇ ।
ಭರ್ತಾರಂ ಚ ವರಂ ಮನ್ಯೇ ತ್ವದ್ಯುಕ್ತಮಸಿತೇಕ್ಷಣೇ ॥೨೬॥

ಕಾ ತ್ವಂ ಭವಸಿ ರುದ್ರಾಣಾಂ ಮರುತಾಂ ವಾ ವರಾನನೇ ।
ವಸೂನಾಂ ವಾ ವರಾರೋಹೇ ದೇವತಾ ಪ್ರತಿಭಾಸಿ ಮೇ ॥೨೭॥

ನೇಹಾಗಚ್ಛಂತಿ ಗಂಧರ್ವಾ ನ ದೇವಾ ನ ಚ ಕಿಂನರಾಃ ।
ರಾಕ್ಷಸಾನಾಮಯಂ ವಾಸಃ ಕಥಂ ನು ತ್ವಮಿಹಾಗತಾ ॥೨೮॥

ಹುಲ್ಲುಗಳಿಂದ ಮುಚ್ಚಿದ ಬಾವಿಯಂತೆ ದುರುದ್ದೇಶಗಳನ್ನು ಮುಚ್ಚಿಕೊಂಡಿದ್ದು ಮೇಲ್ನೋಟಕ್ಕೆ ಭವ್ಯರೂಪದಿಂದ ಪಾಪಿಯು ಯಶಸ್ವಿನಿಯಾದ ರಾಮಪತ್ನಿ ವೈದೇಹಿಯನ್ನು ನೋಡಿ ನಿಂತನು.

ಶುಭರೂಪಳು, ಸುಂದರವಾದ ಹಲ್ಲು ತುಟಿಗಳನ್ನು ಹೊಂದಿರುವವಳು ಪೂರ್ಣಚಂದ್ರನಂತೆ ಬೆಳಗುವ ಮೊಗದವಳು, ಕಣ್ಣೀರು, ಶೋಕಗಳ ದುಗುಡದಿಂದ ಪೀಡಿತಳಾದ ಪರ್ಣಶಾಲೆಯಲ್ಲಿ ಕುಳಿತಿರುವ ಸೀತೆಯನ್ನು ಕಂಡನು.

ತಾವರೆಯ ದಳದಂತೆ ಸುಂದರ ನಯನದವಳು, ಪೀತಕೌಶೇಯ ವಸನಧಾರಿಣಿಯು ಆದ ವೈದೇಹಿಯ ಎದುರಿಗೆ ದುಷ್ಟ ಸ್ವಭಾವದ ನಿಶಾಚರ ರಾವಣ ಬಂದನು.

ಮದನ ಶರದ ಬಾಧೆಗೊಳಗಾದ ರಾಕ್ಷಸಾಧಿಪನು ವೇದ ಘೋಷವನ್ನು ಮಾಡುತ್ತಾ ಏಕಾಂತದಲ್ಲಿ ವಿನೀತನಾಗಿ ಮಾತನಾಡಲುಪಕ್ರಮಿಸಿದನು.

ತಾವರೆ ಹಿಡಿಯದಿರುವ ಲಕ್ಷ್ಮಿಯಂತೆ ಇರುವ ದೇಹಕಾಂತಿಯಿಂದ ಬೆಳಗು-ತ್ತಿರುವ ಲೋಕದಲ್ಲಿ ಉತ್ತಮ ಸ್ತ್ರೀಯಾದ ಸೀತೆಯನ್ನು ರಾವಣ ಹೊಗಳಿದ !

ಪೀತಾಂಬರ ಧಾರಿಣಿಯಾದ ಹೊನ್ನ ಹೊಂಬಣ್ಣದ ಸೊಬಗಿನವಳೆ ! ಸಾಲು ಸಾಲು ಕಮಲಗಳನ್ನು ಒಳಗೊಂಡ ಸರೋವರದಂತಿರುವ ನೀನು ಯಾರು !

ಶುಭಾನನೇ ! ಹ್ರೀ ದೇವಿಯೇ ? ಕೀರ್ತಿಯೇ ! ಶ್ರೀದೇವಿಯೆ ! ಶುಭಲಕ್ಷ್ಮಿಯೆ ! ಅಥವಾ ಅಪ್ಸರೆಯೆ ? ಭೂತಿಯೇ ? ಸುಂದರಿಯೆ ! ಸ್ವೈರವಿಹಾರಿಣಿಯಾದ ಕಾಮಪತ್ನಿ ರತಿಯೆ ?

ನಿನ್ನ ಹಲ್ಲುಗಳು ಸಮಾನವಾಗಿಯೂ ಮೊಲ್ಲೆ ಮೊಗ್ಗಿನಂತೆ ಸ್ನಿಗ್ಧವಾಗಿಯೂ ಬಿಳಿಯಾಗಿಯೂ ಇವೆ. ಕಣ್ಣುಗಳು ವಿಶಾಲವಾಗಿಯೂ ವಿಮಲವಾಗಿಯೂ ಇವೆ. ಮಧ್ಯದ ಗುಡ್ಡೆ ಕಪ್ಪಾಗಿಯೂ ತುಂದಿಗಳಲ್ಲಿ ಕೆಂಪಾಗಿಯೂ ಇವೆ. ಸೊಂಟವು ಪೀನವಾಗಿಯೂ ವಿಶಾಲವಾಗಿಯೂ ಇದೆ. ಆನೆಯ ಸೊಂಡಿಲಿನಂತೆ ತೊಡೆಗಳಿವೆ. ಈ ಜೋಡಿ ಪಯೋಧರಗಳು ಸಮೃದ್ಧವೂ, ದುಂಡಾಗಿಯೂ, ಸಂಗತವಾಗಿಯೂ, ಚೆನ್ನಾಗಿ ಕಂಪಿಸುತ್ತಿರುವಂತೆಯೂ ಪೀನವಾಗಿಯೂ ಉನ್ನತವಾದ ತುದಿಯುಳ್ಳ-ದ್ದಾಗಿಯೂ, ಸ್ನಿಗ್ಧವಾಗಿಯೂ, ತಾಲಫಲಗಳಂತೆಯೂ, ಶ್ರೇಷ್ಠ ರತ್ನಾಭರಣಗಳಿಂದ ಅಲಂಕೃತವೂ ಮನೋಹರವೂ ಆಗಿವೆ.

ಸುಂದರವಾದ ನಗು, ಸುಂದರದಂತಗಳು, ಸುಂದರನೇತ್ರಗಳ ಸುಂದರಿ ವಿಲಾಸಿನಿಯೆ ! ಕಾಂತೆಯೇ ! ನನ್ನ ಮನವನ್ನು ನಿನ್ನ ಅಂಗಗಳಿಂದ ಸೆಳೆಯುತ್ತಿರುವೆ – ನದಿಯು ನೀರಿನಿಂದ ಕೂಲವನ್ನು ಸೆಳೆಯುವಂತೆ ! ಮುಷ್ಟಿಯ ಮಧ್ಯದಲ್ಲಿ ಸಿಗುವಂಥ ನಡುವಿನಳಾಗಿರುವಿ. ಸುಂದರ ಕೇಶದವಳು, ಅಂತರವಿರದಂತೆ ಒಟ್ಟಿಗೆ ಹೊಂದಿಕೊಂಡಿರುವ ಸ್ತನದವಳಾಗಿರುವಿ.

ಇಂಥ ರೂಪದ ದೇವತೆ ಗಂಧರ್ವ ಯಕ್ಷೀ ಕಿನ್ನರಿ ಯಾಟವ ನಾರಿಯನ್ನು ಈತನಕ ಕಂಡಿಲ್ಲ ನಾನು ಈ ಭೂಮಿಯಲ್ಲಿ. ಈ ಲೋಕದಲ್ಲೆ ನಿನ್ನ ಶ್ರೇಷ್ಠರೂಪ, ಶರೀರದ ಸೌಕುಮಾರ್ಯ, ಹರೆಯ, ಈ ಕಾಡಿನಲ್ಲಿ ವಾಸ –ನನ್ನ ಚಿತ್ತದಲ್ಲಿ ಹುಚ್ಚೆಬ್ಬಿಸಿದೆ.

ಭದ್ರವಾಗಿ ಮನೆಗೆ ಹಿಂತಿರುಗು. ನೀನು ಈ ಕಾಡಿನಲ್ಲಿ ವಾಸ ಮಾಡಲು ಅರ್ಹಳಲ್ಲ. ಬಯಸಿದಂಥ ರೂಪ ಪಡೆಯುವ ಘೋರ ರಕ್ಕಸರ ವಾಸ ಸ್ಥಾನವು ಈ ಅರಣ್ಯ.

ರಮ್ಯವಾದ ಶ್ರೇಷ್ಠ ಮಹಡಿಯ ಮಹಲುಗಳು, ನಗರ –ಉಪವನಗಳು, ಸಂಪನ್ನಗಳು, ಸುಗಂಧ ಭರಿತವಾದವುಗಳು – ಇಂಥಲ್ಲಿ ನೀನು ಸಂಚರಿಸುವುದು ಯುಕ್ತವೆನಿಸುತ್ತದೆ.

ಅಸಿತಾಪಾಂಗಿಯೇ ! ಶೋಭನಳೇ ! ಶ್ರೇಷ್ಠವಾದ ಮಾಲೆ, ಶ್ರೇಷ್ಠವಾದ ಭೋಜ್ಯವಸ್ತು, ಉತ್ತಮವಾದ ವಸ್ತ್ರ, ಶ್ರೇಷ್ಠನಾದ ಗಂಡ – ನಿನಗೆ ಯುಕ್ತ-ವಾದುದು.

ಯಾರು ನೀನು ವರಾನನೆ ! ರುದ್ರ, ಮರುತ್, ವಸುಗಳುಗಳಿಗೆ ಸೇರಿದ ದೇವತೆಯಂತೆ ನನಗೆ ಕಾಣಿಸುತ್ತಿರುವಿ.

ಈ ಪ್ರದೇಶಕ್ಕೆ ಗಂಧರ್ವರಾಗಲಿ, ದೇವತೆಗಳಾಗಲಿ, ಕಿನ್ನರರಾಗಲಿ, ಯಾರು ಇಲ್ಲಿಗೆ ಬರುವುದಿಲ್ಲ. ಇದು ರಕ್ಕಸರ ತಂಗುದಾಣ. ನೀನು ಹೇಗೆ ತಾನೆ ಇಲ್ಲಿಗೆ ಬಂದೆ ?

ಇಹ ಶಾಖಾಮೃಗಾಃ ಸಿಂಹಾ ದ್ವೀಪಿವ್ಯಾಘ್ರಮೃಗಾಸ್ತಥಾ ।
ಋಕ್ಷಾಸ್ತರಕ್ಷವಃ ಕಂಕಾಃ ಕಥಂ ತೇಭ್ಯೋ ನ ಬಿಭ್ಯಸಿ ॥೨೯॥

ಮದಾನ್ವಿತಾನಾಂ ಘೋರಾಣಾಂ ಕುಂಜರಾಣಾಂ ತರಸ್ವಿನಾಮ್ ।
ಕಥಮೇಕಾ ಮಹಾರಣ್ಯೇ ನ ಬಿಭೇಷಿ ವರಾನನೇ ॥೩೦॥

ಕಾಸಿ ಕಸ್ಯ ಕುತಶ್ಚ ತ್ವಂ ಕಿಂ ನಿಮಿತ್ತಂ ಚ ದಂಡಕಾನ್ ।
ಏಕಾ ಚರಸಿ ಕಲ್ಯಾಣಿ ಘೋರಾನ್ ರಾಕ್ಷಸಸೇವಿತಾನ್ ॥೩೧॥

ಇತಿ ಪ್ರಶಸ್ತಾ ವೈದೇಹೀ ರಾವಣೇನ ದುರಾತ್ಮನಾ ।
ದ್ವಿಜಾತಿವೇಷೇಣ ಹಿ ತಂ ದೃಷ್ಟ್ವಾ ರಾವಣಮಾಗತಮ್ ॥೩೨॥

ಸರ್ವೈರತಿಥಿಸತ್ಕಾರೈಃ ಪೂಜಯಾಮಾಸ ಮೈಥಿಲೀ ।
ಉಪನೀಯಾಸನಂ ಪೂರ್ವಂ ಪಾದ್ಯೇನಾಭಿನಿಮಂತ್ರ್ಯ ಚ ॥೩೩॥

ಅಬ್ರವೀತ್ಸಿದ್ಧಮಿತ್ಯೇವ ತದಾ ತಂ ಸೌಮ್ಯದರ್ಶನಮ್ ॥

ಇಲ್ಲಿ ವಾನರರು ಸಿಂಹಗಳು, ಚಿರತೆಗಳು, ಹುಲಿತೋಳಗಳು, ಕರಡಿ ಕಿರುಬ-ಗಳೂ, ರಣಹದ್ದುಗಳೂ ವಾಸಮಾಡುತ್ತವೆ. ಅವುಗಳಿಂದ ಹೇಗೆ ಹೆದರದಿರುವಿ ? ನೀನಾರು ? ಯಾರಿಗೆ ಸೇರಿದವಳು ? ಎಲ್ಲಿಂದ ಬಂದಿರುವಿ ? ಯಾವ ಕಾರಣ-ದಿಂದ ರಾಕ್ಷಸರಿಂದ ಸೇವಿತವಾದ ಈ ದಂಡಕಾರಣ್ಯದಲ್ಲಿ ಒಬ್ಬಂಟಿಯಾಗಿ ಸಂಚರಿಸುತ್ತಿರುವಿ ?

ಹೀಗೆ ದುರಾತ್ಮ ರಾವಣನಿಂದ ಪ್ರಶಂಸಿತಳಾದ ವೈದೇಹಿಯು ಬ್ರಾಹ್ಮಣ ವೇಷದಿಂದ ಬಂದಿರುವ ರಾವಣನನ್ನು ನೋಡಿ ಎಲ್ಲ ಬಗೆಯ ಅತಿಥಿಸತ್ಕಾರಗಳಿಂದ ಗೌರವಿಸಿದಳು.

ಮೊದಲು ಆಸನವಿತ್ತು ಬಳಿಕ ಪಾದ್ಯವಿತ್ತು ಸತ್ಕರಿಸಿ ನೋಡಲು ಸೌಮ್ಯ ರೂಪದಿಂದಿರುವ ರಾವಣನಿಗೆ ಪಕ್ವಾನ್ನ ಸಿದ್ಧವಾಗಿದೆ ಎಂದಳು.

ದ್ವಿಜಾತಿವೇಷೇಣ ಸಮೀಕ್ಷ್ಯ ಮೈಥಿಲೀ
ಸಮಾಗತಂ ಪಾತ್ರಕುಸುಂಭಧಾರಿಣಮ್ ।
ಅಶಕ್ಯಮುದ್ದಿಷ್ಟಮಪಾಯದರ್ಶನಾ-
ನ್ನ್ಯಮಂತ್ರಯದ್ಬ್ರಾಹ್ಮಣವತ್ತದಾಂಗನಾ ॥೩೪॥

ಇಯಂ ಬೃಸೀ ಬ್ರಾಹ್ಮಣ ಕಾಮಮಾಸ್ಯತಾ-
ಮಿದಂ ಚ ಪಾದ್ಯಂ ಪ್ರತಿಗೃಹ್ಯತಾಮಿತಿ ।
ಇದಂ ಚ ಸಿದ್ಧಂ ವನಜಾತಮುತ್ತಮಂ
ತ್ವದರ್ಥಮವ್ಯಗ್ರಮಿಹೋಪಭುಜ್ಯತಾಮ್ ॥೩೫॥

ನಿಮಂತ್ರ್ಯಮಾಣಃ ಪ್ರತಿಪೂರ್ಣಭಾಷಿಣೀಂ
ನರೇಂದ್ರಪತ್ನೀಂ ಪ್ರಸಮೀಕ್ಷ್ಯ ಮೈಥಿಲೀಮ್ ।
ಪ್ರಸಹ್ಯ ತಸ್ಯಾ ಹರಣೇ ಧೃತಂ ಮನಃ
ಸಮಾರ್ಪಯತ್ಸ್ವಮ್ಯವಧಾಯ ರಾವಣಃ ॥೩೬॥

ತತಃ ಸುವೇಷಂ ಮೃಗಯಾಗತಂ ಪತಿಂ
ಪ್ರತೀಕ್ಷಮಾಣಾ ಸಹಲಕ್ಷ್ಮಣಂ ತದಾ ।
ವಿವೀಕ್ಷಮಾಣಾ ಹರಿತಂ ದದರ್ಶ ತ-
ನ್ಮಹದ್ವನಂ ನೈವ ತು ರಾಮಲಕ್ಷ್ಮಣೌ ॥೩೭॥

ಕಮಂಡಲು ಕಾಷಾಯ ವಸ್ತ್ರಗಳನ್ನು ಧರಿಸಿರುವ, ಬ್ರಾಹ್ಮಣ ವೇಷದಿಂದ ಬಂದಿರುವ ತನ್ನನ್ನು ಅಪಹರಿಸುವ ಬುದ್ಧಿಯ ರಾವಣನನ್ನು ಕಂಡು ದ್ವೇಷ ಮಾಡಲು ಬ್ರಾಹ್ಮಣವೇಷದವನಾದ್ದರಿಂದ ಅನರ್ಹನಾದ ಅವನಿಗೆ ಬ್ರಾಹ್ಮಣರಿಗೆ ಹೇಗೆ ಹಾಗೆ ನಿಮಂತ್ರಿಸಿದಳು.

ಬ್ರಾಹ್ಮಣನೇ ! ಇದು ಹುಲ್ಲು ಚಾಪೆ. ಕುಳಿತುಕೊಳ್ಳಿ. ಇದು ಪಾದ್ಯ, ಸ್ವೀಕರಿಸಿ. ಇದು ವನ್ಯಕಂದಮೂಲ ಫಲಗಳು. ತಿನ್ನೋಣವಾಗಲಿ.

ಹೀಗೆ ನಿಮಂತ್ರಿತನಾದ ರಾವಣನು ಉಪಚಾರದ ಮಾತುಗಳನ್ನಾಡುತ್ತಿದ್ದ

ನರೇಂದ್ರಪತ್ನೀ ಮೈಥಿಲಿಯನ್ನು ಕಣ್ತುಂಬ ನೋಡಿ ತನ್ನ ಸಂಹಾರಕ್ಕೆ ನಿಮಿತ್ತವಾದ ಬಲಾತ್ಕಾರದ ಸೀತೆಯ ಅಪಹಾರದಲ್ಲಿ ಗಟ್ಟಿ ಮನಸ್ಸು ಮಾಡಿದನು.

ಸೀತೆಯು ಅತಿಥಿ ಸತ್ಕಾರ ಪೂರೈಸಿದ ಬಳಿಕ ಸುಂದರವೇಷದ, ಬೇಟೆಗೆ ಹೋದ ಲಕ್ಷ್ಮಣನಿಂದ ಸಹಿತನಾದ ತನ್ನ ಪತಿ ರಾಮನನ್ನು ನಿರೀಕ್ಷೆ ಮಾಡುತ್ತ ಸುತ್ತಲೂ ಕಣ್ಣಾಡಿಸಿದಳು. ವಿಶಾಲವಾದ ಹಸಿರು ವನವೇ ಕಾಣಿಸಿತೇ ಹೊರತು ಶ್ರೀರಾಮ ಲಕ್ಷ್ಮಣರು ಕಣ್ಣಿಗೆ ಬೀಳಿಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತಾರನೇ ಸರ್ಗ ಮುಗಿಯಿತು.

❖

ಸಪ್ತಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಪರಿವ್ರಾಜಕ ವೇಷದಿಂದ ಬಂದಿದ್ದ ತನ್ನನ್ನು ಅಪಹಾರ ಮಾಡಲು ಬಯಿಸಿದ ರಾವಣನು ಕೇಳಿದಾಗ ಸೀತೆ – ಬ್ರಾಹ್ಮಣನಿವನು. ಮೇಲಾಗಿ ಅತಿಥಿ. ಕೇಳಿದಾಗ ನನ್ನನ್ನು ಪರಿಚಯಿಸಿಕೊಳ್ಳದಿದ್ದರೆ ಶಾಪಕೊಟ್ಟಾನು ಎಂದು ಭಾವಿಸಿಕೊಂಡು ಮುಹೂರ್ತ ಕಾಲ ಚಿಂತಿಸಿ ನುಡಿದಳು – ಮಿಥಿಲೆಯ ಅರಸು ಜನಕನ ಮಗಳು ನಾನು. ಹೆಸರು ಸೀತೆ. ಶ್ರೀರಾಮಚಂದ್ರನ ಹೆಂಡತಿ. ಇಕ್ಷ್ವಾಕುವಂಶರಾಜರ ಮನೆಯಲ್ಲಿ ಹನ್ನೆರಡು ವರ್ಷ ಎಲ್ಲ ಭೋಗ ಭಾಗ್ಯಗಳನ್ನು ಅನುಭವಿಸಿಕೊಂಡು ಸುಖವಾಗಿದ್ದೆ. ಹದಿಮೂರನೆಯ ವರ್ಷ ಬಂದಾಗ ದಶರಥ ಮಹಾರಾಜರು ಮಂತ್ರಿಗಳೊಂದಿಗೆ ಮಂತ್ರಾಲೋಚನೆ ಮಾಡಿ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಲು ನಿರ್ಣಯಿಸಿದರು.

ಇದೇ ಸಮಯದಲ್ಲಿ ಕೈಕೇಯಿಯು, ಭರತನಿಗೆ ಪಟ್ಟಾಭಿಷೇಕವಾಗಬೇಕು. ರಾಮ 14 ವರ್ಷ ವನವಾಸಕ್ಕೆ ಹೋಗಬೇಕು' ಎಂದು ಎರಡು ವರವನ್ನು ಕೇಳಿದಳು. ಹಠ ಹಿಡಿದಳು. ರಾಮನಿಗೆ ಆಗ ಇಪ್ಪತ್ತೈದು ವರ್ಷ. ನನಗೆ ಹದಿನೆಂಟು ವರ್ಷವಾಗಿತ್ತು. ಕಾಮಾರ್ತನಾದ ದಶರಥನು ಕೈಕೇಯಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ರಾಮನಿಗೆ ಪಟ್ಟಾಭಿಷೇಕ ಮಾಡಲಿಲ್ಲ.

ದಶರಥನನ್ನು ಕಾಣಲು ಬಂದಿದ್ದ ರಾಮನಿಗೆ ಕೈಕೇಯಿಯು ಹೀಗೆ ಹೇಳಿದಳು – 'ನಿನ್ನ ತಂದೆ ನನಗೆ ಹೀಗೆ ಆದೇಶಿಸಿದ್ದಾರೆ. ''ಈ ನಿಷ್ಕಂಟಕ ರಾಜ್ಯವನ್ನು ಭರತನಿಗೆ ಕೊಡಬೇಕು. ನೀನು ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕು'' ನೀನು ಕೂಡಲೆ ಕಾಡಿಗೆ ಹೊರಡು. ತಂದೆಯನ್ನು ಸುಳ್ಳಿನಿಂದ ಪಾರು ಮಾಡು'.

ನನ್ನ ಪತಿ ಹಾಗೇ ಆಗಲೆಂದು ಕೈಕೇಯಿಯ ಮೂಲಕ ತಿಳಿದ ತಂದೆಯ ಆದೇಶವನ್ನು ಅನುಸರಿಸಿದ. 'ಕೊಡಬೇಕು, ತೆಗೆದುಕೊಳ್ಳಬಾರದು, ಸತ್ಯವನ್ನು ಹೇಳಬೇಕು. ಸುಳ್ಳು ಹೇಳಬಾರದು' – ಇದು ನನ್ನ ರಾಮನು ಕೈಗೊಂಡ ವ್ರತ. ಅವನ ತಮ್ಮ ಲಕ್ಷ್ಮಣನೂ ಅವನೊಂದಿಗೆ ಕಾಡಿಗೆ ಬಂದನು. ಹೀಗೆ ನಾವು ರಾಜ್ಯಪ್ರಚ್ಯುತರಾಗಿ ಮೂವರೂ ದಂಡಕಾರಣ್ಯಕ್ಕೆ ಬಂದೆವು. ಮುಹೂರ್ತಕಾಲ ವಿಶ್ರಮಿಸಿರಿ ಬ್ರಾಹ್ಮಣರೆ ! ಕಾಡಿನ ಕಂದ ಮೂಲಗಳನ್ನು ಹಿಡಿದುಕೊಂಡು ಸ್ವಲ್ಪ ಸಮಯದಲ್ಲಿಯೇ ಬರುತ್ತಾರೆ.

ದ್ವಿಜರೆ ! ನೀನು ನಿನ್ನ ಕುಲಗೋತ್ರಗಳನ್ನು ಹೆಸರನ್ನು ತಿಳಿಸು. ಏಕಾಂಗಿಯಾಗಿ ಈ ದಂಡಕಾರಣ್ಯದಲ್ಲಿ ಏಕೆ ಸಂಚರಿಸುತ್ತಿರುವಿರಿ ?

ರಾವಣ ಉತ್ತರಿಸಿದ – ದೇವಾಸುರಪನ್ನಗರು ಯಾರಿಗೆ ಹೆದರುತ್ತಾರೋ ಅಂತಹ ರಾಕ್ಷಸೇಶ್ವರ ರಾವಣ ನಾನು. ಕೌಶೇಯ ವಸನಧಾರಿಣಿಯಾದ ಹೊನ್ನ ಕಾಂತಿಯ

ನಿನ್ನನ್ನು ಕಂಡ ಮೇಲೆ ನನ್ನ ಹೆಂಡತಿಯರಲ್ಲಿ ನನಗೆ ಆಸಕ್ತಿಯೇ ಹೊರಟುಹೋಗಿದೆ. ಬೇರೆ ಬೇರೆ ಕಡೆಯಿಂದ ಹಾರಿಸಿಕೊಂಡು ಬಂದ ನನ್ನೆಲ್ಲ ಶ್ರೇಷ್ಠ ಹೆಂಡತಿಯರಿಗೆಲ್ಲ ನೀನೆ ಅಗ್ರಮಹಿಷಿಯಾಗು. ಸಾಗರದ ಮಧ್ಯೆ ಲಂಕಾ ಎಂಬ ಪಟ್ಟಣ ಬೆಟ್ಟದ ಮೇಲೆ ಇದೆ. ಆ ನನ್ನ ಮಹಾಪುರದಲ್ಲಿ ಸುಂದರ ಕಾಡುಗಳಲ್ಲಿ ನನ್ನೊಂದಿಗೆ ವಿಹರಿಸುವಂತೆ. ಬಳಿಕ ಇಂಥ ಆರಣ್ಯವಾಸವನ್ನು ನೀನು ಬಯಸುವುದೇ ಇಲ್ಲ. ನೀನು ನನ್ನ ಹೆಂಡತಿಯಾದರೆ ಐದು ಸಾವಿರ ದಾಸಿಯರು ನಿನ್ನ ಸೇವೆ ಮಾಡುತ್ತಾರೆ.

ರಾವಣನ ಈ ಮಾತಿನಿಂದ ಕುಪಿತಳಾದ ಸೀತೆ ಅವನನ್ನು ತಿರಸ್ಕರಿಸಿ ನುಡಿದಳು. ಮಹಾಗಿರಿಯಂತೆ ಅಕಂಪ್ಯನು, ಮಹೋದಧಿಯಂತೆ ಅಕ್ಷೋಭ್ಯನು ಆದ ಮಹೇಂದ್ರ ಸದೃಶನಾದ ರಾಮನನ್ನು ಅನುಸರಿಸಿರುವವಳು ನಾನು. ಸರ್ವಲಕ್ಷಣ ಸಂಪನ್ನನು, ಸಿಂಹವಿಕ್ರಮನು ಆದ ರಾಮನ ಅನುಯಾಯಿನಿ ನಾನು.

ನೀನು ನರಿ, ನರಿ ಸಿಂಹಿಣಿಯನ್ನು ಬಯಸಬಹುದೇ ? ಅದನ್ನು ಪಡೆಯಲು ಶಕ್ಯವೆ ? ಸೂರ್ಯನ ಪ್ರಭೆ ಹೇಗೆ ಹಾಗೆ ನನ್ನನ್ನು ಮುಟ್ಟಲು ಸಾಧ್ಯವಿಲ್ಲ.

ಆಸನ್ನ ಮರಣನಿಗೆ ವೃಕ್ಷಗಳು ಬಂಗಾರಮಯವಾಗಿ ಕಾಣುತ್ತವೆಯಂತೆ ! ನಿನ್ನ ಸ್ಥಿತಿ ಹಾಗೇ ಇದೆ. ಹಸಿದ ಸಿಂಹದ ಬಾಯಿಗೆ ಕೈಹಾಕಿ ಕೋರೆದಾಡೆಯನ್ನು ಕೀಳುವ ಬಯಕೆಯಂತಿದೆ ನಿನ್ನ ಕಾಮನೆ. ಶ್ರೇಷ್ಠ ಮಂದರಪರ್ವತವನ್ನು ಕೈಯಿಂದ ತರಲು ಬಯಸುತ್ತಿರುವಿ ! ಪ್ರಜ್ವಲಿಸುವ ಬೆಂಕಿಯನ್ನು ಬಟ್ಟೆಯಲ್ಲಿ ಹಾಕಿಕೊಂಡು ತರಲು ಬಯಸಿದಂತೆ ರಾಮನ ಭಾರ್ಯೆಯನ್ನು ಹೊಂದುವ ನಿನ್ನ ಬಯಕೆಯು. ಸಿಂಹ ನರಿಗಳಿಗೆ ಸಣ್ಣ ತೊರೆ ಸಮುದ್ರಗಳಿಗೆ, ಬಂಗಾರ ಸೀಸಗಳಿಗೆ, ಆನೆ ಬೆಕ್ಕುಗಳಿಗೆ, ಗಂಧ ನೀರು ಕೆಸರುಗಳಿಗೆ, ಕಾಗೆ ಗರುಡಗಳಿಗೆ, ಸಾರಸಹಕ್ಕಿ ಹದ್ದುಗಳಿಗೆ ಎಂತಹ ಅಂತರವಿದೆಯೋ ದಾಶರಥಿ ಹಾಗೂ ನಿನಗೂ ಅಷ್ಟು ಅಂತರವಿದೆ !

ಕಾರ್ಮುಕ ಬಾಣ ಪಾಣಿಯಾದ ಸಮರ್ಥ ಶ್ರೀರಾಮನಿರುವಾಗ ನೀನು ನನ್ನನ್ನು ಅಪಹರಿಸಿದರೂ ಅದನ್ನು ನಿನಗೆ ಜೀರ್ಣಮಾಡಿಕೊಳ್ಳಲಾಗುವುದಿಲ್ಲ. ತಂಡುಲ ಭ್ರಾಂತಿಯಿಂದ ವಜ್ರದ ಹರಳನ್ನು ನುಂಗಿದರೆ ನೊಣಕ್ಕೆ ಜೀರ್ಣಿಸಿಕೊಳ್ಳಲು ಸಾಧ್ಯವೆ ?

ಹೀಗೆ ಸಿಟ್ಟಿನಿಂದ ದಿಟ್ಟತನದಿಂದ ಸೀತೆ ಉತ್ತರಿಸಿ ಗಾಳಿಯ ಹೊಡೆತಕ್ಕೆ ಸಿಲುಕಿದ ಬಾಳೆಗಿಡದಂತೆ ಕಂಪಿಸಿದಳು.

ಅವಳ ನಡುಕವನ್ನು ಗಮನಿಸಿದ ದುಷ್ಟರಾವಣ ಭಯ ಕಾರಣದ ನಿವೃತ್ತಿಗಾಗಿ ತನ್ನ ಕುಲ-ಬಲ-ನಾಮ-ಗೋತ್ರಗಳನ್ನು ಅರುಹಿದನು.

❖

ರಾವಣಾಧಿಕ್ಷೇಪಃ

ರಾವಣೇನ ತು ವೈದೇಹೀ ತಥಾ ಪೃಷ್ಟಾ ಜಿಹೀರ್ಷತಾ ।
ಪರಿವ್ರಾಜಕಲಿಂಗೇನ ಶಶಂಸಾತ್ಮಾನಮಂಗನಾ ॥೧॥

ಬ್ರಾಹ್ಮಣಶ್ಚಾತಿಥಿಶ್ಚಾಯಮನುಕ್ತೋ ಹಿ ಶಪೇತ ಮಾಮ್ ।
ಇತಿ ಧ್ಯಾತ್ವಾ ಮುಹೂರ್ತಂ ತು ಸೀತಾ ವಚನಮಬ್ರವೀತ್ ॥೨॥

ದುಹಿತಾ ಜನಕಾಸ್ಯಾಹಂ ಮೈಥಿಲಸ್ಯ ಮಹಾತ್ಮನಃ ।
ಸೀತಾ ನಾಮ್ನಾಸ್ಮಿ ಭದ್ರಂ ತೇ ರಾಮಸ್ಯ ಮಹಿಷೀ ಪ್ರಿಯಾ ॥೩॥

ಅಪಹರಿಸುವ ಬಯಕೆಯ ಪರಿವ್ರಾಜಕನ ವೇಷ ತೊಟ್ಟ ರಾವಣನಿಂದ ಕೇಳಲ್ಪಟ್ಟ ಸೀತೆಯು ತನ್ನ ಬಗ್ಗೆ ಹೇಳಿಕೊಂಡಳು. ಇವನು ಅತಿಥಿ. ಮೇಲಾಗಿ ಬ್ರಾಹ್ಮಣ. ಅವನು ಕೇಳಿದಾಗ ನನ್ನ ಪರಿಚಯ ಹೇಳದೆ ಹೋದರೆ ಶಪಿಸಿಯಾನು ಎಂದು ಮುಹೂರ್ತ ಕಾಲ ಚಿಂತಿಸಿ ಸೀತೆ ಮಾತನಾಡಿದಳು.

ದ್ವಿಜೋತ್ತಮ ! ನಾನು ಮಿಥಿಲಾಪತಿ ಮಹಾತ್ಮ ಜನಕರಾಜನ ಮಗಳು. ಸೀತೆ ಎಂದು ಹೆಸರು. ರಾಮನ ಹೆಂಡತಿ.

ಉಷಿತ್ವಾ ದ್ವಾದಶ ಸಮಾ ಇಕ್ಷ್ವಾಕೂಣಾಂ ನಿವೇಶನೇ ।
ಭುಂಜಾನಾ ಮಾನುಷಾನ್ ಭೋಗಾನ್ ಸರ್ವಕಾಮಸಮೃದ್ಧಿನೀ ॥೪॥

ತತಸ್ತ್ರಯೋದಶೇ ವರ್ಷೇ ರಾಜಾಮಂತ್ರಯತ ಪ್ರಭುಃ ।
ಅಭಿಷೇಚಯಿತುಂ ರಾಮಂ ಸಮೇತೋ ರಾಜಮಂತ್ರಿಭಿಃ ॥೫॥

ತಸ್ಮಿನ್ ಸಂಭ್ರಿಯಮಾಣೇ ತು ರಾಘವಸ್ಯಾಭಿಷೇಚನೇ ।
ಕೈಕೇಯೀ ನಾಮ ಭರ್ತಾರಮಾರ್ಯಾ ಸಾ ಯಾಚತೇ ವರಮ್ ॥೬॥

ಪ್ರತಿಗೃಹ್ಯ ತು ಕೈಕೇಯೀ ಶ್ವಶುರಂ ಸುಕೃತೇನ ಮೇ ।
ಮಮ ಪ್ರವ್ರಾಜನಂ ಭರ್ತುರ್ಭರತಸ್ಯಾಭಿಷೇಚನಮ್ ॥೭॥

ದ್ವಾವಯಾಚತ ಭರ್ತಾರಂ ಸತ್ಯಸಂಧಂ ನೃಪೋತ್ತಮಮ್ ।

ವಿವಾಹಿತಳಾಗಿ ಇಷ್ವಾಕುವಂಶದವರ ಮನೆಯಲ್ಲಿ ಹನ್ನೆರಡು ವರ್ಷಗಳ ಕಾಲ ಮಾನುಷ ಭೋಗಗಳನ್ನು ಅನುಭವಿಸುತ್ತ ಎಲ್ಲ ಕಾಮಿತಾರ್ಥಸಮೃದ್ಧಿ ಹೊಂದಿದೆ.

ಬಳಿಕ ಹದಿಮೂರನೆ ವರ್ಷದಲ್ಲಿ ಪ್ರಭು ರಾಜಾ ದಶರಥನು ರಾಜಮಂತ್ರಿ-ಗಳಿಂದ ಕೂಡಿ ವಿಚಾರ ಮಾಡಿ ರಾಮನನ್ನು ಅಭಿಷೇಕ ಮಾಡಿಸಲು ತೀರ್ಮಾನ ಮಾಡಿದನು. ರಾಜ ರಾಮನ ಪಟ್ಟಾಭಿಷೇಕದ ಸಿದ್ಧತೆಗೆ ಮಾಡಿಕೊಳ್ಳುತ್ತಿರುವಾಗ ಆರ್ಯೆ ಕೈಕೇಯಿಯು ತನ್ನ ಪತಿ ದಶರಥನಲ್ಲಿ ವರವನ್ನು ಬೇಡಿದಳು.

ಮಾವನವರನ್ನು ಸುಕೃತದ ಮೇಲೆ ಆಣೆಯಿರಿಸಿ ಸತ್ಯವಚನಬದ್ಧಳಾಗಿಸಿದಳು. ನನ್ನ ಪತಿ ರಾಮನಿಗೆ ವನವಾಸ, ಭರತನಿಗೆ ಪಟ್ಟಾಭಿಷೇಕ ಹೀಗೆ ಎರಡು ವರವನ್ನು ಸತ್ಯಸಂಧನಾದ ನೃಪೋತ್ತಮನಲ್ಲಿ ಬೇಡಿದಳು.

ನಾದ್ಯ ಭೋಕ್ಷ್ಯೇ ನ ಚ ಸ್ವಪ್ಸ್ಯೇ ನ ಚ ಪಾಸ್ಯೇ ಕಥಂಚನ ॥೮॥

ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ।
ಇತಿ ಬ್ರುವಾಣಾಂ ಕೈಕೇಯೀಂ ಶ್ವಶುರೋ ಮೇ ಸ ಮಾನದಃ ॥೯॥

ಅಯಾಚತಾರ್ಥೈರನರ್ಥೈರ್ನ ಚ ಯಾಚ್ಞಾಂ ಚಕಾರ ಸಾ ।
ಮಮ ಭರ್ತಾ ಮಹಾತೇಜಾ ವಯಸಾ ಪಂಚವಿಂಶಕಃ ॥೧೦॥

ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ ।
ರಾಮೇತಿ ಪ್ರಥಿತೋ ಲೋಕೇ ಗುಣವಾನ್ ಸತ್ಯವಾನ್ ಶುಚಿಃ ॥೧೧॥

ವಿಶಾಲಾಕ್ಷೋ ಮಹಾಬಾಹುಃ ಸರ್ವಭೂತಹಿತೇ ರತಃ ।
ಕಾಮಾರ್ತಸ್ತು ಮಹಾತೇಜಾಃ ಪಿತಾ ದಶರಥಃ ಸ್ವಯಮ್ ॥೧೨॥

ಕೈಕೇಯ್ಯಾಃ ಪ್ರಿಯಕಾಮಾರ್ಥಂ ತಂ ರಾಮಂ ನಾಭ್ಯಷೇಚಯತ್ ।

'ರಾಮನಿಗೆ ಪಟ್ಟಾಭಿಷೇಕ ಮಾಡಿದರೆ ನಾನು ಇಂದು ಉಣ್ಣುವುದಿಲ್ಲ, ಮಲಗುವುದಿಲ್ಲ, ಕುಡಿಯುವುದಿಲ್ಲ. ಇಂದೇ ನನ್ನ ಜೀವನದ ಕೊನೆ ಎಂದು ಕೈಕೇಯಿ ಹೇಳಿದಳು. ಸತ್ಕಾರಪ್ರದರಾದ ನನ್ನ ಮಾವನವರು ನಿನಗೆ ಬೇಕಾದ ಧನಕನಕಾದಿಗಳನ್ನೆಲ್ಲ ಕೊಡುತ್ತೇನೆ. ರಾಮನ ಪಟ್ಟಾಭಿಷೇಕಕ್ಕೆ ಅಡ್ಡಿ ಮಾಡಬೇಡೆಂದು ಅಂಗಲಾಚಿದರು. ಅವರ ಕೋರಿಕೆಯನ್ನು ಚಿಕ್ಕತ್ತೆಯವರು ಒಪ್ಪಿಕೊಳ್ಳಲಿಲ್ಲ.

ಮಹಾತೇಜಸ್ವಿಗಳಾದ ನನ್ನ ಪತಿಗೆ ಆಗ ಇಪ್ಪತ್ತೈದು ವರ್ಷ. ನನಗೆ ಹದಿನೆಂಟು ವರ್ಷವಾಗಿತ್ತು. ಗುಣವಂತನು, ಸತ್ಯವಂತನು, ಶುಚಿಯು ವಿಶಾಲಾಕ್ಷನು, ಮಹಾ-ಬಾಹುವು, ಸರ್ವಭೂತಹಿತರತನು ರಾಮನೆಂದು ಪ್ರಸಿದ್ಧನಾದವನು ನನ್ನ ಪತಿ.

ಮಹಾತೇಜಸ್ಸಿನ ದಶರಥರು ಕಾಮಾರ್ತರಾಗಿ ಕೈಕೇಯಿಯ ಪ್ರೀತಿಗಾಗಿ ರಾಮನಿಗೆ ಪಟ್ಟಾಭಿಷೇಕ ಮಾಡಲಿಲ್ಲ.

ಅಭಿಷೇಕಾಯ ತು ಪಿತುಃ ಸಮೀಪಂ ರಾಮಮಾಗತಮ್ ॥೧೩॥

ಕೈಕೇಯ್ಯಾಃ ಮಮ ಭರ್ತಾರಮಿತ್ಯುವಾಚ ಧೃತಂ ವಚಃ ।
ತವ ಪಿತ್ರಾ ಸಮಾಜ್ಞಪ್ತಂ ಮಮೇದಂ ಶೃಣು ರಾಘವ ॥೧೪॥

ಭರತಾಯ ಪ್ರದಾತವ್ಯಮಿದಂ ರಾಜ್ಯಮಕಂಟಕಮ್ ।
ತ್ವಯಾ ಹಿ ಖಲು ವಸ್ತವ್ಯಂ ನವ ವರ್ಷಾಣಿ ಪಂಚ ಚ ॥೧೫॥

ವನೇ ಪ್ರವ್ರಜ ಕಾಕುತ್ಸ್ಥ ಪಿತರಂ ಮೋಚಯಾನೃತಾತ್ ।
ತಥೇತ್ಯುಕ್ತ್ವಾ ಚ ತಾಂ ರಾಮಃ ಕೈಕೇಯೀಮಕುತೋಭಯಃ ॥೧೬॥

ಚಕಾರ ತದ್ವಚಸ್ತಸ್ಯಾ ಮಮ ಭರ್ತಾ ದೃಢವ್ರತಃ ।

ಅಭಿಷೇಕಕ್ಕೆಂದು ತಂದೆಯ ಬಳಿ ಬಂದ ನನ್ನ ಭರ್ತಾ ರಾಮನಿಗೆ ಕೈಕೇಯಿಯು ದೃಢನಿರ್ಧಾರದ ಮಾತನ್ನು ಹೇಳಿದಳು –

ರಾಘವ ! ನಿನ್ನ ತಂದೆ ನನಗೆ ಆಜ್ಞೆ ಮಾಡಿದ್ದಾರೆ ಕೇಳು – ಈ ನಿಷ್ಕಂಟಕ ಸಾಮ್ರಾಜ್ಯವನ್ನು ಭರತನಿಗೆ ಕೊಡಬೇಕು. ನೀನು ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕು. ಕಾಕುತ್ಸ್ಥ ! ತಂದೆಯನ್ನು ಅನೃತದಿಂದ ಬಿಡುಗಡೆಗೊಳಿಸು.

ಹಾಗೇ ಆಗಲೆಂದು ಕೈಕೇಯಿಗೆ ಹೇಳಿದ ನಿರ್ಭಯನಾದ ರಾಮನು ನನ್ನ ಪತಿ ದೃಢವ್ರತನು – ಕೈಕೆಯಿಯ ಆ ಮಾತನ್ನು ನೆರವೇರಿಸಿದನು.

ದದ್ಯಾನ್ನ ಪ್ರತಿಗೃಹ್ಣೀಯಾತ್ ಸತ್ಯಂ ಬ್ರೂಯಾನ್ನ ಚಾನೃತಮ್ ॥೧೭॥

ಏತದ್ಬ್ರಾಹ್ಮಣ ರಾಮಸ್ಯ ವ್ರತಂ ಧೃತಮನುತ್ತಮಮ್ ।
ತಸ್ಯ ಭ್ರಾತಾ ತು ದ್ವೈಮಾತ್ರೋ ಲಕ್ಷ್ಮಣೋ ನಾಮ ವೀರ್ಯವಾನ್ ॥

ರಾಮಸ್ಯ ಪುರುಷವ್ಯಾಘ್ರಃ ಸಹಾಯಃ ಸಮರೇಽರಿಹಾ ।
ಸ ಭ್ರಾತಾ ಲಕ್ಷ್ಮಣೋ ನಾಮ ಧರ್ಮಚಾರೀ ದೃಢವ್ರತಃ ॥೧೯॥

ಅನ್ವಗಚ್ಛದ್ದನುಷ್ಪಾಣಿಃ ಪ್ರವ್ರಜಂತಂ ಮಯಾ ಸಹ ।
ಜಟೀ ತಾಪಸರೂಪೇಣ ಮಯಾ ಸಹ ಸಹಾನುಜಃ ॥೨೦॥

ಪ್ರವಿಷ್ಟೋ ದಂಡಕಾರಣ್ಯಂ ಧರ್ಮನಿತ್ಯೋ ಜಿತೇಂದ್ರಿಯಃ ।
ತೇ ವಯಂ ಪ್ರಚ್ಯುತಾ ರಾಜ್ಯಾತ್ ಕೈಕೇಯ್ಯಾಸ್ತು ಕೃತೇ ತ್ರಯಃ॥೨೧॥

ವಿಚರಾಮ ದ್ವಿಜಶ್ರೇಷ್ಠ ವನಂ ಗಂಭೀರಮೋಜಸಾ ।
ಸಮಾಶ್ವಸ ಮುಹೂರ್ತಂ ತು ಶಕ್ಯಂ ವಸ್ತುಮಿಹ ತ್ವಯಾ ॥೨೨॥

ಆಗಮಿಷ್ಯತಿ ಮೇ ಭರ್ತಾ ವನ್ಯಮಾದಾಯ ಪುಷ್ಕಲಮ್ ।
ರುರೂನ್ ಗೋಧಾನ್ ವರಾಹಾಂಶ್ಚ ಹತ್ವಾದಯಾಮಿಷಾನ್ ಬಹೂನ್ ॥

ಬ್ರಾಹ್ಮಣ ! ಯಾವತ್ತೂ ದಾನ ಮಾಡಬೇಕು. ಪ್ರತಿಗ್ರಹವನ್ನು ಮಾಡಬಾರದು. ಸತ್ಯವನ್ನು ಹೇಳಬೇಕು. ಸುಳ್ಳನ್ನು ಹೇಳಬಾರದು. ಇದು ರಾಮನ ಅತ್ಯುತ್ತಮವಾದ ದೃಢವ್ರತ.

ರಾಮನ ಎರಡನೆಯ ತಾಯಿ ಸುಮಿತ್ರೆಯಲ್ಲಿ ಹುಟ್ಟಿದ ವೀರ್ಯವಂತನಾದ ಲಕ್ಷ್ಮಣ ಅವನ ತಮ್ಮ. ಪುರುಷವ್ಯಾಘ್ರನಾದ ತಮ್ಮ ಯುದ್ಧದಲ್ಲಿ ರಾಮನಿಗೆ ಸಹಾಯಕನಾಗಿ ಶತ್ರು ಸಂಹಾರಕನಾಗುತ್ತಾನೆ.

ಧರ್ಮಚಾರಿ (ಬ್ರಹ್ಮಚಾರಿ) ದೃಢವ್ರತನು ಆದ ತಮ್ಮ ಲಕ್ಷ್ಮಣನು ಧನುಷ್ಪಾಣಿಯಾಗಿ ಕಾಡಿಗೆ ಹೊರಟಿದ್ದ ರಾಮನನ್ನು ನನ್ನೊಂದಿಗೆ ಹಿಂಬಾಲಿಸಿದನು.

ಜಟಾಧಾರಿ ತಾಪಸವೇಷದವನು, ಧರ್ಮನಿತ್ಯನು, ಜಿತೇಂದ್ರಿಯನು ಆದ ರಾಮ ಸಹೋದರ ಹಾಗೂ ನನ್ನೊಂದಿಗೆ ದಂಡಕಾರಣ್ಯವನ್ನು ಪ್ರವೇಶಿಸಿರುವನು.

ದ್ವಿಜಶ್ರೇಷ್ಠ ! ಕೈಕೇಯಿಯಿಂದಾಗಿ ರಾಜ್ಯಭ್ರಷ್ಟರಾದ ನಾವು ಮೂರು ಮಂದಿ ಈ ಗೊಂಡಾರಣ್ಯವನ್ನು ಪರಾಕ್ರಮಾವಲಂಬಿಗಳಾಗಿ ಸಂಚರಿಸುತ್ತಿದ್ದೇವೆ.

ನಿನಗೆ ಆಗುವುದಾದರೆ ಮುಹೂರ್ತಕಾಲ ಇಲ್ಲಿ ಆಶ್ರಮದಲ್ಲಿ ವಿಶ್ರಮಿಸು. ನನ್ನ ಪತಿಯು ಪುಷ್ಕಲವಾಗಿ ವನ್ಯ ಮೃಗಗಳನ್ನು ಸಂಹರಿಸಿ ಅದರ ಮಾಂಸವನ್ನು ತರುತ್ತಾನೆ. (ರುರು, ನೀರುಡ, ಹಂದಿಗಳನ್ನು ಕೊಂಡು ಮಾಂಸವನ್ನು ತರುತ್ತಾನೆ.)

ಸ ತ್ವಂ ನಾಮ ಚ ಗೋತ್ರಂ ಚ ಕುಲಂ ಚಾಚಕ್ಷ್ವ ತತ್ತ್ವತಃ ।
ಏಕಶ್ಚ ದಂಡಕಾರಣ್ಯೇ ಕಿಮರ್ಥಂ ಚರಸಿ ದ್ವಿಜ ॥೨೪॥

ಏವಂ ಬ್ರುವಂತ್ಯಾಂ ಸೀತಾಯಾಂ ರಾಮಪತ್ನ್ಯಾಂ ಮಹಾಬಲಃ ।
ಪ್ರತ್ಯುವಾಚೋತ್ತರಂ ತೀವ್ರಂ ರಾವಣೋ ರಾಕ್ಷಸಾಧಿಪಃ ॥೨೫॥

ಯೇನ ವಿತ್ರಾಸಿತಾ ಲೋಕಾಃ ಸದೇವಾಸುರಮಾನುಷಾಃ ।
ಅಹಂ ಸ ರಾವಣೋ ನಾಮ ಸೀತೇ ರಕ್ಷೋಗಣೇಶ್ವರಃ ॥೨೬॥

ತ್ವಾಂ ತು ಕಾಂಚನವರ್ಣಾಭಾಂ ದೃಷ್ಟ್ವಾ ಕೌಶೇಯವಾಸಿನೀಮ್ ।
ರತಿಂ ಸ್ವಕೇಷು ದಾರೇಷು ನಾಧಿಗಚ್ಛಾಮ್ಯನಿಂದಿತೇ ॥೨೭॥

ಬಹ್ವೀನಾಮುತ್ತಮಸ್ತ್ರೀಣಾಮಾಹೃತಾನಾಮಿತಸ್ತತಃ ।
ಸರ್ವಾಸಾಮೇವ ಭದ್ರಂ ತೇ ಮಮಾಗ್ರಮಹಿಷೀ ಭವ ॥೨೮॥

ಬ್ರಾಹ್ಮಣ ! ನೀನೂ ಕೂಡ ನಿನ್ನ ಹೆಸರು ಗೋತ್ರ ಕುಲವನ್ನು ಯಥಾರ್ಥವಾಗಿ ತಿಳಿಸು. ದಂಡಕಾರಣ್ಯದಲ್ಲಿ ಒಬ್ಬಂಟಿಯಾಗಿ ಏಕೆ ಸಂಚರಿಸುತ್ತಿರುವಿ ?

ರಾಮಪತ್ನಿ ಸೀತೆ ಹೀಗೆ ಹೇಳಲು ಮಹಾಬಲ ರಾಕ್ಷಸಾಧಿಪ ರಾವಣ ತೀವ್ರವಾಗಿ ಉತ್ತರಿಸಿದನು.

ಸೀತೆ ! ದೇವ ಅಸುರ ಮಾನವರಿಂದ ಕೂಡಿದ ಎಲ್ಲ ಲೋಕಗಳನ್ನು ಪರಾಕ್ರಮ-ದಿಂದ ಹೆದರಿಸಿರುವ ರಕ್ಷೋಗಣೇಶ್ವರನಾದ ರಾವಣ ನಾನು.

ಚಿನ್ನದಂತೆ ಕಾಂತಿಯವಳು, ನವುರಾದ ರೇಷ್ಮವಸ್ತ್ರವನ್ನು ಧರಿಸಿರುವ ನಿನ್ನನ್ನು ಕಂಡ ಮೇಲೆ ನನಗೆ ನನ್ನ ಹೆಂಡತಿಯರ ಮೇಲೆ ವ್ಯಾಮೋಹವೇ ಹೊರಟು ಹೋಗಿದೆ. ನಾನಾ ಕಡೆಯಿಂದ ಕರೆ ತಂದಿರುವ ಅನೇಕ ಉತ್ತಮ ಸ್ತ್ರೀಯರಿಗೆಲ್ಲ ನೀನೇ ಅಗ್ರಪಟ್ಟದರಸಿಯಾಗು. ನಿನಗೆ ಮಂಗಳವಾಗಲಿ.

ಲಂಕಾ ನಾಮ ಸಮುದ್ರಸ್ಯ ಮಧ್ಯೇ ಮಮ ಮಹಾಪುರೀ ।
ಸಾಗರೇಣ ಪರಿಕ್ಷಿಪ್ತಾ ನಿವಿಷ್ಟಾ ಗಿರಿಮೂರ್ಧನಿ ॥೨೯॥

ತತ್ರ ಸೀತೇ ಮಯಾ ಸಾರ್ಧಂ ವನೇಷು ವಿಹರಿಷ್ಯಸಿ ।
ನ ಚಾಸ್ಯ ವನವಾಸಸ್ಯ ಸ್ಪೃಹಯಿಷ್ಯಸಿ ಭಾಮಿನಿ ॥೩೦॥

ಲಂಕೆಯೆಂಬ ನನ್ನ ಮಹಾಪುರಿಯು ಸಮುದ್ರದ ಮಧ್ಯ ಇದೆ. ಸಾಗರದಿಂದ ಸುತ್ತುವರಿದಿರುವ ಆ ಲಂಕಾಪುರಿಯು ಬೆಟ್ಟದ ಮೇಲಿದೆ.

ಸೀತೆ ! ಅಲ್ಲಿ ನೀನು ನನ್ನೊಂದಿಗೆ ವನವಿಹಾರ ಮಾಡಬಹುದು. ಆಗ ನಿನಗೆ ಈ ಕ್ಲಿಷ್ಟ ಅರಣ್ಯವಾಸದ ಬಯಕೆಯೇ ಬರುವುದಿಲ್ಲ.

ಪಂಚ ದಾಸ್ಯಃ ಸಹಸ್ರಾಣಿ ಸರ್ವಾಭರಣಭೂಷಿತಾಃ ।
ಸೀತೇ ಪರಿಚರಿಷ್ಯಂತಿ ಭಾರ್ಯಾ ಭವಸಿ ಮೇ ಯದಿ ॥೩೧॥

ನೀನು ನನ್ನ ಹೆಂಡತಿಯಾದರೆ ಸರ್ವಾಭರಣ ಭೂಷಿತೆಯರಾದ ಐದು ಸಾವಿರ ದಾಸಿಯರು ನಿನ್ನ ಸೇವೆ ಮಾಡುತ್ತಾರೆ !

ರಾವಣೇನೈವಮುಕ್ತಾ ತು ಕುಪಿತಾ ಜನಕಾತ್ಮಜಾ ।
ಪ್ರತ್ಯುವಾಚಾನವದ್ಯಾಂಗೀ ತಮನಾದೃತ್ಯ ರಾಕ್ಷಸಮ್ ॥೩೨॥

ಮಹಾಗಿರಿಮಿವಾಕಂಪ್ಯಂ ಮಹೇಂದ್ರಸದೃಶಂ ಪತಿಮ್ ।
ಮಹೋದಧಿಮಿವಾಕ್ಷೋಭ್ಯಮಹಂ ರಾಮಮನುವ್ರತಾ ॥೩೩॥

ಸರ್ವಲಕ್ಷಣಸಂಪನ್ನಂ ನ್ಯಗ್ರೋಧಪರಿಮಂಡಲಮ್ ।
ಸತ್ಯಸಂಧಂ ಮಹಾಭಾಗಮಹಂ ರಾಮಮನುವ್ರತಾ ॥೩೪॥

ಮಹಾಬಾಹುಂ ಮಹೋರಸ್ಕಂ ಸಿಂಹವಿಕ್ರಾಂತಗಾಮಿನಮ್ ।
ನೃಸಿಂಹಂ ಸಿಂಹಸಂಕಾಶಮಹಂ ರಾಮಮನುವ್ರತಾ ॥೩೫॥

ರಾವಣನು ಹೀಗೆ ಹೇಳಿದಾಗ ಕೋಪಗೊಂಡ ಜಾನಕಿಯು ನಿರವದ್ಯಾಂಗಿಯು ರಾವಣನನ್ನು ಧಿಕ್ಕರಿಸಿ ಮಹಾಗಿರಿಯಂತೆ ಅಕಂಪ್ಯನು, ಮಹಾಸಮುದ್ರದಂತೆ ಅಕ್ಷೋಭ್ಯ = ಪ್ರಶಾಂತನು ಆದ ಮಹೇಂದ್ರ ಸದೃಶನಾದ ನನ್ನ ಪತಿಯನ್ನೆ ಅನುಸರಿಸತಕ್ಕವಳು ನಾನು.

ಸರ್ವಲಕ್ಷಣಸಂಪನ್ನನು, ಚಾಚಿದ ಎರಡು ತೋಳುಗಳಷ್ಟು ಎತ್ತರದವನು. ಸತ್ಯಸಂಧನು, ಮಹಾಭಾಗನಾದ ರಾಮನನ್ನು ಅನುಸರಿಸಿರುವವಳು ನಾನು.

ಮಹಾಬಾಹುವಾದ ವಿಶಾಲವಕ್ಷಃಸ್ಥಲದವನಾದ ಸಿಂಹದಂತೆ ಪರಾಕ್ರಮಿ ಹಾಗೂ ನಡಿಗೆಯವನು ಪುರುಷ ಶ್ರೇಷ್ಠನು ಆದ ರಾಮನನ್ನು ಅನುಸರಿಸಿರುವವಳು.

ಪೂರ್ಣಚಂದ್ರಾನನಂ ರಾಮಂ ರಾಜವತ್ಸಂ ಜಿತೇಂದ್ರಿಯಮ್।
ಪೃಥುಕೀರ್ತಿಂ ಮಹಾತ್ಮಾನಮಹಂ ರಾಮಮನುವ್ರತಾ ॥೩೬॥

ತುಂಬು ಚಂದಿರನ ಸೊಬಗಿನ ಮುಖದವನು, ರಾಜಕುಮಾರನು, ಜಿತೇಂದ್ರಿಯನು, ಮಹಾಕೀರ್ತಿಶಾಲಿಯಾದ ಮಹಾತ್ಮ ರಾಮನನ್ನು ಅನುಸರಿಸಿರುವವಳು ನಾನು.

ತ್ವಂ ಪುನರ್ಜಂಬುಕಃ ಸಿಂಹೀಂ ಮಾಮಿಚ್ಛಸಿ ಸುದುರ್ಲಭಾಮ್ ।
ನಾಹಂ ಶಕ್ಯಾ ತ್ವಯಾ ಸ್ಪಷ್ಟುಮಾದಿತ್ಯಸ್ಯ ಪ್ರಭಾ ಯಥಾ ॥೩೭॥

ಪಾದಪಾನ್ ಕಾಂಚನಾನ್ನೂನಂ ಬಹೂನ್ ಪಶ್ಯಸಿ ಮಂದಭಾಕ್ ।
ರಾಘವಸ್ಯ ಪ್ರಿಯಾಂ ಭಾರ್ಯಾಂ ಯಸ್ತ್ವಮಿಚ್ಛಸಿ ರಾವಣ ॥೩೮॥

ಕ್ಷುಧಿತಸ್ಯ ಹಿ ಸಿಂಹಸ್ಯ ಮೃಗಶತ್ರೋಸ್ತರಸ್ವಿನಃ ।
ಆಶೀವಿಷಸ್ಯ ವದನಾದ್ದಂಷ್ಟ್ರಮಾದಾತುಮಿಚ್ಛಸಿ ॥೩೯॥

ಮಂದರಂ ಪರ್ವತಶ್ರೇಷ್ಠಂ ಪಾಣಿನಾ ಹರ್ತುಮಿಚ್ಛಸಿ ।
ಕಾಲಕೂಟಂ ವಿಷಂ ಪೀತ್ವಾ ಸ್ವಸ್ತಿಮಾನ್ ಗಂತುಮಿಚ್ಛಸಿ ॥೪೦॥

ಅಕ್ಷಿ ಸೂಚ್ಯಾ ಪ್ರಮೃಜಃ ಜಿಹ್ವಯಾ ಲೇಢಿ ಚ ಕ್ಷುರಮ್ ।
ರಾಘವಸ್ಯ ಪ್ರಿಯಾಂ ಭಾರ್ಯಾಂ ಯೋಽಧಿಗಂತುಂ ತ್ವಮಿಚ್ಛಸಿ॥೪೧॥

ಅವಸಜ್ಯ ಶಿಲಾಂ ಕಂಠೇ ಸಮುದ್ರಂ ತರ್ತುಮಿಚ್ಛಸಿ ।
ಸೂರ್ಯಾಚಂದ್ರಮಸೌ ಚೋಭೌ ಪಾಣಿಭ್ಯಾಂ ಹರ್ತುಮಿಚ್ಛಸಿ ॥೪೨॥

ಯೋ ರಾಮಸ್ಯ ಪ್ರಿಯಾಂ ಭಾರ್ಯಾಂ ಪ್ರಧರ್ಷಯಿತುಮಿಚ್ಛಸಿ ।
ಅಗ್ನಿಂ ಪ್ರಜ್ವಲಿತಂ ದೃಷ್ಟ್ವಾ ವಸ್ತ್ರೇಣಾಹರ್ತುಮಿಚ್ಛಸಿ ॥೪೩॥

ಕಲ್ಯಾಣವೃತ್ತಾಂ ರಾಮಸ್ಯ ಯೋ ಭಾರ್ಯಾಂ ಹರ್ತುಮಿಚ್ಛಸಿ ।
ಅಯೋಮುಖಾನಾಂ ಶೂಲಾನಾಂ ಮಧ್ಯೇ ಚರಿತುಮಿಚ್ಛಸಿ ॥೪೪॥

ರಾಮಸ್ಯ ಸದೃಶೀಂ ಭಾರ್ಯಾಂ ಯೋಽಧಿಗಂತುಂ ತ್ವಮಿಚ್ಛಸಿ ॥

ನರಿಯಂತಿರುವ ನೀನು ಸುದುರ್ಲಭಳಾದ ಸಿಂಹಿಣಿಯಂತಿರುವ ನನ್ನನ್ನು ಬಯಸುತ್ತಿರುವಿ. ಸೂರ್ಯನ ಪ್ರಭೆಯನ್ನು ಹೇಗೋ ಹಾಗೆ ನನ್ನನ್ನು ಮುಟ್ಟಲೂ ಸಾಧ್ಯವಿಲ್ಲ.

ರಾವಣ ! ರಾಮನ ಪ್ರಿಯ ಭಾರ್ಯೆಯನ್ನು ಬಯಸುತ್ತಿರುವ ನೀನು ನಿಶ್ಚಯವಾಗಿ ಇಲ್ಲಿರುವ ಮರಗಳನ್ನೆಲ್ಲ ಬಂಗಾರಮಯವನ್ನಾಗಿ ಕಾಣುತ್ತಿರುವ ಮಂದ ಭಾಗ್ಯನಾಗಿರುವೆ.

(ಸಾವು ಸನ್ನಿಹಿತನಾದವನಿಗೆ ಮರಗಳು ಬಂಗಾರಮಯವಾಗಿ ಕಾಣುತ್ತದೆ– ಯೆಂದು ಶಾಸ್ತ್ರ ಪ್ರಸಿದ್ಧಿ.)

ಮೃಗಗಳ ವೈರಿಯಾದ ವೇಗಶಾಲಿಯಾದ ಹಸಿದಿರುವ ಸಿಂಹದ ಕೋರೆದಾಡೆ-ಗಳನ್ನು, ವಿಷಸರ್ಪದ ಬಾಯಿಂದ ವಿಷದ ಹಲ್ಲುಗಳನ್ನು ಕೀಳಲು ನೀನು ಬಯಸುತ್ತಿರುವೆ.

ಪರ್ವತಶ್ರೇಷ್ಠವಾದ ಮಂದರಪರ್ವತವನ್ನು ಕೈಯಿಂದಲೇ ಬಯಸುತ್ತಿರುವಿ ! ಕಾಲಕೂಟ ವಿಷವನ್ನು ಕುಡಿದು ಒಳ್ಳೆಯದಾಗಬೇಕೆಂದು ಬಯಸುತ್ತಿರುವಿ !

ರಾಘವನ ಪ್ರಿಯಭಾರ್ಯೆಯನ್ನು ಹೊಂದಲು ಬಯಸುತ್ತಿರುವ ನೀನು ಸೂಜಿಯಿಂದ ಕಣ್ಣನ್ನು ಚುಚ್ಚಿಕೊಳ್ಳುತ್ತಿರುವಿ. ಕತ್ತಿಯ ಅಲಗನ್ನು ನಾಲಿಗೆಯಿಂದ ನೆಕ್ಕುತ್ತಿರುವೆ.

ರಾಮನ ಪ್ರಿಯ ಮಡದಿಯನ್ನು ಕೆಣಕುತ್ತಿರುವ ನೀನು ಕುತ್ತಿಗೆಯಲ್ಲಿ ಕಲ್ಲು ಕಟ್ಟಿಕೊಂಡು ಸಮುದ್ರವನ್ನು ದಾಟಲು ಇಚ್ಛಿಸುತ್ತಿರುವಿ. ಸೂರ್ಯ ಚಂದ್ರರಿಬ್ಬ-ರನ್ನೂ ಕೈಗಳಿಂದಲೆ ಕೀಳಲು ಬಯಸುತ್ತಿರುವಿ.

ಕಲ್ಯಾಣ ಚರಿತೆಯಳಾದ ರಾಮಪತ್ನಿಯನ್ನು ಅಪಹರಿಸಲು ಬಯಸಿರುವ ನೀನು ಪ್ರಜ್ವಲಿತವಾದ ಬೆಂಕಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಒಯ್ಯಬೇಕೆಂದು ಬಯಸಿದಂತಿದೆ !

ರಾಮನಿಗೆ ಅನುರೂಪಳಾದಿ ಸೀತೆಯನ್ನು ಬಯಸುತ್ತಿರುವ ನೀನು ಕಬ್ಬಿಣದ ಶೂಲಗಳ ತುದಿಯಲ್ಲಿ ನಡೆಯಲು ಬಯಸುತ್ತಿರುವಂತಿದೆ !

ಯದಂತರಂ ಸಿಂಹಶೃಗಾಲಯೋರ್ವನೇ
ಯದಂತರಂ ಸ್ಯಂದಿನಿಕಾಸಮುದ್ರಯೋಃ ।
ಸುರಾಗ್ರ್ಯಸೌವೀರಕಯೋರ್ಯದಂತರಂ
ತದಂತರಂ ವೈ ತವ ರಾಘವಸ್ಯ ಚ ॥೪೫॥

ಯದಂತರಂ ಕಾಂಚನಸೀಸಲೋಹಯೋ-
ರ್ಯದಂತರಂ ಚಂದನವಾರಿಪಂಕಯೋಃ ।
ಯದಂತರಂ ಹಸ್ತಿಬಿಡಾಲಯೋರ್ವನೇ
ತದಂತರಂ ದಾಶರಥೇಸ್ತವೈವ ಚ ॥೪೬॥

ತ್ವಂ ಪುನರ್ಜಂಬುಕಃ ಸಿಂಹೀಂ ಮಾಮಿಚ್ಛಸಿ ಸುದುರ್ಲಭಾಮ್ ।
ನಾಹಂ ಶಕ್ಯಾ ತ್ವಯಾ ಸ್ಪ್ರಷ್ಟುಮಾದಿತ್ಯಸ್ಯ ಪ್ರಭಾ ಯಥಾ ॥೩೭॥

ಪಾದಪಾನ್ ಕಾಂಚನಾನ್ನೂನಂ ಬಹೂನ್ ಪಶ್ಯಸಿ ಮಂದಭಾಕ್ ।
ರಾಘವಸ್ಯ ಪ್ರಿಯಾಂ ಭಾರ್ಯಾಂ ಯಸ್ತ್ವಮಿಚ್ಛಸಿ ರಾವಣ ॥೩೮॥

ಕ್ಷುಧಿತಸ್ಯ ಹಿ ಸಿಂಹಸ್ಯ ಮೃಗಶತ್ರೋರಸ್ತರಸ್ವಿನಃ ।
ಆಶೀವಿಷಸ್ಯ ವದನಾದ್ದಂಷ್ಟ್ರಮಾದಾತುಮಿಚ್ಛಸಿ ॥೩೯॥

ಮಂದರಂ ಪರ್ವತಶ್ರೇಷ್ಠಂ ಪಾಣಿನಾ ಹರ್ತುಮಿಚ್ಛಸಿ ।
ಕಾಲಕೂಟಂ ವಿಷಂ ಪೀತ್ವಾ ಸ್ವಸ್ತಿಮಾನ್ ಗಂತುಮಿಚ್ಛಸಿ ॥೪೦॥

ಅಕ್ಷಿ ಸೂಚ್ಯಾ ಪ್ರಮೃಜಃ ಜಿಹ್ವಯಾ ಲೇಢಿ ಚ ಕ್ಷುರಮ್ ।
ರಾಘವಸ್ಯ ಪ್ರಿಯಾಂ ಭಾರ್ಯಾಂ ಯೋಽಧಿಗಂತುಂ ತ್ವಮಿಚ್ಛಸಿ॥೪೧॥

ಅವಸಜ್ಯ ಶಿಲಾಂ ಕಂಠೇ ಸಮುದ್ರಂ ತರ್ತುಮಿಚ್ಛಸಿ ।
ಸೂರ್ಯಾಚಂದ್ರಮಸೌ ಚೋಭೌ ಪಾಣಿಭ್ಯಾಂ ಹರ್ತುಮಿಚ್ಛಸಿ ॥೪೨॥

ಯೋ ರಾಮಸ್ಯ ಪ್ರಿಯಾಂ ಭಾರ್ಯಾಂ ಪ್ರಧರ್ಷಯಿತುಮಿಚ್ಛಸಿ ।
ಅಗ್ನಿಂ ಪ್ರಜ್ವಲಿತಂ ದೃಷ್ಟ್ವಾ ವಸ್ತ್ರೇಣಾಹರ್ತುಮಿಚ್ಛಸಿ ॥೪೩॥

ಕಲ್ಯಾಣವೃತ್ತಾಂ ರಾಮಸ್ಯ ಯೋ ಭಾರ್ಯಾಂ ಹರ್ತುಮಿಚ್ಛಸಿ ।
ಅಯೋಮುಖಾನಾಂ ಶೂಲಾನಾಂ ಮಧ್ಯೇ ಚರಿತುಮಿಚ್ಛಸಿ ॥೪೪॥

ರಾಮಸ್ಯ ಸದೃಶೀಂ ಭಾರ್ಯಾಂ ಯೋಽಧಿಗಂತುಂ ತ್ವಮಿಚ್ಛಸಿ ॥

ನರಿಯಂತಿರುವ ನೀನು ಸುದುರ್ಲಭಳಾದ ಸಿಂಹಿಣಿಯಂತಿರುವ ನನ್ನನ್ನು ಬಯಸುತ್ತಿರುವಿ. ಸೂರ್ಯನ ಪ್ರಭೆಯನ್ನು ಹೇಗೋ ಹಾಗೆ ನನ್ನನ್ನು ಮುಟ್ಟಲೂ ಸಾಧ್ಯವಿಲ್ಲ.

ರಾವಣ ! ರಾಮನ ಪ್ರಿಯ ಭಾರ್ಯೆಯನ್ನು ಬಯಸುತ್ತಿರುವ ನೀನು ನಿಶ್ಚಯವಾಗಿ ಇಲ್ಲಿರುವ ಮರಗಳನ್ನೆಲ್ಲ ಬಂಗಾರಮಯವನ್ನಾಗಿ ಕಾಣುತ್ತಿರುವ ಮಂದ ಭಾಗ್ಯನಾಗಿರುವೆ.

(ಸಾವು ಸನ್ನಿಹಿತನಾದವನಿಗೆ ಮರಗಳು ಬಂಗಾರಮಯವಾಗಿ ಕಾಣುತ್ತದೆ-ಯೆಂದು ಶಾಸ್ತ್ರ ಪ್ರಸಿದ್ಧಿ.)

ಮೃಗಗಳ ವೈರಿಯಾದ ವೇಗಶಾಲಿಯಾದ ಹಸಿದಿರುವ ಸಿಂಹದ ಕೋರೆದಾಡೆ-ಗಳನ್ನು, ವಿಷಸರ್ಪದ ಬಾಯಿಂದ ವಿಷದ ಹಲ್ಲುಗಳನ್ನು ಕೀಳಲು ನೀನು ಬಯಸುತ್ತಿರುವೆ.

ಪರ್ವತಶ್ರೇಷ್ಠವಾದ ಮಂದರಪರ್ವತವನ್ನು ಕೈಯಿಂದಲೇ ಬಯಸುತ್ತಿರುವಿ ! ಕಾಲಕೂಟ ವಿಷವನ್ನು ಕುಡಿದು ಒಳ್ಳೆಯದಾಗಬೇಕೆಂದು ಬಯಸುತ್ತಿರುವಿ !

ರಾಘವನ ಪ್ರಿಯಭಾರ್ಯೆಯನ್ನು ಹೊಂದಲು ಬಯಸುತ್ತಿರುವ ನೀನು ಸೂಜಿಯಿಂದ ಕಣ್ಣನ್ನು ಚುಚ್ಚಿಕೊಳ್ಳುತ್ತಿರುವಿ. ಕತ್ತಿಯ ಅಲಗನ್ನು ನಾಲಿಗೆಯಿಂದ ನೆಕ್ಕುತ್ತಿರುವೆ.

ರಾಮನ ಪ್ರಿಯ ಮಡದಿಯನ್ನು ಕೆಣಕುತ್ತಿರುವ ನೀನು ಕುತ್ತಿಗೆಯಲ್ಲಿ ಕಲ್ಲು ಕಟ್ಟಿಕೊಂಡು ಸಮುದ್ರವನ್ನು ದಾಟಲು ಇಚ್ಛಿಸುತ್ತಿರುವಿ. ಸೂರ್ಯ ಚಂದ್ರರಿಬ್ಬ-ರನ್ನೂ ಕೈಗಳಿಂದಲೆ ಕೀಳಲು ಬಯಸುತ್ತಿರುವಿ.

ಕಲ್ಯಾಣ ಚರಿತೆಯಳಾದ ರಾಮಪತ್ನಿಯನ್ನು ಅಪಹರಿಸಲು ಬಯಸಿರುವ ನೀನು ಪ್ರಜ್ವಲಿತವಾದ ಬೆಂಕಿಯನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಒಯ್ಯಬೇಕೆಂದು ಬಯಸಿದಂತಿದೆ !

ರಾಮನಿಗೆ ಅನುರೂಪಳಾದಿ ಸೀತೆಯನ್ನು ಬಯಸುತ್ತಿರುವ ನೀನು ಕಬ್ಬಿಣದ ಶೂಲಗಳ ತುದಿಯಲ್ಲಿ ನಡೆಯಲು ಬಯಸುತ್ತಿರುವಂತಿದೆ !

ಯದಂತರಂ ಸಿಂಹಶೃಗಾಲಯೋರ್ವನೇ
ಯದಂತರಂ ಸ್ಯಂದಿನಿಕಾಸಮುದ್ರಯೋಃ ।
ಸುರಾಗ್ರ್ಯಸೌವೀರಕಯೋರ್ಯದಂತರಂ
ತದಂತರಂ ವೈ ತವ ರಾಘವಸ್ಯ ಚ ॥೪೫॥

ಯದಂತರಂ ಕಾಂಚನಸೀಸಲೋಹಯೋ-
ರ್ಯದಂತರಂ ಚಂದನವಾರಿಪಂಕಯೋಃ ।
ಯದಂತರಂ ಹಸ್ತಿಬಿಡಾಲಯೋರ್ವನೇ
ತದಂತರಂ ದಾಶರಥೇಸ್ತವೈವ ಚ ॥೪೬॥

ಯದಂತರಂ ವಾಯಸವೈನತೇಯಯೋ-
ರ್ಯದಂತರಂ ಮದ್ಗುಮಯೂರಯೋರಪಿ ।
ಯದಂತರಂ ಸಾರಸಗೃಧ್ರಯೋರ್ವನೇ
ತದಂತರಂ ದಾಶರಥೇಸ್ತವೈವ ಚ ॥೪೭॥

ತಸ್ಮಿನ್ ಸಹಸ್ರಾಕ್ಷಸಮಪ್ರಭಾವೇ
ರಾಮೇ ಸ್ಥಿತೇ ಕಾರ್ಮುಕಬಾಣಪಾಣೌ ।
ಹೃತಾऽಪಿ ತೇऽಹಂ ನ ಜರಾಂ ಗಮಿಷ್ಯೇ
ವಜ್ರಂ ಯಥಾ ಮಕ್ಷಿಕಯಾವಗೀರ್ಣಮ್ ॥೪೮॥

ಇತೀವ ತದ್ವಾಕ್ಯಮದುಷ್ಟಭಾವಾ
ಸುದೃಷ್ಟಮುಕ್ತ್ವಾ ರಜನೀಚರಂ ತಮ್ ।
ಗಾತ್ರಪ್ರಕಂಪಾದ್ವ್ಯಥಿತಾ ಬಭೂವ
ವಾತೋದ್ಧತಾ ಸಾ ಕದಲೀವ ತನ್ವೀ ॥೪೯॥

ತಾಂ ವೇಪಮಾನಾಮುಪಲಕ್ಷ್ಯ ಸೀತಾಂ
ಸ ರಾವಣೋ ಮೃತ್ಯುಸಮಪ್ರಭಾವಃ ।
ಕುಲಂ ಬಲಂ ನಾಮ ಚ ಕರ್ಮ ಚ ಸ್ವಂ
ಸಮಾಚಕ್ಷೇ ಭಯಕಾರಣಾರ್ಥಮ್ ॥೫೦॥

ಸಿಂಹ ನರಿಗಳಿಗೂ ಯಾವ ಅಂತರವಿದೆಯೋ, ಸಣ್ಣ ನದಿ ಸಮುದ್ರಗಳಿಗೆ ಯಾವ ಅಂತರವಿದೆಯೋ ಅಮೃತ ನವಣೆಯ ಗಂಜಿಗೂ ಯಾವ ಅಂತರವಿದೆಯೋ ನಿನಗೂ ದಾಶರಥಿ ರಾಮನಿಗೆ ಅಷ್ಟು ಅಂತರವಿದೆ ! ಸುವರ್ಣ ಸೀಸಗಳಿಗೆ ಗಂಧಮಿಶ್ರಿತ ನೀರು - ಕೆಸರಿಗೆ ಕಾಡಿನ ಆನೆ ಬೆಕ್ಕುಗಳಿಗೆ ಯಾವ ಅಂತರವಿದೆಯೋ ನಿನಗೂ ದಾಶರಥಿರಾಮನಿಗೂ ಅಷ್ಟು ಅಂತರವಿದೆ !

ಕಾಗೆ ಗರುಡಗಳಿಗೆ, ನವಿಲು - ನೀರು ಕಾಗೆಗೂ ಹಂಸ - ಹದ್ದುಗಳಿಗೆ ಎಷ್ಟು ಅಂತರವೋ ನಿನಗೂ ದಾಶರಥಿಗೂ ಅಷ್ಟು ಅಂತರವಿದೆ !

ಇಂದ್ರ ಸದೃಶನಾದ ರಾಮ ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವಾಗ ನೀನು ನನ್ನನ್ನು ಅಪಹಾರ ಮಾಡಿದರೂ ಜೀರ್ಣಿಸಿಕೊಳ್ಳಲಾರೆ. ಅಕ್ಕಿ ಕಾಳಿನ ಭ್ರಾಂತಿಯಿಂದ ನೊಣ ನುಂಗಿದ ವಜ್ರದ ಹರಳಿನಂತೆ ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ.

ಸ್ವಲ್ಪವೂ ದುಷ್ಟಭಾವವಿರದ ಸೀತೆ ಹೀಗೆ ಆ ರಜನೀಚರನಿಗೆ ದಿಟ್ಟತನದಿಂದ ನುಡಿದು ದೇಹದ ನಡುಕದಿಂದ ವ್ಯಥಿತಳಾದಳು - ಗಾಳಿಯಿಂದ ಕಂಪಿಸುವ ಬಾಳೆಗಿಡದಂತೆ.

ನಡುಗುತ್ತಿರುವ ಸೀತೆಯನ್ನು ಕಂಡು ಮೃತ್ಯುವಿನಿಂತೆ ಪ್ರಭಾವಿಯಾದ ಆ ರಾವಣನು ಭಯಕಾರಣದ ನಿವೃತ್ತಿಗಾಗಿ ತನ್ನ ಕುಲ - ಬಲ - ಹೆಸರು - ಕರ್ಮಗಳನ್ನೆಲ್ಲ ಚೆನ್ನಾಗಿ ಹೇಳಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತೇಳನೇ ಸರ್ಗ ಮುಗಿಯಿತು.

★

ಅಷ್ಟಚತ್ವಾರಿಂಶಃ ಸರ್ಗಃ

ಕಥಾಸಾರಾಂಶ– ಸೀತೆಯ ಮಾತು ಕೇಳಿ ರಾವಣನಿಗೆ ಕೋಪ ಬಂತು. ಹುಬ್ಬು ಗಂಟಿಕ್ಕಿ ಪ್ರತ್ಯುತ್ತರಿಸಿದನು –

ಸುಂದರಿ ! ನಿನಗೆ ಮಂಗಳವಾಗಲಿ, ನಾನು ಕುಬೇರನ ಮಲತಾಯಿಯ ಮಗ. ರಾವಣನೆಂದು ಪ್ರಸಿದ್ಧನಾದವನು ಹತ್ತು ತಲೆಯ ಪ್ರತಾಪಶಾಲಿ.

ಮೃತ್ಯುವಿಗೆ ಹೆದರುವ ಪ್ರಜೆಗಳು ಓಡಿ ಹೋಗುವಂತೆ ನನಗೆ ಹೆದರಿ ಪಿಶಾಚ ಪತಗ ಉರಗ ಗಂಧರ್ವ ದೇವತೆಗಳೆಲ್ಲರೂ ಓಡಿ ಹೋಗುವರು !

ಕುಬೇರನು ಒಮ್ಮೆ ಯುದ್ದದಲ್ಲಿ ನನ್ನಿಂದ ಪರಾಜಿತನಾಗಿ ಸಮೃದ್ಧವಾದ ಲಂಕಾ–ಪುರಿಯನ್ನೆ ಬಿಟ್ಟು ಕೈಲಾಸದಲ್ಲಿ ನೆಲೆಸಿದ. ಅವನ ಭವ್ಯವಾದ ಪುಷ್ಪಕ ವಿಮಾನವನ್ನು ಪರಾಕ್ರಮದಿಂದ ನಾನು ಪಡೆದಿದ್ದೇನೆ. ಅದರಲ್ಲಿ ಕುಳಿತು ಆಗಸದಲ್ಲಿ ವಿಹರಿಸುತ್ತೇನೆ ನಾನು. ನಾನು ರೋಷಗೊಂಡಾಗ ಇಂದ್ರಾದಿದೇವತೆಗಳೆಲ್ಲ ಹೆದರಿ ದಿಕ್ಕಾಪಾಲಾಗಿ ಓಡಿಹೋಗುವರು.

ನಾನು ಇರುವಲ್ಲಿ ಗಾಳಿಯೂ ಹೆದರಿ ಮೆಲ್ಲ ಬೀಸುತ್ತದೆ. ತೀಕ್ಷ್ಣಕಿರಣನಾದ ಸೂರ್ಯನೂ ಹೆದರಿ ಶೀತಲಕಿರಣಗಳನ್ನು ಬೀರುತ್ತಾನೆ. ಮರಗಳ ಎಲೆಗಳೂ ಅಲುಗಾಡುವುದಿಲ್ಲ. ನದಿಯೂ ಹರಿಯುವುದನ್ನು ನಿಲ್ಲಿಸಿಬಿಡುತ್ತದೆ.

ಇಂದ್ರನ ಅಮರಾವತಿಯಂತೆ ಸಮೃದ್ಧ ವೈಭವದ ನನ್ನ ಲಂಕಾಪುರಿಯು ಘೋರ ರಾಕ್ಷಸರಿಂದ ತುಂಬಿದೆ. ಉನ್ನತ ಸುಂದರ ಪ್ರಾಕಾರವಿದೆ. ವೈಢೂರ್ಯಮಯ ತೋರಣಗಳನ್ನು ಹೊಂದಿರುವ ಬಂಗಾರದ ಬಾಗಿಲುಗಳು ಮನಸೂರೆಗೊಳ್ಳುತ್ತವೆ. ಆನೆ ಕುದುರೆ ರಥಗಳು ತುಂಬಿವೆ. ಎಲ್ಲ ಕಾಲದ ಫಲಗಳಿರುವ ಮರಗಳು ತುಂಬಿದ ಉದ್ಯಾನಗಳ ಸೊಬಗು ಆಕರ್ಷಕವಾಗಿವೆ. ಆ ಸುಂದರ ಉದ್ಯಾನಗಳಲ್ಲಿ ನನ್ನೊಂದಿಗೆ ನೀನು ವಿಹರಿಸುತ್ತಿದ್ದರೆ ಮಾನುಷಸ್ತ್ರಿಯರ ನೆನಪೇ ಹತ್ತುವುದಿಲ್ಲ.

ಅಲ್ಲಿ ದಿವ್ಯಮಾನುಷ ಭೋಗಗಳನ್ನು ಅನುಭವಿಸುತ್ತಿದ್ದರೆ ಕ್ಷೀಣ ಆಯುಷ್ಯನಾದ ಮನುಷ್ಯ ರಾಮನ ನೆನಪೇ ನಿನಗೆ ಬರುವುದಿಲ್ಲ.

ದಶರಥನು ತನ್ನ ಪ್ರಿಯ ಪುತ್ರ ಭರತನಿಗೆ ಪಟ್ಟ ಗಟ್ಟಿ ಅಲ್ಪಸಾಮರ್ಥ್ಯದ ಜ್ಯೇಷ್ಠ ಪುತ್ರ ರಾಮನನ್ನು ಕಾಡಿಗಟ್ಟಿರುವನು. ರಾಜ್ಯಭ್ರಷ್ಟನು ಚೈತನ್ಯಹೀನನು ತಾಪಸ ಮೂರ್ಖ ಗಂಡ ರಾಮನಿಂದೇನು ಪ್ರಯೋಜನ ?

ಸರ್ವ ರಾಕ್ಷಸರ ಅಧಿಪತಿಯಾದ ಬಯಸಿ ಬಳಿಗೆ ಬಂದ ಮದನ ಶರ ಬಾಧಿತನಾದ

ನನ್ನನ್ನು ನಿರಾಕರಿಸುವುದು ತರವಲ್ಲ. ಆ ರಾಮ ಯುದ್ಧದಲ್ಲಿ ನನ್ನ ಬೆರಳಿಗೆ ಸಮಾನ ಅಲ್ಲ. ನಾನು ನಿನ್ನನ್ನು ಬಯಸಿ ಬಂದಿರುವುದು ನಿನ್ನ ಭಾಗ್ಯ ಎಂದು ಅರಿತುಕೋ.

ರಾವಣನ ಈ ಮಾತುಗಳನ್ನು ಕೇಳಿ ಕೆರಳಿ ಕೆಂಡವಾಗಿ ಕೆಂಗಣ್ಣು ತೋರಿದಳು ಸೀತೆ. ರಾಕ್ಷಸಾಧಿಪನನ್ನು ಕುರಿತು ಬಿರುನುಡಿಗಳನ್ನಾಡಿದಳು –

ಎಲ್ಲರಿಂದ ವಂದನೀಯನಾದ ಕುಬೇರನನ್ನು ಅಣ್ಣನೆಂದು ಹೇಳಿಕೊಳ್ಳುವ ನೀನು ಈ ಪರಸ್ತ್ರೀ ಬಯಕೆಯಂಥ ಕೆಟ್ಟ ಕೆಲಸದಲ್ಲಿ ಹೇಗೆ ತೊಡಗಿರುವೆ ?

ನಿನ್ನಂತಹ ದುರ್ಬುದ್ಧಿ ಹಾಗು ಅಜಿತೇಂದ್ರಿಯ ಕ್ರೂರ ಸ್ವಭಾವದವನನ್ನು ರಾಜನನ್ನಾಗಿ ಪಡೆದಿರುವ ಎಲ್ಲ ರಾಕ್ಷಸರು ಅವಶ್ಯವಾಗಿ ನಾಶವಾಗುತ್ತಾರೆ.

ಮಹೇಂದ್ರನ ಹೆಂಡತಿಯಾದ ಶಚಿಯನ್ನು ಅಪಹರಿಸಿಯಾದರೂ ಬದುಕಬಹುದು. ರಾಮನ ಹೆಂಡತಿಯನ್ನು ಬಯಸಿ ಬದುಕಲು ಸಾಧ್ಯವಿಲ್ಲ.

ಅಪ್ರತಿಮರೂಪಸಿಯಾದ ಇಂದ್ರ ಪತ್ನಿ ಶಚಿಯನ್ನು ಆಕ್ರಮಿಸಿಯೂ ವಜ್ರಾಯುಧಧಾರಿ ಇಂದ್ರನ ಕೈಯಿಂದ ಬದುಕಿ ಉಳಿಯಬಹುದೇನೋ ಆದರೆ ರಾಮಭಾರ್ಯೆಯಾದ ನನ್ನಂತಹ ನನ್ನನ್ನು ದೂಷಣಗೊಳಿಸಿದರೆ ಅಮೃತ ಕುಡಿದರೂ ನಿನಗೆ ಸಾವು ತಪ್ಪಿದ್ದಲ್ಲ !

❖

ರಾವಣವಿಕತ್ಥನಮ್

ಏವಂ ಬ್ರುವಂತ್ಯಾಂ ಸೀತಾಯಾಂ ಸಂರಬ್ಧಃ ಪರುಷಂ ವಚಃ ।
ಲಲಾಟೇ ಭ್ರುಕುಟೀಂ ಕೃತ್ವಾ ರಾವಣಃ ಪ್ರತ್ಯುವಾಚ ಹ ॥೧॥

ಭ್ರಾತಾ ವೈಶ್ರವಣಸ್ಯಾಹಂ ಸಾಪತ್ನೋ ವರವರ್ಣಿನಿ ।
ರಾವಣೋ ನಾಮ ಭದ್ರಂ ತೇ ದಶಗ್ರೀವಃ ಪ್ರತಾಪವಾನ್ ॥೨॥

ಯಸ್ಯ ದೇವಾಃ ಸಗಂಧರ್ವಾಃ ಪಿಶಾಚಪತಗೋರಗಾಃ ।
ವಿದ್ರವಂತಿ ಭಯಾದ್ಭೀತಾ ಮೃತ್ಯೋರಿವ ಸದಾ ಪ್ರಜಾಃ ॥೩॥

ಯೇನ ವೈಶ್ರವಣೋ ಭ್ರಾತಾ ದ್ವೈಮಾತ್ರಃ ಕಾರಣಾಂತರೇ ।
ದ್ವಂದ್ವಮಾಸಾದಿತಃ ಕ್ರೋಧಾದ್ರಣೇ ವಿಕ್ರಮ್ಯ ನಿರ್ಜಿತಃ ॥೪॥

ಯದ್ಭಯಾರ್ತಃ ಪರಿತ್ಯಜ್ಯ ಸ್ವಮಧಿಷ್ಠಾನಮೃದ್ಧಿಮತ್ ।
ಕೈಲಾಸಂ ಪರ್ವತಶ್ರೇಷ್ಠಮಧ್ಯಾಸ್ತೇ ನರವಾಹನಃ ॥೫॥

ಯಸ್ಯ ತತ್ ಪುಷ್ಪಕಂ ನಾಮ ವಿಮಾನಂ ಕಾಮಗಂ ಶುಭಮ್ ।
ವೀರ್ಯಾದೇವಾರ್ಜಿತಂ ಭದ್ರೇ ಯೇನ ಯಾಮಿ ವಿಹಾಯಸಮ್ ॥೬

ಮಮ ಸಂಜಾತರೋಷಸ್ಯ ಮುಖಂ ದೃಷ್ಟ್ವೈವ ಮೈಥಿಲಿ ।
ಮಹಾರಥಾಃ ಪರಿತ್ರಸ್ತಾಃ ಸುರಾಃ ಶಕ್ರಪುರೋಗಮಾಃ ॥೭॥

ಹೀಗೆ ಸೀತೆ ಹೇಳುತ್ತಿರಲು ಕೋಪಗೊಂಡು ಹುಬ್ಬು ಗಂಟಿಕ್ಕಿ ರಾವಣ ಕಠೋರ-ವಚನಗಳನ್ನಾಡಿದನು –

ಸುಂದರಿಯೆ ! ನಾನು ಕುಬೇರನ – ಮಲತಾಯಿಯ ಮಗ –ತಮ್ಮ. ರಾವಣ-ನೆಂದು ಪ್ರಸಿದ್ಧನಾದ ಹತ್ತು ತಲೆಯ ಪ್ರತಾಪಶಾಲಿ. ನಿನಗೆ ಮಂಗಲವಾಗಲಿ.

ಮೃತ್ಯುವಿಗೆ ಹೆದರಿ ಪ್ರಜೆಗಳು ಓಡಿ ಹೋಗುವಂತೆ ನನಗೆ ಹೆದರಿ ಪಿಶಾಚ ಪತಗ ಉರಗ ಗಂಧರ್ವ ದೇವತೆಗಳೆಲ್ಲ ಓಡುತ್ತಾರೆ !

ಯಾವುದೋ ಕಾರಣದಿಂದ ಕ್ರೋಧದಿಂದ ನಡೆದ ದ್ವಂದ್ವಯುದ್ಧದಲ್ಲಿ ಪರಾಜಿತನಾದ ಕುಬೇರ ಸಮೃದ್ಧವಾದ ತನ್ನ ಲಂಕೆಯನ್ನೆ ಬಿಟ್ಟು ಕೈಲಾಸಪರ್ವತ-ದಲ್ಲಿ ನೆಲೆಸಿರುವನು ! ಕುಬೇರನ ಪುಷ್ಪಕವನ್ನು ವೀರ್ಯದಿಂದ ದಕ್ಕಿಸಿಕೊಂಡು ಆಗಸದಲ್ಲಿ ಆನಂದದಿಂದ ವಿಹರಿಸುತ್ತೇನೆ. ನಾನು ಕೋಪಗೊಂಡರೆ ಇಂದ್ರಾದಿ-ದೇವತೆಗಳೂ ದಿಕ್ಕಾಪಾಲಾಗಿ ಓಡಿ ಹೋಗುತ್ತಾರೆ.

ಯತ್ರ ತಿಷ್ಠಾಮ್ಯಹಂ ತತ್ರ ಮಾರುತೋ ವಾತಿ ಶಂಕಿತಃ ।
ತೀವ್ರಾಂಶುಃ ಶಿಶಿರಾಂಶುಶ್ಚ ಭಯಾತ್ ಸಂಪದ್ಯತೇ ರವಿಃ ॥೮॥

ನಿಷ್ಕಂಪಪತ್ರಾಸ್ತರವೋ ನದ್ಯಶ್ಚ ಸ್ತಿಮಿತೋದಕಾಃ ।
ಭವಂತಿ ಯತ್ರ ಯತ್ರಾಹಂ ತಿಷ್ಠಾಮಿ ವಿಚರಾಮಿ ಚ ॥೯॥

ಮಮ ಪಾರೇ ಸಮುದ್ರಸ್ಯ ಲಂಕಾ ನಾಮ ಪುರೀ ಶುಭಾ ।
ಸಂಪೂರ್ಣಾ ರಾಕ್ಷಸೈಘೋರ್ರೈರ್ಯಥೇಂದ್ರಸ್ಯಾಮರಾವತೀ ॥೧೦॥

ಪ್ರಕಾರೇಣ ಪರಿಕ್ಷಿಪ್ತಾ ಪಾಂಡರೇಣ ವಿರಾಜತಾ ।
ಹೇಮಕಕ್ಷ್ಯಾ ಪುರೀ ರಮ್ಯಾ ವೈಡೂರ್ಯಮಯತೋರಣಾ ॥೧೧॥

ಪ್ರಕಾರೇಣ ಪರಿಕ್ಷಿಪ್ತಾ ಪಾಂಡರೇಣ ವಿರಾಜತಾ ।
ಹೇಮಕಕ್ಷ್ಯಾ ಪುರೀ ರಮ್ಯಾ ವೈಡೂರ್ಯಮಯತೋರಣಾ ॥೧೧॥

ಹಸ್ತ್ಯಶ್ವರಥಸಂಬಾಧಾ ತೂರ್ಯನಾದವಿನಾದಿತಾ ।
ಸರ್ವಕಾಲಫಲೈರ್ವೃಕ್ಷೈಃ ಸಂಕುಲೋದ್ಯಾನಶೋಭಿತಾ ॥೧೨॥

ನಾನೆಲ್ಲಿ ಇರುತ್ತೇನೆ – ನಿಲ್ಲುತ್ತೇನೆ ಅಲ್ಲಿ ವಾಯುವು ಅಂಜಿಕೊಂಡು ಬೀಸುತ್ತದೆ. ತೀಕ್ಷ್ಣಕಿರಣನಾದ ಸೂರ್ಯನು ತಂಗಿರಣನಾಗುತ್ತಾನೆ. ನಾನೆಲ್ಲಿ ನಿಲ್ಲುತ್ತೇನೆ, ಸಂಚಾರ ಮಾಡುತ್ತೇನೆ. ಅಲ್ಲಲ್ಲಿ ಮರಗಳ – ಎಲೆಗಳು ನಿಷ್ಕಂಪವಾಗುತ್ತವೆ. ನದಿಗಳ ನೀರೂ ಹೆದರಿ ಹರಿಯದೆ ನಿಂತು ಬಿಡುತ್ತದೆ.

ಸಮುದ್ರದ ಮಧ್ಯದಲ್ಲಿ ಲಂಕೆಯೆಂಬ ಪಟ್ಟಣವಿದೆ. ಇಂದ್ರನ ಅಮರಾವತಿ-ಯಂತೆ ವೈಭವದಿಂದ ಪೂರ್ಣವಾಗಿದೆ ಲಂಕೆ. ಪಾಂಡುರವರ್ಣದ ಮಹಾ-ಪ್ರಾಕಾರದಿಂದ ಕಂಗೊಳಿಸುವ ವೈಢೂರ್ಯಮಯವಾದ ತೋರಣಗಳಿರುವ ಬಂಗಾರದ ಬಾಗಿಲುಗಳಿವೆ. ಆನೆ ಕುದುರೆ ರಥಗಳು ತುಂಬಿದ ಪುರಿ. ವಾದ್ಯಗಳ ಧ್ವನಿಗಳ ಪ್ರತಿಧ್ವನಿ ತುಂಬಿದ ಪುರಿ. ಎಲ್ಲ ಕಾಲದಲ್ಲೂ ಫಲ ಕೊಡುವ ವೃಕ್ಷಗಳಿಂದ ತುಂಬಿದ ಉದ್ಯಾನಗಳಿಂದ ಕಂಗೊಳಿಸುವ ಪುರಿ ಲಂಕೆ.

ತತ್ರ ತ್ವಂ ವಸತೀ ಸೀತೇ ರಾಜಪುತ್ರಿ ಮಯಾ ಸಹ ।
ನ ಸ್ಮರಿಷ್ಯಸಿ ನಾರೀಣಾಂ ಮಾನುಷೀಣಾಂ ಮನಸ್ವಿನೀ ॥೧೩॥

ಭುಂಜಾನಾ ಮಾನುಷಾನ್ ಭೋಗಾನ್ ದಿವ್ಯಾಂಶ್ಚ ವರವರ್ಣಿನಿ ।
ನ ಸ್ಮರಿಷ್ಯಸಿ ರಾಮಸ್ಯ ಮಾನುಷಸ್ಯ ಗತಾಯುಷಃ ॥೧೪॥

ಸ್ಥಾಪಯಿತ್ವಾ ಪ್ರಿಯಂ ಪುತ್ರಂ ರಾಜ್ಯೇ ದಶರಥೇನ ಯಃ ।
ಮಂದವೀರ್ಯಃ ಸುತೋ ಜ್ಯೇಷ್ಠಸ್ತತಃ ಪ್ರಸ್ಥಾಪಿತೋ ವನಮ್ ॥೧೫॥

ತೇನ ಕಿಂ ಭ್ರಷ್ಟರಾಜ್ಯೇನ ರಾಮೇಣ ಗತಚೇತಸಾ ।
ಕರಿಷ್ಯಸಿ ವಿಶಾಲಾಕ್ಷಿ ತಾಪಸೇನ ತಪಸ್ವಿನಾ ॥೧೬॥

ಸರ್ವರಾಕ್ಷಸಭರ್ತಾರಂ ಕಾಮಾತ್ ಸ್ವಯಮಾಗತಮ್।
ನ ಮನ್ಮಥಶರಾವಿಷ್ಟಂ ಪ್ರತ್ಯಾಖ್ಯಾತುಂ ತ್ವಮರ್ಹಸಿ ॥೧೭॥

ಪ್ರತ್ಯಾಖ್ಯಾಯ ಹಿ ಮಾಂ ಭೀರು ಪರಿತಾಪಂ ಗಮಿಷ್ಯಸಿ ।
ಚರಣೇನಾಭಿಹತ್ಯೇವ ಪುರೂರವಸಮುರ್ವಶೀ ॥೧೮॥

ಅಂಗುಲ್ಯಾ ನ ಸಮೋ ರಾಮೋ ಮಮ ಯುದ್ಧೇ ಸ ಮಾನುಷಃ ।
ತವ ಭಾಗ್ಯೇನ ಸಂಪ್ರಾಪ್ತಂ ಭಜಸ್ವ ವರವರ್ಣಿನಿ ॥೧೯॥

ಸೀತೆ ! ಆ ಸುಂದರ ನಗರಿಯಲ್ಲಿ ನನ್ನೊಂದಿಗೆ ವಾಸ ಮಾಡಿದರೆ ನೀನು ಮಾನುಷಸ್ತ್ರೀಯರನ್ನು ನೆನೆಯುವುದೇ ಇಲ್ಲ ! ಮಾನುಷ ಭೋಗಗಳನ್ನು ದಿವ್ಯ ಭೋಗಗಳನ್ನೂ ಅಲ್ಲಿ ಅನುಭವಿಸುತ್ತಾ ಮನುಜ ರಾಮನನ್ನು ನೆನೆಯುವುದಿಲ್ಲ.

ದಶರಥ ತನ್ನ ಪ್ರಿಯಪುತ್ರನಿಗೆ ಪಟ್ಟಗಟ್ಟಿ ಮಂದವೀರ್ಯನಾದ ಜ್ಯೇಷ್ಠಸುತ-ನನ್ನು ಕಾಡಿಗಟ್ಟಿದ. ಅಂತಹ ರಾಜ್ಯಭ್ರಷ್ಟನಾದ ಬುದ್ದಿ ಹೀನ ತಾಪಸ ಮೂರ್ಖ ರಾಮನಿಂದ ಏನು ಸುಖಪಡುವಿ ?

ಸರ್ವರಾಕ್ಷಸರೊಡೆಯನಾದ ತಾನಾಗಿ ಬಯಸಿ ನಿನ್ನ ಬಳಿಗೆ ಬಂದ ಮನ್ಮಥನ ಬಾಣದಿಂದ ಪೀಡಿತನಾದ ನನ್ನನ್ನು ನಿರಾಕರಿಸಲು ನೀನು ಅರ್ಹಳಲ್ಲ.

ಭೀರು ! ನನ್ನನ್ನು ಈಗ ನಿರಾಕರಿಸಿ ಮತ್ತೆ ಪಶ್ಚಾತ್ತಾಪ ಪಡುವಿ – ಪುರೂರವ-ನನ್ನು ನಿರಾಕರಿಸಿ ಊರ್ವಶಿ ಪಶ್ಚಾತ್ತಾಪ ಪಟ್ಟಂತೆ.

ಸುಂದರಿ ! ಯುದ್ಧದಲ್ಲಿ ನನ್ನ ಬೆರಳಿಗೆ ಸಮಾನನಲ್ಲ ನಿನ್ನ ಮಾನುಷ ರಾಮ. ನಿನ್ನ ಅದೃಷ್ಟದಿಂದ ಒದಗಿ ಬಂದಿರುವ ನನ್ನನ್ನು ಸೇವಿಸು.

ಏವಮುಕ್ತಾ ತು ವೈದೇಹೀ ಕ್ರುದ್ಧಾ ಸಂರಕ್ತಲೋಚನಾ ।
ಅಬ್ರವೀತ್ ಪರುಷಂ ವಾಕ್ಯಂ ರಹಿತೇ ರಾಕ್ಷಸಾಧಿಪಮ್ ॥೨೦॥

ಕಥಂ ವೈಶ್ರವಣಂ ದೇವಂ ಸರ್ವಭೂತನಮಸ್ಕೃತಮ್ ।
ಭ್ರಾತರಂ ವ್ಯಪದಿಶ್ಯ ತ್ವಮಶುಭಂ ಕರ್ತುಮಿಚ್ಛಸಿ ॥೨೧॥

ಅವಶ್ಯಂ ವಿನಶಿಷ್ಯಂತಿ ಸರ್ವೇ ರಾವಣ ರಾಕ್ಷಸಾಃ ।
ಯೇಷಾಂ ತ್ವಂ ಕರ್ಕಶೋ ರಾಜಾ ದುರ್ಬುದ್ಧಿರಜಿತೇಂದ್ರಿಯಃ ॥೨೨॥

ಅಪಹೃತ್ಯ ಶಚೀಂ ಭಾರ್ಯಾಂ ಶಕ್ಯಮಿಂದ್ರಸ್ಯ ಜೀವಿತುಮ್ ।
ನ ಚ ರಾಮಸ್ಯ ಭಾರ್ಯಾಂ ಮಾಮಪನೀಯಾಸ್ತಿ ಜೀವಿತಮ್ ॥೨೩॥

ಜೀವೇಚ್ಚಿರಂ ವಜ್ರಧರಸ್ಯ ಹಸ್ತಾ-
ಚ್ಛಚೀಂ ಪ್ರಧೃಷ್ಯಾಪ್ರತಿರೂಪರೂಪಾಮ್ ।
ನ ಮಾದೃಶೀಂ ರಾಕ್ಷಸ ದೂಷಯಿತ್ವಾ
ಪೀತಾಮೃತಸ್ಯಾಪಿ ತವಾಸ್ತಿ ಮೋಕ್ಷಃ ॥೨೪॥

ರಾವಣನಿಂದ ಹೀಗೆ ಹೇಳಲ್ಪಟ್ಟ ಸೀತೆ ಸಿಟ್ಟುಗೊಂಡು ಕಣ್ಣು ಕೆಂಪಗೆ ಮಾಡಿ-ಕೊಂಡು ಆ ಏಕಾಂತದಲ್ಲಿ ರಾಕ್ಷಸಾಧಿಪನಿಗೆ ಪರುಷ ವಚನಗಳನ್ನಾಡಿದಳು -

ಎಲ್ಲರಿಂದ ನಮಸ್ಕೃತನಾದ ಕುಬೇರದೇವನನ್ನು ಅಣ್ಣನೆಂದು ಹೇಳಿಕೊಂಡು ಇಂತಹ ಅಶುಭ ಕರ್ಮವನ್ನು ಮಾಡಲು ಹೇಗೆ ಇಚ್ಛಿಸುವಿ ?

ಯಾವ ರಾಕ್ಷಸರಿಗೆ ಕ್ರೂರನು ದುರ್ಬುದ್ಧಿಯು ಅಜಿತೇಂದ್ರಿಯನು ಆದ ನೀನು ರಾಜನಾಗಿರುವೆಯೋ ಆ ಎಲ್ಲ ರಕ್ಕಸರು ಅವಶ್ಯವಾಗಿ ನಾಶವಾಗುವರು.

ಇಂದ್ರನ ಪತ್ನಿಯಾದ ಶಚಿಯನ್ನು ಅಪಹರಿಸಿ ಬದುಕಬಹುದು. ರಾಮ-ಭಾರ್ಯೆಯನ್ನು ಅಪಹರಿಸಿದರೆ ನಿನ್ನ ಬದುಕೇ ನಾಶವಾಗುತ್ತದೆ.

ವಜ್ರಧಾರಿ ಇಂದ್ರನ ಅನುರೂಪ ರೂಪವತಿ ಭಾರ್ಯೆ ಶಚಿಯನ್ನು ಅಪಹರಿಸಿಯೂ ಬದುಕಬಹುದು ಬಹಳ ಕಾಲ. ಆದರೆ ರಾಕ್ಷಸನೇ ! ರಾಮ-ಭಾರ್ಯೆಯಾದ ನನ್ನಂತಹ ಸೀತೆಯನ್ನು ಅಪಹರಿಸಿದರೆ ಅಮೃತ ಕುಡಿದರೂ ನೀನು ಮರಣದಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ನಲವತ್ತೆಂಟನೇ ಸರ್ಗ ಮುಗಿಯಿತು.

★

ಏಕೋನಪಂಚಾಶಃ ಸರ್ಗಃ

ಕಥಾಸಾರಾಂಶ– ಸೀತೆಯ ಮಾತು ಕೇಳಿ ಪ್ರತಾಪಿ ರಾವಣ ಜೋರಾಗಿ ಚಪ್ಪಾಳೆ ಹೊಡೆಯುತ್ತ ದೊಡ್ಡ ರೂಪವನ್ನು ಧರಿಸಿದ.

ಸೀತೆಗೆ ಮತ್ತೆ ಹೇಳಿದ – ನಿನಗೆ ಹುಚ್ಚು ತಲೆಗಡರಿದೆ. ಅದರಿಂದಲೆ ನನ್ನ ಬಲ ಪರಾಕ್ರಮಗಳನ್ನು ಕೇಳಿಸಿಕೊಳ್ಳುತ್ತಿಲ್ಲ. ನಾನು ಆಕಾಶದಲ್ಲಿ ನಿಂತು ಭೂಮಿಯನ್ನು ಎತ್ತಬಲ್ಲೆ. ಸಮುದ್ರವನ್ನೆ ಕುಡಿಯಬಲ್ಲೆ. ಯುದ್ಧದಲ್ಲಿ ಸ್ಥಿರವಾಗಿ ನಿಂತು ಮೃತ್ಯವನ್ನೆ ಸದೆಯಬಲ್ಲೆ. ತೀಕ್ಷ್ಣ ಬಾಣಗಳಿಂದ ಸೂರ್ಯನನ್ನೆ ತಡೆ ಹಿಡಿಯಬಲ್ಲೆ. ಭೂತಲವನ್ನೆ ಸೀಳಿ ಬಿಡಬಲ್ಲೆ ! ಬಯಸಿದ ರೂಪವನ್ನು ಪಡೆಯಬಲ್ಲ ಸಮರ್ಥನು ನಾನು ನೋಡು. ಹೀಗೆ ಕೊಚ್ಚಿಕೊಳ್ಳುತ್ತಿದ್ದ ರಾವಣನ ಕಣ್ಣುಗಳು ಕೋಪದಿಂದ ಕೆಂಪಾಗಿದ್ದವು. ಸನ್ಯಾಸಿ ವೇಷವನ್ನು ತೆಗೆದು ವಿಕರಾಲರೂಪವನ್ನು ಧರಿಸಿದ !

ಮೂರು ಲೋಕದಲ್ಲಿ ಪ್ರಖ್ಯಾತನಾದವ ಪತಿಯಾಗಬೇಕೆಂದು ಬಯಕೆಯಿದ್ದರೆ ನನ್ನನ್ನು ಮದುವೆಯಾಗು. ನಾನೇ ನಿನಗೆ ಸದೃಶನಾದ ಪತಿ. ನಿನಗೆಂದೂ ನಾನು ಅಪ್ರಿಯವೆಸಗುವುದಿಲ್ಲ. ಹೆಂಗಸಿನ ಮಾತಿಗೆ ಬೆಲೆಕೊಟ್ಟು ತನ್ನವರನ್ನು, ತನ್ನ ಸಾಮ್ರಾಜ್ಯವನ್ನು ಬಿಟ್ಟು ಭಯಂಕರ ಪ್ರಾಣಿಗಳು ತುಂಬಿದ ಈ ದಂಡಕಾರಣ್ಯಕ್ಕೆ ಬಂದಿರುವ ರಾಮನಲ್ಲಿ ಯಾವ ಗುಣಗಳನ್ನು ನೋಡಿ ಅವನಲ್ಲಿ ಅನುರಕ್ತ-ಳಾಗಿರುವಿಯೋ ? ನೀನು ಪಂಡಿತಳೆಂದು ಅಂದುಕೊಂಡಿರುವ ಮೂರ್ಖಳು.

ಹೀಗೆ ಹೇಳಿ ಎಡಗೈಯಿಂದ ಅವಳ ತಲೆಗೆ ಕೈ ಹಾಕಿ ಎತ್ತಿದ ಬಲಗೈಯಿಂದ ತೊಡೆಯ ಭಾಗದಲ್ಲಿ ಹಿಡಿದು ಎತ್ತುಕೊಂಡ ! ದುಷ್ಟ ರಾವಣನನ್ನು ನೋಡಿ ವನದೇವತೆಗೆ ಗಾಬರಿಯಾದವು. ಅವಳನ್ನು ಗದರಿಸುತ್ತ ರಥದಲ್ಲಿ ಹತ್ತಿಸಿಕೊಂಡನು.

ಭಯಾರ್ತಳಾಗಿ ಸೀತೆ ಕೂಗಿಕೊಂಡಳು – ಹಾ ಲಕ್ಷ್ಮಣ ! ಕ್ರೂರ ರಕ್ಕಸ ನನ್ನನ್ನು ಅಪಹರಿಸಿ ಕೊಂಡೊಯ್ಯುತ್ತಿರುವುದನ್ನು ತಿಳಿಯಲಿಲ್ಲವೇ. ಹಾ ರಾಘವ ! ರಾವಣನಿಂದ ಅಪಹೃತಳಾಗುತ್ತಿರುವ ನನ್ನನ್ನು ನೋಡುತ್ತಿಲ್ಲವೇ ? ಅವಿನೀತರನ್ನು ದಂಡಿಸುವ ನೀನು ಪಾಪಿ ರಾವಣನನ್ನೇಕೆ ದಂಡಿಸುತ್ತಿಲ್ಲ ? ಸಸ್ಯಗಳು ಪಕ್ವವಾಗಲು ಕಾಲ ಬೇಕಾಗುವಂತೆ ರಾವಣನ ನಾಶಕ್ಕೆ ಇನ್ನು ಕಾಲಬಂದಿಲ್ಲವೆ ? ಈಗ ಕೈಕೇಯಿ ಮಗನೊಂದಿಗೆ ಸಮಾಧಾನವಾಗಿರಬಹುದು. ನಾನು ರಕ್ಕಸನಿಂದ ಅಪಹೃತಳಾಗುತ್ತಿದ್ದೇನೆ. ಕಣಿಗಲೆ ಗಿಡವೇ ! ನಮಿಸುತ್ತೇನೆ. ರಾಮನಿಗೆ ಹೇಳು ನಾನು ಅಪಹಾರಗೊಂಡಿದ್ದೇನೆಂಬುದನ್ನು. ಮಾಲ್ಯವಂತ ಪರ್ವತವೇ ! ಗೋದಾವರಿ ನದಿಯೇ ! ವನದೇವತೆಗಳೆ ! ನಿಮಗೆ ನಮಸ್ಕಾರ ಮಾಡುತ್ತೇನೆ. ನನ್ನನ್ನು ರಾವಣ ಅಪಹರಿಸಿರುವನೆಂದು ರಾಮನಿಗೆ ಹೇಳಿ. ರಾಮ ಬಂದು ತನ್ನ ಪರಾಕ್ರಮ ತೋರಿ ನನ್ನನ್ನು ಒಯ್ಯುತ್ತಾನೆ. ಹೀಗೆ ವಿಲಪಿಸುತ್ತ ಮರದಲ್ಲಿದ್ದ ಜಟಾಯುವನ್ನು ನೋಡಿ ಚೀರಿ ಹೇಳಿದಳು ಜಟಾಯು ನೋಡು,

ರಾವಣ ಅಪಹರಿಸುತ್ತಿದ್ದಾನೆ. ಬಲಿಷ್ಠನು ಸಾಯುಧನೂ ಆದ ರಾವಣನನ್ನು ನೀನು ತಡೆಯಲಾರೆ. ರಾಮಲಕ್ಷ್ಮಣರಿಗೆ ನನ್ನ ಅಪಹರಣದ ಸುದ್ದಿ ತಿಳಿಸು.

❖

ಸೀತಾಪಹರಣಮ್

ಸೀತಾಯಾ ವಚನಂ ಶ್ರುತ್ವಾ ದಶಗ್ರೀವಃ ಪ್ರತಾಪವಾನ್ ।
ಹಸ್ತೇ ಹಸ್ತಂ ಸಮಾಹತ್ಯ ಚಕಾರ ಸುಮಹದ್ವಪುಃ ॥೧॥

ಸ ಮೈಥಿಲೀಂ ಪುನರ್ವಾಕ್ಯಂ ಬಭಾಷೇ ವಾಕ್ಯಕೋವಿದಃ ।
ನೋನ್ಮತ್ತಯಾ ಶ್ರುತೌ ಮನ್ಯೇ ಮಮ ವೀರ್ಯಪರಾಕ್ರಮೌ ॥೨॥

ಉದ್ವಹೇಯಂ ಭುಜಾಭ್ಯಾಂ ತು ಮೇದಿನೀಮಂಬರೇ ಸ್ಥಿತಃ ।
ಆಪಿಬೇಯಂ ಸಮುದ್ರಂ ಚ ಹನ್ಯಾಂ ಮೃತ್ಯುಂ ರಣೇ ಸ್ಥಿತಃ ॥೩॥

ಅರ್ಕಂ ರುಂಧ್ಯಾಂ ಶರೈಸ್ತೀಕ್ಷ್ಣೈರ್ನಿರ್ಭಿಂದ್ಯಾಂ ಹಿ ಮಹೀತಲಮ್ ।
ಕಾಮರೂಪಿಣಮುನ್ಮತ್ತೇ ಪಶ್ಯ ಮಾಂ ಕಾಮದಂ ಪತಿಮ್ ॥೪॥

ಏವಮುಕ್ತಮತಸ್ತಸ್ಯ ರಾವಣಸ್ಯ ಶಿಖಿಪ್ರಭೇ ।
ಕ್ರುದ್ಧಸ್ಯ ಹರಿಪರ್ಯಂತೇ ರಕ್ತೇ ನೇತ್ರೇ ಬಭೂವತುಃ ॥೫॥

ಸದ್ಯಃ ಸೌಮ್ಯಂ ಪರಿತ್ಯಜ್ಯ ಭಿಕ್ಷುರೂಪಂ ಸ ರಾವಣಃ ।
ಸ್ವಂ ರೂಪಂ ಕಾಲರೂಪಾಭಂ ಭೇಜೇ ವೈಶ್ರವಣಾನುಜಃ ॥೬॥

ಸಂರಕ್ತನಯನಃ ಶ್ರೀಮಾಂಸ್ತಪ್ತಕಾಂಚನಭೂಷಣಃ ।
ಕ್ರೋಧೇನ ಮಹತಾವಿಷ್ಟೋ ನೀಲಜೀಮೂತಸಂನಿಭಃ ॥೭॥

ದಶಾಸ್ಯೋ ವಿಂಶತಿಭುಜೋ ಬಭೂವ ಕ್ಷಣದಾಚರಃ ।
ಸ ಪರಿವ್ರಾಜಕಚ್ಛದ್ಮ ಮಹಾಕಾಯೋ ವಿಹಾಯ ತತ್ ॥೮॥

ಪ್ರತಿಪೇದೇ ಸ್ವಕಂ ರೂಪಂ ರಾವಣೋ ರಾಕ್ಷಸಾಧಿಪಃ ।
ಸಂರಕ್ತನಯನಃ ಕ್ರೋಧಾಜ್ಜೀಮೂತನಿಚಯಪ್ರಭಃ ॥೯॥

ರಕ್ತಾಂಬರಧರಸ್ತಸ್ಥೌ ಸ್ತ್ರೀರತ್ನಂ ಪ್ರೇಕ್ಷ್ಯ ಮೈಥಿಲೀಮ್ ।

ಸೀತೆಯ ಮಾತ ಕೇಳಿ ಪ್ರತಾಪಿ ದಶಗ್ರೀವನು ಚೆನ್ನಾಗಿ ಚಪ್ಪಾಳೆ ತಟ್ಟಿ ತನ್ನ ಶರೀರವನ್ನು ಹಿಗ್ಗಿಸಿಕೊಂಡನು.

ಮತ್ತೆ ಮೈಥಿಲಿಯನ್ನು ಕುರಿತು ಮಾತನಾಡಿದ ರಾವಣ ''ನೀನು ಉನ್ಮತ್ತಳಾಗಿಹೆ. ನನ್ನ ಬಲಪರಾಕ್ರಮಗಳನ್ನು ಕೇಳಿಲ್ಲ.''

ಆಕಾಶದಲ್ಲಿ ನಿಂತು ಎರಡು ತೋಳುಗಳಿಂದ ಭೂಮಿಯನ್ನು ಎತ್ತಬಲ್ಲೆನು. ಸಮುದ್ರವನ್ನೆ ಕುಡಿದು ಬಿಡಬಲ್ಲೆ. ಯುದ್ಧದಲ್ಲಿ ಸ್ಥಿರವಾಗಿ ನಿಂತು ಮೃತ್ಯುವನ್ನೆ ಸದೆಯಬಲ್ಲೆ.

ಹರಿತ ಬಾಣಗಳಿಂದ ಸೂರ್ಯನನ್ನೆ ತಡೆಯಬಲ್ಲೆ. ಮಹೀತಲವನ್ನೆ ಸೀಳಿಬಿಡಬಲ್ಲೆ. ಕಾಮಿತವಾದುದನ್ನೆಲ್ಲ ಕೊಡುವ ನನ್ನನ್ನು ಹುಚ್ಚಿಯೇ ! ಬಯಸಿದಂತಹ ರೂಪವನ್ನು ಸ್ವೀಕರಿಸಬಲ್ಲನೆಂದು ತಿಳಿ.

ಹೀಗೆ ಹೇಳುತ್ತಿರುವ ರಾವಣನ ಕಣ್ಣುಗಳು ಬೆಂಕಿಯಂತೆ ಕೆಂಪಾದವು.

ಕುಬೇರನ ತಮ್ಮ ರಾವಣನು ಸೌಮ್ಯವಾದ ಭಿಕ್ಷು (ಸನ್ನ್ಯಾಸಿ) ರೂಪವನ್ನು ಬಿಟ್ಟು ತೀಕ್ಷ್ಣವಾದ ಕಾಲಪುರುಷನಂತಹ ಕರಾಳ ರೂಪವನ್ನು ಧರಿಸಿದ.

ಕೆಂಗಣ್ಣಿನವನು ಕಾಂತಿಯುಕ್ತನು ಕಾದ ಬಂಗಾರದ ಹೊಳಪಿನ ಕುಂಡಲದವನು ಕಪ್ಪು ಮೋಡವ ಹೋಲುವವನು ಆದ ರಾವಣ ಮಹಾಕ್ರೋಧದಿಂದ ಆವಿಷ್ಟನಾದ. ರಾವಣ ಬಿಲ್ಲಿನಿಂದ ಹೊಮ್ಮುವ ಠೇಂಕಾರದಂತೆ ಉಗ್ರನಾಗಿದ್ದನು. ಆ ಮಹಾಕಾಯನು ಸನ್ನ್ಯಾಸಿಯ ವೇಷ ಕಳಚಿದ. ರಾಕ್ಷಸಾಧಿಪ ರಾವಣ ತನ್ನ ನಿಜರೂಪವನ್ನು ಪಡೆದ.

ಮೋಡಗಳ ಸಮೂಹದ ಪ್ರಭೆಯವನು ಕ್ರೋಧದಿಂದ ಕೆಂಗಣ್ಣಿನವನು. ಕೆಂಪುಬಟ್ಟೆಯ ತೊಟ್ಟವನು ಆದ ರಾವಣ ಸ್ತ್ರೀರತ್ನಳಾದ ಮೈಥಿಲಿಯನ್ನು ನೋಡುತ್ತ ನಿಂತನು.

ಸೀತಾಮಸಿತಕೇಶಾಂತಾಂ ಭಾಸ್ಕರಸ್ಯ ಪ್ರಭಾಮಿವ ॥೧೦॥

ವಸನಾಭರಣೋಪೇತಾಂ ಮೈಥಿಲೀಂ ರಾವಣೋಽಬ್ರವೀತ್ ।
ತ್ರಿಷು ಲೋಕೇಷು ವಿಖ್ಯಾತಂ ಯದಿ ಭರ್ತಾರಮಿಚ್ಛಸಿ ॥೧೧॥

ಮಾಮಾಶ್ರಯ ವರಾರೋಹೇ ತವಾಹಂ ಸದೃಶಃ ಪತಿಃ ।
ಮಾಂ ಭಜಸ್ವ ಚಿರಾಯ ತ್ವಮಹಂ ಶ್ಲಾಘ್ಯಃ ಪತಿಸ್ತವ ॥೧೨॥

ನೈವ ಚಾಹಂ ಕ್ವಚಿದ್ಭದ್ರೇ ಕರಿಷ್ಯೇ ತವ ವಿಪ್ರಿಯಮ್ ।
ತ್ಯಜ್ಯತಾಂ ಮಾನುಷೋ ಭಾವೋ ಮಯಿ ಭಾವಃ ಪ್ರಣೀಯತಾಮ್ ॥

ರಾಜ್ಯಾಚ್ಚ್ಯುತಮಸಿದ್ಧಾರ್ಥಂ ರಾಮಂ ಪರಿಮಿತಾಯುಷಮ್ ।
ಕೈರ್ಗುಣೈರನುರಕ್ತಾಸಿ ಮೂಢೇ ಪಂಡಿತಮಾನಿನಿ ॥೧೪॥

ಯಃ ಸ್ತ್ರಿಯಾ ವಚನಾದ್ರಾಜ್ಯಂ ವಿಹಾಯ ಸಸುಹೃಜ್ಜನಮ್ ।
ಅಸ್ಮಿನ್ ವ್ಯಾಲಾನುಚರಿತೇ ವನೇ ವಸತಿ ದುರ್ಮತಿಃ ॥೧೫॥

ಇತ್ಯುಕ್ತಾ ಮೇಥಿಲೀಂ ವಾಕ್ಯಂ ಪ್ರಿಯಾರ್ಹಾಂ ಪ್ರಿಯವಾದಿನೀಮ್ ।
ಅಭಿಗಮ್ಯ ಸುದುಷ್ಪ್ರಾತ್ಮಾ ರಾಕ್ಷಸಃ ಕಾಮಮೋಹಿತಃ ॥೧೬॥

ಕಪ್ಪು ತಲೆಗೂದಲಿನ, ಸೂರ್ಯನ ಪ್ರಭೆಯಂತೆ ಉತ್ತಮ ವಸನಾಭರಣಗಳನ್ನು ತೊಟ್ಟ ಮೈಥಿಲಿಯನ್ನು ಕುರಿತು ರಾವಣ ಹೇಳಿದ - ಮೂರು ಲೋಕದಲ್ಲಿ ವಿಖ್ಯಾತನಾದ ಗಂಡ ಬೇಕಿದ್ದರೆ ನನ್ನನ್ನು ಆಶ್ರಯಿಸು. ನಾನು ನಿನಗೆ ಸದೃಶನಾದ ಪತಿ. ದೀರ್ಘಕಾಲದವರೆಗಿರಬೇಕಾದರೆ ನನ್ನನ್ನು ಸೇವಿಸು. ನಾನು ನಿನಗೆ ಶ್ಲಾಘ್ಯ-ನಾದ ಪ್ರಿಯಕರ. ಭದ್ರೆ! ಎಂದಿಗೂ ನಾನು ನಿನಗೆ ವಿಪ್ರಿಯವಾದುದನ್ನು ಆಚರಿಸುವುದಿಲ್ಲ. ಮನುಜ ಸ್ನೇಹ ಬಿಡು. ನನ್ನಲ್ಲಿ ಸ್ನೇಹ ತೋರು. ರಾಜ್ಯಭ್ರಷ್ಟ, ಸಂಪತ್ತಿರದ, ಸೀಮಿತವಾದ ಆಯುಷ್ಯವುಳ್ಳ ರಾಮನಲ್ಲಿ ಯಾವ ಗುಣಗಳಿಂದ ಅನುರಕ್ತಳಾಗಿರುವೆ ? ಬುದ್ಧಿವಂತೆ ಎಂದು ಕೊಂಡಿರುವ ಮೂರ್ಖಳೆ ! ಯಾರು ಹೆಂಗಸಿನ ಮಾತಿಗೆ ಬೆಲೆ ಕೊಟ್ಟು ತನ್ನ ಬಂಧುಗಳನ್ನೆಲ್ಲ ಬಿಟ್ಟು ಹಿಂಸ್ರ ಪ್ರಾಣಿಗಳಿಂದ ತುಂಬಿದ ಈ ಕಾಡಿನಲ್ಲಿ ವಾಸಮಾಡುತ್ತಿರುವ ದುರ್ಮತಿ - ಅಂಥ ರಾಮನಲ್ಲಿ ಏನು ಸ್ನೇಹ ?

ಪ್ರಿಯ ವಚನಗಳಿಗೆ ಅರ್ಹಳು, ಪ್ರಿಯವಾಗಿ ಮಾತಾಡುವವಳು ಆದ ಮೈಥಿಲಿಯಲ್ಲಿ ಇಂಥ ಅಪ್ರಿಯದ ಮಾತುಗಳನ್ನಾಡಿ ದುಷ್ಟಮನದ ಕಾಮ ಮೋಹಿತ ರಾಕ್ಷಸ ರಾವಣ ಬಳಿ ಬಂದು ಸೀತೆಯನ್ನು ಹಿಡಿದ ಆಕಾಶದಲ್ಲಿ ಬುಧ ರೋಹಿಣಿಯನ್ನು ಹಿಡಿದಂತೆ ! (ಚಂದ್ರನ ಪುತ್ರನಾದ ಬುಧ ತನ್ನ ತಾಯಿಯಾದ ಚಂದ್ರಪತ್ನಿ ರೋಹಿಣಿಯನ್ನು ಹಿಡಿದಂತೆ = ಇದು ಅಭೂತೋಪಮಾ. ಅಂದರೆ ಎಂದೂ ತಾಯಿ ರೋಹಿಣಿಯನ್ನು ಬುಧ ಹಿಡಿದಿಲ್ಲ. ಒಂದೊಮ್ಮೆ ಬುಧ ತಾಯಿ-ಯನ್ನು ಹಿಡಿದರೆ ಅದು ಹೇಗೆ ಘೋರಪಾಪವೋ ಅಂಥಹ ಪಾಪವನ್ನು ರಾವಣ ಮಾಡುತ್ತಿರುವನು ಎಂದು ಅಭಿಪ್ರಾಯ)

ಜಗ್ರಾಹ ರಾವಣಃ ಸೀತಾಂ ಬುಧಃ ಖೇ ರೋಹಿಣೀಮಿವ ।
ವಾಮೇನ ಸೀತಾಂ ಪದ್ಮಾಕ್ಷೀಂ ಮೂರ್ಧಜೇಷು ಕರೇಣ ಸಃ ॥೧೭॥

ಊರ್ವೋಸ್ತು ದಕ್ಷಿಣೇನೈವ ಪರಿಜಗ್ರಾಹ ಪಾಣಿನಾ ।
ತಂ ದೃಷ್ಟ್ವಾ ಮೃತ್ಯುಸಂಕಾಶಂ ತೀಕ್ಷ್ಣದಂಷ್ಟ್ರಂ ಮಹಾಭುಜಮ್॥೧೮॥

ಪ್ರಾದ್ರವನ್ ಗಿರಿಸಂಕಾಶಂ ಭಯಾರ್ತಾ ವನದೇವತಾಃ ।
ಸ ಚ ಮಾಯಾಮಯೋ ದಿವ್ಯಃ ಖರಯುಕ್ತಃ ಖರಸ್ವನಃ ॥೧೯॥

ಪ್ರತ್ಯದೃಶ್ಯತ ಹೇಮಾಂಗೋ ರಾವಣಸ್ಯ ಮಹಾರಥಃ ।
ತತಸ್ತಾಂ ಪರುಷೈರ್ವಾಕ್ಯೈರ್ಭರ್ತ್ಸಯನ್ ಸ ಮಹಾಸ್ವನಃ ॥೨೦॥

ಅಂಕೇನಾದಾಯ ವೈದೇಹೀ ರಥಮಾರೋಪಯತ್ತದಾ ।
ಸಾ ಗೃಹೀತಾ ವಿಚುಕ್ರೋಶ ರಾವಣೇನ ಯಶಸ್ವಿನೀ ॥೨೧॥

ರಾಮೇತಿ ಸೀತಾ ದುಃಖಾರ್ತಾ ರಾಮಂ ದೂರಗತಂ ವನೇ ।
ತಾಮಕಾಮಾಂ ಸ ಕಾಮಾರ್ತಃ ಪನ್ನಗೇಂದ್ರವಧೂಮಿವ ॥೨೨॥

ವಿವೇಷ್ಟಮಾನಾಮಾದಾಯ ಉತ್ಪಪಾತಾಥ ರಾವಣಃ ।

ಆ ರಾವಣನು ಎಡಗೈಯಿಂದ ಪದ್ಮಾಕ್ಷಿ ಸೀತೆಯನ್ನು ಕೂದಲಲ್ಲಿ ಹಿಡಿದ. ಬಲಗೈಯಿಂದ ತೊಡೆಗಳ ಭಾಗದಲ್ಲಿ ಹಿಡಿದ. ತೀಕ್ಷ್ಣದಂಷ್ಟ್ರನು ಮಹಾಭುಜನು ಮೃತ್ಯುವಿನಂತಿರುವ ಬೆಟ್ಟದಂತೆ ಕಾಣುತ್ತಿದ್ದ ರಾವಣನನ್ನು ನೋಡಿ ವನದೇವತೆಗಳು ಭಯಾರ್ತರಾಗಿ ಓಡಿದರು.

ಹೇಸರಕತ್ತೆಯಿಂದ ಕೂಡಿರುವ ಕರ್ಕಶಧ್ವನಿಯ ಬಂಗಾರಮಯವಾದ ಅಂಗಗಳುಳ್ಳ ದಿವ್ಯಮಾಯಾಮಯವೂ ಆದ ರಾವಣನ ಮಹಾರಥ ಬಂದಿತು.

(ವೇದವತಿಯ ಶಾಪದ ಭಯದಿಂದ ರಾವಣನು ಸೀತೆಯನ್ನು ನೇರ ಮುಟ್ಟಿ ಅಪಹರಿಸಲಿಲ್ಲ. ರಾಕ್ಷಸರು ಛಾಯಾ ಗ್ರಾಹಿಗಳಾದುದರಿಂದ ರಾವಣನು ಸೀತೆಯ ಜಾನು ಕೇಶಾದಿಗಳ ಛಾಯೆಯನ್ನು ಹಿಡಿದು ಅಪಹರಿಸಿದನು – ಎಂದು ಸ್ಕಾಂದ ಪುರಾಣದಲ್ಲಿದೆ.)

ಬಳಿಕ ಜೋರಾಗಿ ಗರ್ಜಿಸುತ್ತ ಸೀತೆಯನ್ನು ಕಠೋರ ವಚನಗಳಿಂದ ಗದರಿಸುತ್ತ ರಥದಲ್ಲಿ ಹತ್ತಿಸಿದನು.

ರಾವಣನಿಂದ ಹಿಡಿಯಲ್ಪಟ್ಟವಳಾಗಿ ಯಶಸ್ವಿನೀ ಸೀತೆಯು ದುಃಖಾರ್ತಳಾಗಿ ಕಾಡಿನಲ್ಲಿ ದೂರ ಹೋಗಿರುವ ರಾಮನನ್ನು 'ರಾಮಾऽऽ' ಎಂದು ಕೂಗಿದಳು.

ಆ ಕಾಮಾರ್ತನಾದ ರಾವಣನು ತನ್ನನ್ನು ಬಯಸದಿರುವ, ಹೆಣ್ಣು ಹಾವಿನಂತೆ ಚಡಪಡಿಸುತ್ತಿರುವ ಆ ಸೀತೆಯನ್ನು ಹಾಗೆ ಎತ್ತಿಕೊಂಡೆ ಆಕಾಶಕ್ಕೆ ಹಾರಿದನು.

ತತಃ ಸಾ ರಾಕ್ಷಸೇಂದ್ರೇಣ ಹ್ರಿಯಮಾಣಾ ವಿಹಾಯಸಾ ॥೨೩॥

ಭೃಶಂ ಚುಕ್ರೋಶ ಮತ್ತೇವ ಭ್ರಾಂತಚಿತ್ತಾ ಯಥಾತುರಾ ।
ಹಾ ಲಕ್ಷ್ಮಣ ಮಹಾಬಾಹೋ ಗುರುಚಿತ್ತಪ್ರಸಾದಕ ॥೨೪॥

ಹ್ರಿಯಮಾಣಾಂ ನ ಜಾನೀಷೇ ರಕ್ಷಸಾ ಮಾಮಮರ್ಷಿಣಾ ।
ಜೀವಿತಂ ಸುಖಮರ್ಥಾಂಶ್ಚ ಧರ್ಮಹೇತೋಃ ಪರಿತ್ಯಜನ್ ॥೨೫॥

ಹ್ರಿಯಮಾಣಾಮಧರ್ಮೇಣ ಮಾಂ ರಾಘವ ನ ಪಶ್ಯಸಿ ।
ನನು ನಾಮಾವಿನೀತಾನಾಂ ವಿನೇತಾಸಿ ಪರಂತಪ ॥೨೬॥

ಕಥಮೇವಂವಿಧಂ ಪಾಪಂ ನ ತ್ವಂ ಶಾಧಿ ಹಿ ರಾವಣಮ್ ।
ನ ತು ಸದ್ಯೋऽವಿನೀತಸ್ಯ ದೃಶ್ಯತೇ ಕರ್ಮಣಃ ಫಲಮ್ ॥೨೭॥

ಕಾಲೋऽಪ್ಯಂಗೀಭವತ್ಯತ್ರ ಸಸ್ಯಾನಾಮಿವ ಪಕ್ತಯೇ ।
ಸ ಕರ್ಮ ಕೃತವಾನೇತತ್ ಕಾಲೋಪಹತ್ನಚೇತನಃ ॥೨೮॥

ಜೀವಿತಾಂತಕರಂ ಘೋರಂ ರಾಮಾದ್ವ್ಯಸನಮಾಪ್ನುಹಿ ।

ರಾಕ್ಷಸನು ಸೀತೆಯನ್ನು ಕದ್ದೊಯ್ದು ಆಗಸದ ದಾರಿಯಲ್ಲಿ ಸಾಗುತ್ತಿರುವಾಗ ಸೀತೆಯು ಚಿತ್ತವಿಭ್ರಾಂತಳಾದಳು. ದುಃಖಾತುರಳಾಗಿ ಗಟ್ಟಿಯಾಗಿ ಕೂಗಿಕೊಂಡಳು.

ಹಾ ಲಕ್ಷ್ಮಣ ! ಮಹಾಬಾಹೋ ! ಹಿರಿಯರ ಮನಸ್ಸನ್ನು ಸಂತೋಷಗೊಳಿಸು-ವವನೇ ! ಅಸಹನನಾದ ರಾಕ್ಷಸ ನನ್ನನ್ನು ಅಪಹರಿಸುತ್ತಿರುವುದನ್ನು ನೀನು ತಿಳಿಯುತ್ತಿಲ್ಲವೇ ?

ಧರ್ಮಕ್ಕಾಗಿ ಜೀವನ ಸುಖ ಸಂಪತ್ತುಗಳನ್ನೆಲ್ಲ ಬಿಡುವವನಾದ ರಾಘವನೇ ! ಅಧರ್ಮದಿಂದ ಅಪಹರಿಸಲ್ಪಡುತ್ತಿರುವ ನನ್ನನ್ನು ಕಾಣುತ್ತಿಲ್ಲವೇ ?

ಶತ್ರುತಾಪಕ ರಾಮನೇ ! ತಾವು ಅವಿನೀತರಾದ ದುಷ್ಟರನ್ನು ದಂಡಿಸುವವರು. ಇಂಥ ಪಾಪಿ ರಾವಣನನ್ನು ಏಕೆ ದಂಡಿಸುತ್ತಿಲ್ಲ !

ದುರ್ಜನರಿಗೆ ಅವರು ಮಾಡುವ ಪಾಪ ಕರ್ಮದ ಫಲ ಸದ್ಯದಲ್ಲಿ ಕಾಣುವುದಿಲ್ಲ. ಕರ್ಮ ಫಲಿಸಲು ಕಾಲವೂ ಅಂಗ-ಸಸ್ಯಗಳು ಪಕ್ವವಾಗಲು ಕಾಲವು ಕಾರಣವಾದಂತೆ.

ಕಾಲಪುರುಷನಿಂದ ನಿನ್ನ ವಿವೇಕ ಸತ್ತಿದೆ. ಅದಕ್ಕೆಂದೇ ಇಂತಹ ಪಾಪಕರ್ಮ ಮಾಡುತ್ತಿರುವಿ. ನೀನು ಮಾಡಿರುವ ಪಾಪ ನಿನ್ನ ಬದುಕನ್ನೆ ಕೊನೆಗೊಳಿಸುವಂಥ ಘೋರಕರ್ಮ. ರಾಮನಿಂದ ವಿನಾಶವನ್ನು ಹೊಂದುವಿ.

ಹಂತೇದಾನೀಂ ಸಕಾಮಾಸ್ತು ಕೈಕೇಯೀ ಸಹ ಬಾಂಧವೈಃ ॥೨೯॥

ಹ್ರಿಯೇ ಯದ್ಧರ್ಮಕಾಮಸ್ಯ ಧರ್ಮಪತ್ನೀ ಯಶಸ್ವಿನಃ ।
ಆಮಂತ್ರಯೇ ಜನಸ್ಥಾನೇ ಕರ್ಣಿಕಾರಾನ್ ಸುಪುಷ್ಪಿತಾನ್ ॥೩೦॥

ಕ್ಷಿಪ್ರಂ ರಾಮಾಯ ಶಂಸಧ್ವಂ ಸೀತಾಂ ಹರತಿ ರಾವಣಃ ।
ಮಾಲ್ಯವಂತಂ ಶಿಖರಿಣಂ ವಂದೇ ಪ್ರಸ್ರವಣಂ ಗಿರಿಮ್ ॥೩೧॥

ಕ್ಷಿಪ್ರಂ ರಾಮಾಯ ಶಂಸ ತ್ವಂ ಸೀತಾಂ ಹರತಿ ರಾವಣಃ ।
ಹಂಸಕಾರಂಡವಾಕೀರ್ಣಾಂ ವಂದೇ ಗೋದಾವರೀಂ ನದೀಮ್ ॥೩೨॥

ಕ್ಷಿಪ್ರಂ ರಾಮಾಯ ಶಂಸ ತ್ವಂ ಸೀತಾಂ ಹರತಿ ರಾವಣಃ ।
ದೈವತಾನಿ ಚ ಯಾನ್ಯಸ್ಮಿನ್ ವನೇ ವಿವಿಧಪಾದಪೇ ॥೩೩॥

ನಮಸ್ಕರೋಮ್ಯಹಂ ತೇಭ್ಯೋ ಭರ್ತುಃ ಶಂಸತ ಮಾಂ ಹೃತಾಮ್ ।
ಯಾನಿ ಕಾನಿಚಿದಪ್ಯತ್ರ ಸತ್ತ್ವಾನಿ ನಿವಸಂತ್ಯುತ ॥೩೪॥

ಸರ್ವಾಣಿ ಶರಣಂ ಯಾಮಿ ಮೃಗಪಕ್ಷಿಗಣಾನಪಿ ।
ಹ್ರಿಯಮಾಣಾಂ ಪ್ರಿಯಾಂ ಭರ್ತುಃ ಪ್ರಾಣೇಭ್ಯೋಪಿ ಗರೀಯಸೀಮ್ ॥

ವಿವಶಾಪಹೃತತಾ ಸೀತಾ ರಾವಣೇನೇತಿ ಶಂಸತ ।
ವಿದಿತ್ವಾ ಮಾಂ ಮಹಾಬಾಹುರಮುತ್ರಾಪಿ ಮಹಾಬಲಃ ॥೩೬॥

ಆನೇಷ್ಯತಿ ಪರಾಕ್ರಮ್ಯ ವೈವಸ್ವತಹೃತಾಮಪಿ ।

ಅಯ್ಯೋ ! ಈಗ ಕೈಕೇಯೀ ಬಾಂಧವರೊಂದಿಗೆ ಮನದ ಬಯಕೆ ಪೂರೈಸಿ-ಕೊಂಡವಳಾಗಲಿ. ಏಕೆಂದರೆ ಧರ್ಮಕಾಮನು ಯಶಸ್ವಿಯು ಆದ ರಾಮನ ಧರ್ಮಪತ್ನಿಯಾದ ನಾನು ಇಂದು ಅಪಹರಿಸಲ್ಪಡುತ್ತಿದ್ದೇನೆ.

ಜನಸ್ಥಾನದಲ್ಲಿರುವ ಹೂವುಗಳಿಂದ ತುಂಬಿದ ಕಣಿಗೆಲೆ ಗಿಡವನ್ನು ಪ್ರಾರ್ಥಿಸು-ತ್ತೇನೆ. ಕರ್ಣಿಕಾರ ವೃಕ್ಷವೇ ! ರಾವಣ ಸೀತೆಯನ್ನು ಅಪಹರಿಸುತ್ತಿರುವ ಸುದ್ದಿ-ಯನ್ನು ಕೂಡಲೆ ರಾಮನಿಗೆ ತಿಳಿಸು.

ಹೂಗಳಿಂದ ತುಂಬಿದ ಶಿಖರಗಳಿಂದ ಕೂಡಿರುವ ಪ್ರಸ್ರವಣಪರ್ವತವನ್ನು ನಮಿಸುತ್ತೇನೆ. ಕೂಡಲೆ ರಾಮನಿಗೆ ತಿಳಿಸು. ರಾವಣ ಸೀತೆಯನ್ನು ಅಪಹರಿಸು-ತ್ತಿದ್ದಾನೆಂದು.

ಈ ಕಾಡಿನಲ್ಲಿರುವ ಬಗೆ ಬಗೆಯ ವೃಕ್ಷಗಳಲ್ಲಿ ನೆಲೆಸಿರುವ ದೇವತೆಗಳನ್ನು ನಮಸ್ಕಾರ ಮಾಡುತ್ತೇನೆ. ನನ್ನ ಸ್ವಾಮಿ ರಾಮನಿಗೆ ನಾನು ಅಪಹೃತಳಾಗಿರುವುದನ್ನು ತಿಳಿಸಿರಿ.

ಈ ಕಾಡಿನಲ್ಲಿ ಯಾವ ಯಾವ ಪ್ರಾಣಿಗಳಿವೆಯೋ ಆ ಎಲ್ಲ ಮೃಗ ಪಕ್ಷಿಗಣ-ಗಳಿಗೆ ಶರಣಾಗಿದ್ದೇನೆ. ಸ್ವಾಮಿ ರಾಮನಿಗೆ ಪ್ರಾಣಕ್ಕಿಂತಲೂ ಮಿಗಿಲಾದ ಪ್ರಿಯ ಸೀತೆಯು ವಿವಶಳಾಗಿ ರಾವಣನಿಂದ ಅಪಹೃತಳಾಗಿರುವಳೆಂದು ಹೇಳಿರಿ.

ಮಹಾಬಾಹುವು ಮಹಾಬಲನೂ ಆದ ಶ್ರೀರಾಮನು ನಾನು ಸ್ವರ್ಗಲೋಕ-ದಲ್ಲಿರಲಿ, ಯಮನೇ ಅಪಹರಿಸಿರಲಿ ಬಹು ಪರಾಕ್ರಮ ತೋರಿ ನನ್ನನ್ನು ಹಿಂಪಡೆವನು.

ಸಾ ತದಾ ಕರುಣಾ ವಾಚೋ ವಿಲಪಂತೀ ಸುದುಃಖಾ ॥೩೭॥

ವನಸ್ಪತಿಗತಂ ಗೃಧ್ರಂ ದದರ್ಶಾಯತಲೋಚನಾ ।
ಸಾ ತಮುದ್ವೀಕ್ಷ್ಯ ಸುಶ್ರೋಣೀ ರಾವಣಸ್ಯ ವಶಂ ಗತಾ ॥೩೮॥

ಸಮಾಕ್ರಂದದ್ಭಯಪರಾ ದುಃಖೋಪಹತಯಾ ಗಿರಾ ।
ಜಟಾಯೋ ಪಶ್ಯ ಮಾಮಾರ್ಯ ಹ್ರಿಯಮಾಣಾಮನಾಥವತ್॥೩೯॥

ಅನೇನ ರಾಕ್ಷಸೇಂದ್ರೇಣಾಕರುಣಂ ಪಾಪಕರ್ಮಣಾ ।
ನೈಷ ವಾರಯಿತುಂ ಶಕ್ಯಸ್ತವ ಕ್ರೂರೋ ನಿಶಾಚರಃ ॥೪೦॥

ಸತ್ತ್ವವಾನ್ ಜಿತಕಾಶೀ ಚ ಸಾಯುಧಶ್ಚೈವ ದುರ್ಮತಿಃ ।
ರಾಮಾಯ ತು ಯಥಾತತ್ತ್ವಂ ಜಟಾಯೋ ಹರಣಂ ಮಮ ॥೪೧॥

ಲಕ್ಷ್ಮಣಾಯ ಚ ತತ್ ಸರ್ವಮಾಖ್ಯಾತವ್ಯಮಶೇಷತಃ ॥

ತುಂಬ ದುಃಖಿತಳಾಗಿ ಕರುಣೆ ಉಕ್ಕುವಂತೆ ವಿಲಾಪಿಸುತ್ತಿರುವ ಸೀತೆ ಮರದ ಮೇಲಿರುವ ಜಟಾಯು ಪಕ್ಷಿಯನ್ನು ಕಣ್ಣರಳಿಸಿ ನೋಡಿದಳು.

ರಾವಣನ ವಶಳಾಗಿದ್ದ ತುಂಬ ಭೀತಳಾಗಿದ್ದ ಸುಶ್ರೋಣಿ ಸೀತೆಯು ದುಃಖಿತಪ್ತದನಿಯಿಂದ ಗಟ್ಟಿಯಾಗಿ ಕೂಗಿದಳು.

ಆರ್ಯ ಜಟಾಯುವೆ ! ನನ್ನನ್ನು ಕರುಣೆಯಿಂದ ನೋಡು. ಅನಾಥಳಂತೆ ಪಾಪಿ ರಾಕ್ಷಸೇಂದ್ರನಿಂದ ಅಪಹರಿಸಲ್ಪಡುತ್ತಿದ್ದೇನೆ.

ನೀನು ಈ ನಿಶಾಚರನನ್ನು ತಡೆಯಲು ಸಮರ್ಥನಲ್ಲ. ಏಕೆಂದರೆ ಇವನು ಬಲಿಷ್ಠ. ಅನೇಕ ಯುದ್ಧಗಳನ್ನು ಗೆದ್ದ ಸಾಹಸಿ. ಕೈಯಲ್ಲಿ ಆಯುಧ ಹಿಡಿದಿರುವನು. ಮೇಲಾಗಿ ದುರ್ಮತಿ.

ಜಟಾಯುವೇ ! ನನ್ನ ಅಪಹರಣದ ವಾರ್ತೆಯನ್ನು ಚಾಚೂ ಬಿಡದೆ ಎಲ್ಲವನ್ನು ಯಥಾವತ್ತಾಗಿ ರಾಮನಿಗೆ ತಿಳಿಸು. ಲಕ್ಷ್ಮಣನಿಗೂ ಎಲ್ಲವನ್ನು ತಿಳಿಸು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಆರಣ್ಯಕಾಂಡದಲ್ಲಿ
ನಲವತ್ತೊಂಭತ್ತನೇ ಸರ್ಗ ಮುಗಿಯಿತು.

❖

ಪಂಚಾಶಃ ಸರ್ಗಃ

ಕಥಾಸಾರಾಂಶ– ರಾವಣನಿಂದ ಅಪಹೃತಳಾದ ಸೀತೆಯು 'ಜಟಾಯು ! ರಾಮನಿಗೆ ಹೇಳು ಸೀತೆಯನ್ನು ರಾವಣ ಅಪಹರಿಸಿದ್ದಾನೆ'ಂದು – ಕೂಗಿ ಹೇಳಿದ ಧ್ವನಿಯನ್ನು ಜಟಾಯು ಕೇಳಿಸಿಕೊಂಡ. ಆಗಸದಲ್ಲಿ ಸಾಗುತ್ತಿದ್ದ ರಾವಣ ವೈದೇಹಿಯರನ್ನು ಕಂಡನು ಕೂಡ.

ಬೆಟ್ಟದಂತೆ ಇದ್ದ ತೀಕ್ಷ್ಣ ತುಂಡವಿದ್ದ ಜಟಾಯು ರಾವಣನಿಗೆ ಹೇಳಿದ – ದಶಮುಖನೇ ! ಪುರಾತನ ಧರ್ಮಸತ್ಯಗಳಲ್ಲಿ ನಿಷ್ಠನಾದ ಮಹಾಬಲವುಳ್ಳ ಜಟಾಯು ಎಂಬ ಹೆಸರಿನ ಪಕ್ಷಿರಾಜ ನಾನು. ರಾಮನು ಮಹೇಂದ್ರ ವರುಣರಂತೆ ಎಲ್ಲ ಲೋಕಗಳಿಗೆ ರಾಜನು. ಲೋಕ ಹಿತದಲ್ಲಿ ತನ್ನನ್ನು ತೊಡಗಿಸಿಕೊಂಡ ದಶರಥ ನಂದನ. ನೀನು ಕೊಂಡೊಯ್ಯುತ್ತಿರುವ ಸೀತೆ ಆ ಲೋಕನಾಥನ ಧರ್ಮಪತ್ನೀ.

ಧರ್ಮರತನಾಗಿರಬೇಕಾದ ರಾಜ ಪರಸ್ತ್ರೀಸ್ಪರ್ಶ ಹೇಗೆ ತಾನೆ ಮಾಡಬಹುದು ? ರಾಜಪತ್ನಿಯನ್ನು ವಿಶೇಷವಾಗಿ ರಕ್ಷಣೆ ಮಾಡಬೇಕು. ಪರಸ್ತ್ರೀಸ್ಪರ್ಶದಿಂದ ಒದಗಬಹುದಾದ ನೀಚ ಗತಿಯನ್ನು ಕಳೆದುಕೋ.

ಧೀರನಾದವನು ಮತ್ತೊಬ್ಬರು ನಿಂದಿಸುವ ಕೆಲಸವನ್ನು ಮಾಡಬಾರದು. ವಿವೇಕಿಯಾದವನು ತನ್ನ ಹೆಂಡತಿಯನ್ನು ಹೇಗೋ ಹಾಗೆ ಮತ್ತೊಬ್ಬರ ಹೆಂಡತಿಯನ್ನು ರಕ್ಷಿಸಬೇಕು.

ಪೌಲಸ್ತ್ಯನಂದನ ! ಶಿಷ್ಟರಾದವರು ಶಾಸ್ತ್ರಗಳಲ್ಲಿ ಧರ್ಮವೆಂದು ಪರಿಗಣಿಸದಿರುವ ಅರ್ಥ ಕಾಮ ಧರ್ಮಗಳನ್ನು ಅನುಷ್ಠಾನ ಮಾಡಬಾರದು.

ಧರ್ಮ ಕಾಮ ದ್ರವ್ಯಗಳಿಗೆ ರಾಜ ನಿಧಿ. ಧರ್ಮವೋ ಶುಭವೋ ಪಾಪವೋ ರಾಜನನ್ನು ಅನುಸರಿಸಿ ಲೋಕದಲ್ಲಿ ಆಚರಣೆಗೆ ಬರುತ್ತದೆ.

ಪಾಪ ಸ್ವಭಾವದವನು ಚಪಲನು ಆದ ರಾಕ್ಷಸಶ್ರೇಷ್ಠನೆ ! ನೀನು ಹೇಗೆ ಇಂಥ ಐಶ್ವರ್ಯವನ್ನು ಪಡೆದೆ ? !

ಯಾವುದು ಯಾರ ಸ್ವಭಾವವೋ ಅದನ್ನು ಅಳಿಸಲು ಸಾಧ್ಯವಿಲ್ಲ. ದುಷ್ಟಬುದ್ಧಿ-ಯವರ ಮನಸ್ಸಿನಲ್ಲಿ ಸದುಪದೇಶವು ನೆಲೆಸುವುದಿಲ್ಲ.

ರಾಮ ಎಂದಿಗೂ ನಿನ್ನ ನಗರಕ್ಕೆ ನುಗ್ಗಿ ಅಪರಾಧ ಮಾಡಿಲ್ಲ. ನೀನೇಕೆ ಅವನ ವಿಷಯದಲ್ಲಿ ಅಪರಾಧ ಮಾಡುವಿ ?

ಶೂರ್ಪಣಖೆಯ ಕಾರಣಕ್ಕಾಗಿ ಖರನು ರಾಮನ ಮೇಲೆ ಯುದ್ಧಕ್ಕೆ ಹೋದನು. ಅನಾಯಾಸವಾಗಿ ಕಾರ್ಯಸಾಧಿಸುವ ರಾಮನು ಖರನನ್ನು ಕೊಂದ. ಇದರಲ್ಲಿ ರಾಮನ ತಪ್ಪೇನಿದೆ ! ಯಾವ ತಪ್ಪಿಗಾಗಿ ಅವನ ಹೆಂಡತಿಯನ್ನು ನೀನು ಅಪಹಾರ ಮಾಡುತ್ತಿರುವಿ ?

ಬೇಗ ವೈದೇಹಿಯನ್ನು ಬಿಟ್ಟು ಬಿಡು. ಬೆಂಕಿಯಂತಿರುವ ರಾಮನ ಕೆಂಡದಂಥ ದೃಷ್ಟಿಗೆ ಬಿದ್ದು ಬೂದಿಯಾಗದಿರು.

ಬಟ್ಟೆಯಲ್ಲಿ ವಿಷಸರ್ಪವನ್ನು ಕಟ್ಟಿಕೊಂಡಿರುವುದು ನಿನಗೆ ಅರ್ಥವಾಗುತ್ತಿಲ್ಲ. ಕುತ್ತಿಗೆಯಲ್ಲಿ ಸುತ್ತಿರುವ ಕಾಲ ಪಾಶದ ಉರುಳನ್ನು ನೀನು ಅರಿಯುತ್ತಿಲ್ಲ !

ಹೊತ್ತವನೇ ನಾಶವಾಗುವಂಥ ಭಾರವನ್ನು ಹೊರಬಾರದು. ಜೀರ್ಣವಾಗುವಂಥ ಅನ್ನವನ್ನೇ ತಿನ್ನಬೇಕು.

ಯಾವ ಕಾರ್ಯವನ್ನು ಮಾಡುವುದರಿಂದ ಪುಣ್ಯವಿಲ್ಲ,ಕೀರ್ತಿಯಿಲ್ಲ ಯಶಸ್ಸು ಇಲ್ಲ, ಶರೀರಕ್ಕೆ ಕಷ್ಟವೇ ಆಗುವುದೋ ಅಂಥ ಕಾರ್ಯವನ್ನು ಎಂದಿಗೂ ಮಾಡಬಾರದು.

ನಾನು ಹುಟ್ಟಿ ಅರವತ್ತು ಸಾವಿರ ವರ್ಷವಾಯಿತು. ನನ್ನಷ್ಟಕ್ಕೆ ನನ್ನ ರಾಜ್ಯವನ್ನಾಳಿ-ಕೊಂಡಿದ್ದೇನೆ. ನಾನು ಮುದುಕ. ನೀನು ಯುವಕ. ಬಿಲ್ಲು ಬಾಣಗಳನ್ನು ಹಿಡಿದವನು. ಕವಚ ತೊಟ್ಟವನು. ರಥದಲ್ಲಿ ಕುಳಿತವನು. ಇಷ್ಟು ನನಗೂ ನಿನಗೂ ಅಂತರವಿದ್ದರೂ ವೈದೇಹಿಯನ್ನು ಅಪಹರಿಸಿದರೆ ನೀನು ಕುಶಲವಾಗಿ ಹೋಗಲು ಸಾಧ್ಯವಿಲ್ಲ.

ನೀನು ಬಲಾತ್ಕಾರವಾಗಿ ಸೀತೆಯನ್ನು ಅಪಹರಿಸಲು ಸಾಧ್ಯವಿಲ್ಲ. ಕೇವಲ ಸ್ವಕಲ್ಪಿತ ಯುಕ್ತಿವಾದರಿಂದ ವೇದ ಶ್ರುತಿಯನ್ನು ಅಲ್ಲಗಳೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ.

ನೀನು ಶೂರನಾಗಿದ್ದರೆ ಯುದ್ಧ ಮಾಡು. ಯುದ್ಧಕ್ಕೆ ಬಂದರೆ ಖರ ಹೇಗೋ ಹಾಗೆ ನೀನು ನೆಲದಲ್ಲಿ ಮಲಗುವೆ !

ನಾನೇನು ಮಾಡಲಿ. ರಾಮಲಕ್ಷ್ಮಣರು ದೂರ ಹೋಗಿದ್ದಾರೆ. ಅವರಿಗೆ ಹೆದರಿ ಸದ್ಯದಲ್ಲಿ ನಾಶವಾಗುವಿ.

ಅನೇಕ ಬಾರಿ ಯುದ್ಧಗಳಲ್ಲಿ ದೈತ್ಯದಾನವರನ್ನು ರಾಮ ಸಂಹರಿಸಿರುವನು. ಬೇಗನೆ ಅವನಿಂದ ಸಾಯುವಿ.

ನಾನು ಬದುಕಿರುವಾಗ ನೀನು ಈ ಸೀತೆಯನ್ನು ಒಯ್ಯಲಾರೆ. ಆ ದಶರಥನಿಗೆ ಆ ರಾಮನಿಗೆ ಜೀವನವನ್ನೆ ಅರ್ಪಿಸಿಯಾದರೂ ಏನಾದರು ಉಪಕಾರ ಮಾಡಲೇಬೇಕು.

ನಿಲ್ಲು ನಿಲ್ಲು ದಶಗ್ರೀವ ! ಯುದ್ಧಾತಿಥ್ಯವನ್ನು ನೀಡುವೆ. ತೊಟ್ಟಿನಿಂದ ಹಣ್ಣು ಬೀಳುವಂತೆ ರಥದಿಂದ ನಿನ್ನನ್ನು ಕೆಳಗೆ ಬೀಳಿಸುವೆ.

❖

ಜಟಾಯುರಭಿಯೋಗಃ

ತಂ ಶಬ್ದಮವಸುಪ್ತಸ್ತು ಜಟಾಯುರಥ ಶುಶ್ರುವೇ ।
ನಿರೀಕ್ಷ್ಯ ರಾವಣಂ ಕ್ಷಿಪ್ರಂ ವೈದೇಹೀಂ ಚ ದದರ್ಶ ಸಃ ॥೧॥

ತತಃ ಪರ್ವತಕೂಟಾಭಸ್ತೀಕ್ಷ್ಣತುಂಡಃ ಖಗೋತ್ತಮಃ ।
ವನಸ್ಪತಿಗತಃ ಶ್ರೀಮಾನ್ ವ್ಯಾಜಹಾರ ಶುಭಾಂ ಗಿರಮ್ ॥೨॥

ದಶಗ್ರೀವ ಸ್ಥಿತೋ ಧರ್ಮೇ ಪುರಾಣೇ ಸತ್ಯಸಂಶ್ರಯಃ ।
ಭ್ರಾತಸ್ತ್ವಂ ನಿಂದಿತಂ ಕರ್ಮ ಕರ್ತುಂ ನಾರ್ಹಸಿ ಸಾಂಪ್ರತಮ್ ॥೩॥

ಜಟಾಯುರ್ನಾಮ ನಾಮ್ನಾಹಂ ಗೃಧ್ರರಾಜೋ ಮಹಾಬಲಃ ।
ರಾಜಾ ಸರ್ವಸ್ಯ ಲೋಕಸ್ಯ ಮಹೇಂದ್ರವರುಣೋಪಮಃ ॥೪॥

ಲೋಕಾನಾಂ ಚ ಹಿತೇ ಯುಕ್ತೋ ರಾಮೋ ದಶರಥಾತ್ಮಜಃ ।
ತಸ್ಯೈಷಾ ಲೋಕನಾಥಸ್ಯ ಧರ್ಮಪತ್ನೀ ಯಶಸ್ವಿನೀ ॥೫॥

ಸೀತಾ ನಾಮ ವರಾರೋಹಾ ಯಾಂ ತ್ವಂ ಹರ್ತುಮಿಹೇಚ್ಛಸಿ ।
ಕಥಂ ರಾಜಾ ಸ್ಥಿತೋ ಧರ್ಮೇ ಪರದಾರಾನ್ ಪರಾಮೃಶೇತ್ ॥೬॥

ರಕ್ಷಣೀಯಾ ವಿಶೇಷೇಣ ರಾಜದಾರಾ ಮಹಾಬಲ ।
ನಿವರ್ತಯ ಮತಿಂ ನೀಚಾಂ ಪರದಾರಾಭಿಮರ್ಶನಾತ್ ॥೭॥

ನ ತತ್ ಸಮಾಚರೇದ್ಧೀರೋ ಯತ್ ಪರೋಽಸ್ಯ ವಿಗರ್ಹಯೇತ್ ।
ಯಥಾತ್ಮನಸ್ತಥಾನ್ಯೇಷಾಂ ದಾರಾ ರಕ್ಷ್ಯಾ ವಿಪಶ್ಚಿತಾ ॥೮॥

ಆ ಸೀತೆಯ ಕೂಗನ್ನು ಮಲಗಿದ್ದ ಜಟಾಯುವು ಕೇಳಿಸಿಕೊಂಡನು. ಹಾಗೆಯೇ ಕೂಡಲೆ ರಾವಣನನ್ನು ಹಾಗೂ ವೈದೇಹಿಯನ್ನು ಕಂಡನು. ಪರ್ವತ ಶಿಖರದಂತೆ ಇದ್ದ, ತೀಕ್ಷ್ಣವಾದ ಕೊಕ್ಕುಳ್ಳ ಪಕ್ಷಿ ಶ್ರೇಷ್ಠ ಶ್ರೀಮಾನ್ ಜಟಾಯು ಒಳ್ಳೆಯ ಮಾತನ್ನಾಡಿದ.

ದಶಗ್ರೀವ ! ಪುರಾತನ ಧರ್ಮದಲ್ಲಿ ನಿಷ್ಠನಾಗಿದ್ದು ಸತ್ಯವನ್ನು ಆಶ್ರಯಿಸಿರುವ ನೀನು. ಈಗ ಈ ನಿಂದಿತ ಕರ್ಮವನ್ನು ಮಾಡಲು ಅರ್ಹನಲ್ಲ. ನಾನು ಜಟಾಯು ಎಂಬ ಮಹಾಬಲವುಳ್ಳ ಗೃಧ್ರರಾಜ. ದಶರಥನ ಪುತ್ರ ರಾಮ ಎಲ್ಲ ಲೋಕಗಳಿಗೆ ಮಹೇಂದ್ರವರುಣರಿಗೆ ಸದೃಶನಾದ ರಾಜ. ಲೋಕಕ್ಕೆ ಹಿತವುಂಟು ಮಾಡುವುದರಲ್ಲಿ ತನ್ನನ್ನು ತೊಡಗಿಸಿಕೊಂಡವನು. ಅಂತಹ ಲೋಕನಾಥನ ಧರ್ಮಪತ್ನೀ ಪ್ರಶಸ್ತ-ಯಶಸ್ಸಿನ ಸುಂದರಿ ಸೀತೆ - ನೀನು ಯಾರನ್ನು ಅಪಹರಿಸಲು ಬಯಸುತ್ತಿರುವಿ.

ಧರ್ಮದಲ್ಲಿ ಸ್ಥಿತನಾದ ರಾಜನಾಗಿ ನೀನು ಪರಪತ್ನಿಯನ್ನು ಸ್ಪರ್ಶ ಮಾಡುವುದು ಸರಿಯೇ. ಮಹಾವ್ರತನೆ ! ರಾಜಪತ್ನಿಯರು ವಿಶೇಷವಾಗಿ ರಕ್ಷಣೀಯರು. ಪರಸ್ತ್ರೀ ಸ್ಪರ್ಶದ ನೀಚ ಬುದ್ಧಿಯನ್ನು ನಿವೃತ್ತಿಗೊಳಿಸು. ಧೀಮಂತನಾದವನು ಯಾವುದನ್ನು ಇನ್ನೊಬ್ಬರು ನಿಂದಿಸುವರೋ ಅಂತಹ ಕಾರ್ಯವನ್ನು ಮಾಡಬಾರದು. ವಿವೇಕಿ-ಯಾದವನು ತನ್ನ ಪತ್ನಿಯನ್ನು ಹೇಗೆ ಹಾಗೆ ಇನ್ನೊಬ್ಬರ ಪತ್ನಿಯನ್ನೂ ರಕ್ಷಣೆ ಮಾಡಬೇಕು.

ಧರ್ಮಮರ್ಥಂ ಚ ಕಾಮಂ ಚ ಶಿಷ್ಟಾಃ ಶಾಸ್ತ್ರೇಷ್ವನಾಗತಮ್ ।
ವ್ಯವಸ್ಯಂತ್ಯನು ರಾಜಾನಂ ಪೌಲಸ್ತ್ಯಕುಲನಂದನ ॥೯॥

ರಾಜಾ ಧರ್ಮಶ್ಚ ಕಾಮಶ್ಚ ದ್ರವ್ಯಾಣಾಂ ಚೋತ್ತಮೋ ನಿಧಿಃ ।
ಧರ್ಮಃ ಶುಭಂ ವಾ ಪಾಪಂ ವಾ ರಾಜಮೂಲಂ ಪ್ರವರ್ತತೇ ॥೧೦॥

ಪಾಪಸ್ವಭಾವಶ್ಚಪಲಃ ಕಥಂ ತ್ವಂ ರಕ್ಷಸಾಂ ವರ ।
ಐಶ್ವರ್ಯಮಭಿಸಂಪ್ರಾಪ್ತೋ ವಿಮಾನಮಿವ ದುಷ್ಕೃತೀ ॥೧೧॥

ಕಾಮಂ ಸ್ವಭಾವೋ ಯೋ ಯಸ್ಯ ನ ಶಕ್ಯಃ ಪರಿಮಾರ್ಜಿತುಮ್ ।
ನ ಹಿ ದುಷ್ಟಾತ್ಮನಾಮಾರ್ಯಮಾವಸತ್ಯಾಲಯೇ ಚಿರಮ್ ॥೧೨॥

ವಿಷಯೇ ವಾ ಪುರೇ ವಾ ತೇ ಯದಾ ರಾಮೋ ಮಹಾಬಲಃ ।
ನಾಪರಾಧ್ಯತಿ ಧರ್ಮಾತ್ಮಾ ಕಥಂ ತಸ್ಯಾಪರಾಧ್ಯಸಿ ॥೧೩॥

ಯದಿ ಶೂರ್ಪಣಖಾಹೇತೋರ್ಜನಸ್ಥಾನಗತಃ ಖರಃ ।
ಅತಿವೃತ್ತೋ ಹತಃ ಪೂರ್ವಂ ರಾಮೇಣಾಕ್ಲಿಷ್ಟಕರ್ಮಣಾ ॥೧೪॥

ಅತ್ರ ಬ್ರೂಹಿ ಯಥಾತತ್ತ್ವಂ ಕೋ ರಾಮಸ್ಯ ವ್ಯತಿಕ್ರಮಃ ।
ಯಸ್ಯ ತ್ವಂ ಲೋಕನಾಥಸ್ಯ ಭಾರ್ಯಾಂ ಹೃತ್ವಾ ಗಮಿಷ್ಯಸಿ ॥೧೫॥

ಪೌಲಸ್ತ್ಯನಂದನ ! ಅರ್ಥವೇ ಆಗಿರಲಿ ಕಾಮವೇ ಆಗಿರಲಿ ಶಾಸ್ತ್ರದಲ್ಲಿ ಅನುಪದಿಷ್ಟವಾದ ಸಂಗತಿಯನ್ನು ಶಿಷ್ಟರು ಧರ್ಮವೆನ್ನುವುದಿಲ್ಲ. ಧರ್ಮ ಕಾಮ ದ್ರವ್ಯಗಳಿಗೆಲ್ಲ ರಾಜಾ ಆಶ್ರಯ. ಧರ್ಮವಾಗಲಿ ಶುಭವಾಗಲಿ ಪಾಪವಾಗಲಿ ರಾಜನೆ ಅದಕ್ಕೆ ಮೂಲ.

ಪಾಪ ಸ್ವಭಾವನು ಚಪಲನೂ ಆದ ರಾಕ್ಷಸಶ್ರೇಷ್ಠನೆ ! ದುರ್ಲಭವಾದ ದೇವ ವಿಮಾನವನ್ನು ಪಾಪಿಯು ಪಡೆವಂತೆ ನೀನು ಹೇಗೆ ಇಂಥ ಐಶ್ವರ್ಯವನ್ನು ಪಡೆದೆ ?

ನಿನ್ನ ಸ್ವಾಭಾವಿಕವಾದ ಕಾಮುಕತನವನ್ನು ಅಳಿಸಲಾಗದು. ದುಷ್ಟಾತ್ಮರ ಹೃದಯದಲ್ಲಿ ಸದುಪದೇಶವು ಸ್ಥಿರವಾಗಿ ನಿಲ್ಲುವುದಿಲ್ಲ. ನಿನ್ನ ರಾಜ್ಯದಲ್ಲಿಯಾಗಲಿ ನಿನ್ನ ಪುರದಲ್ಲಿ ಆಗಲಿ ಧರ್ಮಾತ್ಮ ರಾಮ ಯಾವ ಅಪರಾಧವೂ ಮಾಡಿಲ್ಲ. ಅಂದ ಮೇಲೆ ಅವನ ವಿಷಯದಲ್ಲಿ ನೀನೇಕೆ ಅಪರಾಧವೆಸಗುತ್ತಿರುವಿ ?

ಶೂರ್ಪಣಖೆಗಾಗಿ ಜನಸ್ಥಾನದಲ್ಲಿರುವ ಖರನು ರಾಮನ ಮೇಲೆ ಎರಗಿದ. ಅಕ್ಲೇಶವಾಗಿ ಕಾರ್ಯಮಾಡುವ ರಾಮ ಯುದ್ಧದಲ್ಲಿ ಅವನನ್ನು ಕೊಂದನು. ಇದರಲ್ಲಿ ರಾಮನ ತಪ್ಪೇನಿದೆ ಹೇಳು ? ಯಾವ ರಾಮನ ಹೆಂಡತಿಯನ್ನು ನೀನು ಅಪಹರಿಸುತ್ತಿರುವೆ.

ಕ್ಷಿಪ್ರಂ ವಿಸೃಜ ವೈದೇಹೀಂ ಮಾ ತ್ವಾ ಘೋರೇಣ ಚಕ್ಷುಷಾ ।
ದಹೇದ್ದಹನಭೂತೇನ ವೃತ್ರಮಿಂದ್ರಾಶನಿರ್ಯಥಾ ॥೧೬॥

ಸರ್ಪಮಾಶೀವಿಷಂ ಬದ್ಧ್ವಾ ವಸ್ತ್ರಾಂತೇ ನಾವಬುಧ್ಯಸೇ ।
ಗ್ರೀವಾಯಾಂ ಪ್ರತಿಮುಕ್ತಂ ಚ ಕಾಲಪಾಶಂ ನ ಪಶ್ಯಸಿ ॥೧೭॥

ಸ ಭಾರಃ ಸೌಮ್ಯ ಭರ್ತವ್ಯೋ ಯೋ ನರಂ ನಾವಸಾದಯೇತ್ ।
ತದನ್ನಮಪಿ ಭೋಕ್ತವ್ಯಂ ಜೀರ್ಯತೇ ಯದನಾಮಯಮ್ ॥೧೮॥

ಬೇಗನೇ ವೈದೇಹಿಯನ್ನು ಬಿಟ್ಟು ಬಿಡು. ಇಂದ್ರನ ವಜ್ರಾಯುಧದಿಂದ ವೃತ್ರ ನಾಶವಾದಂತೆ ರಾಮನ ಕಣ್ಣ ಬೆಂಕಿಗೆ ನೀನು ಬೂದಿಯಾಗದಿರು.

ಬಟ್ಟೆಯ ತುದಿಯಲ್ಲಿ ವಿಷಸರ್ಪವನ್ನು ಕಟ್ಟಿಕೊಂಡು ಅದರ ಅರಿವಿಲ್ಲದವ-ನಾಗಿರುವಿ. ಕುತ್ತಿಗೆಯಲ್ಲಿ ಸುತ್ತಿಕೊಂಡ ಕಾಲಪಾಶದ ಉರುಳನ್ನು ನೀನು ಕಾಣುತ್ತಿಲ್ಲ.

ಯಾವ ಭಾರ ಹೊತ್ತವನನ್ನೆ ನಾಶಗೊಳಿಸಲಾರದು ಅಷ್ಟೇ ಭಾರವನ್ನು ಹೊರ-ಬೇಕು. ಯಾವ ಅನ್ನ ಆರೋಗ್ಯವಾಗಿ ಪಚನವಾಗಬಲ್ಲದೋ ಅಂಥ ಅನ್ನವನ್ನೆ ಉಣ್ಣಬೇಕು.

ಯತ್ ಕೃತ್ವಾ ನ ಭವೇದ್ಧರ್ಮೋ ನ ಕೀರ್ತಿರ್ನ ಯಶೋ ಭುವಿ ।
ಶರೀರಸ್ಯ ಭವೇತ್ ಖೇದಃ ಕಸ್ತತ್ ಕರ್ಮ ಸಮಾಚರೇತ್ ॥೧೯॥

ಯಾವುದನ್ನು ಮಾಡಿ ಪುಣ್ಯವೂ ಇಲ್ಲ, ಕೀರ್ತಿಯೂ ಇಲ್ಲ, ಯಶಸ್ಸೂ ಇಲ್ಲ. ಬರೇ ಶರೀರಕ್ಕೆ ಖೇದ ಮಾತ್ರವೊ ಅಂತಹ ಕರ್ಮವನ್ನು ಯಾರು ಮಾಡಿಯಾರು ?

ಷಷ್ಟಿರ್ವರ್ಷಸಹಸ್ರಾಣಿ ಮಮ ಜಾತಸ್ಯ ರಾವಣ ।
ಪಿತೃಪೈತಾಮಹಂ ರಾಜ್ಯಂ ಯಥಾವದನುತಿಷ್ಠತಃ ॥೨೦॥

ವೃದ್ಧೋಽಹಂ ತ್ವಂ ಯುವಾ ಧನ್ವೀ ಸಶರಃ ಕವಚೀ ರಥೀ ।
ತಥಾಪ್ಯಾದಾಯ ವೈದೇಹೀಂ ಕುಶಲೀ ನ ಗಮಿಷ್ಯಸಿ ॥೨೧॥

ನ ಶಕ್ತಸ್ತ್ವಂ ಬಲಾದ್ಧರ್ತುಂ ವೈದೇಹೀಂ ಮಮ ಪಶ್ಯತಃ ।
ಹೇತುಭಿರ್ನ್ಯಾಯಸಂಯುಕ್ತೈರ್ಧ್ರುವಾಂ ವೇದಶ್ರುತೀಮಿವ ॥೨೨॥

ಪಿತೃಪೈತಾಮಹರಿಂದ ಬಂದ ಪಕ್ಷಿ ಸಾಮ್ರಾಜ್ಯವನ್ನು ಆಳುತ್ತಿರುವ ನನಗೆ ಅರವತ್ತು ಸಾವಿರ ವರ್ಷಗಳು ಇಂದಿಗೆ ಸಂದಿವೆ. ನಾನು ಮುದುಕ, ನೀನು ಯುವಕ. ಬಿಲ್ಲುಬಾಣಗಳನ್ನು ಧರಿಸಿದವನು. ಕವಚ ರಥಗಳನ್ನು ಹೊಂದಿರುವಿ. ಆದರೂ ವೈದೇಹಿಯನ್ನು ಕೊಂಡೊಯ್ದು ಕುಶಲವಾಗಿ ಹೋಗಲು ಸಾಧ್ಯವಿಲ್ಲ.

ನನ್ನ ಕಣ್ಣೆದುರಿಗೆ ವೈದೇಹಿಯನ್ನು ಬಲಾತ್ಕರಿಸಲು ಸಾಧ್ಯವಿಲ್ಲ. ನ್ಯಾಯ ಶಾಸ್ತ್ರದ ಯುಕ್ತಿಗಳಿಂದ ಪವಿತ್ರವಾದ ವೇದವನ್ನು ಅಲ್ಲಗೆಳೆಯಲು ಸಾಧ್ಯವಾಗದಂತೆ.

ಯುಧ್ಯಸ್ವ ಯದಿ ಶೂರೋಽಸಿ ಮುಹೂರ್ತಂ ತಿಷ್ಠ ರಾವಣ ।
ಶಯಿಷ್ಯಸೇ ಹತೋ ಭೂಮೌ ಯಥಾ ಪೂರ್ವಂ ಖರಸ್ತಥಾ ॥೨೩॥

ನೀನು ಶೂರನಾಗಿದ್ದರೆ ಯುದ್ಧ ಮಾಡು. ಸ್ವಲ್ಪ ಮುಹೂರ್ತ ಕಾಲ ನಿಲ್ಲು. ಖರ ನೆಲದಲ್ಲಿ ಸತ್ತು ಬಿದ್ದಂತೆ ನೀನು ನೆಲಕ್ಕುರುಳುವೆ.

ಅಸಕೃತ್ ಸಂಯುಗೇ ಯೇನ ನಿಹತಾ ದೈತ್ಯದಾನವಾಃ ।
ನಚಿರಾಚ್ಚೀರವಾಸಾಸ್ತ್ವಂ ರಾಮೋ ಯುಧಿ ವಧಿಷ್ಯತಿ ॥೨೪॥

ಕಿಂ ನು ಶಕ್ಯಂ ಮಯಾ ಕರ್ತುಂ ಗತೌ ದೂರಂ ನೃಪಾತ್ಮಜೌ ।
ಕ್ಷಿಪ್ರಂ ತ್ವಂ ನಶ್ಯಸೇ ನೀಚ ತಯೋರ್ಭೀತೋ ನ ಸಂಶಯಃ ॥೨೫॥

ನ ಹಿ ಮೇ ಜೀವಮಾನಸ್ಯ ನಯಿಷ್ಯಸಿ ಶುಭಾಮಿಮಾಮ್ ।
ಸೀತಾಂ ಕಮಲಪತ್ರಾಕ್ಷೀಂ ರಾಮಸ್ಯ ಮಹಿಷೀಂ ಪ್ರಿಯಾಮ್ ॥೨೬॥

ಅವಶ್ಯಂ ತು ಮಯಾ ಕಾರ್ಯಂ ಪ್ರಿಯಂ ತಸ್ಯ ಮಹಾತ್ಮನಃ ।
ಜೀವಿತೇನಾಪಿ ರಾಮಸ್ಯ ತಥಾ ದಶರಥಸ್ಯ ಚ ॥೨೭॥

ತಿಷ್ಠ ತಿಷ್ಠ ದಶಗ್ರೀವ ಮುಹೂರ್ತಂ ಪಶ್ಯ ರಾವಣ ।
ಯುದ್ಧಾತಿಥ್ಯಂ ಪ್ರದಾಸ್ಯಾಮಿ ಯಥಾಪ್ರಾಣಂ ನಿಶಾಚರ ॥೨೮॥

ವೃಂತಾದಿವ ಫಲಂ ತ್ವಾಂ ತು ಪಾತಯೇಯಂ ರಥೋತ್ತಮಾತ್ ॥

ಯಾವ ರಾಮನಿಂದ ಅನೇಕ ಬಾರಿ ಯುದ್ಧದಲ್ಲಿ ಅನೇಕ ದೈತ್ಯದಾನವರು ಹತರಾಗಿದ್ದಾರೆ. ಅಂತಹ ಚೀರ ವಸನನಾದ ರಾಮ ಯುದ್ಧದಲ್ಲಿ ಕೂಡಲೆ ನಿನ್ನನ್ನು ಸಂಹರಿಸುತ್ತಾನೆ.

ಏನು ಮಾಡಲಿ ? ನನ್ನಿಂದ ಏನು ಮಾಡಲು ಶಕ್ಯ ? ರಾಜಪುತ್ರರಾದ ರಾಮ-ಲಕ್ಷ್ಮಣರು ದೂರ ಹೋಗಿದ್ದಾರೆ. ನೀಚನೆ ! ಸದ್ಯದಲ್ಲಿ ನೀನು ನಾಶವಾಗುವಿ - ಅವರಿಗೆ ಹೆದರಿ.

ರಾಮನ ಪ್ರಿಯಮಹಿಷಿ ಕಮಲಪತ್ರಾಕ್ಷಿಯಾದ ಈ ಶುಭಳಾದ ಸೀತೆಯನ್ನು ನಾನು ಬದುಕಿರುವಾಗ ನೀನು ಕೊಂಡೊಯ್ಯಲಾರೆ.

ಮಹಾತ್ಮ ದಶರಥನಿಗೆ ರಾಮನಿಗೆ ಬದುಕನ್ನೆ ಪಣವಾಗಿಟ್ಟು ಅವಶ್ಯವಾಗಿ ನಾನು ಪ್ರಿಯವಾದುದನ್ನು ಮಾಡಬೇಕು.

ನಿಲ್ಲು ನಿಲ್ಲು ದಶಗ್ರೀವನೆ ! ರಾವಣ ! ಮುಹೂರ್ತಕಾಲ ನೋಡು. ನಿಶಾಚರನೇ ! ಯುದ್ಧಾತಿಥ್ಯವನ್ನು ಕೊಡುತ್ತೇನೆ. ತೊಟ್ಟಿನಿಂದ ಹಣ್ಣು ಉದುರಿ ಬೀಳುವಂತೆ ರಥೋತ್ತಮದಿಂದ ನಿನ್ನನ್ನು ಬೀಳಿಸಿಯೇನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತನೇ ಸರ್ಗ ಮುಗಿಯಿತು.

★

ಏಕಪಂಚಾಶಃ ಸರ್ಗಃ

ಕಥಾಸಾರಾಂಶ– ಜಟಾಯುವಿನ ನ್ಯಾಯಸಮ್ಮತವಾದ ತೀಕ್ಷ್ಣ ಮಾತುಗಳು ರಾವಣನಿಗೆ ಕೋಪ ಬರಿಸಿದವು. ಅವನ ಇಪ್ಪತ್ತು ಕಣ್ಣುಗಳೂ ಬೆಂಕಿಯಂತೆ ಪ್ರಜ್ವಲಿಸಿದವು !

ಕ್ರುದ್ಧನಾದ ದಶಗ್ರೀವ ಜಟಾಯುವನ್ನು ಆಕ್ರಮಿಸಿದ. ರಾವಣ ಜಟಾಯು ಇಬ್ಬರಿಗೂ ಘೋರ ಯುದ್ಧವಾಯಿತು. ಚಂಡಮಾರುತದ ಹೊಡೆತಕ್ಕೆ ಮೇಲೆದ್ದ ಎರಡು ಮೋಡಗಳ ಘರ್ಷಣೆಯಂತೆ ಎರಡು ಪರ್ವತಗಳು ಘರ್ಷಣೆಗೆ ಇಳಿದಂತೆ ಭಯಂಕರವಾಗಿತ್ತು. ರಾವಣ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದ. ಜಟಾಯುವಿನ ಆಯುಧವೆಂದರೆ ಚೂಪಾದ ಕೊಕ್ಕು, ಹರಿತವಾದ ಉಗುರು, ಅಗಲವಾದ ರೆಕ್ಕೆಗಳು. ನಿಲ್ಲಲ್ಲು ರಥವಿಲ್ಲ. ಧರಿಸಲು ಕವಚವಿಲ್ಲ. ರಾಮಸೇವೆಯೇ ಪ್ರಧಾನ ದೃಷ್ಟಿ. ಅನ್ಯಾಯವನ್ನು ಸಹಿಸದ ಸಾತ್ವಿಕ ಆಕ್ರೋಶ. ಸೀತೆಯ ಸಂಕಟವನ್ನು ನೋಡಿ ಉಕ್ಕಿ ಬಂದ ರೋಷ.

ರಾವಣನು ಪ್ರಯೋಗಿಸಿದ ಬಾಣಗಳನ್ನು ರೆಕ್ಕೆಗಳಿಂದಲೆ ತಡೆಯುತ್ತಿದ್ದ. ಉಗುರು ಕೊಕ್ಕುಗಳಿಂದ ರಾವಣನನ್ನು ಪರಚಿದ, ಕಚ್ಚಿದ, ಚುಚ್ಚಿದ. ಅವನ ಧ್ವಜವನ್ನು ಕಿತ್ತೆಸೆದ. ವಾಹನಗಳಾದ ಹೇಸರಕತ್ತೆಗಳನ್ನು ಕುಕ್ಕಿ ಕೊಂದ. ಜೊತೆಗಿದ್ದ ಸಹಾಯಕರನ್ನು ಹೊಡೆದುರುಳಿಸಿದ. ರಾವಣನ ತೋಳುಗಳನ್ನೆ ಕತ್ತರಿಸಿ ಹಾಕಿದ. ಅವು ಮತ್ತೆ ಚಿಗುರಿದವು.

ರಥ ಧ್ವಂಸವಾಗಿ ಕಾಡಿನ ನೆಲದಲ್ಲಿ ನಿಂತು ರಾವಣ ಯುದ್ಧಮಾಡಿದ. ತೀವ್ರವಾಗಿ ಪ್ರತಿರೋಧ ಒಡ್ಡಿದ ಜಟಾಯು. ಒಂದೆಡೆ ಸೀತೆಯನ್ನು ಹಿಡಿದಿಟ್ಟುಕೊಳ್ಳುವುದು. ಇನ್ನೊಂದೆಡೆ ಜಟಾಯುವಿನ ಪ್ರಾಕೃತಿಕ ಆಯುಧಗಳ ಪ್ರಹಾರಗಳಿಂದ ತಪ್ಪಿಸಿಕೊಳ್ಳ–ಬೇಕು. 'ಸಾಧು ಜಟಾಯು' ಎಂದು ಪ್ರಾಣಿಗಳ ಜೈಕಾರಗಳು. ರಾವಣ ಹೈರಾಣ ಆದ.

ಅಲ್ಪಬುದ್ಧಿಯೆ ! ವಜ್ರದಂಥ ಘೋರಸ್ಪರ್ಶದ ಬಾಣಗಳನ್ನು ಹೊಂದಿರುವ ರಾಮನ ಭಾರ್ಯೆಯನ್ನು ಎಲ್ಲ ರಕ್ಕಸರ ನಾಶಕ್ಕಾಗಿಯೆ ಒಯ್ಯುತ್ತಿರುವೆ ಮಂಕೇ !

ಬಾಯಾರಿದವರು ನೀರು ಕುಡಿದಂತೆ ಸಪರಿವಾರನಾಗಿ ವಿಷಪಾನ ಮಾಡುತ್ತಿರುವೆ ತಿಳಿಗೇಡಿಯೆ !

ರಾವಣ ! ಮಾಂಸದ ತುಂಡಿರುವ ಗಾಳಕ್ಕೆ ಬಾಯಿ ಹಾಕಿದ ಮೀನು ಬದುಕುಳಿ–ಯಲು ಸಾಧ್ಯವೇ ? ಕೊರಳಿಗೆ ಕಾಲಪಾಶದ ಉರುಳು ಹಾಕಿಕೊಂಡವನು ಎಲ್ಲಿ ಹೋದರೂ ಬದುಕಲು ಸಾಧ್ಯವೇ ?

ರಾಮ-ಲಕ್ಷ್ಮಣರನ್ನು ಎದುರಿಸಲಾಗದೆ ಅವರಿಲ್ಲದ ಸಮಯದಲ್ಲಿ ಆಶ್ರಮಕ್ಕೆ ಅತಿಕ್ರಮ ಪ್ರವೇಶ ಮಾಡಿ ಸೀತೆಯನ್ನು ಅಪಹರಿಸಿರುವ ಕೃತ್ಯ ಹೇಡಿಗಳಾದ ಕಳ್ಳರು ಮಾಡುವ ಕೆಲಸ. ಇದು ವೀರ ಪುರುಷರಿಗೆ ಉಚಿತವಾದ ನಡೆಯಲ್ಲ''. ಜಟಾಯುವು ಹೀಗೆ ಎಚ್ಚರಿಸುತ್ತಲೆ ತನ್ನ ಆಯಾಸ ಪರಿಶ್ರಮಗಳನ್ನು ಲೆಕ್ಕಿಸದೆ ರಾವಣನ ತಲೆ ಚಿಟ್ಟು ಹಿಡಿಯುವಂತೆ ತಲೆಗೂದಲು ಕಿತ್ತಿದ. ಬೆನ್ನು ಪರಚಿದ, ಪೃಷ್ಟ ಪರಚಿದ. ದಿಕ್ಕು ತೋಚದ ರಾವಣ ಕೊನೆಗೆ ಖಡ್ಗ ಹಿಡಿದು ದಣಿದ ಜಟಾಯುವಿನ ಎರಡು ರೆಕ್ಕೆಗಳನ್ನು ಕತ್ತರಿಸಿ ಹಾಕಿದ. ಜಟಾಯು ಭೂಮಿಯ ಮೇಲೆ ರಕ್ತಸಿಕ್ತನಾಗಿ ಬಿದ್ದ. ಜಾನಕಿ ಓಡಿ ಬಂದು ತನಗಾಗಿ ಹೋರಾಡಿದ ವೃದ್ಧ ಜಟಾಯುವಿನ ಬಳಿ ದುಃಖಿತಳಾಗಿ ಬಂದು ಜಟಾಯುವಿನ ಶರೀರವನ್ನು ಮತ್ತೆ ಮತ್ತೆ ನೇವರಿಸಿದಳು !

❖

ಜಟಾಯುರಾವಣಯುದ್ಧಮ್

ಇತ್ಯುಕ್ತಸ್ಯ ಯಥಾನ್ಯಾಯಂ ರಾವಣಸ್ಯ ಜಟಾಯುಷಾ ।
ಕ್ರುದ್ಧಸ್ಯಾಗ್ನಿನಿಭಾಃ ಸರ್ವಾ ರೇಜುರ್ವಿಂಶತಿದೃಷ್ಟಯಃ ॥೧॥

ಸಂರಕ್ತನಯನಃ ಕೋಪಾತ್ ತಪ್ತಕಾಂಚನಕುಂಡಲಃ ।
ರಾಕ್ಷಸೇಂದ್ರೋಽಭಿದುದ್ರಾವ ಪತಗೇಂದ್ರಮಮರ್ಷಣಃ ॥೨॥

ಸ ಸಂಪ್ರಹಾರಸ್ತುಮುಲಸ್ತಯೋಸ್ತಸ್ಮಿನ್ ಮಹಾವನೇ ।
ಬಭೂವ ವಾತೋದ್ಧತಯೋರ್ಮೇಘಯೋರ್ಗಗನೇ ಯಥಾ ॥೩॥

ತದ್ಬಭೂವಾದ್ಭುತಂ ಯುದ್ಧಂ ಗೃಧ್ರರಾಕ್ಷಸಯೋಸ್ತದಾ ।
ಸಪಕ್ಷಯೋರ್ಮಾಲ್ಯವತೋರ್ಮಹಾಪರ್ವತಯೋರಿವ ॥೪॥

ಜಟಾಯು ನ್ಯಾಯಾನುಸಾರವಾಗಿ ಹೇಳಿದ ಮಾತನ್ನು ಕೇಳಿ ಕ್ರುದ್ಧನಾದ ರಾವಣನ ಇಪ್ಪತ್ತು ಕಣ್ಣುಗಳು ಉರಿವ ಕೆಂಡದಂತೆ ನಿಗಿ ನಿಗಿ ಬೆಳಗಿದವು.

ಕೋಪದಿಂದ ಕೆಂಗಣ್ಣಿನವನಾದ ಸುವರ್ಣಕುಂಡಲಧಾರಿ ರಾಕ್ಷಸೇಂದ್ರ ಸೈರಣೆ-ಯಿಲ್ಲದೆ ಪಕ್ಷಿ ಶ್ರೇಷ್ಠ ಜಟಾಯುವಿನೆಡೆಗೆ ನುಗ್ಗಿ ಬಂದ.

ಅವರಿಬ್ಬರ ನಡುವೆ ಆ ಮಹಾವನದಲ್ಲಿ ಘೋರ ಯುದ್ಧವೇರ್ಪಟ್ಟಿತು. ಆಕಾಶದಲ್ಲಿ ಚಂಡ ಮಾರುತಕ್ಕೆ ಸಿಲುಕಿ ಮುಖಾಮುಖಿಯಾದ ಮೋಡಗಳು ಅಪ್ಪಳಿಸಿದಂತೆ ಇತ್ತು.

ರಾವಣ ಜಟಾಯುಗಳಿಗೆ ಆಗ ಅದ್ಭುತ ಯುದ್ಧ ನಡೆಯಿತು. ರೆಕ್ಕೆಯಿರುವ ಎರಡು ಮೌಲ್ಯವಂತ ಮಹಾಪರ್ವತಗಳ ಘರ್ಷಣೆಯಂತಾಯಿತು.

ತತೋ ನಾಲೀಕನಾರಾಚೈಸ್ತೀಕ್ಷ್ಣಾಗ್ರೈಶ್ಚ ವಿಕರ್ಣಿಭಿಃ ।
ಅಭ್ಯವರ್ಷನ್ಮಹಾಘೋರೈರ್ಗೃಧ್ರರಾಜಂ ಮಹಾಬಲಃ ॥೫॥

ಸ ತಾನಿ ಶರಜಾಲಾನಿ ಗೃಧ್ರಃ ಪತ್ರರಥೇಶ್ವರಃ ।
ಜಟಾಯುಃ ಪ್ರತಿಜಗ್ರಾಹ ರಾವಣಾಸ್ತ್ರಾಣಿ ಸಂಯುಗೇ ॥೬॥

ತಸ್ಯ ತೀಕ್ಷ್ಣನಖಾಭ್ಯಾಂ ತು ಚರಣಾಭ್ಯಾಂ ಮಹಾಬಲಃ ।
ಚಕಾರ ಬಹುಧಾ ಗಾತ್ರೇ ವ್ರಣಾನ್ ಪತಗಸತ್ತಮಃ ॥೭॥

ಅಥ ಕ್ರೋಧಾದ್ದಶಗ್ರೀವೋ ಜಗ್ರಾಹ ದಶ ಮಾರ್ಗಣಾನ್ ।
ಮೃತ್ಯುದಂಡನಿಭಾನ್ ಘೋರಾನ್ ಶತ್ರೋರ್ನಿಧನಕಾಂಕ್ಷಯಾ ॥೮॥

ಸ ತೈರ್ಬಾಣೈರ್ಮಹಾವೀರ್ಯಃ ಪೂರ್ಣಮುಕ್ತೈರಜಿಹ್ಮಗೈಃ ।
ಬಿಭೇದ ನಿಶಿತೈಸ್ತೀಕ್ಷ್ಣೈರ್ಗೃಧ್ರಂ ಘೋರೈಃ ಶಿಲೀಮುಖೈಃ ॥೯॥

ಸ ರಾಕ್ಷಸರಥೇ ಪಶ್ಯನ್ ಜಾನಕೀಂ ಬಾಷ್ಪಲೋಚನಾಮ್ ।
ಅಚಿಂತಯಿತ್ವಾ ತಾನ್ ಬಾಣಾನ್ ರಾಕ್ಷಸಂ ಸಮಭಿದ್ರವತ್ ॥೧೦॥

ಮಹಾಬಲಶಾಲಿಯಾದ ರಾವಣ ಪಕ್ಷಿರಾಜನ ಮೇಲೆ ತೀಕ್ಷ್ಣವಾದ ತುದಿಯ ನಾರಾಚ ನಾಲೀಕ ವಿಕರ್ಣಿ ಎಂಬ ಮಹಾಸ್ತ್ರಗಳನ್ನು ಪ್ರಯೋಗಿಸಿದನು.

ಪತ್ರರಥೇಶ್ವರ ಜಟಾಯುವು ಯುದ್ಧದಲ್ಲಿ ರಾವಣನ ಅಸ್ತ್ರಗಳನ್ನು ದಿಟ್ಟತನ-ದಿಂದ ಸ್ವೀಕರಿಸಿದ.

ಮಹಾಬಲದ ಪಕ್ಷಿರಾಜನು ಚೂಪುಗುರಿನ ಎರಡು ಪಾದಗಳಿಂದ ರಾವಣನ ದೇಹದಲ್ಲಿ ಬಹಳ ಗಾಯಗಳನ್ನುಂಟು ಮಾಡಿದ.

ಬಳಿಕ ದಶಗ್ರೀವನು ಕ್ರೋಧದಿಂದ ಶತ್ರುಮರ್ದನದ ಬಯಕೆಯಿಂದ ಮೃತ್ಯು-ದಂಡದಂತಿರುವ ಘೋರಗಳಾದ ಹತ್ತು ಬಾಣಗಳನ್ನು ಪ್ರಯೋಗಿಸಿದ.

ಮಹಾವೀರ್ಯಸಂಪನ್ನ ರಾವಣನು ಕಿವಿಯವರೆಗೆ ಚೆನ್ನಾಗಿ ಸೆಳೆದು ಬಿಟ್ಟ, ನೇರವಾಗಿ ನುಗ್ಗುವ, ನಿಶಿತಗಳಾಗಿ ತೀಕ್ಷ್ಣಗಳಾದ ಘೋರವಾದ ಬಾಣಗಳಿಂದ ಜಟಾಯುವನ್ನು ಘಾಸಿಗೊಳಿಸಿದನು.

ಆ ಜಟಾಯವು ರಾಕ್ಷಸನ ರಥದಲ್ಲಿ ಕಣ್ಣೀರು ತುಂಬಿದ ಜಾನಕಿಯನ್ನು ನೋಡಿ ಆ ಬಾಣಗಳ ಬಗ್ಗೆ ಯೋಚಿಸದೆ ರಾಕ್ಷಸನೆದುರಿಗೆ ಎರಗಿ ಬಂದ.

ತತೋಽಸ್ಯ ಸಶರಂ ಚಾಪಂ ಮುಕ್ತಾಮಣಿವಿಭೂಷಿತಮ್ ।
ಚರಣಾಭ್ಯಾಂ ಮಹಾತೇಜಾ ಬಭಂಜ ಪತಗೇಶ್ವರಃ ॥೧೧॥

ತತೋಽನ್ಯದ್ಧನುರಾದಾಯ ರಾವಣಃ ಕೋಧಮೂರ್ಚ್ಛಿತಃ ।
ವವರ್ಷ ಶರವರ್ಷಾಣಿ ಶತಶೋಽಥ ಸಹಸ್ರಶಃ ॥೧೨॥

ಶರೈರಾವಾರಿತಸ್ತಸ್ಯ ಸಂಯುಗೇ ಪತಗೇಶ್ವರಃ ।
ಕುಲಾಯಮುಪಸಂಪ್ರಾಪ್ತಃ ಪಕ್ಷೀವ ಪ್ರಬಭೌ ತದಾ ॥೧೩॥

ಸ ತಾನಿ ಶರವರ್ಷಾಣಿ ಪಕ್ಷಾಭ್ಯಾಂ ಚ ವಿಧೂಯ ಚ ।
ಚರಣಾಭ್ಯಾಂ ಮಹಾತೇಜಾ ಬಭಂಜಾಸ್ಯ ಮಹದ್ಧನುಃ ॥೧೪॥

ತಚ್ಚಾಗ್ನಿಸದೃಶಂ ದೀಪ್ತಂ ರಾವಣಸ್ಯ ಶರಾವರಮ್ ।
ಪಕ್ಷಾಭ್ಯಾಂ ಸ ಮಹಾವೀರ್ಯೋ ವ್ಯಾಧುನೋತ್ ಪತಗೇಶ್ವರಃ ॥೧೫॥

ಕಾಂಚನೋರಶ್ಛದಾನ್ ದಿವ್ಯಾನ್ ಪಿಶಾಚವದನಾನ್ ಖರಾನ್ ।
ತಾಂಶ್ಚಾಸ್ಯ ಜವಸಂಪನ್ನಾನ್ ಜಘಾನ ಸಮರೇ ಬಲೀ ॥೧೬॥

ವರಂ ತ್ರಿವೇಣುಸಂಪನ್ನಂ ಕಾಮಗಂ ಪಾವಕಾರ್ಚಿಷಮ್ ।
ಮಣಿಹೇಮವಿಚಿತ್ರಾಂಗಂ ಬಭಂಜ ಚ ಮಹಾರಥಮ್ ॥೧೭॥

ಪೂರ್ಣಚಂದ್ರಪ್ರತೀಕಾಶಂ ಛತ್ರಂ ಚ ವ್ಯಜನೈಃ ಸಹ ।
ಪಾತಯಾಮಾಸ ವೇಗೇನ ಗ್ರಾಹಿಭೀ ರಾಕ್ಷಸೈಃ ಸಹ ॥೧೮॥

ಬಳಿಕ ಮಹಾತೇಜಸ್ವಿಯಾದ ಪಕ್ಷಿರಾಜ ರಾವಣನ, ಮುತ್ತಿನ ಮಣಿಗಳಿಂದ ಅಲಂಕೃತವಾದ ಬಾಣ ಸಹಿತವಾದ ಬಿಲ್ಲನ್ನು ಎರಡು ಪಾದಗಳಿಂದ ಸೀಳಿ ಹಾಕಿದನು.

ಅನಂತರ ರಾವಣನು ಮತ್ತೊಂದು ಬಿಲ್ಲನ್ನು ತೆಗೆದುಕೊಂಡು ನೂರಾರು ಸಾವಿರಾರು ಬಾಣಗಳ ಮಳೆಗೆರೆದನು. ಯುದ್ಧದಲ್ಲಿ ರಾವಣನ ಬಾಣಗಳಿಂದ ಆವರಿಸಲ್ಪಟ್ಟ ಆ ಪಕ್ಷಿರಾಜನು ಗೂಡು ಸೇರಿದ ಹಕ್ಕಿಯಂತೆ ಶೋಭಿಸಿದನು. ತುಂಬು

ಸಾಮರ್ಥ್ಯದ ಅವನು ಆ ಬಾಣಗಳ ಮಳೆಯನ್ನು ಎರಡು ರೆಕ್ಕೆಗಳಿಂದ ಝಾಡಿಸಿ ಎರಡು ಪಾದಗಳಿಂದ ಆ ರಾವಣನ ಬಿಲ್ಲನ್ನು ಮುರಿದು ಹಾಕಿದನು.

ಮಹಾವೀರ್ಯಶಾಲಿ ಪಕ್ಷಿಶ್ರೇಷ್ಠನು ಬೆಂಕಿಯಂತೆ ಹೊಳೆಯುತ್ತಿದ್ದ ರಾವಣನ ಕವಚವನ್ನು ಎರಡು ರೆಕ್ಕೆಗಳಿಂದ ತುಂಡರಿಸಿದ. ಅಷ್ಟೇ ಅಲ್ಲದೆ ಬಲಿಷ್ಠ ಜಟಾಯು ಪಿಶಾಚ ಮುಖದಂಥ ಮುಖವುಳ್ಳ ಎದೆಯ ಮೇಲೆ ಬಂಗಾರದ ಕವಚ ಕಟ್ಟಿದ್ದ ವೇಗ ಸಂಪನ್ನಗಳಾದ ರಾವಣರಥದ ಹೇಸರಕತ್ತೆಗಳನ್ನು ಯುದ್ಧದಲ್ಲಿ ಕೊಂದು ಹಾಕಿದನು.

ಬಯಸಿದೆಡೆ ಸಾಗಬಲ್ಲ ಉತ್ತಮವಾದ ನೊಗವನ್ನು ಹೊಂದಿರುವ ಅಗ್ನಿಯಂತೆ ಬೆಳಗುತ್ತಿದ್ದ ಮಣಿಹೇಮಗಳಿಂದ ಖಚಿತವಾದ ವಿಚಿತ್ರಾಂಗಗಳನ್ನು ಹೊಂದಿರುವ ಉತ್ತಮವಾದ ರಾವಣನ ಮಹಾರಥವನ್ನು ಜಟಾಯು ಧ್ವಂಸಗೈದ.

ಪೂರ್ಣಚಂದ್ರನನ್ನು ಹೋಲುವ ಛತ್ರವನ್ನು, ವ್ಯಜನಗಳೊಂದಿಗೆ, ಅದನ್ನು ಹೊತ್ತಿರುವ ಪುರುಷರೊಂದಿಗೆ ವೇಗವಾಗಿ ಬೀಳಿಸಿದನು.

ಸಾರಥೇಶ್ಚಾಸ್ಯ ವೇಗೇನ ತುಂಡೇನೈವ ಮಹಚ್ಛಿರಃ ।
ಪುನರ್ಜಘಾಹರಚ್ಛ್ರೀಮಾನ್ ಪಕ್ಷಿರಾಜೋ ಮಹಾಬಲಃ ॥೧೯॥

ಸ ಭಗ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಅಂಕೇನಾದಾಯ ವೈದೇಹೀಂ ಪಪಾತ ಭುವಿ ರಾವಣಃ ॥೨೦॥

ದೃಷ್ಟ್ವಾ ನಿಪತಿತಂ ಭೂಮೌ ರಾವಣಂ ಭಗ್ನವಾಹನಮ್ ।
ಸಾಧು ಸಾಧ್ವಿತಿ ಭೂತಾನಿ ಗೃಧ್ರರಾಜಮಪೂಜಯನ್ ॥೨೧॥

ಪರಿಶ್ರಾಂತಂ ತು ತಂ ದೃಷ್ಟ್ವಾ ಜರಯಾ ಪಕ್ಷಿಯೂಥಪಮ್ ।
ಉತ್ಪಪಾತ ಪುನರ್ಹೃಷ್ಟೋ ಮೈಥಿಲೀಂ ಗೃಹ್ಯ ರಾವಣಃ ॥೨೨॥

ತಂ ಪ್ರಹೃಷ್ಟಂ ನಿಧಾಯಾಂಕೇ ಗಚ್ಛಂತಂ ಜನಕಾತ್ಮಜಾಮ್ ।
ಗೃಧ್ರರಾಜಃ ಸಮುತ್ಪತ್ಯ ಸಮಭಿದ್ರುತ್ಯ ರಾವಣಮ್ ॥೨೩॥

ಸಮಾವಾರ್ಯ ಮಹಾತೇಜಾ ಜಟಾಯುರಿದಮಬ್ರವೀತ್ ।

ಮಹಾಬಲಸಂಪನ್ನನಾದ ಶ್ರೀಮಾನ್ ಜಟಾಯುವು ಮತ್ತೆ ಕೂಡಲೆ ತನ್ನ ಕೊಕ್ಕಿನಿಂದಲೆ ಸಾರಥಿಯ ಮಹಾಶಿರಸ್ಸನ್ನೂ ತರಿದು ಹಾಕಿದನು.

ಧನಸ್ಸು ಭಂಗಗೊಂಡ, ರಥ ಸಾರಥಿ ಅಶ್ವಗಳನ್ನು ಕಳೆದುಕೊಂಡ ರಾವಣನು ಮೈಥಿಲಿಯನ್ನು ತೊಡೆಯಲ್ಲಿಟ್ಟುಕೊಂಡೆ ನೆಲಕ್ಕೆ ಬಿದ್ದ.

ವಾಹನವನ್ನು ಕಳೆದುಕೊಂಡು ಭೂಮಿಯಲ್ಲಿ ಬಿದ್ದ ರಾವಣನನ್ನು ನೋಡಿ ಎಲ್ಲ ಪ್ರಾಣಿಗಳು 'ಒಳ್ಳೆಯದು ಒಳ್ಳೆಯದು' ಎಂದು ಜಟಾಯುವನ್ನು ಗೌರವಿಸಿದೆವು. ವೃದ್ಧಾಪ್ಯದಿಂದ ಜಟಾಯು ಆಯಾಸಗೊಂಡಿರುವುದನ್ನು ಗಮನಿಸಿದ ರಾವಣ ಮೈಥಿಲಿಯನ್ನು ಹಿಡಿದುಕೊಂಡು ಮತ್ತೆ ಆಕಾಶಕ್ಕೆ ಜಿಗಿದೆ.

ಜಾನಕಿಯನ್ನು ತೊಡೆಯಲ್ಲಿಟ್ಟು ಖುಷಿಯಿಂದ ಮೇಲಕ್ಕೆ ಸಾಗುತ್ತಿರುವ ರಾವಣನನ್ನು ಕಂಡು ಮೇಲಕ್ಕೆ ಹಾರಿ ಅವನೆದುರು ಓಡಿ ಬಂದು ಅವನನ್ನು ತಡೆದು ಜಟಾಯು ಹೀಗೆ ಹೇಳಿದನು.

ವಜ್ರಸಂಸ್ಪರ್ಶಬಾಣಸ್ಯ ಭಾರ್ಯಾಂ ರಾಮಸ್ಯ ರಾವಣ ॥೨೪॥

ಅಲ್ಪಬುದ್ಧೇ ಹರಸ್ಯೇನಾಂ ವಧಾಯ ಖಲು ರಕ್ಷಸಾಮ್ ।
ಸಮಿತ್ರಬಂಧುಃ ಸಾಮಾತ್ಯಃ ಸಬಲಃ ಸಪರಿಚ್ಛದಃ ॥೨೫॥

ವಿಷಪಾನಂ ಪಿಬಸ್ಯೇತತ್ ಪಿಪಾಸಿತ ಇವೋದಕಮ್ ।
ಅನುಬಂಧಮಜಾನಂತಃ ಕರ್ಮಣಾಮವಿಚಕ್ಷಣಾಃ ॥೨೬॥

ಶೀಘ್ರಮೇವ ವಿನಶ್ಯಂತಿ ಯಥಾ ತ್ವಂ ವಿನಶಿಷ್ಯಸಿ ।
ಬದ್ಧಸ್ತ್ವಂ ಕಾಲಪಾಶೇನ ಕ್ವ ಗತಸ್ತಸ್ಯ ಮೋಕ್ಷ್ಯಸೇ ॥೨೭॥

ವಧಾಯ ಬಡಿಶಂ ಗೃಹ್ಯ ಸಾಮಿಷಂ ಜಲಜೋ ಯಥಾ ।
ನ ಹಿ ಜಾತು ದುರಾಧರ್ಷೌ ಕಾಕುತ್ಸ್ಥೌ ತವ ರಾವಣ ॥೨೮॥

ಧರ್ಷಣಂ ಚಾಶ್ರಮಸ್ಯಾಸ್ಯ ಕ್ಷಮಿಷ್ಯೇತೇ ತು ರಾಘವೌ ।
ಯಥಾ ತ್ವಯಾ ಕೃತಂ ಕರ್ಮ ಭೀರುಣಾ ಲೋಕಗರ್ಹಿತಮ್ ॥೨೯॥

ತಸ್ಕರಾಚರಿತೋ ಮಾರ್ಗೋ ನೈಷ ವೀರನಿಷೇವಿತಃ ।
ಯುದ್ಧಸ್ವ ಯದಿ ಶೂರೋಽಸಿ ಮುಹೂರ್ತಂ ತಿಷ್ಠ ರಾವಣ ॥೩೦॥

ಶಯಿಷ್ಯಸೇ ಹತೋ ಭೂಮೌ ಯಥಾ ಭ್ರಾತಾ ಖರಸ್ತಥಾ ।

ವಜ್ರಾಯುಧದಂಥ ಸ್ಪರ್ಶದ ಬಾಣವನ್ನು ಹೊಂದಿರುವ ರಾಮನ ಹೆಂಡತಿ-ಯನ್ನು, ಅಲ್ಪಬುದ್ಧಿಯೆ ! ನಿನ್ನ ನಾಶಕ್ಕೋಸ್ಕರ ಒಯ್ಯುತ್ತಿರುವೆ !

ರಾವಣನೆ ! ಬಾಯಾರಿದವನು ನೀರು ಕುಡಿಯುವಂತೆ ಮಿತ್ರ – ಬಂಧು – ಅಮಾತ್ಯ – ಸೇನೆ – ಪರಿವಾರದೊಂದಿಗೆ ಸೀತಾಪಹಾರವೆಂಬ ವಿಷಪಾನ ಮಾಡುತ್ತಿರುವೆ !

ತಾವು ಮಾಡುವ ಕರ್ಮದ ಪರಿಣಾಮವನ್ನು ಅರಿಯದ ಅಜ್ಞಾನಿಗಳು ಶೀಘ್ರವಾಗಿ ನಾಶವಾಗುವರು ನೀನು ನಾಶವಾಗುವಂತೆ !

ಕಾಲಪಾಶದ ಬಂಧನಕ್ಕೆ ಸಿಲುಕಿದ ನೀನು ಎಲ್ಲಿ ಹೋದರೆ ಬಿಡುಗಡೆಗೊಳ್ಳುವಿ ? ನೀರಿನಲ್ಲಿರುವ ಮೀನು ಮಾಂಸದ ಗಾಳವನ್ನು ನುಂಗಿದರೆ ಬದುಕುವ ಅವಕಾಶವಿದೆಯೇ ?

ರಾವಣ ! ನಿನಗೆಂದಿಗೂ ರಾಮ ಲಕ್ಷ್ಮಣರು ಸುಲಭವಾಗಿ ಆಕ್ರಮಣಕ್ಕೆ ಸಿಗಲಾರರು. ಅವರ ಆಶ್ರಮದಲ್ಲಿ ನೀನು ಮಾಡಿರುವ ಆಕ್ರಮಣವನ್ನು ಆ ರಾಘವರು ಕ್ಷಮಿಸಿಯಾರೇನು ?

ಅಂಜುಬುರುಕನಾದ ನೀನು ರಾಮಲಕ್ಷ್ಮಣರಿಲ್ಲದಿರುವಾಗ ಸೀತಾಪಹಾರ-ವನ್ನೇನು ಮಾಡಿರುವಿ ಇದು ಕಳ್ಳರು ತುಳಿವ ಹಾದಿ. ವೀರಪುರುಷನು ಸೇವಿಸುವ ಮಾರ್ಗವಲ್ಲ.

ರಾವಣ ! ನೀನು ಶೂರನೇ ಆಗಿದ್ದರೆ ಮುಹೂರ್ತಕಾಲ ನಿಲ್ಲು ಯುದ್ಧಮಾಡು. ಬಳಿಕ ನಿನ್ನ ತಮ್ಮ ಖರನಂತೆ ನೀನೂ ಹತನಾಗಿ ನೆಲದಲ್ಲಿ ಮಲಗುವೆ !

ಪರೇತಕಾಲೇ ಪುರುಷೋ ಯತ್ ಕರ್ಮ ಪ್ರತಿಪದ್ಯತೇ ॥೩೧॥

ವಿನಾಶಾಯಾತ್ಮನೋಽಧರ್ಮ್ಯಂ ಪ್ರತಿಪನ್ನೋಽಸಿ ಕರ್ಮ ತತ್ ।
ಪಾಪಾನುಬಂಧೋ ವೈ ಯಸ್ಯ ಕರ್ಮಣಃ ಕರ್ಮ ಕೋ ನು ತತ್ ॥

ಕುರ್ವೀತ ಲೋಕಾಧಿಪತಿಃ ಸ್ವಯಂಭೂರ್ಭಗವಾನಪಿ ।
ಏವಮುಕ್ತ್ವಾ ಶುಭಂ ವಾಕ್ಯಂ ಜಟಾಯುಸ್ತಸ್ಯ ರಕ್ಷಸಃ ॥೩೩॥

ನಿಪಪಾತ ಭೃಶಂ ಪೃಷ್ಠೇ ದಶಗ್ರೀವಸ್ಯ ವೀರ್ಯವಾನ್ ।
ತಂ ಗೃಹೀತ್ವಾ ನಖೈಸ್ತೀಕ್ಷ್ಣೈರ್ವಿದದಾರ ಸಮಂತತಃ ॥೩೪॥

ಅಧಿರೂಢೋ ಗಜಾರೋಹೋ ಯಥಾ ಸ್ಯಾದ್ದುಷ್ಟವಾರಣಮ್ ।
ವಿದದಾರ ನಖೈರಸ್ಯ ತುಂಡಂ ಪೃಷ್ಟೇ ಸಮರ್ಪಯನ್ ॥೩೫॥

ಕೇಶಾಂಶ್ಚೋತ್ಪಾಟಯಾಮಾಸ ನಖಿಪಕ್ಷಮುಖಾಯುಧಃ ।
ಸ ತಥಾ ಗೃಧ್ರರಾಜೇನ ಕ್ಲಿಶ್ಯಮಾನೋ ಮುಹುರ್ಮುಹುಃ ॥೩೬॥

ಅಮರ್ಷಸ್ಫುರಿತೋಷ್ಠಃ ಸನ್ ಪ್ರಾಕಂಪತ ಸ ರಾವಣಃ ।

ವಿನಾಶಕಾಲ ಬಂದಾಗ ಮನುಷ್ಯ ಯಾವ ಅಧರ್ಮಕಾರ್ಯವನ್ನು ಮಾಡು-ತ್ತಾನೋ ಹಾಗೆ ನೀನು ನಿನ್ನ ನಾಶಕ್ಕೋಸ್ಕರವೇ ಇಂತಹ ಅಧರ್ಮ-ಭೂಯಿಷ್ಠ-ವಾದ ಕಾರ್ಯವನ್ನು ಮಾಡುತ್ತಿರುವೆ.

ಯಾವ ಕರ್ಮಕ್ಕೆ ಪಾಪವೇ ಫಲವೋ ಅಂತಹ ಕಾರ್ಯವನ್ನು ಲೋಕಾಧಿ ಪತಿಯಾದ ಬ್ರಹ್ಮನೂ ಮಾಡಲಾರ. ಹೀಗೆ ಶುಭಕರವಾದ ಮಾತನ್ನು ಹೇಳಿ ವೀರ್ಯವಂತ ಜಟಾಯುವು ಆ ರಕ್ಕಸ ರಾವಣನ ಬೆನ್ನ ಮೇಲೆ ಎರಗಿದ.

ದುಷ್ಟ ಆನೆಯ ಮೇಲೆ ಕುಳಿತು ಮಾವುತನು ಅಂಕುಶದಿಂದ ತಿವಿಯುವಂತೆ ಜಟಾಯು ರಾವಣನ ಬೆನ್ನಲೆಲ್ಲ ತನ್ನ ಕೂರುಗುರುಗಳಿಂದ ಚೆನ್ನಾಗಿ ಪರಚಿದ. ಉಗುರು ರೆಕ್ಕೆ ಕೊಕ್ಕುಗಳೇ ಜಟಾಯುವಿನ ಆಯುಧಗಳು. ಉಗುರಿನಿಂದ ಬೆನ್ನನ್ನೆಲ್ಲ ಪರಚಿ ಕೊಕ್ಕಿನಿಂದ ಅವನ ಕೂದಲನ್ನೆಲ್ಲ ಕಿತ್ತಲು ಹತ್ತಿದ.

ಆ ರಾವಣ ಜಟಾಯುವಿನಿಂದ ಹೀಗೆ ಪರಿ ಪರಿಯಾಗಿ ಮೇಲಿಂದ ಮೇಲೆ ಕ್ಲೇಶಪಡುತ್ತ ನಡುಗಿದ. ಅಸಹನೆಯಿಂದ ತುಟಿಗಳು ಅದುರಿದವು.

ಸ ಪರಿಷ್ವಜ್ಯ ವೈದೇಹೀಂ ವಾಮೇನಾಂಕೇನ ರಾವಣಃ ॥೩೭॥

ತಲೇನಾಭಿಜಘಾನಾಶು ಜಟಾಯುಂ ಕ್ರೋಧಮೂರ್ಚ್ಛಿತಃ ।
ಜಟಾಯುಸ್ತಮಭಿಕ್ರಮ್ಯ ತುಂಡೇನಾಸ್ಯ ಖಗಾಧಿಪಃ ॥೩೮॥

ವಾಮಬಾಹೂನ್ ದಶ ತದಾ ವ್ಯಪಾಹರದರಿಂದಮಃ ।
ಸಂಛಿನ್ನಬಾಹೋ ಸದ್ಯೈವ ಬಾಹವಃ ಸಹಸಾಭವನ್ ॥೩೯॥

ವಿಷಜ್ವಾಲಾವಲೀಯುಕ್ತಾ ವಲ್ಮೀಕಾದಿವ ಪನ್ನಗಾಃ ।
ತತಃ ಕ್ರೋಧಾದ್ದಶಗ್ರೀವಃ ಸೀತಾಮುತ್ಸೃಜ್ಯ ರಾವಣಃ ॥೪೦॥

ಮುಷ್ಟಿಭ್ಯಾಂ ಚರಣಾಭ್ಯಾಂ ಚ ಗೃಧ್ರರಾಜಮಪೋಥಯತ್ ।
ತತೋ ಮುಹೂರ್ತಂ ಸಂಗ್ರಾಮೋ ಬಭೂವಾತುಲವೀರ್ಯಯೋಃ ॥

ರಾವಣನು ಎಡ ತೊಡೆಯಲ್ಲಿ ವೈದೇಹಿಯನ್ನು ಇಟ್ಟುಕೊಂಡು ಕ್ರೋಧ ಉಕ್ಕೇರಿ ಬಂದು ಜಟಾಯುವನ್ನು ಅಂಗೈಯಿಂದ ಹೊಡೆದ.

ಶತ್ರುದಮನ ಮಾಡುವ ಪಕ್ಷಿರಾಜ ಜಟಾಯು ರಾವಣನನ್ನು ಆಕ್ರಮಿಸಿ ತನ್ನ ಕೊಕ್ಕಿನಿಂದ ಅವನ ಹತ್ತು ಎಡ ತೋಳುಗಳನ್ನು ಕಿತ್ತು ಹಾಕಿದ !

ಬಾಹುಗಳ ತುಂಡಾದ ಕೂಡಲೆ ಮತ್ತೆ ಹತ್ತು ತೋಳುಗಳು ಚಿಗುರಿ ಹೊಮ್ಮಿದವು. ವಿಷಜ್ವಾಲೆಗಳ ಸಮೂಹದಿಂದ ಹಾವುಗಳು ಹುತ್ತದಿಂದ ಹೊರ ಬರುವಂತೆ !

ತರುವಾಯ ಕ್ರೋಧದಿಂದ ದಶಮುಖನು ಸೀತೆಯನ್ನು ಬಿಟ್ಟು ಮುಷ್ಟಿಗಳಿಂದ ಪಾದಗಳಿಂದ ಜಟಾಯುವನ್ನು ಚೆನ್ನಾಗಿ ಥಳಿಸಿದನು.

ಬಳಿಕ ಮುಹೂರ್ತಕಾಲ ಅತುಲಪರಾಕ್ರಮಿಗಳಾದ ಆ ರಾಕ್ಷಸಶ್ರೇಷ್ಠ ಹಾಗೂ ಪಕ್ಷಿಶ್ರೇಷ್ಠರಿಗೆ ಪರಸ್ಪರ ಸಂಗ್ರಾಮವಾಯಿತು.

ರಾಕ್ಷಸಾನಾಂ ಚ ಮುಖ್ಯಸ್ಯ ಪಕ್ಷಿಣಾಂ ಪ್ರವರಸ್ಯ ಚ ।
ತಸ್ಯ ವ್ಯಾಯಚ್ಛಮಾನಸ್ಯ ರಾಮಸ್ಯಾರ್ಥೇ ಸ ರಾವಣಃ ॥೪೨॥

ಪಕ್ಷೌ ಪಾರ್ಶ್ವೌ ಚ ಪಾದೌ ಚ ಖಡ್ಗಮುದ್ಧೃತ್ಯ ಸೋಽಚ್ಛಿನತ್ ।
ಸ ಛಿನ್ನಪಕ್ಷಃ ಸಹಸಾ ರಕ್ಷಸಾ ರೌದ್ರಕರ್ಮಣಾ ॥೪೩॥

ನಿಪಪಾತ ಹತೋ ಗೃಧ್ರೋ ಧರಣ್ಯಾಮಲ್ಪಜೀವಿತಃ ।
ತಂ ದೃಷ್ಟ್ವಾ ಪತಿತಂ ಭೂಮೌ ಕ್ಷತಜಾರ್ದ್ರಂ ಜಟಾಯುಷಮ್॥೪೪॥

ಅಭ್ಯಧಾವತ ವೈದೇಹೀ ಸ್ವಬಂಧುಮಿವ ದುಃಖಿತಾ ॥

ತಂ ನೀಲಜೀಮೂತನಿಕಾಶಕಲ್ಪಂ
ಸಪಾಂಡರೋರಸ್ಕಮುದಾರವೀರ್ಯಮ್ ।
ದದರ್ಶ ಲಂಕಾಧಿಪತಿಃ ಪೃಥಿವ್ಯಾಂ
ಜಟಾಯುಷಂ ಶಾಂತಮಿವಾಗ್ನಿದಾವಮ್ ॥೪೫॥

ತತಸ್ತು ತಂ ಪತ್ರರಥಂ ಮಹೀತಲೇ
ನಿಪಾತಿತಂ ರಾವಣವೇಗಮರ್ದಿತಮ್ ।

ಪುನಃ ಪರಿಷ್ವಜ್ಯ ಶಶಿಪ್ರಭಾನನಾ
ರುರೋದ ಸೀತಾ ಜನಕಾತ್ಮಜಾ ತದಾ ॥೪೬॥

ರಾವಣನು ರಾಮನಿಗಾಗಿ ಹೋರಾಡುತ್ತಿರುವ ಜಟಾಯುವಿನ ಎರಡು ರೆಕ್ಕೆಗಳನ್ನು ಎರಡು ಪಾದಗಳನ್ನು ಎರಡು ಪಕ್ಕೆಗಳನ್ನು ಖಡ್ಗವೆತ್ತಿ ಕತ್ತರಿಸಿ ಹಾಕಿದನು.

ರೌದ್ರಕರ್ಮಮಾಡುವ ರಕ್ಕಸನಿಂದ ರೆಕ್ಕೆ ತುಂಡಾದ ಜಟಾಯು ಹಿಂಸೆಗೊಳಗಾಗಿ ಕೂಡಲೆ ನೆಲಕ್ಕರುಳಿದ. ಅವನ ಬದುಕು ಸ್ವಲ್ಪವೇ ಉಳಿದಿತ್ತು !

ನೆಲದಲ್ಲಿ ಬಿದ್ದ ರಕ್ತದಿಂದ ತೊಯ್ದು ಹೋಗಿರುವ ಜಟಾಯುವನ್ನು ನೋಡಿ ದುಃಖಿತಳಾಗಿ ತನ್ನ ಬಂಧುವನ್ನೆಂಬಂತೆ ಬಳಿಗೆ ಓಡಿ ಬಂದಳು.

ನೀಲಮೇಘಕಾಯನು, ಬೆಳ್ಳಗಿನ ಎದೆಯ ಭಾಗವುಳ್ಳ, ಉತ್ತಮ ಪರಾಕ್ರಮಿ-ಯಾದ ನೆಲದ ಮೇಲಿದ್ದ ಜಟಾಯುವನ್ನು ಶಾಂತವಾದ ಕಾಡ್ಗಿಚ್ಚಿನಂತಿರುವನನ್ನು ಗಮನಿಸಿದ.

ಅನಂತರ ಚಂದಿರನ ಚಂದ್ರಿಕೆಯಂತೆ ಬೆಳಗುವ ಮೋರೆಯ ಜನಕಪುತ್ರಿ ಸೀತೆಯು ರಾವಣನ ವೇಗದ ಮರ್ದನಕ್ಕೆ ಬಲಿಯಾದ, ನೆಲದಲ್ಲಿ ರಾವಣನು ಬೀಳಿಸಿರುವ, ಪಕ್ಷಿರಾಜನನ್ನು ಅಪ್ಪಿಕೊಂಡು ಅತ್ತಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೊಂದನೇ ಸರ್ಗ ಮುಗಿಯಿತು.

❖

ದ್ವಿಪಂಚಾಶಃ ಸರ್ಗಃ

ಕಥಾಸಾರಾಂಶ– ಬದುಕು ಅಲ್ಪವಾಗಿ ಕೆಳಗೆ ಬಿದ್ದಿರುವ ಜಟಾಯುವನ್ನು ರಾವಣ ಕಂಡ. ಸೀತೆ ಜರ್ಜರಿತ ಜಟಾಯುವನ್ನು ಅಪ್ಪಿಗೊಂಡು ಆರ್ತಳಾಗಿ ಕಣ್ಣೀರಿಟ್ಟಳು. ಕಣ್ಣು ಭುಜ ಅದರುವುದು ಮುಂತಾದ ದೈಹಿಕ ಲಕ್ಷಣಗಳು, ಪಕ್ಷಿಗಳ ವಿಚಿತ್ರ ಕೂಗುಗಳು, ಮನುಷ್ಯರಿಗೆ ಮುಂಬರುವ ಸುಖದುಃಖಗಳ ಸೂಚನೆಗಳನ್ನು ನೀಡುತ್ತವೆ. ನನಗೆ ಒದಗಿರುವ ಮಹಾದುಃಖವನ್ನು ನಿಶ್ಚಯವಾಗಿ ರಾಮನು ತಿಳಿದಿಲ್ಲ. ಖಂಡಿತವಾಗಿ ಇದನ್ನು ತಿಳಿಸಲು ಮೃಗಪಕ್ಷಿಗಳು ರಾಮನೆಡೆಗೆ ಧಾವಿಸುತ್ತವೆ.

ಪಾಪ ! ಈ ಜಟಾಯು ಪಾಪಿಯಿಂದ ನನ್ನನ್ನು ಕಾಪಾಡಲು ಹೋರಾಟ ಮಾಡಿ ನನ್ನ ಅಭಾಗ್ಯದ ನಿಮಿತ್ತವಾಗಿ ರಾವಣನಿಂದ ಹತನಾಗಿ ನೆಲದಲ್ಲಿ ಮಲಗಿದ್ದಾನೆ ! ರಾಮऽऽ ನನ್ನನ್ನು ಕಾಪಾಡು ಲಕ್ಷ್ಮಣऽऽ ಕಾಪಾಡು – ತುಂಬ ಸಂತ್ರಸ್ತಳಾದ ಸೀತೆ ಗಟ್ಟಿಯಾಗಿ ಆಕ್ರಂದನ ಮಾಡುತ್ತಿದ್ದಾಳೆ.

ಆಕ್ರಂದನ ಮಾಡುತ್ತಿರುವ ಸೀತೆಯೆಡೆಗೆ ಧಾವಿಸಿ ಬಂದ ಅಂತಕೋಪಮನಾದ ರಾವಣ ತನ್ನ ನಾಶಕ್ಕೋಸ್ಕರವೇ– ''ನನ್ನನ್ನು ಬಿಡು ಬಿಡು'' ಎಂದು ಹೇಳಿದರೂ ಬಿಡದೆ ದುಃಖಿತಳಾದ ಸೀತೆಯ ತಲೆಮುಡಿಗೆ ಕೈಹಾಕಿದ. ಚರಾಚರ ಪ್ರಪಂಚವೆಲ್ಲ ಈ ಸೀತಾವಮಾನ ಸಂಕಟಗಳನ್ನು ನೋಡಿ ಸ್ತಬ್ಧವಾಯಿತು. ಎಲ್ಲೆಡೆ ಕತ್ತಲೆ ತುಂಬಿತು. ಗಾಳಿಯೂ ಬೀಸಲಿಲ್ಲ ! ಸೂರ್ಯನೇ ನಿಸ್ತೇಜನಾದ !

ದಿವ್ಯದೃಷ್ಟಿಯಿಂದ ಬ್ರಹ್ಮದೇವರು ರಾವಣನ ಸೀತಾಪಹಾರದ ಉದ್ಯಮವನ್ನು ತಿಳಿದು 'ನಮ್ಮಕಾರ್ಯ ಸಿದ್ಧಿಸಿತು, ಇದರಿಂದಲೆ ರಾವಣನ ನಾಶ ಸನ್ನಿಹಿತವಾಯಿತು' ಎಂದು ಉದ್ಗರಿಸಿದರು.

ಅಲ್ಲಿದ್ದ ಪರಮರ್ಷಿಗಳಿಗೆಲ್ಲ ಈ ದುಷ್ಕೃತ್ಯದಿಂದ ರಾವಣನ ನಾಶ ಸಮೀಪಿಸಿತೆಂದು ಹರ್ಷವಾಯಿತು. ಆದರೆ ಸೀತೆಯ ಸಂಕಟ ನೋಡಿ ವ್ಯಥೆಯೂ ಆಯಿತು.

ಹಾ ರಾಮಾऽऽ ಹಾ ಲಕ್ಷ್ಮಣऽऽ ಎಂದು ಅಳುತ್ತ ಕೂಗುತ್ತಿದ್ದ ಸೀತೆಯನ್ನು ರಾವಣ ಹಿಡಿದುಕೊಂಡು ಮತ್ತೆ ಆಕಾಶಕ್ಕೆ ಹಾರಿದ ! ಆಗಸದಲ್ಲಿ ಸೀತೆಯನ್ನು ಹಿಡಿದು ರಾವಣ ಹೋಗುತ್ತಿರುವಾಗ ಸೀತೆಯ ರಾಮಾ ಲಕ್ಷ್ಮಣಾ ಎಂಬ ಆಕ್ರಂದನ ಹಾಗೂ ಅವಳ ಸಂಕಟ ಸಂತಾಪಗಳನ್ನು ನೋಡಿ ಕಾಡಿನ ಪ್ರಕೃತಿ ಅಂದರೆ ತಾವರೆಯ ಕೊಳಗಳು, ಗಿಡಗಂಡಿಗಳು ಮರಗಳು ಹೂಗಿಡಗಳೂ ಜೊತೆಯಲ್ಲಿ ಪಶುಪಕ್ಷಿ ಪ್ರಾಣಿ ಮೃಗಗಳು ಎಲ್ಲವೂ ಯಥೋಚಿತರೀತಿ ತಮ್ಮ ಸಂತಾಪಗಳ ಸಂವೇದನೆಯನ್ನು ಸೂಸುತ್ತಿದ್ದವು.

ಆಕಾಶದಲ್ಲಿ ಹೋಗುತ್ತಿರುವಾಗ ಗಾಳಿಗೆ ಹರವಿಕೊಂಡ ಸೀತೆಯುಟ್ಟ ಹಳದಿಬಣ್ಣದ ಸೀರೆ ನೋಡಲು ಬೆಂಕಿಯಂತೆಯೂ ರಾವಣನು ಅದರಿಂದ ಆವೃತವಾದ ಮಹಾಗಿರಿಯಂತೆಯೂ ಕಂಡು ಬರುತ್ತಿದ್ದ !

ಸೀತೆಯ ಪಾದದಿಂದ ಗೆಜ್ಜೆಗಳು ಜಾರಿ ಉದುರಿಬಿದ್ದವು. ಅವಳು ತೊಟ್ಟ ಬೆಂಕಿಯಂತೆ ಬೆಳಗುವ ಆಭರಣಗಳೂ ಸಹ ಆಕಾಶದಿಂದ ಬೀಳುವ ತಾರೆಗಳಂತೆ ಕಾಣುತ್ತಾ ಕೆಳಗೆ ಬೆಲ್ಲಿದವು. ಎದೆಯ ಮೇಲಿದ್ದ ಹಾರವೂ ಹಾರಿ ಜಾರಿ ಬಿತ್ತು.

ಹೆದರಬೇಡ ಸೀತೆ ನಿನ್ನ ಜೊತೆ ನಾವಿದ್ದೇವೆ ಎಂಬಂತೆ ಹಕ್ಕಿಗಳ ಚೀರುವ ಧ್ವನಿಗಳು ಕೇಳಿಸುತ್ತಿದ್ದವು.

ಧರ್ಮ ಇಲ್ಲ, ಸತ್ಯ ಇಲ್ಲ, ಆರ್ಜವ ಇಲ್ಲ. ಆನೃಂಶಸ್ಯವಿಲ್ಲ ಮಹಾತ್ಮರಾಮನ ಭಾರ್ಯೆ ಸೀತೆಯನ್ನು ದುರುಳ ರಾವಣ ಅಪಹರಿಸುತ್ತಿದ್ದಾನೆ ! ಹೀಗೆ ಎಲ್ಲ ಜೀವರಾಶಿಗಳು ಬೊಬ್ಬಿಟ್ಟವು !

❖

ಸೀತಾವಿಕ್ರೋಶಃ

ತಮಲ್ಪಜೀವಿತಂ ಗೃಧ್ರಂ ಸ್ಫುರಂತಂ ರಾಕ್ಷಸಾಧಿಪಃ ।
ದದರ್ಶ ಭೂಮೌ ಪತಿತಂ ಸಮೀಪೇ ರಾಘವಾಶ್ರಮಾತ್ ॥೧॥

ಸಾ ತು ತಾರಾಧಿಪಮುಖೀ ರಾವಣೇನ ಸಮೀಕ್ಷ್ಯ ತಮ್ ।
ಗೃಧ್ರರಾಜಂ ವಿನಿಹತಂ ವಿಲಲಾಪ ಸುದುಃಖಿತಾ ॥೨॥

ಆಲಿಂಗ್ಯ ಗೃಧ್ರಂ ನಿಹತಂ ರಾವಣೇನ ಬಲೀಯಸಾ ।
ವಿಲಲಾಪ ಸುದುಃಖಾರ್ತಾ ಸೀತಾ ಶಶಿನಿಭಾನನಾ ॥೩॥

ನಿಮಿತ್ತಂ ಲಕ್ಷಣಂ ಸ್ವಪ್ನಂ ಶಕುನಿಸ್ವರದರ್ಶನಮ್ ।
ಅವಶ್ಯಂ ಸುಖದುಃಖೇಷು ನರಾಣಾಂ ಪ್ರತಿದೃಶ್ಯತೇ ॥೪॥

ನೂನಂ ರಾಮ ನ ಜಾನಾಸಿ ಮಹದ್ವ್ಯಸನಮಾತ್ಮನಃ ।
ಧಾವಂತಿ ನೂನಂ ಕಾಕುತ್ಸ್ಥ ಮದರ್ಥಂ ಮೃಗಪಕ್ಷಿಣಃ ॥೫॥

ಅಯಂ ಹಿ ಕೃಪಯಾ ರಾಮ ಮಾಂ ತ್ರಾತುಮಭಿಸಂಗತಃ ।
ಶೇತೇ ವಿನಿಹತೋ ಭೂಮೌ ಮಮಾಭಾಗ್ಯಾದ್ವಿಹಂಗಮಃ ॥೬॥

ತ್ರಾಹಿ ಮಾಮದ್ಯ ಕಾಕುತ್ಸ್ಥ ಲಕ್ಷ್ಮಣೇತಿ ವರಾಂಗನಾ ।
ಸುಸಂತ್ರಸ್ತಾ ಸಮಾಕ್ರಂದ್ಭೃಣ್ವತಾಂ ತು ಯಥಾಂತಿಕೇ ॥೭॥

ತಾಂ ಕ್ಲಿಷ್ಟಮಾಲ್ಯಾಭರಣಾಂ ವಿಲಪಂತೀಮನಾಥವತ್ ।
ಅಭ್ಯಧಾವತ ವೈದೇಹೀಂ ರಾವಣೋ ರಾಕ್ಷಸಾಧಿಪಃ ॥೮॥

ತಾಂ ಲತಾಮಿವ ವೇಷ್ಟಂತೀಮಾಲಿಂಗಂತೀ ಮಹಾದ್ರುಮಾನ್ ।
ಮುಂಚ ಮುಂಚೇತಿ ಬಹುಶಃ ಪ್ರವದನ್ ರಾಕ್ಷಸಾಧಿಪಃ ॥೯॥

ಕ್ರೋಶಂತೀಂ ರಾಮ ರಾಮೇತಿ ರಾಮೇಣ ರಹಿತಾಂ ವನೇ ।
ಜೀವಿತಾಂತಾಯ ಕೇಶೇಷು ಜಗ್ರಾಹಾಂತಕಸಂನಿಭಃ ॥೧೦॥

ಪ್ರಧರ್ಷಿತಾಯಾಂ ಸೀತಾಯಾಂ ಬಭೂವ ಸಚರಾಚರಮ್ ।
ಜಗತ್ ಸರ್ವಮಮರ್ಯಾದಂ ತಮಸಾಂಧೇನ ಸಂವೃತಮ್ ॥೧೧॥

ನ ವಾತಿ ಮಾರುತಸ್ತತ್ರ ನಿಷ್ಪ್ರಭೋಽಭೂದ್ದಿವಾಕರಃ ।
ದೃಷ್ಟ್ವಾ ಸೀತಾಂ ಪರಾಮೃಷ್ಟಾಂ ದೀನಾಂ ದಿವ್ಯೇನ ಚಕ್ಷುಷಾ ॥೧೨॥

ಕೃತಂ ಕಾರ್ಯಮಿತಿ ಶ್ರೀಮಾನ್ ವ್ಯಾಜಹಾರ ಪಿತಾಮಹಃ ।
ಪ್ರಹೃಷ್ಟಾ ವ್ಯಥಿತಾಶ್ಚಾಸನ್ ಸರ್ವೇ ತೇ ಪರಮರ್ಷಯಃ ॥೧೩॥

ದೃಷ್ಟ್ವಾ ಸೀತಾಂ ಪರಾಮೃಷ್ಟಾಂ ದಂಡಕಾರಣ್ಯವಾಸಿನಃ ।
ರಾವಣಸ್ಯ ವಿನಾಶಂ ಚ ಪ್ರಾಪ್ತಂ ಬುದ್ಧ್ವಾ ಯದೃಚ್ಛಯಾ ॥೧೪॥

ರಾಕ್ಷಸಾಧಿಪನು ರಾಘವನ ಆಶ್ರಮದ ಬಳಿ ಬಿದ್ದಿರುವ ಅಲ್ಪ ಬದುಕಿನ ಜಟಾಯುವನ್ನು ಕಂಡನು.

ಚಂದ್ರಮುಖಿ ಸೀತೆಯು ರಾವಣನಿಂದ ಹತನಾದ ಗೃಧ್ರರಾಜನನ್ನು ಅನುಕಂಪದಿಂದ ನೋಡಿ ತುಂಬ ದುಃಖಿತಳಾಗಿ ವಿಲಾಪ ಮಾಡಿದಳು.

ಬಲಿಷ್ಠ ರಾವಣನಿಂದ ಹತನಾದ ಜಟಾಯುವನ್ನು ಆಲಿಂಗಿಸಿಕೊಂಡು ಚಂದ್ರವದನೆಯಾದ ಸೀತೆ ತುಂಬು ದುಃಖದಿಂದ ಆರ್ತಳಾಗಿ ಬಡಬಡಿಸಿದಳು –

ಮನುಷ್ಯರಿಗೆ ಎಡಬಲಕಣ್ಣುಗಳು, ಎಡಬಲಭುಜ, ಎಡಬಲ ತೊಡೆಗಳು ಅದರುವುದು ಎಂಬ ಲಕ್ಷಣಗಳು, ಹಕ್ಕಿಗಳ ದನಿಗಳು ಮುಂಬರುವ ಸುಖದುಃಖ-ಗಳನ್ನು ಸ್ವಪ್ನಗಳು ಸೂಚಿಸುತ್ತವೆ.

ನಿಶ್ಚಯವಾಗಿಯು ನನ್ನ ದುಃಖವನ್ನು ರಾಮ ತಿಳಿದಿಲ್ಲ. ಈ ಮೃಗ ಪಕ್ಷಿಗಳು ಖಂಡಿತವಾಗಿ ರಾಮನಿಗೆ ತಿಳಿಸಲು ಧಾವಿಸುತ್ತಿವೆ.

ಈ ಜಟಾಯು ಹಕ್ಕಿ ಪಾಪಾಚಾರಿಯಾದ ರಾವಣನಿಂದ ನನ್ನನ್ನು ಕಾಪಾಡಲು ಯುದ್ಧ ಮಾಡಿ ನನ್ನ ದುರದೃಷ್ಟವಶಾತ್ ದಣಿದು ರಾವಣನಿಂದ ಹತವಾಗಿ ನೆಲದಲ್ಲಿ ಮಲಗಿದೆ ಪಾಪ !

ಹೇ ! ಕಾಕುತ್ಸ್ಥರಾಮ ! ಹಾ ಲಕ್ಷ್ಮಣ ಇಂದು ನನ್ನನ್ನು ಕಾಪಾಡು - ಎಂದು ಬಳಿಯಲ್ಲಿರುವವರ ಮುಂದೆ ಹೇಗೆ ಹಾಗೆ ಗಟ್ಟಿಯಾಗಿ ಅಲವತ್ತುಕೊಂಡಿತು.

ಮಾಲೆ ಆಭರಣಗಳು ಚದುರಿ ಹೋಗಿರುವ ಅನಾಥಳಂತೆ ಅರಚಿಕೊಳ್ಳುತ್ತಿರುವ ವೈದೇಹಿಯ ಬಳಿಗೆ ರಾವಣ ಓಡಿ ಬಂದ.

ಸೀತೆ ಬಳ್ಳಿಯಂತೆ ಹೆಮ್ಮರಗಳನ್ನು ಆಲಂಗಿಸಿಕೊಂಡು ನನ್ನನ್ನು ರಾವಣನಿಂದ ಬಿಡಿಸು ಬಿಡಿಸು ಎಂದು ಬಹಳವಾಗಿ ಅಂಗಲಾಚುತ್ತಿರುವಾಗಲೆ ರಾವಣ ಬಳಿ ಬಂದ.

ರಾಮನಿಂದ ರಹಿತಳಾದ, 'ರಾಮ ರಾಮSS' ಎಂದು ಕೂಗುತ್ತಿರುವ ಸೀತೆ-ಯನ್ನು ರಾವಣ, ತನ್ನ ನಾಶಕ್ಕೋಸ್ಕರವೇ ಅವಳ ತಲೆಗೂದಲಿಗೆ ಕೈ ಹಾಕಿದ.

ಹೀಗೆ ರಾವಣನ ಆಕ್ರಮಣಕ್ಕೆ ಸೀತೆ ಬಲಿಯಾದಾಗ ಚರಾಚರ ಪ್ರಪಂಚವೆಲ್ಲ ಕುರುಡು ಕತ್ತಲೆಯಿಂದ ಮಿತಿ ಮೀರಿ ಸ್ತಬ್ಧವಾಯಿತು. ಗಾಳಿ ಬೀಸುವುದನ್ನೆ ನಿಲ್ಲಿಸಿತು. ದಿವಾಕರನೂ ನಿಸ್ತೇಜನಾದ.

ಶ್ರೀಮಾನ್ ಪಿತಾಮಹ = ಚತುರ್ಮುಖಬ್ರಹ್ಮ ದಿವ್ಯದೃಷ್ಟಿಯಿಂದ ಸೀತೆ ರಾವಣನ ಆಕ್ರಮಣಕ್ಕೆ ಬಲಿಯಾದುದನ್ನು ಕಂಡು 'ದೇವತೆಗಳ ಕಾರ್ಯ ಸಿದ್ಧಿಸಿತು' ಎಂದು ಭಾವಿಸಿದರು.

ದಂಡಕಾರಣ್ಯನಿವಾಸಿ ಪರಮರ್ಷಿಗಳು ಸೀತೆಯು ರಾವಣನ ಆಕ್ರಮಣಕ್ಕೆ ಒಳಗಾದುದನ್ನು ತಿಳಿದು ವ್ಯಥೆಗೊಂಡರು. ಇಂಥ ದುಷ್ಪ್ರಚೋದನೆ ದೈವೇಚ್ಛೆ-ಯಿಂದ ನಡೆದು ರಾವಣನ ನಾಶ ಸನ್ನಿಹಿತವಾಯಿತೆಂದು ಸಂತಸವನ್ನೂ ಪಟ್ಟರು.

ಸ ತು ತಾಂ ರಾಮ ರಾಮೇತಿ ರುದಂತೀಂ ಲಕ್ಷ್ಮಣೇತಿ ಚ ।
ಜಗಾಮಾದಾಯ ಚಾಕಾಶಂ ರಾವಣೋ ರಾಕ್ಷಸೇಶ್ವರಃ ॥೧೫॥

ತಪ್ತಾಭರಣವರ್ಣಾಂಗೀ ಪೀತಕೌಶೇಯವಾಸಿನೀ ।
ರರಾಜ ರಾಜಪುತ್ರೀ ತು ವಿದ್ಯುತ್ಸೌದಾಮಿನೀ ಯಥಾ ॥೧೬॥

ಉದ್ಧೂತೇನ ಚ ವಸ್ತ್ರೇಣ ತಸ್ಯಾಃ ಪೀತೇನ ರಾವಣಃ ।
ಅಧಿಕಂ ಪ್ರತಿಬಭ್ರಾಜ ಗಿರಿರ್ದೀಪ್ತ ಇವಾಗ್ನಿನಾ ॥೧೭॥

ತಸ್ಯಾಃ ಪರಮಕಲ್ಯಾಣ್ಯಾಸ್ತಾಮ್ರಾಣಿ ಸುರಭೀಣಿ ಚ ।
ಪದ್ಮಪತ್ರಾಣಿ ವೈದೇಹ್ಯಾ ಅಭ್ಯಕೀರ್ಯಂತ ರಾವಣಮ್ ॥೧೮॥

ತಸ್ಯಾಃ ಕೌಶೇಯಮುದ್ಧೂತಮಾಕಾಶೇ ಕನಕಪ್ರಭಮ್ ।
ಬಭೌ ಚಾದಿತ್ಯರಾಗೇಣ ತಾಮ್ರಮಭ್ರಮಿವಾತಪೇ ॥೧೯॥

ತಸ್ಯಾಸ್ತದ್ವಿಮಲಂ ವಕ್ತ್ರಮಾಕಾಶೇ ರಾವಣಾಂಕಗಮ್ ।
ನ ರರಾಜ ವಿನಾ ರಾಮಂ ವಿನಾಲಮಿವ ಪಂಕಜಮ್ ॥೨೦॥

ಬಭೂವ ಜಲದಂ ನೀಲಂ ಭಿತ್ತ್ವಾ ಚಂದ್ರ ಇವೋದಿತಃ ।
ಸುಲಲಾಟಂ ಸುಕೇಶಾಂತಂ ಪದ್ಮಗರ್ಭಾಭಮವ್ರಣಮ್ ॥೨೧॥

ಶುಕ್ಲೈಃ ಸುವಿಮಲೈರ್ದಂತೈಃ ಪ್ರಭಾವದ್ಭಿರಲಂಕೃತಮ್ ।
ತಸ್ಯಾಃ ಸುನಯನಂ ವಕ್ತ್ರಮಾಕಾಶೇ ರಾವಣಾಂಕಗಮ್ ॥೨೨॥

ರುದಿತಂ ವ್ಯಪಮೃಷ್ಟಾಸ್ರಂ ಚಂದ್ರವತ್ ಪ್ರಿಯದರ್ಶನಮ್ ।
ಸುನಾಸಂ ಚಾರು ತಾಮ್ರೋಷ್ಠಮಾಕಾಶೇ ಹಾಟಕಪ್ರಭಮ್ ॥೨೩॥

ರಾಕ್ಷಸೇಂದ್ರ ಸಮಾಧೂತಂ ತಸ್ಯಾಸ್ತದ್ವದನಂ ಶುಭಮ್ ।
ಶುಶುಭೇ ನ ವಿನಾ ರಾಮಂ ದಿವಾ ಚಂದ್ರ ಇವೋದಿತಃ ॥೨೪॥

ಸಾ ಹೇಮವರ್ಣಾ ನೀಲಾಂಗಂ ಮೈಥಿಲೀ ರಾಕ್ಷಸಾಧಿಪಮ್ ।
ಶುಶುಭೇ ಕಾಂಚನೀ ಕಾಂಚೀ ನೀಲಂ ಗಜಮಿವಾಶ್ರಿತಾ ॥೨೫॥

ಸಾ ಪದ್ಮಗೌರೀ ಹೇಮಾಭಾಂ ರಾವಣಂ ಜನಕಾತ್ಮಜಾ ।
ವಿದ್ಯುದ್ಘನಮಿವಾವಿಶ್ಯ ಶುಶುಭೇ ತಪ್ತಭೂಷಣಾ ॥೨೬॥

ತಸ್ಯಾ ಭೂಷಣಘೋಷೇಣ ವೈದೇಹ್ಯಾ ರಾಕ್ಷಸಾಧಿಪಃ ।
ಬಭೌ ಸಚಪಲೋ ನೀಲಃ ಸಘೋಷ ಇವ ತೋಯದಃ ॥೨೭॥

ಉತ್ತಮಾಂಗಾಚ್ಚ್ಯುತಾ ತಸ್ಯಾಃ ಪುಷ್ಪವೃಷ್ಟಿಃ ಸಮಂತತಃ ।
ಸೀತಾಯಾ ಹ್ರಿಯಮಾಣಾಯಾಃ ಪಪಾತ ಧರಣೀತಲೇ ॥೨೮॥

ರಾಕ್ಷಸೇಶ್ವರ ರಾವಣ 'ರಾಮSS ಲಕ್ಷ್ಮಣSS' ಎಂದು ಕೂಗಿ ಅಳುತ್ತಿರುವ ಸೀತೆಯನ್ನು ಎತ್ತಿಕೊಂಡು ಆಕಾಶಕ್ಕೆ ಹೋದನು.

ಪುಟಕ್ಕಿಟ್ಟ ಚಿನ್ನದಂತೆ ಕಾಂತಿಯುಕ್ತಳಾದ, ಹಳದಿ ರೇಷ್ಮೆಯ ವಸ್ತ್ರವನ್ನು ತೊಟ್ಟಿದ್ದ ಸೀತೆಯು ಸಂಪದ್ಭರಿತವಾದ ಸುದಾಮ ಪರ್ವತದಲ್ಲಿ ಹುಟ್ಟಿದ ಮಿಂಚಿನಂತೆ ಕಂಡಳು.

ಹಾರುತ್ತಿದ್ದ ಸೀತೆಯ ಹಳದಿ ಬಣ್ಣದ ಬಟ್ಟೆಯಿಂದ ರಾವಣನು ಕಾಡ್ಗಿಚ್ಚಿನಿಂದ ಆವೃತವಾದ ಪರ್ವತದಂತೆ ಕಾಣುತ್ತಿದ್ದ.

ಪರಮಕಲ್ಯಾಣಿಯಾದ ಆ ಸೀತೆಯ ಕೆಂದಾವರೆಯ ಕೆಂಪಾದ ಸುಗಂಧಿಯಾದ ಎಸಳುಗಳು ರಾವಣನ ಮೇಲೆ ಉದುರುತ್ತಿದ್ದವು.

ಗಾಳಿಯಿಂದ ಹಾರಾಡುತ್ತಿದ್ದ, ಚಿನ್ನದಂಥ ಹೊಂಬಣ್ಣದ, ಸೀತೆಯ ರೇಷ್ಮೆಯ ವಸ್ತ್ರವು ಸೂರ್ಯನ ಕಿರಣದಿಂದ ಮಿಶ್ರವಾದ ಕೆಂಪಾಗಿರುವ ಮೋಡದಂತೆ ಕಾಣುತ್ತಿತ್ತು.

ರಾವಣನ ತೊಡೆಯಲ್ಲಿದ್ದ ಮಾಟಾದ ಮೂಗಿನಿಂದ ಕೂಡಿದ ಸೀತೆಯ ಮುಖವು ನಾಳವಿಲ್ಲದ ತಾವರೆಯಂತೆ ರಾಮನಿಲ್ಲದೆ ಶೋಭಾಹೀನವಾಗಿತ್ತು.

ಸುಂದರ ಹಣೆಯ, ಸುಂದರ ಮುಂಗುರುಳ ತುದಿಯ, ತಾವರೆಯ ಗರ್ಭದ ಸೊಬಗುತುಂಬಿದ, ಯಾವುದೆ ವ್ರಣ (ಗಾಯ) ವಿರದ, ಶುಭ್ರ ಹಾಗು ಧವಳ ವರ್ಣದ, ಹೊಳಪಿನ ದಂತಗಳಿಂದ ಕೂಡಿದ, ರಾವಣನ ತೊಡೆಯ ಮೇಲಿದ್ದ, ಆ ಸೀತೆಯ ನಿರ್ಮಲ ಮುಖವು ನೀಲಮೇಘವನ್ನು ಭೇದಿಸಿಕೊಂಡು ಹೊಮ್ಮಿದ ಚಂದ್ರನಂತಿತ್ತು.

ಅಳುವಿನಿಂದ ಸುರಿವ ಕಂಬನಿಯಿಂದ ಕೂಡಿದ, ಚಂದ್ರನಂತೆ ನೋಡಲು ಪ್ರಿಯವಾದ, ಸುಂದರನಾಸಿಕಾ ಕೆಂದುಟಿಗಳಿಂದ ಕೂಡಿದ, ಸುವರ್ಣಪ್ರಭೆಯು ತುಂಬಿದ ಸೀತೆಯ ಆ ಸುಂದರ ವದನವು ರಾವಣನ ಆಕ್ರಮಣಕ್ಕೆ ಬಲಿಯಾದು-ದರಿಂದ ಮತ್ತು ಬಳಿಯಲ್ಲಿರಾಮನಿರದಿದ್ದುರಿಂದಲೂ ಶೋಭಿಸುತ್ತಿರಲಿಲ್ಲ - ಹಗಲಿನಲ್ಲಿ ಹುಟ್ಟಿದ ಚಂದ್ರನಂತೆ !

ನೀಲಾಂಗನಾದ ರಾಕ್ಷಸಾಧಿಪನನ್ನು ಆಶ್ರಯಿಸಿದ ಹೇಮವರ್ಣದ ಆ ಸೀತೆಯು ನೀಲಮಣಿಯಿಂದ ಕೂಡಿದ ಬಂಗಾರದ ಒಡ್ಯಾಣದಂತೆ ಕಾಣುತ್ತಿದ್ದಳು.

ತಾವರೆಯ ನಡುಪರಾಗದ ಸೊಬಗಿನ, ಬಂಗಾರದ ಕಾಂತಿಯವಳಾದ, ಸುವರ್ಣಾಭರಣಾಲಂಕೃತಳಾದ ಆ ಸೀತೆಯು ರಾವಣನ ಬಳಿಯಲ್ಲಿದ್ದದ್ದು - ಕಾರ್ಮುಗಿಲಿನ ನಡು ನಡುವೆ ಕ್ಷಣ ಕ್ಷಣಕ್ಕೆ ಮಿನುಗುವ ಮಿಂಚಿನ ರಾಶಿಯಂತೆ ಕಾಣುತ್ತಿದ್ದಳು.

ಮರದ ಚಿಗುರಿನಂತೆ ಕೆಂಪಾದ ನೀಲಾಂಗ ರಾವಣನನ್ನು ಬಂಗಾರದ ಹಗ್ಗದಿಂದ ಕಟ್ಟಿದ ಆನೆಯಂತೆ ಶೋಭಿಸುವಂತೆ ಮಾಡಿದ್ದಳು.

ಸೀತೆ ತೊಟ್ಟ ಆಭರಣಗಳ ಸದ್ದುಗಳಿಂದ ರಾವಣನು ಮಿಂಚಿನಿಂದ ಕೂಡಿ ಗುಡುಗುವ ನೀರು ಸುರಿವ ಮೋಡದಂತೆ ಶೋಭಿಸಿದ.

ಸಾ ತು ರಾವಣವೇಗೇನ ಪುಷ್ಪವೃಷ್ಟಿಃ ಸಮಂತತಃ ।
ಸಮಾಧೂತಾ ದಶಗ್ರೀವಂ ಪುನರೇವಾಭ್ಯವರ್ತತ ॥೨೯॥

ಅಭ್ಯವರ್ತತ ಪುಷ್ಪಾಣಾಂ ಧಾರಾ ವೈಶ್ರವಣಾನುಜಮ್ ।
ನಕ್ಷತ್ರಮಾಲಾ ವಿಮಲಾ ಮೇರುಂ ನಗಮಿವೋನ್ನತಮ್ ॥೩೦॥

ಚರಣಾನ್ನೂಪುರಂ ಭ್ರಷ್ಟಂ ವೈದೇಹ್ಯಾ ರತ್ನಭೂಷಿತಮ್ ।
ವಿದ್ಯುನ್ಮಂಡಲಸಂಕಾಶಂ ಪಪಾತ ಮಧುರಸ್ವನಮ್ ॥೩೧॥

ತರುಪ್ರವಾಲರಕ್ತಾ ಸಾ ನೀಲಾಂಗಂ ರಾಕ್ಷಸೇಶ್ವರಮ್ ।
ಪ್ರಾಶೋಭಯತ ವೈದೇಹೀ ಗಜಂ ಕಕ್ಷ್ಯೇವ ಕಾಂಚನೀ ॥೩೨॥

ತಾಂ ಮಹೋಲ್ಕಾಮಿವಾಕಾಶೇ ದೀಪ್ಯಮಾನಾಂ ಸ್ವತೇಜಸಾ ।
ಜಹಾರಾಕಾಶಮಾವಿಶ್ಯ ಸೀತಾಂ ವೈಶ್ರವಣಾನುಜಃ ॥೩೩॥

ತಸ್ಯಾಸ್ತಾನ್ಯಗ್ನಿವರ್ಣಾನಿ ಭೂಷಣಾನಿ ಮಹೀತಲೇ ।
ಸಫೋಷಾಣ್ಯವಶೀರ್ಯಂತ ಕ್ಷೀಣಾಸ್ತಾರಾ ಇವಾಂಬರಾತ್ ॥೩೪॥

ತಸ್ಯಾಃ ಸ್ತನಾಂತರಾದ್ಭ್ರಷ್ಟೋ ಹಾರಸ್ತಾರಾಧಿಪದ್ಯುತಿಃ ।
ವೈದೇಹ್ಯಾ ನಿಪತನ್ ಭಾತಿ ಗಂಗೇವ ಗಗನಾಚ್ಚ್ಯುತಾ ॥೩೫॥

ಉತ್ಪಾತವಾತಾಭಿಹತಾ ನಾನಾದ್ವಿಜಗಣಾಯುತಾಃ ।
ಮಾ ಭೈರಿತಿ ವಿಧೂತಾಗ್ರಾ ವ್ಯಾಜಹ್ರುರಿವ ಪಾದಪಾಃ ॥೩೬॥

ನಲಿನ್ಯೋ ಧ್ವಸ್ತಕಮಲಾಸ್ತ್ರಸ್ತಮೀನಜಲೇಚರಾಃ ।
ಸಖೀಮಿವ ಗತೋಚ್ಛ್ವಾಸಾಮನ್ವಶೋಚಂತ ಮೈಥಿಲೀಮ್ ॥೩೭॥

ಸಮಂತಾದಭಿಸಂಪತ್ಯ ಸಿಂಹವ್ಯಾಘ್ರಮೃಗದ್ವಿಜಾಃ ।
ಅನ್ವಧಾವಂಸ್ತದಾ ರೋಷಾತ್ ಸೀತಾಂ ಛಾಯಾನುಗಾಮಿನಃ ॥೩೮॥

ಜಲಪ್ರಪಾತಾಸ್ರಮುಖಾಃ ಶೃಂಗೈರುಚ್ಛ್ರಿತಬಾಹವಃ ।
ಸೀತಾಯಾಂ ಹ್ರಿಯಮಾಣಾಯಾಂ ವಿಕ್ರೋಶಂತೀವ ಪರ್ವತಾಃ॥೩೯॥

ಹ್ರಿಯಮಾಣಾಂ ತು ವೈದೇಹೀಂ ದೃಷ್ಟ್ವಾ ದೀನೋ ದಿವಾಕರಃ ।
ಪ್ರತಿಧ್ವಸ್ತಪ್ರಭಃ ಶ್ರೀಮಾನಾಸೀತ್ ಪಾಂಡರಮಂಡಲಃ ॥೪೦॥

ರಾವಣನಿಂದ ಅಪಹರಿಸಲ್ಪಡುತ್ತಿದ್ದ ಸೀತಾದೇವಿಯ ತಲೆಯ ತಿರುಬಿನಿಂದ ಉದುರಿದ ಹೂಮಳೆ ಧರಣಿಮಂಡಲದಲ್ಲಿ ಎಲ್ಲೆಡೆ ಬೆಲ್ಲಿದವು. ಆದರೆ ಆ ಪುಷ್ಪ ವೃಷ್ಟಿಯು ರಾವಣನ ವೇಗದಿಂದ ಉಂಟಾದ ಗಾಳಿಯ ಹೊಡೆತಕ್ಕೆ ಸಿಲುಕಿ ರಾವಣನನ್ನೆ ಹಿಂಬಾಲಿಸುತ್ತಿತ್ತು.

ಸೀತೆಯ ತುರುಬಿನಿಂದ ಚ್ಯುತವಾದ ಆ ಪುಷ್ಪಧಾರೆಯು ರಾವಣನನ್ನು ಹಿಂಬಾಲಿಸುತ್ತಿದ್ದಾಗ ನಕ್ಷತ್ರ ಮಾಲೆ ಉನ್ನತವಾದ ಮೇರುಪರ್ವತವನ್ನು ಅನುಸರಿಸಿ ಸಂಚರಿಸುವಂತೆ ಕಾಣುತ್ತಿತ್ತು.

ವೈದೇಹಿಯ ಚರಣದಿಂದ ರತ್ನಭೂಷಿತವಾದ ಮಿಂಚುಗೊಂಚಲಿನಂತಿದ್ದ ಗೆಜ್ಜೆಯು ಮಧುರವಾಗಿ ದನಿಗೈಯ್ಯುತ್ತ ಜಾರಿ ಬಿತ್ತು.

ತನ್ನ ತೇಜಸ್ಸಿನಿಂದ ದೊಡ್ಡ ಉಲ್ಕೆಯಂತೆ ಬೆಳಗುತ್ತಿರುವ ಆ ಸೀತೆಯನ್ನು ಕುಬೇರನ ತಮ್ಮ ರಾವಣನು ಆಕಾಶದಲ್ಲಿ ಕದ್ದೊಯ್ಯುತ್ತಿದ್ದನು.

ಸೀತೆಯು ತೊಟ್ಟಿದ್ದ, ಬೆಂಕಿಯಂತೆ ಹೊಳೆಯುತ್ತಿದ್ದ ಆಭರಣಗಳು ಶಬ್ದ ಮಾಡುತ್ತ ಭೂತಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದವು. ಆಕಾಶದಿಂದ ತಾರೆಗಳು ಕಳಚಿ ಬೀಳುವಂತೆ.

ವೈದೇಹಿಯ ಸ್ತನಗಳ ಮೇಲಿನ ಚಂದ್ರನಂಥ ಸೊಬಗಿನ ಹಾರವು ಕೆಳಗೆ ಬೀಳುತ್ತ ಆಕಾಶದಿಂದ ಇಳಿದು ಬಂದ ಗಂಗೆಯಂತೆ ಭಾಸವಾಗುತ್ತಿತ್ತು.

ಮೇಲೆದ್ದ ಬೀಸುಗಾಳಿಗೆ ಬಗೆ ಬಗೆಯ ಕಲರವದ ಹಕ್ಕಿಗಳ ಗುಂಪಿನಿಂದ ಕೂಡಿದ ಮರಗಳ ಕೊಂಬೆಗಳ ತುದಿಗಳು ಕಂಪಿಸುತ್ತಿದ್ದು 'ಹೆದರಬೇಡ ಹೆದರಬೇಡ' ಎಂದು ಕೈ ಬೀಸಿ ಹೇಳುವಂತೆ ಕಾಣುತ್ತಿತ್ತು.

ನಾಶವಾದ ಕಮಲಗಳು, ಹೆದರಿದ ಮೀನು ಮುಂತಾದ ಜಲಚರಗಳನ್ನು ಒಳಗೊಂಡಿದ್ದ ತಾವರೆಯ ಕೊಳಗಳು ರಾವಣನ ಭಯದಿಂದ ಮೂರ್ಛಿತಳಾದ ಗೆಳತಿ ಮೈಥಿಲಿಯ ಬಗೆಗೆ ಶೋಕಿಸುತ್ತಿರುವಂತೆ ಇತ್ತು.

ಸೀತಾಪಹಾರಗೈದ ರಾವಣನ ಮೇಲೆ ರೋಷದಿಂದ ಎಲ್ಲಡೆಯಿಂದ ಮುಗಿ-ಬಿದ್ದು ಸಿಂಹ ಹುಲಿ ಮೃಗ ಪಕ್ಷಿಗಳು ಸೀತೆಯ ನೆರಳನ್ನು ಬೆನ್ನಟ್ಟಿ ದೌಡಾಯಿಸಿದವು.

ಸೀತೆ ಅಪಹಾರವಾಗುತ್ತಿರುವಾಗ ಪರ್ವತಗಳೆಲ್ಲ ಜಲಪಾತಗಳೆಂಬ ಕಣ್ಣೀರು ಸುರಿಸುತ್ತ, ಎತ್ತರದ ಶಿಖರಗಳೆಂಬ ಕೈಗಳನ್ನೆತ್ತಿ ಗಟ್ಟಿಯಾಗಿ ರೋದನ ಮಾಡುತ್ತಿರು-ವಂತೆ ಕಾಣುತ್ತಿತ್ತು.

ಸೀತೆ ಅಪಹಾರಗೊಳ್ಳುತ್ತಿರುವುದನ್ನು ಕಂಡು ಕಂಡು ಸೂರ್ಯನೂ ನಿಸ್ತೇಜನಾಗಿ ಬಿಳಿಚಿಕೊಂಡನು.

ನಾಸ್ತಿ ಧರ್ಮಃ ಕುತಃ ಸತ್ಯಂ ನಾರ್ಜವಂ ನಾನೃಶಂಸತಾ ।
ಯತ್ರ ರಾಮಸ್ಯವೈದೇಹೀಂ ಭಾರ್ಯಾಂ ಹರತಿ ರಾವಣಃ ॥೪೧॥

ಇತಿ ಸರ್ವಾಣಿ ಭೂತಾನಿ ಗಣಶಃ ಪರ್ಯದೇವಯನ್ ।
ವಿತ್ರಸ್ತಕಾ ದೀನಮುಖಾ ರುರುದುರ್ಮೃಗಪೋತಕಾಃ ॥೪೨॥

ಉದ್ವೀಕ್ಷ್ಯೋದ್ವೀಕ್ಷ್ಯ ನಯನೈರಸ್ರಪಾತಾವಿಲೇಕ್ಷಣಾಃ ।
ಸುಪ್ರವೇಪಿತಗಾತ್ರಾಶ್ಚ ಬಭೂವುರ್ವನದೇವತಾಃ ॥೪೩॥

ವಿಕ್ರೋಶಂತೀ ದೃಢಂ ಸೀತಾ ದೃಷ್ಟ್ವಾ ದುಃಖಂ ತಥಾಗತಾಮ್ ।
ತಾಂ ತು ಲಕ್ಷ್ಮಣ ರಾಮೇತಿ ಕ್ರೋಶಂತೀ ಮಧುರಸ್ವರಮ್ ॥೪೪॥

ಅವೇಕ್ಷಮಾಣಾಂ ಬಹುಶೋ ವೈದೇಹೀಂ ಧರಣೀತಲಮ್ ।
ಸ ತಾಮಾಕುಲಕೇಶಾಂತಾಂ ವಿಪ್ರಮೃಷ್ಟವಿಶೇಷಕಾಮ್ ॥೪೫॥

ಜಹಾರಾತ್ಮವಿನಾಶಾಯ ದಶಗ್ರೀವೋ ಮನಸ್ವಿನೀಮ್ ।

ತತಸ್ತು ಸಾ ಚಾರುದತೀ ಶುಚಿಸ್ಮಿತಾ
ವಿನಾಕೃತಾ ಬಂಧುಜನೇನ ಮೈಥಿಲೀ ।
ಅಪಶ್ಯತೀ ರಾಘವಲಕ್ಷ್ಮಣಾವುಭೌ
ವಿವರ್ಣವಕ್ತ್ರಾ ಭಯಭಾರಪೀಡಿತಾ ॥೪೬॥

'ಧರ್ಮ ಇಲ್ಲ ! ಸತ್ಯವಿನ್ನೆಲ್ಲಿ ? ಆರ್ಜವವೂ ಇಲ್ಲ. ಆನೃಶಂಸ್ಯ (ದಯಾಪರತೆ)ವೂ ಇಲ್ಲ'' –

'ಮಹಾತ್ಮರಾಮನ ಭಾರ್ಯೆ ವೈದೇಹಿಯನ್ನು ರಾವಣ ಅಪಹರಿಸುತ್ತಿದ್ದಾನೆ !!' – ಹೀಗೆ ಎಲ್ಲ ಪ್ರಾಣಿಗಳೂ ಗುಂಪು ಗುಂಪಾಗಿ ದುಃಖಿಸುತ್ತಿದ್ದವು.

ಜಿಂಕೆ ಮರಿಗಳೂ ಹೆದರಿ ದೈನ್ಯದ ಮುಖ ಮಾಡಿಕೊಂಡು ಅಳುತ್ತಿದ್ದವು ! ಸುರಿವ ಕಂಬನಿಗಳಿಂದ ಕಲುಷಗೊಂಡ ಕಣ್ಣುಗಳಿಂದ ಸೀತೆ ಸಾಗಿದ ದಾರಿಯನ್ನು ತಲೆ ಮೇಲೆತ್ತಿ ನೋಡು ನೋಡುತ್ತ, ಅಳುತ್ತಾ, ರಾಮ –ಲಕ್ಷ್ಮಣರನ್ನು ಕೂಗುತ್ತಾ ಸಾಗುತ್ತಿರುವ ಸೀತೆಯನ್ನು ಕಂಡು ವನದೇವತೆಗಳ ಗಾತ್ರಗಳೂ ಕಂಪಿಸಿದವು.

ಮಧುರಸ್ವರದಿಂದ 'ರಾಮSS ಲಕ್ಷ್ಮಣSS' ಎಂದು ಕೂಗುತ್ತಿದ್ದ, ಬಹುಕಾಲ ಭೂಮಿಯನ್ನೆ ನೋಡುತ್ತಿರುವ, ಕೆದರಿದ ತಲೆಗೂದಲುಳ್ಳ, ಕಳಚಿಹೋದ ಆಭರಣಗಳ, ಗಟ್ಟಿ ಮನದ ಸೀತೆಯನ್ನು ದಶಮುಖ ತನ್ನ ನಾಶಕ್ಕೋಸ್ಕರ ಅಪಹರಿಸಿದನು.

ಸುಂದರದಂತದವಳು, ಶುಚಿನಗುವಿನವಳು ಆಗಿದ್ದ ಸೀತೆ ಬಂಧುಜನಹಿತಳಾಗಿ ರಾಮಲಕ್ಷ್ಮಣರಿಬ್ಬರನ್ನೂ ಕಾಣದೆ ಭಯಭಾರಪೀಡಿತಳು. ಕಾಂತಿಹೀನ ಮುಖದವಳಾದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೆರಡನೇ ಸರ್ಗ ಮುಗಿಯಿತು.

❖

ತ್ರಿಪಂಚಾಶಃ ಸರ್ಗಃ

ಕಥಾಸಾರಾಂಶ– ತನ್ನನ್ನು ಅಪಹರಿಸಿಕೊಂಡು ಆಕಾಶಕ್ಕೆ ಹಾರುತ್ತಿರುವ ರಾವಣನನ್ನು ನೋಡಿ ದುಃಖ ಉದ್ವೇಗ ಭಯಗಳಿಗೊಳಗಾದ ಸೀತೆಯು ಕರುಣೆ ಹುಟ್ಟುವ ಹಾಗೆ ಅಳುತ್ತ ರಾವಣನಿಗೆ ಹೇಳಿದಳು –

ನೀಚ ರಾವಣ ! ಸಹಾಯಕಸ್ವಾಮಿಯಿರದ ಒಬ್ಬಂಟಿಯಾದ ಪರಸ್ತ್ರೀಯನ್ನು ಅಪಹರಿಸಿರುವೆಯಲ್ಲ ನಾಚಿಕೆಯಾಗುವುದಿಲ್ಲವೆ ?

ನಿಶ್ಚಯವಾಗಿ ನನ್ನನ್ನು ಅಪಹರಿಸುವ ಉದ್ದೇಶದಿಂದಲೆ ನೀನೆ ಮಾಯಾ–ಮೃಗರೂಪದಿಂದ ಬಂದು ನನ್ನ ಸ್ವಾಮಿಯನ್ನು ನನ್ನಿಂದ ದೂರ ಹೋಗುವಂತೆ ಮಾಡಿರುವೆ.

ನನ್ನ ರಕ್ಷಣೆಗೆ ಧಾವಿಸಿದ ಜಟಾಯು– ನನ್ನ ಮಾವನವರ ಮಿತ್ರನನ್ನೂ ಘಾಸಿಗೊಳಿಸಿದಿ.

ಆಹಾ ! ನೀನು ಮಹಾಬಲಶಾಲಿ !! ಗಂಡಸರು ಇಲ್ಲದಿದ್ದಾಗ ನನ್ನನ್ನು ಅಪಹರಿಸಿರುವಿ.ಯುದ್ಧ ಮಾಡಿ ಶೌರ್ಯದಿಂದ ನನ್ನನ್ನು ನೀನು ಗೆದ್ದಿಲ್ಲ.

ಕಳ್ಳನಂತೆ ಬಂದು ನನ್ನನ್ನು ಅಪಹರಿಸಿರುವೆಯಲ್ಲ. ಇಂಥ ನಿಂದಿತ ಕರ್ಮ ಮಾಡಲು ನಾಚಿಕೆಯಾಗುವುದಿಲ್ಲವೆ ?

ನೀನು ಕೊಚ್ಚಿಕೊಂಡ ನಿನ್ನ ಶೌರ್ಯ ಬಲಗಳಿಗೆ ಧಿಕ್ಕಾರ. ಇಂಥ ನೀಚ ಕೆಲಸ ಮಾಡಿ ವೇಗವಾಗಿ ಧಾವಿಸುತ್ತಿರುವೆಯಲ್ಲ ಮುಹೂರ್ತಕಾಲ ನಿಲ್ಲು.

ನನ್ನ ರಾಮ ಹಾಗು ಲಕ್ಷ್ಮಣರ ಕಣ್ಣಿಗೆ ಬಿದ್ದರೆ ನೀನುಳಿಯುವುದಿಲ್ಲ.

ಈಗಲಾದರೂ ನನ್ನನ್ನು ಬಿಟ್ಟರೆ ನೀನು ಬದುಕಬಹುದೇನೋ. ಇಲ್ಲದಿದ್ದರೆ ಸಂಕ್ರುದ್ಧನಾದ ರಾಮನ ಬಾಣಕ್ಕೆ ಬಲಿಯಾಗುವೆ.

ನನ್ನನ್ನೇನು ಬಲಾತ್ಕಾರವಾಗಿ ಸೆಳೆದೊಯ್ಯುತ್ತಿರುವೆ ಈ ನಿನ್ನ ಪರಿಶ್ರಮ ವ್ಯರ್ಥವಾಗುತ್ತದೆ.

ನಾನು ರಾಮನನ್ನು ಕಾಣದೆ ಶತ್ರುವಶಳಾಗಿ ಪ್ರಾಣಧಾರಣೆ ಮಾಡಿಕೊಂಡಿರಲು ಸಾಧ್ಯವಿಲ.

ಈ ನಿನ್ನ ಅಪಹರಣದ ಸಾಹಸ ನಿನ್ನ ಸಾವಿಗೇ ಕಾರಣವಾಗುತ್ತದೆ. ನಿನ್ನ ಕುತ್ತಿಗೆಗೆ ಕಾಲಪಾಶದ ಉರುಳು ಬಿದ್ದಿರುವುದು ಕಾಣುತ್ತಿದೆ.

ಮೃತ್ಯುವಿನ ಪಾಶಕ್ಕೆ ಬಲಿಯಾದವರಿಗೆ ಪಥ್ಯ ರುಚಿಸುವುದಿಲ್ಲ. ಅನ್ಯಾಯ ಮಾಡಲು ಭಯವಾಗುವುದಿಲ್ಲ.

ಮರಣ ಸೂಚಕವಾದ ಈ ಸಂಗತಿಗಳು ಅವಶ್ಯವಾಗಿ ನಿನಗೆ ಗೋಚರವಾಗು-ತ್ತಿರಬೇಕೇನೊ ?

ಮರಗಳು ಬಂಗಾರಮಯವಾಗಿ ಕಾಣುತ್ತಿರಬೇಕೇನೋ ? ರಕ್ತದ ಪ್ರವಾಹ ಹರಿಯುತ್ತಿರುವ ವೈತರಣೀ ನದಿಯ ದರ್ಶನವಾಗುತ್ತಿರಬೇಕು. ಭಯಂಕರವಾದ ಖಡ್ಗದಂತೆ ಹರಿತವಾದ ಪತ್ರವಿರುವ ವೃಕ್ಷಗಳ ಕಾಡು ಕಾಣುತ್ತಿರಬೇಕು.

ಸುವರ್ಣ ಪುಷ್ಪಸಹಿತವಾದ, ಶ್ರೇಷ್ಠ ವೈಢೂರ್ಯಮಯ ಪತ್ರಗಳಿರುವ, ತೀಕ್ಷ್ಣಮುಳ್ಳುಗಳಿರುವ ಬೂರುಗದ ಮರ ಗೋಚರವಾಗುತ್ತಿರಬೇಕು.

ನೀನು ಎಲ್ಲೆ ಹೋದರೂ ನನ್ನ ಗಂಡನಿಂದ ಸುಖವನ್ನು ಹೊಂದಲಾರೆ.

ಲಕ್ಷ್ಮಣನ ನೆರವು ಪಡೆಯದೆ ಶ್ರೀರಾಮನೊಬ್ಬನೆ ನಿಮಿಷ ಮಾತ್ರದಲ್ಲಿ ನಿನ್ನವರಾದ ಹದಿನಾಲ್ಕು ಸಾವಿರ ರಕ್ಕಸರನ್ನು ಸದೆ ಬಡಿದಿರುವನು. ಅಂತಹ ಶೂರನಾದ ರಾಮ ತನ್ನ ತೀಕ್ಷ್ಣಬಾಣಗಳಿಂದ ನಿನ್ನನ್ನು ಕೊಲ್ಲದೆ ಇರುವನೆ ?

ಹೀಗೆಲ್ಲ ಬಹುವಿಧವಾಗಿ ಸೀತೆ ವಿಲಪಿಸಿದಳು. ಪಾಪಿ ರಾವಣ ದೇಹದಲ್ಲಿ ನಡುಕ ಉಂಟಾಗಿ ಅವಳನ್ನು ಅಪಹರಿಸಿಕೊಂಡು ಆಗಸದಲ್ಲಿ ಮುಂದೆ ಸಾಗಿದ.

❖

ರಾವಣಭರ್ತ್ಸನಮ್

ಖಮುತ್ಪತಂತಂ ತಂ ದೃಷ್ಟ್ವಾ ಮೈಥಿಲೀ ಜನಕಾತ್ಮಜಾ ।
ದುಃಖಿತಾ ಪರಮೋದ್ವಿಗ್ನಾ ಭಯೇ ಮಹತಿ ವರ್ತಿನೀ ॥೧॥

ರೋಷರೋದನತಾಮ್ರಾಕ್ಷೀ ಭೀಮಾಕ್ಷಂ ರಾಕ್ಷಸಾಧಿಪಮ್ ।
ರುದಂತೀ ಕರುಣಂ ಸೀತಾ ಹ್ರಿಯಮಾಣೇದಮಬ್ರವೀತ್ ॥೨॥

ನ ವ್ಯಪತ್ರಪಸೇ ನೀಚ ಕರ್ಮಣಾನೇನ ರಾವಣ ।
ಜ್ಞಾತ್ವಾ ವಿರಹಿತಾಂ ಯನ್ಮಾಂ ಚೋರಯಿತ್ವಾ ಪಲಾಯಸೇ ॥೩॥

ತ್ವಯೈವ ನೂನಂ ದುಷ್ಟಾತ್ಮನ್ ಭೀರುణಾ ಹರ್ತುಮಿಚ್ಛತಾ ।
ಮಮಾಪವಾಹಿತೋ ಭರ್ತಾ ಮೃಗರೂಪೇಣ ಮಾಯಯಾ ॥೪॥

ಯೋ ಹಿ ಮಾಮುದ್ಯತಸ್ತ್ರಾತುಂ ಸೋಽಪ್ಯಯಂ ವಿನಿಪಾತಿತಃ ।
ಗೃಧ್ರರಾಜಃ ಪುರಾణೋಽಸೌ ಶ್ವಶುರಸ್ಯ ಸಖಾ ಮಮ ॥೫॥

ಮಹಾಭಯದಲ್ಲಿದ್ದು ತುಂಬ ಉದ್ವೇಗಗೊಂಡವಳು ತುಂಬ ದುಃಖಿತಳೂ ಆದ ಜನಕಪುತ್ರೀ ಮೈಥಿಲಿಯು ಆಕಾಶಕ್ಕೆ ಹಾರುತ್ತಿರುವ ಉಗ್ರದೃಷ್ಟಿಯ ರಾಕ್ಷಸಾಧಿಪ ರಾವಣನನ್ನು ನೋಡಿ ರೋಷರೋದನಗಳಿಂದ ಕಣ್ಣು ಕೆಂಪಾದವಳಾಗಿ ಕರುಣೆ ಹುಟ್ಟುವಂತೆ ಅಳುತ್ತಾ ರಾವಣನಿಂದ ಅಪಹರಿಸಲ್ಪಡುತ್ತಾ ಸೀತೆ ಹೀಗೆ ಹೇಳಿದಳು.

ನೀಚ ರಾವಣನೆ ! ರಾಮಲಕ್ಷ್ಮಣರಿಂದ ರಹಿತಳಾದ ನನ್ನನ್ನು ಕದ್ದು ಓಡುತ್ತಿರುವೆಯಲ್ಲವೇ ಇಂಥ ನಡೆಗೆ ನಾಚಿಕೆಯಾಗುತ್ತಿಲ್ಲವೇ ?

ದುಷ್ಟಮನದವನೆ ! ನನ್ನನ್ನು ಅಪಹರಿಸಲು ಬಯಸಿದ ಅಂಜುಬುರುಕನಾದ ನೀನೇ ನಿಶ್ಚಯವಾಗಿ ಮಾಯೆಯಿಂದ ಮೃಗರೂಪ ಧರಿಸಿ ನನ್ನ ಗಂಡನನ್ನು ದೂರಕ್ಕೆ ಸಾಗ ಹಾಕಿರಬೇಕು ?

ನನ್ನನ್ನು ರಕ್ಷಿಸಲು ಧಾವಿಸಿ ಬಂದ ಆ ಜಟಾಯುವೂ ನಿನ್ನಿಂದ ಕೆಳಗೆ ಹೊಡೆದುರುಳಿಸಲ್ಪಟ್ಟ ! ಅವನು ನನ್ನ ಮಾವನವರಿಗೆ ಹಳೆಯ ಗೆಳೆಯ.

ಪರಮಂ ಖಲು ತೇ ವೀರ್ಯಂ ದೃಶ್ಯತೇ ರಾಕ್ಷಸಾಧಮ ।
ವಿಶ್ರಾವ್ಯ ನಾಮಧೇಯಂ ಹಿ ಯುದ್ಧೇ ನಾಸ್ಮಿ ಜಿತಾ ತ್ವಯಾ ॥೬॥

ಈದೃಶಂ ಗರ್ಹಿತಂ ಕರ್ಮ ಕಥಂ ಕೃತ್ವಾ ನ ಲಜ್ಜಸೇ ।
ಸ್ತ್ರಿಯಾಶ್ಚ ಹರಣಂ ನೀಚ ರಹಿತೇ ತು ಪರಸ್ಯ ಚ ॥೭॥

ಕಥಯಿಷ್ಯಂತಿ ಲೋಕೇಷು ಪುರುಷಾಃ ಕರ್ಮ ಕುತ್ಸಿತಮ್ ।
ಸುನೃಶಂಸಮಧರ್ಮಿಷ್ಠಂ ತವ ಶೌಂಡೀರ್ಯಮಾನಿನಃ ॥೮॥

ಧಿಕ್ ತೇ ಶೌರ್ಯಂ ಚ ಸತ್ತ್ವಂ ಚ ಯತ್ತ್ವಂ ಕಥಿತವಾಂಸ್ತದಾ ।
ಕುಲಾಕ್ರೋಶಕರಂ ಲೋಕೇ ಧಿಕ್ ತೇ ಚಾರಿತ್ರಮೀದೃಶಮ್ ॥೯॥

ಕಿಂ ಕರ್ತುಂ ಶಕ್ಯಮೇವಂ ಹಿ ಯಜ್ಜವೇನೈವ ಧಾವಸಿ ।

ಮುಹೂರ್ತಮಪಿ ತಿಷ್ಠ ತ್ವಂ ನ ಜೀವನ್ ಪ್ರತಿಯಾಸ್ಯಸಿ ॥೧೦॥

ನ ಹಿ ಚಕ್ಷುಷ್ಪಥಂ ಪ್ರಾಪ್ಯ ತಯೋಃ ಪಾರ್ಥಿವಪುತ್ರಯೋಃ ।
ಸಸೈನ್ಯೋಪಿ ಸಮರ್ಥಸ್ತ್ವಂ ಮುಹೂರ್ತಮಪಿ ಜೀವಿತುಮ್ ॥೧೧॥

ನ ತ್ವಂ ತಯೋಃ ಶರಸ್ಪರ್ಶಂ ಶಕ್ತಃ ಸೋಢುಂ ಕಥಂಚನ ।
ವನೇ ಪ್ರಜ್ವಲಿತಸ್ಯೇವ ಸ್ಪರ್ಶಮಗ್ನೇರ್ವಿಹಂಗಮಃ ॥೧೨॥

ರಾಕ್ಷಸಾಧಮನೆ ! ನಿನ್ನ ಭಾರಿ ಪರಾಕ್ರಮ ನಿಚ್ಚಳವಾಗಿ ಕಾಣುತ್ತಿದೆಯಲ್ಲವೆ ! ನಿನ್ನ ಹೆಸರು ಹೇಳಿಕೊಂಡು ಯುದ್ಧದಲ್ಲಿ ನನ್ನನ್ನು ನೀನು ಗೆದ್ದಿಲ್ಲ ! ರಕ್ಷಕರಿಲ್ಲದ ಹೊತ್ತಲ್ಲಿ ಹೆಣ್ಣನ್ನು ಅಪಹರಿಸಿದೆ. ಇಂಥ ಹೇಡಿತನದ ನಿಂದಿತ ಕರ್ಮ ಮಾಡಿ ನಿನಗೆ ನಾಚಿಕೆಯಾಗುವುದಿಲ್ಲವೆ ?

ಶೂರನೆಂದು ತಿಳಿದುಕೊಂಡಿರುವ ನಿನ್ನ ಈ ಸ್ತ್ರೀ ಅಪಹರಣಕರ್ಮವನ್ನು ಲೋಕದ ಪುರುಷರು 'ಕುತ್ಸಿತವಾದುದು, ಕ್ರೂರವಾದ ಅಧರ್ಮ' ವೆಂದು ಹೇಳುತ್ತಾರೆ – ಭವಿಷ್ಯತ್ತಿನಲ್ಲಿ.

ಆಶ್ರಮಕ್ಕೆ ಬಂದಾಗ ನೀನು ಕೊಚ್ಚಿಕೊಂಡ ನಿನ್ನ ಶೌರ್ಯ, ಸತ್ವಕ್ಕೆ ಧಿಕ್ಕಾರ. ಕುಲಕ್ಕೆ ಕಲಂಕ ತರುವ ನಿನ್ನ ಈ ನಡೆಗೆ ಧಿಕ್ಕಾರ.

ಹೀಗೆ ನನ್ನನ್ನು ಅಪಹರಿಸಿ ವೇಗವಾಗಿ ಓಡಿ ಹೋಗುತ್ತಿದ್ದರೆ ಏನು ಮಾಡಲು ಶಕ್ಯ ? ಮುಹೂರ್ತ ಕಾಲ ನಿಲ್ಲು. ರಾಮ ಬರುತ್ತಾನೆ. ಬದುಕಿ ಹಿಂತಿರುಗಲಾರೆ.

ರಾಜಪುತ್ರರಾದ ರಾಮ-ಲಕ್ಷ್ಮಣರ ಕಣ್ಣಿಗೆ ಬಿದ್ದರೆ ನೀನು ಸೈನ್ಯಸಮೇತ-ನಾಗಿದ್ದರೂ ಮುಹೂರ್ತಕಾಲವೂ ಬದುಕಿ ಉಳಿಯಲಾರೆ !

ಅವರ ಶರಸ್ಪರ್ಶವನ್ನು ನೀನು ಸಹಿಸಲಾರೆ – ಕಾಡಿನಲ್ಲಿ ಪ್ರಜ್ವಲಿಸುವ ಬೆಂಕಿಯ ಸ್ಪರ್ಶವನ್ನು ಹಕ್ಕಿ ಸಹಿಸಲಾಗದಂತೆ !

ಸಾಧು ಕೃತ್ವಾತ್ಮನಃ ಪಥ್ಯಂ ಸಾಧು ಮಾಂ ಮುಂಚ ರಾವಣ ।
ಮತ್ಕೃತೇ ಧರ್ಷಣಾರುಷ್ಟೋ ಹಿ ಭ್ರಾತ್ರಾ ಸಹ ಪತಿರ್ಮಮ ॥೧೩॥

ವಿಧಾಸ್ಯತಿ ವಿನಾಶಾಯ ತ್ವಂ ಮಾಂ ಯದಿ ನ ಮುಂಚಸಿ ।
ಯೇನ ತ್ವಂ ವ್ಯವಸಾಯೇನ ಬಲಾನ್ಮಾಂ ಹರ್ತುಮಿಚ್ಛಸಿ ॥೧೪॥

ವ್ಯವಸಾಯಃ ಸ ತೇ ನೀಚ ಭವಿಷ್ಯತಿ ನಿರರ್ಥಕಃ ।
ನ ಹ್ಯಹಂ ತಮಪಶ್ಯಂತೀ ಭರ್ತಾರಂ ವಿಬುಧೋಪಮಮ್ ॥೧೫॥

ಉತ್ಸಹೇ ಶತ್ರುವಶಗಾ ಪ್ರಾಣಾನ್ ಧಾರಯಿತುಂ ಚಿರಮ್ ।
ನ ನೂನಂ ಚಾತ್ಮನಃ ಶ್ರೇಯಃ ಪಥ್ಯಂ ವಾ ಸಮವೇಕ್ಷಸೇ ॥೧೬॥

ಮೃತ್ಯುಕಾಲೇ ಯಥಾ ಮರ್ತ್ಯೋ ವಿಪರೀತಾನಿ ಸೇವತೇ ।
ಮುಮೂರ್ಷಾಣಾಂ ಹಿ ಸರ್ವೇಷಾಂ ಯತ್ಪಥ್ಯಂ ತನ್ನ ರೋಚತೇ॥೧೭

ರಾವಣ ! ನಿನಗೆ ಹಿತ ಪಥ್ಯ ಯಾವುದೆಂದು ವಿಚಾರ ಮಾಡಿ ನನ್ನನ್ನು ಬಿಟ್ಟು ಬಿಡು.

ನೀನು ನನ್ನನ್ನು ಬಿಡದಿದ್ದರೆ ನನ್ನಲ್ಲಿ ಎಸಗಿರುವ ನಿನ್ನ ಆಕ್ರಮಣದಿಂದ ರೋಷಗೊಂಡ ನನ್ನ ಪತಿ ರಾಮಚಂದ್ರ ತಮ್ಮನೊಂದಿಗೆ ನಿನ್ನ ವಿನಾಶದ ಪ್ರಯತ್ನ ಮಾಡುವನು.

ಯಾವ ನಿರ್ಧಾರದಿಂದ ಬಲಾತ್ಕಾರವಾಗಿ ನನ್ನನ್ನು ಅಪಹರಿಸಲು ಬಯಸಿರುವೆಯೋ ನೀಚನೆ ! ಆ ನಿನ್ನ ನಿರ್ಧಾರ ನಿರರ್ಥಕ. ದೇವೋಪಮನಾದ ರಾಮನನ್ನು ಕಾಣದೆ ಶತ್ರುವಶಳಾಗಿ ಬಹುಕಾಲ ನಾನು ಬದುಕಿರಲಾರೆ.

ನಿನಗೆ ಶ್ರೇಯಸ್ಸಾಧನವು ಅಥವಾ ಪಥ್ಯವು ಯಾವುದೆಂಬುದನ್ನು ನಿಶ್ಚಿತವಾಗಿಯೂ ನೀನು ತಿಳಿಯುತ್ತಿಲ್ಲ. ಮೃತ್ಯುಕಾಲ ಬಂದಾಗ ಮನುಷ್ಯ ತನಗೆ ವಿಪರೀತವಾದುದನ್ನೆ ಅಂದರೆ ಅಹಿತವಾದುದನ್ನೇ ಸೇವಿಸುತ್ತಾನೆ. ಸಾಯುವ ಬಯಕೆ ಹತ್ತಿದವರಿಗೆ ಪಥ್ಯವು ಇಷ್ಟವಾಗುವುದಿಲ್ಲ !

ಪಶ್ಯಾಮ್ಯದ್ಯ ಹಿ ಕಂಠೇ ತ್ವಾಂ ಕಾಲಪಾಶಾವಪಾಶಿತಮ್ ।
ಯಥಾ ಚಾಸ್ಮಿನ್ ಭಯಸ್ಥಾನೇ ನ ಬಿಭೇಷಿ ದಶಾನನ ॥೧೮॥

ವ್ಯಕ್ತಂ ಹಿರಣ್ಮಯಾನ್ ಹಿ ತ್ವಂ ಸಂಪಶ್ಯಸಿ ಮಹೀರುಹಾನ್ ।
ನದೀಂ ವೈತರಣೀಂ ಘೋರಾಂ ರುಧಿರೌಘಪ್ರವಾಹಿನೀಮ್ ॥೧೯॥

ಅಸಿಪತ್ರವನಂ ಚೈವ ಭೀಮಂ ಪಶ್ಯಸಿ ರಾವಣ ।
ತಪ್ತಕಾಂಚನಪುಷ್ಪಾಂ ಚ ವೈಡೂರ್ಯಪ್ರವರಚ್ಛದಾಮ್ ॥೨೦॥

ದ್ರಕ್ಷ್ಯಸೇ ಶಾಲ್ಮಲೀಂ ತೀಕ್ಷ್ಣಾಮಾಯಸೈಃ ಕಂಟಕೈಶ್ಚಿತಾಮ್ ।
ನ ಹಿ ತ್ವಮೀದೃಶಂ ಕೃತ್ವಾ ತಸ್ಯಾಲೀಕಂ ಮಹಾತ್ಮನಃ ॥೨೧॥

ಧಾರಿತುಂ ಶಕ್ಷ್ಯಸಿ ಚಿರಂ ವಿಷಂ ಪೀತ್ವೇವ ನಿರ್ಘೃಣ ।
ಬದ್ಧಸ್ತ್ವಂ ಕಾಲಪಾಶೇನ ದುರ್ನಿವಾರೇಣ ರಾವಣ ॥೨೨॥

ಕ್ವ ಗತೋ ಲಪ್ಸ್ಯಸೇ ಶರ್ಮ ಭರ್ತುರ್ಮಮ ಮಹಾತ್ಮನಃ ।
ನಿಮೇಷಾಂತರಮಾತ್ರೇಣ ವಿನಾ ಭ್ರಾತರಮಾಹವೇ ॥೨೩॥

ರಾಕ್ಷಸಾ ನಿಹತಾ ಯೇನ ಸಹಸ್ರಾಣಿ ಚತುರ್ದಶ ।
ಸ ಕಥಂ ರಾಘವೋ ವೀರಃ ಸರ್ವಾಸ್ತ್ರಕುಶಲೋ ಬಲೀ ॥೨೪॥

ನ ತ್ವಾಂ ಹನ್ಯಾಚ್ಛರೈಸ್ತೀಕ್ಷ್ಣೈರಿಷ್ಟಭಾರ್ಯಾಪಹಾರಿಣಮ್ ।
ಏತಚ್ಚಾನ್ಯಚ್ಚ ಪರುಷಂ ವೈದೇಹೀ ರಾವಣಾಂಕಗಾ ॥೨೫॥

ಭಯಶೋಕಸಮಾವಿಷ್ಟಾ ಕರುಣಂ ವಿಲಲಾಪ ಹ ॥

ತಥಾ ಭೃಶಾರ್ತಾಂ ಬಹು ಚೈವ ಭಾಷಿಣೀಂ
ವಿಲಾಪಪೂರ್ವಂ ಕರುಣಂ ಚ ಭಾಮಿನೀಮ್ ।
ಜಹಾರ ಪಾಪಃ ಕರುಣಂ ವಿವೇಷ್ಟತೀಂ
ನೃಪಾತ್ಮಜಾಮಾಗತಗಾತ್ರವೇಪಥುಮ್ ॥೨೬॥

ನಿನ್ನ ಕಂಠದಲ್ಲಿ ಕಾಲಪಾಶದ ಉರುಳು ಸುತ್ತಿಕೊಂಡಿರುವುದನ್ನು ಕಾಣುತ್ತಿದ್ದೇನೆ. ಭಯಪಡಬೇಕಾದ ಸಮಯದಲ್ಲಿ ದಶಾನನ ! ನೀನು ಭಯಪಡುತ್ತಿಲ್ಲ ! ಎಲ್ಲ ಮರಗಳನ್ನು ಬಂಗಾರಮಯವನ್ನಾಗಿ ಕಾಣುತ್ತಿರುವಿ ಎಂಬುದು ಸ್ಪಷ್ಟವಾಗುತ್ತಿದೆ ! (ಅಂದರೆ ಸಾಯುವ ಕಾಲದ ಸೂಚನೆ ಸಿಗುತ್ತಿದೆ ಎಂದು ಭಾವ) ರಕ್ತರಾಶಿಯೊಂದಿಗೆ ಹರಿಯುತ್ತಿರುವ ವೈತರಣಿಯನ್ನು, ಅಸಿ = ಖಡ್ಗದಂತೆ ಹರಿತವಾದ, ಪತ್ರ = ಎಲೆಗಳಿರುವ ಮರದ ಕಾಡನ್ನು ಕಾಣುವಿ ರಾವಣ ! ಬಂಗಾರದ ಪುಷ್ಪಗಳಿರುವ, ವೈಢೂರ್ಯ ಖಚಿತವಾದ ಎಲೆಗಳಿರುವ, ಕಬ್ಬಿಣದ ಮುಳ್ಳುಗಳಿಂದ ಖಚಿತವಾದ ಬೂರುಗದ ಮರವನ್ನು ಕಾಣುತ್ತಿರುವಿ !

ಕರುಣೆಯಿಲ್ಲದವನೆ? ವಿಷ ಕುಡಿದು ಬಹುಕಾಲ ಬದುಕಿರಲು ಸಾಧ್ಯವಾಗ-ದಿರುವಂತೆ ಮಹಾತ್ಮ ರಾಮನಿಗೆ ಅಪರಾಧವೆಸಗಿ ನೀನು ಬದುಕಿರಲು ಸಾಧ್ಯವಿಲ್ಲ !

ಬಿಡಿಸಿಕೊಳ್ಳಲು ದುಸ್ಸಾಧ್ಯವಾದ ಕಾಲಪಾಶದ ಬಿಗಿಯಾದ ಹಿಡಿತಕ್ಕೆ ಸಿಲುಕಿರುವಿ ನೀನು. ಮಹಾತ್ಮನಾದ ನನ್ನ ಪತಿಗೆ ಅಪಚಾರವೆಸಗಿ ನೀನು ಎಲ್ಲಿ ತಾನೆ ಸುಖಪಡಲು ಸಾಧ್ಯ ?

ದಂಡಕಾರಣ್ಯ ಮಹಾವನದಲ್ಲಿ ತಮ್ಮನ ನೆರವಿಲ್ಲದೆ ನಿಮಿಷದ ಅಂತರದಲ್ಲಿ ಹದಿನಾಲ್ಕು ಸಾವಿರ ರಕ್ಕಸರನ್ನು ಯಾವ ರಾಮ ಸಂಹರಿಸಿದ ಅಂತಹ ವೀರನು ಸರ್ವಾಸ್ತ್ರ ಕುಶಲನು ಬಲಿಷ್ಠನು ಆದ ಶ್ರೀರಾಮನು ತನ್ನ ನೆಚ್ಚಿನ ಮಡದಿಯನ್ನು ಅಪಹರಿಸಿರುವ ನಿನ್ನನ್ನು ತೀಕ್ಷ್ಣಬಾಣಗಳಿಂದ ಹೇಗೆ ಕೊಲ್ಲದೆ ಇದ್ದಾನು ?

ರಾವಣನ ತೊಡೆಯಲ್ಲಿದ್ದ ಭಯಶೋಕಗಳಿಂದ ಕೂಡಿದ ವೈದೇಹಿ ಈ ಮಾತುಗಳನ್ನು ಇನ್ನೂ ಪರುಷವಾದ ಬೇರೆ ಮಾತುಗಳನ್ನು ಕರುಣೆ ಹುಟ್ಟುವಂತೆ ವಿಲಪಿಸುತಿದ್ದಳು.

ಹಾಗೆ ತುಂಬ ಆರ್ತಳು, ಬಹುವಾಗಿ ಮಾತನಾಡುತ್ತ ಕರುಣೆ ಪುಟ್ಟುವಂತೆ ವಿಲಾಪ ಮಾಡುತ್ತಿರುವವಳೂ, ಕರುಣಾ ಜನಕವಾಗಿ ಬಿಡಿಸಿಕೊಳ್ಳಲು ಕೊಸರಾಡು-ತ್ತಿರುವ ಭಯ ಆತಂಕಗಳಿಂದ ನಡುಗುತ್ತಿರುವ ಸೀತೆಯನ್ನು ಪಾಪಿ ರಾವಣ ಅಪಹರಿಸಿ ಒಯ್ದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೂರನೇ ಸರ್ಗ ಮುಗಿಯಿತು.

❖

ಚತುಃಪಂಚಾಶಃ ಸರ್ಗಃ

ಕಥಾಸಾರಾಂಶ– ರಾವಣನಿಂದ ಅಪಹರಣಗೊಂಡ ಸೀತೆಯು ಯಾರೂ ರಕ್ಷಕರನ್ನು ಕಾಣದೆ ಸಾಗುತ್ತಿರುವಾಗ ಮಾರ್ಗದಲ್ಲಿ ಒಂದು ಪರ್ವತ ಶಿಖರದಲ್ಲಿ ನೆಲೆಸಿದ ಐವರು ವಾನರರನ್ನು ಕಂಡಳು. ಕೂಡಲೆ ಸೀತೆ ಹೊನ್ನ ಬಣ್ಣದ ತನ್ನ ಸೀರೆಯ ತುಂಡು ಬಟ್ಟೆಯಲ್ಲಿ ತನ್ನ ಆಭರಣಗಳನ್ನಿಟ್ಟು ಗಂಟು ಕಟ್ಟಿ ಆ ಕಪಿಗಳಿಗೆ ಸಿಗುವಂತೆ ಎಸೆದಳು. ಆ ಕಪಿಗಳು ರಾಮನಿಗೆ ತನ್ನ ಅಪಹಾರದ ವಿಷಯವನ್ನು ಹೇಳಿಯಾರು ಎಂಬುದು ಅವಳ ಆಲೋಚನೆಯಾಗಿತ್ತು. ಅವಸರದಲ್ಲಿದ್ದ ರಾವಣನು ಇದನ್ನು ತಿಳಿಯಲಿಲ್ಲ.

ಪಿಂಗಾಕ್ಷರಾದ ಆ ಕಪಿಗಳು ಸೀತೆಯು ಅಳುತ್ತಿರುವುದನ್ನು ಕಣ್ಣಿವೆಯಿಕ್ಕದೆ ಕಂಡರು.

ರಾವಣನು ಸೀತೆಯನ್ನು ಅಪಹರಿಸಿಕೊಂಡು ಪಂಪಾ ತೀರವನ್ನು ದಾಟಿ ಲಂಕೆಯೆಡೆಗೆ ಸಾಗಿದನು. ಅನೇಕ ಕಾನನಗಳನ್ನು, ವನಗಳನ್ನು,ನದಿಗಳನ್ನು ದಾಟಿ ಹೊರಟನು. ಅದನ್ನು ಕಂಡು ಸಮುದ್ರರಾಜ ಗಾಬರಿಯಾಗಿ ಅಲೆಗಳನ್ನು ಶಾಂತಗೊಳಿಸಿದ. ಅದರಿಂದ ಜಲಚರಜಂತುಗಳು ಸ್ತಬ್ಧವಾದವು,.

ಗಗನ ಸಂಚಾರಿಗಳಾದ ಸಿದ್ಧ ಚಾರಣರು, ರಾವಣನು ಸೀತೆಯನ್ನು ಹಾರಿಸಿಕೊಂಡು ಹೋಗುತ್ತಿರುವುದನ್ನು ನೋಡಿ 'ರಾವಣನಿಗೆ ಅಂತ್ಯಕಾಲ ಸಮೀಪಿಸಿದೆ' ಎಂದರು.

ವೈಭವದ ಲಂಕೆಯನ್ನು ಪ್ರವೇಶಿಸಿ ತನ್ನ ಅಂತಃಪುರಕ್ಕೆ ಹೋಗಿ ಸೀತೆಯನ್ನು ಅಲ್ಲಿರಿಸಿದನು. ಘೋರರೂಪದ ಹೆಣ್ಣು ಪಿಶಾಚಿಗಳನ್ನು ಕರೆದು, ''ಹೆಣ್ಣಾಗಲಿ ಗಂಡಾಗಲಿ ಯಾರೂ ನನ್ನ ಅನುಮತಿಯಿಲ್ಲದೆ ಈ ಸೀತೆಯನ್ನು ನೋಡಬಾರದು, ಮಾತನಾಡಬಾರದು. ಮುತ್ತುರತ್ನ ಸುವರ್ಣ ವಸ್ತ್ರ ಆಭರಣಗಳು ಏನನ್ನೇ ಸೀತೆ ಕೇಳಿದರೂ ನೀವು ಕೊಡಬೇಕು. ಇಲ್ಲ ಎನ್ನಬಾರದು. ನನಗೆ ತಿಳಿಯದೆ ಸೀತೆಗೆ ಯಾರಾದರು ಅಪ್ರಿಯವಾಗಿ ಮಾತನಾಡಿದರೆ ಅವರು ಬದುಕಲು ಬಿಡುವುದಿಲ್ಲ ನಾನು'' ಎಂದು ಎಚ್ಚರಿಸಿದ.

ಅಲ್ಲಿಂದ, 'ಮುಂದೇನು ಮಾಡಲಿ'' ? ಎಂದು ಯೋಚಿಸಿಕೊಂಡು ಬರುತ್ತಿದ್ದಾಗ ಮಾಂಸಭಕ್ಷರಾದ ಮಹಾಶೂರರಾದ ಎಂಟು ಮಂದಿ ರಕ್ಕಸರನ್ನು ಕಂಡ. ಅವರಿಗೆ ಅಪ್ಪಣೆಯಿತ್ತ – ''ನೀವು ಜನಸ್ಥಾನಕ್ಕೆ ಗೂಢಚರರಾಗಿ ಹೋಗಬೇಕು. ಹಿಂದೆ ಅದು ರಾಕ್ಷಸರ ತಾಣವಾಗಿತ್ತು. ರಾಮ, ಖರ ದೂಷಣ ತ್ರಿಶಿರ ಮುಂತಾದ ಸಾವಿರಾರು ರಕ್ಕಸರನ್ನೆಲ್ಲ ಸಾಯಿಸಿದ. ನೀವು ಆಯುಧಗಳನ್ನು ಹಿಡಿದುಕೊಂಡು ಧೈರ್ಯವಾಗಿ ಆ ಜನಸ್ಥಾನದಲ್ಲಿ ವಾಸಮಾಡಿ. ರಾಮನ ಚಲನವಲನದ ಮೇಲೆ ತೀವ್ರನಿಗಾ ಇಡಿ. ರಾಘವನನ್ನು ಕೊಲ್ಲಲ್ಲು ನಿರಂತರ ಪ್ರಯತ್ನಿಸಿ.

ಯುದ್ಧದಲ್ಲಿ ನಿಮ್ಮ ಪರಾಕ್ರಮಗಳನ್ನು ಕಂಡಿದ್ದೇನೆ. ಆದರಿಂದಲೇ ನಿಮ್ಮನ್ನೇ ನಿಯೋಜಿಸಿದ್ದೇನೆ.'' ರಾವಣನ ಆದೇಶವನ್ನು ಆಲಿಸಿ ಶಿರಬಾಗಿ ನಮಿಸಿ ಆ ರಕ್ಕಸರು ಯಾರಿಗೂ ಕಾಣದಂತೆ ಉಪಾಯವಾಗಿ ಜನಸ್ಥಾನಕ್ಕೆ ಹೋದರು.

ಸೀತೆಯನ್ನು ಅಪಹರಿಸಿ ರಾಕ್ಷಸಿಯರ ಕಾವಲಿನಲ್ಲಿಟ್ಟು ಮೋಹಗೊಂಡ ರಾವಣ ತುಂಬ ಖುಷಿಪಟ್ಟ.

❖

ಲಂಕಾಪ್ರಾಪಣಮ್

ಹ್ರಿಯಮಾಣಾ ತು ವೈದೇಹೀ ಕಂಚಿನ್ನಾಥಮಪಶ್ಯತೀ ।
ದದರ್ಶ ಗಿರಿಶೃಂಗಸ್ಥಾನ್ ಪಂಚ ವಾನರಪುಂಗವಾನ್ ॥೧॥

ತೇಷಾಂ ಮಧ್ಯೇ ವಿಶಾಲಾಕ್ಷೀ ಕೌಶೇಯಂ ಕನಕಪ್ರಭಮ್ ।
ಉತ್ತರೀಯಂ ವರಾರೋಹಾ ಶುಭಾನ್ಯಾಭರಣಾನಿ ಚ ॥೨॥

ಮುಮೋಚ ಯದಿ ರಾಮಾಯ ಶಂಸೇಯುರಿತಿ ಮೈಥಿಲೀ ।
ವಸ್ತ್ರಮುತ್ಸೃಜ್ಯ ತನ್ಮಧ್ಯೇ ನಿಕ್ಷಿಪ್ತಂ ಸಹಭೂಷಣಮ್ ॥೩॥

ಸಂಭ್ರಮಾತ್ತು ದಶಗ್ರೀವಸ್ತತ್ ಕರ್ಮ ನ ಸ ಬುದ್ಧವಾನ್ ।
ಪಿಂಗಾಕ್ಷಸ್ತಾಂ ವಿಶಾಲಾಕ್ಷೀಂ ನೇತ್ರೈರನಿಮಿಷೈರಿವ ॥೪॥

ವಿಕ್ರೋಶಂತೀಂ ತಥಾ ಸೀತಾಂ ದದೃಶುರ್ವಾನರರ್ಷಭಾಃ ।

ರಾವಣನಿಂದ ಅಪಹರಣಗೊಳ್ಳುತ್ತಿದ್ದ ಸೀತೆಯು ಯಾವ ರಕ್ಷಕರನ್ನು ಕಾಣದವಳಾಗಿ ಪರ್ವತದ ಶಿಖರದಲ್ಲಿರುವ ಐವರು ವಾನರಶ್ರೇಷ್ಠರನ್ನು ಕಂಡಳು. ವಿಶಾಲಾಕ್ಷಿ ಸೀತೆಯು ಬಂಗಾರದ ಹೊಳಪಿನ ತನ್ನ ಕೌಶೇಯ ವಸ್ತ್ರದಲ್ಲಿ ಆಭರಣಗಳನ್ನಿಟ್ಟು ಕಟ್ಟಿ ಕೆಳಗೆ ಬಿಟ್ಟಳು. ತನ್ನನ್ನು ರಾವಣ ಅಪಹರಿಸಿರುವನೆಂದು ರಾಮನಿಗೆ ಹೇಳಿಯಾರು ಎಂಬ ಆಸೆಯಿಂದ. ಹಾಗೆ ಅಳುತಿರುವ ಸೀತೆಯನ್ನು ವಾನರಶ್ರೇಷ್ಠರು ಕಂಡರು.

ಸ ಚ ಪಂಪಾಮತಿಕ್ರಮ್ಯ ಲಂಕಾಭಿಮುಖಃ ಪುರೀಮ್ ॥೫॥

ಜಗಾಮ ರುದತೀಂ ಗೃಹ್ಯ ವೈದೇಹೀಂ ರಾಕ್ಷಸೇಶ್ವರಃ ।
ತಾಂ ಜಹಾರ ಸುಸಂಹೃಷ್ಟೋ ರಾವಣೋ ಮೃತ್ಯುಮಾತ್ಮನಃ ॥೬॥

ಉತ್ಸಂಗೇನೇವ ಭುಜಗೀಂ ತೀಕ್ಷ್ಣದಂಷ್ಟ್ರಾಂ ಮಹಾವಿಷಾಮ್ ।
ವನಾನಿ ಸರಿತಃ ಶೈಲಾನ್ ಸರಾಂಸಿ ಚ ವಿಹಾಯಸಾ ॥೭॥

ಸ ಕ್ಷಿಪ್ರಂ ಸಮತೀಯಾಯ ಶರಶ್ಚಾಪಾದಿವ ಚ್ಯುತಃ ।
ತಿಮಿನಕ್ರನಿಕೇತಂ ತು ವರುಣಾಲಯಮಕ್ಷಯಮ್ ॥೮॥

ಸರಿತಾಂ ಶರಣಂ ಗತ್ವಾ ಸಮತೀಯಾಯ ಸಾಗರಮ್ ।

ಆ ರಾಕ್ಷಸೇಶ್ವರನು ಅಳುತ್ತಿರುವ ವೈದೇಹಿಯನ್ನು ಹಿಡಿದುಕೊಂಡು ಪಂಪಾ-ಕ್ಷೇತ್ರವನ್ನು ದಾಟಿ ಲಂಕೆಗೆ ಅಭಿಮುಖನಾಗಿ ಸಾಗಿದ. ರಾವಣ ಖುಷಿಖುಷಿಯಾಗಿ ತನ್ನ ಪಾಲಿನ ಮೃತ್ಯುಸ್ವರೂಪಳಾದ ತೀಕ್ಷ್ಣದಂಷ್ಟ್ರಗಳನ್ನು ಹೊಂದಿರುವ ಮಹಾ-ವಿಷವುಳ್ಳ ಹಾವಿನಂತೆ ಇರುವ ಸೀತೆಯನ್ನು ತೊಡೆಯಲ್ಲಿಟ್ಟು ಒಯ್ದನು.

ಅನೇಕ ವನಗಳನ್ನು, ನದಿಗಳನ್ನು, ಬೆಟ್ಟಗಳನ್ನು, ಸರೋವರಗಳನ್ನು - ಆಕಾಶ ಮಾರ್ಗದಲ್ಲಿ ಬಿಲ್ಲಿನಿಂದ ಬಿಟ್ಟ ಬಾಣದಂತೆ ವೇಗವಾಗಿ ಹೋಗುತ್ತ ದಾಟಿದನು.

ತಿಮಿಂಗಿಲಗಳಿಗೆ ಮೊಸಳೆಗಳಿಗೆ ವಾಸಸ್ಥಾನವು, ನದಿಗಳಿಗೆಲ್ಲ ಆಸರೆಯೂ ವರುಣನ ಅಕ್ಷಯ ನೆಲೆಯೂ ಆದ ಸಾಗರವನ್ನು ದಾಟಿ ಮುಂದೆ ಸಾಗಿದನು.

ಸಂಭ್ರಮಾತ್ ಪರಿವೃತ್ತೋರ್ಮೀ ರುದ್ಧಮೀನಮಹೋರಗಃ ॥೯॥

ವೈದೇಹ್ಯಾಂ ಹ್ರೀಯಮಾಣಾಯಾಂ ಬಭೂವ ವರುಣಾಲಯಃ ।
ಅಂತರಿಕ್ಷಗತಾ ವಾಚಃ ಸಸೃಜುಶ್ಚಾರಣಾಸ್ತದಾ ॥೧೦॥

ಏತದಂತೋ ದಶಗ್ರೀವ ಇವ ಸಿದ್ಧಾಸ್ತದಾಬ್ರುವನ್ ।
ಸ ತು ಸೀತಾಂ ವಿವೇಷ್ಟಂತೀಮಂಕೇನಾದಾಯ ರಾವಣಃ ॥೧೧॥

ಪ್ರವಿವೇಶ ಪುರೀಂ ಲಂಕಾಂ ರೂಪಿಣೀಂ ಮೃತ್ಯುಮಾತ್ಮನಃ ।
ಸೋಽಭಿಗಮ್ಯ ಪುರೀಂ ಲಂಕಾಂ ಸುವಿಭಕ್ತಮಹಾಪಥಾಮ್ ।
ಸಂರೂಢಕಕ್ಷ್ಯಾಬಹುಲಂ ಸ್ವಮಂತಃಪುರಮಾವಿಶತ್ ॥೧೨॥

ವೈದೇಹಿಯನ್ನು ರಾವಣನು ಒಯ್ಯುತ್ತಿದ್ದಾಗ ಭಯದಿಂದ ಸಾಗರದ ಅಲೆಗಳು ಹಾಗೆ ನಿಂತುಬಿಟ್ಟವು. ಮೀನುಗಳು ಮಹಾಸರ್ಪಗಳೂ ಸ್ತಬ್ಧವಾದವು. ಅಂತರಿಕ್ಷದಲ್ಲಿದ್ದ ಸಿದ್ಧ ಚಾರಣರು ಸೀತಾಪಹರಣದೊಂದಿಗೆ ರಾವಣನ ಬಾಳಿಗೆ ಕೊನೆಗಾಲವೂ ಬಂತು ಎಂದು ಮಾತಾಡಿಕೊಂಡರು.

ಸಂಕಟದಿಂದ ಚಡಪಡಿಸುತ್ತಿರುವ, ತನ್ನ ಪಾಲಿನ ಮೃತ್ಯುರೂಪಳಾದ ಸೀತೆಯನ್ನು ತೊಡೆಯಲ್ಲಿ ಹಿಡಿದಿಟ್ಟುಕೊಂಡು ಲಂಕಾಪುರಿಯನ್ನು ಪ್ರವೇಶಿಸಿದ.

ಚೆನ್ನಾಗಿ ವಿಂಗಡಿಸಿರುವ ರಾಜಮಾರ್ಗಗಳಿರುವ, ಜನದಟ್ಟನೆಯ ಮಹಾದ್ವಾರಗಳಿರುವ ಲಂಕೆಯನ್ನು ಹೊಕ್ಕು ತನ್ನ ಅಂತಃಪುರವನ್ನು ಪ್ರವೇಶಿಸಿದನು.

ತತ್ರ ತಾಮಸಿತಾಪಾಂಗೀಂ ಶೋಕಮೋಹಪರಾಯಣಾಮ್ ॥೧೩॥

ನಿದಧೇ ರಾವಣಃ ಸೀತಾಂ ಮನೋ ಮಾಯಾಮಿವಾಸುರೀಮ್ ।
ಅಬ್ರವೀಚ್ಚ ದಶಗ್ರೀವಃ ಪಿಶಾಚೀಘೋರದರ್ಶನಾಃ ॥೧೪॥

ಯಥಾ ನೇಮಾಂ ಪುಮಾನ್ ಸ್ತ್ರೀ ವಾ ಸೀತಾಂ ಪಶ್ಯತ್ಯಸಂಮತಃ ।
ಮುಕ್ತಾಮಣಿಸುವರ್ಣಾನಿ ವಸ್ತ್ರಾಣ್ಯಾಭರಣಾನಿ ಚ ॥೧೫॥

ಯದ್ಯದಿಚ್ಛೇತ್ತದೈವಾಸ್ಯಾ ದೇಯಂ ಮಚ್ಛಂದತೋ ಯಥಾ ।
ಯಾ ಚ ವಕ್ಷ್ಯತಿ ವೈದೇಹೀಂ ವಚನಂ ಕಿಂಚಿದಪ್ರಿಯಮ್ ॥೧೬॥

ಅಜ್ಞಾನಾದ್ಯದಿ ವಾ ಜ್ಞಾನಾನ್ನ ತಸ್ಯಾ ಜೀವಿತಂ ಪ್ರಿಯಮ್ ।
ತಥೋಕ್ತಾ ತ್ವ ರಾಕ್ಷಸೀಸ್ತಾಸ್ತು ರಾಕ್ಷಸೇಂದ್ರಃ ಪ್ರತಾಪವಾನ್ ॥೧೭॥

ನಿಷ್ಕ್ರಮ್ಯಾಂತಃ ಪುರಾತ್ತಸ್ಮಾತ್ ಕಿಂ ಕೃತ್ಯಮಿತಿ ಚಿಂತಯನ್ ।
ದದರ್ಶಾಷ್ಟೌ ಮಹಾವೀರ್ಯಾನ್ ರಾಕ್ಷಸಾನ್ ಪಿಶಿತಾಶನಾನ್ ॥೧೮॥

ಸ ತಾನ್ ದೃಷ್ಟ್ವಾ ಮಹಾವೀರ್ಯೋ ವರದಾನೇನ ಮೋಹಿತಃ ।
ಉವಾಚೈತಾನಿದಂ ವಾಕ್ಯಂ ಪ್ರಶಸ್ಯ ಬಲವೀರ್ಯತಃ ॥೧೯॥

ಕಾಡಿಗೆಯಂಥ ಕಪ್ಪುಕಣ್ಣಿನವಳಾದ ಶೋಕ ಮೋಹಗಳಲ್ಲೆ ಮುಳುಗಿರುವ ಆ ಸೀತೆಯನ್ನು ರಾವಣ ಆ ಅಂತಃಪುರದಲ್ಲಿ ಇರಿಸಿದನು. ಮಯಾಸುರ ಮಯಾಮಯಿಯಾದ 'ಸ್ವಯಂಪ್ರಭೆ'ಯನ್ನು ಬಿಲದಲ್ಲಿ ಇಟ್ಟಂತೆ.

ರಾವಣ ನೋಡಲು ಭಯಂಕರವಾದ ಪಿಶಾಚಿಯರಿಗೆ ಆದೇಶಿಸಿದ – ಈ ಸೀತೆಯನ್ನು ಯಾವುದೇ ಹೆಣ್ಣಾಗಲಿ ಗಂಡಾಗಲಿ ನನಗೆ ತಿಳಿಯದಂತೆ ಭೇಟಿಯಾಗಬಾರದು. ಹಾಗೆ ರಕ್ಷಿಸಿರಿ.

ಸೀತೆ ಮುತ್ತು ರತ್ನಗಳನ್ನಾಗಲಿ, ಸುವರ್ಣಾಭರಣಗಳನ್ನಾಗಲಿ, ವಸ್ತ್ರಗಳನ್ನಾಗಲಿ

ಏನನ್ನು ಕೇಳಿದರೂ ಅವುಗಳನ್ನು ಕೊಡಬೇಕು- ನನಗೆ ನೀವು ಕೇಳಿದ್ದನ್ನೆಲ್ಲ ಕೊಡುವಂತೆ.

ತಿಳಿದೋ ತಿಳಿಯದೆಯೋ ಸೀತೆಗೆ ಯಾರಾದರೂ ಅಪ್ರಿಯವನ್ನಾಡಿದರೋ ಅವರು ಪ್ರೀತಿಸುವ ಬದುಕು ಅವರ ಪಾಲಿಗೆ ಇರುವುದಿಲ್ಲ !

ಹಾಗೆ ರಾಕ್ಷಸಿಯರಿಗೆ ಆದೇಶಿಸಿ ಪ್ರತಾಪ ಶಾಲಿ ರಾಕ್ಷಸೇಂದ್ರನು 'ಮುಂದೇನು ಮಾಡಬೇಕು?' ಎಂದು ಚಿಂತಿಸುತ್ತ ಅಂತಃ ಪುರದಿಂದ ಹೊರ ನಡೆದನು. ಮಾಂಸಭಕ್ಷಕರಾದ ಮಹಾವೀರ್ಯವಂತರಾದ ಎಂಟು ಮಂದಿ ರಾಕ್ಷಸರನ್ನು ಕಂಡನು.

ಮಹಾವೀರ್ಯನಾದ ರಾವಣನು ಅವರನ್ನು ನೋಡಿ ಬ್ರಹ್ಮದೇವರಿತ್ತ ವರದಾನದಿಂದ ಮೋಹಿತನಾಗಿ ಆ ರಕ್ಕಸರ ಬಲವೀರ್ಯಗಳನ್ನು ಪ್ರಶಂಸಿಸಿ ಅವರಿಗೆ ಹೀಗೆ ಹೇಳಿದನು.

ನಾನಾಪ್ರಹರಣಾಃ ಕ್ಷಿಪ್ರಮಿತೋ ಗಚ್ಛತ ಸತ್ವರಾಃ ।
ಜನಸ್ಥಾನಂ ಹತಸ್ಥಾನಂ ಭೂತಪೂರ್ವಂ ಖರಾಲಯಮ್ ॥೨೦॥

ತತ್ರೋಷ್ಯತಾಂ ಜನಸ್ಥಾನೇ ಶೂನ್ಯೇ ನಿಹತರಾಕ್ಷಸೇ ।
ಪೌರುಷಂ ಬಲಮಾಶ್ರಿತ್ಯ ತ್ರಾಸಮುತ್ಸೃಜ್ಯ ದೂರತಃ ॥೨೧॥

ಬಲಂ ಹಿ ಸುಮಹದ್ಯನ್ಮೇ ಜನಸ್ಥಾನೇ ನಿವೇಶಿತಮ್ ।
ಸದೂಷಣಖರಂ ಯುದ್ಧೇ ಹತಂ ರಾಮೇಣ ಸಾಯಕೈಃ ॥೨೨॥

ತತ್ರ ಕ್ರೋಧೋ ಮಮಾಮರ್ಷಾದ್ಧೈರ್ಯಸ್ಯೋಪರಿ ವರ್ಧತೇ ।
ವೈರಂ ಚ ಸುಮಹಜ್ಜಾತಂ ರಾಮಂ ಪ್ರತಿ ಸುದಾರುಣಮ್ ॥೨೩॥

ನಿರ್ಯಾತಯಿತುಮಿಚ್ಛಾಮಿ ತಚ್ಚ ವೈರಮಹಂ ರಿಪೋಃ ।
ನ ಹಿ ಲಪ್ಸ್ಯಾಮ್ಯಹಂ ನಿದ್ರಾಮಹತ್ವಾ ಸಂಯುಗೇ ರಿಪುಮ್ ॥೨೪॥

ಬಗೆಬಗೆಯಾದ ಆಯುಧಗಳನ್ನು ಹಿಡಿದು ಕೂಡಲೆ ಇಲ್ಲಿಂದ ಶೀಘ್ರವಾಗಿ ಹಿಂದೆ ಖರನ ರಾಜಧಾನಿಯಾಗಿದ್ದು ಈಗ ಶೂನ್ಯ ಸ್ಥಾನವಾಗಿರುವ ಜನಸ್ಥಾನಕ್ಕೆ ನೀವು ಹೊರಡಿರಿ.

ರಾಕ್ಷಸರೆಲ್ಲ ಸತ್ತು ಈಗ ಶೂನ್ಯವಾದ ಜನಸ್ಥಾನದಲ್ಲಿಯೇ ಪೌರುಷಾವಲಂಬಿ-ಗಳಾಗಿ ಭಯವನ್ನು ದೂರವಿಟ್ಟು ನೆಲೆಸಿರಿ.

ಯಾವ ಜನಸ್ಥಾನದಲ್ಲಿ ಪೂರ್ವದಲ್ಲಿ ಖರದೂಷಣರಿಂದ ಸಹಿತವಾದ ಅಪಾರ ಸೈನ್ಯವನ್ನು ನಾನು ಸ್ಥಾಪಿಸಿದ್ದೆ ರಾಮ ತನ್ನ ಬಾಣಗಳಿಂದ ಯುದ್ಧದಲ್ಲಿ ಖರ ದೂಷಣರೊಂದಿಗೆ ಆ ದೊಡ್ಡ ಸೈನ್ಯವನ್ನೆಲ್ಲ ನಾಶಗೊಳಿಸಿದ.

ರಾಮನ ಧೈರ್ಯವನ್ನು ಸಹಿಸಲಾಗದೆ ಮಹಾಕೋಪ ಬಂದಿದೆ. ರಾಮನ ವಿಷಯದಲ್ಲಿ ದಾರುಣ ವೈರವುಂಟಾಗಿದೆ.

ಆ ವೈರವನ್ನು ಶತ್ರುವಿನ ಮೇಲೆ ತೀರಿಸಿಕೊಳ್ಳಲು ಬಯಸಿದ್ದೇನೆ. ಯುದ್ಧದಲ್ಲಿ ಶತ್ರುರಾಮನನ್ನು ಕೊಲ್ಲದೆ ನನಗೆ ನಿದ್ರೆ ಬರುವುದಿಲ್ಲ.

ತಂ ತ್ವಿದಾನೀಮಹಂ ಹತ್ವಾ ಖರದೂಷಣಘಾತಿನಮ್ ।
ರಾಮಂ ಶರ್ಮೋಪಲಪ್ಸ್ಯಾಮಿ ಧನಂ ಲಬ್ಧ್ವೇವ ನಿರ್ಧನಃ ॥೨೫॥

ಜನಸ್ಥಾನೇ ವಸದ್ಭಿಸ್ತು ಭವದ್ಭೀ ರಾಮಮಾಶ್ರಿತಾ ।
ಪ್ರವೃತ್ತಿರುಪನೇತವ್ಯಾ ಕಿಂ ಕರೋತೀತಿ ತತ್ತ್ವತಃ ॥೨೬॥

ಅಪ್ರಮಾದಾಚ್ಚ ಗಂತವ್ಯಂ ಸರ್ವೈರಪಿ ನಿಶಾಚರೈಃ ।
ಕರ್ತವ್ಯಶ್ಚ ಸದಾ ಯತ್ನೋ ರಾಘವಸ್ಯ ವಧಂ ಪ್ರತಿ ॥೨೭॥

ಯುಷ್ಮಾಕಂ ಚ ಬಲಜ್ಞೋಽಹಂ ಬಹುಶೋ ರಣಮೂರ್ಧನಿ ।
ಅತಶ್ಚಾಸ್ಮಿನ್ ಜನಸ್ಥಾನೇ ಮಯಾ ಯೂಯಂ ನಿಯೋಜಿತಾಃ ॥೨೮॥

ಖರದೂಷಣರನ್ನು ಕೊಂದ ಆ ರಾಮನನ್ನು ಈಗ ಕೊಂದು ನಾನು ಆನಂದ ಪಡುತ್ತೇನೆ. ಬಡವನು ಸಂಪತ್ತನ್ನು ಪಡೆದು ಖುಷಿಪಡುವಂತೆ.

ಜನಸ್ಥಾನದಲ್ಲಿ ವಾಸಮಾಡಿರುವ ನೀವು ರಾಮನ ಪ್ರವೃತ್ತಿಯ ಬಗೆಗೆ ನಿಗಾ ಇಟ್ಟಿರಬೇಕು. ಅವನು ಏನು ಮಾಡುತ್ತಿದ್ದಾನೆಂಬುದನ್ನು ತಿಳಿದು ನನಗೆ ತಿಳಿಸುತ್ತಿರಿ.

ಎಲ್ಲ ನಿಶಾಚರರು ಜನಸ್ಥಾನದಲ್ಲಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ರಾಘವನನ್ನು ಕೊಲ್ಲುವ ಪ್ರಯತ್ನವನ್ನು ಸದಾ ಮಾಡುತ್ತಿರಬೇಕು.

ಅನೇಕ ಬಾರಿ ರಣರಂಗದಲ್ಲಿ ನಿಮ್ಮ ಬಲವನ್ನು ಮನಗಂಡಿದ್ದೇನೆ. ಅದರಿಂದಲೇ ಈ ಜನಸ್ಥಾನದಲ್ಲಿ ನಾನು ನಿಮ್ಮನ್ನು ನಿಯೋಜಿಸುತ್ತಿದ್ದೇನೆ.

ತತಃ ಪ್ರಿಯಂ ವಾಕ್ಯಮುಪೇತ್ಯ ರಾಕ್ಷಸಾ
ಮಹಾರ್ಥಮಷ್ಟಾವಭಿವಾದ್ಯ ರಾವಣಮ್ ।
ವಿಹಾಯ ಲಂಕಾಂ ಸಹಿತಾಃ ಪ್ರತಸ್ಥಿರೇ
ಯತೋ ಜನಸ್ಥಾನಮಲಕ್ಷ್ಯದರ್ಶನಾಃ ॥೨೯॥

ತತಸ್ತು ಸೀತಾಮುಪಲಭ್ಯ ರಾವಣಃ
ಸುಸಂಪ್ರಹೃಷ್ಟಃ ಪರಿಗೃಹ್ಯ ಮೈಥಿಲೀಮ್ ।
ಪ್ರಸಜ್ಯ ರಾಮೇಣ ಚ ವೈರಮುತ್ತಮಂ
ಬಭೂವ ಮೋಹಾನ್ಮುದಿತಃ ಸ ರಾಕ್ಷಸಃ ॥೩೦॥

ಬಳಿಕ ಮಹಾರ್ಥಯುಕ್ತವಾದ ರಾವಣನ ಪ್ರಿಯವಾಕ್ಯವನ್ನು ಕೇಳಿ ಎಂಟು ಮಂದಿ ರಾಕ್ಷಸರು ರಾವಣನಿಗೆ ಅಭಿವಾದನ ಮಾಡಿ ಎಲ್ಲರೂ ಒಟ್ಟಾಗಿ ಲಂಕೆಯನ್ನು ಬಿಟ್ಟು ಯಾರಿಗೂ ಕಾಣದಂತೆ ಜನಸ್ಥಾನದ ಕಡೆಗೆ ತೆರಳಿದರು.

ಅನಂತರ ರಾವಣನು ಸೀತೆಯನ್ನು ಪಡೆದು ತುಂಬ ತುಂಬ ಹರ್ಷಗೊಂಡವನಾಗಿ ಮೈಥಿಲಿಯನ್ನು ಅಡಗಿಸಿಟ್ಟು ರಾಮನೊಂದಿಗೆ ಗಾಢವಾದ ವೈರವನ್ನು ಬೆಳೆಸಿಕೊಂಡು ಮೋಹವಶನಾಗಿ ಮುದಗೊಂಡನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತನಾಲ್ಕನೇ ಸರ್ಗ ಮುಗಿಯಿತು.

❖

ಪಂಚಪಂಚಾಶಃ ಸರ್ಗಃ

ಕಥಾಸಾರಾಂಶ– ಎಂಟು ರಕ್ಕಸರಿಗೆ ರಾಮನ ಸುದ್ದಿ ತಿಳಿಸಲು, ಕೊಲ್ಲುವ ವ್ಯವಸ್ಥೆಗಳನ್ನು ಮಾಡುವಂತೆ ತಿಳಿಸಿದ ರಾವಣ ಕಾಮಬಾಣಪೀಡಿತನಾಗಿ ಸೀತೆಯನ್ನೆ ಚಿಂತಿಸುತ್ತ ಅವಳಿರುವ ಸ್ಥಳಕ್ಕೆ ಬಂದ. ಶೋಕಭಾರದಿಂದ ಬಾಧಿತಳಾಗಿ ತುಂಬ ಕಂಬನಿ ಸುರಿಸುತ್ತ ಮೃಗಗಳ ಹಿಂಡಿನಿಂದ ತಪ್ಪಿಸಿಕೊಂಡು ಒಂಟಿಯಾಗಿ ನಾಯಿಗಳ ಆಕ್ರಮಣಕ್ಕೆ ಬಲಿಯಾದ ಹೆಣ್ಣು ಮೃಗದ ದೈನ್ಯಸ್ಥಿತಿಯಲ್ಲಿದ್ದಳು ಸೀತೆ.

ಅವಳನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ತನ್ನ ಗೃಹದ ವೈಭವವನ್ನು ಪರಿಚಯಿಸಿದ.

ಸುಂದರಗಳಾದ ಅಂತಸ್ತುಗಳ ಪ್ರಾಸಾದದಿಂದ ತುಂಬಿದ, ಸಾವಿರಾರು ಹೆಂಗಳೆ–ಯರು ಆಶ್ರಯಿಸಿರುವ, ವಜ್ರ ವೈಢೂರ್ಯಖಚಿತ ಚಿತ್ತಾಕರ್ಷಕ ಚಿತ್ತಾರಗಳಿರುವ ಬಂಗಾರದ ಬೆಳ್ಳಿಯ, ಸ್ಫಟಿಕಮಯಗಳಾದ ಅನೇಕ ಕಂಬಗಳ ಶೋಭೆಯಿರುವ, ಬಂಗಾರಮಯ ಜಾಲರಿಗಳಿರುವ ಮಹಲುಗಳ, ಬಿಳಿಯ ಮಣಿಗಳಿಂದ ಅಲಂಕೃತ–ವಾದ ಭೂ ಭಾಗಗಳಿರುವ ತನ್ನ ಮನೆಯನ್ನು ಸೀತೆಗೆ ತೋರಿಸಿದ. ಬಗೆ ಬಗೆಯ ಮರಗಳ ಗುಂಪಿನ ತಂಪು ನೆರಳಿರುವ, ದೀರ್ಘಪುಷ್ಕರಿಣಿಗಳನ್ನು ತೋರಿಸಿದ ರಾವಣ.

ಸೀತೆಯ ಮನದಿ ಆಸೆ ಹುಟ್ಟಿಸುವ ಭಾವದಿಂದ ಮಾತನಾಡಿದ – ಮೂವತ್ತೆರಡು ಕೋಟಿ ರಕ್ಕಸರಿದ್ದಾರೆ ಅವರಿಗೆಲ್ಲ ನಾನೇ ಪ್ರಭು. ಈ ವೈಭವದ ಸಾಮ್ರಾಜ್ಯ ಈ ಸೊತ್ತು, ಈ ಬದುಕು ಎಲ್ಲ ನಿನ್ನನ್ನು ಆಧರಿಸಿದೆ – ಸೀತೆ !

ಸಾವಿರಾರು ಸತಿಯರಿದ್ದಾರೆ. ನನ್ನ ಭಾರ್ಯೆಯಾಗಿ ನೀನೆ ಅವರಿಗೆಲ್ಲ ಒಡತಿ–ಯಾಗು.

ನೂರು ಯೋಜನದ ಈ ಲಂಕೆಯ ಸುತ್ತಲೂ ಸಾವಿರಾರು ರಕ್ಕಸರ ಕಾವಲಿದೆ. ಇಂದ್ರ ಸಹಿತ ಸುರ ಅಸುರರೂ ಯಾರೂ ಇದನ್ನು ದಾಟಿ ನನ್ನ ಮೇಲೆ ಆಕ್ರಮಣ ಮಾಡಲಾರರು.

ದೇವ ಗಂಧರ್ವ ಪಕ್ಷಿಗಳಲ್ಲಿ ನನ್ನ ವೀರ್ಯಕ್ಕೆ ಸಮರಾದವರು ಯಾರೂ ಇಲ್ಲ.

ರಾಜ್ಯಭ್ರಷ್ಟನೂ ದೀನನೂ ಕ್ಷೀಣಾಯುವೂ ಅಲ್ಪ ಸಮರ್ಥನೂ ಆದ ಅಲ್ಪ–ಮಾನುಷ ರಾಮನಿಂದ ನಿನಗೇನು ಪ್ರಯೋಜನ !

ನನ್ನನ್ನೆ ಭರ್ತಾರನನ್ನಾಗಿ ಸ್ವೀಕರಿಸು. ಯೌವನ ಅಸ್ಥಿರ. ಬೇಗನೆ ನನ್ನೊಂದಿಗೆ ರಮಿಸು. ಮಾನವ ರಾಮನನ್ನು ನೆನಪಿಸಿಕೊಳ್ಳದಿರು.

ಆಕಾಶದಲ್ಲಿ ಬೀಸುವ ಗಾಳಿಯನ್ನು ಹಗ್ಗದಿಂದ ಕಟ್ಟಿ ಹಾಕಲು ಸಾಧ್ಯವಿಲ್ಲ. ಪ್ರಜ್ವಲಿಸುವ ಬೆಂಕಿಯ ಜ್ವಾಲೆಯನ್ನು ಹಿಡಿಯಲು ಸಾಧ್ಯವಿಲ್ಲ. ಆದರಂತೆ ನನ್ನ ಬಾಹುಬಲದಿಂದ ಪಾಲಿತಳಾದ ನಿನ್ನನ್ನು ನನ್ನಿಂದ ಬಿಡಿಸಿಕೊಂಡು ಹೋಗಬಲ್ಲ ವಿಕ್ರಮವೀರ ಮೂರು ಲೋಕದಲ್ಲೂ ಇಲ್ಲ. ಲಂಕೆಯ ಈ ಸಾಮ್ರಾಜ್ಯವನ್ನು ನೀನು ಆಳು. ನಾವೆಲ್ಲ ಏನು ದೇವತೆಗಳೂ ಕೂಡ ನಿನ್ನ ಆಳುಗಳಾಗುತ್ತೇವೆ.

ಯಾವುದೋ ಪಾಪದ ಫಲ – ಇಷ್ಟು ದಿವಸ ವನವಾಸವಾಯಿತು. ಈಗ ಪುಣ್ಯದ ಫಲವಾಗಿ ನನ್ನನ್ನು ಭೋಗಿಸು. ಕುಬೇರನಿಂದ ಅಪಹರಿಸಿ ಕಸಿದುಕೊಂಡ ಪುಷ್ಪಕವಿಮಾನದಲ್ಲಿ ಕುಳಿತು ಆಗಸದಲ್ಲಿ ವಿಹರಿಸೋಣ.

ಸಾಕು ಸಂಕೋಚ. ಧರ್ಮಲೋಪದ ಭಯ ಬೇಡ. ರಾವಣ ನಿನ್ನೆಡೆ ಬಂದಿರುವುದು ದೈವಸಂಕಲ್ಪದ ಹೊಸ ಆವಿಷ್ಕಾರ. ಈ ನಿನ್ನ ಸ್ನಿಗ್ಧ ಪಾದಗಳಲ್ಲಿ ನಾನು ತಲೆಯಿಟ್ಟು ಬೇಡಿಕೊಳ್ಳುತ್ತಿದ್ದೇನೆ. ಈ ರಾವಣ ಈತನಕ ಯಾವ ಹೆಣ್ಣಿಗೂ ತಲೆ ಬಾಗಿದವನಲ್ಲ''.

ಪಾಪಿ ರಾವಣ ಹೀಗೆಲ್ಲ ಹರಟುತ್ತ ಯಮವಶನಾಗಿ ಈ ಸೀತೆ ನನಗೆ ದಕ್ಕುವಳೆಂದು ಭಾವಿಸಿದ್ದಾನೆ !

❖

ಸೀತಾವಿಲೋಭನೋದ್ಯಮಃ

ಸಂದಿಶ್ಯ ರಾಕ್ಷಸಾನ್ ಘೋರಾನ್ ರಾವಣೋಽಷ್ಟೌ ಮಹಾಬಲಾನ್ ।
ಆತ್ಮಾನಂ ಬುದ್ಧಿವೈಕ್ಲವ್ಯಾತ್ ಕೃತಕೃತ್ಯಮಮನ್ಯತ ॥೧॥

ಸ ಚಿಂತಯಾನೋ ವೈದೇಹೀಂ ಕಾಮಬಾಣಪ್ರಪೀಡಿತಃ ।
ಪ್ರವಿವೇಶ ಗೃಹಂ ರಮ್ಯಂ ಸೀತಾಂ ದ್ರಷ್ಟುಮಭಿತ್ವರನ್ ॥೨॥

ಸ ಪ್ರವಿಶ್ಯ ತು ತದ್ವೇಶ್ಮ ರಾವಣೋ ರಾಕ್ಷಸಾಧಿಪಃ ।
ಅಪಶ್ಯದ್ರಾಕ್ಷಸೀಮಧ್ಯೇ ಸೀತಾಂ ಶೋಕಪರಾಯಣಾಮ್ ॥೩॥

ಅಶ್ರುಪೂರ್ಣಮುಖೀಂ ದೀನಾಂ ಶೋಕಭಾರಾಭಿಪೀಡಿತಾಮ್ ।
ವಾಯುವೇಗೈರಿವಾಕ್ರಾಂತಾಂ ಮಜ್ಜಂತೀಂ ನಾವಮರ್ಣವೇ ॥೪॥

ಮೃಗಯೂಥಪರಿಭ್ರಷ್ಟಾಂ ಮೃಗೀಂ ಶ್ವಭಿರಿವಾವೃತಾಮ್ ।
ಅಧೋಮುಖಮುಖೀಂ ಸೀತಾಮಭ್ಯೇತ್ಯ ಚ ನಿಶಾಚರಃ ॥೫॥

ತಾಂ ತು ಶೋಕಪರಾಂ ದೀನಾಮವಶಾಂ ರಾಕ್ಷಸಾಧಿಪಃ ।
ಸ ಬಲಾದ್ದರ್ಶಯಾಮಾಸ ಗೃಹಂ ದೇವಗೃಹೋಪಮಮ್ ॥೬॥

ಮಹಾಬಲರಾದ ಎಂಟು ಮಂದಿ ಘೋರ ರಾಕ್ಷಸರಿಗೆ ಜನಸ್ಥಾನಕ್ಕೆ ಹೋಗು-ವಂತೆ ಆದೇಶಿಸಿ ರಾವಣನು ವಿಪರೀತ ಬುದ್ಧಿಯವನಾದುದರಿಂದ ತನ್ನನ್ನು ಕೃತಕೃತ್ಯನೆಂದು ಭಾವಿಸಿದ.

ಕಾಮನ ಬಾಣಗಳಿಗೆ ತನ್ನನ್ನು ಸಮರ್ಪಿಸಿಕೊಂಡ ರಾವಣನು ವೈದೇಹಿಯನ್ನೆ ಚಿಂತಿಸುತ್ತ ಸೀತೆಯನ್ನು ಕಾಣಲು ರಮ್ಯವಾದ ಅಂತಃಪುರವನ್ನು ಅವಸರಗೊಂಡು ಪ್ರವೇಶಿಸಿದನು.

ರಾಕ್ಷಸಾಧಿಪ ರಾವಣ ಆ ಮನೆಯನ್ನು ಪ್ರವೇಶಿಸಿ ರಾಕ್ಷಸಿಯರ ಮಧ್ಯದಲ್ಲಿದ್ದ ಶೋಕಪರಾಯಣಳಾದ ಸೀತೆಯನ್ನು ಕಂಡನು.

ಕಣ್ಣೀರು ತುಂಬಿದ ಮುಖದವಳು, ದೀನಳು, ಶೋಕಭಾರದಿಂದ ಪೀಡಿತಳು, ಗಾಳಿಯ ವೇಗಕ್ಕೆ ತುತ್ತಾಗಿ ಸಮುದ್ರದಲ್ಲಿ ಮುಳುಗುತ್ತಿರುವ ನಾವೆಯಂತಿರು-ವವಳು. ಜಿಂಕೆಗಳ ಗುಂಪಿನಿಂದ ತಪ್ಪಿಸಿಕೊಂಡು ಒಂಟಿಯಾದ, ನಾಯಿಗಳಿಂದ ಆವರಿಸಲ್ಪಟ್ಟ ಹೆಣ್ಣು ಜಿಂಕೆಯಂತಾದವಳು, ಶೋಕದಲ್ಲಿ ಮುಳುಗಿದವಳು, ದೀನಳಾಗಿ ಸ್ವಾಧೀನಳಾಗದಿರುವ ತಲೆ ಕೆಳಗೆ ಮಾಡಿಕೊಂಡಿದ್ದ ಸೀತೆಯನ್ನು ನಿಶಾಚರ ರಾವಣ ಕಂಡನು. ಅವಳನ್ನು ಬಲಾತ್ಕಾರವಾಗಿ ಕರೆದುಕೊಂಡು ದೇವಗೃಹದಂತಿರುವ ತನ್ನ ಮನೆಯನ್ನೆಲ್ಲ ತೋರಿಸಿದ.

ಹಮ್ಯ್ರಪ್ರಾಸಾದಸಂಬಾಧಂ ಸ್ತ್ರೀಸಹಸ್ರನಿಷೇವಿತಮ್ ।
ನಾನಾಪಕ್ಷಿಗಣೈರ್ಜುಷ್ಟಂ ನಾನಾರತ್ನಸಮನ್ವಿತಮ್ ॥೭॥

ದಾಂತಕೈಸ್ತಾಪನೀಯೈಶ್ಚ ಸ್ಫಾಟಿಕೈ ರಾಜತೈರಪಿ ।
ವಜ್ರವೈಡೂರ್ಯಚಿತ್ರೈಶ್ಚ ಸ್ತಂಭೈರ್ದೃಷ್ಟಿಮನೋಹರೈಃ ॥೮॥

ದಿವ್ಯದುಂದುಭಿನಿರ್ಹ್ರಾದಂ ತಪ್ತಕಾಂಚನತೋರಣಮ್ ।
ಸೋಪಾನಂ ಕಾಂಚನಂ ಚಿತ್ರಮಾರುರೋಹ ತಯಾ ಸಹ ॥೯॥

ದಾಂತಕಾ ರಾಜತಾಶ್ಚೈವ ಗವಾಕ್ಷಾಃ ಪ್ರಿಯದರ್ಶನಾಃ ।
ಹೇಮಜಾಲವೃತಾಶ್ಚಾಸಂಸ್ತತ್ರ ಪ್ರಾಸಾದಪಂಕ್ತಯಃ ॥೧೦॥

ಸುಧಾಮಣಿವಿಚಿತ್ರಾಣಿ ಭೂಮಿಭಾಗಾನಿ ಸರ್ವಶಃ ।
ದಶಗ್ರೀವಃ ಸ್ವಭವನೇ ಪ್ರಾದರ್ಶಯತ ಮೈಥಿಲೀಮ್ ॥೧೧॥

ದೀರ್ಘಿಕಾಃ ಪುಷ್ಕರಿಣ್ಯಶ್ಚ ನಾನಾವೃಕ್ಷಸಮನ್ವಿತಾಃ ।
ರಾವಣೋ ದರ್ಶಯಾಮಾಸ ಸೀತಾಂ ಶೋಕಪರಾಯಣಾಮ್ ॥೧೨॥

ದರ್ಶಯಿತ್ವಾ ತು ವೈದೇಹ್ಯಾಃ ಕೃತ್ಸ್ನಂ ತದ್ಭವನೋತ್ತಮಮ್ ।
ಉವಾಚ ವಾಕ್ಯಂ ಪಾಪಾತ್ಮಾ ಸೀತಾಂ ಲೋಭಿತುಮಿಚ್ಛಯಾ ॥೧೩॥

ಸಾವಿರಾರು ಸ್ತ್ರೀಯರಿಂದ ನಿಷೇವಿತವೂ, ಬಗೆಬಗೆಯ ಹಕ್ಕಿಗಳ ಗುಂಪುಗಳಿಂದ ಸೇವಿತವೂ, ನಾನಾ ರತ್ನಗಳಿಂದ ಕೂಡಿರುವ, ಸುವರ್ಣಮಯ, ಸ್ಫಟಿಕಮಯ, ರಜತಮಯಗಳಾದ ವಜ್ರ ವೈಢೂರ್ಯಖಚಿತಗಳಾದ, ನಯನ ಮನೋಹರ ಕಂಬಗಳಿಂದ ಅಲಂಕೃತವಾದ ಅರಮನೆಗಳಿರುವಂತಹ, ಎತ್ತರದ ಅನೇಕ ಅಂತಸ್ತಿನ ಮಹಲುಗಳಿಂದ ನಿಬಿಡವಾಗಿತ್ತು. ದಿವ್ಯದುಂದುಭಿಗಳ ನಿನಾದಗಳಿಂದ ತುಂಬಿತ್ತು. ಬಂಗಾರದ ತೋರಣಗಳಿದ್ದವು. ಚಿತ್ರಮಯವಾದ ಬಂಗಾರದ ಮೆಟ್ಟಿಲುಗಳನ್ನು ಸೀತೆಯೊಡನೆ ಹತ್ತಿದನು. ದಂತಗಳ ಬೆಳ್ಳಿಗಳ ಕೆತ್ತನೆಗಳಿಂದ ಕೂಡಿದ ಕಿಟಕಿಗಳಿದ್ದವು. ಅವು ನೋಡಲು ಸುಂದರವಾಗಿದ್ದವು.

ಬಂಗಾರದ ಜಾಲರಿಗಳಿಂದ ಕಂಗೊಳಿಸುವ ಪ್ರಾಸಾದ ಸಾಲುಗಳಿದ್ದವು. ನೆಲದಲ್ಲೆಲ್ಲ ಅಮೃತಶಿಲೆಯ ಹಾಸುಗಲ್ಲುಗಳು ವಿಚಿತ್ರವಾಗಿದ್ದವು. ದಶಗ್ರೀವ ತನ್ನ ಮನೆಯ ಈ ವೈಭವವನ್ನೆಲ್ಲ ಮೈಥಿಲಿಗೆ ತೋರಿಸಿದ. ನಾನಾ ವೃಕ್ಷಗಳಿಂದ ಸುತ್ತುವರಿದ ದೀರ್ಘವಾದ ಪುಷ್ಕರಿಣಿಗಳನ್ನು ಶೋಕಪರಾಯಣೆ ಸೀತೆಗೆ ರಾವಣ ತೋರಿಸಿದ. ಉತ್ತಮವಾದ ಆ ಅರಮನೆಯನ್ನೆಲ್ಲ ವೈದೇಹಿಗೆ ತೋರಿಸಿ ಪಾಪಮನದ ರಾವಣ ಸೀತೆಯನ್ನು ಲೋಭಗೊಳಿಸಲು ಬಯಸಿ ಮಾತನಾಡಿದನು.

ದಶರಾಕ್ಷಸಕೋಟ್ಯಶ್ಚ ದ್ವಾವಿಂಶತಿರಥಾಪರಾಃ ।
ತೇಷಾಂ ಪ್ರಭುರಹಂ ಸೀತೇ ಸರ್ವೇಷಾಂ ಭೀಮಕರ್ಮಣಾಮ್ ॥೧೪॥

ವರ್ಜಯಿತ್ವಾ ಜರಾವೃದ್ಧಾನ್ ಬಾಲಾಂಶ್ಚ ರಜನೀಚರಾನ್ ।
ಸಹಸ್ರಮೇಕಮೇಕಸ್ಯ ಮಮ ಕಾರ್ಯಪುರಃಸರಮ್ ॥೧೫॥

ಯದಿದಂ ರಾಜತಂತ್ರಂ ಮೇ ತ್ವಯಿ ಸರ್ವಂ ಪ್ರತಿಷ್ಠಿತಮ್ ।
ಜೀವಿತಂ ಚ ವಿಶಾಲಾಕ್ಷಿ ತ್ವಂ ಮೇ ಪ್ರಾಣೈರ್ಗರೀಯಸೀ ॥೧೬॥

ಬಹೂನಾಂ ಸ್ತ್ರೀಸಹಸ್ರಾಣಾಂ ಮಮ ಯೋಽಸೌ ಪರಿಗ್ರಹಃ ।
ತಾಸಾಂ ತ್ವಮೀಶ್ವರೀ ಸೀತೇ ಮಮ ಭಾರ್ಯಾ ಭವ ಪ್ರಿಯೇ ॥೧೭॥

ಸಾಧು ಕಿಂ ತೇऽನ್ಯಥಾ ಬುದ್ಧ್ಯಾ ರೋಚಯಸ್ವ ವಚೋ ಮಮ ।
ಭಜಸ್ವ ಮಾಭಿತಪ್ತಸ್ಯ ಪ್ರಸಾದಂ ಕರ್ತುಮರ್ಹಸಿ ॥೧೮॥

ಸೀತೆ ಮೂವತ್ತೆರಡು ಕೋಟಿ ರಾಕ್ಷಸರು ನನ್ನ ರಾಜ್ಯದಲ್ಲಿ ಇದ್ದಾರೆ. ಘೋರ-ಕರ್ಮದ ಅವರಿಗೆಲ್ಲ ನಾನು ಒಡೆಯ.

ಇವರಲ್ಲಿ ಮುದುಕರು ಬಾಲಕರು ಆದ ರಾಕ್ಷಸರು ಸೇರಿಲ್ಲ. ನನ್ನ ಸೇವೆಗೆಂದೇ ಒಂದು ಸಾವಿರ ರಕ್ಕಸರು ಇದ್ದಾರೆ !

ಈ ಎಲ್ಲ ರಾಜತಂತ್ರ ಹಾಗು ನನ್ನ ಜೀವಿತ ಎಲ್ಲವೂ ನಿನ್ನಾಧೀನ. ವಿಶಾಲಾಕ್ಷಿಯೇ ! ನೀನು ನನಗೆ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳು.

ನನ್ನ ಪತ್ನಿಯರಾದ ಸಾವಿರಾರು ಸ್ತ್ರೀಯರಿಗೆ ನೀನೇ ! ಸ್ವಾಮಿನಿಯಾಗು. ಪ್ರಿಯೆ ! ಸೀತೆ ! ನೀನು ನನ್ನ ಹೆಂಡತಿಯಾಗು.

. ಬೇರೆ ಯೋಚನೆಯಿಂದೇನು ಪ್ರಯೋಜನ ? ನನ್ನ ಮಾತನ್ನು ಒಪ್ಪಿಕೋ. ನನ್ನನ್ನು ಸೇವಿಸು. ಮದನ ಬಾಧೆಯಿಂದ ಸಂತೃಪ್ತನಾದ ನನ್ನಲ್ಲಿ ಕೃಪೆದೋರು.

ಪರಿಕ್ಷಿಪ್ತಾ ಸಮುದ್ರೇಣ ಲಂಕೇಯಂ ಶತಯೋಜನಾ ।
ನೇಯಂ ಧರ್ಷಯಿತುಂ ಶಕ್ಯಾ ಸೇಂದ್ರೈರಪಿ ಸುರಾಸುರೈಃ ॥೧೯॥

ನ ದೇವೇಷು ನ ಯಕ್ಷೇಷು ನ ಗಂಧರ್ವೇಷು ನರ್ಷಿಷು ।
ಅಹಂ ಪಶ್ಯಾಮಿ ಲೋಕೇಷು ಯೋ ಮೇ ವೀರ್ಯಸಮೋ ಭವೇತ್ ॥

ರಾಜ್ಯಭ್ರಷ್ಟೇನ ದೀನೇನ ತಾಪಸೇನ ಪದಾತಿನಾ ।
ಕಿಂ ಕರಿಷ್ಯಸಿ ರಾಮೇಣ ಮಾನುಷೇಣಾಲ್ಪತೇಜಸಾ ॥೨೧॥

ಭಜಸ್ವ ಸೀತೇ ಮಾಮೇವ ಭರ್ತಾಹಂ ಸದೃಶಸ್ತವ ।
ಯೌವನಂ ಹ್ಯಧ್ರುವಂ ಭೀರು ರಮಸ್ವೇಹ ಮಯಾ ಸಹ ॥೨೨॥

ದರ್ಶನೇ ಮಾ ಕೃಥಾ ಬುದ್ಧಿಂ ರಾಘವಸ್ಯ ವರಾನನೇ ।
ಕಾಸ್ಯ ಶಕ್ತಿರಿಹಾಗಂತುಮಪಿ ಸೀತೇ ಮನೋರಥೈಃ ॥೨೩॥

ನ ಶಕ್ಯೋ ವಾಯುರಾಕಾಶೇ ಪಾಶೈರ್ಬದ್ಧುಂ ಮಹಾಜವಃ ।
ದೀಪ್ಯಮಾನಸ್ಯ ಚಾಪ್ಯಗ್ನೇರ್ಗ್ರಹೀತುಂ ವಿಮಲಾಂ ಶಿಖಾಂ ॥೨೪॥

ತ್ರಯಾಣಾಮಪಿ ಲೋಕಾನಾಂ ನ ತಂ ಪಶ್ಯಾಮಿ ಶೋಭನೇ ।
ವಿಕ್ರಮೇಣ ನಯೇದ್ಯಸ್ತಾ ತ್ವಂ ಮದ್ಬಾಹುಪರಿಪಾಲಿತಾಮ್ ॥೨೫॥

ಲಂಕಾಯಾಂ ಸುಮಹದ್ರಾಜ್ಯಮಿದಂ ತ್ವಮನುಪಾಲಯ ।
ತ್ವತ್ಪ್ರೇಷ್ಯಾ ಮದ್ವಿಧಾಶ್ಚೈವ ದೇವಾಶ್ಚಾಪಿ ಚರಾಚರಾಃ ॥೨೬॥

ಸಾವಿರಾರು ರಕ್ಕಸರಿಂದ ಸುತ್ತಲೂ ರಕ್ಷಿಸಲ್ಪಟ್ಟಿರುವ ನೂರು ಯೋಜನದ ಈ ಲಂಕೆಯನ್ನು ಇಂದ್ರಸಹಿತರಾದ ಸುರಾಸುರರಿಂದಲೂ ಆಕ್ರಮಿಸಲು ಸಾಧ್ಯವಿಲ್ಲ.

ನನ್ನ ವೀರ್ಯಕ್ಕೆ ಸರಿಸಾಟಿಯಾದವನನ್ನು ದೇವ ಯಕ್ಷ ಗಂಧರ್ವ ಪಕ್ಷಿಗಳಲ್ಲಿ ಈ ಲೋಕದಲ್ಲಿಯೇ ನಾನು ಕಂಡಿಲ್ಲ.

ರಾಜ್ಯಭ್ರಷ್ಟನು, ದೀನನು, ತಾಪಸನು, ಕ್ಷೀಣಾಯುಷ್ಯನು, ಅಲ್ಪಸಾಮರ್ಥ್ಯದ ಮಾನುಷನೂ ಆದ ರಾಮನಿಂದ ಏನು ಮಾಡುವಿ ?

ಸೀತೆ ! ನನ್ನನ್ನೆ ವರಿಸು. ನಾನು ನಿನಿಗೊಪ್ಪುವ ಭರ್ತಾ. ಭೀರು ! ಯೌವನ ನಶ್ವರ. ಇಲ್ಲಿ ನನ್ನೊಂದಿಗೆ ರಮಿಸು.

ಸುಂದರಮೊಗದವಳೇ ! ರಾಘವನನ್ನು ಕಾಣಬೇಕೆಂದು ಬಯಸದಿರು. ಸೀತೆ ! ಇಲ್ಲಿಗೆ ಬರಲು ಮನಸ್ಸು ಮಾಡಲೂ ರಾಮನಿಗೆ ಏನು ಶಕ್ತಿ ಇದೆ ?

ಆಗಸದಲ್ಲಿ ಮಹಾವೇಗದ ಗಾಳಿಯನ್ನು ಯಾರಿಂದ ತಾನೆ ಪಾಶಗಳಿಂದ ಕಟ್ಟಲು ಸಾಧ್ಯ ? ಅಥವಾ ಪ್ರಜ್ವಲಿಸುತ್ತಿರುವ ಬೆಂಕಿಯ ಜ್ವಾಲೆಯನ್ನಾದರೂ ಯಾರು ಹಿಡಿಯಲು ಸಾಧ್ಯ ?

ಮೂರು ಲೋಕದಲ್ಲಿಯೂ ನನ್ನ ಬಾಹುಬಲದಿಂದ ಸುರಕ್ಷಿತಳಾದ ನಿನ್ನನ್ನು ಪರಾಕ್ರಮತೋರಿ ಒಯ್ಯಲು ಯಾರಿಂದ ಸಾಧ್ಯ ?

ಲಂಕೆಯಲ್ಲಿರುವ ಈ ಸುಸಮೃದ್ಧ ಸಾಮ್ರಾಜ್ಯವನ್ನು ಇನ್ನು ನೀನೆ ಆಳುವವಳಾಗು. ನಾನು ನನ್ನಂತಹ ವೀರರು ದೇವತೆಗಳು ಚರಾಚರಗಳೆಲ್ಲ ನಿನ್ನ ಸೇವಕರು.

ಅಭಿಷೇಕೋದಕ್ಲಿನ್ನಾ ತುಷ್ಟಾ ಚ ರಮಯಸ್ವ ಮಾಮ್ ।

ಪಟ್ಟಾಭಿಷೇಕ ಜಲದಿಂದ ತೋಯ್ದುವಳಾಗಿ ನನ್ನೊಂದಿಗೆ ರಮಿಸು.

ದುಷ್ಕೃತಂ ಯತ್ಪುರಾ ಕರ್ಮ ವನವಾಸೇನ ತದ್ಗತಮ್ ॥೨೭॥

ಯಶ್ಚ ತೇ ಸುಕೃತೋ ಧರ್ಮಸ್ತಸ್ಯೇಹ ಫಲಮಾಪ್ನುಹಿ ।
ಇಹ ಮಾಲ್ಯಾನಿ ಸರ್ವಾಣಿ ದಿವ್ಯಗಂಧಾನಿ ಮೈಥಿಲಿ ॥೨೮॥

ಭೂಷಣಾನಿ ಚ ಮುಖ್ಯಾನಿ ಸೇವಸ್ವ ಚ ಮಯಾ ಸಹ ।
ಪುಷ್ಪಕಂ ನಾಮ ಸುಶ್ರೋಣಿ ಭ್ರಾತುರ್ವೈಶ್ರವಣಸ್ಯ ಮೇ ॥೨೯॥

ವಿಮಾನಂ ಸೂರ್ಯಸಂಕಾಶಂ ತರಸಾ ನಿರ್ಜಿತಂ ಮಯಾ ।
ವಿಶಾಲಂ ರಮಣೀಯಂ ಚ ತದ್ವಿಮಾನಂ ಮನೋಜವಮ್ ॥೩೦॥

ತತ್ರ ಸೀತೇ ಮಯಾ ಸಾರ್ಧಂ ವಿಹರಸ್ವ ಯಥಾಸುಖಮ್ ।
ವದನಂ ಪದ್ಮಸಂಕಾಶಂ ವಿಮಲಂ ಚಾರುದರ್ಶನಮ್ ॥೩೧॥

ಶೋಕಾರ್ತಂ ತು ವರಾರೋಹೇ ನ ಭ್ರಾಜತಿ ವರಾನನೇ ।
ಏವಂ ವದತಿ ತಸ್ಮಿನ್ ಸಾ ವಸ್ತ್ರಾಂತೇನ ವರಾಂಗನಾ ॥೩೨॥

ಪಿಧಾಯೇಂದುನಿಭಂ ಸೀತಾ ಮುಖಮಶ್ರೂಣ್ಯವರ್ತಯತ್ ।
ಧ್ಯಾಯಂತೀ ತಾಮಿವಾಸ್ವಸ್ಥಾಂ ದೀನಾಂ ಚಿಂತಾಹತಪ್ರಭಾಮ್ ॥೩೩॥

ಉವಾಚ ವಚನಂ ಪಾಪೋ ರಾವಣೋ ರಾಕ್ಷಸೇಶ್ವರಃ ।
ಅಲಂ ವ್ರೀಡೇನ ವೈದೇಹಿ ಧರ್ಮಲೋಪಕೃತೇ ನ ಚ ॥೩೪॥

ಆರ್ಷೋಽಯಂ ದೈವನಿಷ್ಯಂದೋ ಯಸ್ತಾ ಮಭಿಗಮಿಷ್ಯತಿ ।
ಏತೌ ಪಾದೌ ಮಯಾ ಸ್ನಿಗ್ಧೌ ಶಿರೋಭಿಃ ಪರಿಪೀಡಿತೌ ॥೩೫॥

ಪ್ರಸಾದಂ ಕುರು ಮೇ ಕ್ಷಿಪ್ರಂ ವಶ್ಯೋ ದಾಸೋಽಹಮಸ್ಮಿ ತೇ ।
ಇಮಾಃ ಶೂನ್ಯಾ ಮಯಾ ವಾಚಃ ಶುಷ್ಯಮಾಣೇನ ಭಾಷಿತಾಃ ॥೩೬॥

ನ ಚಾಪಿ ರಾವಣಃ ಕಾಂಚಿನ್ಮೂರ್ಧ್ನಾ ಸ್ತ್ರೀಂ ಪ್ರಣಮೇತ ಹ ।
ಏವಮುಕ್ತ್ವಾ ದಶಗ್ರೀವೋ ಮೈಥಿಲೀಂ ಜನಕಾತ್ಮಜಾಮ್ ॥೩೭॥

ಕೃತಾಂತವಶಮಾಪನ್ನೋ ಮಮೇಯಮಿತಿ ಮನ್ಯತೇ ॥

ಜನ್ಮಾಂತರದ ಪಾಪವೇನಿತ್ತೋ ಅದು ವನವಾಸದಲ್ಲಿ ಮುಗಿದು ಹೋಯಿತು. ಮತ್ತೇನು ಪುಣ್ಯಮಾಡಿರುವೆಯೋ ಆ ಪುಣ್ಯ ಫಲವನ್ನು ಇಲ್ಲಿ ಅನುಭವಿಸು.

ಮೈಥಿಲಿ ! ಇಲ್ಲಿ ನನ್ನೊಂದಿಗೆ ಸುಗಂಧಿಯಾದ ಹೂಮಾಲೆಗಳನ್ನು ಉತ್ತಮ-ವಾದ ಆಭರಣಗಳನ್ನು ಧರಿಸಿಕೋ.

ಸುನಿತಂಬಿನಿಯೇ ! ನನ್ನ ತಮ್ಮನ ಪುಷ್ಪಕವಿಮಾನವಿದು ಸುಪ್ರಸಿದ್ಧ. ಬಲಾತ್ಕಾರವಾಗಿ ಅವನನ್ನು ಗೆದ್ದು ಕಸಿದುಕೊಂಡಿರುವೆ. ಸೂರ್ಯನಂತೆ ಬೆಳಗುವ ಈ ವಿಮಾನವು ವಿಶಾಲವೂ ರಮಣೀಯವೂ ಆಗಿದೆ. ಈ ವಿಮಾನದಲ್ಲಿ ಕುಳಿತು ನನ್ನೊಂದಿಗೆ ಸುಖವಾಗಿ ವಿಹರಿಸು.

ಸುಂದರ ಮುಖಿಯೇ ! ತಾವರೆಯಂತಿರುವ ನಿರ್ಮಲವು ನೋಡಲು ಸುಂದರವೂ ಆದ ನಿನ್ನ ವದನವು, ಸುಂದರಿಗೆ ಶೋಕಾರ್ತವಾಗಿ ಶೋಭಿಸುತ್ತಿಲ್ಲ.

ಹೀಗೆ ರಾವಣ ಹೇಳಲು ಆ ವರಾಂಗನೆ ಸೀತೆ ಸೀರೆಯ ತುದಿಯಿಂದ ಚಂದಿರನಂತಹ ಮೊಗವನ್ನು ಮುಚ್ಚಿಕೊಂಡು ಕಂಬನಿಗರೆದಳು.

ರಾಮನನ್ನೆ ಚಿಂತಿಸುತ್ತಾ ಅಸ್ವಸ್ಥಳಂತಾದ ದೀನಳೂ ಚಿಂತೆಯಿಂದ ಮಸುಕಾದ ಪ್ರಭೆಯವಳು ಆದ ಆ ಸೀತೆಯನ್ನು ಕುರಿತು ರಾಕ್ಷಸೇಶ್ವರ ಪಾಪಿ ರಾವಣ ಮಾತನಾಡಿದ-

ವೈದೇಹಿ ! ತನ್ನ ಪತಿಯ ತ್ಯಾಗ, ಪರಪುರುಷನ ಅಂಗೀಕಾರಗಳಿಗೆ ಧರ್ಮಲೋಪವಾಗುವುದೆಂಬ ಮುಜುಗರ ಬೇಡ. ನನ್ನ ನಿನ್ನ ಸ್ನೇಹ ಸಂಬಂಧ ದೈವನಿರ್ಮಿತವಾಗಿದ್ದು ಋಷಿ ಸಮ್ಮತವಾದುದಾಗಿದೆ. (ಇಂಥ ಪರಪುರುಷ - ಪರಸ್ತ್ರೀಸಂಬಂಧಗಳು ಶಾಸ್ತ್ರ ಸಮ್ಮತವಲ್ಲ. ಸೀತೆಯ ಪಾಪಭೀತಿಯನ್ನು ನಿವಾರಿಸಿ ತನ್ನವಳನ್ನಾಗಿಸಿಕೊಳ್ಳಲು ರಾವಣನ ವಂಚನೆಯ ಮಾತುಗಳಿವು)

ಈ ನಿನ್ನ ಸ್ನಿಗ್ಧ ಚರಣಗಳು ನನ್ನ ಹತ್ತು ತಲೆಗಳಿಂದ ಸೇವಿತವಾಗಿವೆ. ಬೇಗ ಪ್ರಸನ್ನಳಾಗು. ನಾನು ನಿನ್ನ ಅಧೀನನೂ ದಾಸನೂ ಆಗಿದ್ದೇನೆ.

ಕಾಮಾಗ್ನಿಯ ಶೋಷಣೆಗೆ ಒಳಗಾಗಿ ನನ್ನ ಘನತೆಗೆ ತಕ್ಕುದಲ್ಲದ ಈ ಮಾತು-ಗಳನ್ನು ಆಡಿರುವೆ. ರಾವಣ ಎಂದೆಂದೂ ಯಾವ ಹೆಣ್ಣಿಗೂ ತಲೆಬಾಗಿದವನಲ್ಲ.

ದಶಗ್ರೀವನು ಜನಕನಂದಿನೀ ಮೈಥಿಲಿಯನ್ನು ಕುರಿತು ಹೀಗೆ ಹೇಳಿ ಮೃತ್ಯುವಶನಾಗಿ 'ಇವಳು ನನ್ನವಳು' ಎಂದು ಭಾವಿಸುತ್ತಿದ್ದಾನೆ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೈದನೇ ಸರ್ಗ ಮುಗಿಯಿತು.

ಷಟ್‌ಪಂಚಾಶಃ ಸರ್ಗಃ

ಕಥಾಸಾರಾಂಶ– ಶೋಕಕರ್ಶಿತಳಾದ ಸೀತೆ ನಿರ್ಭಯಳಾಗಿ ಹುಲ್ಲೊಂದನ್ನು ಇಬ್ಬರ ನಡುವೆ ಇಟ್ಟುಕೊಂಡು ರಾವಣನಿಗೆ ಪ್ರತ್ಯುತ್ತರಿಸಿದಳು –

ಯಾರಿಗೆ ರಾಘವನು ಪುತ್ರನೋ ಆ ದಶರಥರಾಜರು ಅಚಲವಾದ ಧರ್ಮಸೇತು. ಮೂರು ಲೋಕ ವಿಖ್ಯಾತ ಶ್ರೀರಾಮ ನನ್ನ ಪತಿದೇವರು. ಸಮರ್ಥನಾದ ಶ್ರೀರಾಮನ ಕಣ್ಣೆದುರಿಗೆ ನೀನು ನನ್ನನ್ನು ಅಪಹರಿಸುವ ಪ್ರಯತ್ನ ಮಾಡಿದ್ದರೆ ಜನಸ್ಥಾನದ ಯುದ್ಧದಲ್ಲಿ ಖರ ಧರೆಗುರುಳಿದಂತೆ ನೀನೂ ಹತನಾಗಿ ನೆರಕ್ಕುರುಳುತ್ತಿದ್ದೆ.

ನೀನು ಹೇಳಿಕೊಂಡ ನಿನ್ನ ಕೋಟಿಗಟ್ಟಲೆ ರಕ್ಕಸರು ರಾಘವನೆದುರು ಸಾವಿರ ವಿಷಸರ್ಪಗಳೂ ಗರುಡನ ಮುಂದೆ ಹೇಗೆ ಹಾಗೆ ಲೆಕ್ಕಕ್ಕಿಲ್ಲ. ಸುರ ಅಸುರರಿಂದ ನೀನು ಅವಧ್ಯನಾಗಿರಬಹುದು. ಶ್ರೀರಾಮನಲ್ಲಿ ವೈರಮಾಡಿ ಬದುಕಲಾರೆ. ಯೂಪಸ್ತಂಭಕ್ಕೆ ಕಟ್ಟಿದ ವಧ್ಯಪಶುವಿನಂತೆ ನಿನಗೆ ಸಾವು ನಿಶ್ಚಿತ.

ಪತಿಯಿಂದ ದೂರ ಮಾಡಿ ನನ್ನನ್ನೇನು ಅಪಹಾರ ಮಾಡಿರುವಿ ಈ ಪಾಪಕರ್ಮ ಎಂದೂ ಸುಖಕೊಡುವುದಿಲ್ಲ. ನಿನ್ನ ಬಲ ದರ್ಪ ಆಯುಷ್ಯ ವೈಭವಗಳೆಲ್ಲ ರಾಮ ಪ್ರಯೋಗಿಸುವ ಬಾಣದಿಂದ ಭಸ್ಮವಾಗುತ್ತವೆ.

ನನ್ನ ಅಪಹಾರದ ಅಪರಾಧ ನಿನ್ನ ಲಂಕೆಯ ವೈಧವ್ಯಕ್ಕೆ ಸಕಲ ರಾಕ್ಷಸರ ವಿನಾಶಕ್ಕೆ ನಿನ್ನ ಉಪಸಂಹಾರಕ್ಕೆ ಕಾರಣವಾಗಿದೆ.

ಈ ಶರೀರವನ್ನು ಬಂಧಿಸುವೆಯೋ ತಿನ್ನುವಿಯೋ ಯೋಚನೆಯಿಲ್ಲ. ನನಗೆ ಈ ದೇಹದ ಈ ಬದುಕಿನ ರಕ್ಷಣೆ ಬೇಕಿಲ್ಲ. ಆದರೆ ಬದುಕಿ ಅಪಕೀರ್ತಿಯನ್ನು ಮಾತ್ರ ಸೈರಿಸಲಾರೆ.

ವೈದೇಹಿ ಕ್ರೋಧದಿಂದ ಇಷ್ಟು ಕಠೋರವಾದ ಮಾತನ್ನು ಹೇಳಿ ಮೌನಿಯಾದಳು.

ಮತ್ತೆ ರಾವಣ ಗುಡುಗಿದ – ಬೆದರಿಕೆಯ ಮಾತನಾಡಿದ – ಮೈಥಿಲಿ ! ನನ್ನ ಮಾತು ಕೇಳು.ನಿನಗೆ ಹನ್ನೆರಡು ತಿಂಗಳು ಸಮಯಾವಾಕಾಶ ಕೊಡುತ್ತಿದ್ದೇನೆ. ಅಷ್ಟರಲ್ಲಿ ನನ್ನನ್ನು ಒಪ್ಪಿಕೊಂಡರೆ ಸರಿ. ಇಲ್ಲದಿದ್ದರೆ ನನ್ನ ಅಡಿಗೆಯವರು ನಿನ್ನ ದೇಹವನ್ನು ತುಂಡು ತುಂಡು ಮಾಡಿ ಬೆಳಗಿನ ನನ್ನ ಉಪಹಾರಕ್ಕೆ ಸಲ್ಲಿಸುತ್ತಾರೆ !

ಸಿಡುಕಿನ ರಾವಣ ರಾಕ್ಷಸಿಯರನ್ನು ಕರೆದ. ಎಲ್ಲರೂ ಕೈ ಮುಗಿದು ಅವನ ಮುಂದೆ ದೌಡಾಯಿಸಿದರು. ಅವರಿಗೆ ಅಪ್ಪಣೆ ಮಾಡಿದ 'ಇವಳ ದರ್ಪವನ್ನು ನಾಶಮಾಡಿರಿ'. ಎಲ್ಲ ರಕ್ಕಸಿಯರೂ ಕೂಡಲೆ ಸೀತೆಗೆ ಮುತ್ತಿಗೆ ಹಾಕಿದರು. ಮತ್ತೆ ರಾವಣ ಹೇಳಿದ – ಈ

ಸೀತೆಯನ್ನು ಅಶೋಕವನದಲ್ಲಿಟ್ಟು ನೀವೆಲ್ಲ ಸುತ್ತುವರಿದು ಜೋಪಾನ ಮಾಡಿರಿ. ಗದರಿಸಿರಿ, ಬೆದರಿಸಿರಿ, ಆಲ್ಲಿ ನಡು ನಡುವೆ ಸಾಂತ್ವವಚನವನ್ನೂ ಆಡಿರಿ. ಹೆಣ್ಣಾನೆಯನ್ನು ಪಳಗಿಸುವಂತೆ ಇವಳನ್ನು ಮೆತ್ತಗಾಗಿಸಿ ನನ್ನ ವಶವಾಗುವಂತೆ ಮಾಡಿರಿ.

ರಾವಣನ ಆಜ್ಞೆಯಂತೆ ಆ ರಾಕ್ಷಸಿಯರು ಸೀತೆಯನ್ನು ಕರೆದುಕೊಂಡು ಹೋಗಿ ಅಶೋಕವನದಲ್ಲಿಟ್ಟರು. ರಾಕ್ಷಸಿಯರ ವಶದಲ್ಲಿದ್ದ ಸೀತೆ ಹೆಣ್ಣು ಹುಲಿಗಳ ಮಧ್ಯ ಸಿಲುಕಿದ ಹೆಣ್ಣು ಜಿಂಕೆಯಂತಾದಳು.

ಸುಂದರ ಮರಗಿಡ ಬಳ್ಳಿಗಳ ಹೂ ಹಣ್ಣುಗಳು ತುಂಬಿದ, ಚೆಲಿಪಿಲಿಗುಟ್ಟುವ ಬಗೆಬಗೆಯ ಹಕ್ಕಿಗಳು ನೆಲೆಸಿದ ಆ ಅಶೋಕವನದಲ್ಲಿ ತನ್ನ ದೈವತ ಪತಿ ರಾಮನನ್ನು ನೆನೆಯುತ್ತ ಸೀತೆ ಶೋಕಪರಿತಪ್ತಳಾಗಿ ನೆಮ್ಮದಿ ಕಾಣದಾದಳು.

❖

ವತ್ಸರಾವಧಿಕರಣಮ್

ಸಾ ತಥೋಕ್ತಾ ತು ವೈದೇಹೀ ನಿರ್ಭಯಾ ಶೋಕಕರ್ಶಿತಾ ।
ತೃಣಮಂತರತಃ ಕೃತ್ವಾ ರಾವಣಂ ಪ್ರತ್ಯಭಾಷತ ॥೧॥

ರಾಜಾ ದಶರಥೋ ನಾಮ ಧರ್ಮಸೇತುರಿವಾಚಲಃ ।
ಸತ್ಯಸಂಧಃ ಪರಿಜ್ಞಾತೋ ಯಸ್ಯ ಪುತ್ರಃ ಸ ರಾಘವಃ ॥೨॥

ರಾಮೋ ನಾಮ ಸ ಧರ್ಮಾತ್ಮಾ ತ್ರಿಷು ಲೋಕೇಷು ವಿಶ್ರುತಃ ।
ದೀರ್ಘಬಾಹುರ್ವಿಶಾಲಾಕ್ಷೋ ದೈವತಂ ಸ ಪತಿರ್ಮಮ ॥೩॥

ಇಕ್ಷ್ವಾಕೂಣಾಂ ಕುಲೇ ಜಾತಃ ಸಿಂಹಸ್ಕಂಧೋ ಮಹಾದ್ಯುತಿಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಯಸ್ತೇ ಪ್ರಾಣಾನ್ ಹರಿಷ್ಯತಿ ॥೪॥

ಪ್ರತ್ಯಕ್ಷಂ ಯದ್ಯಹಂ ತಸ್ಯ ತ್ವಯಾ ಸ್ಯಾಂ ಧರ್ಷಿತಾ ಬಲಾತ್ ।
ಶಯಿತಾ ತ್ವಂ ಹತಃ ಸಂಖ್ಯೇ ಜನಸ್ಥಾನೇ ಯಥಾ ಖರಃ ॥೫॥

ರಾವಣನಿಂದ ಹಾಗೆ ಹೇಳೋಣದವಳಾದ ವೈದೇಹಿಯು ಶೋಕಕರ್ಶಿತಳಾಗಿದ್ದರೂ ನಿರ್ಭಯಳಾಗಿ ನಡುವೆ ಹುಲ್ಲನ್ನು ಅಡ್ಡ ಇಟ್ಟು ರಾವಣನಿಗೆ ಪ್ರತ್ಯುತ್ತರಿಸಿದಳು.

ಆ ರಾಘವನು ಯಾರ ಪುತ್ರನೋ ಆ ದಶರಥಮಹಾರಾಜರು ಅಚಲವಾದ ಧರ್ಮಸೇತುವಾದವರು. ಅವರ ಪುತ್ರ ರಾಮನು ಸತ್ಯಸಂಧನೆಂದು ಪ್ರಸಿದ್ಧನಾದವನು.

ರಾಮನೆಂದು ಮೂರು ಲೋಕದಲ್ಲಿ ವಿಖ್ಯಾತನಾದ ಧರ್ಮಾತ್ಮ. ನೀಳ ತೋಳಿನವನು, ವಿಶಾಲಾಕ್ಷನು. ನನ್ನ ಪತಿದೇವನು.

ಇಷ್ವಾಕುವಂಶದಲ್ಲಿ ಸಮುತ್ಪನ್ನನ್ನು, ಸಿಂಹದಂಥ ಭುಜದವನು, ಮಹಾ-ತೇಜಸ್ವಿಯು, ತಮ್ಮ ಲಕ್ಷ್ಮಣನೊಂದಿಗೆ ನಿನ್ನ ಪ್ರಾಣವನ್ನು ಅಪಹರಿಸುವವನು.

ಅವನ ಕಣ್ಣೆದುರಿಗೆ ನೀನು ನನ್ನನ್ನು ಬಲಾತ್ಕಾರವಾಗಿ ಅಪಹರಿಸಿದ್ದಿದ್ದರೆ ಯುದ್ಧದಲ್ಲಿ ಜನಸ್ಥಾನದಲ್ಲಿ ಖರನಂತೆ ಧರೆಗುರುಳಿ ಮಲಗುತ್ತಿದ್ದೆ.

ಯ ಏತೇ ರಾಕ್ಷಸಾಃ ಪ್ರೋಕ್ತಾ ಘೋರರೂಪಾ ಮಹಾಬಲಾಃ ।
ರಾಘವೇ ನಿರ್ವಿಷಾಃ ಸರ್ವೇ ಸುಪರ್ಣೇ ಪನ್ನಗಾ ಯಥಾ ॥೬॥

ತಸ್ಯ ಜ್ಯಾವಿಪ್ರಮುಕ್ತಾಸ್ತೇ ಶರಾಃ ಕಾಂಚನಭೂಷಣಾಃ ।
ಶರೀರಂ ವಿಧಮಿಷ್ಯಂತಿ ಗಂಗಾಕೂಲಮಿವೋರ್ಮಯಃ ॥೭॥

ಅಸುರೈರ್ವಾ ಸುರೈರ್ವಾ ತ್ವಂ ಯದ್ಯವಧ್ಯೋಽಸಿ ರಾವಣ ।
ಉತ್ಪಾದ್ಯ ಸುಮಹದ್ವೈರಂ ಜೀವಂಸ್ತಸ್ಯ ನ ಮೋಕ್ಷ್ಯಸೇ ॥೮॥

ಸ ತೇ ಜೀವಿತಶೇಷಸ್ಯ ರಾಘವೋಽತಕರೋ ಬಲೀ ।
ಪಶೋರ್ಯೂಪಗತಸ್ಯೇವ ಜೀವಿತಂ ತವ ದುರ್ಲಭಮ್ ॥೯॥

ಯದಿ ಪಶ್ಯೇತ್ ಸ ರಾಮಸ್ತಾ ತ್ವಂ ರೋಷದೀಪ್ತೇನ ಚಕ್ಷುಷಾ ।
ರಕ್ಷಸ್ತ್ವಮದ್ಯ ನಿರ್ದಗ್ಧೋ ಯಥಾ ರುದ್ರೇಣ ಮನ್ಮಥಃ ॥೧೦॥

ಯಶ್ಚಂದ್ರಂ ನಭಸೋ ಭೂಮೌ ಪಾತಯೇನ್ನಾಶಯೇತ ವಾ ।
ಸಾಗರಂ ಶೋಷಯೇದ್ವಾಪಿ ಸ ಸೀತಾಂ ಮೋಚಯೇದಿಹ ॥೧೧॥

ಗತಾಯುಸ್ತ್ವಂ ಗತಶ್ರೀಕೋ ಗತಸತ್ತ್ವೋ ಗತೇಂದ್ರಿಯಃ ।
ಲಂಕಾ ವೈಧವ್ಯಸಂಯುಕ್ತಾ ತ್ವತ್ಕೃತೇನ ಭವಿಷ್ಯತಿ ॥೧೨॥

ನೀನು ಹೇಳಿದ ಮಹಾಬಲರೂ ಘೋರರೂಪರೂ ಆದ ರಾಕ್ಷಸರೆಲ್ಲ ವಿಷ-ಸರ್ಪಗಳೆಲ್ಲ ಗರುಡನ ಮುಂದೆ ನಿರ್ವಿಷರಾಗುವಂತೆ ರಾಘವನ ವಿಷಯದಲ್ಲಿ ನಿರ್ವೀರ್ಯರಾಗುವರು.

ಗಂಗೆಯ ರಭಸದ ತರಂಗಗಳು ದಡವನ್ನು ಕೊಚ್ಚಿಕೊಂಡು ಹೋಗುವಂತೆ

ರಾಮನ ಬಿಲ್ಲಿನಿಂದ ಹೊರಟ ಕಾಂಚನ ಭೂಷಣಗಳಾದ ಬಾಣಗಳು ನಿನ್ನ ಶರೀರವನ್ನು ಕೊಚ್ಚಿ ಕೊಚ್ಚಿ ಹಾಕುತ್ತವೆ !

ಅಸುರರಿಂದಲೋ ಸುರರಿಂದಲೋ ನೀನು ಅವಧ್ಯನಾಗಿರಬಹುದು ಆದರೆ ರಾಮನೊಂದಿಗೆ ವೈರಕಟ್ಟಿಕೊಂಡು ಬದುಕಿ ಬಿಡುಗಡೆಹೊಂದಲಾರೆ !

ಆ ರಾಘವನು ನಿನ್ನ ಉಳಿದ ಬದುಕನ್ನು ಕೊನೆಗೊಳಿಸಬಲ್ಲ ಬಲಿಷ್ಠನು. ಯೂಪಸ್ತಂಭಕ್ಕೆ ಕಟ್ಟಿರುವ ಪಶುವಿನ ಬದುಕಿನಂತೆ ನಿನ್ನ ಜೀವನವೂ ದುರ್ಲಭ.

ರಾಮ ನಿನ್ನನ್ನು ರೋಷದೀಪ್ತವಾದ ಕಣ್ಣಿನಿಂದ ನೋಡಿದರೆ ರಾಕ್ಷಸನಾದ ನೀನು ಸುಟ್ಟುಹೋಗಿ ಕೂಡಲೆ ಪರಾಭವವನ್ನು ಹೊಂದುವಿ.

ಯಾರು ಆಗಸದಿಂದ ಚಂದ್ರನನ್ನೇ ಕೆಳಗೆ ಬೀಳಿಸಬಲ್ಲನೋ ಅಥವಾ ನಾಶ ಮಾಡಬಲ್ಲನೋ ಅವನು ಸೀತೆಯನ್ನು ಮೋಚನ ಗೊಳಿಸಬಲ್ಲವನಲ್ಲವೇ ?

ನಿನ್ನ ಆಯುಷ್ಯ ಸಂಪತ್ತು ಸತ್ವ ಇಂದ್ರಿಯಬಲ ಎಲ್ಲವೂ ನಷ್ಟಪ್ರಾಯವಾಗಿದೆ. ನಿನ್ನ ಕರ್ಮದಿಂದಾಗಿ ಲಂಕೆ ವಿಧವೆಯಾಗುತ್ತದೆ !!

ನ ತೇ ಪಾಪಮಿದಂ ಕರ್ಮ ಸುಖೋದರ್ಕಂ ಭವಿಷ್ಯತಿ ।
ಯಾಹಂ ನೀತಾ ವಿನಾಭಾವಂ ಪತಿಪಾರ್ಶ್ವಾತ್ತ್ವಯಾ ಬಲಾತ್ ॥೧೩॥

ಸ ಹಿ ದೇವರಸಂಯುಕ್ತೋ ಮಮ ಭರ್ತಾ ಮಹಾದ್ಯುತಿಃ ।
ನಿರ್ಭಯೋ ವೀರ್ಯಮಾಶ್ರಿತ್ಯ ಶೂನ್ಯೇ ವಸತಿ ದಂಡಕೇ ॥೧೪॥

ಸ ತೇ ದರ್ಪಂ ಬಲಂ ವೀರ್ಯಮುತ್ಸೇಕಂ ಚ ತಥಾವಿಧಮ್ ।
ಅಪನೇಷ್ಯತಿ ಗಾತ್ರೇಭ್ಯಃ ಶರವರ್ಷೇಣ ಸಂಯುಗೇ ॥೧೫॥

ಯದಾ ವಿನಾಶೋ ಭೂತಾನಾಂ ದೃಶ್ಯತೇ ಕಾಲಚೋದಿತಃ ।
ತದಾ ಕಾರ್ಯೇ ಪ್ರಮಾದ್ಯಂತಿ ನರಾಃ ಕಾಲವಶಂ ಗತಾಃ ॥೧೬॥

ಮಾಂ ಪ್ರಧೃಷ್ಯ ಸ ತೇ ಕಾಲಃ ಪ್ರಾಪ್ತೋಽಯಂ ರಾಕ್ಷಸಾಧಮ ।
ಆತ್ಮನೋ ರಾಕ್ಷಸಾನಾಂ ಚ ವಧಾಯಾಂತಃಪುರಸ್ಯ ಚ ॥೧೭॥

ನ ಶಕ್ಯಾ ಯಜ್ಞಮಧ್ಯಸ್ಥಾ ವೇದಿಃ ಸೃಗ್ಭಾಂಡಮಂಡಿತಾ ।
ದ್ವಿಜಾತಿಮಂತ್ರಸಂಪೂತಾ ಚಂಡಾಲೇನಾವಮರ್ದಿತುಮ್ ॥೧೮॥

ತಥಾಹಂ ಧರ್ಮನಿತ್ಯಸ್ಯ ಧರ್ಮಪತ್ನೀ ಪತಿವ್ರತಾ ।
ತ್ವಯಾ ಸ್ಪೃಷ್ಟುಂ ನ ಶಕ್ಯಾಸ್ಮಿ ರಾಕ್ಷಸಾಧಮ ಪಾಪಿನಾ ॥೧೯॥

ಕಾಡಿನಲ್ಲಿ ಪತಿಪಾರ್ಶ್ವದಿಂದ ವಿಯೋಗವನ್ನುಂಟು ಮಾಡಿ ನನ್ನನ್ನು ಅಪಹರಿಸಿರುವ ಈ ಪಾಪಕರ್ಮ ನಿನಗೆ ಸುಖಾಂತವಾಗುವುದಿಲ್ಲ.

ಮೈದುನ ಲಕ್ಷ್ಮಣ ಸಹಿತನಾದ ಆ ನನ್ನ ಪತಿ ದೈವೀಸನ್ನಿಧಾನದಿಂದ ಕೂಡಿದ ಮಹಾಪ್ರಕಾಶನು. ಜನಶೂನ್ಯ- ವಾದ ದಂಡಕಾರಣ್ಯದಲ್ಲಿ ನಿರ್ಭಯನಾಗಿ ತನ್ನ ಬಲವನ್ನವಲಂಬಿಸಿ ವಾಸಮಾಡಿದ್ದಾನೆ !

ಆ ರಾಮನು ಯುದ್ಧದಲ್ಲಿ ಬಾಣದ ಮಳೆಸುರಿಸಿ ನಿನ್ನ ಗಾತ್ರದಿಂದ ಬಲ ದರ್ಪ ವೀರ್ಯ ಉತ್ಸಾಹಗಳನ್ನು ಪರಿಹರಿಸುತ್ತಾನೆ.

ಕಾಲನ ಪ್ರೇರಣೆಯಿಂದ ಪ್ರಾಣಿಗಳ ವಿನಾಶ ಸಮೀಪಿಸಿದಾಗ ಕಾಲವಶರಾದ ಮನುಷ್ಯರು ಎಲ್ಲ ಕಾರ್ಯದಲ್ಲಿಯೂ ಪ್ರಮಾದಕ್ಕೆ ಒಳಗಾಗುತ್ತಾರೆ.

ರಾಕ್ಷಸಾಧಮನೇ ! ನನ್ನನ್ನು ಬಲಾತ್ಕರಿಸಿ ನಿನಗೂ ಆ ಕಾಲ ಪ್ರಾಪ್ತವಾಗಿದೆ - ನಿನ್ನ ಹಾಗೂ ರಾಕ್ಷಸರ ಮತ್ತು ಅಂತಃಪುರದ ವಿನಾಶಕಾಲ ಸನ್ನಿಹಿತವಾಗಿದೆ.

ಯಜ್ಞಶಾಲೆಯ ಮಧ್ಯದ ವೇದಿಕೆ ಸ್ರುಕ್ - ಸ್ರುವಾದಿ ಯಜ್ಞೋಪಯೋಗಿ ಪವಿತ್ರ ವಸ್ತುಗಳಿಂದ ಹಾಗೂ ಬ್ರಾಹ್ಮಣರ ವೇದಮಂತ್ರಗಳಿಂದ ಪವಿತ್ರವಾಗಿರುತ್ತದೆ. ಅದನ್ನು ಚಂಡಾಲನು ತುಳಿಯಲು ಶಕ್ಯವಿಲ್ಲ. ಹಾಗೆಯೇ ಧರ್ಮನಿತ್ಯನಾದ ರಾಮನ ಧರ್ಮಪತ್ನಿ ಪತಿವ್ರತೆಯಾದ ನಾನೂ ರಾಕ್ಷಸಾಧಮನೇ ನಿನ್ನಿಂದ ಸ್ಪರ್ಶಿಸಲು ಯೋಗ್ಯಳಲ್ಲ.

ಕ್ರೀಡಂತೀ ರಾಜಹಂಸೇನ ಪದ್ಮಷಂಡೇಷು ನಿತ್ಯದಾ ।
ಹಂಸೀ ಸಾ ತೃಣಷಂಡಸ್ಥಂ ಕಥಂ ದ್ರಕ್ಷ್ಯೇತ ಮದ್ವಿಧಮ್ ॥೨೦॥

ಇದಂ ಶರೀರಂ ನಿಃಸಂಜ್ಞಂ ಬಂಧ ವಾ ಖಾದಯಸ್ವ ವಾ ।
ನೇದಂ ಶರೀರಂ ರಕ್ಷ್ಯಂ ಮೇ ಜೀವಿತಂ ವಾಪಿ ರಾಕ್ಷಸ ॥೨೧॥

ನ ತು ಶಕ್ಷ್ಯಾಮ್ಯುಪಕ್ರೋಶಂ ಪೃಥಿವ್ಯಾಂ ದಾತುಮಾತ್ಮನಃ ।
ಏವಮುಕ್ತ್ವಾ ತು ವೈದೇಹೀ ಕ್ರೋಧಾತ್ ಸುಪರುಷಂ ವಚಃ ॥೨೨॥

ತಾವರೆಯ ಗುಂಪಿನಲ್ಲಿ ರಾಜಹಂಸದೊಡನೆ ನಿತ್ಯವೂ ವಿಹರಿಸುವ ಹೆಣ್ಣು ಹಂಸವು ಹುಲ್ಲಿನ ಜೊಂಡಿನಲ್ಲಿರುವ ನೀರು ಕೋಳಿಯನ್ನು ಕಣ್ಣೆತ್ತಿ ನೋಡುವುದೇನು ?

ರಾಕ್ಷಸನೇ ! ಜ್ಞಾನವಿಲ್ಲದ ಈ ಜಡ ಶರೀರವನ್ನು ಕಟ್ಟಿಹಾಕು ಅಥವಾ ತುಂಡು ಮಾಡಿ ತಿಂದುಕೋ. ನನಗೆ ಈ ಶರೀರ ಈ ಬದುಕು ರಕ್ಷಣೀಯವಲ್ಲ. ಆದರೆ ಪೃಥವಿಯಲ್ಲಿ ಅಪವಾದವನ್ನು ತಂದುಕೊಳ್ಳಲು ಸಾಧ್ಯವಿಲ್ಲ.

ರಾವಣಂ ಮೈಥಿಲೀ ತತ್ರ ಪುನರ್ನೋವಾಚ ಕಿಂಚನ ।
ಸೀತಾಯಾ ವಚನಂ ಶ್ರುತ್ವಾ ಪರುಷಂ ರೋಮಹರ್ಷಣಮ್ ॥೨೩॥

ಪ್ರತ್ಯುವಾಚ ತತಃ ಸೀತಾಂ ಭಯಸಂದರ್ಶನಂ ವಚಃ ।
ಶೃಣು ಮೈಥಿಲಿ ಮದ್ವಾಕ್ಯಂ ಮಾಸಾನ್ ದ್ವಾದಶ ಭಾಮಿನಿ ॥೨೪॥

ಕಾಲೇನಾನೇನ ನಾಭ್ಯೇಷಿ ಯದಿ ಮಾಂ ಚಾರುಹಾಸಿನಿ ।
ತತಸ್ತ್ವಾಂ ಪ್ರಾತರಾಶಾರ್ಥಂ ಸೂದಾಶ್ಛೇತ್ಸ್ಯಂತಿ ಲೇಶತಃ ॥೨೫॥

ವೈದೇಹಿಯು ಕ್ರೋಧದಿಂದ ತುಂಬ ಕಠೋರವಾದ ಇಷ್ಟು ಮಾತನ್ನು ಹೇಳಿ ರಾವಣನಿಗೆ, ಮತ್ತೇನು ಮಾತನಾಡಲಿಲ್ಲ.

ಸೀತೆಯಾಡಿದ ರೋಮ ನಿಮಿರೇಳಿಸುವ ಪರುಷ ವಚನವನ್ನು ಕೇಳಿ ರಾವಣನು ಬಳಿಕ ಸೀತೆಯನ್ನು ಕುರಿತು ಭಯವನ್ನು ತೋರಿಸುವ ಬೆದರಿಕೆಯ ಮಾತನಾಡಿದನು.

ಮೈಥಿಲಿ ! ನನ್ನ ಮಾತನ್ನು ಕೇಳು. ಸುಂದರ ನಗುವಿನ ಭಾಮಿನಿಯೇ! ಹನ್ನೆರಡು ತಿಂಗಳ ಕಾಲಾವಕಾಶದೊಳಗೆ ನೀನು ನನ್ನ ಬಳಿ ಬರದಿದ್ದರೆ ಬಳಿಕ ಅಡಿಗೆಯವರು ನಿನ್ನ ದೇಹವನ್ನು ತುಂಡು ತುಂಡು ಕಡಿದು ನನಗೆ ಬೆಳಗಿನ ಉಪಹಾರಕ್ಕೆ ಏರ್ಪಾಡು ಮಾಡುತ್ತಾರೆ.

ಇತ್ಯುಕ್ತ್ವಾ ಪರುಷಂ ವಾಕ್ಯಂ ರಾವಣಃ ಶತ್ರುರಾವಣಃ ।
ರಾಕ್ಷಸೀಶ್ಚ ತತಃ ಕ್ರುದ್ಧ ಇದಂ ವಚನಮಬ್ರವೀತ್ ॥೨೬॥

ಶೀಘ್ರಮೇವ ಹಿ ರಾಕ್ಷಸ್ಯೋ ವಿಕೃತಾ ಘೋರದರ್ಶನಾಃ ।
ದರ್ಪಮಸ್ಯಾ ವಿನೇಷ್ಯಧ್ವಂ ಮಾಂಸಶೋಣಿತಭೋಜನಾಃ ॥೨೭॥

ವಚನಾದೇವ ತಾಸ್ತಸ್ಯ ಸುಘೋರಾ ರಾಕ್ಷಸೀಗಣಾಃ ।
ಕೃತಪ್ರಾಂಜಲಯೋ ಭೂತ್ವಾ ಮೈಥಿಲೀಂ ಪರ್ಯವಾರಯನ್ ॥೨೮॥

ಸ ತಾಃ ಪ್ರೋವಾಚ ರಾಜಾಸೌ ರಾವಣೋ ಘೋರದರ್ಶನಃ ।
ಪ್ರಚಾಲ್ಯ ಚರಣೋತ್ಕರ್ಷೈರ್ದಾರಯನ್ನಿವ ಮೇದಿನೀಮ್ ॥೨೯॥

ಅಶೋಕವನಿಕಾಮಧ್ಯೇ ಮೈಥಿಲೀ ನೀಯತಾಮಿಯಮ್ ।
ತತ್ರೇಯಂ ರಕ್ಷ್ಯತಾಂ ಗೂಢಂ ಯುಷ್ಮಾಭಿಃ ಪರಿವಾರಿತಾ ॥೩೦॥

ತತ್ರೈನಾಂ ತರ್ಜನೈಘೋರೈಃ ಪುನಃ ಸಾಂತ್ವೈಶ್ಚ ಮೈಥಿಲೀಮ್ ।
ಆನಯಧ್ವಂ ವಶಂ ಸರ್ವಾ ವನ್ಯಾಂ ಗಜವಧೂಮಿವ ॥೩೧॥

ಇತಿ ಪ್ರತಿಸಮಾದಿಷ್ಟಾ ರಾಕ್ಷಸ್ಯೋ ರಾವಣೇನ ತಾಃ ।
ಅಶೋಕವನಿಕಾಂ ಜಗ್ಮುರ್ಮೈಥಿಲೀಂ ಪ್ರತಿಗೃಹ್ಯ ತು ॥೩೨॥

ಶತ್ರುಗಳನ್ನು ಅಳಿಸುವ ರಾವಣ ಹೀಗೆ ಪರುಷ ವಾಕ್ಯವನ್ನು ಹೇಳಿ ಬಳಿಕ ಕ್ರುದ್ಧನಾಗಿ ರಾಕ್ಷಸಿಯರನ್ನು ಕುರಿತು ಈ ಮಾತನಾಡಿದನು.

ಘೋರದರ್ಶನರಾದ ಮಾಂಸರಕ್ತವನ್ನುಣ್ಣುವ ವಿಕೃತ ರಾಕ್ಷಸಿಯರೇ ! ಕೂಡಲೇ ಇವಳ ದರ್ಪವನ್ನು ವಿನಾಶಗೊಳಿಸಿರಿ.

ಸುಘೋರರಾದ ಆ ರಕ್ಕಸಿ ಗುಂಪಿನವರು ರಾವಣನ ಮಾತು ಕೇಳಿದೊಡನೆಯೆ ಕೈ ಮುಗಿದವರಾಗಿ ಮೈಥಿಲಿಯನ್ನು ಸುತ್ತುವರಿದರು.

ನೋಡಲು ಭಯಂಕರವಾದ ರಾವಣ ಪಾದಾಘಾತಗಳಿಂದ ನೆಲವನ್ನು ಸೀಳುವಂತೆ ತುಳಿಯುತ್ತಾ ರಕ್ಕಸಿಯರಿಗೆ ಹೇಳಿದನು.

ಅಶೋಕವನದ ಮಧ್ಯದಲ್ಲಿ ಈ ಮೈಥಿಲಿಯು ಒಯ್ಯೋಣವಾಗಲಿ. ನಿಮ್ಮಿಂದ ಗೂಢವಾಗಿ ಸುತ್ತುವರಿದು ಇವಳು ರಕ್ಷಿತವಾಗಲಿ.

ಅಲ್ಲಿ ಇವಳನ್ನು ಘೋರವಾಗಿ ಗದರಿಸುವಿಕೆಗಳಿಂದ ಮತ್ತೆ ಸಾಂತ್ವನದ ಮಾತುಗಳಿಂದ ನನ್ನ ವಶಕ್ಕೆ ಒಯ್ಯಿರಿ. ಕಾಡಿನ ಹೆಣ್ಣಾನೆಯನ್ನು ಪಳಗಿಸುವಂತೆ.

ಹೀಗೆ ರಾವಣನಿಂದ ಸಮಾದಿಷ್ಟರಾದ ಆ ರಕ್ಕಸಿಯರು ಮೈಥಿಲಿಯನ್ನು ಕರೆದುಕೊಂಡು ಅಶೋಕವನಕ್ಕೆ ಹೋದರು.

ಸರ್ವಕಾಲಫಲೈರ್ವೃಕ್ಷೈರ್ನಾನಾಪುಷ್ಪಫಲೈರ್ವೃತಾಮ್ ।
ಸರ್ವಕಾಲಮದೈಶ್ಚಾಪಿ ದ್ವಿಜೈಃ ಸಮುಪಸೇವಿತಾಮ್ ॥೩೩॥

ಸಾ ತು ಶೋಕಪರೀತಾಂಗೀ ಮೈಥಿಲೀ ಜನಕಾತ್ಮಜಾ ।
ರಾಕ್ಷಸೀವಶಮಾಪನ್ನಾ ವ್ಯಾಘ್ರೀಣಾಂ ಹರಿಣೀ ಯಥಾ ॥೩೪॥

ಶೋಕೇನ ಮಹತಾ ಗ್ರಸ್ತಾ ಮೈಥಿಲೀ ಜನಕಾತ್ಮಜಾ ।
ನ ಶರ್ಮ ಲಭತೇ ಭೀರುಃ ಪಾಶಬದ್ಧಾ ಮೃಗೀ ಯಥಾ ॥೩೫॥

ನ ವಿಂದತೇ ತತ್ರ ತು ಶರ್ಮ ಮೈಥಿಲೀ
ವಿರೂಪನೇತ್ರಾಭಿರತೀವ ತರ್ಜಿತಾ ।
ಪತಿಂ ಸ್ಮರಂತೀ ದಯಿತಂ ಚ ದೈವತಂ
ವಿಚೇತನಾಭೂದ್ಭಯಶೋಕಪೀಡಿತಾ ॥೩೬॥

ಎಲ್ಲ ಕಾಲದಲ್ಲಿಯೂ ಫಲ ನೀಡುವ ವೃಕ್ಷಗಳಿಂದಲೂ ಬಗೆಬಗೆಯ ಪುಷ್ಪಫಲಗಳಿಂದ ತುಂಬಿದ, ಎಲ್ಲ ಕಾಲದಲ್ಲೂ ಮದವೇರಿದ ಹಕ್ಕಿಗಳಿಂದ ಸೇವಿತವಾದ ಅಶೋಕ ವನದಲ್ಲಿ ಸೀತೆಯನ್ನು ಇಟ್ಟರು.

ಶೋಕದಿಂದ ಹಣ್ಣಾದ ಅವಯವಗಳ ಜನಕತನಯೆ ಮೈಥಿಲಿಯು ಹೆಣ್ಣು-ಹುಲಿಗಳ ನಡುವೆ ಸಿಲುಕಿದ ಹೆಣ್ಣು ಜಿಂಕೆಯಂತಾದಳು ರಾಕ್ಷಸಿಯರ ಮಧ್ಯದಲ್ಲಿ.

ಮಹಾಶೋಕಗ್ರಸ್ತಳಾದ ಜಾನಕಿ ಮೈಥಿಲಿಯು ಹೆದರಿದವಳಾಗಿ ಪಾಶಬದ್ಧವಾದ ಹೆಣ್ಣು ಜಿಂಕೆಯಂತೆ ಸುಖವೇ ಇಲ್ಲದವಳಾದಳು.

ವಿಕಾರದ ಕಣ್ಣುಗಳ ರಾಕ್ಷಸಿಯರಿಂದ ಬಹಳ ಗದರಿಸಲ್ಪಟ್ಟವಳಾಗಿ ಸುಖ ಹೊಂದಲಿಲ್ಲ. ತನ್ನ ಪಾಲಿನ ದೇವತೆಯು ಪ್ರಿಯತಮನೂ ಆದ ಪತಿಯನ್ನು ನೆನೆಯುತ್ತ ಭಯಶೋಕ ಪೀಡಿತಳಾಗಿ ಎಚ್ಚರ ತಪ್ಪಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತಾರನೇ ಸರ್ಗ ಮುಗಿಯಿತು.

❖

ಪ್ರಕ್ಷಿಪ್ತವಾದ ಸರ್ಗದ ಸಾರಾಂಶ

ಇತಃ ಪರಂ ಪ್ರಕ್ಷಿಪ್ತೋಽಯಂ ಸರ್ಗೋ ದೃಶ್ಯತೇ–

ಪ್ರವೇಶಿತಾಯಾಂ ಸೀತಾಯಾಂ ಲಂಕಾಂ ಪ್ರತಿ ಪಿತಾಮಹಃ ।
ತದಾ ಪ್ರೋವಾಚ ದೇವೇಂದ್ರಂ ಪರಿತುಷ್ಟಂ ಶತಕ್ರತುಮ್ ॥ ೧ ॥

ತ್ರೈಲೋಕ್ಯಸ್ಯ ಹಿತಾರ್ಥಾಯ ರಕ್ಷಸಾಮಹಿತಾಯ ಚ ।
ಲಂಗಾಂ ಪ್ರವೇಶಿತಾ ಸೀತಾ ರಾವಣೇನ ದುರಾತ್ಮನಾ ॥ ೨ ॥

ಪತಿವ್ರತಾ ಮಹಾಭಾಗಾ ನಿತ್ಯಂ ಚೈವ ಸುಖೈಧಿತಾ ।
ಅಪಶ್ಯಂತೀ ಚ ಭರ್ತಾರಂ ಪಶ್ಯಂತೀ ರಾಕ್ಷಸೀಜನಮ್ ॥ ೩ ॥

ರಾಕ್ಷಸೀಭಿಃ ಪರಿವೃತಾ ಭರ್ತೃದರ್ಶನಲಾಲಸಾ ।
ನಿವಿಷ್ಟಾ ಹಿ ಪುರೀ ಲಂಗಾ ತೀರೇ ನದನದೀಪತೇ ॥ ೪ ॥

ಕಥಂ ಜ್ಞಾಸ್ಯತಿ ತಾಂ ರಾಮಸ್ತತ್ರಸ್ಥಾಂ ತಾಮನಿಂದಿತಾಮ್ ।
ದುಃಖಂ ಸಂಚಿಂತಯಂತೀ ಸಾ ಬಹುಶಃ ಪರಿದುರ್ಲಭಾ ॥ ೫ ॥

ಪ್ರಾಣಯಾತ್ರಾಮಕುರ್ವಾಣಾ ಪ್ರಾಣಾಂಸ್ತ್ಯಕ್ಷ್ಯತ್ಯಸಂಶಯಮ್ ।
ಸ ಭೂಯಃ ಸಂಶಯೋ ಜಾತ ಸೀತಾಯಾಃ ಪ್ರಾಣಸಂಕ್ಷಯೇ ॥ ೬ ॥

ಸ ತ್ವಂ ಶೀಘ್ರಮಿತೋ ಗತ್ವಾ ಸೀತಾಂ ಪಶ್ಯ ಶುಭಾನನಾಮ್ ।
ಪ್ರವಿಶ್ಯ ನಗರೀಂ ಲಂಕಾಂ ಪ್ರಯಚ್ಛ ಹವಿರುತ್ತಮಮ್ ॥ ೭ ॥

ಏವಮುಕ್ತೋಽಥ ದೇವೇಂದ್ರ ಪುರೀಂ ರಾವಣಪಾಲಿತಾಮ್ ।
ಆಗಚ್ಛನ್ನಿದ್ರಯಾ ಸಾರ್ಧಂ ಭಗವಾನ್‌ಪಾಕಶಾಸನಃ ॥ ೮ ॥

ನಿದ್ರಾಂ ಚೋವಾಚ ಗಚ್ಛ ತ್ವಂ ರಾಕ್ಷಸಾನ್ ಸಂಪ್ರಮೋಹಯ ।
ಸಾ ತಥೋಕ್ತಾ ಮಘವತಾ ದೇವೀ ಪರಮಹರ್ಷಿತಾ ॥ ೯ ॥

ದೇವಕಾರ್ಯಾರ್ಥಸಿದ್ಧ್ಯರ್ಥಂ ಪ್ರಾಮೋಹಯತ ರಾಕ್ಷಸಾನ್ ।
ಏತಸ್ಮಿನ್ನಂತರೇ ದೇವಃ ಸಹಸ್ರಾಕ್ಷಃ ಶಚೀಪತಿಃ ॥ ೧೦ ॥

ಆಸಸಾದ ವನಸ್ಥಾಂ ತಾಂ ವಚನಂ ಚೇದಮಬ್ರವೀತ್ ।
ದೇವರಾಜೋಽಸ್ಮಿ ಭದ್ರಂ ತೇ ಇಹ ಚಾಸ್ಮಿ ಶುಚಿಸ್ಮಿತೇ ॥ ೧೧ ॥

ಅಹಂ ತ್ವಾಂ ಕಾರ್ಯಸಿದ್ಧ್ಯರ್ಥಂ ರಾಘವಸ್ಯ ಮಹಾತ್ಮನಃ ।
ಸಾಹಾಯ್ಯಂ ಕಲ್ಪಯಿಷ್ಯಾಮಿ ಮಾ ಶುಚೋ ಜನಕಾತ್ಮಜೇ ॥ ೧೨ ॥

ಮತ್ಪ್ರಸಾದಾತ್ಸಮುದ್ರಂ ಸ ತರಿಷ್ಯತಿ ಬಲೈಃ ಸಹ ।
ಮಯ್ಯೇವೇಹ ಚ ರಾಕ್ಷಸ್ಯೋ ಮಾಯಯಾ ಮೋಹಿತಾಃ ಶುಭೇ ॥೧೩

ತಸ್ಮಾದನ್ನಮಿದಂ ಸೀತೇ ಹವಿಷ್ಯಾನ್ನಮಹಂ ಸ್ವಕಮ್ ।
ಸ ತ್ವಾಂ ಸಂಗೃಹ್ಯ ವೈದೇಹಿ ಆಗತಃ ಸಹ ನಿದ್ರಯಾ ॥ ೧೪ ॥

ಏತದತ್ಸ್ಯಸಿ ಮದ್ಧಸ್ತಾನ್ನ ತ್ವಾಂ ಬಾಧಿಷ್ಯತೇ ಶುಭೇ ।
ಕ್ಷುಧಾ ತೃಷಾ ಚ ರಂಭೋರು ವರ್ಷಾಣಾಮಯುತೈರಪಿ ॥ ೧೫ ॥

ಏವಮುಕ್ತಾ ತು ದೇವೇಂದ್ರಮುವಾಚ ಪರಿಶಂಕಿತಾ ।
ಕಥಂ ಜಾನಾಮಿ ದೇವೇಂದ್ರಂ ತ್ವಾಮಿಹಸ್ಥಂ ಶಚೀಪತಿಮ್ ॥ ೧೬ ॥

ದೇವಲಿಂಗಾನಿ ದೃಷ್ಟಾನಿ ರಾಮಕ್ಷ್ಮಣಸನ್ನಿಧೌ ।
ತಾನಿ ದರ್ಶಮ ದೇವೇಂದ್ರ ಯದಿ ತ್ವಂ ದೇವರಾಟ್ ಸ್ವಯಮ್ ॥೧೭

ಸೀತಾಯಾ ವಚನಂ ಶ್ರುತ್ವಾ ತಥಾ ಚಕ್ರೇ ಶಚೀಪತಿಃ ।
ಪೃಥಿವೀಂ ನಾಸ್ಪೃಶತ್ಪದ್ಭ್ಯಾಮನಿಮೇಷೇಕ್ಷಣಾನಿ ಚ ॥ ೧೮ ॥

ಅರಜೋಽಂಬರಧಾರೀ ಚ ನ ಮ್ಲಾನಕುಸುಮಸ್ತಥಾ ।
ತಂ ಜ್ಞಾತ್ವಾ ಲಕ್ಷಣೈಃ ಸೀತಾ ವಾಸವಂ ಪರಿಹರ್ಷಿತಾ ॥ ೧೯ ॥

ಉವಾಚ ವಾಕ್ಯಂ ರುದತೀ ಭಗವದ್ರಾಘವಂ ಪ್ರತಿ ।
ಸಹ ಭ್ರಾತ್ರಾ ಮಹಾಬಾಹುರ್ದಿಷ್ಟ್ಯಾ ಮೇ ಶ್ರುತಿಮಾಗತಃ ॥ ೨೦ ॥

ಯಥಾ ಮೇ ಶ್ವಶುರೋ ರಾಜಾ ಯಥಾ ಚ ಮಿಥಿಲಾಧಿಪಃ ।
ತಥಾ ತ್ವಾಮದ್ಯ ಪಶ್ಯಾಮಿ ಸನಾಥೋ ಮೇ ಪತಿಸ್ತ್ವಯಾ ॥೨೧॥

ತವಾಜ್ಞಯಾ ಚ ದೇವೇಂದ್ರ ಪಯೋಭೂತಮಿದಂ ಹವಿಃ ।
ಅಶಿಷ್ಯಾಮಿ ತ್ವಯಾ ದತ್ತಂ ರಘೂಣಾಂ ಕುಲವರ್ಧನಮ್ ॥ ೨೨ ॥

ಇಂದ್ರಹಸ್ತಾದ್ಗೃಹೀತ್ವಾ ತತ್ಪಾಯಸಂ ಸಾ ಶುಚಿಸ್ಮಿತಾ ।
ನ್ಯವೇದಯತ ಭರ್ತ್ರೇ ಸಾ ಲಕ್ಷ್ಮಣಾಯ ಚ ಮೈಥಿಲೀ ॥ ೨೩ ॥

ಯದಿ ಜೀವತಿ ಮೇ ಭರ್ತಾ ಸಹ ಭ್ರಾತ್ರಾ ಮಹಾಬಲಃ ।
ಇದಮಸ್ತು ತಯೋರ್ಭಕ್ತ್ಯಾ ತದಾಶ್ನಾತ್ವಾಯಸಂ ಸ್ವಯಮ್ ॥ ೨೪ ॥

ಇತೀವ ತತ್ಪಾಶ್ವ ಹವಿರ್ವರಾನನಾ ಜಹೌ
ಕ್ಷುಧಾದುಃಖಸಮುದ್ಭವಂ ಚ ತಮ್ ।
ಇಂದ್ರಾತ್ಪವೃತ್ತಿಮುಲಪಭ್ಯ ಜಾನಕ
ಕಾಕುತ್ಸ್ಥಯೋಃ ಪ್ರೀತಮನಾ ಬಭೂವ ॥ ೨೫ ॥

ಸ ಚಾಪಿ ಶಕ್ರಸ್ತ್ರಿದಿವಾಯಂ ತದಾ
ಪ್ರೀತೋ ಯಯೌ ರಾಘವಕಾರ್ಯಸಿದ್ಧಯೇ ।
ಆಮಂತ್ರ್ಯ ಸೀತಾಂ ಸ ತತೋ ಮಹಾತ್ಮಾ
ಜಗಾಮ ನಿದ್ರಾಸಹಿತಃ ಸ್ವಮಾಲಯಮ್ ॥ ೨೬ ॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯ ಆದಿಕಾವ್ಯೇ
ಆರಣ್ಯಕಾಂಡೇ ಪ್ರಕ್ಷಿಪ್ತ ಸರ್ಗ ॥

ಲಂಕೆಯ ಅಶೋಕವನದಲ್ಲಿ ಸೀತೆಯನ್ನು ರಾವಣನು ಇರಿಸಿದ ಬಳಿಕ ಅತ್ತ ಬ್ರಹ್ಮದೇವರು ದೇವೇಂದ್ರನನ್ನು ಕರೆದು ಹೇಳಿದರು.- ''ಪತಿವ್ರತೆಯೂ ಸುಖದಲ್ಲಿ ಬೆಳೆದವಳು ಆದ ಸೀತೆ ಗಂಡನನ್ನು ಕಾಣದೆ ಬರೇ ರಾಕ್ಷಸಿಯರನ್ನು ನೋಡುತ್ತ ಶೋಕಪಡುತ್ತಿದ್ದಾಳೆ. ಅಲ್ಲಿರುವ ಸೀತೆಯನ್ನು ರಾಮ ತಿಳಿಯುವುದಾದರೂ ಹೇಗೆ ? ಬದುಕುವುದೇ ದುಸ್ತರವಾಗಿ ಅವಳು ಪ್ರಾಣ ಬದುಕುಳಿಯುವುದೇ ಸಂಶಯ-ವಾಗಿದೆ. ನೀನು ಶೀಘ್ರವೇ ಹೋಗಿ ಸೀತೆಗೆ ಉತ್ತಮ ಹವಿಸ್ಸನ್ನು ನೀಡು''.

ಇಂದ್ರ ಕೂಡಲೆ ನಿದ್ರಾದೇವಿಯ ಜೊತೆಗೆ ಲಂಕೆಗೆ ಹೋದನು. ಅಲ್ಲಿರುವ ರಕ್ಕಸಜನರನ್ನು ನಿದ್ರೆಗೊಳಿಸುವಂತೆ ನಿದ್ರಾದೇವಿಗೆ ಹೇಳಿದನು - ನಿದ್ರಾದೇವಿ ಕಾವಲು ರಕ್ಕಸರನ್ನೆಲ್ಲ ನಿದ್ರಾವಶರಾಗುಂತೆ ಮಾಡಿದಳು.

ದೇವೇಂದ್ರ ಸೀತೆಯ ಬಳಿ ಬಂದು - ಶುಚಿಸ್ಮಿತೇ ! ಜನಕಾತ್ಮಜೇ ! ನಾನು ದೇವರಾಜ. ದುಃಖಿಸದಿರು. ಕಾರ್ಯ ಸಿದ್ಧಿಗಾಗಿ ಬಂದಿದ್ದೇನೆ. ನಿನಗೆ ಸಹಾಯ ಮಾಡುತ್ತೇನೆ. ರಾಮ ಸೈನ್ಯದೊಂದಿಗೆ ಸಮುದ್ರ ದಾಟಿ ಬರುತ್ತಾನೆ. ನಾನೆ ನಿದ್ರೆಯ ಮಾಯೆಯಿಂದ ರಾಕ್ಷಸಿಯರು ಮೋಹಗೊಳ್ಳುವಂತೆ ಮಾಡಿದ್ದೇನೆ. ಸ್ವೀಕರಿಸು ಈ ಹವಿಷ್ಯಾನ್ನವನ್ನು. ಸಾವಿರಾರು ವರ್ಷಗಳಾದರೂ ನಿನಗೆ ಹಸಿವೆ ಬಾಯಾರಿಕೆಗಳು ಬಾಧಿಸುವುದಿಲ್ಲ ಎಂದು ಹೇಳಿದ.

ದ್ರೌಪದಿ ಶಂಕಿಸಿದಳು. ದೇವತೆಗಳ ಲಕ್ಷಣವನ್ನು ನಾನು ಆಶ್ರಮದಲ್ಲಿದ್ದಾಗ ಕಂಡಿದ್ದೆ. ಆ ದೇವತೆಗಳ ಲಕ್ಷಣವನ್ನು ಪ್ರದರ್ಶಿಸು. ದೇವೇಂದ್ರ ಎಂದು ಹೇಗೆ ನಂಬಲಿ.

ಆಗ ದೇವೇಂದ್ರ ದೇವಲಕ್ಷಣಗಳನ್ನು ತೋರಿದನು – ತನ್ನ ಪಾದಗಳು ನೆಲವನ್ನು ಸ್ಪರ್ಶಿಸುತ್ತಿರಲಿಲ್ಲ. ಕಣ್ಣ ರೆಪ್ಪೆ ಮುಚ್ಚುತ್ತಿರಲಿಲ್ಲ. ಪೀತಾಂಬರವು ಧೂಳಿನ ಕಣಗಳನ್ನು ಅಂಟಿಸಿಕೊಳ್ಳುತ್ತಿರಲಿಲ್ಲ. ಕೊರಳಿನ ಮಾಲೆ ಬಾಡಿರಲಿಲ್ಲ.

ಈ ಲಕ್ಷಣಗಳನ್ನು ನೋಡಿ ದೇವೇಂದ್ರನೆ ಬಂದವನೆಂದು ತಿಳಿದು ಹರ್ಷ-ಗೊಂಡಳು. ರಾಘವನನ್ನು ನೆನೆದು ಅಳುತ್ತ ಸೀತೆ – ಅದೃಷ್ಟವಶಾತ್ ಸಲಕ್ಷಣ ರಾಮ ನನ್ನ ಕಿವಿಗೆ ಕೇಳಿಸಿದನು. ನಿನ್ನನ್ನು ನನ್ನ ಮಾವ ದಶರಥನಂತೆ ನನ್ನ ತಂದೆ ಜನಕರಾಜನಂತೆ ಕಾಣುತ್ತಿದ್ದೇನೆ. ನಿನ್ನಿಂದ ನನ್ನ ಪತಿ ಸನಾಥನಾದನು ಎನಿಸುತ್ತಿದೆ.

ದೇವೇಂದ್ರ ! ನೀನು ಕೊಡುತ್ತಿರುವ ಈ ಪಾಯಸವನ್ನು ಇಂದು ತಿನ್ನುತ್ತೇನೆ. ಇದು ರಘುಕುಲವೃದ್ಧಿಗೆ ಸಾಧನವಾಗಲಿ.

'ನನ್ನ ಪತಿ ರಾಮ, ಅವನ ಅನುಜ ಲಕ್ಷ್ಮಣನಿಗೆ ಇದು ಅರ್ಪಿತವಾಗಲಿ' – ಎಂದು ಹೇಳಿ ಸೀತೆ ಪಾಯಸ ಸ್ವೀಕರಿಸಿದಳು. ಪಾಯಸ ಭಕ್ಷಣದಿಂದ ಹಸಿವೆ ಬಾಯಾರಿಕೆಗಳ ಬಾಧೆ ಪರಿಹಾರವಾಯಿತು. ಮನದ ದುಗುಡ ಕಡಿಮೆಯಾಗಿ ಸೀತೆ ಪ್ರಸನ್ನ ಮನಸ್ಕಳಾದಳು.

ಲಂಕಾಪುರಿಯಲ್ಲಿ ಸೀತೆ ಪ್ರವೇಶಿಸಲ್ಪಡಲು ಆಗ ಪಿತಾಮಹ ಚತುರ್ಮುಖ-ಬ್ರಹ್ಮದೇವರು ಪರಿತುಷ್ಟನಾಗಿರುವ ನೂರುಯಾಗಗಳನ್ನು ಮಾಡಿರುವ ದೇವೇಂದ್ರನನ್ನು ಕುರಿತು ಹೇಳಿದರು –

''ಮೂರು ಲೋಕದ ಹಿತಕ್ಕಾಗಿಯೂ, ರಾಕ್ಷಸರ ಅಹಿತಕ್ಕಾಗಿಯೂ ದುರಾತ್ಮ-ನಾದ ರಾವಣನಿಂದ ಸೀತೆಯು ಅಶೋಕವನದಲ್ಲಿ ಪ್ರವೇಶಿಸಲ್ಪಟ್ಟಿರುವಳು.

ಮಹಾಭಾಗ್ಯವತಿ ಪತಿವ್ರತೆ ಸೀತೆ ನಿತ್ಯದಲ್ಲಿ ಸುಖವಾಗಿ ಬೆಳೆದವಳು. ಗಂಡನನ್ನು ಕಾಣದೆ ರಕ್ಕಸಿಯರನ್ನು ನೋಡುತ್ತಿರುವಳು. ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟು ಗಂಡನ ದರ್ಶನಲಾಲಸಳಾಗಿ ನದ ನದೀ ಪತಿ ಸಾಗರದ ತೀರದಲ್ಲಿ ನೆಲೆಸಿದ್ದಾಳಷ್ಟೆ.

ಅಲ್ಲಿರುವ ಅನಿಂದಿತಳಾದ, ದುಃಖಪಟ್ಟು ಬಹುವಾಗಿ ಚಿಂತಿಸುತ್ತಿರುವ ಸೀತೆ–

ಯನ್ನು ರಾಮ ತಿಳಿಯುವುದೆಂತು ? ರಾಮ ಅವಳನ್ನು ಪಡೆಯುವುದು ದುರ್ಲಭ.

ಭೋಜನಾದಿಗಳನ್ನು ಬಿಟ್ಟು ಜೀವನಯಾತ್ರೆಯನ್ನು ಮಾಡದಿರುವ ಆ ಸೀತೆ ಖಂಡಿತವಾಗಿಯೂ ಪ್ರಾಣಬಿಡಬಹುದು. ಅವಳು ಪ್ರಾಣ ತ್ಯಾಗ ಮಾಡಿದರೆ ನಮ್ಮ ಕಾರ್ಯಸಿದ್ಧಿ ಮತ್ತೆ ಸಂದೇಹಗ್ರಸ್ತವಾಗುವುದು.

ನೀನು ಶೀಘ್ರವೆ ಇಲ್ಲಿಂದ ಲಂಕಾನಗರಿಗೆ ಹೋಗಿ ಶುಭಾನನೆ ಸೀತೆ ದೇವಿ-ಯನ್ನು ಕಂಡು ಉತ್ತಮವಾದ ಹವಿಷ್ಯಾನ್ನವನ್ನು ಅವರಿಗೆ ನೀಡು.

ಹೀಗೆ ಹೇಳಲ್ಪಟ್ಟ ದೇವೇಂದ್ರನು ರಾವಣ ಪಾಲಿತವಾದ ಲಂಕೆಗೆ ನಿದ್ರಾದೇವಿಯ ಜೊತೆಗೆ ಹೋದನು.

ಪಾಕಶಾಸನ ಇಂದ್ರನು ನಿದ್ರಾದೇವಿಗೆ ಹೇಳಿದನು – ನೀನು ಹೋಗಿ ರಕ್ಕಸರನ್ನು ಚೆನ್ನಾಗಿ ಮೋಹಗೊಳಿಸು. ಹಾಗೆ ಹೇಳೋಣಳಾದ ನಿದ್ರಾದೇವಿ ಪರಮಹರ್ಷ-ಗೊಂಡವಳಾಗಿ ದೇವಕಾರ್ಯ ರೂಪ ಪ್ರಯೋಜನಸಿದ್ಧಿಗಾಗಿ ಬಲವಾಗಿ ಮೋಹ-ಗೊಳಿಸಿದಳು. ಇದರ ನಡುವೆ ಶಚೀಪತಿ ಸಹಸ್ರಾಕ್ಷನು ಅಶೋಕವನದಲ್ಲಿದ್ದ ಸೀತೆಯ ಬಳಿ ತೆರಳಿ ಶುಚಿನಗುವಿನ ಸೀತೆಯೆ ! ನಿನಗೆ ಮಂಗಳವಾಗಲಿ, ನಾನು ದೇವರಾಜ, ಇಲ್ಲಿಗೆ ಬಂದಿದ್ದೇನೆ.

ಮಹಾತ್ಮರಾಘವನ ಕಾರ್ಯಸಿದ್ಧಿಗಾಗಿ ನಿನಗೆ ಸಹಾಯ ಮಾಡುತ್ತೇನೆ. ಜಾನಕಿ! ಶೋಕಿಸದಿರು.

ನನ್ನ ಅನುಗ್ರಹದಿಂದ ಸೇನೆಯೊಂದಿಗೆ ರಾಮಚಂದ್ರ ಸಾಗರವನ್ನು ದಾಟು-ವನು. ಶುಭೇ ! ನನ್ನಿಂದಲೇ ಮಾಯೆಯಿಂದ ರಾಕ್ಷಸಿಯರು ಮೋಹಿತರಾಗಿದ್ದಾರೆ. ಆದ್ದರಿಂದ ಸೀತೆಯೆ ! ಈ ಹವಿಷ್ಯಾನ್ನವನ್ನು ಸ್ವೀಕರಿಸು. ನಿದ್ರಾದೇವಿಯಿಂದ ಕೂಡಿಕೊಂಡು ಬಂದು ನಿನ್ನನ್ನು ಭೇಟಿಯಾಗಿದ್ದೇನೆ.

ನನ್ನ ಕೈಯಿಂದ ಅರ್ಪಿಸಿದ ಈ ಪವಿತ್ರಾನ್ನವನ್ನು ನೀನು ತಿಂದೆಯಾದರೆ ಹತ್ತು ಸಾವಿರ ವರ್ಷವಾದರೂ ಹಸಿವೆ ಬಾಯಾರಿಕೆಗಳು ಬಾಧಿಸುವುದಿಲ್ಲ.

ಹೀಗೆ ಹೇಳೋಣಳಾದ ಸೀತೆ ಸಂಶಯಗ್ರಸ್ತಳಾಗಿ ದೇವೇಂದ್ರನನ್ನು ಕುರಿತು ಹೇಳಿದಳು – ಇಲ್ಲಿ ಬಂದಿರುವ ನೀನು ಶಚೀಪತಿ ದೇವೇಂದ್ರನೆಂದು ನಾನು ಹೇಗೆ

ನಂಬಲಿ ? ರಾಮಲಕ್ಷ್ಮಣನ ಸನ್ನಿಧಿಯಲ್ಲಿ ದೇವತಾಲಕ್ಷಣಗಳನ್ನು ಕಂಡಿದ್ದೇನೆ. ನೀನು ದೇವೇಂದ್ರನೇ ಆಗಿದ್ದರೆ ಆ ದೇವತಾ ಲಕ್ಷಣಗಳನ್ನು ತೋರು.

ಸೀತೆಯ ಮಾತನ್ನು ಕೇಳಿ ಶಚೀಪತಿಯು ದೇವತಾಲಕ್ಷಣಗಳನ್ನು ತೋರಿದನು. ಪಾದಗಳಿಂದ ಭೂಮಿಯನ್ನು ಮುಟ್ಟಲಿಲ್ಲ. ಕಣ್ಣುರೆಪ್ಪೆ ಮುಚ್ಚಲಿಲ್ಲ. ಪೀತಾಂಬರವು ಭೂಮಿಯ ಧೂಳನ್ನು ಅಂಟಿಸಿಕೊಳ್ಳುತ್ತಿರಲಿಲ್ಲ. ಕೊರಳ ಮಾಲೆ ಬಾಡಿರಲಿಲ್ಲ. ಆ ಲಕ್ಷಣಗಳಿಂದ ದೇವೇಂದ್ರನೆಂಬುದನ್ನು ತಿಳಿದು ಸೀತೆ ಹರ್ಷಗೊಂಡಳು.

ಭಗವಂತ ರಾಮನನ್ನು ನೆನೆದು ಅಳುತ್ತಾ ಸೀತೆ ಹೇಳಿದಳು - ಲಕ್ಷ್ಮಣ ಸಹಿತರಾಮನ ವಿಷಯ ಅದೃಷ್ಟವಶಾತ್ ಕಿವಿಗೆ ಬಿತ್ತು. ದೇವೇಂದ್ರ ! ನನ್ನ ಮಾವ ದಶರಥರನ್ನು, ನನ್ನ ತಂದೆ ಮಿಥಿಲಾಪತಿಗಳನ್ನು ನಿನ್ನಲ್ಲಿ ಕಾಣುತ್ತಿದ್ದೇನೆ. ನಿನ್ನಿಂದ ನನ್ನ ಪತಿ ಸನಾಥರಾದರು.

ದೇವೇಂದ್ರ ನಿನ್ನಾಜ್ಞೆಯಿಂದ ನೀನಿತ್ತ ಈ ಹವಿಷ್ಯಾನ್ನ = ಹಾಲಿನ ಪಾಯಸವನ್ನು ರಘುಕುಲ ವೃದ್ಧಿಗೆ ಕಾರಣವಾದುದನ್ನು ತಿನ್ನುತ್ತೇನೆ.

ಆ ಪಾಯಸವನ್ನು ಇಂದ್ರನ ಕೈಯಿಂದ ಸ್ವೀಕರಿಸಿ ಶುಚಿಸ್ಮಿತೆಯಾದ ಸೀತೆ ಮೈಥಿಲಿಯು ತನ್ನ ಪತಿಯಾದ ರಾಮನಿಗೆ ತನ್ನ ಮೈದುನ ಲಕ್ಷ್ಮಣನಿಗೆ ನಿವೇದಿಸಿ ನನ್ನ ಮಹಾಬಲಶಾಲಿ ಪತಿ ಶ್ರೀರಾಮಚಂದ್ರ ಲಕ್ಷ್ಮಣನೊಂದಿಗೆ ಜೀವಂತನಾಗಿ-ದ್ದಾನೆ. ಅವರಿಗೆ ಅರ್ಪಿತವಾಗಲಿದು ಎಂದು ಹೇಳಿ ಭಕ್ತಿಯಿಂದ ಪಾಯಸವನ್ನು ಸ್ವೀಕರಿಸಿದಳು.

ವರಾನನೆಯಾದ ಸೀತೆ ಹೀಗೆ ಆ ಹವಿಷ್ಯಾನ್ನವನ್ನು ಸ್ವೀಕರಿಸಿ ಹಸಿವೆಯ ಬಾಧೆಯನ್ನು ನೀಗಿಕೊಂಡಳು. ಇಂದ್ರನಿಂದ ರಾಮಲಕ್ಷ್ಮಣರ ಸುದ್ದಿ ತಿಳಿದು ಪ್ರಸನ್ನ ಮನಸ್ಕಳಾದಳು.

ಆಗ ನಿದ್ರಾದೇವಿಯೊಂದಿಗೆ ಮಹಾತ್ಮ ಶಕ್ರನುರಾಘವಕಾರ್ಯ ಸಿದ್ಧಿಗಾಗಿ ಸೀತೆಯ ಅನುಮತಿ ಪಡೆದು ತನ್ನ ನಿವಾಸ ಸ್ಥಾನಕ್ಕೆ ಹೊರಟನು.

(ಈ ಸರ್ಗವು ಪ್ರಕ್ಷಿಪ್ತವೆಂದು ರಾಮಾಯಣ ಪುಸ್ತಕಗಳಲ್ಲಿ ಉಲ್ಲೇಖಿಸಲಾಗಿದೆ. ವ್ಯಾಖ್ಯಾನ ಕಾರರು ಇದನ್ನು ವ್ಯಾಖ್ಯಾನಿಸಿಲ್ಲ. ಸರ್ಗ ಸಂಖ್ಯೆಯಲ್ಲಿ ಇದನ್ನು ಪರಿಗಣಿಸಿಲ್ಲ. ಸಂಗ್ರಹ ರಾಮಾಯಣದಲ್ಲಿ ಅಥವಾ ತಾತ್ಪರ್ಯ ನಿರ್ಣಯದಲ್ಲಿ ಇಂದ್ರ ಪಾಯಸ ನೀಡಿದ ವೃತ್ತಾಂತದ ಉಲ್ಲೇಖವಿಲ್ಲ.)

❖

ಸಪ್ತಪಂಚಾಶಃ ಸರ್ಗಃ

ಕಥಾಸಾರಾಂಶ– ರಾಘವನು ಮೃಗರೂಪದ ಮಾರೀಚನನ್ನು ಕೊಂದು ಮೈಥಿಲಿಯನ್ನು ಕಾಣುವ ಬಯಕೆಯಿಂದ ಆವಸರವಾಗಿ ಬರುತ್ತಿದ್ದನು. ದಾರಿಯಲ್ಲಿ ರಾಮನ ಬೆನ್ನ ಹಿಂದೆ ನರಿಯು ವಿಕಾರವಾಗಿ ಕೂಗಿತು. ಘೋರವಾದ ಗಾಬರಿ ಹುಟ್ಟಿಸುವ ನರಿಯ ಕೂಗು ಕೇಳಿ ರಾಮ ಚಿಂತಿಸಿದ – 'ಈ ನರಿಯ ಕೂಗು ಅಪಶಕುನವಾಗಿದೆ. ನನ್ನ ಮೈಥಿಲಿಯು ಅಸುರರಿಗೆ ಆಹಾರವಾಗದೆ ಕ್ಷೇಮವಾಗಿರು–ವಳೆ ? ಮಾರೀಚ ಸಾಯುವಾಗ, 'ಹಾ ಸೀತೆ ಹಾ ಲಕ್ಷ್ಮಣ' ಎಂದು ಕೂಗಿದ. ಆ ಕೂಗು ಲಕ್ಷ್ಮಣನ ಕಿವಿಗೆ ಕೇಳಿಸಿದ್ದರೆ ಸ್ವಯಂ ಮೈಥಿಲಿಯನ್ನು ಬಿಟ್ಟು, ಅಥವಾ ಅವಳಿಂದ ಪ್ರಚೋದಿತನಾಗಿಯೇ ಅವನು ಇಲ್ಲಿಗೆ ಬಂದು ಬಿಡಬಹುದು.

ಸೀತೆಯ ಗತಿ ಏನು ? ನನ್ನನ್ನು ಮಾಯಾಮೃಗದ ಹಿಂದ ಓಡುವಂತೆ ಮಾಡಿ ಸೀತೆಯನ್ನು ಕೊಲ್ಲುವ ಹುನ್ನಾರ ರಕ್ಕಸರಿಗೆ ಇರಬಹುದು.

ಸೀತೆ ಲಕ್ಷ್ಮಣರು ಸುಖವಾಗಿರುತ್ತಾರೆ ತಾನೆ ? ಜನಸ್ಥಾನದಲ್ಲಿ ನಾನು ರಕ್ಕಸರೊಂದಿಗೆ ವೈರ ಕಟ್ಟಿಕೊಂಡಿದ್ದೇನೆ. ಏನಾಗುವುದೋ ? ಘೋರನಿಮಿತ್ತಗಳು ಬೇರೆ ಗೋಚರಿಸುತ್ತಿದೆ'. ಹೀಗೆಲ್ಲ ಚಿಂತಿಸುತ್ತ ಆತಂಕದಿಂದಲೆ ಜನಸ್ಥಾನದೆಡೆಗೆ ರಾಮ ಧಾವಿಸಿ ಬರುತ್ತಿದ್ದನು. ದಾರಿಯಲ್ಲಿ ಅನೇಕ ಮೃಗಪಕ್ಷಿಗಳು ರಾಮನಿಗೆ ಅಪ್ರದಕ್ಷಿಣೆ–ಯಾಗಿ ಬಂದು ಕೂಗುತ್ತ ಸಾಗುತ್ತಿದ್ದನು. ಅದನ್ನೆಲ್ಲ ಕೇಳಿ ಗಮನಿಸಿದ ರಾಮನಿಗೆ ಆ ಘೋರ ನಿಮಿತ್ತಗಳು ಶಕುನಗಳೆಲ್ಲ ಅವನ ಮನದ ದುಗುಡವನ್ನು ಇಮ್ಮಡಿಗೊಳಿಸಿದವು.

ಸೀತೆಯನ್ನು ಮಹಾಬಲಲಕ್ಷ್ಮಣನನ್ನು ನೆಗೆಯುತ್ತ ನೆಗೆಯುತ್ತ ತ್ವರೆಯಿಂದ ಆಶ್ರಮದೆಡೆಗೆ ಧಾವಂತದಲ್ಲಿ ಬರುತ್ತಿದ್ದಾನೆ.

ಅಷ್ಟರಲ್ಲಿ ಭಯಗ್ರಸ್ತನಾದ ವಿಷಣ್ಣನಾದ ದುಃಖಮಡುಗಟ್ಟಿದ ನಿಸ್ತೇಜ ಮೊಗದ ಲಕ್ಷ್ಮಣ ಬರುವುದನ್ನು ಕಂಡ. ರಕ್ಕಸರಿರುವ ವನದಲ್ಲಿ ಸೀತೆಯನ್ನು ಒಂಟಿಯಾಗಿಬಿಟ್ಟು ಲಕ್ಷ್ಮಣನೇಕೆ ಬಂದ ಎಂದು ಆತಂಕ ಕೋಪಗಳು ಉಕ್ಕೇರಿದವು.

ಲಕ್ಷ್ಮಣನ ಕೈಹಿಡಿದು ಪ್ರೀತಿಯಿಂದಲೆ ತುಂಬ ಕೋಪವನ್ನು ತೋರಿದ ಸೀತೆಯನ್ನು ನೀನು ಬಿಟ್ಟು ಬಂದದ್ದು ದೊಡ್ಡ ತಪ್ಪು. ಏಕೆ ಹೀಗೆ ಮಾಡಿದೆ ? ಸಂಶಯವೇ ಇಲ್ಲ. ಖಂಡಿತವಾಗಿ ಸೀತೆ ನಾಶವಾಗಿರುತ್ತಾಳೆ ಅಥವಾ ರಕ್ಕಸರಿಂದ ಭಕ್ಷಿತಳಾಗಿರುತ್ತಾಳೆ. ಬಹಳ ಸಮಯದಿಂದ ಬರೇ ಅಪಶಕುನಗಳೆ ಗೋಚರಿಸುತ್ತಿವೆ.

ಲಕ್ಷ್ಮಣ ! ಬೇಗ ಬಾ ಸೀತೆಯ ಬಳಿಗೆ ಹೋಗೋಣ. ಅವಳಿಗೆ ಏನಾಗಿದೆಯೋ ?

ಎಡಗಣ್ಣು ಬೇರೆ ಅದರುತ್ತಿದೆ. ಈ ನರಿ ಮೃಗಪಕ್ಷಿಗಳು ಬೇರೆ ಅಶುಭಸೂಚಕಗಳಂತೆ ಕೂಗುತ್ತಿವೆ. ಮನಸ್ಸು ದೀನವಾಗಿದೆ. ನಿಶ್ಚಿತವಾಗಿ ಸೀತೆ ಇಲ್ಲ. ಒಂದೋ ಸತ್ತಿರಬಹುದು ಅಥವಾ ಅಪಹೃತಳಾಗಿರಬಹುದೋ ತಿಳಿದಿಲ್ಲ.

❖

ರಾಮಪ್ರತ್ಯಾಗಮನಮ್

ರಾಕ್ಷಸಂ ಮೃಗರೂಪೇಣ ಚರಂತಂ ಕಾಮರೂಪಿಣಮ್ ।
ನಿಹತ್ಯ ರಾಮೋ ಮಾರೀಚಂ ತೂರ್ಣಂ ಪಥಿ ನಿವರ್ತತೇ ॥೧॥

ತಸ್ಯ ಸಂತ್ವರಮಾಣಸ್ಯ ದ್ರಷ್ಟುಕಾಮಸ್ಯ ಮೈಥಿಲೀಮ್ ।
ಕ್ರೂರಸ್ವನೋಽಥ ಗೋಮಾಯುರ್ವಿನನಾದಾಸ್ಯ ಪೃಷ್ಠತಃ ॥೨॥

ಸ ತಸ್ಯ ಸ್ವರಮಾಜ್ಞಾಯ ದಾರುಣಂ ರೋಮಹರ್ಷಣಮ್ ।
ಚಿಂತಯಾಮಾಸ ಗೋಮಾಯೋಃ ಸ್ವರೇಣ ಪರಿಶಂಕಿತಃ ॥೩॥

ಅಶುಭಂ ಬತ ಮನ್ಯೇಽಹಂ ಗೋಮಾಯುರ್ವಾಶತೇ ಯಥಾ ।
ಸ್ವಸ್ತಿ ಸ್ಯಾದಪಿ ವೈದೇಹ್ಯಾ ರಾಕ್ಷಸೈರ್ಭಕ್ಷಣಂ ವಿನಾ ॥೪॥

ಮಾರೀಚೇನ ತು ವಿಜ್ಞಾಯ ಸ್ವರಮಾಲಕ್ಷ್ಯ ಮಾಮಕಮ್ ।
ಆಕ್ರುಷ್ಟಂ ಮೃಗರೂಪೇಣ ಲಕ್ಷ್ಮಣಃ ಶೃಣುಯಾದ್ಯದಿ ॥೫॥

ಸ ಸೌಮಿತ್ರಿಃ ಸ್ವರಂ ಶ್ರುತ್ವಾ ತಾಂ ಚ ಹಿತ್ವಾ ಚ ಮೈಥಿಲೀಮ್ ।
ತಯೈವ ಪ್ರಹಿತಃ ಕ್ಷಿಪ್ರಂ ಮತ್ಸಕಾಶಮಿಹೈಷ್ಯತಿ ॥೬॥

ರಾಕ್ಷಸೈಃ ಸಹಿತೈರ್ನೂನಂ ಸೀತಾಯಾ ಈಪ್ಸಿತೋ ವಧಃ ।
ಕಾಂಚನಶ್ಚ ಮೃಗೋ ಭೂತ್ವಾ ವ್ಯಪನೀಯಾಶ್ರಮಾತ್ತು ಮಾಮ್ ॥೭॥

ದೂರಂ ನೀತ್ವಾ ತು ಮಾರೀಚೋ ರಾಕ್ಷಸೋಽಭೂಚ್ಛರಾಹತಃ ।
ಹಾ ಲಕ್ಷ್ಮಣ ಹತೋಽಸ್ಮೀತಿ ಯದ್ವಾಕ್ಯಂ ವ್ಯಾಜಹಾರ ಹ ॥೮॥

ಅಪಿ ಸ್ವಸ್ತಿ ಭವೇದ್ದ್ವಾಭ್ಯಾಂ ರಹಿತಾಭ್ಯಾಂ ಮಯಾ ವನೇ ।
ಜನಸ್ಥಾನನಿಮಿತ್ತಂ ಹಿ ಕೃತವೈರೋಽಸ್ಮಿ ರಾಕ್ಷಸೈಃ ॥೯॥

ನಿಮಿತ್ತಾನಿ ಚ ಘೋರಾಣಿ ದೃಶ್ಯಂತೇಽದ್ಯ ಬಹೂನಿ ಚ ।
ಇತ್ಯೇವಂ ಚಿಂತಯನ್ ರಾಮಃ ಶ್ರುತ್ವಾ ಗೋಮಾಯುನಿಃಸ್ವನಮ್ ॥

ಆತ್ಮನಶ್ಚಾಪನಯನಾನ್ಮೃಗರೂಪೇಣ ರಕ್ಷಸಾ ।
ಆಜಗಾಮ ಜನಸ್ಥಾನಂ ರಾಘವಃ ಪರಿಶಂಕಿತಃ ॥೧೧॥

ಬಯಸಿದಂಥ ರೂಪವನ್ನು ಹೊಂದುವ, ಜಿಂಕೆಯ ರೂಪವನ್ನು ತೊಟ್ಟು ಸಂಚರಿಸುತ್ತಿದ್ದ ರಕ್ಕಸ ಮಾರೀಚನನ್ನು ಕೊಂದು ರಾಮನು ವೇಗವಾಗಿ ಹಿಂತಿರುಗಿದನು.

ಮೈಥಿಲಿಯನ್ನು ಕಾಣುವ ಬಯಕೆ ಹೊತ್ತು ಅವಸರವಸರವಾಗಿ ಬರುತ್ತಿದ್ದ ರಾಮನ ಹಿಂದೆ ನರಿಯು ಕ್ರೂರ ಸ್ವರದಿಂದ ಕೂಗಿತು.

ಭಯಂಕರವಾದ ರೋಮ ನಿಮಿರೇಳಿಸುವಂಥ ಆ ಸ್ವರವನ್ನು ಕೇಳಿ ನರಿಯ ಕೂಗಿನಿಂದ ಶಂಕಿತನಾದ ರಾಮ ಚಿಂತಿಸಿದ –

ಈ ನರಿಯ ಕೂಗಿನ ರೀತಿ ಅಶುಭಸೂಚಕವಾಗಿದೆ. ರಕ್ಕಸರಿಗೆ ಆಹಾರವಾಗದೆ ಮೈಥಿಲಿ ಕ್ಷೇಮವಾಗಿರುವಳಲ್ಲವೇ ?

ಮಾರೀಚನು ನನ್ನ ಸ್ವರವನ್ನು ಅನುಕರಿಸಿ ಮೃಗರೂಪದಿಂದ ಕೂಗಿದುದನ್ನು ಲಕ್ಷ್ಮಣನು ಕೇಳಿಸಿಕೊಂಡಿದ್ದರೆ ಆ ಸೌಮಿತ್ರಿಯು ಸ್ವರವನ್ನು ಕೇಳಿ ತಾನೇ ಅಥವಾ ಸೀತೆಯ ಪ್ರಚೋದನೆಯಿಂದಲೇ ಸೀತೆಯನ್ನು ಬಿಟ್ಟು ಕೂಡಲೆ ಇಲ್ಲಿಗೆ ಬಂದು ಬಿಡುವನು !

ಬಂಗಾರದ ಜಿಂಕೆಯ ರೂಪ ತಾಳಿ ನನ್ನನ್ನು ಪ್ರಲೋಭನೆಗೊಳಿಸಿ ಆಶ್ರಮದಿಂದ ದೂರ ಹೋಗುವಂತೆ ಮಾಡಿ ಸೀತೆಯನ್ನು ಕೊಲ್ಲಬೇಕೆಂದು ನಿಶ್ಚಿತವಾಗಿ ಎಲ್ಲ ರಕ್ಕಸರ ನಿರ್ಣಯವಿರಬಹುದು. ಅದೇ ಕಾರಣಕ್ಕೆ –ಮಾರೀಚನು ನನ್ನನ್ನು ಬಹುದೂರಕ್ಕೆ ಒಯ್ದು ನನ್ನಿಂದ ಶರಾಹತನಾಗಿ 'ಹಾ ಲಕ್ಷ್ಮಣ ! ಸತ್ತೆ' ಎಂದು ಮಾತನಾಡಿದ್ದು.

ರಾಮಲಕ್ಷ್ಮಣರಿಂದ ರಹಿತಳಾದ ಸೀತೆ ಮಹಾವನದಲ್ಲಿ ಕ್ಷೇಮವಾಗಿರಬಲ್ಲಳೆ ? ಜನಸ್ಥಾನನಿಮಿತ್ತವಾಗಿ ನಾನು ರಕ್ಕಸರೊಂದಿಗೆ ವೈರಕಟ್ಟಿಕೊಂಡಿದ್ದೇನೆ !

ಇಂದು ಬಹುಘೋರ ನಿಮಿತ್ತಗಳು ಕಾಣುತ್ತಿವೆ ! ಹೀಗೆ ನರಿಯ ಕೂಗಿನಿಂದ ಆತಂಕವಾಗಿ ಮೃಗರೂಪದ ಮಾರೀಚನು ತನ್ನನ್ನು ಕಾಡಿನಲ್ಲಿ ಬಹುದೂರ ಬರುವಂತೆ ಮಾಡಿದ್ದು ಎಲ್ಲವನ್ನು ಚಿಂತಿಸುತ್ತ ರಾಘವನು ಜನಸ್ಥಾನಕ್ಕೆ ಬಂದನು.

ತಂ ದೀನಮಾನಸಂ ದೀನಮಾಸೇದುರ್ಮೃಗಪಕ್ಷಿಣಃ ।
ಸವ್ಯಂ ಕೃತ್ವಾ ಮಹಾತ್ಮಾನಂ ಘೋರಾಂಶ್ಚ ಸಸೃಜುಃ ಸ್ವರಾನ್ ॥೧೨॥

ತಾನಿ ದೃಷ್ಟ್ವಾ ನಿಮಿತ್ತಾನಿ ಮಹಾಘೋರಾಣಿ ರಾಘವಃ ।
ನ್ಯವರ್ತತಾಥ ತ್ವರಿತೋ ಜವೇನಾಶ್ರಮಮಾತ್ಮನಃ ॥೧೩॥

ಸ ತು ಸೀತಾಂ ವರಾರೋಹಾಂ ಲಕ್ಷ್ಮಣಂ ಚ ಮಹಾಬಲಮ್ ।
ಆಜಗಾಮ ಜನಸ್ಥಾನಂ ಚಿಂತಯನ್ನೇವ ರಾಘವಃ ॥೧೪॥

ದೀನನಾದ ಆ ಮಹಾತ್ಮ ರಾಮನನ್ನು ದೀನಮನದ ಮೃಗ ಪಕ್ಷಿಗಳು ಅಪ್ರದಕ್ಷಿಣವಾಗಿ ಘೋರವಾಗಿ ಸ್ವರಗೈಯ್ಯುತ್ತ ಸಾಗಿ ಹೋದವು.

ಆ ಮಹಾಘೋರ ನಿಮಿತ್ತಗಳನ್ನು ಗಮನಿಸುತ್ತ ತ್ವರಿತವಾಗಿ ಹಿಂತಿರುಗಿದನು ತನ್ನ ಆಶ್ರಮಕ್ಕೆ.

ಸುಂದರಿ ಸೀತೆಯನ್ನು ಮಹಾಬಲ ಲಕ್ಷ್ಮಣನನ್ನು ನೆನೆಯುತ್ತ ರಾಘವನು ಜನಸ್ಥಾನದ ಬಳಿಗೆ ಬಂದನು. ಅಷ್ಟರಲ್ಲಿ ಪ್ರಭಾಹೀನನಾಗಿ ಎದುರು ಬರುತ್ತಿರುವ ಲಕ್ಷ್ಮಣನನ್ನು ಕಂಡನು.

ತತೋ ಲಕ್ಷ್ಮಣಮಾಯಾಂತಂ ದದರ್ಶ ವಿಗತಪ್ರಭಮ್ ।
ತತೋಽವಿದೂರೇ ರಾಮೇಣ ಸಮೀಯಾಯ ಸ ಲಕ್ಷ್ಮಣಃ ॥೧೫॥

ವಿಷಣ್ಣಃ ಸುವಿಷಣ್ಣೇನ ದುಃಖಿತೋ ದುಃಖಭಾಗಿನಾ ।
ಸಂಜಗರ್ಹೇಽಥ ತಂ ಭ್ರಾತಾ ದೃಷ್ಟ್ವಾ ಲಕ್ಷ್ಮಣಮಾಗತಮ್ ॥೧೬॥

ವಿಹಾಯ ಸೀತಾಂ ವಿಜನೇ ವನೇ ರಾಕ್ಷಸಸೇವಿತೇ ।
ಗೃಹೀತ್ವಾ ಚ ಕರಂ ಸವ್ಯಂ ಲಕ್ಷ್ಮಣಂ ರಘುನಂದನಃ ॥೧೭॥

ಉವಾಚ ಮಧುರೋದರ್ಕಮಿದಂ ವಚನಮಾರ್ತವತ್ ।
ಅಹೋ ಲಕ್ಷ್ಮಣ ಗರ್ಹ್ಯಂ ತೇ ಕೃತಂ ಯಸ್ತ್ವಂ ವಿಹಾಯ ತಾಮ್ ॥

ಸೀತಾಮಿಹಾಗತಃ ಸೌಮ್ಯ ಕಚ್ಚಿತ್ ಸ್ವಸ್ತಿ ಭವೇದಿಹ ।
ನ ಮೇಽಸ್ತಿ ಸಂಶಯೋ ವೀರ ಸರ್ವಥಾ ಜನಕಾತ್ಮಜಾ ॥೧೯॥

ವಿನಷ್ಟಾ ಭಕ್ಷಿತಾ ವಾಪಿ ರಾಕ್ಷಸೈರ್ವನಚಾರಿಭಿಃ ।
ಅಶುಭಾನ್ಯೇವ ಭೂಯಿಷ್ಠಂ ಯತಾ ಪ್ರಾದುರ್ಭವಂತಿ ಮೇ ॥೨೦॥

ಬಳಿಕ ತುಂಬ ವಿಷಣ್ಣನೂ ಸುದುಃಖಿತನೂ ಆದ ರಾಮನನ್ನು ವಿಷಣ್ಣನು ದುಃಖಿತನೂ ಆದ ಲಕ್ಷ್ಮಣನು ಸಮೀಪಿಸಿದನು.

ರಾಕ್ಷಸರ ನೆಲೆಯಾದ ನಿರ್ಜನವನದಲ್ಲಿ ಸೀತೆಯನ್ನು ಬಿಟ್ಟು ಬಂದು ಲಕ್ಷ್ಮಣ-ನನ್ನು ಅಣ್ಣ ರಾಮನು ನಿಂದಿಸಿದನು.

ರಘುನಂದನನು ಲಕ್ಷ್ಮಣನನ್ನು ಬಲಗೈ ಹಿಡಿದು ಆರ್ತಿಯನ್ನೊಳಗೊಂಡ, ಮುಂದೆ ಮಧುರವಾಗಲಿರುವಂಥ ಪರುಷವಾದ ಮಾತನ್ನಾಡಿದನು – ಅಯ್ಯೋ ! ಲಕ್ಷ್ಮಣ! ಸೀತೆಯನ್ನು ಬಿಟ್ಟು ಬಂದು ತಪ್ಪುಮಾಡಿದೆ. ಸೌಮ್ಯನೇ! ಸೀತೆ ಕ್ಷೇಮವೆ ?

ವೀರನೆ ! ವನಚಾರಿ ರಾಕ್ಷಸರು ಸೀತೆಯನ್ನು ಸರ್ವಥಾ ನಾಶಮಾಡಿರಬಹುದು. ಅಥವಾ ತಿಂದು ಹಾಕಿರಬಹುದು. ನನಗೆ ಸಂದೇಹವೇ ಇಲ್ಲ. ಅಶುಭಸೂಚಕ ಅಪಶಕುನಗಳೇ ನನ್ನ ಸುತ್ತಲೂ ಗೋಚರಿಸುತ್ತವೆ.

ಪುರುಷಶ್ರೇಷ್ಠ ಲಕ್ಷ್ಮಣನೆ ? ಸಮಗ್ರವಾಗಿ ಕ್ಷೇಮವಾಗಿರುವ ಸೀತೆಯನ್ನು ನಾವು ಪಡೆಯಬಲ್ಲವೆ ?

ಈ ಜಿಂಕೆಗಳ ಗುಂಪು ಅಪ್ರದಕ್ಷಿಣೆಯಾಗಿ ಸಾಗುತ್ತಿವೆ ! ನರಿಯು ವಿಕಾರವಾಗಿ ಅರಚುತ್ತಿವೆ ! ಉರಿಯುತ್ತಿರುವಂತಿರುವ ದಿಕ್ಕುಗಳಲ್ಲಿ ಹಕ್ಕಿಗಳು ಕರ್ಕಶವಾಗಿ ಕಿರುಚುತ್ತಿವೆ ! ಮಹಾಬಲನೆ ! ರಾಜಪುತ್ರಿ ಸೀತೆ ಕ್ಷೇಮವಾಗಿರಬಲ್ಲಳೇ ?

ಈ ಜಿಂಕೆಯ ರೂಪದಿಂದ ಬಂದ ರಕ್ಕಸ ನನ್ನನ್ನು ಪ್ರಲೋಭನಗೊಳಿಸಿ ಬಹುದೂರದವರಗೆ ಕೊಂಡೊಯ್ದು ಬಿಟ್ಟಿತು. ಮಹಾಶ್ರಮದಿಂದ ಮಾಯಾ-ಮೃಗವು ಹತವಾಯಿತು. ಅದು ಸಾಯುತ್ತಿದ್ದಂತೆ ಮನವು ದೀನವಾಗಿದೆ. ದುಗುಡಗೊಂಡಿದೆ. ಎಡಕಣ್ಣು ಅದರುತ್ತಿದೆ. ಲಕ್ಷ್ಮಣ ! ಖಂಡಿತವಾಗಿ ಸೀತೆ ಇರುವುದಿಲ್ಲ. ಒಂದೋ ಅಪಹೃತಳಾಗಿರಬಹುದು ಅಥವಾ ಮೃತಳಾಗಿರಬಹುದು. ಅಥವಾ ಯಾವುದೋ ದಾರಿಯಲ್ಲಿರಬಹುದು.

ಅಪಿ ಲಕ್ಷ್ಮಣ ಸೀತಾಯಾಃ ಸಾಮಗ್ರ್ಯಂ ಪ್ರಾಪ್ನುಯಾವಹೇ ।
ಜೀವಂತ್ಯಾಃ ಪುರುಷವ್ಯಾಘ್ರ ಸುತಾಯಾ ಜನಕಸ್ಯ ವೈ ॥೨೧॥

ಯಥಾ ವೈ ಮೃಗಸಂಘಾಶ್ಚ ಗೋಮಾಯುಶ್ಚೈವ ಭೈರವಮ್ ।
ವಾಶಂತೇ ಶಕುನಾಶ್ಚಾಪಿ ಪ್ರದೀಪ್ತಾಮಭಿತೋ ದಿಶಮ್ ॥೨೨॥

ಅಪಿ ಸ್ವಸ್ತಿ ಭವೇತ್ತಸ್ಯಾ ರಾಜಪುತ್ರ್ಯಾ ಮಹಾಬಲ ॥

ಇದಂ ಹಿ ರಕ್ಷೋ ಮೃಗಸನ್ನಿಕಾಶಂ
ಪ್ರಲೋಭ್ಯ ಮಾಂ ದೂರಮನುಪ್ರಯಾತಮ್ ।
ಹತಂ ಕಥಂಚಿನ್ಮಹತಾ ಶ್ರಮೇಣ ಸ
ರಾಕ್ಷಸೋಽಭೂನ್ಮ್ರಿಯಮಾಣ ಏವ ॥೨೩॥

ಮನಶ್ಚ ಮೇ ದೀನಮಿಹಾಪ್ರಹೃಷ್ಟಂ
ಚಕ್ಷುಶ್ಚ ಸವ್ಯಂ ಕುರುತೇ ವಿಕಾರಮ್ ।
ಅಸಂಶಯಂ ಲಕ್ಷ್ಮಣ ನಾಸ್ತಿ ಸೀತಾ
ಹೃತಾ ಮೃತಾ ವಾ ಪಥಿ ವರ್ತತೇ ವಾ ॥೨೪॥

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟಪಂಚಾಶಃ ಸರ್ಗಃ

ಕಥಾಸಾರಾಂಶ– ದಶರಥ ನಂದನ ರಾಮ ಸೀತೆಯನ್ನು ಬಿಟ್ಟು ದೀನನಾಗಿ ಬಂದ ಲಕ್ಷ್ಮಣನನ್ನು ಕುರಿತು ಕೇಳಿದನು – ಲಕ್ಷ್ಮಣ ! ನಾನು ದಂಡಕಾರಣ್ಯಕ್ಕೆ ಹೊರಟಾಗ ಯಾರು ನನ್ನನ್ನು ಅನುಸರಿಸಿ ಬಂದಳೋ ಸದ್ಯ ಯಾರನ್ನು ನೀನು ಬಿಟ್ಟು ಬಂದಿರುವೆಯೋ ಆ ಸೀತೆ ಎಲ್ಲಿರುವಳು ?

ರಾಜ್ಯಭ್ರಷ್ಟನಾಗಿ ದೀನನಾಗಿ ದಂಡಕಾರಣ್ಯಕ್ಕೆ ಹೊರಟ ನನ್ನ ದುಃಖದಲ್ಲಿ ಸಹಾಯಕಳಾದ ಕೃಶನಡುವಿನ ವೈದೇಹಿ ಎಲ್ಲಿ ಹೋದಳು ?

ಯಾರಿಲ್ಲದೇ ಮುಹೂರ್ತಕಾಲವೂ ಜೀವಿಸಲಾರೆ ಅಂತಹ ಪ್ರಾಣಸಹಾಯಕಳಾದ ಸೀತೆ ಎಲ್ಲಿ ?

ಬಂಗಾರದಂತಹ ಜಾನಕಿಯನ್ನು ಬಿಟ್ಟು ದೇವತೆಗಳ ಒಡೆತನ ಹಾಗೂ ಪೃಥಿವಿಯ ಒಡೆತನವನ್ನು ಬಯಸುವುದಿಲ್ಲ

ನನ್ನ ಪ್ರಾಣಕ್ಕಿಂತಲೂ ಪ್ರಿಯಳಾದ ವೈದೇಹಿ ಬದುಕಿರುವಳೇ ? ಸೌಮ್ಯನೇ ! ಕಾಡಿನಲ್ಲಿ ಈ ನನ್ನ ಅಲೆದಾಟ ವ್ಯರ್ಥವಾಗುವುದಿಲ್ಲವೇ ?

ಸೌಮಿತ್ರಿಯೇ ! ಸೀತಾನಿಮಿತ್ತವಾಗಿ ನಾನು ಮೃತನಾದರೆ ಕೈಕೇಯಿಯು ಸಕಾಮಳೂ ಸುಖಿಯೂ ಆಗುವಳಲ್ಲವೇ ?

ಸೌಮ್ಯ ! ಮೃತಪುತ್ರಳಾದ ಕೌಸಲ್ಯೆ ಪುತ್ರರಾಜ್ಯ ಸಂಪನ್ನಳಾದ ಕೈಕೇಯಿಯನ್ನು ಹೊಂದಿಕೊಂಡು ಇರಬಲ್ಲಳೇ. ಸೀತೆ ಬದುಕಿದ್ದರೆ ಆಶ್ರಮಕ್ಕೆ ಹೋಗುತ್ತೇನೆ. ಅಲ್ಲಿ ಅವಳು ಬದುಕಿಲ್ಲ, ಅವಳ ನಗುಮೊಗದ ಸ್ವಾಗತ ದೊರೆಯಲಿಲ್ಲವೆಂದರೆ ನಾನು ಪ್ರಾಣ ಬಿಡುತ್ತೇನೆ.

ಲಕ್ಷ್ಮಣ ! ಹೇಳು. ವೈದೇಹಿ ಬದುಕಿಹಳೇ ? ಆ ದುಷ್ಟ ಮಾರೀಚ ಸಾಯುವಾಗ 'ಹಾ ಲಕ್ಷ್ಮಣ !' ಎಂದು ಕೂಗಿ ಸತ್ತ. ಅದನ್ನು ಕೇಳಿ ನಿನ್ನ ಮನದಲ್ಲಿಯೂ ಭಯಹುಟ್ಟಿತು. ಆ ಕೂಗು ವೈದೇಹಿಯ ಕಿವಿಗೆ ಕೂಡ ಬಿತ್ತು. ಅವಳೂ ಹೆದರಿ ನಿನ್ನನ್ನು ಕಳುಹಿಸಿರುವಳು.

ಖರನನ್ನು ಕೊಂದದ್ದರಿಂದ ರಕ್ಕಸರಿಗೆ ದುಃಖವಾಗಿದೆ. ಅವರಿಂದ ಸೀತೆ ಹತಳಾಗುವಳು ಸಂಶಯವಿಲ್ಲ.

ಸಂಕಟದ ಸಮುದ್ರದಲ್ಲಿ ಬಿದ್ದು ಹೋದೆ. ಏನು ಮಾಡಲಿ ?

ಹೀಗೆ ಸೀತೆಯ ಕುರಿತು ಚಿಂತಿಸುತ್ತಲೇ ಲಕ್ಷ್ಮಣನೊಂದಿಗೆ ತ್ವರೆಯಿಂದ ಆಶ್ರಮದೆಡೆಗೆ ಬಂದ. ದುಃಖ ಆಯಾಸ ಹಸಿವೆ ಬಾಯಾರಿಕೆಗಳ ಬಾಧೆ. ಮುಖ ಬಾಡಿಹೋದ ರಾಮ ಆಶ್ರಮಕ್ಕೆ ಬಂದನು. ಆಶ್ರಮ ಸೀತೆಯಿಲ್ಲದೆ ಶೂನ್ಯವಾಗಿತ್ತು. ಅವಳು ವಿಹರಿಸುವ ತಾಣಗಳಿಗೆಲ್ಲ ಹೋಗಿ ಬಂದ. ಎಲ್ಲೂ ಕಾಣಲಿಲ್ಲ. ಇದು ಅವಳು ಕೂಡುವ ಸ್ಥಳ. ಇದು ಅವಳ ಕ್ರೀಡಾಸ್ಥಳ ಎಂದೆಲ್ಲ ತೋರಿಸಿ ತೋರಿಸಿ ರೋಮಾಂಚನಗೊಂಡು ವ್ಯಥೆಗೊಂಡನು ಶ್ರೀರಾಮ.

❖

ಅನಿಮಿತ್ತದರ್ಶನಮ್

ಸ ದೃಷ್ಟ್ವಾ ಲಕ್ಷ್ಮಣಂ ದೀನಂ ಶೂನ್ಯಂ ದಶರಥಾತ್ಮಜಃ ।
ಪರ್ಯಪೃಚ್ಛತ ಧರ್ಮಾತ್ಮಾ ವೈದೇಹೀಮಾಗತಂ ವಿನಾ ॥೧॥

ಪ್ರಸ್ಥಿತಂ ದಂಡಕಾರಣ್ಯಂ ಯಾ ಮಾಮನುಜಗಾಮ ಹ।
ಕ್ವ ಸಾ ಲಕ್ಷ್ಮಣ ವೈದೇಹೀ ಯಾಂ ಹಿತ್ವಾ ತ್ವಮಿಹಾಗತಃ ॥೨॥

ರಾಜ್ಯಭ್ರಷ್ಟಸ್ಯ ದೀನಸ್ಯ ದಂಡಕಾನ್ ಪರಿಧಾವತಃ ।
ಕ್ವ ಸಾ ದುಃಖಸಹಾಯಾ ಮೇ ವೈದೇಹೀ ತನುಮಧ್ಯಮಾ ॥೩॥

ಯಾಂ ವಿನಾ ನೋತ್ಸಹೇ ವೀರ ಮುಹೂರ್ತಮಪಿ ಜೀವಿತುಮ್ ।
ಕ್ವ ಸಾ ಪ್ರಾಣಸಹಾಯಾ ಮೇ ಸೀತಾ ಸುರಸುತೋಪಮಾ ॥೪॥

ಪತಿತ್ವಮಮರಾಣಾಂ ವಾ ಪೃಥಿವ್ಯಾಶ್ಚಾಪಿ ಲಕ್ಷ್ಮಣ ।
ತಾಂ ವಿನಾ ತಪನೀಯಾಭಾಂ ನೇಚ್ಛೇಯಂ ಜನಕಾತ್ಮಜಾಮ್ ॥೫॥

ಕಚ್ಚಿಜ್ಜೀವತಿ ವೈದೇಹೀ ಪ್ರಾಣೈಃ ಪ್ರಿಯತರಾ ಮಮ ।
ಕಚ್ಚಿತ್ ಪ್ರವ್ರಾಜನಂ ಸೌಮ್ಯ ನ ಮೇ ಮಿಥ್ಯಾ ಭವಿಷ್ಯತಿ ॥೬॥

ಸೀತಾನಿಮಿತ್ತಂ ಸೌಮಿತ್ರೇ ಮೃತೇ ಮಯಿ ಗತೇ ತ್ವಯಿ ।
ಕಚ್ಚಿತ್ ಸಕಾಮಾ ಸುಖಿತಾ ಕೈಕೇಯೀ ಸಾ ಭವಿಷ್ಯತಿ ॥೭॥

ಸಪುತ್ರರಾಜ್ಯಾಂ ಸಿದ್ಧಾರ್ಥಾಂ ಮೃತಪುತ್ರಾ ತಪಸ್ವಿನೀ ।
ಉಪಸ್ಥಾಸ್ಯತಿ ಕೌಸಲ್ಯಾ ಕಚ್ಚಿತ್ ಸೌಮ್ಯ ನ ಕೈಕಯೀಮ್ ॥೮॥

ದಶರಥಾತ್ಮಜ ರಾಮನು ಶೂನ್ಯಾರಣ್ಯದಲ್ಲಿ ದೀನನಾದ ವೈದೇಹಿಯನ್ನು ಬಿಟ್ಟು

ಬಂದ ಲಕ್ಷ್ಮಣನನ್ನು ನೋಡಿ ಕೇಳಿದ – ದಂಡಕಾರಣ್ಯಕ್ಕೆ ಹೊರಟು ನಿಂತ ನನ್ನನ್ನು ಅನುಸರಿಸಿ ಬಂದ ಸೀತೆಯನ್ನು ಬಿಟ್ಟು ಬಂದೆಯಲ್ಲವೆ ? ಆ ವೈದೇಹಿ ಎಲ್ಲಿ ?

ವೀರನೇ ! ರಾಜ್ಯವನ್ನು ಕಳೆದುಕೊಂಡು ದೀನನಾಗಿ ದಂಡಕಾರಣ್ಯಕ್ಕೆ ಬಂದ ನನ್ನ ದುಃಖದಲ್ಲಿ ಸಹಭಾಗಿನಿಯಾದ ಬಡ ನಡುವಿನ ನನ್ನ ವೈದೇಹಿ ಎಲ್ಲಿ ?

ಯಾರನ್ನು ಬಿಟ್ಟು ಒಂದು ಮುಹೂರ್ತವಷ್ಟು ಕಾಲವೂ ಬದುಕಲು ಉತ್ಸಾಹವಿಲ್ಲವೊ ದೇವಪುತ್ರಿಯಂತಿದ್ದ ನನ್ನ ಪ್ರಾಣದ ಗೆಳತಿ ವೈದೇಹಿ ಎಲ್ಲಿ ?

ಚಿನ್ನದಂತಹ ಜಾನಕಿಯನ್ನು ಬಿಟ್ಟು ದೇವತೆಗಳ ಒಡೆತನವನ್ನಾಗಲಿ, ಪೃಥಿವಿಯ ಆಧಿಪತ್ಯವನ್ನಾಗಲಿ ನಾನು ಬಯಸುವುದಿಲ್ಲ.

ನನ್ನ ಪ್ರಾಣಕಿಂತಲೂ ಹೆಚ್ಚು ಪ್ರಿಯಳಾದ ನನ್ನ ವೈದೇಹಿಯು ಸೌಮ್ಯ ! ಬದುಕಿರುವಳೇ ? ನನ್ನ ಈ ಅಲೆದಾಟವು ವ್ಯರ್ಥವಾಗುವುದಿಲ್ಲ ತಾನೆ ?

ಸೀತೆಯ ನಿಮಿತ್ತದಿಂದ ನಾನು ಮೃತನಾದ ಬಳಿಕ ನೀನು ಅಯೋಧ್ಯೆಗೆ ಹಿಂತಿರುಗಿದಾಗ ತನ್ನ ಮನೋರಥ ಈಡೇರಿತೆಂದು ಕೈಕೇಯಿ ಸುಖಿಸುವಳಲ್ಲವೇ ?

ಸೌಮ್ಯ ! ಮಗ ಹಾಗೂ ರಾಜ್ಯವನ್ನು ಹೊಂದಿ ಕೃತಾರ್ಥಳಾದ ಕೈಕೇಯಿಯನ್ನು ಮಗನನ್ನು ಕಳೆದುಕೊಂಡ ತಪಸ್ವಿನೀ ತಾಯಿ ಕೌಸಲ್ಯೆಯು ಅನುಸರಿಸಿಕೊಂಡು ಇರುವಳೇ !

ಯದಿ ಜೀವತಿ ವೈದೇಹೀ ಗಮಿಷ್ಯಾಮ್ಯಾಶ್ರಮಂ ಪುನಃ ।
ಸುವೃತ್ತಾ ಯದಿ ವೃತ್ತಾ ಸಾ ಪ್ರಾಣಾಂಸ್ತ್ಯಕ್ಷ್ಯಾಮಿ ಲಕ್ಷ್ಮಣ ॥೯॥

ಯದಿ ಮಾಮಾಶ್ರಮಗತಂ ವೈದೇಹೀ ನಾಭಿಭಾಷತೇ ।
ಪುನಃ ಪ್ರಹಸಿತಾ ಸೀತಾ ವಿನಶಿಷ್ಯಾಮಿ ಲಕ್ಷ್ಮಣ ॥೧೦॥

ಬ್ರೂಹಿ ಲಕ್ಷ್ಮಣ ವೈದೇಹೀ ಯದಿ ಜೀವತಿ ವಾ ನ ವಾ ।
ತ್ವಯಿ ಪ್ರಮತ್ತೇ ರಕ್ಷೋಭಿರ್ಭಕ್ಷಿತಾ ವಾ ತಪಸ್ವಿನೀ ॥೧೧॥

ಸುಕುಮಾರೀ ಚ ಬಾಲಾ ಚ ನಿತ್ಯಂ ಚಾದುಃಖದರ್ಶಿನೀ ।
ಮದ್ವಿಯೋಗೇನ ವೈದೇಹೀ ವ್ಯಕ್ತಂ ಶೋಚತಿ ದುರ್ಮನಾಃ ॥೧೨॥

ಸರ್ವಥಾ ರಕ್ಷಸಾ ತೇನ ಜಿಹ್ಮೇನ ಸುದುರಾತ್ಮನಾ ।
ವದತಾ ಲಕ್ಷ್ಮಣೇತ್ಯುಚ್ಚೈಸ್ತವಾಪಿ ಜನಿತಂ ಭಯಮ್ ॥೧೩॥

ಶ್ರುತಸ್ತು ಶಂಕೇ ವೈದೇಹ್ಯಾ ಸ ಸ್ವರಃ ಸದೃಶೋ ಮಮ ।
ತ್ರಸ್ತಯಾ ಪ್ರೇಷಿತಸ್ತ್ವಂ ಚ ದ್ರಷ್ಟುಂ ಮಾಂ ಶೀಘ್ರಮಾಗತಃ ॥೧೪॥

ಲಕ್ಷ್ಮಣ ! ವೈದೇಹಿ ಬದುಕಿದ್ದರೆ ಮತ್ತೆ ಆಶ್ರಮಕ್ಕೆ ಹೋಗುತ್ತೇನೆ. ಸನ್ನಡೆಯ ಅವಳು ಮೃತಳಾಗಿದ್ದರೆ ನಾನೂ ಪ್ರಾಣ ಬಿಡುತ್ತೇನೆ.

ನಾನು ಆಶ್ರಮಕ್ಕೆ ಹೋದ ಕೂಡಲೆ ವೈದೇಹಿ ನಗುನಗುತ್ತಾ ಮಾತನಾಡದಿದ್ದರೆ ನಾನು ನಾಶವಾಗುತ್ತೇನೆ ಲಕ್ಷ್ಮಣ.

ಹೇಳು ಲಕ್ಷ್ಮಣ ! ವೈದೇಹಿ ಬದುಕಿರುವಳೋ ಇಲ್ಲವೋ ? ನೀನು ಮೈಮರೆತಿರಲು ಅವಳು ರಕ್ಕಸರಿಂದ ಭಕ್ಷಿತಳಾದಳೋ ?

ಚಿಕ್ಕ ವಯಸ್ಸಿನವಳು, ಸುಕುಮಾರಿಯು, ಎಂದೂ ದುಃಖವನ್ನು ಕಾಣದಿರುವವಳು ಆದ ವೈದೇಹಿಯು ನನ್ನ ವಿರಹದಿಂದ ಮನ ಕಲಕಿ ಖಂಡಿತವಾಗಿ ಶೋಕಪಡುತ್ತಿರುತ್ತಾಳೆ.

ಆ ರಾಕ್ಷಸ ಮಾರೀಚ ಕುಟಿಲ ಬುದ್ಧಿಯ ದುರಾತ್ಮ ಜೋರಾಗಿ 'ಲಕ್ಷ್ಮಣSS' ಎಂದು ಕೂಗಿದಾಗ ನಿನಗೂ ಭಯವುಂಟಾಯಿತು. ನನ್ನ ಸ್ವರವನ್ನು ಹೋಲುವ ಕೂಗನ್ನು ಸೀತೆಯು ಕೇಳಿಸಿಕೊಂಡಿರಬಹುದೆಂದು ಶಂಕಿಸುತ್ತೇನೆ. ಅವಳು ಹೆದರಿ ನನ್ನನ್ನು ನೋಡಲು ನಿನ್ನನ್ನು ಕಳುಹಿಸಿರುತ್ತಾಳೆ. ಅದರಿಂದ ನೀನು ಬಂದಿರುವೆ.

ಸರ್ವಥಾ ತು ಕೃತಂ ಕಷ್ಟಂ ಸೀತಾಮುತ್ಸೃಜತಾ ವನೇ ।
ಪ್ರತಿಕರ್ತುಂ ನೃಶಂಸಾನಾಂ ರಕ್ಷಸಾ ದತ್ತಮಂತರಮ್ ॥೧೫॥

ದುಃಖಿತಾಃ ಖರಘಾತೇನ ರಾಕ್ಷಸಾಃ ಪಿಶಿತಾಶನಾಃ ।
ತೈಃ ಸೀತಾ ನಿಹತಾ ಘೋರೈರ್ಭವಿಷ್ಯತಿ ನ ಸಂಶಯಃ ॥೧೬॥

ಅಹೋಽಸ್ಮಿನ್ ವ್ಯಸನೇ ಮಗ್ನಃ ಸರ್ವಥಾ ಶತ್ರುಸೂದನ ।
ಕಿಂ ತ್ವಿದಾನೀಂ ಕರಿಷ್ಯಾಮಿ ಶಂಕೇ ಪ್ರಾಪ್ತವ್ಯಮೀದೃಶಮ್ ॥೧೭॥

ಇತಿ ಸೀತಾ ವರಾರೋಹಾಂ ಚಿಂತಯನ್ನೇವ ರಾಘವಃ ।
ಆಜಗಾಮ ಜನಸ್ಥಾನಂ ತ್ವರಯಾ ಸಹಲಕ್ಷ್ಮಣಃ ॥೧೮॥

ವಿಗರ್ಹಮಾಣೋಽನುಜಮಾರ್ತರೂಪಂ
ಕ್ಷುಧಾ ಶ್ರಮಾಚ್ಚೈವ ಪಿಪಾಸಯಾ ಚ ।

ವಿನಿಃಶ್ವಸನ್ ಶುಷ್ಕಮುಖೋ ವಿವರ್ಣಃ
ಪ್ರತಿಶ್ರಯಂ ಪ್ರಾಪ್ಯ ಸಮೀಕ್ಷ್ಯ ಶೂನ್ಯಮ್ ॥೧೯॥

ಸ್ವಮಾಶ್ರಮಂ ಸಂಪ್ರವಿಗಾಹ್ಯ ವೀರೋ
ವಿಹಾರದೇಶಾನನುಸೃತ್ಯ ಕಾಂಶ್ಚಿತ್ ।
ಏತತ್ತದಿತ್ಯೇವ ನಿವಾಸಭೂಮೌ
ಪ್ರಹೃಷ್ಟರೋಮಾ ವ್ಯಥಿತೋ ಬಭೂವ ॥೨೦॥

ಕಾಡಿನಲ್ಲಿ ಸೀತೆಯನ್ನು ಬಿಟ್ಟು ಖಂಡಿತ ಕಷ್ಟವುಂಟುಮಾಡಿದೆ. ಕ್ರೂರ ರಕ್ಕಸರಿಗೆ ಸೇಡು ತೀರಿಸಿಕೊಳ್ಳಲು ಅವಕಾಶ ಕೊಟ್ಟಂತಾಯಿತು.

ಖರನ ವಧೆಯಿಂದ ದುಃಖಿತರಾದ ಘೋರ ರಕ್ಕಸರಿಂದ ಸೀತೆ ನಿಶ್ಚಯವಾಗಿ ಹತಳಾಗಿರುವಳು. ಸಂಶಯವೇ ಇಲ್ಲ.

ಶತ್ರುಸೂದನ ! ಅಯ್ಯೋ ಇಂಥ ದುಃಖದಲ್ಲಿ ಮುಳುಗಿದೆ. ಏನು ಮಾಡಲಿ ? ಇಂಥ ದುಃಖವನ್ನು ಹೊಂದಲೇಬೇಕಾಗಿತ್ತೇನೊ ?

ಹೀಗೆ ಸೀತೆಯ ಕುರಿತು ಚಿಂತಿಸುತ್ತಲೆ ಲಕ್ಷ್ಮಣನೊಂದಿಗೆ ತ್ವರೆಯಿಂದ ರಾಮನು ಜನಸ್ಥಾನಕ್ಕೆ ಬಂದನು.

ಆರ್ತನಾದ ತಮ್ಮನನ್ನು ಸೀತೆಯನ್ನು ಬಿಟ್ಟು ಬಂದುದಕೆ ನಿಂದಿಸುತ್ತ ಹಸಿವೆ ಆಯಾಸ ಬಾಯಾರಿಕೆಗಳಿಂದ ನಿಟ್ಟುಸಿರುಡುತ್ತ ಬಾಡಿದ ಮುಖದವನಾದ ಕಳೆಗುಂದಿದ ರಾಮ ಆಶ್ರಮಕ್ಕೆ ಬಂದ.

ತನ್ನ ಆಶ್ರಮವನ್ನು ಹೊಕ್ಕಿದ ಶ್ರೀರಾಮ ಸೀತೆಯ ಹಲವು ವಿಹಾರ ತಾಣಗಳನ್ನು ಪರಿಕಿಸಿ ಇದು ಅವಳು ಕ್ರೀಡಿಸುವ ಸ್ಥಳ. ಅದು ಅವಳು ಕೂಡುತ್ತಿದ್ದ ಸ್ಥಳ ಎಂದು ಸುತ್ತಾಡಿ ತಳಮಳಗೊಂಡು ಆಶ್ರಮದಲ್ಲಿ ವ್ಯಥೆಗೊಂಡನು ಶ್ರೀರಾಮ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಆಶ್ರಮದಿಂದ ಹಿಂದಿರುಗಿದ ಶ್ರೀರಾಮ ಮತ್ತೆ ದುಃಖಿತನಾದ ಲಕ್ಷ್ಮಣನಿಗೆ ಹೇಳಿದನು – ಲಕ್ಷ್ಮಣ ! ನಿನ್ನ ಮೇಲೆ ನಂಬಿಕೆಯಿಟ್ಟು ಸೀತೆಯನ್ನು ಬಿಟ್ಟು ಬಂದೆ. ಆದರೆ ನೀನು ಅವಳನ್ನು ಆಶ್ರಮದಲ್ಲಿ ಬಿಟ್ಟು ಬಂದು ತಪ್ಪು ಮಾಡಿದೆ. ನನ್ನ ಮನಸ್ಸು ಕೆಟ್ಟದನ್ನೆ ಆಲೋಚಿಸುತ್ತಿದೆ.

ಎಡಗಣ್ಣು ಎಡಭುಜ ಹೃದಯವೆಲ್ಲವೂ ಕಂಪಿಸುತ್ತಿದೆ. ಸೀತೆಯಿಲ್ಲದೆ ನೀನೊಬ್ಬನೆ ಬರುತ್ತಿರುವುದನ್ನು ನೋಡಿದಾಗಲೆ ನನ್ನ ಮನಸ್ಸಿನ ದುಗುಡ ಆತಂಕಗಳು ಹೆಚ್ಚಿತು.

ಈ ಮಾತು ಕೇಳಿದ ಲಕ್ಷ್ಮಣ ದುಃಖಭರಿತನಾಗಿ ದುಃಖಗೊಂಡಿದ್ದ ರಾಮನಿಗೆ ಎಲ್ಲವನ್ನು ವಿವರಿಸಿ ಹೇಳಿದನು –

ಅಣ್ಣ ! ನಾನು ಸ್ವೇಚ್ಛೆಯಿಂದಲೆ ಸೀತೆಯನ್ನು ಬಿಟ್ಟು ಬಂದದ್ದಲ್ಲ. ಮಾರೀಚನ, 'ಹಾ ಸೀತೆ ! ಹಾ ಲಕ್ಷ್ಮಣ !' ಎಂಬ ಕೂಗು ಸೀತೆಯ ಕಿವಿ ತಲುಪಿತು. ಸೀತೆ ಆತಂಕಿತಳಾಗಿ ನಿನ್ನ ಮೇಲಿನ ಸ್ನೇಹದಿಂದ 'ಹೋಗು ಹೋಗು' ಎಂದು ಬಲವಾಗಿ ಒತ್ತಾಯ ಮಾಡಿದಳು. ಅವಳ ಬಹುವಾದ ಪ್ರಚೋದನೆಯಿಂದ ನಾನು ಬರಬೇಕಾಯಿತು. ನಾನು ಹೇಳಿದೆ – ನೆಮ್ಮದಿಯಿಂದಿರಿ. ರಾಮನಿಗೆ ಕಾಪಾಡು ಎಂದು ಕೂಗಿ ಹೇಳಿಕೊಳ್ಳುವಂಥ ದೈನ್ಯದ ಸನ್ನಿವೇಶ ಬರಲು ಸಾಧ್ಯವಿಲ್ಲ. ರಾಮನನ್ನು ಪರಾಜಯಗೊಳಿಸುವವನು ಹಿಂದೆ ಇರಲಿಲ್ಲ. ಈಗಲೂ ಇಲ್ಲ –ಮುಂದೆಯೂ ಬರುವುದಿಲ್ಲ. ಇಂದ್ರಾದಿದೇವತೆಗಳೇ ಯುದ್ಧದಲ್ಲಿ ರಾಮನನ್ನು ಗೆಲ್ಲಲು ಶಕ್ತರಲ್ಲ. ಮತ್ತೇಕೆ ಚಿಂತೆ ?

ಇಷ್ಟು ಹೇಳಿದರೂ ಮೋಹಿತಳಾಗಿದ್ದ ಸೀತೆ ಕಣ್ಣೀರು ಸುರಿಸುತ್ತ ದಾರುಣವಾದ ಮಾತನ್ನು ನನ್ನ ಬಗ್ಗೆ ಆಡಿದಳು –

ನಿನಗೆ ನನ್ನಲ್ಲಿ ಕೆಟ್ಟಭಾವನೆಯಿದೆ. ಅಣ್ಣ ನಾಶವಾದ ಮೇಲೆ ನನ್ನನ್ನು ಪಡೆಯಬೇಕೆಂಬ ಕೆಟ್ಟ ಉದೇಶ ನಿನ್ನಲ್ಲಿ ಕಾಣುತ್ತಿದೆ. ಏನೋ ಸಂಕೇತ ಹೇಳಿಕೊಟ್ಟು ಭರತನೇ ನಿನ್ನನ್ನು ನಮ್ಮೊಡನೆ ಹೋಗಲು ಕಳುಹಿಸಿದ್ದಾನೆ. ಆದರಿಂದಲೆ ರಾಮ 'ಕಾಪಾಡು' ಎಂದು ಹೇಳಿದ್ದರೂ ಅವನ ರಕ್ಷಣೆಗೆ ಧಾವಿಸಲಿಲ್ಲ. ನೀನು ಪ್ರಚ್ಛನ್ನ ಶತ್ರು ಎಂದೆಲ್ಲ ಸೀತೆ ಹೇಳಿದ ಮಾತನ್ನು ಕೇಳಿಯೇ ಕ್ರೋಧಗೊಂಡು ಆಶ್ರಮದಿಂದ ಹೊರಹೊರಟೆನು.

ಹೀಗೆ ಲಕ್ಷ್ಮಣ ಹೇಳಿದಾಗ ಸಂತಾಪಮೋಹಿತನಾದ ರಾಮ – 'ರಕ್ಕಸರ ಸಂಹಾರದಲ್ಲಿ ನಾನು ಸಮರ್ಥನೆಂದು ತಿಳಿದಿದ್ದರೂ ಸೀತೆಯ ಮಾತಿಗೆ ಕೋಪಗೊಂಡು

ಅವಳೊಬ್ಬಳನ್ನೆ ಬಿಟ್ಟು ನೀನು ಬಂದದ್ದು ದೊಡ್ಡ ತಪ್ಪು. ಹೆಣ್ಣಿನ ಕೋಪದ ಮಾತಿಗೆ ಬೆಲೆಕೊಟ್ಟು ಕ್ರೋಧವಶನಾಗಿ ಸೀತಾರಕ್ಷಣೆಯ ನನ್ನ ಶಾಸನವನ್ನು ಮೀರಿ ಸೀತೆಯನ್ನು ಬಿಟ್ಟು ಬಂದಿದ್ದು ನನಗೆ ಸಮಾಧಾನವಾಗಲಿಲ್ಲ.

ಇಲ್ಲಿ ನನ್ನನ್ನು ಆಶ್ರಮದಿಂದ ದೂರ ಬರುವಂತೆ ಮಾಡಿದ ರಾಕ್ಷಸ ಮೃಗರೂಪದವನು ಅನಾಯಾಸವಾಗಿ ಬಾಣದಿಂದ ಹತನಾಗಿ ಬಿದ್ದಿದ್ದಾನೆ ನೆಲದಲ್ಲಿ ಜಿಂಕೆಯ ರೂಪಬಿಟ್ಟು ನಿಜ ರೂಪವನ್ನು ಧರಿಸಿ.

ಸಾಯುವಾಗ ನನ್ನ ಧ್ವನಿ ಅನುಕರಣೆ ಮಾಡಿ ನಿಮ್ಮನ್ನು ಕೂಗಿ ಮೈಥಿಲಿಯನ್ನು ನೀನು ಬಿಟ್ಟು ಬರುವಂತೆ ಮಾಡಿದ ದುಷ್ಟ ! ಎಂದು ಹೇಳಿದನು.

❖

ಲಕ್ಷ್ಮಣಾಗಮನವಿಗರ್ಹಣಮ್

ಅಥಾಶ್ರಮಾದುಪಾವೃತ್ತಮಂತರಾ ರಘುನಂದನಃ ।
ಪರಿಪಪ್ರಚ್ಛ ಸೌಮಿತ್ರಿಂ ರಾಮೋ ದುಃಖಾದಿದಂ ವಚಃ ॥೧॥

ತಮುವಾಚ ಕಿಮರ್ಥಂ ತ್ವಮಾಗತೋಽಪಾಸ್ಯ ಮೈಥಿಲೀಮ್ ।
ಯದಾ ಸಾ ತವ ವಿಶ್ವಾಸಾದ್ವನೇ ವಿರಹಿತಾ ಮಯಾ ॥೨॥

ದೃಷ್ಟೈವಾಭ್ಯಾಗತಂ ತ್ವಾಂ ಮೇ ಮೈಥಿಲೀಂ ತ್ಯಜ್ಯ ಲಕ್ಷ್ಮಣ ।
ಶಂಕಮಾನಂ ಮಹತ್ ಪಾಪಂ ಯತ್ ಸತ್ಯಂ ವ್ಯಥಿತಂ ಮನಃ ॥೩॥

ಸ್ಫುರತೇ ನಯನಂ ಸವ್ಯಂ ಬಾಹುಶ್ಚ ಹೃದಯಂ ಚ ಮೇ ।
ದೃಷ್ಟಾ ಲಕ್ಷ್ಮಣ ದೂರೇ ತ್ವಾಂ ಸೀತಾವಿರಹಿತಂ ಪಥಿ ॥೪॥

ಬಳಿಕ ಆಶ್ರಮದಿಂದ ಹಿಂತಿರುಗುವ ಮಧ್ಯದಲ್ಲಿ ರಘನಂದನ ರಾಮ ದುಃಖಪೀಡಿತನಾದ ಲಕ್ಷ್ಮಣನನ್ನು ಮತ್ತೆ ಕೇಳಿದ –

ನಿನ್ನ ಮೇಲೆ ವಿಶ್ವಾಸವಿಟ್ಟು ಸೀತೆಯನ್ನು ಬಿಟ್ಟು ಬಂದೆ. ನೀನು ಮೈಥಿಲಿಯನ್ನು ಬಿಟ್ಟೇಕೆ ಬಂದೆ ? ಸೀತೆಯನ್ನು ಬಿಟ್ಟು ನೀನು ಬಂದಾಗ ತುಂಬ ಕೆಟ್ಟ ಯೋಚನೆ ಬಂದು ಮನಸ್ಸು ವ್ಯಥೆಗೊಂಡಿತು. ಸೀತಾರಹಿತನಾಗಿ ನೀನು ದಾರಿಯಲ್ಲಿ ಬರುತ್ತಿರುವುದನ್ನು ನೋಡಿ ಎಡಕಣ್ಣು ತೋಳು ಹೃದಯವೆಲ್ಲ ಅದುರಿತು.

ಏವಮುಕ್ತಸ್ತು ಸೌಮಿತ್ರಿರ್ಲಕ್ಷ್ಮಣಃ ಶುಭಲಕ್ಷಣಃ ।
ಭೂಯೋ ದುಃಖಸಮಾವಿಷ್ಟೋ ದುಃಖಿತಂ ರಾಮಮಬ್ರವೀತ್ ॥೫॥

ನ ಸ್ವಯಂ ಕಾಮಕಾರೇಣ ತಾಂ ತ್ಯಕ್ತ್ವಾಹಮಿಹಾಗತಃ ।
ಪ್ರಚೋದಿತಸ್ತಯೈವೋಗ್ರೈಸ್ತ ತ್ವತ್ಸಕಾಶಮಿಹಾಗತಃ ॥೬॥

ಆರ್ಯೇಣೇವ ಪರಿಕ್ರುಷ್ಟಂ ಹಾ ಸೀತೇ ಲಕ್ಷ್ಮಣೇತಿ ಚ ।
ಪರಿತ್ರಾಹೀತಿ ಯದ್ವಾಕ್ಯಂ ಮೈಥಿಲ್ಯಾಸ್ತಚ್ಛ್ರುತಿಂ ಗತಮ್ ॥೭॥

ಸಾ ತಮಾರ್ತಸ್ವರಂ ಶ್ರುತ್ವಾ ತವ ಸ್ನೇಹೇನ ಮೈಥಿಲೀ ।
ಗಚ್ಛ ಗಚ್ಛೇತಿ ಮಾಮಾಹ ರುದತೀ ಭಯವಿಹ್ವಲಾ ॥೮॥

ಶುಭಲಕ್ಷಣ ಸೌಮಿತ್ರ ಲಕ್ಷ್ಮಣ ಮತ್ತೆ ದುಃಖದಿಂದ ಕೂಡಿದವನಾಗಿ ದುಃಖಿತನಾದ ರಾಮನನ್ನು ಕುರಿತು ಹೇಳಿದನು-

ನಾನು ನನ್ನಿಚ್ಛೆಯಂತೆ ಸೀತೆಯನ್ನು ಬಿಟ್ಟು ಬಂದದ್ದಲ್ಲ. ಆವರಿಂದಲೆ ಉಗ್ರವಾಕ್ಯಗಳಿಂದ ಪ್ರಚೋದಿತನಾಗಿ ನಿನ್ನ ಬಳಿಗೆ ಬಂದೆ.

ಆರ್ಯನಾದ ನಿನ್ನಂತೆ 'ಹಾ ಸೀತೆ ! ಹಾ ಲಕ್ಷ್ಮಣ ! ಕಾಪಾಡು ಎಂದು ಕೂಗಿದ ಯಾವ ಮಾತೋ ಅದು ಮೈಥಿಲಿಯ ಕಿವಿಗೆ ಬಿತ್ತು. ಆ ಸೀತೆ ಆ ಆರ್ತಸ್ವರವನ್ನು ಕೇಳಿ ನಿನ್ನ ಮೇಲಿನ ಸ್ನೇಹದಿಂದ ಭಯ ವಿಹ್ವಲಳಾಗಿ ಅಳುತ್ತಾ ಹೋಗು ಹೋಗು ಎಂದು ನನಗೆ ಹೇಳಿದಳು.

ಪ್ರಚೋದ್ಯಮಾನೇನ ಮಯಾ ಗಚ್ಛೇತಿ ಬಹುಶಸ್ತಯಾ ।
ಪ್ರತ್ಯುಕ್ತಾ ಮೈಥಿಲೀ ವಾಕ್ಯಮಿದಂ ತ್ವತ್ಪತ್ಯಯಾನ್ವಿತಮ್ ॥೯॥

ನ ತತ್ ಪಶ್ಯಾಮ್ಯಹಂ ರಕ್ಷೋ ಯದಸ್ಯ ಭಯಮಾವಹೇತ್ ।
ನಿರ್ವೃತಾ ಭವ ನಾಸ್ತ್ಯೇತತ್ ಕೇನಾಪ್ಯೇವಮುದಾಹೃತಮ್ ॥೧೦॥

ವಿಗರ್ಹಿತಂ ಚ ನೀಚಂ ಚ ಕಥಮಾರ್ಯೋಽಭಿಧಾಸ್ಯತಿ ।
ತ್ರಾಹೀತಿ ವಚನಂ ಸೀತೇ ಯಸ್ತ್ರಾಯೇತ್ ತ್ರಿದಶಾನಪಿ ॥೧೧॥

ಹೋಗು ಎಂದು ಅನೇಕ ಬಾರಿ ಆಕೆಯಿಂದ ಪ್ರಚೋದಿತನಾದ ನಾನು ನಿನ್ನಲ್ಲಿ ವಿಶ್ವಾಸದಿಂದ ಕೂಡಿದ ಮಾತನಾಡಿದೆ. ರಾಮನಿಗೆ ಭಯವುಂಟು ಮಾಡುವ ರಾಕ್ಷಸನನ್ನು ನಾನು ನೋಡಿಲ್ಲ. ಯಾರಿಂದಲೂ ಅಂತಹವನೊಬ್ಬನಿದ್ದಾನೆಂದು ಹೇಳಲಾಗಿಲ್ಲ. ನಿಶ್ಚಿಂತೆಯಾಗಿರಿ ಎಂದು ಹೇಳಿದೆ.

ಸೀತಾದೇವಿಯೇ ! ದೇವತೆಗಳನ್ನೆ ಕಾಪಾಡುವ ಶ್ರೀರಾಮ ನಿಂದಿತನು ನೀಚನೂ ಆದ ರಕ್ಕಸನಲ್ಲಿ 'ಕಾಪಾಡು' ಎಂದು ಹೇಗೆ ತಾನೆ ಕೇಳಿಕೊಳ್ಳುತ್ತಾನೆ.

ಕಿಂ ನಿಮಿತ್ತಂ ತೇ ಕೇನಾಪಿ ಭ್ರಾತುರಾಲಂಬ್ಯ ಮೇ ಸ್ವರಮ್ ।
ರಾಕ್ಷಸೇನೇರಿತಂ ವಾಕ್ಯಂ ತ್ರಾಹಿ ತ್ರಾಹೀತಿ ಶೋಭನೇ ॥೧೨॥

ವಿಸ್ವರಂ ವ್ಯಾಹೃತಂ ವಾಕ್ಯಂ ಲಕ್ಷ್ಮಣ ತ್ರಾಹಿ ಮಾಮಿತಿ ।
ನ ಭವತ್ಯಾ ವ್ಯಥಾ ಕಾರ್ಯಾ ಕುನಾರೀಜನಸೇವಿತಾ ॥೧೩॥

ಅಲಂ ವೈಕ್ಲವ್ಯಮಾಲಂಬ್ಯ ಸ್ವಸ್ಥಾ ಭವ ನಿರುತ್ಸುಕಾ ।
ನ ಸೋಽಸ್ತಿ ತ್ರಿಷು ಲೋಕೇಷು ಪುಮಾನ್ ಯೋ ರಾಘವಂ ರಣೇ ॥

ಜಾತೋ ವಾ ಜಾಯಮಾನೋ ವಾ
ಸಂಯುಗೇ ಯಃ ಪರಾಜಯೇತ್ ।
ನ ಜಯ್ಯೋ ರಾಘವೋ ಯುದ್ಧೇ
ದೇವೈಃ ಶಕ್ರಪುರೋಗಮೈಃ ॥೧೫॥

ಏವಮುಕ್ತಾ ತು ವೈದೇಹೀ ಪರಿಮೋಹಿತಚೇತನಾ ।
ಉವಾಚಾಶ್ರೂಣಿ ಮುಂಚಂತೀ ದಾರುಣಂ ಮಾಮಿದಂ ವಚಃ ॥೧೬॥

ಯಾವುದೋ ನಿಮಿತ್ತದಿಂದ ಸ್ವರವನ್ನು ಬದಲಾಯಿಸಿಕೊಂಡು ಅಣ್ಣನ ಸ್ವರವನ್ನು ಅಣಕಮಾಡಿ ಯಾರೋ ರಾಕ್ಷಸನಿಂದ 'ಕಾಪಾಡು ಕಾಪಾಡು' ಎಂದು ಬಂದ ಮಾತಿದು. ನೀವು ವ್ಯಥೆ ಪಡಬಾರದು. ಕೆಟ್ಟ ನಾರಿಯರಂತೆ ನೀವು ವ್ಯಥೆ ಪಡಬಾರದು.

ವೈಕ್ಲವ್ಯ ಸಾಕು. ಕಾತರವಿಲ್ಲದೆ ಸ್ವಸ್ಥಳಾಗಿರಿ. ಮೂರು ಲೋಕದಲ್ಲಿ ಯುದ್ಧದಲ್ಲಿ ರಾಮನನ್ನು ಸೋಲಿಸುವಂಥವನು ಹಿಂದೆ ಹುಟ್ಟಿಲ್ಲ. ಈಗ ಹುಟ್ಟಿಲ್ಲ. ಮುಂದೆ ಹುಟ್ಟಲ್ಲ. ಇಂದ್ರಾದಿ ದೇವತೆಗಳಿಂದಲೂ ಯುದ್ಧದಲ್ಲಿ ರಾಮನನ್ನು ಗೆಲ್ಲಲಾಗದು.

ಹೀಗೆ ಹೇಳಲ್ಪಟ್ಟ ವೈದೇಹಿಯು ಬುದ್ದಿ ಮೋಹಗೊಂಡು ಕಣ್ಣೀರು ಸುರಿಸುತ್ತಾ ನನ್ನನ್ನು ಕುರಿತು ದಾರುಣವಾದ ಮಾತನಾಡಿದಳು –

ಭಾವೋ ಮಯಿ ತವಾತ್ಯರ್ಥಂ ಪಾಪ ಏವ ನಿವೇಶಿತಃ ।
ವಿನಷ್ಟೇ ಭ್ರಾತರಿ ಪ್ರಾಪ್ತುಂ ನ ಚ ತ್ವಂ ಮಾಮವಾಪ್ಸ್ಯಸಿ ॥೧೭॥

ಸಂಕೇತಾದ್ಭರತೇನ ತ್ವಂ ರಾಮಂ ಸಮನುಗಚ್ಛಸಿ ।
ಕ್ರೋಶಂತಂ ಹಿ ಯಥಾತ್ಯರ್ಥಂ ನೈನಮಭ್ಯವಪದ್ಯಸೇ ॥೧೮॥

ರಿಪುಃ ಪ್ರಚ್ಛನ್ನಚಾರೀ ತ್ವಂ ಮದರ್ಥಮನುಗಚ್ಛಸಿ ।
ರಾಘವಸ್ಯಾಂತರಂ ಪ್ರೇಪ್ಸುಸ್ತಥೈನಂ ನಾಭಿಪದ್ಯಸೇ ॥೧೯॥

ಏವಮುಕ್ತೋ ಹಿ ವೈದೇಹ್ಯಾ ಸಂರಬ್ಧೋ ರಕ್ತಲೋಚನಃ ।
ಕ್ರೋಧಾತ್ ಪ್ರಸ್ಫುರಮಾಣೋಷ್ಠ ಆಶ್ರಮಾದಸ್ಮಿ ನಿರ್ಗತಃ ॥೨೦॥

ನನ್ನ ವಿಷಯದಲ್ಲಿ ನಿನಗೆ ಕೆಟ್ಟ ಭಾವನೆಯೇ ತುಂಬಿದೆ. ಅಣ್ಣ ನಷ್ಟವಾದರೆ ನನ್ನನ್ನು ಹೊಂದುವ ಸಂಚು ನಿನ್ನದು. ಅದಕೆಂದೆ ಅಣ್ಣನ ರಕ್ಷಣೆಗೆ ನೀನು ಧಾವಿಸುತ್ತಿಲ್ಲ.

ಅವಕಾಶ ಸಿಕ್ಕಾಗ ಭರತನಿಂದ ರಾಮನನ್ನು ಕೊಲ್ಲುತ್ತೇನೆಂದು ಸಂಕೇತ ಮಾಡಿಯೇ ನಮ್ಮನ್ನು ಅನುಸರಿಸಿಕೊಂಡು ಬಂದಿರುವಿ. ಆದ್ದರಿಂದಲೆ ರಕ್ಷಣೆ-ಗೋಸ್ಕರ ರಾಮ ಆಕ್ರೋಶಮಾಡುತ್ತಿದ್ದರೂ ಅವನ ಬಳಿ ನೀನು ಸುಳಿಯುತ್ತಿಲ್ಲ.

ಪ್ರಚ್ಛನ್ನವಾಗಿ ನಮ್ಮೊಂದಿಗಿರುವ ಶತ್ರು ನೀನು. ರಾಘವನಿಲ್ಲದ ಅವಕಾಶವನ್ನು ಬಯಸುತ್ತಿರುವೆ. ಅದಕೆಂದೆ ರಾಮನೆಡೆಗೆ ಸಾಗುತ್ತಿಲ್ಲ.

ಹೀಗೆ ವೈದೇಹಿಯಿಂದ ಹೇಳಿಸಿಕೊಂಡು ಕೋಪಗೊಂಡು ಕಣ್ಣು ಕೆಂಪಾಗಿ ಕ್ರೋಧದಿಂದ ತುಟಿ ಅದುರಿ ಆಶ್ರಮದಿಂದ ಹೊರಟೆ.

ಏವಂ ಬ್ರುವಾಣಂ ಸೌಮಿತ್ರಿಂ ರಾಮಃ ಸಂತಾಪಮೋಹಿತಃ ।
ಅಬ್ರವೀದ್ದುಷ್ಕೃತಂ ಸೌಮ್ಯ ತಾಂ ವಿನಾ ಯತ್ತ್ವಮಾಗತಃ ॥೨೧॥

ಜಾನನ್ನಪಿ ಸಮರ್ಥಂ ಮಾಂ ರಕ್ಷಸಾಂ ವಿನಿವಾರಣೇ ।
ಅನೇನ ಕ್ರೋಧವಾಕ್ಯೇನ ಮೈಥಿಲ್ಯಾ ನಿಃಸೃತೋ ಭವಾನ್ ॥೨೨॥

ನ ಹಿ ತೇ ಪರಿತುಷ್ಯಾಮಿ ತ್ಯಕ್ತ್ವಾ ಯದಸಿ ಮೈಥಿಲೀಮ್ ।
ಕ್ರುದ್ಧಾಯಾಃ ಪರುಷಂ ವಾಕ್ಯಂ ಶ್ರುತ್ವಾ ಯತ್ತ್ವಮಿಹಾಗತಃ ॥೨೩॥

ಸರ್ವಥಾ ತ್ವಪನೀತಂ ತೇ ಸೀತಯಾ ಯತ್ ಪ್ರಚೋದಿತಃ ।
ಕ್ರೋಧಸ್ಯ ವಶಮಾಪನ್ನೋ ನಾಕರೋಃ ಶಾಸನಂ ಮಮ ॥೨೪॥

ಅಸೌ ಹಿ ರಾಕ್ಷಸಃ ಶೇತೇ ಶರೇಣಾಭಿಹತೋ ಮಯಾ ।
ಮೃಗರೂಪೇಣ ಯೇನಾಹಮಾಶ್ರಮಾದಪವಾಹಿತಃ ॥೨೫॥

ವಿಕೃಷ್ಯ ಚಾಪಂ ಪರಿಧಾಯ ಸಾಯಕಂ
ಸಲೀಲಬಾಣೇನ ಚ ತಾಡಿತೋ ಮಯಾ ।
ಮಾರ್ಗೀಂ ತನುಂ ತ್ಯಜ್ಯ ಸ ವಿಕ್ಲವಸ್ವರೋ
ಬಭೂವ ಕೇಯೂರಧರಃ ಸ ರಾಕ್ಷಸಃ ॥೨೬॥

ಶರಾಹತೇನೈವ ತದಾರ್ತಯಾ ಗಿರಾ ಸ್ವರಂ
ಮಮಾಲಂಬ್ಯ ಸುದೂರಸಂಶ್ರವಮ್ ।
ಉದಾಹೃತಂ ತದ್ವಚನಂ ಸುದಾರುಣಂ
ತ್ವಮಾಗತೋ ಯೇನ ವಿಹಾಯ ಮೈಥಿಲೀಮ್ ॥೨೭॥

ಹೀಗೆ ಹೇಳಿದ ಸೌಮಿತ್ರಿಯನ್ನು ಕುರಿತು ಸಂತಾಪದಿಂದ ಮೋಹಿತನಾದ ರಾಮನು, 'ಸೌಮ್ಯ ! ಸೀತೆಯನ್ನು ಬಿಟ್ಟು ಇಲ್ಲಿಗೆ ಬಂದದ್ದು ತಪ್ಪೆ' ಎಂದನು.

ರಾಕ್ಷಸರನ್ನು ನಿವಾರಿಸುವ ವಿಷಯದಲ್ಲಿ ನಾನು ಸಮರ್ಥ ಎಂದು ತಿಳಿದರೂ ಸೀತೆಯ ಕೋಪದ ಮಾತಿಗೆ ಬಂದು ಬಿಟ್ಟೆಯಲ್ಲ ನೀನು.

ಕ್ರುದ್ಧಳಾದ ಹೆಂಗಸಿನ ಮಾತು ಕೇಳಿ ಮೈಥಿಲಿಯನ್ನು ಬಿಟ್ಟೇನು ಬಂದಿರುವಿ ಅದರಿಂದ ನಾನು ಸಂತೋಷಗೊಂಡಿಲ್ಲ. ಸೀತೆಯಿಂದ ಪ್ರಚೋದಿತನಾಗಿ ಸರ್ವಥಾ ತಪ್ಪು ಮಾಡಿದಿ. ಕ್ರೋಧದ ವಶನಾಗಿ ನನ್ನ ಶಾಸನವನ್ನು ಅನುಷ್ಠಾನಗೊಳಿಸಲಿಲ್ಲ.

ಯಾವ ಅಸುರ ಮೃಗರೂಪದಿಂದ ನನ್ನನ್ನು ಆಶ್ರಮದಿಂದ ದೂರ ಬರುವಂತೆ ಮಾಡಿದನೊ ಆ ರಾಕ್ಷಸ ನನ್ನಿಂದ ಬಾಣದಿಂದ ಹತನಾಗಿ ನೆಲದಲ್ಲಿ ಮಲಗಿದ್ದಾನೆ.

ಬಿಲ್ಲನ್ನು ಎಳೆದು ಬಾಣವನ್ನು ಇಟ್ಟು ಲೀಲೆಯಿಂದ ಪ್ರಯೋಗಿಸಿದ ಬಾಣದ ಮೂಲಕ ನನ್ನಿಂದ ತಾಡಿತನಾಗಿ ಜಿಂಕೆಯ ಶರೀರ ಬಿಟ್ಟು ಅಂಗದಧರನಾದ ರಕ್ಕಸ ವಿಕ್ಲವಸ್ವರದವನಾದ.

ಶರಾಹತನಾಗುತ್ತಲೆ ನನ್ನ ಸ್ವರವನ್ನು ಅವಲಂಬಿಸಿ ಆರ್ತವಾದ ಮಾತಿನಿಂದ ದೂರದಿಂದ ಕೂಗಿದ ವಚನವನ್ನು ಕೇಳಿ ನೀನು ಮೈಥಿಲಿಯನ್ನು ಬಿಟ್ಟುಬಂದೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಐವತ್ತೊಂಭತ್ತನೇ ಸರ್ಗ ಮುಗಿಯಿತು.

ಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಶ್ರೀರಾಮ ಆಶ್ರಮದ ಕಡೆಗೆ ಬರುತ್ತಿರುವಾಗ ಎಡಗಣ್ಣು ಕೆಳರೆಪ್ಪೆ ಅದುರಿತು. ನಡೆ ಎಡವಿತು. ದೇಹ ನಡುಗಿತು.

ಮೇಲಿಂದ ಮೇಲೆ ಗೋಚರಿಸಿದ ಅಪಶಕುನಗಳು ಮನದಲ್ಲಿ ಆತಂಕ ಹೆಚ್ಚಿಸಿತು. ಸೀತೆ ಕ್ಷೇಮತಾನೆ ? ಎಂದು ಅಲವತ್ತುಕೊಂಡ. ಸೀತೆಯನ್ನು ಕಾಣುವ ತವಕದಿಂದ ಧಾವಿಸಿ ಬಂದ ಆಶ್ರಮಕ್ಕೆ . ಪರ್ಣಶಾಲೆ ಶೂನ್ಯವಾಗಿರುವುದ ಕಂಡು ಮನದ ದುಗುಡ ದುಪ್ಪಟ್ಟಾಯಿತು. ತಡಬಡಾಯಿಸಿದ – ಎಲ್ಲ ಆಶ್ರಮಗಳನ್ನು. ಕಾಡಿದ ಉದ್ವೇಗ ಹೆಚ್ಚಾಗಿ ಹುಡುಕಾಡಿದ. ಸೀತೆಯಿರದ ಪರ್ಣಶಾಲೆ ಹೇಮಂತದ ಹಿಮಪಾತದಿಂದ ತಾವರೆಗಳು ಪುಡಿಯಾಗಿ ಇಡಿಯಾಗಿ ತಾವರೆಕೊಳವೆ ಕಳೆಗುಂದುವಂತೆ ಕಾಣಿಸಿತು.

ಬಾಡಿದ ಹೂವು ಚಿಲಿಪಿಲಿಗುಟ್ಟುವ ಹಕ್ಕಿಗಳು ಚಲನೆಯಿಲ್ಲದ ಹೆಮ್ಮರಗಳು ಶೋಕಪಡುವಂತೆ ಕಾಣುತ್ತಿದ್ದವು.

ಚೆಲ್ಲಿ ಚೆಲ್ಲಾಪಿಲ್ಲಿಯಾದ ದರ್ಭೆ ಕೃಷ್ಣಾಜಿನಗಳು. ವಿಪ್ರರು ಕುಳಿತ ದರ್ಭೆಯ ಚಾಪೆಗಳು ಅಲ್ಲಲ್ಲಿ ಅಸ್ತವ್ಯಸ್ತ. ನೀರವ ಮೌನದ ಶೂನ್ಯ ಶಾಲೆಗಳ ಕಂಡು ಕಂಡು ವಿಲಪಿಸಿದನು.

ಅಪಹೃತಳಾಗಿರುವಳೋ, ಮೃತಳಾಗಿರುವಳೋ, ನಷ್ಟಳಾಗಿರುವಳೋ, ಭಕ್ಷಿತ–ಳಾಗಿರುವಳೋ ಬೆದರಿ ಅಡಗಿಹಳೋ, ಹೂ ಹಣ್ಣು ತರಲು ಕಾಡು ಸೇರಿರುವಳೋ, ನೀರಿಗಾಗಿ ಕೊಳಕ್ಕೊ ನದಿಗೊ ಹೋಗಿರುವಳು ? ಪ್ರಯತ್ನ ಪೂರ್ವಕವಾಗಿ ಎಲ್ಲೆಡೆ ಓಡಾಡಿ ತಡಕಾಡಿ ಮನದನ್ನೆಯ ಕಾಣದೆ ಶೋಕದಿಂದ ಕಣ್ಣು ಕೆಂಪಾದವು. ಶೋಕಾತಿರೇಕದಿಂದ ಉನ್ಮತ್ತನಾದ.

ಶೋಕಪಂಕಾರ್ಣವಮಗ್ನನಾಗಿ ಶ್ರೀರಾಮ ಮರದಿಂದ ಮರಕ್ಕೆ ಬೆಟ್ಟದಿಂದ ಬೆಟ್ಟಕ್ಕೆ ನದಿಗಳಿಂದ ನದಿಗೆ ಅಡ್ಡಾಡಿ ಅಲೆದಲೆದ.

ಕದಂಬವೃಕ್ಷವೆ ! ನನ್ನ ಸೀತೆಗೆ ನೀನೆಂದರೆ ಅಚ್ಚುಮೆಚ್ಚು, ಅವಳನ್ನು ಕಂಡೆಯಾ ?

ಬಿಲ್ವಮರವೆ ? ನಿನ್ನ ಬಿಲ್ವ ಫಲವ ಹೋಲುವ ಸ್ತನದವಳು ನನ್ನ ಸೀತೆ. ನೀನು ಕಂಡೆಯಾ ?

ಅರ್ಜುನ ವೃಕ್ಷವೇ ? ಹೇಳು ಜನಕನಂದಿನಿ ಬದುಕಿಹಳೇ ? ಕಕುಭ ವೃಕ್ಷವೇ ! ಫಲ ಪುಷ್ಪಗಳಿಂದ ಶೋಭಿತಳಾಗಿರುವಿ. ನಿನಗೆ ನಿಜವಾಗಿ ಸೀತೆ ಎಲ್ಲಿಹಳೆಂದು ತಿಳಿದಿದೆ. ತಿಳಿಹೇಳಿಯಾ ?

ಅಶೋಕವೇ ? ಪ್ರಿಯೆಯ ಸಂದರ್ಶನವಾಗಿ ನಾನೂ 'ಅಶೋಕ' ಎನಿಸುವಂತೆ ಮಾಡು.

ತಾಲವೆ ! ತಾಲಫಲೋಪಮಸ್ತನಿಯಾದ ಸೀತೆಯ ತಿಳಿಸು ನನ್ನಲ್ಲಿ ನಿನಗೆ ಕಾರುಣ್ಯವಿದ್ದರೆ.

ಜಂಬೂವೃಕ್ಷವೆ ! ನಿನ್ನ ಫಲದಂತೆ ಸ್ನಿಗ್ಧಳಾದ ನನ್ನ ಸೀತೆಯನ್ನು ಕಂಡಿದ್ದರೆ ನಿಜವಾಗಿ ಹೇಳು.

ಕಣಿಗೆಲೆಯೀ ! ಗೊಂಚಲು ಹೂಗಳಿಂದ ಅಲಂಕೃತಳೀ ! ನನ್ನ ಸೀತೆಗೆ ನಿನ್ನ ಹೂವುಗಳು ತುಂಬ ಇಷ್ಟ. ಕಂಡಿದ್ದರೆ ಹೇಳು ಸೀತೆ.

ಹೀಗೆ ಮಾವು ಕದಂಬ ವಿಶಾಲಸಾಲ ಹಲಸು ಕುರವ ಧವ ದಾಳಿಂಬೆ ಮರಗಳನ್ನು ವಿಚಾರಿಸಿದ.

ಬಕುಳ ಪುನ್ನಾಗ ಚಂದನ ಕೇದಗೆ ಮೊದಲಾದ ತರುಗಳ ಬಳಿ ತೆರಳಿ ಕೇಳಿದ. ಕಂಡೀರಾ ಸೀತೆಯನು ?

ಜಿಂಕೆಯೆ ! ಜಿಂಕೆಕಣ್ಣಿನ ನನ್ನ ಸೀತೆಯ ನೋಡಿದೆಯಾ ? ಹೇಳು.

ಆನೆಯೆ ! ನಿನ್ನ ಸೊಂಡಿಲಿನಂಥ ತೊಡೆಯ ಸೀತೆಯ ಒಡನೆ ಹೇಳು.

ಹುಲಿಯೀ ! ನಿನಗೆ ನನ್ನ ಭಯಬೇಡ, ಸೀತೆಯ ಸುದ್ದಿ ಹೇಳು.

ವಿರಹದ ಉತ್ಕಂಠೆಗೆ ಒಳಗಾದ ರಾಮನಿಗೆ ಸೀತೆ ಸೀತೆ ಅಲ್ಲೆಲ್ಲೂ ಸುಳಿದಂತಾಯಿತು. ಮರಗಳ ಮರೆಯಲ್ಲಿ ಮರೆಯಾದ ಸೀತೆ ! ಏಕೆ ಅಡಗಿರುವಿ ! ಮಾತನಾಡೆಯಾ ? ನಿಲ್ಲು ನಿಲ್ಲು ಕರುಣೆಯಿಲ್ಲವೆ ! ಅತಿಯಾಗಿ ವಿನೋದ ಮಾಡುವ ಸ್ವಭಾವದವಳಲ್ಲ ನೀನು. ನೀನುಟ್ಟ ಹಳದಿ ಸೀರೆಯಂಚನು ಕಂಡೆ ನಾನು. ಸೌಹಾರ್ದವಿದ್ದರೆ ಹೋಗದೆ ನಿಲ್ಲು ನಿಲ್ಲು. ಆಲ್ಲ ಅಲ್ಲ ಸೀತೆಯಲ್ಲ ಅವಳು.

ಅಥವಾ ರಾಕ್ಷಸರು ಹಿಂಸೆಗೊಳಿಸಿಬಿಟ್ಟರೆ ? ಅವಳ ಸುಂದರ ದೇಹವನ್ನು ತುಂಡು ತುಂಡು ಮಾಡಿಬಿಟ್ಟರೆ ?

ಸುಂದರ ದಂತ ನಾಸಿಕಾ ಕುಂಡಲಗಳಿಂದ ತುಂಬು ಚಂದಿರನಂತಹ ಅವಳ ಮುಖವನ್ನು ತುಂಡರಿಸಿರಬಹುದೇನೋ ?

ಮನೋಹರ ಮೊಲೆಗಳಿಂದ ಕಂಗೊಳಿಪ ಚಾರು ಕೊರಳನ್ನು ಕೊಯ್ದಿರಬಹುದೇ ?

ಹಾ ಪ್ರಿಯೆ ! ಹಾ ಸೀತೆ! ಹಾ ಭದ್ರೆ ! ಎಂದು ವಿಲಪಿಸುತ್ತ ಹುಡುಕುತ್ತ ಹುಚ್ಚನಂತಾಗಿ ಮತ್ತೊಂದು ಮತ್ತೊಂದು ವನವನ್ನು ಸುತ್ತುತಲೆ ಇರುವನು ಪರಿಶ್ರಮದಿಂದ ಶ್ರೀರಾಮ.

ರಾಮಾನ್ಮೋದಃ

ಭೃಶಮಾವ್ರಜಮಾನಸ್ಯ ತಸ್ಯಾಧೋವಾಮಲೋಚನಮ್ ।
ಪ್ರಾಸ್ಫುರಚ್ಚಾಸ್ಖಲದ್ರಾಮೋ ವೇಪಥುಶ್ಚಾಪ್ಯಜಾಯತ ॥೧॥

ಉಪಲಕ್ಷ್ಯ ನಿಮಿತ್ತಾನಿ ಸೋಽಶುಭಾನಿ ಮುಹುರ್ಮುಹುಃ ।
ಅಪಿ ಕ್ಷೇಮಂ ನು ಸೀತಾಯಾ ಇತಿ ವೈ ವ್ಯಾಜಹಾರ ಚ ॥೨॥

ತ್ವರಮಾಣೋ ಜಗಾಮಾಥ ಸೀತಾದರ್ಶನಲಾಲಸಃ ।
ಶೂನ್ಯಮಾವಸಥಂ ದೃಷ್ಟ್ವಾ ಬಭೂವೋದ್ವಿಗ್ನಮಾನಸಃ ॥೩॥

ಉದ್ಭ್ರಮನ್ನಿವ ವೇಗೇನ ವಿಕ್ಷಿಪನ್ ರಘುನಂದನಃ ।
ತತ್ರ ತತ್ರೋಟಜಸ್ಥಾನಮಭಿವೀಕ್ಷ್ಯ ಸಮಂತತಃ ॥೪॥

ದದರ್ಶ ಪರ್ಣಶಾಲಾಂ ಚ ರಹಿತಾಂ ಸೀತಯಾ ತದಾ ।
ಶ್ರಿಯಾ ವಿರಹಿತಾಂ ಧ್ವಸ್ತಾಂ ಹೇಮಂತೇ ಪದ್ಮಿನೀಮಿವ ॥೫॥

ರುದಂತಮಿವ ವೃಕ್ಷೈಶ್ಚ ಮ್ಲಾನಪುಷ್ಪಮೃಗದ್ವಿಜಮ್ ।
ಶ್ರಿಯಾ ವಿಹೀನಂ ವಿಧ್ವಸ್ತಂ ಸಂತ್ಯಕ್ತವನದೇವತಮ್ ॥೬॥

ವಿಪ್ರಕೀರ್ಣಾಜಿನಕುಶಂ ವಿಪ್ರವಿದ್ಧಬೃಸೀಕಟಮ್ ।
ದೃಷ್ಟ್ವಾ ಶೂನ್ಯೋಟಜಸ್ಥಾನಂ ವಿಲಲಾಪ ಪುನಃ ಪುನಃ ॥೭॥

ಆಶ್ರಮಕ್ಕೆ ಬರುತ್ತಿರುವ ರಾಮನ ಎಡಗಣ್ಣಿನ ಕೆಳರೆಕ್ಕೆಯು ಜೋರಾಗಿ ಅದುರ-ತೊಡಗಿತು. ನಡೆಯುತ್ತಿದ್ದವನು ಎಡವಿದನು. ಅವನ ಶರೀರದಲ್ಲಿ ನಡುಕ-ವುಂಟಾಯಿತು.

ಅಶುಭಸೂಚಕ ನಿಮಿತ್ತಗಳನ್ನು ಗಮನಿಸಿ 'ಸೀತೆಯು ಕ್ಷೇಮವಾಗಿಹಳೇ'? ಎಂದು ಮತ್ತೆ ಮತ್ತೆ ಹೇಳುತ್ತಿದ್ದನು.

ಸೀತೆಯನ್ನು ಕಾಣುವ ಕಾತುರತೆಯಿಂದ ಲಗುಬಗೆಯಿಂದ ಆಶ್ರಮದೊಳ ಹೋಗಿ ನೋಡಿದನು. ಸೀತೆಯಿಲ್ಲದೆ ಶೂನ್ಯವಾದ ಪರ್ಣಶಾಲೆಯನ್ನು ಕಂಡು ರಾಮನ ಮನಸ್ಸು ತಲ್ಲಣಗೊಂಡಿತು.

ರಘುನಂದನನು ಗಡಿಬಿಡಿಯಿಂದ ಸೀತೆಯನ್ನು ಹುಡುಕಲು ಅತ್ತಿಂದಿತ್ತ ರಭಸ-ವಾಗಿ ಓಡಾಡಿದನು. ಸೀತೆ ಕಾಣದ ಉದ್ವೇಗದಿಂದ ಕೈಗೆ ಸಿಕ್ಕ ಕಲ್ಲು ಮೊದಲಾದ-

ವನ್ನು ಎಸೆಯುತ್ತ ಸೀತೆ ಇರಬಹುದಂದೆನಿಸಿಡೆಯಲ್ಲೆಲ್ಲ ಹುಡುಕಾಡಿದ. ಸೀತೆಯಿರದ ಪರ್ಣಶಾಲೆ ಹೇಮಂತದ ಹಿಮಪಾತದಿಂದ ಧ್ವಂಸಗೊಂಡ ತಾವರೆಗಳ ಕೊಳದಂತೆ ಶೋಭಾರಹಿತವಾಗಿ ಕಂಡಿತು.

ಬಾಡಿದ ಹೂವುಗಳು ಸದ್ದುಮಾಡದ ಹಕ್ಕಿಪಕ್ಕಿಗಳಿಂದ ಕೂಡಿದ ವೃಕ್ಷಗಳು ಅಳುತ್ತಿರುವಂತೆ ಭಾಸವಾಗುತ್ತಿತ್ತು. ಶೋಭೆಯನ್ನು ಕಳೆದುಕೊಂಡು ವನದೇವತೆ-ಗಳಿರದೆ ಪಾಳು ಬಿದ್ದ ಬೀಡಾಗಿತ್ತು. ಚೆಲ್ಲಾಪಿಲ್ಲಿ ಚೆದುರಿದ ದರ್ಭೆಗಳೂ, ಕೃಷ್ಣಾಜಿನಗಳು – ಹೀಗೆ ಶೂನ್ಯವಾದ ತನ್ನ ಆಶ್ರಮಸ್ಥಾನವನ್ನು ಕಂಡುರಾಮ ಮತ್ತೆ ಮತ್ತೆ ವಿಲಪಿಸಿದ.

ಹೃತಾ ಮೃತಾ ವಾ ನಷ್ಟಾ ವಾ ಭಕ್ಷಿತಾ ವಾ ಭವಿಷ್ಯತಿ ।
ನಿಲೀನಾಪ್ಯಥವಾ ಭೀರುರಥವಾ ವನಮಾಶ್ರಿತಾ ॥೮॥

ಗತಾ ವಿಚೇತುಂ ಪುಷ್ಪಾಣಿ ಫಲಾನ್ಯಾಪಿ ಚ ವಾ ಪುನಃ ।
ಅಥವಾ ಪದ್ಮಿನೀಂ ಯಾತಾ ಜಲಾರ್ಥಂ ವಾ ನದೀಂ ಗತಾ ॥೯॥

ಯತ್ನಾನ್ಮೃಗಯಮಾಣಸ್ತು ನಾಸಸಾದ ವನೇ ಪ್ರಿಯಾಮ್ ।
ಶೋಕರಕ್ತೇಕ್ಷಣಃ ಶೋಕಾದುನ್ಮತ್ತ ಇವ ಲಕ್ಷ್ಯತೇ ॥೧೦॥

ವೃಕ್ಷಾದ್ವೃಕ್ಷಂ ಪ್ರಧಾವನ್ ಸ ಗಿರೇಶ್ಚಾದ್ರಿಂ ನದಾನ್ನದೀಮ್ ।
ಬಭೂವ ವಿಲಪನ್ ರಾಮಃ ಶೋಕಪಂಕಾರ್ಣವಾಪ್ಲುತಃ ॥೧೧॥

ಸೀತೆ ಅಪಹೃತಳಾಗಿರುವಳೋ, ಮೃತಳಾಗಿಹಳೋ, ನಷ್ಟವಾಗಿಹಳೋ, ಯಾರಿಂದಲೋ ಭಕ್ಷಿತಳಾಗಿಹಳೋ ಅಥವಾ ಹೆದರಿ ಅಡಗಿಹಳೋ ಬೇರೆ ಕಾಡಿಗೆ ಹೋಗಿರಬೇಕೋ. ಹೂವು ಹಣ್ಣುಗಳನ್ನು ಕೀಳಲು ಹೋಗಿಹಳೋ ಅಥವಾ ತಾವರೆ ಕೊಳಕ್ಕೊ ನದಿಗೋ, ನೀರಿಗಾಗಿ ಹೋಗಿರುವಳೋ ಹೀಗೆಲ್ಲ ಯೋಚಿಸಿ ಹುಡುಕಿ ಹುಡುಕಿದರೂ ವನದಲ್ಲಿ ತನ್ನ ಪ್ರಿಯೆ ಕಾಣಲಿಲ್ಲ. ಶೋಕದಿಂದ ರಾಮನ ಕಣ್ಣು ಕೆಂಪಾದವು. ಶೋಕದಿಂದ ಹುಚ್ಚನಾದಂತೆ ಕಂಡನು.

ಮರದಿಂದ ಮರವನ್ನು ಬೆಟ್ಟದಿಂದ ಬೆಟ್ಟವನ್ನು ನದದಿಂದ ನದಿಯನ್ನು ಅಲೆಯುತ್ತ ಅಲೆಯುತ್ತ ವಿಲಾಪಮಾಡುತ್ತ ಶೋಕ ಪಂಕ ಅರ್ಣವ ಮಗ್ನನಾದ ರಾಮ.

ಅಪಿ ಕಚ್ಚಿತ್ತ್ವಯಾ ದೃಷ್ಟಾ ಸಾ ಕದಂಬಪ್ರಿಯಾ ಪ್ರಿಯಾ ।
ಕದಂಬ ಯದಿ ಜಾನೀಷೇ ಶಂಸ ಸೀತಾಂ ಶುಭಾನನಾಮ್ ॥೧೨॥

ಸ್ನಿಗ್ಧಪಲ್ಲವಸಂಕಾಶಾ ಪೀತಕೌಶೇಯವಾಸಿನೀ ।
ಶಂಸಸ್ವ ಯದಿ ವಾ ದೃಷ್ಟಾ ಬಿಲ್ವ ಬಿಲ್ವೋಪಮಸ್ತನೀ ॥೧೩॥

ಅಥವಾರ್ಜುನ ಶಂಸ ತ್ವಂ ಪ್ರಿಯಾಂ ತಾಮರ್ಜುನಪ್ರಿಯಾಮ್ ।
ಜನಕಸ್ಯ ಸುತಾ ಭೀರುರ್ಯದಿ ಜೀವತಿ ವಾ ನ ವಾ ॥೧೪॥

ಕಕುಭಃ ಕಕುಭೋರೂಂ ತಾಂ ವ್ಯಕ್ತಂ ಜಾನಾತಿ ಮೈಥಿಲೀಮ್ ।
ಯಥಾ ಪಲ್ಲವಪುಷ್ಪಾಢ್ಯೋ ಭಾತಿ ಹ್ಯೇಷ ವನಸ್ಪತಿಃ ॥೧೫॥

ಭ್ರಮರೈರುಪಗೀತಶ್ಚ ಯಥಾ ದ್ರುಮವರೋ ಹ್ಯಯಮ್ ।
ಏಷ ವ್ಯಕ್ತಂ ವಿಜಾನಾತಿ ತಿಲಕಸ್ತಿಲಕಪ್ರಿಯಾಮ್ ॥೧೬॥

ಅಶೋಕ ಶೋಕಾಪನುದ ಶೋಕೋಪಹತಚೇತಸಮ್ ।
ತ್ವನ್ನಾಮಾನಂ ಕುರು ಕ್ಷಿಪ್ರಂ ಪ್ರಿಯಸಂದರ್ಶನೇನ ಮಾಮ್ ॥೧೭॥

ಯದಿ ತಾಲ ತ್ವಯಾ ದೃಷ್ಟಾ ಪಕ್ವತಾಲಫಲಸ್ತನೀ ।
ಕಥಯಸ್ವ ವರಾರೋಹಾಂ ಕಾರುಣ್ಯಂ ಯದಿ ತೇ ಮಯಿ ॥೧೮॥

ಯದಿ ದೃಷ್ಟಾ ತ್ವಯಾ ಸೀತಾ ಜಂಬು ಜಾಂಬೂನದಪ್ರಭಾ ।
ಪ್ರಿಯಾಂ ಯದಿ ವಿಜಾನೀಷೇ ನಿಃಶಂಕಂ ಕಥಯಸ್ವ ಮೇ ॥೧೯॥

ಅಹೋ ತ್ವಂ ಕರ್ಣಿಕಾರಾದ್ಯ ಸುಪುಷ್ಪೈಃ ಶೋಭಸೇ ಭೃಶಮ್ ।
ಕರ್ಣಿಕಾರ ಪ್ರಿಯಾ ಸಾಧ್ವೀ ಶಂಸ ದೃಷ್ಟಾ ಪ್ರಿಯಾ ಯದಿ ॥೨೦॥

ಚೂತನೀಪಮಹಾಸಾಲಾನ್ ಪನಸಾನ್ ಕುರುವಾನ್ ಧವಾನ್ ।
ದಾಡಿಮಾನಪಿತಾನ್ ಗತ್ವಾ ದೃಷ್ಟಾ ರಾಮೋ ಮಹಾಯಶಾಃ ॥೨೧॥

ಬಕುಲಾನಥ ಪುಂನಾಗಾನ್ ಚಂಪಕಾನ್ ಕೇತಕೀಸ್ತಥಾ ।
ಪೃಚ್ಛನ್ ರಾಮೋ ವನೇ ಭ್ರಾಂತ ಉನ್ಮತ್ತ ಇವ ಲಕ್ಷ್ಯತೇ ॥೨೨॥

ಕಂದಬ ವೃಕ್ಷವೇ ! ನಿನ್ನ ಹೂವುಗಳು ನನ್ನ ಸೀತೆಗೆ ತುಂಬ ಪ್ರಿಯ. ನನ್ನ ಪ್ರಿಯತಮೆ ಎಲ್ಲಿಹಳೆಂದು ತಿಳಿದರೆ ಹೇಳು.

ಬಿಲ್ವಮರವೇ ! ಬಿಲ್ವಫಲವ ಪೋಲ್ವ ಸ್ತನದವಳು ಸೀತೆ. ಎಳೆ ಚಿಗುರಿನಂತಹವಳು ಹಳದಿ ರೇಷ್ಮೆಯ ಸೀರೆಯುಟ್ಟವಳು ಆದ ನನ್ನ ಸೀತೆ ನಿನಗೆ ಕಂಡಿದ್ದರೆ ಹೇಳು.

ಕರವೀರ ತರುವೇ ! ನೀನೆಂದರೆ ಸೀತೆಗೆ ತುಂಬ ಇಷ್ಟ. ಭೀರುವಾದ ಜನಕಾತ್ಮಜೆ ಬದುಕಿರುವಳೋ ಇಲ್ಲವೋ ಹೇಳು.

ಅರ್ಜುನ ಜಾತಿಯ ವೃಕ್ಷ ವಿಶೇಷ ಕಕುಭವೇ ! ನನ್ನ ಸೀತೆ ನಿನ್ನ ಕೊಂಬೆಯದೇ ಆಕಾರದ ಊರು ಪ್ರದೇಶ ಹೊಂದಿರುವವಳು. ಚಿಗುರು ಹೂಗಳಿಂದ ತುಂಬಿ ಈ ವನಸ್ಪತಿ ಕಳೆಯಾಗಿದೆ. ನಿನಗೆ ನಿಜವಾಗಿ ಸೀತೆ ಎಲ್ಲಿರುವಳೆಂದು ಗೊತ್ತಿದೆ ಹೇಳು.

ಈ ತಿಲಕ ವೃಕ್ಷವು ಭ್ರಮರಗಳ ಮೂಲಕ ಹಾಡುತ್ತಿದೆ. ತಿಲಕಪ್ರಿಯಳಾದ ಸೀತೆಯನ್ನು ಇದು ಖಂಡಿತ ತಿಳಿದುಕೊಂಡಿದೆ.

ಶೋಕವನ್ನು ನಾಶಗೊಳಿಸುವ ಅಶೋಕವೃಕ್ಷವೆ ! ಶೋಕೋಪಹತ ಚಿತ್ತನಾದ ನನಗೆ ಪ್ರಿಯೆಯ ಸಂದರ್ಶನದಿಂದ ಶೋಕರಹಿತನಾಗಿ ನಾನೂ ನಿನ್ನಂತೆ ಅಶೋಕ ಎನಿಸುವಂತೆ ಮಾಡು.

ತಾಲವೃಕ್ಷವೇ ! ನಿನಗೆ ನನ್ನಲ್ಲಿ ಕಾರುಣ್ಯವಿದ್ದರೆ ಪಕ್ವತಾಲಫಲೋಪಮಸ್ತನಿಯಾದ ನನ್ನ ಸೀತೆಯನ್ನು ನೀನು ಕಂಡೆಯಾ ಹೇಳು.

ನೇರಳೆಮರವೇ ! ನೀನು ಸೀತೆಯನ್ನು ನಿನ್ನಂತೆ ಸ್ನಿಗ್ಧಳಾದವಳನ್ನು ಕಂಡೆಯಾ ? ನನ್ನ ಪ್ರಿಯೆಯ ಬಗೆಗೆ ನೀನು ತಿಳಿದಿದ್ದರೆ ನಿಃಶಂಕವಾಗಿ ಹೇಳು ನನಗೆ.

ಅಹೋ ! ಕಣಿಗಲೆ ಗಿಡವೇ ! ಒಳ್ಳೆಯ ಹೂವುಗಳಿಂದ ತುಂಬ ಶೋಭಿಸು-ತ್ತಿರುವೆ. ನನ್ನ ಸತೀ ನಿನ್ನ ಹೂವುಗಳನ್ನು ಮೆಚ್ಚುತ್ತಿದ್ದಳು. ಅವಳನ್ನು ಕಂಡಿದ್ದರೆ ಹೇಳು.

ಹೀಗೆ ಮಾವು ನೀಪ ಮಹಾಸಾಲ ಹಲಸು ಕುರವ ಧವ ದಾಳಿಂಬೆ ಮೊದಲಾದ ಮರಗಿಡಗಳನ್ನು ಮತ್ತು ಮಲ್ಲಿಗೆ ಮಾಧವಿ ಸಂಪಿಗೆ ಕೇದಗೆ ಮುಂತಾದ ಬಳ್ಳಿ ಮರಗಳನ್ನು ಕೂಡ ಮಹಾಯಶನಾದ ಶ್ರೀರಾಮ ಸೀತೆಯ ಬಗ್ಗೆ ಕೇಳುತ್ತ ಕಾಡಿನಲ್ಲಿ ಭ್ರಾಂತನಂತೆ ಉನ್ಮತ್ತನಂತೆ ಅಲೆಯುತ್ತಿದ್ದನು.

ಅಥವಾ ಮೃಗಶಾವಾಕ್ಷೀಂ ಮೃಗ ಜಾನಾಸಿ ಮೈಥಿಲೀಮ್ ।
ಮೃಗವಿಪ್ರೇಕ್ಷಣೇ ಕಾಂತಾ ಮೃಗೀಭಿಃ ಸಹಿತಾ ಭವೇತ್ ॥೨೩॥

ಗಜ ಸಾ ಗಜನಾಸೋರೂರ್ಯದಿ ದೃಷ್ಟಾ ತ್ವಯಾ ಭವೇತ್।
ತಾಂ ಮನ್ಯೇ ವಿದಿತಾಂ ತುಭ್ಯಮಾಖ್ಯಾಹಿ ವರವಾರಣ ॥೨೪॥

ಶಾರ್ದೂಲ ಯದಿ ಸಾ ದೃಷ್ಟಾ ಪ್ರಿಯಾ ಚಂದ್ರನಿಭಾನನಾ ।
ಮೈಥಿಲೀ ಮಮ ವಿಸ್ರಬ್ಧಂ ಕಥಯಸ್ವ ನ ತೇ ಭಯಮ್ ॥೨೫॥

ಕಿಂ ಧಾವಸಿ ಪ್ರಿಯೇ ದೂರಂ ದೃಷ್ಟಾಸಿ ಕಮಲೇಕ್ಷಣೇ ।
ವೃಕ್ಷೈರಾಚ್ಛಾದ್ಯ ಚಾತ್ಮಾನಂ ಕಿಂ ಮಾಂ ನ ಪ್ರತಿಭಾಷಸೇ ॥೨೬॥

ತಿಷ್ಠ ತಿಷ್ಠ ವರಾರೋಹೇ ನ ತೇಽಸ್ತಿ ಕರುಣಾ ಮಯಿ ।
ನಾತ್ಯರ್ಥಂ ಹಾಸ್ಯಶೀಲಾಸಿ ಕಿಮರ್ಥಂ ಮಾಮುಪೇಕ್ಷಸೇ ॥೨೭॥

ಪೀತಕೌಶೇಯಕೇನಾಸಿ ಸೂಚಿತಾ ವರವರ್ಣಿನಿ ।
ಧಾವಂತ್ಯಪಿ ಮಯಾ ದೃಷ್ಟಾ ತಿಷ್ಠ ಯದ್ಯಸ್ತಿ ಸೌಹೃದಮ್ ॥೨೮॥

ನೈವ ಸಾ ನೂನಮಥವಾ ಹಿಂಸಿತಾ ಚಾರುಹಾಸಿನೀ ।
ಕೃಚ್ಛ್ರಂ ಪ್ರಾಪ್ತಂ ಹಿ ಮಾಂ ನೂನಂ ಯಥೋಪೇಕ್ಷಿತುಮರ್ಹತಿ॥೨೯॥

ಜಿಂಕೆಯೆ ! ಜಿಂಕೆಯ ಮರಿಯ ಕಣ್ಣಿನಂತಹ ಸೀತೆಯನ್ನು ನೀನು ತಿಳಿದಿಹೆಯಾ ? ಜಿಂಕೆಯಂಥ ನೋಟದವಳು ನನ್ನ ಕಾಂತೆ. ಹೆಣ್ಣು ಜಿಂಕೆಗಳೊಂದಿಗೆ ಅವಳು ಇರಬಹುದೇನೊ. ಗಜವೇ ! ನಿನ್ನ ಸೊಂಡಿಲಿನ ಗಾತ್ರದ ತೊಡೆಯವಳು ಸೀತೆ. ಶ್ರೇಷ್ಠ ಆನೆಯೆ ! ನಿನಗೆ ಅವಳು ತಿಳಿದಿರಬಹುದು.

ಹುಲಿಯೆ ! ಚಂದ್ರನಂಥ ಮೊಗದವಳು ಆದ ನನ್ನ ಪ್ರಿಯೆ ನಿನಗೆ ಕಂಡಳೇ ? ನಂಬಿಕೆಯಿಟ್ಟು ಹೇಳು. ನನ್ನ ಭಯಬೇಡ.

(ಸೀತೆಯ ಕನವರಿಕೆಯಲ್ಲಿದ್ದ ರಾಮನಿಗೆ ಸೀತೆ ಕಂಡಂತೆ ಭಾಸವಾಗಿ) – ಕಮಲಾಕ್ಷಿ ! ಪ್ರಿಯೆ ! ಏಕೆ ಓಡುತ್ತಿರುವಿ ! ದೂರದಿಂದಲೇ ಕಾಣುತ್ತಿರುವಿ. ಮರಗಳ ಮರೆಯಲ್ಲಿ ನಿಂತು ಏಕೆ ಉತ್ತರಿಸುತ್ತಿಲ್ಲ ?

ನಿಲ್ಲು ನಿಲ್ಲು ವರಾರೋಹೆ ! ನನ್ನಲ್ಲಿ ಕರುಣೆಯಿಲ್ಲವೆ ? ನೀನು ಯಾವಾಗಲೂ ತುಂಬ ಹಾಸ್ಯ ಮಾಡುವವಳಲ್ಲ. ಏಕೆ ನನ್ನನ್ನು ಉಪೇಕ್ಷಿಸುತ್ತಿರುವಿ ?

ನೀನುಟ್ಟ ಹಳದಿ ರೇಷ್ಮೆಯ ಸೀರೆ ಕಂಡಿತು. ಸುಂದರಿ ! ಓಡುತ್ತಿದ್ದರೂ ನನಗೆ ಕಾಣಿಸುತ್ತಿರುವಿ. ನಿಲ್ಲು ಸೌಹಾರ್ದವಿದ್ದರೆ ನನ್ನಲ್ಲಿ.

(ಭ್ರಮೆ ದೂರವಾಯಿತು). ಸುಂದರ ನಗುವಿನ ಸೀತೆ ಖಂಡಿತ ಬದುಕಿಲ್ಲ. ಬದುಕಿದ್ದರೆ ಈ ಕಷ್ಟದಲ್ಲಿರುವ ನನ್ನನ್ನು ಅವಳು ಉಪೇಕ್ಷಿಸುತ್ತಿರಲಿಲ್ಲ.

ವ್ಯಕ್ತಂ ಸಾ ಭಕ್ಷಿತಾ ಬಾಲಾ ರಾಕ್ಷಸೈಃ ಪಿಶಿತಾಶನೈಃ ।
ವಿಭಜ್ಯಾಂಗಾನಿ ಸರ್ವಾಣಿ ಮಯಾ ವಿರಹಿತಾ ಪ್ರಿಯಾ ॥೩೦॥

ನೂನಂ ತಚ್ಚುಭದಂತೋಷ್ಠಂ ಸುನಾಸಂ ಚಾರುಕುಂಡಲಮ್ ।
ಪೂರ್ಣಚಂದ್ರನಿಭಂ ಗ್ರಸ್ತಂ ಮುಖಂ ನಿಷ್ಪ್ರಭತಾಂ ಗತಮ್ ॥೩೧॥

ಸಾ ಹಿ ಚಂಪಕವರ್ಣಾಭಾ ಗ್ರೀವಾ ಗ್ರೈವೇಯಶೋಭಿತಾ ।
ಕೋಮಲಾ ವಿಲಪಂತ್ಯಾಸ್ತು ಕಾಂತಾಯಾ ಭಕ್ಷಿತಾ ಶುಭಾ ॥೩೨॥

ನೂನಂ ವಿಕ್ಷಿಪ್ಯಮಾಣೌ ತೌ ಬಾಹೂ ಪಲ್ಲವಕೋಮಲೌ ।
ಭಕ್ಷಿತೌ ವೇಪಮಾನಾಗ್ರೌ ಸಹಸ್ತಾಭರಣಾಂಗದೌ ॥೩೩॥

ಮಯಾ ವಿರಹಿತಾ ಬಾಲಾ ರಕ್ಷಸಾಂ ಭಕ್ಷಣಾಯ ವೈ ।
ಸಾರ್ಥೇನೇವ ಪರಿತ್ಯಕ್ತಾ ಭಕ್ಷಿತಾ ಬಹುಬಾಂಧವಾ ॥೩೪॥

ಹಾ ಲಕ್ಷ್ಮಣ ಮಹಾಬಾಹೋ ಪಶ್ಯಸಿ ತ್ವಂ ಪ್ರಿಯಾಂ ಕ್ವಚಿತ್ ।
ಹಾ ಪ್ರಿಯೇ ಕ್ವ ಗತಾ ಭದ್ರೇ ಹಾ ಸೀತೇತಿ ಪುನಃ ಪುನಃ ॥೩೫॥

ಇತ್ಯೇವಂ ವಿಲಪನ್ ರಾಮಃ ಪರಿಧಾವನ್ ವನಾದ್ವನಮ್ ।
ಕ್ವಚಿದುದ್ಭ್ರಮತೇ ವೇಗಾತ್ ಕ್ವಚಿದ್ವಿಭ್ರಮತೇ ಬಲಾತ್ ॥೩೬॥

ಕ್ವಚಿನ್ಮತ್ತ ಇವಾಭಾತಿ ಕಾಂತಾನ್ವೇಷಣತತ್ಪರಃ ।
ಸ ವನಾನಿ ನದೀಃ ಶೈಲಾನ್ ಗಿರಿಪ್ರಸ್ರವಣಾನಿ ಚ ॥೩೭॥

ಕಾನನಾನಿ ಚ ವೇಗೇನ ಭ್ರಮತ್ಯಪರಿಸಂಸ್ಥಿತಃ ॥

ತಥಾ ಸ ಗತ್ವಾ ವಿಪುಲಂ ಮಹದ್ವನಂ
ಪರೀತ್ಯ ಸರ್ವಂ ತ್ವಥ ಮೈಥಿಲೀಂ ಪ್ರತಿ ।
ಅನಿಷ್ಠಿತಾಶಃ ಸ ಚಕಾರ ಮಾರ್ಗಣೇ
ಪುನಃ ಪ್ರಿಯಾಯಾಃ ಪರಮಂ ಪರಿಶ್ರಮಮ್ ॥೩೮॥

ನಿಶ್ಚಿತವಾಗಿಯೂ ಮಾಂಸಭಕ್ಷಕರಾದ ರಾಕ್ಷಸರಿಂದ ಎಲ್ಲ ಅಂಗಗಳನ್ನು ತುಂಡು ಮಾಡಿ ಆ ಹುಡುಗಿ ಸೀತೆ ಭಕ್ಷಿತಳಾಗಿರಬೇಕು.

ಸುಂದರವಾದ ಹಲ್ಲು ತುಟಿ ಮೂಗು ಚಾರುಕುಂಡಲಗಳಿದ್ದ ಪೂರ್ಣಚಂದ್ರ-ನಂಥ ಮುಖ ರಾಕ್ಷಸರ ತುತ್ತಾಗಿ ನಿಷ್ಪ್ರಭವಾಗಿದೆ.

ಸಂಪಿಗೆ ಹೂವಿನಂಥ ಅಂದದ, ಕೋಮಲ ಸುಂದರವು ಆದ ಹಾರ ಮುಂತಾದ ಭೂಷಣಗಳಿಂದ ಶೋಭಿತವಾದ ಅಳುತ್ತಿದ್ದ ಸೀತೆಯ ಕೊರಳು ರಾಕ್ಷಸರ ಆಹಾರವಾಗಿರಬೇಕು.

ಚಿಗುರಿನಂತೆ ಕೋಮಲಗಳು ಹಸ್ತ ಆಭರಣ ಅಂಗದಗಳಿಂದ ಸೀತೆಯ ಆ ತೋಳುಗಳು ಆಚೀಚೆ ಹರಡಿಕೊಂಡಿರಬಹುದು ರಾಕ್ಷಸರು ತಿಂದು ಹಾಕಿರಬಹುದು.

ರಾಕ್ಷಸರ ಆಹಾರಕ್ಕಾಗಿಯೇ ನಾನು ಸೀತೆಯನ್ನು ಬಿಟ್ಟು ಬಂದೆನೋ. ಬಹುಬಾಂಧವರಿಂದ ಕೂಡಿದ್ದರೂ ಯಾತ್ರಿಗಳಿಂದ ಪರಿತ್ಯಕ್ತಳಾದ ಹೆಣ್ಣಿನಂತೆ ಸೀತೆಯು ರಾಕ್ಷಸರ ಆಹಾರವಾಗಿದ್ದಾಳೆ.

ಅಯ್ಯೋ ಮಹಾಬಾಹು ಲಕ್ಷ್ಮಣನೇ ಎಲ್ಲಾದರೂ ಕಂಡೆಯಾ ನನ್ನ ಪ್ರಿಯೆ-ಯನ್ನು. ಹಾ ಪ್ರಿಯೆ ! ಹಾ ಭದ್ರೆ ! ಹಾ ಸೀತೆ ! ಎನ್ನುತ್ತ ವಿಲಾಪ ಮಾಡುತ್ತ ರಾಮನು ವನದಿಂದ ವನಕ್ಕೆ ಅಲೆದನು. ಒಮ್ಮೊಮ್ಮೆ ಸೀತೆಯನ್ನು ಕಂಡಂತೆ ಉದ್‌ಭ್ರಾಂತನಾಗುತ್ತಾನೆ. ಕೆಲವೆಡೆ ಶೋಕದಿಂದ ರಭಸದಿಂದ ತಿರುಗಾಡುತ್ತಾನೆ. ಹೆಂಡತಿಯನ್ನು ಹುಡುಕುತ್ತ ಹುಚ್ಚನಂತೆ ಕಾಣುತ್ತಾನೆ.

ಆ ರಾಮನು ಇದ್ದಲ್ಲಿ ಇರದೆ ಕಾಡುಗಳನ್ನು ನದಿಗಳನ್ನು ಬೆಟ್ಟಗಳನ್ನು ಬೆಟ್ಟದ ಝರಿಗಳನ್ನು ವೇಗವಾಗಿ ಅಲ್ಲಲ್ಲಿ ಅಲೆಯುತ್ತಾನೆ.

ಹಾಗೆಯೇ ಅವ ರಾಮನು ಗಹನವಾದ ಅರಣ್ಯವನ್ನು ಹೊಕ್ಕು ಎಲ್ಲೆಡೆ ಮೈಥಿಲಿಯನ್ನು ಹುಡುಕಿದನು. ಆದರೂ ಬೇಸರಿಸದೆ ಪುನಃ ಪ್ರಿಯತಮೆಯ ಅನ್ವೇಷಣೆಯಲ್ಲಿ ಪರಿಶ್ರಮಕ್ಕೆ ಈಡಾದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತನೇ ಸರ್ಗ ಮುಗಿಯಿತು.

❖

ಏಕಷಷ್ಟಿತಮಃ ಸರ್ಗಃ

ಕಥಾಸಾರಾಂಶ– ದಶರಥಾತ್ಮಜ ರಾಮ ಶೂನ್ಯವಾದ ಆಶ್ರಮವನ್ನು ನೋಡಿ ಸೀತೆಯಿರದ ಪರ್ಣ ಶಾಲೆಯನ್ನು ವಿಧ್ವಂಸಗೊಂಡ ಆಸನಗಳನ್ನು ನೋಡಿ ಅಲ್ಲಿ ವೈದೇಹಿಯನ್ನು ಕಾಣದೆ ಸೀತೆಯನ್ನು ನಿರೀಕ್ಷೆ ಮಾಡಿ ಮಾಡಿ ರಾಮನು ಲಕ್ಷ್ಮಣನ ಸುಂದರ ಭುಜಗಳನ್ನು ಗಟ್ಟಿಯಾಗಿ ಹಿಡಿದು ಗಟ್ಟಿಯಾಗಿ ಕೂಗಿ ಹೇಳಿದ – ಲಕ್ಷ್ಮಣ ! ವೈದೇಹಿ ಇಲ್ಲಿಂದ ಎಲ್ಲಿಗೆ ಹೋದಳು ? ಸೌಮಿತ್ರಿಯೆ ! ಯಾರಿಂದ ಅಪಹೃತಳಾದಳು. ಯಾವ ರಕ್ಕಸನಿಂದ ಭಕ್ಷಿತಳಾದಳು ? ಲಕ್ಷ್ಮಣ ! ಸೀತೆಯಿಲ್ಲದೆ ನಾನು ಬದುಕಲಾರೆ.

ಸೀತಾಪರಹಣದಿಂದ ಉಂಟಾದ ತುಂಬ ಶೋಕದಿಂದ ಮೃತನಾದ ನನ್ನನ್ನು ಪರಲೋಕದಲ್ಲಿ ಮಹಾರಾಜ ಕಾಣುತ್ತಾನೆ – 'ಕಾಡಿಗೆ ಹೋಗುತ್ತೇನೆಂದು ಪ್ರತಿಜ್ಞೆ ಮಾಡಿ ಆ ಸಮಯ ಪೂರೈಸದೆ ಇಲ್ಲಿಗೇಕೆ ಬಂದೆ ? ಮನ ಬಂದಂತೆ ನಡೆದುಕೊಂಡ ಸುಳ್ಳು ಹೇಳಿದ ಅನಾರ್ಯನಾದ ನಿನಗೆ ಧಿಕ್ಕಾರ' ಎಂದು ಖಂಡಿತವಾಗಿ ಅಪ್ಪ ಹೇಳುತ್ತಾರೆ.

ವಿವಶನು ಶೋಕ ಸಂತಪ್ತನು ದೀನನು ಮನೋರಥ ಭಂಗಗೊಂಡವನು ಕರುಣೆ ಹುಟ್ಟುವ ರೀತಿಯಿರುವವನು ಇಂತಹ ನನ್ನನ್ನು ಇಲ್ಲಿ ಬಿಟ್ಟು ವರಾರೋಹೆ ! ಎಲ್ಲಿ ಹೋಗುವಿ ? ಸುಮಧ್ಯಮೇ ! ನನ್ನನ್ನು ಬಿಟ್ಟು ಹೋಗಬೇಡ. ನೀನಿಲ್ಲದೆ ಪ್ರಾಣವನ್ನು ಬಿಡುತ್ತೇನೆ. ಹೀಗೆ ವಿಲಾಪಮಾಡುತ್ತ ಸೀತೆಯನ್ನು ಕಾಣುವ ಲಾಲಸೆಯಿಂದ ತುಂಬ ದುಃಖದಿಂದ ಬಳಲಿದ ರಾಘವ ಜನಕಾತ್ಮಜೆಯನ್ನು ಕಾಣಲಿಲ್ಲ.

ಸೀತೆಯನ್ನು ಕಾಣದೆ ಕೆಸರಿನಲ್ಲಿ ಹೂತು ಹೋದ ಆನೆಯಂತಿದ್ದ ರಾಮನನ್ನು ಹಿತಾಕಾಂಕ್ಷೆಯಿಂದ ಲಕ್ಷ್ಮಣ ಹೇಳಿದನು.

ಶೂರ ! ಮಹಾಬಾಹೋ ! ವಿಷಾದಿಸದಿರು. ನನ್ನೊಂದಿಗೆ ಹುಡುಕುವ ಪ್ರಯತ್ನ ಮಾಡು. ಈ ಕಾಡು ಅನೇಕ ಗುಹೆಗಳಿಂದ ಶೋಭಿತವಾದುದು. ಕಾಡಿನಲ್ಲಿ ಅಲೆಯು–ವುದು ಮೈಥಿಲಿಗೆ ತುಂಬ ಪ್ರಿಯವಾದದ್ದು. ಕಾಡೆಂದರೆ ಅಚ್ಚುಮೆಚ್ಚು ಹುಚ್ಚು. ಅರಳು ತಾವರೆಯ ಕೊಳವನ್ನು ಹೊಕ್ಕಿರಬಹುದು. ಮೀನುಗಳಿಂದ ತುಂಬಿರುವ ನದಿಯೆಡೆಗೆ ಸಾಗಿರಬಹುದು – ಸ್ನಾನ ಮಾಡುವ ಬಯಕೆಯಿಂದ. ತಮಾಷೆ ಮಾಡಲು ಕಾಡಲ್ಲಿ ಎಲ್ಲೊ ಅಡಗಿರಬಹುದು. ಅಥವಾ ನಮ್ಮನ್ನು ಹೆದರಿಸಲು ಎಲ್ಲೋ ಕಾಡಿನಲ್ಲಿ ಬಚ್ಚಿಟ್ಟುಕೊಂಡಿರಬಹುದು. ಅಥವಾ ನಾನು ಕಾಣದಿದ್ದರೆ ಇವರು ಏನಾಗುವರೋ ಎಂದು ತಿಳಿಯುವ ಕುತೂಹಲದಿಂದ ಮರೆಯಾಗಿರಬಹುದು. ಕೂಡಲೆ ನಾವಿಬ್ಬರೂ ಹುಡುಕೋಣ.

ಅವಳೆಲ್ಲಿರಬಹುದೆಂದು ನೀನು ಭಾವಿಸುವಿ ಹೇಳು ಅಲ್ಲಿ ಹುಡುಕೋಣ, ಶೋಕಿಸದಿರು.

ಹೀಗೆ ಹೇಳಲ್ಪಟ್ಟು ಸೌಹಾರ್ದದಿಂದ ಲಕ್ಷ್ಮಣದಿಂದ ಸಮಾಧಾನ- ಗೊಳಿಸಲ್ಪಟ್ಟ ರಾಮನು ಸುಮಿತ್ರಾನಂದನನಿಂದ ಕೂಡಿಕೊಂಡು ಹುಡುಕಲು ಉಪಕ್ರಮಿಸಿದನು.

ದಶರಥನ ಮಕ್ಕಳಾದ ಆ ರಾಮಲಕ್ಷ್ಮಣರು ವನಗಳನ್ನು ಪರ್ವತಗಳನ್ನು ನದಿಗಳನ್ನು ಸರೋವರಗಳನ್ನು ಸಮಗ್ರವಾಗಿ ಹುಡುಕಾಡಿದರು.

ಆ ಬೆಟ್ಟದ ತಪ್ಪಲುಗಳನ್ನು ಗುಹೆಗಳನ್ನು ಕೂಡ ಶಿಖರಗಳನ್ನು ಸಮಗ್ರವಾಗಿ ಹುಡುಕಾಡಿದವರಾಗಿ ಆ ಸೀತೆಯನ್ನು ಪಡೆಯಲಿಲ್ಲ.

ಎಲ್ಲ ಕಡೆ ಬೆಟ್ಟವನ್ನು ಹುಡುಕಿ ರಾಮ ಲಕ್ಷ್ಮಣನನ್ನು ಹೇಳಿದನು – ಸೌಮಿತ್ರೇ ! ಈ ಪರ್ವತದಲ್ಲಿ ಶುಭಳಾದ ವೈದೇಹಿ ಕಾಣುತ್ತಿಲ್ಲ.

ಬಳಿಕ ದುಃಖಸಂತಪ್ತನಾದ ಲಕ್ಷ್ಮಣನು ದಂಡಕಾರಣ್ಯದಲ್ಲಿ ಅಲೆಯುತ್ತ, ಮಹಾಪ್ರಾಜ್ಞನೇ ರಾಮ ! ವಿಷ್ಣುವು ಬಲಿಚಕ್ರವರ್ತಿಯನ್ನು ಬಂಧನ ಮಾಡಿ ಭೂಮಿಯನ್ನು ಪಡೆದಂತೆ ಸೀತೆಯನ್ನು ಅವಶ್ಯವಾಗಿ ಪಡೆಯುವಿ – ಎಂದನು.

ಲಕ್ಷ್ಮಣನ ಮಾತು ಕೇಳಿ ದೀನನಾದ ರಾಮನು ಕಾಡನ್ನೆಲ್ಲ ಹುಡುಕಾಡಿದ್ದಾಯಿತು. ಎಲ್ಲೂ ಸೀತೆ ಕಾಣಲಿಲ್ಲ ಎಂದು ಹೇಳಿದ. ಲಕ್ಷ್ಮಣನ ಮಾತಲ್ಲಿ ವಿಶ್ವಾಸವಿಡದೆ ಪ್ರಿಯೆಯನ್ನು ಕಾಣದೆ ಮತ್ತೆ ಮತ್ತೆ ಹಾ ಪ್ರಿಯೆ ! ಎಂದು ಕೂಗಿದನು.

❖

ಸೀತಾನ್ವೇಷಣಮ್

ದೃಷ್ಟ್ವಾಶ್ರಮಪದಂ ಶೂನ್ಯಂ ರಾಮೋ ದಶರಥಾತ್ಮಜಃ ।
ರಹಿತಾಂ ಪರ್ಣಶಾಲಾಂ ಚ ವಿಧ್ವಸ್ತಾನ್ಯಾಸನಾನಿ ಚ ॥೧॥

ಅದೃಷ್ಟ್ವಾ ತತ್ರ ವೈದೇಹೀಂ ಸಂನಿರೀಕ್ಷ್ಯ ಚ ಸರ್ವಶಃ ।
ಉವಾಚ ರಾಮಃ ಪ್ರಾಕ್ರುಶ್ಯ ಪ್ರಗೃಹ್ಯ ರುಚಿರೌ ಭುಜೌ ॥೨॥

ಕ್ವ ನು ಲಕ್ಷ್ಮಣ ವೈದೇಹೀ ಕಂ ವಾ ದೇಶಮಿತೋ ಗತಾ ।
ಕೇನಾಹೃತಾ ವಾ ಸೌಮಿತ್ರೇ ಭಕ್ಷಿತಾ ಕೇನ ವಾ ಪ್ರಿಯಾ ॥೩॥

ವೃಕ್ಷೇಣಾಚ್ಛಾದ್ಯ ಯದಿ ಮಾಂ ಸೀತೇ ಹಸಿತುಮಿಚ್ಛಸಿ ।
ಅಲಂ ತೇ ಹಸಿತೇನಾದ್ಯ ಮಾಂ ಭಜಸ್ವ ಸುದುಃಖಿತಮ್ ॥೪॥

ಯೈಃ ಸಹ ಕ್ರೀಡಸೇ ಸೀತೇ ವಿಶ್ವಸ್ತೈರ್ಮೃಗಪೋತಕೈಃ ।
ಏತೇ ಹೀನಸ್ತ್ವಯಾ ಸೌಮ್ಯೇ ಧ್ಯಾಯಂತ್ಯಸ್ರಾವಿಲೇಕ್ಷಣಾಃ ॥೫॥

ದಶರಥನಂದನ ರಾಮನು ಶೂನ್ಯವಾದ ಆಶ್ರಮಪ್ರದೇಶವನ್ನು, ಸೀತೆಯಿರದ ಪರ್ಣಶಾಲೆಯನ್ನು, ಧ್ವಂಸಗೊಂಡ ಆಸನಗಳನ್ನು ನೋಡಿ ಅಲ್ಲಿ ಮೈಥಿಲಿಯನ್ನು ಕಾಣದೆ ಎಲ್ಲೆಡೆ ಅರಸಿ ಲಕ್ಷ್ಮಣನ ತೋಳುಗಳನ್ನು ಗಟ್ಟಿ ಹಿಡಿದು ಜೋರಾಗಿ ಅಳುತ್ತ ಹೇಳಿದನು.

ಲಕ್ಷ್ಮಣನೇ ! ವೈದೇಹಿ ಎಲ್ಲಿಗೆ ತಾನೆ ಹೋದಳು ? ಇಲ್ಲಿಂದ ಯಾವ ದೇಶಕ್ಕೆ ಹೋದಳು ? ಸೌಮಿತ್ರಿಯೇ ! ಯಾರಿಂದಲಾದರು ಅಪಹೃತಳಾದಳೇ ? ಪ್ರಿಯೆಯು ಯಾರಿಂದಲಾದಲೂ ಭಕ್ಷಿತಳಾದಳೇ ?

ಸೀತಯಾ ರಹಿತೋಽಹಂ ವೈ ನ ಹಿ ಜೀವಾಮಿ ಲಕ್ಷ್ಮಣ ।
ಮೃತಂ ಶೋಕೇನ ಮಹತಾ ಸೀತಾಹರಣಜೇನ ಮಾಮ್ ॥೬॥

ಪರಲೋಕೇ ಮಹಾರಾಜೋ ನೂನಂ ದ್ರಕ್ಷ್ಯತಿ ಮೇ ಪಿತಾ ।
ಕಥಂ ಪ್ರತಿಜ್ಞಾಂ ಸಂಶ್ರುತ್ಯ ಮಯಾ ತ್ವಮಭಿಯೋಜಿತಃ ॥೭॥

ಅಪೂರಯಿತ್ವಾ ತಂ ಕಾಲಂ ಮತ್ಸಕಾಶಮಿಹಾಗತಃ ।
ಕಾಮವೃತ್ತಮನಾರ್ಯಂ ಮಾಂ ಮೃಷಾವಾದಿನಮೇವ ಚ ॥೮॥

ಸೀತಾಪಹರಣದಿಂದುಟಾದ ಮಹಾಶೋಕದಿಂದ ಮೃತನಾದ ನನ್ನನ್ನು ಪರಲೋಕದಲ್ಲಿ ನನ್ನ ತಂದೆ ಕಾಣುತ್ತಾರೆ. ನನ್ನನ್ನು ಆಕ್ಷೇಪಿಸುತ್ತಾರೆ – ನಾನು ನಿನಗೆ ವನವಾಸ ಮಾಡಲು ಆಜ್ಞಾಪಿಸಿದ್ದೆ. ನೀನು ಪ್ರತಿಜ್ಞೆ ಮಾಡಿದ್ದೆ. ಆ ವನವಾಸದ ಕಾಲವನ್ನು ಪೂರೈಸದೇ ನನ್ನ ಬಳಿಗೇಕೆ ಬಂದೆ ?

ಸ್ವೇಚ್ಛಾಚಾರಿ ಅನಾರ್ಯ ಮಿಥ್ಯಾವಾದಿಯಾದ ನಿನಗೆ ಧಿಕ್ಕಾರ. – ಹೀಗೆ ಪರಲೋಕದಲ್ಲಿ ನನ್ನ ತಂದೆ ಹೇಳುತ್ತಾರೆ.

ಧಿಕ್ ತ್ವಾಮಿತಿ ಪರೇ ಲೋಕೇ ವ್ಯಕ್ತಂ ವಕ್ಷ್ಯತಿ ಮೇ ಪಿತಾ ।
ವಿವಶಂ ಶೋಕಸಂತಪ್ತಂ ದೀನಂ ಭಗ್ನಮನೋರಥಮ್ ॥೯॥

ಮಾಮಿಹೋತ್ಸೃಜ್ಯ ಕರುಣಂ ಕೀರ್ತಿರ್ನರಮಿವಾನೃಜುಮ್ ।
ಕ್ವ ಗಚ್ಛಸಿ ವರಾರೋಹೇ ಮಾಂ ನೋತ್ಸೃಜ ಸುಮಧ್ಯಮೇ ॥೧೦॥

ತ್ವಯಾ ವಿರಹಿತಶ್ಚಾಹಂ ತ್ಯಕ್ಷ್ಯೇ ಜೀವಿತಮಾತ್ಮನಃ ।
ಇತೀವ ವಿಲಪನ್ ರಾಮಃ ಸೀತಾದರ್ಶನಲಾಲಸಃ ॥೧೧॥

ನ ದದರ್ಶ ಸುದುಃಖಾರ್ತೋ ರಾಘವೋ ಜನಕಾತ್ಮಜಾಮ್ ।
ಅನಾಸಾದಯಮಾನಂ ತಂ ಸೀತಾಂ ಶೋಕಪರಾಯಣಮ್ ॥೧೨॥

ಪಂಕಮಾಸಾದ್ಯ ವಿಪುಲಂ ಸೀದಂತಮಿವ ಕುಂಜರಮ್ ।
ಲಕ್ಷ್ಮಣೋ ರಾಮಮತ್ಯರ್ಥಮುವಾಚ ಹಿತಕಾಮ್ಯಯಾ ॥೧೩॥

ಸುಂದರ ನಡುವಿನ ಸುಂದರಿಯೇ ! ವಿವಶನು ಶೋಕಸಂತಪ್ತನು ದೀನನು ಈಡೇರದ ಮನೋರಥದವನು ಆದ ನಾನು ಕರುಣಾಜನಕ ಸ್ಥಿತಿಯಲ್ಲಿರುವಾಗ ಕುಟಿಲ ಮಾನವನನ್ನು ಕೀರ್ತಿಯು ಬಿಟ್ಟು ಹೋಗುವಂತೆ ನನ್ನನ್ನು ಬಿಟ್ಟು ಎಲ್ಲಿ ಹೋಗಿರುವಿ ? ನನ್ನನ್ನು ಬಿಟ್ಟು ಹೋಗಬೇಡ. ನಿನ್ನಿಂದ ಪರಿತ್ಯಕ್ತನಾದ ನಾನು ಪ್ರಾಣ ಬಿಡುತ್ತೇನೆ.

ಸೀತೆಯನ್ನು ಕಾಣುವ ಲಾಲಸೆಯ ರಾಮ ಹೀಗೆ ವಿಲಪಿಸುತ್ತಲೆ ಇದ್ದಾನೆ. ತುಂಬ ದುಃಖಿತನಾದ ರಾಘವನು ಜಾನಕಿಯನ್ನು ಕಾಣಲಿಲ್ಲ. ಸೀತೆಯನ್ನು ಪಡೆಯದಿರುವ ದಶರಥನಂದನ ರಾಮನನ್ನು ಗಾಢವಾದ ಕೆಸರಲ್ಲಿ ಬಿದ್ದು ನರಳುತ್ತಿರುವ ಆನೆಯಂತಾದವನನ್ನು ಲಕ್ಷ್ಮಣ ಬಹಳ ಹಿತವನ್ನು ಬಯಸಿ ಹೇಳಿದನು.

ಮಾ ವಿಷಾದಂ ಮಹಾಬುದ್ಧೇ ಕುರು ಯತ್ನಂ ಮಯಾ ಸಹ ।
ಇದಂ ಗಿರಿವನಂ ಶೂರ ಬಹುಕಂದರಶೋಭಿತಮ್ ॥೧೪॥

ಪ್ರಿಯಕಾನನಸಂಚಾರಾ ವನೋನ್ಮತ್ತಾ ಚ ಮೈಥಿಲೀ ।
ಸಾ ವನಂ ವಾ ಪ್ರವಿಷ್ಟಾ ಸ್ಯಾನ್ನಲಿನೀಂ ವಾ ಸುಪುಷ್ಪಿತಾಮ್ ॥೧೫॥

ಸರಿತಂ ವಾಪಿ ಸಂತಪ್ತಾ ಮೀನವಂಜುಲಸೇವಿತಾಮ್ ।
ಸ್ನಾತುಕಾಮಾ ನಿಲೀನಾ ಸ್ಯಾದ್ವಾಸಕಾಮಾ ವನೇ ಕ್ವಚಿತ್ ॥೧೬॥

ವಿತ್ರಾಸಯಿತುಕಾಮಾ ವಾ ಲೀನಾ ಸ್ಯಾತ್ ಕಾನನೇ ಕ್ವಚಿತ್ ।
ಜಿಜ್ಞಾಸಮಾನಾ ವೈದೇಹೀ ತ್ವಾಂ ಮಾ ಚ ಪುರುಷರ್ಷಭ ॥೧೭॥

ತಸ್ಯ ಹ್ಯನ್ವೇಷಣೇ ಶ್ರೀಮನ್ ಕ್ಷಿಪ್ರಮೇವ ಯತಾವಹೇ ।
ವನಂ ಸರ್ವಂ ವಿಚಿನ್ವಾನೌ ಯತ್ರ ಸಾ ಜನಕಾತ್ಮಜಾ ॥೧೮॥

ಮಹಾಬಾಹುವೆ ! ವಿಷಾದ ಪಡಬೇಡ. ನನ್ನೊಂದಿಗೆ ಹುಡುಕುವ ಪ್ರಯತ್ನ ಮಾಡು. ಶೂರನೇ ! ಈ ಕಾಡು ಬಹಳ ಗುಹೆಗಳಿಂದ ಶೋಭಿತವಾಗಿದೆಯಷ್ಟೆ. ಕಾಡಿನಲ್ಲಿ ಸಂಚರಿಸುವುದು ಪ್ರಿಯವಾದ ಸೀತೆ ಕಾಡನ್ನು ಕಂಡು ಖುಷಿಗೊಂಡು ಸುತ್ತಾಡಲು ಹೋಗಿರಬಹುದು. ಮೀನು, ಜೊಂಡುಗಳಿಂದ ತುಂಬಿರುವ ನದಿಗೆ ಮೀಯವ ಬಯಕೆಯಿಂದ ಹೋಗಿರಬಹುದು. ವಿನೋದವನ್ನು ಬಯಸಿದವಳಾಗಿ ಎಲ್ಲಿಯೋ ವನದಲ್ಲಿ ಅಡಗಿರಬಹುದು. ಅಥವಾ ನಮ್ಮನ್ನು ಹೆದರಿಸಲು ಕಾನನದಲ್ಲಿ ಕಾಣದಂತೆ ಇರಬಹುದು. ನಮ್ಮ ಹುಡುಕುವ ಸಾಮರ್ಥ್ಯವನ್ನು ಅರಿಯುವ ಕುತೂಹಲದಿಂದ ಬಚ್ಚಿಟ್ಟುಕೊಂಡಿರಬಹುದು. ಆ ಸೀತೆಯನ್ನು ಹುಡುಕಲು ಕ್ಷಿಪ್ರವಾಗಿ ಪ್ರಯತ್ನಿಸೋಣ. ಕಾಡೆಲ್ಲ ಹುಡುಕೋಣ. ಎಲ್ಲಿರಬಹುದೆಂದು ನೀನು ಭಾವಿಸುವೆಯೋ ಅಲ್ಲೆಲ್ಲ ಅನ್ವೇಷಣೆ ಮಾಡೋಣ. ಮನದಿ ಶೋಕಿಸಲು ತೊಡಗದಿರು.

ಮನ್ಯಸೇ ಯದಿ ಕಾಕುತ್ಸ್ಥ ಮಾ ಸ್ಮ ಶೋಕೇ ಮನಃ ಕೃಥಾಃ ।
ಏವಮುಕ್ತಸ್ತು ಸೌಹಾರ್ದಾಲ್ಲಕ್ಷ್ಮಣೇನ ಸಮಾಹಿತಃ ॥೧೯॥

ಸಹ ಸೌಮಿತ್ರಿಣಾ ರಾಮೋ ವಿಚೇತುಮುಪಚಕ್ರಮೇ ।
ತೌ ವನಾನಿ ಗಿರೀಂಶ್ಚೈವ ಸರಿತಶ್ಚ ಸರಾಂಸಿ ಚ ॥೨೦॥

ನಿಖಿಲೇನ ವಿಚಿನ್ವಾನೌ ಸೀತಾಂ ದಶರಥಾತ್ಮಜೌ ।
ತಸ್ಯ ಶೈಲಸ್ಯ ಸಾನೂನಿ ಗುಹಾಶ್ಚ ಶಿಖರಾಣಿ ಚ ॥೨೧॥

ನಿಖಿಲೇನ ವಿಚಿನ್ವಂತೌ ನೈವ ತಾಮಭಿಜಗ್ಮತುಃ ।
ವಿಚಿತ್ಯ ಸರ್ವತಃ ಶೈಲಂ ರಾಮೋ ಲಕ್ಷ್ಮಣಮಬ್ರವೀತ್ ॥೨೨॥

ನೇಹ ಪಶ್ಯಾಮಿ ಸೌಮಿತ್ರೇ ವೈದೇಹೀಂ ಪರ್ವತೇ ಶುಭಾಮ್ ।

ಲಕ್ಷ್ಮಣನ ಸೌಹಾರ್ದದ ಮಾತಿನಿಂದ ಸಮಾಧಾನಗೊಂಡ ರಾಮನು ಲಕ್ಷ್ಮಣನೊಂದಿಗೆ ಹುಡುಕಲು ಉಪಕ್ರಮಿಸಿದನು.

ದಶರಥನಂದನರಾದ ಅವರಿಬ್ಬರು ಕಾಡುಗಳಲ್ಲಿ ಗುಡ್ಡಬೆಟ್ಟಗಳಲ್ಲಿ ನದೀ-ಸರೋವರಗಳಲ್ಲಿ ಸಮಗ್ರವಾಗಿ ಸೀತೆಯನ್ನು ಹುಡುಕಾಡಿದರು.

ಎದುರಿಗಿದ್ದ ಶೈಲದ ತಪ್ಪಲುಗಳಲ್ಲಿ ಗುಹೆಗಳಲ್ಲಿ ಶಿಖರಗಳಲ್ಲಿ ಎಲ್ಲೆಡೆಯೂ ಹುಡುಕಿದರೂ ಸೀತೆಯನ್ನು ಹೊಂದಲಿಲ್ಲ. ಬೆಟ್ಟವನ್ನೆಲ್ಲ ತಡಕಾಡಿ ಹುಡುಕಾಡಿ

ರಾಮನು ಲಕ್ಷ್ಮಣನಿಗೆ ಹೇಳಿದನು. ಸೌಮಿತ್ರಿಯೇ ಈ ಪರ್ವತದಲ್ಲಿ ಸೀತೆಯನ್ನು ಕಾಣಲಿಲ್ಲ.

ತತೋ ದುಃಖಾಭಿಸಂತಪ್ತೋ ಲಕ್ಷ್ಮಣೋ ವಾಕ್ಯಮಬ್ರವೀತ್ ॥೨೩॥

ವಿಚರನ್ ದಂಡಕಾರಣ್ಯಂ ಭ್ರಾತರಂ ದೀಪ್ತತೇಜಸಮ್ ।
ಪ್ರಾಪ್ಸ್ಯಸಿ ತ್ವಂ ಮಹಾಪ್ರಾಜ್ಞ ಮೈಥಿಲೀಂ ಜನಕಾತ್ಮಜಾಮ್ ॥೨೪॥

ಯಥಾ ವಿಷ್ಣುರ್ಮಹಾಬಾಹುರ್ಬಲಿಂ ಬದ್ಧ್ವಾ ಮಹೀಮಿಮಾಮ್ ।
ಏವಮುಕ್ತಸ್ತು ಸೌಹಾರ್ದಾಲ್ಲಕ್ಷ್ಮಣೇನ ಸ ರಾಘವಃ ॥೨೫॥

ಉವಾಚ ದೀನಯಾ ವಾಚಾ ದುಃಖಾಭಿಹತಚೇತನಃ ।
ವನಂ ಸರ್ವಂ ಸುವಿಚಿತಂ ಪದ್ಮಿನ್ಯಃ ಫುಲ್ಲಪಂಕಜಾಃ ॥೨೬॥

ಗಿರಿಶ್ಚಾಯಂ ಮಹಾಪ್ರಾಜ್ಞ ಬಹುಕಂದರನಿರ್ಝರಃ ।
ನ ಹಿ ಪಶ್ಯಾಮಿ ವೈದೇಹೀಂ ಪ್ರಾಣೇಭ್ಯೋಽಪಿ ಗರೀಯಸೀಮ್ ॥೨೭

ಬಳಿಕ ದುಃಖದಿಂದ ಬಹಳ ಸಂತಪ್ತನಾದ ಲಕ್ಷ್ಮಣನು ದಂಡಕಾರಣ್ಯವನ್ನೆಲ್ಲ ಸುತ್ತಾಡಿ ತೇಜಸ್ವಿ ಅಣ್ಣ ರಾಮನಿಗೆ ಹೇಳಿದನು –

ಮಹಾಪ್ರಾಜ್ಞನೇ ! ಜನಕಾತ್ಮಜೆ ಸೀತೆಯನ್ನು ನಿಶ್ಚಯವಾಗಿ ಹೊಂದುವಿ. ವಿಷ್ಣುವು ಬಲಿಯನ್ನು ಬಂಧಿಸಿ ಭೂಮಿಯನ್ನು ಪಡೆದಂತೆ. ಸೌಹಾರ್ದದಿಂದ ಲಕ್ಷ್ಮಣನಿಂದ ಹೀಗೆ ಹೇಳಲ್ಪಟ್ಟ ರಾಘವನು ದುಃಖದಿಂದ ಉಪಹತ ಚೇತನವಾಗಿ ದೀನ ಮಾತುಗಳಿಂದ ಹೇಳಿದನು.

ಕಾಡೆಲ್ಲ ಹುಡುಕಾಡಿದ್ದಾಯಿತು. ಅರಳುದಾವರೆಗಳ ಕೊಳಗಳನ್ನು ಕಂಡದ್ದಾಯಿತು. ಮಹಾಪ್ರಾಜ್ಞ ! ಬಹಳ ಗುಹೆಗಳು ಹಾಗೂ ಜಲಪಾತಗಳಿಂದ ಕೂಡಿದ ಈ ಬೆಟ್ಟದಲ್ಲಿಯೂ ಹುಡುಕಾಡಿದೆ. ಪ್ರಾಣಕ್ಕಿಂತಲೂ ಮಿಗಿಲಾದ ವೈದೇಹಿ ಕಾಣಲಿಲ್ಲ.

ಏವಂ ಸ ವಿಲಪನ್ ರಾಮಃ ಸೀತಾಹರಣಕರ್ಶಿತಃ ।
ದೀನಃ ಶೋಕಸಮಾವಿಷ್ಟೋ ಮುಹೂರ್ತಂ ವಿಹ್ವಲೋಽಭವತ್ ॥೨೮

ಸ ವಿಹ್ವಲಿತಸರ್ವಾಂಗೋ ಗತಬುದ್ಧಿರ್ವಿಚೇತನಃ ।
ನಿಷಸಾದಾತುರೋ ದೀನೋ ನಿಃಶ್ವಸ್ಯಾಶೀತಮಾಯತಮ್ ॥೨೯॥

ಹೀಗೆ ಆ ರಾಮನು ವಿಲಪಿಸುತ್ತ ಸೀತಾಪಹಾರದಿಂದ ಕಷ್ಟಕ್ಕೊಳಗಾಗಿ ದೀನನು ಶೋಕ ತುಂಬಿದವನು ಆಗಿ ಮುಹೂರ್ತ ಕಾಲ ವಿಹ್ವಲಗೊಂಡ.

ರಾಮ ಸಂತಾಪಗೊಂಡನು. ದೇಹಶಿಥಿಲವಾಯಿತು. ಬುದ್ಧಿ ತೋಚದಂತಾ-ಯಿತು. ಚೈತನ್ಯ ಉಡುಗಿತು. ಅತುರನು ದೀನನು ಆಗಿ ದೀರ್ಘವಾದ ಬಿಸಿ ನಿಟ್ಟುಸಿರಿಟ್ಟನು. ವಿಷಾದಗೊಂಡನು.

ಬಹುಶಃ ಸ ತು ನಿಃಶ್ವಸ್ಯ ರಾಮೋ ರಾಜೀವಲೋಚನಃ ।
ಹಾ ಪ್ರಿಯೇತಿ ವಿಚುಕ್ರೋಶ ಬಹುಶೋ ಬಾಷ್ಪಗದ್ಗದಃ ॥೩೦॥

ತಂ ತತಃ ಸಾಂತ್ವಯಾಮಾಸ ಲಕ್ಷ್ಮಣಃ ಪ್ರಿಯಬಾಂಧವಃ ।
ಬಹುಪ್ರಕಾರಂ ಧರ್ಮಜ್ಞಃ ಪ್ರಶ್ರಿತಃ ಪ್ರಶ್ರಿತಾಂಜಲಿಃ ॥೩೧॥

ಅನಾದೃತ್ಯ ತು ತದ್ವಾಕ್ಯಂ ಲಕ್ಷ್ಮಣೋಷ್ಠಪುಟಾಚ್ಚ್ಯುತಮ್ ।
ಅಪಶ್ಯಂಸ್ತಾಂ ಪ್ರಿಯಾಂ ಸೀತಾಂ ಪ್ರಾಕ್ರೋಶತ್ಸ ಪುನಃ ಪುನಃ ॥೩೨॥

ರಾಜೀವಲೋಚನ ರಾಮ ಬಹಳ ನಿಟ್ಟುಸಿರು ಬಿಡುತ್ತ ಬಾಷ್ಪಗದ್ಗದನಾಗಿ 'ಹಾ ಪ್ರಿಯೇ೩೩' ಎಂದು ಬಹಳ ಬಾರಿ ಕೂಗಿದನು.

ಬಳಿಕ ಪ್ರಿಯಬಾಂಧವ ಲಕ್ಷ್ಮಣ ಬಹುಪ್ರಕಾರವಾಗಿ ವಿನೀತ ಭಾವದಿಂದ ಕೈಮುಗಿದು ಸಮಾಧಾನ ಗೊಳಿಸಿದನು ಆ ರಾಮನನ್ನು.

ಲಕ್ಷ್ಮಣನ ತುಟಿಪುಟದಿಂದ ಹೊಮ್ಮಿದ ಮಾತುಗಳನ್ನು ಆದರಿಸದೆ ರಾಮ ಪ್ರಿಯೆ ಸೀತೆಯನ್ನು ಮತ್ತೆ ಮತ್ತೆ ಕೂಗಹತ್ತಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತೊಂದನೇ ಸರ್ಗ ಮುಗಿಯಿತು.

❖

ದ್ವಿಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಸೀತೆಯನ್ನು ಕಾಣದೆ ರಾಮ ವ್ಯಾಕುಲನಾಗಿ ವಿಲಪಿಸಿದ

ಸೀತೆಯನ್ನು ಒಮ್ಮೊಮ್ಮೆ ಕಂಡವನಂತೆ, ಮತ್ತೊಮ್ಮೆ ಕಾಣದಂತೆ = ಹೂವುಗಳನ್ನು ಇಷ್ಟಪಡುವ ಪ್ರಿಯೆಯೆ ! ನೀನು ಅರಳು ಹೂವುಗಳ ಅಶೋಕವೃಕ್ಷದ ರೆಂಬೆ ಕೊಂಬೆಗಳ ಮರೆಯಲ್ಲಿ ನಿಂತು ನನಗೆ ಶೋಕವನ್ನು ಹೆಚ್ಚಿಸಿರುವೆ !

ಬಾಳೆಯ ದಿಂಡಿನಂತಿರುವ ತೊಡೆಗಳನ್ನು ಬಾಳೆಗಿಡಗಳ ನಡುವೆ ಅಡಗಿದ್ದರೂ ನಾನು ಕಾಣುತ್ತಿದ್ದೇನೆ. ಮುಚ್ಚಿಟ್ಟುಕೊಳ್ಳಲು ನಿನಗೆ ಸಾಧ್ಯವಿಲ್ಲ.

ಭದ್ರೆ ! ಕಣಿಗಲೆಯ ವನವನ್ನು ನಗುತ್ತಲೆ ಸೇವಿಸಿರುವಿ. ನನ್ನನ್ನು ಬಾಧೆ ಪಡಿಸುವ ಈ ಪರಿಹಾಸ ಸಾಕು.

ಪ್ರಿಯಳೇ ! ಪರಿಶ್ರಾಂತನಾದ ನನ್ನ ಮುಂದೆ ನಿನ್ನ ಪರಿಹಾಸದಿಂದೇನು ? ಈ ನಿನ್ನ ಪರಿಹಾಸವು ನನಗೆ ಹಿಡಿಸುವುದಿಲ್ಲ.

ವಿಶೇಷವಾಗಿ ಆಶ್ರಮದ ಪರಿಸರದಲ್ಲಿ ಪರಿಹಾಸ ಸಲ್ಲದು. ನಿನ್ನ ವಿನೋದದ ಸ್ವಭಾವ. ನನಗೆ ಗೊತ್ತು. ವಿಶಾಲಾಕ್ಷಿ ! ಬೇಗ ಬಾ. ಈ ನಿನ್ನ ಆಶ್ರಮ ಬರಿದಾಗಿದೆ.

ಲಕ್ಷ್ಮಣ ! ನಿಜವಾಗಿ ಸೀತೆ ರಾಕ್ಷಸರ ಆಹಾರವಾಗಿಹಳು. ಇಷ್ಟು ವಿಲಪಿಸುತ್ತಿರುವ ನನ್ನ ಬಳಿಗಿನ್ನೂ ಬಂದಿಲ್ಲ ನನ್ನಾಕೆ.

ಕಂಬನಿ ಸುರಿಸುತ್ತಿರುವ ಈ ಜಿಂಕೆಗಳು ಹೇಳುವಂತೆ ತೋರುತಿದೆ ಸೀತೆ ಭಕ್ಷಿತಳಾಗಿಹಳೆಂದು.

ಸಾಧ್ವಿಯೇ ! ಸುಂದರಿಯೆ ! ಎಲ್ಲಿ ಹೋದೆ. ನಿನ್ನಿಂದ ಆ ಕೈಕೇಯಿಯ ಬಯಕೆ ತೀರಿದೆ.

ಸೀತೆಯೊಂದಿಗೆ ಕಾಡಿಗೆ ಬಂದ ನಾನು ಸೀತೆಯಿಲ್ಲದೆ ಹೇಗೆ ಅಂತಃಪುರಕ್ಕೆ ಹಿಂತಿರುಗಲಿ? ಈ ಲೋಕ ನನ್ನನ್ನು 'ನಿರ್ವೀರ್ಯ! ನಿರ್ದಯ! ಎಂದು ದೂಷಿಸುವುದು!

ವನವಾಸ ಮುಗಿದ ಬಳಿಕ ಕುಶಲ ಕೇಳುವ ಜನಕಮಹಾರಾಜರು ಜಾನಕಿಯಿಲ್ಲ– ದಿದುದ್ದನ್ನು ತಿಳಿದು ಮೋಹವಶನಾಗುವರು ! ಮಡದಿಯನ್ನು ಉಳಿಸಿಕೊಳ್ಳದ ನಾನು ಮಾವನನ್ನು ಹೇಗೆ ಕಾಣಲಿ ?

ಅಥವಾ ಭರತನಾಳುವ ಅಯೋಧ್ಯೆಗೆ ಹೋಗುವುದೇ ಇಲ್ಲ. ಸೀತೆಯಿಲ್ಲದ ಸ್ವರ್ಗವೂ ನನಗೆ ಶೂನ್ಯ.

ಲಕ್ಷ್ಮಣ ! ನನ್ನನ್ನು ಇಲ್ಲಿಯೇ ಬಿಟ್ಟು ನೀನೊಬ್ಬನೆ ಅಯೋಧ್ಯೆಗೆ ಹಿಂತಿರುಗು. ಸೀತೆಯಿಲ್ಲದೆ ಬದುಕಲಾರೆ.

ಭರತನನ್ನು ಗಾಢವಾಗಿ ಆಲಿಂಗಿಸಿ ನನ್ನ ಮಾತಿನಂತೆ ಹೇಳು – ರಾಮನ ಅನುಮತಿಯೊಂದಿಗೆ ವಸುಂಧರೆಯನ್ನಾಳು. ಕೌಸಲ್ಯೆ ಕೈಕೇಯೀ ಸುಮಿತ್ರೆಯನ್ನು ಚೆನ್ನಾಗಿ ನೋಡಿಕೋ ಎಂದು. ಕೌಸಲ್ಯೆಯನ್ನು ನನ್ನಾಜ್ಞೆಯಿಂದ ನಮಸ್ಕರಿಸಿ ಪುರಸ್ಕರಿಸಿ ಪ್ರಯತ್ನಪೂರ್ವಕವಾಗಿ ನೀನು ರಕ್ಷಿಸಬೇಕು. ನನ್ನಮ್ಮನಿಗೆ ಸೀತೆಯ ಹಾಗು ನನ್ನ ನಾಶವನ್ನು ವಿವರಿಸಿ ಹೇಳು.

ಹೀಗೆ ರಾಮನು ತುಂಬ ದೀನವಾಗಿ ಸುಕೇಶಿ ಸೀತೆಯಿರದ ವನದಲ್ಲಿ ವಿಲಪಿಸುವಾಗ ಲಕ್ಷ್ಮಣನ ಮೊಗದಲ್ಲಿಯೂ ಭಯ ಆವರಿಸಿತು. ಮನದಲ್ಲಿ ವ್ಯಥೆ ಮನೆ ಮಾಡಿತು. ತುಂಬ ಕಳವಳಗೊಂಡ.

❖

ರಾಘವವಿಲಾಪಃ

ಸೀತಾಮಪಶ್ಯನ್ ಧರ್ಮಾತ್ಮಾ ಶೋಕೋಪಹತಚೇತನಃ ।
ವಿಲಲಾಪ ಮಹಾಬಾಹೂ ರಾಮಃ ಕಮಲಲೋಚನಃ ॥೧॥

ಪಶ್ಯನ್ನಿವ ಸ ತಾಂ ಸೀತಾಮಪಶ್ಯನ್ ಮದನಾರ್ದಿತಃ ।
ಉವಾಚ ರಾಘವೋ ವಾಕ್ಯಂ ವಿಲಾಪಾಶ್ರಯದುರ್ವಚಮ್ ॥೨॥

ತ್ವಮಶೋಕಸ್ಯ ಶಾಖಾಭಿಃ ಪುಷ್ಪಪ್ರಿಯತಯಾ ಪ್ರಿಯೇ ।
ಆವೃಣೋಷಿ ಶರೀರಂ ತೇ ಮಮ ಶೋಕವಿವರ್ಧನೀ ॥೩॥

ಕದಲೀಕಾಂಡಸದೃಶೌ ಕದಲ್ಯಾ ಸಂವೃತಾವುಭೌ ।
ಊರೂ ಪಶ್ಯಾಮಿ ತೇ ದೇವಿ ನಾಸಿ ಶಕ್ತಾ ನಿಗೂಹಿತುಮ್ ॥೪॥

ಕರ್ಣಿಕಾರವನಂ ಭದ್ರೇ ಹಸಂತೀ ದೇವಿ ಸೇವಸೇ ।
ಅಲಂ ತೇ ಪರಿಹಾಸೇನ ಮಮ ಬಾಧಾವಹೇನ ವೈ ॥೫॥

ಪರಿಹಾಸೇನ ಕಿಂ ಸೀತೇ ಪರಿಶ್ರಾಂತಸ್ಯ ಮೇ ಪ್ರಿಯೇ ।
ಅಯಂ ಸ ಪರಿಹಾಸೋಽಪಿ ಸಾಧು ದೇವಿ ನ ರೋಚತೇ ॥೬॥

ವಿಶೇಷೇಣಾಶ್ರಮಸ್ಥಾನೇ ಹಾಸೋಽಯಂ ನ ಪ್ರಶಸ್ಯತೇ ।
ಅವಗಚ್ಛಾಮಿ ತೇ ಶೀಲಂ ಪರಿಹಾಸಪ್ರಿಯಂ ಪ್ರಿಯೇ ॥೭॥

ಆಗಚ್ಛ ತ್ವಂ ವಿಶಾಲಾಕ್ಷಿ ಶೂನ್ಯೋಽಯಮುಟಜಸ್ತವ ।

ಧರ್ಮಾತ್ಮ ಕಾಮದಿಂದ ಉಪಹಿತ ಚೇತನನು ಕಮಲಲೋಚನನು ಮಹಾ-ಬಾಹುವು ಆದ ರಾಮ ಸೀತೆಯನ್ನು ಕಾಣದೆ ವಿಲಾಪಿಸಿದನು. ಮದನಾರ್ದಿತನಾದ ರಾಘವನು ಒಮ್ಮೆ ಸೀತೆಯನ್ನು ಕಂಡನಂತೆ ಮತ್ತೊಮ್ಮೆ ಕಾಣದವನಂತೆ ವಿಲಾಪಕ್ಕೆ ನೆಲೆಯಾದ ದುಃಖದ ಮಾತನ್ನು ಆಡಿದನು – ಹೂವುಗಳನ್ನು ಪ್ರೀತಿಸುವ ನೀನು ಅಶೋಕ ವೃಕ್ಷದ ಕೊಂಬೆಗಳಲ್ಲಿ ನಿನ್ನ ತನುವನ್ನು ಅಡಿಗಿಸಿರುವೆ; ಪ್ರಿಯೆ ! ಇದರಿಂದ ನನಗೆ ಶೋಕಹೆಚ್ಚಿಸಿರುವಿ.

ಬಾಳೆಗಿಡದ ಕಾಂಡದಂತೆ ನುಣುಪಾದ ತೊಡೆಯವಳಾದ ನಿನ್ನ ಊರುಗಳು ಕದಲಿಯಿಂದ ಸಂವೃತವಾಗಿರುವುದನ್ನು ಕಾಣುತ್ತಿದ್ದೇನೆ. ಅದನ್ನು ಮುಚ್ಚಿಟ್ಟು-ಕೊಳ್ಳಲು ಸಾಧ್ಯವಿಲ್ಲ; ದೇವಿ !

ಭದ್ರೆ ! ನಗು ನಗುತ ಕಣಗಿಲೆಯ ವನವನ್ನು ಆಶ್ರಯಿಸಿರುವೆ. ಸಾಕು ನನಗೆ ಬಾಧೆಗೊಳಿಸುವ ನಿನ್ನ ಪರಿಹಾಸ.

ನಿನ್ನ ವಿರಹದಿಂದ ದಣಿದ ನನಗೆ ಸೀತೆ ! ನಿನ್ನ ಪರಿಹಾಸದಿಂದೇನು ಪ್ರಯೋಜನ. ದೇವಿ ! ಈ ಪರಿಹಾಸವು ನನಗೆ ಇಷ್ಟವಾಗುವುದಿಲ್ಲ. ವಿಶೇಷವಾಗಿ ಈ ಆಶ್ರಮದ ಪರಿಸರದಲ್ಲಿ ಇಂಥ ಪರಿಹಾಸಗಳು ಸರಿಯಲ್ಲ. ಪ್ರಿಯೇ ! ವಿನೋದಪ್ರಿಯವಾದ ನಿನ್ನ ಸ್ವಭಾವವನ್ನು ಬಲ್ಲೆ. ವಿಶಾಲಾಕ್ಷಿ ! ಬಾ.

ಈ ನಿನ್ನ ಪರ್ಣಶಾಲೆ ಬರಿದಾಗಿದೆ :

ಸುವ್ಯಕ್ತಂ ರಾಕ್ಷಸೈಃ ಸೀತಾ ಭಕ್ಷಿತಾ ವಾ ಹೃತಾಪಿ ವಾ ॥೮॥

ನ ಹಿ ಸಾ ವಿಲಪಂತಂ ಮಾಮುಪಸಂಪ್ಸೈತಿ ಲಕ್ಷ್ಮಣ ।
ಏತಾನಿ ಮೃಗಯೂಥಾನಿ ಸಾಶ್ರುನೇತ್ರಾಣಿ ಲಕ್ಷ್ಮಣ ॥೯॥

ಶಂಸಂತೀವ ಹಿ ವೈದೇಹೀಂ ಭಕ್ಷಿತಾಂ ರಜನೀಚರೈಃ ।
ಹಾ ಮಮಾರ್ಯೇ ಕ್ವ ಯಾತಾಸಿ ಹಾ ಸಾಧ್ವಿ ವರವರ್ಣಿನಿ ॥೧೦॥

ಹಾ ಸಕಾಮಾದ್ಯ ಕೈಕೇಯೀ ದೇವೀ ಸಾಪಿ ಭವಿಷ್ಯತಿ ।
ಸೀತಯಾ ಸಹ ನಿರ್ಯಾತೋ ವಿನಾ ಸೀತಾಮುಪಾಗತಃ ॥೧೧॥

ಕಥಂ ನಾಮ ಪ್ರವೇಕ್ಷ್ಯಾಮಿ ಶೂನ್ಯಮಂತಃಪುರಂ ಪುನಃ ।
ನಿರ್ವೀರ್ಯ ಇತಿ ಲೋಕೋ ಮಾಂ ನಿರ್ದಯಶ್ಚೇತಿ ವಕ್ಷ್ಯತಿ ॥೧೨॥

ಕಾತರತ್ವಂ ಪ್ರಕಾಶಂ ಹಿ ಸೀತಾಪನಯನೇನ ಮೇ ।
ನಿವೃತ್ತವನವಾಸಶ್ಚ ಜನಕಂ ಮಿಥಿಲಾಧಿಪಮ್ ॥೧೩॥

ಕುಶಲಂ ಪರಿಪೃಚ್ಛಂತಂ ಕಥಂ ಶಕ್ಷ್ಯೇ ನಿರೀಕ್ಷಿತುಮ್ ।
ವಿದೇಹರಾಜೋ ನೂನಂ ಮಾಂ ದೃಷ್ಟ್ವಾ ವಿರಹಿತಂ ತಯಾ ॥೧೪॥

ಲಕ್ಷ್ಮಣ ! ಸ್ಪಷ್ಟವಾಗಿದೆ. ಸೀತೆ ರಾಕ್ಷಸರಿಂದ ಭಕ್ಷಿತಳಾಗಿದ್ದಾಳೆ ಅಥವಾ ಅಪಹೃತಳಾಗಿದ್ದಾಳೆ. ವಿಲಪಿಸುತ್ತಿರುವ ನನ್ನ ಬಳಿ ಅವಳು ಸುಳಿಯುವುದಿಲ್ಲ.

ಲಕ್ಷ್ಮಣ ! ಕಂಬನಿಗರೆವ ಈ ಜಿಂಕೆ ಸಮೂಹಗಳು ರಜನೀಚರರಿಂದ ಸೀತೆ ಭಕ್ಷಿತಳಾಗಿರುವುದನ್ನು ಹೇಳುವಂತೆ ತೋರುತ್ತಿದೆ.

ಹಾ ನನ್ನ ಪ್ರೀತಿ ಗೌರವಾರ್ಹಳೆ! ಎಲ್ಲಿ ಹೋಗಿರುವಿ? ಹಾ ಸಾಧ್ವಿ! ಸುಂದರಿ! ಎಲ್ಲಿರುವೆ? ಅಯ್ಯೋ ನಿನ್ನಿಂದಾಗಿ ಆ ಕೈಕೇಯಿಯು ಬಯಸಿದ್ದು ಪಡೆಯುವಂತಾಗುವಳು !

ಸೀತೆಯೊಂದಿಗೆ ಕಾಡಿಗೆ ಬಂದ ನಾನು ಸೀತೆಯಿಲ್ಲದೆ ಹೇಗೆ ಶೂನ್ಯ ಅಂತಃಪುರವನ್ನು ಪ್ರವೇಶಿಸಲಿ ?

ನಿರ್ವೀರ್ಯನು ನಿರ್ದಯನು ಎಂದು ಸಮಾಜ ನನ್ನನ್ನು ಹೇಳುತ್ತದೆ ! ನನ್ನ ಕಪಟತನ ಬಯಲಾಗುವುದಲ್ಲ !

ವನವಾಸ ಮುಗಿಸಿದ ನಾನು ಕುಶಲ ಕೇಳುವ ಜನಕನನ್ನು ಹೇಗೆ ನಿರೀಕ್ಷೆ ಮಾಡಲಿ ?

ಸುತಾಸ್ನೇಹೇನ ಸಂತಪ್ತೋ ಮೋಹಸ್ಯ ವಶಮೇಷ್ಯತಿ ।

ವಿದೇಹರಾಜ ಸೀತೆಯಿರದೆ ಬಂದ ನನ್ನನ್ನು ನೋಡಿ ಮಗಳ ಮೇಲಿನ ಮಮತೆಯಿಂದ ಖಂಡಿತವಾಗಿ ಮೋಹವಶನಾಗುತ್ತಾನೆ.

ಅಥವಾ ನ ಗಮಿಷ್ಯಾಮಿ ಪುರೀಂ ಭರತಪಾಲಿತಾಮ್ ॥೧೫॥

ಸ್ವರ್ಗೋಽಪಿ ಸೀತಯಾ ಹೀನಃ ಶೂನ್ಯ ಏವ ಮತೋ ಮಮ ।
ಮಾಮಿಹೋತ್ಸೃಜ್ಯ ಹಿ ವನೇ ಗಚ್ಛಾಯೋಧ್ಯಾಂ ಪುರೀಂ ಶುಭಾಮ್ ॥

ನ ತ್ವಹಂ ತಾಂ ವಿನಾ ಸೀತಾಂ ಜೀವೇಯಂ ಹಿ ಕಥಂಚನ ।
ಗಾಢಮಾಶ್ಲಿಷ್ಯ ಭರತೋ ವಾಚ್ಯೋ ಮದ್ವಚನಾತ್ತ್ವಯಾ ॥೧೭॥

ಅನುಜ್ಞಾತೋಽಪಿ ರಾಮೇಣ ಪಾಲಯೇತಿ ವಸುಂಧರಾಮ್ ।
ಅಂಬಾ ಚ ಮಮ ಕೈಕೇಯೀ ಸುಮಿತ್ರಾ ಚ ತ್ವಯಾ ವಿಭೋ ॥೧೮॥

ಕೌಸಲ್ಯಾ ಚ ಯಥಾನ್ಯಾಯಮಭಿವಾದ್ಯಾ ಮಮಾಜ್ಞಯಾ ।
ರಕ್ಷಣೀಯಾ ಪ್ರಯತ್ನೇನ ಭವತಾ ಸೂಕ್ತಕಾರಿಣಾ ॥೧೯॥

ಸೀತಾಯಾಶ್ಚ ವಿನಾಶೋಽಯಂ ಮಮ ಚಾಮಿತ್ರಕರ್ಶನ ।
ವಿಸ್ತರೇಣ ಜನನ್ಯಾ ಮೇ ವಿನಿವೇದ್ಯಸ್ತ್ವಯಾ ಭವೇತ್ ॥೨೦॥

ಇತಿ ವಿಲಪತಿ ರಾಘವೇ ಸುದೀನೇ
ವನಮುಪಗಮ್ಯ ತಯಾ ವಿನಾ ಸುಕೇಶ್ಯಾ ।
ಭಯವಿಕಲಮುಖಸ್ತು ಲಕ್ಷ್ಮಣೋಽಪಿ
ವ್ಯಥಿತಮನಾ ಭೃಶಮಾತುರೋ ಬಭೂವ ॥೨೧॥

ಅಥವಾ ಭರತನಾಳುವ ಅಯೋಧ್ಯೆಗೆ ಹಿಂತಿರುಗಿ ಹೋಗುವುದೇ ಇಲ್ಲ. ಸೀತೆಯಿಲ್ಲದೆ ಸ್ವರ್ಗವೂ ಶೂನ್ಯವೆಂದೆ ನನ್ನ ಮತ.

ಲಕ್ಷ್ಮಣ ! ನನ್ನನ್ನು ಕಾಡಿನಲ್ಲಿಯೇ ಬಿಟ್ಟು ನೀನು ಶ್ರೇಷ್ಠ ಅಯೋಧ್ಯೆಗೆ ಹಿಂತಿರುಗು. ಸೀತೆಯಿಲ್ಲದೆ ನಾನು ಬದುಕಲು ಸರ್ವಥಾ ಸಾಧ್ಯವಿಲ್ಲ.

ಭರತನನ್ನು ಗಾಢವಾಗಿ ಆಲಿಂಗಿಸಿ ನನ್ನ ಮಾತಿನ ಮೂಲಕ ಅವನಿಗೆ ಹೇಳಬೇಕು – ವಸುಂಧರವನ್ನು 'ನೀನೆ ಪಾಲಿಸು' ಎಂದು ರಾಮನು ಹೇಳಿರುವನೆಂದು.

ತಾಯಿಯಾದ ಕೈಕೇಯೀ, ಸುಮಿತ್ರಾ, ಕೌಸಲ್ಯೆಯರನ್ನು ನ್ಯಾಯಸಮ್ಮತ ರೀತಿಯಲ್ಲಿ ನನ್ನ ಆಜ್ಞೆಯಿಂದ ಅಭಿವಾದನ ಮಾಡಬೇಕು. ಯೋಗ್ಯವಾದುದನ್ನೆ ಮಾಡುವ ಸ್ವಭಾವದವನಾದ ನೀನು ಪ್ರಯತ್ನಪಟ್ಟು ಚೆನ್ನಾಗಿ ರಕ್ಷಿಸಬೇಕು.

ಶತ್ರುಕರ್ಶನ ಲಕ್ಷ್ಮಣ ! ಸೀತೆ ಕಣ್ಮರೆಯಾದ ಈ ಸನ್ನಿವೇಶವನ್ನು ನನ್ನ ತಾಯಿ ಕೌಸಲ್ಯೆಗೆ ವಿವರವಾಗಿ ತಿಳಿಸಬೇಕು.

ಹೀಗೆ ರಾಮನು ಸೀತೆಯಿಲ್ಲದ ಕಾಡಿನಲ್ಲಿ ತುಂಬ ದೀನನಾಗಿ ವಿಲಪಿಸುತ್ತಿರಲು ಲಕ್ಷ್ಮಣನ ಮುಖ ಭಯಗ್ರಸ್ತವಾಯಿತು. ಮನ ವ್ಯಥೆಗೊಂಡಿತು. ತುಂಬ ಕಳವಳಗೊಂಡ ಲಕ್ಷ್ಮಣ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತೆರಡನೇ ಸರ್ಗ ಮುಗಿಯಿತು.

❖

ತ್ರಿಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಶ್ರೀರಾಮನು ಪ್ರಿಯೆ ಸೀತೆಯಿರದೆ ಕಾಮ ಶೋಕಗಳಿಂದ ಬಾಧಿತನಾಗಿ ವಿಷಾದಪಡುತ್ತ ತನ್ನ ತಮ್ಮ ಲಕ್ಷ್ಮಣನ ಬಳಿ ಶೋಕದ ಬಿಸಿ ನಿಟ್ಟುಸಿರು ಬಿಡುತ್ತ ಮನದಾಳದ ಅಳಲನ್ನು ಹೇಳಿಕೊಂಡನು –

ಲಕ್ಷ್ಮಣ ! ನನ್ನಂಥ ಪಾಪಕರ್ಮವನ್ನು ಮಾಡಿದವನು ಈ ಭೂಮಿಯಲ್ಲಿ ಮತ್ತೊಬ್ಬನಿರಲಿಕ್ಕಿಲ್ಲ. ಮೇಲಿಂದ ಮೇಲೆ ಶೋಕಪರಂಪರೆಯನ್ನೆ ಅನುಭವಿಸುವಂತಾಗಿದೆ.

ಪ್ರಾಯಃ ನಾನು ಹಿಂದೆ ಇಷ್ಟಪಟ್ಟು ಪಾಪಗಳನ್ನು ಮಾಡಿದೆನೋ ಏನೋ. ಈ ದುಃಖದ ಮೇಲೆ ದುಃಖ ಬರುತ್ತಿದೆ. ರಾಜ್ಯಹಾನಿ, ಸ್ವಜನರ ವಿಯೋಗ, ಪಿತೃನಾಶ ಜನನೀವಿಯೋಗ ಈ ಎಲ್ಲ ಘಟನೆಗಳೂ ನೆನೆಸಿಕೊಂಡಷ್ಟು ಶೋಕವೇಗವನ್ನು ಹೆಚ್ಚಿಸುತ್ತವೆ.

ಈ ಎಲ್ಲ ದುಃಖವೂ ಶಾಂತಪರಿಸರದ ಈ ವನಕ್ಕೆ ಬಂದು ಸಹಿಸಿಕೊಂಡದ್ದಾಯಿತು. ಆದರೆ ಈ ಸೀತಾವಿಯೋಗದಿಂದ ಎಲ್ಲ ದುಃಖವೂ ಮತ್ತೆ ಉಮ್ಮಳಿಸಿದಂತಾಗಿದೆ. ಕಟ್ಟಿಗೆ ಹಾಕಿದಾಗ ಬೆಂಕಿ ಮತ್ತೆ ಪ್ರಜ್ವಲಿಸುವಂತೆ !

ನಿಶ್ಚಯವಾಗಿಯೂ ನನ್ನ ಪ್ರಿಯೆ ಸೀತೆ ರಾಕ್ಷಸನಿಂದ ಅಪಹೃತಳಾದಾಗ ಭಯದಿಂದ ಜೋರಾಗಿ ಅತ್ತಿರುತ್ತಾಳೆ ! ಮುಂಗುರುಗಳಿಂದ ಚೆಂದವಾಗಿರುವ, ಮೃದುಹಿತವಾಗಿ ಮಾತನಾಡುವ ಅವಳ ಸುಂದರಮುಖ ರಾಹು ಹಿಡಿತಕ್ಕೆ ಸಿಲುಕಿದ ಚಂದ್ರನಂತೆ ಕಾಂತಿಹೀನವಾಗಿರುತ್ತದೆ !

ಹಾರಗಳಿಂದ ಕಂಗೊಳಿಸುತ್ತಿದ್ದ ಅವಳ ಸುಂದರ ಕೊರಳನ್ನು ಕತ್ತರಿಸಿ ಒತ್ತರಿಸಿ ಬಂದ ನೆತ್ತರನ್ನು ಕುಡಿದಿರುತ್ತಾರೆ ದುರುಳ ರಕ್ಕಸರು.

ನಾನಿಲ್ಲದೆ ಏಕಾಕಿನೀಯಾದ ಆ ಸೀತೆ ರಾಕ್ಷಸರು ಅಪಹಾರ ಮಾಡಲು ಎಳೆದಾಡುವಾಗ ಹೆಣ್ಣು ಜಿಂಕೆಯಂತೆ ಆರ್ತಳಾಗಿ ಕೂಗಿರುತ್ತಾಳೆ !

ಲಕ್ಷ್ಮಣ ! ಇದೇ ಬಂಡೆಯ ಮೇಲೆ ಮನೋಹರ ಮಂದಹಾಸವನ್ನು ಬೀರುತ್ತಾ ನಿನ್ನೊಂದಿಗೆ ತುಂಬ ಹರಟುತ್ತಾ ಮಾತನಾಡಿದ್ದಳು.

ಈ ಗೋದಾವರಿ ಸೀತೆಗೆ ತುಂಬ ಅಚ್ಚುಮೆಚ್ಚು, ಅದರ ತೀರದಲ್ಲಿಯೇ ಹೋಗಿರಬಹುದೋ ! ಆದರೆ ಎಂದೂ ಏಕಾಕಿನಿಯಾಗಿ ಎಲ್ಲೂ ಹೋದವಳಲ್ಲ.

ಅಥವಾ ತಾವರೆಯನ್ನು ಕಂಡು ಖುಷಿಪಡುತ್ತಿದ್ದ ಅವಳು ತಾವರೆಯನ್ನು ಕಿತ್ತು ತರಲೆಂದು ತಾವರೆಯ ಕೊಳಗಳ ಬಳಿಗೆ ಒಬ್ಬಳೇ ಸುಳಿದಿರಬಹುದೇ ? ಛೆ ! ಇಲ್ಲ ಇಲ್ಲ ಎಂದೂ ನನ್ನನ್ನು ಬಿಟ್ಟು ತಾವರೆಯ ಬಳಿಗೆ ಸುಳಿದವಳೇ ಅಲ್ಲ.

ಅಥವಾ ಹೂತುಂಬಿದ ವೃಕ್ಷಗಳ ಬಳಿ ಸುಳಿದಿರಬಹುದೇನೋ ? ಇಲ್ಲ ಇಲ್ಲ. ಅವಳು ಒಬ್ಬಳೇ ಹೋಗುವುದಕ್ಕೆ ಹೆದರುತ್ತಿದ್ದಳು.

ಕರ್ಮಸಾಕ್ಷಿಯಾದ ಸೂರ್ಯನೇ ! ಹೇಳು. ಆ ನನ್ನ ಪ್ರಿಯೆ ಎಲ್ಲಿಯಾದರೂ ಹೋದಳೋ ? ಅಪಹೃತಳಾದಳೋ ನನಗೆ ತಿಳಿಸು.

ವಾಯುವೇ ! ಹೇಳು. ನನ್ನ ಸೀತೆ ಮೃತಳಾಗಿಹಳೋ ಅಪಹೃತಳಾಗಿರುವಳೋ ?

ರಾಮನ ಶೋಕಾತಿರೇಕವನ್ನು ಗಮನಿಸಿದ ಲಕ್ಷ್ಮಣ ಹೇಳಿದ ಅಣ್ಣ ! ಶೋಕವನ್ನು ಬಿಡು. ಧೈರ್ಯ ತಂದುಕೋ. ಅವಳನ್ನು ಹುಡುಕುವ ಉತ್ಸಾಹವನ್ನು ತೋರು. ಉತ್ಸಾಹಿಗಳು ಮಾತ್ರವೇ ಅತಿದುಃಷ್ಕರವಾದ ಕರ್ಮಗಳು ಬಂದ ಸಂದರ್ಭದಲ್ಲಿಯೂ ಅಳುಕುವುದಿಲ್ಲ.

ಲಕ್ಷ್ಮಣನ ಮಾತಿನ ಮೇಲೆ ವಿಶ್ವಾಸವಿಡದೆ ಶ್ರೀರಾಮ ಎಚ್ಚರಗೇಡಿ ಅಂಜು-ಬುರುಕನಾದ, ಮತ್ತಷ್ಟು ದುಃಖಕ್ಕೆ ಬಲಿಯಾದ !

❖

ದುಃಖಾನುಚಿಂತನಮ್

ಸ ರಾಜಪುತ್ರಃ ಪ್ರಿಯಯಾ ವಿಹೀನಃ
ಶೋಕೇನ ಮೋಹೇನ ಚ ಪೀಡ್ಯಮಾನಃ ।
ವಿಷಾದಯನ್ ಭ್ರಾತರಮಾರ್ತರೂಪೋ
ಭೂಯೋ ವಿಷಾದಂ ಪ್ರವಿವೇಶ ತೀವ್ರಮ್ ॥೧॥

ಸ ಲಕ್ಷ್ಮಣಂ ಶೋಕವಶಾಭಿಪನ್ನಂ
ಶೋಕೇ ನಿಮಗ್ನೋ ವಿಪುಲೇ ತು ರಾಮಃ ।
ಉವಾಚ ವಾಕ್ಯಂ ವ್ಯಸನಾನುರೂಪ-
ಮುಷ್ಣಂ ವಿನಿಃಶ್ವಸ್ಯ ರುದನ್ ಸಶೋಕಮ್ ॥೨॥

ನ ಮದ್ವಿಧೋ ದುಷ್ಕೃತಕರ್ಮಕಾರೀ
ಮನ್ಯೇ ದ್ವಿತೀಯೋಽಸ್ತಿ ವಸುಂಧರಾಯಾಮ್ ।

ಶೋಕೇನ ಶೋಕೋ ಹಿ ಪರಂಪರಾಯಾ
ಮಾಮೇತಿ ಭಿಂದನ್ ಹೃದಯಂ ಮನಶ್ಚ ॥೩॥

ಪೂರ್ವಂ ಮಯಾ ನೂನಮಭೀಪ್ಸಿತಾನಿ
ಪಾಪಾನಿ ಕರ್ಮಾಣ್ಯಸಕೃತ್ ಕೃತಾನಿ ।
ತತ್ರಾಯಮದ್ಯಾಪತಿತೋ ವಿಪಾಕೋ
ದುಃಖೇನ ದುಃಖಂ ಯದಹಂ ವಿಶಾಮಿ ॥೪॥

ರಾಜ್ಯಪ್ರಣಾಶಃ ಸ್ವಜನೈರ್ವಿಯೋಗಃ
ಪಿತುರ್ವಿನಾಶೋ ಜನನೀವಿಯೋಗಃ ।
ಸರ್ವಾಣಿ ಮೇ ಲಕ್ಷ್ಮಣ ಶೋಕವೇಗ-
ಮಾಪೂರಯಂತಿ ಪ್ರವಿಚಿಂತಿತಾನಿ ॥೫॥

ರಾಜಪುತ್ರನಾದ ಆ ರಾಮ ಪ್ರಿಯೆ ಸೀತೆಯಿಂದ ವಿಹೀನನಾಗಿ, ಕಾಮ -ಶೋಕಗಳಿಂದ ಪೀಡಿತನಾಗಿ ವಿಷಣ್ಣನಾಗಿ ತಮ್ಮ ಲಕ್ಷ್ಮಣನನ್ನು ಕುರಿತು ಆರ್ತನಾಗಿ ಮತ್ತಷ್ಟು ವಿಷಾದಕ್ಕೆ ಒಳಗಾದನು.

ಶೋಕವಶನಾದ ಲಕ್ಷ್ಮಣನನ್ನು ಕುರಿತು ವಿಪುಲಶೋಕದಲ್ಲಿ ಮುಳುಗಿದ ಶ್ರೀರಾಮ ತನ್ನ ದುಃಖಾನುರೂಪವಾಗಿ ಬಿಸಿಯುಸಿರು ಬಿಡುತ್ತಾ ಶೋಕದಿಂದ ಅಳುತ್ತ ನುಡಿದ -

ನನ್ನಂಥ ಪಾಪ ಮಾಡಿದವನು ಈ ಭೂಮಿಯಲ್ಲಿ ಬೇರೊಬ್ಬನಿಲ್ಲ. ಮೇಲಿಂದ ಮೇಲೆ ಶೋಕಪರಂಪರೆಯು ಎದೆ ಬಿರಿಯುತ್ತ ಮನ ಕಲಕುತ್ತ ಬಾಧಿಸುತ್ತಿದೆ.

ಹಿಂದಿನ ಜನ್ಮದಲ್ಲಿ ಖಂಡಿತ ಪಾಪಗಳನ್ನು ಇಷ್ಟಪಟ್ಟು ಅನೇಕ ಬಾರಿ ಮಾಡಿದ್ದೇನೆ. ಆ ಪಾಪಕರ್ಮ ವಿಪಾಕವೇ ಈಗ ಒದಗಿ ಬಂದಿದೆ. ಅದರಿಂದಲೇ ಮೇಲಿಂದ ಮೇಲೆ ಒಂದು ದುಃಖದಿಂದ ಮತ್ತೊಂದು ದುಃಖವನ್ನು ಹೊಂದು-ತ್ತಿದ್ದೇನೆ.

ಲಕ್ಷ್ಮಣ ! ರಾಜ್ಯನಾಶ, ಸ್ವಜನವಿಯೋಗ, ಪಿತೃನಾಶ, ತಾಯಿಯ ವಿಯೋಗ - ಎಲ್ಲ ದುಃಖಗಳನ್ನು ನೆನೆದರೆ ಶೋಕ ವೇಗವನ್ನು ಹೆಚ್ಚಿಸುತ್ತಿವೆ.

ಸರ್ವಂ ತು ದುಃಖಂ ಮಮ ಲಕ್ಷ್ಮಣೇದಂ
ಶಾಂತಂ ಶರೀರೇ ವನಮೇತ್ಯ ಶೂನ್ಯಮ್ ।

ಸೀತಾವಿಯೋಗಾತ್ ಪುನರಪ್ಯುದೀರ್ಣಂ
ಕಾಷ್ಠೈರಿವಾಗ್ನಿಃ ಸಹಸಾ ಪ್ರದೀಪ್ತಃ ॥೬॥

ಸಾ ನೂನಮಾರ್ಯಾ ಮಮ ರಾಕ್ಷಸೇನ
ಬಲಾದ್ಧೃತಾ ಖಂ ಸಮುಪೇತ್ಯ ಭೀರುಃ ।
ಅಪಸ್ವರಂ ಸಸ್ವರವಿಪ್ರಲಾಪಾ
ಭಯೇನ ವಿಕ್ರಂದಿತವತ್ಯಭೀಕ್ಷ್ಣಮ್ ॥೭॥

ತೌ ಲೋಹಿತಸ್ಯ ಪ್ರಿಯದರ್ಶನಸ್ಯ
ಸದೋಚಿತಾವುತ್ತಮಚಂದನಸ್ಯ ।
ವೃತ್ತಾಸ್ತನೌ ಶೋಣಿತಪಂಕದಿಗ್ಧೌ
ನೂನಂ ಪ್ರಿಯಾಯಾ ಮಮ ನಾಭಿಪಾತಃ ॥೮॥

ತಚ್ಚಾರುಸುವ್ಯಕ್ತಮೃದುಪ್ರಲಾಪಂ
ತಸ್ಯಾ ಮುಖಂ ಕುಂಚಿತಕೇಶಭಾರಮ್ ।
ರಕ್ಷೋವಶಂ ನೂನಮುಪಾಗತಾಯ
ನ ಭ್ರಾಜತೇ ರಾಹುಮುಖೇ ಯಥೇಂದುಃ ॥೯॥

ತಾಂ ಹಾರಪಾಶಸ್ಯ ಸದೋಚಿತಾಯಾ
ಗ್ರೀವಾಂ ಪ್ರಿಯಾಯಾ ಮಮ ಸುವ್ರತಾಯಾಃ ।
ರಕ್ಷಾಂಸಿ ನೂನಂ ಪರಿಪೀತವಂತಿ
ವಿಭಿದ್ಯ ಶೂನ್ಯೇ ರುಧಿರಾಶನಾನಿ ॥೧೦॥

ಮಯಾ ವಿಹೀನಾ ವಿಜನೇ ವನೇ ಯಾ
ರಕ್ಷೋಭಿರಾಹೃತ್ಯ ವಿಕೃಷ್ಯಮಾಣಾ ।
ನೂನಂ ವಿನಾದಂ ಕುರರೀವ ದೀನಾ
ಸಾ ಮುಕ್ತವತ್ಯಾಯತಕಾಂತನೇತ್ರಾ ॥೧೧॥

ಲಕ್ಷ್ಮಣ ! ಆ ಎಲ್ಲ ದುಃಖವೂ ಈ ಶೂನ್ಯವನಕ್ಕೆ ಬಂದ ಬಳಿಕ ಶಾಂತವಾಗಿತ್ತು. ಸೀತಾವಿಯೋಗದಿಂದ ಮತ್ತೆ ದುಃಖ ಉಲ್ಬಣವಾಯಿತು; ಶಾಂತವಾಗುತ್ತಿದ್ದ ಬೆಂಕಿ ಕಟ್ಟಿಗೆಗಳಿಂದ ಮತ್ತೆ ಪ್ರಜ್ವಲಗೊಂಡಂತೆ.

ನನ್ನ ಆರ್ಯೆ ಸೀತೆಯು ರಾಕ್ಷಸನಿಂದ ಬಲಾತ್ ಅಪಹೃತಳಾದಾಗ ಆಗಸಕ್ಕೆ ಹೋಗಿ ಹೆದರಿದವಳಾಗಿ ಸುಸ್ವರಪ್ರಲಾಪದವಳು ಅಪಸ್ವರದಲ್ಲಿ ಭಯದಿಂದ ಗಟ್ಟಿಯಾಗಿ ಆಕ್ರಂದನ ಮಾಡಿಹಳು !

ನನ್ನ ಪ್ರಿಯೆಯ ಕೆಂಪಾದ ನೋಡಲು ಸುಂದರವಾದ ಉತ್ತಮ ಚಂದನ ಬಳಿದ ದುಂಡಗಿರುವ ಸ್ತನಗಳು ರಕ್ತಸಿಕ್ತವಾಗಿ ಶೋಭಿಸವು.

ರಕ್ಕಸನ ವಶಳಾದ ಸೀತೆಯು-ಸ್ನಿಗ್ಧವು ಸುವ್ಯಕ್ತವೂ ಮೃದುವೂ ಆದ ಮಾತುಳ್ಳ ಗುಂಗುರು ಕೂದಲ ಭಾರದ ಮುಖವು ರಾಹುವಿನ ವಶನಾದ ಚಂದ್ರನಂತೆ ಕಳೆಗುಂದಿರುತ್ತದೆ.

ಸುವ್ರತಳಾದ ಸೀತೆಯ ಹಾರಗಳಿಂದ ಶೋಭಿಸುತ್ತಿದ್ದ ಕುತ್ತಿಗೆಯನ್ನು ರಕ್ತಪಿಪಾಸು ರಕ್ಕಸರು ಸೀಳಿ ರಕ್ತ ಹೀರಿರಬಹುದು !

ನಾನಿಲ್ಲದಿರುವಾಗ ನಿರ್ಜನ ಅರಣ್ಯದಲ್ಲಿ ರಾಕ್ಷಸರು ಅವಳನ್ನು ಎಳೆದುಕೊಂಡು ಹೋಗಿರಬೇಕು. ಆಗ ವಿಶಾಲವೂ ಸುಂದರವಾದ ಕಣ್ಣಿನವಳೂ ಆದ ಸೀತೆ ದೀನಳಾಗಿ ಕುರರಪಕ್ಷಿಯಂತೆ ಅರಚಿಕೊಂಡಿರಬಹುದು.

ಅಸ್ಮಿನ್ ಮಯಾ ಸಾರ್ಧಮುದಾರಶೀಲಾ
ಶಿಲಾತಲೇ ಪೂರ್ವಮುಪೋಪವಿಷ್ಟಾ ।
ಕಾಂತಸ್ಮಿತಾ ಲಕ್ಷ್ಮಣ ಜಾತಹಾಸಾ
ತ್ವಾಮಾಹ ಸೀತಾ ಬಹುವಾಕ್ಯಜಾತಮ್ ॥೧೨॥

ಗೋದಾವರೀಯಂ ಸರಿತಾಂ ವರಿಷ್ಠಾ
ಪ್ರಿಯಾ ಪ್ರಿಯಾಯಾ ಮಮ ನಿತ್ಯಕಾಲಮ್ ।
ಅಪ್ಯತ್ರ ಗಚ್ಛೇದಿತಿ ಚಿಂತಯಾಮಿ
ನೈಕಾಕಿನೀ ಯಾತಿ ಹಿ ಸಾ ಕದಾಚಿತ್ ॥೧೩॥

ಪದ್ಮಾನನಾ ಪದ್ಮವಿಶಾಲನೇತ್ರಾ ಪದ್ಮಾನಿ ವಾ ನೇತುಮಭಿಪ್ರಯಾತಾ ।
ತದಪ್ಯಯುಕ್ತಂ ನ ಹಿ ಸಾ ಕದಾಚಿನ್ಮಯಾ ವಿನಾ ಗಚ್ಛತಿ ಪಂಕಜಾನಿ ॥

ಕಾಮಂ ತ್ವಿದಂ ಪುಷ್ಪಿತವೃಕ್ಷಷಂಡಂ ನಾನಾವಿಧೈಃ ಪಕ್ಷಿಗಣೈರುಪೇತಮ್ ।
ವನಂ ಪ್ರಯಾತಾ ನು ತದಪ್ಯಯುಕ್ತಮೇಕಾಕಿನೀ ಸಾತಿಭಿಭೇತಿ ಭೀರುಃ ॥

ಲಕ್ಷ್ಮಣ ! ಉದಾರಶೀಲಳೂ ಮನೋಹರ ಮಂದಹಾಸದವಳೂ ಆದ ಸೀತೆ ಈ ಶಿಲಾತಲದಲ್ಲಿ ನನ್ನೊಂದಿಗೆ ತುಂಬ ಹತ್ತಿರದಲ್ಲಿ ಕುಳಿತು ನಗುನಗುತ ಹರಟುತ್ತಿದ್ದಳು. ನಿನ್ನೊಂದಿಗೂ ತುಂಬ ಮಾತನಾಡಿದ್ದಳು.

ನದಿಗಳಲ್ಲಿ ಶ್ರೇಷ್ಠವಾದ ಈ ಗೋದಾವರಿ ನದಿಯು ನನ್ನ ಪ್ರಿಯೆಗೆ ನಿತ್ಯ ತುಂಬ ಪ್ರಿಯವಾದುದು. ಈ ನದಿಯೆಡೆಗೆ ಹೋಗಿರುವಳೇನೋ ಎಂದು ಚಿಂತಿಸೋಣ-ವೆಂದರೆ ಅವಳೆಂದೂ ಏಕಾಕಿಯಾಗಿ ಎಲ್ಲೂ ಹೋದವಳಲ್ಲ.

ತಾವರೆಯಂಥ ಮೊಗದವಳು, ತಾವರೆಯದಳದಂತೆ ವಿಶಾಲನೇತ್ರೆ ಸೀತೆ ತಾವರೆಗಳನ್ನು ತರಲು ಹೋಗಿರುವಳೋ ? ಇಲ್ಲ ಇಲ್ಲ ನನ್ನನ್ನು ಬಿಟ್ಟು ತಾವರೆಯ ಕೊಳದೆಡೆಗೆ ಒಬ್ಬಳೇ ಹೋದವಳಲ್ಲ.

ಬಗೆ ಬಗೆಯ ಹಕ್ಕಿಗಳಿಂದ ಕೂಡಿದ ಹೂ ತುಂಬಿದ ಮರಗಳ ಕಾಡಿಗೆ ತೆರಳಿರ-ಬಹುದೇ ? ಛೆ ಇಲ್ಲ. ತುಂಬ ಹೆದರಿಕೆಯ ಸ್ವಭಾವದವಳಾದ ಆಕೆ ಏಕಾಕಿಯಾಗಿ ಹೋಗಲು ತುಂಬ ಭಯಪಡುತ್ತಾಳೆ.

ಆದಿತ್ಯ ಭೋ ಲೋಕಕೃತಾಕೃತಜ್ಞ
ಲೋಕಸ್ಯ ಸತ್ಯಾನೃತಕರ್ಮಸಾಕ್ಷಿನ್ ।
ಮಮ ಪ್ರಿಯಾ ಸಾ ಕ್ವ ಗತಾ ಹೃತಾ ವಾ
ಶಂಸಸ್ವ ಮೇ ಶೋಕವಶಸ್ಯ ನಿತ್ಯಮ್ ॥೧೬॥

ಲೋಕೇಷು ಸರ್ವೇಷು ಚ ನಾಸ್ತಿ ಕಿಂಚಿ-
ದ್ಯತ್ತೇ ನ ನಿತ್ಯಂ ವಿದಿತಂ ಭವೇತ್ತತ್ ।
ಶಂಸಸ್ವ ವಾಯೋ ಕುಲಶಾಲಿನೀಂ ತಾಂ
ಹೃತಾ ಮೃತಾ ವಾ ಪಥಿ ವರ್ತತೇ ವಾ ॥೧೭॥

ಇತೀವ ತಂ ಶೋಕವಿಧೇಯದೇಹಂ
ರಾಮಂ ವಿಸಂಜ್ಞಂ ವಿಲಪಂತಮೇವಮ್ ।
ಉವಾಚ ಸೌಮಿತ್ರಿರದೀನಸತ್ತ್ವೋ
ನ್ಯಾಯ್ಯೇ ಸ್ಥಿತಃ ಕಾಲಯುತಂ ಚ ವಾಕ್ಯಮ್ ॥೧೮॥

ಹೇ ಸೂರ್ಯನೇ ! ಜನರು ಮಾಡಿದ, ಮಾಡದ ಕರ್ಮಗಳ ಸಾಕ್ಷಿಯೇ ! ಸತ್ಯ ಅನೃತಕರ್ಮಸಾಕ್ಷಿಯೆ ! ನನ್ನ ಪ್ರಿಯ ಸೀತೆಯು ಎಲ್ಲಿ ಹೋಗಿರುವಳು ?

ಯಾರಾದರೂ ಅವಳನ್ನು ಅಪಹರಿಸಿದರೆ ! ನಿತ್ಯ ಶೋಕವಶನಾಗಿರುವ ನನಗೆ ತಿಳಿಸು.

ವಾಯುವೇ ! ಲೋಕದಲ್ಲಿ ನಿನಗಾವುದೂ ತಿಳಿಯದಿರುವ ಸಂಗತಿಯೇ ಇಲ್ಲ. ಕುಲಬೆಳಗುವ ನನ್ನ ಸೀತೆಯ ಬಗೆಗೆ ಹೇಳು.

ಅವಳು ಅಪಹೃತಳಾಗಿಹಳೋ ? ಮೃತಳಾಗಿಹಳೋ ? ಯಾವುದಾದರೂ ದಾರಿಯಲ್ಲಿಹಳೋ ?

ಹೀಗೆ ಶೋಕವಶಶರೀರದ ಎಚ್ಚರ ತಪ್ಪಿರುವ ತುಂಬ ವಿಷಾದದ ವಿಲಾಪ-ಗೈಯ್ಯುತ್ತಿರುವ ರಾಮನನ್ನು ಕುರಿತು ಸತ್ವಶಾಲಿಯಾದ ನ್ಯಾಯನಿಷ್ಠನಾದ ಲಕ್ಷ್ಮಣ ಕಾಲೋಚಿತವಾಗಿ ಮಾತನಾಡಿದನು.

ಶೋಕಂ ವಿಮುಂಚಾರ್ಯ ಧೃತಿಂ ಭಜಸ್ವ
ಸೋತ್ಸಾಹತಾ ಚಾಸ್ತು ವಿಮಾರ್ಗಣೇऽಸ್ಯಾಃ ।
ಉತ್ಸಾಹವಂತೋ ಹಿ ನರಾ ನ ಲೋಕೇ
ಸೀದಂತಿ ಕರ್ಮಸ್ವತಿದುಷ್ಕರೇಷು ॥೧೯॥

ಇತೀವ ಸೌಮಿತ್ರಿಮುದಗ್ರಪೌರುಷಮ್
ಬ್ರುವಂತಮಾರ್ಯೋ ರಘುವಂಶವರ್ಧನಃ ।
ನ ಚಿಂತಯಾಮಾಸ ಧೃತಿಂ ವಿಮುಕ್ತವಾನ್
ಪುನಶ್ಚ ದುಃಖಂ ಮಹದಭ್ಯುಪಾಗಮತ್ ೨೦॥

ಆರ್ಯ ! ಶೋಕ ಬಿಡು. ಧೈರ್ಯವಂತನಾಗು. ಸೀತೆಯನ್ನು ಹುಡುಕು-ವುದರಲ್ಲಿ ಉತ್ಸಾಹಿಯಾಗು. ಉತ್ಸಾಹವಂತರಾದ ನರರು ಅತಿದುಷ್ಕರವಾದ ಕೆಲಸ-ಗಳಲ್ಲಿಯೂ ವಿಷಾದಿಸುವುದಿಲ್ಲ.

ಪೌರುಷ ತುಂಬಿ ಸೌಮಿತ್ರಿಯು ಹೀಗೆ ಹೇಳಿದರೂ ರಘುವಂಶವರ್ಧನ ಶ್ರೀರಾಮನು ಅದರ ಬಗಗೆ ವಿಚಾರವೇ ಮಾಡಲಿಲ್ಲ. ಧೃತಿಗೆಟ್ಟು ಮತ್ತೆ ಮಹಾದುಃಖದಲ್ಲಿಯೇ ಮುಳುಗಿ ಹೋದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತಮೂರನೇ ಸರ್ಗ ಮುಗಿಯಿತು.

❖

ಚತುಃಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಶ್ರೀರಾಮ ಲಕ್ಷ್ಮಣನಿಗೆ ಗೋದಾವರಿ ನದಿಯ ಬಳಿ ತೆರಳಿ ಸೀತೆಯನ್ನು ಹುಡುಕಿ ತಿಳಿದು ಬರಲು ಹೇಳಿದನು. ಲಕ್ಷ್ಮಣನು ಗೋದಾವರಿ ತೀರದಲ್ಲೆಲ್ಲ ಹುಡುಕಿ 'ಸೀತೆ ಸಿಗಲಿಲ್ಲ. ಎಲ್ಲಿಹಳೋ ತಿಳಿಯುತ್ತಿಲ್ಲ ? ಎಂದು ಹೇಳಿದನು.

ಶ್ರೀರಾಮನೇ ಸೀತೆ ಏನಾದಳೆಂದು ಕೇಳಿದರೂ ಗೋದಾವರಿ ದುರಾತ್ಮ ರಾವಣನ ಕೌರ್ಯವನ್ನು ತಿಳಿದೂ ಹೆದರಿ ಏನೂಬಾಯಿ ಬಿಡಲಿಲ್ಲ.

ನಿರಾಶನಾದ ರಾಮ ಲಕ್ಷ್ಮಣನ ಮುಂದೆ ಹೇಳಿಕೊಂಡನು –

ಸೌಮಿತ್ರಿಯೇ ! ಸೀತೆಯಿಲ್ಲದೆ ಹಿಂತಿರುಗಿ ಸೀತೆಯ ತಂದೆ ತಾಯಿಯರಿಗೆ ಏನು ಹೇಳಲಿ ? ಬಂಧು ಹೀನನಾಗಿ ರಾಜಪುತ್ರಿ ಸೀತೆಯೂ ಇರದೆ ನನಗೆ ನಿದ್ರೆಬಾರದೆ ರಾತ್ರಿಗಳು ತುಂಬ ದೀರ್ಘಗಳಾದಂತೆನಿಸಿವೆ.

ನೋಡು ಲಕ್ಷ್ಮಣ ! ಈ ಜಿಂಕೆಗಳು ನನ್ನನ್ನೆ ದಿಟ್ಟಿಸಿ ನೋಡುತ್ತಿವೆ. ಏನನ್ನೊ ಹೇಳಲು ತವಕಿಸುತ್ತಿವೆ. ಆ ಜಿಂಕೆಗಳ ಬಳಿ ಸಾಗಿ ಶ್ರೀರಾಮ ಕೇಳಿದ – ಸೀತೆ ಎಲ್ಲಿ ? ಹೇಳಿ' ಎಂದು. ಕಂಬನಿತುಂಬಿದ ಕಣ್ಣುಗಳ ಆ ಜಿಂಕೆಗಳೂ ಕೂಡಲೆ ಎದ್ದು ದಕ್ಷಿಣದಿಕ್ಕಿಗೆ ಓಡುತ್ತಿವೆ. ನೆಲ ಮುಗಿಲುಗಳನ್ನು ನೋಡಿ ನೋಡಿ ನಮ್ಮತ್ತ ದೃಷ್ಟಿ ಹಾಯಿಸುತ್ತಿವೆ !

ಲಕ್ಷ್ಮಣ ನುಡಿದ – ರಾಮ ! ಈ ಜಿಂಕೆಗಳು ಸೀತೆ ಹೋದ ದಾರಿ ತೋರಿಸುತ್ತಿರ–ಬಹುದು. ಬಾ ಹೋಗೋಣ. ಇಬ್ಬರೂ ಮುಂದೆ ಸಾಗಿದಾಗ ಉದುರಿಬಿದ್ದ ಹೂವು–ಗಳನ್ನು ಕಂಡರು. ತಟ್ಟನೆ ರಾಮ ಹೇಳಿದ – ಈ ಹೂವುಗಳನ್ನು ನಾನೇ ಸೀತೆಗೆ ಕೊಟ್ಟೆ. ಅವಳು ಮುಡಿಯಲ್ಲಿ ಮುಡಿದಿದ್ದಳು. ಸೂರ್ಯ, ವಾಯು, ಧರಣೀ ನನಗಾಗಿ ಈ ಹೂವುಗಳನ್ನು ರಕ್ಷಿಸಿಟ್ಟಿವೆ.

ಮುಂದೆ ಸಾಗಿದ ರಾಮ ಪರ್ವತವನ್ನು ನೋಡಿ ಕುಪಿತನಾದ – ಪರ್ವತವೇ ! ಹೇಳು ಎಲ್ಲಿ ಸೀತೆ ? ಹೇಳದಿದ್ದರೆ ತೀಕ್ಷ್ಣಬಾಣಗಳಿಂದ ನಿನ್ನ ಹೆಬ್ಬಂಡೆಗಳನ್ನು ಸೀಳಿ ಹಾಕುತ್ತೇನೆ. ಹುಲ್ಲು ಇರದೆ ಮರ ಪೊದರುಗಳಿಲ್ಲವೆ ಸುಟ್ಟು ಬೂದಿಯಾಗುವೆ.

ಹೀಗೆ ಗಿರಿಯನ್ನು ಗದರಿ ಮುಂದೆ ಸಾಗಿದಾಗ ರಾಕ್ಷಸನ ಹೆಜ್ಜೆಯ ಗುರುತನ್ನು ಕಂಡ! ರಕ್ಕಸನಿಂದ ಎಳೆದಾಡಲ್ಪಟ್ಟ ಸೀತೆಯ ಅಲ್ಲಲ್ಲಿ ಹರಡಿಕೊಂಡಿರುವ ಹೆಜ್ಜೆಯ ಗುರುತುಗಳನ್ನು ಕಂಡ ರಾಮ.

ಮುಂದೆ ತುಂಡಾದ ಬಿಲ್ಲು, ಬತ್ತಳಿಕೆ, ಪುಡಿಪುಡಿಯಾದ ರಥಗಳನ್ನೆಲ್ಲ ಶ್ರೀರಾಮ

ಕಂಡು ಗಾಬರಿಗೊಂಡ ತಮ್ಮನನ್ನು ಕರೆದು ಹೇಳಿದ. ಲಕ್ಷ್ಮಣ ! ಸೀತೆಯ ಆಭರಣಗಳ ಬಂಗಾರದ ಗೆಜ್ಜೆಗಳು ಇಲ್ಲಿ ಬಿದ್ದಿವೆ. ಬಗೆಬಗೆಯಾದ ಮಾಲೆಗಳೂ ಬಿದ್ದಿವೆ.

ನೋಡು ನೋಡು ತಮ್ಮ ಇಲ್ಲಿ. ನೆಲವೆಲ್ಲ ಬಂಗಾರದ ಹನಿಗಳಂತೆ ರಕ್ತದ ಹನಿಗಳು ಚೆಲ್ಲಿ ತೊಯ್ದಿದೆ.

ಇಲ್ಲಿ ಕಾಮರೂಪಿ ರಕ್ಕಸರು ಸೀತೆಯ ದೇಹವನ್ನು ತುಂಡು ತುಂಡು ಮಾಡಿ ಹಂಚಿಕೊಂಡು ತಿಂದಿದ್ದಾರೆಂದು ತೋರುತ್ತದೆ !

ಸೀತೆಯ ಬಗೆಗೆ ವಿವಾದ ಮಾಡಿಕೊಂಡು ರಕ್ಕಸರೀರ್ವರು ಬಡಿದಾಡಿಕೊಂಡಿರ-ಬಹುದು. ಆದ್ದರಿಂದಲೆ ಮುತ್ತುಗಳು ಬೆಲ್ಲಾಪಿಲ್ಲಿಯಾಗಿ ಚೆಲ್ಲಿವೆ. ನೆಲದಲ್ಲಿ ತುಂಡಾಗಿ ಬಿದ್ದಿರುವ ಈ ಬಿಲ್ಲು ಯಾರದಿರಬಹುದು ?

ಎಳೆ ಸೂರ್ಯನಂತೆ ಪೊಳೆವ ಹರಿದು ಬಿದ್ದಿರುವ ಈ ಕವಚ ಯಾರದಿರಬಹುದು ? ನೂರಾರು ಕಡ್ಡಿಗಳಿರುವ ತುಂಡಾಗಿ ಬಿದ್ದಿರುವ ಈ ಛತ್ರಿಯಾರದು? ಧ್ವಜ, ಪುಡಿಯಾದ ರಥ ಬಿದ್ದಿದೆಯಲ್ಲ ! ಯಾರ ರಥವೋ? ಇಲ್ಲಿ ಚೆಲ್ಲಿ ಬಿದ್ದಿರುವ ಬಾಣಗಳು ಯಾರದು ? ಸಾರಥಿಯೂ ಹತನಾಗಿಹನಲ್ಲ ! ಯಾರ ಸಾರಥಿ ? ಚಾಮರ ಹಿಡಿದಿರುವ ರುಮಾಲುಸುತ್ತ ಸೇವಕರ ದೇಹ ಬಿದ್ದಿದೆ !

ಸೀತೆ ಅಪಹೃತಳಾಗಿರಬೇಕು. ಅಥವಾ ಹತಳಾಗಿರಬೇಕು. ಅಥವಾ ಮೃತಳಾಗಿರ-ಬೇಕು. ಸೀತೆಯನ್ನು ಕದ್ದೊಯ್ದಾಗ ಯಾವ ಧರ್ಮವೂ ಅವಳನ್ನು ಕಾಪಾಡಲಿಲ್ಲ !

ನಾನು ಸೌಮ್ಯ ಸ್ವಭಾವದವನೂ ಶಾಂತನೂ ಆಗಿದ್ದನ್ನೆ ಅಸಾಮರ್ಥ್ಯವೆಂದು ಭಾವಿಸಿದರೇನೊ ? ನನ್ನಲ್ಲಿ ಗುಣವೂ ದೋಷವಾಗಿ ಹೋಯಿತು. ನಾನು ವಿಕ್ರಮ ತೋರುತ್ತೇನೆ. ತೀಕ್ಷ್ಣ ಬಾಣಗಳಿಂದ ಪಿಶಾಚ ರಾಕ್ಷಸರನ್ನೆಲ್ಲ ಸಂಹರಿಸುತ್ತೇನೆ. ದೇವತೆಗಳು ಇಂದು ನೋಡಲಿ ನನ್ನ ವೀರ್ಯವನ್ನು. ವೈದೇಹಿಯನ್ನು ಹಿಂತಿರುಗಿಸಿದರೆ ಸರಿ. ಇಲ್ಲದಿದ್ದರೆ ಜಗತ್ತನ್ನೆ ನಾಶ ಮಾಡುತ್ತೇನೆ.

ಹೀಗೆ ಹೇಳಿ ಶ್ರೀರಾಮ ಬಿಲ್ಲು ಬಿಡಿಸಿ ಶರಸಂಧಾನ ಮಾಡಿ ಗರ್ಜಿಸಿದ – ಮುಪ್ಪು ಮೃತ್ಯು ಕಾಲ ವಿಧಿಗಳಿಗೆ ಹೇಗೆ ಪ್ರತಿಕ್ರಿಯೆಯೆ ಇಲ್ಲವೋ ನನಗೂ ಎದುರು ನಿಲ್ಲುವರಿಲ್ಲ !

❖

ರಾಮಕ್ರೋಧಃ

ಸ ದೀನೋ ದೀನಯಾ ವಾಚಾ ಲಕ್ಷ್ಮಣಂ ವಾಕ್ಯಮಬ್ರವೀತ್ ।
ಶೀಘ್ರಂ ಲಕ್ಷ್ಮಣ ಜಾನೀಹಿ ಗತ್ವಾ ಗೋದಾವರೀಂ ನದೀಮ್ ॥೧॥

ಅಪಿ ಗೋದಾವರೀಂ ಸೀತಾ ಪದ್ಮಾನ್ಯಾನಯಿತುಂ ಗತಾ ।
ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಪುನರೇವ ಹಿ ॥೨॥

ನದೀಂ ಗೋದಾವರೀಂ ರಮ್ಯಾಂ ಜಗಾಮ ಲಘುವಿಕ್ರಮಃ ।
ತಾಂ ಲಕ್ಷ್ಮಣಸ್ತೀರ್ಥವತೀಂ ವಿಚಿತ್ಯಾ ರಾಮಮಬ್ರವೀತ್ ॥೩॥

ನೈನಾಂ ಪಶ್ಯಾಮಿ ತೀರ್ಥೇಷು ಕ್ರೋಶತೋ ನ ಶೃಣೋತಿ ಮೇ ।
ಕಂ ನು ಸಾ ದೇಶಮಾಪನ್ನಾ ವೈದೇಹೀ ಕ್ಲೇಶನಾಶಿನೀ ॥೪॥

ನ ಹಿ ತಂ ವೇದ್ಮಿ ವೈ ರಾಮ ಯತ್ರ ಸಾ ತನುಮಧ್ಯಮಾ ।
ಲಕ್ಷ್ಮಣಸ್ಯ ವಚಃ ಶ್ರುತ್ವಾ ದೀನಃ ಸಂತಾಪಮೋಹಿತಃ ॥೫॥

ರಾಮಃ ಸಮಭಿಚಕ್ರಾಮ ಸ್ವಯಂ ಗೋದಾವರೀಂ ನದೀಮ್ ।
ಸ ತಾಮುಪಸ್ಥಿತೋ ರಾಮಃ ಕ್ವ ಸೀತೇತ್ಯೇವಮಬ್ರವೀತ್ ॥೬॥

ಭೂತಾನಿ ರಾಕ್ಷಸೇಂದ್ರೇಣ ವಧಾರ್ಹೇಣ ಹೃತಾಮಪಿ ।
ನ ತಾಂ ಶಶಂಸೂ ರಾಮಾಯ ತಥಾ ಗೋದಾವರೀ ನದೀ ॥೭॥

ತತಃ ಪ್ರಚೋದಿತಾ ಭೂತೈಃ ಶಂಸಾಸ್ಮೈ ತಾಂ ಪ್ರಿಯಾಮಿತಿ ।
ನ ಚ ಸಾಭ್ಯವದತ್ ಸೀತಾಂ ಪೃಷ್ಟಾ ರಾಮೇಣ ಶೋಚತಾ ॥೮॥

ರಾವಣಸ್ಯ ಚ ತದ್ರೂಪಂ ಕರ್ಮಾಣಿ ಚ ದುರಾತ್ಮನಃ ।
ಧ್ಯಾತ್ವಾ ಭಯಾತ್ತು ವೈದೇಹೀಂ ಸಾ ನದೀ ನ ಶಶಂಸ ತಾಮ್ ॥೯॥

ನಿರಾಶಸ್ತು ತಯಾ ನದ್ಯಾ ಸೀತಾಯಾ ದರ್ಶನೇ ಕೃತಃ ।
ಉವಾಚ ರಾಮಃ ಸೌಮಿತ್ರಿಂ ಸೀತಾದರ್ಶನಕರ್ಶಿತಃ ॥೧೦॥

ದೀನನಾದ ಆ ರಾಮನು ದೀನವಚನವನ್ನಾಡಿದನು – ಲಕ್ಷ್ಮಣ ! ಬೇಗ ಗೋದಾವರಿಯ ಬಳಿ ಹೊರಟು, 'ಸೀತೆ ತಾವರೆಗಳನ್ನು ತರಲು ಗೋದಾವರಿಗೆ ತೆರಳಿರುವಳೋ ?' ತಿಳಿದು ಕೊಂಡು ಬಾ.

ಶತ್ರುವೀರಹಂತಕ ಲಕ್ಷ್ಮಣ ಶ್ರೀರಾಮನಿಂದ ಹೇಳೋಣನಾಗಿ ಬೇಗ ನಡೆದು ರಮ್ಯ ಗೋದಾವರಿ ಬಳಿ ಸೇರಿದನು. ಅಲ್ಲೆಲ್ಲ ಹುಡುಕಿ ಸೀತೆಯನ್ನು ಕಾಣದೆ ರಾಮನ ಬಳಿ ಬಂದು ಹೇಳಿದನು – ತೀರ್ಥಗಳಲ್ಲಿ ಸೀತೆ ಕಾಣಲಿಲ್ಲ. ಕೂಗಿದರೂ ಅವಳು ಕೇಳಿಸಿಕೊಂಡಿಲ್ಲ. ಕ್ಲೇಶನಾಶಿನೀ ಸೀತೆ ಯಾವ ಪ್ರದೇಶಕ್ಕೆ ಹೋಗಿಹಳೋ ನಾನರಿಯೆ.

ಲಕ್ಷ್ಮಣನ ಮಾತನ್ನು ಕೇಳಿ ಸಂತಾಪದಿಂದ ಮೋಹಿತನಾದ ದೀನ ರಾಮನು ತಾನೆ ಗೋದಾವರಿಯ ಬಳಿ ತೆರಳಿ, 'ಸೀತೆ ಎಲ್ಲಿರುವಿ'? ಎಂದು ಕೂಗಿದನು.

ಭೂತಾಭಿಮಾನಿ ದೇವತೆಗಳು ವಧಾರ್ಹ ರಾಕ್ಷಸೇಂದ್ರ ರಾವಣನಿಂದ ಸೀತೆ ಅಪಹೃತಳಾದಳೆಂದು ತಿಳಿಸಲಿಲ್ಲ. ಗೋದಾವರಿ ಕೂಡ ಹೇಳಲಿಲ್ಲ. ಭೂತಾಭಿಮಾನಿ ದೇವತೆಗಳು 'ರಾಮನಿಗೆ ಹೇಳು' ಎಂದು ಪ್ರಚೋದಿಸಿದರೂ ಆ ಗೋದಾವರೀದೇವಿ ಶೋಕಿಸುತ್ತಿರುವ ರಾಮನಿಗೆ ಹೇಳುವ ಧೈರ್ಯ ತೋರಲಿಲ್ಲ.

ರಾವಣನ ಭಯಂಕರರೂಪ, ಆ ದುರಾತ್ಮನ ಕಾರ್ಯಗಳನ್ನು ನೆನೆದು ಹೆದರಿ ಆ ನದೀದೇವತೆ ಏನೂ ಹೇಳಲಿಲ್ಲ.

ಗೋದಾವರಿಯ ನಡೆಯಿಂದ ನಿರಾಶನಾಗಿ ರಾಮ ಸೀತಾದರ್ಶನವಿಲ್ಲದೆ ಕೃಶನಾಗಿ ಸೌಮಿತ್ರಿಯಲ್ಲಿ ಹೇಳಿದನು –

ಏಷಾ ಗೋದಾವರೀ ಸೌಮ್ಯ ಕಿಂಚಿನ್ನ ಪ್ರತಿಭಾಷತೇ ।
ಕಿಂ ನು ಲಕ್ಷ್ಮಣ ವಕ್ಷ್ಯಾಮಿ ಸಮೇತ್ಯ ಜನಕಂ ವಚಃ ॥೧೧॥

ಮಾತರಂ ಚೈವ ವೈದೇಹ್ಯಾ ವಿನಾ ತಾಮಹಮಪ್ರಿಯಮ್ ।
ಯಾ ಮೇ ರಾಜ್ಯವಿಹೀನಸ್ಯ ವನೇ ವನ್ಯೇನ ಜೀವತಃ ॥೧೨॥

ಸರ್ವಂ ವ್ಯಪಾನಯಚ್ಶೋಕಂ ವೈದೇಹೀ ಕ್ವ ನು ಸಾ ಗತಾ ।
ಜ್ಞಾತಿಪಕ್ಷವಿಹೀನಸ್ಯ ರಾಜಪುತ್ರೀಮಪಶ್ಯತಃ ॥೧೩॥

ಮನ್ಯೇ ದೀರ್ಘಾ ಭವಿಷ್ಯಂತಿ ರಾತ್ರಯೋ ಮಮ ಜಾಗ್ರತಃ ।
ಮಂದಾಕಿನೀಂ ಜನಸ್ಥಾನಮಿಮಂ ಪ್ರಸ್ರವಣಂ ಗಿರಿಮ್ ॥೧೪॥

ಸರ್ವಾಣ್ಯನುಚರಿಷ್ಯಾಮಿ ಯದಿ ಸೀತಾ ಹಿ ದೃಶ್ಯತೇ ।
ಏತೇ ಮೃಗಾ ಮಹಾವೀರ್ಯಾ ಮಾಮೀಕ್ಷಂತೇ ಮುಹುರ್ಮುಹುಃ ॥

ವಕ್ತುಕಾಮಾ ಇವ ಹಿ ಮೇ ಇಂಗಿತಾನ್ಯುಪಲಕ್ಷಯೇ ।
ತಾಂಸ್ತು ದೃಷ್ಟ್ವಾ ನರವ್ಯಾಘ್ರೋ ರಾಘವಃ ಪ್ರತ್ಯುವಾಚ ಹ ॥೧೬॥

ಕ್ವ ಸೀತೇತಿ ನಿರೀಕ್ಷನ್ ವೈ ಬಾಷ್ಪಸಂರುದ್ಧಯಾ ಗಿರಾ ।
ಏವಮುಕ್ತಾ ನರೇಂದ್ರೇಣ ತೇ ಮೃಗಾಃ ಸಹಸೋತ್ಥಿತಾಃ ॥೧೭॥

ದಕ್ಷಿಣಾಭಿಮುಖಾಃ ಸರ್ವೇ ದರ್ಶಯಂತೋ ನಭಃಸ್ಥಲಮ್ ।
ಮೈಥಿಲೀ ಹ್ರಿಯಮಾಣಾ ಸಾ ದಿಶಂ ಯಾಮನ್ವಪದ್ಯತ ॥೧೮॥

ತೇನ ಮಾರ್ಗೇಣ ಧಾವಂತೋ ನಿರೀಕ್ಷಂತೇ ನರಾಧಿಪಮ್ ।
ಯೇನ ಮಾರ್ಗಂ ಚ ಭೂಮಿಂ ಚ ನಿರೀಕ್ಷಂತೇ ಸ್ಮ ತೇ ಮೃಗಾಃ॥೧೯॥

ಪುನಶ್ಚ ಮಾರ್ಗಮಿಚ್ಛಂತೋ ಲಕ್ಷ್ಮಣೇನೋಪಲಕ್ಷಿತಾಃ ।
ತೇಷಾಂ ವಚನಸರ್ವಸ್ವಂ ಲಕ್ಷಯಾಮಾಸ ಚೇಂಗಿತಮ್ ॥೨೦॥

ಸೌಮ್ಯನೇ ! ಈ ಗೋದಾವರಿಯು ಏನೂ ಮಾತನಾಡುತ್ತಿಲ್ಲ. ಜನಕನ ಬಳಿಗೆ ವೈದೇಹಿಯಿಲ್ಲದೆ ಹಿಂತಿರುಗಿದ ನಾನು ಏನು ಹೇಳಲಿ ? ಸೀತೆಯ ತಾಯಿಗೆ ಏನೆಂದು ಉತ್ತರ ಹೇಳಲಿ ?

ರಾಜ್ಯಭ್ರಷ್ಟನಾಗಿ ವನದ ಕಂದ ಮೂಲ ಆಹಾರಗಳನ್ನು ಸೇವಿಸುತ್ತ ಕಾಡಿನಲ್ಲಿ ಬದುಕಿದ್ದ ನನ್ನೆಲ್ಲ ಶೋಕವನ್ನು ಕಳೆಯುತ್ತಿದ್ದ ಆ ಸೀತೆ ಎಲ್ಲಿ ಹೋಗಿಹಳು ?

ಬಂಧುಗಳಿಲ್ಲದೆ ಸೀತೆಯನ್ನು ಕಾಣದೆ ನಿದ್ರೆ ಬಾರದೆ ಎಚ್ಚರದಲ್ಲೇ ಇರುವ ನನಗೆ ರಾತ್ರಿಗಳು ತುಂಬ ದೀರ್ಘವಾಗಿವೆ ಎಂದು ಅನಿಸುತ್ತಿದೆ.

ಈ ಮಂದಾಕಿನೀ ನದಿ, ಜನಸ್ಥಾನ, ಪ್ರಸ್ರವಣ ಪರ್ವತ ಎಲ್ಲೆಡೆ ಅಲೆಯುತ್ತೇನೆ – ಸೀತೆ ಕಾಣುವಳೇನೋ ಎಂದು.

ಮಹಾವೀರ್ಯ ಸಂಪನ್ನಗಳಾದ ಈ ಜಿಂಕೆಗಳು ನನ್ನನ್ನೆ ಮತ್ತೆ ಮತ್ತೆ ದಿಟ್ಟಿಸಿ ನೋಡುತ್ತಿವೆ. ಏನೋ ಹೇಳಬೇಕೆಂದು ಬಯಸುತ್ತಿರುವಂತೆ ಕಾಣುತ್ತದೆ. ಪ್ರಾಣಿಗಳ ಚಲನವಲನಗಳ ಇಂಗಿತಗಳನ್ನು ನಾನು ಬಲ್ಲೆ.

ಪುರುಷ ಶ್ರೇಷ್ಠನಾದ ರಾಘವ ಕಂಬನಿತುಂಬಿದ ಕಣ್ಣುಗಳಿಂದ ಆ ಜಿಂಕೆಗಳನ್ನು ನೋಡುತ್ತ, 'ಸೀತೆ ಎಲ್ಲಿ ?' ಎಂದು ಕೇಳಿದನು.

ರಾಮನು ಹೀಗೆ ಹೇಳಿದ ಕೂಡಲೆ ಆ ಜಿಂಕೆಗಳು ಕೂಡಲೆ ಎದ್ದು ಆಕಾಶವನ್ನು ತೋರಿಸುತ್ತ ದಕ್ಷಿಣದಿಕ್ಕಿನೆಡೆಗೆ ಧಾವಿಸಿದವು.

ರಾವಣನಿಂದ ಅಪಹೃತಳಾದ ಸೀತೆ ಯಾವ ದಿಕ್ಕಿನೆಡೆಗೆ ಸಾಗಿದಳೋ ಆ ದಿಕ್ಕಿನೆಡೆಗೆ ಓಡುತ್ತ ಓಡುತ್ತ ರಾಮನನ್ನು ದಿಟ್ಟಿಸಿ ನೋಡಿದವು.

ಯಾವ ದಾರಿಯನ್ನು ಭೂಮಿಯನ್ನು ತೋರಿಸಿಕೊಂಡು ಧಾವಿಸಿದವೋ ಲಕ್ಷ್ಮಣನನ್ನು ನೋಡಿ ಮತ್ತೆ ಅತ್ತ ಕಡೆಗೆ ಓಡಬಯಸಿದವು.

ಆ ಜಿಂಕೆಯ ಮನದ ಮಾತನ್ನು ಅವುಗಳ ಚೇಷ್ಟೆಯನ್ನು ಎಲ್ಲವನ್ನು ಅರ್ಥೈಸಿಕೊಂಡ ಧೀಮಂತ ಲಕ್ಷ್ಮಣ ಆರ್ತಗೊಂಡು ಅಣ್ಣನಿಗೆ ಹೇಳಿದನು.

ಉವಾಚ ಲಕ್ಷ್ಮಣೋ ಜ್ಯೇಷ್ಠಂ ಧೀಮಾನ್ ಭ್ರಾತರಮಾರ್ತವತ್ ।
ಕ್ವ ಸೀತೇತಿ ತ್ವಯಾ ಪೃಷ್ಟಾ ಯಥೇಮೇ ಸಹಸೋತ್ಥಿತಾಃ ॥೨೧॥

ದರ್ಶಯಂತಿ ಕ್ಷಿತಿಂ ಚೈವ ದಕ್ಷಿಣಾಂ ಚ ದಿಶಂ ಮೃಗಾಃ ।
ಸಾಧು ಗಚ್ಛಾವಹೈ ದೇವ ದಿಶಮೇತಾಂ ಹಿ ನೈರ್ಋತೀಮ್ ॥೨೨॥

ಯದಿ ಸ್ಯಾದಾಗಮಃ ಕಶ್ಚಿದಾರ್ಯಾ ವಾ ಸಾಧ ಲಕ್ಷ್ಯತೇ ।
ಬಾಢಮಿತ್ಯೇವ ಕಾಕುತ್ಸ್ಥಃ ಪ್ರಸ್ಥಿತೋ ದಕ್ಷಿಣಾಂ ದಿಶಮ್ ॥೨೩॥

ಲಕ್ಷ್ಮಣಾನುಗತಃ ಶ್ರೀಮಾನ್ ವೀಕ್ಷಮಾಣೋ ವಸುಂಧರಾಮ್ ।
ಏವಂ ಸಂಭಾಷಮಾಣೌ ತಾವನ್ಯೋನ್ಯಂ ಭ್ರಾತರಾವುಭೌ ॥೨೪॥

ವಸುಂಧರಾಯಾಂ ಪತಿತಂ ಪುಷ್ಪಮಾರ್ಗಮಪಶ್ಯತಾಮ್ ।
ತಾಂ ಪುಷ್ಪವೃಷ್ಟಿಂ ಪತಿತಾಂ ದೃಷ್ಟ್ವಾ ರಾಮೋ ಮಹೀತಲೇ ॥೨೫॥

ಉವಾಚ ಲಕ್ಷ್ಮಣಂ ವೀರೋ ದುಃಖಿತೋ ದುಃಖಿತಂ ವಚಃ ।
ಅಭಿಜಾನಾಮಿ ಪುಷ್ಪಾಣಿ ತಾನೀಮಾನೀಹ ಲಕ್ಷ್ಮಣ ॥೨೬॥

ಅಪಿನದ್ಧಾನಿ ವೈದೇಹ್ಯಾ ಮಯಾ ದತ್ತಾನಿ ಕಾನನೇ ।
ಮನ್ಯೇ ಸೂರ್ಯಶ್ಚ ವಾಯುಶ್ಚ ಮೇದಿನೀ ಚ ಯಶಸ್ವಿನೀ ॥೨೭॥

ಅಭಿರಕ್ಷಂತಿ ಪುಷ್ಪಾಣಿ ಪ್ರಕುರ್ವಂತೋ ಮಮ ಪ್ರಿಯಮ್ ।
ಏವಮುಕ್ತ್ವಾ ಮಹಾಬಾಹುಂ ಲಕ್ಷ್ಮಣಂ ಪುರುಷರ್ಷಭಃ ॥೨೮॥

ಉವಾಚ ರಾಮೋ ಧರ್ಮಾತ್ಮಾ ಗಿರಿಂ ಪ್ರಸ್ರವಣಾಕುಲಮ್ ।
ಕಚ್ಚಿತ್ ಕ್ಷಿತಿಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ ॥೨೯॥

ರಾಮಾ ರಮ್ಯೇ ವನೋದ್ದೇಶೇ ಮಯಾ ವಿರಹಿತಾ ತ್ವಯಾ ।
ಕ್ರುದ್ಧೋಽಬ್ರವೀದ್ಗಿರಿಂ ತತ್ರ ಸಿಂಹಃ ಕ್ಷುದ್ರಮೃಗಂ ಯಥಾ ॥೩೦॥

ತಾಂ ಹೇಮವರ್ಣಾಂ ಹೇಮಾಭಾಂ ಸೀತಾಂ ದರ್ಶಯ ಪರ್ವತ ।
ಯಾವತ್ ಸಾನೂನಿ ಸರ್ವಾಣಿ ನ ತೇ ವಿಧ್ವಂಸಯಾಮ್ಯಹಮ್ ॥೩೧॥

ಏವಮುಕ್ತಸ್ತು ರಾಮೇಣ ಪರ್ವತೋ ಮೈಥಿಲೀಂ ಪ್ರತಿ ।
ದರ್ಶಯನ್ನಿವ ತಾಂ ಸೀತಾಂ ನಾದರ್ಶಯತ ರಾಘವೇ ॥೩೨॥

ರಾಮ ! 'ಸೀತೆ ಎಲ್ಲಿ? ಎಂದು ನೀನು ಕೇಳಿದಾಗ ಈ ಜಿಂಕೆಗಳು ಕೂಡಲೆ ಎದ್ದು ಭೂಮಿಯನ್ನು ದಕ್ಷಿಣದಿಕ್ಕನ್ನು ತೋರಿಸುತ್ತಿವೆ. ಒಳ್ಳೆಯದು, ಈ ನೈಋತ್ಯದಿಕ್ಕಿಗೆ ಹೋಗೋಣ. ಏನಾದರು ಕುರುಹು ದೊರೆಯಬಹುದು. ಅಥವಾ ಆರ್ಯೆ ಸೀತೆ ಕಾಣಬಹುದೇನೋ' ಎಂದನು ಲಕ್ಷ್ಮಣ.

ಹಾಗೇ ಆಗಲೆಂದು ಒಪ್ಪಿ ರಾಮನು ಲಕ್ಷ್ಮಣನನ್ನು ಹಿಂಬಾಲಿಸಿಕೊಂಡು ನೆಲವನ್ನು ಗಮನಿಸುತ್ತ ದಕ್ಷಿಣ ದಿಶೆಯಡೆಗೆ ನಡೆದನು.

ಹೀಗೆ ಅಣ್ಣ ತಮ್ಮರಿಬ್ಬರೂ ಮಾತಾಡಿಕೊಂಡು ಸಾಗುತ್ತಾ ದಾರಿಯಲ್ಲಿ ಉದುರಿಬಿದ್ದಿದ್ದ ಹೂವುಗಳನ್ನು ನೋಡಿದರು.

ಲಕ್ಷ್ಮಣ ! ಈ ಹೂವುಗಳನ್ನು ನಾನು ಬಲ್ಲೆ. ಇವು ಕಾಡಿನಲ್ಲಿ ಸೀತೆಗೆ ನಾನು ಕೊಟ್ಟ ಅವಳು ಮುಡಿದಿದ್ದ ಹೂವುಗಳು !

ಸೂರ್ಯ, ವಾಯು, ಯಶಸ್ವಿನೀ ಈ ಮೇದಿನೀ ನನಗೆ ಸಂತೋಷ ವುಂಟು ಮಾಡಲು ಈ ಹೂವುಗಳನ್ನು ಜೋಪಾನ ಮಾಡಿವೆ.

ಪುರುಷಶ್ರೇಷ್ಠನಾದ ಧರ್ಮಾತ್ಮ ರಾಮ ಮಹಾಬಾಹು ಲಕ್ಷ್ಮಣನಿಗೆ ಹೀಗೆ ಹೇಳಿ ಜಲಪಾತಗಳಿಂದ ತುಂಬಿದ ಪರ್ವತವನ್ನು ಕುರಿತು ಇಂತೆಂದನು – 'ಪರ್ವತಗಳೊಡೆಯನೆ ! ರಮ್ಯವಾದ ಈ ವನದ ಪರಿಸರದಲ್ಲಿ ಸರ್ವಾಂಗ ಸುಂದರಿಯಾದ ನನ್ನನ್ನು ಬಿಟ್ಟು ಹೋಗುತ್ತಿದ್ದ ರಮಣಿಯನ್ನು ಕಂಡೆಯಾ ?'

ಮತ್ತೆ ಕೋಪಗೊಂಡು ಜಿಂಕೆಯ ವಿಷಯದಲ್ಲಿ ಕೋಪಗೊಳ್ಳುವ ಸಿಂಹದಂತೆ ಗರ್ಜಿಸಿದನು. ನಿನ್ನ ತಪ್ಪಲಿನ ಶಿಖರಗಳನ್ನು ನಾನು ಧ್ವಂಸಗೈಯ್ಯುವ ಮೊದಲು ಬಂಗಾರದ ಬಣ್ಣದ ಬಂಗಾರದಂತೆ ಹೊಳೆಯುವ ನನ್ನ ಸೀತೆಯನ್ನು ಪರ್ವತ ! ತೋರಿಸಿಬಿಡು.

ರಾಮನು ಹೀಗೆ ಹೇಳಿದಾಗ ಪರ್ವತವು ಏನೋ ಹೇಳಿದಂತೆನಿಸಿದರೂ ಸೀತೆಯನ್ನು ತೋರಿಸಲಿಲ್ಲ.

ತತೋ ದಾಶರಥೀ ರಾಮ ಉವಾಚ ಚ ಶಿಲೋಚ್ಚಯಮ್ ।
ಮಮ ಬಾಣಾಗ್ನಿನಿರ್ದಗ್ಧೋ ಭಸ್ಮೀಭೂತೋ ಭವಿಷ್ಯಸಿ ॥೩೩॥

ಅಸೇವ್ಯಃ ಸರ್ವತಶ್ಚೈವ ನಿಸ್ಫಣದ್ರುಮಪಲ್ಲವಃ ।
ಇಮಾಂ ವಾ ಸರಿತಂ ಚಾದ್ಯ ಶೋಷಯಿಷ್ಯಾಮಿ ಲಕ್ಷ್ಮಣ ॥೩೪॥

ಯದಿ ನಾಖ್ಯಾತಿ ಮೇ ಸೀತಾಮದ್ಯ ಚಂದ್ರನಿಭಾನನಾಮ್ ।
ಏವಂ ಸ ರುಷಿತೋ ರಾಮೋ ದಿಧಕ್ಷನ್ನಿವ ಚಕ್ಷುಷಾ ॥೩೫॥

ದದರ್ಶ ಭೂಮೌ ನಿಷ್ಕ್ರಾಂತಂ ರಾಕ್ಷಸಸ್ಯ ಪದಂ ಮಹತ್ ।
ತ್ರಸ್ತಾಯಾ ರಾಮಕಾಂಕ್ಷಿಣ್ಯಾಃ ಪ್ರಧಾವಂತ್ಯಾ ಇತಸ್ತತಃ ॥೩೬॥

ರಾಕ್ಷಸೇನಾನುವೃತ್ತಾಯಾ ಮೈಥಿಲ್ಯಾಶ್ಚ ಪದಾನ್ಯಥ ।
ಸ ಸಮೀಕ್ಷ್ಯ ಪರಿಕ್ರಾಂತಂ ಸೀತಾಯಾ ರಾಕ್ಷಸಸ್ಯ ಚ ॥೩೭॥

ಭಗ್ನಂ ಧನುಶ್ಚ ತೂಣೀ ಚ ವಿಕೀರ್ಣಂ ಬಹುಧಾ ರಥಮ್ ।
ಸಂಭ್ರಾಂತಹೃದಯೋ ರಾಮಃ ಶಶಂಸ ಭ್ರಾತರಂ ಪ್ರಿಯಮ್ ॥೩೮॥

ಬಳಿಕ ರಾಮ ಪರ್ವತಕ್ಕೆ ಹೇಳಿದನು - ನನ್ನ ಬಾಣದ ಬೆಂಕಿಯಿಂದ ನೀನು ಸುಟ್ಟು ಹೋಗುವಿ. ಹುಲ್ಲು ಮರ ಚಿಗುರುಗಳ ಸೊಗಸಿರದೆ ಶಾಶ್ವತವಾಗಿ ನಿನ್ನನ್ನು ಯಾರೂ ಸೇವಿಸರು !

ಲಕ್ಷ್ಮಣ ! ಚಂದಿರನಂತಹ ಮೊಗದ ಆರ್ಯ ಸೀತೆಯನ್ನು ಈ ನದಿಯೂ ಹೇಳದಿದ್ದರೆ ಈಗಲೇ ಈ ನದಿಯನ್ನು ಒಣಗಿಸಿಬಿಡುತ್ತೇನೆ !

ಹೀಗೆ ರೋಷಗೊಂಡ ರಾಮ ಸುಡುವವನಂತೆ ದುರುಗುಟ್ಟಿ ನೋಡಿದ - ನೆಲದಲ್ಲಿ ರಾಕ್ಷಸನ ದೊಡ್ಡ ಹೆಜ್ಜೆಯ ಗುರುತನ್ನು !

ಬಳಿಕ ರಾಕ್ಷಸನು ಹಿಂಬಾಲಿಸಿದಾಗ ರಾಮನನ್ನು ಬಯಸಿ ಅತ್ತಿಂದಿತ್ತ ಓಡಾಡಿದ ಮೈಥಿಲಿಯ ಹೆಜ್ಜೆಯನ್ನೂ ಕಂಡ !

ಆಚೀಚೆ ಓಡಾಡಿದ ಸೀತೆ ಹಾಗು ರಾಕ್ಷಸರ ಹೆಜ್ಜೆ ಗುರುತುಗಳನ್ನು ಹಾಗೂ ಮುರಿದ ಬಿಲ್ಲನ್ನು, ಕಿತ್ತು ಬಿದ್ದ ಬತ್ತಳಿಕೆಯನ್ನು,ಪುಡಿಯಾದ ರಥವನ್ನು ಕಂಡು ಸಂಭ್ರಾಂತಚಿತ್ತನಾದ ರಾಮ ಪ್ರಿಯ ತಮ್ಮನನ್ನು ಕುರಿತು ಹೇಳಿದ.

ಪಶ್ಯ ಲಕ್ಷ್ಮಣ ವೈದೇಹ್ಯಾಃ ಶೀರ್ಣಾಃ ಕನಕಬಿಂದವಃ ।
ಭೂಷಣಾನಾಂ ಹಿ ಸೌಮಿತ್ರೇ ಮಾಲ್ಯಾನಿ ವಿವಿಧಾನಿ ಚ ॥೩೯॥

ತಪ್ತಬಿಂದುನಿಕಾಶೈಶ್ಚ ಚಿತ್ತೈಃ ಕ್ಷತಜಬಿಂದುಭಿಃ ।
ಆವೃತಂ ಪಶ್ಯ ಸೌಮಿತ್ರೇ ಸರ್ವತೋ ಧರಣೀತಲಮ್ ॥೪೦॥

ಮನ್ಯೇ ಲಕ್ಷ್ಮಣ ವೈದೇಹೀ ರಾಕ್ಷಸೈಃ ಕಾಮರೂಪಿಭಿಃ ।
ಭಿತ್ತ್ವಾ ಭಿತ್ತ್ವಾ ವಿಭಕ್ತಾ ವಾ ಭಕ್ಷಿತಾ ವಾ ಭವಿಷ್ಯತಿ ॥೪೧॥

ತಸ್ಯಾ ನಿಮಿತ್ತಂ ವೈದೇಹ್ಯಾ ದ್ವಯೋರ್ವಿವದಮಾನಯೋಃ ।
ಬಭೂವ ಯುದ್ಧಂ ಸೌಮಿತ್ರೇ ಘೋರಂ ರಾಕ್ಷಸಯೋರಿಹ ॥೪೨॥

ಮುಕ್ತಾಮಣಿಚಿತಂ ಚೇದಂ ತಪನೀಯವಿಭೂಷಿತಮ್ ।
ಧರಣ್ಯಾಂ ಪತಿತಂ ಸೌಮ್ಯ ಕಸ್ಯ ಭಗ್ನಂ ಮಹದ್ಧನುಃ ॥೪೩॥

ರಾಕ್ಷಸಾನಾಮಿದಂ ವತ್ಸ ಸುರಾಣಾಮಥವಾಪಿ ವಾ ।
ತರುಣಾದಿತ್ಯಸಂಕಾಶಂ ವೈಡೂರ್ಯಗುಲಿಕಾಚಿತಮ್ ॥೪೪॥

ವಿಶೀರ್ಣಂ ಪತಿತಂ ಭೂಮೌ ಕವಚಂ ಕಸ್ಯ ಕಾಂಚನಮ್ ।
ಛತ್ರಂ ಶತಶಲಾಕಂ ಚ ದಿವ್ಯಮಾಲ್ಯೋಪಶೋಭಿತಮ್ ॥೪೫॥

ಭಗ್ನದಂಡಮಿದಂ ಕಸ್ಯ ಭೂಮೌ ಸಮ್ಯಙ್ನಿಪಾತಿತಮ್ ।
ಕಾಂಚನೋರಶ್ಛದಾಶ್ಚೇಮೇ ಪಿಶಾಚವದನಾಃ ಖರಾಃ ॥೪೬॥

ಭೀಮರೂಪಾ ಮಹಾಕಾಯಾಃ ಕಸ್ಯ ವಾ ನಿಹತಾ ರಣೇ ।
ದೀಪ್ತಪಾವಕಸಂಕಾಶೋ ದ್ಯುತಿಮಾನ್ ಸಮರಧ್ವಜಃ ॥೪೭॥

ಅಪವಿದ್ಧಶ್ಚ ಭಗ್ನಶ್ಚ ಕಸ್ಯ ಸಾಂಗ್ರಾಮಿಕೋ ರಥಃ ।
ರಥಾಕ್ಷಮಾತ್ರಾ ವಿಶಿಖಾಸ್ತಪನೀಯವಿಭೂಷಣಾಃ ॥೪೮॥

ಕಸ್ಯೇಮೇऽಭಿಹತಾ ಬಾಣಾಃ ಪ್ರಕೀರ್ಣಾ ಘೋರಕರ್ಮಣಃ ।
ಶರಾವರೌ ಶರೈಃ ಪೂರ್ಣೌ ವಿಧ್ವಸ್ತೌ ಪಶ್ಯ ಲಕ್ಷ್ಮಣ ॥೪೯॥

ಪ್ರತೋದಾಭೀಷುಹಸ್ತೋऽಯಂ ಕಸ್ಯಾಯಂ ಸಾರಥಿರ್ಹತಃ ।
ಕಸ್ಯೇಮೌ ಪುರುಷವ್ಯಾಘ್ರ ಶಯಾತೇ ನಿಹತೌ ಯುಧಿ ॥೫೦॥

ಚಾಮರಗ್ರಾಹಿಣೌ ಸೌಮ್ಯ ಸೋಷ್ಣೀಷಮಣಿಕುಂಡಲೌ ।
ಪದವೀ ಪುರುಷಸ್ಯೈಷಾ ವ್ಯಕ್ತಂ ಕಸ್ಯಾಪಿ ರಕ್ಷಸಃ ॥೫೧॥

ವೈರಂ ಶತಗುಣಂ ಪಶ್ಯ ಮಮೇದಂ ಜೀವಿತಾಂತಕಮ್ ।
ಸುಘೋರಹೃದಯೈಃ ಸೌಮ್ಯ ರಾಕ್ಷಸೈಃ ಕಾಮರೂಪಿಭಿಃ ॥೫೨॥

ಹೃತಾ ಮೃತಾ ವಾ ಸೀತಾ ಸಾ ಭಕ್ಷಿತಾ ವಾ ತಪಸ್ವಿನೀ ।
ನ ಧರ್ಮಸ್ತ್ರಾಯತೇ ಸೀತಾಂ ಹ್ರಿಯಮಾಣಾಂ ಮಹಾವನೇ ॥೫೩॥

ಭಕ್ಷಿತಾಯಾಂ ಹಿ ವೈದೇಹ್ಯಾಂ ಹೃತಾಯಾಮಪಿ ಲಕ್ಷ್ಮಣ ।
ಕೇ ಹಿ ಲೋಕೇಽಪ್ರಿಯಂ ಕರ್ತುಂ ಶಕ್ತಾಃ ಸೌಮ್ಯ ಮಮೇಶ್ವರಾಃ ॥೫೪॥

ಲಕ್ಷ್ಮಣ ! ನೋಡು – ವೈದೇಹಿಯ ಆಭರಣಗಳ ಬಂಗಾರದ ಗೆಜ್ಜೆಗಳು ಇಲ್ಲಿ ಉದುರಿಬಿದ್ದಿವೆ !

ಸೌಮಿತ್ರೇ ನೋಡು – ಈ ನೆಲವೆಲ್ಲ ಬಂಗಾರದ ಬಿಂದುಗಳಂತೆ ಕಾಣುವ ರಕ್ತದ ಹನಿಗಳಿಂದ ತುಂಬಿದೆ !

ಲಕ್ಷ್ಮಣ ! ನನಗನಿಸುತ್ತಿದೆ –ಕಾಮರೂಪಿಗಳಾದ ರಕ್ಕಸರು ಸೀತೆಯನ್ನು ಸೀಳಿ ಸೀಳಿ ಹಂಚಿಕೊಂಡು ತಿಂದಿರಬಹುದೇನೋ ?!

ವೈದೇಹಿಯ ವಿಷಯದಲ್ಲಿ ಇಬ್ಬರು ರಕ್ಕಸರು ವಿವಾದ ಮಾಡಿಕೊಂಡು ಯುದ್ಧವಾಡಿರಬಹುದೇನೋ ?

ಮುತ್ತಿನಮಣಿಮಯವಾದ ಬಂಗಾರದಿಂದ ಭೂಷಿತವಾದ ದೊಡ್ಡ ಬಿಲ್ಲುಇಲ್ಲಿ ಮುರಿದು ಬಿದ್ದಿದೆ ! ಇದು ಯಾರದು ?

ಎಳೆ ಸೂರ್ಯನಂತೆ ಕಂಗೊಳಿಸುವ ವೈಢೂರ್ಯ ಮಣಿ ಖಚಿತವಾದ ಹರಿದು ನೆಲದಲ್ಲಿ ಬಿದ್ದಿರುವ ಈ ಬಂಗಾರದ ಕವಚ ಯಾರದು ?

ನೂರು ಶಲಾಕೆಗಳಿರುವ ದಿವ್ಯ ಮಾಲೆಗಳಿಂದ ಶೋಭಿತವಾದ ದಂಡ ಮುರಿದು ನೆಲದಲ್ಲಿ ಬಿದ್ದಿರುವ ಈ ಧ್ವಜ ಯಾರದು ?

ಬಂಗಾರದ ಕವಚಗಳನ್ನು ಕೊಟ್ಟ ಪಿಶಾಚದಂತಹ ಮುಖದ ಭಯಂಕರ ಆಕೃತಿಯ ಮಹಾಕಾಯದ ಯುದ್ಧದಲ್ಲಿ ಸತ್ತ ಈ ಕತ್ತೆಗಳು ಯಾರದು ?

ಬೆಂಕಿಯಂತೆ ಬೆಳಗುತ್ತಿರುವ, ಪೊಳೆವ, ಸಮರಧ್ವಜವನ್ನೊಳಗೊಂಡ ಯಾರಿಂದಲೋ ವಿದ್ಧವಾಗಿ ಕೆಳಗೆ ಬಿದ್ದು ಪುಡಿಯಾಗಿರುವ ಇದು ಯಾರು ಸಂಗ್ರಾಮದಲ್ಲಿ ಬಳಿಸಿದ ರಥವೋ ?

ರಥದ ನೊಗದಂತೆ ದೀರ್ಘವಾದ, ಬಂಗಾರದಿಂದ ಭೂಷಿತವಾದ, ನೆಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಈ ಬಾಣಗಳು ಯಾರ ಘೋರಕರ್ಮದವನು ಹೊಡೆದ ಬಾಣಗಳೋ ?

ಲಕ್ಷ್ಮಣ ! ಬಾಣಗಳಿಂದ ತುಂಬಿದ ಬತ್ತಳಿಕೆಗಳು ವಿಧ್ವಸ್ತವಾಗಿ ಬಿದ್ದಿವೆ ! ನೋಡು.

ಚಾಟಿಲಗಾಮುಗಳನ್ನು ಕೈಯಲ್ಲಿ ಹಿಡಿದುಕೊಂಡೇ ಸತ್ತು ಬಿದ್ದಿರುವ ಇವನು ಯಾರ ಸಾರಥಿಯೋ ?

ರುಮಾಲು, ಕುಂಡಲಗಳನ್ನು ಧರಿಸಿರುವ ಚಾಮರವನ್ನು ಹಿಡಿದುಕೊಂಡಿರುವ ನೆಲದಲ್ಲಿ ಸತ್ತುಬಿದ್ದಿರುವ ಇವರು ಯಾರ ಸೇವಕರೋ ?

ಈ ಮಾರ್ಗ ಯಾವ ರಕ್ಕಸಪುರುಷನದೋ ? ಅವನೊಂದಿಗೆ ನನಗೆ ಜೀವಾಂತ ವೈರವಿದೆ !

ಸೌಮ್ಯನೇ ! ಘೋರ ಮನಸ್ಸಿನ ಕಾಮರೂಪಿ ರಕ್ಕಸರು ತಪಸ್ವಿನೀ ಸೀತೆಯನ್ನು ಅಪಹರಿಸಿರುವರೋ ? ಸಾಯಿಸಿರುವರೋ ? ತಿಂದಿರುವರೋ ?

ಮಹಾವನದಲ್ಲಿ ಸೀತೆಯ ಅಪಹಾರವಾದಾಗ ಧರ್ಮ ಅವಳನ್ನು ಕಾಪಾಡಲಿಲ್ಲ! ಅವಳು ರಕ್ಕಸರಿಂದ ಭಕ್ಷಿತಳಾದರೂ, ಅಪಹೃತಳಾದರೂ ಧರ್ಮ ಅವಳನ್ನು ಕಾಪಾಡಲಿಲ್ಲ ! ಲಕ್ಷ್ಮಣ !

ಸೌಮ್ಯನೇ ! ನನಗೆ ಅಪ್ರಿಯವನ್ನುಂಟುಮಾಡಲು ಸಮರ್ಥರಾದವರು ಯಾರು ಈ ಲೋಕದಲ್ಲಿರುವರು ?

ಕರ್ತಾರಮಪಿ ಲೋಕಾನಾಂ ಶೂರಂ ಕರುಣವೇದಿನಮ್ ।
ಅಜ್ಞಾನಾದವಮನ್ಯೇರನ್ ಸರ್ವಭೂತಾನಿ ಲಕ್ಷ್ಮಣ ॥೫೫॥

ಮೃದುಂ ಲೋಕಹಿತೇ ಯುಕ್ತಂ ದಾಂತಂ ಕರುಣವೇದಿನಮ್ ।

ನಿರ್ವೀರ್ಯ ಇತಿ ಮನ್ಯಂತೇ ನೂನಂ ಮಾಂ ತ್ರಿದಶೇಶ್ವರಾಃ ॥೫೬॥

ಮಾಂ ಪ್ರಾಪ್ಯ ಹಿ ಗುಣೋ ದೋಷಃ ಸಂವೃತ್ತಃ ಪಶ್ಯ ಲಕ್ಷ್ಮಣ ।
ಅದ್ಯೈವ ಸರ್ವಭೂತಾನಾಂ ರಕ್ಷಸಾಮಭವಾಯ ಚ ॥೫೭॥

ಸಂಹೃತ್ಯೈವ ಶಶಿಜ್ಯೋತ್ಸ್ನಾಂ ಮಹಾನ್ ಸೂರ್ಯ ಇವೋದಿತಃ ।
ಸಂಹೃತ್ಯೈವ ಗುಣಾನ್ ಸರ್ವಾನ್ ಮಮ ತೇಜಃ ಪ್ರಕಾಶಯೇ॥೫೮॥

ನೈವ ಯಕ್ಷಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಕಿಂನರಾ ವಾ ಮನುಷ್ಯಾ ವಾ ಸುಖಂ ಪ್ರಾಪ್ಸ್ಯಂತಿ ಲಕ್ಷ್ಮಣ ॥೫೯॥

ಮಮಾಸ್ತ್ರಬಾಣಸಂಪೂರ್ಣಮಾಕಾಶಂ ಪಶ್ಯ ಲಕ್ಷ್ಮಣ ।
ನಿಃಸಂಪಾತಂ ಕರಿಷ್ಯಾಮಿ ಹ್ಯದ್ಯ ತ್ರೈಲೋಕ್ಯಚಾರಿಣಾಮ್ ॥೬೦॥

ಸಂನಿರುದ್ಧಗ್ರಹಗಣಮಾವಾರಿತನಿಶಾಕರಮ್ ।
ವಿಪ್ರನಷ್ಟಾನಲಮರುದ್ಭಾಸ್ಕರದ್ಯುತಿ ಸಂವೃತಮ್ ॥೬೧॥

ವಿನಿರ್ಮಥಿತಶೈಲಾಗ್ರಂ ಶುಷ್ಯಮಾಣಜಲಾಶಯಮ್ ।
ಧ್ವಸ್ತದ್ರುಮಲತಾಗುಲ್ಮಂ ವಿಪ್ರಣಾಶಿತಸಾಗರಮ್ ॥೬೨॥

ತ್ರೈಲೋಕ್ಯಂ ತು ಕರಿಷ್ಯಾಮಿ ಸಂಯುಕ್ತಂ ಕಾಲಧರ್ಮಣಾ ।

ಲೋಕಗಳನ್ನು ಸೃಷ್ಟಿಮಾಡುವವನಾಗಿದ್ದರೂ ಶೂರನಾಗಿದ್ದರೂ ಅವನು ಕರುಣೆ ತುಂಬಿದವನಾದರೆ ಎಲ್ಲರೂ ಅವನನ್ನು ಅವಮಾನಿಸುತ್ತಾರೆ ಅಜ್ಞಾನದಿಂದ.

ಮೃದುಸ್ವಭಾವದವನು ಲೋಕಹಿತ ಸಾಧಿಸುವಲ್ಲಿ ತೊಡಗಿಸಿಕೊಂಡವನು. ಜಿತೇಂದ್ರಿಯನು, ಕಾರುಣ್ಯ ತುಂಬಿದವನೂ ಆದ ನನ್ನನ್ನು ದೇವತೆಗಳು ಖಂಡಿತವಾಗಿ ನಿರ್ವೀರ್ಯ ಎಂದು ಭಾವಿಸಿರುವರೇನೋ ?

ನೋಡು ಲಕ್ಷ್ಮಣ ! ಗುಣವೂ ನನ್ನನ್ನು ಹೊಂದಿ ದೋಷವಾಗಿದೆ ! ಇಂದೇ ಎಲ್ಲ ಜೀವರ ಹಾಗೂ ರಕ್ಕಸರ ಸಂಪತ್ತಿನ ನಾಶಕ್ಕೋಸ್ಕರ ಎಲ್ಲ ಗುಣಗಳನ್ನೂ ಉಪ ಸಂಹಾರಗೊಳಿಸಿಕೊಂಡು ನನ್ನ ಸಾಮರ್ಥ್ಯವು ತೇಜಸ್ಸು ಬೆಳಗುತ್ತದೆ. ಚಂದ್ರನ ಬೆಳದಿಂಗಳನ್ನು ಕಬಳಿಸಿ ಸೂರ್ಯ ಉದಿಸುವಂತೆ.

ಲಕ್ಷ್ಮಣ ! ಯಕ್ಷರು ಗಂಧರ್ವರು ಪಿಶಾಚರು ರಾಕ್ಷಸರು ಕಿನ್ನರರಾಗಲಿ ಮನುಷ್ಯರಾಗಲಿ ಯಾರೂ ಇನ್ನು ಸುಖವಾಗಿ ನಿದ್ರಿಸಲಾರರು.

ನೋಡುತ್ತಿರುವ ಲಕ್ಷ್ಮಣ ! ಆಕಾಶವು ನನ್ನ ಅಸ್ತ್ರ ಬಾಣಗಳ ಸಮುದಾಯದಿಂದ ಮುಚ್ಚಿಹೋಗುತ್ತದೆ ! ತ್ರಿಲೋಕಸಂಚಾರಿಗಳಿಗೆ ಆಗಸದಲ್ಲಿ ಅವಕಾಶವೇ ಇಲ್ಲದಂತೆ ಮಾಡುತ್ತೇನೆ !

ಆಗಸದಲ್ಲಿ ಗ್ರಹಗಳ ಸಂಚಾರವೇ ಸನ್ನಿರುದ್ಧಗೊಳಿಸುತ್ತೇನೆ. ಚಂದ್ರನೂ ಮುಚ್ಚಿಹೋಗಬೇಕು. ಅಗ್ನಿ ವಾಯು ಸೂರ್ಯರೂ ನಾಶವಾಗಿಬಿಡಬೇಕು. ಪರ್ವತಾಗ್ರಶೈಲಗಳನ್ನು ಧ್ವಂಸಗೈಯ್ಯುತ್ತೇನೆ ! ಜಲಾಶಯಗಳು ಒಣಗಿಹೋಗು-ತ್ತವೆ ! ಮರಬಳ್ಳಿ ಪೊದರುಗಳೆಲ್ಲ ನಷ್ಟವಾಗಿ ಬಿಡುತ್ತವೆ ! ಸಾಗರವೇ ಇಲ್ಲವಾಗುತ್ತದೆ ! ಮೂರು ಲೋಕವೆ ಕಾಲ ಪ್ರಭಾವಕ್ಕೆ ಬಲಿಯಾಗಬೇಕು ! ಹಾಗೆ ಮಾಡುತ್ತೇನೆ !

ನ ತಾಂ ಕುಶಲಿನೀಂ ಸೀತಾಂ ಪ್ರದಾಸ್ಯಂತಿ ಯದೀಶ್ವರಾಃ ॥೬೩॥

ಅಸ್ಮಿನ್ ಮುಹೂರ್ತೇ ಸೌಮಿತ್ರೇ ಮಮ ದ್ರಕ್ಷ್ಯಂತಿ ವಿಕ್ರಮಮ್ ।
ನಾಕಾಶಮುತ್ಪತಿಷ್ಯಂತಿ ಸರ್ವಭೂತಾನಿ ಲಕ್ಷ್ಮಣ ॥೬೪॥

ಮಮ ಚಾಪಗುಣೋನ್ಮುಕ್ತೈರ್ಬಾಣಜಾಲೈರ್ನಿರಂತರಮ್ ।
ಅರ್ದಿತಂ ಮಮ ನಾರಾಚೈರ್ದ್ಯಸ್ತಭ್ರಾಂತಮೃಗದ್ವಿಜಮ್ ॥೬೫॥

ಸಮಾಕುಲಮಮರ್ಯಾದಂ ಜಗತ್ ಪಶ್ಯಾದ್ಯ ಲಕ್ಷ್ಮಣ ।
ಆಕರ್ಣಪೂರ್ಣೈರಿಷುಭಿರ್ದೀವಲೋಕಂ ದುರಾಸದೈಃ ॥೬೬॥

ಕರಿಷ್ಯೇ ಮೈಥಿಲೀಹೇತೋರಪಿಶಾಚಮರಾಕ್ಷಸಮ್ ।
ಮಮ ರೋಷಪ್ರಯುಕ್ತಾನಾಂ ಸಾಯಕಾನಾಂ ಬಲಂ ಸುರಾಃ ॥೬೭॥

ದ್ರಕ್ಷ್ಯಂತ್ಯದ್ಯ ವಿಮುಕ್ತಾನಾಮಮರ್ಷಾದ್ದೂರಗಾಮಿನಾಮ್ ।
ನೈವ ದೇವಾ ನ ದೈತೇಯಾ ನ ಪಿಶಾಚಾ ನ ರಾಕ್ಷಸಾಃ ॥೬೮॥

ಭವಿಷ್ಯಂತಿ ಮಮ ಕ್ರೋಧಾತ್ ತ್ರೈಲೋಕ್ಯೇ ವಿಪ್ರಣಾಶಿತೇ ।
ದೇವದಾನವಯಕ್ಷಾಣಾಂ ಲೋಕಾ ಯೇ ರಕ್ಷಸಾಮಪಿ ॥೬೯॥

ಬಹುಧಾ ನಿಪತಿಷ್ಯಂತಿ ಬಾಣೌಘೈಃ ಶಕಲೀಕೃತಾಃ ।
ನಿರ್ಮರ್ಯಾದಾನಿಮಾನ್ ಲೋಕಾನ್ ಕರಿಷ್ಯಾಮ್ಯದ್ಯ ಸಾಯಕೈಃ ॥

ಹೃತಾಂ ಮೃತಾಂ ವಾ ಸೌಮಿತ್ರೇ ನ ದಾಸ್ಯಂತಿ ಮಮೇಶ್ವರಾಃ ।
ತಥಾರೂಪಾಂ ಹಿ ವೈದೇಹೀಂ ನ ದಾಸ್ಯಂತಿ ಯದಿ ಪ್ರಿಯಾಮ್॥೭೧॥

ನಾಶಯಾಮಿ ಜಗತ್ ಸರ್ವಂ ತ್ರೈಲೋಕ್ಯಂ ಸಚರಾಚರಮ್ ।
ಯಾವದ್ದರ್ಶನಮಸ್ಯಾ ವೈ ತಾಪಯಾಮಿ ಚ ಸಾಯಕೈಃ ॥೭೨॥

ಇತ್ಯುಕ್ತ್ವಾ ರೋಷತಾಮ್ರಾಕ್ಷಃ ಸ್ಫುರಮಾಣೋಷ್ಠಸಂಪುಟಃ ।
ವಲ್ಕಲಾಜಿನಮಾಬಧ್ಯ ಜಟಾಭಾರಮಬಂಧಯತ್ ॥೭೩॥

ತಸ್ಯ ಕ್ರುದ್ಧಸ್ಯ ರಾಮಸ್ಯ ತಥಾಭೂತಸ್ಯ ಧೀಮತಃ ।
ತ್ರಿಪುರಂ ಜಘ್ನುಷಃ ಪೂರ್ವಂ ರುದ್ರಸ್ಯೇವ ಬಭೌ ತನುಃ ॥೭೪॥

ಲಕ್ಷ್ಮಣಾದಥ ಚಾದಾಯ ರಾಮೋ ನಿಷ್ಪೀಡ್ಯ ಕಾರ್ಮುಕಮ್ ।
ಶರಮಾದಾಯ ಸಂದೀಪ್ತಂ ಘೋರಮಾಶೀವಿಷೋಪಮಮ್ ॥೭೫॥

ಸಂದಧೇ ಧನುಷಿ ಶ್ರೀಮಾನ್ ರಾಮಃ ಪರಪುರಂಜಯಃ ।
ಯುಗಾಂತಾಗ್ನಿರಿವ ಕ್ರುದ್ಧ ಇದಂ ವಚನಮಬ್ರವೀತ್ ॥೭೬॥

ಯಥಾ ಜರಾ ಯಥಾ ಮೃತ್ಯುರ್ಯಥಾ ಕಾಲೋ ಯಥಾ ವಿಧಿಃ ।
ನಿತ್ಯಂ ನ ಪ್ರತಿಹನ್ಯಂತೇ ಸರ್ವಭೂತೇಷು ಲಕ್ಷ್ಮಣ ॥೭೭॥

ತಥಾಹಂ ಕ್ರೋಧಸಂಯುಕ್ತೋ ನ ನಿವಾರ್ಯೋಽಸ್ಮ್ಯ ಸಂಶಯಮ್ ॥

ಪುರೇವ ಮೇ ಚಾರುದತೀಮನಿಂದಿತಾಂ
ದಿಶಂತಿ ಸೀತಾಂ ಯದಿ ನಾದ್ಯ ಮೈಥಿಲೀಮ್ ।
ಸದೇವಗಂಧರ್ವಮನುಷ್ಯಪನ್ನಗಂ ಜಗತ್
ಸಶೈಲಂ ಪರಿವರ್ತಯಾಮ್ಯಹಮ್ ॥೭೮॥

ಆ ದೇವತೆಗಳೂ ಕುಶಲಿನಿಯಾದ ಸೀತೆಯನ್ನು ನನಗೆ ಮರಳಿಸದಿದ್ದರೆ ಅವರೂ ನನ್ನ ಪರಾಕ್ರಮವನ್ನು ಕಾಣಬೇಕಾದೀತು !

ಇನ್ನು ಮುಂದೆ ಯಾವ ಜೀವಿಗಳೂ ಆಕಾಶಕ್ಕೆ ನೆಗೆಯಲು ಸಾಧ್ಯವಿಲ್ಲ. ಏಕೆಂದರೆ ನನ್ನ ಬಿಲ್ಲಿನ ಹಗ್ಗ ಸೆಳೆದು ಬಿಟ್ಟ ಬಾಣ ರಾಶಿಗಳು ಆಗಸವನ್ನು ಅವಕಾಶವಿರದಂತೆ ಮುಚ್ಚಿ ಹಾಕಿರುತ್ತವೆ !

ಲಕ್ಷ್ಮಣ ! ನನ್ನ ಬಾಣ ವಿಶೇಷಗಳಿಂದ ಪ್ರಾಣಿ ಮೃಗ ಪಕ್ಷಿಗಳು ಧ್ವಂಸಗೊಂಡು ಜಗತ್ತೆ ವ್ಯಾಕುಲಗೊಂಡು ಸಂಭ್ರಾಂತವಾಗುತ್ತದೆ ! ವ್ಯಾಕುಲತೆ ಮೇರೆ ಮೀರುತ್ತದೆ. !

ಆ ಕರ್ಣಾಂತ ಸೆಳೆದು ಬಿಡುವ ನನ್ನ ಬಾಣಗಳು ಯಾರಿಂದಲು ತಡೆಯಲಾಗದೆ ಮೈಥಿಲೀ ನಿಮಿತ್ತವಾಗಿ ಈ ಜೀವಲೋಕದಲ್ಲಿ ರಾಕ್ಷಸ ಪಿಶಾಚರೇ ಇಲ್ಲದಂತೆ ಮಾಡುತ್ತವೆ !

ರೋಷದಿಂದ ಪ್ರಯೋಗಿಸಿದ ಅತಿದೂರಗಾಮಿಗಳಾದ ನಾನು ಬಿಟ್ಟ ಬಾಣಗಳ ಬಲವನ್ನಿಂದು ದೇವತೆಗಳು ನೋಡಲಿರುವರು !

ಕ್ರೋಧದಿಂದ ಮೂರು ಲೋಕಗಳನ್ನು ನಾನು ನಾಶಮಾಡಿದ ಬಳಿಕ ದೇವತೆಗಳಿರುವುದಿಲ್ಲ. ದೈತ್ಯರೂ ಇರುವುದಿಲ್ಲ. ಪಿಶಾಚರು ಇರುವುದಿಲ್ಲ. ರಾಕ್ಷಸರೂ ಇರುವುದಿಲ್ಲ !

ಬಾಣೌಘಗಳಿಂದ ದೇವದಾನವಯಕ್ಷರ ಹಾಗೂ ರಕ್ಕಸರ ಲೋಕಗಳೇ ತುಂಡಾಗಿ ಅಸ್ತಿತ್ವವನ್ನೆ ಕಳೆದುಕೊಳ್ಳುತ್ತವೆ !

ಅಪಹೃತಳೋ ಮೃತಳೋ ಆಗಿರುವ ನನ್ನ ಸೀತೆಯನ್ನು ದೇವತೆಗಳು ತಂದು-ಕೊಡದಿದ್ದರೆ ಇಂದು ನನ್ನ ಬಾಣಗಳಿಂದ ಜಗದ ಸೀಮೆಗಳನ್ನೆ ಹಾಳುಗೆಡಹುತ್ತೇನೆ!

ಮೊದಲಿದ್ದಂತೆಯ ನನ್ನ ಸೀತೆಯನ್ನು ಹಿಂದಕ್ಕೆ ಒಪ್ಪಿಸದಿದ್ದರೆ ಚರಾಚರಾತ್ಮಕ-ವಾದ ತ್ರೈಲೋಕ್ಯವನ್ನೆ ಹಾಳುಗೆಡಹುವೆನು !

ಇಷ್ಟು ಹೇಳಿ ರೋಷದಿಂದಾದ ಕೆಂಪು ಕಣ್ಣಿನ ಶ್ರೀರಾಮ ಬಿಲ್ಲನ್ನು ಬಗ್ಗಿಸಿ ಸರ್ಪದಂತಿರುವ ಬೆಂಕಿಯುಗಳುವ ಬಾಣವನ್ನು ಅದರಲ್ಲಿ ಸಂಧಾನ ಮಾಡಿದ.

ಬಿಲ್ಲಿನಲ್ಲಿ ಬಾಣವನ್ನು ಜೋಡಿಸಿದ ಶತುಪುರಂಜಯನಾದ ರಾಮ ಪ್ರಲಯಾಗ್ನಿಯಂತೆ ಕ್ರುದ್ಧನಾಗಿ ಈ ಮಾತನ್ನಾಡಿದನು -

ಮುಪ್ಪು ಮೃತ್ಯು ಕಾಲ ವಿಧಿ ಇವುಗಳಿಗೆ ನಿತ್ಯದಲ್ಲಿಯೂ ಪ್ರತಿಹತಿವಿರದಂತೆ ಅಂತೆಯೇ ಕ್ರೋಧದಿಂದ ಕೂಡಿದ ನಾನೂ ಸರ್ವಥಾ ಪರಿಹಾರ್ಯನಲ್ಲ !

ಹಿಂದಿನಂತೆಯೇ ಸುಂದರದಂತಗಳುಳ್ಳ ಅನಿಂದಿತರೂಪಳಾದ ಸೀತೆಯನ್ನು ದೇವತೆಗಳು ಹಿಂತಿರುಗಿಸದಿದ್ದಲ್ಲಿ ದೇವ ಗಂಧರ್ವ ಮನುಷ್ಯ ಪನ್ನಗರು ಹಾಗು ಶೈಲಗಳಿಂದ ಸಹಿತವಾದ ಈ ಜಗವನ್ನು ನಾಶಮಾಡುತ್ತೇನೆ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತನಾಲ್ಕನೇ ಸರ್ಗ ಮುಗಿಯಿತು.

❖

ಪಂಚಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಸೀತಾಪಹಾರದಿಂದ ಸಂಕ್ರುದ್ಧನಾದ ರಾಮನು ಜಗತ್ತನ್ನೆ ನಾಶಗೊಳಿಸುತ್ತೇನೆಂದು ಹುಂಕರಿಸಿದಾಗ ಕಳವಳಗೊಂಡ ಲಕ್ಷ್ಮಣ ವಿನಯದಿಂದ ರಾಮನಲ್ಲಿ ವಿಜ್ಞಾಪಿಸುತ್ತಾನೆ – ''ರಾಮ ! ನೀನು ಸ್ವಭಾವತಃ ಮೃದು. ಜಿತೇಂದ್ರಿಯ. ಸರ್ವಭೂತಹಿತಗಳಲ್ಲಿ ರತ. ಇಂತಹ ನೀನು ಕ್ರೋಧವಶನಾಗಿ ತನ್ನ ನೈಜ ಪ್ರಕೃತಿಯನ್ನು ಬಿಡುವುದು ಸಲ್ಲ. ಸದಾ ಸರ್ವಜೀವಜಾತಗಳಿಗೆ ಆಸರೆಯಾದ ನೀನು ಸರ್ವಭೂತ–ದಮನದ ನಿರ್ಧಾರ ಮಾಡುವುದು ತರವಲ್ಲ. ಒಬ್ಬನ ಅಪರಾಧಕ್ಕೆ ಲೋಕವನ್ನೆ ನಾಶಗೊಳಿಸುವ ನಿರ್ಧಾರ ಬೇಡ. ಬದಲಾಗಿ ನನ್ನೊಂದಿಗೆ ಪರಮರ್ಷಿಗಳ ಸಹಾಯ–ವನ್ನೂ ಪಡೆದು ಸಮುದ್ರ ಪರ್ವತ ಕಾಡುಗಳು ಗುಹೆಗಳು ನದಿಗಳು ತಾವರೆಕೊಳಗಳಲ್ಲಿ ಹುಡುಕೋಣ.

ದೇವ ಗಂಧರ್ವಲೋಕಗಳಲ್ಲಿಯೂ ಹುಡುಕೋಣ – ಭಾರ್ಯಾಪಹಾರಿ ದುರುಳ ಸಿಗುವವರೆಗೂ. ಆ ದೇವತೆಗಳು ಸಾಮೋಪಾಯದಿಂದ ನಿನ್ನ ಪತ್ನಿಯನ್ನು ಹಿಂತಿರು–ಗಿಸದಿದ್ದರೆ ಆಗ ನಿನ್ನ ತೀಕ್ಷ್ಣಬಾಣಗಳಿಂದ ಆಂದುಕೊಂಡ ಕಾರ್ಯವನ್ನು ಸಾಧಿಸು. ಈಗ ನಾಶದ ಅವಸರ ಬೇಡ''.

❖

ಕ್ರೋಧಸಂಹಾರಪ್ರಾರ್ಥನಾ

ತಪ್ಯಮಾನಂ ತಥಾ ರಾಮಂ ಸೀತಾಹರಣಕರ್ಶಿತಮ್ ।
ಲೋಕಾನಾಮಭವೇ ಯುಕ್ತಂ ಸಂವರ್ತಕಮಿವಾನಲಮ್ ॥೧॥

ವೀಕ್ಷಮಾಣಂ ಧನುಃ ಸಜ್ಯಂ ನಿಃಶ್ವಸಂತಂ ಪುನಃ ಪುನಃ ।
ದಗ್ಧುಕಾಮಂ ಜಗತ್ ಸರ್ವಂ ಯುಗಾಂತೇ ತು ಯಥಾ ಹರಮ್॥೨॥

ಅದೃಷ್ಟಪೂರ್ವಂ ಸಂಕ್ರುದ್ಧಂ ದೃಷ್ಟ್ವಾ ರಾಮಂ ತು ಲಕ್ಷ್ಮಣಃ ।
ಅಬ್ರವೀತ್ಪ್ರಾಂಜಲಿರ್ವಾಕ್ಯಂ ಮುಖೇನ ಪರಿಶುಷ್ಯತಾ ॥೩॥

ಸೀತಾಪಹಾರದಿಂದ ಶೋಕತಪ್ತನಾಗಿ ಪ್ರಲಯಾಗ್ನಿಯಂತೆ ಲೋಕನಾಶಕ್ಕೆ ಮುಂದಾಗಿ ನಿಟ್ಟುಸಿರು ಬಿಡುತ್ತ ನೇಣುಬಿಗಿದ ಬಿಲ್ಲನ್ನು ಮತ್ತೆ ಮತ್ತೆ ನೋಡುತ್ತಿರುವ ಯುಗಾಂತದಲ್ಲಿ ಹರನಂತೆ ಎಲ್ಲ ಜಗವನ್ನು ಸುಡಲು ಬಯಸಿದ ಈ ಮುಂದೆ ಎಂದೆಂದೂ ಹೀಗೆ ಕಂಡಿರದ ರಾಮನನ್ನು ನೋಡಿ ಲಕ್ಷ್ಮಣನು ಬಾಡಿದ ಮುಖದಿಂದ ಕೈಮುಗಿದು ಹೀಗೆ ಹೇಳಿದನು –

ಪುರಾ ಭೂತ್ವಾ ಮೃದುರ್ದಾಂತಃ ಸರ್ವಭೂತಹಿತೇ ರತಃ ।
ನ ಕ್ರೋಧವಶಮಾಪನ್ನಃ ಪ್ರಕೃತಿಂ ಹಾತುಮರ್ಹಸಿ ॥೪॥

ಚಂದ್ರೇ ಲಕ್ಷ್ಮೀಃ ಪ್ರಭಾ ಸೂರ್ಯೇ ಗತಿರ್ವಾಯೌ ಭುವಿ ಕ್ಷಮಾ ।
ಏತಚ್ಚ ನಿಯತಂ ಸರ್ವಂ ತ್ವಯಿ ಚಾನುತ್ತಮಂ ಯಶಃ ॥೫॥

ಏಕಸ್ಯ ನಾಪರಾಧೇನ ಲೋಕಾನ್ ಹಂತುಂ ತ್ವಮರ್ಹಸಿ ।
ನ ತು ಜಾನಾಮಿ ಕಸ್ಯಾಯಂ ಭಗ್ನಃ ಸಾಂಗ್ರಾಮಿಕೋ ರಥಃ ॥೬॥

ಕೇನ ವಾ ಕಸ್ಯ ವಾ ಹೇತೋಃ ಸಾಯುಧಃ ಸಪರಿಚ್ಛದಃ ।
ಖಿರನೇವೀಕ್ಷತಶ್ಚಾಯಂ ಸಿಕ್ತೋ ರುಧಿರಬಿಂದುಭಿಃ ॥೭॥

ದೇಶೋ ನಿರ್ವೃತ್ತಸಂಗ್ರಾಮಃ ಸುಘೋರಃ ಪಾರ್ಥಿವಾತ್ಮಜ ।
ಏಕಸ್ಯ ತು ವಿಮರ್ದೋಽಯಂ ನ ದ್ವಯೋರ್ವದತಾಂ ವರ ॥೮॥

ನ ಹಿ ವೃತ್ತಂ ಹಿ ಪಶ್ಯಾಮಿ ಬಲಸ್ಯ ಮಹತಃ ಪದಮ್ ।
ನೈಕಸ್ಯ ತು ಕೃತೇ ಲೋಕಾನ್ ವಿನಾಶಯಿತುಮರ್ಹಸಿ ॥೯॥

ಯುಕ್ತದಂಡಾ ಹಿ ಮೃದವಃ ಪ್ರಶಾಂತಾ ವಸುಧಾಧಿಪಾಃ ।
ಸದಾ ತ್ವಂ ಸರ್ವಭೂತಾನಾಂ ಶರಣ್ಯಃ ಪರಮಾ ಗತಿಃ ॥೧೦॥

ಕೋ ನು ದಾರಪ್ರಣಾಶಂ ತೇ ಸಾಧು ಮನ್ಯೇತ ರಾಘವ ।
ಸರಿತಃ ಸಾಗರಾಃ ಶೈಲಾ ದೇವಗಂಧರ್ವದಾನವಾಃ ॥೧೧॥

ಈ ಮೊದಲು ಮೃದುವಾಗಿಯೂ, ಜಿತೇಂದ್ರಿಯನು, ಸರ್ವಭೂತ ಹಿತರತ-ನಾಗಿರುವ ನೀನು ಕ್ರೋಧವಶನಾಗಿ ನಿನ್ನತನವನ್ನು ಕಳೆದು ಕೊಳ್ಳಬೇಡ.

ಚಂದ್ರನಲ್ಲಿ ಶೋಭೆ, ಸೂರ್ಯನಲ್ಲಿ ಪ್ರಭೆ, ವಾಯುವಿನಲ್ಲಿ ಗತಿ, ಭೂಮಿಯಲ್ಲಿ ಕ್ಷಮೆಗಳು ಸಹಜವಾಗಿರುವಂತೆ ಅತ್ಯುತ್ತಮವಾದ ಯಶಸ್ಸು ನಿತ್ಯನಿಯತ- ವಾಗಿ ನಿನ್ನಲ್ಲಿದೆ.

ಒಬ್ಬನ ಅಪರಾಧದಿಂದ ನೀನು ಲೋಕವನ್ನೆ ಸಂಹರಿಸಲು ಸಂಕಲ್ಪಿಸಿರುವುದು ತರವಲ್ಲ. ಭಗ್ನಗೊಂಡಿರುವ ಈ ಯುದ್ಧರಥ ಯಾರದ್ದೆಂದು ನನಗೆ ಗೊತ್ತಿಲ್ಲ. ಯಾರಿಂದ ಯಾವ ಕಾರಣದಿಂದ ಆಯಧ ಪರಿಕರಗಳಿಂದ ಕೂಡಿದ ಈ ರಥವು ಭಗ್ನ ಗೊಂಡಿದೆ ? ತಿಳಿದಿಲ್ಲ.

ಈ ಪ್ರದೇಶ ಕುದುರೆಯ ಗೊರಸುಗಳಿಂದ ಅಗಿದಂತೆ ಇದೆ. ರಕ್ತದ ಹನಿಗಳಿಂದ ನೆಲ ಸಿಕ್ತವಾಗಿದೆ. ಈ ಪ್ರದೇಶದಲ್ಲಿ ಘೋರಸಂಗ್ರಾಮ ನಡೆದಿದೆ, ರಾಜಪುತ್ರ !

ಒಬ್ಬ ಪುರುಷ ಮಾತ್ರ ಕಾಳಗದಲ್ಲಿ ತೊಡಗಿಸಿ ಕೊಂಡಿದ್ದಾನೆ. ಇಬ್ಬರಲ್ಲ, ದೊಡ್ಡ ಸೈನ್ಯದ ಹೆಜ್ಜೆಯೂ ಇಲ್ಲಿ ಕಾಣುತ್ತಿಲ್ಲ. ಅಂದ ಮೇಲೆ ಒಬ್ಬನಿಗಾಗಿ ಎಲ್ಲ ಲೋಕ-ಗಳನ್ನೂ ವಿನಾಶಮಾಡಬಾರದು.

ದೇಶದ ನಾಯಕರು ಮೃದು ಪ್ರಶಾಂತ ಸ್ವಭಾವದವರು, ಅಪರಾಧಕ್ಕೆ ಅನುಗುಣವಾಗಿ ದಂಡನೆ ಮಾಡುವವರು ಆಗಿರುತ್ತಾರೆ.

ನೀನು ಯಾವಾಗಲೂ ಎಲ್ಲರಿಗೆ ಶರಣ್ಯನು. ಪರಮ ಆಸರೆಯು, ಆಗಿರುವಿ. ರಾಘವ ! ನಿನ್ನ ಭಾರ್ಯಾಪಹಾರವನ್ನು ಯಾರು ಒಳ್ಳೆಯದೆಂದು ಭಾವಿಸುತ್ತಾರೆ?

ನದೀಸಾಗರ ಪರ್ವತ ದೇವತೆಗಳು, ದೇವಗಂಧರ್ವದಾನವರು ಯಾರೂ ನಿನಗೆ ಅಪ್ರಿಯವನ್ನುಂಟು ಮಾಡಲು ಸಮರ್ಥರಲ್ಲ ದೀಕ್ಷಿತನಿಗೆ ಯಾರು ಅಪ್ರಿಯ-ಗೊಳಿಸದಂತೆ.

ನಾಲಂ ತೇ ವಿಪ್ರಿಯಂ ಕರ್ತುಂ ದೀಕ್ಷಿತಸ್ಯೇವ ಸಾಧವಃ ।
ಯೇನ ರಾಜನ್ ಹೃತಾ ಸೀತಾ ತಮನ್ವೇಷಿತುಮರ್ಹಸಿ ॥೧೨॥

ಮದ್ದ್ವಿತೀಯೋ ಧನುಷ್ಪಾಣಿಃ ಸಹಾಯೈಃ ಪರಮರ್ಷಿಭಿಃ ।
ಸಮುದ್ರಂ ಚ ವಿಚೇಷ್ಯಾಮಃ ವಿಚೇಷ್ಯಾಮ ಸಮಾಹಿತಾಃ ॥೧೪॥

ಯಾವನ್ನಾಧಿಗಮಿಷ್ಯಾಮಸ್ತವ ಭಾರ್ಯಾಪಹಾರಿಣಮ್ ।
ನ ಚೇತ್ ಸಾಮ್ನಾ ಪ್ರದಾಸ್ಯಂತಿ ಪತ್ನೀಂ ತೇ ತ್ರಿದಶೇಶ್ವರಾಃ ॥೧೫॥

ಕೋಸಲೇಂದ್ರ ತತಃ ಪಶ್ಚಾತ್ ಪ್ರಾಪ್ತಕಾಲಂ ಕರಿಷ್ಯಸಿ ।

ಶೀಲೇನ ಸಾಮ್ನಾ ವಿನಯೇನ ಸೀತಾಂ
ನಯೇನ ನ ಪ್ರಾಪ್ಸ್ಯಸಿ ಚೇನ್ನರೇಂದ್ರ ।
ತತಃ ಸಮುತ್ಪಾದಯ ಹೇಮಪುಂಖೈ-
ರ್ಮಹೇಂದ್ರವಜ್ರಪ್ರತಿಮೈಃ ಶರೌಘೈಃ ॥೧೬॥

ಯಾರು ನಿನ್ನ ಸೀತೆಯನ್ನು ಅಪಹರಿಸಿರುವನೋ ಅವನನ್ನು ನನ್ನೊಂದಿಗೆ ಹಾಗೂ ಪರಮರ್ಷಿಗಳ ಸಹಾಯದಿಂದ ಧನುಷ್ಪಾಣಿಯಾಗಿ ನೀನು ಹುಡುಕು.

ಸಮುದ್ರವನ್ನು ಪರ್ವತಗಳನ್ನು ವನಗಳನ್ನು ಬಗೆ ಬಗೆಯ ಗುಹೆಗಳನ್ನು ಘೋರ ನದಿಗಳನ್ನು ತಾವರೆಯ ಕೊಳಗಳನ್ನೂ ಹುಡುಕೋಣ.

ದೇವ ಗಂಧರ್ವ ಲೋಕಗಳನ್ನು ಸಮಾಧಾನವಾಗಿ ಹುಡುಕೋಣ – ನಿನ್ನ ಹೆಂಡತಿಯನ್ನು ಅಪಹರಿಸಿರುವ ದುರುಳ ಸಿಗುವವರೆಗೂ.

ದೇವತಾ ಶ್ರೇಷ್ಠರು ಸಾಮೋಪಾಯದಿಂದ ನಿನ್ನ ಪತ್ನಿಯನ್ನು ಕೊಡದಿದ್ದರೆ ಆಗ ಆ ಕಾಲಕ್ಕೆ ಉಚಿತವಾಗಿ ಮಾಡಬೇಕಾದುದನ್ನು ಮಾಡು.

ನರೇಂದ್ರ ! ಶೀಲ ಸಾಮ ವಿನಯ ನಯಗಳಿಂದ ಸೀತೆಯನ್ನು ನೀನು ಹೊಂದದೆ ಇದ್ದರೆ ಆಗ ನೀನು ಬಂಗಾರದ ಗರಿಗಳಿಂದ ಕೂಡಿದ ಇಂದ್ರನ ವಜ್ರಸದೃಶವಾದ ಬಾಣಗಳ ರಾಶಿಯಿಂದ ಲೋಕಗಳನ್ನು ಸಂಹರಿಸು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತೈದನೇ ಸರ್ಗ ಮುಗಿಯಿತು.

❖

ಷಟ್‌ಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಶೋಕ ಸಂತಪ್ತನಾದ ರಾಮನನ್ನು ಲಕ್ಷ್ಮಣ ಸಂತೈಸುತ್ತ ಹೀಗೆಂದನು – ದೊಡ್ಡ ತಪಸ್ಸು ಪುಣ್ಯಗಳಿಂದ ದಶರಥ ದೇವತೆಗಳು ಅಮೃತವನ್ನು ಪಡೆದಂತೆ ನಿನ್ನನ್ನು ಪಡೆದಿದ್ದಾರೆ. ಅಂಥ ದಶರಥರೂ ಭರತ ಹೇಳಿದ ಹಾಗೆ ನಿನ್ನ ವಿರಹ ದುಃಖದಿಂದ ದೇಹತ್ಯಾಗ ಮಾಡಿ ದೇವತ್ವವನ್ನು ಪಡೆದರು. ಶ್ರೇಷ್ಠವ್ಯಕ್ತಿಯಾದ ನೀನೇ ಸೀತಾಪಹಾರದ ದುಃಖವನ್ನು ಧೈರ್ಯದಿಂದ ಸಹಿಸದಿದ್ದರೆ ಸಾಮಾನ್ಯರಾದ ಪ್ರಾಕೃತ–ಜನರು ಹೇಗೆ ಸಹಿಸಿಯಾರು ? ಲೋಕ ಸ್ವಭಾವವೇ ಹೀಗೆ – ಸುಖ ದುಃಖಗಳು ಬಂದು ಹೋಗುತ್ತವೆ. ಯಾರನ್ನೂ ಬಿಟ್ಟಿಲ್ಲ. ಯಯಾತಿ ದೇವಲೋಕಕ್ಕೆ ಹೋದರೂ ಅಜ್ಞಾನವು ಅವನಿಗೆ ಮುತ್ತಿಕೊಂಡು ಕೆಳಗೆ ಬೀಳುವಂತಾಯಿತು. ನಮ್ಮ ಕುಲ ಪುರೋಹಿತರಾದ ವಸಿಷ್ಠರಿಗೆ ಒಂದೇ ದಿನ ನೂರು ಪುತ್ರರು ಹುಟ್ಟಿದರು. ವಿಶ್ವಾಮಿತ್ರ–ರಿಂದ ಒಂದೇ ದಿನ ನೂರು ಮಕ್ಕಳು ಹತರಾದರು !

ಲೋಕ ಮಾನ್ಯೆಯಾದ ಸಹನಾಶೀಲಳೂ ಸರ್ವಧಾರಿಣಿಯೂ ಆದ ಧರಣಿಯೂ ಕಂಪಗೊಳ್ಳುತ್ತದೆ ! ಜಗವನ್ನು ಬೆಳಗುವ ಸೂರ್ಯಚಂದ್ರರಿಗೆ ಕೂಡ ಗ್ರಹಣ ಸಂಭವಿಸುತ್ತದೆ ! ಇಂದ್ರಾದಿ ದೇವತೆಗಳಿಗೂ ಅಪರಾಧದಿಂದ ದುಃಖವಾಗುವುದನ್ನು ಕಂಡಿದ್ದೇವೆ. ಜನ್ಮಾಂತರ ಕರ್ಮಗಳ ನಿಮಿತ್ತವಾಗಿ ಎಲ್ಲರಿಗೂ ಸುಖದುಃಖಗಳು ಉಂಟಾಗುತ್ತವೆ.

ಸೀತೆ ಅಪಹೃತಳೇ ಆಗಿರಲಿ ಮೃತಳೇ ಆಗಿರಲಿ ಪ್ರಾಕೃತ ಪುರುಷನಂತೆ ನೀನು ಧೃತಿಗೆಡಬಾರದು. ನೀನೇ ನನಗೆ ಎಷ್ಟೋ ಬಾರಿ ತಿಳುವಳಿಕೆ ಹೇಳಿರುವಿ. ಸಾಕ್ಷಾದ್ ಬೃಹಸ್ಪತಿಯೇ ಆದರೂ ನಿನಗೆ ಬುದ್ಧಿ ಹೇಳಲು ಸಮರ್ಥನೇ ?

ಅಪಾರವಾದ ನಿನ್ನ ತಿಳುವಳಿಕೆ ಶೋಕದಿಂದ ತಾತ್ಕಾಲಿಕವಾಗಿ ಮರೆಮಾಚಿದೆ. ಅದನ್ನೆ ಉದ್ಭೋಧಿಸುತ್ತಿದ್ದೇನೆ ಅಷ್ಟೇ. ನಿನ್ನ ದಿವ್ಯ ಹಾಗು ಮಾನುಷ ಪರಾಕ್ರಮವನ್ನು ತೋರು. ಜಗವನ್ನೆ ನಾಶ ಮಾಡುವ ಕೋಪ ತರವಲ್ಲ. ಲೋಕವೇ ನಾಶವಾದರೆ ಪ್ರಜೆಗಳಿಗೆ ಆಧಾರವೆಲ್ಲಿ ? ಶತ್ರುವನ್ನು ಹುಡುಕಿ ಕೊಲ್ಲು ಅಷ್ಟೆ.

❖

ಔಚಿತ್ಯಪ್ರಬೋಧನಮ್

ತಂ ತಥಾ ಶೋಕಸಂತಪ್ತಂ ವಿಲಪಂತಮನಾಥವತ್ ।
ಮೋಹೇನ ಮಹತಾವಿಷ್ಟಂ ಪರಿದ್ಯೂನಮಚೇತನಮ್ ॥೧॥

ತತಃ ಸೌಮಿತ್ರಿರಾಶ್ವಾಸ್ಯ ಮುಹೂರ್ತಾದಿವ ಲಕ್ಷ್ಮಣಃ ।
ರಾಮಂ ಸಂಬೋಧಯಾಮಾಸ ಚರಣೌ ಚಾಭಿಪೀಡಯನ್ ॥೨॥

ಮಹತಾ ತಪಸಾ ರಾಮ ಮಹತಾ ಚಾಪಿ ಕರ್ಮಣಾ ।
ರಾಜ್ಞಾ ದಶರಥೇನಾಸಿ ಲಬ್ಧೋಽಮೃತಮಿವಾಮರೈಃ ॥೩॥

ತವ ಚೈವ ಗುಣೈರ್ಬದ್ಧಸ್ತ್ವದ್ವಿಯೋಗಾನ್ಮಹೀಪತಿಃ ।
ರಾಜಾ ದೇವತ್ವಮಾಪನ್ನೋ ಭರತಸ್ಯ ಯಥಾ ಶ್ರುತಮ್ ॥೪॥

ಸ್ಪೃಶಂತ್ಯನಿಲವದ್ರಾಜನ್ ಕ್ಷಣೇನ ನ ಭವಂತಿ ಚ ।
ಆಶ್ವಸಿಹಿ ನರಶ್ರೇಷ್ಠ ಪ್ರಾಣಿನಃ ಕಸ್ಯ ನಾಪದಃ ॥೫॥

ಯದಿ ದುಃಖಮಿದಂ ಪ್ರಾಪ್ತಂ ಕಾಕುತ್ಸ್ಥ ನ ಸಹಿಷ್ಯಸೇ ।
ಪ್ರಾಕೃತಶ್ಚಾಲ್ಪಸತ್ತ್ವಶ್ಚ ಇತರಃ ಕಃ ಸಹಿಷ್ಯತೇ ॥೬॥

ಶೋಕಸಂತಪ್ತನಾಗಿ ಅನಾಥನಂತೆ ವಿಲಪಿಸುತ್ತಿರುವ ಮಹಾ ಮೋಹದಿಂದ ಆವಿಷ್ಟನಾಗಿ ದುರ್ಬಲನು ಅಸ್ವಸ್ಥನೂ ಆದ ರಾಮನನ್ನು ಲಕ್ಷ್ಮಣನು ಮುಹೂರ್ತ-ಕಾಲ ಆಶ್ವಾಸನಗೈದು ರಾಮನ ಪಾದಗಳನ್ನು ಗಟ್ಟಿಯಾಗಿ ಒತ್ತುತ್ತ ತಿಳಿಹೇಳಿದನು-

ಮಹಾತಪಸ್ಸು ಮಹಾಪುಣ್ಯಗಳ ಪ್ರಭಾವದಿಂದ ರಾಜಾ ದಶರಥನಿಂದ ನೀನು ಉಪಲಬ್ಧನಾಗಿರುವಿ; ದೇವತೆಗಳು ಮಹಾಪ್ರಯತ್ನ ದೈವಾನುಗ್ರಹಗಳಿಂದ ಅಮೃತವನ್ನು ಪಡೆದಂತೆ.

ಭರತನಿಂದ ಕೇಳಿದಂತೆ ನಿನ್ನ ಗುಣಾಕರ್ಷಣೆಯ ಬಂಧನಕ್ಕೆ ಒಳಗಾದ ದಶರಥ ರಾಜನು ನಿನ್ನ ವಿಯೋಗದಿಂದ ಮರಣ ಹೊಂದಿ ದೇವತ್ವವನ್ನು ಪಡೆದ.

ಕಾಕುತ್ಸ್ಥನೇ ! ಸದ್ಯ ಒದಗಿ ಬಂದಿರುವ ಮಹಾದುಃಖವನ್ನು ನೀನೇ ಸಹಿಸಿ-ಕೊಳ್ಳದಿದ್ದರೆ ಪಾಕೃತರಾದ ದುರ್ಬಲಜನರು ದುಃಖವನ್ನು ಎದುರಿಸುವುದು ಹೇಗೆ?

ದುಃಖಿತೋ ಹಿ ಭವಾನ್ ಲೋಕಾಂಸ್ತೇಜಸಾ ಯದಿ ಧಕ್ಷ್ಯತೇ ।
ಆರ್ತಾಃ ಪ್ರಜಾ ನರವ್ಯಾಘ್ರ ಕ್ವ ನು ಯಾಸ್ಯಂತಿ ನಿರ್ವೃತಿಮ್ ॥೭॥

ದುಃಖಿತನಾದ ನೀನು ನಿನ್ನ ತೇಜಸ್ಸಿನಿಂದ ಲೋಕವನ್ನು ಸುಟ್ಟು ಹಾಕಿದರೆ ಆರ್ತರಾದ ಪ್ರಜೆಗಳು ಎಲ್ಲಿ ನೆಮ್ಮದಿಯನ್ನು ಕಾಣಲು ಸಾಧ್ಯ ?

ಲೋಕಸ್ವಭಾವ ಏವೈಷ ಯಯಾತಿರ್ನಹುಷಾತ್ಮಜಃ ।
ಗತಃ ಶಕ್ರೇಣ ಸಾಲೋಕ್ಯಮನಯಸ್ತಂ ಸಮಸ್ಪೃಶತ್ ॥೮॥

ಮಹರ್ಷಿರ್ಯೋ ವಸಿಷ್ಠಸ್ತು ಯಃ ಪಿತುರ್ನಃ ಪುರೋಹಿತಃ ।
ಅಹ್ನಾ ಪುತ್ರಶತಂ ಜಜ್ಞೇ ತಥೈವಾಸ್ಯ ಪುನರ್ಹತಮ್ ॥೯॥

ಯಾ ಚೇಯಂ ಜಗತಾಂ ಮಾತಾ ದೇವೀ ಲೋಕನಮಸ್ಕೃತಾ ।
ಅಸ್ಯಾಶ್ಚ ಚಲನಂ ಭೂಮೇರ್ದೃಶ್ಯತೇ ಕೋಸಲೇಶ್ವರ ॥೧೦॥

ಯೌ ಧರ್ಮೌ ಜಗತಾಂ ನೇತ್ರೇ ಯತ್ರ ಸರ್ವಂ ಪ್ರತಿಷ್ಠಿತಮ್ ।
ಆದಿತ್ಯಚಂದ್ರೌ ಗ್ರಹಣಮಭ್ಯುಪೇತೌ ಮಹಾಬಲೌ ॥೧೧॥

ಸುಮಹಾಂತ್ಯಪಿ ಭೂತಾನಿ ದೇವಾಶ್ಚ ಪುರುಷರ್ಷಭ ।
ನ ದೈವಸ್ಯ ಪ್ರಮುಂಚಂತಿ ಸರ್ವಭೂತಾನಿ ದೇಹಿನಃ ॥೧೨॥

ಶಕ್ರಾದಿಷ್ವಪಿ ದೇವೇಷು ವರ್ತಮಾನೌ ನಯಾನಯೌ ।
ಶ್ರೂಯೇತೇ ನರಶಾರ್ದೂಲ ನ ತ್ವಂ ವ್ಯಥಿತುಮರ್ಹಸಿ ॥೧೩॥

ನಷ್ಟಾಯಾಮಪಿ ವೈದೇಹ್ಯಾಂ ಹೃತಾಯಾಮಪಿ ರಾಘವ ।
ಶೋಚಿತುಂ ನಾರ್ಹಸೇ ವೀರ ಯಥಾನ್ಯಃ ಪ್ರಾಕೃತಸ್ತಥಾ ॥೧೪॥

ತ್ವದ್ವಿಧಾ ನ ಹಿ ಶೋಚಂತಿ ಸತತಂ ಸತ್ಯದರ್ಶಿನಃ ।
ಸುಮಹತ್ಸ್ವಪಿ ಕೃಚ್ಛ್ರೇಷು ರಾಮಾನಿರ್ವಿಣ್ಣದರ್ಶನಾಃ ॥೧೫॥

ತತ್ತ್ವತೋ ಹಿ ನರಶ್ರೇಷ್ಠ ಬುದ್ಧ್ಯಾ ಸಮನುಚಿಂತಯ ।
ಬುದ್ಧ್ಯಾ ಯುಕ್ತಾ ಮಹಾಪ್ರಾಜ್ಞಾ ವಿಜಾನಂತಿ ಶುಭಾಶುಭೇ ॥೧೬॥

ಲೋಕಸ್ವಭಾವವೇ ಹೀಗೆ. ನಹುಷ ಪುತ್ರನಾದ ಯಯಾತಿಯು ಇಂದ್ರನ ಸಮಾನ ಲೋಕವನ್ನೆ ಪಡೆದರು ಆಲ್ಲಿ ಅವನಿಗೆ ಅಜ್ಞಾನ ಸ್ಪರ್ಶವಾಯಿತು !

ನಮ್ಮ ತಂದೆಯ ಪುರೋಹಿತರಾದ ಮಹರ್ಷಿ ವಸಿಷ್ಠರೂ ಹಾಗೆ ! ಅವರಿಗೆ ಒಂದೇ ದಿನ ನೂರು ಪುತ್ರರು ಹುಟ್ಟಿದರು. ಹಾಗೆಯೇ ವಿಶ್ವಾಮಿತ್ರರಿಂದ ನೂರು ಮಕ್ಕಳು ಒಂದೇ ದಿನ ಹತರಾದರು !

ಜಗದ ತಾಯಿ ಲೋಕನಮಸ್ಕೃತಳು ಆದ ಈ ಭೂಮಿಗೂ ಕಂಪನ ಉಂಟಾಗುತ್ತದೆ !

ಸತ್ಯಪ್ರತಿಜ್ಞನೇ ! ಧರ್ಮಪ್ರವರ್ತಕರು ವಿಶ್ವದ ನೇತಾರರೂ ಆದ, ವಿಶ್ವವೆಲ್ಲ ಯಾರಲ್ಲಿ ಪ್ರತಿಷ್ಠಿತವಾಗಿದೆ – ಅಂತಹ ಮಹಾಬಲರಾದ ಸೂರ್ಯ ಚಂದ್ರರೂ ಗ್ರಹಣಕ್ಕೆ ಒಳಗಾಗುವರು !

ದೊಡ್ಡ ಪ್ರಾಣಿಗಳೇ ಆಗಿರಲಿ ದೇವತೆಗಳೇ ಆಗಿರಲಿ ಯಾರೂ ಕೂಡ ದೈವಸಂಕಲ್ಪವನ್ನು ಮೀರಲಾರರು.

ನರಶಾರ್ದೂಲನೇ ! ಶಕ್ರಾದಿ ದೇವತೆಗಳಲ್ಲಿಯೂ ನೀತಿ –ಅನೀತಿಗಳು ಕಂಡು ಬರುತ್ತವೆ. ನೀನು ಶೋಕಿಸುವುದು ತರವಲ್ಲ.

ವೈದೇಹಿಯು ಕಣ್ಮರೆಯಾಗಿದ್ದರೂ ಮೃತಳೇ ಆಗಿದ್ದರೂ ಅನಘ ರಾಮ ! ನೀನು ಪ್ರಾಕೃತಪುರುಷನಂತೆ ಶೋಕಿಸುವುದು ಸರಿಯಲ್ಲ.

ರಾಮ ! ಸತ್ಯವನ್ನು ಅರಿತ ನಿನ್ನಂತಹವರು ಎಂದೂ ಶೋಕಪಡಲು ಅರ್ಹರಲ್ಲ. ಬಹಳವಾದ ಕಷ್ಟಗಳು ಬಂದಾಗ್ಯೂ ಜ್ಞಾನಿಗಳು ದುಃಖಕ್ಕೆ ಒಳಗಾಗುವುದಿಲ್ಲ.

ನರಶ್ರೇಷ್ಠನೇ ! ವಿವೇಕದಿಂದ ತಾತ್ವಿಕವಾಗಿ ವಿಚಾರಮಾಡು. ಮಹಾಪ್ರಾಜ್ಞರು ತಮ್ಮ ಬುದ್ಧಿಯಿಂದ ಶುಭಾಶುಭಗಳನ್ನು ಅರಿಯುವರು.

ಅದೃಷ್ಟಗುಣದೋಷಾಣಾಮಧ್ರುವಾಣಾಂ ಚ ಕರ್ಮಣಾಮ್ ।
ನಾಂತರೇಣ ಕ್ರಿಯಾಂ ತೇಷಾಂ ಫಲಮಿಷ್ಟಂ ಪ್ರವರ್ತತೇ ॥೧೭॥

ತ್ವಮೇವ ಹಿ ಪುರಾ ರಾಮ ಮಾಮೇವಂ ಬಹುಶೋಽನ್ವಶಾಃ ।
ಅನುಶಿಷ್ಯಾದ್ಧಿ ಕೋ ನ ತ್ವಾಮಪಿ ಸಾಕ್ಷಾದ್ಬೃಹಸ್ಪತಿಃ ॥೧೮॥

ಬುದ್ಧಿಶ್ಚ ತೇ ಮಹಾಪ್ರಾಜ್ಞ ದೇವೈರಪಿ ದುರನ್ವಯಾ ।
ಶೋಕೇನಾಭಿಪ್ರಸುಪ್ತಂ ತೇ ಜ್ಞಾನಂ ಸಂಬೋಧಯಾಮ್ಯಹಮ್॥೧೯॥

ದಿವ್ಯಂ ಚ ಮಾನುಷಂ ಚ ತ್ವಮಾತ್ಮನಶ್ಚ ಪರಾಕ್ರಮಮ್ ।
ಇಕ್ಷ್ವಾಕುವೃಷಭಾವೇಕ್ಷ್ಯ ಯತಸ್ವ ದ್ವಿಷತಾಂ ವಧೇ ॥೨೦॥

ಕಿಂ ತೇ ಸರ್ವವಿನಾಶೇನ ಕೃತೇನ ಪುರುಷರ್ಷಭ ।
ತಮೇವ ತ್ವಂ ರಿಪುಂ ಪಾಪಂ ವಿಜ್ಞಾಯೋದ್ಧರ್ತುಮರ್ಹಸಿ ॥೨೧॥

ಇಂದಿನ ಸುಖದುಃಖಗಳಿಗೆ ಕಾರಣವಾದ ಗುಣದೋಷಗಳೇನು ? ಜನ್ಮಾಂತರದ ಪುಣ್ಯ ಪಾಪಕರ್ಮಗಳೇನು ? ಎನ್ನುವುದು ಪ್ರತ್ಯಕ್ಷವಾಗಿ ಕಾಣಲು ನಿಶ್ಚಯಿಸಲು ಸಾಧ್ಯವಿಲ್ಲ.

ಹಿಂದಿನ ಶುಭಾಶುಭಕರ್ಮಗಳಿಲ್ಲದೆ ಇಂದು ಸುಖದುಃಖಗಳುಂಟಾಗಲು ಸಾಧ್ಯವಿಲ್ಲ. ಅಂದ ಮೇಲೆ ಸುಃಖವೇಕೆ ?

ಹಿಂದೆ ನೀನೇ ಅನೇಕಬಾರಿ ನನಗೆ ಹೀಗೆ ವಿವೇಕ ಹೇಳಿದ್ದಿ. ಸಾಕ್ಷಾದ್ ಬೃಹಸ್ಪತಿ-ಯೂ ಕೂಡ ನಿನಗೆ ಬುದ್ಧಿ ಹೇಳಲು ಸಮರ್ಥನಲ್ಲ. ಅಂದ ಮೇಲೆ ನಾನು ಏತರವ?

ಮಹಾಪ್ರಾಜ್ಞ ! ದೇವತೆಗಳೂ ನಿನ್ನ ವಿವೇಕದ ಹರವನ್ನು ಅರಿಯಲಾರರು. ಪ್ರಕೃತದಲ್ಲಿ ಶೋಕದಿಂದ ಸ್ವಲ್ಪ ಸುಪ್ತವಾದಂತಿರುವ ನಿನ್ನ ಪ್ರಜ್ಞೆಯನ್ನು ಜಾಗೃತ-ಗೊಳಿಸುತ್ತಿದ್ದೇನಷ್ಟೆ.

ನಿನ್ನ ದಿವ್ಯ ಹಾಗೂ ಮಾನುಷ ಪರಾಕ್ರಮವನ್ನು ನೀನು ವಿವೇಚಿಸಿಕೊಂಡು ಶತ್ರುಗಳ ಸಂಹಾರದ ವಿಷಯದಲ್ಲಿ ಪ್ರಯತ್ನಿಸು.

ಪುರುಷಶ್ರೇಷ್ಠನೇ ! ಸರ್ವವನ್ನು ನಾಶ ಮಾಡುವುದರಿಂದ ನಿನಗೇನು ಪ್ರಯೋಜನ ? ಪಾಪಿ ಶತ್ರುವನ್ನು ಪತ್ತೆ ಹಚ್ಚಿ ಅವನನ್ನು ಮಾತ್ರ ಸಂಹರಿಸಲು ಅರ್ಹನಾಗಿರುವಿ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತಾರನೇ ಸರ್ಗ ಮುಗಿಯಿತು.

❖

ಸಪ್ತಷಷ್ಟಿತಮಃ ಸರ್ಗಃ

ಕಥಾಸಾರಾಂಶ– ಅಣ್ಣನಾದರೂ ರಾಮಚಂದ್ರನು ಲಕ್ಷ್ಮಣನ ಸಾರವತ್ತಾದ ಮಾತನ್ನು ಗ್ರಹಿಸಿದನು. ತನ್ನ ಕೋಪವನ್ನು ನಿಯಂತ್ರಿಸಿಕೊಂಡು ಹೆಗಲಿನಿಂದ ಬಿಲ್ಲನ್ನು ಕೆಳಗಿಳಿಸಿ ಲಕ್ಷ್ಮಣನಿಗೆ ಹೇಳಿದನು – ಲಕ್ಷ್ಮಣ ! ಮುಂದೇನು ಮಾಡೋಣ ? ಎಲ್ಲಿಗೆ ಹೋಗೋಣ ? ಯಾವ ಉಪಾಯದಿಂದ ಸೀತೆಯನ್ನು ನೋಡಬಹುದಾಗಿದೆ ? ಹೇಳು.

'ಅಣ್ಣ ! ನೀನು ಜನಸ್ಥಾನದಲ್ಲಿ ನನ್ನೊಂದಿಗೆ ಸೀತೆಯನ್ನು ಹುಡುಕು. ಇದು ದುರ್ಗಮ ಪ್ರದೇಶ ಬಗೆಬಗೆಯ ಗುಹೆಗಳಿವೆ ಇಲ್ಲಿ '– ಲಕ್ಷ್ಮಣ ಹೇಳಿದ.

ಸೀತಾಪಹಾರದಿಂದ ಕ್ರುದ್ಧನಾಗಿದ್ದ ರಾಮ ಬಿಲ್ಲಿನಲ್ಲಿ ತೀಕ್ಷ್ಣಬಾಣವನ್ನು ಹೂಡಿ ಕಾಡಿನಲ್ಲಿ ಸಂಚರಿಸಿದನು.

ಆದೇ ದಾರಿಯಲ್ಲಿ ನೆಲದಲ್ಲಿ ಬಿದ್ದಿದ್ದ ರಕ್ತಸಿಕ್ತವಾದ ಜಟಾಯುವನ್ನು ರಾಮ ಕಂಡನು. ಪರ್ವತಾಕಾರದ ಈ ಪಕ್ಷಿಯೇ ನನ್ನ ಸೀತೆಯನ್ನು ತಿಂದಿರಬೇಕು. ಈ ರಕ್ಕಸ ಹಕ್ಕಿಯನ್ನು ಕೊಲ್ಲುತ್ತೇನೆಂದು ಪಕ್ಷಿಯ ಬಳಿಗೆ ಧಾವಿಸಿದನು.

ಆಗ ಆ ಜಟಾಯು ನೊರೆ ನೊರೆಯಾದ ರಕ್ತವನ್ನು ಕಾರಿಕೊಳ್ಳುತ್ತ ರಾಮನಿಗೆ ದೀನವಾಗಿ ಹೇಳಿತು – ರಾಮ ನೀನು ಹುಡುಕುತ್ತಿರುವ ಸೀತೆಯನ್ನು ಮತ್ತು ನನ್ನ ಪ್ರಾಣವನ್ನು ರಾವಣ ಅಪಹರಿಸಿದನು. ಸೀತೆಯನ್ನು ಅಪಹರಿಸಿ ಹೊರಟಿದ್ದ ರಾವಣ– ನನ್ನು ಕಣ್ಣಾರೆ ಕಂಡೆ. ಅವನೊಂದಿಗೆ ಹೋರಾಡಿದೆ. ಇದೋ ಈ ರಥ ಬಾಣ ಬಿಲ್ಲು ಸಾರಥಿಗಳು ರಾವಣನಿಗೆ ಸೇರಿದ್ದು. ನಾನೇ ನಾಶಮಾಡಿದ್ದು. ಆಯಾಸಗೊಂಡ ನನ್ನ ರೆಕ್ಕೆಗಳನ್ನು ರಾವಣ ಕತ್ತರಿಸಿದ. ಸೀತೆಯ ಜೊತೆಗೆ ಮತ್ತೆ ಆಗಸದಲ್ಲಿ ಪಯಣಿಸಿದ. ಮೊದಲೇ ರಾವಣನಿಂದ ಹತನಾದ ನನ್ನನ್ನು ನೀನು ಕೊಲ್ಲುವುದು ತರವಲ್ಲ.

ಹಕ್ಕಿಯ ಮಾತು ಕೇಳಿ ರಾಮನ ಮನಸ್ಸು ಕಣ್ಣುಗಳು ಮಿಡಿದವು. ಕಂಬನಿ ಸುರಿಸುತ್ತ ಹಕ್ಕಿಯನ್ನು ಅಪ್ಪಿ ತಂದೆಯನ್ನೆಂಬಂತೆ ನೇವರಿಸುತ್ತ ನೆಲದಲ್ಲುರುಳಿ ಅತ್ತ ರಾಮ.

ಲಕ್ಷ್ಮಣನಿಗೆ ಹೇಳಿದ – ನೋಡು, ನನ್ನ ದೌರ್ಭಾಗ್ಯ ! ರಾಜ್ಯ ಕೈ ತಪ್ಪಿತು. ಕಾಡಿನಲ್ಲಿ ವಾಸವಾಯಿತು. ಸೀತೆಯು ಅಪಹೃತಳಾದಳು. ಈ ಹಕ್ಕಿಯೂ ಮೃತವಾಯಿತು. ಸಮುದ್ರಕ್ಕೆ ಕಾಲಿಟ್ಟರೆ ಅದು ಒಣಗಿ ಹೋಗುವುದು ! ನನ್ನಂತಹ ಭಾಗ್ಯಹೀನ ಮತ್ತೊಬ್ಬನಿಲ್ಲ.

ಹೀಗೆ ಬಹುವಾಗಿ ಪರಿತಪಿಸುತ್ತ ಜಟಾಯುವನ್ನು ಪಿತೃಸ್ನೇಹದಿಂದ ಸ್ಪರ್ಶ ಮಾಡಿದನು. ರಕ್ತದಲ್ಲಿ ತೋಯ್ದ ಹಕ್ಕಿಯನ್ನು ಅಪ್ಪಿ 'ನನ್ನ ಸೀತೆ ಎಲ್ಲಿ' ? ಎಂದು ಪರಿತಪಿಸುತ್ತ ಭೂಮಿಯಲ್ಲಿ ಕುಸಿದನು.

❖

ಗೃಧ್ರರಾಜದರ್ಶನಮ್

ಪೂರ್ವಜೋऽಪ್ಯುಕ್ತಮಾತ್ರಸ್ತು ಲಕ್ಷ್ಮಣೇನ ಸುಭಾಷಿತಮ್ ।
ಸಾರಗ್ರಾಹೀ ಮಹಾಸಾರಂ ಪ್ರತಿಜಗ್ರಾಹ ರಾಘವಃ ॥೧॥

ಸಂನಿಗೃಹ್ಯ ಮಹಾಬಾಹುಃ ಪ್ರವೃದ್ಧಂ ರೋಷಮಾತ್ಮನಃ ।
ಅವಷ್ಟಭ್ಯ ಧನುಶ್ಚಿತ್ರಂ ರಾಮೋ ಲಕ್ಷ್ಮಣಮಬ್ರವೀತ್ ॥೨॥

ಕಿಂ ಕರಿಷ್ಯಾವಹೇ ವತ್ಸ ಕ್ವ ವಾ ಗಚ್ಛಾವ ಲಕ್ಷ್ಮಣ ।
ಕೇನೋಪಾಯೇನ ಪಶ್ಯಾವ ಸೀತಾಮಿತಿ ವಿಚಿಂತಯ ॥೩॥

ಹಿರಿಯ ಅಣ್ಣನಾಗಿದ್ದರೂ ರಾಮ ಸಾರಗ್ರಾಹಿಯಾದುದರಿಂದ ಲಕ್ಷ್ಮಣನು ಹೇಳಿದ ಸಾರವತ್ತಾದ ಮಾತನ್ನು ಒಪ್ಪಿದನು.

ಮಹಾಬಾಹುರಾಮನು ತನ್ನ ಕೋಪವನ್ನು ನಿಯಂತ್ರಿಸಿಕೊಂಡು ಆಶ್ಚರ್ಯ-ಕರವಾದ ತನ್ನ ಬಿಲ್ಲನ್ನು ಕೆಳಗಿಳಿಸಿ ರಾಮನು ಲಕ್ಷ್ಮಣನಿಗೆ ಹೀಗೆ ಹೇಳಿದನು.

ವತ್ಸ ! ಲಕ್ಷ್ಮಣ ! ನಾವು ಮುಂದೇನು ಮಾಡೋಣ ? ಎಲ್ಲಿಗೆ ಹೋಗೋಣ ? ಯಾವ ಉಪಾಯದಿಂದ ಸೀತೆಯನ್ನು ಕಾಣಬಲ್ಲೆ ? ಎಂದು ವಿಚಾರ ಮಾಡು.

ತಂ ತಥಾ ಪರಿತಾಪಾರ್ತಂ ಲಕ್ಷ್ಮಣೋ ರಾಮಮಬ್ರವೀತ್ ।
ಇದಮೇವ ಜನಸ್ಥಾನಂ ತ್ವಮನ್ವೇಷಿತುಮರ್ಹಸಿ ॥೪॥

ರಾಕ್ಷಸೈರ್ಬಹುಭಿಃ ಕೀರ್ಣಂ ನಾನಾದ್ರುಮಲತಾಯುತಮ್ ।
ಸಂತೀಹ ಗಿರಿದುರ್ಗಾಣಿ ನಿರ್ದರಾಃ ಕಂದರಾಣಿ ಚ ॥೫॥

ಗುಹಾಶ್ಚ ವಿವಿಧಾ ಘೋರಾ ನಾನಾಮೃಗಗಣಾಕುಲಾಃ ।
ಆವಾಸಾಃ ಕಿಂನರಾಣಾಂ ಚ ಗಂಧರ್ವಭವನಾನಿ ಚ ॥೬॥

ತಾನಿ ಯುಕ್ತೋ ಮಯಾ ಸಾರ್ಧಂ ಸಮನ್ವೇಷಿತುಮರ್ಹಸಿ ।
ತ್ವದ್ವಿಧಾ ಬುದ್ಧಿಸಂಪನ್ನಾ ಮಹಾತ್ಮಾನೋ ನರರ್ಷಭಾಃ ॥೭॥

ಆಪತ್ಸು ನ ಪ್ರಕಂಪಂತೇ ವಾಯುವೇಗೈರಿವಾಚಲಾಃ ।
ಇತ್ಯುಕ್ತಸ್ತದ್ವನಂ ಸರ್ವಂ ವಿಚಚಾರ ಸಲಕ್ಷ್ಮಣಃ ॥೮॥

ಕ್ರುದ್ಧೋ ರಾಮಃ ಶರಂ ಘೋರಂ ಸಂಧಾಯ ಧನುಷಿ ಕ್ಷುರಮ್ ।

ಹಾಗೆ ಪರಿತಾಪಗೊಂಡ ರಾಮನನ್ನು ಕುರಿತು ಲಕ್ಷ್ಮಣನು ಹೇಳಿದನು – ಈ ಜನಸ್ಥಾನವನ್ನೆ ನೀನು ಹುಡುಕಬೇಕು. ಈ ತಾಣ ಬಹುರಕ್ಕಸರಿಂದ ತುಂಬಿದೆ. ನಾನಾ ಮರಬಳ್ಳಿಗಳಿಂದ ಕೂಡಿದೆ.

ಇಲ್ಲಿ ಅನೇಕ ಗಿರಿ ದುರ್ಗಗಳಿವೆ. ಒಡೆದ ಬಂಡೆಗಳು, ಬಂಡೆಗಳ ಸಂದು-ಗೊಂದುಗಳಿವೆ. ಬಗೆಬಗೆಯ ದೈವ ನಿರ್ಮಿತ ಗುಹೆಗಳಿವೆ. ಅವು ಘೋರವಾಗಿವೆ. ನಾನಾ ಮೃಗಗಣಗಳಿಂದ ತುಂಬಿವೆ.

ಕಿಂನರ ವಾಸಸ್ಥಾನಗಳು ಗಂಧರ್ವಭವನಗಳೂ ಇವೆ. ಅವುಗಳನ್ನೆಲ್ಲ ನನ್ನೊಂದಿಗೆ ನೀನು ಹುಡುಕಲು ಅರ್ಹನಾಗಿರುವಿ.

ನರಶ್ರೇಷ್ಠನೇ ! ವಾಯುವೇಗಗಳಿಂದ ಪರ್ವತಗಳು ಕಂಪಿಸದಿರುವಂತೆ ನಿನ್ನಂತಹ ಬುದ್ಧಿ ಸಂಪನ್ನ ಮಹಾತ್ಮರು ಆಪತ್ತುಗಳಲ್ಲಿ ಹೆದರಿ ನಡುಗುವುದಿಲ್ಲ.

ಹೀಗೆ ಲಕ್ಷ್ಮಣ ಹೇಳಿದ ಬಳಿಕ ಅವನಿಂದ ಕೂಡಿಕೊಂಡು ಕ್ರುದ್ಧನಾದ ರಾಮನು ಬಿಲ್ಲಿನಲ್ಲಿ ಹರಿತವಾದ ಘೋರ ಬಾಣವನ್ನು ಜೋಡಿಸಿ ವನವನ್ನೆಲ್ಲ ಸಂಚರಿಸಿದನು.

ತತಃ ಪರ್ವತಕೂಟಾಭಂ ಮಹಾಭಾಗಂ ದ್ವಿಜೋತ್ತಮಮ್ ॥೯॥

ದದರ್ಶ ಪತಿತಂ ಭೂಮೌ ಕ್ಷತಜಾರ್ದ್ರಂ ಜಟಾಯುಷಮ್ ।
ತಂ ದೃಷ್ಟ್ವಾ ಗಿರಿಶೃಂಗಾಭಂ ರಾಮೋ ಲಕ್ಷ್ಮಣಮಬ್ರವೀತ್ ॥೧೦॥

ಅನೇನ ಸೀತಾ ವೈದೇಹೀ ಭಕ್ಷಿತಾ ನಾತ್ರ ಸಂಶಯಃ ।
ಗೃಧ್ರರೂಪಮಿದಂ ವ್ಯಕ್ತಂ ರಕ್ಷೋ ಭ್ರಮತಿ ಕಾನನಮ್ ॥೧೧॥

ಭಕ್ಷಯಿತ್ವಾ ವಿಶಾಲಾಕ್ಷೀಮಾಸ್ತೇ ಸೀತಾಂ ಯಥಾಸುಖಮ್ ।
ಏನಂ ವಧಿಷ್ಯೇ ದೀಪ್ತಾಸ್ಯೈಃ ಶರ್ಘೋರೈರ್ಬಾಣೈರಜಿಹ್ಮಗೈಃ ॥೧೨॥

ಇತ್ಯುಕ್ತ್ವಾ ಭೃಪತದ್ಗೃಧ್ರಂ ಸಂಧಾಯ ಧನುಷಿ ಕ್ಷುರಮ್ ।
ಕ್ರುದ್ಧೋ ರಾಮಃ ಸಮುದ್ರಾಂತಾಂ ಚಾಲಯನ್ನಿವ ಮೇದಿನೀಮ್॥೧೩

ಬಳಿಕ ಪರ್ವತ ರಾಶಿಯಂತಿದ್ದ ಗಾಯದ ರಕ್ತದಿಂದ ತೋಯ್ದ ನೆಲದಲ್ಲಿ ಬಿದ್ದಿದ್ದ ಮಹಾಭಾಗ್ಯಶಾಲಿ ಜಟಾಯುಪಕ್ಷಿಯನ್ನು ಶ್ರೀರಾಮ ಕಂಡ.

ಗಿರಿಶೃಂಗದಂತಿದ್ದ ಆ ಹಕ್ಕಿಯನ್ನು ಕಂಡು ರಾಮ ಲಕ್ಷ್ಮಣನಿಗೆ ಹೇಳಿದನು – ಈ ಹದ್ದು ಸೀತೆಯನ್ನು ತಿಂದಿದೆ; ಸಂಶಯವಿಲ್ಲ. ಈ ಕಾಡಿನಲ್ಲಿ ಹದ್ದಿನರೂಪದ ಈ ರಕ್ಕಸ ನನ್ನ ಸೀತೆಯನ್ನು ತಿಂದು ಸುಖವಾಗಿ ಬಿದ್ದುಕೊಂಡಿದೆ. ಪ್ರಜ್ವಲಿಸುವ ತುದಿಯಿರುವ ಘೋರಬಾಣಗಳಿಂದ ಈ ಹಕ್ಕಿಯನ್ನು ಕೊಲ್ಲುತ್ತೇನೆ.

ಹೀಗೆ ಹೇಳಿ ಬಿಲ್ಲಿನಲ್ಲಿ ಬಾಣವನ್ನು ಜೋಡಿಸಿ ಕ್ರುದ್ಧನಾದ ರಾಮ ಸಮುದ್ರಾಂತ ಮೇದಿನಿಯನ್ನೆ ನಡುಗಿಸುವಂತೆ ಗೃಧ್ರನೆಡೆಗೆ ಧಾವಿಸಿದ.

ತಂ ದೀನಂ ದೀನಯಾ ವಾಚಾ ಸಫೇನಂ ರುಧಿರಂ ವಮನ್ ।
ಅಭ್ಯಭಾಷತ ಪಕ್ಷೀ ತು ರಾಮಂ ದಶರಥಾತ್ಮಜಮ್ ॥೧೪॥

ಯಾಮೋಷಧಿಮಿವಾಯುಷ್ಮನ್ನನ್ವೇಷಸಿ ಮಹಾವನೇ ।
ಸಾ ದೇವೀ ಮಮ ಚ ಪ್ರಾಣಾ ರಾವಣೇನೋಭಯಂ ಹೃತಮ್ ॥೧೫

ತ್ವಯಾ ವಿರಹಿತಾ ದೇವೀ ಲಕ್ಷ್ಮಣೇನ ಚ ರಾಘವ ।
ಹ್ರಿಯಮಾಣಾ ಮಯಾ ದೃಷ್ಟಾ ರಾವಣೇನ ಬಲೀಯಸಾ ॥೧೬॥

ಸೀತಾಮಭ್ಯವಪನ್ನೋಽಹಂ ರಾವಣಶ್ಚ ರಣೇ ಮಯಾ ।
ವಿಧ್ವಂಸಿತರಥಚ್ಛತ್ರಃ ಪಾತಿತೋ ಧರಣೀತಲೇ ॥೧೭॥

ಏತದಸ್ಯ ಧನುರ್ಭಗ್ನಮೇತೇ ಚಾಸ್ಯ ಶರಾಸ್ತಥಾ ।
ಅಯಮಸ್ಯ ರಣೇ ರಾಮ ಭಗ್ನಃ ಸಾಂಗ್ರಾಮಿಕೋ ರಥಃ ॥೧೮॥

ಅಯಂ ತು ಸಾರಥಿಸ್ತಸ್ಯ ಮತ್ಪಕ್ಷನಿಹತೋ ಭುವಿ ।
ಪರಿಶ್ರಾಂತಸ್ಯ ಮೇ ಪಕ್ಷೌ ಛಿತ್ತ್ವಾ ಖಡ್ಗೇನ ರಾವಣಃ ॥೧೯॥

ಸೀತಾಮಾದಾಯ ವೈದೇಹೀಮುತ್ಪಪಾತ ವಿಹಾಯಸಮ್ ।
ರಕ್ಷಸಾ ನಿಹತಂ ಪೂರ್ವಂ ನ ಮಾಂ ಹಂತುಂ ತ್ವಮರ್ಹಸಿ ॥೨೦॥

ದಶರಥನಂದನನಾದ ದೀನ ರಾಮನನ್ನು ಕುರಿತು ಪಕ್ಷಿಯು ನೊರೆಯಿಂದ ಕೂಡಿದ ರಕ್ತವನ್ನು ಕಾರುತ್ತ ದೈನ್ಯದಿಂದ ಹೇಳಿತು.

ಮಹಾವನದಲ್ಲಿ ಔಷಧ ಸಸ್ಯವನ್ನು ಹುಡುಕುವಂತೆ ಯಾವ ಸೀತೆಯನ್ನು ಹುಡುಕುತ್ತಿರುವಂತೆಯೇ ಆ ಸೀತಾದೇವೀ ಹಾಗೂ ನನ್ನ ಪ್ರಾಣಗಳು ರಾವಣನಿಂದ ಅಪಹೃತವಾಗಿವೆ !

ಪ್ರಬಲ ರಾವಣನಿಂದ ನೀನು ಹಾಗೂ ಲಕ್ಷ್ಮಣನಿಂದ ರಹಿತಳಾದ ಸೀತೆಯು ಅಪಹರಿಸಲ್ಪಟ್ಟದ್ದನ್ನು ನಾನು ನೋಡಿದೆ.

ಸೀತೆಯ ಸಹಾಯಕ್ಕಾಗಿ ಧಾವಿಸಿದ ನಾನು ರಾವಣನೊಂದಿಗೆ ಹೋರಾಡಿ ಅವನ ರಥವನ್ನು ಧ್ವಂಸಗೊಳಿಸಿ ಅವನನ್ನು ಭೂತಲದಿ ಬೀಳಿಸಿದೆ. ಇದೋ ! ಇದು ಅವನ ತುಂಡಾದ ಬಿಲ್ಲು. ಇದು ಅವನ ಬತ್ತಳಿಕೆ. ಇದೋ ಇದು ಧ್ವಂಸಗೊಂಡ ಅವನ ಯುದ್ಧರಥ ! ಇವನು ಯುದ್ಧದಲ್ಲಿ ನನ್ನ ರೆಕ್ಕೆಯ ಹೊಡೆತಕ್ಕೆ ಬಲಿಯಾದ ಸಾರಥಿ !

ಹೋರಾಡಿ ದಣಿದ ನನ್ನ ರೆಕ್ಕೆಗಳನ್ನು ರಾವಣನು ತುಂಡರಿಸಿದ. ಸೀತೆಯನ್ನು ತೆಗೆದುಕೊಂಡು ಆಗಸದಲ್ಲಿ ಹಾರಿ ಮುಂದೆ ಸಾಗಿದ.

ಮೊದಲೆ ರಾಕ್ಷಸ ರಾವಣನಿಂದ ಪೀಡಿತನಾದ ನನ್ನನ್ನು ನೀನು ಕೊಲ್ಲುವುದು ತರವಲ್ಲ.

ರಾಮಸ್ತಸ್ಯ ತು ವಿಜ್ಞಾಯ ಬಾಷ್ಪಪೂರ್ಣಮುಖಸ್ತದಾ ।
ದ್ವಿಗುಣೀಕೃತತಾಪಾರ್ತಃ ಸೀತಾಸಕ್ತಾಂ ಪ್ರಿಯಾಂ ಕಥಾಮ್ ॥೨೧॥

ಶ್ರುತ್ವಾ ಜಟಾಯುಷೋ ವಾಕ್ಯಂ ರಾಮಃ ಸೌಮಿತ್ರಿಣಾ ಸಹ।
ಗೃಧ್ರರಾಜಂ ಪರಿಷ್ವಜ್ಯ ಪರಿತ್ಯಜ್ಯ ಮಹದ್ಧನುಃ ॥೨೨॥

ನಿಪಪಾತಾವಶೋ ಭೂಮೌ ರುರೋದ ಸಹಲಕ್ಷ್ಮಣಃ ।
ಏಕಮೇಕಾಯನೇ ದುರ್ಗೇ ನಿಃಶ್ವಸಂತಂ ಕಥಂಚನ ॥೨೩॥

ಸಮೀಕ್ಷ್ಯ ದುಃಖಿತತರೋ ರಾಮಃ ಸೌಮಿತ್ರಿಮಬ್ರವೀತ್ ।

ಜಟಾಯುವಿನ ಮುಖದಿಂದ ರಾವಣನಿಂದಾದ ಸೀತಾಪಹಾರದ ಸುದ್ದಿ ಕೇಳಿ ಎರಡು ಪಟ್ಟು ತಾಪದಿಂದ ಆರ್ತನಾದ ಶ್ರೀರಾಮ.

ಮಹಾಧನುಸ್ಸನ್ನು ಕೆಳಗಿಟ್ಟು ಗೃಧ್ರರಾಜನನ್ನು ಅಪ್ಪಿಕೊಂಡು ಅವಶನಾಗಿ ನೆಲಕ್ಕೆ ಕುಸಿದು ಲಕ್ಷ್ಮಣನೊಂದಿಗೆ ಅತ್ತನು.

ಅಸಹಾಯಕನಾಗಿ ದುರ್ಗಮ ದಾರಿಯಲ್ಲಿ ಹೇಗೋ ಉಸಿರಾಡುತ್ತಿದ್ದ ಜಟಾಯುವನ್ನು ನೋಡಿ ತುಂಬ ದುಃಖಿತನಾಗಿ ಲಕ್ಷ್ಮಣನಿಗೆ ಹೇಳಿದನು.

ರಾಜ್ಯಾದ್ಭ್ರಂಶೋ ವನೇ ವಾಸಃ ಸೀತಾ ನಷ್ಟಾ ದ್ವಿಜೋ ಹತಃ ॥೨೪॥

ಈದೃಶೀಯಂ ಮಮಾಲಕ್ಷ್ಮೀರ್ನಿರ್ದಹೇದಪಿ ಪಾವಕಮ್ ।
ಸಂಪೂರ್ಣಮಪಿ ಚೇದದ್ಯ ಪ್ರತರೇಯಂ ಮಹೋದಧಿಮ್ ॥೨೫॥

ಸೋಽಪಿ ನೂನಂ ಮಮಾಲಕ್ಷ್ಮ್ಯಾ ವಿಶುಷ್ಯೇತ್ ಸರಿತಾಂ ಪತಿಃ ।
ನಾಸ್ತ್ಯಭಾಗ್ಯತರೋ ಲೋಕೇ ಮತ್ತೋಽಸ್ಮಿನ್ ಸಚರಾಚರೇ ॥೨೬॥

ಯೇನೇಯಂ ಮಹತೀ ಪ್ರಾಪ್ತಾ ಮಯಾ ವ್ಯಸನವಾಗುರಾ ।
ಅಯಂ ಪಿತೃವಯಸ್ಯೋ ಮೇ ಗೃಧ್ರರಾಜೋ ಜರಾನ್ವಿತಃ ॥೨೭॥

ಶೇತೇ ವಿನಿಹತೋ ಭೂಮೌ ಮಮ ಭಾಗ್ಯವಿಪರ್ಯಯಾತ್ ।
ಇತ್ಯೇವಮುಕ್ತಾ ಬಹುಶೋ ರಾಘವಃ ಸಹಲಕ್ಷ್ಮಣಃ ॥೨೮॥

ಜಟಾಯುಷಂ ಚ ಪಸ್ಪರ್ಶ ಪಿತೃಸ್ನೇಹಂ ವಿದರ್ಶಯನ್ ।
ನಿಕೃತ್ತಪಕ್ಷಂ ರುಧಿರಾವಸಿಕ್ತಂ
ಸ ಗೃಧ್ರರಾಜಂ ಪರಿರಭ್ಯ ರಾಮಃ ।
ಕ್ವ ಮೈಥಿಲೀ ಪ್ರಾಣಸಮಾ ಮಮೇತಿ
ವಿಮುಚ್ಯ ವಾಚಂ ನಿಪಪಾತ ಭೂಮೌ ॥೨೯॥

ರಾಜ್ಯಚ್ಯುತಿ, ವನವಾಸ, ಸೀತೆಯ ಕಣ್ಮರೆ, ಇದೀಗ ಹಕ್ಕಿಯ ಮರಣ ಇದು ನನ್ನ ದೌರ್ಭಾಗ್ಯ. ಈ ದೌರ್ಭಾಗ್ಯವು ಬೆಂಕಿಯನ್ನು ಸುಟ್ಟೀತು.

ನಾನೀಗ ಸಂಪೂರ್ಣ ಸಮುದ್ರವನ್ನು ದಾಟಲು ತೊಡಗಿದರೆ ನನ್ನ ದೌರ್ಭಾಗ್ಯದಿಂದ ಅದು ಒಣಗಿ ಹೋಗುತ್ತದೆ !

ಈ ಚರಾಚರ ಪ್ರಪಂಚದಲ್ಲಿ ನನಗಿಂತ ದುರದೃಷ್ಟದವನು ಮತ್ತೊಬ್ಬನಿಲ್ಲ. ಆದ್ದರಿಂದಲೆ ಮೇಲಿಂದ ಮೇಲೆ ದೊಡ್ಡ ದುಃಖದ ಬಲೆಯಲ್ಲಿ ಬಿದ್ದಿದ್ದೇನೆ.

ಮಹಾಬಲಶಾಲಿ ಈ ಜಟಾಯು ನನ್ನ ತಂದೆಯ ಮಿತ್ರ. ನನ್ನ ದೌರ್ಭಾಗ್ಯದಿಂದ ಅವನೂ ಸತ್ತು ನೆಲಕ್ಕುರುಳಿದ.

ರಾಘವನು ಲಕ್ಷ್ಮಣನೊಂದಿಗೆ ಹೀಗೆ ತುಂಬ ಪರಿತಾಪವಚನಗಳನ್ನಾಡಿ ಪಿತೃ ಸ್ನೇಹವನ್ನು ತೋರುತ್ತ ಜಟಾಯುವಿನ ಮೈದಡವಿದನು.

ರೆಕ್ಕೆ ಕಳೆದುಕೊಂಡು ರಕ್ತಸಿಕ್ತವಾದ ಜಟಾಯುವನ್ನು ಅಪ್ಪಿಕೊಂಡ ರಾಮನು ಪ್ರಾಣಸಮಾನಳಾದ ನನ್ನ ಸೀತೆಯೆಲ್ಲಿ? ಎಂದು ಬೊಬ್ಬಿಡುತ್ತ ನೆಲದಲ್ಲಿ ಕುಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತೇಳನೇ ಸರ್ಗ ಮುಗಿಯಿತು.

ಅಷ್ಟಷಷ್ಟಿತಮಃ ಸರ್ಗಃ

ಕಥಾಸಾರಾಂಶ– ನೆಲದಲ್ಲಿ ಬಿದ್ದಿರುವ ಜಟಾಯುವನ್ನು ನೋಡಿ ಶ್ರೀರಾಮ ಲಕ್ಷ್ಮಣನಿಗೆ ಹೇಳಿದ – ಈ ಪಕ್ಷಿರಾಜ ನನಗಾಗಿ ಪ್ರಾಣ ತೆತ್ತಿರುವನು. ಸದ್ಯದಲ್ಲಿಯೆ ಪ್ರಾಣ ಬಿಡಲಿರುವನು. ಈಗ ಇನ್ನೂ ಸ್ವಲ್ಪ ಉಸುರುತ್ತಿದೆ. ಸ್ವರ ಕ್ಷೀಣವಾಗಿದೆ.

ಜಟಾಯುವೇ ! ಮಾತಾಡಲು ಶಕ್ತಿಯಿದ್ದರೆ ಸೀತೆಯ ಬಗ್ಗೆ ಹೇಳು. ನಿನ್ನ ವಧೆ ಹೇಗಾಯಿತು ? ತಿಳಿಸು.

ರಾವಣ ಸೀತೆಯನ್ನೇಕೆ ಅಪಹರಿಸಿದ ? ಅವನಿಗೆ ನಾನೇನು ಅಪರಾಧ ಮಾಡಿದ್ದೆ ? ಸೀತೆ ಏನು ಹೇಳಿದಳು ? ಅವಳ ಮುಖ ಹೇಗಿತ್ತು. ಆ ರಕ್ಕಸ ಹೇಗಿದ್ದಾನೆ ? ಅವನ ಪರಾಕ್ರಮ ಎಂತಹದ್ದು ? ಅವನಿರುವ ತಾಣ ಯಾವುದು ? ಹೇಳು ಹಕ್ಕಿರಾಜ ! –ರಾಮ ಕೇಳಿದನು.

ಹಕ್ಕಿ ಹೇಳಿತು – ರಾವಣ ಮಾಯೆಯಿಂದ ನಿನ್ನ ಸೀತೆಯನ್ನು ಅಪಹರಿಸಿದ. ಕಡೆಯ ಹೋರಾಟ ಮಾಡಿದ ನನ್ನ ರೆಕ್ಕೆಯನ್ನು ಕತ್ತರಿಸಿ ದಕ್ಷಿಣದಿಕ್ಕಿಗೆ ತೆರಳಿದ.

ಅವನು ವಿಶ್ರವಸ್ಸಿನ ಮಗ. ಕುಬೇರನ ತಮ್ಮ. ರಾವಣ ಸೀತೆಯನ್ನು 'ವಿಂದ' ಎಂಬ ಮುಹೂರ್ತದಲ್ಲಿ ಅಪಹರಿಸಿದ್ದಾನೆ. ಈ ಮುಹೂರ್ತದಲ್ಲಿ ಕದ್ದವನು ತನ್ನ ನಾಶಕ್ಕಾಗಿಯೇ ಇಂಥ ಕೆಲಸ ಮಾಡುವನು. ರಾವಣ ನಾಶವಾಗುತ್ತಾನೆ. ನಿನ್ನ ಸೀತೆ ನಿನಗೆ ಸಿಗುತ್ತಾಳೆ.

ಇಷ್ಟು ಹೇಳಿ ಜಟಾಯು ಮೃತವಾಗುವನು. ಶ್ರೀರಾಮನು ಲಕ್ಷ್ಮಣನ ಸಹಾಯ-ದಿಂದ ಜಟಾಯುವಿಗೆ ಅಗ್ನಿಸಂಸ್ಕಾರ ಮಾಡುವನು. 'ಅನೇಕ ವರ್ಷಗಳಿಂದ ಬದುಕಿದ ಜಟಾಯು ಈಗ ವೃದ್ಧಾಪ್ಯದಲ್ಲಿಯೂ ನನಗಾಗಿ ಹೋರಾಡಿ ದೇಹತ್ಯಾಗ ಮಾಡಿದ. ಕಾಲವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ. ಜಟಾಯು ನನಗಾಗಿ ಹೋರಾಟ ಮಾಡಿ ಪ್ರಾಣತ್ಯಾಗ ಮಾಡಿದುದರಿಂದ ದುಃಖವು ನನಗೆ ಸೀತಾಪಹರಣ-ದಿಂದುಂಟಾದ ದುಃಖಕ್ಕಿಂತಲೂ ಹೆಚ್ಚಾಗಿದೆ. ಹಿರಿಯರಾದ ನನ್ನ ತಂದೆಯಂತೆ ಈ ಜಟಾಯುವೂ ನನಗೆ ಮಾನ್ಯನಾಗಿದ್ದಾನೆ. ಮೃತರ ಸ್ವರ್ಗಪ್ರಾಪ್ತಿಗೆ ಬ್ರಾಹ್ಮಣರು ಪಠಿಸುವ ಪಿತೃದೇವತಾಕರ ಸೂಕ್ತವನ್ನು ರಾಮ ಜಪಿಸಿದ.

ಗೋದಾವರಿ ನದಿಗೆ ಹೋಗಿ ಇಬ್ಬರು ಜಲಾಂಜಲಿಯಿತ್ತರು. ಯಜ್ಞಶೀಲರಿಗೆ ಆಹಿತಾಗ್ನಿಗಳಿಗೆ ಭೂದಾನ ಮಾಡಿದವರಿಗೆ ಯಾವ ಸದ್ಗತಿಯಾಗುವುದೋ ಅಂತಹ ಸದ್ಗತಿ ಜಟಾಯುವಿಗೆ ಆಗಲೆಂದು ಪ್ರಾರ್ಥಿಸಿದನು ಶ್ರೀರಾಮ.

ಮತ್ತೆ ಸೀತಾನ್ವೇಷಣೆಗೆ ತೊಡಗಿದರು.

ಜಟಾಯುಸ್ಸಂಸ್ಕಾರಃ

ರಾಮಃ ಸಂಪ್ರೇಕ್ಷ್ಯ ತಂ ಗೃಧ್ರಂ ಭುವಿ ರೌದ್ರೇಣ ಪಾತಿತಮ್ ।
ಸೌಮಿತ್ರಿಂ ಮಿತ್ರಸಂಪನ್ನಮಿದಂ ವಚನಮಬ್ರವೀತ್ ॥೧॥

ಮಮಾಯಂ ನೂನಮರ್ಥೇಷು ಯತಮಾನೋ ವಿಹಂಗಮಃ ।
ರಾಕ್ಷಸೇನ ಹತಃ ಸಂಖ್ಯೇ ಪ್ರಾಣಾಂಸ್ತ್ಯಜತಿ ದುಸ್ತ್ಯಜಾನ್ ॥೨॥

ಅತಿಖಿನ್ನಃ ಶರೀರೇಽಸ್ಮಿನ್ ಪ್ರಾಣೋ ಲಕ್ಷ್ಮಣ ವಿದ್ಯತೇ ।
ತಥಾ ಸ್ವರವಿಹೀನೋಽಯಂ ವಿಕ್ಲವಂ ಸಮುದೀಕ್ಷತೇ ॥೩॥

ಜಟಾಯೋ ಯದಿ ಶಕ್ನೋಷಿ ವಾಕ್ಯಂ ವ್ಯಾಹರಿತುಂ ಪುನಃ ।
ಸೀತಾಮಾಖ್ಯಾಹಿ ಭದ್ರಂ ತೇ ವಧಮಾಖ್ಯಾಹಿ ಚಾತ್ಮನಃ ॥೪॥

ಕಿಂನಿಮಿತ್ತೋಽಹರತ್ ಸೀತಾಂ ರಾವಣಸ್ತಸ್ಯ ಕಿಂ ಮಯಾ ।
ಅಪರಾಧಂ ತು ಯಂ ದೃಷ್ಟ್ವಾ ರಾವಣೇನ ಹೃತಾ ಪ್ರಿಯಾ ॥೫॥

ಕಥಂ ತಚ್ಚಂದ್ರಸಂಕಾಶಂ ಮುಖಮಾಸೀನ್ಮನೋಹರಮ್ ।
ಸೀತಯಾ ಕಾನಿ ಚೋಕ್ತಾನಿ ತಸ್ಮಿನ್ ಕಾಲೇ ದ್ವಿಜೋತ್ತಮ ॥೬॥

ಕಥಂವೀರ್ಯಃ ಕಥಂರೂಪಃ ಕಿಂಕರ್ಮಾ ಸ ಚ ರಾಕ್ಷಸಃ ।
ಕ್ವ ಚಾಸ್ಯ ಭವನಂ ತಾತ ಬ್ರೂಹಿ ಮೇ ಪರಿಪೃಚ್ಛತಃ ॥೭॥

ತಮುದ್ವೀಕ್ಷ್ಯ ಸ ಧರ್ಮಾತ್ಮಾ ವಿಲಪಂತಮನಾಥವತ್ ।
ವಾಚಾ ವಿಕ್ಲವಯಾ ರಾಮಂ ಜಟಾಯುರಿದಮಬ್ರವೀತ್ ॥೮॥

ರಾವಣನ ರೌದ್ರದಿಂದ ನೆಲಕ್ಕುರುಳಿದ ಜಟಾಯುವನ್ನು ಗಮನಿಸಿದ ರಾಮ ಮಿತ್ರನಂತಿರುವ ಲಕ್ಷ್ಮಣನಿಗೆ ಹೀಗೆ ಹೇಳಿದನು.

ನಿಶ್ಚಯವಾಗಿಯೂ ಈ ಜಟಾಯು ನನಗಾಗಿ ಪ್ರಯತ್ನಿಸಿ ಹೋರಾಡಿ ಯುದ್ಧದಲ್ಲಿ ಯಾರೂ ಬಿಡಲೊಲ್ಲದ ಪ್ರಾಣವನ್ನು ಕಳೆದುಕೊಂಡು ರಾಕ್ಷಸನಿಂದ ಹತವಾಗಿದೆ.

ಲಕ್ಷ್ಮಣ ! ಇನ್ನೂ ಇವನ ಶರೀರದಲ್ಲಿ ಪ್ರಾಣವಿದೆ. ಕ್ಷೀಣಸ್ವರವಿದೆ, ವಿಕ್ಲವಗೊಂಡಿದೆ.

ಜಟಾಯುವೆ ! ನಿನಗೆ ಮಂಗಳವಾಗಲಿ. ಮಾತನಾಡಲು ಶಕ್ತಿಯಿದ್ದರೆ ಸೀತೆಯ ವಿಷಯ ಹೇಳು. ನಿನ್ನ ಮೇಲಾದ ಹಲ್ಲೆಯನ್ನು ವಿವರಿಸು.

ರಾವಣ ಸೀತೆಯನ್ನು ಅಪಹರಿಸಲು ಕಾರಣವೇನು ? ನಾನೇನು ಅಂಥ ಅಪರಾಧ ಅವನಲ್ಲಿ ಮಾಡಿದ್ದೆ ?

ಪಕ್ಷಿ ಶ್ರೇಷ್ಠನೇ ! ಸೀತೆಯ ಮನೋಹರ ಮುಖವು ಆಗ ಹೇಗಾಗಿತ್ತು ? ಸೀತೆ ಏನು ಹೇಳಿದಳು ?

ಅಪ್ಪ ಹಕ್ಕಿಯೇ ? ಆ ರಕ್ಕಸ ರಾವಣನ ಬಲ ರೂಪ ಕಾರ್ಯ ಹೇಗಿತ್ತು ? ಅವನ ನೆಲೆಯೆಲ್ಲಿ ? ಪ್ರಶ್ನಿಸುತ್ತಿರುವ ನನಗೆ ಉತ್ತರಿಸು.

ಬಳಿಕ ವಿಲಪಿಸುತ್ತಿರುವ ರಾಮನನ್ನು ನೋಡಿ ದೀನಾತ್ಮನಾದ ಜಟಾಯು ಅತ್ಯಂತ ಸೊರಗಿದ ಧ್ವನಿಯಿಂದ ಇದನ್ನು ಹೇಳಿದನು.

ಹೃತಾ ಸಾ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ।
ಮಾಯಾಮಾಸ್ಥಾಯ ವಿಪುಲಾಂ ವಾತದುರ್ದಿನಸಂಕುಲಾಮ್ ॥೯॥

ಪರಿಶ್ರಾಂತಸ್ಯ ಮೇ ತಾತ ಪಕ್ಷೌ ಛಿತ್ತ್ವಾ ಸ ರಾಕ್ಷಸಃ ।
ಸೀತಾಮಾದಾಯ ವೈದೇಹೀಂ ಪ್ರಯಾತೋ ದಕ್ಷಿಣಾಂ ದಿಶಮ್ ॥೧೦

ಉಪರುಧ್ಯಂತಿ ಮೇ ಪ್ರಾಣಾ ದೃಷ್ಟಿರ್ಭ್ರಮತಿ ರಾಘವ ।
ಪಶ್ಯಾಮಿ ವೃಕ್ಷಾನ್ ಸೌವರ್ಣಾನುಶೀರಕೃತಮೂರ್ಧಜಾನ್ ॥೧೧॥

ಯೇನ ಯಾತೋ ಮುಹೂರ್ತೇನ ಸೀತಾಮಾದಾಯ ರಾವಣಃ ।
ವಿಪ್ರನಷ್ಟಂ ಧನಂ ಕ್ಷಿಪ್ರಂ ತತ್ಸಾಮೀ ಪ್ರತಿಪದ್ಯತೇ ॥೧೨॥

ವಿಂದೋ ನಾಮ ಮುಹೂರ್ತೋಽಸೌ ಸ ಚ ಕಾಕುತ್ಸ್ಥ ನಾಬುಧತ್ ।
ತ್ವತ್ಪ್ರಿಯಾಂ ಜಾನಕೀಂ ಹೃತ್ವಾ ರಾವಣೋ ರಾಕ್ಷಸೇಶ್ವರಃ ॥೧೩॥

ಋಷವದ್ಬಡಿಶಂ ಗೃಹ್ಯ ಕ್ಷಿಪ್ರಮೇವ ವಿನಶ್ಯತಿ ।
ನ ಚ ತ್ವಯಾ ವ್ಯಥಾ ಕಾರ್ಯಾ ಜನಕಸ್ಯ ಸುತಾಂ ಪ್ರತಿ ॥೧೪॥

ವೈದೇಹ್ಯಾ ರಂಸ್ಯಸೇ ಕ್ಷಿಪ್ರಂ ಹತ್ವಾ ತಂ ರಾಕ್ಷಸಂ ರಣೇ ।

ಆ ಸೀತೆಯು ರಾಕ್ಷಸ ಶ್ರೇಷ್ಠ ರಾವಣನಿಂದ ಬಿರುಗಾಳಿ ಮಳೆಗಳ ಮಾಯೆ-ಯನ್ನು ಸೃಷ್ಟಿಮಾಡಿ ಅಪಹೃತಳಾದಳು.

ಅಯ್ಯ ರಾಮ ! ಅವನೊಂದಿಗೆ ಕಾದು ಬಳಲಿದ ನನ್ನ ರೆಕ್ಕೆಗಳನ್ನು ಕತ್ತರಿಸಿ ಆ ನಿಶಾಚರ ರಾವಣ ಸೀತೆಯನ್ನು ಕರೆದುಕೊಂಡು ದಕ್ಷಿಣಾಭಿಮುಖವಾಗಿ ಆಕಾಶ ಮಾರ್ಗವಾಗಿ ಸಾಗಿದನು.

ನನಗೆ ಉಸಿರಾಡಲು ತೊಡಕಾಗುತ್ತಿದೆ. ಕಣ್ಣೆತ್ತಲೆ ಬಂದು ದೃಷ್ಟಿ ತಿರುಗುತ್ತಿದೆ. ಇಲ್ಲಿಯ ಮರಗಳು ಸುವರ್ಣ ವೃಕ್ಷಗಳಾಗಿ ಕಾಣುತ್ತಿವೆ. ಅದರ ತುದಿಗಳಲ್ಲಿ ಲಾವಂಚದ ಕೂದಲು ಕಾಣುತ್ತಿದೆ !

ಯಾವ ಮುಹೂರ್ತದಲ್ಲಿ ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋದನೋ ಆ ಮುಹೂರ್ತದ ಫಲವಾಗಿ ಕಣ್ಮರೆಯಾದ ಸಂಪತ್ತು ಆತನ ಒಡೆಯನಿಗೆ ಸೇರುತ್ತದೆ.

ಈ ಮುಹೂರ್ತದ ಹೆಸರು 'ವಿಂದ'. ಕಾಕುತ್ಸ್ಥ ! ಇದನ್ನು ರಕ್ಕಸ ತಿಳಿಯಲಿಲ್ಲ. ನಿನ್ನ ಒಲುಮೆಯ ಸೀತೆಯನ್ನು ಕಳುವು ಮಾಡಿದ ರಾಕ್ಷಸೇಶ್ವರ ರಾವಣ ಗಾಳದ ಮಾಂಸದ ಸೆಳೆತಕ್ಕೆ ಬಲಿಯಾದ ಮೀನಿನಂತೆ ನಾಶವಾಗುತ್ತಾನೆ.

ಜನಕ ಕುಮಾರಿಯ ಬಗೆಗೆ ವ್ಯಥೆ ಪಡಬೇಡ. ಯುದ್ಧದಲ್ಲಿ ರಾವಣನನ್ನು ಕೊಂದು ಶೀಘ್ರದಲ್ಲಿ ವೈದೇಹಿಯೊಂದಿಗೆ ಸುಖಪಡುವಿ !

ಅಸಂಮೂಢಸ್ಯ ಗೃಧ್ರಸ್ಯ ರಾಮಂ ಪ್ರತ್ಯನುಭಾಷತಃ ॥೧೫॥

ಆಸ್ಯಾತ್ ಸುಸ್ರಾವ ರುಧಿರಂ ಮ್ರಿಯಮಾಣಸ್ಯ ಸಾಮಿಷಮ್ ।
ಪುತ್ರೋ ವಿಶ್ರವಸಃ ಸಾಕ್ಷಾದ್ಭ್ರಾತಾ ವೈಶ್ರವಣಸ್ಯ ಚ ॥೧೬॥

ಇತ್ಯುಕ್ತ್ವಾ ದುರ್ಲಭಾನ್ ಪ್ರಾಣಾನ್ ಮುಮೋಚ ಪತಗೇಶ್ವರಃ ।
ಬ್ರೂಹಿ ಬ್ರೂಹೀತಿ ರಾಮಸ್ಯ ಬ್ರುವಾಣಸ್ಯ ಕೃತಾಂಜಲೇಃ ॥೧೭॥

ತ್ಯಕ್ತ್ವಾ ಶರೀರಂ ಗೃಧ್ರಸ್ಯ ಜಗ್ಮುಃ ಪ್ರಾಣಾ ವಿಹಾಯಸಮ್ ।
ಸ ನಿಕ್ಷಿಪ್ಯ ಶಿರೋ ಭೂಮೌ ಪ್ರಸಾರ್ಯ ಚರಣೌ ತದಾ ॥೧೮॥

ಮೋಹವಶವಾಗದೆ ಜಾಗೃತ ಪ್ರಜ್ಞಾಸ್ಥಿತಿಯಲ್ಲಿ ರಾಮನೊಂದಿಗೆ ಮಾತ-ನಾಡುತ್ತಿದ್ದ ಜಟಾಯುವಿನ ಬಾಯಿಯಿಂದ ಮಾಂಸಬೆರೆತ ರಕ್ತ ಒಸರಿ ಬಂತು.

'ರಾವಣ ವಿಶ್ರವಸ್ಸಿನ ಮಗ. ಕುಬೇರನ ತಮ್ಮ' – ಇಷ್ಟು ಹೇಳಿ ಪಕ್ಷಿಶ್ರೇಷ್ಠನು ಪ್ರಾಣತ್ಯಾಗ ಮಾಡಿದನು.

ಕೈ ಮುಗಿದು, ಹೇಳು ಹೇಳು ಎಂದು ರಾಮ ಒತ್ತಾಯಿಸುತ್ತಿರುವಾಗಲೆ ಜಟಾಯುವಿನ ದೇಹ ತೊರೆದು ಅವನ ಪ್ರಾಣಗಳು ಆಗಸದಲ್ಲಿ ಲೀನಗೊಂಡವು.

ಜಟಾಯುವಿನ ತಲೆಯು ನೆಲದಲ್ಲಿ ಉರುಳಿತು. ಕಾಲುಗಳು ಸೆಟೆದವು. ಇಡೀ ಶರೀರ ನೆಲದಲ್ಲಿ ಮಲಗಿತು.

ವಿಕ್ಷಿಪ್ಯ ಚ ಶರೀರಂ ಸ್ವಂ ಪಪಾತ ಧರಣೀತಲೇ ।
ತಂ ಗೃಧ್ರಂ ಪ್ರೇಕ್ಷ್ಯ ತಾಮ್ರಾಕ್ಷಂ ಗತಾಸುಮಚಲೋಪಮಮ್ ॥೧೯

ರಾಮಃ ಸುಬಹುಭಿರ್ದುಃಖೈರ್ದೀನಃ ಸೌಮಿತ್ರಿಮಬ್ರವೀತ್ ।
ಬಹೂನಿ ರಕ್ಷಸಾಂ ವಾಸೇ ವರ್ಷಾಣಿ ವಸತಾ ಸುಖಮ್ ॥೨೦॥

ಅನೇಕ ದಂಡಕಾರಣ್ಯೇ ವಿಶೀರ್ಣಮಿಹ ಪಕ್ಷಿಣಾ ।
ಅನೇಕವಾರ್ಷಿಕೋ ಯಸ್ತು ಚಿರಕಾಲಸಮುತ್ಥಿತಃ ॥೨೧॥

ಸೋಽಯಮದ್ಯ ಹತಃ ಶೇತೇ ಕಾಲೋ ಹಿ ದುರತಿಕ್ರಮಃ ।
ಪಶ್ಯ ಲಕ್ಷ್ಮಣ ಗೃಧ್ರೋಽಯಮುಪಕಾರೀ ಹತಶ್ಚ ಮೇ ॥೨೨॥

ಸೀತಾಮಭ್ಯವಪನ್ನೋ ವೈ ರಾವಣೇನ ಬಲೀಯಸಾ ।
ಗೃಧ್ರರಾಜ್ಯಂ ಪರಿತ್ಯಜ್ಯ ಪಿತೃಪೈತಾಮಹಂ ಮಹತ್ ॥೨೩॥

ಮಮ ಹೇತೋರಯಂ ಪ್ರಾಣಾನ್ ಮುಮೋಚ ಪತಗೇಶ್ವರಃ ।
ಸರ್ವತ್ರ ಖಲು ದೃಶ್ಯಂತೇ ಸಾಧವೋ ಧರ್ಮಚಾರಿಣಃ ॥೨೪॥

ಶೂರಾಃ ಶರಣ್ಯಾಃ ಸೌಮಿತ್ರೇ ತಿರ್ಯಗ್ಯೋನಿಗತೇಷ್ವಪಿ ।
ಸೀತಾಹರಣಜಂ ದುಃಖಂ ನ ಮೇ ಸೌಮ್ಯ ತಥಾಗತಮ್ ॥೨೫॥

ಯಥಾ ವಿನಾಶೇ ಗೃಧ್ರಸ್ಯ ಮತ್ಕೃತೇ ಚ ಪರಂತಪ ।
ರಾಜಾ ದಶರಥಃ ಶ್ರೀಮಾನ್ ಯಥಾ ಮಮ ಮಹಾಯಶಾಃ ॥೨೬॥

ಪೂಜನೀಯಶ್ಚ ಮಾನ್ಯಶ್ಚ ತಥಾಯಂ ಪತಗೇಶ್ವರಃ ।

ಕೆಂಪಾದ ಕಣ್ಣಿನ ಪ್ರಾಣರಹಿತವಾದ ದೇಹ ನಿಶ್ಚೇಷ್ಟವಾಗಿ ನೆಲದಲ್ಲಿದ್ದ

ಹಕ್ಕಿಯನ್ನು ನೋಡಿ ತುಂಬ ದುಃಖದಿಂದ ದೀನನಾಗಿ ರಾಮನು ಲಕ್ಷ್ಮಣನಿಗೆ ಹೇಳಿದನು –

ಅನೇಕ ರಕ್ಕಸರ ನೆಲೆಯಾದ ಈ ದಂಡಕಾರಣ್ಯದಲ್ಲಿ ಅನೇಕ ವರ್ಷಗಳಿಂದ ಸುಖವಾಗಿ ಬದುಕಿದ್ದ ಜಟಾಯು ಇದೇ ನೆಲದಲ್ಲಿ ಪ್ರಾಣ ತೆತ್ತಿತು.

ತುಂಬ ವರ್ಷಗಳು ಸಂದಿದ್ದ ಬಹುಕಾಲ ಚೆನ್ನಾಗಿ ಮೆರೆದಿದ್ದ ಜಟಾಯು ಇಂದಿಲ್ಲಿ ಸತ್ತು ಮಲಗಿದೆ. ಕಾಲವನ್ನು ಯಾರೂ ಮೀರಲಾರರು !

ನೋಡು ಲಕ್ಷ್ಮಣ ! ಈ ಹದ್ದು ನನಗೆ ಉಪಕಾರ ಮಾಡಿ ಸೀತೆಗಾಗಿ ಹೋರಾಡಿ ಪ್ರಬಲ ರಾವಣನಿಂದ ಹತವಾಯಿತು !

ತಂದೆ ತಾತಂದಿರಿದ್ದ ಹದ್ದುಗಳ ಸಾಮ್ರಾಜ್ಯವನ್ನು ಪರಿತ್ಯಾಗ ಮಾಡಿ ಈ ಪಕ್ಷಿಶ್ರೇಷ್ಠವು ನನಗಾಗಿ ಪ್ರಾಣ ಬಿಟ್ಟಿತು.

ಸೌಮಿತ್ರಿ ! ಧರ್ಮನಿಷ್ಠರು ಶೂರರು ಶರಣಾಗತ ರಕ್ಷಕರೂ ಆದ ಸಜ್ಜನರು ಎಲ್ಲ ಕಡೆಯಲ್ಲಿಯೂ – ತಿರ್ಯಕ್ ಪ್ರಾಣಿಗಳಲ್ಲಿಯೂ ಇರುತ್ತಾರೆ !

ಸೌಮ್ಯ ! ಪರಂತಪ ! ನನಗಾಗಿ ಜಟಾಯು ಪ್ರಾಣ ಬಿಟ್ಟುದುದರಿಂದ ಉಂಟಾದಷ್ಟು ದುಃಖವು ಸೀತಾಪಹರಣದಿಂದಲೂ ಆಗಲಿಲ್ಲ !

ಯಶಸ್ವಿ ರಾಜ ದಶರಥರು ನನಗೆ ಹೇಗೆ ಮಾನ್ಯರೋ ಪೂಜನೀಯರೋ ಈ ಜಟಾಯುವೂ ಹಾಗೆ ಮಾನ್ಯ ಮತ್ತು ಪೂಜನೀಯವೂ ಆಗಿದೆ.

ಸೌಮಿತ್ರೇ ಹರ ಕಾಷ್ಠಾನಿ ನಿರ್ಮಥಿಷ್ಯಾಮಿ ಪಾವಕಮ್ ॥೨೭॥

ಗೃಧ್ರರಾಜಂ ದಿಧಕ್ಷಾಮಿ ಮತ್ಕೃತೇ ನಿಧನಂ ಗತಮ್ ।
ನಾಥಂ ಪತಗಲೋಕಸ್ಯ ಚಿತಾಮಾರೋಪಯಾಮ್ಯಹಮ್ ॥೨೮॥

ಇಮಂ ಧಕ್ಷ್ಯಾಮಿ ಸೌಮಿತ್ರೇ ಹತಂ ರೌದ್ರೇಣ ರಕ್ಷಸಾ ।
ಯಾ ಗತಿರ್ಯಜ್ಞಶೀಲಾನಾಮಾಹಿತಾಗ್ನೇಶ್ಚ ಯಾ ಗತಿಃ ॥೨೯॥

ಅಪರಾವರ್ತಿನಾಂ ಯಾ ಚ ಯಾ ಚ ಭೂಮಿಪ್ರದಾಯಿನಾಮ್ ।
ಮಯಾ ತ್ವಂ ಸಮನುಜ್ಞಾತೋ ಗಚ್ಛ ಲೋಕಾನನುತ್ತಮಾನ್ ॥೩೦॥

ಗೃಧ್ರರಾಜ ಮಹಾಸತ್ತ್ವ ಸಂಸ್ಕೃತಶ್ಚ ಮಯಾ ವ್ರಜ ।
ಏವಮುಕ್ತ್ವಾ ಚಿತಾಂ ದೀಪ್ತಾಮಾರೋಪ್ಯ ಪತಗೇಶ್ವರಮ್ ॥೫೧॥

ದದಾಹ ರಾಮೋ ಧರ್ಮಾತ್ಮಾ ಸ್ವಬಂಧುಮಿವ ದುಃಖಿತಃ ।

ಸೌಮಿತ್ರಿಯೆ ! ಕಟ್ಟಿಗೆಗಳನ್ನು ತೆಗೆದುಕೊಂಡು ಬಾ. ಮಥನ ಮಾಡಿ ಅಗ್ನಿಯನ್ನು ಉತ್ಪಾದನೆ ಮಾಡಿ ನನಗಾಗಿ ಸತ್ತ ಜಟಾಯು ದೇಹವನ್ನು ಸುಡಲು ಬಯಸಿದ್ದೇನೆ.

ಪಕ್ಷಿ ಲೋಕದ ಒಡೆಯನಾದ, ಉಗ್ರ ರಾಕ್ಷಸನಿಂದ ಹತನಾದ ಈ ಜಟಾಯುವನ್ನು ಚಿತೆಯೇರಿಸಿ ಸುಡುತ್ತೇನೆ. ರಘುಕುಲೋತ್ತನ್ನ ಸೌಮಿತ್ರಿಯೇ !

ಯಜ್ಞ ಶೀಲರಿಗೆ, ಆಹಿತಾಗ್ನಿಗಳಿಗೆ, ಯುದ್ಧದಲ್ಲಿ ಪಲಾಯನ ಮಾಡದೆ ಹೋರಾಡುವವರಿಗೆ, ಭೂದಾನ ಮಾಡಿದವರಿಗೆ ಯಾವ ಗತಿಯಾಗುವುದೋ ನನ್ನಿಂದ ಸಂಸ್ಕಾರಗೊಂಡ ಸತ್ವಸಂಪನ್ನ ಗೃಧ್ರರಾಜನೆ ! ನನ್ನ ಆಜ್ಞೆಯಿಂದ ಅಂತಹ ಅತ್ಯುತ್ತಮಲೋಕವನ್ನು ನೀನು ಹೊಂದು.

ಧರ್ಮಾತ್ಮ ರಾಮನು ಹೀಗೆ ಹೇಳಿ ಪಕ್ಷಿರಾಜನ ದೇಹವನ್ನು ಪ್ರಜ್ವಲಿಸುವ ಚಿತೆಯಲ್ಲಿಟ್ಟು ದುಃಖಿತನಾಗಿ ತನ್ನ ಬಂಧುವನ್ನು ಹೇಗೋ ಹಾಗೆ ಸುಟ್ಟನು.

ರಾಮೋಽಥ ಸಹಸೌಮಿತ್ರಿರ್ವನಂ ಗತ್ವಾ ಸ ವೀರ್ಯವಾನ್ ॥೨೩॥

ಸ್ಥೂಲಾನ್ ಹತ್ವಾ ಮಹಾರೋಹೀನನುತಸ್ತಾರ ತಂ ದ್ವಿಜಮ್ ।
ರೋಹಿಮಾಂಸಾನಿ ಚೋತ್ಕೃತ್ಯ ಪೇಶೀಕೃತ್ಯ ಮಹಾಯಶಾಃ ॥೫೩॥

ಶಕುನಾಯ ದದೌ ರಾಮೋ ರಮ್ಯೇ ಹರಿತಶಾದ್ವಲೇ ।
ಯತ್ತತ್ ಪ್ರೇತಸ್ಯ ಮರ್ತ್ಯಸ್ಯ ಕಥಯಂತಿ ದ್ವಿಜಾತಯಃ ॥೫೪॥

ತತ್ ಸ್ವರ್ಗಗಮನಂ ತಸ್ಯ ಪಿತ್ರ್ಯಂ ರಾಮೋ ಜಜಾಪ ಹ ।
ತತೋ ಗೋದಾವರೀಂ ಗತ್ವಾ ನದೀಂ ನರವರಾತ್ಮಜೌ ॥೫೫॥

ಉದಕಂ ಚಕ್ರತುಃಸ್ತಸ್ಮೈ ಗೃಧ್ರರಾಜಾಯ ತಾವುಭೌ ।
ಶಾಸ್ತ್ರದೃಷ್ಟೇನ ವಿಧಿನಾ ಜಲಂ ಗೃಧ್ರಾಯ ರಾಘವೌ ॥೫೬॥

ಸ್ನಾತ್ವಾ ತೌ ಗೃಧ್ರರಾಜಾಯ ಉದಕಂ ಚಕ್ರತುಸ್ತದಾ ॥

ಸ ಗೃಧ್ರರಾಜಃ ಕೃತವಾನ್ ಯಶಸ್ಕರಂ
ಸುದುಷ್ಕರಂ ಕರ್ಮ ರಣೇ ನಿಪಾತಿತಃ ।
ಮಹರ್ಷಿಕಲ್ಪೇನ ಚ ಸಂಸ್ಕೃತಸ್ತದಾ
ಜಗಾಮ ಪುಣ್ಯಾಂ ಗತಿಮಾತ್ಮನಃ ಶುಭಾಮ್ ॥೩೭॥

ಕೃತೋದಕೌ ತಾವಪಿ ಪಕ್ಷಿಸತ್ತಮೇ
ಸ್ಥಿರಾಂ ಚ ಬುದ್ಧಿಂ ಪ್ರಣಿಧಾಯ ಜಗ್ಮತುಃ ।
ಪ್ರವೇಶ್ಯ ಸೀತಾಧಿಗಮೇ ತತೋ ಮನೋ
ವನಂ ಸುರೇಂದ್ರಾವಿವ ವಿಷ್ಣುವಾಸವೌ ॥೩೮॥

ಬಳಿಕ ವೀರ್ಯವಂತ ರಾಮನು ಲಕ್ಷ್ಮಣನೊಂದಿಗೆ ವನಕ್ಕೆ ತೆರಳಿ ಮಹಾ ಮೃಗಗಳನ್ನು ಕೊಂದು ಆ ಜಟಾಯುವಿನ ಉದ್ದೇಶದಿಂದ ಪಿಂಡದಾನಕ್ಕಾಗಿ ಹಸಿರು ಹುಲ್ಲು ಹಾಸಿನ ಮೇಲೆ ದರ್ಭೆಗಳನ್ನು ಹರಡಿದನು.

ಹಿರಿಯ ಕೀರ್ತಿಯ ರಾಮನು ಆ ಮೃಗಗಳ ಮಾಂಸವನ್ನು ಕಿತ್ತು ಪಿಂಡವನ್ನಾಗಿ ಮಾಡಿ ಜಟಾಯುವಿಗಾಗಿ ಹರಡಿದ ಹಸಿರು ದರ್ಭೆಗಳ ಮೇಲೆ ಪ್ರದಾನ ಮಾಡಿದನು.

ಬ್ರಾಹ್ಮಣರು ಮೃತರಾದ ವ್ಯಕ್ತಿಗಳ ಸ್ವರ್ಗಪ್ರಾಪ್ತಿಗಾಗಿ ಯಾವ ಪಿತೃಸೂಕ್ತಗಳನ್ನು ಪಠಿಸುವರೋ ಶ್ರೀರಾಮ ಜಟಾಯುವಿಗಾಗಿ ಆ ಮಂತ್ರಗಳನ್ನು ಜಪಿಸಿದನು.

ಬಳಿಕ ರಾಜಪುತ್ರರಾದ ರಾಮ ಲಕ್ಷ್ಮಣರು ಗೋದಾವರಿ ನದಿಗೆ ತೆರಳಿ ಗೃಧ್ರರಾಜನಿಗಾಗಿ ಜಲಾಂಜಲಿಯನ್ನಿತ್ತರು.

ರಘುಕುಲೋತ್ತನ್ನರಾದ ಆವರೀರ್ವರು ನದಿಯಲ್ಲಿ ಮಿಂದು ಶಾಸ್ತ್ರವಿಹಿತ ರೀತಿಯಿಂದ ಗೃಧ್ರರಾಜನಿಗಾಗಿ ತರ್ಪಣ ವಿತ್ತರು.

ಆ ಗೃಧ್ರರಾಜ ಜಟಾಯುವು ಯಶಸ್ಕರರೂ ದುಷ್ಕರವೂ ಆದ ಕಾರ್ಯವನ್ನು ಸಾಧಿಸಿ ಯುದ್ಧದಲ್ಲಿ ಅಸುರನಿಂದ ಹತನಾಗಿ ಮಹರ್ಷಿ ಸದೃಶನಾದ ಶ್ರೀರಾಮ-ನಿಂದ ಸಂಸ್ಕಾರಗೊಂಡು ತನಗೆ ಯೋಗ್ಯವಾದ ಪುಣ್ಯ ಲೋಕವನ್ನು ಸೇರಿದನು.

ಪುಣ್ಯೋದಕವಿತ್ತ ರಾಮಲಕ್ಷ್ಮಣರು ಪಕ್ಷಿಶ್ರೇಷ್ಠನ ವಿಷಯದಲ್ಲಿ ಸ್ಥಿರವಾದ ಗೌರವಭಾವವನ್ನು ಇರಿಸಿಕೊಂಡು ಸೀತೆಯನ್ನು ಹುಡುಕುವ ಮನಸ್ಸು ಮಾಡಿದರು – ದೇವತಾಶ್ರೇಷ್ಠರಾದ ವಿಷ್ಣು – ಇಂದ್ರರಂತೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತೆಂಟನೇ ಸರ್ಗ ಮುಗಿಯಿತು.

ಏಕೋನಸಪ್ತತಿತಮಃ ಸರ್ಗಃ

ಕಥಾಸಾರಾಂಶ– ಜಲಾಂಜಲಿಯಿತ್ತ ಬಳಿಕ ರಾಮ ಲಕ್ಷ್ಮಣರು ಪಶ್ಚಿಮ ದಿಕ್ಕಿಗೆ ಪಯಣಿಸಿದರು. ಮುಂದೆ ದಕ್ಷಿಣದ ಕಡೆಗೆ ಸಂಚರಿಸಿದರು. ಕ್ರೌಂಚಾರಣ್ಯಕ್ಕೆ ತಲುಪಿದರು. ಮಧ್ಯೆ ಮಧ್ಯೆ ವಿಶ್ರಾಂತಿ ಪಡೆದು ನಡೆಯುತ್ತ ಮತಂಗ ಮುನಿಗಳ ಆಶ್ರಮಕ್ಕೆ ಬಂದು ಸೇರಿದರು. ಗೊಂಡಾರಣ್ಯದಲ್ಲಿ ನಡೆದು ಹೋಗುವಾಗ ದೊಡ್ಡ ಬಿಲವೊಂದನ್ನು ಕಂಡರು. ಅದರ ಬಳಿಗೆ ಹೋಗುವಾಗ 'ಅಯೋಮುಖಿ' ಎಂಬ ರಕ್ಕಸಿ ಪ್ರಾಣಿಗಳನ್ನು ತಿಂದುಕೊಂಡು ಬದುಕಿದ್ದವಳು ರಾಮ–ಲಕ್ಷ್ಮಣರನ್ನು ಕಂಡಳು.

ಲಕ್ಷ್ಮಣನನ್ನು ನೋಡಿ ತನ್ನೊಂದಿಗೆ ವಿಹರಿಸುವಂತೆ ಮುಗಿಬಿದ್ದಳು. ಲಕ್ಷ್ಮಣ ಖಡ್ಗದಿಂದ ಅವಳ ಕಿವಿ ಮೂಗುಗಳನ್ನು ಎರಡು ಮೊಲೆಗಳನ್ನು ಸೀಳಿ ಹಾಕಿದ. ಅವಳು ದೂರ ಓಡಿ ಹೋದಳು.

ಮುಂದೆ ಸಂಚರಿಸುತ್ತ ಲಕ್ಷ್ಮಣ ರಾಮನಿಗೆ ಹೇಳಿದನು – ಅಣ್ಣ ! ನನ್ನ ಎಡಭುಜ ಅದರುತ್ತಿದೆ. ಏನೋ ಭಯದ ಸಂದರ್ಭ ಬರಬಹುದು. ಸಿದ್ಧನಾಗು. 'ವಂಜುಲ' ಎಂಬ ಪಕ್ಷಿಯೊಂದು ಯುದ್ಧದಲ್ಲಿ ನಮ್ಮಿಬ್ಬರ ಜಯವನ್ನು ಸೂಚಿಸುವಂತೆ ಕೂಗುತ್ತಿದೆ.

ಹಾಗೆ ಮುಂದೆ ನಡೆದಾಗ ಕಬಂಧಾಸುರ ಎದುರಾದ. ಬೃಹದಾಕಾರದ ಘೋರ ರಕ್ಕಸನಿಗೆ ತಲೆ ಕತ್ತುಗಳೇ ಇರಲಿಲ್ಲ ! ಅವನ ಹೊಟ್ಟೆಯಲ್ಲಿಯೇ ಬಾಯಿ ಕಾಣುತ್ತಿತ್ತು. ಹಣೆಯ ಮೇಲೆ ಭಯಂಕರವಾದ ಒಂದು ವಿಶಾಲ ಕಣ್ಣು ಇತ್ತು. ಅವನು ಒಂದೊಂದು ಯೋಜನ ಉದ್ದವಾಗಿದ್ದ ತನ್ನ ಕೈಗಳಿಂದ ರಾಮ ಲಕ್ಷ್ಮಣರನ್ನು ಹಿಡಿದ. ಒಂದು ಕೈಯಲ್ಲಿ ಸೆರೆಯಾಗಿದ್ದ ಶ್ರೀರಾಮ ಧೈರ್ಯದಿಂದಿದ್ದರೂ ಮತ್ತೊಂದು ಕೈಸೆರೆಯಾಗಿದ್ದ ಲಕ್ಷ್ಮಣ ಗಾಬರಿಗೊಂಡಿದ್ದ. ಶ್ರೀರಾಮ ಅವನನ್ನು ಸಮಾಧಾನಪಡಿಸಿ ಧೈರ್ಯ–ವಾಗಿರುವಂತೆ ಹೇಳಿದ.

ನೋಡು ತಮ್ಮ ! ಅನೇಕ ಸಂಕಟಗಳನ್ನು ಎದುರಿಸಿಕೊಂಡು ಬಂದ ನಮಗೆ ಸೀತೆಯನ್ನು ಕಾಣುವ ಮೊದಲೆ ಮತ್ತೊಂದು ಆಪತ್ತು ಎದುರಾಯಿತಲ್ಲ ! ಕಾಲ ಎಂಥ ಶೂರರನ್ನೂ ಬಿಡದೆ ಆಕ್ರಮಿಸುತ್ತದೆ ! ಹೀಗೆ ಹೇಳಿದ ಶ್ರೀರಾಮ ತಾನು ಧೃತಿಗೆಡದೆ ಸ್ಥಿರಬುದ್ಧಿಯವನಾದನು.

❖

ಕಬಂಧಗ್ರಾಹಃ

ಕೃತ್ವೈವಮುದಕಂ ತಸ್ಮೈ ಪ್ರಸ್ಥಿತೌ ರಾಮಲಕ್ಷ್ಮಣೌ ।
ಅವೇಕ್ಷಂತೌ ವನೇ ಸೀತಾಂ ಪಶ್ಚಿಮಾಂ ಜಗ್ಮತುರ್ದಿಶಮ್ ॥೧॥

ತೌ ದಿಶಂ ದಕ್ಷಿಣಾಂ ಗತ್ವಾ ಶರಚಾಪಾಸಿಧಾರಿಣೌ ।
ಅವಿಪ್ರಹತಮೈಕ್ಷ್ವಾಕೌ ಪಂಥಾನಂ ಪ್ರತಿಜಗ್ಮತುಃ ॥೨॥

ಗುಲ್ಮೈರ್ವೃಕ್ಷೈಶ್ಚ ಬಹುಭಿರ್ಲತಾಭಿಶ್ಚ ಪ್ರವೇಷ್ಟಿತಮ್ ।
ಆವೃತಂ ಸರ್ವತೋ ದುರ್ಗಂ ಗಹನಂ ಘೋರದರ್ಶನಮ್ ॥೩॥

ವ್ಯತಿಕ್ರಮ್ಯ ತು ವೇಗೇನ ಗೃಹೀತ್ವಾ ದಕ್ಷಿಣಾಂ ದಿಶಮ್।
ಸುಭೀಮಂ ತನ್ಮಹಾರಣ್ಯಂ ವ್ಯತಿಯಾತೌ ಮಹಾಬಲೌ ॥೪॥

ತತಃ ಪರಂ ಜನಸ್ಥಾನಾತ್ತ್ರಿಕ್ರೋಶಂ ಗಮ್ಯ ರಾಘವೌ ।
ಕ್ರೌಂಚಾರಣ್ಯಂ ವಿವಿಶತುರ್ಗಹನಂ ತೌ ಮಹೌಜಸೌ ॥೫॥

ಹೀಗೆ ಜಟಾಯುವಿಗೆ ಜಲಾಂಜಲಿಯಿತ್ತು ಹೊರಟ ರಾಮ ಲಕ್ಷ್ಮಣರು ಸೀತೆಯನ್ನು ಅರಸುತ್ತ ಪಶ್ಚಿಮದಿಕ್ಕಿಗೆ ತೆರಳಿದರು.

ಬಿಲ್ಲು ಬಾಣಖಡ್ಗಗಳನ್ನು ಧರಿಸಿದ್ದ ಇಕ್ಷ್ವಾಕುವಂಶದ ಆ ರಾಮಲಕ್ಷ್ಮಣರು ದಕ್ಷಿಣದಿಕ್ಕಿಗೆ ಹೊರಳಿ ಯಾರೂ ಓಡಾಡದ ನಿರ್ಜನ ಮಾರ್ಗದತ್ತ ಹೊರಟರು.

ಆ ಪ್ರದೇಶವು ಮರಗಿಡಬಳ್ಳಿಗಳಿಂದ ಗಹನವೂ ದುರ್ಗಮವೂ ನೋಡಲು ಭಯಂಕರವೂ ಇದ್ದಿತು. ಸಿಂಹ ಮುಂತಾದ ಕ್ರೂರ ಪ್ರಾಣಿಗಳಿಂದ ತುಂಬಿದ ಭಯಾನಕವಾಗಿದ್ದ ಆ ಗೊಂಡಾರಣ್ಯವನ್ನು ವೇಗವಾಗಿ ದಾಟಿದರು.

ಆ ಜನಸ್ಥಾನದಿಂದ ಮೂರು ಕ್ರೋಶದಷ್ಟು ದಾರಿಯನ್ನು ದಾಟಿ ಬಲಶಾಲಿ-ಗಳಾದ ಆ ರಾಮ ಲಕ್ಷ್ಮಣರು ಕ್ರೌಂಚಾರಣ್ಯವನ್ನು ತಲುಪಿದರು.

ನಾನಾಮೇಘಘನಪ್ರಖ್ಯಂ ಪ್ರಹೃಷ್ಟಮಿವ ಸರ್ವತಃ ।
ನಾನಾವರ್ಣೈಃ ಶುಭೈಃ ಪುಷ್ಪೈಃ ಮೃಗಪಕ್ಷಿಗಣೈರ್ವೃತಮ್ ॥೬॥

ದಿದೃಕ್ಷಮಾಣೌ ವೈದೇಹೀಂ ತದ್ವನಂ ತೌ ವಿಚಿಕ್ಯತುಃ ।
ತತ್ರ ತತ್ರಾವತಿಷ್ಠಂತೌ ಸೀತಾಹರಣಕರ್ಶಿತೌ ॥೭॥

ತತಃ ಪೂರ್ವೇಣ ತೌ ಗತ್ವಾ ತ್ರಿಕ್ರೋಶಂ ಭ್ರಾತರೌ ತದಾ ।
ಕ್ರೌಂಚಾರಣ್ಯಮತಿಕ್ರಮ್ಯ ಮತಂಗಾಶ್ರಮಮಂತರೇ ॥೮॥

ಅನೇಕ ಮೋಡಗಳ ಗುಂಪಿನ ನೆರಳಿನಂತಿರುವ ಬಗೆಬಗೆಯ ಪಕ್ಷಿಗಣಗಳಿಂದ

ಹರ್ಷಗೊಂಡಂತಿರುವ ನಾನಾವ್ಯಾಲ ಮೃಗಗಳಿಂದ ತುಂಬಿದೆ ಕ್ರೌಂಚಾರಣ್ಯ. ವೈದೇಹಿಯನ್ನು ಕಾಣಲು ಬಯಸಿದ ರಾಮಲಕ್ಷ್ಮಣರು ಆ ವನವನ್ನು ಪ್ರವೇಶಿಸಿ ಹುಡುಕಿದರು. ಸೀತಾಪಹರಣ ದುಃಖಿತರಾಗಿ ಅಲ್ಲಲ್ಲಿ ನಿಲ್ಲುತ್ತ ಅಲೆದರು.

ತರುವಾಯ ಅಲ್ಲಿಂದ ಪೂರ್ವಕ್ಕೆ ಹೊರಟು ಮೂರು ಹರಿದಾರಿ ದಾಟಿ ದಾರಿಮಧ್ಯದಲ್ಲಿ ಮತಂಗಾಶ್ರಮವನ್ನು ಕಂಡರು.

ದೃಷ್ಟ್ವಾ ತು ತದ್ವನಂ ಘೋರಂ ಬಹುಭೀಮಮೃಗದ್ವಿಜಮ್ ।
ನಾನಾಸತ್ತ್ವಸಮಾಕೀರ್ಣಂ ಸರ್ವಂ ಗಹನಪಾದಪಮ್ ॥೯॥

ದದೃಶಾತೇ ಗಿರೌ ತತ್ರ ದರೀಂ ದಶರಥಾತ್ಮಜೌ ।
ಪಾತಾಲಸಮಗಂಭೀರಾಂ ತಮಸಾ ನಿತ್ಯಸಂವೃತಾಮ್ ॥೧೦॥

ಆಸಾದ್ಯ ತೌ ನರವ್ಯಾಘ್ರೌ ದರ್ಯಾಸ್ತಸ್ಯಾವಿದೂರತಃ ।
ದದೃಶಾತೇ ಮಹಾರೂಪಾಂ ರಾಕ್ಷಸೀಂ ವಿಕೃತಾನನಾಮ್ ॥೧೧॥

ಭಯದಾಮಲ್ಪಸತ್ತ್ವಾನಾಂ ಬೀಭತ್ಸಾಂ ರೌದ್ರದರ್ಶನಾಮ್ ।
ಲಂಬೋದರೀಂ ತೀಕ್ಷ್ಣದಂಷ್ಟ್ರಾಂ ಕರಾಲಾಂ ಪರುಷತ್ವಚಮ್ ॥೧೨॥

ಭಕ್ಷಯಂತೀಂ ಮೃಗಾನ್ಭೀಮಾನ್ವಿಕಟಾಂ ಮುಕ್ತಮೂರ್ಧಜಾಮ್ ।
ಪ್ರೇಕ್ಷೇತಾಂ ತೌ ತತಸ್ತತ್ರ ಭ್ರಾತರೌ ರಾಮಲಕ್ಷ್ಮಣೌ ॥೧೩॥

ಭಯಂಕರವಾದ ಮೃಗ ಹಾಗೂ ಹಕ್ಕಿಗಳಿರುವ, ನಾನಾ ಪ್ರಾಣಿಗಳಿಂದ ತುಂಬಿರುವ ದಟ್ಟವಾದ ಮರಗಳಿಂದ ಕೂಡಿರುವ ಘೋರ ವನವನ್ನು ಕಂಡರು. ಮುಂದೆ ದಶರಥ ಪುತ್ರರು ಅಲ್ಲೊಂದು ಗುಹೆಯನ್ನು ನೋಡಿದರು. ಪಾತಾಳದಂತೆ ಆಳ ಗಂಭೀರವೂ ನಿತ್ಯವೂ ಕತ್ತಲೆ ತುಂಬಿದ ಗುಹೆಯ ಬಳಿ ಸಾರಿದರು ಆ ನರ ಶ್ರೇಷ್ಠರು.

ಅಲ್ಲಿ ದೊಡ್ಡ ಗಾತ್ರದವಳು, ವಿಕಾರ ಮುಖದವಳು, ದುರ್ಬಲ ಪ್ರಾಣಿಗಳಿಗೆ ಭಯಂಕರಳು, ಬೀಭತ್ಸಳೂ, ನೋಡಲು ಉಗ್ರಳು ಜೋತ ಹೊಟ್ಟೆಯವಳು, ತೀಕ್ಷ್ಣ ಕೋರೆದಾಡೆಯವಳು, ಒರಟು ಚರ್ಮದವಳು ಕರಾಳ ರೂಪದವಳು, ಭಯಂಕರ ಮೃಗಗಳನ್ನು ತಿನ್ನುವವಳು ಸ್ಥೂಲಾಂಗದವಳು ಕೆದರಿದ ತಲೆ ಕೂದಲಿನವಳು ಆದ ರಕ್ಕಸಿಯನ್ನು ಸಹೋದರರಾದ ರಾಮಲಕ್ಷ್ಮಣರು ಕಂಡರು.

ಸಾ ಸಮಾಸಾದ್ಯ ತೌ ವೀರೌ ವ್ರಜಂತಂ ಭ್ರಾತುರಗ್ರತಃ ।
ಏಹಿ ರಂಸ್ಯಾವಹೇತ್ಯುಕ್ತ್ವಾ ಸಮಾಲಂಬತ ಲಕ್ಷ್ಮಣಮ್ ॥೧೪॥

ಉವಾಚ ಚೈನಂ ವಚನಂ ಸೌಮಿತ್ರಿಮುಪಗೂಹ್ಯ ಸಾ ।
ಅಹಂ ತ್ವಯೋಮುಖೀ ನಾಮ ಲಾಭಸ್ತೇ ತ್ವಮಸಿ ಪ್ರಿಯಃ ॥೧೫॥

ನಾಥ ಪರ್ವತಕೂಟೇಷು ನದೀನಾಂ ಪುಲಿನೇಷು ಚ ।
ಆಯುಃಶೇಷಮಿದಂ ವೀರ ತ್ವಂ ಮಯಾ ಸಹ ರಂಸ್ಯಸೇ ॥೧೬॥

ಏವಮುಕ್ತಸ್ತು ಕುಪಿತಃ ಖಡ್ಗಮುದ್ಧೃತ್ಯ ಲಕ್ಷ್ಮಣಃ ।
ಕರ್ಣನಾಸಸ್ತನಂ ಚಾಸ್ಯಾ ನಿಚಕರ್ತಾರಿಸೂದನಃ ॥೧೭॥

ಕರ್ಣನಾಸೇ ನಿಕೃತ್ತೇ ತು ವಿಸ್ವರಂ ಸಾ ವಿನದ್ಯ ಚ ।
ಯಥಾಗತಂ ಪ್ರದುದ್ರಾವ ರಾಕ್ಷಸೀ ಭೀಮದರ್ಶನಾ ॥೧೮॥

ಅವಳು ಆ ವೀರ ಪುರುಷರ ಬಳಿ ಬಂದು ಅಣ್ಣ ರಾಮನ ಮುಂದೆ ಹೋಗುತ್ತಿದ್ದ ಲಕ್ಷ್ಮಣನನ್ನು 'ಬಾ ವಿಹರಿಸೋಣ' ಎಂದು ದುಂಬಾಲು ಬಿದ್ದಳು. ಲಕ್ಷ್ಮಣನ ಬಳಿ ಸಾರಿ, 'ನಾನು ಅಯೋಮುಖೀ. ನಿನ್ನ ಪಾಲಿನ ಲಾಭದವಳು. ನೀನು ನನಗೆ ಪ್ರಿಯನಾಗಿರುವಿ. ನಾಥ ! ಪರ್ವತ ಕೂಟಗಳಲ್ಲಿ ನದಿಯ ತೀರಗಳಲ್ಲಿ ಉಳಿದ ಆಯುಷ್ಯವನ್ನು ಸಂತೋಷದಿಂದ ರಮಿಸಿಕೊಂಡು ಕಳೆಯೋಣ' ಎಂದಳು.

ಹೀಗೆ ಹೇಳಿದಾಗ ಕುಪಿತನಾದ ಶತ್ರುಸಂಹಾರಕ ಅವಳ ಕಿವಿ ಮೂಗುಗಳನ್ನು ಎರಡು ಸ್ತನಗಳನ್ನೂ ಕತ್ತರಿಸಿ ಹಾಕಿದ.

ಕಿವಿ ಮೂಗುಗಳನ್ನು ಕತ್ತರಿಸಿದಾಗ ನೋಡಲು ಭಯಂಕರಳಾಗಿ ಅರಚುತ್ತ ಬಂದ ಹಾದಿಯಲ್ಲೆ ಓಡಿ ಹೋದಳು.

ತಸ್ಯಾಂ ಗತಾಯಾಂ ಗಹನಂ ವಿಶಂತೌ ವನಮೋಜಸಾ ।
ಆಸೇದತುರಮಿತ್ರಘ್ನೌ ಭ್ರಾತರೌ ರಾಮಲಕ್ಷ್ಮಣೌ ॥೧೯॥

ಲಕ್ಷ್ಮಣಸ್ತು ಮಹಾತೇಜಾಃ ಸತ್ತ್ವವಾನ್ ಶೀಲವಾನ್ ಶುಚಿಃ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಭ್ರಾತರಂ ದೀಪ್ತತೇಜಸಮ್ ॥೨೦॥

ಸ್ಪಂದತೇ ಮೇ ದೃಢಂ ಬಾಹುರುದ್ವಿಗ್ನಮಿವ ಮೇ ಮನಃ ।
ಪ್ರಾಯಶಶ್ಚಾಪ್ಯನಿಷ್ಟಾನಿ ನಿಮಿತ್ತಾನ್ಯುಪಲಕ್ಷಯೇ ॥೨೧॥

ತಸ್ಮಾತ್ ಸಜ್ಜೀಭವಾರ್ಯ ತ್ವಂ ಕುರುಷ್ವ ವಚನಂ ಹಿತಮ್ ।
ಮಮೈವ ಹಿ ನಿಮಿತ್ತಾನಿ ಸದ್ಯಃ ಶಂಸಂತಿ ಸಂಭ್ರಮಮ್ ॥೨೨॥

ಏಷ ವಂಚುಲಕೋ ನಾಮ ಪಕ್ಷೀ ಪರಮದಾರುಣಃ ।
ಆವಯೋರ್ವಿಜಯಂ ಯುದ್ಧೇ ಶಂಸನ್ನಿವ ವಿನರ್ದತಿ ॥೨೩॥

ತಯೋರನ್ವೇಷತೋರೇವಂ ಸರ್ವಂ ತದ್ವನಮೋಜಸಾ ।
ಸಂಜಜ್ಞೇ ವಿಪುಲಃ ಶಬ್ದಃ ಪ್ರಭಂಜನ್ನಿವ ತದ್ವನಮ್ ॥೨೪॥

ಆ ರಕ್ಕಸಿ ಹೋದ ಬಳಿಕ ಶತ್ರುಸಂಹಾರಕರಾದ ರಾಮಲಕ್ಷ್ಮಣರು ವೇಗವಾಗಿ ಸಾಗುತ್ತ ಗಹನಾರಣ್ಯವೊಂದನ್ನು ಹೊಕ್ಕಿದರು.

ಮಹಾತೇಜಸ್ವಿ ಸತ್ವಶಾಲಿ ಶೀಲವಂತ ಶುಚಿಯಾದ ಲಕ್ಷ್ಮಣನು ತೇಜಸ್ಸಿನಿಂದ ಬೆಳಗುತ್ತಿರುವ ಅಣ್ಣನಿಗೆ ಕೈಮುಗಿದು ಹೇಳಿದನು – ನನ್ನ ಎಡಭುಜ ತುಂಬ ಅದರುತ್ತಿದೆ. ಮನಸ್ಸು ಉದ್ವೇಗಗೊಂಡಿದೆ. ಮೇಲಿಂದ ಮೇಲೆ ಅಪಶಕುನಗಳು ಸಂಭವಿಸುತ್ತಿವೆ. ಆದ್ದರಿಂದ ಆರ್ಯ ! ಸನ್ನದ್ಧನಾಗಿರು. ನನ್ನ ಮಾತನ್ನು ಮನ್ನಿಸು. ನನಗೆ ತೋರುತ್ತಿರುವ ನಿಮಿತ್ತಗಳು ತಾತ್ಕಾಲಿಕವಾದ ಭಯವನ್ನು ಸೂಚಿಸುತ್ತದೆ.

ಪರಮದಾರುಣವಾದ ಈ ವಂಜುಲಕ ಎಂಬ ಹಕ್ಕಿ ನಮ್ಮ ಗೆಲುವನ್ನು ಸೂಚಿಸುವಂತೆ ಕೂಗುತ್ತಿದೆ.

ಹೀಗೆ ಅವಸರದಿಂದ ಅವರು ಆ ವನವನ್ನೆಲ್ಲ ಹುಡುಕುತ್ತಿರುವಾಗಲೆ ವನವನ್ನೆ ಭಂಗಗೊಳಿಸುವಂತೆ ಭೀಕರವಾದ ಶಬ್ದವುಂಟಾಯಿತು.

ಸಂವೇಷ್ಟಿತಮಿವಾತ್ಯರ್ಥಂ ಗಗನಂ ಮಾತರಿಶ್ವನಾ ।
ವನಸ್ಯ ತಸ್ಯ ಶಬ್ದೋಽಭೂದ್ದಿವಮಾಪೂರಯನ್ನಿವ ॥೨೫॥

ತಂ ಶಬ್ದಂ ಕಾಂಕ್ಷಮಾಣಸ್ತು ರಾಮಃ ಕಕ್ಷೇ ಸಹಾನುಜಃ ।
ದದರ್ಶ ಸುಮಹಾಕಾಯಂ ರಾಕ್ಷಸಂ ವಿಪುಲೋರಸಮ್ ॥೨೬॥

ಆಸೇದತುಸ್ತತಸ್ತತ್ರ ತಾವುಭೌ ಪ್ರಮುಖೇ ಸ್ಥಿತಮ್ ।
ವಿವೃದ್ಧಮಶಿರೋಗ್ರೀವಂ ಕಬಂಧಮುದರೇಮುಖಮ್ ॥೨೭॥

ರೋಮಭಿರ್ನಿಚಿತೈಸ್ತೀಕ್ಷ್ಣೈರ್ಮಹಾಗಿರಿಮಿವೋಚ್ಛ್ರಿತಮ್ ।
ನೀಲಮೇಘನಿಭಂ ರೌದ್ರಂ ಮೇಘಸ್ತನಿತನಿಃಸ್ವನಮ್ ॥೨೮॥

ಅಗ್ನಿಜ್ವಾಲಾನಿಕಾಶೇನ ಲಲಾಟಸ್ಥೇನ ದೀಪ್ಯತಾ ।
ಮಹಾಪಕ್ಷ್ಮಣಾ ಪಿಂಗೇನ ವಿಪುಲೇನಾಯತೇನ ಚ ॥೨೯॥

ಏಕೇನೋರಸಿ ಘೋರೇಣ ನಯನೇನಾಶುದರ್ಶಿನಾ ।
ಮಹಾದಂಷ್ಟ್ರೋಪಪನ್ನಂ ತಂ ಲೇಲಿಹಾನಂ ಮಹಾಮುಖಮ್ ॥೩೦॥

ಭಕ್ಷಯಂತಂ ಮಹಾಘೋರಾನೃಕ್ಷಸಿಂಹಮೃಗದ್ವಿಪಾನ್ ।
ಘೋರೌ ಭುಜೌ ವಿಕುರ್ವಾಣಮುಭೌ ಯೋಜನಮಾಯತೌ ॥೩೧॥

ಕರಾಭ್ಯಾಂ ವಿವಿಧಾನ್ ಗೃಹ್ಯ ಋಕ್ಷಾನ್ ಪಕ್ಷಿಗಣಾನ್ ಮೃಗಾನ್ ।
ಆಕರ್ಷಂತಂ ವಿಕರ್ಷಂತಮನೇಕಾನ್ ಮೃಗಯೂಥಪಾನ್ ॥೩೨॥

ಸ್ಥಿತಮಾವೃತ್ಯ ಪಂಥಾನಂ ತಯೋರ್ಭ್ರಾತೋಃ ಪ್ರಪನ್ನಯೋಃ ।

ಭಾರಿ ಬಿರುಗಾಳಿ ಆ ವನವನ್ನೆಲ್ಲ ಕಟ್ಟಿ ಹಾಕಿದಂತೆ ಬೀಸಿತು. ಆ ಘೋರಶಬ್ದವು ಆಗಸವನ್ನೆಲ್ಲ ತುಂಬಿಕೊಂಡಂತೆ ಭಾಸವಾಗುತ್ತಿತ್ತು.

ಆ ಘೋರ ಶಬ್ದದ ಮೂಲವನ್ನು ತಿಳಿಯಬೇಕೆನ್ನುವಷ್ಟರಲ್ಲಿ ಕಾಡಿನ ಪೊದೆಯಲ್ಲಿ ತಮ್ಮನೊಡನಿದ್ದ ರಾಮನು ರಾಕ್ಷಸೊಬ್ಬನನ್ನು ಕಂಡ.

ಆ ರಾಕ್ಷಸ ಹೀಗಿದ್ದ - ವಿಶಾಲವಾದ ಎದೆ. ದೊಡ್ಡ ಶರೀರ. ನಿಮಿರಿನಿಂತ ಹರಿತ ರೋಮಗಳಿಂದ ಎತ್ತರವಾದ ಮಹಾಗಿರಿಯಂತೆ ಕಾಣುತ್ತಿದ್ದ. ಕಾರ್ಮೋಡಗಳಂತೆ ಕಪ್ಪು. ಗುಡುಗಿನಂತಹ ಸ್ವರ. ಎದೆಯಲ್ಲಿ, ಹಣೆಯಲ್ಲಿ, ವಿಕಾರವಾದ ಒಂದು ವಿಶಾಲ ನೇತ್ರ - ಬೆಂಕಿಯಂತಹ ನೋಟ. ವಿಶಾಲ ರೆಪ್ಪೆ, ಬೂದುಬಣ್ಣದ ಕಣ್ಣಗುಡ್ಡೆ, ತೀಕ್ಷ್ಣವಾದ ಬಿರುನೋಟ, ದೊಡ್ಡ ಕೋರೆದಾಡೆಗಳು. ಆಗಾಗ ಬಾಯಿಯನ್ನು ನೆಕ್ಕುತ್ತಿರುವ ಚಾಚಿದ ಹರಿತವಾದ ಉದ್ದ ನಾಲಿಗೆ.

ಮಹಾಘೋರ ಕರಡಿ ಸಿಂಹ ಪಶುಪಕ್ಷಿಗಳೇ ಅವನ ಆಹಾರ. ಒಂದು ಯೋಜನದಷ್ಟು ದೀರ್ಘವಾದ ನೀಳವಾದ ಘೋರ ತೋಳುಗಳು.

ಎರಡೂ ತೋಳುಗಳಿಂದ ಬಗೆ ಬಗೆಯ ಕರಡಿ ಪಶು ಪಕ್ಷಿ ಜಿಂಕೆಗಳನ್ನು ಸೆಳೆದು ಕಬಳಿಸುತ್ತಿರುವನು. ರಾಮಲಕ್ಷ್ಮಣರು ಬರುವಾಗ ಅವರನ್ನು ಅಡ್ಡಗಟ್ಟಿದನು.

ಅಥ ತೌ ಸಮಭಿಕ್ರಮ್ಯ ಕ್ರೋಶಮಾತ್ರೇ ದದರ್ಶತುಃ ॥೩೩॥

ಮಹಾಂತಂ ದಾರುಣಂ ಭೀಮಂ ಕಬಂಧಂ ಭುಜಸಂವೃತಮ್ ।
ಕಬಂಧಮಿವ ಸಂಸ್ಥಾನಾದತಿಘೋರಪ್ರದರ್ಶನಮ್ ॥೩೪॥

ಸ ಮಹಾಬಾಹುರತ್ಯರ್ಥಂ ಪ್ರಸಾರ್ಯ ವಿಪುಲೌ ಭುಜೌ ।
ಜಗ್ರಾಹ ಸಹಿತಾವೇವ ರಾಘವೌ ಪೀಡಯನ್ ಬಲಾತ್ ॥೩೫॥

ಖಡ್ಗಿನೌ ದೃಢಧನ್ವಾನೌ ತಿಗ್ಮತೇಜೋವಪುರ್ಧರೌ ।
ಭ್ರಾತರೌ ವಿವಶಂ ಪ್ರಾಪ್ತೌ ಕೃಷ್ಯಮಾಣೌ ಮಹಾಬಲೌ ॥೩೬॥

ತತ್ರ ಧೈರ್ಯೇಣ ಶೂರಸ್ತು ರಾಘವೋ ನೈವ ವಿವ್ಯಥೇ ।
ಬಾಲ್ಯಾದನಾಶ್ರಯತ್ವಾಚ್ಚ ಲಕ್ಷ್ಮಣಸ್ತ್ವತಿವಿವ್ಯಥೇ ॥೩೭॥

ಉವಾಚ ಚ ವಿಷಣ್ಣಃ ಸನ್ ರಾಘವಂ ರಾಘವಾನುಜಃ ।

ಅನಂತರ ರಾಮಲಕ್ಷ್ಮಣರು ಕ್ರೋಶದಷ್ಟು ದೂರ ನಿಂತು ಅವನನ್ನು ಕಂಡರು. ಅತಿಭಯಂಕರನು, ಉದ್ದ ತೋಳಿನವನು, ರುಂಡ ಮಾತ್ರಾಕೃತಿಯೂ ಆದ ರಕ್ಕಸನನ್ನು.

ಆ ಮಹಾಬಾಹುವು ವಿಶಾಲವಾದ ತೋಳುಗಳನ್ನು ಚೆನ್ನಾಗಿ ಚಾಚಿ ಬಲಾತ್ಕಾರವಾಗಿ ಪೀಡಿಸುತ್ತ ರಾಮಲಕ್ಷ್ಮಣರನ್ನು ಒಟ್ಟಾಗಿ ಹಿಡಿದೇ ಹಿಡಿದ.

ಖಡ್ಗಗಳನ್ನು ಹಿಡಿದವರು, ಗಟ್ಟಿ ಬಿಲ್ಲು ಹಿಡಿದವರು, ತೀಕ್ಷ್ಣ ತೇಜಸ್ವಿಗಳು, ಮಹಾಬಲರೂ ಆಗಿದ್ದ ರಾಮಲಕ್ಷ್ಮಣರು ಅವನ ಕೈವಶರಾದರು.

ಅವರಿಬ್ಬರಲ್ಲಿ ಶೂರನಾದ ರಾಮ ಧೈರ್ಯದಿಂದ ಕಳವಳಗೊಳ್ಳದೆ ಇದ್ದನು. ಲಕ್ಷ್ಮಣ ಚಿಕ್ಕವನಾದುದರಿಂದ ಧೈರ್ಯ ಕುಂದಿದವನಾದ್ದರಿಂದ ತುಂಬ ವ್ಯಥೆಗೊಂಡನು. ರಾಮಾನುಜ ಶ್ರೀರಾಮನಿಗೆ ವಿಷಣ್ಣನಾಗಿ ಹೀಗೆ ಹೇಳಿದನು-

ಪಶ್ಯ ಮಾಂ ವೀರ ವಿವಶಂ ರಾಕ್ಷಸಸ್ಯ ವಶಂ ಗತಮ್ ॥೩೮॥

ಮಯ್ಯೇಕೇನ ವಿನಿರ್ಮುಕ್ತಃ ಪರಿಮುಂಚಸ್ವ ರಾಘವ ।
ಮಾಂ ಹಿ ಭೂತಬಲಿಂ ದತ್ತ್ವಾ ಪಲಾಯಸ್ವ ಯಥಾಸುಖಮ್ ॥೩೯॥

ಅಧಿಗಂತಾಸಿ ವೈದೇಹೀಮಚಿರೇಣೇತಿ ಮೇ ಮತಿಃ ।
ಪ್ರತಿಲಭ್ಯ ಚ ಕಾಕುತ್ಸ್ಥ ಪಿತೃಪೈತಾಮಹೀಂ ಮಹೀಮ್ ॥೪೦॥

ತತ್ರ ಮಾಂ ರಾಮ ರಾಜ್ಯಸ್ಥಃ ಸ್ಮರ್ತುಮರ್ಹಸಿ ಸರ್ವದಾ ।
ಲಕ್ಷ್ಮಣೇನೈವಮುಕ್ತಸ್ತು ರಾಮಃ ಸೌಮಿತ್ರಿಮಬ್ರವೀತ್ ॥೪೧॥

ಮಾ ಸ್ಮ ತ್ರಾಸಂ ಕೃಥಾ ವೀರ ನ ಹಿ ತ್ವಾದೃಗ್ವಿಷೀದತಿ ।

ವೀರನೇ ! ಪರಾಧೀನನಾಗಿ ರಾಕ್ಷಸನ ವಶವಾಗಿದ್ದೇನೆ ನೋಡು. ನನ್ನನ್ನು ಬಿಟ್ಟು ನೀನು ಇವನಿಂದ ಬಿಡಿಸಿಕೊ. ನನ್ನನ್ನು ಇವನಿಗೆ ಬಲಿಕೊಟ್ಟು ನೀನು ಸುಖವಾಗಿ ಓಡಿ ಹೋಗು. ಬೇಗನೇ ನೀನು ವೈದೇಹಿಯನ್ನು ಪಡೆಯುವಿ ಎಂದು ನನ್ನ ಭಾವನೆ.

ಪಿತೃಪಿತಾಮಹರ ಸೊತ್ತಾದ ಸಾಮ್ರಾಜ್ಯಭೂಮಿಯನ್ನು ಪಡೆದು ರಾಜನಾಗಿ ನನ್ನನ್ನು ಸರ್ವದಾ ನೆನೆಸಿಕೋ.

ಲಕ್ಷ್ಮಣ ಹೀಗೆ ಹೇಳಿದಾಗ ರಾಮನು ಸುಮಿತ್ರಾಸುತನಿಗೆ ಇಂತೆಂದನು - ವೀರ ! ಭಯಪಡಬೇಡ. ನಿನ್ನಂತಹವನು ಹೀಗೆ ವಿಷಾದಕ್ಕೊಳಬಾರದು.

ಏತಸ್ಮಿನ್ನಂತರೇ ಕ್ರೂರೋ ಭ್ರಾತರೌ ರಾಮಲಕ್ಷ್ಮಣೌ ॥೪೨॥
ಪಪ್ರಚ್ಛ ಘನನಿರ್ಘೋಷಃ ಕಬಂಧೋ ದಾನವೋತ್ತಮಃ ।
ಕೌ ಯುವಾಂ ವೃಷಭಸ್ಕಂಧೌ ಮಹಾಖಡ್ಗಧನುರ್ಧರೌ ॥೪೩॥
ಘೋರಂ ದೇಶಮಿಮಂ ಪ್ರಾಪ್ತೌ ದೈವೇನ ಮಮ ಚಾಕ್ಷುಷೌ ।
ವದತಂ ಕಾರ್ಯಮಿಹ ವಾಂ ಕಿಮರ್ಥಂ ಚಾಗತೌ ಯುವಾಮ್॥೪೪॥
ಇಮಂ ದೇಶಮನುಪ್ರಾಪ್ತೌ ಕ್ಷುಧಾರ್ತಸ್ಯೇಹ ತಿಷ್ಠತಃ ।
ಸಬಾಣಚಾಪಖಡ್ಗೌ ಚ ತೀಕ್ಷ್ಣಶೃಂಗಾವಿವರ್ಷಭೌ ॥೪೫॥
ಮಮಾಸ್ಯಮನುಸಂಪ್ರಾಪ್ತೌ ದುರ್ಲಭಂ ಜೀವಿತಂ ಪುನಃ ।
ತಸ್ಯ ತದ್ವಚನಂ ಶ್ರುತ್ವಾ ಕಬಂಧಸ್ಯ ದುರಾತ್ಮನಃ ॥೪೬॥
ಉವಾಚ ಲಕ್ಷ್ಮಣಂ ರಾಮೋ ಮುಖೇನ ಪರಿಶುಷ್ಯತಾ ।
ಕೃಚ್ಛ್ರಾತ್ ಕೃಚ್ಛ್ರತರಂ ಪ್ರಾಪ್ಯ ದಾರುಣಂ ಸತ್ಯವಿಕ್ರಮ ॥೪೭॥
ವ್ಯಸನಂ ಜೀವಿತಾಂತಾಯ ಪ್ರಾಪ್ತಮಪ್ರಾಪ್ಯ ತಾಂ ಪ್ರಿಯಾಮ್ ।
ಕಾಲಸ್ಯ ಸುಮಹದ್ವೀರ್ಯಂ ಸರ್ವಭೂತೇಷು ಲಕ್ಷ್ಮಣ ॥೪೮॥

ತ್ವಾಂ ಚ ಮಾಂ ಚ ನರವ್ಯಾಘ್ರ ವ್ಯಸನೈಃ ಪಶ್ಯ ಮೋಹಿತೌ ।
ನಾತಿಭಾರೋಽಸ್ತಿ ದೈವಸ್ಯ ಸರ್ವಭೂತೇಷು ಲಕ್ಷ್ಮಣ ॥೪೯॥

ಶೂರಾಶ್ಚ ಬಲವಂತಶ್ಚ ಕೃತಾಸ್ತ್ರಾಶ್ಚ ರಣಾಜಿರೇ ।
ಕಾಲಾಭಿಪನ್ನಾಃ ಸೀದಂತಿ ಯಥಾ ವಾಲುಕಸೇತವಃ ॥೫೦॥

ಇತಿ ಬ್ರುವಾಣೋ ದೃಢಸತ್ಯವಿಕ್ರಮೋ
ಮಹಾಯಶಾ ದಾಶರಥಿಃ ಪ್ರತಾಪವಾನ್ ।
ಅವೇಕ್ಷ್ಯ ಸೌಮಿತ್ರಿಮುದಗ್ರಪೌರುಷಂ
ಸ್ಥಿರಾಂ ತದಾ ಸ್ವಾಂ ಮತಿಮಾತ್ಮನಾಕರೋತ್ ॥೫೧॥

ಏತನ್ಮಧ್ಯೇ ಘೋರ ಧ್ವನಿಯ ದಾನವೋತ್ತಮ ಕ್ರೂರ ರಾಕ್ಷಸ ಕಬಂಧನು ಸಹೋದರ ರಾಮಲಕ್ಷ್ಮಣರನ್ನು ಕೇಳಿದ – ಎತ್ತಿನಂತೆ ಎತ್ತರದ ಭುಜದವರು,ಮಹಾ ಖಡ್ಗಧನುರ್ಧಾರಿಗಳು ಆದ ನೀವಿಬ್ಬರು ಯಾರು ? ಈ ಘೋರ ಪ್ರದೇಶಕ್ಕೆ ಬಂದವರು, ನನಗೆ ಆಹಾರವಾಗಿ ದಕ್ಕಿದವರಾದ ನೀವು ಯಾರು ? ಹೇಳಿ ನಿಮಗೇನು ಕೆಲಸ ಇಲ್ಲಿ ? ನಾನು ಹಸಿವೆಯಿಂದ ಕಂಗೆಟ್ಟಿರುವಾಗ ಇಲ್ಲಿಗೇಕೆ ಬಂದಿರಿ ?

ತೀಕ್ಷ್ಣ ಕೊಂಬಿನ ಜೋಡಿ ಎತ್ತಿನಂತಿರುವ ಬಾಣಬಿಲ್ಲು ಖಡ್ಗಗಳನ್ನು ಧರಿಸಿರುವ ನೀವು ನನ್ನ ಬಾಯಿಗೆ ಬಿದ್ದಿದ್ದೀರಿ. ನೀವು ಬದುಕುವುದು ಕಷ್ಟ.

ದುರಾತ್ಮ ಕಬಂಧನ ಮಾತ ಕೇಳಿ ಶ್ರೀರಾಮ ಬಾಡಿದ ಮುಖದಿಂದ ಲಕ್ಷ್ಮಣನಿಗೆ ಹೇಳಿದ – ಮೇಲಿಂದ ಮೇಲೆ ಅತಿಕಠಿಣವಾದ ದುಃಖಗಳನ್ನು ಹೊಂದಿದ್ದ ನಾವಿಂದು ಸೀತೆಯನ್ನು ಪಡೆಯುವ ಮುಂಚೆಯೇ ಬದುಕು ಕೊನೆಗೊಳ್ಳುವಂತಹ ದುಃಖವನ್ನು ಹೊಂದಿದ್ದೇವೆ.

ಕಾಲ ಎಲ್ಲರ ಮೇಲೆಯೂ ಪ್ರಭಾವ ಬೀರುವಂತಹುದು. ನೋಡು ನಮ್ಮಿಬ್ಬರನ್ನು ಕಾಲ ಮೋಹದ ಜಾಲಕ್ಕೆ ಸಿಲುಕಿಸಿದೆ. ಲಕ್ಷ್ಮಣ ! ಎಲ್ಲರ ಮೇಲೆಯೂ ಆಕ್ರಮಣ ನಡೆಸುವ ಕಾಲಕ್ಕೆ ಯಾವುದೂ ಕಷ್ಟವಲ್ಲ.

ಮರಳಿನಂತೆ ಮಾಡಿದ ಸೇತುವೆಯಂತೆ ಶೂರರು ಬಲಶಾಲಿಗಳು ಅಸ್ತ್ರವೇತ್ತರೂ ರಣಾಂಗಣದಲ್ಲಿ ಕಾಲವಶರಾಗಿ ಸಾಯುತ್ತಾರೆ.

ದೃಢ ಸತ್ಯಪರಾಕ್ರಮಿ ಮಹಾಯಶಸ್ವಿ ಪ್ರತಾಪಿಯು ಆದ ದಾಶರಥಿಯು ಉತ್ತಮ ಪೌರುಷ ತುಂಬಿರುವ ಲಕ್ಷ್ಮಣನನ್ನು ನೋಡಿ ತನ್ನ ಮತಿಯನ್ನು ತಾನೆ ಸ್ಥಿರಗೊಳಿಸಿಕೊಂಡನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಅರವತ್ತೊಂಭತ್ತನೇ ಸರ್ಗ ಮುಗಿಯಿತು.

ಸಪ್ತತಿತಮಃ ಸರ್ಗಃ

ಕಥಾಸಾರಾಂಶ– ತನ್ನ ತೋಳುಗಳಲ್ಲಿ ಸಿಲುಕಿದ ರಾಮ ಲಕ್ಷ್ಮಣರಿಗೆ ಕಬಂಧ ಹೇಳಿದನು – ಹಸಿದಿದ್ದೇನೆ. ದೂರದಲ್ಲಿಯೇ ಏಕೆ ಇದ್ದೀರಿ. ಚೈತನ್ಯ ಕಳೆದುಕೊಂಡ ನೀವೀಗ ದೈವವೇ ನನಗೊದಗಿಸಿದ ಆಹಾರ.

ಆಗ ಲಕ್ಷ್ಮಣ ಖೇದವನ್ನು ಬದಿಗಿರಿಸಿ ಪೌರುಷದ ನಿರ್ಧಾರ ಕೈಕೊಂಡು ರಾಮನಿಗೆ ಹೇಳಿದನು. – ರಾಮ ! ಇವನು ನಮ್ಮಿಬ್ಬರನ್ನು ಬಾಯಿಯಲ್ಲಿ ಹಾಕಿಕೊಳ್ಳುವ ಮೊದಲೇ ಇವನ ತೋಳುಗಳನ್ನು ಕತ್ತರಿಸಿಬಿಡೋಣ.

ಭಯಂಕರವಾದ ಈ ರಕ್ಕಸ ಜಗವನ್ನೆ ಸೋಲಿಸಿ ನಮ್ಮನ್ನು ಕೊಲ್ಲಲು ಬಂದಿಹನು. ಯಾಗದಲ್ಲಿ ಹೆದರಿ ನಿಶ್ಚೇಷ್ಟವಾದ ಪ್ರಾಣಿಯ ವಧೆ ವೀರ ಕ್ಷತ್ರಿಯರಿಗೆ ಪ್ರಶಸ್ತವಲ್ಲ. ಆದ್ದರಿಂದ ಈ ವೀರನ ತೋಳುಗಳನ್ನು ಕತ್ತರಿಸೋಣ.

ಲಕ್ಷ್ಮಣನ ಮಾತನ್ನು ಕೇಳಿ ಇವರನ್ನು ಕಬಂಧ ನುಂಗಲು ಮುನ್ನುಗ್ಗಿದ. ಅಷ್ಟರಲ್ಲಿ ಬಲತೋಳನ್ನು ಶ್ರೀರಾಮ, ಎಡತೋಳನ್ನು ಲಕ್ಷ್ಮಣನು ಕತ್ತರಿಸಿದರು.

ನೆಲಕ್ಕುರುಳಿ ಜೋರಾಗಿ ಗರ್ಜಿಸಿದ ಕಬಂಧ ನೀವು ಯಾರೆಂದು ಕೇಳಿದ. ಲಕ್ಷ್ಮಣ ರಾಮನನ್ನು ಪರಿಚಯಿಸಿದ – ಇವನು ಇಕ್ಷ್ವಾಕುವಂಶ ಸಂಜಾತನು. ರಾಮನೆಂದು ಜನರಿಗೆ ಪ್ರಸಿದ್ಧನಾದವನು. ಇವನ ತಮ್ಮ ಲಕ್ಷ್ಮಣ ನಾನು.

ಕೂಡಲೆ ಇಂದ್ರನ ವಚನವನ್ನು ನೆನೆದು ತುಂಬ ಪ್ರೀತನಾದ ಕಬಂಧ – ಪುರುಷವ್ಯಾಘ್ರರೆ ! ನಿಮಗೆ ಸ್ವಾಗತ. ಅದೃಷ್ಟವಶಾತ್ ನಿಮ್ಮ ದರ್ಶನವಾಯಿತು. ಹೊರೆಯಾಗಿದ್ದ ಈ ತೋಳುಗಳನ್ನು ಕತ್ತರಿಸಿದ್ದು ನನ್ನ ಭಾಗ್ಯ ಎಂದನು.

ರುಂಡಾವಶೇಷನಾಗಿರುವ ನೀನಾರು ? ಸರ್ವಾವಯವಗಳನ್ನು ಹೊಟ್ಟೆಯಲ್ಲಿ ಸೇರಿಸಿಕೊಂಡಿರುವ ಈ ವಿಕೃತರೂಪವೇಕೆ ? ಎಂದು ಲಕ್ಷ್ಮಣನು ಕೇಳಿದನು.

ನನ್ನ ಅವಿನಯದಿಂದ ಈ ವಿಕೃತರೂಪ ಬಂತು. ಅದು ಹೇಗೆಂದು ತಿಳಿಸುತ್ತೇನೆ ಎಂದ ಕಬಂಧ.

❖

ಕಬಂಧಬಾಹುಚ್ಛೇದಃ

ತೌ ತು ತತ್ರ ಸ್ಥಿತೌ ದೃಷ್ಟ್ವಾ ಭ್ರಾತರೌ ರಾಮಲಕ್ಷ್ಮಣೌ ।
ಬಾಹುಪಾಶಪರಿಕ್ಷಿಪ್ತೌ ಕಬಂಧೋ ವಾಕ್ಯಮಬ್ರವೀತ್ ॥೧॥

ತಿಷ್ಠತಃ ಕಿಂ ನು ಮಾಂ ದೃಷ್ಟ್ವಾ ಕ್ಷುಧಾರ್ತಂ ಕ್ಷತ್ರಿಯರ್ಷಭೌ ।
ಆಹಾರಾರ್ಥಂ ತು ಸಂದಿಷ್ಟೌ ದೈವೇನ ಗತಚೇತನೌ ॥೨॥

ತಚ್ಛ್ರುತ್ವಾ ಲಕ್ಷ್ಮಣೋ ವಾಕ್ಯಂ ಪ್ರಾಪ್ತಕಾಲಂ ಹಿತಂ ತದಾ ।
ಉವಾಚಾರ್ತಿಂ ಸಮಾಪನ್ನೋ ವಿಕ್ರಮೇ ಕೃತನಿಶ್ಚಯಃ ॥೩॥

ತ್ವಾಂ ಚ ಮಾಂ ಚ ಪುರಾ ತೂರ್ಣಮಾದತ್ತೇ ರಾಕ್ಷಸಾಧಮಃ ।
ತಸ್ಮಾದಸಿಭ್ಯಾಮಸ್ಯಾಶು ಬಾಹೂ ಛಿಂದಾವಹೈ ಗುರೂ ॥೪॥

ಭೀಷಣೋಽಯಂ ಮಹಾಕಾಯೋ ರಾಕ್ಷಸೋ ಭುಜವಿಕ್ರಮಃ ।
ಲೋಕಂ ಹ್ಯತಿಜಿತಂ ಕೃತ್ವಾ ಹ್ಯಾವಾಂ ಹಂತುಮಿಹೇಚ್ಛತಿ ॥೫॥

ನಿಶ್ಚೇಷ್ಟಾನಾಂ ವಧೋ ರಾಜನ್ ಕುತ್ಸಿತೋ ಜಗತೀಪತೇಃ ।
ಕ್ರತುಮಧ್ಯೋಪನೀತಾನಾಂ ಪಶೂನಾಮಿವ ರಾಘವ ॥೬॥

ಏತತ್ ಸಂಜಲ್ಪಿತಂ ಶ್ರುತ್ವಾ ತಯೋಃ ಕ್ರುದ್ಧಸ್ತು ರಾಕ್ಷಸಃ ।
ವಿದಾರ್ಯಾಸ್ಯ ತತೋ ರೌದ್ರಂ ತೌ ಭಕ್ಷಯಿತುಮಾರಭತ್ ॥೭॥

ತನ್ನ ಬಾಹುಪಾಶದಲ್ಲಿ ಸಿಲುಕಿರುವ ರಾಮಲಕ್ಷ್ಮಣರನ್ನು ನೋಡಿ ಕಬಂಧ ಇಂತೆಂದನು – ಕ್ಷತ್ರಿಯ ಶ್ರೇಷ್ಠರೇ ! ನಾನು ಹಸಿದಿರುವುದನ್ನು ತಿಳಿದೂ ಅಲ್ಲಿಯೇ ಏಕೆ ನಿಂತಿರುವಿರಿ ? ಚೈತನ್ಯವನ್ನೆ ಕಳೆದುಕೊಂಡಿರುವ ನೀವು ಆಹಾರಕ್ಕಾಗಿ ಆ ದೈವವೇ ವಿಹಿತವಾದವರು.

ಆ ಮಾತನ್ನು ಕೇಳಿ ಆರ್ತಿಗೊಳಗಾಗಿದ್ದ ಲಕ್ಷ್ಮಣನು ವಿಕ್ರಮವನ್ನು ರೂಢಿಸಿ-ಕೊಂಡು ಕಾಲೋಚಿತವೂ ಹಿತವೂ ಆದ ಮಾತನ್ನಾಡಿದನು-

ಈ ರಾಕ್ಷಸಾಧಮ ನನ್ನನ್ನು ಮತ್ತು ನಿನ್ನನ್ನು ಬೇಗನೇ ಕಬಳಿಸುತ್ತಾನೆ. ಅದಕ್ಕೆ ಮುಂದೆ ಅವನ ಉದ್ದವಾದ ಬಾಹುಗಳನ್ನು ಬೇಗ ಕತ್ತರಿಸೋಣ.

ಮಹಾಕಾಯನಾದ ಈಭೀಷಣ ರಕ್ಕಸನು ತೋಳುಗಳಲ್ಲಿ ವಿಕ್ರಮವುಳ್ಳವನು. ಲೋಕವನ್ನೆಲ್ಲ ಗೆದ್ದದ್ದಾಗಿ ಭಾವಿಸಿ ನಮ್ಮನ್ನು ಕೊಲ್ಲಲು ಬಯಸಿದ್ದಾನೆ.

ಅಶ್ವಮೇಧ ಕ್ರತುವಿನಲ್ಲಿ ತಂದ ಆರಣ್ಯಕ ಪಶುವಧೆ ಕ್ಷತ್ರಿಯರಿಗೆ ನಿಂದಿತ-ವಾಗಿರುವಂತೆ ಇವನನ್ನು ಸಾಯಿಸದೆ ತೋಳುಗಳನ್ನು ಮಾತ್ರ ಕತ್ತರಿಸೋಣ.

ಈ ಮಾತನ್ನು ಕೇಳಿ ರಾಮಲಕ್ಷ್ಮಣರ ವಿಷಯದಲ್ಲಿ ಕ್ರುದ್ಧನಾಗಿ ಬಾಯ್ತೆರೆದು ಅವರನ್ನು ತಿನ್ನಲು ಉಪಕ್ರಮಿಸಿದನು.

ತತಸ್ತೌ ದೇಶಕಾಲಜ್ಞೌ ಖಡ್ಗಾಭ್ಯಾಮೇವ ರಾಘವೌ ।
ಅಚ್ಛಿಂದತಾಂ ಸುಸಂಹೃಷ್ಟೌ ಬಾಹೂ ತಸ್ಯಾಂಸದೇಶತಃ ॥೮॥

ದಕ್ಷಿಣೋ ದಕ್ಷಿಣಂ ಬಾಹುಮಸಕ್ತಮಸಿನಾ ತತಃ ।
ಚಿಚ್ಛೇದ ರಾಮೋ ವೇಗೇನ ಸವ್ಯಂ ವೀರಸ್ತು ಲಕ್ಷ್ಮಣಃ ॥೯॥

ಸ ಪಪಾತ ಮಹಾಬಾಹುಶ್ಛಿನ್ನಬಾಹುರ್ಮಹಾಸ್ವನಃ ।
ಖಂ ಚ ಗಾಂ ಚ ದಿಶಶ್ಚೈವ ನಾದಯನ್ ಜಲದೋ ಯಥಾ ॥೧೦॥

ಸ ನಿಕೃತ್ತೌ ಭುಜೌ ದೃಷ್ಟ್ವಾ ಶೋಣಿತೌಘಪರಿಪ್ಲುತಃ ।
ದೀನಃ ಪಪ್ರಚ್ಛ ತೌ ವೀರೌ ಕೌ ಯುವಾಮಿತಿ ದಾನವಃ ॥೧೧॥

ಇತಿ ತಸ್ಯ ಬ್ರುವಾಣಸ್ಯ ಲಕ್ಷ್ಮಣಃ ಶುಭಲಕ್ಷಣಃ ।
ಶಶಂಸ ರಾಘವಂ ತಸ್ಯ ಕಬಂಧಸ್ಯ ಮಹಾಬಲಃ ॥೧೨॥

ಸಮರ್ಥನಾದ ಬಲತೋಳಿನಲ್ಲಿ ಸೆರೆಯಾಗಿದ್ದ ಶ್ರೀರಾಮ ಬಲತೋಳನ್ನು, ವೀರನಾದ ಲಕ್ಷ್ಮಣನು ಎಡ ತೋಳನ್ನೂ ಕತ್ತರಿಸಿದರು.

ಮಹಾಬಾಹು ಕಬಂಧನು ಕತ್ತರಿಸಿದ ತೋಳಿನವನಾಗಿ ಮೋಡದಂತೆ ಆಕಾಶ ಭೂಮಿ ದಿಕ್ಕುಗಳೆಲ್ಲ ತುಂಬಿ ಪ್ರತಿಧ್ವನಿಸುವಂತ ಜೋರಾಗಿ ಬೊಬ್ಬಿರಿದು ಬಿದ್ದ.

ಆ ದಾನವನು ತನ್ನ ತೋಳುಗಳನ್ನು ಕತ್ತರಿಸಿದ್ದನ್ನು ನೋಡಿ ರಕ್ತ ಮಡುವಿನಲ್ಲಿ ಬಿದ್ದ ಅವನು ವೀರನಾದ ನೀವು ಯಾರೆಂದು ಕೇಳಿದ.

ಶುಭಲಕ್ಷಣನಾದ ಲಕ್ಷ್ಮಣನು ಹೀಗೆ ಕೇಳಿದ ಮಹಾತ್ಮ ಕಬಂಧನಿಗೆ ರಾಘವನನ್ನು ಪರಿಚಯಿಸಿದ.

ಅಯಮಿಕ್ಷ್ವಾಕುದಾಯಾದೋ ರಾಮೋ ನಾಮ ಜನೈಃ ಶ್ರುತಃ ।
ಅಸ್ಯೈವಾವರಜಂ ವಿದ್ಧಿ ಭ್ರಾತರಂ ಮಾಂ ಚ ಲಕ್ಷ್ಮಣಮ್ ॥೧೩॥

ಮಾತ್ರಾ ಪ್ರತಿಹತೇ ರಾಜ್ಯೇ ರಾಮಃ ಪ್ರವ್ರಾಜಿತೋ ವನಮ್ ।
ಮಯಾ ಸಹ ಚರತ್ಯೇಷ ಭಾರ್ಯಯಾ ಚ ಮಹದ್ವನಮ್ ॥೧೪॥

ಅಸ್ಯ ದೇವಪ್ರಭಾವಸ್ಯ ವಸತೋ ವಿಜನೇ ವನೇ ।
ರಕ್ಷಸಾಪಹೃತಾ ಭಾರ್ಯಾ ಯಾಮಿಚ್ಛಂತಾವಿಹಾಗತೌ ॥೧೫॥

ತ್ವಂ ತು ಕೋ ವಾ ಕಿಮರ್ಥಂ ವಾ ಕಬಂಧಸದೃಶೋ ವನೇ ।
ಅಸ್ಯೇನೋರಸಿ ದೀಪ್ತೇನ ಭಗ್ನಜಂಘೋ ವಿವೇಷ್ಟಸೇ ॥೧೬॥

ಏವಮುಕ್ತಃ ಕಬಂಧಸ್ತು ಲಕ್ಷ್ಮಣೇನೋತ್ತರಂ ವಚಃ ।
ಉವಾಚ ಪರಮಪ್ರೀತಸ್ತದಿಂದ್ರವಚನಂ ಸ್ಮರನ್ ॥೧೭॥

ಸ್ವಾಗತಂ ವಾ ನರವ್ಯಾಘ್ರೌ ದಿಷ್ಟ್ಯಾ ಪಶ್ಯಾಮಿ ವಾಮಹಮ್ ।
ದಿಷ್ಟ್ಯಾ ಚೇಮೌ ನಿಕೃತ್ತೌ ಮೇ ಯುವಾಭ್ಯಾಂ ಬಾಹುಬಂಧನೌ॥೧೮॥

ವಿರೂಪಂ ಯಚ್ಚ ಮೇ ರೂಪಂ ಪ್ರಾಪ್ತಂ ಹ್ಯವಿನಯಾದ್ಯಥಾ ।
ತನ್ಮೇ ಶೃಣು ನರವ್ಯಾಘ್ರ ತತ್ತ್ವತಃ ಶಂಸತಸ್ತವ ॥೧೯॥

ಇವನು ಇಕ್ಷ್ವಾಕುವಂಶದ ದಶರಥನ ನಂದನ. ರಾಮ ಎಂದು ಜನರಿಂದ ಪ್ರಸಿದ್ಧನಾದವನು. ಇವನ ತಮ್ಮನೇ ಆದ ಲಕ್ಷ್ಮಣ ನಾನು ಎಂದು ತಿಳಿ.

ನಿರ್ಜನ ಅರಣ್ಯವಾಸಿಯಾಗಿದ್ದ ದೇವಪ್ರಭಾವದ ರಾಮನ ಮಡದಿ ಸೀತೆಯು ರಾಕ್ಷಸನಿಂದ ಅಪಹೃತಳಾದಳು. ಅವಳನ್ನು ಬಯಸಿ ಹುಡುಕುತ್ತ ಬಂದವರು ನಾವು.

ನೀನಾರು? ರುಂಡದಂತೆ ಕಾಣುತ್ತಿರುವಿ! ಹೊಟ್ಟೆಯಲ್ಲಿ ನಿನ್ನ ಮುಖ ಹೊಳೆಯುತ್ತಿದೆ! ತೊಡೆಗಳೆಲ್ಲ ಹೊಟ್ಟೆಯೊಳಗೇ ಸೇರಿದೆ!

ಹೀಗೆ ಲಕ್ಷ್ಮಣನು ಕೇಳಿದಾಗ ತುಂಬ ಪ್ರೀತನಾಗಿ ಕಬಂಧ ಉತ್ತರದ ಮಾತನ್ನು ಆಡಿದ – ಆ ಇಂದ್ರನ ಮಾತನ್ನು ನೆನೆಸಿಕೊಂಡು ಪುರುಷಶ್ರೇಷ್ಠರೇ ! ನಿಮಗೆ ಸ್ವಾಗತ. ದೈವದ ಅನುಗ್ರಹದಿಂದ ನಾನಿಂದು ನಿಮ್ಮನ್ನು ನೋಡಿದೆ. ಭಾಗ್ಯವಶಾತ್ ಈ ಬಾಹುಬಂಧನವನ್ನು ಕತ್ತರಿಸಿದಿರಿ.

ಅವಿನಯದಿಂದ ಈ ವಿರೂಪ ಬಂದ ಬಗೆ ಹೇಗೆ ? ಎನ್ನುವುದನ್ನು ಯಥಾರ್ಥವಾಗಿ ಅರುಹುತ್ತೇನೆ – ಕೇಳು ನರಶ್ರೇಷ್ಠನೇ !

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಪ್ಪತ್ತನೇ ಸರ್ಗ ಮುಗಿಯಿತು.

ಏಕಸಪ್ತತಿತಮಃ ಸರ್ಗಃ

ಕಥಾಸಾರಾಂಶ– ನಾನು ದನು ಎಂಬ ಗಂಧರ್ವ. ಬಹಳ ಸುಂದರನಾಗಿದ್ದೆ. ಆದರೂ ಭಯಂಕರ ರಾಕ್ಷಸರೂಪದಿಂದ ಋಷಿ ಮುನಿಗಳನ್ನು ಹೆದರಿಸುತ್ತಿದ್ದೆ. 'ಸ್ಥೂಲಶಿರ' ಎಂಬ ಮುನಿಯನ್ನು ಹೆದರಿಸಿದಾಗ ಅವರು ಕುಪಿತರಾಗಿ ಈ ಭಯಂಕರರೂಪವೇ ಶಾಶ್ವತವಾಗಲಿ ಎಂದು ಶಪಿಸಿದರು. ಮತ್ತೆ ಕ್ಷಮೆ ಕೇಳಿ ಬೇಡಿಕೊಂಡಾಗ ಶ್ರೀರಾಮ ಲಕ್ಷ್ಮಣರು ಬಂದು ನಿನ್ನ ರಾಕ್ಷಸ ಶರೀರವನ್ನು ನಾಶಮಾಡಿ ಗಂಧರ್ವದೇಹ ಕೊಡಿಸುವರು ಎಂದು ವಿಶಾಪವನ್ನೂ ಕೊಟ್ಟರು. ಈಗ ಶಾಪದಿಂದ ತ್ರಿಜಟೆಯ ಮಗನಾಗಿ ರಾಕ್ಷಸನಾಗಿ ಹುಟ್ಟಿದ್ದೆ.

ಪಿತಾಮಹ ಬ್ರಹ್ಮನನ್ನು ಉಗ್ರತಪಸ್ಸಿನಿಂದ ಸಂತೋಷಪಡಿಸಿ ದೀರ್ಘಾಯುಷ್ಯವನ್ನು ಪಡೆದಿದ್ದೆ. ದೀರ್ಘಾಯುಷ್ಯದ ಅಹಂಕಾರದಿಂದ ಇಂದ್ರನ ಮೇಲೆ ಯುದ್ಧದಲ್ಲಿ ಆಕ್ರಮಣ ಮಾಡಿದೆ. ಸಿಟ್ಟುಗೊಂಡ ದೇವೇಂದ್ರ ವಜ್ರಾಯುಧದ ಪ್ರಹಾರ ಮಾಡಿದ. ಅದರಿಂದ ನನ್ನ ತೊಡೆ, ತಲೆಗಳು ಉದರದೊಳಗೆ ಸೇರಿದವು.

ಇಂದ್ರನಲ್ಲಿ ಪ್ರಾರ್ಥನೆ ಮಾಡಿದ ಬಳಿಕ ನನ್ನ ಕೈಗಳು ಯೋಜನ ದೂರ ಬೆಳೆಯುವಂತೆಯೂ ಹೊಟ್ಟೆಯಲ್ಲಿ ಕಣ್ಣು ಬಾಯಿಗಳಾಗುವಂತೆ ವ್ಯವಸ್ಥೆ ಮಾಡಿದ. ಲಕ್ಷ್ಮಣ ಸಹಿತನಾಗಿ ಶ್ರೀರಾಮ ಬಂದು ನಿನ್ನ ಕೈಗಳನ್ನು ಕತ್ತರಿಸಿದಾಗ ರಾಕ್ಷಸ ಜನ್ಮದಿಂದ ಮುಕ್ತಿ ಎಂದು ಇಂದ್ರ ಹೇಳಿದ.

ನೀವೀಗ ನನ್ನ ಶರೀರವನ್ನು ಭಸ್ಮ ಮಾಡಿ ಗಂಧರ್ವ ಶರೀರವನ್ನು ಕೊಡಿರಿ ಎಂದ ಕಬಂಧ. ಶ್ರೀರಾಮಲಕ್ಷ್ಮಣರು ಅವನನ್ನು ದೊಡ್ಡ ಹೊಂಡದಲ್ಲಿ ಹಾಕಿ ಸುಟ್ಟರು. ದಿವ್ಯ ಗಂಧರ್ವ ಶರೀರ ಪಡೆದು 'ನೀವು ಇಲ್ಲಿಗೆ ಸಮೀಪದ ಋಷ್ಯಮೂಕ ಪರ್ವತದಲ್ಲಿರುವ ಸುಗ್ರೀವನೆಂಬ ಕಪಿಯೊಡನೆ ಮೈತ್ರಿಮಾಡಿಕೊಳ್ಳಿ. ಅವನಿಂದ ಸೀತೆಯ ಸುಳಿವು ಸಿಗುತ್ತದೆ. ನಿಮಗೆ ಅವನಿಂದ ಸಹಾಯವಾಗುತ್ತದೆ ' – ಎಂದು ಕಬಂಧ ಹೇಳಿದ.

❖

ಕಬಂಧಶಾಪಾಖ್ಯಾನಮ್

ಪುರಾ ರಾಮ ಮಹಾಬಾಹೋ ಮಹಾಬಲಪರಾಕ್ರಮಮ್ ।
ರೂಪಮಾಸೀನ್ಮಮಾಚಿಂತ್ಯಂ ತ್ರಿಷು ಲೋಕೇಷು ವಿಶ್ರುತಮ್ ॥೧॥

ಯಥಾ ಸೂರ್ಯಸ್ಯ ಸೋಮಸ್ಯ ಶಕ್ರಸ್ಯ ಚ ಯಥಾ ವಪುಃ ।
ಸೋಽಹಂ ರೂಪಮಿದಂ ಕೃತ್ವಾ ಲೋಕವಿತ್ರಾಸನಂ ಮಹತ್ ॥೨॥

ಋಷೀನ್ ವನಗತಾನ್ ರಾಮ ತ್ರಾಸಯಾಮಿ ತತಸ್ತತಃ ।
ತತಃ ಸ್ಥೂಲಶಿರಾ ನಾಮ ಮಹರ್ಷಿಃ ಕೋಪಿತೋ ಮಯಾ ॥೩॥

ಸಂಚಿನ್ವನ್ ವಿವಿಧಂ ವನ್ಯಂ ರೂಪೇಣಾನೇನ ಧರ್ಷಿತಃ ।
ತೇನಾಹಮುಕ್ತಃ ಪ್ರೇಕ್ಷ್ಯೈವಂ ಘೋರಶಾಪಾಭಿಧಾಯಿನಾ ॥೪॥

ಏತದೇವ ನೃಶಂಸಂ ತೇ ರೂಪಮಸ್ತು ವಿಗರ್ಹಿತಮ್ ।
ಸ ಮಯಾ ಯಾಚಿತಃ ಕ್ರುದ್ಧಃ ಶಾಪಸ್ಯಾಂತೋ ಭವೇದಿತಿ ॥೫॥

ಅಭಿಶಾಪಕೃತಸ್ಯೇತಿ ತೇನೇದಂ ಭಾಷಿತಂ ವಚಃ ।
ಯದಾ ಛಿತ್ತ್ವಾ ಭುಜೌ ರಾಮಸ್ತ್ವಾಂ ದಹೇದ್ವಿಜನೇ ವನೇ ॥೬॥

ತದಾ ತ್ವಂ ಪ್ರಾಪ್ಸ್ಯಸೇ ರೂಪಂ ಸ್ವಮೇವ ವಿಪುಲಂ ಶುಭಮ್ ।
ಶ್ರಿಯಾ ವಿರಾಜಿತಂ ಪುತ್ರಂ ದನೋಸ್ತ್ವಂ ವಿದ್ಧಿ ಲಕ್ಷ್ಮಣ ॥೭॥

ಇಂದ್ರಕೋಪಾದಿದಂ ರೂಪಂ ಪ್ರಾಪ್ತಮೇವ ರಣಾಜಿರೇ ।

ಮಹಾಬಲಪರಾಕ್ರಮ ! ಮಹಾಬಾಹೋ ರಾಮ ! ನನಗೆ ಹಿಂದೆ ಮೂರು ಲೋಕದಲ್ಲಿ ಪ್ರಸಿದ್ಧವಾದ ಅಚಿಂತ್ಯರೂಪವಿತ್ತು. ಚಂದ್ರನ,ಇಂದ್ರನ ಸೂರ್ಯನ ರೂಪದಂತೆ.

ಅಂಥ ನಾನು ಲೋಕವನ್ನು ಹೆದರಿಸುವ ಮಹತ್ತರ ರೂಕ್ಷ ರಾಕ್ಷಸ ರೂಪವನ್ನು ತಾಳಿ ಕಾಡಿನಲ್ಲಿರುವ ಋಷಿಗಳನ್ನು ಅತ್ತಿಂದಿತ್ತ ಹೆದರಿಸುತ್ತಿದ್ದೆ. ಬಳಿಕ ಸ್ಥೂಲಶಿರಾ ಎಂಬ ಮಹರ್ಷಿಗಳನ್ನು ಕೋಪಗೊಳಿಸಿದೆ. ಅವರು ಬಗೆಬಗೆಯ ಕಾಡಿನ ಫಲ ಮೂಲಗಳನ್ನು ಅರಸುತ್ತಿದ್ದರು. ಆಗ ನಾನು ರಾಕ್ಷಸ ರೂಪದಿಂದ ಅವರನ್ನು ಹೆದರಿಸಿದೆ. ನನ್ನ ವಿಕಟರೂಪವನ್ನು ನೋಡಿ ಘೋರಶಾಪವಿತ್ತರು – 'ಈ ಕ್ರೂರ ನಿಂದಿತರೂಪವೇ ನಿನಗೆ ಶಾಶ್ವತವಾಗಲಿ' – ಎಂದರು.

ಕೋಪಗೊಂಡ ಮುನಿಗಳನ್ನು ಬೇಡಿಕೊಂಡೆ ಹೇಗೆ ಈ ಅಭಿಶಾಪ ಕೊನೆಗೊಳ್ಳುತ್ತದೆ ? ನಿರ್ಜನ ವನದಲ್ಲಿ ಶ್ರೀರಾಮ ನಿನ್ನ ತೋಳುಗಳನ್ನು ಕತ್ತರಿಸಿ ಸುಟ್ಟಾಗ ನೀನು ನಿನ್ನ ಸುಂದರ ರೂಪವನ್ನು ಹೊಂದುವಿ ಎಂದರು.

ಲಕ್ಷ್ಮಣ! ಸೌಂದರ್ಯ ತುಂಬಿದ 'ದನು' ಎಂಬ ಗಂಧರ್ವ ನಾನು. ರಣಾಂಗಣದಲ್ಲಿ ಇಂದ್ರಕೋಪದಿಂದ ಈ ವಿಕೃತ ರೂಪ ಬಂತು.

ಅಹಂ ಹಿ ತಪಸೋಗ್ರೇಣ ಪಿತಾಮಹಮತೋಷಯಮ್ ॥೮॥

ದೀರ್ಘಮಾಯುಃ ಸ ಮೇ ಪ್ರಾದಾತ್ತತೋ ಮಾಂ ವಿಭ್ರಮೋಽಸ್ಪೃಶತ್ ।
ದೀರ್ಘಮಾಯುರ್ಮಯಾ ಪ್ರಾಪ್ತಂ ಕಿಂ ಮೇ ಶಕ್ರಃ ಕರಿಷ್ಯತಿ ॥೯॥

ಇತ್ಯೇವಂ ಬುದ್ಧಿಮಾಸ್ಥಾಯ ರಣೇ ಶಕ್ರಮಧರ್ಷಯಮ್ ।
ತಸ್ಯ ಬಾಹುಪ್ರಮುಕ್ತೇನ ವಜ್ರೇಣ ಶತಪರ್ವಣಾ ॥೧೦॥

ಸಕ್ಥನೀ ಚೈವ ಮೂರ್ಧಾ ಚ ಶರೀರೇ ಸಂಪ್ರವೇಶಿತಮ್ ।
ಸ ಮಯಾ ಯಾಚ್ಯಮಾನಃ ಸನ್ನಾನಯದ್ಯಮಸಾದನಮ್ ॥೧೧॥

ಪಿತಾಮಹವಚಃ ಸತ್ಯಂ ತದಸ್ತ್ವಿತಿ ಮಮಾಬ್ರವೀತ್ ।
ಅನಾಹಾರಃ ಕಥಂ ಶಕ್ರೋ ಭಗ್ನಸಕ್ಥಶಿರೋಮುಖಃ ॥೧೨॥

ವಜ್ರೇಣಾಭಿಹತಃ ಕಾಲಂ ಸುದೀರ್ಘಮಪಿ ಜೀವಿತುಮ್ ।
ಏವಮುಕ್ತಸ್ತು ಮೇ ಶಕ್ರೋ ಬಾಹೂ ಯೋಜನಮಾಯತೌ ॥೧೩॥

ಪ್ರಾದಾದಾಸ್ಯಂ ಚ ಮೇ ಕುಕ್ಷೌ ತೀಕ್ಷ್ಣದಂಷ್ಟ್ರಮಕಲ್ಪಯತ್ ।
ಸೋಽಹಂ ಭುಜಾಭ್ಯಾಂ ದೀರ್ಘಾಭ್ಯಾಂ ಸಂಕ್ಷಿಪ್ಯಾಸ್ಮಿನ್ ವನೇ ಚರಾನ್ ॥

ಸಿಂಹದ್ವಿಪಮೃಗವ್ಯಾಘ್ರಾನ್ ಭಕ್ಷಯಾಮಿ ಸಮಂತತಃ ।
ಸ ತು ಮಾಮಬ್ರವೀದಿಂದ್ರೋ ಯದಾ ರಾಮಃ ಸಲಕ್ಷ್ಮಣಃ ॥೧೫॥

ಛೇತ್ಸ್ಯತೇ ಸಮರೇ ಬಾಹೂ ತದಾ ಸ್ವರ್ಗಂ ಗಮಿಷ್ಯಸಿ ।

ನಾನು ಉಗ್ರ ತಪಸ್ಸಿನಿಂದ ಪಿತಾಮಹನನ್ನು ಸಂತೋಷಪಡಿಸಿದೆ. ಆ ಬ್ರಹ್ಮ ನನಗೆ ದೀರ್ಘಾಯುಷ್ಯವನ್ನು ಅನುಗ್ರಹಿಸಿದರು. ಬಳಿಕ ನನಗೆ ಅಹಂಕಾರ ಬಂತು.

ನನಗೆ ದೀರ್ಘಾಯುಷ್ಯ ಒದಗಿದೆ. ಇಂದ್ರ ನನಗೇನು ಮಾಡುವನು ? ಹೀಗೆ ವಿಚಾರ ಮಾಡಿ ಯುದ್ಧದಲ್ಲಿ ಇಂದ್ರನನ್ನು ಆಕ್ರಮಿಸಿದೆ. ಇಂದ್ರನ ತೋಳಿನಿಂದ ಮುಕ್ತವಾದ ನೂರಾರು ಪರ್ವಗಳಿರುವ ವಜ್ರಾಯುಧದಿಂದ ತೊಡೆ ಹಾಗು ತಲೆಗಳು ಶರೀರದಲ್ಲಿ ಸೇರಿಸಲ್ಪಟ್ಟಿತು.

ನಾನು ಅವನಲ್ಲಿ ಬೇಡಿಕೊಂಡಿದ್ದರಿಂದ ಯಮಲೋಕಕ್ಕೆ ನನ್ನನ್ನು ಅಟ್ಟಲಿಲ್ಲ. ಪಿತಾಮಹನು ಇತ್ತ ಧೀರ್ಘಾಯುಷ್ಯದ ವರ ಸತ್ಯವಾಗಲಿ ಎಂದು..

ತೊಡೆ ಮುಖಗಳು ಭಗ್ನಗೊಂಡರೆ ನಿರಾಹಾರನಾಗಿ ಹೇಗೆ ಬದುಕಲಿ ? ಎಂದು ಕೇಳಿದಾಗ ದೇವೇಂದ್ರನು ನನ್ನ ಎರಡೂ ತೋಳುಗಳು ಒಂದು ಯೋಜನ ಉದ್ದವಾಗಲೆಂದು, ತೀಕ್ಷ್ಣದಂಷ್ಟವಿರುವ ಮುಖ ಹೊಟ್ಟೆಯಲ್ಲಿರಲೆಂದು ವ್ಯವಸ್ಥೆಗೊಳಿಸಿದ.

ನಾನು ನನ್ನ ನೀಳ ತೋಳುಗಳಿಂದ ವನೇಚರಗಳಾದ ಸಿಂಹ ಆನೆ ಜಿಂಕೆ ಹುಲಿಗಳನ್ನು ಎಲ್ಲೆಡೆಯಿಂದ ಸೆಳೆದು ತಿನ್ನುತ್ತಿದ್ದೇನೆ.

ಆ ಇಂದ್ರ ನನಗೆ ನುಡಿದ – 'ಲಕ್ಷ್ಮಣ ಸಹಿತ ಶ್ರೀರಾಮ ಯಾವಾಗ ಬಂದು ಸಮರದಲ್ಲಿ ನಿನ್ನ ತೋಳುಗಳನ್ನು ಕತ್ತರಿಸುವನೋ ಆಗ ನೀನು ಸ್ವರ್ಗವನ್ನು ಹೊಂದುವಿ' ಎಂದು.

ಅನೇನ ವಪುಷಾ ರಾಮ ವನೇಽಸ್ಮಿನ್ ರಾಜಸತ್ತಮ ॥೧೬॥

ಯದ್ಯತ್ ಪಶ್ಯಾಮಿ ಸರ್ವಸ್ಯ ಗ್ರಹಣಂ ಸಾಧು ರೋಚಯೇ ।
ಅವಶ್ಯಂ ಗ್ರಹಣಂ ರಾಮೋ ಮನ್ಯೇಽಹಂ ಸಮುಪೈಷ್ಯತಿ ॥೧೭॥

ಇಮಾಂ ಬುದ್ಧಿಂ ಪುರಸ್ಕೃತ್ಯ ದೇಹನ್ಯಾಸಕೃತಶ್ರಮಃ ।
ಸ ತ್ವಂ ರಾಮೋಽಸಿ ಭದ್ರಂ ತೇ ನಾಹಮನ್ಯೇನ ರಾಘವ ॥೧೮॥

ಶಕ್ಯೋ ಹಂತುಂ ಯಥಾತತ್ತ್ವಮೇವಮುಕ್ತಂ ಮಹರ್ಷಿಣಾ ।
ಅಹಂ ಹಿ ಮತಿಸಾಚಿವ್ಯಂ ಕರಿಷ್ಯಾಮಿ ನರರ್ಷಭ ॥೧೯॥

ಮಿತ್ರಂ ಚೈವೋಪದೇಕ್ಷ್ಯಾಮಿ ಯುವಾಭ್ಯಾಂ ಸಂಸೃತೋಽಗ್ನಿನಾ ।

ರಾಜಾರಾಮ ! ಈ ರಾಕ್ಷಸರೂಪದಿಂದ ಈ ಕಾಡಿನಲ್ಲಿ ಯಾವಾವುದನ್ನು ಕಾಣುತ್ತೇನೆ, ಬಯಸುತ್ತೇನೆ ಅದೆಲ್ಲವನ್ನು ಗ್ರಹಣ ಮಾಡುತ್ತೇನೆ. ಒಂದಾನೊಮ್ಮೆ ರಾಮನು ನನ್ನ ಕರಗ್ರಹಣಕ್ಕೆ ಒದಗಬಹುದು – ಎಂದು ಭಾವಿಸಿ ಈ ರಾಕ್ಷಸ ಶರೀರವನ್ನು ಬಿಡಲು ಪ್ರಯತ್ನಿಸುತ್ತಿದ್ದೇನೆ.

ಅಂತಹ ರಾಮ ನೀನಾಗಿರುವಿ. ನಿನಗೆ ಮಂಗಲವಾಗಲಿ. ಮಹರ್ಷಿ ಹೇಳಿದ್ದಾರೆ. ರಾಮನ ಹೊರತಾಗಿ ಬೇರಾರಿಂದಲೂ ನನ್ನನ್ನು ಕೊಲ್ಲಲಾಗದು.

ನಾನು ನಿಮಗೆ ಬೌದ್ಧಿಕ ಸಹಾಯ ಮಾಡುತ್ತೇನೆ. ನರಶ್ರೇಷ್ಠನೇ ! ನೀವಿಬ್ಬರು ಈ ಶರೀರಕ್ಕೆ ಅಗ್ನಿಸಂಸ್ಕಾರ ಮಾಡಿರಿ. ನಿಮಗೊಬ್ಬ ಸಹಾಯಕ ಮಿತ್ರನನ್ನೂ ತಿಳಿಸುತ್ತೇನೆ.

ಏವಮುಕ್ತಸ್ತು ಧರ್ಮಾತ್ಮಾ ದನುನಾ ತೇನ ರಾಘವಃ ॥೨೦॥

ಇದಂ ಜಗಾದ ವಚನಂ ಲಕ್ಷ್ಮಣಸ್ಯೋಪಶೃಣ್ವತಃ ।
ರಾವಣೇನ ಹೃತಾ ಭಾರ್ಯಾ ಮಮ ಸೀತಾ ಯಶಸ್ವಿನೀ ॥೨೧॥

ನಿಷ್ಕ್ರಾಂತಸ್ಯ ಜನಸ್ಥಾನಾತ್ ಸಹ ಭ್ರಾತ್ರಾ ಯಥಾಸುಖಮ್ ।
ನಾಮಮಾತ್ರಂ ತು ಜಾನಾಮಿ ನ ರೂಪಂ ತಸ್ಯ ರಕ್ಷಸಃ ॥೨೨॥

ನಿವಾಸಂ ವಾ ಪ್ರಭಾವಂ ವಾ ವಯಂ ತಸ್ಯ ನ ವಿದ್ಮಹೇ ।
ಶೋಕಾರ್ತಾನಾಮನಾಥಾನಾಮೇವಂ ವಿಪರಿಧಾವತಾಮ್ ॥೨೩॥

ಕಾರುಣ್ಯಂ ಸದೃಶಂ ಕರ್ತುಮುಪಕಾರೇಣ ವರ್ತತಾಮ್ ।
ಕಾಷ್ಠಾನ್ಯಾದಾಯ ಶುಷ್ಕಾಣಿ ಕಾಲೇ ಭಗ್ನಾನಿ ಕುಂಜರೈಃ ॥೨೪॥

ಧಕ್ಷ್ಯಾಮಸ್ತ್ವಾಂ ವಯಂ ವೀರ ಶ್ವಭ್ರೇ ಮಹತಿ ಕಲ್ಪಿತೇ ।
ಸ ತ್ವಂ ಸೀತಾಂ ಸಮಾಚಕ್ಷ್ವ ಯೇನ ವಾ ಯತ್ರ ವಾ ಹೃತಾ ॥೨೫॥

ಕುರು ಕಲ್ಯಾಣಮತ್ಯರ್ಥಂ ಯದಿ ಜಾನಾಸಿ ತತ್ತ್ವತಃ ।
ಏವಮುಕ್ತಸ್ತು ರಾಮೇಣ ವಾಕ್ಯಂ ದನುರನುತ್ತಮಮ್ ॥೨೬॥

ದನು ಹೀಗೆ ಹೇಳಿದಾಗ ಧರ್ಮಾತ್ಮ ರಾಘವನು ಲಕ್ಷ್ಮಣನೂ ಕೇಳುವಂತೆ ಹೀಗೆ ನುಡಿದ – 'ನನ್ನ ಹೆಂಡತಿ ಯಶಸ್ವಿನೀ ಸೀತೆಯು ಜನಸ್ಥಾನದಿಂದ ನಾನು ಹಾಗು ಲಕ್ಷ್ಮಣ ಹೊರಹೋದಾಗ ರಾವಣನಿಂದ ಅಪಹೃತಳಾದಳು.

ನಾನು ಅವನ ಹೆಸರನ್ನು ಮಾತ್ರ ಕೇಳಿದ್ದೇನೆ. ರಕ್ಕಸನ ರೂಪವನ್ನು ಕಂಡಿಲ್ಲ. ಅವನ ವಾಸಸ್ಥಾನ ಹಾಗೂ ಪ್ರಭಾವವನ್ನು ನಾವು ತಿಳಿದಿಲ್ಲ.

ಶೋಕಾರ್ತರಾಗಿ ಅಲೆಯುತ್ತಿರುವ ಅನಾಥರಾದ ನಮಗೆ ಕರುಣೆ ತೋರು. ಉಪಕಾರ ಮಾಡು.

ವೀರನೇ ! ಆನೆಗಳು ತುಂಡರಿಸಿದ ಒಣ ಕಟ್ಟಿಗೆಗಳನ್ನು ತಂದು ದೊಡ್ಡ ಹೊಂಡ ತೆಗೆದು ಅದರಲ್ಲಿ ನಿನ್ನ ಶರೀರವನ್ನಿಟ್ಟು ಸುಡುತ್ತೇವೆ.

ಸೀತೆ ಯಾರಿಂದ ಅಪಹೃತಳಾದಳು ? ಅಪಹೃತಳಾದವಳು ಎಲ್ಲಿ ಇರುವಳು ? ನಿನಗೆ ನಿಜವಾಗಿ ತಿಳಿದಿದ್ದರೆ ತಿಳಿಸಿ ಮಂಗಲವನ್ನುಂಟು ಮಾಡು.

ಪ್ರೋವಾಚ ಕುಶಲೋ ವಕ್ತುಂ ವಕ್ತಾರಮಪಿ ರಾಘವಮ್ ।
ದಿವ್ಯಮಸ್ತಿ ನ ಮೇ ಜ್ಞಾನಂ ನಾಭಿಜಾನಾಮಿ ಮೈಥಿಲೀಮ್ ॥೨೭॥

ಯಸ್ತಾಂ ಜ್ಞಾಸ್ಯತಿ ತಂ ವಕ್ಷ್ಯೇ ದಗ್ಧಃ ಸ್ವಂ ರೂಪಮಾಸ್ಥಿತಃ ।
ಅದಗ್ಧಸ್ಯ ತು ವಿಜ್ಞಾತುಂ ಶಕ್ತಿರಸ್ತಿ ನ ಮೇ ಪ್ರಭೋ ॥೨೮॥

ರಾಕ್ಷಸಂ ತಂ ಮಹಾವೀರ್ಯಂ ಸೀತಾ ಯೇನ ಹೃತಾ ತವ ।
ವಿಜ್ಞಾನಂ ಹಿ ಮಮ ಭ್ರಷ್ಟಂ ಶಾಪದೋಷೇಣ ರಾಘವ ॥೨೯॥

ಸ್ವಕೃತೇನ ಮಯಾ ಪ್ರಾಪ್ತಂ ರೂಪಂ ಲೋಕವಿಗರ್ಹಿತಮ್ ।
ಕಿಂತು ಯಾವನ್ನ ಯಾತ್ಯಸ್ತಂ ಸವಿತಾ ಶ್ರಾಂತವಾಹನಃ ॥೩೦॥

ತಾವನ್ಮಾಮವಟೇ ಕ್ಷಿಪ್ತ್ವಾ ದಹ ರಾಮ ಯಥಾವಿಧಿ ।
ದಗ್ಧಸ್ತ್ವಯಾಹಮವಟೇ ನ್ಯಾಯೇನ ರಘುನಂದನ ॥೩೧॥

ವಕ್ಷ್ಯಾಮಿ ತಮಹಂ ವೀರ ಯಸ್ತಂ ಜ್ಞಾಸ್ಯತಿ ರಾಕ್ಷಸಮ್ ।
ತೇನ ಸಖ್ಯಂ ಚ ಕರ್ತವ್ಯಂ ನ್ಯಾಯವೃತ್ತೇನ ರಾಘವ ॥೩೨॥

ಕಲ್ಪಯಿಷ್ಯತಿ ತೇ ಪ್ರೀತಃ ಸಾಹಾಯ್ಯಂ ಲಘುವಿಕ್ರಮಃ ।
ನ ಹಿ ತಸ್ಯಾಸ್ಯವಿಜ್ಞಾತಂ ತ್ರಿಷು ಲೋಕೇಷು ರಾಘವ ॥೩೩॥

ಸರ್ವಾನ್ ಪರಿಸೃತೋ ಲೋಕಾನ್ ಪುರಾಸೌ ಕಾರಣಾಂತರೇ ।

ಶ್ರೀರಾಮನು ಹೀಗೆ ಹೇಳಿದಾಗ ಹೇಳಲು ಕುಶಲನಾದ ದನು. ವಾಗ್ಮಿಯಾದ ರಾಘವನಿಗೆ ಉತ್ತಮವಾದ ಮಾತನಾಡಿದನು.

ನನಗೆ ದಿವ್ಯ ಜ್ಞಾನವಿಲ್ಲ. ಮೈಥಿಲಿಯನ್ನು ನಾನು ತಿಳಿದಿಲ್ಲ. ಆದರೆ ಯಾರಿಗೆ ತಿಳಿದಿದೆ ಅವರನ್ನು ನಿನಗೆ ತಿಳಿಸುತ್ತೇನೆ, ನಾನು ದಗ್ಧನಾದ ಮೇಲೆ.

ನನ್ನ ದೇಹವನ್ನು ಸುಡದೆ ನನಗೆ ಅದನ್ನು ತಿಳಿಯುವ ಶಕ್ತಿ ಇರದು. ನಿನ್ನ ಸೀತೆಯನ್ನು ಯಾರು ಅಪಹರಿಸಿರುವರೋ ಅವರ ಬಗೆಗೆ ನನಗೆ ತಿಳಿದಿಲ್ಲ. ರಾಘವ ! ಮುನಿಶಾಪದಿಂದ ನನ್ನ ವಿಜ್ಞಾನ ನಷ್ಟವಾಗಿದೆ. ನಾನು ಮಾಡಿದ ತಪ್ಪಿನಿಂದ ಲೋಕನಿಂದಿತರೂಪ ನನಗೆ ಬಂದಿದೆ.

ಸೂರ್ಯಾಸ್ತದ ಒಳಗೆ ನನ್ನನ್ನು ಹೊಂಡಕ್ಕೆ ಹಾಕಿ ಸುಟ್ಟು ಬಿಡು. ಬಳಿಕ ರಾವಣನನ್ನು ತಿಳಿದವನನ್ನು ನಿನಗೆ ತಿಳಿಸುತ್ತೇನೆ.

ಶೀಘ್ರಪರಾಕ್ರಮಿ ರಾಮನೆ ! ನ್ಯಾಯ ಮಾರ್ಗದಲ್ಲಿರುವ ಆ ವ್ಯಕ್ತಿಯಿಂದ ನೀನು ಸಖ್ಯ ಮಾಡಿಕೊ. ಅವನು ನಿನಗೆ ಸಹಾಯ ಮಾಡುವನು.

ರಾಘವ ! ಅವನಿಗೆ ಮೂರು ಲೋಕದಲ್ಲಿ ತಿಳಿಯದ ಸುದ್ದಿ ಇಲ್ಲ. ಹಿಂದೆ ಅವನು ಅಣ್ಣನ ವಿರೋಧದ ಕಾರಣದಿಂದ ಎಲ್ಲ ಲೋಕಗಳನ್ನು ಸುತ್ತಿ ಬಂದಿದ್ದಾನೆ.

ವಿಶೇಷಾಂಶ– ಕಬಂಧ = ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ –'ನಾಮ್ನಾದನುಂ ತ್ರಿಜಟಯ್ಯೈವ ಪುರಾऽಭಿಜಾತಂ ಗಂಧರ್ವಮ್' = ಕಬಂಧನು 'ದನು' ಎಂಬ ಗಂಧರ್ವ ಎಂದು ತಿಳಿಸಲಾಗಿದೆ. ಇಲ್ಲಿ ವಾಲ್ಮೀಕಿ ರಾಮಾಯಣದಲ್ಲಿ 'ಪುತ್ರಂ ದನೋಸ್ತ್ವಂ ವಿದ್ಧಿ' (೭೧-೭)' ತಾನು ದನುವಿನ ಮಗ' ಎಂದು ಕಬಂಧ ಹೇಳಿದನೆಂದಿದೆ. ಆದರೆ ಇದು ಅಪಪಾಠ. ಇದೇ ಅಧ್ಯಾಯದಲ್ಲಿ 'ಏವಮುಕ್ತಸ್ತು ಧರ್ಮಾತ್ಮಾ ದನುನಾ ತೇನ ರಾಘವಃ' (೭೧-೨೦), 'ವಾಕ್ಯಂ ದನುರನುತ್ತಮಂ ಪ್ರೋವಾಚ' (೭೧-೨೬) ಈ ಮಾತುಗಳಲ್ಲಿ ದನುವೇ ಕಬಂಧ ಎಂದು ತಿಳಿಸಿರುವುದರಿಂದ ಈ ವಾಕ್ಯಗಳ ವಿರೋಧ ಬರುತ್ತದೆ. (ತ್ರಿಜಟಾಯಾಶ್ಚ ಮಾಂ ಪುತ್ರಂ ದನುಂ ತ್ವಂ ವಿದ್ಧಿ ಲಕ್ಷ್ಮಣ' ಎಂದು ಶುದ್ಧಪಾಠವನ್ನು ಊಹಿಸಬೇಕಾಗುತ್ತದೆ. (ತಾತ್ಪರ್ಯನಿರ್ಣಯ ಭಾವ ಚಂದ್ರಿಕಾ)

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಪ್ಪತ್ತೊಂದನೇ ಸರ್ಗ ಮುಗಿಯಿತು.

❖

ದ್ವಿಸಪ್ತತಿತಮಃ ಸರ್ಗಃ

ಕಥಾಸಾರಾಂಶ– ಕಬಂಧನ ಮಾತಿನಂತೆ ರಾಮ ಲಕ್ಷ್ಮಣರು ದೊಡ್ಡ ಹೊಂಡದಲ್ಲಿ ಅವನ ರಾಕ್ಷಸದೇಹವನ್ನು ಹಾಕಿ ಬೆಂಕಿಯಿಟ್ಟು ಸುಟ್ಟರು.

ದಿವ್ಯರೂಪಧರಿಸಿ ಹೊರ ಹೊಮ್ಮಿದ ದನು ಗಂಧರ್ವನು ರಾಮ ಲಕ್ಷ್ಮಣರಿಗೆ –'ರಾಜರು ತಮ್ಮ ಸಾಧನೆಗೆ ಆಶ್ರಯಿಸುವ ಆರು ಯುಕ್ತಿಗಳಲ್ಲಿ 'ಸಮಾಶ್ರಯ' ಎಂಬ ಯುಕ್ತಿಯನ್ನು ಆಶ್ರಯಿಸು. ಆಂದರೆ ನಿನ್ನಂತೆ ಕಷ್ಟದಲ್ಲಿ ಸಿಲುಕಿರುವ ಅಸಹಾಯಕ–ನನ್ನು ಆಶ್ರಯಿಸಿ ಅವನ ಬೆಂಬಲದಿಂದ ತಮ್ಮ ಕಾರ್ಯವನ್ನು ಸಾಧಿಸಬೇಕು.

ಋಷ್ಯಮೂಕಪರ್ವತದಲ್ಲಿ ಸುಗ್ರೀವ ಎಂಬ ಕಪಿ ಶ್ರೇಷ್ಠನಿದ್ದಾನೆ. ಅವನನ್ನು ಅವನ ಅಣ್ಣ ವಾಲಿಯು ಕೋಪದಿಂದ ಮನೆಯಿಂದ ಹೊರ ಹಾಕಿದ್ದಾನೆ. ಕೆಲವೇ ಕಪಿ–ಗಳೊಂದಿಗೆ ಋಷ್ಯಮೂಕದಲ್ಲಿ ನೆಲೆಸಿದ್ದಾನೆ. ಅವನು ತೇಜಸ್ವೀ. ಸಮರ್ಥ. ಅವನೊಂದಿಗೆ ನೀನು ಅಗ್ನಿ ಸಾಕ್ಷಿಕವಾಗಿ ಮೈತ್ರಿಯನ್ನು ಮಾಡಿಕೊಂಡರೆ ಸೀತಾ–ನ್ವೇಷಣೆಗೆ ಸಹಾಯವಾಗುತ್ತದೆ. ಅವನಿಗೆ ನಿನ್ನಿಂದಲೂ ಉಪಕಾರವಾಗುತ್ತದೆ.

ಬೆಟ್ಟ ಗುಡ್ಡ ಗುಹೆ ಕಂದರಗಳ ಪರಿಚಯವಿರುವ ಸುಗ್ರೀವ, ಸೀತೆ ಮೇರು ತುದಿಯಲ್ಲಿದ್ದರೂ,ಪಾತಾಳದಲ್ಲಿದ್ದರೂ ರಕ್ಕಸರನ್ನು ವಧಿಸಿ ಸೀತೆ ದೊರೆಯುವಂತೆ ಮಾಡುತ್ತಾನೆಂದನು.

❖

ಸೀತಾಧಿಗಮೋಪಾಯಃ

ಏವಮುಕ್ತೌ ತು ತೌ ವೀರೌ ಕಬಂಧೇನ ನರೇಶ್ವರೌ ।
ಗಿರಿಪ್ರದರಮಾಸಾದ್ಯ ಪಾವಕಂ ವಿಸಸರ್ಜತುಃ ॥೧॥

ಲಕ್ಷ್ಮಣಸ್ತು ಮಹೋಲ್ಕಾಭಿರ್ಜ್ವಲಿತಾಭಿಃ ಸಮಂತತಃ ।
ಚಿತಾಮಾದೀಪಯಾಮಾಸ ಸಾ ಪ್ರಜಜ್ವಾಲ ಸರ್ವತಃ ॥೨॥

ತಚ್ಛರೀರಂ ಕಬಂಧಸ್ಯ ಘೃತಪಿಂಡೋಪಮಂ ಮಹತ್ ।
ಮೇದಸಾ ಪಚ್ಯಮಾನಸ್ಯ ಮಂದಂ ದಹತಿ ಪಾವಕಃ ॥೩॥

ಸ ವಿಧೂಯ ಚಿತಾಮಾಶು ವಿಧೂಮೋಽಗ್ನಿರಿವೋತ್ಥಿತಃ ।
ಅರಜೇ ವಾಸಸೀ ಬಿಭ್ರನ್ಮಾಲಾಂ ದಿವ್ಯಾಂ ಮಹಾಬಲಃ ॥೪॥

ತತಶ್ಚಿತಾಯಾ ವೇಗೇನ ಭಾಸ್ವರೋ ವಿಮಲಾಂಬರಃ ।
ಉತ್ಪಪಾತಾಶು ಸಂಹೃಷ್ಟಃ ಸರ್ವಪ್ರತ್ಯಂಗಭೂಷಣಃ ॥೫॥

ವಿಮಾನೇ ಭಾಸ್ವರೇ ತಿಷ್ಠನ್ ಹಂಸಯುಕ್ತೇ ಯಶಸ್ಕರೇ ।
ಪ್ರಭಯಾ ಚ ಮಹಾತೇಜಾ ದಿಶೋ ದಶ ವಿರಾಜಯನ್ ॥೬॥

ಸೋಽತರಿಕ್ಷಗತೋ ರಾಮಂ ಕಬಂಧೋ ವಾಕ್ಯಮಬ್ರವೀತ್ ।
ಶೃಣು ರಾಘವ ತತ್ತ್ವೇನ ಯಥಾ ಸೀತಾಮವಾಪ್ಸ್ಯಸಿ ॥೭॥

ರಾಮ ಷಡ್ಯುಕ್ತಯೋ ಲೋಕೇ ಯಾಭಿಃ ಸರ್ವಂ ವಿಮೃಶ್ಯತೇ ।
ಪರಿಮೃಷ್ಟೋ ದಶಾಂತೇನ ದಶಾಭಾಗೇನ ಸೇವ್ಯತೇ ॥೮॥

ದಶಾಭಾಗಗತೋ ಹೀನಸ್ತ್ವಂ ಹಿ ರಾಮ ಸಲಕ್ಷ್ಮಣಃ ।
ಯತ್ಕೃತೇ ವ್ಯಸನಂ ಪ್ರಾಪ್ತಂ ತ್ವಯಾ ದಾರಪ್ರಧರ್ಷಣಮ್ ॥೯॥

ತದವಶ್ಯಂ ತ್ವಯಾ ಕಾರ್ಯಃ ಸ ಸುಹೃತ್ ಸುಹೃದಾಂ ವರ ।
ಅಕೃತ್ವಾ ಹಿ ನ ತೇ ಸಿದ್ಧಿಮಹಂ ಪಶ್ಯಾಮಿ ಚಿಂತಯನ್ ॥೧೦॥

ಕಬಂಧನು ಹೀಗೆ ಹೇಳಿದಾಗ ವೀರರಾಮಲಕ್ಷ್ಮಣರು ಪರ್ವತವೊಂದರ ಹೊಂಡದಲ್ಲಿ ಅವನ ಶರೀರವನ್ನು ಹಾಕಿ ಬೆಂಕಿಯಿಟ್ಟರು.

ಲಕ್ಷ್ಮಣನು ಉರಿಯುತ್ತಿರುವ ದೊಡ್ಡ ಕೊಳ್ಳಿಗಳಿಂದ ಚಿತೆಯ ಸುತ್ತಲೂ ಬೆಂಕಿಯನ್ನು ಹೊತ್ತಿಸಿದನು. ಚಿತೆಯು ಎಲ್ಲ ಕಡೆಯಿಂದ ಚೆನ್ನಾಗಿ ಪ್ರಜ್ವಲಿಸಿತು.

ಬೆಂದ ಮೇದಸ್ಸುಗಳಿಂದ ತುಂಬಿದ ಕಬಂಧನ ದೇಹ ತುಪ್ಪದ ಪಿಂಡದಂತೆ ಕಾಣುತ್ತಿತ್ತು.

ಕಬಂಧನು ಕೂಡಲೆ ಚಿತೆಯಿಂದ ಪುಟಿದು ಹೊರ ಬಂದ; ಹೊಗೆಯಿರದ ಬೆಂಕಿಯಂತೆ, ಧೂಳಿಲ್ಲದ ಉತ್ತಮ ವಸ್ತ್ರಗಳನ್ನು ದಿವ್ಯಮಾಲೆಯನ್ನು ಧರಿಸಿ ಪ್ರಕಟನಾದ; ಹಂಸದಿಂದ ಕೂಡಿದ ವಿಮಾನದಲ್ಲಿ ಹತ್ತು ದಿಕ್ಕುಗಳನ್ನು ಬೆಳಗುತ್ತ ತೇಜಸ್ವಿ ಗಂಧರ್ವನು ಕಂಗೊಳಿಸಿದನು.

ಅಂತರಿಕ್ಷದಲ್ಲಿ ನೆಲೆಸಿದ ಕಬಂಧನು ರಾಮನಿಗೆ ಹೇಳಿದನು – ರಾಘವ ! ಸೀತೆಯನ್ನು ಪಡೆಯುವ ಉಪಾಯವನ್ನು ಹೇಳುತ್ತೇನೆ ಕೇಳು. ರಾಮ ! ರಾಜರು

ಲೋಕದಲ್ಲಿ ಆರು ಯುಕ್ತಿಗಳಿಂದ ಸತ್ವವನ್ನು ಸಂಪಾದಿಸುವರು. (ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯ – ಇವು ಆರು ಯುಕ್ತಿಗಳು)

ದುರ್ದೆಶಗೊಳಗಾಗಿ ವ್ಯಕ್ತಿಯು ತನ್ನಂತೆ ದುರ್ದಶೆಗೊಳಗಾದ ಮತ್ತೋರ್ವ ವ್ಯಕ್ತಿಯಿಂದ ಸಹಾಯ ಪಡೆಯುವನು. ದುರ್ದಶೆಗೆ ಒಳಗಾದುದರಿಂದಲೇ ನಿನಗೀಗ ಪತ್ನಿಯ ಅಪಹಾರವು ಸಂಭವಿಸಿರುವುದು.

ಸುಹೃದ್ವರನೇ ! ನೀನು ಅವಶ್ಯವಾಗಿ ಅಂತಹ ಒಬ್ಬ ಸಹಾಯ ಗೆಳೆಯನನ್ನು ಸಂಪಾದಿಸಬೇಕು. ಅದಿಲ್ಲದೆ ನಿನಗೆ ಕಾರ್ಯಸಾಧನೆಯಾಗದೆಂದು ಯೋಚನೆ ಮಾಡಿ ಹೇಳಿರುವೆನು.

ಶ್ರೂಯತಾಂ ರಾಮ ವಕ್ಷ್ಯಾಮಿ ಸುಗ್ರೀವೋ ನಾಮ ವಾನರಃ ।
ಭ್ರಾತ್ರಾ ನಿರಸ್ತಃ ಕ್ರುದ್ಧೇನ ವಾಲಿನಾ ಶಕ್ರಸೂನುನಾ ॥೧೧॥

ಋಷ್ಯಮೂಕೇ ಗಿರಿವರೇ ಪಂಪಾಯಾಂತಶೋಭಿತೇ ।
ನಿವಸತ್ಯಾತ್ಮವಾನ್ ವೀರಶ್ಚತುರ್ಭಿಃ ಸಹ ವಾನರೈಃ ॥೧೨॥

ವಾನರೇಂದ್ರೋ ಮಹಾವೀರ್ಯಸ್ತೇಜೋವಾನಮಿತಪ್ರಭಃ ।
ಸತ್ಯಸಂಧೋ ವಿನೀತಶ್ಚ ಧೃತಿಮಾನ್ ಮತಿಮಾನ್ ಮಹಾನ್ ॥೧೩॥

ದಕ್ಷಃ ಪ್ರಗಲ್ಭೋ ದ್ಯುತಿಮಾನ್ ಮಹಾಬಲಪರಾಕ್ರಮಃ ।
ಭ್ರಾತ್ರಾ ವಿವಾಸಿತೋ ರಾಮ ರಾಜ್ಯಹೇತೋರ್ಮಹಾಬಲಃ ॥೧೪॥

ಸ ತೇ ಸಹಾಯೋ ಮಿತ್ರಂ ಚ ಸೀತಾಯಾಃ ಪರಿಮಾರ್ಗಣೇ ।
ಭವಿಷ್ಯತಿ ಹಿ ಹೇ ರಾಮ ಮಾ ಚ ಶೋಕೇ ಮನಃ ಕೃಥಾಃ ॥೧೫॥

ಭವಿತವ್ಯಂ ಹಿ ಯಶ್ಚಾಪಿ ನ ತಚ್ಚಕ್ಯಮಿಹಾನ್ಯಥಾ ।
ಕರ್ತುಮಿಕ್ಷ್ವಾಕುಶಾರ್ದೂಲ ಕಾಲೋ ಹಿ ದುರತಿಕ್ರಮಃ ॥೧೬॥

ಗಚ್ಛ ಶೀಘ್ರಮಿತೋ ರಾಮ ಸುಗ್ರೀವಂ ತಂ ಮಹಾಬಲಮ್ ।
ವಯಸ್ಯಂ ತಂ ಕುರು ಕ್ಷಿಪ್ರಮಿತೋ ಗತ್ವಾದ್ಯ ರಾಘವ ॥೧೭॥

ಅದ್ರೋಹಾಯ ಸಮಾಗಮ್ಯ ದೀಪ್ಯಮಾನೇ ವಿಭಾವಸೌ ।

ಕೇಳು, ರಾಮ ! ಹೇಳುತ್ತೇನೆ. ಸುಗ್ರೀವನೆಂದು ಪ್ರಸಿದ್ಧನಾದ ವಾನರನು

ಕುಪಿತನಾದ ತನ್ನ ಅಣ್ಣ ಇಂದ್ರಸುತವಾಲಿಯಿಂದ ನಿರಾಕರಿಸಲ್ಪಟ್ಟಿರುವನು. ಪಂಪಾಸರೋವರದಿಂದ ಶೋಭಿಸುವ ಋಷ್ಯ ಮೂಕಪರ್ವತದಲ್ಲಿ ಮನಸ್ವೀ ವೀರ ಸುಗ್ರೀವನು ನಾಲ್ಕು ಪ್ರಮುಖ ವಾನರರೊಂದಿಗೆ ವಾಸಿಸಿದ್ದಾನೆ.

ಆ ವಾನರೇಂದ್ರ ಸುಗ್ರೀವನು ಮಹಾವೀರ್ಯನು, ತೇಜಸ್ವಿಯು, ಧೈರ್ಯ-ಶಾಲಿ, ವಿಪುಲ ಕಾಂತಿಮಂತನು ಮಹಾತ್ಮನು ಮತಿವಂತನು.

ಸಮರ್ಥನು, ದಿಟ್ಟತನದವನು, ದ್ಯುತಿಮಂತನು ಮಹಾಬಲಪರಾಕ್ರಮಿಯು ಮಹಾಬಲನು. ಅವನು ರಾಜ್ಯದ ಕಾರಣದಿಂದ ಅಣ್ಣನಿಂದ ಹೊರಹಾಕಲ್ಪಟ್ಟಿರು-ವನು.

ರಾಮ ! ಅವನು ನಿನಗೆ ಸಹಾಯಕನು, ಗೆಳೆಯನೂ – ಸೀತಾನ್ವೇಷಣೆಗೆ ಸಹಕರಿಸುವನು, ಶೋಕಿಸಬೇಡ.

ಇಷ್ವಾಕುವಂಶ ಶ್ರೇಷ್ಠನೆ ! ಆಗಲೇ ಬೇಕಾದುದನ್ನು ಬದಲಿಸಲಾಗದು. ಕಾಲವನ್ನು ಯಾರೂ ಅತ್ರಿಕಮಿಸಲು ಸಾಧ್ಯವಿಲ್ಲ.

ಬೇಗ ಇಲ್ಲಿಂದ ಹೊರಡು ರಾಮ. ಮಹಾಬಲ ಸುಗ್ರೀವನನ್ನು ಗೆಳೆಯನನ್ನಾಗಿ ಮಾಡಿಕೋ. ಪರಸ್ಪರ ದ್ರೋಹಮಾಡಿಕೊಳ್ಳುವುದಿಲ್ಲವೆಂದು ಅಗ್ನಿಸಾಕ್ಷಿಯಾಗಿ ಪ್ರತಿಜ್ಞೆ ಮಾಡು.

ಸ ಚ ತೇ ನಾವಮಂತವ್ಯಃ ಸುಗ್ರೀವೋ ವಾನರಾಧಿಪಃ ॥೧೮॥

ಕೃತಜ್ಞಃ ಕಾಮರೂಪೀ ಚ ಸಹಾಯಾರ್ಥೀ ಚ ವೀರ್ಯವಾನ್ ।
ಶಕ್ತೋ ಹ್ಯದ್ಯ ಯುವಾಂ ಕರ್ತುಂ ಕಾರ್ಯಂ ತಸ್ಯ ಚಿಕೀರ್ಷಿತಮ್ ॥೧೯

ಕೃತಾರ್ಥೋ ವಾಕೃತಾರ್ಥೋ ವಾ ಕೃತ್ಯಂ ತವ ಕರಿಷ್ಯತಿ ।
ಸ ಋಕ್ಷರಜಸಃ ಪುತ್ರಃ ಪಂಪಾಮಟತಿ ಶಂಕಿತಃ ॥೨೦॥

ಭಾಸ್ಕರಸ್ಯೌರಸಃ ಪುತ್ರೋ ವಾಲಿನಾ ಕೃತಕಿಲ್ಬಿಷಃ ।
ಸಂನಿಧಾಯಾಯುಧಂ ಕ್ಷಿಪ್ರಮೃಷ್ಯಮೂಕಾಲಯಂ ಕಪಿಮ್ ॥೨೧॥

ಕುರು ರಾಘವ ಸತ್ಯೇನ ವಯಸ್ಯಂ ವನಚಾರಿಣಮ್ ।
ಸ ಹಿ ಸ್ಥಾನಾನಿ ಸರ್ವಾಣಿ ಕಾರ್ತ್ಸ್ನ್ಯೇನ ಕಪಿಕುಂಜರಃ ॥೨೨॥

ನರಮಾಂಸಾಶಿನಾಂ ಲೋಕೇ ನೈಪುಣ್ಯಾದಧಿಗಚ್ಛತಿ ।
ನ ತಸ್ಯಾವಿದಿತಂ ಲೋಕೇ ಕಿಂಚಿದಸ್ತಿ ಹಿ ರಾಘವ ॥೨೩॥

ಯಾವತ್ ಸೂರ್ಯಃ ಪ್ರತಪತಿ ಸಹಸ್ರಾಂಶುರರಿಂದಮ ।
ಸ ನದೀರ್ವಿಪುಲಾನ್ ಶೈಲಾನ್ ಗಿರಿದುರ್ಗಾಣಿ ಕಂದರಾನ್ ॥೨೪॥

ಅನ್ವೇಷ್ಯ ವಾನರೈಃ ಸಾರ್ಧಂ ಪತ್ನೀಂ ತೇಽಧಿಗಮಿಷ್ಯತಿ ।
ವಾನರಾಂಶ್ಚ ಮಹಾಕಾಯಾನ್ ಪ್ರೇಷಯಿಷ್ಯತಿ ರಾಘವ ॥೨೫॥

ದಿಶೋ ವಿಚೇತುಂ ತಾಂ ಸೀತಾಂ ತ್ವದ್ವಿಯೋಗೇನ ಶೋಚತೀಮ್ ।
ಸ ಜ್ಞಾಸ್ಯತಿ ವರಾರೋಹಾಂ ನಿರ್ಮಲಾಂ ರಾವಣಾಲಯೇ ॥೨೬॥

ಸ ಮೇರುಶೃಂಗಾಗ್ರಗತಾಮನಿಂದಿತಾಂ
ಪ್ರವಿಶ್ಯ ಪಾತಾಲತಲೇಽಪಿ ವಾ ಶ್ರಿತಾಮ್ ।
ಪ್ಲವಂಗಮಾನಾಂ ಪ್ರವರಸ್ತವ ಪ್ರಿಯಾಂ
ನಿಹತ್ಯ ರಕ್ಷಾಂ ಪುನಃ ಪ್ರದಾಸ್ಯತಿ ॥೨೭॥

ವಾನರಾಧಿಪನನ್ನು ನೀನು ಅವಮಾನಿಸಬಾರದು. ಅವನು ಕೃತಜ್ಞ. ಬಯಸಿದ ರೂಪ ಪಡೆಯಬಲ್ಲವನು. ಸಹಾಯದ ಬಯಕೆಯುಳ್ಳವನು. ವೀರ್ಯವಂತನು.

ನೀವಿಬ್ಬರು ಅವನ ಅಭೀಪ್ಸಿತವನ್ನು ಸಾಧಿಸಲು ಸಮರ್ಥರು. ಅವನಿಗೆ ನಿಮ್ಮಿಂದ ಪ್ರಯೋಜನವಾಗಲಿ ಬಿಡಲಿ ನಿಮ್ಮ ಕೆಲಸವನ್ನು ಮಾಡಿಕೊಡುತ್ತಾನೆ.

ಅವನು ಋಕ್ಷ ರಜಸ್ಸಿನ ಕ್ಷೇತ್ರಜಾತನು, ಭಾಸ್ಕರನ ಔರಸಪುತ್ರನು. ವಾಲಿಯೊಂದಿಗೆ ವೈರಮಾಡಿಕೊಂಡು ಅವನಿಗೆ ಹೆದರಿಕೊಂಡು ಪಂಪಾತಟದಲ್ಲಿ ಅಲೆದುಕೊಂಡಿರುವನು.

ಅಗ್ನಿಯ ಬಳಿ ಆಯುಧವನ್ನಿಟ್ಟು ಆಣೆ ಮಾಡಿ ಋಷ್ಯಮೂಕ ನಿವಾಸಿ ವನಚಾರಿ ಕಪಿಶ್ರೇಷ್ಠ ಸುಗ್ರೀವನೊಂದಿಗೆ ಗೆಳೆತನ ಸಂಪಾದಿಸು.

ಆ ಕಪಿಕುಂಜರನು ನರಮಾಂಸಾಶನರಾದ ರಕ್ಕಸರ ಎಲ್ಲ ತಾಣಗಳನ್ನು ಚೆನ್ನಾಗಿ ಅರಿತಿರುವನು.

ಅರಿಂದಮನೇ ! ಎಲ್ಲಿಯವರೆಗೆ ಸೂರ್ಯನು ಬೆಳಗುವನೋ ರಾಘವ ! ಆ ಪ್ರದೇಶಗಳಾವುವೂ ಅವನಿಗೆ ಅಜ್ಞಾತವಲ್ಲ.

ಅವನು ತನ್ನ ಕಪಿಗಳೊಂದಿಗೆ ನದಿಗಳನ್ನೂ ವಿಪುಲ ಪರ್ವತಗಳನ್ನು ಗಿರಿದುರ್ಗಕಂದರಗಳನ್ನು ಹುಡುಕಾಡಿ ತಡಕಾಡಿ ನಿನ್ನ ಪತ್ನಿಯನ್ನು ತಿಳಿಯುವನು. ಮಹಾಕಾಯದ ವಾನರರನ್ನು, ನಿನ್ನ ವಿಯೋಗದಿಂದ ಶೋಕಿಸುತ್ತಿರುವ ಸೀತೆಯನ್ನು ಹುಡುಕಲು ಹತ್ತು ದಿಕ್ಕುಗಳಿಗೆ ಕಳಿಸುವನು.

ರಾವಣನ ಮನೆಯಲ್ಲಿರುವ ನಿರ್ಮಲ ಸುಂದರಾಗಿ ಸೀತೆಯನ್ನು ಪತ್ತೆ ಹಚ್ಚಬಲ್ಲನು.

ಆ ಕಪಿಶ್ರೇಷ್ಠ ಸುಗ್ರೀವನು ಅನಿಂದಿತಳಾದ ನಿನ್ನ ಪ್ರಿಯೆಯನ್ನು, ಅವಳು ಮೇರು ಶಿಖರದಲ್ಲಿದ್ದರು ಅಥವಾ ಪಾತಾಲದ ಬುಡದಲ್ಲಿದ್ದರೂ ರಕ್ಕಸರನ್ನು ಕೊಂದು ನಿನಗೆ ತಂದೊಪ್ಪಿಸುವನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಪ್ಪತ್ತೆರಡನೇ ಸರ್ಗ ಮುಗಿಯಿತು.

ತ್ರಿಸಪ್ತತಿತಮಃ ಸರ್ಗಃ

ಕಥಾಸಾರಾಂಶ– ಕಬಂಧನು ರಾಮ –ಲಕ್ಷ್ಮಣರಿಗೆ ಋಷ್ಯಮೂಕಪರ್ವತಕ್ಕೆ ಹೋಗುವ ಮಾರ್ಗವನ್ನು ತೋರಿಸುವನು.

ಶ್ರೀರಾಮ ! ಇಲ್ಲಿಂದ ಪಶ್ಚಿಮದಿಕ್ಕಿಗೆ ಪಯಣಿಸು. ಅಲ್ಲಿ ಬಗೆಬಗೆಯ ಹೂ ಹಣ್ಣುಗಳನ್ನು ತುಂಬಿಕೊಂಡ ಅನೇಕ ಪುಣ್ಯ ವೃಕ್ಷಗಳಿವೆ. ಅವುಗಳ ಮಧುರ ಫಲಗಳನ್ನು ಸವಿಯುತ್ತ ಪಯಣಿಸಿರಿ.

ಅಲ್ಲಿಂದ ಮುಂದೆ ನಂದನವನದಂತಹ ಸುಂದರವನವನ್ನು ಕಾಣುತ್ತೀರಿ. ಎಲ್ಲ ಋತುಗಳ ಫಲ ಪುಷ್ಪಗಳಿಂದ ಭರಿತವಾದ ಅನೇಕ ಹೆಮ್ಮರಗಳು ಅಲ್ಲಿವೆ. ಅವುಗಳ ಫಲಗಳನ್ನೂ ಸವಿದು ಮುಂದೆ ಸಾಗಿರಿ.

ಹೀಗೆ ಬೆಟ್ಟದಿಂದ ಬೆಟ್ಟವನ್ನು ಒಂದು ವನದಿಂದ ಮತ್ತೊಂದು ವನವನ್ನು ದಾಟಿ–ಕೊಂಡು ಹೋದಾಗ ಪಂಪಾಪುಷ್ಕರಿಣಿಯು ನಿಮ್ಮನ್ನು ಸೆಳೆಯುತ್ತದೆ. ಅಲ್ಲಿ ನಾನಾ ಜಲಚರಗಳು, ಸುಂದರವಾದ ಬಹುವಿಧ ತಾವರೆ ನೈದಿಲೆಗಳು ಕಂಗೊಳಿಸುತ್ತವೆ. ಕ್ರೌಂಚ ಕಾರಂಡವ ಮೊದಲಾದ ಬಹು ಬಗೆಯ ಹಕ್ಕಿ ಪಕ್ಕಿಗಳ ಕಲರವಗಳು ಕಣ್ಮನ ಸೆಳೆಯುತ್ತವೆ.

ನಾನಾ ಜಾತಿಯ ಬಣ್ಣಬಣ್ಣದ ಚಿತ್ತಾರದ ಮೀನುಗಳು, ಆ ಸರೋವರ ಸಲಿಲದಲಿ ಮಿನುಗುತ್ತಿರುತ್ತವೆ. ಫಲ ಮೂಲ ಭಕ್ಷ್ಯಗಳನ್ನು ಅವುಗಳಿಗೆ ಉಣ್ಣಿಸುವುದೇ ಆನಂದದ ಕ್ಷಣಗಳು.

ಆ ಪುಷ್ಕರ ಜಲವು ಕ್ಲೇಶಹಾರಿಯು ರೋಗ ಪರಿಹಾರಕವು ಶೀತಲವು. ಲಕ್ಷ್ಮಣ ಕಮಲದ ಎಲೆಯಲ್ಲಿ ಎತ್ತಿಕೊಂಡು ತರುತ್ತಾನೆ. ಪಂಪಾಪೀಠದಲ್ಲಿ ಗುಹೆಯಲ್ಲಿದ್ದ ಮಲಗಿದ್ದ ವಾನರರು ಆನೆಗಳಂತೆ ಘೀಳಿಡುತ್ತಾರೆ.

ಮುಂದೆ ಮತಂಗ ಋಷಿಗಳ ವನವಿದೆ. ಅನೇಕ ಮತಂಗಶಿಷ್ಯರು ಮತಂಗರ ಸೇವೆಯಲಿ ಶ್ರಮಿಸುತ್ತಿದ್ದಾರೆ . ನೆಲದ ಮೇಲೆ ಬಿದ್ದ ಅವರ ಮೈ ಬೆವರಿನ ಹನಿಗಳು ಹೂವುಗಳಾಗುತ್ತವೆ !

ಮಂತಗರ ಪರಿಚಾರಿಣಿ 'ಶಬರಿ' ಎಂಬ ಸನ್ಯಾಸಿನಿಯು ಈಗಲು ಅಲ್ಲಿರುವಳು. ಸರ್ವೋತ್ತಮನಾದ ನಿನ್ನನ್ನು ಕಂಡು ಅವಳು ಧನ್ಯಳಾಗಿ ಸ್ವರ್ಗ ಸೇರುವಳು.

ಪಂಪಾಸರೋವರದ ಪಶ್ಚಿಮಕ್ಕೆ ತೆರಳಿದರೆ ಸರೋವರದೆದುರು ಋಷ್ಯಮೂಕ–ಪರ್ವತವಿದೆ. ಅಲ್ಲೊಂದು ಭಾರಿ ಗುಹೆಯಿದೆ. ಅದರ ಮುಂದೊಂದು ಸರವಿದೆ. ಆ ಗುಹೆಯಲ್ಲಿ ಸುಗ್ರೀವನು ನಾಲ್ಕು ಸಹಾಯಕ ಕಪಿಶ್ರೇಷ್ಠರೊಂದಿಗೆ ವಾಸವಾಗಿದ್ದಾನೆ.

ಋಷ್ಯಮೂಕಮಾರ್ಗಕಥನಮ್

ದರ್ಶಯಿತ್ವಾ ತು ರಾಮಾಯ ಸೀತಾಯಾಃ ಪರಿಮಾರ್ಗಣೇ ।
ವಾಕ್ಯಮನರ್ಥಮರ್ಥಜ್ಞಃ ಕಬಂಧಃ ಪುನರಬ್ರವೀತ್ ॥೧॥

ಏಷ ರಾಮ ಶಿವಃ ಪಂಥಾ ಯತ್ರೈತೇ ಪುಷ್ಪಿತಾ ದ್ರುಮಾಃ ।
ಪ್ರತೀಚೀಂ ದಿಶಮಾಶ್ರಿತ್ಯ ಪ್ರಕಾಶಂತೇ ಮನೋರಮಾಃ ॥೨॥

ಜಂಬೂಪ್ರಿಯಾಲಪನಸಪ್ಲಕ್ಷನ್ಯಗ್ರೋಧತಿಂದುಕಾಃ ।
ಅಶ್ವತ್ಥಾಃ ಕರ್ಣಿಕಾರಾಶ್ಚ ಚೂತಾಶ್ಚಾನ್ಯೇ ಚ ಪಾದಪಾಃ ॥೩॥

ಧನ್ವನಾ ನಾಗವೃಕ್ಷಾಶ್ಚ ತಿಲಕಾ ನಕ್ತಮಾಲಕಾಃ ।
ನೀಲಾಶೋಕಾಃ ಕದಂಬಾಶ್ಚ ಕರವೀರಾಶ್ಚ ಪುಷ್ಪಿತಾಃ ॥೪॥

ಅಗ್ನಿಮುಖ್ಯಾ ಅಶೋಕಾಶ್ಚ ಸುರಕ್ತಾಃ ಪಾರಿಭದ್ರಕಾಃ ।
ತಾನಾರುಹ್ಯಾಥವಾ ಭೂಮೌ ಪಾತಯಿತ್ವಾ ಚ ತಾನ್ ಬಲಾತ್ ॥೫॥

ಫಲಾನ್ಯಮೃತಕಲ್ಪಾನಿ ಭಕ್ಷಯಂತೌ ಗಮಿಷ್ಯಥಃ ।
ತದತಿಕ್ರಮ್ಯ ಕಾಕುತ್ಸ್ಥ ವನಂ ಪುಷ್ಪಿತಪಾದಪಮ್ ॥೬॥

ನಂದನಪ್ರತಿಮಂ ಚಾನ್ಯತ್ ಕುರವೋ ಹ್ಯುತ್ತರಾ ಇವ ।
ಸರ್ವಕಾಮಫಲಾ ಯತ್ರ ಪಾದಪಾಸ್ತು ಮಧುಸ್ರವಾಃ ॥೭॥

ಸರ್ವೇ ಚ ಋತವಸ್ತತ್ರ ವನೇ ಚೈತ್ರರಥೇ ಯಥಾ ।
ಫಲಭಾರಾನತಾಸ್ತತ್ರ ಮಹಾವಿಟಪಧಾರಿಣಃ ॥೮॥

ಶೋಭಂತೇ ಸರ್ವತಸ್ತತ್ರ ಮೇಘಪರ್ವತಸಂನಿಭಾಃ ।
ತಾನಾರುಹ್ಯಾಥವಾ ಭೂಮೌ ಪಾತಯಿತ್ವಾ ಯಥಾಸುಖಮ್ ॥೯॥

ಶ್ರೀರಾಮನಿಗೆ ಸೀತಾನ್ವೇಷಣೆಯ ಉಪಾಯವನ್ನು ತಿಳಿಸಿ ಅರ್ಥಜ್ಞನಾದ ಕಬಂಧನು ಅರ್ಥವತ್ತಾದ ಮಾತನ್ನೆ ಮತ್ತೆ ಆಡಿದನು.

ಪಶ್ಚಿಮ ದಿಕ್ಕಿನಲ್ಲಿ ಹೂವುಗಳು ತುಂಬಿದ ಮನೋರಮ ಮರಗಳಿವೆ. ಇದು ನಿಮಗೆ ಸುಖಕರವಾದ ದಾರಿ.

ನೇರಳೆ ಪ್ರಿಯಾಲ ಹಲಸು ಆಲ ಅರಳಿ ತಿಂದುಕೆ ಬೆಟ್ಟದ ಕಣಿಗಲೆ ಮಾವು

ಇವುಗಳಲ್ಲದೆ ಇನ್ನೂ ಕೆಲವು ಧನ್ವನ, ನಾಗವೃಕ್ಷ, ತಿಲಕ, ನಕ್ತಮಾಲಿಕ, ನೀಲಾಶೋಕ, ಕದಂಬ, ಕರವೀರ, ಗೇರು, ಅಶೋಕ, ರಕ್ತಚಂದನ, ಮಂದಾರ ಮುಂತಾದ ವೃಕ್ಷಗಳೂ ಇವೆ. ಆ ಹಣ್ಣಿನ ಮರಗಳನ್ನು ಹತ್ತಿ ಅಥವಾ ಬಲಾತ್ಕಾರವಾಗಿ ಹಣ್ಣನ್ನು ಕೆಳಗೆ ಬೀಳಿಸಿ ಅವುಗಳನ್ನು ತಿಂದು ಮುಂದೆ ಸಾಗಿರಿ.

ಮುಂದೊಂದು ನಂದನವನದಂತಹ ಉತ್ತಮ ವನ ದೊರೆಯುತ್ತವೆ. ಹೂಬಿಟ್ಟ ಹೆಮ್ಮರಗಳು ಅಲ್ಲಿವೆ. ಉತ್ತರ ಕುರುವರ್ಷದ ವನದಂತೆ ಎಲ್ಲ ಋತುಗಳ ಸಮೃದ್ಧಿಯಿಂದ ಕೂಡಿದೆ. ಎಲ್ಲರೂ ಬಯಸುವಂತಹ ಹಣ್ಣುಗಳ ಮರಗಳು ಜೇನು ಸುರಿಸುತ್ತವೆ. ಚೈತ್ರರಥದ ಮರಗಳಂತೆ. ಹಣ್ಣುಗಳ ಭಾರದಿಂದ ಬಾಗಿದವುಗಳು, ದೊಡ್ಡ ದೊಡ್ಡ ಕೊಂಬೆಗಳಿರುವಂತಹವು. ಮೋಡಗಳಂತೆ ಪರ್ವತಗಳಂತೆ ಹೆಮ್ಮರಗಳು ಶೋಭಿಸುತ್ತವೆ.

ಪುಷ್ಪಗಳು ಬಾಡುವುದೇ ಇಲ್ಲ. ಏಕೆಂದರೆ ಇವು ಮತಂಗ ಮುನಿಗಳ ಶಿಷ್ಯರು. ಅವರ ಗುರುಗಳ ಸೇವೆ ಮಾಡಿ ಮಾಡಿ ದಣಿದು ಸುರಿದ ಅವರ ಬೆವರ ಹನಿಗಳೆ ಮತಂಗರ ಪ್ರಭಾವದಿಂದ ಪುಷ್ಪಗಳಾದವು. ಈಗ ಅವರಾರು ಅಲ್ಲಿಲ್ಲ.

ಶಬರಿ ಎಂಬುವವಳಿದ್ದಾಳೆ. ಧರ್ಮನಿಷ್ಠಳಾದ ಶಬರಿ ಮತಂಗರ ಶಿಷ್ಯೆ. ಅವಳು ನಿನ್ನದರ್ಶನ ಪಡೆದು ಕೃತಾರ್ಥಳಾಗಿ ಸ್ವರ್ಗ ಸೇರುವಳು.

ಪಂಪಾ ಸರೋವರದ ಪೂರ್ವಭಾಗದಲ್ಲಿ ಋಷ್ಯಮೂಕ ಪರ್ವತವಿದೆ. ಆ ಪರ್ವತ ಶಿಖರದಲ್ಲಿ ಮಲಗಿದವರು ಸ್ವಪ್ನದಲ್ಲಿ ಕಂಡ ಸಂಪತ್ತನ್ನು ಎಚ್ಚರಗೊಂಡ ಕೂಡಲೆ ಪಡೆಯುತ್ತಾರೆ.

ಆ ಪರ್ವತದ ಮೇಲೆ ಬಂಡೆ ಮುಚ್ಚಿದ ಒಂದು ಗುಹೆಯಿದೆ. ಅದರ ಪೂರ್ವಭಾಗದಲ್ಲಿ ಶೀತಲ ಜಲ ತುಂಬಿದ ಕುಂಡವಿದೆ. ಸುಗ್ರೀವನು ಕಪಿಗಳೊಂದಿಗೆ ಆ ಗುಹೆಯಲ್ಲಿ ವಾಸವಾಗಿದ್ದಾನೆ. ಶ್ರೀರಾಮ ! ನೀನು ಅವನೊಂದಿಗೆ ಸುಖ್ಯವನ್ನು ಮಾಡಿಕೋ.

ಇಷ್ಟ ಹೇಳಿ ಕಬಂಧನು ಆಗಸದಲ್ಲಿ ತನ್ನ ಲೋಕದೆಡೆಗೆ ಪಯಣಿಸಿದನು.

ಆ ಮರಗಳನ್ನು ಹತ್ತಿ ಅಥವಾ ಕೆಳಗೆ ಉದುರಿಸಿ ಹಣ್ಣುಗಳನ್ನು ಲಕ್ಷ್ಮಣ ನಿನಗೆ ತಂದುಕೊಡುವನು.

ಫಲಾನ್ಯಮೃತಕಲ್ಪಾನಿ ಲಕ್ಷ್ಮಣಸ್ತೇ ಪ್ರದಾಸ್ಯತಿ ।
ಚಂಕ್ರಮಂತೌ ವರಾನ್ ದೇಶಾನ್ ಶೈಲಾಚ್ಛೈಲಂ ವನಾದ್ವನಮ್॥೧೦॥

ತತಃ ಪುಷ್ಕರಿಣೀಂ ವೀರೌ ಪಂಪಾಂ ನಾಮ ಗಮಿಷ್ಯತಃ ।
ಅಶರ್ಕರಾಮವಿಭ್ರಂಶಾಂ ಸಮತೀರ್ಥಾಮಶೈವಲಾಮ್ ॥೧೧॥

ರಾಮ ಸಂಜಾತವಾಲೂಕಾಂ ಕಮಲೋತ್ಪಲಶಾಲಿನೀಮ್ ।
ತತ್ರ ಹಂಸಾಃ ಪ್ಲವಾಃ ಕ್ರೌಂಚಾಃ ಕುರರಾಶ್ಚೈವ ರಾಘವ ॥೧೨॥

ವಲ್ಗುಸ್ವನಾ ನಿಕೂಜಂತಿ ಪಂಪಾಸಲಿಲಗೋಚರಾಃ ।
ನೋದ್ವಿಜಂತೇ ನರಾನ್ ದೃಷ್ಟ್ವಾ ವಧಸ್ಯಾಕೋವಿದಾಃ ಪುರಾ ॥೧೩॥

ಘೃತಪಿಂಡೋಪಮಾನ್ ಸ್ಥೂಲಾಂಸ್ತಾನ್ ದ್ವಿಜಾನ್ ಭಕ್ಷಯಿಷ್ಯಥಃ ।
ರೋಹಿತಾನ್ ವಕ್ರತುಂಡಾಂಶ್ಚ ನಡಮೀನಾಂಶ್ಚ ರಾಘವ ॥೧೪॥

ಪಂಪಾಯಾಮಿಷುಭಿರ್ಮತ್ಸ್ಯಾಂಸ್ತತ್ರ ರಾಮ ವರಾನ್ ಹತಾನ್ ।
ನಿಸ್ತ್ವಕ್ಕಾನಯಸ್ತಪ್ತಾನಕೃಶಾನೇಕಕಂಟಕಾನ್ ॥೧೫॥

ತವ ಭಕ್ಷ್ಯಾ ಸಮಾಯುಕ್ತೋ ಲಕ್ಷ್ಮಣಃ ಸಂಪ್ರದಾಸ್ಯತಿ ।
ಭೃಶಂ ತೇ ಖಾದತೋ ಮತ್ಸ್ಯಾನ್ ಪಂಪಾಯಾಃ ಪುಷ್ಪಸಂಚಯೇ ॥

ಪದ್ಮಗಂಧಿ ಶಿವಂ ವಾರಿ ಸ್ವಾದು ಶೀತಮನಾಮಯಮ್ ।
ಉದ್ಧೃತ್ಯ ಸತತಾಕ್ಲಿಷ್ಟಂ ರೌಪ್ಯಸ್ಫಾಟಿಕಸಂನಿಭಮ್ ॥೧೭॥

ಅಸೌ ಪುಷ್ಕರಪರ್ಣೇನ ಲಕ್ಷ್ಮಣಃ ಪಾಯಯಿಷ್ಯತಿ ।

ಉತ್ತಮ ದೇಶಗಳನ್ನು ಬೆಟ್ಟದಿಂದ ಬೆಟ್ಟಕ್ಕೆ, ವನದಿಂದ ವನಾಂತರಕ್ಕೆ ಸಂಚರಿಸುತ್ತಾ, ವೀರರಾದ ನೀನು ಪಂಪಾ ಎಂಬ ಸರೋವರದ ಬಳಿಗೆ ತೆರಳುತ್ತೀರಿ.

ನೊರಜು ಕಲ್ಲುಗಳಿಲ್ಲದ, ಕಾಲುಜಾರುವಂಥ ಕೆಸರಿಲ್ಲದ, ಸಮತಟ್ಟಾದ, ಪಾಚಿಯಿಲ್ಲದ, ಶುದ್ಧ ಮರಳಿನ, ಆ ಪಂಪಾ ಸರೋವರ ತಾವರೆ ನೈದಿಲೆಗಳಿಂದ ಶೋಭಿಸುತ್ತದೆ.

ಆ ಸರೋವರದಲ್ಲಿ ವಿಹರಿಸುವ ಹಂಸ, ಕಾರಂಡವ, ಕ್ರೌಂಚ ಕುಕರ ಮುಂತಾದ ಜಲಚರ ಹಕ್ಕಿಗಳು ಮಧುರವಾಗಿ ಶಬ್ದ ಮಾಡುತ್ತಿರುತ್ತವೆ. ಮನುಷ್ಯರನ್ನು ನೋಡಿ ಅವುಗಳಿಗೆ ನಾಶದ ಉದ್ವೇಗವಾಗುವುದಿಲ್ಲ.

ತುಪ್ಪದ ಮುದ್ದೆಯಂತಿರುವ ಸ್ಥೂಲವಾದ ಆ ಹಕ್ಕಿಗಳನ್ನು ತಿನ್ನಿರಿ. ಕೆಂಪಾದ ವಕ್ರತುಂಡಗಳು, ನಡಮೀನುಗಳನ್ನು ಪಂಪಾ ಸರೋವರದಲ್ಲಿ ಬಾಣಗಳಿಂದ ಹತಗಳಾದ, ಚರ್ಮ ತೆಗೆದ ಕಬ್ಬಿಣದ ಕಂಬಿಯಲ್ಲಿ ಜೋಡಿಸಿ ಬೆಂಕಿಯಲ್ಲಿ ಬೇಯಿಸಿದ, ಕೃಶವಾಗಿರದ, ಒಂದೂ ಮುಳ್ಳಿರದ ಮೀನುಗಳನ್ನು ಭಕ್ತಿಯಿಂದ ಕೂಡಿದ ಲಕ್ಷ್ಮಣ ನಿನಗೆ ತಂದು ಕೊಡುವನು.

ಅವುಗಳನ್ನು ನೀನು ತಿನ್ನುತ್ತಿರುವಾಗಲೆ ಹೂ ತುಂಬಿದ ಪಂಪಾಸರೋವರದ ಸುಗಂಧಭರಿತವೂ, ಸುಖಶೀತಲವೂ ರೋಗ ಪರಿಹಾರಕವೂ ಆದ ಬೆಳ್ಳಿಯಂತೆ ಸ್ಫಟಿಕದಂತೆ ಶೋಭಿಸುವ ನೀರನ್ನು ತಾವರೆಯ ಎಲೆಯಲ್ಲಿ ಹಿಡಿದುಕೊಂಡು ಬಂದ ಲಕ್ಷ್ಮಣನು ಕುಡಿಸುವನು.

ಸ್ಥೂಲಾನ್ ಗಿರಿಗುಹಾಶಯ್ಯಾನ್ ವಾನರಾನ್ ವನಚಾರಿಣಃ ॥೧೮॥

ಸಾಯಾಹ್ನೇ ವಿಚರನ್ ರಾಮ ದರ್ಶಯಿಷ್ಯತಿ ಲಕ್ಷ್ಮಣಃ ।
ಅಪಾಂ ಲೋಭಾದುಪಾವೃತ್ತಾನ್ ವೃಷಭಾನಿವ ನರ್ದತಃ ॥೧೯॥

ರೂಪಾನ್ವಿತಾಂಶ್ಚ ಪಂಪಾಯಾಂ ದ್ರಕ್ಷ್ಯಸಿ ತ್ವಂ ನರೋತ್ತಮ ।
ಸಾಯಾಹ್ನೇ ವಿಚರನ್ ರಾಮ ವಿಟಪೀಮಾಲ್ಯಧಾರಿಣಃ ॥೨೦॥

ಶೀತೋದಕಂ ಚ ಪಂಪಾಯಾ ದೃಷ್ಟ್ವಾ ಶೋಕಂ ವಿಹಾಸ್ಯಸಿ ।
ಸುಮನೋಭಿಶ್ಚಿತಾಸ್ತತ್ರ ತಿಲಕಾ ನಕ್ತಮಾಲಕಾಃ ॥೨೧॥

ಉತ್ಪಲಾನಿ ಚ ಫುಲ್ಲಾನಿ ಪಂಕಜಾನಿ ಚ ರಾಘವ ।
ನ ತಾನಿ ಕಶ್ಚಿನ್ಮಾಲ್ಯಾನಿ ತತ್ರಾರೋಪಯಿತಾ ನರಃ ॥೨೨॥

ನ ಚ ವೈ ಮ್ಲಾನತಾಂ ಯಾಂತಿ ನ ಚ ಶೀರ್ಯಂತಿ ರಾಘವ ।
ಮತಂಗಶಿಷ್ಯಾಸ್ತತ್ರಾಸನ್ಋಷಯಃ ಸುಸಮಾಹಿತಾಃ ॥೨೩॥

ತೇಷಾಂ ಭಾರಾಭಿತಪ್ತಾನಾಂ ವನ್ಯಮಾಹರತಾಂ ಗುರೋಃ ।
ಯೇ ಪ್ರಪೇತುರ್ಮಹೀಂ ತೂರ್ಣಂ ಶರೀರಾತ್ ಸ್ವೇದಬಿಂದವಃ॥೨೪॥

ತಾನಿ ಜಾತಾನಿ ಮಾಲ್ಯಾನಿ ಮುನೀನಾಂ ತಪಸಾ ತದಾ ।
ಸ್ವೇದಬಿಂದುಸಮುತ್ಥಾನಿ ನ ವಿನಶ್ಯಂತಿ ರಾಘವ ॥೨೫॥

ಸ್ಥೂಲಗಳು, ಗಿರಿಗುಹಾಶಾಯಿಗಳು ವನಚಾರಿಗಳು ನೀರಿನ ಲೋಭದಿಂದ ಬಂದಿರುವ ಎತ್ತುಗಳಂತೆ ಸದ್ದುಮಾಡುವ ಸುಂದರ ರೂಪದ ವರಾಹಗಳನ್ನು ನರೋತ್ತಮ ! ನೀನಲ್ಲಿ ಕಾಣುವಿ.

ಸಂಜೆ ಸಂಚರಿಸುತ್ತ ಹೂವುಗಳನ್ನು ತುಂಬಿಕೊಂಡಿರುವ ಮರಗಳನ್ನು ಪಂಪಾಸರೋವರದ ತಂಪು ನೀರನ್ನು ಕಂಡು ಶೋಕರಹಿತನಾಗುವಿ. ಹೂಬಿಟ್ಟ ತಿಲಕ ನಕ್ತಮಾಲಕ ವೃಕ್ಷಗಳು ಕಂಗೊಳಿಸುತ್ತವೆ. ಸರೋವರದಲ್ಲಿ ಅರಳಿದ ಉತ್ಪಲ, ಕಮಲಗಳು ಚೆಂದ ಕಾಣಿಸುತ್ತವೆ.

ಆ ಹೂವುಗಳನ್ನು ಕಿತ್ತು ಮುಡಿದುಕೊಳ್ಳುವವರಿಲ್ಲ. ಅವುಗಳು ಬಾಡುವುದೂ ಇಲ್ಲ, ಹಾಳಾಗಿ ಉದುರುವುದೂ ಇಲ್ಲ. ಅಲ್ಲಿ ಹಿಂದೆ ಸಮಾಹಿತ ಮನಸ್ಸಿನ ಮತಂಗ ಮುನಿಗಳ ಶಿಷ್ಯರಿದ್ದರು. ಅವರು ಮತಂಗ ಮುನಿಗಳಿಗಾಗಿ ಕಾಡಿನ ಕಂದ ಮೂಲ ಫಲಗಳ ಭಾರವನ್ನು ಹೊತ್ತು ಬಳಲಿಕೆಯಿಂದ ಬೆವರುತ್ತಿದ್ದರು. ಆ ಮುನಿಗಳ ತಪಸ್ಸಿನ ಪ್ರಭಾವದಿಂದ ನೆಲದಲ್ಲಿ ಬಿದ್ದ ಬೆವರ ಹನಿಗಳೇ ಹೂವುಗಳಾಗುತ್ತಿದ್ದವು. ಹಾಗಾಗಿ ಅವು ನಾಶವಾಗುವುದಿಲ್ಲ.

ತೇಷಾಮದ್ಯಾಪಿ ತತ್ರೈವ ದೃಶ್ಯತೇ ಪರಿಚಾರಿಣೀ ।
ಶ್ರಮಣೀ ಶಬರೀ ನಾಮ ಕಾಕುತ್ಸ್ಥ ಚಿರಜೀವಿನೀ ॥೨೬॥

ತ್ವಾಂ ತು ಧರ್ಮೇ ಸ್ಥಿತಾ ನಿತ್ಯಂ ಸರ್ವಭೂತನಮಸ್ಕೃತಮ್ ।
ದೃಷ್ಟ್ವಾ ದೇವೋಪಮಂ ರಾಮ ಸ್ವರ್ಗಲೋಕಂ ಗಮಿಷ್ಯತಿ ॥೨೭॥

ತತಸ್ತದ್ರಾಮ ಪಂಪಾಯಾಸ್ತೀರಮಾಶ್ರಿತ್ಯ ಪಶ್ಚಿಮಮ್ ।
ಆಶ್ರಮಸ್ಥಾನಮತುಲಂ ಗುಹ್ಯಂ ಕಾಕುತ್ಸ್ಥ ಪಶ್ಯಸಿ ॥೨೮॥

ನ ತತ್ರಾಕ್ರಮಿತುಂ ನಾಗಾಃ ಶಕ್ನುವಂತಿ ತಮಾಶ್ರಮಮ್ ।
ವಿವಿಧಾಸ್ತತ್ರ ವೈ ನಾಗಾ ವನೇ ತಸ್ಮಿಂಶ್ಚ ಪರ್ವತೇ ॥೨೯॥

ಋಷೇಸ್ತತ್ರ ಮತಂಗಸ್ಯ ವಿಧಾನಾತ್ತಚ್ಚ ಕಾನನಮ್ ।
ಮತಂಗವನಮಿತ್ಯೇವ ವಿಶ್ರುತಂ ರಘುನಂದನ ॥೩೦॥

ತಸ್ಮಿನ್ನಂದನಸಂಕಾಶೇ ದೇವಾರಣ್ಯೋಪಮೇ ವನೇ ।
ನಾನಾವಿಹಂಗಸಂಕೀರ್ಣೇ ರಂಸ್ಯಸೇ ರಾಮ ನಿರ್ವೃತಃ ॥೩೧॥

ಋಷ್ಯಮೂಕಶ್ಚ ಪಂಪಾಯಾಃ ಪುರಸ್ತಾತ್ ಪುಷ್ಪಿತದ್ರುಮಃ ।
ಸುದುಃಖಾರೋಹಣೋ ನಾಮ ಶಿಶುನಾಗಾಭಿರಕ್ಷಿತಃ ॥೩೨॥

ಉದಾರೋ ಬ್ರಹ್ಮಣಾ ಚೈವ ಪೂರ್ವಕಾಲೇ ವಿನಿರ್ಮಿತಃ ।
ಶಯಾನಃ ಪುರುಷೋ ರಾಮ ತಸ್ಯ ಶೈಲಸ್ಯ ಮೂರ್ಧನಿ ॥೩೩॥

ಯತ್ಸ್ವಪ್ನೇ ಲಭತೇ ವಿತ್ತಂ ತತ್ ಪ್ರಬುದ್ಧೋಽಧಿಗಚ್ಛತಿ ।
ನ ತ್ವೇನಂ ವಿಷಮಾಚಾರಃ ಪಾಪಕರ್ಮಾಧಿರೋಹತಿ ॥೩೪॥

ಯಸ್ತು ತಂ ವಿಷಮಾಚಾರಃ ಪಾಪಕರ್ಮಾಧಿರೋಹತಿ ।
ತತ್ರೈವ ಪ್ರಹರಂತ್ಯೇನಂ ಸುಪ್ತಮಾದಾಯ ರಾಕ್ಷಸಾಃ ॥೩೫॥

ಕಾಕುತ್ಸ್ಥ! ಇಂದಿಗೂ ಮತಂಗ ಶಿಷ್ಯರ ಪರಿಚಾರಕಿ ಸನ್ನ್ಯಾಸಿನೀ, ಚಿರಜೀವಿ-ಯಾದ ಶಬರೀ ಅಲ್ಲಿರುವಳು. ನಿತ್ಯ ಧರ್ಮಮಾರ್ಗದಲ್ಲಿಯೇ ಇರುವ ಶಬರಿಯು ಎಲ್ಲರಿಂದ ನಮಸ್ಕೃತನಾದ ದೇವತಾಸದೃಶನಾದ ನಿನ್ನನ್ನು ನೋಡಿ, ರಾಮ ! ಸ್ವರ್ಗ ಸೇರುವಳು.

ಕಾಕುತ್ಸ್ಥ! ಅನಂತರ ನೀನು ಪಂಪಾಸರೋವರದ ಪಶ್ಚಿಮತೀರದಲ್ಲಿ ಒಂದು ಅನುಪಮವಾದ ಆಶ್ರಮವನ್ನು ಕಾಣುವಿ. ಅದು ಸಾಮಾನ್ಯರಿಗೆ ಗುಹ್ಯವಾದ ಸ್ಥಲವಾಗಿದೆ.

ಆ ವನ ಹಾಗೂ ಕಾನನದಲ್ಲಿ ಬಗೆಬಗೆಯ ಬಹಳ ಆನೆಗಳಿವೆ. ಅವು ಆ ಆಶ್ರಮವನ್ನು ಹಾಳುಗೆಡಹಲು ಸಮರ್ಥವಾಗುವುದಿಲ್ಲ - ಮತಂಗ ಮುನಿಗಳ ಪ್ರಭಾವದಿಂದ.

ನಂದನವನದಂತಿರುವ ದೇವಾರಣ್ಯದಂತಿರುವ ನಾನಾ ಬಗೆಯ ಹಕ್ಕಿ ಪಕ್ಕಿಗಳಿಂದ ತುಂಬಿದ ಆ ವನದಲ್ಲಿ ರಾಮ ! ನೀನು ಋಷಿಯಿಂದ ರಮಿಸುವಿ.

ಪಂಪಾಸರೋವರದ ಮುಂಭಾಗದಲ್ಲಿ ಹೂಬಿಟ್ಟ ಮರಗಳಿಂದ ಶೋಭಿಸುವ ಋಷ್ಯಮೂಕಪರ್ವತವಿದೆ. ಅದನ್ನು ಹತ್ತುವುದು ಕಷ್ಟ. ಮರಿ ಆನೆಗಳಿಂದ ಅದು ಸಂರಕ್ಷಿತವಾಗಿದೆ. ಬ್ರಹ್ಮನಿಂದ ಪೂರ್ವಕಾಲದಲ್ಲಿ ನಿರ್ಮಾಣಗೊಂಡ ಶ್ರೇಷ್ಠ ಪರ್ವತವದು.

ಆ ಬೆಟ್ಟದ ಮೇಲೆ ಪುರುಷನು ಮಲಗಿ ಯಾವ ಸಂಪತ್ತನ್ನು ಕನಸಿನಲ್ಲಿ ಹೊಂದುವನೋ ಎಚ್ಚರದ ಬಳಿಕ ಆ ಸಂಪತ್ತನ್ನು ಪಡೆಯುತ್ತಾನೆ ! ವಿಷಮಾಚಾರದ

ಪಾಪಿ ಈ ಪರ್ವತವನ್ನು ಏರಲಾಗದು. ಪಾಪಿ ಯಾರಾದರೂ ಹೋಗಿ ಮಲಗಿದರೆ ರಕ್ಕಸರು ಅವನನ್ನು ಕೊಲ್ಲುತ್ತಾರೆ.

ತತ್ರಾಪಿ ಶಿಶುನಾಗಾನಾಮಾಕ್ರಂದಃ ಶ್ರೂಯತೇ ಮಹಾನ್ ।
ಕ್ರೀಡತಾಂ ರಾಮ ಪಂಪಾಯಾಂ ಮತಂಗಾರಣ್ಯವಾಸಿನಾಮ್ ॥೩೬॥

ಸಿಕ್ತಾ ರುಧಿರಧಾರಾಭಿಃ ಸಂಹತ್ಯ ಪರಮದ್ವಿಪಾಃ ।
ಪ್ರಚರಂತಿ ಪೃಥಕ್ಕೀರ್ಣಾ ಮೇಘವರ್ಣಾಸ್ತರಸ್ವಿನಃ ॥೩೭॥

ತೇ ತತ್ರ ಪೀತ್ವಾ ಪಾನೀಯಂ ವಿಮಲಂ ಶೀತಮವ್ಯಯಮ್ ।
ನಿರ್ವೃತಾಃ ಸಂವಿಗಾಹಂತೇ ವನಾನಿ ವನಗೋಚರಾಃ ॥೩೮॥

ಋಕ್ಷಾಂಶ್ಚ ದ್ವೀಪಿನಶ್ಚೈವ ನೀಲಕೋಮಲಕಪ್ರಭಾನ್ ।
ರುರೂನಪೇತಾಪಜಯಾನ್ ದೃಷ್ಟ್ವಾ ಶೋಕಂ ಪ್ರಹಾಸ್ಯಸಿ ॥೩೯॥

ರಾಮ ತಸ್ಯ ತು ಶೈಲಸ್ಯ ಮಹತೀ ಶೋಭತೇ ಗುಹಾ ।
ಶಿಲಾಪಿಧಾನಾ ಕಾಕುತ್ಸ್ಥ ದುಃಖಂ ಚಾಸ್ಯಾಃ ಪ್ರವೇಶನಮ್ ॥೪೦॥

ತಸ್ಯಾ ಗುಹಾಯಾಃ ಪ್ರಾಗ್ದ್ವಾರೇ ಮಹಾನ್ ಶೀತೋದಕೋ ಹ್ರದಃ ।
ಫಲಮೂಲಾನ್ವಿತೋ ರಮ್ಯೋ ನಾನಾಮೃಗಸಮಾವೃತಃ ॥೪೧॥

ಅಲ್ಲಿಯೂ ಮತಂಗಾರಣ್ಯ ವಾಸಿಗಳಾದ ಪಂಪಾಸರಸಿಯಲ್ಲಿ ಆಟವಾಡುವ ಆನೆಮರಿಗಳ ದೊಡ್ಡ ಗರ್ಜನೆಯ ಕೂಗು ಕೇಳಿಸುತ್ತದೆ.

ದೊಡ್ಡ ದೊಡ್ಡ ಆನೆಗಳು ಪರಸ್ಪರ ಬಡಿದಾಡಿಕೊಂಡು ಸುರಿವ ರಕ್ತಧಾರೆಗಳಿಂದ ಹಿಂಡು ಹಿಂಡಾಗಿ ಮೋಡದಂತೆ ಕಾಣುತ್ತ ವೇಗದಿಂದ ಅಲೆಯುತ್ತವೆ.

ಸರೋವರದ ತಂಪು ನೀರನ್ನು ಕುಡಿದು ಖುಷಿಯಾಗಿ ಮತ್ತೆ ಕಾಡು ಹೊಕ್ಕುತ್ತವೆ. ಅನೇಕ ಕರಡಿಗಳನ್ನು ನೀಲರತ್ನದಂತ ಕಾಂತಿಯ ಆನೆಗಳನ್ನು ರುರುಮೃಗಗಳನ್ನು ಸೋಲಿಲ್ಲದವಗಳನ್ನು ಕಂಡು ಶೋಕರಹಿತನಾಗುವಿ.

ರಾಮನೆ ! ಆ ಬೆಟ್ಟದಲ್ಲಿ ದೊಡ್ಡ ಗುಹೆಯೊಂದು ಕಾಣುತ್ತದೆ. ಅದಕ್ಕೆ ಕಲ್ಲುಮುಚ್ಚಲಾಗಿರುತ್ತದೆ. ಕಾಕುತ್ಸ್ಥ ! ಆ ಗುಹೆಯಲ್ಲಿ ಪ್ರವೇಶಿಸುವುದು ಕಷ್ಟ.

ಆ ಗುಹೆಯಲ್ಲಿ ಸುಗ್ರೀವನು ನಾಕುವಾನರರಿಂದ ಕೂಡಿಕೊಂಡು ವಾಸಿಸಿರುವನು. ಕೆಲವೊಮ್ಮೆ ಪರ್ವತಶಿಖರದಲ್ಲಿ ಬಂದು ನಿಲ್ಲುವನು.

ತಸ್ಯಾಂ ವಸತಿ ಸುಗ್ರೀವಶ್ಚತುರ್ಭಿಃ ಸಹ ವಾನರೈಃ ।
ಕದಾಚಿಚ್ಛಿಖರೇ ತಸ್ಯ ಪರ್ವತಸ್ಯಾವತಿಷ್ಠತೇ ॥೪೨॥

ಕಬಂಧಸ್ತ್ವನುಶಾಸ್ಯೈವಂ ತಾವುಭೌ ರಾಮಲಕ್ಷ್ಮಣೌ ।
ಸ್ರಗ್ವೀ ಭಾಸ್ಕರವರ್ಣಾಭಃ ಖೇ ವ್ಯರೋಚತ ವೀರ್ಯವಾನ್ ॥೪೩॥

ತಂ ತು ಖಸ್ಥಂ ಮಹಾಭಾಗಂ ಕಬಂಧಂ ರಾಮಲಕ್ಷ್ಮಣೌ ।
ಪ್ರಸ್ಥಿತೌ ತ್ವಂ ವ್ರಜಸ್ವೇತಿ ವಾಕ್ಯಮೂಚತುರಂತಿಕೇ ॥೪೪॥

ಗಮ್ಯತಾಂ ಕಾರ್ಯಸಿದ್ಧ್ಯರ್ಥಮಿತಿ ತಾಮಬ್ರವೀತ್ ಸ ಚ ।
ಸುಪ್ರೀತೌ ತಾವನುಜ್ಞಾಪ್ಯ ಕಬಂಧಃ ಪ್ರಸ್ಥಿತಸ್ತದಾ ॥೪೫॥

ಸ ತತ್ ಕಬಂಧಃ ಪ್ರತಿಪದ್ಯ ರೂಪಂ
ವೃತಃ ಶ್ರಿಯಾ ಭಾಸ್ಕರತುಲ್ಯದೇಹಃ ।
ನಿದರ್ಶಯನ್ ರಾಮಮವೇಕ್ಷ್ಯ ಖಸ್ಥಃ
ಸಖ್ಯಂ ಕುರುಷ್ವೇತಿ ತದಾಭ್ಯುವಾಚ ॥೪೬॥

ವೀರ್ಯವಂತ ಕಬಂಧನು ಆ ರಾಮ ಲಕ್ಷ್ಮಣರಿಗೆ ಇಷ್ಟು ಅನುಶಾಸನ ಮಾಡಿ ಮಾಲೆ ಧರಿಸಿದವನಾಗಿ ಆಗಸದಲ್ಲಿ ಸೂರ್ಯನಂತೆ ಬೆಳಗುತ್ತ ಶೋಭಿಸಿದನು.

ಆಕಾಶದಲ್ಲಿರುವ ಮಹಾಭಾಗ್ಯ ಶಾಲಿಯಾದ ಕಬಂಧನಿಗೆ ನೀನು ಹೊರಡು ಎಂದು ಹೇಳಿದರು.

ಆ ಕಬಂಧನೂ ರಾಮಲಕ್ಷ್ಮಣರಿಗೆ ಕಾರ್ಯಸಿದ್ಧಿಗಾಗಿ ಹೋಗೋಣವಾಗಲಿ ಎಂದು ಹೇಳಿದನು. ಸುಪ್ರೀತರಾದ ರಾಮಲಕ್ಷ್ಮಣರ ಅನುಮತಿ ಪಡೆದು ಕಬಂಧನು ಆಗ ತೆರಳಿದ.

ಆ ಕಬಂಧನು ಸುಂದರರೂಪವನ್ನು ಪಡೆದು ಅದ್ಭುತ ಶೋಭೆಯಿಂದ ಕಂಗೊಳಿಸುತ್ತ ಆಕಾಶದಲ್ಲಿ ನಿಂತು ರಾಮನನ್ನು ನೋಡಿ 'ಸುಗ್ರೀವನ ಸಖ್ಯ ಮಾಡಿಕೋ' ಎಂದು ಹೇಳಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಪ್ಪತ್ತಮೂರನೇ ಸರ್ಗ ಮುಗಿಯಿತು.

❖

ಚತುಃಸಪ್ತತಿತಮಃ ಸರ್ಗಃ

ಕಥಾಸಾರಾಂಶ– ಕಬಂಧ ಹೇಳಿದ ದಾರಿಯಲ್ಲಿ ಸಾಗಿ ರಾಮ–ಲಕ್ಷ್ಮಣರು ಪಂಪಾ ಸರೋವರದ ಪಶ್ಚಿಮದಲ್ಲಿದ್ದ ಶಬರಿಯ ಆಶ್ರಮಕ್ಕೆ ಹೋದರು.

ಶ್ರೀರಾಮನನ್ನು ಕಂಡು ಶಬರಿಯು ಅವನ ಹಾಗೂ ಲಕ್ಷ್ಮಣನ ಪಾದಗಳಿಗೆ ಎರಗಿದರು. ಪಾದ್ಯ ಅರ್ಘ್ಯ ಮುಂತಾದ ಎಲ್ಲ ಉಪಚಾರಗಳನ್ನು ಸಮರ್ಪಿಸಿದಳು. ಶ್ರೀರಾಮ ಶಬರಿಯಲ್ಲಿ – ನಿನ್ನ ಸಾಧನೆಗೆ ವಿಘ್ನಗಳಿಲ್ಲ ತಾನೆ ? ತಪಸ್ಸು ವೃದ್ಧಿಸುತ್ತಿದೆಯೋ ! ಕೋಪವನ್ನು ನಿಯಂತ್ರಿಸಿರುವೆಯಾ ? ಆಹಾರ ನಿಯಮ ಪಾಲನೆಯಾಗುತ್ತಿದೆಯಲ್ಲ ! ಗುರುಶುಶ್ರೂಷಾ ಸಫಲವಾಗಿದೆಯೆ ? –ಎಂದು ವಿಚಾರಿಸಿದನು.

ಇಂದು ನಿನ್ನ ಸಂದರ್ಶನದಿಂದ ತಪಸ್ಸಿದ್ಧಿಯುಂಟಾಯಿತು. ನನ್ನ ಜನ್ಮ, ನಿಯಮ ಅನುಷ್ಠಾನಗಳೆಲ್ಲ ಸಾರ್ಥಕವಾಗಿವೆ. ಇಂದು ನಿನ್ನನ್ನು ಪೂಜೆ ಮಾಡಿದ ಮೇಲೆ ನನ್ನ ತಪಸ್ಸು ಸಫಲವಾಯಿತು. ನಿನ್ನ ಸೌಮ್ಯದೃಷ್ಟಿಗೆ ಪಾತ್ರನಾಗಿದ್ದೇನೆ. ಇನ್ನು ಅಕ್ಷಯ ಲೋಕವನ್ನು ಸೇರುತ್ತಾನೆ.

ನೀನು ಚಿತ್ರಕೂಟಕ್ಕೆ ಬಂದಾಗ ನನ್ನ ಗುರು ಮತಂಗರು ವಿಮಾನದಲ್ಲಿ ದಿವ್ಯಲೋಕವನ್ನು ಸೇರಿದರು. ನನ್ನ ಸೇವೆಯಿಂದ ಪ್ರಸನ್ನರಾದಾಗ, ಈ ಪುಣ್ಯಾಶ್ರಮಕ್ಕೆ ನಿನ್ನ ಶ್ರೀರಾಮ ಬರುವನು. ಅವರನ್ನು ಸ್ವಾಗತಿಸಿ ಸತ್ಕರಿಸು. ರಾಮನನ್ನು ಸಂದರ್ಶಿಸಿ ಪುನೀತಳಾಗಿ ಅಕ್ಷಯ ಲೋಕಗಳನ್ನು ಹೊಂದುವಿ'' ಎಂದು ಗುರುಗಳು ತಿಳಿಸಿದರು.

ರಾಘವ ! ಇದು ಮತಂಗವನ. ತಪಸ್ವೀ ಮತಂಗರು ಇದೋ ಇಲ್ಲಿ ಅಗ್ನಿಯಲ್ಲಿ ತಮ್ಮ ದೇಹವನ್ನು ಅರ್ಪಿಸಿದರು.

ಇದು ಪ್ರತ್ಯಕ್ಷಸ್ಥಳೀ ಎಂಬ ವೇದಿಕೆ. ಇಲ್ಲಿಯೇ ಅವರು ದೇವತಾರಾಧನೆ ಮಾಡುತ್ತಿದ್ದರು. ಈ ವೇದಿಕೆ ಇಂದೂ ಬೆಳಗುತ್ತಿದೆ !

ವೃದ್ಧಾಪ್ಯ ಉಪವಾಸಗಳಿಂದ ನಡೆದಾಡಲು ಅಸಮರ್ಥರಾದಾಗ ಅವರು ನೆನೆದ ಕೂಡಲೆ ಏಳು ಸಮುದ್ರಗಳ ಸಲಿಲವು ಪ್ರಕಟವಾಯಿತು. ಈ ಸಪ್ತಸಾಗರತೀರ್ಥದಲ್ಲಿ ಏಳು ಸಮುದ್ರಗಳ ನೀರಿನ ಸನ್ನಿಧಾನವಿದೆ. ಇಲ್ಲಿ ಮಿಂದು ಅವರು ದೇವರಿಗೆ ಅರ್ಪಿಸಿದ ಹೂವುಗಳು ಇನ್ನೂ ಬಾಡಿಲ್ಲ.

ನಿನ್ನ ದರ್ಶನವಾಗಿದೆ ರಾಮ ! ಇಲ್ಲಿ ನೆಲೆಸಿದ್ದ ಪುಣ್ಯಾತ್ಮ ಋಷಿಗಳ ಲೋಕಕ್ಕೆ ಹೋಗುವ ಬಯಕೆ. ಅನುಮತಿ ನೀಡು.

ಶಬರಿ ಹೇಳಿದ ಮಹಾತ್ಮರ ಮಹಿಮೆ ಕೇಳಿ ಶ್ರೀರಾಮ 'ಆಶ್ಚರ್ಯ ! ಆಶ್ಚರ್ಯ !' ಎಂದು ಉದ್ಗಾರ ತೆಗೆದ. ಭದ್ರೆ ! ನಿನ್ನ ಸತ್ಕಾರದಿಂದ ಸಂತಸವಾಯಿತು. ನೀನು ಬಯಸಿದ ಲೋಕದ ಕಡೆಗೆ ಆನಂದದಿಂದ ಯಾತ್ರೆ ಮಾಡು – ಎಂದು ಅನುಮತಿಸಿದ.

ವಲ್ಕಲ ಹಾಗೂ ಕೃಷ್ಣಮೃಗ ಚರ್ಮವನ್ನು ಧರಿಸಿದ್ದ ಶಬರೀ ತನ್ನ ದೇಹವನ್ನು ಅಗ್ನಿಯಲ್ಲಿ ಅರ್ಪಿಸಿಕೊಂಡಳು. ದಿವ್ಯರೂಪವನ್ನು ಪಡೆದು ಸ್ವರ್ಗ ಸೇರಿದಳು.

❖

ಶಬರೀಸ್ವರ್ಗಪ್ರಾಪ್ತಿಃ

ತೌ ಕಬಂಧೇನ ತಂ ಮಾರ್ಗಂ ಪಂಪಾಯಾ ದರ್ಶಿತಂ ವನೇ ।
ಪ್ರತಸ್ಥತುರ್ದಿಶಂ ಗೃಹ್ಯ ಪ್ರತೀಚೀಂ ನೃವರಾತ್ಮಜೌ ॥೧॥

ತೌ ಶೈಲೇಷ್ವಾಚಿತಾನೇಕಾನ್ ಕ್ಷೌದ್ರಕಲ್ಪಫಲಾನ್ ದ್ರುಮಾನ್ ।
ವೀಕ್ಷಂತೌ ಜಗ್ಮತುರ್ದ್ರಷ್ಟುಂ ಸುಗ್ರೀವಂ ರಾಮಲಕ್ಷ್ಮಣೌ ॥೨॥

ಕೃತ್ವಾ ಚ ಶೈಲಪೃಷ್ಠೇ ತು ತೌ ವಾಸಂ ರಾಮಲಕ್ಷ್ಮಣೌ ।
ಪಂಪಾಯಾಃ ಪಶ್ಚಿಮಂ ತೀರಂ ರಾಘವಾವುಪತಸ್ಥತುಃ ॥೩॥

ತೌ ಪುಷ್ಕರಿಣ್ಯಾಃ ಪಂಪಾಯಾಸ್ತೀರಮಾಸಾದ್ಯ ಪಶ್ಚಿಮಮ್ ।
ಅಪಶ್ಯತಾಂ ತತಸ್ತತ್ರ ಶಬರ್ಯಾ ರಮ್ಯಮಾಶ್ರಮಮ್ ॥೪॥

ತೌ ತಮಾಶ್ರಮಮಾಸಾದ್ಯ ದ್ರುಮೈರ್ಬಹುಭಿರಾವೃತಮ್ ।
ಸುರಮ್ಯಮಭಿವೀಕ್ಷಂತೌ ಶಬರೀಮಭ್ಯುಪೇಯತುಃ ॥೫॥

ತೌ ಚ ದೃಷ್ಟ್ವಾ ತದಾ ಸಿದ್ಧಾ ಸಮುತ್ಥಾಯ ಕೃತಾಂಜಲಿಃ ।
ರಾಮಸ್ಯ ಪಾದೌ ಜಗ್ರಾಹ ಲಕ್ಷ್ಮಣಸ್ಯ ಚ ಧೀಮತಃ ॥೬॥

ಪಾದ್ಯಮಾಚಮನೀಯಂ ಚ ಸರ್ವಂ ಪ್ರಾದಾದ್ಯಥಾವಿಧಿ ।

ಆ ರಾಜಕುಮಾರರಾದ ರಾಮಲಕ್ಷ್ಮಣರು ಕಬಂಧ ತಿಳಿಸಿದಂತೆ ವನದಲ್ಲಿ ಪಶ್ಚಿಮದಿಕ್ಕಿನೆಡೆಗೆ ನಡೆದರು.

ಇಬ್ಬರೂ ಪರ್ವತಗಳಲ್ಲಿ ಬೆಳೆದ ಫಲ –ಪುಷ್ಪ – ಜೇನುಗಳಿಂದ ಕೂಡಿದ ವೃಕ್ಷಗಳನ್ನು ನೋಡುತ್ತ ಸುಗ್ರೀವನನ್ನು ಕಾಣಲು ಹೆಜ್ಜೆ ಹಾಕಿದರು. ಪರ್ವತದ ಬೆನ್ನಶಿಖರದಲ್ಲಿ ವಾಸ ಮಾಡಿ ವಿಶ್ರಮಿಸಿ ಪಂಪಾ ಸರೋವರದ – ಪಶ್ಚಿಮತೀರಕ್ಕೆ ಬಂದರು.

ಸರೋವರದ ಪಶ್ಚಿಮಕ್ಕೆ ಬಂದು ಅಲ್ಲಿ ಶಬರಿಯ ರಮ್ಯ ಆಶ್ರಮ ಕಂಡರು.

ಅನೇಕ ಮರಗಳಿಂದ ತುಂಬಿದ್ದ ಆ ರಮ್ಯ ಆಶ್ರಮಕ್ಕೆ ಬಂದು ಶಬರಿಯನ್ನು ಸಮೀಪಿಸಿದರು.

ಸಿದ್ಧಳಾದ ಶಬರಿಯು ಅವರೀರ್ವರನ್ನು ರಾಮಲಕ್ಷ್ಮಣರನ್ನು – ನೋಡಿ ಎದ್ದು ಕೈಮುಗಿದು ಧೀಮಂತ ರಾಮನ ಹಾಗೂ ಲಕ್ಷ್ಮಣನ ಪಾದಗಳನ್ನು ಹಿಡಿದಳು – ನಮಿಸಿದಳು. ಎಲ್ಲ ಪಾದ್ಯ ಆಚಮನೀಯಗಳ ಪೂಜೆಯನ್ನು ಯಥಾವಿಧಿ ಸಲ್ಲಿಸಿದಳು.

ತಾಮುವಾಚ ತತೋ ರಾಮಃ ಶ್ರವಣೇಂ ಸಂಶಿತವ್ರತಾಮ್ ॥೭॥

ಕಚ್ಚಿತ್ತೇ ನಿರ್ಜಿತಾ ವಿಘ್ನಾಃ ಕಚ್ಚಿತ್ತೇ ವರ್ಧತೇ ತಪಃ ।
ಕಚ್ಚಿತ್ತೇ ನಿಯತಃ ಕ್ರೋಧ ಆಹಾರಶ್ಚ ತಪೋಧನೇ ॥೮॥

ಕಚ್ಚಿತ್ತೇ ನಿಯಮಾಃ ಪ್ರಾಪ್ತಾಃ ಕಚ್ಚಿತ್ತೇ ಮನಸಃ ಸುಖಮ್ ।
ಕಚ್ಚಿತ್ತೇ ಗುರುಶುಶ್ರೂಷಾ ಸಫಲಾ ಚಾರುಭಾಷಿಣಿ ॥೯॥

ರಾಮೇಣ ತಾಪಸೀ ಪೃಷ್ಟಾ ಸಾ ಸಿದ್ಧಾ ಸಿದ್ಧಸಂಮತಾ ।
ಶಶಂಸ ಶಬರೀ ವೃದ್ಧಾ ರಾಮಾಯ ಪ್ರತ್ಯುಪಸ್ಥಿತಾ ॥೧೦॥

ಅದ್ಯ ಪ್ರಾಪ್ತಾ ತಪಃಸಿದ್ಧಿಸ್ತವ ಸಂದರ್ಶನಾನ್ಮಯಾ ।
ಅದ್ಯ ಮೇ ಸಫಲಂ ತಪ್ತಂ ಗುರವಶ್ಚ ಸುಪೂಜಿತಾಃ ॥೧೧॥

ಅದ್ಯ ಮೇ ಸಫಲಂ ಜನ್ಮ ಸ್ವರ್ಗಶ್ಚೈವ ಭವಿಷ್ಯತಿ ।
ತ್ವಯಿ ದೇವವರೇ ರಾಮ ಪೂಜಿತೇ ಪುರುಷರ್ಷಭ ॥೧೨॥

ಚಕ್ಷುಷಾ ತವ ಸೌಮ್ಯೇನ ಪೂತಾಸ್ಮಿ ರಘುನಂದನ ।
ಗಮಿಷ್ಯಾಮ್ಯಕ್ಷಯಾನ್ ಲೋಕಾಂಸ್ತ್ವತ್ಪ್ರಸಾದಾದರಿಂದಮ ॥೧೩॥

ಬಳಿಕ ಶ್ರೀರಾಮನು ವ್ರತಚಾರಿಣಿ ಸನ್ಯಾಸಿನಿಯಾದ ಶಬರಿಯನ್ನು ಕುರಿತು ಇಂತೆಂದನು –

ಸಾಧನೆಗೆ ಬರುವ ತೊಡಕುಗಳನ್ನು ಗೆದ್ದಿರುವೆಯಾ ? ನಿನ್ನ ತಪಸ್ಸು ವೃದ್ಧಿ-ಯಾಗುತ್ತಿದೆಯೆ ? ತಪೋಧನಳೆ ? ಕೋಪವನ್ನು ನಿಗ್ರಹಿಸಿಕೊಂಡಿರುವೆಯಾ ?

ಆಹಾರವನ್ನು ನಿಯಂತ್ರಿಸಿ ಕೊಂಡಿರುವೆಯಾ ? ನಿಯಮಗಳು ಕೈಗೂಡಿವೆಯಾ ? ಮನದಲಿ ಸುಖಶಾಂತಿ ನೆಲೆಸಿದೆಯಾ ? ಸುಂದರ ಮಾತಿನವಳೇ! ನಿನ್ನ ಗುರುಸೇವೆ ಸಫಲವಾಗಿದೆಯಾ ?

ಸಿದ್ಧರಿಗೆ ಸಮ್ಮತಳೂ ಸಿದ್ಧಿ ಪಡೆದವಳೂ ಆದ ವೃದ್ಧೆ ಶಬರೀ ಶ್ರೀರಾಮ ಕೇಳಿದ ಕುಶಲ ಪ್ರಶ್ನೆಗೆ ನಿಂತು ಉತ್ತರಿಸಿದಳು. ನಿನ್ನ ಸಂದರ್ಶನದಿಂದ ತಪಃ ಸಿದ್ಧಿಯು ಉಂಟಾಯಿತು. ಇಂದಿಗೆ ನನ್ನ ತಪಸ್ಸು ಸಫಲವಾಯಿತು. ಗುರುಪೂಜೆಯಾ ಚೆನ್ನಾಗಿ ನೆರವೇರಿದೆ. ದೇವವರನಾದ ನೀನು ಇಂದು ಪೂಜಿತನಾದ ಬಳಿಕ ನನ್ನ ಬಾಳು ಸಾರ್ಥಕವಾಯಿತು. ಸ್ವರ್ಗವೂ ದೊರೆಯುತ್ತದೆ !

ನಿನ್ನ ಪ್ರಸನ್ನವಾದ ದೃಷ್ಟಿಯಿಂದ ನಾನು ಪೂತಾತ್ಮಳಾದೆ. ಶತ್ರುದಮನನೆ ! ನಿನ್ನ ಪ್ರಸಾದದಿಂದ ಅಕ್ಷಯಲೋಕಗಳನ್ನು ಸೇರುತ್ತೇನೆ.

ಚಿತ್ರಕೂಟಂ ತ್ವಯಿ ಪ್ರಾಪ್ತೇ ವಿಮಾನೈರತುಲಪ್ರಭೈಃ ।
ಇತಸ್ತೇ ದಿವಮಾರೂಢಾ ಯಾನಹಂ ಪರ್ಯಚಾರಿಷಮ್ ॥೧೪॥

ತೈಶ್ಚಾಹಮುಕ್ತಾ ಧರ್ಮಜ್ಞೈರ್ಮಹಾಭಾಗೈರ್ಮಹರ್ಷಿಭಿಃ ।
ಆಗಮಿಷ್ಯತಿ ತೇ ರಾಮಃ ಸುಪುಣ್ಯಮಿಮಮಾಶ್ರಮಮ್ ॥೧೫॥

ಸ ತೇ ಪ್ರತಿಗ್ರಹೀತವ್ಯಃ ಸೌಮಿತ್ರಿಸಹಿತೋಽತಿಥಿಃ ।
ತಂ ಚ ದೃಷ್ಟ್ವಾ ವರಾನ್ ಲೋಕಾನಕ್ಷಯಾಂಸ್ತ್ವಂ ಗಮಿಷ್ಯಸಿ ॥೧೬॥

ಮಯಾ ತು ವಿವಿಧಂ ವನ್ಯಂ ಸಂಚಿತಂ ಪುರುಷರ್ಷಭ ।
ತವಾರ್ಥೇ ಪುರುಷವ್ಯಾಘ್ರ ಪಂಪಾಯಾಸ್ತೀರಸಂಭವಮ್ ॥೧೭॥

ಏವಮುಕ್ತಃ ಸ ಧರ್ಮಾತ್ಮಾ ಶಬರ್ಯಾ ಶಬರೀಮಿದಮ್ ।
ರಾಘವಃ ಪ್ರಾಹ ವಿಜ್ಞಾನೇ ತಾಂ ನಿತ್ಯಮಬಹಿಷ್ಕೃತಾಮ್ ॥೧೮॥

ದನೋಃ ಸಕಾಶಾತ್ತತ್ತ್ವೇನ ಪ್ರಭಾವಂ ತೇ ಮಹಾತ್ಮನಃ ।
ಶ್ರುತಂ ಪ್ರತ್ಯಕ್ಷಮಿಚ್ಛಾಮಿ ಸಂದ್ರಷ್ಟುಂ ಯದಿ ಮನ್ಯಸೇ ॥೧೯॥

ಏತತ್ತು ವಚನಂ ಶ್ರುತ್ವಾ ರಾಮವಕ್ತ್ರಾದ್ವಿನಿಃಸೃತಮ್ ।
ಶಬರೀ ದರ್ಶಯಾಮಾಸ ತಾವುಭೌ ತದ್ವನಂ ಮಹತ್ ॥೨೦॥

ಪಶ್ಯ ಮೇಘಘನಪ್ರಖ್ಯಂ ಮೃಗಪಕ್ಷಿಸಮಾಕುಲಮ್ ।
ಮತಂಗವನಮಿತ್ಯೇವ ವಿಶ್ರುತಂ ರಘುನಂದನ ॥೨೧॥

ಇಹ ತೇ ಭಾವಿತಾತ್ಮಾನೋ ಗುರವೋ ಮೇ ಮಹಾವನೇ ।
ಜುಹವಾಂಚಕ್ರಿರೇ ದೇಹಂ ಮಂತ್ರವನ್ಮಂತ್ರಪೂಜಿತಮ್ ॥೨೨॥

ಇಯಂ ಪ್ರತ್ಯಕ್ಸ್ಥಲೀ ವೇದಿರ್ಯತ್ರ ತೇ ಮೇ ಸುಸತ್ಕೃತಾಃ ।
ಪುಷ್ಪೋಪಹಾರಂ ಕುರ್ವಂತಿ ಶ್ರಮಾದುದ್ವೇಪಿಭಿಃ ಕರೈಃ ॥೨೩॥

ತೇಷಾಂ ತಪಃಪ್ರಭಾವೇಣ ಪಶ್ಯಾದ್ಯಾಪಿ ರಘೂದ್ವಹ ।
ದ್ಯೋತಯಂತಿ ದಿಶಃ ಸರ್ವಾಃ ಶ್ರಿಯಾ ವೇದ್ಯೋಽತುಲಪ್ರಭಾಃ॥೨೪॥

ಅಶಕ್ನುವದ್ಭಿಸ್ತೈರ್ಗಂತುಮುಪವಾಸಶ್ರಮಾಲಸೈಃ ।
ಚಿಂತಿತೇಽಭ್ಯಾಗತಾನ್ ಪಶ್ಯ ಸಹಿತಾನ್ ಸಪ್ತಸಾಗರಾನ್ ॥೨೫॥

ಕೃತಾಭಿಷೇಕೈಸ್ತೈರ್ನ್ಯಸ್ತಾ ವಲ್ಕಲಾಃ ಪಾದಪೇಷ್ವಿಹ ।
ಅದ್ಯಾಪಿ ನಾವಶುಷ್ಯಂತಿ ಪ್ರದೇಶೇ ರಘುನಂದನ ॥೨೬॥

ದೇವಕಾರ್ಯಾಣಿ ಕುರ್ವದ್ಭಿರ್ಯಾನೀಮಾನಿ ಕೃತಾನಿ ವೈ ।
ಪುಷ್ಪೈಃ ಕುವಲಯೈಃ ಸಾರ್ಧಂ ಮ್ಲಾನತ್ವಂ ನೋಪಯಾಂತಿ ವೈ॥೨೭॥

ಕೃತ್ಸ್ನಂ ವನಮಿದಂ ದೃಷ್ಟಂ ಶ್ರೋತವ್ಯಂ ಚ ಶ್ರುತಂ ತ್ವಯಾ ।
ತದಿಚ್ಛಾಮ್ಯಭ್ಯನುಜ್ಞಾತಾ ತ್ಯಕ್ತುಮೇತತ್ ಕಲೇಬರಮ್ ॥೨೮॥

ತೇಷಾಮಿಚ್ಛಾಮ್ಯಹಂ ಗಂತುಂ ಸಮೀಪಂ ಭಾವಿತಾತ್ಮನಾಮ್ ।
ಮುನೀನಾಮಾಶ್ರಮೋ ಯೇಷಾಮಹಂ ಚ ಪರಿಚಾರಿಣೀ ॥೨೯॥

ನೀನು ಚಿತ್ರಕೂಟಕ್ಕೆ ಬಂದಾಗ, ನಾನು ಯಾರನ್ನು ಸೇವಿಸುತ್ತಿದ್ದೆ ಆ ನನ್ನ ಗುರುಗಳು ಅತುಲಪ್ರಭೆಯ ವಿಮಾನಗಳಿಂದ ಇಲ್ಲಿಂದ ದಿವ್ಯಲೋಕಕ್ಕೆ ತೆರಳಿದರು.

ಆ ಧರ್ಮಜ್ಞ ಮಹಾಭಾಗ ಮಹರ್ಷಿಗಳು ಹೋಗುವಾಗ, ನನಗೆ ಈ ಸುಪುಣ್ಯ ಆಶ್ರಮಕ್ಕೆ ನಿನ್ನ ರಾಮ ಬರುವನು. ಲಕ್ಷ್ಮಣ ಸಹಿತನಾದ ಶ್ರೀರಾಮ ಅತಿಥಿಯಾಗಿ ಬಂದಾಗ ನೀನು ಅವನನ್ನು ಸತ್ಕರಿಸು. ಆ ರಾಮನನ್ನು ಕಂಡು ನೀನು ಅಕ್ಷಯ ಲೋಕವನ್ನು ಹೊಂದುವಿ ಎಂದರು.

ಪುರುಷಶ್ರೇಷ್ಠನೆ ! ನಾನು ನಿನ್ನ ಸತ್ಕಾರಕ್ಕಾಗಿ ಪಂಪೆಯ ತೀರದಲ್ಲಿ ಬೆಳೆದ ಕಾಡಿನ ಫಲ ಮೂಲಗಳನ್ನು ಸಂಗ್ರಹಿಸಿಟ್ಟಿರುವೆನು.

ಶಬರಿಯು ಹೀಗೆ ಹೇಳಿದಾಗ ತತ್ವಜ್ಞಾನ ವಿಷಯದಲ್ಲಿ ಎಂದೂ ಬಹಿಷ್ಕೃತ-ಳಾಗದಿದ್ದ ಆ ಶಬರಿಗೆ ಹೀಗೆ ಉತ್ತರಿಸಿದನು.

ಶಬರಿ ! ಕಬಂಧನಾಗಿದ್ದ ದನುವಿನ ಮೂಲಕ ನಿನ್ನ ಮಹಾತ್ಮೆ ಮತಂಗರ ಮಹಿಮೆ ಕೇಳಿದೆ. ನೀನು ಒಪ್ಪಿದರೆ ಅವರ ಮಹಿಮೆಯನ್ನು ಕಣ್ಣಾರೆ ಕಾಣಲು ಬಯಸುತ್ತೇನೆ.

ರಾಮನ ಮುಖದಿಂದ ಹೊಮ್ಮಿದ ಆ ಮಾತನ್ನು ಕೇಳಿ ಶಬರಿಯು ಅವರಿಬ್ಬರಿಗೆ ಆ ವನವನ್ನೆಲ್ಲ ತೋರಿಸಿದಳು. ರಘುನಂದನ ! ದಟ್ಟ ಮೋಡಗಳಂತೆ ಕಾಣುವ ಮೃಗಪಕ್ಷಿಗಳಿಂದ ತುಂಬಿದ ಪ್ರಸಿದ್ಧವಾದ ಮತಂಗವನವಿದು.

ಇಲ್ಲಿಯೇ ಶುದ್ಧಾಂತಃಕರಣದ ನನ್ನ ಗುರುಗಳು ಮಂತ್ರವೇತ್ತರ ಮಂತ್ರಗಳಿಂದ ಪೂಜಿತವಾದ ಗಂಗಾದಿ ತೀರ್ಥವನ್ನು ಇಲ್ಲಿಯೇ ಆಹ್ವಾನ ಮಾಡಿದರು.

ಇದು ಪ್ರತ್ಯಕ್ಷಸ್ಥಲೀ ಎಂಬ ವೇದಿಕೆ. ನಾನು ಸತ್ಕರಿಸುತ್ತಿದ್ದ ನನ್ನ ಗುರುಗಳು ಇಲ್ಲಿ ಶ್ರಮಪಟ್ಟು ನಡುಗುವ ಕೈಗಳಿಂದ ದೇವತಾರ್ಚನೆ ಮಾಡುತ್ತಿದ್ದರು.

ರಾಘವ ! ನೋಡು. ಅವರ ತಪಸ್ಸಿನ ಪ್ರಭಾವದಿಂದ ಇಂದಿಗೂ ತನ್ನ ತೇಜಸ್ಸಿ-ನಿಂದ ಅತುಲಪ್ರಭೆಯ ಎಲ್ಲ ದಿಕ್ಕುಗಳನ್ನು ಬೆಳುತ್ತಿವೆ.

ಸತತ ವ್ರತ ಉಪವಾಸ ವ್ರತಗಳಿಂದ ದುರ್ಬಲರಾಗಿದ್ದ ಅವರು ಸಮುದ್ರಸ್ನಾನಕ್ಕೆ ಪಯಣಿಸಲು ಅಸಮರ್ಥರಾಗಿ ಮನಸಾರೆ ನೆನೆದಾಗ ಇಲ್ಲಿಯೇ ಸಪ್ತಸಾಗರಗಳೂ ಸನ್ನಿಹಿತವಾದವು. ಇಲ್ಲಿ ಕಾಣುತ್ತಿರುವ ತೀರ್ಥ ಏಳು ಸಮುದ್ರಗಳ ಸನ್ನಿಧಾನವನ್ನು ಹೊಂದಿದೆ.

ರಘುನಂದನ ! ಈ ತೀರ್ಥದಲ್ಲಿ ಮಿಂದು ಋಷಿಗಳು ತಮ್ಮ ಒದ್ದೆಯಾದ ವಲ್ಕಲಗಳನ್ನು ಒಣಗಲು ಈ ಮರಗಳಲ್ಲಿ ಇಟ್ಟರು. ಇವು ಇಂದಿಗೂ ಒಣಗಿಲ್ಲ !

ಅವರು ದೇವತಾರ್ಚನೆಗಾಗಿ ಕನ್ನೈದಿಲೆಯೊಂದಿಗೆ ಇತರ ಪುಷ್ಪಗಳಿಂದ ರಚನೆ ಮಾಡಿ ಹಾಕಿದ ಹೂ ಮಾಲೆಗಳು ಇಂದಿಗೂ ಒಣಗಿಲ್ಲ !

ಶ್ರೀರಾಮ ! ನೀನು ಮತಂಗವನವನ್ನೆಲ್ಲ ನೋಡಿದ್ದಾಯಿತು. ಮತಂಗರ ಮಹಿಮೆಯನ್ನು ಕೇಳಿದ್ದೂ ಆಯಿತು. ಆದ್ದರಿಂದ ಈ ಕಲೇವರವನ್ನು ಪರಿತ್ಯಾಗ ಮಾಡಲು ಅನುಮತಿ ನೀಡು. ಈ ಆಶ್ರಮ ಯಾವ ಮುನಿಗಳದೋ, ನಾನು ಯಾರ ಪರಿಚಾರಿಣಿಯಾಗಿದ್ದೆನೋ ಆ ಮಹಾತ್ಮನ ಬಳಿಗೆ ಹೋಗಲು ಬಯಸಿದ್ದೇನೆ.

ಧರ್ಮಿಷ್ಠಂ ತು ವಚಃ ಶ್ರುತ್ವಾ ರಾಘವಃ ಸಹಲಕ್ಷ್ಮಣಃ ।
ಪ್ರಹರ್ಷಮತುಲಂ ಲೇಭೇ ಆಶ್ಚರ್ಯಮಿತಿ ಚಾಬ್ರವೀತ್ ॥೩೦॥

ತಾಮುವಾಚ ತತೋ ರಾಮಃ ಶಬರೀಂ ಸಂಶಿತವ್ರತಾಮ್ ।
ಅರ್ಚಿತೋಽಹಂ ತ್ವಯಾ ಭಕ್ತ್ಯಾ ಗಚ್ಛ ಕಾಮಂ ಯಥಾಸುಖಮ್ ॥೩೧

ಇತ್ಯುಕ್ತಾ ಜಟಿಲಾ ವೃದ್ಧಾ ಚೀರಕೃಷ್ಣಾಜಿನಾಂಬರಾ ।
ತಸ್ಮಿನ್ ಮುಹೂರ್ತೇ ಶಬರೀ ದೇಹಂ ಜೀರ್ಣಂ ಜಿಹಾಸತೀ ॥೩೨॥

ಅನುಜ್ಞಾತಾ ತು ರಾಮೇಣ ಹುತ್ವಾತ್ಮಾನಂ ಹುತಾಶನೇ ।
ಜ್ವಲತ್ಪಾವಕಸಂಕಾಶಾ ಸ್ವರ್ಗಮೇವ ಜಗಾಮ ಸಾ ॥೩೩॥

ದಿವ್ಯಾಭರಣಸಂಯುಕ್ತಾ ದಿವ್ಯಮಾಲ್ಯಾನುಲೇಪನಾ ।
ದಿವ್ಯಾಂಬರಧರಾ ತತ್ರ ಬಭೂವ ಪ್ರಿಯದರ್ಶನಾ ॥೩೪॥

ವಿರಾಜಯಂತೀ ತಂ ದೇಶಂ ವಿದ್ಯುತ್ಸೌದಾಮನೀ ಯಥಾ ।
ಯತ್ರ ತೇ ಸುಕೃತಾತ್ಮಾನೋ ವಿಹರಂತಿ ಮಹರ್ಷಯಃ ॥೩೫॥

ತತ್ಪುಣ್ಯಂ ಶಬರೀ ಸ್ಥಾನಂ ಜಗಾಮಾತ್ಮಸಮಾಧಿನಾ ॥

ಲಕ್ಷ್ಮಣ ಸಹಿತನಾದ ರಾಘವನು ಶಬರಿಯ ಧರ್ಮಯುಕ್ತ ವಚನವನ್ನು ಆಲಿಸಿ, ಆಶ್ಚರ್ಯ ಆಶ್ಚರ್ಯ !! ಎಂದು ಅತುಲ ಹರ್ಷವನ್ನು ನಿಜವಾಗಿ ಹೊಂದಿದ.

ಬಳಿಕ ವ್ರತನಿಷ್ಠಳಾದ ಶಬರಿಗೆ ಹೇಳಿದನು – ನೀನು ಭಕ್ತಿಯಿಂದ ಅರ್ಚಿಸಿರುವೆ. ನೀನು ಬಯಸಿದ ಲೋಕದೆಡೆಗೆ ಸುಖವಾಗಿ ಪಯಣಿಸು.

ಶ್ರೀರಾಮ ಹೀಗೆ ಹೇಳಲು ವೃದ್ಧಳೂ ಜಟಾಧಾರಿಣಿಯು, ವಲ್ಕಲ ಕೃಷ್ಣಾಜಿನ-ಗಳನ್ನು ಧರಿಸಿದ್ದ ಶಬರಿಯು ಆ ಮುಹೂರ್ತದಲ್ಲಿ ದೇಹವನ್ನು ಬಿಡಲು ಬಯಸಿ

ಶ್ರೀರಾಮನ ಅನುಮತಿ ಪಡೆದಳು. ಪ್ರಜ್ವಲಿಸುವ ಅಗ್ನಿಯಲ್ಲಿ ತನ್ನ ದೇಹವನ್ನು ಆಹುತಿಯನ್ನಾಗಿ ಅರ್ಪಿಸಿಕೊಂಡು ಪ್ರಜ್ವಲಿಸುವ ಅಗ್ನಿಯಂತೆ ಬೆಳಗುತ್ತ ಸ್ವರ್ಗವನ್ನೆ ಸೇರಿದಳು.

ದಿವ್ಯ ಆಭರಣಗಳಿಂದ ಯುಕ್ತಳಾಗಿ ದಿವ್ಯಮಾಲೆ ಅನುಲೇಪನಗಳಿಂದ ಕೂಡಿ-ದವಳಾಗಿ ದಿವ್ಯಾಂಬರಧಾರಿಯಾಗಿ ನೋಡಲು ಸುಂದರವಾಗಿ ಕಂಡಳು. ಮಿಂಚಿ-ನಂತೆ ಬೆಳಗುತ್ತ ಆ ಮತಂಗವನ ಪ್ರದೇಶವನ್ನು ಬೆಳಗಿಸುತ್ತ ಸ್ವರ್ಗಾರೋಹಣ ಮಾಡಿದಳು. ಪುಣ್ಯಾತ್ಮರಾದ ಮಹರ್ಷಿಗಳು ಎಲ್ಲಿ ವಿಹರಿಸುತ್ತಿದ್ದರೂ ಆ ಪುಣ್ಯಸ್ಥಾನವನ್ನು ಆತ್ಮ ಸಮಾಧಿಯೋಗದಿಂದ ಶಬರಿಯು ಸೇರಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಪ್ಪತ್ತಾನ್ಕನೇ ಸರ್ಗ ಮುಗಿಯಿತು.

❖

ಪಂಚಸಪ್ತತಿತಮಃ ಸರ್ಗಃ

ಕಥಾಸಾರಾಂಶ– ಶಬರಿಯು ದಿವಂಗತಳಾದ ಬಳಿಕ ರಾಮನು ಲಕ್ಷ್ಮಣನೊಂದಿಗೆ ವಿಚಾರ ಮಾಡುತ್ತಾನೆ. ಮತಂಗರ ಈ ದಿವ್ಯಾಶ್ರಮ ಎಂಥ ಪುಣ್ಯಸ್ಥಲ ! ಸಪ್ತ ಸಮುದ್ರಗಳ ಸನ್ನಿಧಾನವಿರುವ ತೀರ್ಥದಲ್ಲಿ ನಾವು ಮಿಂದೆವು. ಪಿತೃಗಳಿಗೆ ತರ್ಪಣವನ್ನು ಇತ್ತೆವು. ಅಶುಭವೆಲ್ಲ ನಷ್ಟವಾಯಿತು. ಇನ್ನು ಕಲ್ಯಾಣವುಂಟಾಗುವುದು. ಆದರಿಂದಲೆ ನನ್ನ ಮನಸ್ಸಿನಲ್ಲಿ ಹರ್ಷ ತುಂಬಿದೆ. ಮುಂದೆ ಒಳ್ಳೆಯದಾಗುವುದು. ಬಾ ಹೊರಡೋಣ ಪಂಪಾ ಸರೋವರದೆಡೆಗೆ; ಯಾವುದರ ಬಳಿ ಋಷ್ಯಮೂಕಪರ್ವತವಿದೆ.

ಋಷ್ಯಮೂಕದಲ್ಲಿ ವಾಲಿಗೆ ಹೆದರಿದ ಸುಗ್ರೀವ ನಾಕುಮಂದಿ ಆಪ್ತವಾನರರೊಂದಿಗೆ ನೆಲೆಸಿರುವನು. ಸುಗ್ರೀವನನ್ನು ಕಾಣಲು ಅವಸರಿಸುತ್ತಿದ್ದೇನೆ. ಸೀತೆಯ ಅನ್ವೇಷಣೆ ಅವನ ಕೈಯ್ಯಲ್ಲಿದೆ.

ಲಕ್ಷ್ಮಣನು ಒಪ್ಪಿ ರಾಮನೊಂದಿಗೆ ಪಂಪಾಸರೋವರದೆಡೆ ಸಾಗಿದ.

ಬಗೆ ಬಗೆಯ ವೃಕ್ಷಗಳು ಸುತ್ತಲು ಸರೋವರದಲ್ಲಿ ತಲೆಯಾಡಿಸಿಕೊಂಡು ನಗುತಿರುವ ಬಗೆಬಗೆಯ ಸುಗಂಧ ಪುಷ್ಪಗಳು. ಹಲವು ಬಗೆಯ ಹಕ್ಕಿಗಳ ಮಧುರ ಕಲರವಗಳು. ಹಿತವಾದ ತಂಗಾಳಿ. ಕಂಪು ತುಂಬಿದ ತಂಪು ನೀರಿನ ಕೊಳ ಪಂಪಾ ಸರೋವರ. ಸುಂದರ ಪರಿಸರ ಶ್ರೀರಾಮನ ಮನದಲ್ಲಿ ಸೀತೆಯ ಬಯಕೆ ನೆನಪುಗಳನ್ನು ಹೆಚ್ಚಿಸಿತು.

ಲಕ್ಷ್ಮಣ ! ಈ ಸುಂದರ ಸರೋವರದ ಬಳಿಯೇ ಋಷ್ಯಮೂಕ ಪರ್ವತ ಕಾಣುತಿದೆ. ಋಕ್ಷರಜಸ್ಸಿನ ಮಗ ಸುಗ್ರೀವ ಮಹಾವೀರ್ಯನು ಈ ಪರ್ವತದಲ್ಲಿ ವಾಸ ಮಾಡಿರುವನು. ನೀನು ವಾನರೇಂದ್ರ ಸುಗ್ರೀವನ ಬಳಿಗೆ ತೆರಳು. ತಮ್ಮ ! ಸೀತೆಯಿಲ್ಲದೆ ನಾನು ಹೇಗೆ ಬದುಕಲಿ ?

ಹೀಗೆ ವಿಲಪಿಸುತ್ತ ವನದ ಸೊಬಗನ್ನು ನೋಡುತ್ತಲೆ ಭಾರವಾದ ಹೆಜ್ಜೆಗಳನ್ನಿಡುತ್ತ ಲಕ್ಷ್ಮಣನೊಂದಿಗೆ ಪಂಪಾಸರೋವರದ ಬಳಿಗೆ ತೆರಳಿದ.

❖

ಪಂಪಾದರ್ಶನಮ್

ದಿವಂ ತು ತಸ್ಯಾಂ ಯಾತಾಯಾಂ ಶಬರ್ಯಾಂ ಸ್ವೇನ ತೇಜಸಾ ।
ಲಕ್ಷ್ಮಣೇನ ಸಹ ಭ್ರಾತ್ರಾ ಚಿಂತಯಾಮಾಸ ರಾಘವಃ ॥೧॥

ಸ ಚಿಂತಯಿತ್ವಾ ಧರ್ಮಾತ್ಮಾ ಪ್ರಭಾವಂ ತಂ ಮಹಾತ್ಮನಾಮ್ ।
ಹಿತಕಾರಿಣಮೇಕಾಗ್ರಂ ಲಕ್ಷ್ಮಣಂ ರಾಘವೋಽಬ್ರವೀತ್ ॥೨॥

ದೃಷ್ಟೋಽಯಮಾಶ್ರಮಃ ಸೌಮ್ಯ ಬಹ್ವಾಶ್ಚರ್ಯಃಕೃತಾತ್ಮನಾಮ್ ।
ವಿಶ್ವಸ್ತಮೃಗಶಾರ್ದೂಲೋ ನಾನಾವಿಹಗಸೇವಿತಃ ॥೩॥

ಸಪ್ತಾನಾಂ ಚ ಸಮುದ್ರಾಣಾಮೇಷು ತೀರ್ಥೇಷು ಲಕ್ಷ್ಮಣ ।
ಉಪಸ್ಪೃಷ್ಟಂ ಚ ವಿಧಿವತ್ ಪಿತರಶ್ಚಾಪಿ ತರ್ಪಿತಾಃ ॥೪॥

ಪ್ರಣಷ್ಟಮಶುಭಂ ತತ್ತತ್ ಕಲ್ಯಾಣಂ ಸಮುಪಸ್ಥಿತಮ್ ।
ತೇನ ತತ್ತ್ವೇನ ಹೃಷ್ಟಂ ಮೇ ಮನೋ ಲಕ್ಷ್ಮಣ ಸಂಪ್ರತಿ ॥೫॥

ಹೃದಯೇ ಹಿ ನರವ್ಯಾಘ್ರ ಶುಭಮಾವಿರ್ಭವಿಷ್ಯತಿ ।
ತದಾಗಚ್ಛ ಗಮಿಷ್ಯಾವಃ ಪಂಪಾಂ ತಾಂ ಪ್ರಿಯದರ್ಶನಾಮ್ ॥೬॥

ಋಷ್ಯಮೂಕೋ ಗಿರಿರ್ಯತ್ರ ನಾತಿದೂರೇ ಪ್ರಕಾಶತೇ ।
ಯಸ್ಮಿನ್ ವಸತಿ ಧರ್ಮಾತ್ಮಾ ಸುಗ್ರೀವೋಽಂಶುಮತಃ ಸುತಃ ॥೭॥

ನಿತ್ಯಂ ವಾಲಿಭಯತ್ರಸ್ತಶ್ಚತುರ್ಭಿಃ ಸಹ ವಾನರೈಃ ।
ಅಭಿತ್ವರೇ ಚ ತಂ ದ್ರಷ್ಟುಂ ಸುಗ್ರೀವಂ ವಾನರರ್ಷಭಮ್ ॥೮॥

ತದಧೀನಂ ಹಿ ಮೇ ಸೌಮ್ಯ ಸೀತಾಯಾಃ ಪರಿಮಾರ್ಗಣಮ್ ।

ಶಬರಿಯು ತನ್ನ ತೇಜಸ್ಸಿನಿಂದ ಸ್ವರ್ಗಕ್ಕೆ ಹೋದ ಬಳಿಕ ರಾಘವನು ತಮ್ಮ ಲಕ್ಷ್ಮಣನೊಡನೆ ಮಹಾತ್ಮ ಮತಂಗರ ಪ್ರಭಾವದ ಬಗೆಗೇ ಆಲೋಚಿಸಿದನು. ತನ್ನ ಸೇವೆಯ ಹಿತ ಮಾಡುವುದರಲ್ಲಿ ಏಕಾಗ್ರನಾದ ಲಕ್ಷ್ಮಣನನ್ನು ಕುರಿತು ರಾಘವನು ಹೇಳಿದನು –

ಸೌಮ್ಯ ! ಅತ್ಯಂತ ಅಚ್ಚರಿಯಾದ ಪುಣ್ಯಾತ್ಮರ ಈ ಆಶ್ರಮವನ್ನು ಕಂಡಾಯಿತು. ಇಲ್ಲಿ ಹುಲಿ – ಜಿಂಕೆಗಳು ನಿರಾತಂಕವಾಗಿ ಪರಸ್ಪರ ವಿಶ್ವಾಸದಿಂದ ನೆಲೆಸಿವೆ. ಹಲವು ಬಗೆಯ ಹಕ್ಕಿಗಳ ತಾಣವಿದು. ನಾವಿಬ್ಬರೂ ಸಪ್ತಸಮುದ್ರಗಳ ಸಾನ್ನಿಧ್ಯವಿರುವ ತೀರ್ಥದಲ್ಲಿ ಮಿಂದಾಯಿತು. ಪಿತೃಗಳ ತರ್ಪಣವನ್ನು ಕೊಟ್ಟಾಯಿತು. ನನ್ನ ಅನಿಷ್ಟಗಳು ಪ್ರಣಷ್ಟವಾಗಿವೆ. ಮನವು ಹರ್ಷದಿಂದ ಹಗುರಾಗಿದೆ. ಮನದಲ್ಲಿ ಈಗ ಶುಭವಾದ ಭಾವಗಳು ಮೂಡುತ್ತಿವೆ.

ಲಕ್ಷ್ಮಣ ! ಬಾ ಪಂಪಾಸರೋವರದೆಡೆಗೆ ಸಾಗೋಣ. ಅದರ ಹತ್ತಿರದಲ್ಲಿಯೇ ಋಷ್ಯಮೂಕಪರ್ವತವಿದೆ.

ಆ ಋಷ್ಯಮೂಕ ಪರ್ವತದಲ್ಲಿ ಧರ್ಮಾತ್ಮನಾದ ಸೂರ್ಯಪುತ್ರ ಸುಗ್ರೀವ - ವಾಲಿಯಿಂದ ಭೀತನಾಗಿ ನಾಕು ಆಪ್ತವಾನರರೊಂದಿಗೆ ವಾಸವಾಗಿದ್ದಾನೆ. ವಾನರ-ಶ್ರೇಷ್ಠ ಸುಗ್ರೀವನನ್ನು ಕಾಣಲು ತವಕಿಸುತ್ತಿದ್ದೇವೆ. ಸೌಮ್ಯನೇ ! ಸೀತೆಯ ಅನ್ವೇಷಣೆಯು ಅವನ ಅಧೀನವಾಗಿದೆ ತಾನೆ.

ಏವಂ ಬ್ರುವಾಣಂ ತಂ ಧೀರಂ ರಾಮಂ ಸೌಮಿತ್ರಿರಬ್ರವೀತ್ ॥೯॥

ಗಚ್ಛಾವಸ್ತ್ವರಿತಂ ತತ್ರ ಮಮಾಪಿ ತ್ವರತೇ ಮನಃ ।
ಆಶ್ರಮಾತ್ತು ತತಸ್ತಸ್ಮಾನ್ನಿಷ್ಕ್ರಮ್ಯ ಸ ವಿಶಾಂಪತಿಃ ॥೧೦॥

ಆಜಗಾಮ ತತಃ ಪಂಪಾ ಲಕ್ಷ್ಮಣೇನ ಸಹ ಪ್ರಭುಃ ।
ಸ ದದರ್ಶ ತತಃ ಪುಣ್ಯಾಮುದಾರಜಲಸೇವಿತಾಮ್ ॥೧೧॥

ನಾನಾದ್ರುಮಲತಾಕೀರ್ಣಾಂ ಪಂಪಾಂ ಪಾನೀಯವಾಹಿನೀಮ್ ।
ಪದ್ಮೈಃ ಸೌಗಂಧಿಕೈಸ್ತಾಮ್ರಾಂ ಶುಕ್ಲಾಂ ಕುಮುದಮಂಡಲೈಃ ॥೧೨॥

ನೀಲಾಂ ಕುವಲಯೋದ್ಘಾತೈರ್ಬಹುವರ್ಣಾಂ ಕುಥಾಮಿವ ।
ಸ ತಾಮಾಸಾದ್ಯ ವೈ ರಾಮೋ ದೂರಾದುದಕವಾಹಿನೀಮ್ ॥೧೩॥

ಮತಂಗಸರಸಂ ನಾಮ ಹ್ರದಂ ಸಮವಗಾಹತ ।

ಹೀಗೆ ಹೇಳುತ್ತಿರುವ ರಾಮನಿಗೆ ಸುಮಿತ್ರಾನಂದ ಹೇಳಿದನು -ಬೇಗನೇ ಹೋಗೋಣ. ನನ್ನ ಮನಸೂ ಅಲ್ಲಿಗೆ ಹೋಗಲು ತವಕಿಸುತ್ತಿದೆ.

ಪ್ರಭು ರಾಮದೇವ ಆ ಆಶ್ರಮದಿಂದ ಹೊರಟು ಲಕ್ಷ್ಮಣನೊಂದಿಗೆ ಪಂಪಾಸರೋವರಕ್ಕೆ ಬಂದನು.

ಪುಣ್ಯಕರವಾದ, ಮಹಾತ್ಮರಿಂದ ಸೇವಿತವು, ನಾನಾ ಬಗೆಯಾದ ಮರಬಳ್ಳಿಗಳಿಂದ ಸಂಕೀರ್ಣವು ಪಾನಾರ್ಹಸಲಿಲವನ್ನು ತುಂಬಿಕೊಂಡ ಪಂಪಾ ಸರೋವರವನ್ನು ಆ ರಾಮನು ಕಂಡನು.

ಸೌಗಂಧಿಕ ಕುಸುಮಗಳಿಂದ ಕೆಂಪಾದ, ನೈದಿಲೆಯ ರಾಶಿಯಿಂದ ಬೆಳ್ಳಗಿರುವ

ಕುವಲಯ ಕುಸುಮಗಳಿಂದ ನೀಲವರ್ಣವೂ ಆದ ಸರೋವರವು ಬಹು ಬಣ್ಣದ ರತ್ನಕಂಬಳಿಯಂತಿದೆ.

ರಾಮನು ಪಂಪಾಸರೋವರದೆಡೆಗೆ ಬಂದು ಅದರದೆ ಒಂದು ಭಾಗವಾದ ಮತಂಗ ಸರೋವರದಲ್ಲಿ ಮಿಂದನು.

ಅರವಿಂದೋತ್ಪಲವತೀಂ ಪದ್ಮಸೌಂಗಧಿಕಾಯುತಾಮ್ ॥೧೪॥

ಪುಷ್ಪಿತಾಮ್ರವಣೋಪೇತಾಂ ಬರ್ಹಿಣೋದ್ಘುಷ್ಟನಾದಿತಾಮ್ ।
ತಿಲಕೈರ್ಬೀಜಪೂರೈಶ್ಚ ಧವೈಃ ಶುಕ್ಲದ್ರುಮೈಸ್ತಥಾ ॥೧೫॥

ಪುಷ್ಪಿತೈಃ ಕರವೀರೈಶ್ಚ ಪುಂನಾಗೈಶ್ಚ ಸುಪುಷಿತೈಃ ।
ಮಾಲತೀಕುಂದಗುಲ್ಮೈಶ್ಚ ಭಂಡೀರೈರ್ನಿಚುಲೈಸ್ತಥಾ ॥೧೬॥

ಅಶೋಕೈಃ ಸಪ್ತಪರ್ಣೈಶ್ಚ ಕೇತಕೈರತಿಮುಕ್ತಕೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈಃ ಪ್ರಮದಾಮಿವ ಭೂಷಿತಾಮ್ ॥೧೭॥

ಸಮೀಕ್ಷಮಾಣೌ ಪುಷ್ಪಾಢ್ಯಾಂ ಸರ್ವತೋ ವಿಪುಲದ್ರುಮಮ್ ।
ಕೋಯಷ್ಟಿಕೈಶ್ಚಾರ್ಜುನಕೈಃ ಶತಪತ್ರೈಶ್ಚ ಕೀರಕೈಃ ॥೧೮॥

ಏತೈಶ್ಚಾನ್ಯೈಶ್ಚ ವಿಹಗೈರ್ನಾದಿತಂ ತು ವನಂ ಮಹತ್ ।
ತತೋ ಜಗ್ಮತುರವ್ಯಗ್ರೌ ರಾಘವೌ ಸುಸಮಾಹಿತೌ ॥೧೯॥

ತದ್ವನಂ ಚೈವ ಸರಸಃ ಪಶ್ಯಂತೌ ಶಕುನೈರ್ಯುತಮ್ ।
ಸ ದದರ್ಶ ತತಃ ಪಂಪಾಂ ಶೀತವಾರಿನಿಧಿಂ ಶುಭಾಮ್ ॥೨೦॥

ಪ್ರಹೃಷ್ಟನಾನಾಶಕುನಾಂ ಪಾದಪೈರುಪಶೋಭಿತಾಮ್ ।
ಸ ರಾಮೋ ವಿವಿಧಾನ್ ವೃಕ್ಷಾನ್ ಸರಾಂಸಿ ವಿವಿಧಾನಿ ಚ ॥೨೧॥

ಪಶ್ಯನ್ ಕಾಮಾಭಿಸಂತಪ್ತೋ ಜಗಾಮ ಪರಮಂ ಹ್ರದಮ್ ।
ಪುಷ್ಪಿತೋಪವನೋಪೇತಾಂ ಸಾಲಚಂಪಕಶೋಭಿತಾಮ್ ॥೨೨॥

ಷಟ್ಪದೌಘಸಮಾವಿಷ್ಟಾಂ ಶ್ರೀಮತೀಮತುಲಪ್ರಭಾಮ್ ।
ಸ್ಫಟಿಕೋಪಮತೋಯಾಢ್ಯಾಂ ಶ್ಲಕ್ಷ್ಣವಾಲುಕಸಂಯುತಾಮ್ ॥೨೩॥

ಸ ತಾಂ ದೃಷ್ಟ್ವಾ ಪುನಃ ಪಂಪಾಂ ಪದ್ಮಸೌಗಂಧಿಕೈರ್ಯುತಾಮ್ ।
ಇತ್ಯುವಾಚ ತದಾ ವಾಕ್ಯಂ ಲಕ್ಷ್ಮಣಂ ಸತ್ಯವಿಕ್ರಮಃ ॥೨೪॥

ಪಂಪೆಯಲ್ಲಿ ಕಮಲ ಪುಷ್ಪಗಳಿಂದ ಸಮಾವೃತವು. ಕೆಂದಾವರೆ ಉತ್ಪಲಗಳಿಂದ ಶೋಭಿತವು. ತಾವರೆಯ ಸುಗಂಧದಿಂದ ಭರಿತವೂ ಹೂಬಿಟ್ಟ ಮಾವಿನ ತೋಪಿನಿಂದ ಕೂಡಿದ ನವಿಲುಗಳ ಕೇಕಾರವದಿಂದ ತುಂಬಿದ ಸರೋವರವನ್ನು ಕಂಡ.

ಸರೋವರದ ಬಳಿಯಿರುವ ಸುಂದರವನವನ್ನೂ ಕಂಡ. ತಿಲಕ, ಬಹಳ ಬೀಜವಿರುವ ಸೀಬೆ ಮರಗಳು, ವಟವೃಕ್ಷಗಳು, ಶ್ವೇತವೃಕ್ಷಗಳಿಂದ, ಪುಷ್ಪಿತವಾಗಿರುವ, ಹೂ ತುಂಬಿರುವ ಕರವೀರ ಪುನ್ನಾಗಗಳಿಂದಲೂ, ಮಾಲತೀ ಕುಂದ ವೃಕ್ಷಗಳ ಪೊದೆಗಳಿಂದ ನೀರು ಹಲಸಿನ ಅಶೋಕ ವೃಕ್ಷಗಳಿಂದ, ಏಳೆಲೆ ಬಾಳೆಯ ಗಿಡಗಳಿಂದ, ಚಿಲ್ಲದ ಗಿಡಗಳಿಂದ, ತಾಳೆಮರಗಳಿಂದ, ಇನ್ನೂ ಅನೇಕ ಬಗೆಬಗೆಯ ವೃಕ್ಷಗಳಿಂದ ಕೂಡಿದ ಆಭರಣಗಳಿಂದ ಅಲಂಕೃತಳಾದ ಹೆಣ್ಣಿನಂತೆ ಕಾಣುತ್ತಿದ್ದ ಸರೋವರವನ್ನು ರಾಮಲಕ್ಷ್ಮಣರು ಕಂಡರು.

ಸರೋವರದ ಸುತ್ತಲಿದ್ದ ಮಹಾವನವನ್ನು ಕಂಡರು. ಹೂಗಳು ತುಂಬಿದ ಎಲ್ಲೆಡೆಯೂ ಹೆಮ್ಮರಗಳಿರುವ, ಕೋಯಷ್ಟಿಕ ಪಕ್ಷಿಗಳು, ಅರ್ಜುನ ಪಕ್ಷಿಗಳು, ನೂರಾರು ರೆಕ್ಕೆಯ ಹಕ್ಕಿಗಳು, ಗಿಳಿಗಳು ಹಾಗೆ ಬೇರೆ ವಿಧವಾದ ಹಕ್ಕಿಗಳ ಇಂಚರದಿಂದ ತುಂಬಿತ್ತು ಆ ವನ.

ಶಾಂತಮನದ ರಾಘವರು ಆ ವನವನ್ನು, ಹಕ್ಕಿಗಳಿಂದ ತುಂಬಿದ ಸರೋವರವನ್ನು ಕಂಡರು.

ಅಲ್ಲಿಂದ ಮುಂದೆ ರಾಮನು ನಾನಾ ಬಗೆಯ ಪಕ್ಷಿ ಸಂಕುಲದಿಂದ ಕೂಡಿದ, ಸುತ್ತಣ ಮರಗಳಿಂದ ಶೋಭಿತವೂ ಆದ ಪಂಪಾ ಸರೋವರವನ್ನು ಕಂಡನು. ಬಗೆ ಬಗೆಯ ವೃಕ್ಷಗಳನ್ನು ನೀರಕೊಳಗಳನ್ನು ನೋಡುತ್ತಲೆ ಕಾಮಸಂತಪ್ತನಾದ ಶ್ರೀರಾಮನು ಸರೋವರದ ಬಳಿ ಬಂದನು.

ಹೂ ತುಂಬಿದ ವನಗಳಿಂದ ಕೂಡಿದ, ತಾಲ ಸಂಪಿಗೆ ಮರಗಳಿಂದ ಸಹಿತವು ಭ್ರಮರ ಸಮೂಹಗಳು ಸಮಾವೇಶಗೊಂಡಿರುವ ಎಣೆಯಿರದ ಕಾಂತಿ ತುಂಬಿದ ಸ್ಫಟಿಕದಂತೆ ಸ್ವಚ್ಛ ಸಲಿಲವುಳ್ಳ ಮರಳ ದಿಣ್ಣೆಗಳಿಂದ ಕೂಡಿದ ಪಂಪೆಯನ್ನು ಪದ್ಮ ಸೌಗಂದಿಕಗಳಿಂದ ಕೂಡಿದ ಸರೋವರವನ್ನು ಮತ್ತೊಮ್ಮೆ ನೋಡಿದ. ಸತ್ಯ ವಿಕ್ರಮ ರಾಮ ಲಕ್ಷ್ಮಣನಿಗೆ ಹೇಳಿದನು.

ಅಸ್ಯಾಸ್ತೀರೇ ತು ಪೂರ್ವೋಕ್ತಃ ಪರ್ವತೋ ಧಾತುಮಂಡಿತಃ ।
ಋಷ್ಯಮೂಕ ಇತಿ ಖ್ಯಾತಃ ಪುಣ್ಯಃ ಪುಷ್ಪಿತಪಾದಪಃ ॥೨೫॥

ಹರೇರ್ಋಕ್ಷರಜೋನಾಮ್ನಃ ಪುತ್ರಸ್ತಸ್ಯ ಮಹಾತ್ಮನಃ ।
ಅಧ್ಯಾಸ್ತೇ ತಂ ಮಹಾವೀರ್ಯಃ ಸುಗ್ರೀವ ಇತಿ ವಿಶ್ರುತಃ ॥೨೬॥

ಸುಗ್ರೀವಮಭಿಗಚ್ಛ ತ್ವಂ ವಾನರೇಂದ್ರಂ ನರರ್ಷಭ ।
ಇತ್ಯುವಾಚ ಪುನರ್ವಾಕ್ಯಂ ಲಕ್ಷ್ಮಣಂ ಸತ್ಯವಿಕ್ರಮಮ್ ॥೨೭॥

ರಾಜ್ಯಭ್ರಷ್ಟೇನ ದೀನೇನ ತಸ್ಯಾಮಾಸಕ್ತಚೇತಸಾ ।
ಕಥಂ ಮಯಾ ವಿನಾ ಶಕ್ಯಂ ಸೀತಾಂ ಲಕ್ಷ್ಮಣ ಜೀವಿತುಮ್ ॥೨೮॥

ಇತ್ಯೇವಮುಕ್ತ್ವಾ ಮದನಾಭಿಪೀಡಿತಃ
ಸ ಲಕ್ಷ್ಮಣಂ ವಾಕ್ಯಮನನ್ಯಚೇತಸಮ್ ।
ವಿವೇಶ ಪಂಪಾಂ ನಲಿನೀಂ ಮನೋಹರಾಂ
ರಘೂತ್ತಮಃ ಶೋಕವಿಷಾದಯಂತ್ರಿತಃ ॥೨೯॥

ತತೋ ಮಹದ್ವರ್ತ್ಮ ಸುದೂರಸಂಕ್ರಮಃ
ಕ್ರಮೇಣ ಗತ್ವಾ ಪ್ರತಿಕೂಲಧನ್ವನಮ್ ।
ದದರ್ಶ ಪಂಪಾಂ ಶುಭದರ್ಶಕಾನನಾ-
ಮನೇಕನಾನಾವಿಧಪಕ್ಷಿಜಾಲಕಾಮ್ ॥೩೦॥

॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಚತುರ್ವಿಂಶತ್ಸಹಸ್ರಿಕಾಯಾಂ ಸಂಹಿತಾಯಾಂ ಶ್ರೀಮದಾರಣ್ಯಕಾಂಡೇ ಪಂಚಸಪ್ತತಿ ತಮಃ ಸರ್ಗಃ ॥

ಈ ಪಂಪೆಯ ತೀರದಲ್ಲಿ ಹಿಂದೆ ಹೇಳಿದ ಗೈರಿಕಾದಿ ಧಾತುಗಳಿಂದ ಭೂಷಿತವಾದ ಪುಷ್ಪಿತವೃಕ್ಷಗಳಿಂದ ಭರಿತವಾದ ಪುಣ್ಯಕರವಾದ ಪ್ರಸಿದ್ಧ ಋಷ್ಯಮೂಕ ಪರ್ವತವಿದೆ. ಋಷ್ಕ ರಜಸ್ಸ್ ಎಂಬ ಮಹಾತ್ಮನ ಮಗನಾದ ಸುಗ್ರೀವ – ಮಹಾವೀರ್ಯಶಾಲಿ ಆ ಪರ್ವತದಲ್ಲಿ ವಾಸವಾಗಿದ್ದಾನೆ.

ವಾನರ ಶ್ರೇಷ್ಠ ಸುಗ್ರೀವನ ಬಳಿಗೆ ನೀನು ಹೋಗು – ನರಶ್ರೇಷ್ಠ ಲಕ್ಷ್ಮಣ ! ಎಂದು ಮತ್ತೊಮ್ಮೆ ಲಕ್ಷ್ಮಣನಿಗೆ ಹೇಳಿದನು ಶ್ರೀರಾಮ.

ರಾಜ್ಯ ಭ್ರಷ್ಟನು ದೀನನು ಸೀತೆಯಲ್ಲಿ ನೆಲೆಗೊಂಡ ಮನದವನು ನಾನು ಸೀತೆಯಿಲ್ಲದೆ ಲಕ್ಷ್ಮಣ ! ಹೇಗೆ ಬದುಕಲು ಸಾಧ್ಯ ?

ಮದನನಿಂದ ತುಂಬ ಪೀಡಿತನಾದ ಆ ರಾಮನು ಅನನ್ಯ ಮನಸ್ಕನಾದ ಲಕ್ಷ್ಮಣನಿಗೆ ಹೀಗೆ ಹೇಳಿದ. ಶೋಕ ವಿಷಾದದ ವಶನಾದ ರಘೂತ್ತಮನು ಮನೋಹರವಾದ ನಲಿನಗಳು ನಲಿಯುತ್ತಿರುವ ಪಂಪೆಯನ್ನು ಪ್ರವೇಶಿಸಿದನು.

ದೀರ್ಘವಾದ ದಾರಿಯಲ್ಲಿ ಬಹಳ ದೂರದಿಂದ ನಡೆದು ಬಂದ ರಾಮನು ದಾರಿಹೋಕರಿಗೆ ಪ್ರತಿಕೂಲವಾದ ಕಾಡಿನಲ್ಲಿ ಕ್ರಮವಾಗಿ ಸಾಗುತ್ತ ನೋಡಲು ಸೊಬಗಿನ ಕಾನನದಿಂದ ಕೂಡಿರುವ, ಅನೇಕ ಬಗೆಬಗೆಯ ಪಕ್ಷಿಸಮೂಹವುಳ್ಳ ಪಂಪಾಸರೋವರವನ್ನು ಕಂಡನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅರಣ್ಯಕಾಂಡದಲ್ಲಿ
ಎಪ್ಪತ್ತೈದನೇ ಸರ್ಗ ಮುಗಿಯಿತು.

॥ ಅರಣ್ಯಕಾಂಡಃ ಸಂಪೂರ್ಣಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ರಾಮಾಯಣದಲ್ಲಿ ಮೂರನೇ ಕಾಂಡ ಅದು ಅರಣ್ಯಕಾಂಡ. ಸಂಯಮಿತ ಜೀವನವೇ ಅರಣ್ಯ. ಮನಸ್ಸಿನ ಶುದ್ಧಿಗಾಗಿ ಏಕಾಂತವಾಸ. ಮನಃಸ್ತಾಪ, ರಾಜ್ಯಲೋಭ, ಸಂಘರ್ಷ ತಪ್ಪಿಸಲು ಶ್ರೀರಾಮ ಕಾಡಿಗೆ ತೆರಳಿ ವನಂ ಗತೋ ಯದ್ಧರಿಮಾಶ್ರಯೇತ "ಲೋಭ-ಸ್ವಾರ್ಥಗಳಿಂದ ವಾತಾವರಣ ಕಲುಷಿತವಾದಾಗ ತಾನೇ ಬೇರೆ ಕಡೆಗೆ ಏಕಾಂತವಾಸ ಮಾಡಬೇಕು. ಅದಕ್ಕೇ ತೀರ್ಥ, ಕ್ಷೇತ್ರ, ಆಶ್ರಮಗಳ ನಿರ್ಮಾಣ. ಸಾಧನಕ್ಕಾಗಿ ವನ ಸೇರಿ ಹರಿಯ ಉಪಾಸನೆ ಮಾಡಿರಿ" ಎಂದು ಜಗತ್ತಿಗೆ ಸಂದೇಶ ನೀಡಿದ.

ಈ ಕಾಂಡದಲ್ಲಿ ಎಲ್ಲರೂ ಆರು ವೈರಿಗಳನ್ನು ಗೆದ್ದರು. ತ್ಯಾಗ, ತಾಳ್ಮೆ, ತಪಸ್ಸುಗಳನ್ನಾಚರಿಸಿದರು. ಎಲ್ಲರದೂ ಹದಿನಾಲ್ಕು ವರ್ಷದ ಸಂಯಮದ ಅರಣ್ಯವಾಸ. ಬ್ರಹ್ಮಚರ್ಯದ ಜೀವನ. ಶ್ರೀರಾಮ-ಸೀತೆಯರು, ಲಕ್ಷ್ಮಣ-ಊರ್ಮಿಳೆಯರು, ಭರತ-ಮಾಂಡವಿಯರು ಎಲ್ಲರದ್ದೂ ತ್ಯಾಗದ ಜೀವನ. ಅಯೋಧ್ಯೆ ಬಿಟ್ಟು ನಂದಿಗ್ರಾಮದಲ್ಲಿ ಹುಲ್ಲುಗುಡಿಸಲಿನಲ್ಲಿ ಭರತನ ವಾಸ. ಜಟಾಧಾರಿ, ಗಡ್ಡೆಗೆಣಸಿನ ಆಹಾರ. ಶ್ರೀರಾಮ, ಲಕ್ಷ್ಮಣ, ಸೀತೆಯರು ನಾರು ಮಡಿ ಉಟ್ಟು ಋಷಿತುಲ್ಯ ಜೀವನ ನಡೆಸಿದರು. ಕಂದಮೂಲ, ಗಡ್ಡೆಗೆಣಸು, ಹಣ್ಣು ಹಂಪಲುಗಳ ಆಹಾರ. ಹುಲ್ಲುಹಾಸಿಗೆ. ಕಾಡಿನಲ್ಲಿ ವಾಸ. ವನವಾಸ ಒಬ್ಬರಿಗಲ್ಲ. ಎಲ್ಲ ನಾಲ್ಕೂ ಜನರೂ ವನವಾಸ ಮಾಡಿದರು. ಸಂಯಮದಿಂದ ಶಕ್ತಿ ಸಂಚಯನ ಮಾಡಿಕೊಂಡರು. ಅಣ್ಣತಮ್ಮಂದಿರಲ್ಲಿ ಪರಸ್ಪರ ಪ್ರೀತಿ, ನಿರ್ಲೋಭ, ತ್ಯಾಗಗಳು ಅರಣ್ಯಕಾಂಡದ ಸಂದೇಶಗಳು.

ಅರಣ್ಯವಾಸವೆಂದರೆ ಸಜ್ಜನರ ಸಂಗಮ. ಶಬರಿ, ಶರಭಂಗ, ಅಗಸ್ತ್ಯ, ಭರದ್ವಾಜ, ಗೌತಮರ ಆಶ್ರಮ ಸಂಚರಿಸಿದ. ಸತ್ಸಂಗವೇ ಸಂಘರ್ಷ ತಪ್ಪಿಸುವ ಉಪಾಯ. ದೇವರಿಗಾಗಿ ಸರ್ವಸ್ವ ತ್ಯಾಗ ಮಾಡಿದ ಋಷಿಮುನಿಗಳ ಮುಂದೆ, ತಂದೆಯ ಮಾತಿಗಾಗಿ, ತಾಯಿಯ ಕೋರಿಕೆಗಾಗಿ ರಾಜ್ಯತ್ಯಾಗ ಅದೇನು ಮಹಾ ಎಂದ ಶ್ರೀರಾಮ. ರಾಮನ ಹಾಗೂ ಭರತರ ತ್ಯಾಗದ ಪರಾಕಾಷ್ಠೆಯೇ ಅರಣ್ಯಕಾಂಡ.